# ಶಿಷ್ಯರು ಕಂಡಂತೆ ಗುರುಗಳು





17

ಸಿಂಚನ : ಕನ್ನಡ ವೇದಿಕೆ

ಆರ್.ವಿ. ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್
ಜಯನಗರ, ಬೆಂಗಳೂರು - 41

ಡಿ.ಎ.ಪಾಂಡು ಸ್ಮೃತಿ ಗ್ರಂಥಮಾಲೆ – ೮

# ಶಿಷ್ಯರು ಕಂಡಂತೆ ಗುರುಗಳು

(ವ್ಯಕ್ತಿ ಚಿತ್ರಗಳು)

ಪ್ರಧಾನ ಸಂಪಾದಕರು

**ಡಾ॥ ಟಿ.ವಿ. ರಾಜು**

ಸಂಪಾದಕರು

**ಪ್ರೊ॥ ಜಿ. ಅಶ್ವತ್ಥನಾರಾಯಣ**

**ಎಸ್. ಬಿಳಿಗಿರಿವಾಸನ್**

**ಶಾಂತರಾಜು**


ಸಿಂಚನ ಕನ್ನಡ ವೇದಿಕೆ

ಬೆಂಗಳೂರು

೨೦೦೯

**SHISHYARU KANDANTE GURUGALU :** Published by Sinchana Kannada Vedike, R.V. Institute of Management, 26th Main, 36th Cross, 4th 'T' Block, Jayanagar, Bangalore- 560 041.

First Impression : 2009 Pages : xiv + 420 Price : 250/-


**ಶಿಷ್ಯರು ಕಂಡಂತೆ ಗುರುಗಳು (ವ್ಯಕ್ತಿಚಿತ್ರಗಳು) :** ಪ್ರಕಾಶಕರು, ಸಿಂಚನ ಕನ್ನಡ ವೇದಿಕೆ, ಆರ್.ವಿ. ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಸಿ.ಎ. ೧೭, ೨೬ನೇ ಮುಖ್ಯ ರಸ್ತೆ, ೩೬ನೇ ಅಡ್ಡರಸ್ತೆ, ೪ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು – ೫೬೦ ೦೪೧.

ಮೊದಲ ಮುದ್ರಣ : ೨೦೦೯ ಪುಟಗಳು : xiv + ೪೨೦ ಬೆಲೆ : ೨೫೦/–


ರಕ್ಷಾಪುಟ ವಿನ್ಯಾಸ : ರಾಘವೇಂದ್ರ ಎನ್.

**ಸಂಪಾದಕ ಮಂಡಳಿ**

| | | |
|---|---|---|
| ಪ್ರಧಾನ ಸಂಪಾದಕರು | : | **ಡಾ|| ಟಿ.ವಿ. ರಾಜು** |
| ಸಂಪಾದಕರು | : | **ಪ್ರೊ|| ಜಿ. ಅಶ್ವತ್ಥನಾರಾಯಣ** |
| | | **ಎಸ್. ಬಿಳಿಗಿರಿವಾಸನ್** |
| | | **ಶಾಂತರಾಜು** |
| ಸಲಹೆ–ಸಹಾಯ–ಸಹಕಾರ | : | **ಶ್ರೀ ಎಂ.ಕೆ. ಪಾಂಡುರಂಗಶೆಟ್ಟಿ** |
| | | **ಶ್ರೀ ವೈ.ಎನ್. ಗಂಗಾಧರ ಶೆಟ್ಟಿ** |
| | | **ಶ್ರೀ ಜಿ.ಕೆ. ಶ್ರೀನಿವಾಸಯ್ಯ** |
| | | **ಶ್ರೀ ಎ.ವಿ.ಎಸ್. ಮೂರ್ತಿ** |
| | | **ಶ್ರೀ ಕೆ.ಜಿ. ಸುಬ್ಬರಾಮಶೆಟ್ಟಿ** |
| | | **ಶ್ರೀ ಡಿ.ಪಿ. ನಾಗರಾಜ್** |
| | | **ಶ್ರೀ ಎಂ.ಕೆ. ದತ್ತರಾಜ್** |
| | | **ಡಾ|| ಟಿ.ವಿ. ರಾಜು** |

ಮುದ್ರಣ
**ಇಳಾ ಮುದ್ರಣ**
ಬೆಂಗಳೂರು - ೫೬೦ ೦೨೬.
☎ : ೨೬೭೫೭೧೫೯

# ಸಮರ್ಪಣೆ

ಜ್ಞಾನದಾಹಿ ಶಿಷ್ಯರಿಗೆ
ಜ್ಞಾನದಾನ ಮತ್ತು ಬಾಳದಾನ
ಮಾಡಿದ
ನಾಡಿನ ಸಮಸ್ತ ಗುರುಗಳಿಗೆ
ಭಕ್ತಿಪೂರ್ವಕ
ಅರ್ಪಣೆ

೫ ಸೆಪ್ಟೆಂಬರ್ ೨೦೦೯
ಶಿಕ್ಷಕರ ದಿನ

'ಸಿಂಚನ' ಕನ್ನಡ ವೇದಿಕೆ
ಆರ್.ವಿ.ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್
ಬೆಂಗಳೂರು

# ಸಂಪಾದಕರ ಮಾತು

**ಕ**ನ್ನಡದಲ್ಲಿ ಜೀವನಚರಿತ್ರೆ, ಆತ್ಮಕಥೆ, ಆತ್ಮಸಂದರ್ಶನ, ಸಂದರ್ಶನ, ಸಂಭಾಷಣೆ, ಅನಿಸಿಕೆಗಳು ಅನುಭವಗಳ ರಸಪ್ರಸಂಗಗಳ ವ್ಯಕ್ತಿಚಿತ್ರಗಳು ಮೊದಲಾದ ಸಾಹಿತ್ಯ ಪ್ರಕಾರಗಳ ಗ್ರಂಥಗಳು ನೂರಾರು ಬಂದಿವೆ; ಬರುತ್ತಿವೆ. ಮಹಾಪುರುಷರ, ಲೋಕೋಪಕಾರಿಗಳ, ವಿದ್ಯಾರ್ಥಿಗಳ ಬಾಳಿನ ಬೆಳಕಿನ ವ್ಯಕ್ತಿಗಳ ಜೀವನ, ವ್ಯಕ್ತಿತ್ವ ಕುರಿತ ಲೇಖನ-ಗ್ರಂಥಗಳು ಸಾಕಷ್ಟಿವೆ. ಈ ಪೈಕಿ ಬಾಳಿಗೆ ಬೆಳಕಾಗುವ ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವ, ಲೋಕಕ್ಕೆ ಉಪಯುಕ್ತ ಕಾರ್ಯ ಮಾಡಲು ಸ್ಫೂರ್ತಿ ಕೊಡುವ ಶಿಕ್ಷಕರನ್ನು ಅವರ ಶಿಕ್ಷಣ ವಿಧಾನವನ್ನು ಹಾಗೂ ಅವರ ವ್ಯಕ್ತಿತ್ವ, ಪ್ರಭಾವಗಳನ್ನು ಕುರಿತು ಅವರ ಬಳಿ ವ್ಯಾಸಂಗ ಮಾಡಿದ ಶಿಷ್ಯರಿಂದಲೇ ಬರೆಸಿದ ಲೇಖನಗುಚ್ಛ ಈ ಗ್ರಂಥ. ಕನ್ನಡದಲ್ಲಿ ಈ ಬಗೆಯ ಗ್ರಂಥ ಇದೇ ಪ್ರಥಮವೆಂದರೆ ತಪ್ಪಾಗಲಾರದು.

ಇಂದು ಸಮಾಜದಲ್ಲಿ ಸಾಹಿತ್ಯ, ಕಲೆ ಕ್ಷೇತ್ರಗಳಲ್ಲಿ ಗಣ್ಯರಾದವರನ್ನು ಆದರ್ಶ ಪುರುಷರಾದವರನ್ನು ರೂಪಿಸಿರುವವರು ಅವರ ತಾಯಿತಂದೆಗಳು ಮತ್ತು ಅವರ ಬಾಲ್ಯ ಶಿಕ್ಷಣದ ಅಥವಾ ಉನ್ನತ ಶಿಕ್ಷಣದ ಗುರುಗಳು. ಇದರಲ್ಲಿ ತಾಯಿ ತಂದೆಗಳಿಗಿಂತ ಗುರುಗಳ ಪಾತ್ರವೇ ಹೆಚ್ಚಿನದು ಎಂದರೆ ತಪ್ಪಲ್ಲ. ಸಜ್ಜನರಾದ, ಸತ್ಪ್ರಜೆಗಳಾದ ಸಮಾಜೋಪಕಾರಿ ವ್ಯಕ್ತಿಗಳು ಹೇಗೆ ರೂಪುಗೊಂಡರು ಅವರಿಗೆ ದೊರೆತ ಮಾರ್ಗದರ್ಶನ, ತಿಳಿವಳಿಕೆ ಸ್ಫೂರ್ತಿ ಯಾವುದು ಎಂಬುದನ್ನು ಅರ್ಥವತ್ತಾಗಿ ರಸವತ್ತಾಗಿ ಇಲ್ಲಿನ ಬರಹಗಳು ನೀಡುತ್ತವೆ. ಓದುಗರಿಗೆ ಸ್ಫೂರ್ತಿ ಬೆಳಕನ್ನು ನೀಡುತ್ತವೆ.

ಈ ವಿಷಯವನ್ನು ಕುರಿತು ಒಂದು ಗ್ರಂಥವನ್ನು ತರೋಣವೆಂದು ಡಾ॥ ಟಿ.ವಿ. ರಾಜು ಅವರು ಹೇಳಿದಾಗ ವಿಷಯವೇನೋ ಚೆನ್ನಾಗಿದೆ ಆದರೆ ಇಂದು ಅತಿಶ್ರೇಷ್ಠ ವಿದ್ವಾಂಸರೂ ಅಧ್ಯಾಪಕರೂ ಆದವರು ಎಷ್ಟೋ ಜನ ಈಗಿಲ್ಲ ಮತ್ತು ಅವರ ಶಿಷ್ಯ ಪ್ರಶಿಷ್ಯರು ಎಲ್ಲೆಲ್ಲೋ ಇದ್ದಾರೆ. ಅವರನ್ನು ಪತ್ತೆ ಹಚ್ಚಿ ಲೇಖನಗಳನ್ನು ಬರೆಸುವುದು ಹೇಗೆ? ಎಂಬ ಚಿಂತೆ ಉಂಟಾಯಿತು. ಮತ್ತು ಸಾಕಷ್ಟು ಲೇಖನಗಳು ಸಿಗುವುದೇ? ಎಂಬ ಯೋಚನೆಯೂ ಬಂದಿತು. ಪ್ರಯತ್ನಮಾಡಿ ನೋಡೋಣ; ಆಮೇಲೆ ತೀರ್ಮಾನ ಮಾಡೋಣವೆಂದು ನಿರ್ಧರಿಸಿದೆವು.

"ಶಿಷ್ಯರು ಕಂಡಂತೆ ಗುರುಗಳು" ಶೀರ್ಷಿಕೆಯಲ್ಲಿ ಲೇಖನಗಳನ್ನು ಸಂಗ್ರಹಿಸುವಾಗ ಅನಿವಾರ್ಯವಾಗಿ ಎಲ್ಲರ ಬಗ್ಗೆಯೂ ಹೇಳಿ ಬರೆಯಿಸಲು ಸಾಧ್ಯವಾಗಲಿಲ್ಲ ಏಕೆಂದರೆ ಎಷ್ಟೋ ಗುರುಗಳೂ ಅವರ ಆತ್ಮೀಯ ಶಿಷ್ಯರೂ ಕಣ್ಮರೆ ಆಗಿದ್ದರು. ಉದಾಹರಣೆಗೆ ಹೇಳುವುದಾದರೆ ಇಂದು ಟಿ.ಎಸ್. ವೆಂಕಣ್ಣಯ್ಯನವರು ಇಲ್ಲ. ಅವರ ಬಗ್ಗೆ ಬರೆಯಲು ಅವರ ಆತ್ಮೀಯ ಶಿಷ್ಯರಾದ ಕುವೆಂಪು ಅವರು ಇಲ್ಲ. ಪರಿಸ್ಥಿತಿ ಹೀಗಿದ್ದಾಗ, ನಾವು ಆಯಾ ಗುರುಗಳ ಬಗ್ಗೆ

ಶಿಷ್ಯರ ಬಗ್ಗೆ ಪ್ರಕಟವಾದ ಗೌರವ ಗ್ರಂಥಗಳನ್ನು ಪರಿಶೀಲಿಸಿ ಅವುಗಳಲ್ಲಿರುವ ಲೇಖನಗಳನ್ನು ಸಂಗ್ರಹಿಸಬೇಕಾಯಿತು. ಇನ್ನು ಕೆಲವು ಲೇಖನಗಳನ್ನು ಪ್ರಸಿದ್ಧ ಗುರುಗಳ ಶಿಷ್ಯರಾಗಿ ಇಂದೂ ನಮ್ಮೊಂದಿಗೆ ಇರುವವರಿಂದ ಬರೆಸಲಾಯಿತು. ಒಬ್ಬಿಬ್ಬರನ್ನು ಬಿಟ್ಟರೆ ಉಳಿದವರೆಲ್ಲ ಸಕಾಲಕ್ಕೆ ಲೇಖನಗಳನ್ನು ಕೊಟ್ಟು ಉಪಕರಿಸಿದ್ದಾರೆ ಅವರಿಗೆ ಕೃತಜ್ಞತೆಗಳು.

ಹೀಗೆ ಲೇಖನಗಳನ್ನು ಸಂಗ್ರಹಿಸುವಾಗ ನಮಗೆ ಇನ್ನೊಂದು ಯೋಚನೆ ಬಂದಿತು. ಗುರುಗಳ ಬಗ್ಗೆ ಲೇಖನ ಬರೆದ ಶಿಷ್ಯರೂ ಗುರುಗಳಾಗಿದ್ದಾರೆ. ಅಂಥವರ ಬಗ್ಗೆ ಪ್ರಶಿಷ್ಯರಿಂದ ಲೇಖನ ಬರೆಸಿದರೆ ಅಧ್ಯಾಪಕರ ಆ ಮುಖ (ಅತ್ತಶಿಷ್ಯ) ಈ ಮುಖ (ಇತ್ತಗುರು) ಎರಡೂ ಪರಿಚಯವಾಗುತ್ತದೆ ಎಂದು ಭಾವಿಸಿ ಗುರು-ಶಿಷ್ಯ-ಪ್ರಶಿಷ್ಯ ಲೇಖನಗಳನ್ನು ಸಂಪಾದಿಸಿದ್ದೇವೆ. ಇಲ್ಲಿ ಎರಡು ವಿಭಾಗಗಳಲ್ಲಿ ಗುರು-ಶಿಷ್ಯ ವಿಭಾಗ ಗುರು-ಶಿಷ್ಯ-ಪ್ರಶಿಷ್ಯ ವಿಭಾಗಗಳಲ್ಲಿ ಲೇಖನಗಳನ್ನು ಪ್ರಕಟಿಸಿದೆ. ಒಬ್ಬ ಶಿಷ್ಯ ತನ್ನ ಗುರುವಿನಿಂದ ಏನು ಪಡೆದ, ತನ್ನ ಶಿಷ್ಯರಿಗೆ ಏನು ನೀಡಿದ ಎಂಬುದರ ತೌಲನಿಕ ನೋಟ ಸಿಗುತ್ತದೆ. ಈ ಬಗೆಯ ವ್ಯಕ್ತಿ ಚಿತ್ರಣ ಕನ್ನಡದಲ್ಲಿ ಇದೇ ಪ್ರಥಮ.

ಇಲ್ಲಿಯ ಲೇಖನಗಳಲ್ಲಿ ಕನ್ನಡ ಗುರುಗಳ ಬಗ್ಗೆಯೇ ಬಹುಪಾಲಿನ ಲೇಖನಗಳಿವೆ. ಅಲ್ಲೊಂದು ಇಲ್ಲೊಂದು ಇತರೆ ವಿಷಯಗಳ ಗುರುಗಳ ಬಗ್ಗೆ ಲೇಖನಗಳನ್ನು ಕೊಡಲಾಗಿದೆ. ಇತರ ವಿಷಯಗಳಲ್ಲೂ ಆದರ್ಶಪ್ರಾಯರಾದ ಸ್ಫೂರ್ತಿದಾಯಕರಾದ, ಇತಿಹಾಸ ನಿರ್ಮಿಸಿದ ಗುರುಗಳಿದ್ದಾರೆ, ಶಿಷ್ಯರಿದ್ದಾರೆ. ಆದರೆ ಗ್ರಂಥಗಾತ್ರ ವಿಪರೀತವಾಗಿ ನಮ್ಮ ಶಕ್ತಿಯನ್ನು ಮೀರುವುದರಿಂದ ನಾವಿಲ್ಲಿ ನಮ್ಮ ಗುರಿಯನ್ನು ಕನ್ನಡ ಅಧ್ಯಾಪಕರಿಗೆ ಸೀಮಿತಗೊಳಿಸಿದ್ದೇವೆ. ಕಾಲೇಜು ಅಧ್ಯಾಪಕರ ಬಗ್ಗೆ ಅಧಿಕ ಲೇಖನಗಳಿವೆ. ಕೆಲವಾರು ಲೇಖನಗಳು ಶಾಲಾ ಅಧ್ಯಾಪಕರನ್ನು ಕುರಿತಿವೆ. ಇತಿಹಾಸ, ವಿಜ್ಞಾನ, ಶಾಸ್ತ್ರವಿಷಯ, ಕಲೆ, ಭಾಷಾವಿಜ್ಞಾನ ಸಮಾಜಶಾಸ್ತ್ರಗಳ ಕ್ಷೇತ್ರಗಳಲ್ಲಿ ಇರುವ ಗುರು-ಶಿಷ್ಯರ ಬಗ್ಗೆ ಗ್ರಂಥಗಳನ್ನು ಆಯಾ ಕ್ಷೇತ್ರಾಸಕ್ತರು ಪ್ರಕಟಿಸಲು ಅವಕಾಶಗಳಿವೆ. ಆ ಬಗೆಯ ಗ್ರಂಥಗಳಿಗೆ ಈ ಗ್ರಂಥ ಪೀಠಿಕೆ ಆಗಲಿದೆ ಎಂದು ನಂಬಿದ್ದೇವೆ.

ಇಲ್ಲಿಯ ಅಧ್ಯಾಪಕರಲ್ಲಿ ಬಹುಮಂದಿ ಹಳೆಯ ತಲೆಮಾರಿನವರು, ವಿದ್ವಾಂಸರು. ತಂತಮ್ಮ ಆಸಕ್ತಿ ಕ್ಷೇತ್ರಗಳಲ್ಲಿ ಕನ್ನಡಕ್ಕೆ ಕೊಡುಗೆ ನೀಡಿದವರು. ಅದಕ್ಕಿಂತ ಹೆಚ್ಚಾಗಿ ಮಾನವೀಯ ಗುಣಗಳಿಂದ ತಮ್ಮ ಶಿಷ್ಯರನ್ನು ತಮ್ಮ ಮಕ್ಕಳಂತೆ ಕಂಡವರು. ಎಷ್ಟೋ ವಿದ್ಯಾರ್ಥಿಗಳಿಗೆ ಅನ್ನ, ಅರಿವೆ, ಆಶ್ರಯ, ಶುಲ್ಕ ಕೊಟ್ಟು ತಂದೆಯಂತೆ ಆಶ್ರಯದಾತರಾದವರು. ಆದರೆ ಗುಪ್ತಭಕ್ತರಂತೆ ತಾವು ಶಿಷ್ಯರಿಗೆ ನೀಡಿದ ನೆರವನ್ನು ಯಾರಿಗೂ ತಿಳಿಯಬಾರದಂತೆ ವರ್ತಿಸಿದವರು. ವಿದ್ಯಾರ್ಥಿಗಳಿಗೆ ಜ್ಞಾನದಾನದ ಜತೆಗೆ ಬಾಳದಾನ ಮಾಡಿ ಅವರಲ್ಲಿ ಆದರ್ಶ ತುಂಬಿದವರು. ಕಾಲೇಜಿನ ಪಾಠಗಳಿಗಿಂತ ಜೀವನಪಾಠ ಕಲಿಸಿದವರು. ಗುರುಗಳ ಈ ಜ್ಞಾನದಾನ-ಬಾಳದಾನ ಪ್ರಯತ್ನಗಳು ಎಷ್ಟೋ ಮಂದಿ ಶಿಷ್ಯ-ಪ್ರಶಿಷ್ಯರಲ್ಲಿ ಕಂಡು ಬರದಿರುವುದು. ಶಿಷ್ಯ-ಪ್ರಶಿಷ್ಯರ ಕುಟುಂಬದವರಲ್ಲೂ ಅಲ್ಪ ಪ್ರಮಾಣದಲ್ಲಿ ಕಂಡುಬಂದಿರುವುದು ಹೆಮ್ಮೆಯ ಸಂಗತಿ ಅಲ್ಲ.

ಇಲ್ಲಿ ನಾಡಿನ ಎಲ್ಲ ಶ್ರೇಷ್ಠ, ಆದರ್ಶಪ್ರಾಯ ಅಧ್ಯಾಪಕರ ಬಗ್ಗೆ ಲೇಖನಗಳು ಸಮಾವೇಶವಾಗಿಲ್ಲ ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕ, ಮದ್ರಾಸ್ ಕರ್ನಾಟಕ, ಕೊಡಗು ಕರ್ನಾಟಕ ಎಂದು ಹಿಂದೆ ನಾವು ಏನು ಬ್ರಿಟಿಷರ ಕಾಲದ ವಿಭಾಗಗಳನ್ನು ಕಾಣುತ್ತಿದ್ದೆವೋ ಆ ಭಾಗಗಳಲ್ಲಿ ಇರುವ ಅನೇಕ ಅಧ್ಯಾಪಕರು, ಘನ ವಿದ್ವಾಂಸರು, ಕಲಾಕಾರರು, ಸಾಹಿತಿಗಳು, ಮಾನವತಾವಾದಿಗಳು, ಸರಳಜೀವಿಗಳು ವಿದ್ಯಾರ್ಥಿಗಳು ಬಾಳಿಗೆ ಶಾಲೆಯ ಒಳಗೆ ಹೊರಗೆ ಸ್ಫೂರ್ತಿ ಚೈತನ್ಯ ತುಂಬಿದವರು ಸಾಕಷ್ಟು ಮಂದಿ ಇದ್ದಾರೆ. ನಮಗಿದ್ದ ಕಾಲಮಿತಿ ಕಾರಣದಿಂದ ಅವರೆಲ್ಲರೂ ಇಲ್ಲಿ ಸೇರ್ಪಡೆ ಆಗಿಲ್ಲ. ಆ ಬಗ್ಗೆ ಪ್ರಕಟಿಸುವವರಿಗೆ ಇನ್ನೆರಡು ಸಂಪುಟಗಳನ್ನು ತುಂಬುವಷ್ಟು ಸಾಮಗ್ರಿಗಳು ಸಿಗುತ್ತವೆ.

"ಶಿಷ್ಯರು ಕಂಡಂತೆ ಗುರುಗಳು" ಲೇಖನಗಳನ್ನು ಸಂಪಾದಿಸಿದಾಗ ಅದರಲ್ಲಿ ಪ್ರಸಿದ್ಧ ಗುರುಗಳ ಬಗ್ಗೆ ಹಲವಾರು ಮಂದಿ ಬರೆದಿರುವುದು ಕಂಡುಬಂದಿತು. ಅವರು ಹಾಗೆ ಬರೆಯುವುದು ಅನಿವಾರ್ಯವಾಗಿತ್ತು ಎನಿಸಿತು. ಡಿಎಲ್‌ಎನ್, ತೀನಂಶ್ರೀ, ಕುವೆಂಪು, ಬೇಂದ್ರೆ, ದೇಜಗೌ, ಹಾಮಾನಾ, ಆರ್.ಸಿ. ಹಿರೇಮಠ ಹೀಗೆ ಅನೇಕ ವಿದ್ವಾಂಸರುಗಳ ಶಿಷ್ಯರು ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ. ಹೀಗಾಗಿ ಇಲ್ಲಿಯ ಲೇಖನಗಳಲ್ಲಿ ಹಲವರ ವಿಷಯ ಪುನರುಕ್ತಿ ಆದಂತೆ ಕಾಣಬಹುದು. ಆದರೆ ಅವರ ಬಗ್ಗೆ ಶಿಷ್ಯರ ಅನುಭವಗಳು ಭಿನ್ನವಾಗಿರುವುದನ್ನು ಗಮನಿಸಿ ಪ್ರಕಟಿಸಿದ್ದೇವೆ. ಉದಾಹರಣೆಗೆ ಟಿ.ವಿ. ವೆಂಕಟಾಚಲಶಾಸ್ತ್ರಿಗಳು, ಸ. ಶ್ರೀನಿವಾಸನ್. ಲಕ್ಷ್ಮೀನಾರಾಯಣಭಟ್ಟರು, ಸಾ. ಶಿ. ಮರುಳಯ್ಯ ಮೊದಲಾದವರೆಲ್ಲ ಕುವೆಂಪು ಅವರ ಬಗ್ಗೆ ಬರೆದಿದ್ದಾರೆ. ಆದರೆ ಅವರ ಅನುಭವಗಳು ಪ್ರಸ್ತಾಪಿಸಿರುವ ಸಂಗತಿಗಳು ಭಿನ್ನ ಭಿನ್ನವಾಗಿವೆ. ಉಪನಿಷತ್ತಿನಲ್ಲಿ ಆಚಾರ್ಯದೇವೋಭವ, ಮಾತೃದೇವೋಭವ, ಪಿತೃದೇವೋಭವ ಎಂದು ಉಪದೇಶಿಸಿದ್ದಾರೆ. ಜೀವನದಲ್ಲಿ ನಮ್ಮ ಬದುಕನ್ನು, ಆದರ್ಶಗಳನ್ನು ರೂಪಿಸುವಲ್ಲಿ ತಾಯ್ತಂದೆಯರ ಮತ್ತು ಗುರುಗಳ ಪಾತ್ರ ಅತಿ ಮುಖ್ಯವಾದುದು. ಇದರಲ್ಲಿ ವ್ಯಕ್ತಿಯ ವೈಯಕ್ತಿಕ ಬದುಕನ್ನು, ರೂಪಿಸುವಲ್ಲಿ ತಾಯಿತಂದೆಯರೂ ಸಾರ್ವಜನಿಕ ಬದುಕನ್ನು ರೂಪಿಸುವಲ್ಲಿ ಗುರುಗಳೂ ಗಮನಾರ್ಹ ಪಾತ್ರ ವಹಿಸುತ್ತಾರೆ. ಆದಕಾರಣ ಗುರುಗಳ ಪಾತ್ರ ವಿಶಿಷ್ಟವಾದುದು. ಆದರ್ಶ ಗುರುಗಳು ಶಾಲೆಯಲ್ಲಿ ತರಗತಿಯ ಕೊಠಡಿಗಳಲ್ಲಷ್ಟೇ, ಪುಸ್ತಕಪಾಠ ಕಲಿಸುವುದಿಲ್ಲ, ಹೊರಗಡೆ ಸಮಾಜದಲ್ಲಿಯೂ ಸಹ ವಿದ್ಯಾರ್ಥಿಗಳಿಗೆ ಜೀವನ ಪಾಠ ಹೇಳುತ್ತಾರೆ. ಕೇವಲ ವ್ಯಾಸಂಗದಿಂದ ಗ್ರಂಥಗಳಿಂದ ಜ್ಞಾನದಾನವಷ್ಟೇ ಮಾಡುವುದಿಲ್ಲ. ಆದರ್ಶ ಗುರುಗಳು ತಮ್ಮ ಸ್ವಭಾವ, ಉದಾರನೀತಿ, ನಡವಳಿಕೆ, ಶಿಷ್ಯ ಪ್ರೀತಿ, ಕರ್ತವ್ಯ ಪ್ರಜ್ಞೆ, ಸರಳ ಜೀವನದ ಮೂಲಕ ನಡೆ, ನುಡಿಗಳಲ್ಲಿ ಶಿಷ್ಯರ ಬಾಳಿನಲ್ಲಿ ಪ್ರಭಾವ ಬೀರುತ್ತಾರೆ ಅದಕ್ಕೆ ಇಲ್ಲಿಯ ಬರಹಗಳೇ ಸಾಕ್ಷಿ ಆಗಿವೆ.

ನಾಡಿನಲ್ಲಿ ಶಿಕ್ಷಕರ ಪಾತ್ರವು, ವಿದ್ಯಾರ್ಥಿಗಳ ಜೀವನದ ಮೇಲೆ ಪ್ರಭಾವ ಹೇಗಾಗುತ್ತದೆ ಎಂಬುದನ್ನು, ಇಲ್ಲಿಯ ಬರಹಗಳಲ್ಲಿ ಕಾಣುತ್ತೇವೆ ಈ ಬರಹಗಳು ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ ವಿದ್ಯಾರ್ಥಿಗಳ ತಾಯ್ತಂದೆಗಳಿಗೂ, ಸಾರ್ವಜನಿಕರಿಗೂ ಸಂತೋಷವನ್ನು ಮಾರ್ಗದರ್ಶನವನ್ನೂ ನೀಡಬಲ್ಲುದು ಎಂದು ಭಾವಿಸಿದ್ದೇವೆ. ನಾಡು ನುಡಿಗಳ ಸೇವೆ

ಸಲ್ಲಿಸಿರುವ ಅನೇಕ ಮಹನೀಯರ ಮೂಲಸ್ಫೂರ್ತಿ ಅವರ ಹಿರಿಯ ಗುರುಗಳಾಗಿದ್ದಾರೆ ಎಂಬುದು ನಿಜ.

ಇಂಥ ಉಪಯುಕ್ತ ಗ್ರಂಥ ಆರ್.ವಿ. ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಸಿಂಚನ ಕನ್ನಡ ವೇದಿಕೆ ಪ್ರಕಟಿಸುತ್ತಿರುವುದು ಆನಂದದಾಯಕ ಸಂಗತಿ ಆಗಿದೆ. ಒಂದು ಕಾಲದಲ್ಲಿ ಸೆಂಟ್ರಲ್ ಕಾಲೇಜ್, ಕ್ರೈಸ್ಟ್ ಕಾಲೇಜು ಮೊದಲಾದ ವಿದ್ಯಾ ಸಂಸ್ಥೆಗಳು ಸಲ್ಲಿಸಿದ ಕನ್ನಡ ಗ್ರಂಥಸೇವೆಯ ಹಾದಿಯಲ್ಲಿ ಸಿಂಚನ ಕನ್ನಡ ವೇದಿಕೆ ಮುಂದೆ ಸಾಗಿದೆ. ಅದರ ಕೊಡುಗೆಯಾಗಿ ಈ ಗ್ರಂಥ ಪ್ರಕಟವಾಗುತ್ತಿದೆ. ನಾಡಿನ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಈ ಗ್ರಂಥದ ಪ್ರಯೋಜನ ಪಡೆಯುತ್ತಾರೆ ಎಂದು ನಂಬಿದ್ದೇವೆ. ಈ ಗ್ರಂಥವು ಅರ್ಥಪೂರ್ಣವಾಗಿ (ಸೆಪ್ಟೆಂಬರ್ ೫) ಶಿಕ್ಷಕರ ದಿನ ಬಿಡುಗಡೆಯಾಗುತ್ತಿರುವುದು ಸಂತಸದ ಸಂಗತಿಯಾಗಿದೆ. ನಾಡಿನ ಶಿಕ್ಷಕರು, ವಿದ್ಯಾರ್ಥಿಗಳು, ತಾಯಿ ತಂದೆಗಳು, ಪೋಷಕರು ಈ ಗ್ರಂಥವನ್ನು ಅತ್ಯಾದರದಿಂದ ಬರಮಾಡಿಕೊಳ್ಳುತ್ತಾರೆಂದು ನಂಬಿದ್ದೇವೆ.

ತಾ॥ ೦೫-೦೯-೨೦೦೯
ಶಿಕ್ಷಕರ ದಿನ
ಸಿಂಚನ ಕನ್ನಡ ವೇದಿಕೆ
ಬೆಂಗಳೂರು

ಇಂತು,
**ಪ್ರೊ॥ ಜಿ. ಅಶ್ವತ್ಥನಾರಾಯಣ**
**ಎಸ್. ಬಿಳಿಗಿರಿವಾಸನ್**
**ಶಾಂತರಾಜು**
(ಸಂಪಾದಕರು)

# ಪ್ರಕಾಶಕರ ನುಡಿ

ಸಿಂಚನ ಕನ್ನಡ ವೇದಿಕೆಯ ಎಂಟನೆಯ ಪ್ರಕಟಣೆಯಾದ **ಶಿಷ್ಯರು ಕಂಡಂತೆ ಗುರುಗಳು** ಎಂಬ ವಿಶಿಷ್ಟ ಗ್ರಂಥವನ್ನು ಸೆಪ್ಟೆಂಬರ್ ೫, ೨೦೦೯ರ ಶಿಕ್ಷಕರ ದಿನದಂದು ಓದುಗರಿಗೆ ಅರ್ಪಿಸುತ್ತಿದ್ದೇವೆ.

ಈಗಾಗಲೇ ಸಿಂಚನ ಕನ್ನಡ ವೇದಿಕೆಯಿಂದ ಈ ಕೆಳಕಂಡ ಗ್ರಂಥಗಳನ್ನು ಪ್ರಕಟಿಸಿ ಅಳಿಲಸೇವೆ ಸಲ್ಲಿಸಿದ್ದೇವೆ.

೧ ಮೊದಲು ಮಾನವನಾಗು
೨ ಸಾಂಸ್ಕೃತಿಕ ಅನುಸಂಧಾನ
೩ ಸಂತೃಪ್ತ ಬಾಳಿನ ಮಾರ್ಗದರ್ಶಿ
೪ ಸಿರಿಗನ್ನಡ ಸರಳ ಭಗವದ್ಗೀತೆ
೫ ಇಪ್ಪತ್ತೈದು ಏಕಾಂಕಗಳು
೬ ಸೌಜನ್ಯ ಮತ್ತು ಸಂಸ್ಕೃತಿ
೭ ಮಕ್ಕಳು ಬೆಳೆಯುತ್ತಿದ್ದಾರೆ ಎಚ್ಚರಿಕೆ!

ನಾಡನ್ನು ಕಟ್ಟುವಲ್ಲಿ ಸತ್ಪ್ರಜೆಗಳನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ತರವಾದುದು. ನಾಡಿನ ಶ್ರೇಷ್ಠ ಗುರುಗಳ, ಆದರ್ಶಗಳನ್ನು ಬಾಳಿನಲ್ಲಿ ಅಳವಡಿಸಿಕೊಂಡು ವಿದ್ಯಾರ್ಥಿಗಳ ಜೀವನಕ್ಕೆ ಮಾರ್ಗದರ್ಶನವನ್ನು ಸ್ಫೂರ್ತಿಯನ್ನು ನೀಡಿದ ಗುರು–ಶಿಷ್ಯರನ್ನು ಕುರಿತ ವ್ಯಕ್ತಿಚಿತ್ರಗಳನ್ನು ಇದೀಗ ಪ್ರಕಟವಾಗುತ್ತಿರುವ "ಶಿಷ್ಯರು ಕಂಡಂತೆ ಗುರುಗಳು" ಎಂಬ ಕೃತಿಯು ಒಳಗೊಂಡಿದೆ.

ಪ್ರತಿಭಾನ್ವಿತ ಗುರುಗಳಿಂದ ಸ್ಫೂರ್ತಿ, ಮಾರ್ಗದರ್ಶನ ಹೊಂದಿದ ಶಿಷ್ಯರು, ತಾವು ಗುರುಗಳಾಗಿ ತಮ್ಮ ಶಿಷ್ಯರ ಶೀಲ, ಜ್ಞಾನಗಳನ್ನು ಹೇಗೆ ರೂಢಿಸಿದರು ಎಂಬ ಚಿತ್ರಣವೂ ಇಲ್ಲಿದೆ. ಇದುವರೆಗೆ ಕನ್ನಡದಲ್ಲಿ ಪ್ರಕಟವಾಗಿರುವ ಲೇಖನಗಳೆಲ್ಲ ಗುರುಶಿಷ್ಯರನ್ನು ಕುರಿತಿವೆ. ಆದರೆ ಇಲ್ಲಿ ಆ ಬಗೆಯ ಲೇಖನಗಳ ಜೊತೆಗೆ ಗುರು–ಶಿಷ್ಯ–ಪ್ರಶಿಷ್ಯ ಲೇಖನಗಳಿರುವುದು ಈ ಗ್ರಂಥದ ವಿಶೇಷವಾಗಿದೆ. ಈ ಬಗೆಯ ಗ್ರಂಥ ಕನ್ನಡದಲ್ಲಿ ಇದೇ ಮೊದಲು ಎಂದು ತಿಳಿಸಲು ಹೆಮ್ಮೆಯಾಗುತ್ತಿದೆ.

ಹಳೆಯ ತಲೆಮಾರಿನ ಅಧ್ಯಾಪಕರ ಗ್ರಂಥ ಪಾಂಡಿತ್ಯ, ಸಜ್ಜನಿಕೆ, ಸರಳ ಜೀವನ, ಪಾಠಪಾಂಡಿತ್ಯ ನಾಡಿಗೆ ಸಲ್ಲಿಸಿದ ಸಾಹಿತ್ಯಸೇವೆ, ಶಿಷ್ಯ ಪ್ರೀತಿ ಮೊದಲಾದುವನ್ನು ಕುರಿತ ಇಲ್ಲಿಯ ಲೇಖನಗಳು ನಿಜಕ್ಕೂ ಓದಿದವರಿಗೆ ಆನಂದ ನೀಡಿ ಸ್ಫೂರ್ತಿ ನೀಡುತ್ತವೆ ಎಂದು ನಂಬಿದ್ದೇವೆ. ನಾಡಿನ ಜನರು, ವಿದ್ಯಾರ್ಥಿಗಳು, ಶಿಕ್ಷಕ ವೃಂದದವರು ಈ ಗ್ರಂಥವನ್ನು ಸಂತೋಷದಿಂದ ಬರಮಾಡಿಕೊಳ್ಳುವರು ಎಂದು ನಂಬಿದ್ದೇವೆ.

ತಾ॥ ೦೫–೦೯–೨೦೦೯
ಶಿಕ್ಷಕರ ದಿನ

**ಟಿ.ವಿ. ರಾಜು**
ಅಧ್ಯಕ್ಷರು, 'ಸಿಂಚನ' ಕನ್ನಡ ವೇದಿಕೆ

# ಪರಿವಿಡಿ

## ಭಾಗ : ಎರಡು
## ಗುರುಶಿಷ್ಯರು

# ಭಾಗ–೧

# ಗುರು – ಶಿಷ್ಯ – ಪ್ರಶಿಷ್ಯರು

# ಲೋಕೋತ್ತರ ಗುರು

## (ಪ್ರೊ|| ಟಿ. ಎಸ್. ವೆಂಕಣ್ಣಯ್ಯ)

● ಕುವೆಂಪು

ದಿವಂಗತ ಪ್ರೊ. ಟಿ.ಎಸ್. ವೆಂಕಣ್ಣಯ್ಯನವರ ಜನ್ಮಶತಾಬ್ದಿಯ ಆಚರಣೆಯ ಸಂದರ್ಭದಲ್ಲಿ, ಅವರ ಜೀವನ ಚರಿತ್ರೆಯ ರೂಪದ ಈ ಪುಣ್ಯಸ್ಮೃತಿಗೆ ನನ್ನ ಮುನ್ನುಡಿ ಕಾಣಿಕೆಯನ್ನು ಸಂತೋಷದಿಂದ ಸಮರ್ಪಿಸುತ್ತಿದ್ದೇನೆ.

ಕನ್ನಡ ನವೋದಯ ಯಜ್ಞದ ಅಧ್ವರ್ಯುಗಳಲ್ಲಿ ಟಿ.ಎಸ್. ವೆಂಕಟಣ್ಣಯ್ಯನವರು ಒಬ್ಬರು; ಒಂದರ್ಥದಲ್ಲಿ ಅಗ್ರಮಾನ್ಯರು. ಅವರು ಮೂಲತಃ ಆಧ್ಯಾತ್ಮಿಕ ಚೇತನವಾಗಿದ್ದು, ಆ ನವೋದಯದ ಬೆಳಗಿಗೆ ಅಧ್ಯಾತ್ಮದ ಸ್ವರ್ಗೀಯಕಾಂತಿಯನ್ನು ಮೇಳವಿಸಿದರೆಂದರೆ ತಪ್ಪಾಗುವುದಿಲ್ಲ. ಅವರು ಶ್ರೀ ರಾಮಕೃಷ್ಣ ಪರಮಹಂಸರ ಕಥೆಯನ್ನು ಕನ್ನಡಿಗರಿಗೆ ಮೊದಲ ಬಾರಿಗೆ ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳೊಡನೆ, ಒದಗಿಸಿಕೊಟ್ಟರೆಂಬುದು ಕೇವಲ ಆಕಸ್ಮಿಕ ಸಂಗತಿಯಾಗದೆ, ಪೂರ್ಣದೃಷ್ಟಿಗೆ ಅರ್ಥವತ್ತಾಗಿ ತೋರುತ್ತದೆ, ಅವರಿಬ್ಬರೂ ಕನ್ನಡಕ್ಕಾಗಿ ದುಡಿದವರೆಂದೊ ಪ್ರಾಧ್ಯಾಪಕರೆಂದೆ ಲೌಕಿಕಸ್ತರದಲ್ಲಿ ಗೌರವಾಸ್ಪದರಾಗಿರಲಿಲ್ಲ; ಅದಕ್ಕೂ ಮೀರಿದ ನೆಲೆಯೊಂದರಲ್ಲಿ ನನ್ನ ಪಾಲಿಗೆ ಪೂಜಾಭಾಜನರಾಗಿದ್ದರು.

ವೆಂಕಣ್ಣಯ್ಯನವರ ಮತ್ತು ನನ್ನ ಸಂಬಂಧವಂತೂ ಪ್ರಧಾನವಾಗಿ ಲೋಕೋತ್ತರ ಸ್ವರೂಪದ್ದಾಗಿತ್ತು. ಇತರ ಬಗೆಯ ಸಂಬಂಧಗಳು ಇರಲಿಲ್ಲವೆಂದಲ್ಲ; ಆದರೆ ಅವು ಗುಣೀಭೂತ ವಾಗಿದ್ದುವು. ವೆಂಕಣ್ಣಯ್ಯನವರಲ್ಲಿ ನಾನು ಅನುಭವಿಸಿದ ಆತ್ಮೀಯತೆ, ನಿಕಟತೆಗಳು ಅನನ್ಯ ಮತ್ತು ಅಹೇತುಕ ಎನ್ನಬೇಕು. ಅವರಲ್ಲಿ ನನಗೆ ಸಾಕಷ್ಟು ಸಲಿಗೆಯಿದ್ದರೂ, ಅದು ಇನಿತೂ ಗೌರವ ದೂರವಾಗಿರಲಿಲ್ಲ. ನನ್ನ ಮೇಲೆ ಬೀರಿದ ದೈವಿಕ ಪ್ರಭಾವದಲ್ಲಿ ವೆಂಕಣ್ಣಯ್ಯನವರು ಪೂಜ್ಯ ಸಿದ್ಧೇಶ್ವರಾನಂದರಿಗಷ್ಟೇ ಎರಡನೆಯವರಾಗಿದ್ದರು ಎಂದು ಹೇಳಿದರೆ ಸಾಕು, ಅವರ ವ್ಯಕ್ತಿತ್ವದ ಹಿರಿಮೆ ಮತ್ತು ನನ್ನ ಬದುಕಿನಲ್ಲಿ ಅವರು ವಹಿಸಿದ ಮಹತ್‌ಪಾತ್ರ ಧ್ವನಿತವಾಗುತ್ತವೆ.

ವೆಂಕಣ್ಣಯ್ಯನವರು ನನ್ನ ಜೀವನದ ಶ್ರೇಯಸ್ಸಿಗೆ ಕಾರಣರಾದಂತೆಯೇ, ನನ್ನ ಸಾಹಿತ್ಯ ಸಹಸ್ರದಳ ಕಮಲವಾಗಿ ವಿಕಸಿಸಲು ಪ್ರೋತ್ಸಾಹ ಕಿರಣಗಳನ್ನು ವರ್ಷಿಸಿದರೆಂಬುದೂ ಉಲ್ಲೇಖನೀಯ. ಹಿಂಜರಿಯುವ ಸ್ವಭಾವದ ನನ್ನನ್ನು ಮುನ್ನೂಕುವ ಅವರ ನಿರಂತರ ಪ್ರೇರಣೆ, ಉತ್ತೇಜನಗಳಿಲ್ಲದಿದ್ದರೆ ನಾನು ಏನಾಗುತ್ತಿದ್ದೆನೊ ಹೇಳಲರಿಯೆ. ನಿಜವಾದ ಪ್ರತಿಭೆ

ಎಲ್ಲಿದ್ದರೂ ಅದನ್ನು ಗುರುತಿಸುವುದು ಮತ್ತು ಬೆಳಕಿಗೆ ತರುವುದು ವೆಂಕಣ್ಣಯ್ಯನವರಿಗೆ ತುಂಬ ಪ್ರಿಯವಾದ ಕಾರ್ಯವಾಗಿತ್ತು. ಅವರ ಆ ಔದಾರ್ಯಕ್ಕೆ ಪೋಷಕ ಪ್ರವೃತ್ತಿಗೆ ನನ್ನಂತೆ ಅನೇಕರು ಋಣಿಗಳು.

ವೆಂಕಣ್ಣಯ್ಯನವರು ಒಂದು ನಿಶ್ಶಬ್ದ ಕ್ರಾಂತಿಯನ್ನು ಉಂಟುಮಾಡಿದರು, ಅದೊಂದು ಕ್ರಾಂತಿ ಎಂದು ಯಾರೊಬ್ಬರಿಗೂ ಅನಿಸದ ನಿರಾಡಂಬರ ರೀತಿಯಲ್ಲಿ ಅಧ್ಯಾಪಕರಾಗಿ ಅವರು ಅದುತನಕ ಕನ್ನಡಕ್ಕೆ ಅಪರಿಚಿತವಾಗಿದ್ದ ಬೋಧನ ವಿಧಾನವನ್ನೂ ವಿಮರ್ಶನ ಪ್ರಕಾರವನ್ನೂ ಬಳಕೆಗೆ ತಂದರು. ಪ್ರಾಚೀನ ಕನ್ನಡ ಸಾಹಿತ್ಯದ ಸತ್ತ್ವ ಮತ್ತು ಹಿರಿಮೆ ಗರಿಮೆಗಳು ವಿದ್ಯಾರ್ಥಿಗಳಿಗೆ ಅನಾವರಣಗೊಳ್ಳುವಂತೆ. ಆದರೆ ಅವರಲ್ಲಿ ಅಭಿಮಾನವಷ್ಟೆ ಮನೆಮಾಡಿರಲಿಲ್ಲ, ನಿಷ್ಪಕ್ಷಪಾತ ಬುದ್ಧಿಯೂ ಸದಾ ಜಾಗ್ರತವಾಗಿತ್ತು. ಸಾಹಿತ್ಯ ಕೃತಿಗಳ ಆಸ್ವಾದನದಲ್ಲಿ, ಗುಣಗ್ರಹಣದಲ್ಲಿ ಅವರು ಸಮರ್ಥರಾಗಿದ್ದಂತೆಯೇ, ದೋಷಗಳನ್ನು ಗುರುತಿಸಿ ಖಂಡಿಸುವುದರಲ್ಲಿಯೂ ನಿಷ್ಠುರರಾಗಿರುತ್ತಿದ್ದರು. ಒಟ್ಟಿನಲ್ಲಿ ಅವರೊಬ್ಬ ಶ್ರೇಷ್ಠ ವರ್ಗದ ವಿಮರ್ಶಕರು; ಅವರ ಅಭಿರುಚಿ ಉತ್ತಮ ಮಟ್ಟದ್ದು. ಅವರಿಂದ ಹೊಗಳಿಸಿಕೊಳ್ಳುವುದು ದಿಟವಾದ ಯೋಗ್ಯತೆಗೆ ಪ್ರಮಾಣವಾಗಿತ್ತು. ಅಂತಹ ಪ್ರಮಾಣಪತ್ರಗಳನ್ನೆಷ್ಟೋ ಅವರಿಂದ ಪಡೆಯುವ ಭಾಗ್ಯ ನನ್ನದಾಗಿತ್ತು ಎಂಬುದನ್ನು ಸ್ಮರಿಸುತ್ತೇನೆ.

ಎಲ್ಲ ಅರ್ಥಗಳಲ್ಲೂ ವೆಂಕಣ್ಣಯ್ಯನವರು ಎತ್ತರದ ವ್ಯಕ್ತಿಯಾಗಿದ್ದರು. ಬದುಕು ಮುಖ್ಯ ಎಂದು ನಂಬಿದ್ದ ಸಾಹಿತ್ಯ ಸೃಜನೆಗೆ ಹೆಚ್ಚು ಲಕ್ಷ್ಯ ಕೊಡದಿದ್ದುದು ಸಹಜವೇ. ಅವರ ಬರವಣಿಗೆ ಪರಿಮಾಣದಲ್ಲಿ ಹೆಚ್ಚಿಲ್ಲ: ಆದರೆ ಅದು ಬಹು ಬೆಲೆಯುಳ್ಳದ್ದು. ಆ ನವೋದಯ ಕಾಲದಲ್ಲಿ ಸಾಹಿತ್ಯ ರಚನೆಗೆ ವೆಂಕಣ್ಣಯ್ಯನವರಿಗೆ ಪುರುಸೊತ್ತಾದರೂ ಎಲ್ಲಿತ್ತು? ನಾಡಿನಾದ್ಯಂತ ಸಂಚಾರ, ಭಾಷಣ ಪರಂಪರೆ, 'ಪ್ರಬುದ್ಧ ಕರ್ಣಾಟಕ'ದ ಕೆಲಸ, ಪಾಠ ಪ್ರವಚನಗಳು– ಒಂದೆ, ಎರಡೆ? ಹೀಗಾಗಿ, ಅವರು ಬಹಳ ಸಾಹಿತ್ಯ ಸೃಷ್ಟಿ ಮಾಡಲಿಲ್ಲ. ನಿಜ. ಆದರೆ ನನ್ನಂಥ ಅನೇಕ ಸಾಹಿತ್ಯ ಸೃಷ್ಟಿಕರ್ತರನ್ನೆ ಅವರು ಸೃಷ್ಟಿಸಿದ್ದು ಸಾಮಾನ್ಯ ಸಾಧನೆಯೆ? ಅವರ ಪ್ರಭಾವಳಿ ಕರ್ನಾಟಕದ ಉದ್ದಗಲಕ್ಕೂ ಹಾಸುಹೊಕ್ಕಾಗಿತ್ತು ಎಂಬುದು ಗಮನಾರ್ಹ.

ವೆಂಕಣ್ಣಯ್ಯನವರ ದಾನಗುಣ ಸಾಕಷ್ಟು ಪ್ರಸಿದ್ಧವಾದುದು, ಅವರೇನೋ ಅದನ್ನು ಗುಪ್ತವಾಗಿರಿಸಲು ಪ್ರಯತ್ನಿಸುತ್ತಿದ್ದರು. ವಿದ್ಯಾದಾನವಂತೂ ಸರಿಯೆ. ಇನ್ನು, ಅವರಿಂದ ಆರ್ಥಿಕವಾಗಿ ಉಪಕೃತರಾದವರ ಸಂಖ್ಯೆಯೂ ದೊಡ್ಡದು. ಪರಿಮಿತವಾಗಿದ್ದ ತಮ್ಮ ಆದಾಯ ದಲ್ಲಿ ಅವರು ಮಾಡುತ್ತಿದ್ದ ಈ ಸಹಾಯ ಎಷ್ಟು ಗಣ್ಯವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. "ಸಂತೋಷಂ ಜನಯೇತ್ ಪ್ರಾಜ್ಞಃ. ತದೇವೇಶ್ವರ ಪೂಜನಂ" ಎಂಬುದನ್ನು ಅಕ್ಷರಶಃ ಆಚರಿಸಿದ ಮಹಾನುಭಾವರು ವೆಂಕಣ್ಣಯ್ಯನವರು.

ನನ್ನ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವನ್ನು ವೆಂಕಣ್ಣಯ್ಯನವರಿಗೆ ಅರ್ಪಿಸಿದ್ದೇನಷ್ಟೆ ಈ ಸಂಬಂಧವಾಗಿ, ಇದುವರೆಗೆ ಎಲ್ಲೂ ಬಹಿರಂಗವಾಗಿ ನಾನು ಹೇಳದಿರುವ

ಒಂದು ಆಂತರಂಗಿಕ ಸಂಗತಿಯನ್ನು ಈಗ ಬಯಲು ಮಾಡಬಯಸುತ್ತೇನೆ. ವೆಂಕಣ್ಣಯ್ಯನವರು ವಿಧಿವಶರಾದಾಗ 'ಶ್ರೀ ರಾಮಾಯಣ ದರ್ಶನಂ' ರಚನೆ ಬಹುದೂರವೇನೂ ಸಾಗಿರಲಿಲ್ಲ. ಅವರು ತೀರಿಕೊಂಡಂದು ರಾತ್ರಿ "ಇದೊ ಮುಗಿಸಿ ತಂದಿಹೆನ್ ಈ ಬೃಹದ್ ಗಾನಮಂ" ಎಂದು ಮೊದಲಾಗುವ ಅರ್ಪಣೆಯ ಭಾಗವನ್ನು ಬರೆಯತೊಡಗಿದೆ. "...ವಿಶ್ವವಾಣಿಗೆ ಮುಡಿಯ ಮಣಿ ಮಾಡಿಹೆನ್ ನಿಮ್ಮ ಕೃಪೆಯಿಂದೆ" ಎಂಬಲ್ಲಿಯವರೆಗೆ ಬರೆದೆ. ವೆಂಕಣ್ಣಯ್ಯನವರನ್ನು ಕುರಿತು ಮುಂದೆ ಏನೇನೊ ಬರೆಯಬೇಕೆಂದಿದ್ದೆ. ಅಷ್ಟರಲ್ಲಿ, ನನ್ನ ಅಧ್ಯಯನ ಕಕ್ಷದ ಮುಚ್ಚಿದ್ದ ಬಾಗಿಲನ್ನು ಯಾರೊ ಟಕ್, ಟಕ್ ಎಂದು ತಟ್ಟಿದಹಾಗಾಯಿತು. ಎದ್ದು ಬಂದು ಬಾಗಿಲು ತೆರೆದು ನೋಡಿದರೆ, ಯಾರೂ ಇಲ್ಲ! ಆಗ ನಮ್ಮ ಮನೆಯ ಸುತ್ತಮುತ್ತ ಮನೆಗಳೇ ಇರಲಿಲ್ಲ. ಬಾಗಿಲು ಮುಚ್ಚಿ, ಮತ್ತೆ ಬರೆಯಲೆಂದು ಕುಳಿತೆ, ಪುನಃ ಟಕ್ ಟಕ್ ಸದ್ದು. ಮರಳಿ ಎದ್ದು ಬಂದು ಬಾಗಿಲು ತೆರೆದು ನೋಡಿದೆ. ಯಾರೂ ಇಲ್ಲ! ಬಳಿಕ, ವೆಂಕಣ್ಣಯ್ಯನವರ ವಿಷಯವೇನನ್ನೂ ಬರೆಯಬಾರದು ಎಂದುಕೊಂಡು, ಅಲ್ಲಿಗೆ ಒಂದು ಸಣ್ಣ ಗೀಟು ಹಾಕಿ ನಿಲ್ಲಿಸಿದೆ. (ಅನಂತರ "ಪೂರ್ವದ ಮಹಾ ಕವಿಗಳೆಲ್ಲರುಂ". ಎಂದು ಮೊದಲಾಗುತ್ತದೆ.) ಈ ಘಟನೆಯನ್ನು ನಾನು ವ್ಯಾಖ್ಯಾನಿಸಬೇಕಿಲ್ಲ ಎಂದು ಭಾವಿಸುತ್ತೇನೆ.

ವೆಂಕಣ್ಣಯ್ಯನವರ ಜೀವನ ಚರಿತ್ರೆಯನ್ನು ಅವರ ಸೋದರರೆ ಆದ ಪ್ರೊ. ತ. ಸು. ಶಾಮರಾಯರು ಬರೆದಿದ್ದಾರೆ. ಅಣ್ಣನಾದ ವೆಂಕಣ್ಣಯ್ಯನವರನ್ನು ತೀರ ಹತ್ತಿರದಿಂದ ಕಂಡು ಅವರ ಅಂತರಂಗ ಬಹಿರಂಗವನ್ನೆಲ್ಲ ಚೆನ್ನಾಗಿ ಬಲ್ಲವರಾದ ಶಾಮರಾಯರ ಈ ಕಥನ ಸಾಕಷ್ಟು ಅಧಿಕೃತವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಇದನ್ನು ನಾನು ಬೇಕೆಂದೆ ಕಥನ ಎಂದು ಕರೆಯುತ್ತಿದ್ದೇನೆ. ಏಕೆಂದರೆ ಇದು ಚರಿತ್ರೆಯ ಸತ್ಯವನ್ನು ಸ್ವಲ್ಪವೂ ಕಡೆಗಣಿಸದೆ, ಒಂದು ಕಾದಂಬರಿಯಂತೆ ಆಕರ್ಷಕವಾಗಿ ಓದಿಸಿಕೊಂಡು ಹೋಗುತ್ತದೆ. ಈ ಪುಸ್ತಕವನ್ನು ರಚಿಸಿದ್ದಕ್ಕಾಗಿ ಶಾಮರಾಯರನ್ನು ಅಭಿನಂದಿಸುತ್ತೇನೆ.

ತಮ್ಮ ಜನ್ಮಶತಾಬ್ದಿಯ ಉತ್ಸವ, ಜೀವನ ಚರಿತ್ರೆಯ ರಚನೆ, ಸ್ಮಾರಕ ನಿರ್ಮಾಣ ಮುಂತಾದುವನ್ನೆಲ್ಲ ವೆಂಕಣ್ಣಯ್ಯನವರಂಥ ಚೇತನ ಖಂಡಿತ ಇಷ್ಟಪಡುವುದಿಲ್ಲವೆಂದು ನಮಗೆ ಗೊತ್ತು. ಆದರೆ ಇದೆಲ್ಲ ನಮ್ಮ ಕರ್ತವ್ಯ ನಿರ್ವಹಣೆಯ ದೃಷ್ಟಿಯಿಂದ, ಕೃತಜ್ಞತಾ ಸಮರ್ಪಣೆಯ ದೃಷ್ಟಿಯಿಂದ ನಡೆಯಬೇಕಾದುದು. ಬೇರೊಂದು ಸಂದರ್ಭದಲ್ಲಿ ನಾನು ಹೇಳಿದಂತೆ–"ನಾವು ನೆರವೇರಿಸುತ್ತಿರುವ ಈ ಶ್ರದ್ಧೆಯ ಕಾರ್ಯ ಕೀರ್ತಿಶನಿಯ ಪೂಜಾ ಸ್ವರೂಪದ್ದಲ್ಲ, ಯಶೋಲಕ್ಷ್ಮಿಯ ಆಶೀರ್ವಾದದ ಅವತರಣಕ್ಕೆ ಶಿಷ್ಯಸ್ತೋಮದ ಗುರುಭಕ್ತಿ ಸಾರ್ಚುತ್ತಿರುವ ಸಾರಸ್ವತ ಸೇತು....."

ಈ ಕೃತಿಯನ್ನೋದಿ ಕನ್ನಡಿಗರು ಪೂಜ್ಯ ವೆಂಕಣ್ಣಯ್ಯನವರ ಆದರ್ಶ. ಅಭೀಪ್ಸೆಗಳನ್ನು ಆವಾಹನಮಾಡಿಕೊಳ್ಳಲಿ, ಶ್ರೇಯೋಭಾಗಿಗಳಾಗಲಿ ಎಂದು ಹೃದಯಪೂರ್ವಕವಾಗಿ ಹಾರೈಸುತ್ತೇನೆ. (ಟಿ.ಎಸ್.ವೆಂಕಣ್ಣನವರ ಗ್ರಂಥಕ್ಕೆ ಬರೆದ ಮುನ್ನುಡಿ).

❖

# ನನ್ನ ಗುರುವರ್ಯರು

## ಬಿ.ಎಂ.ಶ್ರೀ. / ಕುವೆಂಪು

• *ಎಚ್. ಎಸ್. ದೊರೆಸ್ವಾಮಿ*

ಉಪಾಧ್ಯಾಯರು ಮಕ್ಕಳನ್ನು ರೂಪಿಸುವವರು. ಇದು ನೂರಕ್ಕೆ ನೂರು ಸತ್ಯ. ನನ್ನ ಕಾಲದಲ್ಲಿ ಉಪಾಧ್ಯಾಯರಿಗೂ, ವಿದ್ಯಾರ್ಥಿಗೂ ನಿಕಟ ಬಾಂಧವ್ಯ ಇತ್ತು. ಪ್ರಾಥಮಿಕ ಶಾಲೆಯಿಂದ ಕಾಲೇಜಿನವರೆಗೆ ನನ್ನನ್ನು ತಿದ್ದಿ ರೂಪಿಸಿದ ಅಧ್ಯಾಪಕರು ಹತ್ತಾರು ಜನ. ಪ್ರಾಥಮಿಕ ವಿದ್ಯಾಭ್ಯಾಸವನ್ನು ನಾನು ಹಳ್ಳಿಯಲ್ಲಿಯೇ ಪೂರೈಸಿದೆ. ಶ್ರೀನಿವಾಸ ಅಯ್ಯರ್ ನನ್ನ ಬರವಣಿಗೆ ಮತ್ತು ಕಾಗುಣಿತ ಸುಧಾರಿಸಿದ ಮೇಷ್ಟ್ರು. ೧ ರಿಂದ ೨೦ರ ವರೆಗೆ ಮಗ್ಗಿ ಕಲಿತಿದ್ದೆ. ಲೆಕ್ಕದಲ್ಲಿ ನಾನು ಚುರುಕಾಗಿದ್ದೆ. ದಿನಾ ನಾವು ಮಗ್ಗಿ ಬರೆದು ತೋರಿಸಬೇಕಾಗಿತ್ತು. ಮಗ್ಗಿ ಬರೆಯದವರಿಗೆ ಬಾಸುಂಡೆ ಬರುವಂತೆ ಏಟು ಬೀಳುತ್ತಿತ್ತು. ಅನೇಕರಿಗೆ ನಾನು ಕನಿಕರದಿಂದ ಮಗ್ಗಿ ಬರೆದುಕೊಡುತ್ತಿದ್ದೆ. ಅದರಿಂದ ನಾನು ಮಗ್ಗಿಯಲ್ಲಿ ಪ್ರವೀಣನಾದೆ. ಅಲ್ಲದೆ ನನ್ನಿಂದ ಮಗ್ಗಿ ಬರೆಸಿಕೊಂಡವರು ಕೃತಜ್ಞತೆಯ ಕುರುಹಾಗಿ ನನಗೆ ಕಡಲೇಕಾಯಿ, ಬೆಲ್ಲ ತಂದುಕೊಡುತ್ತಿದ್ದರು. ಶೇಷಪ್ಪನವರೆಂಬ ಇನ್ನೊಬ್ಬ ಮೇಷ್ಟ್ರು ರಾತ್ರಿ ವೇಳೆ ನಮ್ಮ ಊರಿನ ಎಲ್ಲ ಬೀದಿಗಳಲ್ಲೂ ಪಾದಯಾತ್ರೆ ಮಾಡುತ್ತಿದ್ದರು. ಅದರ ಉದ್ದೇಶ ಹುಡುಗರು ಪಾಠ ಓದುತ್ತಿದ್ದಾರೋ, ಕಾಲಹರಣ ಮಾಡುತ್ತಿದ್ದಾರೋ ಎಂದು ವೀಕ್ಷಿಸುವುದು. ಹುಡುಗರು ಬೆಳದಿಂಗಳಲ್ಲಿ ಗುಂಪು ಕಟ್ಟಿಕೊಂಡು ಆಟ ಆಡುತ್ತಿದ್ದರೆ ಮಾರನೇ ಬೆಳಗ್ಗೆ ಅವರಿಗೆಲ್ಲ ಶಾಲೆಯಲ್ಲಿ ಶಿಕ್ಷೆ ಕಟ್ಟಿಟ್ಟಿದ್ದು. ನಂಜುಂಡಯ್ಯರ್ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರು. ಶಿಸ್ತಿಗೆ ಬಹಳ ಮಹತ್ವ ಕೊಡುತ್ತಿದ್ದರು. ಅವರು ಇಂಗ್ಲಿಷ್ ಲೋಯರ್ ಸೆಕೆಂಡರಿ ಮಾಡಿದವರಾದರೂ, ಇಂಗ್ಲಿಷ್ ಪಾಠ ಮಾಡುವುದರಲ್ಲಿ ಇಂಗ್ಲಿಷ್ ವ್ಯಾಕರಣ ಹೇಳಿಕೊಡುವುದರಲ್ಲಿ ಯಾವ ಎಂ.ಎ. ಪದವೀಧರನಿಗೂ ಕಡಿಮೆ ಇರಲಿಲ್ಲ.

ನನ್ನ ಮಿಡ್ಲ್ ಸ್ಕೂಲ್, ಹೈಸ್ಕೂಲುಗಳ ವಿದ್ಯಾಭ್ಯಾಸ, ಕಾಲೇಜು ವಿದ್ಯಾಭ್ಯಾಸ ಬೆಂಗಳೂರಿನಲ್ಲಿ ಆಯಿತು. ಕೋಟೆ ಹೈಸ್ಕೂಲಿನಲ್ಲಿ ನಾನು ಓದಿದ್ದು. ಡಿ. ವಿಶ್ವೇಶ್ವರಯ್ಯ ನನ್ನ ಅಚ್ಚುಮೆಚ್ಚಿನ ಉಪಾಧ್ಯಾಯರು. ಅವರು ಲೆಕ್ಕ ಬೋಧಿಸುತ್ತಿದ್ದರು. ತುಂಬಾ ಪರಿಣತ ಉಪಾಧ್ಯಾಯರಾಗಿದ್ದರು ಅವರು. ಕಾಲೇಜಿನಲ್ಲಿ ವಿ. ಸೀತಾರಾಮಯ್ಯನವರು, ಎ.ಆರ್. ಕೃಷ್ಣಶಾಸ್ತ್ರಿಗಳು, ಬಿ.ಎಂ. ಶ್ರೀಕಂಠಯ್ಯನವರು, ನನ್ನ ಮೇಲೆ ಪ್ರಭಾವ ಬೀರಿದ ಅಧ್ಯಾಪಕರು. ವಿ. ಸೀತಾರಾಮಯ್ಯನವರು ಜೀವನದ ಸಮಸ್ಯೆಗಳ ಸರಮಾಲೆಯನ್ನೇ ನಮ್ಮ ಮುಂದೆ ಇಡುತ್ತಿದ್ದರು. ಜನಜೀವನವನ್ನು ತಮ್ಮದೇ ವಿಶಿಷ್ಟ ರೀತಿಯಲ್ಲಿ ಪೃಥಕ್ಕರಿಸುತ್ತಿದ್ದರು. ಕೃಷ್ಣಶಾಸ್ತ್ರಿಗಳು ಶಿಸ್ತಿನ ಸಿಪಾಯಿ. ಅಶಿಸ್ತು

ಅನೀತಿಗಳನ್ನು ಎಂದೂ ಸಹಿಸರು. ನಮ್ಮ ಕಾಲದಲ್ಲಿ ಕಾಲೇಜಿನಲ್ಲಿ ಪ್ರತಿ ತರಗತಿಯಲ್ಲಿ ೪–೬ ಹೆಣ್ಣುಮಕ್ಕಳು ಮಾತ್ರ ಇರುತ್ತಿದ್ದರು. ಒಂದು ದಿನ ಒಬ್ಬ ವಿದ್ಯಾರ್ಥಿ ಹೆಣ್ಣುಮಕ್ಕಳ ಡೆಸ್ಕಿನಲ್ಲಿ ಒಬ್ಬ ವಿದ್ಯಾರ್ಥಿನಿಯ ಪಕ್ಕದಲ್ಲಿ ಉದ್ದೇಶಪೂರ್ವಕವಾಗಿ ಕುಳಿತಿದ್ದ. ಅದನ್ನು ಕಂಡ ಕೃಷ್ಣಶಾಸ್ತ್ರಿಗಳು ಕೆಂಡವಾದರು. ಅವನಿಗೆ ಮುಖದಲ್ಲಿ ನೀರಿಳಿಸಿಬಿಟ್ಟರು.

ಬಿ.ಎಂ.ಶ್ರೀ. ಅವರು ಪ್ರಕಾಂಡ ವಿದ್ವಾಂಸರು. 'ಕಿಂಗ್ ಲಿಯರ್' ನಾಟಕದ ಪಾಠ ಅವರು ನಮಗೆ ಮಾಡುತ್ತಿದ್ದರು. ಒಂದೊಂದು ದೃಶ್ಯವನ್ನೂ ಕಣ್ಣಿಗೆ ಕಟ್ಟಿದಂತೆ ನಮ್ಮ ಮುಂದೆ ಇಡುತ್ತಿದ್ದರು. ಯಥೇಚ್ಛವಾಗಿ ಕನ್ನಡವನ್ನು ಇಂಗ್ಲಿಷ್ ಪಾಠ ಮಾಡುವಾಗ ಬಳಸು ತ್ತಿದ್ದರು. ಅವರಿಗೆ ಕನ್ನಡ ನಾಡು, ನುಡಿಯ ಬಗ್ಗೆ ತುಂಬ ಅಭಿಮಾನ. ತಮ್ಮ ಜೀವನದಲ್ಲಿ ತಾವು ಮಾಡಿದ ಒಂದು ತಪ್ಪನ್ನು ಸಂದರ್ಭ ಒದಗಿದಾಗಲೆಲ್ಲಾ ಹೇಳುತ್ತಿದ್ದರು. ಅವರು ಮದರಾಸ್ ಕ್ರಿಶ್ಚಿಯನ್ ಕಾಲೇಜ್ ವಿದ್ಯಾರ್ಥಿಯಾಗಿದ್ದಾಗಿನ ಪ್ರಸಂಗ ಅದು. ಅವರ ಪ್ರೊಫೆಸರೊಬ್ಬರು ಆಂಗ್ಲೇಯರು. ಅವರಿಗೆ ಒಂದು ಕಾಲು ಊನವಾಗಿತ್ತು. ಒಂದು ದಿನ ವೇದಿಕೆ ಹತ್ತುವಾಗ ಎಡವಿ ಬಿದ್ದುಬಿಟ್ಟರು. ವಿದ್ಯಾರ್ಥಿಗಳೆಲ್ಲ ಘೊಳ್ಳೆಂದು ನಕ್ಕರು. ಶ್ರೀಯವರೂ ನಕ್ಕವರಲ್ಲಿ ಒಬ್ಬರು. ಪ್ರಾಧ್ಯಾಪಕರಿಗೆ ತಾವು ಬಿದ್ದದ್ದರಿಂದ ಆದ ನೋವಿಗಿಂತ ಹೆಚ್ಚಿನ ಯಾತನೆ ಹುಡುಗರು ನಕ್ಕಿದ್ದರಿಂದ ಆಯಿತು. ಆ ನೋವು ಅವರ ಮುಖದಲ್ಲಿ ಕಂಡುಬಂದಿತು. ಅದನ್ನು ನೋಡಿದ ಶ್ರೀಕಂಠಯ್ಯನವರಿಗೆ ತಲೆತಗ್ಗಿಸುವಂತಾಯಿತು. ಮೃಗೀಯ ಭಾವನೆಗೆ ತಾವೂ ಸ್ಪಂದಿಸಿದ್ದು ಅದಕ್ಕೆ ಕಾರಣ. ಈ ಪ್ರಕರಣ ನೆನೆಸಿಕೊಂಡಾಗಲೆಲ್ಲ ಬಿ.ಎಂ.ಶ್ರೀ. ಅವರಿಗೆ ಪ್ರೊಫೆಸರರ ದಾರುಣ ಯಾತನೆಯ ಆ ಮುಖ ತಮ್ಮ ಸ್ಮೃತಿಪಟಲದಲ್ಲಿ ಕಾಣಿಸಿಕೊಳ್ಳುತ್ತಿತ್ತಂತೆ. ಇನ್ನೆಂದೂ ಇಂಥ ಮೃಗೀಯ ವರ್ತನೆ ತಮ್ಮಿಂದಾಗದಂತೆ ಎಚ್ಚರ ವಹಿಸಿದರಂತೆ.

ಪ್ರೊ॥ ಬಿ. ಎಂ. ಶ್ರೀಕಂಠಯ್ಯನವರು ಕನ್ನಡದ ಕಟ್ಟಾಭಿಮಾನಿ. ಆದರೆ ಅವರ ಮನೆಯ ಮುಂದೆ 'B. M. Srikantaiah' ಎಂದು ಇಂಗ್ಲಿಷಿನಲ್ಲಿ ಬರೆದ ಬೋರ್ಡ್ ತೂಗುಹಾಕ ಲಾಗಿತ್ತು. ಸಿದ್ದವನಹಳ್ಳಿ ಕೃಷ್ಣಶರ್ಮರು ಈ ವಿಪರ್ಯಾಸ ಕುರಿತು ಪತ್ರಿಕೆಯಲ್ಲಿ ಬರೆದರು. ಈ ಸುದ್ದಿ ತುಂಬ ಕೋಲಾಹಲ ಎಬ್ಬಿಸಿತು.

ವಿಶ್ವೇಶ್ವರಪುರಂ ಮಾಧ್ಯಮಿಕ ಶಾಲೆಯಲ್ಲಿ ನಾನು ಓದುತ್ತಿದ್ದಾಗ ನಡೆದ ಒಂದು ಘಟನೆಯನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ. ನಮ್ಮ ಮುಖ್ಯೋಪಾಧ್ಯಾಯರು ಎಡತೊರೆ ಸುಬ್ಬರಾಯರು. ಮುಂದೆ ಇವರು ಹೊಳೇನರಸೀಪುರದಲ್ಲಿ ಅಧ್ಯಾತ್ಮ ಕಾರ್ಯಾಲಯ ಒಂದನ್ನು ಸ್ಥಾಪಿಸಿ, ಸಂನ್ಯಾಸ ಸ್ವೀಕರಿಸಿದರು. ಸುಬ್ಬರಾಯರು ಸಂಸ್ಕೃತ, ಇಂಗ್ಲಿಷ್, ಕನ್ನಡದಲ್ಲಿ ಪ್ರಕಾಂಡ ಪಂಡಿತರು. ಅದ್ವೈತ ತತ್ವನಿಷ್ಠ ಸುಬ್ಬರಾಯರು ನೂರಾರು ಪುಸ್ತಕಗಳನ್ನು ರಚಿಸಿದ್ದಾರೆ. ಒಂದು ಮಠ ಕಟ್ಟಿದ್ದಾರೆ.

ಸುಬ್ಬರಾಯರು ಶಿಸ್ತಿನ ಶಿಕ್ಷಕರಾಗಿದ್ದರು. ವಿದ್ಯಾರ್ಥಿಗಳು ಪ್ರಾರ್ಥನೆ ಸಮಯಕ್ಕೆ ಸರಿಯಾಗಿ ಶಾಲೆಗೆ ಬರಬೇಕು. ವೇಳೆಮೀರಿ ಬಂದವರನ್ನು ಪ್ರತೇಕವಾಗಿ ನಿಲ್ಲಿಸಿ, ಪ್ರಾರ್ಥನೆ ಮುಗಿದಮೇಲೆ

ತಮ್ಮ ಕೈಯಲ್ಲಿ ಯಾವಾಗಲೂ ಇರುತ್ತಿದ್ದ ಬೆತ್ತದಿಂದ ಥಳಿಸುತ್ತಿದ್ದರು. ಒಂದು ಶನಿವಾರ ನಾವು ೩-೪ ಜನ ಸ್ವಲ್ಪ ತಡವಾಗಿ ಬಂದೆವು. ಪ್ರಾರ್ಥನೆ ಆರಂಭವಾಗಿಬಿಟ್ಟಿತ್ತು. ಒಳಗೆ ಹೋದರೆ ಸುಬ್ಬರಾಯರು ಒದೆ ಕೊಡುತ್ತಾರೆ. ಅದರಿಂದಾಗಿ ಶಾಲೆಗೆ ಚಕ್ಕರ್ ಹೊಡೆಯುವುದೆಂದು ತೀರ್ಮಾನ ಮಾಡಿದೆವು. ೧೦-೩೦ರ ವರೆಗೆ ಎಲ್ಲಾದರೂ ಕಾಲ ಕಳೆಯಬೇಕು, ಈಗಲೇ ಮನೆಗೂ ಹೋಗುವಂತಿಲ್ಲ. ಹೀಗೆಲ್ಲ ಯೋಚನೆಮಾಡಿ ಲಾಲ್‌ಬಾಗ್ ಕಡೆಗೆ ನಡೆದೆವು. ಲಾಲ್‌ಬಾಗಿಗೆ ಮಹಾದ್ವಾರದ ಮೂಲಕ ಹೋಗಿದ್ದರೆ, ಅಲ್ಲಿ ಹಾಯಾಗಿ ಮರದ ಕೆಳಗೆ ಕೂತು ಹೊತ್ತು ಕಳೆದುಕೊಂಡು ಬರಬಹುದಾಗಿತ್ತು. ಆದರೆ ನಾವು ಕಾಂಪೌಂಡ್ ಹತ್ತಿ ಲಾಲ್‌ಬಾಗ್ ಒಳಕ್ಕೆ ಧುಮುಕಿದೆವು. ನಮ್ಮ ಗ್ರಹಚಾರಕ್ಕೆ ಲಾಲ್‌ಬಾಗ್ ಸೂಪರಿಂಟೆಂಡೆಂಟ್ ಜವರಾಯ ಅವರು ಆಗತಾನೇ ಲಾಲ್‌ಬಾಗ್ ವೀಕ್ಷಣೆಗೆ ಹೊರಟಿದ್ದರು. ನಾವು ಅವರ ಕಣ್ಣಿಗೆ ಬಿದ್ದೆವು. 'ಅವರನ್ನೆಲ್ಲ ಹಿಡಿದುತನ್ನಿ' ಎಂದು ಮಾಲಿಗಳಿಗೆ ಆಜ್ಞೆ ಮಾಡಿದರು. ನಾವು ದಿಕ್ಕಾಪಾಲಾಗಿ ಓಟ ಕಿತ್ತೆವು. ನಮ್ಮನ್ನು ಕೊನೆಗೂ ಹಿಡಿದು ಲಾಲ್‌ಬಾಗ್ ಆಫೀಸಿಗೆ ಕರೆದೊಯ್ದರು. ಒಂದು ಗಂಟೆ ಕಳೆದಮೇಲೆ ಜವರಾಯ ಅಲ್ಲಿಗೆ ಬಂದರು. 'ಸ್ಕೂಲಿಗೆ ಚಕ್ಕರ್ ಹೊಡೆದಿರುವುದೇ ಅಲ್ಲದೆ ನೀವು ಲಾಲ್‌ಬಾಗ್ ಗೋಡೆ ಹಾರಿಬಂದು ಅತಿಕ್ರಮ ಪ್ರವೇಶ ಮಾಡಿದ್ದೀರಿ. ನಿಮಗೆಲ್ಲ ತಕ್ಕ ಶಿಕ್ಷೆ ಆಗಬೇಕು' ಎಂದವರೇ 'ಇವರನ್ನು ೧೨ ಗಂಟೆಯವರೆಗೆ ಇಲ್ಲೇ ಇಟ್ಟುಕೊಂಡಿರಿ, ಮನೆಗೆ ಹೋಗಿ ಅಲ್ಲಿಯೂ ಅವರು ಹೊಡೆತ ತಿನ್ನಲಿ' ಎಂದು ಹುಕುಂ ಮಾಡಿ ಹೊರಟುಹೋದರು. ಸುಬ್ಬರಾಯರಿಂದ ಏಟು ತಪ್ಪಿಸಿಕೊಳ್ಳಲು ಲಾಲ್‌ಬಾಗಿಗೆ ಬಂದ ನಮಗೆ ತಕ್ಕ ಶಾಸ್ತಿಯೇ ಆಯಿತು.

೧೯೩೭ ರಿಂದ ೧೯೪೧ರ ವರೆಗೆ ನಾನು ಸೆಂಟ್ರಲ್ ಕಾಲೇಜ್ ಟೀಮಿಗೆ ಹಿಟ್ಟರ್ ಆಗಿ ಆಡುತ್ತಿದ್ದೆ. ನಾವು ಒಮ್ಮೆ ಮದ್ರಾಸ್ ಮತ್ತು ಕೇರಳಗಳಿಗೆ ಪ್ರವಾಸ ಹೋಗಿದ್ದೆವು. ಅಲ್ಲೆಲ್ಲಾ ಅಲ್ಲಿಯ ಕಾಲೇಜುಗಳ ವಿರುದ್ಧ ವಾಲೀಬಾಲ್ ಪಂದ್ಯ ಆಡಿದೆವು. ಒಂದು ತಂಡದಲ್ಲಿ ೯ ಜನ ಆಡುತ್ತಿದ್ದುದ್ದು ಹೋಗಿ ಆಗತಾನೇ ೬ ಜನ ಆಡುವುದು ಜಾರಿಗೆ ಬಂದಿತ್ತು. ಮದ್ರಾಸಿನ ಪಂದ್ಯಗಳಲ್ಲಿ ನಾವು ಗೆದ್ದೆವಾದರೂ, ಕೇರಳದಲ್ಲಿ ಪೊಲೀಸ್ ಟೀಂ ಎದುರಿಗೆ ಆಡುವಾಗ ನಮಗೆ ಒಂದು ಪಾಯಿಂಟನ್ನೂ ತೆಗೆದುಕೊಳ್ಳಲು ಆಗಲಿಲ್ಲ. ಅಂಥ ಒಳ್ಳೆ ಟೀಂ ಅದಾಗಿತ್ತು.

ನಮ್ಮ ಟೀಮಿನ ಮ್ಯಾನೇಜರಾಗಿ ಪ್ರೊ॥ ಎಂ.ಆರ್. ಶ್ರೀನಿವಾಸರಾಯರು ಮತ್ತು ಯು.ಎಸ್. ಕೃಷ್ಣರಾಯರು ಬಂದಿದ್ದರು. ಕೃಷ್ಣರಾಯರಿಗೆ ಚಂದ್ರಭಾಗಾದೇವಿಯವರನ್ನು ಕೊಟ್ಟು ಇನ್ನೂ ಮದುವೆ ಆಗಿರಲಿಲ್ಲ. ಕೃಷ್ಣರಾಯರೂ ಚಂದ್ರಭಾಗಾದೇವಿಯವರೂ ಆ ವೇಳೆಗಾಗಲೇ ನೃತ್ಯವನ್ನು ಅಭ್ಯಾಸ ಮಾಡಿದ್ದು, ಅದರಲ್ಲಿ ಸಾಕಷ್ಟು ಪ್ರೌಢಿಮೆ ಸಂಪಾದಿಸಿದ್ದರು. ತಿರುವನಂತಪುರಕ್ಕೆ ಹೋದಾಗ ಯು.ಎಸ್. ಕೃಷ್ಣರಾಯರು ನಮ್ಮನ್ನು ಅವರ ಗುರುಗಳಾದ ಗೋಪಿನಾಥ್ ಅವರ ಕಲಾಶಾಲೆಗೆ ಕರೆದುಕೊಂಡು ಹೋಗಿದ್ದರು. ಗೋಪಿನಾಥರು ಅಖಿಲ ಭಾರತ ಖ್ಯಾತಿಯ ಕಲಾಪ್ರವೀಣರು. ಅವರು ತಿರುವನಂತಪುರದಲ್ಲಿ ಒಂದು ಕಲಾಶಾಲೆಯನ್ನು ನಡೆಸುತ್ತಿದ್ದರು. ಈ ಕಲಾಶಾಲೆಗೆ ಅರಮನೆಯ ನೆರವಿತ್ತು. ತಿರುವಾಂಕೂರು ಮಹಾರಾಜರು ಅದರ

ಪೋಷಕರಾಗಿದ್ದರು. ನಮಗಾಗಿ ಗೋಪಿನಾಥ್ ಅವರ ಶಿಷ್ಯವರ್ಗ ಒಂದು ನೃತ್ಯ ಕಾರ್ಯಕ್ರಮ ನಡೆಸಿಕೊಟ್ಟರು. ಗೋಪಿನಾಥ್ ಅವರು ನವರಸಗಳನ್ನೂ ಮುಖಭಂಗಿಯ ಮೂಲಕ ಪ್ರದರ್ಶಿಸಿದರು.

ವಿದ್ಯಾರ್ಥಿಯಾಗಿದ್ದಾಗ ನಾನು ಎರಡು ಸಂಘಗಳನ್ನು ಕಟ್ಟುವುದರಲ್ಲಿ ಪಾಲುಗೊಂಡಿದ್ದೆ. ಹೈಸ್ಕೂಲಿನಲ್ಲಿರುವಾಗ ವಿಶ್ವೇಶ್ವರಪುರದಲ್ಲಿ 'ಕಿರಿಯ ತರುಣರ ಸಂಘ' ಸ್ಥಾಪಿಸಿದೆವು. ಹಿರಿಯ ಸಾಹಿತಿಗಳಿಂದ ಭಾಷಣಗಳನ್ನೇರ್ಪಡಿಸುವುದು, ಚರ್ಚಾಸ್ಪರ್ಧೆ ಏರ್ಪಡಿಸುವುದು, ಮಹನೀಯರ ದಿನಾಚರಣೆಗಳನ್ನು ಆಚರಿಸುವುದು ನಮ್ಮ ಮುಖ್ಯ ಕಾರ್ಯಕ್ರಮಗಳಾಗಿತ್ತು. ಪರಿಷತ್ತಿನಲ್ಲಿ ನಡೆಯುವ ಎಲ್ಲ ಸಭೆಗಳಿಗೂ ನಾವು ಹೋಗುತ್ತಿದ್ದೆವು. ಚಿಕ್ಕ ಮಕ್ಕಳಿಗೆ ಆಟ, ಪಾಠ, ಸ್ಪರ್ಧೆಗಳನ್ನು ಏರ್ಪಡಿಸುತ್ತಿದ್ದೆವು.

ಅನಂತರ ಕಾಲೇಜಿಗೆ ಸೇರಿದ ಮೇಲೆ ಬಸವನಗುಡಿ ಗಾಂಧಿಬಜಾರಿನಲ್ಲಿ 'ಯುವಕ ಸಂಘ' ಒಂದನ್ನು ಸ್ಥಾಪಿಸಿದೆವು. ಅಂತರ ಕಾಲೇಜುಗಳ ಚರ್ಚಾ ಸ್ಪರ್ಧೆಗಳನ್ನು ನಡೆಸುತ್ತಿದ್ದೆವು. ಕೈಲಾಸಂ ಹೆಸರಿನಲ್ಲಿ ಒಂದು ಅಂತರ ಕಾಲೇಜುಗಳ ನಾಟಕ ಸ್ಪರ್ಧೆಯನ್ನೂ ಪ್ರತಿವರ್ಷ ನಡೆಸುತ್ತಿದ್ದೆವು. ಇದಕ್ಕೆ ಒಂದು ಪಾರಿತೋಷಕವನ್ನು ಆಗಿನ ದಿವಾನರಾಗಿದ್ದ ಸರ್. ಮಿರ್ಜಾ ಇಸ್ಮಾಯಿಲ್‌ರವರು ದಯಪಾಲಿಸಿದ್ದರು. ನಿಟ್ಟೂರು ಶ್ರೀನಿವಾಸರಾಯರು, ಬೇಲಿ ವಾಸುದೇವಮೂರ್ತಿಗಳು ಸಂಘದ ಹಿತೈಷಿಗಳೂ ಪೋಷಕರೂ ಆಗಿದ್ದರು. ಕರಿದೊರೆಸ್ವಾಮಿ, ಬಿಳಿದೊರೆಸ್ವಾಮಿ, ಕೃಪಾ, ಶ್ರೀನಿವಾಸ್, ರಾಮದಾಸ್, ಬಿ.ವಿ. ಕೃಷ್ಣಮೂರ್ತಿ, ಲಕ್ಷ್ಮೀನಾರಾಯಣ ಇವರು ಸಂಘದ ಮುಖ್ಯ ಚಾಲಕರು.

ನಾನು ಪರಿಷತ್ತಿನ ಸದಸ್ಯನಾಗಿದ್ದೆ. ಎಲ್ಲ ಕಾರ್ಯಕ್ರಮಗಳಿಗೂ ಹಾಜರಾಗುತ್ತಿದ್ದೆ. ಪರಿಷತ್ತು ಆಗ ಎರಡು ಮುಖ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಏಕೀಕೃತ ಕರ್ನಾಟಕ ರಚನೆ ಆಗಬೇಕೆಂಬ ಉದ್ದೇಶದಿಂದ ಕರ್ನಾಟಕದ ಉದ್ದಗಲಕ್ಕೂ ಸಾಹಿತಿಗಳು ಸಂಚಾರ ಮಾಡಿ, ಕನ್ನಡಿಗರಲ್ಲಿ ಜಾಗೃತಿ ಮೂಡಿಸುತ್ತಿದ್ದರು. ನಾಡಹಬ್ಬವನ್ನು ಎಲ್ಲ ಕಡೆಯೂ ಆಚರಿಸುವಂತೆ ಮಾಡಿದ್ದರು. ಎರಡನೆಯದು ಪರಿಷತ್ತಿನಲ್ಲೇ ನಡೆಯುತ್ತಿದ್ದ ವಸಂತ ಸಾಹಿತ್ಯೋತ್ಸವ. ಕನ್ನಡ ಕವಿಗಳನ್ನೆಲ್ಲ, ಕನ್ನಡಕ್ಕಾಗಿ ದುಡಿಯುವವರನ್ನೆಲ್ಲ ನೋಡಲು ಈ ವಸಂತೋತ್ಸವ ಅವಕಾಶ ಕಲ್ಪಿಸುತ್ತಿತ್ತು. ಅವರೆಲ್ಲರ ಭಾಷಣಗಳನ್ನು ಕೇಳುವ ಭಾಗ್ಯ ನಮ್ಮದಾಗಿತ್ತು.

ಬಿ.ಎಂ. ಶ್ರೀಕಂಠಯ್ಯನವರು ಪರಿಷತ್ತಿನ ಅಧ್ಯಕ್ಷರಾಗಿದ್ದಾಗ, 'ಕನ್ನಡ ಜಾಣ' ತರಗತಿಗಳನ್ನು ಆರಂಭ ಮಾಡಿದರು. ನಾವು 'ಕನ್ನಡ ಜಾಣ'ದ ಮೊದಲನೆಯ ತಂಡದ ವಿದ್ಯಾರ್ಥಿಗಳು ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದ ನನಗೆ ಅವರು ಅಲ್ಲಿ ಇಂಗ್ಲಿಷ್ ಪಾಠ ಹೇಳುತ್ತಿದ್ದರು. ಪರಿಷತ್ತಿನಲ್ಲಿ 'ಕನ್ನಡ ಪಾಠ' ಹೇಳುತ್ತಿದ್ದರು. ಕನ್ನಡ ಜಾಣ ಪರೀಕ್ಷೆಗೆ ನಮಗೆ ಯಾವ ಯಾವ ಪಠ್ಯ ಪುಸ್ತಕಗಳನ್ನು ಇಟ್ಟಿದ್ದರೋ ಅದರ ಕರ್ತೃಗಳೇ

ಆಯಾ ಪುಸ್ತಕದ ಪಾಠ ಮಾಡುತ್ತಿದ್ದರು. 'ಮಂಡೋದರಿ' ನಾಟಕವನ್ನು ಕುರಿತು ಅದರ ಕರ್ತೃ ಸಿ.ಕೆ. ವೆಂಕಟರಾಮಯ್ಯನವರು, 'ನಾಗರೀಕ' ನಾಟಕವನ್ನು ಕುರಿತು ಅದನ್ನು ಬರೆದ ಎಂ.ಆರ್. ಶ್ರೀನಿವಾಸಮೂರ್ತಿಯವರು, 'ಕನ್ನಡ ಬಾವುಟ', 'ಕನ್ನಡ ಕೈಪಿಡಿ'ಗಳನ್ನು ಕುರಿತು ಬಿ.ಎಂ. ಶ್ರೀಕಂಠಯ್ಯನವರು ಪಾಠ ಮಾಡಿದ್ದೂ ಒಂದು ವಿಶೇಷ. 'ಪಂಪ ರಾಮಾಯಣ', 'ರಾಮಾಶ್ವಮೇಧ'ಗಳನ್ನು ಕುರಿತು ವಿ. ಸೀತಾರಾಮಯ್ಯನವರು ಪಾಠ ಮಾಡಿದ್ದನ್ನು ಮರೆಯುವಂತಿಲ್ಲ. ಇಂಥ ಸುಯೋಗ ಬಹುಶಃ ಬಹಳ ಜನಕ್ಕೆ ದೊರೆಯುವ ಸಂಭವವಿಲ್ಲ.

ನಾನು ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದಾಗ ಕೆ. ವಿ. ಪುಟ್ಟಪ್ಪನವರು ನನಗೆ ಉಪಾಧ್ಯಾಯರಾಗಿದ್ದರು. ಅವರು ಅನುವಾದ ಕಲೆಯನ್ನು ನಮಗೆ ಕಲಿಸಿಕೊಟ್ಟರು. ಅವರು ಇಂಗ್ಲಿಷಿನ ಸಾಹಿತ್ಯ ಕೃತಿಯಿಂದ ಒಂದು ಪ್ಯಾರ ಓದಿ ಬರೆಸುತ್ತಿದ್ದರು. ಅದನ್ನು ನಾವು ವಿದ್ಯಾರ್ಥಿಗಳು ಅನುವಾದ ಮಾಡಿಕೊಂಡು ಬರಬೇಕಾಗುತ್ತಿತ್ತು. ಮುಂದಿನ ವಾರದ ಪಿರಿಯಡ್‌ನಲ್ಲಿ ಒಂದೊಂದು ವಾಕ್ಯವನ್ನೇ ತೆಗೆದುಕೊಂಡು ವಿದ್ಯಾರ್ಥಿಗಳೆಲ್ಲರೂ ತಾವು ಬರೆದಿರುವುದನ್ನು ಓದಬೇಕು. ಪುಟ್ಟಪ್ಪನವರು ಪ್ರತಿ ಪದವನ್ನೂ ಪ್ರತಿಯೊಂದು ವಾಕ್ಯ ಬಂಧವನ್ನೂ ತೂಗಿನೋಡಿ, ತಮಗೆ ಸರಿಯೆಂದು ಕಂಡುಬಂದುದನ್ನು ಕಪ್ಪು ಹಲಗೆಯ ಮೇಲೆ ಬರೆಯುತ್ತಿದ್ದರು. ನಮಗೆ ಅವರ ತರಗತಿ ವಾರಕ್ಕೊಮ್ಮೆ ಮಾತ್ರ ಇತ್ತು. ಪ್ರತಿ ವಾರ ೨ ಅಥವಾ ೩ ವಾಕ್ಯಗಳ ಅನುವಾದ ಮಾತ್ರ ಸಾಧ್ಯವಾಗುತ್ತಿತ್ತು. ಆ ವರ್ಷದಲ್ಲಿ ಈ ರೀತಿ ೪-೫ ಸಾಹಿತ್ಯ ಕೃತಿಗಳಿಂದ ಒಂದೊಂದು ಪ್ಯಾರಾವನ್ನು ನಾವು ಅನುವಾದ ಮಾಡಿರಲಿಕ್ಕೆ ಸಾಕು. ವಿಜ್ಞಾನದ ವಿದ್ಯಾರ್ಥಿಗಳಾದ ನಮಗೆ ದೊರೆತ ಇದೊಂದು ಅಪೂರ್ವ ಲಾಭ.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದ ಸಮಯದಲ್ಲೇ ರಾಮಾಯಣ ದರ್ಶನವನ್ನು ಕುವೆಂಪು ಬರೆದದ್ದು. ಆಂಜನೇಯ ಲಂಕಾಪಟ್ಟಣಕ್ಕೆ ಹಾರಿ ಬಂದಿದ್ದಾನೆ. ಅಶೋಕ ವನದಲ್ಲಿ ಸೀತಾದೇವಿಯ ದರ್ಶನವಾಗುತ್ತದೆ. ಸೀತಾದೇವಿಯನ್ನು ಕುರಿತು ಮಾತನಾಡುವ ಸನ್ನಿವೇಶ.

ತಾನು ಸೀತಾದೇವಿಗೆ ಅಪರಿಚಿತ. ಆಕೆಯನ್ನು ಕುರಿತು ಹೇಗೆ ಸಂಭಾಷಣೆಯನ್ನು ಆರಂಭ ಮಾಡಬೇಕು ಎಂಬ ಚಿಂತೆ ಆಂಜನೇಯನಿಗೆ – ಈ ಸನ್ನಿವೇಶವನ್ನು ಚಿತ್ರಿಸುತ್ತಿರುವ ಕುವೆಂಪು ಆ ಸಂಭಾಷಣೆಯನ್ನು ಬರೆಯುತ್ತಾರೆ. ತೃಪ್ತಿಕರವಾಗಿಲ್ಲವೆಂದು ಹೊಡೆದು ಹಾಕುತ್ತಾರೆ. ಹತ್ತಾರು ಸಾರಿ ಮತ್ತೆ ಮತ್ತೆ ಬರೆದರೂ ಅದು ಅವರಿಗೆ ಸಮರ್ಪಕವೆನಿಸಲಿಲ್ಲ. ಹತಾಶರಾಗಿ ಲೇಖನಿ ಪಕ್ಕಕ್ಕಿಡುತ್ತಾರೆ. ಹಾಸಿಗೆಯಲ್ಲಿ ಬಿದ್ದುಕೊಳ್ಳುತ್ತಾರೆ. ಅದೇ ಚಿಂತೆಯಲ್ಲಿ ನಿದ್ರೆ ಹತ್ತುತ್ತದೆ. ಮಧ್ಯರಾತ್ರಿ ಇದ್ದಕ್ಕಿದ್ದಂತೆ ಆಂಜನೇಯ ಸೀತಾದೇವಿಯ ಎದುರು ಬಂದು ನಿಂತಿದ್ದಂತೆ ಕನಸಾಗುತ್ತದೆ. ಎದುರಿಗೆ ನಿಂತವನೇ, ಅವನು ಸೀತಾದೇವಿಯೊಡನೆ ಸಂಭಾಷಣೆಗಿಳಿಯುತ್ತಾನೆ. ಪುಟ್ಟಪ್ಪನವರು ಥಟ್ಟನೆ ಎದ್ದು ದೀಪಹಾಕಿ, ಪಕ್ಕದಲ್ಲೇ ಇಟ್ಟುಕೊಂಡಿದ್ದ ಪೇನಾ ಮತ್ತು ಕಾಗದವನ್ನು ತೆಗೆದುಕೊಂಡು ಆಂಜನೇಯ ಹೇಳುತ್ತಿದ್ದುದನ್ನು ಆತ್ರ ಆತ್ರವಾಗಿ ಬರೆದುಕೊಂಡರಂತೆ. ಹೀಗೆ ಬರೆದುಕೊಳ್ಳುತ್ತಿದ್ದಂತೆ ಒಂದು ಘಟ್ಟದಲ್ಲಿ ಆ ಸಂಭಾಷಣೆ ನಿಂತು

ಹೋಯಿತಂತೆ. ಎಷ್ಟು ತಿಣುಕಿದರೂ ಮುಂದಿನ ಸಾಲುಗಳನ್ನು ಬರೆಯಲು ಪುಟ್ಟಪ್ಪನವರಿಗೆ ಸಾಧ್ಯವಾಗಲಿಲ್ಲವಾಗಿ ಮತ್ತೆ ದೀಪ ಆರಿಸಿ ಮಲಗಿದರಂತೆ.

ಆಂಜನೇಯ ಸೀತೆಯರ ಸಂಭಾಷಣೆಯ ಆ ಭಾಗವನ್ನು ಬೆಳಗ್ಗೆ ಎದ್ದು ಓದಿ ನೋಡುತ್ತಾರೆ ಪುಟ್ಟಪ್ಪನವರು. ಅದ್ಭುತವಾಗಿದೆ ! ಛಂದೋಬದ್ಧವಾಗಿದೆ ! ಸಂಭಾಷಣೆ ಮನಮೋಹಕವಾಗಿದೆ!

ಪುಟ್ಟಪ್ಪನವರು ಸಂಭಾಷಣೆಯ ಈ ಭಾಗವನ್ನು ಸಾಕ್ಷಾತ್ ಆಂಜನೇಯನೇ ಹೇಳಿ ಬರೆಯಿಸಿದ ಎಂದು ನಂಬಿದ್ದರು. ಈ ಘಟನೆಯನ್ನು ಕುರಿತು ಒಂದು ದಿನ ನಮ್ಮ ತರಗತಿಯಲ್ಲಿ ಹೇಳಿದ್ದು ಈಗಲೂ ಹಚ್ಚ ಹಸುರಾಗಿ ನನ್ನ ಮನಸ್ಸಿನಲ್ಲಿ ಉಳಿದಿದೆ.

ಪುಟ್ಟಪ್ಪನವರು ಕತೆ, ಕಾದಂಬರಿ, ಜೀವನ ಚರಿತ್ರೆ, ನಾಟಕ, ಆತ್ಮ ಕಥನ ಹೀಗೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಮೇರುಕೃತಿಗಳನ್ನು ರಚಿಸಿರುವರಾದರೂ, ಅವರು ಮುಖ್ಯತಃ ಕವಿಗಳು. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಅವರು ಹುಟ್ಟಿ ಬೆಳೆದವರಾದ್ದರಿಂದ ಅವರ ಕವಿತೆಗಳಲ್ಲಿ ಕ್ರಾಂತಿಯ ಕಿಡಿಗಳು ಕಂಗೊಳಿಸುವುದು ಸಹಜ. ಸ್ವಾತಂತ್ರ್ಯಾನಂತರದ ಈ ದಿನಗಳಲ್ಲಿ ಆಕಾಶವಾಣಿಯಲ್ಲಿ ದೂರದರ್ಶನದಲ್ಲಿ ಪುಟ್ಟಪ್ಪನವರ ಕವಿತೆಗಳನ್ನು ಪದೇ ಪದೇ ಹಾಡಲಾಗುತ್ತದೆ. ಅದನ್ನು ಆಲಿಸಿದ ಪುಟ್ಟಪ್ಪನವರು ಒಮ್ಮೆ 'ನಾನು ಎಷ್ಟೋ ಕ್ರಾಂತಿ ಪದ್ಯಗಳನ್ನು ಬರೆದಿದ್ದೇನೆ. ಹಿಂದೆ ವಿದ್ಯಾರ್ಥಿಗಳು ಕನ್ನಡ ಸಂಘಗಳವರು ನನ್ನನ್ನು ಕರೆಸಿಕೊಂಡು, ಒಂದು ಲೋಟ ಕಾಫಿ ನೀಡಿ ನನ್ನಿಂದ ಗಂಟೆಗಟ್ಟಲೆ ಹಾಡಿಸಿ ನನ್ನ ವೀರಗೀತೆಗಳನ್ನು ಆಲಿಸುತ್ತಿದ್ದರು. ಈಗ ಆಕಾಶವಾಣಿ ಮತ್ತು ದೂರದರ್ಶನದವರು ನನ್ನ ಈ ಕ್ರಾಂತಿ ಪದ್ಯಗಳನ್ನು ತಮ್ಮ ಕೇಂದ್ರಗಳಲ್ಲಿ ಹಾಡಿಸಲು ಹೆದರುತ್ತಾರೆ. ನನ್ನ 'ಸೋಬಾನೆ ಪದ'ಗಳನ್ನೇ ಆಯ್ದುಕೊಂಡು ಹಾಡಿಸುತ್ತಾರೆ' ಎಂದು ಹೇಳಿ ತಮ್ಮ ಅಳಲನ್ನು ತೋಡಿಕೊಂಡರು.

ನಾನು ಒಮ್ಮೆ ಸೆನೆಟ್ ಸಭೆಯಲ್ಲಿ ಪುಟ್ಟಪ್ಪನವರನ್ನು ಕುರಿತು ವಿಶ್ವವಿದ್ಯಾಲಯ ಜಾತೀಯತೆ ಯಿಂದ ತುಂಬಿ ತುಳುಕುತ್ತಿದೆ. ನಿಮ್ಮಂತಹ 'ವಿಶ್ವಮಾನವರು' ಕುಲಪತಿಗಳಾಗಿ ಬಂದಿರುವಾಗ ಲಾದರೂ ವಿಶ್ವವಿದ್ಯಾನಿಲಯವನ್ನು ಜಾತೀಯತೆಯಿಂದ ಪಾರುಮಾಡಬೇಕು. ಆ ಅಧಿಕಾರ, ವರ್ಚಸ್ಸು ಮತ್ತು ಅರ್ಹತೆ ಉಳ್ಳವರು ತಾವೊಬ್ಬರೇ' ಎಂದು ಮನವಿ ಮಾಡಿಕೊಂಡೆ. ಪುಟ್ಟಪ್ಪನವರು ಈ ಜವಾಬ್ದಾರಿಯಿಂದ ಜಾರಿಕೊಳ್ಳುವ ಮಾತನ್ನೇ ಆಡಿದರು. 'ಜನತೆ ಇದ್ದಹಾಗೆ ಸರ್ಕಾರ. ಸರ್ಕಾರ ಇದ್ದಹಾಗೆ ವಿಶ್ವವಿದ್ಯಾನಿಲಯ. ಆದ್ದರಿಂದ ಜನತೆ ಮತ್ತು ಸರ್ಕಾರ ತನ್ನ ಮನೋಭಾವ ಬದಲಿಸಿದ ಹೊರತು, ವಿಶ್ವವಿದ್ಯಾನಿಲಯದಿಂದ ಜಾತೀಯತೆಯನ್ನು ತೊಲಗಿಸುವುದು ಸಾಧ್ಯವಿಲ್ಲ' ಎಂದರು.

❖

# ಆಚಾರ್ಯ ಶ್ರೀ ಸ್ಮರಣೆ

(ಬಿ.ಎಂ.ಶ್ರೀ.)

● *ಎಚ್. ಎಂ. ಶಂಕರನಾರಾಯಣರಾವ್*

ಅರ್ಧ ಶತಮಾನಕ್ಕೂ ಮುಂಚೆ ನಾನು ಮಾಧ್ಯಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ವಿದ್ಯಾರ್ಥಿಗಳಲ್ಲಿ ನೀತಿಯ ನೆಲೆಗಟ್ಟನ್ನು ಭದ್ರಪಡಿಸುತ್ತಿದ್ದ ದಾಸರ ಪದಗಳು, ಧ್ರುವಚರಿತ್ರೆ, ನಳಚರಿತ್ರೆ, ತೊರವೆ ರಾಮಾಯಣ, ಕುಮಾರವ್ಯಾಸಭಾರತ – ಈ ಕಾವ್ಯಗಳ ಭಾಗಗಳು ನಮಗೆ ಇಟ್ಟಿದ್ದ ಪಠ್ಯಪುಸ್ತಕಗಳಾದ 'ಪದ್ಯಸಂಗ್ರಹ', 'ಪದ್ಯಸಾರ'ಗಳಲ್ಲಿ ಅಂತರ್ಗತವಾಗಿರುತ್ತಿದ್ದವು. ನವೋದಯದ ಹೊಸ ಪದ್ಯಗಳ ಗಾಳಿ ಆ ಕಾಲದಲ್ಲಿ ಸುಳಿಯದಿದ್ದರೂ ಮೇಲಿನ ಕಾವ್ಯಗಳ ವಸ್ತು, ಉಪಾಧ್ಯಾಯರ ಸೊಗಸಾದ ಬೋಧನೆ ಇವುಗಳಿಂದ ಎಳೆಯನಾದ ನನ್ನ ಮನಸ್ಸು ಆಕರ್ಷಿತವಾಗಿ ನನ್ನಲ್ಲಿ ಕನ್ನಡದ ಮಮತೆ ಅಭಿಮಾನಗಳು ಉಕ್ಕಿದವು. ಆದರೆ ಪ್ರೌಢಶಾಲೆಗೆ ಬರುತ್ತಲೇ ನನ್ನಲ್ಲಿ ಮೂಡಿದ್ದ ಕನ್ನಡದ ಅಭಿಮಾನ ಮಮತೆಗಳು ಬತ್ತಿಹೋದವು. ಕಾರಣ ಸಂಸ್ಕೃತ ಉಪಾಧ್ಯಾಯರ ಅಬ್ಬರವಂತೂ ನನ್ನನ್ನು ಗದಗುಟ್ಟಿಸಿ ಆ ಭಾಷೆಯಿಂದ ನನ್ನನ್ನು ದೂರವಿಟ್ಟಿತು. ನಮ್ಮ ಭಾಷೆಗಳ ವಿಷಯದಲ್ಲಿ ಜನರಿಗೆ, ವಿದ್ಯಾರ್ಥಿಗಳಿಗೆ ಅಶ್ರದ್ಧೆಗೆ ಮುಖ್ಯ ಕಾರಣಗಳು ಎರಡು. ಮೊದಲನೆಯದಾಗಿ ಆ ಕಾಲದಲ್ಲಿ ಇಂಗ್ಲಿಷ್ ಭಾಷೆಗಿದ್ದ ಪ್ರಾಧಾನ್ಯ. ಎರಡನೆಯದಾಗಿ ಕನ್ನಡ ಸಂಸ್ಕೃತ ಪಂಡಿತರು ಬೋಧಿಸುತ್ತಿದ್ದ ಹಳೆಯ ಜಾಡು ಮತ್ತು ವಿದ್ಯಾರ್ಥಿಗಳಿಗೆ ಅವರಲ್ಲಿದ್ದ ತಾತ್ಸಾರ ಮನೋಭಾವ. ಹೀಗಿರುವಲ್ಲಿ ನಾನು ದಾವಣಗೆರೆಯ ಪ್ರೌಢಶಾಲೆಯಲ್ಲಿ ಕೊನೆಯ ವರ್ಷದಲ್ಲಿದ್ದಾಗ ಮೈಸೂರಿನಿಂದ ಶ್ರೀ ಎಸ್.ವಿ. ಶ್ರೀನಿವಾಸರಾಯರು ನಮ್ಮಲ್ಲಿಗೆ ಗಣಿತಶಾಸ್ತ್ರದ ಬೋಧಕರಾಗಿ ಬಂದರು. ಅವರು ಇಂಗ್ಲಿಷ್ ಸಾಹಿತ್ಯದಲ್ಲಿಯೂ ನಿಷ್ಣಾತರಾಗಿದ್ದರು. ಅವರು ಗಣಿತಶಾಸ್ತ್ರದ ಅಧ್ಯಾಪಕರಾಗಿದ್ದರೂ ಪ್ರತಿ ಶನಿವಾರ ಬೆಳಿಗ್ಗೆ ತರಗತಿಗಳಾದ ಮೇಲೆ, ನಮ್ಮನ್ನೆಲ್ಲ ಸೇರಿಸಿ ಹೊಸಗನ್ನಡ ಕಾವ್ಯವನ್ನು ವಾಚನ ಮಾಡುತ್ತಿದ್ದರು. ಹೀಗೆ ಅವರು ವಾಚನ ಮಾಡಿದ ಮೊದಲ ಕವನ ಸಂಗ್ರಹವೇ 'ಇಂಗ್ಲಿಷ್ ಗೀತಗಳು'. ಆ ಸಂಗ್ರಹದಲ್ಲಿ ಬರುವ 'ವಸಂತ', 'ಮುಪ್ಪುಯೌವನ', 'ದುಃಖಸೇತು', 'ಬಿಂಕದ ಸಿಂಗಾರಿ', 'ದುಃಖಸಮಯ', 'ಪ್ರಾರ್ಥನೆ'–ಇವೇ ಮೊದಲಾದ ಕವನಗಳ ವಾಚನವನ್ನು ಕೇಳಿದಾಗ, ಬಿಸಿಲಿನ ಬೇಗೆಯಿಂದ ಬಳಲಿದವನ ಮೇಲೆ ತಂಗಾಳಿ ಬೀಸಿದಂತಾಗಿ, ನನ್ನ ಎಳೆಯ ಮನಸ್ಸು ಪುಳಕಿತಗೊಂಡಿತು. ಹೊಸ ಕವಿತೆಯಲ್ಲಿ ಆಕರ್ಷಣೆ ಮೂಡಿತು. ನನಗೆ 'ಶ್ರೀ' ಅವರ ಪರಿಚಯವಾದದ್ದು ಈ ರೀತಿಯಲ್ಲಿ.

ಪ್ರೌಢಶಾಲೆಯ ವಿದ್ಯಾಭ್ಯಾಸವನ್ನು ಮುಗಿಸಿ ನಾನು ಬೆಂಗಳೂರು ಇಂಟರ್‌ಮೀಡಿಯೆಟ್

ಕಾಲೇಜನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ನಮ್ಮ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಪದವಿಯನ್ನು ಬೀಳ್ಕೊಟ್ಟು ೧೯೩೦ರ ಮಧ್ಯಭಾಗದಲ್ಲಿ ಶ್ರೀಯವರು ಸೆಂಟ್ರಲ್ ಕಾಲೇಜಿಗೆ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಬಂದರು. ಅವರ ಆಗಮನ ವಿದ್ಯಾರ್ಥಿ ವೃಂದದಲ್ಲಿ ಸಂಭ್ರಮದ ವಿಷಯ ವಾಗಿತ್ತು. ಶ್ರೀಯವರು ಬಂದರು; ನೋಡಿದರು; ವಿದ್ಯಾರ್ಥಿಗಳ ಹೃದಯವನ್ನು ಗೆದ್ದರು. ಆ ಮಾತು ಹಾಗಿರಲಿ. ತಾವು ಕುಲಪತಿಗಳಾಗಿರುವವರೆಗೂ ಬಿ.ಎಂ. ಶ್ರೀಕಂಠಯ್ಯನವರು ರಿಜಿಸ್ಟ್ರಾರ್ ಆಗಿರಬೇಕೆಂಬುದು ಡಾ॥ ಇ.ಪಿ. ಮೆಟ್ಕಾಫರರ ಉತ್ಕಟೇಚ್ಛೆಯಾಗಿತ್ತು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಪದವಿಯನ್ನು ಬಿಡುವುದಕ್ಕಿಂತ ಮುನ್ನ ಶ್ರೀಯವರು ಕನ್ನಡಕ್ಕೆ ವಿಶೇಷವಾಗಿ ದುಡಿದಿದ್ದರು. ಅವರ ಪ್ರಯತ್ನದಿಂದಲೇ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಸ್ನಾತಕೋತ್ತರ ತರಗತಿಗಳನ್ನು ತೆರೆಯಲಾಗಿತ್ತು. ಕನ್ನಡಕ್ಕೆ ಪ್ರಾಧ್ಯಾಪಕರೊಬ್ಬರು ದೊರಕಿದರು. ಆ ಸ್ಥಾನ ಲಭ್ಯವಾಗುವವರೆಗೆ ಶ್ರೀಯವರೇ ಕನ್ನಡದ ಗೌರವ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. ಅವರ ಈ ಕಾರ್ಯದಿಂದ ಸಮರ್ಥವಾದ ಕವಿಗಳ ವಿದ್ವಾಂಸರ ಪಡೆಯೆ ಸೃಷ್ಟಿಯಾಗಲು ಕಾರಣವಾಯಿತು. ಇಂದಿಗೂ ಪ್ರಮಾಣಭೂತವಾಗಿ ನಿಂತಿರುವ ಕನ್ನಡ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾಗಿರುವ 'ಕನ್ನಡ ಕೈಪಿಡಿ'ಯನ್ನು ತಮ್ಮ ನೇತೃತ್ವದಲ್ಲಿ ವಿದ್ವಾಂಸರಿಂದ ಬರೆಯಿಸಿದರು. ಜನಸಾಮಾನ್ಯರಿಗೂ ವಿದ್ಯಾರ್ಥಿಗಳಿಗೂ ಉಪಯೋಗವಾಗುವಂತೆ ಹಳಗನ್ನಡ, ನಡುಗನ್ನಡ ಕಾವ್ಯಗಳನ್ನು ಪೀಠಿಕೆ ಶಬ್ದಕೋಶಗಳೊಡನೆ ಶುದ್ಧ ಪಾಠಗಳನ್ನೊಳಗೊಂಡ ಸಂಗ್ರಹಗಳನ್ನೂ ಹಾಗೂ ಆಧುನಿಕ ಜ್ಞಾನಪ್ರಸಾರಕ್ಕೆ ಅನುಕೂಲವಾಗುವ ಗ್ರಂಥಗಳನ್ನೂ ಸಪ್ರಮಾಣವಾಗಿ ಕನ್ನಡದಲ್ಲಿ ಬರೆಯಿಸಿ ಪ್ರಕಟಿಸಲು ಅನುಕೂಲವಾಗುವಂತೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯನ್ನು ಪ್ರಾರಂಭಿಸಿ, ನಿವೃತ್ತರಾಗುವವರೆಗೆ ಅದರ ಅಧ್ಯಕ್ಷರಾಗಿದ್ದು ಕಾರ್ಯನಿರ್ವಹಿಸಿ ಆ ಮಾಲೆಯಲ್ಲಿ ಅನೇಕ ಅಮೂಲ್ಯ ಗ್ರಂಥಗಳು ಹೊರಬರಲು ಕಾರಣರಾದರು. ರಿಜಿಸ್ಟ್ರಾರ್ ಕೆಲಸದೊಡನೆ ಶ್ರೀಯವರು ಕನ್ನಡದ ಈ ಕೆಲಸಗಳನ್ನು ಕೈಕೊಂಡು, ನಮ್ಮ ಭಾಷೆಯ ವ್ಯಾಸಂಗಕ್ಕೆ ಭದ್ರವಾದ ಅಡಿಪಾಯವನ್ನು ಹಾಕಿದರು. ರಿಜಿಸ್ಟ್ರಾರ್ ಪದವಿ ವಿಶ್ವವಿದ್ಯಾನಿಲಯದ ಮುಖ್ಯ ಗುಮಾಸ್ತನ ಹುದ್ದೆ ಎಂದು ಅವರು ವಿನೋದವಾಗಿ ಹೇಳುತ್ತಿದ್ದುದುಂಟು. ಆ ಮಾತು ಹಾಗಿರಲಿ. ಶ್ರೀಯವರಿಗೆ ಅಧಿಕಾರದ ಚಲಾವಣೆಗಿಂತ ಪ್ರವಚನದಲ್ಲಿಯೇ ಹೆಚ್ಚು ಮೋಹ, ಪ್ರೀತಿ. ಹೀಗಾಗಿ ಅವರು ಕುಲಪತಿಗಳ ಪ್ರಾರ್ಥನೆಯನ್ನು ವಿನಯಪೂರ್ವಕವಾಗಿ ನಿರಾಕರಿಸಿದರು. ಇದಲ್ಲದೆ ಇವರಿಗೆ ತಾವು ಮೈಸೂರಿನಲ್ಲಿಯೇ ಪ್ರಾಧ್ಯಾಪಕ ರಾಗಿದ್ದು ಇಂಗ್ಲಿಷ್-ಕನ್ನಡ ತರಗತಿಗಳೆರಡಕ್ಕೂ ಪಾಠಪ್ರವಚನಗಳನ್ನು ನಡೆಯಿಸಬೇಕೆಂಬ ಆಸೆ ಇತ್ತು. ಆದರೆ ಡಾ॥ ಮೆಟ್ಕಾಫರು ಇವರ ಸಲಹೆಯನ್ನು ಮನ್ನಿಸಲಿಲ್ಲ. 'ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಇಲಾಖೆ ಪರಿಷ್ಕಾರಗೊಳ್ಳಬೇಕಾಗಿದೆ. ಆ ಕೆಲಸ ಮಾಡಲು ನೀವೇ ಸಮರ್ಥರು' ಎಂದುಬಿಟ್ಟರು ಕುಲಪತಿಗಳು. ಕುಲಪತಿಗಳ ನಂಬಿಕೆಯನ್ನು ಎಷ್ಟು ಮಟ್ಟಿನ ರೀತಿಯಲ್ಲಿ ಶ್ರೀಯವರು ನಡೆಯಿಸಿಕೊಟ್ಟರೆಂಬುದನ್ನು ಆಗಿನ ವಿದ್ಯಾರ್ಥಿ ಲೋಕವೇ ಬಲ್ಲದು. ಇದಲ್ಲದೆ ತಮಗೆ ಪಾಠಗಳ ಗಂಟೆಯ ಕೊರೆ ಬಿದ್ದಾಗ ಸೆಂಟ್ರಲ್ ಕಾಲೇಜಿನಲ್ಲಿ ವಿಶ್ವವಿದ್ಯಾನಿಲಯ ಇಂಗ್ಲಿಷ್ ಆನರ್ಸ್ ತರಗತಿಗಳನ್ನು ತೆರೆಯುವಂತೆ ಮಾಡಿದರು. ಇವೆಲ್ಲ ಅವರಿಂದಲೇ ನಮಗೆ ತಿಳಿದು ಬಂದ ವಿಷಯಗಳು.

ನಮ್ಮ ಕಾಲದಲ್ಲಿ ಇಂಟರ್‌ಮೀಡಿಯೆಟ್ ಪರೀಕ್ಷೆ ಅತ್ಯಂತ ಕಠಿಣವೂ ಅದರಲ್ಲಿ ತೇರ್ಗಡೆಯಾಗಲು ಬಹು ಶ್ರಮಸಾಧ್ಯವೂ ಆದ ಪರೀಕ್ಷೆಯಾಗಿತ್ತು. ಅದು ನಡೆಯುತ್ತಿದ್ದ ವೈಖರಿಯನ್ನು ಏನೆಂದು ಹೇಳುವುದು? ದಿನಕ್ಕೆ ಎರಡು ಪತ್ರಿಕೆಗಳಂತೆ ವಾರದಲ್ಲಿ ಐದು ವಿಷಯಗಳು ಮುಗಿದು ಹೋಗುತ್ತಿದ್ದುವು. ಸೆಪ್ಟೆಂಬರ್ ಪರೀಕ್ಷೆಗಳು ಇರದೆ, ಪರೀಕ್ಷೆಗಾಗಿ ಇನ್ನೊಂದು ವರ್ಷ ಕಾಯಬೇಕಾಗಿತ್ತು. ಒಂದು ವಿಷಯದಲ್ಲಿ ವಿದ್ಯಾರ್ಥಿ ಅನುತ್ತೀರ್ಣನಾದರೆ ಆತನು ಮತ್ತೆ ಎಲ್ಲ ವಿಷಯಗಳನ್ನು ಅಭ್ಯಾಸ ಮಾಡಬೇಕಾಗಿತ್ತು. ಮೇಲಾಗಿ ಇಂಗ್ಲಿಷಿಗೆ ಒಂದು ಕೋಡು ಬೇರೆ. ನೂರಕ್ಕೆ ನಲವತ್ತು ಅಂಕಗಳು. ಅದರ ಪರೀಕ್ಷಕರೋ ಪ್ರಾಧ್ಯಾಪಕ ಉಪಪ್ರಾಧ್ಯಾಪಕರೇ! ಇವೆಲ್ಲವೂ ಕಾಲಕ್ರಮದಲ್ಲಿ ಮಾಯವಾಗಿ ಎಂದರೆ ಸಡಿಲವಾಗಿ ಸೆಪ್ಟೆಂಬರ್ ಪರೀಕ್ಷೆಗಳು ಬಂದು, ಇಂಗ್ಲಿಷಿನ ಅಂಕಗಳು ಇತರ ವಿಷಯಗಳ ಮಟ್ಟಕ್ಕೆ ಇಳಿದು, ಪರೀಕ್ಷೆಗೆ ಇಟ್ಟಿದ್ದ ವಿಷಯಗಳನ್ನು ಭಾಗಭಾಗವಾಗಿ ತೇರ್ಗಡೆಯಾಗಲು ದಾರಿ ಸುಗಮವಾಯಿತು. ಈ ಸೌಲಭ್ಯಗಳನ್ನು ಪಡೆದ ವಿದ್ಯಾರ್ಥಿಗಳೇ ಪುಣ್ಯವಂತರು.

ಆಗಿನ ಕಾಲದ ವಿದ್ಯಾರ್ಥಿಗಳಿಗೆ ಇಷ್ಟೆಲ್ಲ ಅನನುಕೂಲಗಳಿದ್ದರೂ ಒಂದೆರಡು ವಿಷಯಗಳಲ್ಲಿ ಅನುಕೂಲಗಳಿದ್ದವು. ಉಪಾಧ್ಯಾಯರು ತಮ್ಮ ಕರ್ತವ್ಯದಲ್ಲಿ ಶ್ರದ್ಧೆಯುಳ್ಳವರಾಗಿ ಗೊತ್ತಾದ ಅವಧಿಯಲ್ಲಿ ಪಾಠಗಳನ್ನು ಮುಗಿಸುತ್ತಿದ್ದರು. ಒಂದು ವೇಳೆ ಅದು ಸಾಧ್ಯವಾಗದಿದ್ದಾಗ ಅವರು ವಿಶೇಷ ತರಗತಿಗಳನ್ನು ತೆಗೆದುಕೊಂಡು ಮುಗಿಸುತ್ತಿದ್ದರು. ಈ ತರಗತಿಗಳ ವೇಳೆ ಒಂದು ಗಂಟೆಗೆ ಅರವತ್ತು ನಿಮಿಷಗಳಲ್ಲ, ನೂರಿಪ್ಪತ್ತು, ನೂರೆಂಬತ್ತು ನಿಮಿಷಗಳಾಗಿರುತ್ತಿದ್ದವು. ಈಗ ಅವಧಿಗೆ ಮುಂಚೆ ಪಾಠಗಳನ್ನು ಮುಗಿಸುವ ಶಾಸ್ತ್ರಮಾಡುವ ಅನೇಕ ಉಪಾಧ್ಯಾಯರಿರುವಾಗ, ಆ ವೈಭವದ ದಿನಗಳನ್ನು ಇನ್ನೆಲ್ಲಿಂದ ತರಬೇಕು?

ಆಗ ಇದಲ್ಲದೆ ಇನ್ನೊಂದು ಪದ್ಧತಿ ಅನುಷ್ಠಾನದಲ್ಲಿತ್ತು. ಆ ಪದ್ಧತಿ ಇಂಗ್ಲಿಷ್ ಕನ್ನಡ ಭಾಷೆಗಳಿಗೆ ಮಾತ್ರ ಅನ್ವಯಿಸುತ್ತಿತ್ತೆಂದು ತೋರುತ್ತದೆ. ಆ ಪದ್ಧತಿಯ ವೈಶಿಷ್ಟ್ಯವೇನೆಂದರೆ ವರ್ಷದ ಕೊನೆಯಲ್ಲಿ ಆಯಾ ಭಾಷೆಗಳಲ್ಲಿ ಪರಿಣತರಾದವರಿಂದ ವಿಶೇಷ ಉಪನ್ಯಾಸ (Special lecture)ಗಳನ್ನು ಏರ್ಪಡಿಸುತ್ತಿದ್ದುದು. ಈ ಸಂದರ್ಭದಲ್ಲಿಯೇ ಶ್ರೀಯವರು ನಮ್ಮ ಪರೀಕ್ಷೆಗೆ ಗೊತ್ತುಮಾಡಿದ್ದ ವರ್ಡ್ಸ್‌ವರ್ತ್ ಕವಿಯ ಕವನಗಳ ಮೇಲೆ ಅಮೋಘವಾದ ಉಪನ್ಯಾಸವನ್ನು ಮಾಡಿದರು. ಈ ಉಪನ್ಯಾಸಕ್ಕೆ ಇಂಗ್ಲಿಷ್, ಕನ್ನಡ ಮತ್ತು ಚರಿತ್ರೆಯ ಉಪನ್ಯಾಸಕರು (ಇವರಲ್ಲಿ ಇಂಗ್ಲಿಷ್ ಉಪನ್ಯಾಸಕರೂ ಇವರ ಅಳಿಯಂದಿರೂ ಆಗಿದ್ದ ಶ್ರೀ ಎಸ್.ಆರ್. ಗುಂಡಪ್ಪನವರೂ ಸಹ) ಬಂದಿದ್ದರು. ಶ್ರೀಯವರ ವಾಗ್ವಿಲಾಸ ಅವರಿಗೇ ಮೀಸಲಾದದ್ದು. ಆ ದಿನದ ಶ್ರೀಯವರ ಮೂರು ಗಂಟೆಗಳ ಉಪನ್ಯಾಸದ ಅವಧಿಯಲ್ಲಿ ಕವಿಯ ಕಾಲ ಮತ್ತು ಚರಿತ್ರೆ, ಕವನ ರಚನೆಯ ಸಂದರ್ಭಗಳನ್ನು ವಿವರಿಸಿ ನಮ್ಮ ಪರೀಕ್ಷೆಗೆ ಇಟ್ಟಿದ್ದ ಕವನಗಳನ್ನು ವಿವರಿಸಿದರು. ಆ ಉಪನ್ಯಾಸ ಒಂದು ರಸದೌತಣ. ವಿದ್ಯಾರ್ಥಿಗಳ ವರ್ಷದ ಅಭ್ಯಾಸ ಮೂರು ತಿಂಗಳಲ್ಲಿ ಫಲಕೊಟ್ಟಂತಾಯಿತು ನಮಗೆ. ಹಾಗೆಯೇ ಶ್ರೀ ಎಸ್. ಆರ್. ಗುಂಡಪ್ಪನವರು ಸ್ವಿಫ್ಟ್ ಲೇಖಕನ 'ಗಲಿವರನ ಪ್ರವಾಸಗಳು' ಎಂಬ

ವಿಡಂಬನಾತ್ಮಕವಾದ ಗ್ರಂಥದ ಮೇಲೆ ಮಾಡಿದ ಉಪನ್ಯಾಸ. ಶ್ರೀ ಗುಂಡಪ್ಪನವರು ಸುಮಾರು ಆರು ಅಡಿ ಎತ್ತರದ ತೆಳುವಾದ ಮೈಕಟ್ಟಿನ ತರುಣ ವ್ಯಕ್ತಿ. ತೇಜಃಪುಂಜವಾದ ಕಣ್ಣುಗಳನ್ನು ಹೊಂದಿದ್ದ ವ್ಯಕ್ತಿ. ಅವರ ಮುಖದ ಮೇಲೆ ಮೂಡುತ್ತಿದ್ದ ಮುಗಳುನಗೆ ಸುಖದುಃಖಗಳನ್ನು ಸಮಚಿತ್ತದಿಂದ ಸ್ವೀಕರಿಸಬೇಕೆನ್ನುವಂತಿರುತ್ತಿತ್ತು. ಅವರು ತಮ್ಮ ಉಪನ್ಯಾಸವನ್ನು 'we shall do swift swiftly' ಎಂದು ಪ್ರಾರಂಭಿಸಿದಾಗ ವಿದ್ಯಾರ್ಥಿಗಳಲ್ಲಿ ಮೂಡಿದ ರೋಮಾಂಚನದ ಸ್ಪಂದನ ಇನ್ನೂ ನನ್ನ ಮನಸ್ಸಿನಲ್ಲಿ ಹಸಿರಾಗಿ ನಿಂತಿದೆ. ಗುಂಡಪ್ಪನವರದು ರಸವತ್ತಾದ ಉಪನ್ಯಾಸದ ಶೈಲಿ, ಒಮ್ಮೆ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷಿನಲ್ಲಿ ಪ್ರಾಧ್ಯಾಪಕರ ಚರ್ಚಾಕೂಟ ನಡೆಯಿತು. ಶ್ರೀಯವರು ವಿರೋಧ ಪಕ್ಷ; ಗುಂಡಪ್ಪನವರು ಪರ. ಇವರ ವಾದವನ್ನು ಆಲಿಸುತ್ತ ಮುಗುಳುನಗುತ್ತ ಶ್ರೀಯವರು ಸಂತೋಷಪಟ್ಟದ್ದುಂಟು. ನಮಗಂತೂ ಅದೇ ಗುಂಡಪ್ಪನವರ ಕೊನೆಯ ದರ್ಶನವಾಯಿತು.

ಈ ಸಂದರ್ಭದಲ್ಲಿ ನೆನಪಿಗೆ ಬರುವ ಒಂದೆರಡು ಸಂಗತಿಗಳನ್ನು ನಿರೂಪಿಸಿದರೆ ಅದು ಅಪ್ರಕೃತವಾಗಲಾರದು. ತಮ್ಮ ಪ್ರೀತಿಯ ಅಳಿಯ ತೀರಿಕೊಂಡ ಮಾರನೆಯ ದಿನ ಶ್ರೀಯವರು ತರಗತಿಗೆ ಬಂದರು. ಆ ವೇಳೆಗೆ ಕಾಲೇಜಿನಲ್ಲಿ ಶೋಕ ಸಭೆ ನಡೆದು, ಅದರ ವಿಷಯ ಶ್ರೀಯವರಿಗೆ ತಿಳಿದಿತ್ತು. ತರಗತಿಗೆ ಬಂದವರೇ 'If the young man had won the heart of you all' ಎಂದು ಹೇಳುತ್ತಿದ್ದಂತೆ ಅವರ ಕತ್ತು ಬಿಗಿಯಿತು; ಕಣ್ಣು ತೇವಗೊಂಡಿತು. ಕ್ಷಣಾರ್ಧದಲ್ಲಿ ಸಂಯಮವನ್ನು ತಂದುಕೊಂಡು ಪಾಠವನ್ನು ಪ್ರಾರಂಭಿಸಿದರು. ಈ ಸಮಯದಲ್ಲಿ ಅವರಿಗಾದ ನಷ್ಟದ ಪ್ರಮಾಣವನ್ನು ಮನಗಂಡಿದ್ದ ನಮಗೆ ಅವರ ಅದ್ಭುತ ಸಂಯಮವನ್ನು ಕಂಡು ಆಶ್ಚರ್ಯವಾಯಿತು (ಶ್ರೀಯವರು ತಮ್ಮ ಪತ್ನಿ ತೀರಿಕೊಂಡಾಗ ಇದೇ ರೀತಿಯ ಸಂಯಮವನ್ನು ತೋರಿದ್ದರಂತೆ! ದಹನಕ್ರಿಯೆ ಮುಗಿದ ಮೇಲೆ ಅವರು ತರಗತಿಗೆ ಬಂದು ಪಾಠ ಹೇಳಿದ್ದು ಉತ್ತರರಾಮಚರಿತ್ರೆಯಲ್ಲಿ 'ಸೀತಾಪರಿತ್ಯಾಗ'. ಈ ವಿಷಯವನ್ನು ನಮ್ಮ ಕಾಲೇಜಿನ ಭಾರತದ ಕೃಷ್ಣಗಿರಿ ಕೃಷ್ಣರಾಯರು ನನಗೆ ತಿಳಿಸಿದ್ದರು).

ಇದೇ ಸಂದರ್ಭದಲ್ಲಿ ಒಂದು ಸಂಗತಿ ನೆನಪಿಗೆ ಬರುತ್ತದೆ. ಆ ಸಂಗತಿ ಇದು : ನಮ್ಮ ಕಾಲದಲ್ಲಿ ಇಂಟರ್‌ಮೀಡಿಯೆಟ್ ತರಗತಿಯಲ್ಲಿ ಅನುತ್ತೀರ್ಣರಾದವರಿಗೆ ಇಂಗ್ಲಿಷ್ ಕನ್ನಡಗಳಿಗೆ ನ್ಯಾಷನಲ್ ಹೈಸ್ಕೂಲಿನಲ್ಲಿ ಬೆಳಗಿನ ವೇಳೆ ತರಗತಿಗಳು ನಡೆಯುತ್ತಿದ್ದವು. ಪ್ರತಿಷ್ಠಿತರಾದ ಅಧ್ಯಾಪಕರೇ ಅಲ್ಲಿ ಪಾಠ ಹೇಳುತ್ತಿದ್ದರು. ಈ ಅಧ್ಯಾಪಕರಲ್ಲಿ ಗುಂಡಪ್ಪನವರು ಒಬ್ಬರಾಗಿದ್ದು ಅಲ್ಲಿ ಇಂಗ್ಲಿಷ್ ಪದ್ಯವನ್ನು ಬೋಧಿಸುತ್ತಿದ್ದರು. ಪರೀಕ್ಷೆಯ ವೇಳೆಗೆ ಅವರು ದಿವಂಗತರಾಗಿದ್ದು, ಬ್ರೌನಿಂಗ್ ಕವಿಯ 'A Grammerian's Funeral' ಎಂಬ ಕ್ಲಿಷ್ಟ ಪದ್ಯ ಪಾಠವಾಗದೆ ಉಳಿದಿತ್ತು. ಪರೀಕ್ಷೆ ಹತ್ತಿರವಾಗುತ್ತಿತ್ತು. ಈ ವಿಷಯವನ್ನು ಶ್ರೀಯವರಿಗೆ ತಿಳಿಸಿದಾಗ ಅವರ ಹೃದಯ ದುಃಖದಿಂದ ಭಾರವಾಗಿದ್ದರೂ ವಿದ್ಯಾರ್ಥಿಗಳ ಮೇಲಣ ಕರುಣೆಯಿಂದ ಒಂದು ಭಾನುವಾರ ಮಧ್ಯಾಹ್ನ ಎರಡು ಗಂಟೆಯಿಂದ ಸಂಜೆ ಎಂಟು ಗಂಟೆಯವರೆಗೆ ಪದ್ಯವನ್ನು ವಿವರಿಸಿ ಮುಗಿಸಿದರು. ಈ ವಿವರಣೆಯ ಪ್ರಭಾವ ಎಷ್ಟಿತ್ತೆಂದರೆ ಎಪ್ಪತ್ತರ ಗಡಿಯಲ್ಲಿ ಕಾಲಿಟ್ಟಿರುವ

ನನಗೆ ಈ ಪದ್ಯದ ಬಹುಭಾಗ ಇನ್ನೂ ನೆನಪಿನಲ್ಲಿದ್ದು ಆ ಪದ್ಯದ ಅನೇಕ ಪಂಕ್ತಿಗಳು ಇನ್ನೂ ಸ್ಫೂರ್ತಿಯನ್ನು ನೀಡುತ್ತಿವೆ.

ಶ್ರೀಯವರ ಪ್ರವಚನ ರೀತಿಯೇ ಅದ್ಭುತವಾದುದು. ತರಗತಿಯಲ್ಲಿ ಷೇಕ್ಸ್‌ಪಿಯರ್ ನಾಟಕವನ್ನೋ ವರ್ಡ್ಸ್‌ವರ್ತ್ ಕವಿಯ ಕವನವನ್ನೋ ಇಲ್ಲವೇ ಇನ್ನಾವ ಕವಿಯ ಕೃತಿಯನ್ನೇ ಆಗಲಿ ಬೋಧಿಸುತ್ತಿದ್ದರೆ ಶ್ರೋತೃಗಳಿಗೆ ಕಾಲ ನಿಂತಂತೆ ತೋರುತ್ತಿತ್ತು. ಅವರು ಚಿತ್ರಾರ್ಪಿತ ವ್ಯಕ್ತಿಗಳಂತೆ ತೋರುತ್ತಿದ್ದರು. ಶ್ರೀಯವರು ಕಾವ್ಯದಲ್ಲಿ ಬರುತ್ತಿದ್ದ ಕಠಿಣ ಪದಗಳ ಅರ್ಥ ವಿವರಣೆಗೆ ಹೋಗುತ್ತಿರಲಿಲ್ಲ. ಆಗೊಮ್ಮೆ ಈಗೊಮ್ಮೆ ಅಪೂರ್ವ ಪದಗಳ ಆಮೂಲಾಗ್ರ ವಿವರಣೆಗೆ ತೊಡಗುತ್ತಿದ್ದರು. ಕವಿಯ ವಿಷಯ, ಕಾವ್ಯದ ಹಿನ್ನೆಲೆ ಇವುಗಳನ್ನು ವಿವರಿಸಿದ ಮೇಲೆ ಅರ್ಧ ಕಣ್ಮುಚ್ಚಿ ಕವನ ಅಥವಾ ಕೃತಿಯ ವಾಚನದಿಂದಲೇ ಶ್ರೋತೃಗಳಿಗೆ ಅರ್ಥ ವಾಗುವಂತೆ ಮಾಡಿಬಿಡುತ್ತಿದ್ದರು. ಸಾಮಾನ್ಯವಾಗಿ ಕವಿಯ ಕೃತಿ ಅವರಿಗೆ ವಾಚೋವಿಧೇಯ ವಾಗಿರುತ್ತಿತ್ತು. ವಿವರಣೆಗೆ ಅವರ ಅಪೂರ್ವವಾದ ವಾಕ್ಸಂಪತ್ತೂ ಕಂಠಶ್ರೀಯೂ ಸಹಾಯಕ್ಕೆ ಬರುತ್ತಿದ್ದವು. ಹೀಗಾಗಿ ಅವರ ಭಾಷಣಗಳಿಂದ ವಾಚಕರು ಮುಗ್ಧರಾಗುತ್ತಿದ್ದುದರಲ್ಲಿ ಏನು ಆಶ್ಚರ್ಯ?

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದವರು ಜನ್ನಕವಿಯ ಮೇಲೆ ಏರ್ಪಡಿಸಿದ್ದ 'ಯಶೋಧರ ಚರಿತೆ'ಯ ಮೇಲೆ ಶ್ರೀಯವರು ಮಾಡಿದ ಭಾಷಣದಲ್ಲಿ ನಾನು ಮೊದಲು ಅವರನ್ನು ಕಂಡದ್ದು. ಮಟ್ಟಸನಾದ ಆಕಾರ, ರಕ್ತ ಚಿಮ್ಮುತ್ತಿದ್ದ ಕೆನ್ನೆಗಳು, ತೇಜಃಪುಂಜವಾದ ಕಣ್ಣುಗಳು–ಇವು ಯಾರನ್ನು ತಾನೆ ಆಕರ್ಷಿಸುತ್ತಿರಲಿಲ್ಲ? ಅಂದು ಅವರು ಆ ಕಾವ್ಯವನ್ನು ಸಂಪೂರ್ಣವಾಗಿ ಓದಿ ಅದರ ಸ್ವಾರಸ್ಯವನ್ನು ವಾಚಕರಿಗೆ ಮನವರಿಕೆ ಮಾಡಿಕೊಟ್ಟರು. ಒಂದು ನೋಟದಲ್ಲಿ ಸಮಗ್ರ ಕಾವ್ಯವೊಂದನ್ನು ಪರಿಚಯ ಮಾಡಿಕೊಡುವುದು ಅವರ ಪದ್ಧತಿಯಾಗಿತ್ತು. ತರಗತಿಯಲ್ಲಿ ನಾನು ಕೇಳಿದ ಉಪನ್ಯಾಸಗಳ ಮಾತು ಹಾಗಿರಲಿ. ಸಾರ್ವಜನಿಕ ವೇದಿಕೆಯ ಮೇಲೆ ಕೇಳಿದ ಅವರ ಉಪನ್ಯಾಸಗಳೆಷ್ಟು? ಒಂದೇ, ಎರಡೇ–ಹತ್ತಾರು. ಪಂಪಭಾರತ, ಅಶ್ವತ್ಥಾಮನ್, ಕಠೋಪನಿಷತ್ತು, ಕುಮಾರವ್ಯಾಸಭಾರತ, ಪಂಪರಾಮಾಯಣ, ಪಾರಸಿಕರು ಇತ್ಯಾದಿ. ಒಮ್ಮೆ ಇವರು ಬೆಂಗಳೂರಿನಲ್ಲಿ ಮಾಡಿದ 'ಕನ್ನಡ ಛಂದಸ್ಸಿ'ನ ಮೇಲಣ ಭಾಷಣವನ್ನು ಕುರಿತು 'ತಾಯಿನಾಡು' ಪತ್ರಿಕೆ ಸುದೀರ್ಘವಾದ ಅಗ್ರಲೇಖನವನ್ನು ಪ್ರಕಟಿಸಿತು. ಇದರಿಂದ ಶ್ರೀಯವರ ಆಳವಾದ ಅಭ್ಯಾಸ ಪಾಂಡಿತ್ಯಗಳು, ನೀರಸವಾದ ವಿಷಯಗಳನ್ನು ಸರಸವಾಗಿ ಹೇಳುತ್ತಿದ್ದ ಶಕ್ತಿ ಇವು ಸ್ಪಷ್ಟವಾಗುತ್ತವೆ.

ಶ್ರೀಯವರ ಆಳವಾದ ಪಾಂಡಿತ್ಯ, ಸಹೃದಯತೆ, ವಾಕ್ಪಟುತ್ವಗಳನ್ನು ನಿರ್ದೇಶಿಸುವ ನನ್ನ ಅನುಭವಕ್ಕೆ ಬಂದ ಎರಡು ಸಂದರ್ಭಗಳನ್ನು ಇಲ್ಲಿ ನಿರೂಪಿಸಿದರೆ ಅಪ್ರಕೃತವಾಗಲಾರದು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಪ್ರಸಿದ್ಧ ತಮಿಳು ವಿದ್ವಾಂಸರೊಬ್ಬರು 'ಕುಜಿಳ್' ಕಾವ್ಯದ ಮೇಲೆ ಭಾಷಣ ಮಾಡಿದರು. ಅಂದಿನ ಸಭೆಗೆ ಬಿ.ಎಂ.ಶ್ರೀ.ಯವರು ಅಧ್ಯಕ್ಷರು. ತಮಿಳು ವಿದ್ವಾಂಸರು ಒಂದು ಗಂಟೆಯ ಕಾಲ ಕಾವ್ಯದ

ವಿಷಯವಾಗಿ ಏನನ್ನೂ ಹೇಳದೆ, ಕಾವ್ಯದ ಮೇಲೆ ಪೌರ್ವಾತ್ಯ ಪಾಶ್ಚಾತ್ಯ ವಿಮರ್ಶಕರ ಅಭಿಪ್ರಾಯಗಳನ್ನು ನಿರೂಪಿಸಿ ತಮ್ಮ ಭಾಷಣವನ್ನು ಮುಗಿಸಿದರು. ಆ ಬಳಿಕ ಶ್ರೀಯವರು ಎದ್ದು ತಮ್ಮ ಅಧ್ಯಕ್ಷ ಭಾಷಣದಲ್ಲಿ "ಶ್ರೀಯುತರು 'ಕುಜಿಳ್' ಸಮುದ್ರದಲ್ಲಿ ಮುಳುಗಿ ಕೆಲವು ರತ್ನಗಳನ್ನು ತಂದಿದ್ದಾರೆ. ನಾನು ಆ ಪ್ರಯತ್ನ ಮಾಡುತ್ತೇನೆ" ಎಂದು ಹೇಳಿ ಸುಮಾರು ಎರಡೂವರೆ ಗಂಟೆಗಳ ಕಾಲ ತಮಿಳು ಕಾವ್ಯದ ಪದ್ಯಗಳನ್ನು ಪುಸ್ತಕದ ಸಹಾಯವಿಲ್ಲದೆ ಉದಾಹರಿಸುತ್ತ, ವ್ಯಾಖ್ಯಾನ ಮಾಡುತ್ತ ಉಪನ್ಯಾಸ ಮಾಡಿದರು. ವಿದ್ವಾಂಸರು ಹೇಳಿದ ವಿಮರ್ಶೆಗಳೆಲ್ಲ ಅವರಿಗೆ ಗೊತ್ತಿರಲಿಲ್ಲವೆಂದಲ್ಲ. ಯಾವ ಭಾಷೆಯ ಕಾವ್ಯದ ಮೇಲೇ ಆಗಲಿ ಬಂದ ಪ್ರಸಿದ್ಧ ವಿಮರ್ಶೆಗಳನ್ನು ಅವರು ಮನನ ಮಾಡಿರುತ್ತಿದ್ದರು. ತಮ್ಮ ಉಪನ್ಯಾಸದಲ್ಲಿ ಯಾವ ಒಬ್ಬ ವಿಮರ್ಶಕನನ್ನೂ ಸಾಮಾನ್ಯವಾಗಿ ಅವರು ಹೆಸರಿಸುತ್ತಿರಲಿಲ್ಲ. ಅವರ ವಿಮರ್ಶೆ ಎಲ್ಲರ ವಿಮರ್ಶೆಗಳನ್ನು ಮಥನ ಮಾಡಿದ ಸ್ವಂತ ವಿಮರ್ಶೆಯಾಗಿರುತ್ತಿತ್ತು. ಆ ದಿನವೂ ಹಾಗೆಯೇ ಆಯಿತು. ಅಂದಿನ ಶ್ರೀಯವರ ಉಪನ್ಯಾಸ ನಮಗೆ ಬೆರಗು ಆಶ್ಚರ್ಯಗಳನ್ನು ತಂದಿತು. ಇನ್ನು ತಮಿಳು ವಿದ್ವಾಂಸರ ವಿಷಯದಲ್ಲಿ ಹೇಳತಕ್ಕದೇನಿದೆ?

ಶ್ರೀಯವರ ಉಪನ್ಯಾಸಗಳು ಗಂಟೆಗಟ್ಟಲೆ ನಡೆಯುತ್ತಿದ್ದವೆಂಬುದು ನಿಜ. ಇದಕ್ಕೆ ಅಪವಾದವಾಗಿ ಒಮ್ಮೆ ಮೈಸೂರಿನ ಮಹಾರಾಜರವರ ಕಾಲೇಜಿನಲ್ಲಿ 'An hour with English Poets' ಎಂಬ ವಿಷಯವಾಗಿ ಶ್ರೀಯವರು ಮಾತನಾಡಿದರು. ಮಿತಭಾಷಿಗಳಾಗಿದ್ದ ಪ್ರೊ॥ ಎ. ಬಿ. ಮ್ಯಾಕೆಂಟಾಷರು ಅಂದಿನ ಸಭಾಧ್ಯಕ್ಷರು. ಅಚ್ಚರಿಯ ವಿಷಯವೇನೆಂದರೆ ಗೆರೆ ಕೊಯ್ದಂತೆ ಶ್ರೀಯವರು ಒಂದು ಗಂಟೆಗೆ ಸರಿಯಾಗಿ ತಮ್ಮ ಉಪನ್ಯಾಸವನ್ನು ಮುಗಿಸಿದರು. ಸಭಾಧ್ಯಕ್ಷರು "ಪುನರ್ಜನ್ಮಗಳನ್ನು ನಂಬುವುದಾದರೆ ಶ್ರೀಯವರು ತಮ್ಮ ಹಿಂದಿನ ಜನ್ಮದಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಗ್ರೀಕ್ ಇಲ್ಲವೆ ಇಂಗ್ಲಿಷ್ ಭಾಷೆಯ ಪ್ರಾಧ್ಯಾಪಕರಾಗಿದ್ದಿರ ಬೇಕು" ಎಂದು ಮುಕ್ತಕಂಠದಿಂದ ಹೊಗಳಿದರು. ಸಹೋದ್ಯೋಗಿಗಳಿಗೆ ಇವರನ್ನು ಕಂಡರೆ ಅತಿಶಯವಾದ ಗೌರವ.

ಶ್ರೀಯವರನ್ನು ಪ್ರಾಧ್ಯಾಪಕರನ್ನಾಗಿ ನಾನು ದೂರದಿಂದ ನೋಡಿದ್ದೇನೇ ಹೊರತು, ಹತ್ತಿರದಿಂದ ಅವರೊಡನೆ ಸಲಿಗೆಯಿಂದ ಮಾತನಾಡಿಸಿರಲಿಲ್ಲ. ಈ ವೇಳೆಗೆ ಶ್ರೀಯವರ ವೈಯಕ್ತಿಕ ಜೀವನ ಅನೇಕ ಆಘಾತಗಳಿಗೆ ಗುರಿಯಾಗಿದ್ದು ಅವುಗಳನ್ನು ಅವರು ಅದ್ಭುತ ಸಂಯಮದಿಂದ, ಸಾಹಿತ್ಯಾಭ್ಯಾಸದಿಂದ ತಮ್ಮ ಬದುಕನ್ನು ನಿಯಮಿಸಿಕೊಂಡಿದ್ದರು. ಚಿಕ್ಕಂದಿನಿಂದಲೇ ಕನ್ನಡದ ಪ್ರೇಮವನ್ನು ಬೆಳಸಿಕೊಂಡಿದ್ದ ಅವರಿಗೆ ಇಂಗ್ಲಿಷ್ ಭಾಷಾ ಸಾಹಿತ್ಯಗಳು ನಮ್ಮ ಸಾಹಿತ್ಯವನ್ನು ಕಸಿ ಮಾಡಿ ಬೆಳೆಸಲು ಪ್ರೇರಣೆಯನ್ನುಂಟುಮಾಡಿದವು. ಇಂಗ್ಲಿಷ್ ಸಾಹಿತ್ಯದ ಆಳವಾದ ಅಭ್ಯಾಸದೊಡನೆ ಗ್ರೀಕ್ ಮತ್ತು ಯೂರೋಪಿನ ಇತರ ಭಾಷೆಗಳ ಅತ್ಯುತ್ತಮ ಸಾಹಿತ್ಯ ಕೃತಿಗಳನ್ನು ಅಭ್ಯಾಸ ಮಾಡಿದರು. ಜಗತ್ತಿನ ವಿವಿಧ ಸಂಸ್ಕೃತಿಗಳ ಪರಿಚಯವನ್ನು ಪಡೆದರು. ತಮಗೆ ಆಗ ದೊರೆತ ಕನ್ನಡ ಕಾವ್ಯಗಳನ್ನು ಆಳವಾಗಿ ಅಭ್ಯಾಸಮಾಡಿ ಅವುಗಳ ಗುಣದೋಷಗಳನ್ನು ಅರಿತು ಕನ್ನಡದ ಮುನ್ನಡೆಗೆ ಬೇಕಾದ ರೂಪುರೇಷೆಗಳನ್ನು

ತಮ್ಮಲ್ಲಿಯೇ ರೂಪಿಸಿಕೊಂಡರು. ನಮ್ಮ ಸಂಸ್ಕೃತಿಗೆ ಆಕರವಾದ ಸಂಸ್ಕೃತವನ್ನೂ, ಭಾಷೆ ಮತ್ತು ಛಂದಸ್ಸುಗಳಿಗೆ ಹೊಸ ಕಿರುವನ್ನು ಕೊಡಲು ಅನುಕೂಲಿಸುವಂತೆ ತಮಿಳನ್ನೂ ವ್ಯಾಸಂಗಮಾಡಿ, ಕನ್ನಡದ ನವೋದಯದ ನಾಯಕರಾಗಿ ಶ್ರೀಯವರು ಮುಂದೆ ಬಂದರು.

ಕನ್ನಡದ ದಿಗ್ವಿಜಯಕ್ಕೆ ಸಿದ್ಧತೆ ಮಾಡಿಕೊಂಡು ಹೊರಬಂದ ಶ್ರೀಯವರು ಎರಡು ದಶಕಗಳ ಕಾಲ ಸಾಹಿತ್ಯ ಸಾರ್ವಭೌಮರಾಗಿ ವಿರಾಜಿಸಿದರು. ಹದಿನೆಂಟು ಇಪ್ಪತ್ತು ರಾಜ್ಯಗಳಲ್ಲಿ ಹರಿಹಂಚಾಗಿದ್ದ ಕನ್ನಡಿಗರಲ್ಲಿ ಭಾವೈಕ್ಯವನ್ನು ಮೂಡಿಸುವ ಸಲುವಾಗಿ ಕೃಷ್ಣೆಯಿಂದ ಕಾವೇರಿಯವರೆಗಿನ ಕನ್ನಡನಾಡನ್ನು ಸುತ್ತಿ ಮಲಗಿದ್ದ ಕನ್ನಡಿಗರನ್ನು ತಮ್ಮ ಭಾಷಣಗಳಿಂದ ಎಚ್ಚರಿಸಿದರು. ಕನ್ನಡದ ಪ್ರಚಾರಕ್ಕಾಗಿ ತಾವು ಹೋದಲ್ಲೆಲ್ಲ ಕರ್ನಾಟಕ ಸಂಘಗಳನ್ನು ಕಟ್ಟಿದರು; ಜನರ ಪ್ರೀತಿ ವಿಶ್ವಾಸಗಳನ್ನು ಗಳಿಸಿದರು; ಕನ್ನಡವೆಂದರೆ ಮೂಗು ಮುರಿಯುತ್ತಿದ್ದ ಕಾಲದಲ್ಲಿ ಕನ್ನಡಕ್ಕೆ ಗೌರವವನ್ನು ತಂದರು. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ ಕನ್ನಡದ ಪ್ರಚಾರಕ್ಕೆಂದೇ ಮೀಸಲಾದ 'ಕನ್ನಡನುಡಿ' ಎಂಬ ವಾರಪತ್ರಿಕೆಯನ್ನು ಪರಿಷತ್ತಿನ ವತಿಯಿಂದ ಹೊರಡಿಸಿದರು. ಆ ಪತ್ರಿಕೆ ಇಂದಿಗೂ ನಡೆದು ಬರುತ್ತಿದೆ. ಶ್ರೀಯವರು ಈ ಮೊದಲು ಹೊಸಗನ್ನಡದಲ್ಲಿ ಹೊಸ ರೀತಿಯಲ್ಲಿ ಕವಿತೆಯನ್ನು ರಚಿಸಲು ಚಿನ್ನದ ಪದಕಕ್ಕಾಗಿಯೂ ಕನ್ನಡದ ವ್ಯಾಸಂಗಕ್ಕಾಗಿ ವಿದ್ಯಾರ್ಥಿವೇತನಗಳನ್ನು ಕಲ್ಪಿಸುವುದಕ್ಕಾಗಿಯೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದತ್ತಿಗಳನ್ನು ಕಲ್ಪಿಸಿದರು. ಆಗ ಪರಿಷತ್ತಿಗೆ ಅಚ್ಚುಕೂಟದ ಅವಶ್ಯಕತೆಯನ್ನು ಮನಗಂಡು ಅದರ ಸ್ಥಾಪನೆಗಾಗಿ ದತ್ತಿಯನ್ನು ಬಿಟ್ಟರು. ಶ್ರೀಯವರು ಬಿಟ್ಟ ದತ್ತಿಯ ಮೊತ್ತ ಆಗಿನ ಕಾಲದ ಇಪ್ಪತ್ತು ಸಾವಿರ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ.

ತರುಣ ಕನ್ನಡ ಲೇಖಕರಿಗೆ, ಕವಿಗಳಿಗೆ ಅವರ ಪ್ರೋತ್ಸಾಹ, ಮೆಚ್ಚುನುಡಿ ಯಾವಾಗಲೂ ಸಿದ್ಧವಾಗಿರುತ್ತಿದ್ದವು. ಅವರ ಮುನ್ನುಡಿಯಿಂದ ಅಲಂಕೃತವಾಗಿ ಬೆಳಕು ಕಂಡ ಗ್ರಂಥಗಳೂ ಕವನ ಸಂಗ್ರಹಗಳೂ ಎಷ್ಟೋ! ನನ್ನ ಅನುಭವಕ್ಕೆ ಬಂದ ಎರಡು ಸಂಗತಿಗಳನ್ನು ಇಲ್ಲಿ ತಿಳಿಸಬಯಸುತ್ತೇನೆ. ನಾನು ಮಹಾರಾಜರವರ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ 'ತರುಣರ ದಂಡು' ಎಂಬ ಸಂಘವಿತ್ತು. ಕೆಲವು ಕಾಲ ನಾನೇ ಅದರ ಕಾರ್ಯದರ್ಶಿಯಾಗಿದ್ದೆ. ೧೯೩೦ರ ವಾರ್ಷಿಕೋತ್ಸವಕ್ಕೆ ಶ್ರೀಯವರು ಅಧ್ಯಕ್ಷರಾಗಿ ಬಂದಿದ್ದರು. ಛಾಯಾಚಿತ್ರಗ್ರಹಣ ಕಾಲದಲ್ಲಿ ಅದೇನು ಸ್ಫೂರ್ತಿ ಬಂದಿತೋ ತಿಳಿಯದು. ಕುರ್ಚಿಯ ಮೇಲೆ ಕುಳಿತಿದ್ದ ಅವರು ಎದ್ದು ನಿಂತು "ಇದು ತರುಣರ ದಂಡು. ಕುರ್ಚಿಯ ಮೇಲೆ ಕುಳಿತುಕೊಳ್ಳಬೇಕಾದವರು ನೀವು. ಸ್ವಲ್ಪ ವಯಸ್ಸಾದ ನಾವು ನಿಂತುಕೊಳ್ಳುತ್ತೇವೆ" ಎಂದು ಹೇಳಿ ನಮ್ಮನ್ನು ಕುಳಿತುಕೊಳ್ಳುವಂತೆ ಮಾಡಿದರು. ಇದು ನಮಗೆ ಅಚ್ಚರಿನ್ನುಂಟುಮಾಡಿತು. ಈ ಅಪೂರ್ವ ಛಾಯಾಚಿತ್ರ ಈಗಲೂ ನನ್ನಲ್ಲಿದೆ. ಅದೇ ವರ್ಷ ಎಂ.ಎ. ವಾಚಾ ಪರೀಕ್ಷೆ ಮುಗಿದ ಮೇಲೆ ಶ್ರೀಯವರು ನಮ್ಮನ್ನು ಕುರಿತು "ಕನ್ನಡವನ್ನು ನಿಮ್ಮ ಕೈಯಲ್ಲಿಟ್ಟಿದ್ದೇವೆ. ಅದನ್ನು ಕಾಪಾಡಿಕೊಂಡು ಬನ್ನಿ" ಎಂದು ಕಳಕಳಿಯಿಂದ ನುಡಿದು ಕೈಮುಗಿದರು. ನಮ್ಮಲ್ಲಿ ಅವರು ಯಾವ ಸಾಮರ್ಥ್ಯವನ್ನು ಕಂಡರೋ! ಅವರ ನಿರೀಕ್ಷೆಯನ್ನು ನಾವು ಎಷ್ಟರಮಟ್ಟಿಗೆ ಸಾರ್ಥಕಗೊಳಿಸಿರುವೆವೋ ದೇವರೇ ಬಲ್ಲ!

ಕಲ್ಬುರ್ಗಿಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಶ್ರೀಯವರಿಗೆ ಗೌರವಗಳು ಸಂದವು. ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಇವರಿಗೆ 'ರಾಜಸೇವಾಸಕ್ತ' ಎಂಬ ಬಿರುದನ್ನು ಅನುಗ್ರಹಿಸಿದರು. ನನಗೆ ತಿಳಿದಂತೆ ಆ ಕಾಲದಲ್ಲಿ ಶ್ರೀಯವರಿಗೆ ಲಭಿಸಿದಷ್ಟು ಜನಮನ್ನಣೆ ಇತರರಾರಿಗೂ ಲಭಿಸಿಲ್ಲವೆಂದು ತೋರುತ್ತದೆ. ಆಗ ಪ್ರತಿಷ್ಠಿತ ಸನ್ಮಾನಿತರಿಗೆ ಶಾಲನ್ನು ಹೊದಿಸಿ ಸನ್ಮಾನಿಸುವ ಪದ್ಧತಿ ಇನ್ನೂ ರೂಢಿಗೆ ಬಂದಿರಲಿಲ್ಲ. ಸನ್ಮಾನಿತರು ಹೂವಿನಹಾರ, ಫಲತಾಂಬೂಲಗಳಿಂದ ತೃಪ್ತರಾಗಬೇಕಿತ್ತು. ಅಪರೂಪವಾಗಿ ಯಾರಾದರೂ ಅವರನ್ನು ಹಾರಕ್ಕಾಗಿ ಬೇಡಿದರೆ ಅವರಿಗೆ ಶ್ರೀಯವರು ಕೊಡುತ್ತಿದ್ದ ಉತ್ತರ ಇದು. "ನಾನು ಕೇಳಿದವರಿಗೆ ಹಣ ಕೊಟ್ಟೇನು. ಮನೆಗೆ ಹೋದ ಕೂಡಲೇ ನನ್ನ ಮೊಮ್ಮಗಳು ಅಣ್ಣಯ್ಯ, ಹಾರ ಎಲ್ಲಿ ಎಂದು ಕೇಳುತ್ತಾಳೆ. ಅದು ಅವಳಿಗೇ ಮೀಸಲು." ಮೊಮ್ಮಗಳನ್ನು ಕಂಡರೆ ಶ್ರೀಯವರಿಗೆ ಅಷ್ಟು ಪ್ರೀತಿ, ಮಮತೆ !

ಶ್ರೀಯವರು ಇಂಗ್ಲಿಷ್ ಪ್ರಾಧ್ಯಾಪಕರಾಗಿ ಹೆಚ್ಚು ಬರವಣಿಗೆಯನ್ನು ಬಿಡಲಿಲ್ಲ. ಇದಕ್ಕೆ ಕಾರಣ ಸ್ಪಷ್ಟವಾಗಿಯೇ ಇದೆ. ಇಂಗ್ಲಿಷ್ ಭಾಷೆಯಲ್ಲಿ ಕೃತಿರಚನೆ ಮಾಡಿದ ಯಾವ ಭಾರತೀಯನ ಹೆಸರು ಇಂಗ್ಲಿಷ್ ಸಾಹಿತ್ಯದಲ್ಲಿ ಶಾಶ್ವತವಾಗಿ ನಿಂತಿದೆ ? ಈ ಮರ್ಮವನ್ನರಿತ ಶ್ರೀಯವರು ತಮ್ಮ ಸತ್ವ ಸರ್ವಸ್ವವನ್ನೂ ಕನ್ನಡದ ಏಳ್ಗೆಗಾಗಿ ಮೀಸಲಿಟ್ಟರು. ಕನ್ನಡದಲ್ಲಿಯೂ ಕೂಡ ಅವರು ಹೆಚ್ಚು ಕೃತಿರಚನೆ ಮಾಡಲಿಲ್ಲ. ಭಾಷಣ ಮಾಡಿದ್ದೇ ಹೆಚ್ಚು. ಭಾಷಣ ತುಂಡು ಮೋಡದಂತೆ. ಬೇಗ ಕರಗಿ ಮಾಯವಾಗಿ ಹೋಗುತ್ತದೆ. ಅವರ ಭಾಷಣಗಳು ಸ್ಥಾಯಿಯಾಗಿ ನಿಲ್ಲದುದು ದುರದೃಷ್ಟಕರ. ಅವರು ಬಿಟ್ಟು ಹೋಗಿರುವ ಭಾಷಣಗಳಲ್ಲಿ ಮುಂಬರುವ ದಿನಗಳಲ್ಲಿ ಕನ್ನಡ ಬೆಳೆದು ಬಾಳುವ ರೀತಿಯನ್ನು ನಿರ್ದೇಶಿಸುತ್ತದೆ. ಆ ಸೂಚನೆಗಳು ಇಂದಿಗೂ ಮಾನ್ಯವಾಗಿವೆ. ಒಂದನೆಯ ನಾಗವರ್ಮನ ಛಂದೋಂಬುಧಿಯಲ್ಲಿ ಆರು ಅಧಿಕಾರಗಳಿದ್ದು, ಅವುಗಳಲ್ಲಿ ಒಂದು ಮಾತ್ರ ಕನ್ನಡ ಛಂದಸ್ಸಿನ ವಿವರಣೆಗೆ ಮೀಸಲಾಗಿದೆ. ಇದಾದ ಮೇಲೆ ಕನ್ನಡ ಛಂದಸ್ಸಿನ ಸ್ವರೂಪವನ್ನೇ ಪ್ರಸ್ತಾಪಿಸತಕ್ಕ ಗ್ರಂಥ ಬರಬೇಕಾದರೆ ಎಂಟುನೂರಕ್ಕೂ ಮಿಕ್ಕು ವರ್ಷಗಳು ಕಾಯಬೇಕಾಯಿತು. ಈ ಗ್ರಂಥವೇ ಕನ್ನಡ ಕೈಪಿಡಿಯ ಭಾಗವಾದ ಶ್ರೀಯವರ 'ಕನ್ನಡ ಛಂದಸ್ಸಿನ ಚರಿತ್ರೆ' ಇತ್ತೀಚೆಗೆ ಬಂದ ಕನ್ನಡ ಛಂದೋಗ್ರಂಥಗಳಿಗೆ ಇದು ಭದ್ರವಾದ ನೆಲಗಟ್ಟನ್ನು ಒದಗಿಸಿದ ಗ್ರಂಥವೆಂದರೆ ಈ ವಿಷಯದಲ್ಲಿ ಲೇಖಕರ ಆಳವಾದ ವಿಸ್ತಾರವಾದ ಪಾಂಡಿತ್ಯ ಹಾಗೂ ವ್ಯಾಸಂಗವನ್ನು ನಿರ್ದೇಶಿಸುತ್ತದೆ. ಶ್ರೀಯವರ ಕನ್ನಡ ಸಾಹಿತ್ಯ ಚರಿತ್ರೆ ನಾಗಚಂದ್ರನವರೆಗೆ ಬಂದು ನಿಂತಿದೆ. ಇಲ್ಲಿಯವರೆಗಿನ ಬರೆಹದಲ್ಲಿ ಶ್ರೀಯವರು ನಮ್ಮ ಹಿರಿಯ ಕವಿಗಳ ಹೃದಯವನ್ನು ತೆರೆದು ತೋರಿಸಿ, ಕನ್ನಡ ಸಾಹಿತ್ಯದ ದೊಡ್ಡ ನೋಟವನ್ನು ನಮ್ಮ ಮುಂದಿಟ್ಟಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆ ಸಂಪೂರ್ಣವಾಗಿ ಅವರಿಂದಲೇ ರಚಿತವಾಗಿದ್ದರೆ ರಸಿಕರಿಗೆ ಅದೊಂದು ಜೇನುಣಿಸಾಗುತ್ತಿತ್ತು. ಶ್ರೀಯವರ ಕವನ ಸಂಗ್ರಹಗಳು ಎರಡು–'ಇಂಗ್ಲಿಷ್ ಗೀತಗಳು' ಮತ್ತು 'ಹೊಂಗನಸುಗಳು'. ನವೋದಯ ಕಾವ್ಯ ತಲೆಯೆತ್ತಲು ನಾಂದಿಯಾಗಿ, ಹೊಸ ಭಾವಗಳಿಗೆ ತೌರಾಗಿ, ಅಕ್ಲಿಷ್ಟ ಪ್ರಸನ್ನ ಶೈಲಿಗೆ ಹೆಸರಾಗಿ ಕನ್ನಡ ಸಾಹಿತ್ಯದಲ್ಲಿ ಶ್ರೀಯವರ ಹೆಸರನ್ನು ಅಮರಗೊಳಿಸಿದ ಕೃತಿಯೇ 'ಇಂಗ್ಲಿಷ್ ಗೀತಗಳು'. ಈ ಕೃತಿ ಎಷ್ಟೊಂದು ಹೊಸ ಕವಿಗಳಿಗೆ ಹೊಸ ರೀತಿಯಲ್ಲಿ ಬರೆಯಲು

ಸ್ಫೂರ್ತಿ ಕೊಟ್ಟಿತು! ಮೇಲುನೋಟಕ್ಕೆ ಇದು ಇಂಗ್ಲಿಷ್ ಕವಿತೆಗಳ ಭಾಷಾಂತರವೆಂದು ತೋರಿದರೂ ಇದೊಂದು ಸ್ವಂತ ಕೃತಿಯೆಂದೇ ನನ್ನ ಭಾವನೆ. ಇದರಲ್ಲಿ ಬರುವ 'ಎರಡು ಮನಸ್ಸು' ಎಂಬ ಕಿರುಕವನದಲ್ಲಿ ಶ್ರೀಯವರ ಆತ್ಮ ವೃತ್ತಾಂತವಿರುವಂತೆ ತೋರುತ್ತದೆ. ಈ ಕೃತಿಯ ಕರಡುಗಳನ್ನು ತಿದ್ದುತ್ತಿದ್ದಾಗ ಶ್ರೀಯವರ ಮನೆಗೆ ಆಗಮಿಸಿದ ಕುಲಪತಿ ಡಾ॥ ಬ್ರಜೇಂದ್ರನಾಥ ಶೀಲರ ಸಲಹೆಯಂತೆ ಇದನ್ನು ಮೈಸೂರು ವಿಶ್ವವಿದ್ಯಾನಿಲಯದ ತಮ್ಮ ವಿದ್ಯಾರ್ಥಿಗಳಿಗೆ ಕವಿಗಳು ಪ್ರೀತಿಯಿಂದ ಅರ್ಪಿಸಿದ್ದಾರೆ. ಭಾರತ, ಕನ್ನಡ ನಾಡಿನ ಪ್ರೇಮ, ರಾಜಭಕ್ತಿ, ಕವಿಭಕ್ತಿ ಇವುಗಳ ವಿಷಯವಾಗಿ ಕವನಗಳನ್ನೊಳಗೊಂಡ ಕೃತಿಯೇ 'ಹೊಂಗನಸುಗಳು' ಈ ಕವನಗಳಲ್ಲಿ ಭಾವೋನ್ನತಿಯಿಂದ ಕೂಡಿದ 'ಶುಕ್ರಗೀತೆ' ಒಂದು ಶ್ರೇಷ್ಠ ಕವನ. ರನ್ನನ ಕೃತಿರತ್ನವಾದ 'ಸಾಹಸ ಭೀಮವಿಜಯ'ದಲ್ಲಿ ಹುದುಗಿದ್ದ 'ಗದಾಯುದ್ಧ ನಾಟಕಂ' ಕೃತಿ ರುದ್ರನಾಟಕವನ್ನು ಹೊರತೆಗೆದ ಕೀರ್ತಿ ಶ್ರೀಯವರಿಗೆ ಸಲ್ಲುತ್ತದೆ. ಮಹಾಭಾರತದ ಸೌಪ್ತಿಕ ಪರ್ವದೊಡನೆ ಹೊಂದಿಸಿಕೊಂಡು ರಚಿತವಾದ ಸಾಫೋಕ್ಲಿಸ್ ಮಹಾಕವಿಯ 'ಏಜಾಕ್ಸ್' ನಾಟಕದ ರೂಪಾಂತರವೇ 'ಅಶ್ವತ್ಥಾಮನ್'. ಹಳಗನ್ನಡ ಭಾಷೆಯ ನುಡಿಗಟ್ಟು, ಹದವಾದ ಸಂಸ್ಕೃತದ ಮಿಶ್ರಣ, ಛಂದಸ್ಸಿನ ವಿವಿಧ ಪ್ರಯೋಗಗಳು, ನಾಟಕದಲ್ಲಿ ಬರುವ ಗೀತಗಳ ಅಸಾಧಾರಣ ಮಾಧುರ್ಯ, ಗಂಭೀರವಾದ ನಾಟಕದ ಆವರಣ – ಇವೇ ಮೊದಲಾದ ಗುಣಗಳಿಂದ ಕೂಡಿ 'ಅಶ್ವತ್ಥಾಮನ್' ನಾಟಕ ಕನ್ನಡ ಸಾಹಿತ್ಯದಲ್ಲಿ ಒಂದು ಶ್ರೇಷ್ಠ ಕೃತಿಯಾಗಿದೆ. (ಈ ನಾಟಕದಲ್ಲಿ ರನ್ನ ಪಂಪರ ಪ್ರಭಾವವನ್ನು ಅಲ್ಲಲ್ಲೆ ಕಾಣಬಹುದೆಂದು ತೋರುತ್ತದೆ. ಉದಾಹರಣೆಗೆ 'ನೇಸಜಿಕೊಡನಾ ಕೌರವನ್ ಮುಬುಗೆ' ಇವೇ ಮೊದಲಾದ ಸಾಲುಗಳು 'ಕುರುಕುಲಾರ್ಕನುಂ ಅರ್ಕನುಂ ಅಸ್ತಮೆಯ್ದಿದರ್' ಎಂಬ ರನ್ನನ ಪದ್ಯವನ್ನು ನೆನಪಿಗೆ ತರುತ್ತವೆ. ಈ ನಾಟಕದಲ್ಲಿ ಬರುವ ಬನವಾಸಿಯ ವರ್ಣನೆಗೆ ಪಂಪನ ಪದ್ಯಗಳು ಪ್ರೇರಕವಾಗಿರಬಹುದು ಅಶ್ವತ್ಥಾಮನು ನುಡಿಯುವ 'ಶೃಂಗಾರಮೇ ಕರ್ಣನ್ ಸೇನಾಧಿಪತ್ಯಾಭಿಷೇಕಮೇ ಕರ್ಣನ್, ಎಂಜಲೆಂಜಲ್ ಎನಗೆ ಸಿಡುಕಂಗೆ' ಎಂಬ ಸಾಲುಗಳಿಗೆ 'ನೆತ್ತಮನಾಡಿ ಭಾನುಮತಿ ಸೋಲ್ತೊಡೆ' ಎಂಬ ಪಂಪನ ಪದ್ಯ ಪ್ರೇರಕವೆಂದು ಶ್ರೀಯವರೇ ಒಂದು ಉಪನ್ಯಾಸದಲ್ಲಿ ಹೇಳಿದ್ದರು.) ಈಸ್ಕಿಲಿಸ್ ಮಹಾಕವಿಯ ಐತಿಹಾಸಿಕ ನಾಟಕದ ಭಾಷಾಂತರವೇ 'ಪಾರಸಿಕರು'. ಸಲಮಿಸ್ ಯುದ್ಧದಲ್ಲಿ ಪಾರಸಿಕರ ಮೇಲೆ ಗ್ರೀಕರು ಸಾಧಿಸಿದ ವಿಜಯವನ್ನು ನಾಟಕ ಚಿತ್ರಿಸುತ್ತದೆ. ಸ್ವಾರಸ್ಯದ ವಿಷಯವೇನೆಂದರೆ ಈ ನಾಟಕದಲ್ಲಿ ಕವಿ ಪಾರಸಿಕರ ಬಾಯಿಂದ ಗ್ರೀಕರ ವಿಜಯವನ್ನು ಹಾಡಿಸಿ ಹೊಗಳಿದ್ದಾನೆ. ಈ ಭಾಷಾಂತರದ ವೈಶಿಷ್ಟ್ಯವೇನೆಂದರೆ ಕುಮಾರವ್ಯಾಸನ ಶೈಲಿಯನ್ನು ಅನುಕರಿಸಿ ಈ ನಾಟಕವನ್ನು ಬರೆದಿರುವಂತೆ ಶ್ರೀಯವರೇ ಹೇಳಿದ್ದರು. ಇಂಗ್ಲಿಷಿನಲ್ಲಿ ವಿಕಾರ ಹೊಂದಿರುವ ಪಾರ್ಸಿ ಭಾಷೆಯ ಹೆಸರುಗಳನ್ನು ಶ್ರೀಯವರು ಇಲ್ಲಿ ಸರಿಪಡಿಸಿದ್ದಾರೆ. ಕನ್ನಡದಲ್ಲಿ ನಾಟಕದ ಚರಿತ್ರೆಯೇ ಇತ್ತೀಚಿನದು. ಹೀಗಿರುವಲ್ಲಿ ಶ್ರೀಯವರ ಈ ಮೂರು ರುದ್ರನಾಟಕಗಳು ಹೊಸಗನ್ನಡದಲ್ಲಿ ರುದ್ರನಾಟಕಗಳ ರಚನೆಗೆ, ಅನುವಾದಕ್ಕೆ ದಾರಿಮಾಡಿಕೊಟ್ಟವು ಎಂದರೆ ಅದೇನೂ ಉತ್ಪ್ರೇಕ್ಷೆಯ ಮಾತಲ್ಲ. ಶ್ರೀಯವರು ಇನ್ನೂ ಕೆಲವು ಗ್ರೀಕ್ ನಾಟಕಗಳನ್ನು ಕನ್ನಡಿಸಲು ಸಂಕಲ್ಪಿಸಿದ್ದರು. ಅವರ ಸಂಕಲ್ಪ ಈಡೇರದುದು ಕನ್ನಡಿಗರ ದುರದೃಷ್ಟ. ಹಾಗೆಯೇ ಅವರು ಅನುವಾದ ಮಾಡಿದ್ದ ಒಂದೆರಡು ತಮಿಳು ಕೃತಿಗಳು ನಷ್ಟವಾದವೆಂದು ಕೇಳಿದ್ದೇನೆ.

ಪಾಠಪ್ರವಚನ ದಕ್ಷರಾಗಿ ಶ್ರೀಯವರು ಸಾವಿರಾರು ವಿದ್ಯಾರ್ಥಿಗಳಿಗೆ ನಿರ್ವಂಚನೆಯಿಂದ ವಿದ್ಯಾದಾನ ಮಾಡಿದರು. ಅವರ ಪ್ರೀತಿವಿಶ್ವಾಸಗಳನ್ನು ಗಳಿಸಿಕೊಂಡರು; ಸಹೋದ್ಯೋಗಿಗಳ ಗೌರವಕ್ಕೆ ಪಾತ್ರರಾದರು. ಈ ಮೊದಲು ಇದಕ್ಕೆ ಒಂದು ಉದಾಹರಣೆಯನ್ನು ಕೊಟ್ಟಿದೆ. ನೆನಪಿಗ ಬಂದ ಇನ್ನೆರಡು ಅಂಶಗಳನ್ನು ಇಲ್ಲಿ ತಿಳಿಸಬಯಸುತ್ತೇನೆ. ಶ್ರೀಯವರು ಒಂದೆರಡು ವರ್ಷಗಳ ಕಾಲ ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಂಸ್ಥೆಯ ಮೊದಲ ಅಧ್ಯಕ್ಷರಾಗಿದ್ದರು. ಇಂಗ್ಲಿಷ್ ಪ್ರಾಧ್ಯಾಪಕ ಪ್ರೊ॥ ಈಗಲ್‌ಟನ್ ಅದರ ಉಪಾಧ್ಯಕ್ಷರು. ಶ್ರೀಯವರ ಪಾಂಡಿತ್ಯ ಬಹುಶ್ರುತತ್ವಕ್ಕೆ ಬೆರಗಾದ ಅವರು ಈ ಗುಣಗಳನ್ನು ಬಾಯಿತುಂಬ ಹೊಗಳುತ್ತಿದ್ದರಂತೆ. ೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ನಡೆಯಿತಷ್ಟೆ. ಅಂದಿನ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ರಾಷ್ಟ್ರಪತಿ ಡಾ॥ ಎಸ್. ರಾಧಾಕೃಷ್ಣನ್ ಅವರು ತಮ್ಮ ಕಾಲದ ಮಹಾರಾಜ ಕಾಲೇಜಿನ ದಿನಗಳನ್ನೂ ತಮ್ಮೊಡನಿದ್ದ ಪ್ರಾಧ್ಯಾಪಕ ವರ್ಗವನ್ನೂ – ಅದರಲ್ಲೂ ಸರ್ವಶ್ರೀ ಎನ್. ಎಸ್. ಸುಬ್ಬರಾಯರು, ಎಂ. ಹಿರಿಯಣ್ಣನವರು, ಬಿ. ಎಂ. ಶ್ರೀಕಂಠಯ್ಯನವರು ಇವರನ್ನು – ಸ್ಮರಿಸಿಕೊಂಡರು. ಶ್ರೀಯವರ ವ್ಯಕ್ತಿತ್ವಕ್ಕೆ ಇದಕ್ಕಿಂತ ಬೇರೆ ಪ್ರಶಂಸೆ ಬೇಕೆ?

ಕನ್ನಡ ಸಾಹಿತ್ಯದ ಮಟ್ಟಿಗೆ ಹೇಳಬಹುದಾದರೆ ಶ್ರೀಯವರು ಯುಗಪುರುಷರು. ಬಾಲ್ಯದಲ್ಲಿಯೇ ಕನ್ನಡದ ಕನಸನ್ನು ಕಟ್ಟಿಕೊಂಡು, ಅದರ ನನಸಿಗಾಗಿ ವಿಶೇಷ ಸಿದ್ಧತಯನ್ನು ಮಾಡಿಕೊಂಡು, ಕನ್ನಡ ನಾಡನ್ನು ಸುತ್ತಿ, ಸದ್ದುಗದ್ದಲವಿಲ್ಲದೆ, ತಮ್ಮ ಭಾಷಣಗಳಿಂದ ಮಲಗಿದ್ದ ಜನರನ್ನು ಎಚ್ಚರಿಸಿ, ಅವರಲ್ಲಿ ಭಾವೈಕ್ಯವನ್ನು ಮೂಡಿಸಿ, ಪರಿಹಂಚಾಗಿದ್ದ ಕನ್ನಡನಾಡಿನ ಏಕತೆಗೆ ಕಾರಣರಾದರು. ತಮ್ಮ ಪ್ರವಚನದಿಂದ, ಕೃತಿಗಳಿಂದ ಲೇಖಕರಿಗೆ ಸ್ಫೂರ್ತಿಯನ್ನುಂಟುಮಾಡಿ ಕನ್ನಡದ ಪಡೆಯನ್ನೇ ಸೃಷ್ಟಿಸಿದರು. ಶ್ರೀಯವರ ಶಿಷ್ಯನಾಗಿದ್ದುದು ಒಂದು ಪುಣ್ಯವೆಂದೇ ನನ್ನ ಭಾವನೆ. 'ಶ್ರೀಕಾರ ಬರೆದರು ಕನ್ನಡ ಕಣ್ವರು, ಆಕಾರವಾದೆವು ನಾವು' ಎಂದು ನುಡಿದಿರುವ ಕವಿಯ ಮಾತು ನೂರಕ್ಕೆ ನೂರು ಸತ್ಯ. ಅವರ ಭಾಷಣಗಳಿಂದ ನಾವು ಸ್ಫೂರ್ತಿ ಪಡೆದೆವು. ಶ್ರೀಯವರದು ಭಾಷಣವಾಗಿರುತ್ತಿಲಿಲ್ಲ; ಅವರ ಮಾತು ಕಾವ್ಯ. ಈ ಭಾವವನ್ನು ವ್ಯಕ್ತಪಡಿಸುವ ಅವರ ಶಿಷ್ಯರೊಬ್ಬರ ಪ್ರಶಂಸಾ ಪದ್ಯದಿಂದ ಈ ನನ್ನ ಲೇಖನವನ್ನು ಮುಗಿಸುತ್ತೇನೆ.

**ಶ್ರೀಕಂಠಗುರುವ ಕಾವ್ಯಮ**
**ನಾರ್ಕಣಿಸಿ ರಸದ ಮಡುವಿನೊಳಾಳದನಾವಂ**
**ಕೇಕಿಕ ನೃತ್ಯದ್ಬರ್ಹಾ**
**ಲೋಕದವೊಲದುವೆ ಚಿತ್ರವರ್ಣಾಕೀರ್ಣಂ**

❖

# ಗುರುಸ್ಮರಣೆ

## (ಬಿ.ಎಂ.ಶ್ರೀ.)

• *ಎಚ್. ಜಿ. ಸೂರ್ಯನಾರಾಯಣರಾವ್*

೧೯೪೫ರಲ್ಲಿ ನಾನು ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಸೆಂಟ್ರಲ್ ಕಾಲೇಜಿಗೆ ಸೇರುವ ಸಡಗರದಲ್ಲಿದ್ದೆ. ನಾನು ವಿಜ್ಞಾನದ ವಿಷಯಗಳನ್ನು ಐಚ್ಛಿಕ ವಿಷಯಗಳಾಗಿ ತೆಗೆದುಕೊಂಡದ್ದರಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಆಸಕ್ತಿಯೂ ಇದ್ದುದರಿಂದ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್, ಫಿಜಿಕ್ಸ್, ಮ್ಯಾಥ್‌ಮ್ಯಾಟಿಕ್ಸ್ ಎಂಬ ಕಾಂಬಿನೇಷನ್‌ಗೆ ಅರ್ಜಿ ಹಾಕಿದ್ದೆ. ಬಿ.ಎಂ.ಶ್ರೀ. ಅವರ ಕೆಲವು ಕನ್ನಡ ಭಾಷಣಗಳನ್ನು ಕೇಳಿ ಅವರ ವಾಗ್ವಿಲಾಸದಿಂದ ಮೋಹಿತನಾಗಿದ್ದೆ. ಅವರ ಗಂಭೀರ ವ್ಯಕ್ತಿತ್ವವೂ ತೇಜಸ್ಸಿನಿಂದ ಕೂಡಿದ ಮುಖವೂ ನನ್ನ ಮನಸ್ಸನ್ನು ಸೆಳೆದಿದ್ದವು. ಅವರ ಅಪಾರ ವಿದ್ವತ್ತಿನ ಬಗ್ಗೆ ಸ್ವಲ್ಪವೂ ಕಲ್ಪನೆಯಿರಲಿಲ್ಲ. ಅವರ ಕೈಕೆಳಗೆ ಓದುವ ಸೌಭಾಗ್ಯ ಒದಗುವುದೆಂದು ನಾನು ಕನಸುಮನಸಿನಲ್ಲೂ ಎಣಿಸಿರಲಿಲ್ಲ. ನಾನು ಪಾಸ್‌ಕೋರ್ಸ್‌ಗೆ (ಬಿ.ಎ.) ಸೇರಿಕೊಂಡ ಕೆಲವು ದಿನಗಳಲ್ಲಿಯೇ ಬಿ.ಎಂ.ಶ್ರೀ. ಅವರು ಇಂಗ್ಲಿಷ್ ವಿಭಾಗದಲ್ಲಿ ಬಿ.ಎ. (ಆನರ್ಸ್) ತರಗತಿಯನ್ನು ಶುರುಮಾಡುತ್ತಾರೆಂದು ಕೇಳಿದೆ. ಆ ಸುದ್ದಿ ಸಂತೋಷವನ್ನು ತಂದಿತು. ಆದರೂ ನನ್ನ ತಾತ ಹಾಗೂ ತಂದೆಯವರನ್ನು ಕೇಳದೆ (ಅವರು ದೂರದ ಚಿತ್ರದುರ್ಗದಲ್ಲಿ ವಾಸವಾಗಿದ್ದರು), ಅವರ ಅನುಮತಿಯನ್ನು ಪಡೆಯದೆ ನಾನು ಬಿ.ಎ. (ಆನರ್ಸ್)ಗೆ ಸೇರಿಕೊಳ್ಳುವಂತಿರಲಿಲ್ಲ. ಸಂದರ್ಭ ಹೀಗಿದ್ದಾಗ ನನಗೆ ಬಿ.ಎಂ.ಶ್ರೀ. ಅವರಿಂದ 'ಬುಲಾವ್' ಬಂತು. 'ಪ್ರೊಫೆಸರ್ ನನಗೆ ಏಕೆ ಹೇಳಿ ಕಳುಹಿಸಿರಬಹುದೆಂದು ಆಶ್ಚರ್ಯಮಿಶ್ರಿತ ಭಯಭಕ್ತಿಯಿಂದ ನಾನು ಬಿ.ಎಂ.ಶ್ರೀ. ಕೊಠಡಿಗೆ ಹೋದೆ. ಅಂದೇ ನಾನು ಅವರನ್ನು ಹತ್ತಿರದಿಂದ ನೋಡಿದ್ದು. ಜೊತೆಗೆ ಪ್ರೊ॥ ಎಸ್. ವಿ. ರಂಗಣ್ಣ ಮತ್ತು ಪ್ರೊ॥ ಕೆ. ಅನಂತರಾಮಯ್ಯ (ಬಹುಶಃ ಪ್ರೊ॥ ಬಿ. ಎಸ್. ಕೇಶವನ್ ಕೂಡಾ) ಇದ್ದರು. ಇಂಗ್ಲಿಷ್ ಬಿ.ಎ. (ಆನರ್ಸ್) ತೆರೆಯಲು ಏರ್ಪಾಡಾಗಿದೆಯೆಂದು ತಿಳಿಸಿ ನನಗೆ ಸೇರಲು ಇಚ್ಛೆಯಿದೆಯೇ ಎಂದು ಬಿ.ಎಂ.ಶ್ರೀ. ಕೇಳಿದರು. ನನಗೆ ದಿಗ್ಭ್ರಮೆ ಹಿಡಿದಂತಾಯಿತು. ತಕ್ಷಣವೇ ಏನು ಉತ್ತರ ಕೊಡುವುದಕ್ಕೂ ಸಾಧ್ಯವಿರಲಿಲ್ಲ. ನನ್ನ ಸಮಸ್ಯೆಯನ್ನು ಹೇಳಿಕೊಂಡೆ. ನನ್ನ ತಂದೆ–ತಾತನವರ ಒಪ್ಪಿಗೆಯಿಲ್ಲದೆ ನಾನು ಹೀಗೆ ವಿಜ್ಞಾನದ ವಿಷಯಗಳನ್ನು ಬಿಟ್ಟು ಇಂಗ್ಲಿಷ್ (ಆನರ್ಸ್)ಗೆ ಸೇರಲು ಸಾಧ್ಯವಿಲ್ಲವೆಂದು ಹೇಳಿದೆ. ನಾನು ಹೇಳಿದ್ದನ್ನೆಲ್ಲಾ ಸಾವಧಾನವಾಗಿ ಕೇಳಿದ ಮೇಲೆ ಬಿ.ಎಂ.ಶ್ರೀ. ಹೇಳಿದರು: "It will be my responsibility to convince your parents and grand-father. You will have no regrets if you join English Honours

course" ಎಂದು ನನಗೆ ಭರವಸೆ ಕೊಟ್ಟರು. ಸಾಹಿತ್ಯದಲ್ಲಿ ನನಗೆ ಎಷ್ಟು ಪ್ರವೇಶವಿದೆಯೆಂದು ಪರೀಕ್ಷೆಮಾಡಲು ಯಾವ ಯಾವ ಗ್ರಂಥಗಳನ್ನು ನಾನು ಓದಿದ್ದೇನೆ, ನನಗೆ ಪ್ರಿಯವಾದ ಸಾಹಿತಿಗಳು ಯಾರು ಎಂದು ಕೇಳಿದರು. ನನಗೆ ತೋಚಿದ್ದನ್ನು ಹೇಳಿದೆ, ಅದರ ಮೇಲೆ ಕೆಲವು ಪ್ರಶ್ನೆಗಳನ್ನು ಕೇಳಿ ನನ್ನ ಅಭಿರುಚಿಯನ್ನು ಪರೀಕ್ಷೆ ಮಾಡಿದರು. ಕಟ್ಟಕಡೆಗೆ ನನ್ನನ್ನು ಆನರ್ಸ್‌ಗೆ ಸೇರಿಸಿಕೊಳ್ಳುವ ತೀರ್ಮಾನ ಮಾಡಿದ್ದೇವೆಂದು ತಿಳಿಸಿದರು. ಹೀಗೆ ಅನಿರೀಕ್ಷಿತವಾಗಿ ನಾನು ಸಾಹಿತ್ಯದ ವ್ಯಾಸಂಗಕ್ಕೆ ತಿರುಗಿದೆ. ನನ್ನ ಜೊತೆಗೆ ಎಲ್.ಎಸ್. ಶೇಷಗಿರಿರಾಯರೂ ಸೇರಿಕೊಂಡರು. ನಾವಿಬ್ಬರೂ ಇಂಟರ್‌ಮೀಡಿಯೆಟ್‌ನಲ್ಲಿ ಇಂಗ್ಲಿಷಿನಲ್ಲಿ ಹೆಚ್ಚಾಗಿ ಅಂಕಗಳನ್ನು ಗಳಿಸಿದ್ದೆವು.

ಬಿ.ಎಂ.ಶ್ರೀ. ಅವರ ಸೇವಾವಧಿಯ ಕೊನೆಯ ವರ್ಷ (೧೯೪೧-೪೨) ಆನರ್ಸ್ ತರಗತಿಯ ವಿದ್ಯಾರ್ಥಿಗಳಾಗಿದ್ದ ನಮಗೆ ಮೊದಲನೆಯ ವರ್ಷ. ಅವರ ಪಾಠ ಪ್ರವಚನಗಳನ್ನು ಕೇಳುವ ಕುತೂಹಲ ಪ್ರಬಲವಾಗಿತ್ತು. ಅವರು ೧೯೪೨ರಲ್ಲಿ ನಿವೃತ್ತಿ ಹೊಂದುತ್ತಿದ್ದುದರಿಂದ ಮೂರನೇ ವರ್ಷದಲ್ಲಿ ಬೋಧಿಸಬೇಕಾಗಿದ್ದ ತೌಲನಿಕ ನಾಟಕವನ್ನು (Comparative Drama) ಮೊದಲನೇ ವರ್ಷವೇ ಪಾಠ ಮಾಡಿದರು. ಜನರಲ್ ಆನರ್ಸ್ ಕ್ಲಾಸಿಗೆ ಅವರು ಮಿಲ್ಟನ್‌ನ 'ಸ್ಯಾಮ್ಸನ್ ಅಗೋನಿಸ್ಟಿಸ್' ನಾಟಕವನ್ನು ಓದಿದರು. ನೂರಾರು ವಿದ್ಯಾರ್ಥಿಗಳಿದ್ದ ಜನರಲ್ ಆನರ್ಸ್ ತರಗತಿಯಲ್ಲಿ ಪಾಠ ಹೇಳುವ ವೈಖರಿಯೇ ಬೇರೆಯಾಗಿತ್ತು. ಇಂಗ್ಲಿಷ್ ಆನರ್ಸಿನಲ್ಲಿ ಬಹಳ ಆತ್ಮೀಯವಾಗಿ ತಂದೆ ಮಕ್ಕಳಿಗೆ ಹೇಳಿಕೊಡುವಂತೆ ಪಾಠ ಮಾಡಿದರು. ನಾವು ಓದಬೇಕಾಗಿದ್ದ ನಾಟಕಗಳು ಗ್ರೀಕ್ ನಾಟಕಕಾರ ಏಸ್ಕಿಲಸ್‌ನ 'ಅಗಮೆಮ್ನಾನ್', ಷೇಕ್ಸ್‌ಪಿಯರನ 'ಹ್ಯಾಮ್ಲೆಟ್', ಕಾಳಿದಾಸನ 'ಶಾಕುಂತಲ', ಗಯಟೆಯ 'ಫೌಸ್ಟ್', ಷೇಕ್ಸ್‌ಪಿಯರ್ ಮತ್ತು ಕಾಳಿದಾಸನನ್ನು ಬಿಟ್ಟರೆ ಉಳಿದವರ ಹೆಸರುಗಳೂ ನನಗೆ ಹೊಸದು ! ಅವರು ನಮಗೆ ಪ್ರಾರಂಭಮಾಡಿದ್ದು ಏಸ್ಕಿಲಸ್ಸಿನ ನಾಟಕದಿಂದ. ಅವನು ಗ್ರೀಕ್ ನಾಟಕದ ಜನಕನೆಂದು ಪ್ರಸಿದ್ಧಿ. ಅದಕ್ಕೆ ಪೂರ್ವಸಿದ್ಧತೆಯಾಗಿ ಅರಿಸ್ಟಾಟಲ್‌ನ 'ಪೊಯಟಿಕ್ಸ್' (Poetics) ಪಾಠ ಹೇಳಿದರು. ಅವನ ಗ್ರೀಕ್ ರುದ್ರನಾಟಕದ ನಿರೂಪಣೆಯನ್ನು ಕೊಡುತ್ತಾ 'Nemesis', 'Katharsis', 'Purgation through pitty and terror' ಕಲ್ಪನೆಗಳನ್ನು ವಿವರಿಸಿದರು. ಗ್ರೀಕ್ ನಾಟಕದಲ್ಲಿ ಪ್ರಸಿದ್ಧರಾದ ಸಾಫೊಕ್ಲಿಸ್, ಯೂರಿಪೀಡಿಸ್ ಮುಂತಾದವರ ನಾಟಕಗಳ ಪರಿಚಯವನ್ನೂ ಮಾಡಿಸಿದರು. ಹೀಗೆ ದೊರೆಯಿತು ನಮಗೆ ಗ್ರೀಕ್ ನಾಟಕ ಪ್ರಪಂಚದ ಪ್ರವೇಶ. ನಾವು ಓದಬೇಕಾದ ಗ್ರೀಕ್ ನಾಟಕದ ಪಠ್ಯಪುಸ್ತಕಗಳನ್ನು ತರಿಸಿಕೊಟ್ಟರು. ಪುಸ್ತಕದಲ್ಲಿ ಸಿಕ್ಕಾಪಟ್ಟೆ ಗುರುತು ಮಾಡಿ ಅದರ ಅಂದವನ್ನು ಕೆಡಿಸಬೇಡಿರೆಂದು ಎಚ್ಚರಿಕೆ ಕೊಟ್ಟರು. ಅರಿಸ್ಟಾಟಲ್‌ನ ಹೆಸರೇನೊ ಕಿವಿಯಮೇಲೆ ಬಿದ್ದಿತ್ತು. ಆದರೆ ಅವನ ಕೃತಿಗಳನ್ನು ಓದಿದ್ದವರಾರು? 'ಪೊಯಟಿಕ್ಸ್' ಪಾಠವನ್ನು ಅವರ ಬಾಯಿಂದ ಕೇಳುವುದು ನಿಜಕ್ಕೂ ದೊಡ್ಡ ಯೋಗವೇ ಆಗಿತ್ತು. ಮೊದಲು ಆ ಗ್ರಂಥದ ಸರಳವಾದ ವಿಶ್ಲೇಷಣೆ ಕೊಟ್ಟು, ಮುಖ್ಯ ಅಂಶಗಳನ್ನು ವಿವರಿಸುತ್ತಿದ್ದರು. ಅದಕ್ಕೆ ಹಿನ್ನೆಲೆಯಾಗಿ ಗ್ರೀಕ್ ರುದ್ರನಾಟಕದ ಇತಿಹಾಸದ ಸಮಗ್ರ ಪರಿಚಯ

ಮಾಡಿಕೊಟ್ಟರು. ಅನಂತರ ಅವರು ಏಸ್ಕಿಲಸ್‌ನ 'ಅಗಮೆಮ್ನ್ಯಾನ್' ನಾಟಕವನ್ನು ಓದಲು ಪ್ರಾರಂಭಿಸಿದರು. ಈ ಹಂತಕ್ಕೆ ಬರುವಷ್ಟರಲ್ಲಿ ಮೂರು ತಿಂಗಳ ವಿಶದ ಪಾಠವಾಗಿತ್ತು. ಅವರ ಸರಳವಾದ ಹಾಗೂ ಸಾರವತ್ತಾದ ಪಾಠಗಳು ನಮ್ಮ ಮೇಲೆ ಬಹಳ ಪರಿಣಾಮವನ್ನು ಬೀರಿದವು. ಅವರ ಪಾಠಗಳ ಸ್ವಾರಸ್ಯವನ್ನು ಸವಿಯುತ್ತಾ ಮುಂದುವರಿಯುತ್ತಿದ್ದಂತೆ ಒಂದು ದಿನ ಬಿ.ಎಂ.ಶ್ರೀ. ನಮಗೆ ಗಿಲ್‌ಬರ್ಟ್ ಮರ್ರೇ ಬರೆದ 'ಗ್ರೀಕ್ ಡ್ರಾಮ' ಎಂಬ ಗ್ರಂಥವನ್ನು ಕೊಟ್ಟು ನಮ್ಮ ಕೈಲಿ ಓದಿಸಿದರು. ಆಕ್ಸ್‌ಫರ್ಡ್‌ನಲ್ಲಿ ಗ್ರೀಕ್ ಪ್ರೊಫೆಸರ್ ಆಗಿದ್ದ ಗಿಲ್‌ಬರ್ಟ್ ಮರ್ರೆಯವರ ಗ್ರಂಥವನ್ನು ಗಮನವಿಟ್ಟು ಓದಿದ್ದಾಯಿತು. ಗ್ರೀಕ್ ನಾಟಕವನ್ನು ಕುರಿತು ನಾವು ತರಗತಿಯಲ್ಲಿ ಪಾಠ ಕೇಳಿದ್ದರ ಆಧಾರದ ಮೇಲೆ ಸ್ವತಂತ್ರವಾಗಿ ಪ್ರಬಂಧವನ್ನು ಬರೆಯಲು ಸೂಚಿಸಿದರು. ಬೇರೆಯವರ ಯಾವ ಅಭಿಪ್ರಾಯ ವಿಮರ್ಶನಗಳನ್ನೂ ಉಲ್ಲೇಖಿಸಬೇಡಿ, ನಿಮಗೆ ಗೊತ್ತಿದ್ದಷ್ಟನ್ನೇ ನಿಮ್ಮದೇ ಭಾಷೆಯಲ್ಲಿ ಎಂಟು–ಹತ್ತು ಪುಟಗಳಷ್ಟು ಪ್ರಬಂಧ ರಚಿಸಿರೆಂದು ಹೇಳಿದರು. ನಾವು ಅತ್ಯಂತ ಉತ್ಸಾಹದಿಂದ ನಮ್ಮ ಪ್ರಬಂಧಗಳನ್ನು ಬರೆದುಕೊಟ್ಟೆವು. ಕೆಲವು ದಿನಗಳ ಮೇಲೆ ನಾವು ಬರೆದ ಪ್ರಬಂಧಗಳನ್ನು ಕುರಿತು ಬಿ.ಎಂ.ಶ್ರೀ. ವಿಮರ್ಶೆ ನೀಡಿದರು. ಪ್ರಬಂಧದ ಒಟ್ಟಾರೆ ದೃಷ್ಟಿ, ಶೈಲಿ, ವಾಕ್ಯರಚನೆ, ವಿಷಯ ನಿರೂಪಣೆಯನ್ನು ಕುರಿತು ಅವರು ಕೊಟ್ಟ ವಿಮರ್ಶೆ ಅತ್ಯಂತ ಉಪಯುಕ್ತವಾಗಿತ್ತು. ನಿರುತ್ಸಾಹದ ಮಾತೊಂದನ್ನೂ ಆಡದೆ ಬರವಣಿಗೆಯಲ್ಲಿ ಔಚಿತ್ಯ ಪ್ರಜ್ಞೆ ಹೇಗಿರಬೇಕೆಂದು ಅನೇಕ ನಿದರ್ಶನಗಳನ್ನು ಕೊಟ್ಟು ವಿವರಿಸಿದರು. ನಾವು ನಮ್ಮ ಉತ್ಸಾಹದಲ್ಲಿ ಬಳಸಿದ್ದ ದೊಡ್ಡ ದೊಡ್ಡ ಪದಗಳ ಬದಲು ಸರಳವಾದ ಪದಗಳನ್ನು ಸೂಚಿಸಿದರು. ಪದಗಳ ಹದ ಅನೇಕ ವರ್ಷಗಳ ಸಾಹಿತ್ಯ ವ್ಯವಸಾಯದ ಫಲವಾಗಿ ಬರಬೇಕಾದದ್ದು. ಅವರು ಒತ್ತು ಕೊಟ್ಟದ್ದು ನಿಖರತೆ ಮತ್ತು ಸರಳತೆಗೆ ಭಾಷಾಮಜ್ಜಿಯ ಬಗ್ಗೆಯೂ ಸಲಹೆಗಳನ್ನು ಕೊಟ್ಟರು.

ಬಹುಭಾಷಾ ವಿಶಾರದರಾಗಿದ್ದ ಬಿ.ಎಂ.ಶ್ರೀ. ಕಾಳಿದಾಸನ 'ಶಾಕುಂತಲಾ' ನಾಟಕವನ್ನು ಪಾಠಮಾಡಿದ್ದು ನಮಗೆ ಹೊಸ ಅನುಭವವಾಗಿತ್ತು. ಶಾಕುಂತಲಾ ನಾಟಕದ ಇಂಗ್ಲಿಷ್ ಭಾಷಾಂತರವೊಂದನ್ನು ಆಧಾರವಾಗಿ ಇಟ್ಟುಕೊಂಡು ಮೂಲದ ಸೊಗಸನ್ನು ವಿವರಿಸಿದರು. ಶಕುಂತಲೆ ಗಂಡನ ಅರಮನೆಗೆ ತೆರಳುವಾಗ ಆಶ್ರಮವನ್ನು ಬಿಟ್ಟು ಹೊರಡುವಾಗ ಕಣ್ವರು ಆಕೆಗೆ ಕೊಡುವ ಉಪದೇಶ ಹೇಳುವ ಭಾಗ, ವಿರಹದಿಂದ ಶಾಕುಂತಲೆಯ ಪ್ರೇಮ ಪರಿಶುದ್ಧಿ ಹೊಂದಿದ ಬಗೆ – ಇವನ್ನು ವಿವರಿಸುವಾಗ ಪ್ರೊಫೆಸರ್ ಧ್ಯಾನಾಸಕ್ತರಾಗಿದ್ದಂತೆ ನಮಗೆ ತೋರುತ್ತಿತ್ತು. ಎಲ್ಲಾ (ಆನರ್ಸ್) ವಿದ್ಯಾರ್ಥಿಗಳಿಗೆ ಅವರು ತೆಗೆದುಕೊಳ್ಳುತ್ತಿದ್ದ ಪಾಠ ಮಿಲ್ಟನ್ನನ 'ಸ್ಯಾಮ್ಸನ್ ಅಗೋನಿಸ್ಟಿಸ್' (Samson Agonistes). ಈ ನಾಟಕ ರಚಿತವಾದದ್ದು ಗ್ರೀಕ್ ನಾಟಕದ ಮಾದರಿಯ ಮೇಲೆ. ಸ್ವಲ್ಪ ಕ್ಲಿಷ್ಟವೇ ಆದ ಈ ನಾಟಕವನ್ನು ಬಿ.ಎಂ.ಶ್ರೀ. ವಿವರಿಸುತ್ತಿದ್ದ ವಿಧಾನ ಪರಿಣಾಮಕಾರಿಯಾಗಿತ್ತು. ವಿವರಣೆಯ ರೀತಿ ಅಂತಿರಲಿ, ಕಾವ್ಯ ಓದುವ ಬಗೆ ಅವರಿಗೆ ಸಿದ್ಧಿಸಿತ್ತು. ಸ್ಪಷ್ಟವಾಗಿ ಭಾವಪೂರ್ಣವಾಗಿ ಓದುತ್ತಿದ್ದುದರಿಂದ ಅರ್ಥ ಸ್ಫುರಿಸುತ್ತಿತ್ತು, ಪಾತ್ರಗಳು ಜೀವಂತವಾಗುತ್ತಿದ್ದುವು.

ಬಿ.ಎಂ.ಶ್ರೀ. 'ಇಂಗ್ಲಿಷ್ ಸೆಮಿನಾರ್' ಎಂಬ ವ್ಯಾಸಂಗ ಗೋಷ್ಠಿಯನ್ನು ಸ್ಥಾಪಿಸಿದರು. ಪ್ರತಿಯೊಂದು ವಾರವೂ ಗೋಷ್ಠಿ ಸೇರಿ ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಉತ್ತಮ ಕೃತಿಗಳನ್ನು ಚರ್ಚೆಗೆ ಆಯ್ದುಕೊಳ್ಳುತ್ತಿತ್ತು. ವರ್ಡ್ಸ್‌ವರ್ತ್‌ನ 'Preface to Lyrical Ballads' ಮ್ಯಾಥ್ಯೂ ಅರ್ನಾಲ್ಡ್‌ನ 'Culture and Anarchy' ಮುಂತಾದ ಕೃತಿಗಳ ಬಗ್ಗೆ ಯಾರಾದರೂ ಒಬ್ಬ ವಿದ್ಯಾರ್ಥಿಯು ಪ್ರಧಾನ ಪ್ರಬಂಧವನ್ನು ಮಂಡಿಸುತ್ತಿದ್ದರು. ಅದರ ಬಗ್ಗೆ ಚರ್ಚೆ ನಡೆದ ನಂತರ ಬಿ.ಎಂ.ಶ್ರೀ. ಕೊನೆಯಲ್ಲಿ ಸಮಾರೋಪ ಮಾಡುತ್ತಿದ್ದರು. ಅವರ ಭಾಷಣ ಒಂದು ರಸದೌತಣವಾಗುತ್ತಿತ್ತು.

ಅವರು ತರಗತಿಯ ಪಾಠವನ್ನು ನಿಗದಿಯಾದ ಅವಧಿಯಲ್ಲೇ ತೆಗೆದುಕೊಳ್ಳುತ್ತಿದ್ದರು. ಯಾವ ಕಾರಣಕ್ಕಾಗಲಿ, ಮುಂಚೆಯಾಗಲಿ, ಅನಂತರವಾಗಲಿ ತೆಗೆದುಕೊಳ್ಳುತ್ತಿರಲಿಲ್ಲ. ಅವರ ಕೊಠಡಿಯಲ್ಲಿ ಕೂತುಕೊಂಡಾಗ ಧ್ಯಾನಮಗ್ನರಾದಂತೆ ಕಾಣುತ್ತಿತ್ತು. ಒಮ್ಮೆ ನಮಗೆ ಬರಬೇಕಾಗಿದ್ದ ಉಪಾಧ್ಯಾಯರು ರಜದಲ್ಲಿದ್ದರು. ಅವರ ಪೀರಿಯಡ್‌ನ್ನು ಬಿ.ಎಂ.ಶ್ರೀ. ತೆಗೆದುಕೊಂಡರೆ ನಮಗೆ ಬೇಗ ಬಿಡುವು ಸಿಗುವುದೆಂಬ ಆಸೆಯಿಂದ ಬಿ.ಎಂ.ಶ್ರೀ.ಯವರನ್ನು ಸಂಕೋಚದಿಂದ ಕೇಳಿದೆವು. ಅವರು ಆಗುವುದಿಲ್ಲ ಎಂದು ಉತ್ತರಕೊಟ್ಟು ನಮ್ಮನ್ನು ಕಳಿಸಿಕೊಟ್ಟರು. ಅಂದಿನ ವೇಳಾಪಟ್ಟಿಯಂತೆ ಕ್ರಮವಾಗಿ ತರಗತಿಗೆ ಹೋದಾಗ ಬಿ.ಎಂ.ಶ್ರೀ. ಹೇಳಿದರು : "ನಿಮ್ಮ ತರಗತಿಯ ಪಾಠಕ್ಕೆ ಮಾನಸಿಕ ಸಿದ್ಧತೆಮಾಡಿಕೊಳ್ಳುತ್ತಿದ್ದೆ. ನನ್ನ ಭಾವನೆಗಳನ್ನು ಮೆಲುಕು ಹಾಕುತ್ತಿದ್ದೆ. ನಾನು ಸುಮ್ಮನೆ ಕೂತಿದ್ದನ್ನು ನೋಡಿ ನನ್ನನ್ನು ತೊಂದರೆ ಪಡಿಸಬೇಡಿ." ಇದು ಅವರು ಪಾಠ ಹೇಳುತ್ತಿದ್ದ ಮನೋಧರ್ಮ. ಪಾಠ ಹೇಳುವುದು ಅವರಿಗೆ ಪವಿತ್ರ ಕೈಂಕರ್ಯ ವಾಗಿತ್ತು.

ಬಿ.ಎಂ.ಶ್ರೀ. ವರ್ಷದ ಕೊನೆಯಲ್ಲಿ ಇಂಟರ್‌ಮೀಡಿಯೆಟ್ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ವಾಗಿಡುತ್ತಿದ್ದ ಷೇಕ್ಸ್‌ಪಿಯರ್ ನಾಟಕ ಕುರಿತು 'ರಿವಿಷನ್' ಉಪನ್ಯಾಸ ಕೊಡುತ್ತಿದ್ದರು. ನೂರಾರು ವಿದ್ಯಾರ್ಥಿಗಳು ಆಸಕ್ತಿಯಿಂದ ನೆರೆಯುತ್ತಿದ್ದರು. ಬೆಳಿಗ್ಗೆ ೯-೩೦ ಗಂಟೆಗೆ ಪ್ರಾರಂಭವಾಗುತ್ತಿದ್ದ ಉಪನ್ಯಾಸ ಆರೇಳು ಗಂಟೆ ನಿರರ್ಗಳವಾಗಿ ಸಾಗುತ್ತಿತ್ತು. ಮಧ್ಯೆ ಸ್ವಲ್ಪ ಬಿಡುವು ಕೊಡುತ್ತಿದ್ದರು. ಆರೇಳು ಗಂಟೆ ಕಾಲ ಷೇಕ್ಸ್‌ಪಿಯರ್ ನಾಟಕಲೋಕಕ್ಕೆ ಕೊಂಡೊಯ್ದು ಒಂದು ರಸಯಾತ್ರೆಯನ್ನೇ ಮಾಡಿಸುತ್ತಿದ್ದರು.

ಬಿ.ಎಂ.ಶ್ರೀ. ನಿವೃತ್ತರಾದ ದಿನ ಕರ್ನಾಟಕ ಸಂಘದ ಆಶ್ರಯದಲ್ಲಿ 'ಪ್ರವೃತ್ತಿ-ನಿವೃತ್ತಿ' ಎಂಬ ವಿಷಯವನ್ನು ಕುರಿತು ಭಾಷಣ ಮಾಡಿದರು. ಕಿಕ್ಕಿರಿದು ವಿದ್ಯಾರ್ಥಿಗಳು ಸೇರಿದ್ದರು. ಅಂದು ಅವರ ಜೀವನ ದೃಷ್ಟಿಯನ್ನೇ ವಿವರಿಸಿದಂತೆ ನನಗೆ ಅನ್ನಿಸಿತು.

ಹೀಗೆ ಒಂದು ವರ್ಷ ಬಿ.ಎಂ.ಶ್ರೀ. ಅವರ ವಿದ್ಯಾರ್ಥಿಯಾಗಿ ಅವರ ಪರಿಪಕ್ವವಾದ ವಿದ್ವತ್ತಿನ ಲಾಭವನ್ನು ಪಡೆದೆನು. ಅವರ ಜೀವನ ಅಧ್ಯಯನ-ಅಧ್ಯಾಪನಕ್ಕೆ ಮೀಸಲಾಗಿದ್ದ

ಸಾರಸ್ವತ ತಪಸ್ಸು. ಆ ತಪಸ್ಸು ನಾಡು-ನುಡಿಯ ಶ್ರೇಯಸ್ಸನ್ನು ಸಾಧಿಸಿತು. ಒಮ್ಮೆ ಬಿ.ಎಂ.ಶ್ರೀ. ಸೆಂಟ್ರಲ್ ಕಾಲೇಜು ಗಣಿತಶಾಸ್ತ್ರ ಭವನದಲ್ಲಿ ಷೇಕ್ಸ್‌ಪಿಯರ್ ಕುರಿತು ಉಪನ್ಯಾಸ ಮಾಡಿದರು. ಪ್ರಿನ್ಸಿಪಾಲ್ ಮ್ಯಾಕಿಂಟಾಷ್ ಆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ವಿದ್ವತ್ಪೂರ್ಣವಾದ ಉಪನ್ಯಾಸ ಕೇಳಿ ಅಧ್ಯಕ್ಷರು ಭಾವಪರವಶವಾಗಿದ್ದಂತೆ ತೋರಿತು. ಅವರ ಮೆಚ್ಚಿಕೆಯನ್ನು ಈ ಮಾತುಗಳಲ್ಲಿ ವ್ಯಕ್ತಪಡಿಸಿದರು : "After listening to Prof. B.M.S. I am inclined to believe in reincarnation. Perhaps he was a professor at Oxford in his previous birth ! I should like to be his student in my next birth." ಅಂತಹ ಮಹನೀಯರಿಗೆ, ನನ್ನ ಪೂಜ್ಯ ಗುರುಗಳಿಗೆ, ಅವರ ಜನ್ಮಶತಮಾನೋತ್ಸವದ ದಿನ ಭಕ್ತಿಯ ಕಾಣಿಕೆಯನ್ನರ್ಪಿಸುವುದು ನನ್ನ ಪವಿತ್ರ ಕರ್ತವ್ಯ.

❖

# ಆದರ್ಶ ಗುರು

## (ಎಚ್. ಜಿ. ಸೂರ್ಯನಾರಾಯಣರಾವ್)

● *ಡಾ॥ ಪ್ರಧಾನ್ ಗುರುದತ್ತ*

೧೯೫೪ರಿಂದ ೫೬ರ ನಡುವಣ ಅವಧಿಯಲ್ಲಿ ನಾನು ತುಮಕೂರಿನಲ್ಲಿ ಇಂಟರ್‌ಮೀಡಿಯೆಟ್ ವಿದ್ಯಾರ್ಥಿಯಾಗಿದ್ದಾಗ, ಇಂಗ್ಲಿಷ್ ಅಧ್ಯಾಪಕ ವರ್ಗದವರಲ್ಲಿ ಎಚ್.ಜಿ. ಸೂರ್ಯನಾರಾಯಣರಾವ್ ಅವರೂ ಒಬ್ಬರಾಗಿದ್ದರು. ಅಷ್ಟೇ ಅಲ್ಲ ವಿಶಿಷ್ಟರೂ ಆಗಿದ್ದರು. ಅದಕ್ಕೆ ಕಾರಣವಾಗಿದ್ದುದು ಅವರ ಬೋಧನದ ಸರಳ ಹಾಗೂ ಆತ್ಮೀಯ ಶೈಲಿ. ಅವರ ಈ ಶೈಲಿಯಿಂದಾಗಿಯೇ ಅವರು ತುಂಬ ಜನಪ್ರಿಯರೂ ಆಗಿದ್ದರು. ನಮಗೆ ಅವರು ಬೋಧಿಸ ಬೇಕಾಗಿದ್ದುದು ಆಂಗ್ಲಕವಿಗಳ ಆಯ್ದ ಕವಿತೆಗಳ ಸಂಕಲನವನ್ನು. ಪ್ರತಿಯೊಂದು ಕವನವನ್ನು ಬೋಧಿಸುವಾಗಲೂ ಕವಿಯ ಸಂಕ್ಷಿಪ್ತ ಪರಿಚಯ, ಆತನ ಸಾಧನೆಯ ವೈಶಿಷ್ಟ್ಯ, ಆತನ ವಿಶಿಷ್ಟ ರಚನೆಗಳು, ಅವುಗಳಲ್ಲಿ ಪ್ರಕೃತ ಕವನವೂ ಸೇರುತ್ತದೆಯೇ ಇಲ್ಲವೆ, ಪ್ರಕೃತ ಕವನದ ರಚನೆಗೆ ವಿಶಿಷ್ಟವಾದ ಹಿನ್ನೆಲೆ ಏನಾದರೂ ಇದೆಯೇ, ಆ ಕವನದ ಆಶಯವೇನು, ಅದನ್ನು ನಿರೂಪಿಸುವಲ್ಲಿ ಆತ ಎಷ್ಟು ಪರಿಣಾಮಕಾರಿಯಾಗಿದ್ದಾನೆ, ಆ ಪರಿಣಾಮವನ್ನು ಉಂಟುಮಾಡುವಲ್ಲಿ ಕಾವ್ಯದ ಯಾವ ಅಂಶಗಳು–ರೂಪಕಗಳೂ, ಉಪಮೆಗಳು, ಅಭಿವ್ಯಕ್ತಿಯ ವಿಧಾನ, ಶಬ್ದಗಳ ಅರ್ಥಪೂರ್ಣವಾದ ಬಳಕೆ ಇತ್ಯಾದಿ–ನೆರವಾಗಿವೆ. ಇವುಗಳಿಂದ ಒಟ್ಟಾರೆ ಯಾಗಿ ಕಾವ್ಯಸೌಂದರ್ಯ ಹೇಗೆ ಮೂಡಿ ಬಂದಿದೆ ಈ ಎಲ್ಲ ಅಂಶಗಳನ್ನೂ ಸರಳವಾಗಿ ಮನಮುಟ್ಟಿಸುವ ವಿಧಾನ ಅವರಿಗೆ ವಿಶಿಷ್ಟವಾಗಿತ್ತು. ಎಲ್ಲ ಕವನಗಳನ್ನೂ ಒಂದೇ ಬಗೆಯಲ್ಲಿ ನಿರೂಪಿಸುವ ಯಾಂತ್ರಿಕ ವಿಧಾನವನ್ನೇನೂ ಅವರು ಅನುಸರಿಸುತ್ತಿರಲಿಲ್ಲ. ವಿಶಿಷ್ಟಾಂಶ ವೊಂದನ್ನೋ ಸುಂದರವಾದ ಅಭಿವ್ಯಕ್ತಿಯಿಂದಾಗಿ ಓದುಗರ ಮನಸ್ಸಿನಲ್ಲಿ ದೀರ್ಘಕಾಲದ ವರೆಗೆ ಉಳಿಯಬಹುದಾಗಿರುವಂಥ ಸ್ವಾರಸ್ಯಪೂರ್ಣ ಉಕ್ತಿಯೊಂದನ್ನೋ ಹಿಂದೆ ತಾವು ಬೋಧಿಸಿದ ಇನ್ನೊಬ್ಬ ಕವಿಗಿಂತ ಯಾವ ರೀತಿಯಲ್ಲಿ ಈತ ಭಿನ್ನವಾಗಿದ್ದಾನೆ ಎಂಬುದನ್ನು ಎತ್ತಿತೋರಿಸುವಂಥ ಸಂಗತಿಯನ್ನೋ ಎತ್ತಿಕೊಂಡು ಉಳಿದ ಅಂಶಗಳನ್ನು ಯುಕ್ತ ರೀತಿಯಲ್ಲಿ ಅಳವಡಿಸಿಬಿಡುವ ಬೋಧನ ಚಾತುರ್ಯವನ್ನು ಅವರು ಮೆರೆಯುತ್ತಿದ್ದರು. ಇಂಥ ವೈಶಿಷ್ಟ್ಯಪೂರ್ಣ ಅಂಶಗಳನ್ನು ವಿದ್ಯಾರ್ಥಿಗಳೇ ಗುರುತಿಸುವಂತೆ ಮಾಡುವ ಪ್ರಯತ್ನವನ್ನೂ ಅವರು ಮಾಡುತ್ತಿದ್ದರು. ಅಂಥ ಸಂದರ್ಭಗಳಲ್ಲಿ ಅವರು ನೀಡುತ್ತಿದ್ದ ಉತ್ತೇಜನವೂ– "That's it. You have rightly caught the point. Could you explain it further?" ಇತ್ಯಾದಿ – ನಾವು ಸಕ್ರಿಯವಾಗಿ ಬೋಧನೆಯಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತಿತ್ತು.

ಹೀಗಾಗಿ, ಅವರ ಬೋಧನೆ ವ್ಯಾವಹಾರಿಕ ವಿಮರ್ಶೆಯೇ ಆಗಿರುತ್ತಿತ್ತು. ಕವನದ ಆಶಯ-ವೈಶಿಷ್ಟ್ಯಗಳು ನಮ್ಮ ಮನಸ್ಸಿನಲ್ಲಿ ಚೆನ್ನಾಗಿ ನೆಲೆ ನಿಂತುಬಿಡುತ್ತಿದ್ದುವು.

ತರಗತಿಯಲ್ಲಿ ಬಂದು ಹಾಜರಿಯನ್ನು ತೆಗೆದುಕೊಂಡ ಬಳಿಕ ಉಳಿಯುವ ಸುಮಾರು ೪೦-೪೫ ನಿಮಿಷಗಳ ಅವಧಿಯಲ್ಲಿ (ನಮ್ಮ ತರಗತಿಯಲ್ಲಿ ಸುಮಾರು ೧೨೦ ವಿದ್ಯಾರ್ಥಿಗಳಿದ್ದರು !) ಯಾಂತ್ರಿಕವಾಗಿ 'ಬೈರಿಗೆ'ಯನ್ನು ಕೊರೆಯುವ ವಿಧಾನ ಎಚ್‌ಜಿಎಸ್ ಅವರದಾಗಿರಲಿಲ್ಲ ಎಂಬುದು ಮೇಲೆ ಕಾಣಿಸಿರುವ ಉಲ್ಲೇಖದಿಂದ ಸ್ಪಷ್ಟವಾಗುತ್ತದೆಯಷ್ಟೆ ಸಕ್ರಿಯವಾಗಿ ನಾವು ಪಾಲ್ಗೊಳ್ಳುವಂತೆ ಮಾಡುವ ಅವರ ವಿಧಾನದಿಂದಾಗಿ, ಮಾತಾಡುವ ಸಂದರ್ಭದಲ್ಲಿ ನಾವು ಅನೇಕ ತಪ್ಪುಗಳನ್ನು ಮಾಡುತ್ತಿದ್ದುದೂ ಉಂಟು. ಇದು ಸಹಜವಾಗಿಯೂ ಇತ್ತು. "ನಿಮ್ಮನ್ನು ಪಾಸು ಮಾಡಿದವನು ಅದಾವ ಮೂರ್ಖನೊ? Wren and Martin ಸರಿಯಾಗಿ ಅಭ್ಯಾಸ ಮಾಡಿಕೊಂಡು ಬನ್ನಿ." "ಇಲ್ಲದಿದ್ದರೆ ನಿಮ್ಮ ಜನ್ಮೇಪಿ ನೀವು ಇಂಟರ್ ಪಾಸು ಮಾಡಲಾಗುವುದಿಲ್ಲ" ಎಂದೆಲ್ಲ ಹೀಯಾಳಿಸುವುದಕ್ಕೆ ಬದಲಾಗಿ ಆ ತಪ್ಪುಗಳನ್ನು ಗುರುತಿಸಿಕೊಂಡು ಕೊನೆಯಲ್ಲಿ ಅವುಗಳನ್ನೆಲ್ಲ ವಿಶ್ಲೇಷಿಸಿ ಅವನ್ನು ಹೇಗೆ ನಿವಾರಿಸಿಕೊಳ್ಳಬಹುದೆಂಬುದನ್ನೂ ತಿಳಿಯಹೇಳುತ್ತಿದ್ದರು. ಅವರು ಹೇಳುತ್ತಿದ್ದ sequence of numbers, sequence of tense, agreement of the subject and predicate ಇತ್ಯಾದಿ ಮಾತುಗಳು ನಾಲ್ಕಾರು ದಶಕಗಳ ಬಳಿಕವೂ ನನ್ನ ಮನಸ್ಸಿನಲ್ಲಿ ಉಳಿದಿವೆ. ತಪ್ಪುಗಳನ್ನು ಮಾಡಿದ್ದಕ್ಕಾಗಿ ಅವರೆಂದೂ ತರಗತಿಯಲ್ಲಿ ನಮ್ಮನ್ನು ಅವಮಾನಿಸಿದ್ದಿಲ್ಲ. ನಮ್ಮ ಭಾಷೆ-ಶೈಲಿ-ಪ್ರಭುತ್ವಗಳನ್ನು ಉತ್ತಮಪಡಿಸಿಕೊಳ್ಳುವ ಇನ್ನೊಂದು ವಿಧಾನವನ್ನೂ ಅವರು ಹೇಳಿಕೊಟ್ಟರು. "ನಿತ್ಯವೂ ಇಂಗ್ಲಿಷ್ ಪತ್ರಿಕೆಯೊಂದನ್ನು ಓದಿ, ಎಚ್ಚರಿಕೆಯಿಂದ ಓದಿ, ಗೊತ್ತಾಗದೆ ಇದ್ದರೂ ಪರವಾಗಿಲ್ಲ. ಮತ್ತೆ ಮತ್ತೆ ಓದಿ. ಒಮ್ಮೆ ಓದಿದಾಗ ಅರ್ಥವಾಗದೆ ಇದ್ದದ್ದು, ಮತ್ತೆ ಓದಿದಾಗ ಅರ್ಥವಾಗಬಹುದು. ಅರ್ಥವಾಗದ ಶಬ್ದಗಳನ್ನು ತಿಳಿದುಕೊಳ್ಳಲು ಕೋಶವನ್ನು ತೆರೆದುನೋಡಿ."

ಎಚ್‌ಜಿಎಸ್ ಅವರ ಅಧ್ಯಾಪನ ವಿಧಾನವನ್ನು ಹಾಗೂ ಅವರು ಆತ್ಮೀಯವಾಗಿ ವಿದ್ಯಾರ್ಥಿಗಳನ್ನು ನಡೆಸಿಕೊಳ್ಳುತ್ತಿದ್ದ ಬಗೆಯನ್ನೂ ಹೇಳಿದೆನಷ್ಟೆ. ಆದರೆ, ತರಗತಿಯಲ್ಲಿ ವಿದ್ಯಾರ್ಥಿಗಳು ಗಮನಕೊಟ್ಟು ಪಾಠಗಳನ್ನು ಕೇಳಬೇಕೆಂದು ಅವರು ಅಪೇಕ್ಷಿಸುತ್ತಿದ್ದರು. ಅಂಥ 'ಉಪೇಕ್ಷೆ'ಯ ಸಂದರ್ಭಗಳಲ್ಲಿ ಅವರು ಹಾಸ್ಯಮಯವಾಗಿ ವಿದ್ಯಾರ್ಥಿಗಳನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದುದೂ ಉಂಟು. ನನ್ನದೇ ಒಂದು ಅನುಭವವನ್ನು ಇಲ್ಲಿ ಉದಾಹರಿಸಬಯಸುತ್ತೇನೆ. ಇಂಟರ್‌ಮೀಡಿಯೆಟ್ ಮೊದಲ ವರ್ಷದಲ್ಲಿ ನಾನು ಪ್ರತಿದಿನವೂ ಕುಣಿಗಲ್ಲಿನಿಂದ ತುಮಕೂರಿಗೆ ಬಸ್ಸಿನಲ್ಲಿ ಓಡಾಡುತ್ತಿದ್ದೆ. ೨೫ ಮೈಲಿ ದೂರವೇ ಆದರೂ ಬಸ್ಸು ಎರಡು ಘಂಟೆಗಳಿಗೂ ಹೆಚ್ಚುಕಾಲ ತೆಗೆದುಕೊಳ್ಳುತ್ತಿತ್ತು. ನಮ್ಮ ತಂದೆ ಹೆಲ್ತ್‌ಇನ್‌ಸ್ಪೆಕ್ಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಕುಣಿಗಲ್ ಪುರಸಭೆಯ ಅಂದಿನ ಅಧ್ಯಕ್ಷರಾಗಿದ್ದ ಗುಂಡಣ್ಣನವರು, ನಮ್ಮ ಬಡತನದ ಪರಿಸ್ಥಿತಿಯನ್ನು ಅರಿತು. ಅವರ ಮಾತು ನಡೆಯುತ್ತಿದ್ದ 'ಮೋಟಾರ್ ಸರ್ವೀಸ್'ನಲ್ಲಿ ನನಗೆ ಉಚಿತ ಪಾಸ್ ಕೊಡಿಸಿದ್ದರು. ಆ ಬಸ್ಸು ಬೆಳಗ್ಗೆ ೬ ಘಂಟೆಗೇ ಕುಣಿಗಲ್ಲನ್ನು ಬಿಡುತ್ತಿತ್ತು. ಹೀಗಾಗಿ ಬೆಳಗಿನ ಜಾವವೇ ಎದ್ದು, ಬಸ್ ಹಿಡಿದು ಪ್ರಯಾಣ ಮಾಡಿಬರುತ್ತಿದ್ದೆ. ನಮ್ಮ ತರಗತಿಗಳು

೯-೩೦ಕ್ಕೆ ಪ್ರಾರಂಭವಾಗುತ್ತಿದ್ದುವು. ಇಂಥ ಒಂದು ತರಗತಿಯಲ್ಲಿ ಒಂದು ಬೆಳಗ್ಗೆ, ಅರಿವಿಲ್ಲದೆಯೇ ಆಕಳಿಸಿದ್ದೆ. ಜೊತೆಗೆ, "ಕೊನೆಯ ಬೆಂಚಿನಲ್ಲಿ ಕುಳಿತಿದ್ದೇನೆ. ನಾನು ಆಕಳಿಸಿದರೂ ಅವರಿಗೆ ಅದನ್ನು ಗಮನಿಸಲು ಹೇಗೆ ಸಾಧ್ಯವಾದೀತು" ಎಂಬ ಭಾವನೆಯೂ ನನ್ನ ಮನಸ್ಸಿನಲ್ಲಿತ್ತೇನೋ! 'ಅದೃಷ್ಟವಶಾತ್' ಇದು ಅವರ ಕಣ್ಣಿಗೆ ಬಿತ್ತು. ತಮ್ಮ ಪಾಠದ ಸರಣಿಯನ್ನು ಬಿಟ್ಟು, ಅವರೆಂದರು, "Do you know or have you seen how a hippopotamus yawns?" ಕ್ಷಣಕಾಲ ಬಿಟ್ಟು ಅವರೆ ಮುಂದುವರಿಸುತ್ತ ಹೇಳಿದರು. "With its mouth wide open, like my friend in the last bench in the right corner by the window." ನಾನು ನಾಚಿಕೆಯಿಂದ ತಲೆ ಬಾಗಿಸಿ ನಿಂತುಕೊಂಡು, "I am sorry" ಎಂದು ಕ್ಷಮೆ ಯಾಚಿಸಿದೆ. ಅವರು ತಮ್ಮ ಪಾಠವನ್ನು ಮುಂದುವರಿಸಿದರು. ಮುಂದಿನ ಪಾಠವನ್ನು ಕೇಳಲಾರದಷ್ಟು ಅಸಮಾಧಾನ. ಅಸಹನೆ ನನ್ನ ಮನಸ್ಸಿನಲ್ಲಿ ತುಂಬಿಕೊಂಡಿದ್ದುವು. "ನಾನು ಆಕಳಿಸಿದರೆ ಇವರಿಗೇನು ನಷ್ಟ (ಕಷ್ಟ) ಆಯಿತು? ಇದು ಯಾವ ಮಹಾಪರಾಧ? ಇದಕ್ಕಾಗಿ ಇಡೀ ತರಗತಿಯ ಮುಂದೆ ನನಗೆ ಅವಮಾನ ಮಾಡಬೇಕಾಗಿತ್ತೇ?" ಎಂದು ನನ್ನ ಮನಸ್ಸು ಕುದಿಯುತ್ತಿತ್ತು. ತರಗತಿ ಮುಗಿದ ಮೇಲೆ, ಅವರು ನನ್ನನ್ನು ಕರೆದು ಹೇಳಿದರು, "ನೋಡಿದರೆ ನೀನು ಪ್ರತಿಭಾವಂತ ವಿದ್ಯಾರ್ಥಿಯಂತೆ ಕಾಣುತ್ತೀಯೆ. ಕೊನೆಯ ಬೆಂಚಿನಲ್ಲಿ ಯಾಕೆ ಕುಳಿತುಕೋತಿಯಾ?" ನಾನು ಹೇಳಿದೆ, "ನಾನು ಬರುವ ಹೊತ್ತಿಗೆ ಮುಂದಿನ ಬೆಂಚುಗಳೆಲ್ಲ ಭರ್ತಿಯಾಗಿರುತ್ತವೆ." "ಐದು ನಿಮಿಷ ಮುಂಚಿತವಾಗಿ ಬಂದರೆ ಆಗದೆ?" ಎಂದು ಅವರು ಕೇಳಿದರು. ನನ್ನ ಪರಿಸ್ಥಿತಿಯನ್ನು ಅವರಿಗೆ ವಿವರಿಸಿದೆ. "ಸಂಜೆಯೂ ೪-೩೦ಕ್ಕೆ ಆ ಬಸ್ಸು ಹೊರಟುಬಿಡುತ್ತೆ. ಅದರಿಂದ ೪-೧೫ರ ಹೊತ್ತಿಗೆ ನಾನು ಮೇಷ್ಟ್ರ ಕಣ್ಣುತಪ್ಪಿಸಿ, ಕಿಟಕಿಯನ್ನು ದಾಟಿಕೊಂಡು ಹೊರಗೆ ಹೋಗಿ ಬಿಡಬೇಕಾಗುತ್ತದೆ." ಅವರು ಸಹಾನುಭೂತಿಯಿಂದ ಹೇಳಿದರು. "I am sorry, if I have offended you. Try to sit in one of the front rows. I will speak to the lecturers concerned. Without any sense of guilt, you can go out from the main door itself." ಅಂದಿನಿಂದ ಅವರು ನನಗೆ ಆತ್ಮೀಯರಾದರು. ನನಗೆ ಅಗತ್ಯವಿದ್ದ ಎಲ್ಲ ರೀತಿಗಳಲ್ಲೂ ನೆರವಾದರು. ನನ್ನ ಪ್ರಗತಿ, ಇಂಟರ್‌ನಲ್ಲಿ ನಾನು ಗಳಿಸಿದ ಅಂಕಗಳು ಅವರ ಮೆಚ್ಚುಗೆ ಗಳಿಸಿದುವು.

ಮುಂದೆ ನಾನು ಮೈಸೂರು ವಿಶ್ವವಿದ್ಯಾನಿಲಯವನ್ನು ಸೇರಿದ ಮೇಲೆ ಹಾ. ಮಾ. ನಾಯಕರು ತುಂಬ ದೂರದೃಷ್ಟಿಯಿಂದ ಆರಂಭಿಸಿದ್ದ Kannada Writers and their Word ಮಾಲಿಕೆಯ ಗ್ರಂಥಗಳನ್ನು ಪರಿಶೀಲಿಸಿ ಅಚ್ಚಿಗೆ ಅಣಿಗೊಳಿಸುವ ಹೊಣೆಯನ್ನೂ ನಾನು ನಿರ್ವಹಿಸಬೇಕಾಗಿ ಬಂತು. ಆ ಹಸ್ತಪ್ರತಿಗಳನ್ನು ಪರಿಶೀಲಿಸಿದ ಸಂದರ್ಭದಲ್ಲಿ ಭಾಷೆ ಮತ್ತು ರಚನೆಯ ಕೆಲವೊಂದು ಅರೆಕೊರೆಗಳನ್ನು ಸರಿಪಡಿಸಬೇಕಾದ ಅನಿವಾರ್ಯತೆಯೂ ಉಂಟಾಯಿತು. ಅವನ್ನು ಹಾಮಾನಾ ಅವರ ಗಮನಕ್ಕೆ ತಂದಾಗ ಅವರೆಂದರು, "ಗುರುದತ್! ಈಗ ಹೇಗೂ ಸೂರ್ಯನಾರಾಯಣರಾಯರು ಇಲ್ಲಿಗೆ ಬಂದಿದ್ದಾರೆ. [ಆ ಹೊತ್ತಿಗೆ ಅವರು ಇಂಗ್ಲಿಷ್-ಕನ್ನಡ ನಿಘಂಟು ಪರಿಷ್ಕರಣ ಯೋಜನೆ ಸಂಪಾದಕರಲ್ಲಿ ಒಬ್ಬರಾಗಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗಕ್ಕೆ ಬಂದಿದ್ದರು.] ಅವರೊಡನೆ ಸಮಾಲೋಚಿಸಿ ಅಗತ್ಯ

ತಿದ್ದುಪಡಿಗಳನ್ನು ಮಾಡಿಬಿಡಿ. ನಾನು ಅವರೊಡನೆ ಮಾತಾಡುತ್ತೇನೆ. ನಾಳೆ ಯಾರೂ ನಮ್ಮನ್ನು ಆಕ್ಷೇಪಿಸಬಾರದಷ್ಟೆ !" ಎಚ್‌ಜಿಎಸ್ ಈ ದಿಕ್ಕಿನಲ್ಲಿ ನೆರವು ನೀಡಲು ಒಪ್ಪಿದರು. ಕಚೇರಿಯ ವೇಳೆಯನ್ನು ಹೊರತುಪಡಿಸಿ ಅವರೊಡನೆ ಹಲವಾರು ದಿವಸಗಳ ಕಾಲ ಗಂಟೆಗಟ್ಟಲೆ ಕುಳಿತು ಆ ಪರಿಷ್ಕಾರಗಳನ್ನು ಮಾಡಿದಾಗ, ಆಂಗ್ಲಭಾಷೆಯ ನೂರಾರು ಸೂಕ್ಷ್ಮಗಳನ್ನು ಅವರು ವಿವರಿಸಿ ಹೇಳಿದರು. ಹತ್ತಾರು ವರ್ಷಗಳ ಅಭ್ಯಾಸದಿಂದ ಲಭಿಸಬಹುದಾಗಿದ್ದ ಸೂಕ್ಷ್ಮ ಹೊಳಹುಗಳು ಅವರ ಸಾನ್ನಿಧ್ಯದಲ್ಲಿ ನನಗೆ ಲಭಿಸಿದುವು. ನನ್ನ ಸೂಕ್ಷ್ಮ ಸಂವೇದನೆಗಳನ್ನು ಗುರುತಿಸಿದ ಅವರು ಹಾಮಾನಾ ಅವರೊಂದಿಗೆ ಹೀಗೇ ಹೇಳಿದರಂತೆ : "His question marks are really question marks, I am astonished to know that he is so very sensitive to the nuances of the English language and its grammatical peculiarities."

ಅಧ್ಯಯನ ಸಂಸ್ಥೆ ನಡೆಸುತ್ತಿದ್ದ 'ಭಾಷಾಂತರ ಡಿಪ್ಲೋಮಾ' ತರಗತಿಗಳ ಸಂದರ್ಭದಲ್ಲಿಯೂ ಎಚ್‌ಜಿಎಸ್ ಅವರು ನಮಗೆ ತುಂಬ ನೆರವು ನೀಡಿದರು. ಭಾಷಾಂತರದ ತತ್ತ್ವ ಸಿದ್ಧಾಂತಗಳು ಇಂಗ್ಲಿಷಿನಲ್ಲಿ ಬೆಳೆದು ಬಂದಿರುವ ಬಗೆಯನ್ನೂ ಇಂಗ್ಲಿಷ್ ಸಾಹಿತ್ಯೇತಿಹಾಸದಲ್ಲಿ ಭಾಷಾಂತರಗಳು ವಹಿಸಿರುವ ಪಾತ್ರವನ್ನೂ ಕುರಿತು ಒಂದು ಪತ್ರಿಕೆಯ ಅಧ್ಯಾಪನ ಕಾರ್ಯವನ್ನು ಅವರು ಹಲವು ವರ್ಷಗಳ ಕಾಲ, ಯಾವುದೇ ಸಂಭಾವನೆಯನ್ನೂ ಅಪೇಕ್ಷಿಸದೆ, ನಿರ್ವಹಿಸಿದರು. ಆ ಕ್ಷೇತ್ರದಲ್ಲಿ ತಜ್ಞತೆ ಮತ್ತು ಪಾಂಡಿತ್ಯಗಳು ಅವರ ಕೈವಶವೇ ಆಗಿದ್ದರೂ ಅವರು ತುಂಬ ಸೌಜನ್ಯದಿಂದ, "ಈ ಬಗ್ಗೆ ನಾನು ಗಮನಿಸಬೇಕಾದ ಈಚಿನ ಗ್ರಂಥಗಳು ಲೇಖನಗಳು ಏನಾದರೂ ಇದ್ದರೆ ದಯವಿಟ್ಟು ತಿಳಿಸಿ", ಎಂದು ಕೇಳುತ್ತಿದ್ದರು. ಅವರಿಗೆ ಸುಲಭ ಲಭ್ಯವಾಗದೆ ಇದ್ದ ಮ್ಯಾಥ್ಯೂ ಆರ್ನಾಲ್ಡನ On Translating Homer and other Essays ಎಂಬ ಪುಸ್ತಕದ ಪ್ರತಿಯೊಂದನ್ನು ಅವರಿಗೆ ಕೊಟ್ಟಿದ್ದೆ. ಹಲವಾರು ವರ್ಷಗಳ ಬಳಿಕ, ಭಾಷಾಂತರ ಕಲೆಯನ್ನು ಕುರಿತ ನನ್ನ ಗ್ರಂಥವೊಂದರ ರಚನೆಯ ಸಂದರ್ಭದಲ್ಲಿ ಮತ್ತೆ ನನಗೆ ಆ ಗ್ರಂಥದ ಅಗತ್ಯಬಿದ್ದಾಗ ಅವರನ್ನು ಕೇಳಿದೆ. ಮನೆಯನ್ನೆಲ್ಲ ಜಾಲಾಡಿದರೂ ಅದು ಸಿಕ್ಕಲಿಲ್ಲ. ಯಾರೋ ಒಬ್ಬರು ಅವರಿಂದ ಅದನ್ನು ತೆಗೆದುಕೊಂಡು ಹೋಗಿದ್ದು, ಎಷ್ಟು ನೆನಪು ಮಾಡಿಕೊಂಡರೂ, ಆ ಹೆಸರು ನೆನಪಿಗೆ ಬಾರದೆ ಬಹುವಾಗಿ ಅವರು ತಪಿಸಿದರು; ತಮ್ಮಿಂದ ಪುಸ್ತಕಗಳನ್ನು ಸಾಮಾನ್ಯವಾಗಿ ಎರವಲು ಪಡೆಯುತ್ತಿದ್ದ ಹಲವರನ್ನು ವಿಚಾರಿಸಿದರೂ ಅದರಿಂದ ಏನೂ ಫಲವಾಗಲಿಲ್ಲ. ಆಗ ಅವರು ಹೇಳಿದರು, "ನನಗೆ ಏನೂ ಮಾಡಲು ತೋಚುತ್ತಿಲ್ಲ. ಕ್ಷಮಿಸಿ, ಆ ಪುಸ್ತಕ ಎಲ್ಲಿಯಾದರೂ ಸಿಕ್ಕುವುದಿದ್ದರೆ ದಯವಿಟ್ಟು ತರಿಸಿ, ಅದರ ಸಮಸ್ತ ವೆಚ್ಚವನ್ನೂ ನಾನು ಭರಿಸುತ್ತೇನೆ." ಈ ಘಟನೆಗಳು ಅವರ ಕರ್ತವ್ಯಪ್ರಜ್ಞೆ ಪ್ರಾಮಾಣಿಕತೆ ಮತ್ತು ಸಜ್ಜನಿಕೆಗಳ ಪ್ರತೀಕವಾಗಿವೆ ಎಂದು ನಂಬಿದ್ದೇನೆ.

ಎಚ್‌ಜಿಎಸ್ ಸ್ವಾನುಕಂಪೆಯ ಪ್ರವೃತ್ತಿಯಿಂದ ಎಂದೂ ನರಳಿದವರಲ್ಲ. ಬಾಳನ್ನು ಅದು ಬಂದಂತೆ ಎದುರಿಸುವ ಮನೋಧರ್ಮ ಅವರಲ್ಲಿತ್ತು. ಅಂತಿಮವಾಗಿ ಅವರನ್ನು ಬಲಿತೆಗೆದು

ಕೊಂಡ ವ್ಯಾಧಿ, ಮೂಗಿನಲ್ಲಿಯ ದುರ್ಮಾಂಸದ ರೂಪದಲ್ಲಿ ಕಾಣಿಸಿಕೊಂಡು, ಶಸ್ತ್ರಚಿಕಿತ್ಸೆಯ ಮೂಲಕ ಅದನ್ನು ತೆಗೆದುಹಾಕಬೇಕಾಗಿ ಬಂತು. ಆ ಸಂದರ್ಭದಲ್ಲಿ, ಅವರೊಮ್ಮೆ ಹೇಳಿದರು, "ಇಲ್ಲೇನಿದೆ. ಬರಿ ಹೊರ ರೂಪವಷ್ಟೆ. ಒಳಗೆ ಏನೂ ಇಲ್ಲ." ತುಂಬ ಸುಂದರ ಆಕಾರದ ವ್ಯಕ್ತಿಯಾಗಿದ್ದ ಅವರ ಮುಖದ ಮೇಲಿನ ಆ ಶಸ್ತ್ರಚಿಕಿತ್ಸೆಯ ಗೆರೆಯನ್ನು ನೋಡಿದಾಗ, ನಮಗೆಲ್ಲ ಸಂಕಟವಾಗುತ್ತಿದ್ದರೂ ಅವರು ಅದನ್ನು ಮನಸ್ಸಿಗೇ ಹಚ್ಚಿಕೊಂಡಿರಲಿಲ್ಲ. ಸುರೂಪಿಕ ಚಿಕಿತ್ಸೆಯ (plastic surgery) ವಿಚಾರವನ್ನು ಪ್ರಸ್ತಾವಿಸಿದಾಗ ಅವರೆಂದರು, "We should take things as they come in our lives. Why should I feel sorry or feel ashamed of the fact that I had to undergo this operation at this stage of my life?" ಅವರ ಈ ಅನುದ್ವಿಗ್ನಚಿತ್ತತೆ ಮತ್ತು ಸ್ಥಿತಪ್ರಜ್ಞತ್ವ ನನ್ನನ್ನು ಅಚ್ಚರಿಗೊಳಿಸಿವೆ. ಕೊನೆಯ ದಿನಗಳಲ್ಲಿ ನಾನು ಅವರನ್ನು ನೋಡಲಿಲ್ಲ. ಆದರೆ, ಬಾಳಿನ ಬಗೆಗಿನ ಅವರ ಈ ಧೋರಣೆ, ಮನೋಧರ್ಮಗಳಲ್ಲಿ ಯಾವ ಬದಲಾವಣೆಯೂ ಬಂದಿರಲಿಲ್ಲ ಅಥವಾ ಬಂದಿರುವುದು ಸಾಧ್ಯವಿಲ್ಲ ಎಂದೂ ನಂಬಿದ್ದೇನೆ.

ಎಚ್‌ಜಿಎಸ್ ಅವರ ಅಧ್ಯಯನಶೀಲತೆ ಮತ್ತು ಅಧ್ಯಯನಾತ್ಮಕ ವಿಷಯ ಸಂಗ್ರಹಣ ಕುತೂಹಲದ ಪ್ರವೃತ್ತಿಗಳೂ ನನ್ನ ಮೇಲೆ ಪ್ರಭಾವ ಬೀರಿವೆ. ಈಚಿನ ಮಹತ್ತ್ವದ ಗ್ರಂಥಗಳ ಬಗ್ಗೆ ಅಧ್ಯಯನಶೀಲರ ಗಮನವನ್ನು ಸೆಳೆಯುತ್ತಿದ್ದರಲ್ಲದೆ, ಇತರರಿಂದಲೂ ಅಂಥ ವಿಚಾರಗಳನ್ನು ಕೇಳಿ ತಿಳಿದುಕೊಳ್ಳುವ ಸೌಜನ್ಯ ವಿನಯಗಳೂ ಅವರಲ್ಲಿ ಅಪಾರವಾಗಿದ್ದುವು. ಇಂಥ ಅಧ್ಯಯನಶೀಲತೆ ಮತ್ತು ಮಾಹಿತಿ-ಕುತೂಹಲಗಳು ಇಲ್ಲದಿದ್ದಂಥ ವ್ಯಕ್ತಿಗಳ ವಿಚಾರದಲ್ಲಿ ಅವರು ತುಂಬ ನೊಂದುಕೊಳ್ಳುತ್ತಿದ್ದರಾದರೂ ಅದನ್ನು ಪ್ರತ್ಯಕ್ಷವಾಗಿಯಾಗಲೀ ಪರೋಕ್ಷವಾಗಿಯಾಗಲೀ ಎಂದೂ ಎತ್ತಿ ಆಡುತ್ತಿರಲಿಲ್ಲ. ಅವರು ಓದಿಲ್ಲ ಎಂಬುದು ಗೊತ್ತಾದರೆ, "ಆ ಪುಸ್ತಕ ನನ್ನ ಹತ್ತಿರ ಇದೆ. ನಾನು ಕೊಡುತ್ತೇನೆ. ಓದಿ ಕೊಡಿ," ಎಂದು ಹೇಳುವಂತೆಯೇ, "ಆ ಪುಸ್ತಕ ನಿಮ್ಮ ಬಳಿ ಇದ್ದರೆ ಕೊಡಿ, ತಪ್ಪದೆ ಓದಿ ಹಿಂತಿರುಗಿಸುತ್ತೇನೆ," ಎಂದೂ ಹೇಳುತ್ತಿದ್ದರು. ಅನೇಕ ವೇಳೆ ಕೊಂಡೂ ಓದುತ್ತಿದ್ದರು. ಇದು ಅವರ ವಿದ್ವತ್ ಪ್ರೀತಿಯ ಬಗೆಯಾಗಿತ್ತು.

ಈಗಲೂ, ಗುರುಗಳನ್ನು ನೆನೆದಾಗ ಅವರ ಶಿಷ್ಯ ವಾತ್ಸಲ್ಯ, ಅಂತಃಕರಣ, ವಿದ್ವತ್ತು, ಪ್ರೀತಿ, ಮಾನವೀಯತೆ, ಅಹಂಕಾರದೂರವಾದ ಸೌಜನ್ಯ, ವಿನಯ, ಆದರಗಳು, ಸಾಹಿತ್ಯ-ಸಂಸ್ಕೃತಿಗಳ ಬಗೆಗಿನ ಒಲವು, ಕರ್ತವ್ಯಪರಾಯಣತೆ, ಮೌಲ್ಯನಿಷ್ಠೆ ಮೊದಲಾದ ವಿಚಾರಗಳು ಮನಸ್ಸಿನಲ್ಲಿ ನುಗ್ಗಿ ಹರಿಯುತ್ತವೆ. ಹೃದಯ ತುಂಬಿ ಬರುತ್ತದೆ. ಅಂಥ ಆದರ್ಶ ಅಧ್ಯಾಪಕರನ್ನು ಪಡೆದ ಪುಣ್ಯಕ್ಕಾಗಿ ಹರ್ಷಿಸುತ್ತೇನೆ, ಹೆಮ್ಮೆ ಪಡುತ್ತೇನೆ.

# ಬದುಕಿಗೆ ಬೆಳಕಾದ ಗುರುಗಳು

## (ನಾ.ಶಿ. ಶಾಮಶಾಸ್ತ್ರಿ)

• ಸ. ಶ್ರೀನಿವಾಸನ್

ಸಾಮಾನ್ಯವಾಗಿ ಎಲ್ಲ ರಂಗಗಳಲ್ಲೂ 'ಸ್ವರ್ಣಯುಗ'ವೆಂಬ ಪದ ಬಳಸುತ್ತಾರೆ. ಇತಿಹಾಸದಲ್ಲಿ ಸ್ವರ್ಣಯುಗವೆಂದರೆ ಆ ಸಾಮ್ರಾಜ್ಯದ ಅವಧಿಯಲ್ಲಿ ಅತ್ಯುನ್ನತಿಯ ಕಾಲ ಎನ್ನುತ್ತಾರೆ. ಅಂಥ ಕಾಲದಲ್ಲಿ ಬದುಕಿ ಬಾಳಿದವರೇ ಭಾಗ್ಯವಂತರು. ಹಾಗೆಯೇ ಒಂದೊಂದು ಸಂಸ್ಥೆಯಲ್ಲಿಯೂ ಒಂದೊಂದು ಅವಧಿ ಸ್ವರ್ಣಯುಗವಿರುತ್ತದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಾನೋದುತ್ತಿದ್ದ ಕಾಲ ನಿಜಕ್ಕೂ ಸ್ವರ್ಣಯುಗವಾಗಿತ್ತು. ಏಕೆಂದರೆ ನಿಜಕ್ಕೂ ಚಿನ್ನದಂಥ ಪ್ರಾಧ್ಯಾಪಕರಿದ್ದ ಕಾಲ ಅದು. ದೊ.ಲ. ನರಸಿಂಹಾಚಾರ್, ಕುವೆಂಪು, ಕ.ವೆಂ. ರಾಘವಾಚಾರ್, ತ.ಸು. ಶಾಮಾರಾವ್, ಅನಂತರಂಗಾಚಾರ್, ಎಸ್.ವಿ. ಪರಮೇಶ್ವರಭಟ್ಟ, ಶಿವರಾಮಶಾಸ್ತ್ರಿ, ಸಿ. ಮಹಾದೇವಪ್ಪ, ಶ್ರೀಕಂಠಶಾಸ್ತ್ರಿ, ರಾಳ್ಳಪಲ್ಲಿ ಅನಂತಕೃಷ್ಣಯ್ಯ ಮೊದಲಾದ ಅತಿರಥ ಮಹಾರಥರು ಇದ್ದಕಾಲ. ಒಬ್ಬೊಬ್ಬರು ತಂತಮ್ಮ ಕ್ಷೇತ್ರದಲ್ಲಿ ಇತಿಹಾಸ ನಿರ್ಮಿಸಿದವರೇ ಆಗಿದ್ದರು. ಅಂಥವರೆಲ್ಲರ ವಿದ್ಯಾರ್ಥಿಯಾಗುವ ಭಾಗ್ಯ ನನಗೂ ನನ್ನ ಮಿತ್ರರಿಗೂ ದೊರಕಿದ್ದು ಅದೃಷ್ಟವೇ ಸರಿ. ನಮ್ಮ ತಂಡದಲ್ಲಿ ಇದ್ದವರೆಲ್ಲ ಸಹಕಾರಿಗಳೇ ಆಗಿದ್ದೆವು. ೧೯೫೦ರ ಆನರ್ಸ್ ಬ್ಯಾಚ್ ನಮ್ಮದು. ಸುಜನಾ, ಸ್ವಾಮಿ, ಶಾಸ್ತ್ರಿ, ಸರಸ್ವತಿ, ನಾನು ಮುಂತಾದ ಸಹಪಾಠಿಗಳೆಲ್ಲ ಸಹಕಾರಿಗಳೇ ಆಗಿದ್ದೆವು. ನಮ್ಮೂರ ಗುರುಗಳನ್ನು ಕುರಿತು ನನ್ನ ಸಹಪಾಠಿ ವ್ಯ. ಸ್ವಾಮಿ ಹೇಳುತ್ತಿದ್ದುದು ಹೀಗೆ: "ಒಬ್ಬರು ಕುಂತಕುಂತಲ್ಲಿ ನಿದ್ರೆಯಲ್ಲೂ ಕಾವ್ಯ ಬರೆಯುತ್ತಾರಂತೆ, ಇನ್ನೊಬ್ಬರು ಕನ್ನಡ ಸಂಶೋಧನೆಯ ಸಂಸ್ಥೆಯ ಎಲ್ಲ ಹಸ್ತಪ್ರತಿಗಳನ್ನು ಓದಿ ಅರಗಿಸಿಕೊಂಡಿರುವಂತೆ, ಮತ್ತೊಬ್ಬರು, ಗ್ರೀಕ್, ಜರ್ಮನ್, ಇಂಗ್ಲಿಷ್, ಕನ್ನಡ, ತಮಿಳು, ತೆಲುಗು ಭಾಷೆಗಳನ್ನು ಒಂದೇ ಉಸಿರಿಗೆ ಬಳಸಬಲ್ಲ ದೂರ್ವಾಸಮುನಿಗಳು, ಮತ್ತೊಬ್ಬರು ಎಲ್ಲ ಶಾಸನಗಳನ್ನು ಎಲ್ಲ ಪ್ರಪಂಚದ ದೇಶಗಳ ಚರಿತ್ರೆಯನ್ನೂ ಕಂಠಪಾಠ ಮಾಡಿಕೊಂಡಿರುವಂತೆ, ಇಂಥ ಮಿಥ್ ಮಹನೀಯರ ಮಧ್ಯದಲ್ಲಿ ವಿದ್ಯಾರ್ಥಿಗಳಾದ ನಾವೆಲ್ಲ ಚಿಳ್ಳೆಮಿಳ್ಳೆಗಳು! ನಮ್ಮ ಅಧ್ಯಾಪಕರನ್ನು ನೆನೆದ ಕೂಡಲೇ ನಮಗೆ ನೆನಪಾಗುವುದು ಅವರ ವೇಷಭೂಷಣ, ಪಾಠವೈಖರಿ, ಮಾನವೀಯತೆ ಗುಣಗಳು. ಈಗಿನ ಕಾಲದ ಅಧ್ಯಾಪಕರ ವೇಷಭೂಷಣದಲ್ಲಿ ನಮ್ಮ ಕಾಲದ ಅಧ್ಯಾಪಕರನ್ನು ಮೀರಿಸಬಹುದು, ಆದರೆ ಪಾಠವೈಖರಿ, ಮಾನವೀಯ ಗುಣಗಳು ವಿದ್ವತ್ತುಗಳಲ್ಲಿ ಅವರನ್ನು ನಾವಾರೂ ಸರಿಗಟ್ಟಲಾರೆವು. ನಮ್ಮ ಅಧ್ಯಾಪಕರು ನಿರ್ಮಿಸಿದ ಇತಿಹಾಸವನ್ನು ಮತ್ತಾರು ನಿರ್ಮಿಸಲು ಆಗುತ್ತಿಲ್ಲ. ಕುವೆಂಪು ಅಂದರೆ ಮಹಾಕವಿಗಳು, ರಾಷ್ಟ್ರಕವಿಗಳು, ಕವೆಂರಾ, ಗ್ರೀಕ್ ನಾಟಕಗಳನ್ನು ಕೊಟ್ಟವರು, ಶ್ರೀಕಂಠಶಾಸ್ತ್ರಿಗಳು ಇತಿಹಾಸದಲ್ಲಿ ಇತಿಹಾಸ

ನಿರ್ಮಿಸಿದವರು, ಎಸ್.ವಿ. ಪರಮೇಶ್ವರಭಟ್ಟರು. ಸಂಸ್ಕೃತ ಮಹಾಕವಿಗಳಾದ ಕಾಳಿದಾಸ, ಭಾಸರ ಸಮಗ್ರ ಕೃತಿಗಳನ್ನು ಕನ್ನಡಕ್ಕೆ ಭಟ್ಟಿ ಇಳಿಸಿದವರು.... ಹೀಗೆ ಕನ್ನಡ ಸಾಹಿತ್ಯ ಚರಿತ್ರೆಗಳಲ್ಲಿ ಕೆಲವು ಪುಟಗಳನ್ನು ತಮ್ಮದಾಗಿಸಿಕೊಳ್ಳುವಂತಹ ಕೃತಿಗಳನ್ನು ರಚಿಸಿದವರು. ಇಂಥವರ ವಿದ್ಯಾರ್ಥಿ ಆಗಿದ್ದುದು ನನ್ನ ಸೌಭಾಗ್ಯ.

ಒಬ್ಬೊಬ್ಬ ಗುರುಗಳ ಪಾಠದ ಬಗ್ಗೆ ವ್ಯಕ್ತಿತ್ವದ ಬಗ್ಗೆ ಹೇಳಲು ಹೊರಟರೆ ಅದೇ ಒಂದು ಗ್ರಂಥವಾದೀತು. ಆದಕಾರಣ ಒಂದೆರಡು ನೆನಪುಗಳನ್ನಷ್ಟೇ ದಾಖಲಿಸುತ್ತಿದ್ದೇನೆ.

ವಿ.ಟಿ. ತಿರುನಾರಾಯಣಯ್ಯಂಗಾರ್ ಅವರು ಚತುರ್ವೇದ ಪಾರಂಗತರಾಗಿದ್ದರು. ಉಭಯವೇದಾಂತಿಗಳು ತಮಿಳಿನಲ್ಲಿ ಹಲವಾರು ಪಾಂಡಿತ್ಯಪೂರ್ಣ ಗ್ರಂಥಗಳನ್ನು ರಚಿಸಿದ್ದಾರೆ. ಇವರು ತ್ರಿಮತಸ್ಥರಿಗೆ ಉಚಿತವಾಗಿ ಮುಂಜಿ ಮದುವೆಗಳನ್ನು ಮಾಡಿಸುತ್ತಿದ್ದರು. ಪಂಚೆ ಶಲ್ಯದ ಉಡುಪಿನಲ್ಲಿ ಪಾದರಕ್ಷೆ ಇಲ್ಲದೆ ಭಾರಿ ತ್ರಿನಾಮ ಧರಿಸಿ ಬರುತ್ತಿದ್ದರು. ಸಂಸ್ಕೃತ ವ್ಯಾಕರಣ, ಬಾಲಚರಿತವನ್ನು ಕಲಿಸುತ್ತಿದ್ದರು. ಒಂದು ಸಲ ಅವರ ಪಾಠ ಕೇಳಿದರೆ ನಮಗೆ ಹೃದ್ಗತವಾಗಿರುತ್ತಿತ್ತು. ಪಾಠದ ಬಗ್ಗೆ ಸಂದೇಹಗಳೇ ಬರುತ್ತಿರಲಿಲ್ಲ. ಒಮ್ಮೆ ಅವರು ವ್ಯಾಕರಣ ಪಾಠ ಮಾಡುತ್ತಿದ್ದಾಗ, ಸಂಸ್ಕೃತದಲ್ಲಿ ತ್ರಿವಚನಗಳೇಕೆ, ಏಕವಚನ ಬಹುವಚನ ಎರಡೇ ಸಾಕಲ್ಲವೇ? ಪ್ರಶ್ನೆ ಕೇಳಿದೆ. ಅದಕ್ಕೆ ಅವರು ನೋಡಿ ಸತಿಪತಿ ಎಂಬುದು ದ್ವಿವಚನವಲ್ಲದೆ ಸತಿಯರ ಪತಿಯರ ಬಹುವಚನ ಆದರೆ ಚೆನ್ನಾಗಿರುತ್ತದೆಯೇ ಅಥವಾ ಗಂಡ-ಹೆಂಡತಿ ಬೇರೆ ಬೇರೆ ಆಗಿ ಏಕವಚನ ಆದರೆ ಚೆನ್ನಾಗಿ ಇರುತ್ತದೆಯೇ? ಎಂದು ಕೇಳಿದರು. ಅದಕ್ಕೆ ದ್ವಿವಚನ ಇರುವುದು ಸೂಕ್ತ ಎಂದರು.

ಶಿವರಾಮ ಶಾಸ್ತ್ರಿಗಳು ನಮಗೆ ಇನ್ನೊಬ್ಬ ಸಂಸ್ಕೃತ ಅಧ್ಯಾಪಕರಾಗಿದ್ದರು. ದೊಡ್ಡ ವಿದ್ವಾಂಸರು ತೀನಂಶ್ರೀ, ಪುತಿನ ಮೊದಲಾದವರಿಗೆ ತುಂಬ ಆತ್ಮೀಯರಾದವರು, ಹರಟೆ ಕೂಟದಲ್ಲಿ ವಿನೋದವಾಗಿ ಪಾಲ್ಗೊಳ್ಳುತ್ತಿದ್ದರು. ಸ್ವಲ್ಪ ಅಹಂ ಇದ್ದರೂ ಅದನ್ನು ತೋರ್ಪಡಿಸಿಕೊಳ್ಳುತ್ತಿರಲಿಲ್ಲ. ಪುತಿನ ಅವರು ತಮ್ಮ ಅಹಲ್ಯೆ ಗ್ರಂಥವನ್ನು ಶಿವರಾಮಶಾಸ್ತ್ರಿಗಳಿಗೆ ಒಂದು ಕವಿತೆಯನ್ನೇ ಬರೆದು ಅರ್ಪಿಸಿದ್ದಾರೆ. ಅದರಲ್ಲಿರುವ ಕೆಲವು ಸಾಲುಗಳು ಹೀಗಿವೆ :

**"ನಿನ್ನದು ಗೆಳೆಯಾ, ತೀಕ್ಷ್ಣಾಭಿರುಚಿ-**
**ವರ ಕವಿಕಾವ್ಯ ರಸಸ್ನಾನ ಶುಚಿ**
**ಈ ಗುಣಕೀಕೃತಿ ಮಾಪಕವಲ್ಲ**
**ಆದೊಡೆ ನಿನ್ನೊಲುಮೆಗೆ ಹೊರತಲ್ಲ**
**ಅದರಿಂ ನೇಹಿಗ, ನಾನೆದೆಮಾಡಿ**
**ಕಾಣಿಕೆ ತಂದೆನು ಆತ್ಮೀಯ ಕೂಡಿ**
**ನಿನಗೀಕೃತಿಯಂ ಭವವಿಸ್ಮೃತಿಯಂ**
**ಮರ್ತ್ಯರಮರ್ತ್ಯ ಸ್ನೇಹ ಸ್ಮೃತಿಯಂ**

ನಿನಗಂಕಿತಮಾದೀ ರಸವಸ್ತು
ಸಹೃದಯ ಹೃದಯಾ ಮೋದಕಮಸ್ತು
ಶಿವಮಸ್ತು – *ನರಸಿಂಹ, ೨೫-೪-೧೯೪೦*

ಇದನ್ನು ಪುತಿನ ನಂ.ಶಿ.ಗೆ ಅರ್ಪಿಸಿದಾಗ ನಂ.ಶಿ. ಶೀನಂಶ್ರೀ ಅವರ ಬಳಿ ಅಂದರಂತೆ, ನಗುತ್ತಾ ನೋಡಯ್ಯಾ ಪುತಿನ ಶಿವರಾಮಶಾಸ್ತ್ರಿಗೆ ಅಹಲ್ಯೆಯನ್ನು ಅರ್ಪಿಸಿದ್ದಾನೆ! (ಹಲ ಎಂದರೆ ನೇಗಿಲು ಉಳದೇ ಇರುವ ನೇಗಿಲೇ ಅಹಲ > ಅಹಲ್ಯೆ)

ಚಂದ್ರಶೇಖರಭಟ್ಟ ಪಾಠಣಕರ ನನ್ನ ಇನ್ನೊಬ್ಬ ಸಂಸ್ಕೃತ ಅಧ್ಯಾಪಕರು ಘನವಿದ್ವಾಂಸರು ರಘುವಂಶ ಪಾಠ ಮಾಡಿದರು. ಆ ಕಾವ್ಯವನ್ನು ಆ ಕಾಲದ ಸಾಂಸ್ಕೃತಿಕ ಅಂಶಗಳಿಂದ ಸರಸವಾಗಿ, ವಿವರಿಸುತ್ತಿದ್ದರು. ಕಾವ್ಯದ ವ್ಯಾಕರಣ ಅಂಶಗಳನ್ನು ರಘುವಂಶದ ಪಾಠದ ನಡುನಡುವೆ ಹೇಳುತ್ತಿದ್ದರೆ, ಹೇಳುತ್ತಿದ್ದ ರೀತಿಯಲ್ಲಿ ಕಾವ್ಯದಷ್ಟೇ ರಸಾತ್ಮಕವಾಗಿರುತ್ತಿತ್ತು.

ಟಿ.ಎಸ್. ಗೋಪಾಲನ್ ಮತ್ತೊಬ್ಬ ಸಂಸ್ಕೃತ ಅಧ್ಯಾಪಕರು ಹಾಸ್ಯಪೂರ್ಣವಾಗಿ ಪಾಠ ಮಾಡುತ್ತಿದ್ದರು. ಭಾಸನ ಮಧ್ಯಮ ವ್ಯಾಯೋಗವನ್ನು ನಾಟಕೀಯವಾಗಿ ನಿರೂಪಿಸುತ್ತಿದ್ದರು. ಪಾಠದ ನಡುವೆ ಸಂದರ್ಭೋಚಿತವಾಗಿ ತಮ್ಮ ಜೀವನದ ಅನುಭವಗಳನ್ನು ತಿಳಿಸುತ್ತಿದ್ದರು. ಒಮ್ಮೆ ಅವರು ಪಾಠದ ನಡುವೆ ಹೇಳಿದ ಸಂಗತಿ ನೆನಪಾಗುತ್ತದೆ. ಚಿಕ್ಕ ವಯಸ್ಸಿನಲ್ಲೇ ಅವರ ಮಗ ತೀರಿಕೊಂಡಾಗ ಹೆಂಡತಿಗೆ ಸಮಾಧಾನ ಮಾಡುತ್ತ ಸಗರನ ದೃಷ್ಟಾಂತ ಹೇಳಿದರಂತೆ. ಸಗರ ಚಕ್ರವರ್ತಿ ತನ್ನ ೬೦೦೦೦ ಮಕ್ಕಳು ಸಾವನ್ನಪ್ಪಿದಾಗ ಏನೂ ಆಗದವನಂತೆ ಶಾಂತನಾಗಿದ್ದನಂತೆ ಆಗ ಮಂತ್ರಿ ಕೇಳಿದನಂತೆ "ದೊರೆಗಳೇ ಇಷ್ಟೊಂದು ಮಕ್ಕಳನ್ನು ಕಳೆದುಕೊಂಡ ನಿಮಗೆ ಏನೂ ದುಃಖವಾಗುತ್ತಲೇ ಇಲ್ಲವೇ? ಪುತ್ರಶೋಕ ನಿಮಗೆ ತಟ್ಟುತ್ತಲೇ ಇಲ್ಲವೇ? ಎಂದನಂತೆ. ಆಗ ಸಗರ ಚಕ್ರವರ್ತಿ ಸೇವಕನಿಗೆ ಹೇಳಿ ಬಿಳಿಸಾಸಿವೆ ತರಿಸಿ ಮಂತ್ರಿಗೆ ತಲೆಮೇಲೆ ಹಾಕುವಂತೆ ಹೇಳಿದನಂತೆ, ಮಂತ್ರಿ ತಲೆಮೇಲೆ ಹಾಕಿದ ಅದು ಚಟಪಟ ಚಟಪಟ ಅಂತ ಸಿಡಿಯಿತಂತೆ. ಹಾಗೆ ಹೆಂಡತಿಗೆ ಸಮಾಧಾನ ಹೇಳಿ ತಾವು ಪುತ್ರಶೋಕವನ್ನು ಸಹಿಸಿಕೊಂಡರಂತೆ. ಹೀಗೆ ಅವರು ಹೇಳಿದ ಅಂತಃಕರಣ ಕಲಿಸುವ ದೃಷ್ಟಾಂತಗಳು ಇಂದಿಗೂ ಮನಸ್ಸಿನಲ್ಲಿ ಹಸಿರಾಗಿವೆ. ಸ್ಕೌಟಿನಲ್ಲಿ ತಂಡ ನಿರ್ವಹಣೆಗೆ ಪ್ರಶಸ್ತಿ ಪಡೆದಿದ್ದ ಅವರು ನಾಟಕದಲ್ಲಿ ಸೊಗಸಾಗಿ ಪಾತ್ರವಹಿಸುತ್ತಿದ್ದರು. ಕೈಲಾಸಂನ 'ಪೋಲಿಕಿಟ್ಟಿ' ನಾಟಕದಲ್ಲಿ ಅವರು ವಹಿಸಿದ ಕಿಟ್ಟಿ ಪಾತ್ರವನ್ನು ಅವರು ನಿರ್ವಹಿಸಿದಂತೆ ಇನ್ನಾರಲ್ಲೂ ನಾನು ಕಂಡಿಲ್ಲ ವಿದ್ಯಾರ್ಥಿ ಪ್ರಿಯರಾಗಿದ್ದವರು ಅವರು.

ಆನರ್ಸ್ ತರಗತಿಗಳಲ್ಲಿ ಸಂಸ್ಕೃತ ಪಾಠ ಮಾಡಿದವರಲ್ಲಿ ಜಿ. ಸೀತಾರಾಮಯ್ಯ ಇನ್ನೊಬ್ಬರು. ಅವರು ಭಾಷಾಂತರ ಪಾಠ (ಇಂಗ್ಲಿಷ್–ಕನ್ನಡ) ಮಾಡುತ್ತಿದ್ದರು. ಒಮ್ಮೆ ಗಾಂಧಿ ಬಗ್ಗೆ ಒಂದೆರಡು ಪ್ಯಾರಾಗಳನ್ನು ಸಂಸ್ಕೃತದಿಂದ ಇಂಗ್ಲಿಷಿಗೆ ಮಾಡಿಸುವಾಗ ಒಬ್ಬ ವಿದ್ಯಾರ್ಥಿ ಹಿ ವಾಸ್ ನಾನ್ ಕಾಂಟ್ರಿವರ್ಷಿಯಲ್ ಪರ್ಸ್‌ನ್ ಎಂಬುದನ್ನು ಅನುವಾದಿಸುವಾಗ ಅವನು ಎಂದು ಗಾಂಧಿಯವರ ಬಗ್ಗೆ ಅನುವಾದಿಸಿದಾಗ ಅವರು ಎಂದಿರಬೇಕು ಗೌರವಾರ್ಥ

ವಚನದಲ್ಲಿ ಎಂದಾಗ ಆ ವಿದ್ಯಾರ್ಥಿ ಅವರು ಎಂದರೆ ಬಹುವಚನ ಅಲ್ಲವೇ? ಎಂದು ವಾದಿಸಿದಾಗ ಮಹಾದೇವಪ್ಪನವರು ಕಾಲೇಜ್ ಟ್ರಾನ್ಸ್‌ಲೇಷನ್ ಗ್ರಂಥ ಓದಿ ಆಮೇಲೆ ಮಾತಾಡು ಎಂದರು.

ನನ್ನ ಗುರುಗಳಲ್ಲಿ ಒಬ್ಬೊಬ್ಬರು ಒಂದೊಂದು ವೈಶಿಷ್ಟ್ಯ ಹೊಂದಿದ್ದರು. ಆ ಪೈಕಿ ಕುವೆಂಪು ಅವರದು ಬರಹ-ಮಾತು-ನಡವಳಿಕೆ ಎಲ್ಲದರಲ್ಲೂ ಅವರದೇ ಆದ ಒಂದು ಛಾಪಿತ್ತು. ಅದು ನಮಗೆಲ್ಲ ಆದರ್ಶವೂ ಆಗಿತ್ತು. ಸ್ಫೂರ್ತಿಯೂ ಆಗಿತ್ತು. ನನ್ನ ಪರಿಚಯ ಕುವೆಂಪು ಅವರಿಗೆ ಮೇಷ್ಟ್ರ ಮಗ ಆಗಿ ಪರಿಚಯವಾಗಿತ್ತು. ನಾನು ಕಾಲೇಜಿನಲ್ಲಿ ಅವರ ಶಿಷ್ಯನಾಗುವ ಮೊದಲೇ ಪರಿಚಯವಾಗಿರಲು ಕಾರಣವೆಂದರೆ, ಕುವೆಂಪು ಅವರ ಮಕ್ಕಳಾದ ಪೂರ್ಣಚಂದ್ರ ತೇಜಸ್ವಿ ಮತ್ತು ಕೋಕಿಲೋದಯ ಚೈತ್ರರಿಗೆ ಅವರು ಮಿಡ್ಲ್‌ಸ್ಕೂಲ್ ಓದುತ್ತಿದ್ದಾಗ ನಮ್ಮ ತಂದೆ ಬಿ.ಎಸ್. ಶೆಲ್ವಪಿಳ್ಳೆ ಅಯ್ಯಂಗಾರ್ ಅವರು ಅವರ ಮನೆಯಲ್ಲಿ ಪಾಠ ಹೇಳುತ್ತಿದ್ದರು.

ನಾನು ಕನ್ನಡ ಎಂ.ಎ.ಗೆ ಅರ್ಜಿ ಹಾಕಿಕೊಂಡಾಗ ನಮ್ಮ ತಂದೆ ಗೋಪಾಲಸ್ವಾಮಿ ಅವರಿಗೆ ಹೇಳಿ ಎಕನಾಮಿಕ್ಸ್‌ಗೆ ಅರ್ಜಿಯನ್ನು ಚೇಂಜ್ ಮಾಡಿಸಿದ್ದರು. ನಾನು ಕುವೆಂಪು ಅವರ ಬಳಿ ಹೋಗಿ ನಾನು ಕನ್ನಡ ಎಂ.ಎ.ಗೆ ಅರ್ಜಿ ಹಾಕಿದ್ದೆ ಆದರೆ ನನಗೆ ಎಕನಾಮಿಕ್ಸ್‌ನಲ್ಲಿ ಸೀಟು ಕೊಟ್ಟಿದ್ದಾರೆ ನನಗೆ ಕನ್ನಡ ಬೇಕು ಎಂದೆ. ಆಗ ನೀವು ಹಳಗನ್ನಡದ ಯಾವುದಾದರೂ ಕಾವ್ಯ ಓದಿದ್ದೀರಾ, ಕೆಲವು ಭಾಗಗಳನ್ನು ಹೇಳ್ತೀರಾ? ಅಂದರು. ನಾನು ಕುವೆಂಪು ಅವರದೇ ಆದ ಚಿತ್ರಾಂಗದಾ ಖಂಡಕಾವ್ಯವನ್ನೇ ಬಾಯಲ್ಲಿ ಹೇಳಿದೆ ಅದನ್ನು ಕೇಳಿ ಸಂತೋಷಪಟ್ಟರು. ಕನ್ನಡ ಎಂ.ಎ.ಗೆ ಸೀಟು ಕೊಟ್ಟರು.

ನಾನು ಆನರ್ಸ್ ವಿದ್ಯಾರ್ಥಿ ಆದಾಗ ಅವರು ಜಟ್ಕಾದಲ್ಲಿ ಕಾಲೇಜಿಗೆ ಬಂದು ಹೋಗುತ್ತಿದ್ದರು, ನಮ್ಮ ಮನೆ ಅವರ ಮನೆ ಬಳಿಯೇ ಇತ್ತು. ಸಂಜೆ ಒಂದೊಂದು ದಿನ ಅವರು ಮನೆಗೆ ಹಿಂದಿರುಗುವಾಗ ನಾನೂ ಅವರ ಜತೆ ಬರುತ್ತಿದ್ದೆ. ದಾರಿಯಲ್ಲಿ ರಾಮಾಯಣ ದರ್ಶನದ ವಿಚಾರ ಮತ್ತು ಇತರೆ ಸಾಹಿತ್ಯ ಸಂಗತಿಗಳನ್ನು ನನಗೆ ಹೇಳುತ್ತಿದ್ದರು. ನಮ್ಮ ಮನೆ ಪರಿಸ್ಥಿತಿ ತಿಳಿದಾಗ ನನಗೆ ಪ್ರಸಾರಾಂಗದಲ್ಲಿ ಕರಡು ತಿದ್ದುಗಾರನ ಕೆಲಸ ಕೊಡಿಸಿದರು. ಕರ್ನಾಟಕ ಕಾದಂಬರಿ ಸಂಗ್ರಹ ಆಗ ಅಚ್ಚಾಗುತ್ತಿದ್ದಾಗ ಆ ಕರಡು ಹಾಳೆಗಳನ್ನು ತಿದ್ದಿ ಅವರ ಬಳಿಗೆ ಒಪ್ಪಿಗೆ, ಪರಿಷ್ಕರಣಕ್ಕೆ ತೆಗೆದುಕೊಂಡು ಹೋಗುತ್ತಿದ್ದೆ. ಆಗ ಗ್ರಂಥ ಸಂಪಾದನೆಗೆ ಸಂಬಂಧಿಸಿದಂತೆ ಹತ್ತಾರು ವಿಷಯಗಳನ್ನು ಮುಕ್ತವಾಗಿ ಚರ್ಚಿಸುತ್ತಿದ್ದರು. ಕೋಲಾರದ ಕಾಲೇಜಿನಲ್ಲಿ ನಾನು ಅಧ್ಯಾಪಕನಾಗಿದ್ದಾಗ ಕಾಲೇಜಿನ ಕಾರ್ಯಕ್ರಮಕ್ಕೆ ಕುವೆಂಪು ಬಂದಿದ್ದರು. ಅವರು ಬಂದಾಗ ಕಾಲೇಜಿನಲ್ಲಿ ಪಾಠ ನಡೆಯುತ್ತಿತ್ತು. ನನ್ನ ತರಗತಿ ಬಳಿ ಬಂದು ಮರೆಯಲ್ಲಿ ಹೊರಗೆ ನಿಂತು ಕೆಲವು ನಿಮಿಷಗಳ ಕಾಲ ಪಾಠ ಕೇಳಿ ಮೆಚ್ಚುಗೆ ಸೂಸಿದರು. ಹೀಗೆ ಕುವೆಂಪು ಅವರ ಬಳಿ ಹತ್ತಾರು ಸಂದರ್ಭಗಳಲ್ಲಿ ಆತ್ಮೀಯವಾಗಿ ಮಾತುಕತೆ ನಡೆಸಿದ ಸೌಭಾಗ್ಯ ನನ್ನ ಪಾಲಿಗೆ ಒದಗಿದ್ದು ನನ್ನ ಅದೃಷ್ಟ. ಕೇವಲ ಕಾಲೇಜಿನಲ್ಲಿ ಪ್ರಾಧ್ಯಾಪಕರಷ್ಟೇ ಆಗಿರದೆ ವಿದ್ಯಾರ್ಥಿಗಳ ಹಿತವನ್ನೂ, ವೈಯಕ್ತಿಕವಾಗಿ ರಕ್ಷಿಸುವ ಹಿತೈಷಿಗಳಾಗಿದ್ದವರು ರಾಷ್ಟ್ರಕವಿ ಕುವೆಂಪು ಅವರಾಗಿದ್ದರು.

ಈಗಿನವರಿಗೆ ಅಚ್ಚರಿಯೆನಿಸಬಹುದಾದ ನನ್ನ ಪ್ರಸಂಗವೊಂದನ್ನು ಇಲ್ಲಿ ಉಲ್ಲೇಖಿಸಿದರೆ ತಪ್ಪಾಗದು.

೧೯೫೨-೫೩ರಲ್ಲಿ ಬಿ.ಎ. (ಆನರ್ಸ್) ತರಗತಿಗಳು ಮುಗಿಯುತ್ತಾ ಬಂದಾಗ ತರಗತಿಯ ಹಿರಿಯ ವಿದ್ಯಾರ್ಥಿಗಳು ಸೇರಿ ಕ್ಲಾಸ್ ಸೋಷಿಯಲ್ಸ್ ಸಮಾರಂಭ ಏರ್ಪಡಿಸಿದರು. ಬಹುಮಟ್ಟಿಗೆ ಎಲ್ಲಾ ಅಧ್ಯಾಪಕರೂ ಆ ಸಮಾರಂಭದಲ್ಲಿ ಭಾಗವಹಿಸಿದ್ದರು. ನನ್ನ ಸಹಪಾಠಿಗಳೆಲ್ಲ ಸೇರಿ ನನ್ನನ್ನು ಆ ಕಾರ್ಯಕ್ರಮದ ಅಧ್ಯಕ್ಷನನ್ನಾಗಿ ಮಾಡಿದರು. ಏಕೆ ಗೊತ್ತೆ? ವಯಸ್ಸು, ಆಕಾರದಲ್ಲಿ ನನ್ನನ್ನು ಸಹಪಾಟಿಗಳು 'ಮಗು' ಎಂದು ಕರೆಯುತ್ತಿದ್ದರು. ಮಗುವಿನ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ವ್ಯವಸ್ಥೆ! ವೃತ್ತಾಕಾರವಾಗಿ ಕುರ್ಚಿಗಳನ್ನು ಹಾಕಿ ನನ್ನನ್ನು ಅಧ್ಯಕ್ಷನೆಂದು ನಡುಮಧ್ಯೆ ಕೂಡಿಸಿದ್ದರು.

ವಿದ್ಯಾರ್ಥಿಗಳು ಅಧ್ಯಾಪಕರೆಲ್ಲರಿಗೆ ತಮಾಷೆಯ ಉಡುಗೊರೆಗಳನ್ನು ನೀಡಿದರು. ಕುವೆಂಪು ಅವರಿಗೆ ಎಂಟಾಣೆ ಬಿಲ್ಲೆ ಇಟ್ಟು ೧೩ ಸುರುಳಿ ಸುತ್ತಿದ ಕಾಗದದ ಕಟ್ಟುಕೊಟ್ಟರು. ಅದನ್ನು ಕಂಡು ಬಿಡಿಸುತ್ತಾ ಏನಿದು ಮಾಯಾಜಾಲಂ ಎಂದು ಉದ್ಗರಿಸಿದರು. ಎಸ್.ವಿ.ರಂಗಣ್ಣನವರಿಗೆ ಬ್ರಹ್ಮಚಾರಿ ಪಾಕೆಟ್ (ದ್ರಾಕ್ಷಿ, ಗೋಡಂಬಿ, ಬಾದಾಮಿ, ಕಲ್ಲುಸಕ್ಕರೆ ಇತ್ಯಾದಿ ಹಾಕಿದ ಪೊಟ್ಟಣ) ಕೊಟ್ಟರು. ದಿನಾ ಅವರು ಮಾರ್ಕೆಟ್ಟಿನಲ್ಲಿ ಇದನ್ನೇ ಕೇಳುತ್ತಿದ್ದನ್ನು ವಿದ್ಯಾರ್ಥಿಗಳು ಗಮನಿಸಿದ್ದರು. ಹಲ್ಲುಬಿದ್ದ ರಾಘವಾಚಾರ್ಯರಿಗೆ ಒಂದು ಹಲ್ಲುಪುಡಿ ಪೊಟ್ಟಣ. ನನಗೆ 'ಅಧ್ಯಕ್ಷ ಮಗುವಿಗೆ' ಆಡುವ ಬುಗುರಿ, ಊದುವ ಶಿಲ್ಲಿ ಮಕ್ಕಳಿಗೆ ಕೊಡುವ ಹಾಗೆ ಕೊಟ್ಟರು. ನಕ್ಕು ಮುಗ್ಧತೆಯಿಂದ ಸ್ವೀಕರಿಸಿದೆ. ಮಗುವಲ್ಲವೇ ನಾನು.

ಸಿ. ಮಹಾದೇವಪ್ಪನವರು ನನ್ನ ಕನ್ನಡ ಅಧ್ಯಾಪಕರು ಕನ್ನಡ ಪಂಡಿತರಾದರೂ ಸಂಸ್ಕೃತ ಇಂಗ್ಲಿಷ್ ಭಾಷೆಗಳಲ್ಲೂ ಪರಿಣತರು. ಅವರು ಷಡಕ್ಷರಿ ಮಹಾಕವಿಯ 'ಶಬರ ಶಂಕರ ವಿಳಾಸ'ದ ಪಾಠ ಈಗಲೂ ಕಿವಿಯಲ್ಲಿ ಗುಂಯಿಗುಡುತ್ತಿದೆ. ಅವರು ಕಾಲೇಜ್ ಟ್ರಾನ್ಸ್‌ಲೇಷನ್ ಗ್ರಂಥ ಬರೆದಿದ್ದು ಅದು ಪಠ್ಯವಾಗಿತ್ತು. ತಾಳೆಗರಿ ಅಧ್ಯಯನದಲ್ಲಿ ವಿಶೇಷ ಆಸಕ್ತಿ ಅವರಿಗೆ. ಅವರು ಸದಾ ಸೂಟುಧಾರಿಗಳಾಗಿದ್ದರು. ಇಂದೂ ಸಹ ಅವರು ಸೂಟುಧಾರಿಗಳೇ. ಅವರನ್ನು ಬೇರೆ ಉಡುಪಿನಲ್ಲಿ ಕಂಡವರೇ ಇಲ್ಲ. ಅವರ ಸೂಟುತನದ ಬಗ್ಗೆ ಒಬ್ಬರು ಕೇಳಿದಾಗ ಅವರು ಹೇಳಿದ ಮಾತು "ಗಜಕಡ್ಡಿ ಬಟ್ಟೆಯನ್ನು ಅಳೆದರೆ ಬಟ್ಟೆ ಮನುಷ್ಯನ್ನ ಅಳೆಯುತ್ತೆ" ವಿದ್ಯಾರ್ಥಿಗಳಿಗೆ ಪ್ರವಾಸ ಏರ್ಪಡಿಸುತ್ತಿದ್ದರು ತಿಂಗಳಿಗೊಮ್ಮೆ. ಸಂಪ್ರದಾಯಸ್ಥರಾದರೂ ಜಾತಿಮತಗಳ ಸಂಕುಚಿತ ಭಾವನೆ ಅವರಲ್ಲಿ ಎಂದೂ ಸುಳಿಯುತ್ತಿರಲಿಲ್ಲ.

ಇನ್ನು ಕನ್ನಡ ಗುರುಗಳಾದ ಡಿಎಲ್‌ಎನ್, ಕುವೆಂಪು, ಕವೆಂರಾ ಬಗ್ಗೆ ವೆಂಕಟಾಚಲಶಾಸ್ತ್ರೀ, ನ. ಸುಬ್ರಹ್ಮಣ್ಯಂ, ಸಾ.ಶಿ.ಮರುಳಯ್ಯ ಮೊದಲಾದವರು ಬರೆದಿರುವುದರಿಂದ ನಾನಿಲ್ಲಿ ಮುಖ್ಯವಾಗಿ ನನ್ನ ಸಂಸ್ಕೃತ ಗುರುಗಳನ್ನಷ್ಟೇ ಸ್ಮರಿಸಿದ್ದೇನೆ. ಈ ಎಲ್ಲ ಗುರುಗಳೂ ಸಂಸ್ಕೃತವನ್ನಷ್ಟೇ ಹೇಳಿಕೊಟ್ಟವರಲ್ಲ. ಸುಸಂಸ್ಕೃತ ಬಾಳು ಹೇಗಿರುತ್ತೆ ಎಂಬುದನ್ನು ತಮ್ಮ ಪಾಠ ಪ್ರವಚನಗಳ ಮೂಲಕ ತರಗತಿಗಳಲ್ಲಿ ತಮ್ಮ ವ್ಯಕ್ತಿತ್ವ ಜೀವನ ವಿಧಾನದಿಂದ ತರಗತಿಗಳ ಆಚೆ ತೋರಿಸಿಕೊಟ್ಟ ನನ್ನಂಥ ವಿದ್ಯಾರ್ಥಿಗಳ ಬಾಳಿಗೆ ಬೆಳಕಾದವರು. ಅವರಿಗೆಲ್ಲ ನಮೋ! ನಮೋ!

❖

# ಗುರುತ್ರಯರು

## (ಡಿಎಲ್‌ಎನ್, ತೀನಂಶ್ರೀ, ಕುವೆಂಪು)

● *ಡಾ॥ ಎಂ. ಚಿದಾನಂದಮೂರ್ತಿ*

ನನ್ನ ಬಗ್ಗೆ ಒಂದು ಹೆಮ್ಮೆಯ ವಿಷಯವನ್ನು ಹಲವೆಡೆ ಹೇಳಿದ್ದೇನೆ : ನಾನು ಪಡೆದಂತಹ ಶ್ರೇಷ್ಠ ಗುರುಗಳು ಅನ್ಯರಿಗೆ ಲಭ್ಯವಾಗಿರಲಿಲ್ಲ : ಇದು ಜಂಬದ ಮಾತಾಗಿದ್ದರೂ ಹೇಳಿಕೊಳ್ಳುವಲ್ಲಿ ನನಗೆ ಸಂಕೋಚವಿಲ್ಲ. ಆ ಮಾತು ನಿಜವಾಗಿರದ ಸಾಧ್ಯತೆಯೇ ಹೆಚ್ಚಾಗಿದ್ದರೂ ನನಗಂತೂ ಹಲವು ಬಾರಿ ಹಾಗೆನ್ನಿಸಿರುವುದಂತೂ ನಿಜ. (ಎಲ್ಲರಿಗೂ ತಮ್ಮ ತಮ್ಮ ಬಗ್ಗೆ ಹಾಗೆನ್ನಿಸಿದ್ದರೆ ಅದು ಸ್ವಾಭಾವಿಕವೇ) – ಹಾಗೆನ್ನಿಸಿದರೆ ನನಗೂ ಸಂತೋಷವೇ.

**ಗುರುಬ್ರಹ್ಮ ಗುರುರ್ವಿಷ್ಣು ; ಗುರುರ್ದೇವೋ ಮಹೇಶ್ವರಃ**
**ಗುರುಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ ॥**

[ಗುರುವೇ ಬ್ರಹ್ಮನು, ವಿಷ್ಣುವು, ಶಿವನು; ಗುರುವೇ ಎಲ್ಲವನ್ನೂ ಆವರಿಸಿರುವ ಪರಬ್ರಹ್ಮ ವಸ್ತು, ಅಂತಹ ಶ್ರೀ ಗುರುವಿಗೆ ನಮಸ್ಕಾರ]

**ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ ।**
**ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರವೇ ನಮಃ ॥**

[ಅಜ್ಞಾನವೆಂಬ ಕಗ್ಗತ್ತಲಿನಲ್ಲಿ ಕುರುಡನಾಗಿರುವ ವ್ಯಕ್ತಿಯ ಒಳಗಣ್ಣನ್ನು ಜ್ಞಾನವೆಂಬ ಅಂಜನ ಶಲಾಕೆಯಿಂದ ತೆರೆಯಿಸುವ ಶ್ರೀ ಗುರುವಿಗೆ ನಮಸ್ಕಾರ] (ಅಂಜನವು ಕಣ್ಣನ್ನು ಶುಭ್ರಗೊಳಿಸುವ ಒಂದು ಬಗೆಯ ಮುಲಾಮು – ಅದನ್ನು ಶಲಾಕೆ ಅಥವಾ ಕಡ್ಡಿಯಿಂದ ಕಣ್ಣಿಗೆ ಹಚ್ಚಬೇಕು.)

ನನ್ನ ಗುರುಗಳನ್ನು ನೆನೆದಾಗಲೆಲ್ಲ ಮೇಲಿನ ಎರಡು ಶ್ಲೋಕಗಳು ನೆನಪಾಗುತ್ತವೆ. ಆ ಎಲ್ಲ ಗುರುಗಳನ್ನು ಕೃತಜ್ಞತೆಯಿಂದ ಭಕ್ತಿಯಿಂದ ಹನಿಗಣ್ಣಿನಿಂದ ನೆನೆಯುತ್ತ ಈ ಲೇಖನವನ್ನು ಆರಂಭಿಸುತ್ತಿದ್ದೇನೆ.

ನನ್ನ ಪೂಜ್ಯ ತಂದೆ ತಾಯಂದಿರೇ ನನ್ನ ಮೊದಲ ಗುರುಗಳು. ವರ್ಷಕ್ಕೆ (ತಿಂಗಳಿಗೆ ಅಲ್ಲ) ಹತ್ತು ರೂಪಾಯಿ ಸಂಬಳದ "ಕೂಲಿಸಾಲೆ" ಮೇಷ್ಟ್ರಾಗಿ (ಅದನ್ನು ಕೊಡುತ್ತಿದ್ದವರು ಹಳ್ಳಿಯ ಜನ) ವೃತ್ತಿಜೀವನ ಆರಂಭಿಸಿದ ನನ್ನ ತಂದೆ ಬಡತನದ ಬೇಗೆಯಲ್ಲಿ ಬೇಯುತ್ತ ಕಷ್ಟಪಟ್ಟು ಪ್ರಾಮಾಣಿಕವಾಗಿ ಕೆಲಸಮಾಡಿ ನನ್ನನ್ನು ಓದಿಸಿದರು; ನನ್ನ 'ಅವ್ವ' ಅವರ ಜೊತೆ ಪೂರ್ತಿ ಸಹಕರಿಸಿ ವಾತ್ಸಲ್ಯದ ಮಳೆ ಕರೆದಳು. ಅಲ್ಲದೆ, ನನ್ನ ಹಳ್ಳಿಯ ಅನಕ್ಷರಸ್ಥ ಜನ

ಬದುಕುತ್ತಿದ್ದ ರೀತಿ ಇಂದಿಗೂ ನನಗೆ ಉತ್ಸಾಹದ ಚಿಲುಮೆ – ಅವರು ಸುಳ್ಳು ಹೇಳುತ್ತಿರಲಿಲ್ಲ; ಕಳ್ಳತನ ಮಾಡುತ್ತಿರಲಿಲ್ಲ (ನಾವು ೧೯೪೦–೪೫ರ ಸುಮಾರಿನಲ್ಲಿ ಮನೆಗಳಿಗೆ ಬೀಗ ಹಾಕುತ್ತಿದ್ದುದೇ ಕಡಿಮೆ) ಕಷ್ಟಪಟ್ಟು ದುಡಿಮೆ ಮಾಡಿ ಇತರರಿಗೂ ಸಹಾಯಮಾಡುತ್ತ ಬದುಕುತ್ತಿದ್ದರು. ಅವರೆಲ್ಲರೂ ನನಗೆ ಗುರುಗಳೆ. ಪ್ರಾಥಮಿಕ, ಮಾಧ್ಯಮಿಕ ಶಾಲೆಗಳ ಉಪಾಧ್ಯಾಯರಲ್ಲಿ ಬ್ರಾಹ್ಮಣ ವರ್ಗದ ಕೃಷ್ಣಪ್ಪ, ಬೇಡರ ವರ್ಗದ ಗುಡ್ಡಪ್ಪನವರನ್ನು ಸ್ಮರಿಸಲೇಬೇಕು. ಪ್ರೌಢಶಾಲೆಯ ಉಪಾಧ್ಯಾಯರನ್ನು, ನಾಡಿಗೇರ ಗೋವಿಂದರಾಯರನ್ನು ಶೇಷಾಚಲರಾಯರನ್ನು ನೆನಪಿಸಿಕೊಳ್ಳಲೇಬೇಕು. ದಾವಣಗೆರೆ ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಮೊದಲ ವರ್ಷ ಎಲ್. ಬಸವರಾಜು, ಎರಡನೆಯ ವರ್ಷ ಜಿ.ಎಸ್. ಶಿವರುದ್ರಪ್ಪನವರು (ಆಗ ಅವರಿಗಿನ್ನೂ ಡಾಕ್ಟರೇಟ್ ಪದವಿ ಲಭ್ಯವಾಗಿರಲಿಲ್ಲ) ಕನ್ನಡ ಉಪಾಧ್ಯಾಯರಾಗಿ ನನ್ನನ್ನು ಕನ್ನಡದತ್ತ ಸೆಳೆದರು. ಅವರಲ್ಲೂ ಜಿ.ಎಸ್. ಶಿವರುದ್ರಪ್ಪನವರು ೧೯೪೯–೫೦ರಲ್ಲಿ ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಮಹಾಕಾವ್ಯವನ್ನು ವಿದ್ಯಾರ್ಥಿನಿಲಯದಲ್ಲಿ ನಮ್ಮಲ್ಲಿ ಕೆಲವರಿಗೆ ಖಾಸಗಿಯಾಗಿ ಓದಿ ವಿವರಿಸಿದ್ದು ವಿಶೇಷ ಸ್ಮರಣಾರ್ಹ. ವಿಜ್ಞಾನದ ವಿದ್ಯಾರ್ಥಿಯಾಗಿ ಆ ಕಾಲಕ್ಕೆ ಮೈಸೂರು ರಾಜ್ಯಕ್ಕೆ ಹತ್ತನೆಯ ರ್‍ಯಾಂಕ್ ಪಡೆದು ಬಿ.ಎಸ್‌ಸಿ. (ಆನರ್ಸ್), ಮೆಡಿಕಲ್, ಇಂಜಿನಿಯರಿಂಗ್ ತರಗತಿಗಳಿಗೆ ಸುಲಭವಾಗಿ ಪ್ರವೇಶಾವಕಾಶವಿದ್ದರೂ ಆಸಕ್ತಿಯಿಂದ ಕನ್ನಡ (ಆನರ್ಸ್) ಆರಿಸಿಕೊಂಡೆ. ಆ ಕಾಲಕ್ಕೆ ಚನ್ನಗಿರಿ ತಾಲೂಕಿನಲ್ಲಿ ಅದೊಂದು ಚಿಕ್ಕ ಸುದ್ದಿಯೇ ಆಗಿತ್ತು. ಡಾಕ್ಟ್ರೋ, ಇಂಜಿನಿಯರೋ ಆಗಬಹುದಿತ್ತು. ನಾನು 'ಕನ್ನಡ ಪಂಡಿತ' ಆಗಲು ಹೊರಟಿದ್ದು ತೀರ ವಿಚಿತ್ರವಾಗಿ ಜನರಿಗೆ ಕಾಣಿಸಿತ್ತು. ಅಂತಹ ಗುರುಗಳನ್ನು ಸ್ಮರಿಸದಿರಲು ಸಾಧ್ಯವೇ? ಎಲ್. ಬಸವರಾಜು ಮತ್ತು ಶಿವರುದ್ರಪ್ಪನವರು ನನ್ನನ್ನು ಮುಂದೆ ಉದ್ದಕ್ಕೂ ತಮ್ಮ ಮನೆಯ ಭಾಗವೆಂಬಂತೆ ಪ್ರೀತಿ ವಾತ್ಸಲ್ಯದಿಂದ ಕಂಡರು.

ಇಲ್ಲಿ ಮುಖ್ಯವಾಗಿ ಮೂವರು ಗುರುಗಳ ಬಗ್ಗೆ, ಅವರ ಒಡನಾಟ, ನಾನು ಕಂಡಂತೆ ಅವರ ಸ್ವಭಾವಗಳನ್ನು ಕುರಿತಂತೆ ಬರೆಯಲು ಬಯಸುತ್ತೇನೆ – ಅವರೇ ಕುವೆಂಪು, ಡಿ.ಎಲ್. ನರಸಿಂಹಾಚಾರ್ ಮತ್ತು ತೀ.ನಂ. ಶ್ರೀಕಂಠಯ್ಯ. ಇಂಟರ್‌ಮೀಡಿಯೆಟ್ ತರಗತಿಯಲ್ಲಿ ಕುವೆಂಪು ಅವರ ಕಾವ್ಯದ ಪರಿಚಯವಾದರೂ ಆ ಮೊದಲೇ ಅವರ ಬೊಮ್ಮನಹಳ್ಳಿ ಕಿಂದರಿಜೋಗಿ ಗೀತವು ನನಗೆ ಮಾಧ್ಯಮಿಕ ಶಾಲೆಯ ಪಠ್ಯಪುಸ್ತಕದಲ್ಲಿದ್ದು ಆಗಲೇ ಅವರ ಹೆಸರು ಓದಿದ್ದು; ಅದೇ ವರ್ಷ ಬೇಂದ್ರೆಯವರ ಒಂದು ಭಾವಗೀತೆಯೂ ಪಠ್ಯ ಪುಸ್ತಕದಲ್ಲಿತ್ತು. ಕುವೆಂಪು ಅವರನ್ನು ಮಲೆನಾಡ ಒಕ್ಕಲಿಗ ಕುಟುಂಬವೊಂದರಲ್ಲಿ ಜನಿಸಿದವರೆಂದೂ ಬೇಂದ್ರೆಯವರನ್ನು ಉತ್ತರ ಕರ್ನಾಟಕದ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದವರೆಂದೂ ಅಲ್ಲಿ ಪರಿಚಯ ಮಾಡಿಕೊಡಲಾಗಿತ್ತು. ನನ್ನ ಜೊತೆಗಾರ, ಗುರು ಕೃಷ್ಣಪ್ಪನವರ ಮಗನು ಬೇಂದ್ರೆಯೇ ದೊಡ್ಡ ಕವಿಯೆಂದು, ಬೇಂದ್ರೆಯವರಿಗಿಂತ ಕುವೆಂಪುವೇ ದೊಡ್ಡ ಕವಿಯೆಂದು ನಾನು ವಾದಿಸುತ್ತಿದ್ದೆವು. 'ಒಕ್ಕಲಿಗ'ರೆಂದರೆ ಒಕ್ಕಲುತನದವರೆಂದು (ಲಿಂಗಾಯಿತರು) ನಾವು ಭಾವಿಸಿದ್ದೆವು.

೧೯೫೦ರಲ್ಲಿ ಇಂಟರ್‌ಮೀಡಿಯೆಟ್ ಮುಗಿಸಿ ಮೈಸೂರಿನ ಮಹಾರಾಜ ಕಾಲೇಜು

ಸೇರಿದೆ. ಆಗ ಮಹಾರಾಜಾ ಕಾಲೇಜು ಬಹು ಶ್ರೇಷ್ಠವಾದ ಕನ್ನಡ, ಇಂಗ್ಲಿಷ್, ರಾಜ್ಯಶಾಸ್ತ್ರ, ತತ್ವಶಾಸ್ತ್ರ, ಇತಿಹಾಸ, ಮನೋವಿಜ್ಞಾನ, ಪ್ರಾಧ್ಯಾಪಕರಿಂದ ತುಂಬಿಹೋಗಿತ್ತು. ಕುವೆಂಪು ಮೊದಲ ಆನರ್ಸ್ ತರಗತಿಯ ನಮಗೆ ಪಂಪಭಾರತವನ್ನು ಬೋಧಿಸಿದರು – ಅಲ್ಲಿಯ ಪದ್ಯಗಳ ಅರ್ಥವನ್ನು ವಿವರಿಸುತ್ತಿದ್ದುದಲ್ಲದೆ ಭಾವಪರವಶರಾಗಿ ಅವುಗಳ ವ್ಯಾಖ್ಯಾನ ಮಾಡುತ್ತ ಮೇಲೆ ಕೆಳಗೆ ನೋಡುತ್ತಿದ್ದರೆ ನಾವೂ ಮೇಲೆ ಕೆಳಗೆ ನೋಡುತ್ತಿದ್ದೆವು – ನಾವು ಭಾವಪರವಶರಾಗುತ್ತಿದ್ದೆವು. ಅವರು ವಿದ್ಯಾರ್ಥಿಗಳ ಜೊತೆಗಾಗಲಿ ಸಹಅಧ್ಯಾಪಕರ ಜೊತೆಗಾಗಲಿ ನಿಕಟ ಸಂಪರ್ಕವನ್ನು ಮಾತ್ರವಲ್ಲ, ಸಂಪರ್ಕವನ್ನೇ ಇಟ್ಟುಕೊಂಡಿರಲಿಲ್ಲವೆಂದರೆ ತಪ್ಪಾಗಲಾರದು. ಅವರು ಮನೆಯಿಂದ ಕಾಲೇಜಿಗೆ ಬಂದವರೇ ನೇರವಾಗಿ ತಮ್ಮ ಕೊಠಡಿ ಪ್ರವೇಶಿಸಿ ಅಲ್ಲಿ ಪಾಠ ಮುಗಿಸಿ ಹಾಗೆ ಹೊರಟುಬಿಡುತ್ತಿದ್ದರು. ದಾರಿಯಲ್ಲಿ ಬರುವಾಗ ಹೋಗುವಾಗ ಅತ್ತ ಇತ್ತ ನೋಡುತ್ತಿರಲಿಲ್ಲ. ಬಂದ ಹೊಸತರಲ್ಲಿ ನಾನು ಅವರೊಬ್ಬರೇ ಇರುವಾಗ ಅವರ ಜೊತೆ ಮಾತನಾಡಬೇಕೆನ್ನಿಸಿ, ಪಾಠ ಮುಗಿದ ಮೇಲೆ ಒಳಗೆ ಹೋಗಿ "ಇಕ್ಷುಬಾಣ ಎಂದರೇನು, ಸರ್?" ಎಂದು ಕೇಳಿದೆ. "ನಿಮಗೆ ಗೊತ್ತಿಲ್ವಾ? 'ಇಕ್ಷುಬಾಣ' ಎಂದರೆ ಮನ್ಮಥ, ಹೂವನ್ನು ಬಾಣವಾಗಿ ಬಳಸುವವನು" ನನ್ನ ಗುರುಗಳಿಂದ ಏಕಾಂಗಿಯಾಗಿದ್ದಾಗ ಕಲಿತ ಪಾಠವು ಮನ್ಮಥನಿಗೆ ಸಂಬಂಧಿಸಿದ್ದು! ಗುರುಗಳಿಂದ ಶಿಷ್ಯನಿಗೆ ಆದದ್ದು ಮನ್ಮಥ ಬೋಧೆ!

೧೯೫೦ರಲ್ಲಿ ಕನ್ನಡ ಆನರ್ಸ್ ತರಗತಿಗೆ ಹದಿನಾಲ್ಕು ವಿದ್ಯಾರ್ಥಿಗಳು (ಅದರಲ್ಲಿ ಮೂವರು ವಿದ್ಯಾರ್ಥಿನಿಯರು) ಸೇರಿದ್ದುದು ಅಧ್ಯಾಪಕ ವರ್ಗದವರಿಗೆ, ಅದರಲ್ಲೂ ವಿಭಾಗದ ಮುಖ್ಯಸ್ಥರಾದ ಕುವೆಂಪು ಅವರಿಗೆ ಬಹು ಉತ್ಸಾಹವನ್ನು ತಂದಿತ್ತು. (ಆ ಮುಂಚೆ ನಾಲ್ಕರಿಂದ ಆರು ಜನ ಮಾತ್ರ ವಿದ್ಯಾರ್ಥಿಗಳಿರುತ್ತಿದ್ದರು). ಎರಡನೆಯ ವರ್ಷ ನಮಗೆ ಹೊಸದಾಗಿ ಸಾಹಿತ್ಯ ವಿಮರ್ಶೆಯ ಮೂಲತತ್ವಗಳನ್ನು ಆರಂಭಿಸಿ ಅವರೇ ಪಾಠ ಮಾಡಿದರು. ಅವರು ಅಂತಹ ವಾಗ್ಮಿ ಅಲ್ಲ; ನೂರು ವಿದ್ಯಾರ್ಥಿಗಳಿರುತ್ತಿದ್ದು ದ್ವಿತೀಯ ಭಾಷೆಯ ಕನ್ನಡ ತರಗತಿಗಳಲ್ಲಿ ಅವರು ಯಶಸ್ವಿ ಉಪಾಧ್ಯಾಯರೆನ್ನಿಸಿರಲಿಲ್ಲ – ನಾವಿದ್ದಾಗ ಆ ತರಗತಿಗಳ ಪಾಠವನ್ನು ಬೇರೆಯವರಿಗೆ ವಹಿಸಿದ್ದರು. ಅವರು ಆನರ್ಸ್, ಎಂ.ಎ. ತರಗತಿಗಳಿಗೆ ಪಾಠ ಮಾಡುವಾಗ ಮೈಮರೆತು, ತನ್ಮಯತೆಯಿಂದ ಪಾಠ ಹೇಳುತ್ತಿದ್ದರು. ಅಷ್ಟೇ ಅಲ್ಲ, ಕರ್ನಾಟಕದ ಬಗ್ಗೆ ಅಪಾರ ಮಮತೆಯಿದ್ದು ಅವರು ನಾಡು ನುಡಿಗಳ ಬಗ್ಗೆ ನಮಗೆ ಅಭಿಮಾನವನ್ನು ಮೂಡಿಸಿದವರು. ಅವರು ತಮ್ಮ ಮನೆಗೆ ಯಾರನ್ನೂ ಆಹ್ವಾನಿಸುತ್ತಿರಲಿಲ್ಲ; ಅವರನ್ನು ನೋಡಬೇಕೆಂದು ಬಯಸುವ ಹೊರಗಿನವರು ಪುಸ್ತಕ ಕೊಳ್ಳುವ ನೆಪವೊಡ್ಡಿ ಅವರ ಮನೆಗೆ ಹೋಗಿ ತಾವು ಕೊಂಡ ಪುಸ್ತಕದಲ್ಲಿ ಅವರ ಹಸ್ತಾಕ್ಷರ ಹಾಕಿಸಿಕೊಂಡು ಬರುತ್ತಿದ್ದರು. ೧೯೫೨ರ ಬೇಸಗೆ ರಜೆಯಲ್ಲಿ ಅವರ ಊರು ಕುಪ್ಪಳಿಗೆ ಹೋಗಿ ಅಲ್ಲಿನ ಕವಿಶೈಲ, ಸಮೀಪದ ತೀರ್ಥಹಳ್ಳಿ ಸಿಬ್ಬಲಗುಡ್ಡೆ ಇತ್ಯಾದಿ ಸುಂದರ ಸ್ಥಳಗಳನ್ನು ನೋಡಿಕೊಂಡು ಮೈಸೂರಿಗೆ ಹೋಗಿ ಅವರ ಗಮನಕ್ಕೆ ತಂದಾಗ ಅವರು ಖುಷಿ ಪಟ್ಟಿದ್ದರು. ಆನರ್ಸ್ ಪದವೀಧರನಾದ ನನಗೆ ಕನ್ನಡ ಅಧ್ಯಾಪಕ ಹುದ್ದೆ ದೊರೆತದ್ದು ಅವರಿಂದ ಎಂಬುದನ್ನು ನಾನು ಸ್ಮರಿಸಬಯಸುತ್ತೇನೆ. ಆ "ರಾಷ್ಟ್ರಕವಿ"ಗಳು ಚಿರಸ್ಮರಣೀಯರು – ನನ್ನ ವೈಯಕ್ತಿಕ ಬದುಕಿನಲ್ಲೂ ಕೂಡ.

ಆಗ ಮಹಾರಾಜ ಕಾಲೇಜಿನಲ್ಲಿ ಕುವೆಂಪು ಅವರ ಸಹೋದ್ಯೋಗಿಯಾಗಿದ್ದ ಡಿ.ಎಲ್. ನರಸಿಂಹಾಚಾರ್ಯರು, ಭಿನ್ನ ಸ್ವಭಾವದವರು-ವಿದ್ಯಾರ್ಥಿಗಳನ್ನು ಬಹಳವಾಗಿ ಹಚ್ಚಿಕೊಂಡಿದ್ದವರು. ಅಂತಹ ಜನಪ್ರಿಯ ಅಧ್ಯಾಪಕರಲ್ಲ, ಮಾತುಗಾರಿಕೆಗೂ ಅವರಿಗೂ ಬಹಳ ದೂರ. ಅವರು ನಮಗೆ ಬೋಧಿಸಿದ ಕನ್ನಡ ಸಾಹಿತ್ಯ ಚರಿತ್ರೆಯ ಪಾಠಗಳನ್ನು ಮರೆಯಲು ಸಾಧ್ಯವೇ ಇಲ್ಲ. ಅಪಾರ ಪಾಂಡಿತ್ಯ, ಅದ್ಭುತ ಜ್ಞಾಪಕ ವ್ಯಕ್ತಿಯ ಅವರು ಆ ಕಾಲಕ್ಕಾಗಲೇ ಒಬ್ಬ ಅತ್ಯಂತ ಶ್ರೇಷ್ಠ ಸಂಶೋಧಕರೆನ್ನಿಸಿಕೊಂಡಿದ್ದರು. ನಾನಿದ್ದ ಸುತ್ತೂರು ವಿದ್ಯಾರ್ಥಿ ನಿಲಯ, ಮಹಾರಾಜ ಕಾಲೇಜುಗಳಿಗೆ ತೀರ ಸಮೀಪದ ಮನೆ ಅವರದು. ನಮಗೆ ಯಾವುದಾದರೂ ಗ್ರಂಥವು ಗ್ರಂಥಾಲಯದಲ್ಲಿ ದೊರಕದಿದ್ದರೆ ಅವರ ಮನೆಗೆ ಹೋಗಿ ಒಂದು ವಾರದ ಕಾಲಕ್ಕೆ ಎರವಲು ಪಡೆಯುತ್ತಿದ್ದೆ. ಅವರ ಮನೆಗೆ ಹೋದಾಗ ಅವರು ನಮಗೆ ಕಾಣಿಸುತ್ತಿದ್ದು ಹೀಗೆ – ಬರೀ ಪುಸ್ತಕಗಳನ್ನೇ ಹೇರಿರುವ ಕಪಾಟಗಳು, ಅವುಗಳ ಮಧ್ಯೆ ಚೆಲ್ಲಾಪಿಲ್ಲಿಯಾಗಿ ಹರಡಿರುವ ಪುಸ್ತಕಗಳ ಮೇಜು; ಅದರ ಹಿಂದೆ ಓದುತ್ತಾ ಕುಳಿತಿರುವ ಡಿ.ಎಲ್.ಎನ್. ನಾವು ಹೋದ ತಕ್ಷಣ ಏಕವಚನದಲ್ಲಿ ಮಾತನಾಡಿಸಿ, ಕುಳ್ಳಿರಿಸಿ, ತಿಂಡಿ ತಿನ್ನಿಸಿ ಪುಸ್ತಕ ಕೊಡುತ್ತಿದ್ದರು. ತಾವು ಓದುತ್ತಿರುವ ಪುಸ್ತಕದ ಬಗ್ಗೆ, ಇತರ ಮಹತ್ವದ ಗ್ರಂಥಗಳ ಬಗ್ಗೆ ನಮಗೆ ನಾಲ್ಕು ಮಾತು ಹೇಳಿ ಹೆಚ್ಚು ಹೆಚ್ಚು ಓದಲು ಹುರಿದುಂಬಿಸುತ್ತಿದ್ದರು. ಅವರು ಅಂದು ನಮಗೆ ಸ್ಫೂರ್ತಿ. ಹಳಗನ್ನಡ ಪದ್ಯಗಳು ಅರ್ಥವಾಗದಿದ್ದರೆ, ಕೇಶಿರಾಜನ ಶಬ್ದಮಣಿ ದರ್ಪಣದ ಭಾಗಗಳು ಬಿಡಿಸದ ಗಂಟಾಗಿದ್ದರೆ ಅದಕ್ಕೆಲ್ಲ ಪರಿಹಾರ ಆಗ ಅವರೇ. ಅವರು ಗ್ರಂಥಾಲಯಕ್ಕೆ ಬಂದು ಕೈತುಂಬ ಪುಸ್ತಕಗಳನ್ನು ಕೊಂಡೊಯ್ಯುತ್ತಿದ್ದರು; ಹಾಗೇ ಅಂತಹ ತುಂಬಿದ ಕೈಯಿಂದ ಬಂದು ಪುಸ್ತಕಗಳನ್ನು ಹಿಂದಿರುಗಿಸುತ್ತಿದ್ದರು. ಪುಸ್ತಕಗಳು ಅವರ ದೇಹದ ಭಾಗವಾಗಿದ್ದುವು. ನಾನು ಎಂ.ಎ. ವಿದ್ಯಾರ್ಥಿಯಾಗಿದ್ದಾಗ ಒಂದು ಪ್ರಬಂಧವನ್ನು ರಚಿಸಿ ವಿಚಾರಗೋಷ್ಠಿಯ ಮುಂದೆ ಮಂಡಿಸಬೇಕಾಗಿತ್ತು. ಆಗ ಅವರು ನಮಗೆ ಪಂಪನನ್ನು ವಿಶೇಷ ಕವಿಯಾಗಿ ಪಾಠ ಹೇಳುತ್ತಿದ್ದರು. ಪಂಪನಿಗೆ ಹಿನ್ನೆಲೆಯಾದ ಸಾಮಾಜಿಕ ಜೀವನವನ್ನು ಶಾಸನಾಧಾರಗಳಿಂದ ರೂಪಿಸಿ ಪ್ರಬಂಧ ಸಿದ್ಧಪಡಿಸಲು ಹೇಳಿದರು; ಶಾಸನ ಸಂಪುಟಗಳ ಪರಿಚಯ ಮಾಡಿಕೊಟ್ಟರು. ನಾನು ಎಲ್ಲಿಲ್ಲದ ಉತ್ಸಾಹದಿಂದ ಶಾಸನಗಳ ಸಂಪುಟಗಳನ್ನು ಪರಿಶೀಲಿಸಿ, ಮುಖ್ಯವಾಗಿ ೯-೧೦-೧೧ನೇ ಶತಮಾನಗಳ ಶಾಸನಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿದಾಗ ಒಂದ ಹೊಸ ಅಂಶ ಗೋಚಸಿರಿತ್ತು; ಉಳಿದ ಶತಮಾನಗಳಿಗಿಂತ ಆ ಶತಮಾನಗಳ ಶಾಸನಗಳಲ್ಲಿ ವೀರಗಲ್ಲು, ಮಾಸ್ತಿಕಲ್ಲುಗಳು ಹೆಚ್ಚಾಗಿ ಕಾಣಿಸಿದುವು ; ಯುದ್ಧದಲ್ಲಿ ರಾಜನಿಗಾಗಿ (ರಾಜ್ಯಕ್ಕಾಗಿ) ಮಡಿದ ವೀರಯೋಧರ, ಆ ವೀರಯೋಧರೊಡನೆ ಸಹಗಮನ ಮಾಡಿ ಮಡಿದ ಮಹಾಸತಿಯರ ಶಾಸನಗಳು ಎದ್ದು ಕಾಣಿಸಿದುವು. ಪಂಪನ ಕಾಲದ ಯುಗವು ಒಂದು ದೃಷ್ಟಿಯಿಂದ ವೀರಯುಗವಾದ್ದರಿಂದಲೇ ಪಂಪನಂತಹ ವೀರಕಾವ್ಯದ ಕವಿ ರೂಪುಗೊಳ್ಳಲು ಸಾಧ್ಯವಾಯಿತೆಂದೂ ಅವನ ಕಾಲದ ವೀರ ಮನೋಧರ್ಮವೇ, ಜನತೆಯ ತ್ಯಾಗಗುಣವೇ ಅವನ ಕಾಲದ ಯುಗಧರ್ಮವೆಂದೂ ಹೊಳೆಯಿತು. ಅದನ್ನೆಲ್ಲ ಕ್ರೋಢೀಕರಿಸಿ "ಪಂಪಕವಿ ಮತ್ತು ಯುಗಧರ್ಮ" ಎಂಬ ಪ್ರಬಂಧವನ್ನು ಸಿದ್ಧಪಡಿಸಿ ಅಧ್ಯಾಪಕ ಮತ್ತು ಕನ್ನಡ ಸ್ನಾತಕೋತ್ತರ ವಿದ್ಯಾರ್ಥಿಗಳ ಮುಂದೆ ಓದಿದೆ – ಆ ಹೊತ್ತಿಗೆ ಧಾರವಾಡದಿಂದ

ತೀ. ನಂ. ಶ್ರೀಕಂಠಯ್ಯನವರು ಕನ್ನಡ ವಿಭಾಗದ ಮುಖ್ಯಸ್ಥರಾಗಿ ಬಂದು ಅಧಿಕಾರ ಸ್ವೀಕರಿಸಿದ್ದರು – ಅವರೂ ಆ ಸಭೆಯಲ್ಲಿ ಹಾಜರಿದ್ದರು. ಅದೇ ನಾನು ಬರೆದ, ಸಭೆ ಮುಂದೆ ಮಂಡಿಸಿದ ಮೊಟ್ಟ ಮೊದಲ ಸಂಪ್ರಬಂಧ. ಆ ನನ್ನ ಬರಹಕ್ಕೆ ದೊರಕಿದ ಪ್ರೋತ್ಸಾಹದಿಂದ ಅಕ್ಷರಶಃ ಪುಳಕಿತನಾದೆ – ಡಿ.ಎಲ್.ಎನ್., ತೀ.ನಂ.ಶ್ರೀ. ಇಬ್ಬರೂ ಅದನ್ನು ಮನಸಾರೆ ಮೆಚ್ಚಿದ್ದಲ್ಲದೆ, ಅದು ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸುತ್ತಿದ್ದ ಪ್ರತಿಷ್ಠಿತ ತ್ರೈಮಾಸಿಕ "ಪ್ರಬುದ್ಧ ಕರ್ಣಾಟಕ"ದಲ್ಲಿ ಪ್ರಕಟವಾಗಲು ನಿಮಿತ್ತರಾದರು. ನಾನು ಸಂಶೋಧನ ಕ್ಷೇತ್ರಕ್ಕೆ ಕಾಲಿಡಲು ಆ ಪ್ರಬಂಧ ನಿಮಿತ್ತವಾಯಿತು – ಅದರ ಮುಖ್ಯ ಪ್ರೇರಣೆ ಡಿ.ಎಲ್. ನರಸಿಂಹಾಚಾರ್.

ತೀ. ನಂ. ಶ್ರೀಕಂಠಯ್ಯನವರು ೧೯೪೮–೪೯ರಲ್ಲಿ ನಾನು ದಾವಣಗೆರೆ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿದ್ದಾಗ ಅಲ್ಲಿಗೆ "ಸೂಪರಿಂಟೆಂಡೆಂಟ್" ಆಗಿ (ಅದನ್ನು ನಾವು "ಸೂಪರಿಂಟೆಂಡೆಂಡೆಂಡೆಂಟ್" ಎಂದು ತಮಾಷೆಗೆ ಉಚ್ಚರಿಸುತ್ತಿದ್ದೆವು) ಕೆಲವು ತಿಂಗಳು ಇದ್ದು ಕುಮಾರವ್ಯಾಸ ಸಭಾಪರ್ವ ಸಂಗ್ರಹವನ್ನು ಪಾಠ ಮಾಡಿದರು. ಮುಂದೆ ನಾನು ೧೯೫೭–೫೮ರಲ್ಲಿ ಎಂ.ಎ. ವಿದ್ಯಾರ್ಥಿಯಾಗಿ ಸೇರಿಕೊಂಡಾಗ ವರ್ಷದ ಕೊನೆಯಲ್ಲಿ ಧಾರವಾಡದಿಂದ ಮೈಸೂರಿಗೆ ಬಂದು ಮಹಾರಾಜ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ, ನಮಗೆ ಒಂದೆರಡು ತಿಂಗಳು ಭಾರತೀಯ ಕಾವ್ಯಮೀಮಾಂಸೆ ಪಾಠ ಹೇಳಿದರು. ಎಂ.ಎ ತರಗತಿಯಲ್ಲಿ ನನಗೆ ಬಿ.ಎ. ಆನರ್ಸಿನಂತೆ (೧೯೫೩) ಪ್ರಥಮ ದರ್ಜೆ, ಪ್ರಥಮ ರ್‍ಯಾಂಕ್ ಲಭ್ಯವಾದುವು. ಯುವರಾಜಾ ಕಾಲೇಜಿನಲ್ಲಿದ್ದ ನಾನು ಅವರ ಮಾರ್ಗದರ್ಶನದಲ್ಲಿ ಪಿಎಚ್.ಡಿ.ಗೆ ಕೆಲಸ ಮಾಡಲು ನಿರ್ಧರಿಸಿದಾಗ ಅವರು ಒಪ್ಪಿ, ನನ್ನ ಶಾಸನಗಳ ಅಧ್ಯಯನವನ್ನು ಮುಂದುವರಿಸಲು ಹೇಳಿದರು. ಕ್ರಿ.ಶ. ೪೫೦–೧೧೫೦ ಈ ಅವಧಿಯ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನವು ನನ್ನ ಸಂಶೋಧನೆಯ ವಸ್ತುವಾಯಿತು. ನನ್ನ ಆಸಕ್ತಿಯನ್ನು ಬಲ್ಲವರಾಗಿದ್ದ ಅವರು ಯುವರಾಜಾ ಕಾಲೇಜಿನಿಂದ ಮಾನಸಗಂಗೋತ್ರಿಯ ಸ್ನಾತಕೋತ್ತರ ವಿಭಾಗದ ಕನ್ನಡ ಅಧ್ಯಾಪಕನಾಗಿ ವರ್ಗಾವಣೆ ಮಾಡಿಸಿದರು. ಪದವಿ ತರಗತಿ ಉಪಾಧ್ಯಾಯನಾಗಿದ್ದ ನಾನು ಅವರಿಂದಾಗಿ ಸ್ನಾತಕೋತ್ತರ ವಿಭಾಗದ ಉಪಾಧ್ಯಾಯನಾದುದು ನನ್ನ ಶಿಕ್ಷಕ ವೃತ್ತಿಯ ಒಂದು ದೊಡ್ಡ ತಿರುವು. ನನ್ನ ಪಿಎಚ್.ಡಿ. ಅಧ್ಯಯನದಲ್ಲಿ ಅವರು ಅಧಿಕೃತ ಮಾರ್ಗದರ್ಶಿಯಾದರೆ ಡಿ.ಎಲ್.ಎನ್. ನನ್ನ ಅನಧಿಕೃತ ಮಾರ್ಗದರ್ಶಿಯೆಂದೇ ಭಾವಿಸಿದ್ದೆ.

೧೯೫೮–೬೨ರ ಅವಧಿ ಒಂದು ಸುವರ್ಣ ಕಾಲ; ಎಂ.ಎ. ತರಗತಿಗಳಿಗಾಗಿ ಪಾಠ ಸಿದ್ಧತೆ, ಅದೇ ಸಂದರ್ಭದಲ್ಲಿ ಪಿಎಚ್.ಡಿ.ಗಾಗಿ ನಿರಂತರ ಅಧ್ಯಯನ ಇವುಗಳಲ್ಲೇ ಇಡೀ ಸಮಯ ವಿನಿಯೋಗವಾಗುತ್ತಿತ್ತು. ರಜಾ ದಿನಗಳು ಬಂದರೆ ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಹೋಗಿ ಅಲ್ಲಿದ್ದ ಕಾವಲುಗಾರನಿಗೆ ತಿಳಿಸಿ ಇಡೀ ದಿನ ಕುಳಿತು ಓದುತ್ತಿದ್ದೆ, ಟಿಪ್ಪಣಿ ಮಾಡಿಕೊಳ್ಳುತ್ತಿದ್ದೆ (ಗ್ರಂಥಪಾಲಕರ ಒಪ್ಪಿಗೆ ಅದಕ್ಕೆ ಇತ್ತು). ಮಾರ್ಗದರ್ಶಕರಾಗಿ ತೀ.ನಂ.ಶ್ರೀ. ಸೂಚಿಸುತ್ತಿದ್ದ ಗ್ರಂಥಗಳನ್ನು ಲೇಖನಗಳನ್ನು, ಮಾತ್ರವಲ್ಲದೆ, ಆ ಗ್ರಂಥ ಲೇಖನಗಳಲ್ಲಿ ಉಲ್ಲೇಖಗೊಂಡ ಇತರ ಬರಹಗಳನ್ನು ಓದಿ ಶ್ರದ್ಧೆಯಿಂದ ಟಿಪ್ಪಣಿ ಮಾಡಿಕೊಳ್ಳುತ್ತಿದ್ದೆ.

ಪ್ರತಿವಾರ ಅವರ ಮನೆಗೆ ಹೋಗಿ ಅವರ ಜೊತೆ ಸ್ವಲ್ಪ ಕಾಲ ಕಳೆದು ಲಾಭ ಪಡೆಯುತ್ತಿದ್ದೆ. ತೀ.ನಂ.ಶ್ರೀ., ಡಿ.ಎಲ್.ಎನ್. ಇಬ್ಬರ ಮನೆಗಳಲ್ಲೂ ನನಗೆ ಆಗಾಗ್ಗೆ ತಿಂಡಿ ಲಭ್ಯವಾಗುತ್ತಿತ್ತು. ಒಂದು ರೀತಿಯಲ್ಲಿ ಅವರ ಮನೆಗಳ ಭಾಗವಾಗಿ ಪರಿಣಮಿಸಿದ್ದ ನನ್ನ ಓದು ಒಂದು ಘಟ್ಟಕ್ಕೆ ಬಂದ ಬಳಿಕ ಜೈನಧರ್ಮವನ್ನು ಕುರಿತಂತೆ ಮೊತ್ತ ಮೊದಲ ಅಧ್ಯಾಯವನ್ನು ಬರೆದು ತೀ.ನಂ.ಶ್ರೀ.ಯವರಿಗೆ ಒಪ್ಪಿಸಿ ಒಂದು ವಾರದ ಬಳಿಕ ಅವರಿಂದ ಅಪಾರ ಪ್ರಶಂಸೆ ನಿರೀಕ್ಷಿಸಿ ಮನೆಗೆ ಹೋದರೆ ಅಪಾರ ನಿರಾಸೆ ಕಾದಿತ್ತು; ಒಂದೊಂದು ಪುಟದಲ್ಲೂ ಅವರು ಎಷ್ಟು ತಿದ್ದಿದ್ದರೆಂದರೆ ನನಗೆ ನಿಜವಾಗಿಯೂ ಕಣ್ಣೀರು ಬಂದಿತು. ಅವರು ಅತಿ ಎಚ್ಚರಿಕೆಯಿಂದ ವಾಕ್ಯವಾಕ್ಯವನ್ನೂ ಪರಿಶೀಲಿಸಿ ಸಂಶೋಧಕನ ಭಾಷೆ ಹೇಗಿರಬೇಕು ಎಂಬುದನ್ನು ಗಮನ ದಲ್ಲಿಟ್ಟುಕೊಂಡು ತಿದ್ದಿ, ನನಗೆ ಅತ್ಯಂತ ವಾತ್ಸಲ್ಯದಿಂದ ಹೇಳಬೇಕಾದ ಬುದ್ಧಿವಾದ ಹೇಳಿ ಕಳುಹಿಸಿದರು. ಒಬ್ಬ ಆದರ್ಶ ಮಾರ್ಗದರ್ಶಕ ಅವರಾಗಿದ್ದರು. ಮುಂದೆ ನನ್ನ ನಿಬಂಧದ ಬೇರೆ ಬೇರೆ ಅಧ್ಯಾಯಗಳನ್ನು ಅವರು ಅಷ್ಟು ತಿದ್ದಬೇಕಾದ ಅಗತ್ಯವಿರಲಿಲ್ಲ. ನನ್ನ ನಿಬಂಧವು ಪಿಎಚ್.ಡಿ. ಪದವಿಗೆ ಸ್ವೀಕೃತವಾದ ಅದರ ಪರ ವರದಿಗಳು ಪರೀಕ್ಷಕರಿಂದ ಬಂದಾಗ ಅವರು ಬಹು ಸಂತೋಷಪಟ್ಟರು; "ನಾನು ಬಂಜೆ ಅಲ್ಲ" ಎಂದೂ ಕೂಡ ಆಪ್ತರ ಮುಂದೆ ಉದ್ಗಾರ ತೆಗೆದರಂತೆ. ಅವರಿಗೆ ಇಬ್ಬರು ಮಕ್ಕಳು ಇದ್ದರು, ನಿಜ; ಆದರೆ ಅವರಿಗೆ ತಮ್ಮ ಬಳೀ ಪಿಎಚ್.ಡಿ. ಪದವಿ ಪಡೆದು ತಮ್ಮ ಶೈಕ್ಷಣಿಕ ಸಂತತಿಯನ್ನು ಮುಂದುವರಿಸುವವರೂ ಬೇಕಾಗಿತ್ತು. ಅವರ ಬಳಿ ಕೆಲಸಮಾಡಿ ಪಿಎಚ್.ಡಿ. ಪದವಿ ಪಡೆದವರಲ್ಲಿ ನಾನೇ ಮೊದಲು, ನಾನೇ ಕೊನೆ.

ನನಗೆ ಪಿಎಚ್.ಡಿ. ಪದವಿ ದೊರಕಲಿರುವ ಸುದ್ದಿ ಖಚಿತವಾಗುತ್ತಿದ್ದಂತೆ ಅದರ ಮಾರನೇಯ ದಿನವೇ ಅವರ ಮನೆಗೆ ಹೋಗಿ, "ಸರ್, ನನಗೆ ಪಿಎಚ್.ಡಿ. ಬಂದಮೇಲೂ ನೀವೇ ಮಾರ್ಗದರ್ಶಕರಾಗಿರಬೇಕು" ಎಂದು ವಿನಯದಿಂದ ಬೇಡಿಕೊಂಡಾಗ ಅವರು ಸಂತೋಷದಿಂದ ತಲೆ ಅಲ್ಲಾಡಿಸಿದರು. ಆ ಮಾತನ್ನು ಅವರು ಉಳಿಸಿಕೊಂಡರು.

ಅವರ ಒಂದು ಗುಣ–ಎಲ್ಲದರಲ್ಲೂ ಅಚ್ಚುಕಟ್ಟು. ಬಟ್ಟೆ ಹಾಕಿಕೊಳ್ಳುವುದರಿಂದ ಹಿಡಿದು ಮನೆಯಲ್ಲಿ ಮೇಜಿನ ಪುಸ್ತಕಗಳು, ಕಪಾಟಿನ ಪುಸ್ತಕಗಳು ಸೇರಿದಂತೆ ಮಾತು, ಬರವಣಿಗೆ ಎಲ್ಲವೂ ಅಚ್ಚುಕಟ್ಟು, ಎಲ್ಲದರಲ್ಲೂ ಒಪ್ಪ ಓರಣ. ಅದೊಂದು ಗುಣವನ್ನು ನಾನು ಮೈಗೂಡಿಸಿಕೊಳ್ಳಲಾರದೆ ಹೋದೆ. ಆಗಾಗ್ಗೆ ಉಪಾಹಾರ ದೊರಕುತ್ತಿತ್ತು. ನಿಜ ಹೇಳಬೇಕೆಂದರೆ, ನಮ್ಮ ಗುರುಗಳ ಜೊತೆ ಅವರ ಅಧ್ಯಯನ ಕೊಠಡಿಯಲ್ಲಿ ಕುರ್ಚಿಗೆ ಒರಗಿಕೊಳ್ಳದೆ ಮಾತನಾಡುತ್ತಿದ್ದರೆ ಒಳಗಿಂದ ಅವರ ಶ್ರೀಮತಿಯವರು ತಿಂಡಿ ತರುವುದನ್ನೇ ನಿರೀಕ್ಷಿಸುತ್ತಿದ್ದೆ. ಗುರುಗಳಂತೆ ಗುರುಪತ್ನಿಯರು ನಮ್ಮ ಬಗ್ಗೆ ಅಪಾರ ಮಮತೆಯಿಟ್ಟಿದ್ದರು. ಕ.ವೆಂ. ರಾಘವಾಚಾರ್, ಎನ್. ಅನಂತರಂಗಾಚಾರ್, ಎಸ್.ವಿ ಪರಮೇಶ್ವರ ಭಟ್ಟರ ಮನೆಗಳಲ್ಲೂ ಅದೇ ವಾತ್ಸಲ್ಯ ಕಾಣುತ್ತಿದ್ದಿತು. ರಾಘವಾಚಾರ್ಯರದು ಸ್ವಲ್ಪ ಸಿಡುಕು ಮುಖ ; ಅವರನ್ನು ನಾವು–ಹುಡುಗರು– "ದೂರ್ವಾಸ" ಎಂದೇ ಒಮ್ಮೊಮ್ಮೆ ನಮ್ಮಲ್ಲೇ ಲೇವಡಿ ಮಾಡುತ್ತ ಮಾತನಾಡಿಕೊಳ್ಳುತ್ತಿದ್ದೆವು. ಸ್ವಲ್ಪ ಮುಂಗೋಪಿಗಳೂ ಹೌದು. ಅವರ ಮನೆಗೆ ಯಾವುದಾದರೂ ಪುಸ್ತಕ ಎರವಲು

ಪಡೆಯಲಿಕ್ಕೆ ನಡುನುಡುಗುತ್ತ ಹೋದರೆ, ಅವರು "ಕೂತುಕೋ" ಎಂದು ಹೇಳಿ ಒಳಗಿನಿಂದ ಅವರೇ ಉಪ್ಪಿಟ್ಟು, ಪುಳಿಯೊಗರೆ, ಸಿಹಿತಿಂಡಿ ತಂದು "ತಿನ್ನು" ಎನ್ನುತ್ತಿದ್ದರು. ಅವರ ಹೃದಯ ಅಂತಹುದು.

ಅವರೆಲ್ಲ ತಮ್ಮನ್ನು ತಾವು ಸಂಪೂರ್ಣವಾಗಿ ತಮ್ಮ ಉಪಾಧ್ಯಾಯ ವೃತ್ತಿಯಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಂಡು ತಾವು ಆರಿಸಿಕೊಂಡ ಕ್ಷೇತ್ರಗಳಲ್ಲಿ ವಿಶೇಷ ಕೆಲಸವನ್ನು ಮಾಡಿದವರು. ಕಾವ್ಯ ವಿಮರ್ಶೆ ಕ್ಷೇತ್ರದಲ್ಲಿ ಕುವೆಂಪು, ಹಳಗನ್ನಡ ಕ್ಷೇತ್ರ ಸಂಶೋಧನೆಗಳಲ್ಲಿ ಡಿಎಲ್‌ಎನ್, ಛಂದಸ್ಸು ಭಾಷಾವಿಜ್ಞಾನ ಕ್ಷೇತ್ರಗಳಲ್ಲಿ ತೀನಂಶ್ರೀ, ಗ್ರಂಥಸಂಪಾದನೆ ಕ್ಷೇತ್ರದಲ್ಲಿ ಎನ್. ಅನಂತರಂಗಾಚಾರ್, ಅನುವಾದ ಕ್ಷೇತ್ರದಲ್ಲಿ ಕ.ವೆಂ. ರಾಘವಾಚಾರ್, ಸೃಜನಾತ್ಮಕ ಕ್ಷೇತ್ರದಲ್ಲಿ ಎಸ್.ವಿ. ಪರಮೇಶ್ವರ ಭಟ್ ಇಂದಿಗೂ ತಮ್ಮ ಅಪಾರ ಕೆಲಸಗಳಿಂದ ಚಿರಸ್ಮರಣೀಯ ರಾಗಿ ಉಳಿದಿದ್ದಾರೆ. ಅವರು ಎಂದೂ ಉನ್ನತ ಹುದ್ದೆಗಳಿಗಾಗಿ ರಾಜಕೀಯ ಮಾಡಿದವರಲ್ಲ; ಪರಸ್ಪರ ಸ್ಪರ್ಧೆಗೆ ಇಳಿದವರಲ್ಲ. ಇದ್ದುದರಲ್ಲಿ ಅವರಿಗೆ ತೃಪ್ತಿ ಇದ್ದರೆ, ತಾವು ಆರಿಸಿಕೊಂಡ ವಿಷಯದ ಬಗ್ಗೆ ಮಾತ್ರ ಇನ್ನೂ ಹೆಚ್ಚು ಕೆಲಸ ಮಾಡುವ ಬಯಕೆಯುಳ್ಳವರು. ಯಾವನೇ ವ್ಯಕ್ತಿ ಬೆಳೆಯುವ ರೀತಿ ಅದು; ಲೌಕಿಕವಾಗಿ ವೃತ್ತಿಮನೋಧರ್ಮ, ಜ್ಞಾನದ ಬಗ್ಗೆ ತೀವ್ರ ಅತೃಪ್ತ ಮನೋಧರ್ಮ ಅವರಿಂದ ನಾನು ಕಲಿತಿರುವುದು.

ನಾನು ಸಂಶೋಧನ ಕ್ಷೇತ್ರಕ್ಕೆ ಬರಲು ಮುಖ್ಯಕಾರಣ – ಆಗಲೇ ಸೂಚಿಸಿದಂತೆ ತೀ.ನಂ.ಶ್ರೀ. ಮತ್ತು ಡಿ.ಎಲ್.ಎನ್. ಇಬ್ಬರೂ ಸದಾ ಹೊರ ಕ್ಷೇತ್ರಗಳತ್ತ ಮುಖಮಾಡಿ ಅಧ್ಯಯನ ನಡೆಸುತ್ತ, ಕಲ್ಪನೆಯನ್ನು ಸಂಪೂರ್ಣವಾಗಿ ಹದ್ದುಬಸ್ತಿನಲ್ಲಿಟ್ಟು ಕೆಲಸ ಮಾಡುತ್ತಿದ್ದವರು. ಅವರು ಎಂದೂ ಇನ್ನೊಬ್ಬರ ಶೋಧಗಳನ್ನು ತಮ್ಮವೆಂದು ಬಿಂಬಿಸಿಕೊಳ್ಳಲಿಲ್ಲ. ಇತರ ಹಿಂದಿನ ಸಂಶೋಧಕರ ಬರಹಗಳನ್ನು ಆಮೂಲಾಗ್ರವಾಗಿ ಓದಿ ಅವುಗಳನ್ನು ಸೂಕ್ತ ರೀತಿಯಲ್ಲಿ ಸ್ಮರಿಸಿ ತಮ್ಮ ಹೊಸ ಹೊಳಹುಗಳನ್ನು ಪ್ರತಿಪಾದಿಸುತ್ತಿದ್ದರು. ಅವರ ಯಾವುದೇ ಬರಹವನ್ನು ಓದಿದರೂ ಅಲ್ಲಿ ಎಲ್ಲಿಯೂ ಅವರು ತಮ್ಮನ್ನು ತಾವು ವೈಭವೀಕರಿಸಿಕೊಂಡಿರುವುದು ಅಪ್ಪಿತಪ್ಪಿಯೂ ಕಾಣಿಸುವುದಿಲ್ಲ. ತಾವು ಕಂಡುಹಿಡಿದ ಹೊಸ ಸಂಗತಿಯು ಹೊರಬರಲು ತಾವು ನಿಮಿತ್ತ ಮಾತ್ರ ಎಂಬ ವಿನೀತ ಭಾವನೆ ಎದ್ದು ಕಾಣುತ್ತದೆ. ಅಷ್ಟೇ ಮುಖ್ಯ, ಅವರ ವಿಶಾಲ ಹೃದಯ, ಅವರೂ ಸೇರಿದಂತೆ, ತ. ಸು. ಶಾಮರಾವ್, ಎನ್. ಅನಂತರಂಗಾಚಾರ್ ಇತ್ಯಾದಿ ಎಲ್ಲರೂ ಬಡ ಹುಡುಗರಿಗೆ ಧನ ಅಥವಾ 'ವಾರಾನ್ನ'ಗಳ ಮೂಲಕ ಸಹಾಯಮಾಡುತ್ತಿದ್ದರು. ಒಬ್ಬ ಬಡ ವಿದ್ಯಾರ್ಥಿಗೆ ಡಿ.ಎಲ್.ಎನ್. ಅವರು ಪರೀಕ್ಷೆ ಫೀಸ್ ಕಟ್ಟಲು ಹನ್ನೆರಡು ರೂಪಾಯಿ ನೀಡಿದರು; ಮುಂದೆ ಆತ ಉಪಾಧ್ಯಾಯನಾದ ಬಳಿಕ ಅದನ್ನು ಹಿಂದಿರುಗಿಸಲು ಹೋದಾಗ ಅವರು ಅದನ್ನು ನಿರಾಕರಿಸಿ ಮದ್ರಾಸ್ ವಿಶ್ವವಿದ್ಯಾಲಯದ ಕಿಟ್ಟೆಲ್ ನಿಘಂಟು ಕೊಂಡುಕೊಳ್ಳಲು ಹೇಳಿದರು. ಇದೆಲ್ಲ ನನಗೆ ಸ್ಫೂರ್ತಿ. ಅವರನ್ನು ಹತ್ತಿರದಿಂದ ಬಲ್ಲ ನಾನು ಅವರ ಆ ಎಲ್ಲ ಮಾರ್ಗದಲ್ಲಿ ತಕ್ಕಮಟ್ಟಿಗೆ ಕ್ರಮಿಸಿದ್ದೇನೆ ಎಂಬುದನ್ನು ವಿನಯದಿಂದ ಸ್ಮರಿಸಿಕೊಳ್ಳಬಯಸುತ್ತೇನೆ. ಅವರೆಲ್ಲ ಹುಟ್ಟಿನಿಂದ ಬ್ರಾಹ್ಮಣರಾಗಿದ್ದರೂ ತಮ್ಮ ವಿದ್ಯಾರ್ಥಿಗಳಲ್ಲಿ ಜಾತಿಭೇದವನ್ನು ಎಂದೂ ಮಾಡಲಿಲ್ಲ. ಅವರು ಆ ಕಾಲಕ್ಕೆ ಎಷ್ಟೇ ಬೆಳೆದಿದ್ದರೂ ತಮ್ಮ ಹಿಂದಿನ ಗುರುಪರಂಪರೆಯನ್ನು

ಭಕ್ತಿಯಿಂದ ಸ್ಮರಿಸಿಕೊಳ್ಳುತ್ತಿದ್ದರು. ಅವರ ಸಾರ್ವಜನಿಕ ಉಪನ್ಯಾಸಗಳೆಂದರೆ ಬರೀ ಔಪಚಾರಿಕ ಮಾತುಗಳಾಗಿರಲಿಲ್ಲ – ಒಂದೊಂದು ವಿಷಯದ ಬಗ್ಗೆಯೂ ಸಾಕಷ್ಟು ಸಿದ್ಧತೆ ಮಾಡಿಕೊಂಡಿರುತ್ತಿದ್ದರು.

ಬಸವಣ್ಣನವರನ್ನು ಕುರಿತಂತೆ ಒಬ್ಬ ವಚನಕಾರನು, ಅವರ "ನೆನಹು ಸುಖ ಸಮುದ್ರವಯ್ಯಾ" ಎಂದು ಉದ್ಗರಿಸಿದ್ದಾನೆ. ೧೯೪೮–೧೯೫೮ ಈ ಅವಧಿಯ ನನ್ನ ವಿದ್ಯಾರ್ಥಿ ಜೀವನದ ಅವಧಿಯ "ನೆನಪು ಸುಖ ಸಮುದ್ರವಯ್ಯಾ". ಮೂವರು ಗುರುಗಳಿಗೆ ಸಾರ್ವಜನಿಕ ಗೌರವ ಸಲ್ಲಿಸಿದ್ದೇನೆ – ಬೆಂಗಳೂರಲ್ಲಿ ಕುವೆಂಪು, ತೀ.ನಂ.ಶ್ರೀ. ಪ್ರತಿಮೆಗಳ ಸ್ಥಾಪನೆ ಮತ್ತು ಮೈಸೂರಿನಲ್ಲಿ ಡಿ.ಎಲ್.ಎನ್. ಹೆಸರನ್ನು ಪ್ರಮುಖ ಬೀದಿಯೊಂದಕ್ಕೆ ಇಡುವುದು ಈ ಬಗ್ಗೆ ನನ್ನ ಪ್ರಯತ್ನ ಫಲಿಸಿದೆ. ನನ್ನ ಹಲವು ಕೃತಿಗಳನ್ನು ನನ್ನ ತಂದೆ–ತಾಯಿಗೆ, ಗುರುಗಳಿಗೆ ಅರ್ಪಣೆ ಮಾಡಿದ್ದೇನೆ. ನನ್ನ ಪ್ರಾಮಾಣಿಕ ಬದುಕು, ಬರಹಗಳ ಮೂಲಕ ನನ್ನ ಆ ಗುರುಗಳಿಗೆ ನನ್ನ ಕಿರುಕಾಣಿಕೆಯನ್ನು ಸಲ್ಲಿಸಿ ಕೃತಾರ್ಥನಾಗಿದ್ದೇನೆ.

❖

# ಕನ್ನಡ ದೀಕ್ಷಾಗುರು

## (ಡಾ॥ ಎಂ. ಚಿದಾನಂದಮೂರ್ತಿ)

● *ಪ್ರೊ॥ ಅ.ರಾ. ಮಿತ್ರ*

**ಕೋ**ಲಾರದ ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಚಿದಾನಂದಮೂರ್ತಿಗಳು ನಮಗೆಲ್ಲ ತುಂಬ ಪ್ರಿಯರಾದ ಕನ್ನಡ ಅಧ್ಯಾಪಕರಾಗಿದ್ದರು. ಆರ್ಟ್ಸ್ ವಿದ್ಯಾರ್ಥಿಗಳು ಆಗ ವಿಜ್ಞಾನದ ವಿದ್ಯಾರ್ಥಿಗಳಿಗಿಂತ ಎರಡು ಗಂಟೆ ಹೆಚ್ಚಾಗಿ ಕನ್ನಡವನ್ನೇ ಅಭ್ಯಾಸ ಮಾಡಬೇಕಾಗಿತ್ತು. ಆಗ ಗುರುಗಳೆಂದರೆ ಮಾರು ದೂರದಲ್ಲೇ ಕೈಮುಗಿದು ದೂರ ಓಡಿಹೋಗುತ್ತಿದ್ದ ನಮಗೆ ಇವರು ತುಂಬ ದೊಡ್ಡವರೆಂಬ ಭಾವನೆ. ಹಾಗೆ ನೋಡಿದರೆ ಆಗ ಅವರಿಗಿನ್ನೂ ಇಪ್ಪತ್ತನಾಲ್ಕು ವಯಸ್ಸು. ನಮಗಿಂತ ಮೂರು ನಾಲ್ಕು ವರುಷ ದೊಡ್ಡವರಿರಬಹುದು ಅಷ್ಟೆ. ಆದರೂ ನಮಗೆ ಅವರು ಹುಡುಗರು ಎನ್ನಿಸಲೇ ಇಲ್ಲ. ಸಂಜೆ ದೀರ್ಘ ವಾಕಿಂಗ್ ಹೋಗುವ ಅಭ್ಯಾಸದ ಅವರ ಕೈಗೆ ವಾಕಿಂಗಿನ ಅವಧಿಯಲ್ಲಿ ನಾವು ಸಿಕ್ಕಿಹಾಕಿಕೊಂಡಾಗ ಲಕ್ಷಣವಾಗಿ ವಿರಾಮವಾಗಿ ನಿಂತು ಮಾತನಾಡಿಸುವ ಸ್ವಭಾವ ಅವರದು. ನಮ್ಮ ಊರು ಯಾವುದು, ಅಲ್ಲಿ ಏನೇನು ವಿಶೇಷ, ಮನೆಯಲ್ಲಿ ಯಾರು ಯಾರು ಇದ್ದಾರೆ, ಈಚೆಗೆ ನಾವು ಏನು ಓದಿದ್ದೇವೆ, ನಮ್ಮ ಇಷ್ಟದ ಆಟ ಯಾವುದು–ಇಂಥ ಲೋಕಾಭಿರಾಮದ ಹತ್ತಾರು ಪ್ರಶ್ನೆಗಳನ್ನು ಸಲೀಲವಾಗಿ ಕೇಳಿಬಿಡುತ್ತಿದ್ದರು. ನಮಗೋ ಉಸಿರು ಸಿಕ್ಕಿಕೊಂಡ ಅನುಭವ. ಅಧ್ಯಾಪಕರು ಎಂದರೆ ಸಾಮಾಜಿಕವಾಗಿ ಉನ್ನತ ಸ್ತರದವರು, ಬೌದ್ಧಿಕ ಜೀವಿಗಳು. ತುಂಬ 'ಕ್ಷೇಮೆ–ದೂರ'ದಲ್ಲಿ ಇರಬೇಕಾದವರು ಎಂದು ಭಾವಿಸುತ್ತಿದ್ದ ನಮಗೆ ಈತ ಇಷ್ಟು ಹತ್ತಿರ ಬರುತ್ತಿದ್ದಾರಲ್ಲ ಎಂಬ ಮುಜುಗರ. ಬೇಗ ಉತ್ತರ ಕೊಟ್ಟು ಅವರಿಂದ ಕಳಚಿಕೊಳ್ಳುವ ಕಾತರ ನಮಗೆ. ಆದರೆ ಮೂರ್ತಿಗಳು ಉಡದ ಪಟ್ಟು ಹಾಕಿ ನಮ್ಮನ್ನು ನಿಲ್ಲಿಸಿಕೊಳ್ಳುತ್ತಿದ್ದರು. ಬಡಹುಡುಗರಿಗೆ ಹಣಕಾಸಿನ ಸಹಾಯ ಮಾಡುವುದು, ಪಾಠ ಅರ್ಥವಾಗದಿದ್ದರೆ ಯಾವಾಗ ಬೇಕಾದರೂ ಬಂದು ನನ್ನನ್ನು ಕಾಣಬಹುದು ಎಂದು ಘೋಷಿಸುವುದು, ಸಾಹಿತ್ಯ ಚಟುವಟಿಕೆಗಳಲ್ಲಿ ನಮ್ಮನ್ನು ತೊಡಗಿಸುವುದು, ಕರೆಸಿದ ಸಾಹಿತಿ ಅತಿಥಿಗಳನ್ನೆಲ್ಲ ವೈಯಕ್ತಿಕವಾಗಿ ಪರಿಚಯಿಸಿ ಅವರುಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ನಮಗೆ ಕೊಡುವುದು, ಚರ್ಚಾಪಟುಗಳನ್ನು ಗುರುತಿಸಿ ಅವರಿಗೆ ತರಪೇತು ಕೊಡುವುದು ಇಂಥ ಹತ್ತಾರು ಚಟುವಟಿಕೆಗಳ ಚೇತನ ಅವರದು. ಹೀಗಾಗಿ ಸ್ವಲ್ಪ ಕಾಲದಲ್ಲೇ ನಮಗೆ ಅವರು 'ಬೆದರುಗೊಂಬೆ' ಎನ್ನಿಸದೆ ತೀರ ಬೇಕಾದವರಾಗಿಬಿಟ್ಟರು.

ಆದರೆ ಒಂದೇ ಕೊರಗು ನಮಗೆ. ಇಂಥ ಸರಳ ಸ್ನೇಹಶೀಲ ನಗುಮೊಗದ ಜೀವಿ ತರಗತಿಯೊಳಗೆ ಮಾತ್ರ ತುಂಬ ವಿಭಿನ್ನ. ಅವರಿಗೆ ತುಂಬ ಪ್ರಿಯವಾಗಿದ್ದ ತಿಳಿ ಹಳದಿ

ಬಣ್ಣದ ಕಾಟನ್ ಸೂಟನ್ನು ಧರಿಸಿ ತರಗತಿ ಹೊಕ್ಕು ಟೇಬಲ್ ಮುಂದೆ ನಿಂತಾಗ ತುಂಬ ಗಂಭೀರ ವ್ಯಕ್ತಿಯಾಗಿ ಮಾರ್ಪಾಟಾಗಿಬಿಡುತ್ತಿದ್ದರು. ಕೈಯಲ್ಲಿ ನಾಗವರ್ಮನ 'ಕಾದಂಬರೀ ಸಂಗ್ರಹ' ಗ್ರಂಥ. ಪದ್ಯಗಳನ್ನು ತುಂಬ ಭಾವುಕರಾಗಿ ಓದುತ್ತಿದ್ದರು. ಮೊದಲು ಪದ್ಯದ ಪೂರ್ಣ ಪಠನ, ಅನಂತರ ಅನ್ವಯ ಪಠನ, ಆಮೇಲೆ ಕಠಿಣ ಶಬ್ದಗಳ ಅರ್ಥ ನಿರ್ವಚನ, ಮುಂದೆ ಪದ್ಯದ ಆಶಯ ವಿವರಣ, ಅದಕ್ಕೆ ಸಂಬಂಧಿಸಿದ ಬೇಂದ್ರೆ, ಕುವೆಂಪು ಮೊದಲಾದ ಕವಿಗಳ ಕವಿತಾಖಂಡಗಳ ಉದ್ಧರಣ–ಇದು ಅವರ ಪ್ರವಚನ ಕ್ರಮ. ಪುಸ್ತಕ ಕೈಯಲ್ಲಿ ಹಿಡಿದರೆಂದರೆ ಅವರಿಗೆ ಇಡೀ ತರಗತಿಯಲ್ಲಿ ಯಾರೂ ಕಣ್ಣಿಗೆ ಬೀಳುತ್ತಿರಲಿಲ್ಲ. ಅವರ ಗಮನವೆಲ್ಲ ಗೋಡೆಯ ತೊಲೆ, ಕಿಟಕಿ, ಹೆಂಚು ಇತ್ಯಾದಿಗಳ ಕಡೆ. ಅವರ ಪ್ರವಚನ–ತನ್ಮಯತೆಯನ್ನು ನಾನು ಮತ್ತಾರಲ್ಲೂ ಕಂಡಿಲ್ಲ. ಇಷ್ಟು ಸುಂದರವಾಗಿ ಪ್ರೇಮಪ್ರಕರಣವನ್ನು ಗಂಭೀರವಾಗಿ ಹೇಳುವ ಈ 'ಪ್ರಾಣಿ' ಇತರ ಅಧ್ಯಾಪಕರುಗಳಾದ ಪ್ರಭುಶಂಕರ, ಬೋರೇಗೌಡರು, ಚೆನ್ನವೀರಯ್ಯ ಮೊದಲಾದವರಂತೆ ನಮ್ಮ ಕಡೆ ಹಾಗೂ ಹುಡುಗಿಯರ ಕಡೆ ಯಾಕೆ ಒಮ್ಮೆಯೂ ಕಣ್ಣು 'ಹಾಯಿಸು'ವುದಿಲ್ಲ ಎಂಬ ಪ್ರಶ್ನೆ ಎಷ್ಟೋ ಸಲ ನಮ್ಮನ್ನು ಕಾಡುತ್ತಿತ್ತು. ಒಂದು ಸಲವಂತೂ ನಾನು, ಚೌಡಪ್ಪ, ಶ್ರೀರಾಮಯ್ಯಶೆಟ್ಟಿ, ವೆಂಕಟಸುಬ್ಬಯ್ಯ ಇವರೆಲ್ಲ ಗುಟ್ಟಾಗಿ ಮಾತಾಡಿಕೊಂಡಿದ್ದೂ ಉಂಟು. ಹೀಗೂ ಇವರು ಚಾವಣಿ ತೊಲೆಯನ್ನು ನೋಡುವ ಗಿರಾಕಿ ತಾನೇ. ಆದ್ದರಿಂದ ಒಂದು ಭಾನುವಾರ ಯಾರಿಗೂ ಕಾಣದಂತೆ ತರಗತಿಗೆ ನುಗ್ಗಿ ಏಣಿ ಹಾಕಿಕೊಂಡು ಆ ಚಾವಣಿಯ ತೊಲೆಯ ಮೇಲೆ ದಪ್ಪ ಅಕ್ಷರಗಳಲ್ಲಿ "ದಯವಿಟ್ಟು ಕೆಳಗೆ ನೋಡಿ" ಎಂದು ಯಾಕೆ ಬರೆಯಬಾರದು? ಇದು ನಮ್ಮ ಆಲೋಚನೆ. ಆದರೆ ಆಗಿನ ಕಾಲದ ಬಿಗಿ ಆಡಳಿತದಲ್ಲಿ ಇದು ಕಾರ್ಯರೂಪಕ್ಕೆ ಬರಲಿಲ್ಲವೆನ್ನಿ!

ಕೋಲಾರದಲ್ಲಿದ್ದಾಗಲೇ ಅವರ ಕಲಿಕೆಯ ದಾಹ ಸ್ಫುಟವಾಗತೊಡಗಿತ್ತು. ಕೋಲಾರದ ಸುತ್ತಮುತ್ತಣ ಪ್ರದೇಶಗಳ ಪರಿಚಯ ಮಾಡಿಕೊಳ್ಳುವ ಹವ್ಯಾಸ ಅವರದು. ಸಂಸ್ಕೃತಾಭ್ಯಾಸದ ಹುಚ್ಚೂ ಅವರಿಗೆ ಅಲ್ಲೇ ಬಲಿಯಿತೆಂದು ಕಾಣುತ್ತದೆ. 'ತಾತಾಚಾರ್' ಎಂಬ ಹೈಸ್ಕೂಲು ಅಧ್ಯಾಪಕ ವಿದ್ವಾಂಸರ ಸ್ನೇಹ ಬೆಳೆಸಿದ್ದರು. ಶೆಲ್ವಪುಳ್ಳೆ ಅಯ್ಯಂಗಾರ್ ಎಂಬ ಧೀಮಂತ ಸಂಸ್ಕೃತ ವಿದ್ವಾಂಸರ ಬಳಿ ಅವರು ಶಾಕುನ್ತಲಾ ನಾಟಕವನ್ನು ತುಂಬ ಶ್ರದ್ಧೆಯಿಂದ ಅಭ್ಯಾಸ ಮಾಡಿದಂತೆ ನನ್ನ ನೆನಪು.

ನಾನು ಮೈಸೂರಿನಲ್ಲಿ ಕನ್ನಡ ಆನರ್ಸ್ ಓದುತ್ತಿದ್ದಾಗ ಚಿದಾನಂದಮೂರ್ತಿಗಳೂ ಮೈಸೂರಿಗೆ ಬಂದರು. ಎಂ.ಎ. ತರಗತಿಗಳಲ್ಲಿ ತೀನಂಶ್ರೀಯವರ ಭಾಷಾವಿಜ್ಞಾನದ ಪಾಠದ ಅವಧಿಯಲ್ಲಿ ಅವರು ಅನಧಿಕೃತವಾಗಿ ನಮ್ಮ ಸಹಪಾಠಿಗಳೂ ಆಗಿದ್ದರು. ಅವರ ಸಂಶೋಧನ ಪ್ರಜ್ಞೆ ಅರಳಿಕೊಂಡದ್ದು ಈ ಅವಧಿಯಲ್ಲಿ. ಒಂದು ವಿಷಯಕ್ಕೆ ತಮ್ಮನ್ನು ಸಂಪೂರ್ಣ ತೊಡಗಿಸಿಕೊಳ್ಳುವ ಗುಣ ಅವರದು. ನನ್ನ ಕಣ್ಣಿಗೆ ಈಗಲೂ ಅವರು ಗಂಭೀರ ಚಿಂತಕರಾಗಿಯೇ ಕಾಣುತ್ತಾರೆ. ಚಳವಳಿಯಲ್ಲಿರಲಿ, ತರಗತಿಯಲ್ಲಿರಲಿ, ಉಪನ್ಯಾಸ ಮಾಡುತ್ತ ನಿಲ್ಲಲಿ–ಈಗಲೂ ಅದೇ ಗಾಂಭೀರ್ಯ, ತೊಲೆ ನೋಡುವ ಗುಣ. ಆದರೆ ಖಾಸಗಿಯಾಗಿ ಸಿಕ್ಕಾಗ ಮಾತುಕತೆಗಳಲ್ಲಿ ಹಿಂದಿನಂತೆಯೇ ಆತ್ಮೀಯತೆ, ಆಪ್ತತೆ. ಈ ಎರಡು ಹಳಿಗಳೂ ಸಮಾನಾಂತರವಾಗಿಯೇ ಸಾಗುತ್ತಿರುವುದು ಈಗಲೂ ನನಗೊಂದು ಬೆರಗು.

❖

# ನನ್ನ ಪಾಲಿನ ಗುರುಗಳು

## (ಎನ್.ಎಸ್. ಸುಬ್ಬರಾಯರು)

*• ಎ. ಸೀತಾರಾಮಯ್ಯ*

ಮೈಸೂರಿನಲ್ಲಿ ನನ್ನ ಕಾಲೇಜಿನ ದಿನಗಳು ಸುವರ್ಣ ದಿನಗಳಾಗಿದ್ದವು. ನನ್ನ ಗುರುಗಳ ಪೈಕಿ ಮೊದಲು ಪ್ರಸ್ತಾಪ ಮಾಡಬೇಕಾದ ಗುರುಗಳಾದ ಎನ್.ಎಸ್. ಸುಬ್ಬರಾವ್ ವಿಚಾರ. ಸುಬ್ಬರಾಯರೂ ಕೇಂಬ್ರಿಜ್ಜಲ್ಲಿ 'ಟ್ರೈಪಾಸ್' ಪಾಸು ಮಾಡಿಕೊಂಡು ಬಂದಿದ್ದವರೇ 'ಬಾರ್ ಅಟ್ ಲಾ' ಎಂಬ ನ್ಯಾಯವಾದಿ ಪರೀಕ್ಷೆಯಲ್ಲಿಯೂ ಉತ್ತೀರ್ಣರಾಗಿದ್ದರು.

ಸುಬ್ಬರಾಯರ ಆಡಳಿತ ಕಾಲದಲ್ಲಿ ಕಾಲೇಜಿಗೆ ಒಂದು ಹೊಸ ಶಿಸ್ತು ಬಂತು. ಎಲ್ಲ ಪಾಠ ಕ್ರಮಗಳೂ ಗೊತ್ತಾದ ಕಾಲಕ್ಕೆ, ಗೊತ್ತಾದ ರೀತಿ, ಗೊತ್ತಾದ ಕೊಠಡಿಗಳಲ್ಲಿ, ಗೊತ್ತಾದ ಮೇಷ್ಟ್ರುಗಳಿಂದಲೇ ನಡೆಯಬೇಕು. ಹುಡುಗರ ಹಾಜರಿ, ಗೈರುಹಾಜರಿ ತುಂಬಾ ಖಚಿತವಾಗಿ ನಡೆದು ಉಪಾಧ್ಯಾಯರು ಹುಡುಗರ ಹಾಜರಿ ರಿಜಿಸ್ಟ್ರುಗಳಲ್ಲಿ ಪಾಠದ ದಿನಗಳಲ್ಲಿ ಸಹಿ ಹಾಕಬೇಕಿತ್ತು. ಅದನ್ನು ವಾರಕ್ಕೆ ಒಂದು ಸಲವೊ ತಿಂಗಳಿಗೆ ಒಂದು ಸಲವೊ ಕಡ್ಡಾಯವಾಗಿ ಒಟ್ಟುಮಾಡಿ ಸರಿಯಾಗಿ ಟರ್ಮು ರಿಜಿಸ್ಟ್ರರ್ ತುಂಬಬೇಕು. ಕಾಲೇಜಿಗೆ ಸರಿಯಾಗಿ ಬಾರದಿದ್ದ ಹುಡುಗರ ಹೆಸರು ಪ್ರಕಟವಾಗಬೇಕು. ಅವರಿಗೆ ಎಚ್ಚರ ಕೊಡಬೇಕು. ಅಂಥವರು ಸುಬ್ಬರಾಯರ ಕ್ಲಾಸಿನ ವಿದ್ಯಾರ್ಥಿಗಳಾದರೆ ಅವರಿಗೆ ಒಂದೆರಡು ನಿಮಿಷ ಗ್ರಹಚಾರ ಬಿಡಿಸಬೇಕು. ಅಂಥದಕ್ಕೆ ಸಿಕ್ಕಿದ ವಿದ್ಯಾರ್ಥಿಗಳಾಗಲಿ ಆ ಸಮಯದಲ್ಲಿ ಒಟ್ಟು ಕ್ಲಾಸಾಗಲಿ ತಲೆ ತಗ್ಗಿಸಿರಬೇಕೇ ಹೊರತು, ತಲೆ ಎತ್ತಿ ಕುಳಿತುಕೊಳ್ಳಲು ಆಗುತ್ತಿರಲಿಲ್ಲ. ಅಷ್ಟು ಭಯ ಅವರನ್ನು ಕಂಡರೆ. ಇದನ್ನು ತಪ್ಪಿಸಿಕೊಳ್ಳಲು ಎಷ್ಟೊ ಮಂದಿ ಕೃಷ್ಣರಾಯರೆಂಬ ಗುಮಾಸ್ತರಲ್ಲಿ ನವನೀತ ವೃತ್ತಿ ನಡೆಸಿ ಅಕೃತಾರ್ಥರಾದ್ದುಂಟು. ಯಜಮಾನರಿಗಿಂತ ಬಿರುಸು ಅವರು. ಅವರು ಅಡಿಯಷ್ಟು ಸುಮಾರು ಎತ್ತರವಾಗಿದ್ದವರು ಸುಬ್ಬರಾಯರು. ಚೆಲುವರೂ ಬುದ್ಧಿವಂತರೂ ದಕ್ಷರೂ ಪ್ರಿನ್ಸಿಪಾಲರೂ ಆದ ಅವರ ಎದುರಿಗೆ 'ಕಂ – ದರ್ಪ'?

ಸುಬ್ಬರಾಯರ ನೆನಪಿನ ಶಕ್ತಿ ಅದ್ಭುತವಾದ್ದು. ವರ್ಗದಲ್ಲಿನ ನೂರೈವತ್ತು–ಇನ್ನೂರು ಜನ ಹುಡುಗರ ಹೆಸರನ್ನು ೨–೩ ಸಲ ಕರೆಯುವ ಹೊತ್ತಿಗೆ ಅನುಕ್ರಮವಾಗಿ ಎಲ್ಲರ ಹೆಸರೂ ಅಡ್ಡ ಹೆಸರುಗಳ ಜೊತೆಗೆ ಅವರ ಬಾಯಿಗೆ ಬಂದುಬಿಡುತ್ತಿತ್ತು. ಆ ನೆನಪು ಛಲದ ದುಷ್ಪ್ರತೀತಿಗೆ ಭೀತಿಯನ್ನು ಎರೆದಿತ್ತು.

ಹಾಗೆಯೇ ತರಗತಿಗಳಲ್ಲಿ ಹುಡುಗರು ಹೇಗೆ ಎಲ್ಲೆಲ್ಲಿ ಕುಳಿತುಕೊಳ್ಳುತ್ತಿದ್ದರೆಂದು ಅವರು ಬಲ್ಲರು. ಒಮ್ಮೆ ಅಥವಾ ಎರಡು ಸಾರಿ ಕುಳಿತುಕೊಂಡದ್ದನ್ನು ನೋಡಿ ಯಾರಾದರೂ ಸ್ಥಾನಪಲ್ಲಟ ಮಾಡಿದ್ದರೆ ಅವರಿಗೆ ತಕ್ಕ ಶಾಸ್ತಿಯಾಗುತ್ತಿತ್ತು. ಒಂದು ಸಲ ಒಬ್ಬ ಹುಡುಗ ತಾನು ಸ್ಥಾನಾಂತರ ಮಾಡಿಲ್ಲವೆಂದ. 'I cannot make a mistake' ಎಂದರು ಇವರು. 'ಈ ಹಾಲ್ ಚಿತ್ರ ಬರೆದರೆ ನಾನು ನಿಮ್ಮನ್ನು ಇಲ್ಲಿ ಕೂಡಿಸುತ್ತಿದ್ದೆ' ಎಂದು ನಿರ್ದೇಶಿಸಿ, 'ಇವರು ನಿಮ್ಮ ಜೊತೆಯಲ್ಲಿ ಅಲ್ಲವೇನ್ರಿ ಯಾವಾಗಲೂ ಕೂಡುತ್ತಿದ್ದುದು?' ಎಂದರು, ಇನ್ನೊಬ್ಬ ವಿದ್ಯಾರ್ಥಿಗೆ. 'ಹೌದು ಸರ್' ಎನ್ನಬೇಕಾಯಿತು ಪಕ್ಕದವರು. 'ನೋಡಿದಿರ' ಎಂದರು ರಾಯರು. 'I am sorry Sir' ಎಂದು ಹ್ಯಾಪೆ ಮುಖ ಹಾಕಿ ಉತ್ತರ ಕೊಟ್ಟು ಹುಡುಗ ಕುಳಿತುಕೊಂಡ.

ಅವರು ಪಾಠ ಹೇಳಿಕೊಡುತ್ತಿದ್ದಾಗ ಎಲ್ಲ ವಿದ್ಯಾರ್ಥಿಗಳೂ ಕಮಕ್ ಕಿಮಕ್ ಎನ್ನದೆ ಕುಳಿತಿರಬೇಕು. ಹೀಗೆ ಹಾಗೆ ನೋಡುವ ಹಾಗಿಲ್ಲ. ಪಕ್ಕದವರನ್ನು ಮೊಳಕೈಯಿಂದ ಮೊಳಕಾಲಿಂದ ತಿವಿಯುವುದೊ ಒತ್ತುವುದೊ –ಕಾಲುಗಳನ್ನು ತಾಕಿಸುವುದೊ ಕಾಲು ಕುಣಿಸುವುದೊ ಆಗದು. ಮೇಷ್ಟ್ರ ವ್ಯಂಗ್ಯಚಿತ್ರ ಬರೆವುದೂ ಆಗುತ್ತಿರಲಿಲ್ಲ. ಆ ಧೈರ್ಯ ಯಾರಿಗೆ ಬರಬೇಕು? ಹಲ್ಲು, ಮೂಗು ಕಿತ್ತುಕೊಳ್ಳುವುದು, ಉಗುರು ಕಡಿಯುವುದು, ಹೆರೆಯುವುದು, ಕಿವಿಯಲ್ಲಿ ಬೆರಳಿಟ್ಟುಕೊಂಡು ಕಲಕುವುದು, ನಾಯಿ ಕಾಲು ಬಡಿವಂತೆ ಅದನ್ನು ಜಾಡಿಸುವುದು ಕೂಡದು. ಗಮನ ಪಾಠದ ಕಡೆಗೇ ಬರೆದುಕೊಳ್ಳುವುದರ ಕಡೆಗೇ ಇರಬೇಕು. ಕಣ್ಣುಬಿಟ್ಟುಕೊಂಡು ನಿದ್ರೆಮಾಡುವ ಹಾಗಿಲ್ಲ. ಮೆಲ್ಲಗೆ ಪಕ್ಕದವನಿಗೆ ಗೊಣಗುವ ಹಾಗಿಲ್ಲ. ಕೈಗಡಿಯಾರ ನೋಡಿಕೊಳ್ಳುವ ಹಾಗಿಲ್ಲ. ಆಕಳಿಕೆಯಂತೂ ಸುತರಾಂ ಸಲ್ಲದು. ಕಿಟಕಿಯಿಂದ ಹೊರಗೆ ನೋಡತಕ್ಕದ್ದಲ್ಲ. ಅವರು ಬರುವ ಹೊತ್ತಿಗೆ ಎಲ್ಲರೂ ಕ್ಲಾಸಲ್ಲಿ ಕುಳಿತಿರಬೇಕು. ಮಹಡಿಯಲ್ಲಿ ರೂಮಿಂದ ಹೊರಟರು; ಈಗ ಹಂತ ಇಳಿಯುತ್ತಿರಬೇಕು; ಎಡ ಕೈಸಾಲೆಯಲ್ಲಿ (Corridor) ಬರುತ್ತಿದ್ದಾರೆ; ನಮ್ಮ ಹಾಲ್ ಮೆಟ್ಟಿಲು, ಬಾಗಿಲು ದಾಟಿದ್ದಾರೆ; ಗ್ಯಾಲರಿ ಹಾಲಿನ ಹೊರಸಾಲೆಯಲ್ಲಿ ಎರಡು ಕಿಟಕಿಗಳಲ್ಲಿ ಹಾಯುತ್ತಿದ್ದಾರೆ. ಹುಷ್ ! ಹಂತಹಂತಕ್ಕೆ ಎಚ್ಚರ; ಹುಷಾರು – ಪಕ್ಕದ ಕೋಣೆಯಿಂದ ವೇದಿಕೆ ಹತ್ತಿ ಬರುವ ಹೊತ್ತಿಗೆ – ಜರ್ಮನ್ ಸೈನ್ಯದ ಶಿಸ್ತು ಎನ್ನುತ್ತಾರೆ! – ಅವರಿದ್ದರೆ ಬ್ರಿಟಿಷ್ ಸೈನ್ಯದ ಶಿಸ್ತು ಕ್ಲಾಸಲ್ಲಿ; ಒಡನೆಯೇ ಕುಳಿತುಬಿಡುವ ಹಾಗಿಲ್ಲ; ಅವರು 'Sit down' ಎನ್ನುವವರೆಗೂ ಕುಳಿತುಕೊಳ್ಳುವುದು ಕಡಿಮೆ. ಅವರು ಆಮೇಲೆ ರಿಜಿಸ್ಟರ್ ತೆಗೆದು ಹಾಜರಿ ಕೂಗುವಾಗ ಹೊರಗಿಂದ ಒಳಕ್ಕೆ ಬರತಕ್ಕದ್ದಲ್ಲ. ಹೊರಗಿನವರು ಹೊರಗೇ. ಒಂದು ಸಲ ಕೂಗಿ ಹಾಜರಿ ತೆಗೆದುಕೊಂಡು ಆದಮೇಲೆ ಅವರೇ ಒಳಗೆ ಬರಹೇಳುವರು. ಒಬ್ಬೊಬ್ಬರಾಗಿ ಮರ್ಯಾದೆ ಮೀರದೆ ಒಳಗೆ ಬಂದು ತಮ್ಮ ಹಾಜರಿ ಕೊಡಬೇಕಾಗಿತ್ತು. ಆ ಪ್ರತಿಯೊಬ್ಬರಿಗೂ ಒಂದೊಂದು ಸ್ವರೂಪ ಲಕ್ಷಣದ ವ್ಯಾಖ್ಯಾನ ನಡೆದಾದ ಮೇಲೆ ಬಾಯಿ ಮುಚ್ಚಿಕೊಂಡು ಅದನ್ನು ಹುಡುಗರು ಕೇಳಬೇಕಿತ್ತು. ಉಳಿದ ಕಾಲವೆಲ್ಲ ಪಾಠ.

ಆ ವರ್ಷ ಎರಡು ಟರ್ಮ್‌ಗಳಲ್ಲಿಯೂ ತಾವು ಮಾಡಬೇಕಾಗಿದ್ದ ಅರ್ಥಶಾಸ್ತ್ರದ

ಪಾಠಕ್ಕೆ ನೆರವಾಗುವಂತೆ ೪-೪ ಪುಟ ವಿಷಯದ ಪ್ರಕರಣಗಳ ಹೊರಮೈ ಲಕ್ಷಣಗಳನ್ನು ಅಚ್ಚು ಮಾಡಿಸಿಕೊಟ್ಟಿದ್ದರು. ಒಂದು – ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ Elements of Economics ; ಇನ್ನೊಂದು – Economic Conditions in India ಎಂದು. ಆ ನಾಲ್ಕು ಪುಟಗಳನ್ನು ನೆನಪಿನಲ್ಲಿ ಇಟ್ಟುಕೊಂಡರೆ ಪಾಠದ ಒಟ್ಟು ಚಿತ್ರ ಕಣ್ಣಿಗೆ ಕಟ್ಟುವಂತಿತ್ತು. ಒಂದೊಂದು ದಿನ ಒಂದೊಂದು ಅಂಶವನ್ನೆತ್ತಿ ರಾಯರು ಮಾತನಾಡುವರು; ಆ ಪ್ರಸಂಗಕ್ಕೆ ತಕ್ಕ ಮುಖ್ಯ ವಿವರಾಂಶಗಳನ್ನು ಬೋರ್ಡ್ ಮೇಲೆ ಬರೆದು ಅವನ್ನು ವಿವರಿಸಿ, ವಿಷಯವನ್ನು ಪ್ರತಿಪಾದಿಸುವರು. ಮಾತಿನಲ್ಲಿ ಯಾವುದೂ ಅಸ್ಪಷ್ಟವಿಲ್ಲ. ಯಾವುದೂ ಅನಿಶ್ಚಯ, ಕಠಿಣ ಇಲ್ಲ; ಅಚ್ಚ ಇಂಗ್ಲಿಷ್ ಕೇವಲ ತತ್ವದಂತೆ ಕಾಣುತ್ತಿದ್ದುದಿಲ್ಲ. ಉದಾಹರಣೆ ನಿರ್ದಿಷ್ಟ; ಎಷ್ಟು ಬೇಕೊ ಅಷ್ಟು. ನಡುವೆ ಆಗ ಈಗ ಯಾರನ್ನಾದರೂ ಪ್ರಶ್ನೆ ಕೇಳುವರು, ವಿಶದವಾಯಿತೆ ಎನ್ನುವರು, ಆಮೇಲೆ ಮುಂದೆ ಹೋಗುವುದು ವಾಡಿಕೆ. ಕ್ಲುಪ್ತವಾಗಿ, ನಿರ್ವಿಣ್ಣವಾಗಿ ಕೆಲವು ವಿನೋದ ನಿದರ್ಶನಗಳಿರುತ್ತಿದ್ದವು. ಅಷ್ಟೇ ಕ್ಲುಪ್ತವಾಗಿ ಆಗ ಎಲ್ಲರೂ ನಗುತ್ತಿದ್ದೆವು ಅವರ ಮುಖ ನೋಡಿಕೊಂಡು ಅದರ ಮರ್ಯಾದೆ ನಡೆಯುತ್ತಿತ್ತು. Precision apparatus ಎನ್ನುತ್ತಾರೆ ಕೆಲವು ಸಾಧನಗಳನ್ನು. ಇಲ್ಲಿ ಎಲ್ಲವೂ ಹಾಗೆ.

ಬಹುಮಟ್ಟಿನ ವಿದ್ಯಾರ್ಥಿಗಳೆಲ್ಲ ಕಾಲೇಜ್, ಸ್ಪೋರ್ಟ್ಸ್, ಲೈಬ್ರರಿ ರೂಮುಗಳಲ್ಲಿಯೇ ಸರ್ವದಾ ಇರುವ ಆಸಕ್ತಿ ಉಳ್ಳವರು. ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಸರ್ಕಾರಕ್ಕೆ ಶಿಫಾರಸು ಮಾಡಿ ಸುಬ್ಬರಾಯರು ಪಠ್ಯಪುಸ್ತಕಗಳನ್ನೂ 'Reference' ಪುಸ್ತಕಗಳನ್ನೂ ಡಜನ್‌ಗಟ್ಟಲೆ ತರಿಸಿ ಅವು ಎಲ್ಲರಿಗೂ ದೊರೆಯುವಂತೆ ಮಾಡಿದ್ದರು. ಬೆಳಗ್ಗೆ ಎಂಟು ಗಂಟೆಯಿಂದ ರಾತ್ರಿ ಒಂಬತ್ತೂವರೆಯವರೆಗೂ ಕಾಲೇಜಲ್ಲಿ ಕುಳಿತು ಓದಲು ಅನುಕೂಲಗಳನ್ನು ಕಲ್ಪಿಸಿದರು. ಓದಲು ಹುಡುಗರು ಆಯ್ದ ಪುಸ್ತಕಗಳನ್ನು ಗ್ಯಾಲರಿ ಹಾಲಿಗೆ ತರಿಸಿ ಇರಿಸಿ, ದಿನಾ ಒಬ್ಬ ಉಪನ್ಯಾಸಕರನ್ನು ನೆರವಿಗೆ, ಮೇಲ್ವಿಚಾರಣೆಗೆ ಕೊಟ್ಟು ಏಳರಿಂದ ಒಂಬತ್ತೂವರೆಯ ವರೆಗೂ ಓದಗುವಂತೆ ಮಾಡಿದರು. ಹದಿನೈದು ದಿನದ ಬಳಕೆಗೆ ಕೊಡಲು ಆಗದ ಪ್ರಮಾಣ ಪುಸ್ತಕಗಳನ್ನು ಎಂಟು ದಿನಗಳ ಮಟ್ಟಿಗೊ ಅಥವಾ ಶನಿವಾರ ಕೊಟ್ಟು ಸೋಮವಾರ ಹಿಂದಿರುಗಿಸುವಂತೆಯೊ ಏರ್ಪಾಡು ಮಾಡಿದರು.

ಚೆಲ್ಲಾಟಕ್ಕೆ ಮಾತ್ರ ಅವಕಾಶವಿರಲಿಲ್ಲ. ಕಾಲೇಜಿನ ಶಿಸ್ತಿನಲ್ಲಿ ಸಡಿಲತೆ ಬರಲಿಲ್ಲ. ಕಾಲೇಜಿನ ಕೈಸಾಲೆ, ಪಡಸಾಲೆಗಳಲ್ಲಿ ಸಿಕ್ಕಿ ಸಿಕ್ಕಿದ ಹಾಗೆ ವಿದ್ಯಾರ್ಥಿಗಳೂ ಉಪನ್ಯಾಸಕರೂ ನಿಂತೊ ಹರಟೆ ಹೊಡೆದೊ ಸಿಗರೆಟ್ ಸೇದಿಯೋ ಹಾಡುಗಳನ್ನು ಹಾಡಿಯೋ ಜಗಳಗಳನ್ನು ಬೆಳಸಿಯೊ ಪಿತೂರಿಗಳನ್ನು ಮಾಡಿಯೊ, ಆವರಣ ಭಂಗಮಾಡುವ ಸಂದರ್ಭವಂತೂ ಒದಗಲಿಲ್ಲ.

ಈ ನಡುವೆ ಸಂಗೀತ ಕಚೇರಿಗಳೂ ಹಾಸ್ಟೆಲ್ ಮತ್ತು ಸ್ಟೂಡೆಂಟ್ಸ್ ಹೋಮ್‌ಗಳ ಹಬ್ಬ, ಉತ್ಸವ ಸಮಾರಂಭಗಳೂ ಕಲೆಯ ಸವಿಯೂಟಗಳನ್ನು ಒದಗಿಸುತ್ತಿದ್ದವು. ಬಹುತರ ಇದೇ ಸುಮಾರಿಗೆ ಜಗನ್ಮೋಹನ ಬಂಗಲೆಯಲ್ಲಿ ಜೆ. ಎಚ್. ಕಸಿನ್ಸ್‌ರ ನೆರವಿಂದ ಒಂದು ಚಿತ್ರಶಾಲೆ ಯನ್ನು ತೆರೆಯಲಾಯಿತು. ನನಗೆ ಸ್ಕಾಲರ್‌ಷಿಪ್ ಹೋದುದರಿಂದ ಅಷ್ಟು ಹಣವನ್ನು

ಸಂಪಾದಿಸಿಕೊಳ್ಳಬೇಕಾದ ಅಗತ್ಯ ಉಂಟಾಗಿ, ದಳವಾಯಿ ಎ. ವಿ. ಸ್ಕೂಲಲ್ಲಿ ಬೆಳಗ್ಗೆ ಸುಮಾರು ಒಂದು ಒಂದೂವರೆ ಗಂಟೆ ಕಾಲ, ವಾರಕ್ಕೆ ಆರು ದಿನ ಕೆಲಸ ಮಾಡುವ ದಾರಿ ಕಂಡಿತು; ಇಪ್ಪತ್ತು ರೂಪಾಯಿಗಳ ವೇತನದ ಮೇಲೆ. ೧೯೧೮ಕ್ಕೆ ಮಹಾಯುದ್ಧ ಮುಗಿದಿತ್ತು. ಅದೇ ವರ್ಷ ಸುಮಾರು ಅರಮನೆಯಲ್ಲಿ ಪುತ್ರೋತ್ಸವವಾಗಿ ಮುಂದೆ ಮಹಾರಾಜರಾದ ಜಯಚಾಮರಾಜ ಒಡೆಯರು ಹುಟ್ಟಿದುದರಿಂದ ಅನಿರ್ವಚನೀಯವಾದ ಹರುಷದ ಹಿನ್ನೆಲೆ ಆ ಊರಲ್ಲಿ ಹುಟ್ಟಿಕೊಂಡಿತ್ತು.

ಅರ್ಥಶಾಸ್ತ್ರದ ವ್ಯಾಸಂಗ ಸುಬ್ಬರಾಯರ ವಿಚಕ್ಷಣೆಯಲ್ಲಿ ಶಾಸ್ತ್ರಕ್ಕೆ ಪ್ರಕ್ರಿಯೆಗಳನ್ನು ಮೀರದಂತೆಯೂ, ಷಾ ಅವರ ಪಾಠದಲ್ಲಿ ಭಾರತೀಯ ಸಮಸ್ಯೆಗಳ ಪರ್ಯಾಲೋಚನೆ, ಸ್ವದೇಶಿ ರಂಗ ಬೆಳೆಯುವಂತೆಯೂ ನಡೆಯಿತು. ಷಾ ಅವರೇ ಒಂದು ಸಲ ಯಾವುದೊ ಸಭೆಯಲ್ಲಿ ನಮಗೆ ಮೊದಲ ಬಾರಿಗೆ ಒಬ್ಬ ಐರಿಷ್ ಮನುಷ್ಯನ ಉಕ್ತಿಯನ್ನು ಹೇಳಿದ್ದು; ಯಾರೊ ಹೆಮ್ಮೆಯಿಂದ ಅಂದರಂತೆ – "The Sun never sets over the British Empire" (ಬ್ರಿಟಿಷ್ ಚಕ್ರಾಧಿಪತ್ಯದ ಮೇಲೆ ಸೂರ್ಯನು ಎಂದಿಗೂ ಮುಳುಗುವುದೇ ಇಲ್ಲ) ಎಂದು. ಅದಕ್ಕೆ ಐರಿಷ್ ಚೇಷ್ಟೆಕಾರ ಹೇಳಿದನಂತೆ: "Because God does not trust Englishman in darkness" (ಕಾರಣ ಇಷ್ಟೇ: ಇಂಗ್ಲಿಷನವನನ್ನು ಕತ್ತಲೆಯಲ್ಲಿ ಬಿಡಲು ದೇವರಿಗೆ ಅವನಲ್ಲಿ ವಿಶ್ವಾಸವಿಲ್ಲ) ಎಂದು. ಇಂಥ ಮಾತುಗಳು ಶಾಶ್ವತವಾಗಿ ನಿಲ್ಲುವ ನೆನಪುಗಳು.

ಸುಬ್ಬರಾಯರು ಒಮ್ಮೆ Foreign Exchanges – ವಿದೇಶಿ ವಿನಿಯಮಗಳನ್ನು ಕುರಿತು ಪಾಠ ಮಾಡುತ್ತಿದ್ದರು. ಅದರಲ್ಲಿ ಒಂದು ನೆಲೆ ಕ್ಲಿಷ್ಟವಾದ್ದು. ಹಿಂದೆ ಆನರ್ಸ್ ಪಾಠಗಳು ನಡೆಯುತ್ತಿದ್ದ ಕಾಲದಲ್ಲಿ ಅಲ್ಲಿನ ಒಂದು ಘಟ್ಟದಲ್ಲಿ ತುಂಬಾ ಬುದ್ಧಿವಂತರಾದ ಹುಡುಗರ ಬಣ್ಣ ಕಂದಿ, ಮುಖ ಬಿಳಿಚಿ, ದಡ್ಡರಂತೆ ಕುಳಿತುದು ಕಾಣಿಸಿತಂತೆ. ತಾವು ಹೇಳಿದುದು ವಿದ್ಯಾರ್ಥಿಗಳಿಗೆ ತಿಳಿಯಲಿಲ್ಲ ಎಂದು ಭಾವಿಸಿ ಪ್ರಶ್ನೆ ಕೇಳಿದರಂತೆ. ಇನ್ನಷ್ಟು ವಿಶದಪಡಿಸ ಹೋಗಿ ಶಸ್ತ್ರವೈದ್ಯನ ಶಸ್ತ್ರದಂತೆ ಹರಿತವಾದ ಅವರ ಮನಸ್ಸಿನ ಹರಿತವೂ ಮೊಂಡಾಗಿ, ಅವರು ವಿಶದಪಡಿಸುವ ಮಾರ್ಗದಿಂದಲೇ ಹುಡುಗರಿಗೆ ಇನ್ನಷ್ಟು ಗೊಂದಲ ಉಂಟಾದಂತೆ ತೋರಿತಂತೆ. ಆ ಭಾಗದ ಪಾಠ ಹೇಳುವಾಗ ಆ ನೆನಪು ಅವರಲ್ಲಿ ಮರುಕಳಿಸಿ ಎರಡು ಸಲ, ಮೂರು ಸಲ ನಮಗೆ ಆ ಭಾಗವನ್ನು ವಿವರಿಸಲು ಯತ್ನಿಸಿದರು. ಹಳೆಯ ಭಯ, ಸಂಶಯಕ್ಕೆ ಸಿಕ್ಕಿ ಬಹುಶಃ ಅದೇ ಪರಿಣಾಮ ಉಂಟಾಯಿತು! ನಮ್ಮಲ್ಲಿ ಒಂದು ಸಂಗತಿ ನಡೆಯಿತು: "Have I made it clear to you" ಎಂದರು. ಗ್ಯಾಲರಿ ಹಾಲಿನ ಮೊದಲ ಸಾಲಲ್ಲಿ ಕುಳಿತುಕೊಳ್ಳುತ್ತಿದ್ದ ಒಬ್ಬ ಶ್ರದ್ಧಾವಂತ ವಿದ್ಯಾರ್ಥಿ – ಅವರು ಮುಂದೆ ನಮ್ಮ ದೇಶದ ಮಂತ್ರಿಗಳಲ್ಲೊಬ್ಬರಾದರು – 'Yes, Sir' ಎಂದರು. "Then I can take it that the whole class has understood it" (ನಿಮಗೆ ಅರ್ಥವಾದರೆ ಕ್ಲಾಸಿಗೆಲ್ಲ ಅರ್ಥವಾಗಿರುತ್ತದೆ) ಎಂದರು. ಒಂದು ಕ್ಷಣ ಆ ವಿದ್ಯಾರ್ಥಿಗೆ ಅರ್ಥವಾಗಲಿಲ್ಲ; ಕ್ಲಾಸೆಲ್ಲಾ ಗೊಳ್ಳೆಂದು ನಕ್ಕಿತು! ಮಾತು ಹರಿತವಾಯಿತೇನೊ: ರಾಯರ ರೀತಿ ಹಾಗೆ.... ಅವರಿಗೂ

ಇನ್ನೊಬ್ಬರ ಮುಖಭಂಗ ಮಾಡಬೇಕೆಂದು ಅಲ್ಲ. ಆದರೆ ಯಾರು ಏನಾದರೂ ಅಂದರೆ ತಕ್ಷಣ ತಾಳಿಕೊಳ್ಳದೆ ಅದಕ್ಕೆ ಕತ್ತರಿಸುವಂತೆ ಉತ್ತರ ಕೊಡುವ ಚಟ ಅವರದು. ಆ ನಾಲಗೆಯ ಮೇಲಿದ್ದ ಒಂದು ಚಾಪಲ್ಯ ಅವರ ಜೀವನದಲ್ಲಿ ಮುಂದೆ ಕೆಲವು ಕಷ್ಟಗಳನ್ನು ಅವರಿಗೆ ತಂದುಕೊಟ್ಟಿತು. ತಾಳ್ಮೆಗೆ ಅವರು ಹೆಸರಾದವರಲ್ಲ. ತುಂಬಾ ಬುದ್ಧಿವಂತರಲ್ಲಿ ಇಂಥದೊಂದು ದೋಷ ಇರುವುದು ರೂಢಿ.

ಮೊದಲನೆಯ ವರ್ಷದ ಪಾಠದಲ್ಲಿ ಹೇಳಬೇಕಾದ್ದು ಇನ್ನೊಂದು – 'ಶ್ರೀ' ಅವರ ಪಾಠ. ಅವರು ಆಗಿನ್ನೂ ಎಲ್ಲರಿಗೂ ತಿಳಿದಂತೆ 'ಶ್ರೀ' ಆಗಿರಲಿಲ್ಲ. ಅವರು ಆ ವರ್ಷ ನಮಗೆ ಜಾರ್ಜ್ ಎಲಿಯಟ್ ಬರೆದ 'Silas Marner' ಕಾದಂಬರಿಯನ್ನು ಕಲಿಸಿದರು. ಸುಬ್ಬರಾಯರನ್ನು ಕುರಿತು ಯಾವ ಪೂರ್ವಗ್ರಹಗಳೂ ಬೆಂಗಳೂರಿನ ನಮಗೆ ಇದ್ದವೋ ಅಂಥವೇ ತಪ್ಪು ಗ್ರಹಿಕೆಗಳು ಅವರ ಪರವಾಗಿಯೂ ಇದ್ದವು. ವಿದ್ಯಾರ್ಥಿಗಳಿಗಿಂತ ಎಲ್ಲ ಉಪಾಧ್ಯಾಯರೂ ಹೆಚ್ಚು ವಯಸ್ಸಿನವರು. ಅವರ ವೇಷ ಭೂಷಣ ವಿಶಿಷ್ಟವಾದ್ದು. ಅವರ ಮೇಧಾವಿತೆ, ವಿದ್ವತ್ತು, ಯೋಗ್ಯತೆ ವಿದ್ಯಾರ್ಥಿಗಳಲ್ಲಿ ಭಯ ಭಕ್ತಿಯನ್ನೂ ಸಹಜವಾದ ಗೌರವವನ್ನೂ ಉಂಟುಮಾಡುತ್ತಿದ್ದ ಕಾಲವದು. ಆಗ ಪ್ರೊಫೆಸರು ಮಾತ್ರ ಪ್ರಶ್ನೆಪತ್ರಿಕೆ ಕೊಡುತ್ತಿದ್ದರು. ಎಷ್ಟೇ ಶಕ್ತರಾಗಿರಲಿ ಅಸಿಸ್ಟೆಂಟ್ ಪ್ರೊಫೆಸರಿಗೆ ಕೂಡ ಆ ಅವಕಾಶವಿರುತ್ತಿರಲಿಲ್ಲ ವೆಂಬ ಸಂಗತಿ ಈಗಿನವರೆಗೆ ಸುದ್ದಿಯಾದೀತು.

ಆವರೆಗಾಗಲೇ ಶ್ರೀಕಂಠಯ್ಯನವರಿಗೆ ಪತ್ನೀವಿಯೋಗವಾಗಿತ್ತು. ಅವರು ಪಾಠ ಪ್ರವಚನಗಳಲ್ಲಿ ತುಂಬಾ Strict, ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳಿಗೆ ಸೊನ್ನೆ ಹಾಕಿಬಿಡುತ್ತಾರಂತೆ, ಏಗುವುದು ಕಷ್ಟ ಎಂದು ಇದ್ದಿತು ಮಾತು. ಸುಬ್ಬರಾಯರು ಇಂಗ್ಲೆಂಡಿಗೆ ಹೋಗಿ ಬಂದಿದ್ದವರು. ಇವರು ಇಲ್ಲಿಯೇ ಇದ್ದು ಇಂಗ್ಲಿಷ್ ಸಾಹಿತ್ಯದ ವ್ಯಾಸಂಗದಲ್ಲಿ ಒಂದು ಬಗೆಯ ಪರಾಕಾಷ್ಠೆಯನ್ನು ಪಡೆದವರು. ಇಂಗ್ಲಿಷ್ ವಿಶ್ವವಿದ್ಯಾನಿಲಯದ ಪದವಿ ಪಡೆಯದುದರಿಂದ ಉದ್ಯೋಗದಲ್ಲಿ ಮೇಲ್ದರ್ಜೆಯ ಪದವಿ ಪಡೆಯಲಾರದಾಗಿದ್ದೂ ಯಾವ ಇಂಗ್ಲಿಷ್ ಪ್ರೊಫೆಸರಿಗೂ ಕಡಿಮೆಯಿಲ್ಲದ ಪಾಂಡಿತ್ಯವನ್ನೂ ವಾಗ್ಮಿತೆಯನ್ನೂ ಸಾಹಿತ್ಯದ ಅಂತರಜ್ಞಾನವನ್ನೂ ಪಡೆದವರು. ಒಂದು ಕ್ಷಣ ಕಾಲವನ್ನೂ ಪೋಲುಮಾಡದೆ ಗಂಟೆಯ ಮೊದಲಿಂದ ಹಿಡಿದು ಕಡೆಯವರೆಗೂ ಮೂರು ವರ್ಷಕಾಲ ನಡೆದ ಅವರ ಬೋಧನ ಸೌಭಾಗ್ಯವನ್ನು ಪಡೆದವರು ನಾವು.

ಮೊದಲ ಮೂರು ತಿಂಗಳು ಜಾರ್ಜ್ ಎಲಿಯಟರ ಜೀವನ ಚರಿತ್ರೆ, ಕಾಲ ವಿಶೇಷ, ಕೃತಿಗಳು, ಪ್ರಚಲಿತ ಪ್ರಭಾವ, ಅವುಗಳ ಗುಣಾವಗುಣಗಳನ್ನು ತಿಳಿಸಿ, ಯಾವ ಪ್ರಭಾವ ಆಕೆಯ ಮೇಲೆ ಬಿದ್ದು ಆಕೆಯ ಕಾದಂಬರಿಗಳನ್ನು ರೂಪಿಸಿದವೂ ತಿಳಿಸಿ, ನಮ್ಮ ಪಠ್ಯಪುಸ್ತಕದ ವ್ಯಾಸಂಗಕ್ಕೆ ಬಂದರು. ಅಷ್ಟು ವಿವರವಾಗಿ ಗ್ರಂಥಕರ್ತೃವಿಗೆ, ಅವರ ಇತರ ಕೃತಿಗಳಿಗೆ ಪ್ರವೇಶ ಉಂಟುಮಾಡುವ ಅಗತ್ಯ ಅನೇಕರಿಗೆ ಹಾಯದು. ಹೈಸ್ಕೂಲುಗಳಲ್ಲಿ ಓದಿದ್ದ ಕೆಲವರಿಗೆ ಪಠ್ಯ ಭಾಗವನ್ನು ಬಿಟ್ಟು ಏನೇನೊ ಮಾಡುತ್ತಾರಲ್ಲವೆ ಎಂಬ ಅಸಮಾಧಾನ. ಕೆಲವರು ರಿಜಿಸ್ಟ್ರಾರಿಗೆ ಕಾಗದ ಬರೆಯುವವರೆಗೂ ಹೋಗಿದ್ದರು. ಆ ಮಾತು ಇವರ ಕಿವಿಗೆ ಬಿತ್ತು.

'ಕಾಲೇಜಲ್ಲಿ ಪಾಠ ಹೇಳಬೇಕಾದುದು ಹೀಗೆ, ಇಲ್ಲಿ ನಾವು ಹುಡುಗರನ್ನು ಪಾಸು ಮಾಡಿಸುವ Coaches – ತಯಾರಕರು ಮಾತ್ರ ಅಲ್ಲ, 'Educators' ಎಂದರು. 'ವಿದ್ಯಾರ್ಥಿಗಳ ಮನಸ್ಸನ್ನು ರೂಪಿಸುವ ಕೆಲಸ, ತಿದ್ದುವ ಕೆಲಸ ನಮ್ಮದು. ಯಾರಿಗೆ ಬೇಕಾಗಲಿ ಯಾರಿಗೆ ಬೇಡವಾಗಲಿ, ನಾನು ಪಾಠ ಮಾಡುವುದು ಹೀಗೆ, ಇರುವವರು ಇರಬಹುದು, ಹೋಗುವವರು ಹೋಗಬಹುದು' ಎಂದರು. ಅವರ ಈ ನಿಲವು ಎಷ್ಟು ಉತ್ತಮವಾದುದೆಂಬುದು ನಮ್ಮ ಕಾಲೇಜ್ ಶಿಕ್ಷಣದಲ್ಲಿ ನಮಗೆ ದೊರೆತ ಮಹಾಲಾಭ. ಆ ದೃಷ್ಟಿಯನ್ನು ಮರೆತು ಎಷ್ಟು ದೂರ ನಾವು ಕೆಳಗೆ ಇಳಿದಿದ್ದೇವೆ ಎಂಬುದನ್ನು ಇಂದಿನ ಕಾಲೇಜುಗಳ ವ್ಯಾಸಂಗ ತೋರಿಸಿಕೊಟ್ಟೀತು.

ಪಾಠ ಹೇಳಿಕೊಡಲು ಬಾರದೆ ಯಾರಾದರೂ ಪ್ರಶ್ನೆ ಕೇಳಿದರೆ 'ಒಟ್ಟೆಗೆ ಏನು ತಿನ್ತೀರಯ್ಯ?' ಎಂದು ಕೇಳುವ ಅಯೋಗ್ಯತೆಯವರಲ್ಲವಾದ್ದರಿಂದ ಅವರಲ್ಲಿ ಗೌರವ ಬೆಳೆಯಿತು.

ಎರಡು ಸಂಗತಿಗಳನ್ನು ಹೇಳಿ ಈ ಮೊದಲ ವರ್ಷದ ಅಭ್ಯಾಸ ವಿವರಣೆಯನ್ನು ಮುಗಿಸುತ್ತೇನೆ. ಮೊದಲ ಟರ್ಮ್ ಅಲ್ಲಿ ಒಂದು ಪ್ರಶ್ನೆ ಕೊಟ್ಟರು. ಜಾರ್ಜ್ ಎಲಿಯಟ್ ಜೀವನ ಮತ್ತು ಆಕೆಯ ಕಾಲದ ಸನ್ನಿವೇಶ ಇವನ್ನು ಕುರಿತು ಆವರೆಗೆ ತಾವು ಹೇಳಿಕೊಟ್ಟಿದ್ದುದನ್ನು ಸಂಗ್ರಹಿಸಿಯೂ ಕುಕ್ ಮುಂತಾದವರ ಗ್ರಂಥಗಳನ್ನು ಓದಿಯೂ ಬರೆಯಿರೆಂದು ನಿಯಮಿಸಿದರು. ಎಲ್ಲರೂ ಬರೆದರೋ ಇಲ್ಲವೋ: ಬಹುಮಂದಿ ಬರೆದರು. ಅವುಗಳನ್ನೆಲ್ಲ ಓದಿ ಅಭಿಪ್ರಾಯಗಳನ್ನು ಬರವಣಿಗೆಯಲ್ಲಿ ತಿಳಿಸಿ ಮೇಲೆ ಅಂಕಗಳನ್ನು ಹಾಕಿ ಪ್ರತಿ ಪೇಪರನ್ನು ಹಿಂದಿರುಗಿಸುವಾಗಲೂ ಒಂದೋ ಎರಡೊ ಮಾತೆತ್ತಿ, ವಿಷಯ, ಶೈಲಿ, ರಚನಾ ವಿಧಾನ – ಇವುಗಳನ್ನು ಕುರಿತು ವ್ಯಾಖ್ಯಾನ ಮಾಡಿ ಹಿಂದಕ್ಕೆ ಕೊಟ್ಟರು. ಇಬ್ಬರಿಗೆ ಹತ್ತಕ್ಕೆ ಹತ್ತು, ನಾಲ್ವರಿಗೆ ಒಂಬತ್ತು; ಉಳಿದ ಅನೇಕರಿಗೆ ಇತರ ಕ್ರಮ ಸಂಖ್ಯೆಗಳು; ಇಪ್ಪತ್ತು ಜನಕ್ಕೆ ಸೊನ್ನೆ ಕೊಟ್ಟಿದ್ದರು. ಹತ್ತು ಪಡೆದ ಇಬ್ಬರಲ್ಲಿ ಈಗಲೂ ಕೀರ್ತಿಶಾಲಿಗಳಾಗಿರುವ ಕೆ. ಅನಂತರಾಮಯ್ಯನವರೊಬ್ಬರು; ಇನ್ನೊಬ್ಬರು ತುಂಬಾ ಬುದ್ಧಿವಂತರಾಗಿದ್ದ ಅವರ ಗೆಳೆಯರು ಕೆ.ಎಸ್. ಸುಬ್ಬರಾಯರು; ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಕೌಂಟ್ಸ್ ಆಫೀಸರಾಗಿ ಕೆಲಸ ಮಾಡಿ ಈಗ ವಿಶ್ರಾಂತರಾಗಿರುವ ಶ್ರೀಕಂಠಯ್ಯನವರ ಅಣ್ಣಂದಿರು. ಕನ್ನಡ ಭಾವಗೀತೆಗಳನ್ನು ಹಾಡುವ ವೈ.ಎಸ್. ಇಂದಿರಾ ಅವರ ದೊಡ್ಡಪ್ಪ. ಅವರು ಕಾಲೇಜಲ್ಲಿ ಇರುವವರೆಗೂ ಹಲವು ವಿಷಯಗಳಲ್ಲಿ ಅವರಿಗೇ ಮೊದಲ ಸ್ಥಾನ. ಒಂಬತ್ತು ಪಡೆದ ನಾಲ್ವರಲ್ಲಿ ನಾನೊಬ್ಬ : ಯಾವುದರಲ್ಲಿಯೂ ಎಂದಿಗೂ ಸೆಕೆಂಡ್ ಕ್ಲಾಸ್ ಶಾಪಗ್ರಸ್ತ.

ಎರಡನೆಯದಾಗಿ ಸೈಲಸ್ ಮಾರ್‌ನರ್ ಬದುಕು ಹೇಗೆ ಅನ್ಯಾಯಕ್ಕೆ, ಮೋಸಕ್ಕೆ ಈಡಾಗಿ ದೇವರಲ್ಲಿ ತನ್ನ ಭಕ್ತಿಯನ್ನು ಕಳೆದುಕೊಂಡಿತು; Eppie ಎಂಬ ಮಗುವಿನ ಪ್ರವೇಶ ಅನಿರೀಕ್ಷಿತವಾಗಿ ತಾನಿದ್ದ ಮನೆಯ ಅಂಗಳಕ್ಕೆ ಬಂದಾಗಿನಿಂದ ಪುನಃ ಹಸುರಿಟ್ಟು ಮಾನವನಾಗಿ ಅರಳಿ ಹೇಗೆ ಕೃತಾರ್ಥವಾಯಿತು ಎಂಬುದನ್ನು ವರ್ಣಿಸುವ ಗ್ರಂಥ ಅದು. ಜಾರ್ಜ್ ಎಲಿಯಟ್ ಸ್ವಂತವಾಗಿ ಅರೆ ನಾಸ್ತಿಕತೆಯ ಮಟ್ಟವನ್ನು ಮನೋವೇದನೆಯನ್ನು ಅನುಭವಿಸಿ

ಮುಟ್ಟಿದ್ದವಳು; ಬುದ್ಧಿಜೀವಿ; ಸ್ವತಂತ್ರವಾಗಿ ಲೋಕಾನುಭವವನ್ನು ವಿವೇಚಿಸುವವಳು; ಧರ್ಮಕರ್ಮಗಳ ಸ್ವರೂಪವನ್ನು ಕೂಲಂಕಷವಾಗಿ ವಿವೇಚಿಸುತ್ತಿದ್ದವಳು. ತನ್ನ ಕಾಲದಲ್ಲಿಯೇ ದೊಡ್ಡ ಸಾಹಸ ಮಾಡಿದ್ದವಳು. ಧೈರ್ಯದಿಂದ ಜಾರ್ಜ್ ಲ್ಯೂಇಸ್ ಅವರನ್ನು ತನ್ನ ಗಂಡನೆಂದು ಭಾವಿಸಿ, ಮದುವೆಯ ಶಾಸ್ತ್ರವಿಲ್ಲದೆ ಪ್ರಾಮಾಣಿಕವಾಗಿ ಸಂಸಾರ ಮಾಡಿದವಳು. ಸಂಪ್ರದಾಯಬದ್ಧ ಸಮಾಜದಲ್ಲಿ ಇದೆಷ್ಟು ತಳಮಳವನ್ನು ಉಂಟುಮಾಡಿತೊ, ಅದನ್ನು ಆ ಕಾಲದ ಚರಿತ್ರೆ ತಿಳಿಸುತ್ತದೆ. ಇವೊತ್ತಿಗೂ ಆಕೆಯ, ಆ ಕಾಲದ, ಆ ಕಾದಂಬರಿಯ ಮೂರು ಘಟಕಗಳೂ ಪ್ರತಿಫಲಿಸುವಂತೆ 'ಶ್ರೀ'ಯವರು ಹೇಳಿದ ಪಾಠ ಆಕೆ ಎಷ್ಟು ದೊಡ್ಡ ಕತೆಗಾರ್ತಿ, ಮನೋವಿಜ್ಞಾನಿ, ಮಾನವ ಹೃದಯಜ್ಞಳು ಎಂಬುದನ್ನು ನಮಗೆ ತೋರಿಸಿತು. ಕಾಲೇಜ್ ಕ್ಲಾಸಿನಲ್ಲಿ ಅದೊಂದೇ ಕಾದಂಬರಿ ಗ್ರಂಥವನ್ನು ನಮಗೆ ಅವರು ಕಲಿಸಿದರೂ ಉತ್ತರೋತ್ತರ, ಖಾಸಗಿಯಾಗಿ The Mill on the Floss, Romolaಗಳ ಪರಿಚಯ ಮಾಡಿಕೊಟ್ಟದ್ದುಂಟು. ನಾವು ಖುಷಿಗಾಗಿ ಅವರು ಹೇಳಿದ್ದಂತೆ Adam Bede ಮತ್ತು Middle March ಓದಿದೆವು. ಒಂದು ದೊಡ್ಡ ಸಂಸ್ಕಾರ ಅವುಗಳಿಂದ ಆಯಿತು. ಅದಕ್ಕೆ ತಳಹದಿ ಬಿದ್ದುದು 'ಶ್ರೀ'ಯವರ ಪಾಠ ಪದ್ಧತಿಯಿಂದ.

ಶ್ರೀಕಂಠಯ್ಯನವರು ಗೋಲ್ಡ್‌ಸ್ಮಿತ್ ಪ್ರಬಂಧಗಳ ಗದ್ಯ ಪಾಠವನ್ನು ನಮಗೆ ಮೂರನೆಯ ವರ್ಷ ಮಾಡಿದರು. ಅವರ ಎಂದಿನ ಸಾಕಲ್ಯ ದೃಷ್ಟಿ, ಲೋಕಸ್ವರೂಪದ ವಿವೇಚನೆ, ಗೋಲ್ಡ್‌ಸ್ಮಿತ್ ಕಾಣಿಸುವ ಪ್ರಪಂಚದ ಸ್ವರೂಪ, ರಹಸ್ಯ, ಅವರ ಹೃದಯ ಮನಸ್ಸುಗಳನ್ನು ಬಿಚ್ಚಿ ತೋರಿಸುವ ಆ ಪ್ರಬಂಧಗಳಲ್ಲಿ ಅವರ ಜೀವಗುಣ ಎಷ್ಟು ಮೃದುವಾಗಿ ಒಳಿತಾಗಿ ಪ್ರೀತಿಯಿಂದ ತುಂಬಿದೆ ಎಂಬಂತೆ ವಿವರಿಸಿದರು.

ಶ್ರೀಕಂಠಯ್ಯನವರ ಬೋಧನೆಯ ಕಾಂಡ ಕಾಲೇಜಲ್ಲಿ ಪ್ರಧಾನವಾಗಿ ನನಗೆ ಈ ಪಾಠಗಳಲ್ಲಿ ಮುಗಿಯಿತು. ಸಾಮಾನ್ಯ ಅಂಶಗಳನ್ನು ಮುದ್ದಾಗಿ ಬೋರ್ಡ್ ತುಂಬಾ ಬರೆಯುವುದು; ಅಂಶಗಳಿಗಿರುವ ಸಂಬಂಧಗಳನ್ನು ತೋರಿಸುವಂತೆ ಈ ಕಡೆಯಿಂದ ಆ ಕಡೆಗೆ ಆ ಕಡೆಯಿಂದ ಈ ಕಡೆಗೆ ಬಾಣ ಸೂಚಿಕೆಗಳನ್ನು ಗುರುತು ಮಾಡುವುದು, ಒಟ್ಟು ವಿಷಯದ ಸಮಗ್ರತೆಯನ್ನು ವಿಶದಪಡಿಸುವುದು ಅವರ ಬೋಧನದ ಒಂದು ವಿಶೇಷ. ಇದು ಕಣ್ಣಿಗೆ ಕಟ್ಟಿದಂತಿದೆ; ಈ ಐವತ್ತು ವರ್ಷಗಳ ಸಂಪತ್ತಾಗಿ ನನ್ನನ್ನು ಕಾಪಾಡಿಕೊಂಡು ಬಂದಿವೆ.

ಕಾಲೇಜು ಶಿಕ್ಷಣದಲ್ಲಿ ಇಂಥವರ ಸಾಹಿತ್ಯ ಬೋಧನ ವಿಧಾನ, ಮಾನವೀಯತೆಯ ಮಹಾ ರಹಸ್ಯ ಎಂಥ ಹೃದಯುವನ್ನೂ ಹೇಗೆ ಕರಗಿಸುತ್ತದೆ, ಮೃದುಮಾಡುತ್ತದೆ, ನಯಗೊಳಿಸುತ್ತದೆ, ತಿದ್ದುತ್ತದೆ – ಎಂಬುದಕ್ಕೆ ಆ ಕಾಲದ ಹಲವರ ಅನುಭವ ಸಾಕ್ಷಿ. ಸುಂದರ ಎಂಬ ಮಾತಿನಲ್ಲಿಯೇ ಉದ್ ಉಂದ್ ಎಂಬ ಗರ್ಭಾಂಶವಿದೆಯಂತೆ. ತೇವಮಾಡು, ನೀರು ಮಾಡು, ಕರಗಿಸು ಎಂಬ ಗುಣದ ನೀರೋಟ ಸೌಂದರ್ಯದ ಮಹಾಲಕ್ಷಣದಲ್ಲಿ ಒಂದಂಶ ಎಂಬುದು ವೇದ್ಯವಾಯಿತು ನಮಗೆ. ಇಂಥ ಪಾಠಗಳಲ್ಲಿ ಸಾಹಿತ್ಯ ಒಂದು Humanity – ಮಾನವತಾ ಪ್ರಕಾಶನ. Human, Humane ಎರಡೂ ಕಾಣದಾದರೆ

ಅಂಥ ಸಾಹಿತ್ಯಕ್ಕೆ ಬೆಲೆ ಏನು? 'Your chilly stars I can forgo, this warm kind world is all I know' (ನಿಮ್ಮ ಕೊರೆವ ತಾರೆಗಳು ನಿಮಗಿರಲಿ, ನಾನು ಬಿಟ್ಟಿರಬಲ್ಲೆ; ಈ ಸುಖೋಷ್ಣ, ಕರುಣಶೀಲ ಲೋಕವೊಂದನ್ನು ಮಾತ್ರ ನಾನು ಬಲ್ಲೆ) ಎಂಬ ಕವಿನುಡಿ ಇದೇ ಪ್ರಕರಣದಲ್ಲಿಯೇ ನಮ್ಮ ಮನಸ್ಸನ್ನು ಮೃದುಮಾಡಿದ್ದು, ದಿವ್ಯ ಆಧ್ಯಾತ್ಮಗಳಲ್ಲಿ ಒಲವಿರುವವರಿಗೆ ಮತವಿದೆ, ದರ್ಶನವಿದೆ-ದಪ್ಪ ದಪ್ಪ ಮಾತುಗಳನ್ನು ಪ್ರಜ್ಞಾವಾದಗಳನ್ನು ಬೆಳೆಸುವುದಕ್ಕೆ. ಬುದ್ಧಿಯ ಬೆಡಗುಗಳನ್ನು ವಿದ್ಯಾ ವಿಶ್ಲೇಷಣೆಗಳನ್ನು ಮೆರೆಸುವುದಕ್ಕೆ ಅವು ಎತ್ತಿದವು. ಮಾನವ, ಆರ್ದ್ರ, ಹೃದಯ ಸಂವಾದ ಸಾಹಿತ್ಯದ ವಿಶೇಷವೆನ್ನಿಸಿತು. ಸಾಹಿತ್ಯದ ಹೃದ್ಭಾಗ ಮಾನವತೆಗೆ ಮೀಸಲು ಎಂಬುದು ಗೊತ್ತಾಯಿತು. 'ಭಾಗ್ಯಾಯತ್ತಂ ಅತಃ ಪರಂ.' – ಇಲ್ಲಿ ಕೂಡ ವಿವರಿಸಿದರು. ಬ್ಯಾಲಡ್ಸ್ ಎಂದು ಕರೆಯುವ ಅಥವಾ ಉದಾ: ನಮ್ಮ ಈಚಲ ಮರದವ್ವ – ಅವರೇ ತುಂಬ ಅಪರೂಪವಾಗಿ ನಡುವೆ ಎಂದೊ ಹಲ್ಲು ಕಚ್ಚಿಕೊಂಡು ಹೇಳಲೊ ಬೇಡವೊ ಎಂಬಂತೆ ಹೇಳಿದ – ಕನ್ನಡದ ಪಲ್ಲವಿಯ ಸಾಲು; ಹುಯ್ಯೊ ಹುಯ್ಯೊ ಮಳೆರಾಯ; ಯಾಲೇಸ್ತಿವಿ ನರಸಪ್ಪ ಚಿರುಕುತೋಟ ಎಂಬಂಥವೂ ಜನಪದ ಗೀತೆಗಳಲ್ಲಿ ಕಾಣುವ ನಾಟಕಗುಣ, ಕಥನಾಂಶ, ಭಾವಾಂಶ, ವರ್ಣನಾಂಶ ಹೇಗೆ ರೂಪುಗೊಳ್ಳುತ್ತವೆ, ಆಮೇಲೆ ಏಕಕವಿ ಕೃತವಾದ ಗೀತೆಗಳಲ್ಲಿ ಕಲಾವಿಕಾಸ ಕ್ರಮದಲ್ಲಿ ಈ ಅಂಶಗಳು ಹೇಗೆ ಕೇವಲವಾಗಿ ಬೆಳೆಯುತ್ತವೆ ಎಂಬುದನ್ನು ವಿವರಿಸಿದರು.

ಈ ನೂರೆಂಟು ಕವನಗಳಲ್ಲಿ ಅಂಥವನ್ನು ಗುರುತಿಸಿ ವಿವೇಚನೆ ಮಾಡಿ ತೋರಿಸಿದರು. ಭಾವಾಂಶ ಪ್ರಧಾನವಾದ ಗೀತೆಗಳನ್ನು ಪುನಃ ಐದು ವರ್ಗಗಳಾಗಿ ವಿಂಗಡಿಸಿ ಹೇಗೆ ಕವಿತೆ ಸಾಹಿತ್ಯದಲ್ಲಿ ಜನಜೀವನದ, ಆದ್ದರಿಂದ ಕವಿಗಳ ಭಾವದ ಓಲು, ಪ್ರಕೃತಿ ಸೌಂದರ್ಯ, ಪ್ರೇಮ, ಯುದ್ಧ, ವೀರ, ಮತಧರ್ಮ, ಸಾವು-ಬದುಕು, ನಿಷ್ಠೆ, ಆದರ್ಶ ಇವುಗಳಿಗೆ ಸುಮಾರು ಸಂಬಂಧಿಸಿರುತ್ತವೆ? ಅವುಗಳಲ್ಲಿ ಒಳಮಟ್ಟಿಗೆ ಎಂಥವು? ಅತಿ ಒರಟಾದ ಅತಿ ನೇರವಾದ, ಸರಳ ಮಟ್ಟಗಳಿಂದ ಹಿಡಿದು ಅದೇ ಜಾತಿಯ ಕವಿತೆಗಳಲ್ಲಿ ಅತ್ಯುತ್ತಮವೆನ್ನಬಹುದಾದ ಮಟ್ಟದ ನಿಲವು ನಯವು ಎಲ್ಲಿನವರೆಗೆ ಪರಾಕಾಷ್ಠೆಗೆ ಹೋಗುತ್ತವೆ? ಎಂಬುದನ್ನು ತೋರಿಸಲು, ಆ ವರ್ಗಗಳಲ್ಲಿ ಹಂತಗಳನ್ನೂ ಮಜಲುಗಳನ್ನೂ ತೋರಿಸಿದರು. ಆಗ ನಮಗೆ ಯಾವುದೊ ಮಹತ್ತಾದ, ಅದ್ಭುತವಾದ ಒಂದು ಬಗೆಯ ಪಾಠವಾಗುತ್ತಿದೆ ಎಂಬ ಮೂಕ ಅರಿವೂ ರೋಮಾಂಚನವೂ ಇತ್ತೇ ಹೊರತು ಅವರು ಹೇಗೆ ಕಾವ್ಯಹೃದಯದ ಕಡೆ, ನಿರ್ಮಾಣ ಕಲ್ಪನೆಗಳ ಕಡೆ ಹುಡುಗರ ಮನಸ್ಸನ್ನು ತಿದ್ದುತ್ತಿದ್ದಾರೆ ಎಂಬ ರಹಸ್ಯ ಗೋಚರವಾಗಲಿಲ್ಲ. ಕನ್ನಡದಲ್ಲಿ ಈ ಕೆಲಸ ವಿಶೇಷವಾಗಿ ಆಗಬೇಕಾಗಿದೆ ಎಂಬುದರ ಅರಿವುಳ್ಳ ಅವರು ಇದನ್ನು ಬಹುವಾಗಿ ರೂಪಿಸುತ್ತಿದ್ದಿರಬೇಕು, – ತಮ್ಮ ಮನಸ್ಸಿನಲ್ಲಿ ಉದ್ದೇಶಪೂರ್ವಕವಾಗಿ; ನಮ್ಮಲ್ಲಿ ಆ ಓಲು ಇರಬಹುದಾದವರನ್ನು ಪ್ರಚೋದಿಸಲು ಪರ್ಯಾಯವಾಗಿ. ಉದ್ದೇಶವಿರಲಿ, ಇಲ್ಲದಿರಲಿ ಮನಸ್ಸಿನಲ್ಲಿ, ನುಡಿಯಲ್ಲಿ ಇಟ್ಟುಕೊಂಡಿದ್ದಂತೆ ಎನ್ನಿಸುತ್ತದೆ. ಅವರ ಪಾಠ ಕ್ರಮ ಹಾಗೆ.

ಮದರಾಸಿಂದ ರಾಧಾಕೃಷ್ಣನ್ ಅವರೂ ಆ ಹೊತ್ತಿಗೆ ಕಾಲೇಜಿಗೆ ಬಂದಿದ್ದರು. ಅವರು

ಬಂದಂದಿನಿಂದ ಕಾಲೇಜಲ್ಲಿ ಇರುವವರೆಗೂ ಅವರಷ್ಟು ಸಾರ್ವತ್ರಿಕ ಪ್ರಿಯತೆ ಇನ್ನಾರಿಗೂ ದೊರಕಲಿಲ್ಲ. ಅದೂ ಹೊಸದಾಗಿ ಪ್ರೊಫೆಸರ್ ಆಗಿ ನಮ್ಮಲ್ಲಿಗೆ ಬಂದಿದ್ದವರು. ಆಗ್ಗೆ ಮನಃಶಾಸ್ತ್ರದ ಒಂದು ಸಣ್ಣ ಮೊದಲ ಪಾಠವನ್ನೂ ರವೀಂದ್ರನಾಥ ಠಾಕೂರರ ತತ್ವದರ್ಶನ ಎಂಬ ಒಂದು ಪುಸ್ತಕವನ್ನೂ ಮಾತ್ರ ಬರೆದಿದ್ದರು. ಮೊದಲನೆಯ ವರ್ಷದ ಫಿಲಾಸಫಿ–II ಭಾಗದ ಹುಡುಗರಿಗೆ ಮನಃಶಾಸ್ತ್ರ, ನೀತಿಶಾಸ್ತ್ರ (Ethics) ಪಾಠ ತೆಗೆದುಕೊಳ್ಳುತ್ತಿದ್ದರು. ನಾನು ಆ ಭಾಗದ ವಿದ್ಯಾರ್ಥಿ ಆಗದಿದ್ದರೂ ಕೆಲವು ದಿನ ಬಿಡುವಿದ್ದಾಗ ನೀತಿಶಾಸ್ತ್ರದ ಕ್ಲಾಸುಗಳಿಗೆ ಹೋಗಿ ಕೂಡುತ್ತಿದ್ದೆ. ನೀತಿಶಾಸ್ತ್ರದ ಪಾಠ ಹೇಳಲು ಆರಂಭ ಮಾಡಿದಾಗ, "ಎಲ್ಲರೂ ಶ್ರೀಮಂತರಾಗಿ ಹುಟ್ಟುವುದು, ಚೆಲುವರೂ ಶಕ್ತರೂ ಆಗಿ ಹುಟ್ಟುವುದು, ಬುದ್ಧಿವಂತರಾಗಿ ಹುಟ್ಟುವುದು ಶಕ್ಯವಿಲ್ಲ; ಪ್ರಕೃತಿಗೆ ಅಸಮತೆ ಇದ್ದಷ್ಟೂ ಲೇಸೇನೆ. ಆದರೆ ಎಲ್ಲರೂ ಒಳ್ಳೆಯವರಾಗಬಹುದು – ಮಾತಿನಲ್ಲಿ, ನಡತೆಯಲ್ಲಿ, ಜೀವನದಲ್ಲಿ. ಒಳ್ಳೆಯವರಾಗುವುದು ಎಂದರೇನು? ಯಾವ ಅಂಶ, ರೀತಿ, ಸಂಗತಿಗಳಲ್ಲಿದೆ ಒಳ್ಳೆಯತನವೆಂಬುದು? ಇದರ ಸ್ವರೂಪ ಲಕ್ಷಣಗಳನ್ನು ತಿಳಿಸುವ ಶಾಸ್ತ್ರ Ethics" ಎಂದು ಆರಂಭ ಮಾಡಿದ್ದರು. ಅದು ನನ್ನ ನೆನಪು. ಎಂಥ ಆರಂಭ!

ಶ್ರೀ ರಾಧಾಕೃಷ್ಣನ್ನರು ಮದರಾಸಿನಲ್ಲಿ ಓದಿ ಬೆಳೆದು ಪ್ರೆಸಿಡೆನ್ಸಿ ಕಾಲೇಜಲ್ಲಿದ್ದ ಆಂಧ್ರರು. ನಮ್ಮ ಕಾಲೇಜಿಗೆ ಬಂದಾಗ ಅವರ ವೇಷ ಇಂದಿನಂತೆಯೇ. ರೇಷ್ಮೆಯ ಲಾಂಗ್ ಕೋಟು, ಮಲ್‌ಪಂಚೆ, ಕಾಲಿಗೆ ಕಂದು ಬಣ್ಣದ (Brown) ಸ್ಲಿಪ್ಪರು, ತಲೆಗೆ ಬಿಳಿಯ ಮಸ್ಲಿನ್ ರುಮಾಲು; ಆದರೆ ಮುಖದ ಮೇಲೆ ಮೀಸೆ ಇತ್ತು. ಅವರನ್ನು ಕುರಿತು ಎಲ್ಲರಿಗೂ ಪ್ರೀತಿ ಗೌರವ ಭಕ್ತಿ ಉಂಟಾಗುತ್ತಿತ್ತು. ಲೈಬ್ರರಿಯ ಮೇಲಿಂದ ಕೆಳಗೆ ಬರುವ ಮುಂಚೆ ಪುಸ್ತಕಗಳ ಬೀರುವಿನ ಮುಂದೆ ನಾನು ಯಾವುದನ್ನೋ ಆಯುತ್ತಿದ್ದುದನ್ನು ಕಂಡು, ನಿಂತು, ಕ್ಷೇಮ ಸಮಾಚಾರ ವಿಚಾರಿಸಿದರು. ಆ ವರ್ಷದ ಪರೀಕ್ಷೆಯಲ್ಲಿ 'ಫಿಲಾಸಫಿ–I' ಭಾಗದ ಮೊದಲ ಸ್ಥಾನ ನನಗೆ ಬಾರದೆ ಹೋಗಿ ಎರಡನೆಯ ವರ್ಷದಲ್ಲಿ ಆ ಭಾಗದ ಮೆರಿಟ್ ಸ್ಕಾಲರ್‌ಷಿಪ್ ತಪ್ಪಿಹೋಗಿತ್ತು. ಬಹುಶಃ ಆ ಮಾತು ಎಲ್ಲಿ ಬಂದಿತ್ತೋ ಏನೋ. ಒಂದು ದಿನ 'How have you offended Professor' (ಈ ಪ್ರೊಫೆಸರ್ ಕೋಪಕ್ಕೆ ನೀವು ಹೇಗೆ ಒಳಗಾದಿರಿ?) ಎಂದು ಕೇಳಿದರು. ಹೇಗೂ ಏಕೊ ನನಗೆ ನಮ್ಮ ಪ್ರೊಫೆಸರ್ ಸುಮುಖರಾಗಿರಲಿಲ್ಲ ಎಂಬುದು. ಅಂತ ಗೊತ್ತಿತ್ತು.

ರಾಧಾಕೃಷ್ಣನ್ ಅವರ ಅಂದಿನ ಆ ಪ್ರಶ್ನೆ ನನಗೆ ಅಚ್ಚರಿ ಉಂಟು ಮಾಡಿತು. ನನಗೆ ತಿಳಿಯದೆಂದೆ. 'Don't worry, things will brighten up' (ಚಿಂತೆ ಬೇಡ, ಎಲ್ಲ ಸರಿಯಾಗುವುದು) ಎಂದರು. ಅದು ಅವರ ಜೀವನದ, ಗುರುಧರ್ಮದ ರಹಸ್ಯ. ವಿದ್ಯಾರ್ಥಿಗಳ ಸಂಬಂಧದಲ್ಲಿ ಅವರ ಮುಖ ಎಂದೂ ಮಸುಕಾದುದಿಲ್ಲ; ಮಾತು ಕಠಿಣವಾದುದಿಲ್ಲ; ನಗೆ ಆರಿದುದಿಲ್ಲ. ಹಾಗೆ ನಡೆಸಿಕೊಂಡುದರಿಂದ ಕಾಲೇಜಲ್ಲಿ, ಊರಲ್ಲಿ, ನಾಡಲ್ಲಿ ಅವರ ಕೀರ್ತಿ ಹಬ್ಬಿತು. ನಮ್ಮಂಥವರ ಬದುಕಿನಲ್ಲಿ ಯಾವುದೊ ಹೊಸ ಸ್ನಿಗ್ಧತೆ, ಸುಖೋಷ್ಣತೆ ಅವರ ಸಂಪರ್ಕದಿಂದ ಪ್ರವಹಿಸಿ ಬರುವಂತೆ ಆಯಿತು. ಗುರುವಿನಲ್ಲಿ ವಿದ್ಯೆ, ಬೋಧನ ಚಾತುರ್ಯ ಇದ್ದರೆ ಸಾಲದು. ಮಾನವತೆ, ಔದಾರ್ಯ, ವಾತ್ಸಲ್ಯಗಳು ಇನ್ನೂ ಹೆಚ್ಚು ಫಲಕಾರಿಯಾಗುತ್ತವೆ.

ಕಾಲೇಜಿನ ಪಾಠ ಒಂದೇ ತುಂಬಿನಲ್ಲಿ ನಡೆಯುತ್ತಿತ್ತು. ಶ್ರೀ ರಾಧಾಕೃಷ್ಣನ್ ನಮಗೆ ಎರಡು ಮೂರನೆಯ ವರ್ಷದ ಕ್ಲಾಸುಗಳಿಗೆ ಆಧುನಿಕ ತತ್ವಶಾಸ್ತ್ರದ ಚರಿತ್ರೆಯ (History of Modern Philosophy) ಪಾಠ ಹೇಳಿದರು. ಜೊತೆಗೆ ರಾಜನೀತಿ ತತ್ವಗಳ ಇತಿಹಾಸದ (History of Political Thought) ಪಾಠ ಮಾಡಿದರು. ಅವರ ತರಗತಿಗಳೆಂದರೆ ವಿದ್ಯಾರ್ಥಿಗಳಿಗೆ ಹಬ್ಬ. ಒಂದು ದಿನ ಅವರು ಬಿಗಿಯಾಗಿ ಇದ್ದುದ್ದಿಲ್ಲ; ದರ್ಪ ತೋರಿಸಿದುದಿಲ್ಲ; ಗಮನ ಕೊಡಿರೆಂದು ಕೇಳಿದುದಿಲ್ಲ; ಯಾರನ್ನಾದರೂ ಬಯ್ದು ಗದರಿಸಿಕೊಂಡುದಿಲ್ಲ. ವಿದ್ಯಾರ್ಥಿಗಳ ಹೆಸರುಪಟ್ಟಿ ಹಿಡಿದು ಗುಂಡುರಾವ್ ಕೆ. ಎಚ್. ಎನ್ನದೆ, ಸಚ್ಚಿದನಂದಮೂರ್ತಿ, ತಿರುಮಣಚಾರ್, ವೆಂಕಟರಮನ್ ಸಸ್ತಾರಿ ಎನ್ನದೆ ಪ್ರತ್ಯಕ್ಷರದ ಉಚ್ಚಾರಾಂಶಕ್ಕೆ ಅಪೋಹವಿಲ್ಲದೆ ಉಚ್ಚರಿಸುತ್ತಿದ್ದರು; ಅವರು ಆಂಧ್ರದವರಾದ್ದರಿಂದಲೂ ಮದರಾಸಿನಲ್ಲಿ ಇದ್ದುದವರಿಂದಲೂ ಹೆಸರುಗಳ ಪರಿಚಯ ಇತ್ತಾಗಿ. ಅಲ್ಲದೆಯೊ ಅವರ ಉಚ್ಚಾರವೇ ಕಡು ಸ್ಪಷ್ಟವಾದ್ದು. ಹಾಜರಿ ತೆಗೆದುಕೊಂಡ ತರುವಾಯ ನಾಲ್ಕು ಜನ ಚಾಲಾಕಿನವರೆಂದು ತಮಗೆ ಕಂಡವರ ಹೆಸರನ್ನು ಹೇಳಿ 'What news this morning?' (ದಿನದ ಸುದ್ದಿ ಏನು?) ಎಂದು ಕೇಳಿ ಹರಟೆ ಹೊಡೆದು, 'Where did we leave last time?' – (ಕಳೆದ ಬಾರಿ ಎಲ್ಲಿಗೆ ನಿಲ್ಲಿಸಿದ್ದೆವು) ಎಂದವರೇ 'ಡೆಕರ್ಟ್ ಮುಗಿಸಿದ್ದೇವೆ; ಸ್ಪೈನೋಜ ಮುಗಿಸಿದ್ದೇವೆ; ಬಾರ್ಕ್‌ಲೆಗೆ ಬಂದಿದ್ದೆವಲ್ಲವೆ?' ಎಂದು ಅವನ ಒಂದು ವಾಕ್ಯವನ್ನು ಆ ದಿನ ತೆಗೆದುಕೊಂಡು, ಹದಿನೈದು ನಿಮಿಷ ಅಥವಾ ಇಪ್ಪತ್ತು ನಿಮಿಷ ಚೆನ್ನಾಗಿ ವಿಶದವಾಗಿ ಉಸಿರು ಕಟ್ಟಿದಂತೆ ಮಾತನಾಡಿ ಮುಗಿಸಿ, 'Now take a note on it' ಎಂದು ಸ್ವಲ್ಪ ಹೆಚ್ಚು ಕಡಿಮೆ ಆವರೆಗೆ ಹೇಳಿದ್ದನ್ನು ಇನ್ನಷ್ಟು ಖಚಿತವಾಗಿ, ಅಷ್ಟೇ ಸುಲಭವಾಗಿ ಬರೆಸುತ್ತಿದ್ದರು. ವಿಷಯಕ್ಕೆ ಸಂಬಂಧಿಸಿದ ಒಂದಂಶ, ಒಂದು ಪಾದ; ಒಂದು ಸಂಗತಿ ಲೋಪವಾಗುತ್ತಿರಲಿಲ್ಲ. ಆವೊತ್ತಿನ ಪಾಠ ಮುಗಿದ ಮೇಲೆ ಇನ್ನೂ ಐದು – ಆರು ನಿಮಿಷ ಉಳಿದಿರುತಿತ್ತು. ಪುನಃ ಹರಟೆ. ನಮಗೆ ಗೊತ್ತುಮಾಡಿದ ಪಾಠ ಹೀಗೆ ಕ್ರಮವಾಗಿ ವರ್ಷಕ್ಕೆ ಇಪ್ಪತ್ತು ಗಂಟೆಗಳಲ್ಲಿಯೊ ಇಪ್ಪತ್ತನಾಲ್ಕು ಗಂಟೆಗಳಲ್ಲಿಯೊ ಮುಗಿದು ಹೋಗುತ್ತಿದ್ದು ಯಾವುದನ್ನೂ ಅವಸರಿಸಿದವರಲ್ಲ; ಎಳೆದವರಲ್ಲ; ಕಾಲ ಸಾಲದು, ಇಟ್ಟ Portion (ಪಾಠ ಭಾಗ) ಮುಗಿಯಲಿಲ್ಲ ಎಂದುದಿಲ್ಲ.

ಅವರು ಹೇಳಿದ್ದನ್ನು ಕೇಳಿ, ಅವರು ಬರೆಸಿದುದನ್ನು ಓದಿದವರಿಗೆ ಎಷ್ಟು ದೊಡ್ಡ ತರಗತಿಯ ಪಾಸಾದರೂ ಆಗಬಹುದಿತ್ತು. ವಿಷಯದ ಸ್ವರೂಪ ಚೆನ್ನಾಗಿ ಮಂದಟ್ಟಾಗುತ್ತಿತ್ತು. ಆ ವಾಗ್ಮಿತೆ, ಆ ವಿಲಾಸ, ಆ ಸ್ಫುಟತೆ, ನಿಃಸಂಶಯತೆ, ತೀರ್ಮಾನ ಅವರವೇ. ಇನ್ನು ಇವರ ಮಾತು ಬೇರೆಯಿಲ್ಲ, ಎಲ್ಲ ವಸ್ತು ಸಂಗತಿಗಳನ್ನೂ ನಮಗೆ ತಿಳಿಸಿಬಿಟ್ಟಿದ್ದಾರೆ – ಎನ್ನುವಂತೆ, ಆಯಾ ಶಾಸ್ತ್ರವಿಧಾನ ಗ್ರಂಥಗಳ ಮೇಲೆ ಏಳುವ ವಾದಾಂಶಗಳೆಲ್ಲ ಅವರು ಹೇಳಿದುದರಲ್ಲಿ ಒಂದು ಇತ್ಯರ್ಥವಾಗುವಂತೆ ಪಾಠ ಇರುತ್ತಿದ್ದುದರಿಂದ ಯಾವ ಚಿಂತೆಯೂ ಇಲ್ಲದೆ ರಾಧಾಕೃಷ್ಣನ್ ಪಾಠ ಸ್ವಸಂಪೂರ್ಣವಾಗುತ್ತಿತ್ತು.

ಅವರ ಸಜ್ಜನತೆ, ನಗುಮುಖ, ಸುಲಭತೆ, ಯಾರನ್ನು ಕಂಡರೂ ವಿಶ್ವಾಸದಿಂದ ನಡೆದುಕೊಳ್ಳುವ ರೀತಿ ಎಲ್ಲರಿಗೂ ಅವರಲ್ಲಿ ತಮ್ಮ ಮನೆಯ ಹಿರಿಯರೆಂಬಂತೆ ಪ್ರೀತಿ

ಉಂಟುಮಾಡುತ್ತಿತ್ತು. ಒಮ್ಮೆ ಮಹಡಿಯ ಮೇಲಿನ ಕೊನೆಯಲ್ಲಿ ಸುಮಾರು ನಾಲ್ಕು ಗಂಟೆಯ ಅಪರಾಹ್ನ ಬೆಟ್ಟದ ಕಡೆ ನೋಡುತ್ತ ಯಾವುದೊ ಚಿಂತೆಯಲ್ಲಿ ಇದ್ದೆ ಎಂದು ಕಾಣುತ್ತದೆ. ಹಿಂದಿನಿಂದ ಯಾರೊ ಬಂದು ಬೆನ್ನ ಮೇಲೆ ಕೈ ಇಟ್ಟರು. ತಿರುಗಿ ನೋಡಿದರೆ ಇವರು! ನನಗೆ ಸಂಭ್ರಮ; ಸಂಕೋಚ. 'What ails you young man; can I do anything for you?' (ಈ ಮನುಷ್ಯನಿಗೆ ಏನೊ ಚಿಂತೆಯಿರುವಂತಿದೆ. ನಾನೇನಾದರೂ ನೆರವಾಗಬಲ್ಲನೆ?) ಎಂದರು, 'ಏನೂ ಇಲ್ಲ. ಏನನ್ನೊ ಯೋಚಿಸುತ್ತ ನಿಂತಿದ್ದೆ' ಎಂದೆ. "ಕಷ್ಟವೊ ಸುಖವೊ ಇದ್ದರೆ ಹೇಳಿ, ನನ್ನ ಕೈಯಲ್ಲಾದುದಾದರೆ ಮಾಡುತ್ತೇನೆ" ಎಂದರು. ಅಂಥದೇನೂ ಇಲ್ಲವೆಂದು ತಿಳಿಸಿ, ಅವರ ಉಪಕಾರಕ್ಕಾಗಿ ಅವರನ್ನು ವಂದಿಸಿದೆ. ಇಂಥದು ಎಷ್ಟು ಜನದ್ದೊ ಅನುಭವ. ಅವರಿದ್ದಲ್ಲಿ ಅವರದೇ ಮೆಲು ಮಾತು; ನಗೆ. ಕೆಲವೇಳೆ ಚೇಷ್ಟೆ. ಕಾಲೇಜಲ್ಲಿ ಎಲ್ಲರಿಗಿಂತ ಹೆಚ್ಚಾಗಿ ಅವರ ಮಾತುಕತೆ ಸೂಸಿತ್ತು. ಅದೊಂದು ಬಗೆಯ ಹೃಷ್ಟ ವಿವೇಕ (glad wisdom) ಎನ್ನಬಹುದಾದ್ದು. ಅವರೊಬ್ಬರಲ್ಲಿ ಮಾತ್ರ ನನಗೆ ಕಂಡದ್ದು.

ಹಿರಿಯಣ್ಣನವರು ಟ್ರೈನಿಂಗ್ ಕಾಲೇಜಲ್ಲಿ ಪಾಠಗಳನ್ನು ಹೇಳಿದ್ದರು. ಅವರಿಗೆ ಪ್ರಾಚೀನ ಸಂಸ್ಕೃತ ವಿದ್ಯೆಯ ಮೇಲಿದ್ದ ಆಸಕ್ತಿ ಅವುಗಳನ್ನು ಕುರಿತ ತಿಳಿವಳಿಕೆ ಅಮೋಘವಾದವು; ನಿಷ್ಕೃಷ್ಟವಾದವು. ಶಾಸ್ತ್ರ ಪಾಠಗಳಲ್ಲಿ ಆ ಗುಣ ಒಂದು ರೀತಿ ಫಲಿಸಿದರೆ ಸಾಹಿತ್ಯ ಪಾಠಗಳಲ್ಲಿ ಅದೇ ಗುಣ ಕೃತಿಗಳ ಹೃದಯ ಸಾರವನ್ನು ಹಿಡಿದು ಒಂದು ಮಾತು ಹೆಚ್ಚಿಲ್ಲದೆ ಒಂದು ಕಡಿಮೆಯಾಗದೆ ಸಂಗತಿಗಳನ್ನು ನಿರ್ದೇಶಿಸುತ್ತಿತ್ತು. 'The same land that gave birth to Kalidasa gave birth to his commentators' (ಯಾವ ನಾಡು ಕಾಳಿದಾಸನಿಗೆ ಜನ್ಮವಿತ್ತಿತೊ ಅದೇ ನಾನು ಅವನ ವ್ಯಾಖ್ಯಾನಕಾರರಿಗೂ ಜನ್ಮವಿತ್ತಿತ್ತು!) ಎಂದಿದ್ದರು ಒಮ್ಮೆ. ಅವರು ನಿಷ್ಠರು; ಪ್ರಾಮಾಣಿಕರು. ಸದ್ದುಗದ್ದಲವಿಲ್ಲದೆ ತಮ್ಮ ವ್ಯಾಸಂಗದಲ್ಲಿಯೂ ಅಧ್ಯಾಪನೆಯಲ್ಲಿಯೂ ತೊಡಗಿದ್ದವರು. ಯಾರ ಕಣ್ಣಿಗೂ ಬಾಯಿಗೂ ಬೀಳದೆ ತಮ್ಮ ಕೆಲಸವನ್ನು ಮಾಡುತ್ತಿದ್ದರು. ಕೈಗಾಪಾಗಿ ನಾಲ್ಕು ಪ್ರಮಾಣ ಆಧಾರಗಳನ್ನು ಉಳಿಸಿ ಇಟ್ಟುಕೊಂಡು ಒಂದು ಕಟ್ಟಡವನ್ನೊ ವಾದವನ್ನೊ ಮುಂದು ಮಾಡುತ್ತಿದ್ದರು. ತಂಪಾದ ಒಂದು ಬೆಳ್ಳುರಿಯ ಹಾಗಿದ್ದುದು ಆ ಜೀವ. ಹೊರಗೆ ಯಾವ ರಂಜನೆಯನ್ನೂ ವಿಕಾರವನ್ನೂ ತೋರುತ್ತಿರಲಿಲ್ಲ. ಮಾತಿನಲ್ಲಿ ಆಡಂಬರವಿಲ್ಲ. ಇನ್ನೊಬ್ಬರನ್ನು ಒಲಿಸಬೇಕೆಂದಾಗಲಿ ಗೆಲ್ಲಬೇಕೆಂದಾಗಲಿ ಯತ್ನಿಸಿದವರಲ್ಲ. ಹೀಗಾಗಿ ಅವರ ವಿಷಯ ಪ್ರತಿಪಾದನೆಯ ರೀತಿ ನಮಗೆ ಅತಿಶಯವಾಗಿ ಕಂಡಿತು. ಯಾವ ಉದ್ವೇಗವೂ ಇಲ್ಲದೆ ಬಹು ಜಟಿಲವಾದ ಕ್ಲಿಷ್ಟವಾದ ಸಮಸ್ಯೆಯನ್ನೂ ವಾದವನ್ನೂ ಅವರು ಸುಲಭವಾಗಿ ನಿರ್ವಹಿಸುತ್ತಿದ್ದರು. 'ಅಕ್ಲಿಷ್ಟ ಕರ್ಮಣಃ' ಎಂಬ ಮಾತು ಅವರಿಗೆ ಒಪ್ಪುವಂಥದು.

ಒಮ್ಮೆ ಒಬ್ಬ ವಿದ್ಯಾರ್ಥಿ 'ಮಿಲ್ ಹೀಗೆ ಹೇಳಿದ್ದಾನಲ್ಲವೆ?" ಎಂದರು. ಒಡನೆಯೇ ಅದಕ್ಕೆ ಉತ್ತರವಾಗಿ ಹಿರಿಯಣ್ಣನವರು : 'ನಾನು ಮಿಲ್ ಅನ್ನು ಅರ್ಥಮಾಡಿಕೊಂಡಿರುವ ಮಟ್ಟಿಗೆ ಅವರ ಅಭಿಪ್ರಾಯ ಬೇರೆ. ಈ ವಿಷಯವನ್ನು ಕುರಿತು ಮಿಲ್ ನುಡಿಯುವಾಗ ಅದಕ್ಕೆ ಪ್ರವೇಶವಾಗಿ ಕೆಲವು ಮಾತುಗಳನ್ನು ಆಡುತ್ತಾರೆ. ವಿಶೇಷ ಮಿತಿಗಳನ್ನು ತಿಳುಸುತ್ತಾರಲ್ಲವೆ?'

ಎಂದರು. ಅಷ್ಟು ವಿಚಕ್ಷಣೆಯಿಂದ ಅವರು ಪಾಶ್ಚಿಮಾತ್ಯ ಗ್ರಂಥಗಳನ್ನು ವ್ಯಾಸಂಗ ಮಾಡಿದ್ದಾರೆಂದು ನಾವು ಎಣಿಸಿರಲಿಲ್ಲ. ಅವರು ಆ ವರ್ಷದಲ್ಲಿ ನಮಗೂ ನಮ್ಮ ಮೇಲ್ತರಗತಿಯ ಮೊದಲ ವರ್ಷದ ಎಂ.ಎ. ವಿದ್ಯಾರ್ಥಿಗಳಿಗೂ ಒಟ್ಟಿಗೆ ಭಾರತೀಯ ತತ್ತ್ವ ದರ್ಶನದ ಪಾಠ ಮಾಡಿದರು. ಆಗ ನಮಗೆ ಕೊಟ್ಟ ನೋಟ್ಸ್ ಬೆಳೆದು ಮುಂದೆ ಅವರ 'Outlines of Indian Philosophy' ಆಯಿತು. ಆ ತರಗತಿಗಳಲ್ಲಿ ಇರುತ್ತಿದ್ದ ಒಂದು ಪೂಜ್ಯ ಭಾವ ಪಾಠಗಳನ್ನು ವಿಶಿಷ್ಟವಾಗಿ ಮಾಡಿತ್ತು. ಯಾವುದನ್ನೂ ಪ್ರಮಾಣ, ಹದ ಮೀರದೆ ಎಷ್ಟು ಸುಲಭವಾದ, ಸರಳವಾದ ಮಾತಿನಲ್ಲಿ ನೇರವಾಗಿ ಹೇಳಬಹುದೊ ಯಾವುದಕ್ಕೆ ರೂಪಾಯಿಗೆ ರೂಪಾಯಿ ಬೆಲೆ ಪ್ರಮಾಣ ಇದೆಯೊ ಅಂಥದನ್ನು ಮಾತ್ರ ಅವರು ತಿಳಿಸಿದರು. ಆ ಮಾತುಗಳು ಸತ್ಯದ ಒರೆಗಲ್ಲು. ಆ ನೋಟ್ಸನ್ನೇ ಅಚ್ಚು ಮಾಡಿದರೆ ಸಾರ್ವಜನಿಕವಾದ ಬೋಧನೆಗೆ ಉದ್ಗ್ರಂಥವಾಗುತ್ತದೆ.

ಎರಡು ಸಣ್ಣ ಸಂದರ್ಭಗಳನ್ನು ತಿಳಿಸುತ್ತೇನೆ. ಭಗವದ್ಗೀತೆಯ ಒಂದು ಪ್ರಸಂಗದಲ್ಲಿ ಒಂದು ಚರ್ಚೆ ಎದ್ದಿತು. ಅವರು ಕಡೆಯಲ್ಲಿ 'It can be the Bible of any Creed' (ಯಾವ ಧರ್ಮ ಸಮಯಕ್ಕೂ ಗೀತೆ ಒಂದು ಪ್ರಮಾಣ ಗ್ರಂಥವಾಗಬಲ್ಲದು) ಎಂದರು. ಈ ಸಾವಿರಾರು ವರ್ಷಗಳ ಅದರ ಚರಿತ್ರೆಯಲ್ಲಿ ಎಷ್ಟು ಜನ ಅದನ್ನು ಹೇಗೆ ಬಳಸಿದ್ದಾರೆ ಎಂಬುದರಿಂದ ಈ ಮಾತು ಎಷ್ಟು ಸತ್ಯವೆಂಬುದು ಗೊತ್ತಾಗುತ್ತದೆ.... ಇನ್ನೊಂದು ಸಲ : 'Temptations' – ದುರ್ಮೋಹನಗಳು ಎಂಬ ಮಾತು ಬಂತು. 'A Strong man will have strong temptations; a weak man weak ones' ಎಂದರು. ದಾರಿಯ ದ್ಯಾವಣ್ಣನಿಗೆ ಹೇಗೊ ವಿಶ್ವಾಮಿತ್ರ ನಹುಷಾದಿಗಳಿಗೂ ಹಾಗೆಯೇ; ಅವರವರ ನೆಲೆಯಲ್ಲಿ ಅವರಿಗೆ ಮೋಹವನ್ನು ಉಂಟುಮಾಡಿ ಅವರನ್ನು ನಡೆಸುವ ಪ್ರವೃತ್ತಿ ಎಷ್ಟು ಬೆಲೆಯದು, ಶಕ್ತಿಯದು ಎಂಬುದನ್ನು ಗೊತ್ತುಮಾಡುತ್ತದೆ. ಇನ್ನೊಮ್ಮೆ ವಿದ್ಯಾರ್ಥಿಗಳು ಬರೆದ ಯಾವುದೊ ಒಂದು ಪ್ರಬಂಧವನ್ನು ಹಿಂದಕ್ಕೆ ಕೊಡುತ್ತ ಒಬ್ಬ ವಿದ್ಯಾರ್ಥಿಗೆ ಅಬ್ಬರದ ಬರವಣಿಗೆ ಬೇಡವೆಂದು ತಿಳಿಸಲು ಹೀಗೆ ಹೇಳಿದರು: ಪ್ರಯೋಗಿಸುವ ಮಾತು ತನ್ನ ಅರ್ಥವನ್ನೂ ಸಂಬಂಧವನ್ನೂ ತಿಳಿಸಿ ತನ್ನ ಕಾರ್ಯ ಮಾಡಿ ಉಪರಮಿಸಿ ತಾನು ವಿನಯದಿಂದ ಹಿಮ್ಮೆಟ್ಟಬೇಕು. ತನ್ನ ಕಡೆಗಾಗಲಿ, ನುಡಿಯುವವನ ಅಥವಾ ಬರೆಯುವನ ಕಡೆಗಾಗಲಿ, ಗಮನ ಸೆಳೆಯಬಾರದು ಎಂದರು. The word should speak its meaning, indicate relationship and retire: it should not try to draw attention to itself or the speaker ಎಂಬುದು ಸುಮಾರು ಮಾತು. Retire ಎಂಬ ಪದವನ್ನು ಅವರ ಬಾಯಿಂದ ಕೇಳಬೇಕಿತ್ತು. ಅದು ಅಲ್ಲಿನ ಜೀವಾಂಶ; ಗುಣಾಂಶ; ಧರ್ಮಾಂಶ. ಅವರ ಮಾತೆಲ್ಲ ಹಾಗೆ; ಬರವಣಿಗೆ, ಪಾಠ ಹಾಗೆ. ಐವತ್ತು ವರ್ಷಗಳ ಯತ್ನ ಫಲಿಸದೆ ನನ್ನಂಥವರು ಈ ಬೋಧೆಯಿಂದ ಹಿಂದೆ ಎಷ್ಟು ದೂರವಿದ್ದೆವೊ ಇಂದೂ ಅಷ್ಟೇ ದೂರದಲ್ಲಿದ್ದೇವೆ.

ಆ ಕ್ಲಾಸುಗಳಲ್ಲಿ ವಿದ್ಯಾರ್ಥಿಗಳಿಗೆ ಅಂತರ, ಅವಾಂತರ ದಿಶೆ ಸೇರಿದ ಹನ್ನೆರಡು ದಿಕ್ಕುಗಳ – ಹತ್ತಂತೂ ಪ್ರಖ್ಯಾತ – ಸಮಸ್ತ ಎಚ್ಚರಿಕೆ ಬೇಕು. ಹೀಗೆ ಹಾಗೆ ಚಲಿಸುವ ಹಾಗಿಲ್ಲ;

ಸ್ಫಲಿಸುವ ಹಾಗಿಲ್ಲ. ಅಲ್ಲಿ ರಾಧಾಕೃಷ್ಣನ್ ಕ್ಲಾಸಿನ ವಾಕ್‌ರಂಜನೆ, ವೈಭವ ಇಲ್ಲ; ಅದು ಕುಶಾಗ್ರವಾದ ಉಕ್ಕಿನ ಕಂಠದಿಂದ, ಮಿಂಚಿನ ಬಳ್ಳಿಯಿಂದ ಬರೆದ ಬರೆಹ. ಆದರೆ ಈ ಬೆಳಕು ಹುಣ್ಣಿಮೆ ಚಂದ್ರನದು, ಸೂರ್ಯನದಲ್ಲ. ಒಂದು ಜೀವ ತನ್ನದೇ ರೀತಿಯಲ್ಲಿ ಹೇಗೆ ಕ್ರಿಯಾತ್ಮಕವಾಗುತ್ತಿತ್ತು ಎಂಬುದು ಹಿರಿಯಣ್ಣನವರ ಪಾಠಗಳಲ್ಲಿ ಕಾಣುತ್ತಿತ್ತು. ರೇಷ್ಮೆಯ ನಿಲುವಂಗಿಯನ್ನೆ ಅಥವಾ ಸರ್ಜಿನ ಕಿರುಕೋಟನ್ನೊ ಹಾಕಿಕೊಂಡು, ಶುಭ್ರವಾಗಿ ಒಗೆದು ಲಕ್ಷಣವಾಗಿ ಇಸ್ತ್ರಿ ಮಾಡಿದ ಮಲ್‌ದೋತ್ರವುಟ್ಟು, ಕಾಲಿಗೆ ಪೂನಾ ಪಾಪಾಸ್ ಹಾಕಿಕೊಂಡು, ತಲೆಯ ಮೇಲೆ ಮಲ್ ಅಥವಾ ಮಸ್ಲಿನ್ ರುಮಾಲು ಹಾಕಿ, ಗೌನು ಧರಿಸಿ ಅವರು ಕ್ಲಾಸಿಗೆ ಬರುತ್ತಿದ್ದಾಗ ಯಾವುದೊ ಬೇರೆ ಪ್ರಪಂಚ ನಮ್ಮ ಕಡೆಗೆ ಇಳಿದು ಬರುತ್ತಿತ್ತು ಎಂಬ ಭಾವನೆ. ಅಲ್ಲಿ ಸಂತೋಷ, ಕಾವು, ರಂಜನೆಗೆ ಅವಕಾಶ ಇರಲಿಲ್ಲ. ದೇವಸ್ಥಾನದ ಒಂದು ಭಾವ ಅಲ್ಲಿ.

ವಿದ್ಯಾರ್ಥಿಗಳನ್ನು ಅವರು ಕಾಣುತ್ತಿದ್ದುದೂ ಹಾಗೆಯೇ. ಎಷ್ಟು ಬೇಕೊ ಅಷ್ಟು. ಅವರ ಮನೆಗೆ ನೀವು ಹೋದಿರೆನ್ನಿ. ಅವರಿಗೆ ಹೇಳದೆ, ಕಾಲ ಗೊತ್ತುಮಾಡಿಕೊಳ್ಳದೆ ಯಾರೂ ಹೋಗುತ್ತಿರಲಿಲ್ಲ. ಆ ಸಮಯಕ್ಕೆ ಅವರು ನಿಮಗಾಗಿ ಕಾಯುತ್ತಿದ್ದರು. ರೂಮಿನಲ್ಲಿ ಒಂದೊ ಎರಡೊ ಕುರ್ಚಿ. ಪಕ್ಕದಲ್ಲಿ ಹಾಸಿದ ಚಾಪೆ. ಚಾಪೆಯ ಒಂದು ಕೊನೆಯಲ್ಲಿ ಒಂದು ಸಣ್ಣ ಮೇಜು – ತಾವು ಕುಳಿತು ಬರೆಯಲು. ಕುರ್ಚಿಯ ಮೇಲೆ ನಿಮ್ಮನ್ನು ಕುಳ್ಳಿರಿಸಿ ಅವರು ಮಾತನಾಡುವುದು. ವಿಷಯ ಏನಿದೆಯೊ ಅಷ್ಟರ ಮಟ್ಟಿಗೆ ಮಾತು. ಎರಡು ನಿಮಿಷವಾದರೆ ಎರಡು, ಹತ್ತಾದರೆ ಹತ್ತು. ಆಮೇಲೆ ಅಲ್ಲಿ ಉಳಿಯಲು ಉತ್ತೇಜನ ದೊರೆಯುತ್ತಿರಲಿಲ್ಲ. ಸ್ವಲ್ಪ ಕಷ್ಟ; ಆದರೆ ಸಾಕು.

ಅವರ ವ್ಯಾಸಂಗವೂ ನಿರಂತರವಾಗಿ ನಡೆಯುತ್ತಿದ್ದುದೇ. ದಿನಾ ಬೆಳಗ್ಗೆ ಅರಮನೆಯ ಸಂಸ್ಕೃತ ಮಹಾ ಪಾಠಶಾಲೆಗೆ ಹೋಗಿ ಅಲ್ಲಿಂದ ಬಹುಶಃ ವಿರೂಪಾಕ್ಷಶಾಸ್ತ್ರಿಗಳು, ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು, ಹಾಸನದ ನರಸಿಂಹಶಾಸ್ತ್ರಿಗಳಂಥ ನಿಲವಿನ ವಿದ್ವಾಂಸರಲ್ಲಿ ದರ್ಶನದ, ಶಾಸ್ತ್ರದ, ಸಾಹಿತ್ಯದ ಯಾವುದೊ ವ್ಯಾಸಂಗ, ಅನುಸಂಧಾನ ಮಾಡಿಬರುತ್ತಿದ್ದರು. ತಿಂಗಳಿಗೆ ಒಮ್ಮೆ ಇಮ್ಮೆಯಾದರೂ ಅವರು ಮದರಾಸಿಗೆ ಹೋಗಿ ಬರುತ್ತಿದ್ದುದುಂಟು. ಏಕೆ ಹೋಗುತ್ತಿದ್ದರು ಎಂಬ ಬಗೆಗೆ ಅರಿಯದವರಿಗೆ ಊಹಾಪೋಹ ಇದ್ದವು. ಮದರಾಸಲ್ಲಿ ಅವರಿಗಾಗಿ ಕಾದಿರುತ್ತಿದ್ದ ವ್ಯಕ್ತಿ ಮಹಾಮಹೋಪಾಧ್ಯಾಯ ಕುಪ್ಪಸ್ವಾಮಿ ಶಾಸ್ತ್ರಿಗಳು. ಈ ಇಬ್ಬರು ಎರಡು ಧ್ರುವಗಳು; ಸ್ವಭಾವ, ರೀತಿಗಳಲ್ಲಿ.

ಹಿರಿಯಣ್ಣನವರದು ಶಾಸ್ತ್ರಕ್ಕೆ, ವ್ಯಾಸಂಗಕ್ಕೇ ಮುಡಿಪಾದ ಜೀವ. ಹೆಂಡತಿಯಿರಲಿಲ್ಲ. ಇದ್ದವರು ಒಬ್ಬ ಮಗಳು; ಅಳಿಯ ಕೆಲಸದಲ್ಲಿದ್ದವರು ಬಿಟ್ಟು ಬಂದು ನಮ್ಮ ಜೊತೆಗೆ ಕಾಮರ್ಸ್ ಪದವಿಗಾಗಿ ವ್ಯಾಸಂಗ ಮಾಡುತ್ತಿದ್ದರು. ಆ ತಾಯಿ ಮನೆಯನ್ನು ನೋಡಿ ಕೊಳ್ಳುತ್ತಿದ್ದರು. ಇವರು ತಮ್ಮ ವ್ಯಾಸಂಗದಲ್ಲಿ ಇರುತ್ತಿದ್ದರು. ಹಿರಿಯಣ್ಣನವರ ಮಾತು, ದನಿ ಬಲು ಮೆಲು. ಮೆಲ್ಪು ಬಲ್ಪನಳಿಗುಂ ಎಂಬ ಪಂಪನ ಮಾತುಂಟು. ಆ ಬಲ್ಪಿನ ಮೆಲುಪು ಅವರದು!

ಕನ್ನಡ ಪಾಠದಲ್ಲಿ ಯಾವ ವಿಶೇಷವೂ ನಮಗೆ ಕಂಡುಬರಲಿಲ್ಲವಾದರೂ ವರದಾಚಾರ್ಯರ ಪಾಠ ಒಂದು ಅತಿಶಯ ವಿಲಾಸದ್ದು. ಅವರು ದೊಡ್ಡ ವಿದ್ವಾಂಸರು. ನಮಗೆ ಇಡುತ್ತಿದ್ದ ಚಂಪೂ ಕಾವ್ಯಗಳಲ್ಲಿ ಮುಖ್ಯವಾದವೆಲ್ಲವೂ ಅವರಿಗೆ ಮುಖಸ್ಥವಾಗಿದ್ದವು. ಯಾವ ಪದ್ಯವನ್ನೂ ಅವರು ಪುಸ್ತಕ ನೋಡಿ ಹೇಳಬೇಕಿರಲಿಲ್ಲ. ಹೇಳುತ್ತ ಹೇಳುತ್ತ ಮಾತೊ ಸಾಲೊ ಉದಾಹರಣೆಗಾಗಿ ಸಾದೃಶ್ಯ ವೈದೃಶ್ಯಕ್ಕಾಗಿ ಹೇಳಬೇಕೆಂದಿದ್ದು ತಪ್ಪಿದರೆ – ನೇರ ಕ್ಲಾಸಿಂದ ಮಹಡಿ ಹತ್ತಿ ಹೋಗಿ – ಭಂಡಾರದಿಂದ ಮೂಲಗ್ರಂಥವನ್ನು ತಂದು ಅದನ್ನು ಹೇಳುವ ಪರಿಪಾಠ. ಪಠ್ಯದಲ್ಲಿ ಸಾಲೊ ಮಾತೊ ಮರೆತರೆ ಯಾವ ವಿದ್ಯಾರ್ಥಿಯನ್ನಾದರೂ ತನ್ನ ಪುಸ್ತಕದಿಂದ ಓದಿರೆಂದು ಕೇಳುವುದು. ಆ ಮಾತನ್ನು Prompt ಮಾಡಿದ – ಎತ್ತಿಕೊಟ್ಟ – ಕೂಡಲೆ ಒಟ್ಟು ಪದ್ಯ ಆನುಪೂರ್ವಿ ಎಲ್ಲ ಅವರ ಬಾಯಿಂದ ಹೊರಡುತ್ತಿತ್ತು. ಅವರು ರಾಗವಾಗಿಯೇ ಎಲ್ಲವನ್ನೂ ಹೇಳತಕ್ಕವರು. ಹಿಂದಿನ – ಅಂದಿನ ಪ್ರಿನ್ಸಿಪಾಲರು, ಇತರ ಪ್ರೊಫೆಸರುಗಳು ರಾಗ ಸಮ್ಮಿಶ್ರವಾದ ಇದಕ್ಕೆ ಮೊದಲು ಆಕ್ಷೇಪಣೆ ಮಾಡಿದ್ದರಂತೆ. ಸರಿಯಾಗಿ ಕನ್ನಡ ಪದ್ಯಪಾಠ ಹೇಳುವುದು ಹೀಗೆಯೇ ಎಂದುಬಿಟ್ಟಿದ್ದರಂತೆ ಇವರು.

ಹುಡುಗರು ಯಾರಾದರೂ ಗಲಾಟೆ ಮಾಡಿದರೆ ಗ್ರಹಚಾರ ಬಿಡಿಸುತ್ತಿದ್ದರು. ರಾಜಶೇಖರ ವಿಲಾಸದಲ್ಲಿ ಅನೇಕ ವೇಳೆ ಓದುತ್ತಿದ್ದ ಶೃಂಗಾರ ಭಾಗಗಳ ಅರ್ಥವಿವರಣೆ, ವಿಷಯ ಮೀಮಾಂಸೆ ೧೮–೨೦ ವಯಸ್ಸಿನ ಹುಡುಗರನ್ನು – ಇನ್ನೂ ಬಲಿತವರನ್ನು – ಕೆರಳಿಸುತ್ತಿತ್ತು. ಅಂತಹ ಸಂದರ್ಭಗಳಲ್ಲಿ ಕಣ್ಣಿಗೆ ಹಾಕಿಕೊಂಡ ಕನ್ನಡಕವನ್ನು ತೆಗೆದು, ಅಥವಾ ಹಣೆಗೆ ಹಾಗೇ ಮೇಲಕ್ಕೆತ್ತಿ ನೂಕಿ, 'ಇಲ್ಲಿ ಬನ್ನಿ ಅಣ್ಣಯ್ಯ' ಎಂದು ಕರೆಯುವರು. ಮೆಲ್ಲಗೆ ಅವರಿಗೆ, ಆದರೆ ಕ್ಲಾಸಿಗೆಲ್ಲ ಕೇಳುವಂತೆ – ನಾಟಕದಲ್ಲಿ ಸ್ವಗತ, ಅಪವಾರಿತ ಪಿಸುಮಾತು ಆಗುವಂತೆ, – 'ನಿಮಗೆ ಮದುವೆ ಆಗಿದೆಯೊ?' ಎಂದು 'ಇಲ್ಲವಾದರೆ, ಸದ್ಯ ನಿಮಗೆ ಅರ್ಥವಾಗುವುದಿಲ್ಲ!' ಎನ್ನುವರು; 'ನಾನು ಹೇಳಿದಷ್ಟು ಸಾಕು' ಎನ್ನುವರು. ಹೆಂಡತಿ ಬಂದಿದ್ದಾಳೆಂದರೆ 'ನಿಮಗೆ ಅರ್ಥವಾಗಿರಬೇಕಲ್ಲ ಅಣ್ಣಯ್ಯ' ಎನ್ನುವರು. ಯಾವ ಚೇಷ್ಟೆ ಹೇಗೆ ಇರಲಿ, ಅದಕ್ಕೆ ತಕ್ಕಂತೆ ಪ್ರತಿವಾಕ್ ಅವರದು.

ದರ್ಪಣಕಾರ ಇಲ್ಲಿ ಹೇಳುವುದು ಸರಿಯಲ್ಲ; ಅಥವಾ, ಈ ಅಲಂಕಾರ ಹೀಗಾಗುವುದಿಲ್ಲ, ಕಾರಣ ಇದು, ಎನ್ನುತ್ತ ಯಾವ ಯಾವುದೊ ಗ್ರಂಥಗಳ ಸೂತ್ರ, ವಾಕ್ಯಗಳನ್ನು ಹೇಳುವರು. ಅವರು ಶಬ್ದಾನುಶಾಸನ ಸೂತ್ರ ಗೌರವ ನಿರ್ಣಯದಲ್ಲಿ ಬಹು ದೊಡ್ಡ ಸ್ಥಾನ ಪಡೆದ ವಿದ್ವಾಂಸರು. ಅನುಶಾಸನದ ಮಾತು ಬಂದಿತೆಂದರೆ ಹತ್ತಿರದವರಿಗೆ ನಿಸ್ತಾರವಿಲ್ಲ; ಯಾರಿಗೂ ಊಟವಿಲ್ಲ, ವಿಶ್ರಾಂತಿಯಿಲ್ಲ. ಅದನ್ನು ಮುಂದಿನ ಕಾಲ ಇನ್ನಷ್ಟು ವಿಶೇಷವಾಗಿ ಕಂಡಿತು.

ಒಂದು ಸಲ ಒಬ್ಬ ವಿದ್ಯಾರ್ಥಿ ಹೊರಸಾಲೆಯ ಆಚೆ ಕ್ಲಾಸ್ ಪಾಠದ ಯಾವುದೊ ಸಾಲನ್ನು ನೆನಸಿಕೊಂಡು, 'ಇತ್ತ ಮೂಡುವ ಸೂರ್ಯನ್ ಅತ್ತ ಮೂಡುವಂ' ಎನ್ನುತ್ತಿದ್ದುದು ಅಣಕಿಸುವಂತೆ ಪಂಡಿತರ ಕಿವಿಗೆ ಬಿದ್ದಿತು. 'ನೀವು ಯಾವ ಮುಖವಾಗಿ ನಿಂತಿದ್ದೀರಿ ಅಣ್ಣಯ್ಯ?' ಎಂದರು. 'ಪಶ್ಚಿಮದ ಕಡೆಗೂ ಬೇರೆಯ ಕಡೆಗೊ? ಅವನು ಮೂಡುವ

ಕಡೆಯೇ ಮೂಡುತ್ತಾನೆ' ಎಂದರು..... ಇನ್ನೊಂದು ಸಂದರ್ಭ ನಮ್ಮ ಜೀವವನ್ನು ಬಾಯಿಗೆ ತಂದಿತ್ತು. ತುಂಬಾ ವಯಸ್ಸಾದ ಒಬ್ಬರು ವಿದ್ಯಾರ್ಥಿ. ಅವರಿಗೆ ಮೀಸೆ ಬಲವಾಗಿತ್ತು. ಏಳೆಂಟು ವರ್ಷ ವ್ಯಾಸಂಗ ನಿಲ್ಲಿಸಿ ಏನೇನಾಗಿಯೊ ಇದ್ದು ಪುನಃ ಓದಲು ಬಂದಿದ್ದರು. ಶಕ್ಯವಾದಾಗೆಲ್ಲ ತಾಂಬೂಲ ಮೆಲ್ಲುತ್ತಿದ್ದರು. ಗ್ರಂಥದಲ್ಲಿ ವೇಶ್ಯೆಯರ ಮಾತು ಬಂದದ್ದರಿಂದ 'ವೇಶ್ಯೆಯರಿಗೇಕೆ ಮಕ್ಕಳಾಗುವುದಿಲ್ಲ ಪಂಡಿತರೆ?' ಎಂದು ಕೇಳಿದರು. 'ಅವರಿಗೂ ಆಗತಾರೆ ಅಣ್ಣಯ್ಯ' ಎಂದರು. 'ಆದರೆ ನೋಡಿ, ಇಲ್ಲಿ ಬನ್ನಿ' ಎಂದು ಕರೆದರು. ಪ್ಲಾಟ್‌ಫಾರ್ಮ್ ಇಂದ ಕಿಟಕಿಯ ಕಡೆ ಹೊರಗಿದ್ದ ರಸ್ತೆಯನ್ನು ತೋರಿಸಿದರು. 'ನೋಡಿದಿರಾ ಅದನ್ನು? ಹುಲ್ಲನ್ನಲ್ಲ, ಹೂವಿನ ಗಿಡವನ್ನಲ್ಲ, ರಸ್ತೆಯನ್ನಲ್ಲ, ಅದರ ಪಕ್ಕದ ಕಾಲ್ದಾರಿಯನ್ನು?' ಎಂದರು. 'ಅರ್ಥವಾಯಿತು, ಪಂಡಿತರೆ'. 'ಹೋಗಿ ಗಂಭೀರವಾಗಿ ನಿಮ್ಮ ಸ್ಥಳದಲ್ಲಿ ಕುಳಿತುಕೊಳ್ಳಿ, ದೊಡ್ಡ ಮೀಸೆ ಸಾರ್ಥಕವಾಗುತ್ತದೆ' ಎಂದರು. ಉಳಿದ ತಿಂಗಳುಗಳಲ್ಲಿ ಅವರು ಪುನಃ ಉಸಿರೆತ್ತಲಿಲ್ಲ.

ವರದಾಚಾರ್ಯರು ಸಾಮಾನ್ಯವಾಗಿ ಎಲ್ಲರಿಗೂ ಪ್ರಿಯರು. ಅವರಿಗೆ ನೆಗಡಿ ಎಂದಾದರೂ ಬಂದು ಸೀನಿದರೆಂದರೆ ಕಾಲೇಜಿನ ಎಂಟು ದಿಕ್ಕುಗಳೂ ಪ್ರತಿಧ್ವನಿಗೊಳ್ಳುತ್ತಿದ್ದವು; ತಲ್ಲಣಿಸುತ್ತಿದ್ದವು; ಮಾಳಿಗೆಗೆ ಆಪತ್ತು. ಕಾಲೇಜಿನ ಗೋಡೆಗಳಿಗೂ ತಳಹದಿಗೂ ಇನ್ನೆಲ್ಲಿ ಅಪಾಯವುಂಟಾದೀತೊ ಎಂಬಷ್ಟು ಗಾಬರಿ ಎಲ್ಲರಿಗೂ. ಮೊದಲ ಸಲ ಅವರು ಸೀನುವುದನ್ನು ಕೇಳಿದ ಇಂಗ್ಲಿಷ್ ಪ್ರೊಫೆಸರ್ ಒಬ್ಬರು ತಮ್ಮ ಕೊಠಡಿಯಿಂದ ಹೊರಗೆ ಬಂದು ಯಾವ ಉತ್ಪಾತ, ಯಾವ ಭೂಕಂಪ ಉಂಟಾಗುತ್ತಿದೆಯೊ ಎಂದು ನೋಡಿ, ಸತ್ಯ ಗ್ರಹಿಕೆಯಾದ ಕೂಡಲೆ 'Good Heavens! It is phenomenal!' (ದೇವರೆ, ಇದು ನಿಜವಾದ ಭೂತಚೇಷ್ಟೆ) ಎಂದರಂತೆ. ಎರಡು ಖಂಡಗಳ ಅನುಭವವುಳ್ಳ ಅವರಿಗೆ ಹಾಗೆನ್ನಿಸಿರಬೇಕಾದರೆ ನಿಜಕ್ಕೂ ನಮ್ಮ ಪಂಡಿತರ ಸೀನು ಫೆನಾಮಿನಲ್ಲೇ ಸರಿ!

ಕನ್ನಡ ವಿದ್ವಾಂಸರೆಲ್ಲ ದೊಡ್ಡ ವಿದ್ವಾಂಸರಾಗಿರುತ್ತಿರಲಿಲ್ಲ. ಅವರ ಬಗೆಯ ಪಾಠಗಳಲ್ಲಿ ವಿದ್ಯಾರ್ಥಿಗಳಿಗೂ ಆಸಕ್ತಿ ಹಿಡಿಯುತ್ತಿರಲಿಲ್ಲ. ಲೇವಡಿ, ಗಲಾಟೆ ಗಂಟೆಗಳೇ ಅವು. ಇದು ಸಾಮಾನ್ಯವಾಗಿ ಆ ಕಾಲದಲ್ಲಿನ ಕನ್ನಡ ಕ್ಲಾಸುಗಳ ಲಕ್ಷಣ. ತುಂಬಾ ಹೆಸರಾಗಿದ್ದ, ದೊಡ್ಡ ವಿದ್ವಾಂಸರು ಮಾತ್ರ ಹಾಗೂ ಹೀಗೂ ವಿದ್ಯಾರ್ಥಿಗಳ ಗಮನವನ್ನು ಸೆಳೆದಿಟ್ಟುಕೊಳ್ಳುವುದು ಶಕ್ಯವಾಗಿತ್ತು. ಅಂಥ ವಿದ್ವಾಂಸರಲ್ಲಿ ವರದಾಚಾರ್ಯರು ಒಬ್ಬರು.

❖

# ವಿಶ್ವಮಾನ್ಯ ಗುರು

(ಡಾ|| ಎಸ್. ರಾಧಾಕೃಷ್ಣನ್)

• ಎಚ್ಚೆಸ್ಕೆ

ನಲವತ್ತೈದು ವರ್ಷ ಹಿಂದೆ ಒಂದು ದಿನ. ಮೈಸೂರು ವಿಶ್ವವಿದ್ಯಾನಿಲಯದ ಗುರು-ಶಿಷ್ಯರ ಕೂಟ. ತುಂಬಿ ನಿಂತ ಕಂಬನಿ. ತಬಲ ಬಾರಿಸುವ ಎದೆ. ನೆಚ್ಚಿನ ಪ್ರಾಧ್ಯಾಪಕರೊಬ್ಬರ ಬೀಳ್ಕೊಡುಗೆ.

ರೈಲು ನಿಲ್ದಾಣಕ್ಕೆ ಹೊರಡಲು ಸಜ್ಜಾಗಿ ನಿಂತ ಸಾರೋಟು. (ಆಗ ಸಾರೋಟೇ ಸಾಮಾನ್ಯ) ಅಗಲಲಿದ್ದ ಪ್ರಾಧ್ಯಾಪಕರೂ ಇನ್ನೇನು ಗಾಡಿ ಹತ್ತಬೇಕು. ಆಗ ನಡೆಯಿತು ಒಂದು ಸೋಜಿಗ.

ಸೇರಿದ್ದ ಶಿಷ್ಯರು ಸಾರೋಟಿನ ಬಳಿಗೆ ಹೋದರು. ಕಟ್ಟಿದ್ದ ಕುದುರೆಗಳನ್ನು ಕಳಚಿದರು. ದಂಗು ಬಡೆದ ಪ್ರೊಫೆಸರರನ್ನು ಗಾಡಿಯಲ್ಲಿ ಕೂರಿಸಿದರು. ಅವರೇ ಸಾರೋಟನ್ನು ಸ್ಟೇಷನ್‌ವರೆಗೂ ಎಳೆದು ನಡೆದರು.

'ನ ಭೂತೋ ನ ಭವಿಷ್ಯತಿ!' ಎಂಬ ಈ ಗೌರವಕ್ಕೆ ಅಂದು ಪಾತ್ರರಾಗಿದ್ದ ಪ್ರಾಧ್ಯಾಪಕರೇ ಮುಂದೆ ನಮ್ಮ ರಾಷ್ಟ್ರಾಧ್ಯಕ್ಷರು.

ಹುಟ್ಟೂರು ತಿರುತ್ತಣಿ. ಚಿತ್ತೂರು ಜಿಲ್ಲೆಯ ಶೈವ ಕ್ಷೇತ್ರ, ತಿರುಪತಿ, ವೆಲ್ಲೂರು, ಮದ್ರಾಸು ಇವು ವಿದ್ಯಾಭ್ಯಾಸದ ಮೂರು ಮಜಲು; ಇಪ್ಪತ್ತೊಂದರ ವೇಳೆಗೆ ಸಂಪೂರ್ಣ. ಮದ್ರಾಸಿನಲ್ಲಿ ಅಧ್ಯಾಪಕ ವೃತ್ತಿ ಆರಂಭ. ಏಳು ವರ್ಷದಲ್ಲಿ ಪ್ರಾಧ್ಯಾಪಕ ಪಂಕ್ತಿ. ಮುಂದೆ ಹತ್ತು ವರ್ಷದಲ್ಲಿ ವಿಶ್ವವಿಖ್ಯಾತಿ. ಇದು ರಾಧಾಕೃಷ್ಣನ್ ಬೆಳೆದ ಬಗೆ.

**ಪಾಠದ ವೈಖರಿ**

ರಾಧಾಕೃಷ್ಣನ್ ಪಾಠ ಹೇಳುತ್ತಿದ್ದ ವೈಖರಿಯೂ ವೈಶಿಷ್ಟ್ಯಪೂರ್ಣ, ಹಳಬರ ನೆನಪಿನಲ್ಲಿ ಇಂದಿಗೂ ಹಚ್ಚ ಹಸುರು. ಪಾಠದ ಘಂಟೆಯ ಮೊದಲ ಇಪ್ಪತ್ತು ನಿಮಿಷ ಕಾಲ ಶಿಷ್ಯರ ನಾಲಗೆಗೆ ಸಂಪೂರ್ಣ ಸ್ವಾತಂತ್ರ್ಯ. ಸರಪಣಿ ಕಳಚಿದ ಸಾಕುನಾಯಿ. ತೋಚಿದ ವಿಷಯದ ಪ್ರಸ್ತಾಪ, ಚರ್ಚೆ. ಮುಂದೆ ಇಪ್ಪತ್ತು ನಿಮಿಷದಲ್ಲಿ ಪ್ರಾಧ್ಯಾಪಕರಿಂದ ಗಹನವಾದ ಉಪನ್ಯಾಸ: ಗಂಭೀರ ವಾತಾವರಣ. ಕೊನೆಯ ಇಪ್ಪತ್ತು ನಿಮಿಷದಲ್ಲಿ ನೋಟ್ಸಿನ ಉಕ್ತಲೇಖನ. (ಇದು ಈಗ ವರ್ಜ್ಯ.) ಹೀಗೆ ವಿದ್ಯಾರ್ಥಿಗಳಿಗೆ ಪ್ರಿಯವಾದ ಮೂರೂ ವಿಧಾನಗಳ ಸಾಮರಸ್ಯ-ಸಾಂಗತ್ಯ. ಪ್ರತಿಯೊಬ್ಬ ವಿದ್ಯಾರ್ಥಿಯೂ ಪ್ರಾಧ್ಯಾಪಕರಿಗೆ ಅಚ್ಚು ಮೆಚ್ಚು. ಅವನಿಗೆ ಅಧ್ಯಾಪಕರಲ್ಲಿ ಅಚ್ಚ ಭಕ್ತಿ, ಆತುಲ ನಿಷ್ಠೆ, ಅತಿಶಯ ಪ್ರೀತಿ.

ನಮ್ಮಲ್ಲಿ ಹಲವರ ದೃಷ್ಟಿಯಲ್ಲಿ ಹಿತ್ತಲ ಗಿಡದಲ್ಲಿ ಹಿರಿತನವೇನೂ ಇಲ್ಲ. ಅಪೂರ್ವ ಪಶ್ಚಿಮಕ್ಕೆ ಹೋಗಿ ಬಂದರೆ ಮಾತ್ರ ಅಗ್ರ ಮರ್ಯಾದೆ. ಥೇಮ್ಸಿನಲ್ಲಿ ಮಿಂದೋ, ಅಮೇರಿಕದ ಗಗನ ಚುಂಬಿಸಿಯೋ ಬಂದವರೇ ಹಿರಿಯರು. ದೊಡ್ಡತನದ ದೆವ್ವದಿಂದ ಇಂಥವರಿಗಿಲ್ಲ ಬಿಡುಗಡೆ. 'London – returned with thanks' ಆದರೇನೇ ಚೆಂದ (ನಮ್ಮ ಕೈಲಾಸಂ ಹೇಳಿದ ಹಾಗೆ). 'ಲಂಡನಿಗೆ ಪೋದ ದಾರಿಯೊಳೆ ಮರಳಿ ಬಂದ'ವನೇ ಮಹಾ ಪುರುಷ.

**ಕಲಿಸುವುದಕ್ಕೆ**

ರಾಧಾಕೃಷ್ಣನ್ನರ ಹಿರಿಮೆ ಪಶ್ಚಿಮ ಭೂಯಿಷ್ಠವಲ್ಲ. ಅಂಥದನ್ನು ಅವರು ಬಯಸಿದವರೂ ಅಲ್ಲ. ಅವರಿಗೆ ಅದ್ಭುತ ಆತ್ಮವಿಶ್ವಾಸ. ಒಮ್ಮೆ ಒಬ್ಬ ವಿದ್ಯಾರ್ಥಿಗೆ ಇವರು ಈ ಬಗ್ಗೆ ಆಡಿದ ಮಾತೇ ದೃಷ್ಟಾಂತ.

ಐ.ಸಿ.ಎಸ್ಸನ್ನೇ ಗೆದ್ದು ಬಂದಿದ್ದ ಆ ವಿದ್ಯಾರ್ಥಿ ಇವರಿಗೆ ಹೇಳಿದರಂತೆ: 'ನೀವೂ ಇಂಗ್ಲೆಂಡಿಗೆ ಹೋಗಿ ಒಂದು ಡಿಗ್ರಿ ತೆಗೆದುಕೊಂಡು ಬಂದರೆ ಬಹಳ ಚೆನ್ನು, ಎಂಬುದಾಗಿ ಆ ವಿದ್ಯಾರ್ಥಿಯ ಸಲಹೆ.

ಥಟ್ಟನೆ ರಾಧಾಕೃಷ್ಣನ್ನರಿಂದ ಎರಗಿ ಬಂತು ಉತ್ತರ: 'ನಾನು ಅಲ್ಲಿಗೆ ಹೋಗುವುದಾದರೆ ಅವರಿಂದ ಕಲಿಯುವುದಕ್ಕಲ್ಲ. ಅವರಿಗೆ ಕಲಿಸುವುದಕ್ಕೆ.'

ಅಲ್ಲಿನ ಜನಕ್ಕೆ ಈ ಸದವಕಾಶವೂ ಒದಗಿ ಬಂತು. ಈ ಸಂಭಾಷಣೆ ನಡೆದ ಆರೇ ವರ್ಷಕ್ಕೆ ಅವರು ಇಂಗ್ಲೆಂಡಿಗೆ ಹೊದರು. ಆಕ್ಸ್‌ಫರ್ಡ್ ವಿದ್ಯಾಪೀಠದಲ್ಲಿ ಅಪ್ಟನ್ ನಾಮಾಂಕಿತ ಉಪನ್ಯಾಸಗಳನ್ನು ನೀಡಿದರು.

ರಾಧಾಕೃಷ್ಣನ್ನರ ಜೀವನ ಆಳ, ವಿಶಾಲ, ವೈವಿಧ್ಯಮಯ. ಮೂರು ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕ. ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಕುಲಪತಿ. ಭಾರತೀಯ ದರ್ಶನಶಾಸ್ತ್ರ ಸಮ್ಮೇಳನಾಧ್ಯಕ್ಷ. ಆಕ್ಸ್‌ಫರ್ಡಿನಲ್ಲಿ ಸ್ಪಾಲ್ಡಿಂಗ್ ಪ್ರಾಧ್ಯಾಪಕ. ದೆಹಲಿ ವಿಶ್ವವಿದ್ಯಾಲಯದ ಕುಲಪತಿ. ವಿಶ್ವಸಂಸ್ಥೆಯ ಆರ್ಥಿಕ ಸಾಮಾಜಿಕ ಸಮಿತಿಯಲ್ಲಿ ಭಾರತ ನಿಯೋಗದ ನಾಯಕ. ಸೋವಿಯತ್ ರಾಜ್ಯದಲ್ಲಿ ರಾಯಭಾರಿ. ಭಾರತದ ಉಪಾಧ್ಯಕ್ಷ, ರಾಷ್ಟ್ರಪತಿ.

**ಅನುಭವ–ಅನುಭಾವ**

ಇದು ಕೇವಲ ಒಣ ವಿವರ. ಈ ಎಲ್ಲ ಒಡವೆ ತೊಡವುಗಳನ್ನೂ ಮೀರಿ ಬೆಳೆದಿದ್ದಾರೆ – ಈ ಮಹಾನ್ ವ್ಯಕ್ತಿ. ಭಾರತೀಯ ವೇದಾಂತದ ಅಧ್ಯಯನ, ವಿದ್ವತ್ತು, ಅನುಭವ, ಅನುಭಾವ. ಇವರ ತಲೆಯೇ ಹಲವು ವಿಷಯಗಳ ಪರಿವಿಡಿ. ಚಲಿಸುವ ವಿಶ್ವಕೋಶ. ಪ್ರಚಂಡ ಪ್ರತಿಭೆ. ಅದ್ಭುತ ಜ್ಞಾಪಕ ಶಕ್ತಿ.

ಅಣ್ಣಾಮಲೈ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಒಮ್ಮೆ ಇವರ ಭಾಷಣವಿತ್ತು. ಅದಕ್ಕೆ ಮುನ್ನಾ ದಿನ ಮದ್ರಾಸಿನಲ್ಲಿ ಮುತ್ತಿಕೊಂಡರು–ಪತ್ರಿಕಾ ವರದಿಗಾರರು. 'ನಿಮ್ಮ ಭಾಷಣದ ಪ್ರತಿಯನ್ನು ಮುಂಚಿತವಾಗಿ ಕೊಟ್ಟಿದ್ದರೆ ಚೆನ್ನಿತ್ತು, ಭಾಷಣದ ದಿನವೇ ಪತ್ರಿಕೆಯಲ್ಲಿ ಮುದ್ರಿಸುವುದು

ಸಾಧ್ಯವಾಗುತ್ತಿತ್ತು' ಎಂದು ವರದಿಗಾರರ ಕಳಕಳಿ. 'ಹಾಗೋ?' ಎಂದರು ರಾಧಾಕೃಷ್ಣನ್, 'ಹಾಗಾದರೆ ಬರೆದುಕೊಳ್ಳಿ'.

ಅವರು ಸರಸರನೆ ಹೇಳಿದ್ದನ್ನು ವರದಿಗಾರರು ಗೀಚಿಕೊಂಡರು. ತಂತಮ್ಮ ಪತ್ರಿಕೆಗಳಿಗೆ ತಂತೀ ಬಿಗಿದರು.

ಮರುದಿನ ಘಟಿಕೋತ್ಸವದ ಭಾಷಣ. ಬೇರೆ ಏನಾದರೂ ಒದರಿ ಬಿಡುವರೋ! ಎಂದು ವರದಿಗಾರರ ಆತಂಕ. ಎದೆಯಲ್ಲಿ ಡವಡವ.

**ದೇವರ ಸಮಕ್ಕೆ**

ಭಾಷಣ ಆರಂಭ. ಝುರಿಯಾಗಿ ಮೊದಲಿಟ್ಟು ಹೊನಲಾಗಿ ಹರಿದ ಗಂಗಾಪ್ರವಾಹ. ಹಿಂದಿನ ದಿನ ಬರೆಸಿದ ಭಾಷಣವೇ-ತದ್ವತ್ತು. ವರದಿಗಾರರಿಗೆ ಸಂತೋಷ, ಆಶ್ಚರ್ಯ.

ರಾಧಾಕೃಷ್ಣನ್ ಹಾಸ್ಯಪ್ರಿಯ. ಅನ್ಯರನ್ನೇ ಹಾಸ್ಯಕ್ಕೆ ಒತ್ತೆಯಿಟ್ಟರೂ ಅವರಿಗೆ ಲತ್ತೆ ಕೊಡದಂಥ ನವುರು.

'ಸತ್ಯಂ ಬ್ರೂಯಾತ್, ಪ್ರಿಯಂ ಬ್ರೂಯಾತ್' ಜಾತಿಗೆ ಸೇರಿದ ಸರ್ವೇಪಲ್ಲಿಯವರು 'ವಜ್ರಾದಪಿ ಕಠೋರ', ಸ್ಥಾಣುವಿನಂತೆ ಸ್ಥಿರ. ಭಾರತಕ್ಕೆ ಸ್ವಾತಂತ್ರ್ಯ ಇಲ್ಲದಾಗಲೂ ಇವರ ಮಾತು ನಿಷ್ಠುರ. ಬ್ರಿಟಿಷರೂ ಬಾಯ್ಮುಚ್ಚಿ ಕೇಳುವಂತೆ ಮಾತಾಡುವ ಧೈರ್ಯ.

ಹತ್ತು ವರ್ಷದ ಉಪಾಧ್ಯಕ್ಷಗಿರಿಯಲ್ಲಿ ದಿಲ್ಲಿಯ ರಾಜ್ಯ ಸಭೆಯ ಅಧ್ಯಕ್ಷರಾಗಿ ಇವರು ಹಾಕಿದ ಸಂಪ್ರದಾಯ ಸರ್ವಕಾಲಕ್ಕೂ ಅನುಸರಣೀಯ.

ಈ ವೇದಾಂತಿಯ ದರ್ಶನ ನಿತ್ಯ ನೂತನ. ಪ್ರಾಚೀನ ಅರ್ವಾಚೀನಗಳ ಸಂಕಲನ.

ಇಂದು, ಗಂಡಾಂತರದ ಕಾಲದಲ್ಲಿ ಭಾರತಾಧ್ಯಕ್ಷ. ನಾಡಿನ ತಲೆಮಣಿಯಾಗಿ ಉಳಿದಿರುವ ಹಳೆ ತಲೆ.

'ದೇವರ ಸಮಕ್ಕೆ ನಿಲ್ಲಬೇಕು. ಪರಿಸ್ಥಿತಿಯೊಡನೆ ಹೋರಾಡಬೇಕು. ಅನ್ಯಾಯವನ್ನು ಗೆಲ್ಲಬೇಕು. ಮಾನವ ಜೀವನವನ್ನು ಮೇಲೆತ್ತಬೇಕು.' ಇದು ಇವರು ಕಂಡ ಕಾಣ್ಕೆ.

ಕಳೆದ ವಾರ ಈ ಭಾರತ ರತ್ನರಿಗೆ ಎಪ್ಪತ್ತೇಳು ತುಂಬಿತು. ಈ ವಾರ ಇವರು ನಮ್ಮ ರಾಜ್ಯದ ಅತಿಥಿ. ಇವರಿಗೆ ನಮ್ಮೆಲ್ಲರ ಹೃತ್ಪೂರ್ವಕ ಸ್ವಾಗತ.

❖

# ಬಹುಮುಖಿ ಗುರು

## (ಡಾ॥ ವಿ. ಸೀತಾರಾಮಯ್ಯ)

● ಸೂ. ಸುಬ್ರಹ್ಮಣ್ಯಂ

ವಿ.ಸೀ. ಅವರ ಶಿಷ್ಯರಲ್ಲೊಬ್ಬನಾಗುವ ಸೌಭಾಗ್ಯ ನನಗೆ ದೊರಕಿದ್ದು ನಾನು ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ (೧೯೫೩-೫೫). ಆಗ ನಮಗೆ ವಿ.ಸೀ.ಯನ್ನು ಕಂಡರೆ ವಿಶೇಷ ಗೌರವ ಹೆಮ್ಮೆಗಳಿದ್ದರೂ ಅವರನ್ನು ಮಾತನಾಡಿಸಲು ಏನೋ ಹಿಂಜರಿಕೆ. ಏನೋ ಹೆದರಿಕೆ. ಪ್ರಾಯಶಃ ಅವರು ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದುದರಿಂದ ಈ ಭಾವನೆ ಬೆಳೆಯಲು ಕಾರಣವಾಗಿರಬಹುದು. ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಕಾರ್ಯಕಲಾಪಗಳೆಲ್ಲವನ್ನೂ ಆಗ ಜಿ. ಪಿ. ರಾಜರತ್ನಂ ಅವರು ನಡೆಯಿಸಿಕೊಡುತ್ತಿದ್ದುರಿಂದ ಅವರನ್ನು ನಾವು ಹೆಚ್ಚಾಗಿ ಸಂಪರ್ಕಿಸಬಹುದಾಗಿತ್ತು. ವಿ.ಸೀ. ಅವರಾದರೋ ನಮಗೆ ತರಗತಿಯ ಹೊರಗೆ ಮಿತಭಾಷಿಗಳಂತೆ ಕಂಡಿರಲು ಸಾಧ್ಯ; ಆದ್ದರಿಂದಲೇ ಅವರು ಸುಲಭ ಸಲುಗೆಗೆ ದೂರವಾಗಿದ್ದಂತೆ ನಮಗೆ ಭಾಸವಾಗಿರಬೇಕು. ಹಾಗಿದ್ದರೂ ಸಹ, ಆ ವರ್ಷ (೧೯೫೩) ಕುಮಟಾದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅವರು ಅಧ್ಯಕ್ಷರಾದಾಗ ನಮಗೇ ಏನೋ ಗೌರವ ದೊರಕಿದ ಭಾವನೆಯಿಂದ ನಾವು ಕೆಲವರು ಬೀಗಿದ್ದರೆ ಅತಿಶಯವೇನಲ್ಲ.

ಆದರೂ ವಿ.ಸೀ. ನಮಗೆ ಹತ್ತಿರವಾದರು. ಕಾರಣ ಅವರು ತಾವೇ ಬರೆದ 'ದ್ರಾಕ್ಷಿ-ದಾಳಿಂಬೆ'ಯನ್ನು ನಮಗೆ ಬೋಧಿಸಬೇಕಾಯಿತು. ಮೊದಲ ದಿನವೇ 'ನಾನು ಬರೆದ ಕವನಗಳನ್ನು ನಾನೇ ಹೇಗರಿ ಪಾಠ ಹೇಳೋದು! ಬೇರೆಯವರು ಅದನ್ನ ಹೇಳಿದರೆ ಚೆನ್ನ. ಯಾರ್ರೀ ಇದನ್ನ ಪಠ್ಯಪುಸ್ತಕವಾಗಿ ಇಟ್ಟವರು?' ಎಂದು ನಗೆಯಾಡಿದರು. ಆದರೆ, ದಿನಗಳುರುಳಿದಂತೆ ನಮ್ಮ ತರಗತಿಗೆ ಬೇರೆ ಬೇರೆ ತರಗತಿಗಳಿಂದಲೂ ವಿದ್ಯಾರ್ಥಿಗಳು ತುಂಬಿ ತುಳುಕಾಡುತ್ತಿದ್ದರು. ಕೊನೆ ಕೊನೆಗೆ ಕಿಟಕಿಯ ಕಟ್ಟೆಗಳ ಮೇಲೆಲ್ಲ ವಿದ್ಯಾರ್ಥಿಗಳು ಅಡಕಿಕೊಂಡರು. ವಿ.ಸೀ. ಅದಕ್ಕೇನೂ ಆಕ್ಷೇಪವಾಡುತ್ತಿರಲಿಲ್ಲ. ತರಗತಿಯೂ ಅಷ್ಟೇ: ಗುಂಡುಸೂಜಿ ಬಿದ್ದರೂ ಕೇಳುವಷ್ಟು ನೀರವತೆಯಿರುತ್ತಿತ್ತು. ಕನ್ನಡವನ್ನು ಇಂಗ್ಲಿಷ್‌ನಲ್ಲಿ ಬೋಧಿಸುವ ಅವರ ಭಾಷಾ ಮೋಡಿಗೆ, ವಾಕ್ಪ್ರವಾಹಕ್ಕೆ ಮರುಳಾಗದವರಾರು?

ವಿ.ಸೀ. ಅವರನ್ನು ವಾದಕ್ಕೆಳೆಯುವುದೆಂದರೆ ಒಂದು ಜಲಪಾತದಡಿಯಲ್ಲಿ ಸ್ನಾನಕ್ಕೆ ಇಳಿದಂತೆ. ಅವರು ತಮ್ಮ ಅಭಿಪ್ರಾಯಗಳ ಓತಪ್ರೋತ ಸಲಿಲಧಾರೆಯೆರೆಯುತ್ತಿದ್ದರು. ಅಲ್ಲಿ ಲೀಲಾಜಾಲವಾದ ವಾಗ್ಮಿತೆ, ಆಳವಾದ ಅಧ್ಯಯನಗಳಿಂದಾದ ಪಾಂಡಿತ್ಯದ ಪವಿತ್ರ

ಪ್ರೋಕ್ಷಣೆಯಾಗುತ್ತಿತ್ತು; ಸೊಬಗಿನ ಸೇಚನೆಯಾಗುತ್ತಿತ್ತು; ವಿವಿಧ ಲೇಖಕರ, ಪರಿಣತರ ಹೇಳಿಕೆಗಳ ಉದ್ಧರಣವಾಗುತ್ತಿತ್ತು. ಮಾತನಾಡುವ ಶೈಲಿಗೆ ಅವರು ನೀಡುತ್ತಿದ್ದ ಧ್ವನಿ ವೈವಿಧ್ಯಗಳು, ಗತ್ತಿನ ಏರಿಳಿತಗಳು ಕೇಳುಗರನ್ನು ಮೂಕವಿಸ್ಮಿತರನ್ನಾಗಿಸುತ್ತಿತ್ತು. 'ವಿದ್ಯಾರ್ಥಿಯ ದೃಷ್ಟಿಯ ದಿಗಂತಗಳನ್ನು ವಿಸ್ತರಿಸುತ್ತಿದ್ದರು ವಿ.ಸೀ.'

ವಿ.ಸೀ. ನನಗೆ ಬೇರೆ ರೀತಿಯಲ್ಲಿಯೂ ಹತ್ತಿರದವರಾಗಿದ್ದರು. ಏಕೆಂದರೆ, ಅವರ ಮನೆ ಚಾಮರಾಜಪೇಟೆಯ ಎರಡನೇ ಮುಖ್ಯರಸ್ತೆಯಲ್ಲಿ ಮೊದಲನೆಯದಾಗಿತ್ತು. ನಮ್ಮದು ಅದೇ ಬೀದಿಯಲ್ಲಿ ಇಪ್ಪತ್ತನೆಯ ಮನೆ. ತಮ್ಮ ಮನೆಯ ಕೋಣೆಯಲ್ಲಿ ಸುತ್ತಲೂ ಪುಸ್ತಕಗಳ ಕಪಾಟಿನಿಂದ ಆವೃತರಾಗಿ, ಸುರುಳಿ ಸುತ್ತಿದ ಹಾಸಿಗೆಗೆ ಬೆನ್ನೊರಗಿಸಿ, ಚಾಪೆಯ ಮೇಲೆ ಕುಳಿತೋ ಅರೆ ಮಲಗಿಯೋ, ಓದುತ್ತಲೋ ರೇಡಿಯೋ ಕೇಳುತ್ತಲೋ ಇರುವ ವಿ.ಸೀ. ಅವರ ಚಿತ್ರ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ನಾನು ರಿಸರ್ವ್ ಬ್ಯಾಂಕ್‌ನಲ್ಲಿದ್ದುದರಿಂದ ಅವರು ತುಂಬ ಆಸಕ್ತಿಯಿಂದ ಅಧ್ಯಯನ ಮಾಡುತ್ತಿದ್ದ RBI Bulletin, Report on Currency and Finance ಮತ್ತು Annual Reportಗಳನ್ನು ಆಗಾಗ ಸರಬರಾಜು ಮಾಡುತ್ತಿದ್ದೆ. ಅವರು ಹಣಕೊಟ್ಟು ಚಂದಾದಾರರಾಗ ಬಯಸಿದ್ದರೂ ಅದನ್ನು ನಾನು ತಪ್ಪಿಸಿ, ನನ್ನ ಅಳಿಲಸೇವೆಗೆ ಅವಕಾಶ ಮಾಡಿಕೊಂಡಿದ್ದೆ. ಆಗಾಗ ಸಂಜೆ ವೇಳೆ ಅವರನ್ನು ಕಾಣುತ್ತಲಿದ್ದೆ. ಕಂಡಾಗಲೆಲ್ಲ ಕಾಫಿಯ ಸಮಾರಾಧನೆ ತಪ್ಪದೆ ಸಾಗುತ್ತಿತ್ತು.

ಒಮ್ಮೆ ನಾನು 'Reserve Bank of India: Working and Functions' ಎಂಬ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸುವ ಆಶಯವನ್ನು ಅವರ ಮುಂದಿಟ್ಟೆ. ಆಗ ಅವರೆಂದರು: "ಅದನ್ಯಾಕಪ್ಪ ನೀವು ಮಾಡ್ತೀರಿ? ಬೇರೆ ಯಾರೋ ಅದನ್ನು ಮಾಡುತ್ತಿದ್ದಾರೆ." ಆ ಪುಸ್ತಕದ ಒಂದೆರಡು ಅಧ್ಯಾಯಗಳ ಅನುವಾದ ಮಾಡಿದ್ದ ನಾನು ಅದನ್ನು ಅಲ್ಲಿಗೇ ನಿಲ್ಲಿಸಿದೆ. ಆಮೇಲೆ ತಿಳಿಯಿತು: ವಿ.ಸೀ. ಅವರು ಇಂಥ ಪುಸ್ತಕಗಳು ಭಾರತದ ಇನ್ನಿತರ ಭಾಷೆಗಳಲ್ಲೂ ಬರಬೇಕು ಎಂದು ರಿಸರ್ವ್ ಬ್ಯಾಂಕಿನ ಆಗಿನ ಗೌರ್ನರ್ ಹಾಗೂ ಅವರ ಸ್ನೇಹಿತರಾಗಿದ್ದ ಶ್ರೀ ಎಚ್.ವಿ.ಆರ್. ಅಯ್ಯಂಗಾರ್ ಅವರಿಗೆ ಬರೆದಿದ್ದರಂತೆ. ಅದಕ್ಕೆ ಅವರು 'ನೀವೇ ಕನ್ನಡದಲ್ಲಿ ಆ ಕೆಲಸ ಮೊದಲು ಮಾಡಿ' ಎಂದು ಉತ್ತರಿಸಿದ್ದರಂತೆ. ಅದರ ಫಲವಾಗಿ ಭಾರತೀಯ ಭಾಷೆಗಳಲ್ಲಿ ಪ್ರಥಮವಾಗಿ ಕನ್ನಡದಲ್ಲಿ 'ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ: ಕ್ರಿಯಾಸ್ವರೂಪ ಮತ್ತು ಕಾರ್ಯಕಲಾಪಗಳು' ಪ್ರಕಟಗೊಂಡಿತು.

ನಿವೃತ್ತಿಯ ನಂತರ ವಿ.ಸೀ. ಬೆಂಗಳೂರು ಆಕಾಶವಾಣಿಯಲ್ಲಿ ಪ್ರೊಡ್ಯೂಸರ್ (Spoken word) ಆಗಿ ನೇಮಕಗೊಂಡರು. ಸ್ವಲ್ಪ ಕಾಲ ಕೆಲಸ ಮಾಡಿದ ನಂತರ ಅವರಿಗೆ ಕೊಡುತ್ತಿದ್ದ ಕೇಂದ್ರ ಸರ್ಕಾರದ ವೇತನದಲ್ಲಿ ಅವರ ನಿವೃತ್ತಿ ವೇತನವನ್ನು ಹಿಡಿದುಕೊಳ್ಳುವುದಾಗಿ ಸೂಚಿಸಿದರಂತೆ. ವಿ.ಸೀ. ಇದನ್ನೊಪ್ಪದೆ ಆಕಾಶವಾಣಿ ಕೆಲಸಕ್ಕೆ ರಾಜೀನಾಮೆ ನೀಡಿದರು. ಅವರು ಆಕಾಶವಾಣಿಯಲ್ಲಿದ್ದ ಸಮಯದಲ್ಲಿ ನನ್ನ ಕೆಲವು ಕವನಗಳನ್ನು ಪ್ರಸಾರ ಮಾಡುವ ಸಲುವಾಗಿ ಅವರಿಗೆ ಕಳುಹಿಸಿದ್ದೆ. ಅವರು ಅದನ್ನು ಒಪ್ಪಿದಂತೆ ಕಾಣಲಿಲ್ಲ. ಆಗ ಅವರೊಡನೆ

ವಿಚಾರ ವಿನಿಮಯ ಮಾಡುತ್ತಾ ನನ್ನ ಅಭಿಪ್ರಾಯವನ್ನು ಪದೇ ಪದೇ ಸೂಚಿಸಿದ್ದಂತೆ ನೆನಪು. ಆಗ ಅವರೊಮ್ಮೆ ಅಂದರು: 'You are cantankerous.' ಈಗ ಅನ್ನಿಸುತ್ತಿದೆ ಪ್ರಾಯಶಃ ಇರಬಹುದು!

ವಿ.ಸೀ. ಅವರ ಭಾಷಣವೆನ್ನಿ, ಉಪನ್ಯಾಸವೆನ್ನಿ, ಮಾತುಗಾರಿಕೆ ಎನ್ನಿ – ಎಂದೂ ರಸವತ್ತಾಗಿರುತ್ತಿತ್ತು. ಒಮ್ಮೆ ಇಂಗ್ಲಿಷ್ ಸಾಹಿತ್ಯದ ಪ್ರಸಿದ್ಧ ವಿಮರ್ಶಕರಾದ ಐ.ಎ. ರಿಚರ್ಡ್ಸ್ ಅವರು ಬೆಂಗಳೂರು Indian Institute of World Cultureನಲ್ಲಿ ಉಪನ್ಯಾಸ ನೀಡುವರಿದ್ದರು. ಆ ಸಮಾರಂಭಕ್ಕೆ ವಿ.ಸೀ. ಅಧ್ಯಕ್ಷರು. ರಿಚರ್ಡ್ಸ್ ಭಾಷಣದ ನಂತರ ವಿ.ಸೀ. ಅಧ್ಯಕ್ಷ ಭಾಷಣ ಮಾಡಿ ಅಂದಿನ ವಿಷಯವನ್ನು ಕುರಿತು ಆಮೂಲಾಗ್ರವಾಗಿ ಜಾಲಾಡಿ ಸಭಿಕರನ್ನು ಸಾರಸ್ವತ ಸಾಗರದಲ್ಲಿ ತೇಲಾಡಿಸಿಬಿಟ್ಟರು. ಕೊನೆಯಲ್ಲಿ ರಿಚರ್ಡ್ಸ್ "ಇಂಥ ಮೇಧಾವಿ ಪಂಡಿತರ ಮುಂದೆ ನನ್ನ ಮಾತು ಪೇಲವವಾಯಿತು, ಸೂರ್ಯನ ಮುಂದಿನ ಸೊಡರಿನಂತೆ" ಎಂಬರ್ಥದ ಮಾತುಗಳನ್ನಾಡಿ ವಿ.ಸೀ. ಅವರ ವಿದ್ವತ್ತಿಗೆ, ವಿಷಯದ ಆಳ ವಿಸ್ತಾರಗಳ ಅಧ್ಯಯನಕ್ಕೆ ವಾಕ್ಚಾತುರ್ಯಕ್ಕೆ ಮೆಚ್ಚುಗೆ ಸೂಚಿಸಿದರು.

ಬೆಂಗಳೂರಿನಲ್ಲಿ ಹಿಂದೆ ಅಮೆರಿಕ ಸಂಯುಕ್ತ ಸಂಸ್ಥಾನಗಳ ವಾರ್ತಾ ಕೇಂದ್ರ, ಅಮೆರಿಕನ್ ಸಾಂಸ್ಕೃತಿಕ ಕೇಂದ್ರವಿದ್ದಿತು. ಅದರ ನಿರ್ದೇಶಕರಾಗಿದ್ದ ಗ್ಲಿನ್ ಎಲ್. ವುಡ್ ಎಂಬುವವರು ಆಗಾಗ ಕೆಲವು ಪ್ರಮುಖರನ್ನು ತಮ್ಮ ಮನೆಗೆ ಕರೆದು ಔತಣವೇರ್ಪಡಿಸುವ ಪರಿಪಾಠ ವಿಟ್ಟುಕೊಂಡಿದ್ದರು. ಬಂದ ಅತಿಥಿಗಳಿಗೆ ಅದ್ಭುತವಾದ ಸ್ವಾಗತವಾದ ನಂತರ ಪಾನೀಯಗಳು, ರಸಕವಳ ಎಲ್ಲವೂ 'ಸ್ವಯಂ ಸೇವಾ' ಪದ್ಧತಿಯಂತೆ. ನಡು ನಡುವೆ ಆಹ್ವಾನಿತರೊಡನೆ ವಿಚಾರ ವಿನಿಮಯಗಳು ಸಾಗುತ್ತಿದ್ದುವು. ಅಂಥ ಔತಣ ಕೂಟಕ್ಕೆ ವಿ.ಸೀ. ಒಮ್ಮೆ ಆಹ್ವಾನಿತ ರಾಗಿದ್ದರು. ಅಂದು ಬಂದಿದ್ದವರಲ್ಲಿ ನೃತ್ಯ ಪರಿಣತರಾದ ಶ್ರೀ ಕೃಷ್ಣರಾವ್ ದಂಪತಿಗಳೂ ಇದ್ದರು. ಆದರೆ ವಿ.ಸೀ.ಗೆ ಕಂಪನಿ ಕೊಟ್ಟವನು ನಾನೊಬ್ಬನೇ. ಏಕೆಂದರೆ, ನಾವು ಇಬ್ಬರೂ ಕಟ್ಟಾ ಶಾಖಾಹಾರಿಗಳು. ಹಾಗೆ ಬಂದು ಹೋದ ಆಹ್ವಾನಿತರಿಗೆ ಅನಂತರ ಉತ್ತಮ ಪುಸ್ತಕಗಳನ್ನು ನೆನಪಿನ ಕಾಣಿಕೆಯಾಗಿ ಕಳುಹಿಸಿ ಕೊಡುತ್ತಿದ್ದುದೂ ವುಡ್ ಅವರ ವಾಡಿಕೆ. ವಿ.ಸೀ. ಅವರಿಗೂ ಅಮೆರಿಕದ ಲೇಖಕರ ನಾಲ್ಕಾರು ಪುಸ್ತಕಗಳನ್ನು ಕಳುಹಿಸಿಕೊಟ್ಟರೆಂದು ನನ್ನ ನೆನಪು. ಅದರಲ್ಲಿ History of Art ಎಂಬ ಸಂಗ್ರಹಯೋಗ್ಯ ಹೊತ್ತಿಗೆಯೂ ಸೇರಿತ್ತು. ಮುಂದೆ Moby Dick ಅನುವಾದಕ್ಕೆ ಅಮೆರಿಕನ್ನರ ಈ ೩–೪ ಪುಸ್ತಕಗಳು ನಾಂದಿಯಾಯಿತೆನ್ನಬಹುದೇನೊ.

ಗ್ಲಿನ್ ವುಡ್‌ರಿಗೆ ಬೆಂಗಳೂರಿನಿಂದ ವರ್ಗವಾದಾಗ ಅವರಿಗೊಂದು ಬೀಳ್ಕೊಡುಗೆಯ ಉಪಾಹಾರ ಕೂಟವನ್ನು ವಿ.ಸೀ. ಏರ್ಪಡಿಸುವ ಸೌಜನ್ಯ ತೋರಿದರು. ಅಂದು ಅವರ ಕಿರುಕೋಣೆಯಲ್ಲಿ ಕುಳಿತು ವಿ.ಸೀ. ನೀಡಿದ ಸತ್ಕಾರವನ್ನೂ ಸಮಯೋಚಿತ ಸದ್ಭಾವನೆಗಳ ಸಿಂಚನವನ್ನೂ ಸವಿಯುವ ಪುಣ್ಯವನ್ನು ನಾವು ನಾಲ್ಕಾರು ಮಂದಿ ಮಾತ್ರ ಪಡೆದಿದ್ದೆವು. ಪ್ರೊ॥ ವಿ.ಎಂ. ಇನಾಂದರ್ ಆಗ ಉಪಸ್ಥಿತರಿದ್ದರು. ಆದರೆ ಅವರು ಮಿತಭಾಷಿಯಾಗಿ ಬಹುಮಟ್ಟಿಗೆ ಮೌನವನ್ನೇ ಆಶ್ರಯಿಸಿದ್ದರು. ಸತ್ಕಾರಕ್ಕೆ ಪ್ರಕಾಶ್ ಕೆಫೆಯವರಿಂದ ವಿಶೇಷ

ಏರ್ಪಾಡು ನಡೆದಿತ್ತು. ವಿದೇಶಿ ಅತಿಥಿ ಆಗಮಿಸುವರೆಂದು ಮೂರು ನಾಲ್ಕು ಕುರ್ಚಿಗಳೂ ರೂಮಿಗೆ ಬಂದಿದ್ದುವು. ಆದರೆ ಯಾರೂ ಕುರ್ಚಿಯ ಮೇಲೆ ಕುಳಿತಂತೆ ನನಗೆ ನೆನಪಿಲ್ಲ, ಗ್ಲಿನ್ ವುಡ್ ಸಹಿತ. ಈ ಸತ್ಕಾರ ಗ್ಲಿನ್ ವುಡ್‌ರಿಗೆ ತುಂಬ ಹರ್ಷ ಕೊಟ್ಟಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಕಾಲಕ್ಕೆ ವಿ.ಸೀ. ಅವರನ್ನು ಅದರ ಕೆಲವೊಂದು ಚಟುವಟಿಕೆಗಳಲ್ಲಿ ತೊಡಗಿಸುವ ಕಾರ್ಯದಲ್ಲಿ ರಾಯಭಾರಿಯಾಗಿ ನಾನು ಕೆಲಸ ಮಾಡಿದೆನೆಂದು ಹೇಳಿಕೊಳ್ಳಲು ನನಗೆ ಹೆಮ್ಮೆಯೆನಿಸುತ್ತದೆ. ವಿ.ಸೀ. ಪರಿಷತ್ತಿನ ಚಟುವಟಿಕೆಗಳಿಂದ ಸ್ವಲ್ಪ ದೂರವೇ ಉಳಿದಿದ್ದಾಗ, ಆಗಿನ ಅಧ್ಯಕ್ಷರಾಗಿದ್ದ ಶ್ರೀ ಜಿ. ನಾರಾಯಣ ಅವರೊಡನೆ ಸಮಾಲೋಚಿಸಿ ವಿ.ಸೀ. ಅವರನ್ನು ಪರಿಷತ್ತಿನ ಲಾಂಛನವನ್ನು ಆಯ್ಕೆ ಮಾಡುವ ಸಲುವಾಗಿ ಕೋರಿ ಒಪ್ಪಿಸಲಾಯಿತು. ವಿ.ಸೀ. ಅವರಿಂದಾಗಿ ಪರಿಷತ್ತಿಗೆ ಉತ್ತಮ ಲಾಂಛನ ವೊಂದು ದೊರೆಯುವಂತಾಯಿತು.

ಹಾಗೆಯೇ, ಐ.ಬಿ.ಎಚ್. ಪ್ರಕಾಶನದವರ ‘ಕವಿ ಕಾವ್ಯ ಪರಂಪರೆ’ಯ ಪ್ರಧಾನ ಸಂಪಾದಕತ್ವವನ್ನು ವಹಿಸಿಕೊಳ್ಳುವಂತೆ ವಿ.ಸೀ.ಯವರ ಮನವೊಲಿಸಿ, ಅನಂತರ ಶ್ರೀ ಜಿ.ಕೆ. ಅನಂತರಾಮ್ ಅವರನ್ನು ಪರಿಚಯಿಸಿದುದಾಯಿತು.

ರಿಸರ್ವ್ ಬ್ಯಾಂಕ್ ಕನ್ನಡ ಸಂಘದ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಒಮ್ಮೆ ಅವರನ್ನು ಮುಖ್ಯ ಅತಿಥಿಗಳಾಗಿ ಬರಮಾಡಿಕೊಂಡಾಗ, ಅವರಿಗೆ ಏನು ಕಾಣಿಕೆ ಕೊಡುವುದು ಎಂಬ ಪ್ರಶ್ನೆ ಎದುರಾಯಿತು. ಆಗ ನಾನು ಅವರನ್ನೇ ಕೇಳಿದೆ. ಅವರ ಆಯ್ಕೆ ಆಗ ತಾನೇ ಪ್ರಕಟವಾಗಿದ್ದ ಲಾರ್ಡ್ ಕೇನ್ಸ್ ಅವರ ಅರ್ಥಶಾಸ್ತ್ರ ಕುರಿತ ಎರಡು ಸಂಪುಟಗಳು. ಅವು ದುಬಾರಿಯ ಪುಸ್ತಕಗಳಾಗಿದ್ದರೂ ಆ ಪುಸ್ತಕಗಳನ್ನು ಅವರಿಗೆ ಅರ್ಪಿಸಿ ನಾವು ಕೃತಕೃತ್ಯರಾದೆವು. ಆ ಸಂಪುಟಗಳನ್ನು ಕಂಡು ಅವರಿಗಾದ ಸಂತೋಷ ಇನ್ನೂ ನನ್ನ ಕಣ್ಣಿಗೆ ಕಟ್ಟಿದಂತಿದೆ.

ಮನಸ್ಸಿನಲ್ಲಿ ನೆನಪಿಗೆ ನೆನಪು ಸೇರಿ, ಕಿರಿ ತೊರೆಯಾಗಿ ನದಿಯಾಗಿ ಸಾಗರದಲ್ಲಿ ಅರ್ಪಣೆ ಮಾಡಿಕೊಳ್ಳುವಂಥಾ ನಿವೇದನಾ ಮನೋಭಾವದ ಎಳೆತ ಸೆಳೆತಗಳಲ್ಲಿ ಸಿಕ್ಕಿ, ನೆನಪಿನ ಪ್ರವಾಹದ ಅಲೆ ತರಂಗಗಳಲ್ಲಿ ತೇಲುವಂತೆ ಭಾಸವಾಗುತ್ತಿದೆ. ‘ಆ ದಿನಗಳು ಮತ್ತೆ ಬಂದಾವೇ?’ ಎನ್ನುವ ಪ್ರಶ್ನೆಗೆ ಉತ್ತರ ದೊರಕುತ್ತಿಲ್ಲ. ಆದರೂ ಆ ಪುಣ್ಯವನ್ನು ಒಮ್ಮೆಯಾದರೂ ಸವಿದೆವಲ್ಲ ಎಂಬ ತೃಪ್ತಿಯ ತುಂಬು ಹೃದಯದಲ್ಲಿ ಮೌನ ಝೇಂಕಾರದ ಮೃದು ಮಧುರ ಭಾವನೆಯ ತರಂಗಗಳೇಳುತ್ತಿವೆ.

ಹೃದಯ ತುಂಬಿ ಬಂದಾಗ ಮಾತಿಗಿಂತ ಮೌನ ಮಿಗಿಲು.

❖

# ಅಂಥಿಂಥ ಗುರುಗಳಲ್ಲ!

## (ತ. ಸು. ಶಾಮರಾಯರು)

● *ಡಾ॥ ಸಾ. ಶಿ. ಮರುಳಯ್ಯ*

**'ಗು**ರು' ಎಂದರೆ ದೊಡ್ಡದು; ಜ್ಞಾನದಲ್ಲಿ, ಬಹುಶ್ರುತತ್ವದಲ್ಲಿ, ಹೃದಯ ಶ್ರೀಮಂತಿಕೆಯಲ್ಲಿ, ನಡೆನುಡಿಯ - ಮಡಿತನದಲ್ಲಿ, ವಾತ್ಸಲ್ಯ ವೈಭವದಲ್ಲಿ, ಅಭಿಮಾನ ಆದರಗಳಲ್ಲಿ ಗುರು ಭೂವ್ಯೋಮ ವ್ಯಾಪಿ ದೈವ. ನನ್ನ ಹಾಗೂ ನನ್ನಂತಹ ಇನ್ನಿತರ ಶಿಷ್ಯ ಸಮೂಹಕ್ಕೆ ಪ್ರತ್ಯಕ್ಷ ದೈವಸ್ವರೂಪರಾಗಿದ್ದವರು, ಚಿತ್ರದುರ್ಗ ಜಿಲ್ಲಾ, ಚಳ್ಳಕೆರೆ ತಾಲೂಕಿನ ಪ್ರೊ॥ ವೆಂಕಣ್ಣಯ್ಯನವರ ನೇರ್ಗಿರಿಯರ ಸೋದರರಾದ ಡಾ॥ ತ. ಸು. ಶಾಮರಾಯರು. ಶಾಮರಾಯರು ಕೆ.ವಿ. ಪುಟ್ಟಪ್ಪನವರ ಪೂಜ್ಯ ಗುರುಗಳಾಗಿದ್ದ ಪ್ರೊ. ಟಿ. ಎಸ್. ವೆಂಕಣ್ಣಯ್ಯನವರ ಹಾಗೂ ಶ್ರೀ ಕುವೆಂಪುರವರಿಬ್ಬರಿಗೂ ಶಿಷ್ಯರಾಗಿದ್ದವರು. ನಮಗಂತೂ ಅಚ್ಚುಮೆಚ್ಚಿನ ಎಂದೆಂದಿಗೂ ಮರೆಯಲಾಗದ ಮಹಾಗುರು. ಕನ್ನಡದ ಬಂಗಾರದ ಶೃಂಗಾರ ಕವಿ 'ಕೆಎಸ್‌ನ'ರವರ ಕ್ಷಮೆಕೋರಿ, 'ತಸುಶಾ'ರವರನ್ನು ಕುರಿತು ಹೇಳುವುದಾದರೆ:

**ಅಂಥಿಂಥ ಗುರುವು ನೀವಲ್ಲ**
**ನಿಮ್ಮಂಥ ಗುರುವ ಕಂಡಿಲ್ಲ !**

ಪೂಜ್ಯರು ಶಿಷ್ಯವಾತ್ಸಲ್ಯರು, ಆರ್ತಜನ ಬಂಧುಗಳು, ಮಮತೆಯೇ ಮೂರ್ತಿವೆತ್ತಂತಿದ್ದ ತೆಳ್ಳಗಿನ, ಕಪ್ಪನೆಯ ಎತ್ತರದ ಮೂರ್ತಿ. ಅವರಲ್ಲಿದ್ದುದು ಬರಿಯ ಶಿಷ್ಯವಾತ್ಸಲ್ಯವಲ್ಲ, ಪುತ್ರವಾತ್ಸಲ್ಯ! ತಮ್ಮ ಎಲ್ಲ ಶಿಷ್ಯರನ್ನೂ 'ಲೋ, ಮಗು ಬಾರೊ ಹೋಗೊ' ಎಂದು ತುಂಬ ಸಲುಗೆಯಿಂದ ಸಂಬೋಧಿಸುತ್ತಿದ್ದರು. ಆ ಕರೆಯಲ್ಲಿ ಅಪ್ಪನ ಅಕ್ಕರೆ, ಅಮ್ಮನ ಪ್ರೀತಿ ಬೆರೆತಿರುತ್ತಿದ್ದವು. ಅವರ ಶಿಷ್ಯವಾತ್ಸಲ್ಯಕ್ಕೆ ಒಂದು ನಿದರ್ಶನ.

ಕನ್ನಡ ಆನರ್ಸ್‌ನಲ್ಲಿ ಇದ್ದವರು ನಾವು ಏಳು ಜನ ವಿದ್ಯಾರ್ಥಿಗಳು. ಹಾ.ಮಾ. ನಾಯಕ, ಜಿ.ಎಸ್. ಸಿದ್ಧಲಿಂಗಯ್ಯ, ಕೆ.ಎಂ. ಸೀತಾರಾಮಯ್ಯ, ಕೆ. ನಾಗೇಂದ್ರಪ್ಪ, ಕೆ.ಎಂ. ಮರಿಯಪ್ಪ, ಸಿದ್ಧಲಿಂಗೇಗೌಡ ಮತ್ತು ನಾನು. ೧೯೫೫ರ ಅಂತಿಮ ಬಿ.ಎ. (ಆನರ್ಸ್) ಪರೀಕ್ಷೆಗೆ ಸೀತಾರಾಮನನ್ನು ಬಿಟ್ಟು ನಾವು ಆರೂ ಜನ ಫೀ ಕಟ್ಟಿದೆವು. ಸೀತಾರಾಮು ಹಣತರಲು ಊರಿಗೆ (ಅರಸೀಕೆರೆಗೆ) ಹೋದವನು ಮೈಸೂರಿಗೆ ಬರಲೇ ಇಲ್ಲ. ನನಗೆ ಗಾಬರಿಯಾಯಿತು. ಕವಿ-ಋಷಿ ಕುವೆಂಪುರವರ ಪ್ರಾಧ್ಯಾಪಕ ಕೊಠಡಿಗೆ ಹೋದೆ. ಕುವೆಂಪು ನನ್ನನ್ನು ನೋಡಿ, 'ಬನ್ನಿ..... ನೀವೆಲ್ಲರೂ ಪರೀಕ್ಷೆ ತಗೋತಿರಾ ತಾನೆ?' ಅಂದರು. 'ಅದನ್ನೇ ಹೇಳೋಣಾಂತ ಬಂದೆ ಸರ್. ಕೆ.ಎಂ. ಸೀತಾರಾಮಯ್ಯ ಊರಿಗೆ ಹೋದವನು ಬಂದಿಲ್ಲ. ಪರೀಕ್ಷಾ ಶುಲ್ಕ

ಕಟ್ಟಿಲ್ಲ' ಅಂದೆ. 'ಬೇಗ ಬೇಗ ಬರೋದಕ್ಕೆ ಹೇಳಿ ಎಕ್ಸ್‌ಪ್ರೆಸ್ ಕಾಗದ ಬರೆದು ಹಾಕಿ. ಜೊತೆಗೆ 'ತಂತಿ'ನೂ ಕೊಡಿ. ಅಂದರು. ಗುರುಗಳ ಆದೇಶ ಪರಿಪಾಲಿಸಿದೆ. ಸೀತಾರಾಮು ಮಾರನೇ ದಿನವೇ ಬಂದ ಹ್ಯಾಪ್‌ಮೋರ್ ಹಾಕ್ಕೊಂಡು. ಪರೀಕ್ಷೆಗೆ ಹಣ ಕಟ್ಟಲು (ದಂಡ ಸಮೇತ) ಕೇವಲ ಎರಡು ದಿವಸಗಳಷ್ಟೇ ಇದ್ದವು. ಬರೀಕೈಯಲ್ಲಿ ಊರಿಂದ ಬಂದ ಸೀತಾರಾಮು, 'ನಿನ್ನ ತಂತಿ ವಾರ್ತೆ ತಿಳಿದು ಬಂದೆ. ಆದರೆ ನಾನೀವರ್ಷ ಪರೀಕ್ಷೆ ತಗೊಳ್ಳಲ್ಲ' ಅಂದ. ಕಾರಣ ಕೇಳಿದೆ, ಅವನ ತಂದೆ ತುಂಬಾ ಆರ್ಥಿಕ ತೊಂದರೆಯಲ್ಲಿದ್ದುದರಿಂದ ಹಣ ಒಂದು ಕಾಸೂ ನನ್ನ ಬಳಿ ಇಲ್ಲ ಅಂದರಂತೆ. ಒಂದಲ್ಲ, ಎರಡಲ್ಲ ಒಂದು ನೂರು ರೂಪಾಯಿ! ಏನು ಮಾಡುವುದು. ಈ ಯೋಚನೆ, ಯೋಜನೆಗಳಲ್ಲಿ ಒಂದು ದಿನ ಉರುಳಿ ಹೋಯಿತು. ಒಂದೇ ಒಂದು ದಿನ ನಮ್ಮ ಮುಂದಿರೋದು... ನೂರು ರೂಪಾಯಿ! ಆ ದಿನದ ನೂರು ರೂಪಾಯಿ ಈ ದಿನದ ಹತ್ತು ಸಾವಿರ ರೂಪಾಯಿ ತೂಕ ತೂಗುವಂಥದು! ಏನು ಮಾಡೋದು? ಸಾಲ ಪಡಕೊಳ್ಳೋಣ ಸಲಹೆ ಕೊಟ್ಟೆ. ಸೀತಾರಾಮು 'ನಾನು ಯಾರಲ್ಲೂ ಸಾಲ ಕೇಳೋಕೆ ಹೋಗೊಲ್ಲ. ನನಗೆ ಪರೀಕ್ಷೆ ಬೇಡ' ಅಂದ. ಪೂಜ್ಯ ಗುರುಗಳಾದ ಕುವೆಂಪುರವರು ಹೇಳಿದ ಮಾತು ಹೇಳಿದೆ. ತಲೆ ಅಲ್ಲಾಡಿಸಿದ. ಬಹಳ ಯೋಚನೆ ಮಾಡಿದೆ. ತಲೆಗೆ ಹೊಳೀತು! ಆಪತ್ಬಾಂಧವರೂ ಅನಾಥರಕ್ಷಕರೂ ಆದ 'ತಸುಶಾ' ಜ್ಞಾಪಕಕ್ಕೆ ಬಂದರು. 'ಅವರಲ್ಲಿಗೆ ಹೋಗೋಣ ಬಾ' ಅದಕ್ಕೂ ಆ ಸ್ವಾಭಿಮಾನಿಯ ಬಿಂಕ ಅವನನ್ನು ಒಪ್ಪಲು ಬಿಡಲಿಲ್ಲ. 'ನೀನು ಸುಮ್ನೆ ನನ್ನ ಜೊತೆ ಬಾ! ನಿನ್ನ ಮಾನವನ್ನ ಮಾರಾಟಕ್ಕಿಡೊಲ್ಲ ಮೇಷ್ಟ್ರ ಮುಂದೆ' ಅಂದೆ. 'ನೋಡಪ್ಪ ನೀನು ಕರೀತೀಯಾ ಅಂತಾ ನಿನ್ನ ಜೊತೆಲೇ ಬರ್ತೀನಿ. ಆದರೆ ಮೇಷ್ಟ್ರ ಮನೆ ಒಳಗೆ ಕಾಲಿಡೊಲ್ಲ! ಅಂದ. ಅವನ ಮಾತಿಗೆ ಕೋಪ ನೆತ್ತಿಗೇರಿ ಹೋಗಿತ್ತು. ಇವನ ಸ್ವಾಭಿಮಾನಕ್ಕೆ ಅಲ್ಲ ಬಿಗುಮಾನಕ್ಕೆ ಬೆಂಕಿ ಹಾಕ ಅಂತ ಬಯ್ಕೊಂಡು, 'ಹೋಗಲಿ, ಅವರ ಮನೇತನಕಾ ಬಾ' ಅಂದೆ ಬಂದ. ಬಂದವನು ಕೃಷ್ಣಮೂರ್ತಿಪುರಂನ ರೈಲ್ವೆ ಲೆವೆಲ್ ಕ್ರಾಸ್ ಬಳಿ ನಿಂತ. ನಾನೊಬ್ಬನೇ ಗುರುಗಳ ಮನೆಗೆ ಹೋದೆ.

ಪುಣ್ಯಕ್ಕೆ ಗುರುಗಳು ಮನೇಲೇ ಇದ್ದರು. ಈಗಿನ 'twenty 20' ಅಲ್ಲ Twentyeight ಇಸ್ಪೀಟಾಡೋಕೆ ಹೋಗಿರಲಿಲ್ಲ. ನನ್ನನ್ನು ನೋಡಿದ ಕೂಡಲೆ, 'ಏನೊ ಮಗು, ಪರೀಕ್ಷೆ ತಯಾರಿ ಎಲ್ಲಾ ಚೆನ್ನಾಗಿ ನಡೆದಿದೆ ತಾನೆ!' ಕೇಳಿದರು. 'ನಡೆದಿದೆ ಸಾರ್, ಆದರೆ...! 'ಆದರೆ! ಏನು ಆದರೆ? ಸ್ಪಷ್ಟವಾಗಿ ಬಗುಳು' ಅಂದರು. ವಿಷಯ ತಿಳಿಸಿದೆ. 'ನಿಜ ಹೇಳು' ಎಲ್ಲ ಸತ್ಯ ಸಾರ್. ಸುಳ್ಳುಪಳ್ಳು ಏನೂ ಇಲ್ಲ ತಾನೆ? ನಾನು ಶಾಮರಾಯರ ಶಿಷ್ಯ ಸಾರ್ ಅಂದೆ. ಮುಂದೆ ಮಾತೇ ಇಲ್ಲ! ಸೀದಾ ತಮ್ಮ ಕೊಠಡಿಗೆ ಹೋಗಿ ಒಂದು ನೂರು ರೂಪಾಯಿ ಗರಿಗರಿ ನೋಟು ತಂದು ನನ್ನ ಕೈಗಿಟ್ಟರು. ನಾನು ನೂರು ರೂಪಾಯಿ ನೋಟು ಮುಟ್ಟಿದ್ದು ಅದೇ ಮೊದಲು! ಹಿಗ್ಗಿ ಹೀರೇಕಾಯಿ ಆಗಿಹೋದೆ! ಹೋಗು, ಸೀತಾರಾಮನಿಗೆ ಪರೀಕ್ಷೆ ತಗೋಳಾಕೆ ಹೇಳು. ಒಳ್ಳೆಯದಾಗಲಿ ಅಂದರು. ಪಾದಮುಟ್ಟಿ ನಮಸ್ಕರಿಸಿ ತಲೆ ಎತ್ತಿದೆ, ಮಾತೃಶ್ರೀ ಸಮಾನರಾದ ಗುರುಪತ್ನಿಯವರು ಎರಡು ಲೋಟ ಕಾಫಿ ಹಿಡಿದುಕೊಂಡು ಬಂದು, ಚೆಂದಾಗಿದ್ದೀಯಾಪ್ಪ? ಅಂದರು. ಮೇಷ್ಟ್ರ ನಾನು ಕಾಫಿ ಹೀರಿ ಹಿರಿಹಿರಿ ಹಿಗ್ಗಿ ಸೀತಾರಾಮ ಬಳಿ ಬಂದು ಕೊಟ್ಟೆ.

ಇದು ತಮ್ಮ ಶಿಷ್ಯರ ಬಗೆಗೆ ಪೂಜ್ಯ ಗುರುಗಳಿಗಿದ್ದ ಸಲುಗೆ ಮತ್ತು ಪುತ್ರವಾತ್ಸಲ್ಯಗಳಿಗೆ ಹಿಡಿದ ಕನ್ನಡಿ! ನಾವಷ್ಟೇ ಅಲ್ಲ, ಅನೇಕ ವಿದ್ಯಾರ್ಥಿಗಳ ಆಶ್ರಯ ತಾಣ ಅವರ 'ಮಾಮನೆ!' ನಿಜಕ್ಕೂ ಅದೊಂದು ದಾಸೋಹದ ಮಠ! ತಸುಶಾರವರ ಆ ಮನೆ ವಾರಾನ್ನಕ್ಕಾಗಿ ಬರುತ್ತಿದ್ದ ಅನೇಕ ವಿದ್ಯಾರ್ಥಿಗಳ ಮಿನಿ ಹಾಸ್ಟಲ್. ಬೇಡಿ ಬಂದವರನ್ನು ಅವರಾಗಲಿ ಅವರ ಶ್ರೀಮತಿಯವರಾಗಲಿ ಬರಿಕೈಯಲ್ಲಿ ಎಂದಿಗೂ ಕಳುಹಿಸಿದವರಲ್ಲ. ಅಂತಹ ಉದಾರ ಹೃದಯ, ಪುಣ್ಯ ದಾಂಪತ್ಯ.

ತಸುಶಾರವರ ಪಾಠಪ್ರವಚನ ವೈಖರಿ ಅಸದೃಶವಾದದ್ದು. ಯಾವುದೇ ವಿಷಯವಿರಲಿ ಅದು ವಿದ್ಯಾರ್ಥಿಗಳ ತಲೆಗೆ ಹೋಗುವವರೆಗೂ ಬಿಡುತ್ತಿರಲಿಲ್ಲ. ಮತ್ತೆ, ಯಾವುದಾದರು ಒಂದು ಅಭಿಪ್ರಾಯವನ್ನು ಮುಕ್ತಾಯಗೊಳಿಸಬೇಕಾದರೆ "ಹಾಗಂತಾ ಹೇಳಿಬಿಟ್ಟೆ" ಅನ್ನೊಂದು ಅವರ ಮ್ಯಾನರಿಜಂ! ಇದನ್ನು ನಾವು ಅವರಿಗೆ ಮುಂಚೆ ಮುಂಚೆಯೇ ಹೇಳಿ, ಮೇಷ್ಟ್ರನ್ನೂ ನಗಿಸಿ, ನಾವು ನಕ್ಕು 'ಥೂ ಮುಂಡೇವ!' ಎಂದು ಅಭಿಮಾನ ಬೆರೆತ ಬೈಗುಳ ಬೈಸಿಕೊಂಡದ್ದೂ ಉಂಟು.

ನಮ್ಮ ಮೇಷ್ಟ್ರಿಗೆ 'ಮಗು' ಎಂಬ ಅಕ್ಕರೆಯ ಸಕ್ಕರೆ ಕರೆ ಎಷ್ಟು ಪ್ರಿಯವೊ ಮಾತೆತ್ತಿದರೆ 'ಮುಂಡೇದೆ' ಅನ್ನೋದೂ ಅಷ್ಟೇ ಪ್ರಿಯ. ಒಂದು ನಿದರ್ಶನ:

ನಾನು ಬಿ.ಎ. (ಆನರ್ಸ್) ಸರ್ಟಿಫಿಕೇಟ್ ತೆಗೆದುಕೊಳ್ಳಲು ಕಾನ್ವೋಕೇಷನ್‌ಗೆ ಹಾಜರಾಗಲಿಲ್ಲ. ಮಾರನೆಯ ವರ್ಷ ಎಂ.ಎ. ಪದವಿ ಪಡೆಯಲು ಹೋದೆ. ನನ್ನ ತಾಯಿಯನ್ನು ಕರೆದುಕೊಂಡು ಮೂರು ದಿನ ಮುಂಚೆಯೇ ಹೋದೆ. ನನ್ನಮ್ಮನಿಗೆ ಚಾಮುಂಡಿಬೆಟ್ಟ, ನಂಜನಗೂಡು, ಶ್ರೀರಂಗಪಟ್ಟಣ, ಕನ್ನಂಬಾಡಿ ಬೃಂದಾವನ, ಮೈಸೂರು ಅರಮನೆ, ಮೃಗಾಲಯ ಎಲ್ಲಾ ತೋರಿಸಿಕೊಂಡು ಬಂದೆ. ಕಾನ್ವೋಕೇಷನ್ ಮುಗಿದ ಸಂಜೆ ನಾನೊಬ್ಬನೆ ಮೇಷ್ಟ್ರರ ಮನೆಗೆ ಹೋದೆ. ಮನೆಯಲ್ಲಿದ್ದರು. ನಮಸ್ಕಾರ ಮಾಡಿದೆ. ಆಶೀರ್ವದಿಸುತ್ತಾ, ಯಾವಾಗ ಬಂದೆಯೊ? ಕೇಳಿದರು. ಮೂರು ದಿವಸ ಆಯ್ತು ಸರ್. ಕಾನ್ವೋಕೇಷನ್‌ಗೆ ಬಂದಿದ್ದೆ ಅಂದೆ. ಕುಳಿತಿದ್ದ ಕುರ್ಚಿ ಒರಗು ಬಿಟ್ಟು ಮುಂದೆ ಮೈಚಾಚಿ, ದಪ್ಪಗಂಟಲಿನಲ್ಲಿ ಎಲ್ಲಿ ಹಾಳಾಗ್ಹೋಗಿದ್ದೆ? ಹೋಟಿಲ್‌ನಲ್ಲಿ.... ಓ! ಹೋಟೆಲ್‌ನಲ್ಲಿ! ಮತ್ಯಾಕಿಲ್ಲಿಗೆ ಬಂದೆ? ಅಲ್ಲೇ ಹೋಟೆಲ್‌ನಲ್ಲಿದ್ದೂ ಸಾಯಬೇಕಾಗಿತ್ತು! ಹಿಂದೆಲ್ಲಾ ನನ್ನ ಮನೆ ಮಹಡಿ ಮೇಲಿನ ರೂಂನಲ್ಲಿ ಬಿದ್ದು ಸಾಯ್ತಿದ್ದೆ. ಈಗೇನಾಗಿತ್ತು? ಈಗ ದೊಡ್ಡ ಲೆಕ್ಚರರ್ರು, ಕೈತುಂಬ ಸಂಬಳ, ದೊಡ್ಡಸ್ತಿಕೆ ಬಂತೇನೋ! ರೇಗಿದರು. ಬಯ್ಯೋದೆಲ್ಲಾ ಬಯ್ಲಿ ಅಂತಾ ಸುಮ್ನಿದ್ದೆ. ಆಮೇಲೆ 'ಸರ್, ನಮ್ಮಮ್ಮ ಬಂದಿದ್ದಾರೆ, ಅ..ದ..ಕೇ..., ಅದಕ್ಕೆ... ಅಯ್ಯೊ ಮುಂಡೇದೆ, ಆಕೇನೂ ಕರಕೊಂಡು ಬರಬೇಕಾಗಿತ್ತು ಅವಳಣ್ಣನ ಮನೆಗೆ ಬರೋಕೆ ಅವಳಿಗೆ ನಾಚಿಕೆಯೇ? ಇಲ್ಲಾ... ಆರತಿ ಎತ್ತಿ ಆಹ್ವಾನಿಸಬೇಕಾ! ಇನ್ನೂ ನಿಂತಿದ್ದಿಯಲ್ಲೋ ಹೋಗೊ ನಾನೆಲ್ಲೊ ಹೋಗಬೇಕು. ಬೇಗ ಕರಕೊಂಡು ಬಾರೊ. ಒಳ್ಳೆ ಗರಹೊಡೆದೋನ ಹಾಗೆ ನಿಂತರೋದು ನೋಡು. ಹೋಗೊ ಮುಂಡೆದೆ ಅಂದರು. ನೀವು ನಮ್ಮಮ್ಮನ ಎದುರಿನಲ್ಲಿ ಹೀಗಂತೀರಾ ಅಂತಾ ಹೋಟೆಲ್‌ನಲ್ಲಿ ಬಿಟ್ಟು ಬಂದೆ! ಏನಂತಾ? ಅದೇ ನಮ್ಮ ಅಮ್ಮನ ಎದುರಿನಲ್ಲಿ ಲೋ ಮು... ಅಂತೀರಿ ಅಂತಾ! ಗುರುಗಳು ಘೊಳ್ಳನೆ ನಕ್ಕು ಅಷ್ಟೇನಾ? ನಿಮ್ಮಮ್ಮನ್ನ ಕರೆದುಕೊಂಡು ಬಾ ಖಂಡಿತ

ಆಕೆ ಮುಂದೆ ನಿನ್ನನ್ನು ಮುಂಡೇದೆ ಅಂತಾ ಬಯ್ಯೊಲ್ಲ ಕಣೋ ಮುಂಡೇದೆ! ಅಂದರು. ಇಬ್ಬರು ಸಾಕಷ್ಟು ನಕ್ಕೆವು.

ಇಂತಹ ವಾತ್ಸಲ್ಯಮೂರ್ತಿಯನ್ನು ನಾನೆಲ್ಲಿ ಕಾಣಲಿ!

ನಾನು ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದಾಗ ಕಾರ್ಯಾರ್ಥವಾಗಿ ಮೈಸೂರಿಗೆ ಹೋಗಬೇಕಾಗಿ ಬಂತು. ರಾತ್ರಿ ಪ್ರಯಾಣ ಮುಗಿಸಿ ಬೆಳಗಿನ ವೇಳೆಗೆ ಮೈಸೂರು ಮುಟ್ಟಿದೆ. ನೇರವಾಗಿ ಮೇಷ್ಟ್ರ ಮನೆಗೆ ಹೋದೆ. ಗುರುಗಳು ಕಾಫಿ ಕುಡಿತಾ ಕುಳಿತಿದ್ದರು. ನಾನು ಮನೆಯೊಳಗೆ ಹೆಜ್ಜೆ ಇಟ್ಟೆ. ನನ್ನನ್ನು ನೋಡಿ, ಬಾ, ಬಾ ಎಂದು ಕರೆದು ಅಡುಗೆಮನೆ ಕಡೆ ತಿರುಗಿ, ನೋಡು ಮರುಳಯ್ಯ ಬಂದಿದಾನೆ ಅಂದರು. ಕಾಫಿ ಬರೋದರೊಳಗೆ ಅವರ ಮನೆ ಮಹಡಿ ಮೇಲೆ ಹೋಗಿ ರೂಮಿನಲ್ಲಿ ಸೂಟ್‌ಕೇಸ್ ಬೀಸಾಟು, ಬ್ರಷ್ ಮಾಡಿ, ಮುಖತೊಳೆದು ಕೆಳಗಿಳಿದು ಬಂದೆ. ಕಾಫಿ ಆಯಿತು. ಉಭಯಕುಶಲೋಪರಿ ನಂತರ, 'ಏನು ಬಂದೆ?' ಕೇಳಿದರು. ಸರ್, ಈಗ ನಾನು ಸ್ನಾನ ಮಾಡಿ ಸುತ್ತೂರು ಜಗದ್ಗುರು ಶ್ರೀ ರಾಜೇಂದ್ರ ಮಹಾಸ್ವಾಮಿಗಳನ್ನು ಕಾಣಬೇಕಾಗಿದೆ. ಹೋಗಿ ಬರ್ತೀನಿ. ಪೂಜ್ಯರನ್ನ ಕಾಣಲಿಕ್ಕೆ ನಾನು ಬಂದದ್ದು ಅಂದೆ. ಯಾಕೋ ಟಿಫಿನ್ ಮಾಡಿಕೊಂಡೇ ಹೋಗು. ಅಲ್ಲೇನು ಕೊಳ್ಳೆ ಹೋಗೊಲ್ಲ ಅಂದರು. ಇಲ್ಲಾ ಸರ್, ಬೇಗ ಹೋದ್ರೆ ಸ್ವಾಮೀಜಿ ಸಿಗ್ತಾರೆ, ತಡವಾದರೆ ಅವರು ಯಾವುದಾದರೂ ಊರಿಗೆ ಹೋದರೆ ನಾನು ಬಂದದ್ದೂ ವ್ಯರ್ಥವಾಗುತ್ತದೆ ಎಂದು ಹೇಳಿ ದಡಬಡ ಸ್ನಾನ ಮುಗಿಸಿ, ಹೊರಟೆ. ಗುರುಗಳು ಲೋ ಮಗು ಮಧ್ಯಾಹ್ನ ಊಟಕ್ಕೆ ಸರಿಯಾಗಿ ಮನೆಗೆ ಬಂದುಬಿಡು ಯಾರೋ ಕರೆದರು ಅಂತಾ ಎಲ್ಲೂ ಹೋಗಬೇಡ. ಇಲ್ಲಿಗೇ ಬಂದುಬಿಡು. ಜೊತೇನಲ್ಲಿ ಕೂತು ಊಟಮಾಡಿ ಬಹಳ ದಿವಸ ಆಯ್ತು. ನನ್ನ ಊಟದ ಸಮಯ ಗೊತ್ತಲ್ಲಾ? ಒಂದು ಅಥವಾ ಒಂದೂವರೆ ಗಂಟೆ ಹೊತ್ತಿಗೆ ನೀನಿಲ್ಲಿರಬೇಕು ಆಜ್ಞೆ ಮಾಡಿದರು. ನಾನು ಅದೂ ಇದೂ ಅವರೂ ಇವರು ನೋಡಿ ಮಾತಾಡಿ ಗಡಿಯಾರ ನೋಡಿದಾಗ ಎರಡೂ ಮುಕ್ಕಾಲು ತೋರಿಸ್ತಿತ್ತು! ಎದೆ ದಸಕ್ ಅಂತು ರಿಕ್ಷಾ ಹಿಡಿದು ಆತುರಾತುರವಾಗಿ ಕೃಷ್ಣಮೂರ್ತಿಪುರಂಗೆ ಓಡಿದೆ. ಮನೆ ಒಳಗೆ ಹೆಜ್ಜೆ ಇಡುತ್ತಿದ್ದ ಹಾಗೆ, ಏನೋ! ಎಷ್ಟೋ ಗಂಟೆ ಈಗ. ಇಷ್ಟು ಹೊತ್ತಿನ ತನಕ ನನ್ನ ಕಾಯಿಸಿಬಿಟ್ಟಿಯಲ್ಲೊ! ಬಾ, ಬೇಗ ಕೈಕಾಲು ತೊಳೆದುಕೊಂಡು ಬೇಗ ಬಾ ಅಂದರು. ನನಗೆ ಕಣ್ಣೀರು ಬಂತು. ಗುರುಗಳು ಹಸಿದುಕೊಂಡು ನನಗಾಗಿ ಕಾದರಲ್ಲಾ ಎಂಬ ಅಪರಾಧ ಪ್ರಜ್ಞೆ ನನ್ನನ್ನು ಕಾಡಿತು. ಕ್ಷಮೆ ಕೋರಿದೆ. ಇಬ್ಬರೂ ಊಟಕ್ಕೆ ಕುಳಿತೆವು. ನಮ್ಮಿಬ್ಬರ ಊಟ ಆದ ಮೇಲೆ ಪೂಜ್ಯ ಮಾತೃಶ್ರೀ ಸ್ವರೂಪಿಣಿಯರು ನಾನು ಉಂಡ ಎಲೆ ತೆಗೆದು ಹೊರ ಎಸೆದು, ಕೈಕಾಲು ತೊಳೆದುಕೊಂಡು ಬಂದು, ತಮ್ಮ ಪತಿದೇವರು ಉಂಡುಬಿಟ್ಟೆಲೆಯ ಮೇಲೆ ಅನ್ನ ಹುಳಿ ಹಾಕಿಕೊಂಡು ಊಟ ಮಾಡಿದರು. ನನ್ನ ಅವಿವೇಕದಿಂದಾಗಿ ಆ ತಾಯಿಯೂ ಮೂರುವರೆ ಗಂಟೆವರೆಗೆ ಉಪವಾಸ ಮಾಡಬೇಕಾಯಿತು ಎಂದುಕೊಂಡೆ.

ಇಂತಿಷ್ಟು ಸಾಕು. ಗುರುದೇವ ಶ್ರೀ ತ.ಸು. ಶಾಮರಾಯರ ಸಹಸ್ರಾರು ಶಿಷ್ಯರು ಕಂಡ ಪೂಜ್ಯರ ಅನಂತ ಮುಖಗಳಲ್ಲಿ ನಾನು ಕಂಡದ್ದು ಒಂದೆರಡು ಮಾತ್ರ. ಇವು ನನ್ನ ಆರಾಧ್ಯಮೂರ್ತಿಗಳಾದ ತಸುಶಾ ರವರ ಪವಿತ್ರಾತ್ಮಕ್ಕೆ ಸಮರ್ಪಿತ.

# ಒಲವಿನ ಗುರುವೆ ನಮೋ ನಮೋ

## (ಡಾ॥ ಸಾ.ಶಿ. ಮರುಳಯ್ಯ)

● *ಎಸ್. ಬಿಳಿಗಿರಿವಾಸನ್*

ಜಗತ್ತಿನಲ್ಲಿರುವ ಮಾನವರಿಗೆಲ್ಲಾ ಜನನಿಯೇ ಮೊದಲ ಗುರು. ಅವಳು ಅಕ್ಷರಜ್ಞಾನಿಯಾಗಿರಲಿ, ಇಲ್ಲದಿರಲಿ ತನ್ನ ಶಿಶುವಿಗೆ ತಾನೇ ಗುರು. ಅನಂತರ ಬರುವುದೇ ಗುರುಪರಂಪರೆ. ಪ್ರಾಥಮಿಕ ವಿದ್ಯಾಭ್ಯಾಸದಿಂದ ಆರಂಭಿಸಿ ಸ್ನಾತಕೋತ್ತರ ಪದವಿ, ಇನ್ನಿತರ ಪದವಿಗಳಲ್ಲಿ ಪಾಠ ಹೇಳಿದ ಎಲ್ಲಾ ಗುರುವರ್ಯರೂ ವಂದನಾರ್ಹರು, ಸ್ತುತ್ಯಾರ್ಹರು. ಈ ಗುರುಪರಂಪರೆಯಲ್ಲಿ ಕೆಲವರು ಕಹಿಯನ್ನು, ಕೆಲವರು ಸಿಹಿಯನ್ನು ಉಣಿಸಿದರೆ ಎಲ್ಲೋ ಕೆಲವರು ಮಾತ್ರ ಜೀವಮಾನ ಪರ್ಯಂತ ಉಳಿಯುವಂತಹ ಪ್ರಭಾವ ಬೀರುವವರು ಆಗಿರುತ್ತಾರೆ. ಅವರು ಒಬ್ಬರೋ ಇಬ್ಬರೋ ಹೆಚ್ಚೆಂದರೆ ಮುವ್ವರು ಆಗಿರಬಹುದು. ನನ್ನ ವಿದ್ಯಾರ್ಥಿ ಜೀವನದಲ್ಲಿ ಬಂದು, ನನ್ನ ಜೀವನಪೂರ್ತಿ ಪ್ರಭಾವ ಬೀರಿದ ಪೂಜ್ಯ ಗುರುಗಳೆಂದರೆ ಡಾ॥ ಸಾ.ಶಿ. ಮರುಳಯ್ಯನವರು.

ನಾನು ೧೯೭೦ರಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ವೀರೋಚಿತ ಅಲೆಗ್ಸಾಂಡರ್ ದಂಡಯಾತ್ರೆಯ ಹಾಗೆ ವಿಜಯಶಾಲಿಯಾಗಿ 'ಗ್ಯಾಸ್' ಕಾಲೇಜ್ ಎಂದು ಪ್ರಸಿದ್ಧವಾಗಿದ್ದ ಸರ್ಕಾರಿ ಕಲೆ ಮತ್ತು ವಿಜ್ಞಾನ (ಈಗ ಬೇರ್ಪಟ್ಟಿದೆ) ಕಾಲೇಜಿಗೆ ಪಿ.ಯು.ಸಿ. ತರಗತಿಗೆ ಪ್ರವೇಶ ಪಡೆದೆ. (ಆಗ ಇದ್ದದ್ದು ಒಂದು ವರ್ಷದ ಪಿ.ಯು.ಸಿ. ನನ್ನದೇ ಕೊನೆಯ ತಂಡ) ವಿಜ್ಞಾನದ ವಿಶಾಲ ವಾರಿಧಿ ನನ್ನ ಮತಿಗೆ ಎಟುಕದಿದ್ದುದರಿಂದ ಸಾಹಿತ್ಯ ಸಾಗರದಲ್ಲಿ ಸರಸವಾಡಲು ಇತಿಹಾಸ, ಅರ್ಥಶಾಸ್ತ್ರ, ಐಚ್ಛಿಕ ಕನ್ನಡ (ಹೆಚ್‌ಇಕೆ)ವನ್ನು ಐಚ್ಛಿಕ ವಿಷಯವನ್ನಾಗಿ ಸ್ವೀಕರಿಸಿದೆ. ಅಲ್ಲಿಂದ ನನ್ನ ಸಾಹಿತ್ಯ ವ್ಯಾಸಂಗ ಪ್ರಾರಂಭವಾಯಿತು. ಕನ್ನಡ ವಿಭಾಗದಲ್ಲಿ ಡಾ॥ ಜಿ.ಎಸ್ ಸಿದ್ಧಲಿಂಗಯ್ಯ, ಪ್ರೊ॥ ಎಂ.ಎಚ್. ಕೃಷ್ಣಯ್ಯ, ಡಾ॥ ಸಾ.ಶಿ. ಮರುಳಯ್ಯ, ಪ್ರೊ॥ ನಾರಾಯಣಸ್ವಾಮಿ ಅವರುಗಳೆಲ್ಲರೂ ಅತ್ಯಂತ ಸೊಗಸಾಗಿ ಪಾಠ ಹೇಳುತ್ತಿದ್ದರೂ, ಡಾ॥ ಸಾ.ಶಿ. ಮರುಳಯ್ಯನವರಿಂದ ಆಕರ್ಷಿತನಾದೆ. ಅವರನ್ನು ಮೊದಲು ಐಚ್ಛಿಕ ಕನ್ನಡದ ಮಧ್ಯಾಹ್ನದ ತರಗತಿಯಲ್ಲಿ ಕಂಡೆ. ಕಂಡೊಡನೆ ನನ್ನನ್ನು ಆಕರ್ಷಿಸಿದ್ದು ಅವರ ತೇಜಃಪುಂಜವಾದ ಮುಖ. ಸರ್ವಜ್ಞನ ವಚನ ಥಟ್ಟನೆ ನೆನಪಿಗೆ ಬಂದಿತು "ವಿದ್ಯೆ ಬಲ್ಲವನ ಮುಖವು ಮುದ್ದಿಕ್ಕುವಂತಿಕ್ಕು" ಎಷ್ಟು ಸಹಜವಾಗಿ ಮೂಡಿ ಬಂದಿರುವ ವಚನ! ಅನಂತರ ಅವರ ನಿರರ್ಗಳವಾದ ವಾಕ್ಪಟುತ್ವ, ಅದರಲ್ಲಿಯೇ ಅವರ ಅಧ್ಯಯನದ ಆಳ ಅಗಲಗಳ ಪರಿಚಯವಾಗುತ್ತಿತ್ತು. ಹಾಗೆಯೇ ಅಧ್ಯಾಪನದಲ್ಲಿ ತಾದಾತ್ಮ್ಯ, ತಲ್ಲೀನತೆ, ಸೊಗಸಾದ ಕಾವ್ಯ ಪ್ರಸಂಗಗಳು ಬಂದಾಗ 'ಠ' ಎಂದು ಲೊಟ್ಟೆ ಹಾಕಿ ಅದರ ಭಾವವನ್ನು ವರ್ಣಿಸುತ್ತಿದ್ದ ರೀತಿ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ.

ಅವರು ಪಿ.ಯು.ಸಿ. ಐಚ್ಛಿಕ ಕನ್ನಡದಲ್ಲಿ ಲಕ್ಷ್ಮೀಶನ ಜೈಮಿನಿಭಾರತದ 'ಸೀತಾಪರಿತ್ಯಾಗ' ಭಾಗವನ್ನು ಪಾಠ ಹೇಳುತ್ತಿದ್ದ ಸಂದರ್ಭ. ಅಗಸರವನನ್ನು ಬಿಟ್ಟು ಹೋದ ಹೆಂಡತಿಯನ್ನು ಅವಳ ತಾಯಿ ತಂದೆಗಳು ಮತ್ತೆ ಗಂಡನ ಮನೆ ಕರೆತಂದಾಗ 'ಇನ್ನೊಲ್ಲೆನಗಲಿರ್ದ ಮಡದಿಯಂ ಮತ್ತೆ ರಘುನಾಥನಂತೆ ಕೊಂಡಾಳುವವನಲ್ಲ ತಾನೆಂದು' ಹೇಳಿದ ಮಾತನ್ನು ಬೇಹುಗಾರರಿಂದ ಕೇಳಿದ ರಾಮನು, ಸೀತೆಯ ಬಯಕೆಯಂತೆ ಋಷಿಪತ್ನಿಯರ ಸತ್ಸಂಗದ ವಿಷಯವನ್ನೇ ನೆಪವಾಗಿಸಿಕೊಂಡು ಲಕ್ಷ್ಮಣನಿಗೆ ಸೀತೆಯನ್ನು ಕಾಡಿಗೆ ಬಿಟ್ಟು ಬರಲು ಆಜ್ಞಾಪಿಸುತ್ತಾನೆ. ರಾಜಾಜ್ಞೆಯನ್ನು ಹೊತ್ತ ಲಕ್ಷ್ಮಣನು ಅರಣ್ಯಕ್ಕೆ ಕರೆತಂದು ಬಿಟ್ಟಾಗ, ಋಷ್ಯಾಶ್ರಮಗಳನ್ನು ಕಾಣದೆ ಸೀತೆಯು ಲಕ್ಷ್ಮಣನನ್ನು ಪ್ರಶ್ನಿಸಿದಾಗ, ನಿರ್ವಾಹವಿಲ್ಲದೆ ರಾಮನು ಸೀತೆಯನ್ನು ಪರಿತ್ಯಾಗ ಮಾಡಿರುವ ಸಂಗತಿಯನ್ನು ತಿಳಿಸುತ್ತಾನೆ. ಆಗ ಬಿರುಗಾಳಿಗೆ ಸಿಕ್ಕ ಫಲಭರಿತವಾದ ಬಾಳೆಯು ಮುರಿದು ಭೂಮಿಗೆ ಒರಗುವಂತೆ ಗರ್ಭಿಣಿಯಾದ ಸೀತೆಯು ಇಳೆಗೊರಗುತ್ತಾಳೆ. ಅನಂತರ ಬಗೆಬಗೆಯಾಗಿ ಪ್ರಲಾಪಿಸಿ ರಾಮನ ರೂಪ ಲಾವಣ್ಯವನ್ನು ವರ್ಣಿಸುವ ಪದ್ಯವು ಬಹು ಸೊಗಸಾಗಿ ಬಂದಿದೆ:

**"ರಾಮನಂ ಭುವನಾಭಿರಾಮನಂ ಗುಣರತ್ನ**
**ಧಾಮನಂ ರಘುಕುಲೋದ್ಧಾಮನಂ ರೂಪಜಿತ**
**ಕಾಮನಂ ಸತ್ಕೀರ್ತಿಕಾಮನಂ ಶರಣಜನವಾರ್ಧಿಯಂ ಮಿಗೆ ಪೆರ್ಚಿಪ ॥**
**ಸೋಮನಂ ಸೌಭಾಗ್ಯಸೋಮನಂ ಕುವಲಯ**
**ಶ್ಯಾಮನಂ ನಿಜತನುಶ್ಯಾಮನಂ ಘನಪುಣ್ಯ**
**ನಾಮನಂ ಸಂತತಂ ನಾ ಮನಂದಣಿಯೆ ರಮಿಸದೆ ಬಾಳ್ವೆನೆಂತೆಂದಳು ॥"**

ಈ ಪದ್ಯವನ್ನು ಸಾಶಿಮ ರವರು ವಾಚನ ಮಾಡುವಾಗ ಅವರಲ್ಲಿನ ತನ್ಮಯತೆಯಿಂದ ಸ್ವಯಂ ಸೀತೆಯೇ ನುಡಿಯುತ್ತಿರುವಳೋ ಎಂಬ ಭಾವ ಉಂಟಾಗುವಂತೆ ರಸಪೂರ್ಣವಾಗಿ ವಾಚಿಸಿ 'ಶ್ರೀರಾಮನಂತಹ ಪುರುಷಪುಂಗವ'ನನ್ನು ಅಂತಹ ಶೋಕದ ಪರಿಸ್ಥಿತಿಯಲ್ಲೂ ವರ್ಣಿಸಿದ ರೀತಿಯನ್ನು ಮನಮುಟ್ಟುವಂತೆ ವಿವರಿಸಿದರು. ಶ್ರೀರಾಮನ ಹೆಸರು ಬಂದೊಡನೆ ಅವರ ಬಾಯಲ್ಲಿ 'ಪುರುಷಪುಂಗವ' ಎಂಬುದು ತನಗೆ ತಾನೇ ಬರುತ್ತಿತ್ತು. ಶ್ರೀರಾಮನ ಮೇಲಿನ ಭಕ್ತಿ ಅಂತಹುದು. ಹೀಗೆ ಕಾವ್ಯ ಪ್ರಸಂಗವನ್ನು ಮನವನ್ನು ಮುಟ್ಟುವಂತೆ, ಹೃದಯವನ್ನು ತಟ್ಟುವಂತೆ ತಾದಾತ್ಮ್ಯದಿಂದ ಪಾಠ ಹೇಳುತ್ತಿರುವಾಗ ನಾವೆಲ್ಲ ಇಹಲೋಕವನ್ನು ಮರೆತು ಕಾವ್ಯಲೋಕದಲ್ಲಿ ವಿಹರಿಸುತ್ತಿದ್ದುದ್ದು ನೆನಪಿನಲ್ಲಿ ಅಚ್ಚಳಿಯದೇ ಉಳಿದಿದೆ.

ಅನಂತರ ನಾನು ಕನ್ನಡ ಆನರ್ಸ್ ತರಗತಿಗೆ ಪ್ರವೇಶ ಪಡೆದಾಗ, ಸಾಶಿಮರವರು ನಮಗೆ ಈಸ್ಕಿಲಸ್ ಕವಿಯ 'ಬದ್ಧಪ್ರಮೀತ್ಯೂಸ್' ಎಂಬ 'Prometheus Bound' ಗ್ರೀಕ್ ರುದ್ರನಾಟಕದ ಪಾಠ ಹೇಳಿದರು. ಆಗ ಗ್ರೀಕ್ ರುದ್ರನಾಟಕದ ಸಮಗ್ರವಾದ ಚರಿತ್ರೆಯನ್ನು ತಿಳಿಸಿ ಗ್ರೀಕ್ ನಾಟಕವನ್ನು ಅರ್ಥೈಸಿಕೊಳ್ಳಲು ಗ್ರೀಕ್ ಸಾಹಿತ್ಯ ಕ್ಷೇತ್ರಕ್ಕೆ ಕರೆದೊಯ್ದು ಈಸ್ಕಿಲಸ್, ಸೋಫೊಕ್ಲಿಸ್, ಯೂರಿಪಿಡೀಸ್, ನಾಟಕ ತ್ರಯರನ್ನು ಪರಿಚಯಿಸಿ, ಗ್ರೀಕ್ ದೇವತೆಗಳು,

ಗ್ರೀಕ್ ಉತ್ಸವ ಸಮಾರಂಭಗಳೆಲ್ಲವನ್ನೂ ಆಮೂಲಾಗ್ರವಾಗಿ ವರ್ಣಿಸಿ ಗ್ರೀಕ್ ನಾಟಕವನ್ನು ಆಸ್ವಾದಿಸಲು ಬೇಕಾದ ಮಾನಸಿಕ ಸಿದ್ಧತೆಯನ್ನು ಉಂಟುಮಾಡಿ (ಈ ಎಲ್ಲ ವಿವರಗಳನ್ನು ತಿಳಿಸಲು ಅವರು ಮಾಡಿಕೊಂಡಿದ್ದ ಸಿದ್ಧತೆ, ತಿಳಿಸುವ ಉತ್ಸಾಹ ನಿಜಕ್ಕೂ ಮೆಚ್ಚುವಂತಹುದು) ಮುಂದಿನ ತರಗತಿಯಲ್ಲಿ 'ಬದ್ಧ ಪ್ರಮೀತ್ಯೂಸ್' ನಾಟಕವನ್ನು ಪ್ರಾರಂಭಿಸಿದರು. ಅಂದು ತರಗತಿಗೆ ಬಂದವರೆ 'ಶಕ್ತಿ' 'ಹಿಫೀಸ್ಟಸ್'ಗೆ ಹೇಳುವ ಭಾಗವನ್ನು "ನೆಲನ ಈ ಗೆಂಟಱೆಡೆಗೆ, ಬಟೆಯಿರದ ಬಾಟೆರದ ಸಿದಿಯದೀ ಪಾಟ್ಗಿ ಮೆಟ್ಟಿದೆವು ಬಂದು ಕಟ್ಟಕಡೆಗೆ.... ಆಳ್ ಕುಡಿಯನೋವುದನ್ ಬಿಟ್ಟಪನ್" ಎಂಬುವವರೆಗೆ ಒಂದೇ ಉಸಿರಿನಲ್ಲಿ ವಾಚಿಸಿದ್ದನ್ನು ನಾವೆಲ್ಲ ಬಿಟ್ಟಕಣ್ಣು ಬಿಟ್ಟ ಬಾಯಿಂದ ನೋಡುತ್ತಿದ್ದೆವು. ಆ ಭಾಗವನ್ನು ಓದುವಾಗ 'ಶಕ್ತಿ'ಯೇ ಆವಿರ್ಭಾವವಾಗಿದೆಯೋ ಎಂಬ ಕಾಕುಕೊಂಕುಗಳನ್ನು ಬಳಸಿ ವಾಚನ ಮಾಡಿದ ರೀತಿಯಿಂದ, ಆ ಓಘದಿಂದ ಆ ಭಾಗ ಸಂಪೂರ್ಣವಾಗಿ ನನಗೆ ಕಂಠಪಾಠವಾಗಿಬಿಟ್ಟಿದೆ. ಆ ದೃಶ್ಯ ಮನದಲ್ಲಿ ನೆಲೆಸಿದೆ.

ಅನಂತರ ಎರಡನೇ ಆನರ್ಸ್‌ನಲ್ಲಿ ಅವರ ಪಾಠದಿಂದ ವಂಚಿತರಾದೆವು. ಕಾರಣ ತಿಳಿಯಲಿಲ್ಲ. ಅಂತಿಮ ಆನರ್ಸ್‌ನಲ್ಲಿ ಕೇಶೀರಾಜನ 'ಶಬ್ದಮಣಿ ದರ್ಪಣಂ' ಪಾಠ ಹೇಳಿದರು. ಕಬ್ಬಿಣ ಕಡಲೆಯಂತಿದ್ದ ವ್ಯಾಕರಣವನ್ನು ಸುಲಲಿತವಾಗಿ ಪಾಠ ಹೇಳಿ 'ವ್ಯಾಕರಣಂ ಕಲಿತು ಮರೆವುದಕೆ' ಎಂಬ ಕುವೆಂಪು ಅವರ ಮಾತನ್ನು ಸುಳ್ಳಾಗಿಸಿದರು. ಅಂದು ಅವರು ಕಂಠಪಾಠ ಮಾಡಬೇಕೆಂದು ಹೇಳಿದ ಸೂತ್ರಗಳೆಲ್ಲ ಇಂದಿಗೂ ನೆನಪಿನಲ್ಲಿದೆ. ವ್ಯಾಕರಣವನ್ನು ಓದಿ ಅರ್ಥೈಸಿಕೊಳ್ಳುವ ಮನಃಸ್ಥಿತಿಯನ್ನು ತಂದುಕೊಟ್ಟವರು. ವ್ಯಾಕರಣ ಎಂದ ಮಾತ್ರಕ್ಕೆ ನಮ್ಮನ್ನು ಬರೀ ಸೂತ್ರಗಳಲ್ಲಿ ಬಂಧಿಸುತ್ತಿರಲಿಲ್ಲ. ಕೇಶೀರಾಜನ ಲಕ್ಷ್ಯಪದ್ಯಗಳನ್ನು ವಿವರಿಸುವಾಗ ಆ ಕವಿಪರಿಚಯ ಇತ್ಯಾದಿಗಳನ್ನು ನೀಡಿ ಪದ್ಯಭಾಗವನ್ನು ವರ್ಣಿಸಿ ವ್ಯಾಕರಣ ಭಾಗಕ್ಕೆ ಹೇಗೆ ಹೊಂದಿಕೊಳ್ಳುತ್ತದೆ ಎಂಬುದನ್ನು ತಿಳಿಸುತ್ತಿದ್ದರು.

"ತನುವಾದ್ಯಂ ನಾಲಗೆ ವಾ
ಜನದಂಡಂ ಕರ್ತೃವಾತ್ಮನವನ ಮನೋವೃ
ತ್ತಿನಿಮಿತ್ತಮಾಗಿ ಶಬ್ದಂ
ಜನಿಯಿಸುಗುಂ ಧವಲವರ್ಣಮಕ್ಷರಂ ರೂಪಂ" – (ಸೂತ್ರ-೪೪)

ಎಂಬ ಸೂತ್ರದಿಂದ ಅವನಲ್ಲಿರುವ ಕಾವ್ಯ ಪ್ರತಿಭೆ ವ್ಯಕ್ತವಾಗುವುದೆಂಬುದನ್ನು ವಿವರಿಸಿದರು. ಕನ್ನಡ ವರ್ಣಮಾಲೆಯ ಬಗ್ಗೆ ಕೇಶೀರಾಜನ ಸೂತ್ರವಾದ

"ತಿಳಿ ದೇಶೀಯಮವೈದಂ
ಕಳೆ ನೀಂ ಋ ೠವರ್ಣ ಶ ಷ ವಿಸರ್ಗೱೲ
ಕ್ಷಳನಂ ನಾಲ್ವತ್ತೇಟಾ
ಯ್ತಳೆ ಶುದ್ಧಗೆಯಚ್ಚಗನ್ನಡಕ್ಕೀ ಕ್ರಮದಿಂ" – (ಸೂತ್ರ ೪೩)

ಎಂಬುದನ್ನು ತಿಳಿಸುತ್ತಾ ಕೇಶೀರಾಜನು ಶುದ್ಧಾಕ್ಷರಗಳು ಕನ್ನಡದಲ್ಲಿ ನಲವತ್ತೇಳು ಎಂದಿದ್ದಾನೆ. ಆದರೆ ಕನ್ನಡದಲ್ಲಿ ಮಹಾಪ್ರಾಣಾಕ್ಷರಗಳು ಇಲ್ಲದಿರುವುದರಿಂದ ಹತ್ತು ಮಹಾಪ್ರಾಣಾಕ್ಷರಗಳನ್ನು ಕಳೆದರೆ ಮುವ್ವತ್ತೇಳು ಅಕ್ಷರಗಳು ಕನ್ನಡದಲ್ಲಿರುವುದು ಎಂಬುದನ್ನು ಸಾಧಾರವಾಗಿ ನಿರೂಪಿಸಿದ್ದು ಇಂದಿಗೂ ಮನಃಪಟಲದಲ್ಲಿದೆ.

ಅಂತಿಮ ಆನರ್ಸ್ ಮುಗಿಯುವಷ್ಟರಲ್ಲಿ ಸಾಶಿಮ ಅವರಿಗೆ ವರ್ಗವಾಯಿತು. ಆಗ ಇಡೀ ಆನರ್ಸ್ ತರಗತಿಯೇ ತಾಯನಗಲಿದ ಕರುವಿನಂತೆ ಕಣ್ಣೀರಿಟ್ಟಿತು. ಅವರಲ್ಲಿದ್ದ ವಿಶ್ವಾಸ ಗೌರವವನ್ನು ವ್ಯಕ್ತಪಡಿಸಲು ಒಂದು ಬೀಳ್ಕೊಡುಗೆ ಸಮಾರಂಭವನ್ನು ನಮ್ಮ ತರಗತಿಯಿಂದ ಹಮ್ಮಿಕೊಂಡು ಗೌರವಿಸಿದಾಗ, ಅವರು ಹೇಳಿದ ಮಾತು ಸ್ಮರಣೀಯವಾದುದು. ಅವರು 'ನಾನು ಒಂದು ಗಂಟೆ ಪಾಠ ಹೇಳಲು ನಾಲ್ಕು ಗಂಟೆಯ ಸಿದ್ಧತೆಯನ್ನು ಮಾಡಿಕೊಳ್ಳುತ್ತೇನೆ ಆದುದರಿಂದಲೇ ನಾನು ನಿಮಗೆಲ್ಲ ಪ್ರಿಯನಾದೆ' ಎಂದು ತಮ್ಮ ಅಂತರಂಗವನ್ನು ಬಿಡಿಸಿ ಇಟ್ಟರು. ಈ ಮಾತು ಇಂದಿಗೂ ನನಗೆ ವೇದವಾಕ್ಯವಾಗಿದೆ. ನಾನೂ ಅಧ್ಯಾಪಕನಾಗಿದ್ದೇನೆ. ಅವರ ಮಾರ್ಗದರ್ಶನದಲ್ಲೇ ಸಾಗುತ್ತಿದ್ದೇನೆ. ಅವರ ಅನುಗ್ರಹ, ಆಶೀರ್ವಾದಗಳಿಂದ ಅಧ್ಯಾಪನ ವೃತ್ತಿಯಲ್ಲಿ ಸಾಫಲ್ಯವನ್ನು ಹೊಂದಲು ಆಶಿಸುತ್ತಿದ್ದೇನೆ. 'ಕಾಲಾಯ ತಸ್ಮೈ ನಮಃ' ಅಲ್ಲವೇ?

ಅನಂತರ ಸಾಕಷ್ಟು ಕಾಲ ಅವರ ಭೇಟಿ ಆಗಲೇ ಇಲ್ಲ. ಆದರೆ ೨೦೦೩ರಲ್ಲಿ ನಮ್ಮ ಬಿಎಚ್‌ಎಸ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಆದಿಕವಿ ಪಂಪನ ಬಗ್ಗೆ ವಿಚಾರಗೋಷ್ಠಿಯನ್ನು ಹಮ್ಮಿಕೊಂಡೆವು. ಆಗ ಸಾಶಿಮ ಅವರಿಂದ ಪ್ರಬಂಧ ಮಂಡನೆ ನಡೆಯಿತು. ಆಗ ಅವರನ್ನು ಹತ್ತಿರದಿಂದ ಕಂಡು ಮಾತನಾಡುವ, ಅವರನ್ನು ಗೋಷ್ಠಿಗೆ ಕರೆತರುವ ಅವಕಾಶ ನನ್ನ ಪಾಲಿಗೆ ಬಂದಿದ್ದು ನನ್ನ ಸೌಭಾಗ್ಯವೆಂದೇ ನಾನು ತಿಳಿದಿದ್ದೇನೆ. ಅವರಿಗೆ ನನ್ನ ಪರಿಚಯವನ್ನು ಹೇಳಿಕೊಂಡಾಗ, ಅವರು ತುಂಬಾ ಸಂತೋಷಪಟ್ಟರು. ನನ್ನ ಮೆಚ್ಚುಗೆಯ ಗುರುಗಳ ಬಳಿ ಮುಕ್ತವಾಗಿ ಮಾತನಾಡುವ ಅವಕಾಶ ನನಗೆ ದೊರೆತಿತ್ತು. ಹಾಗೆ ಮಾತನಾಡುವಾಗ ತಮ್ಮ ಆರೋಗ್ಯವನ್ನು ಕುರಿತು ಹೇಳುತ್ತ, ಕಣ್ಣಿನ ಸಮಸ್ಯೆಯಿಂದ ಇತ್ತೀಚೆಗೆ ಏನನ್ನೂ ಓದಲಾಗುತ್ತಿಲ್ಲ. ಆಪರೇಷನ್ ಮಾಡಿಸಬೇಕು. ಅನಂತರ ಓದನ್ನು ಮುಂದುವರೆಸಬೇಕೆಂದಾಗ, ಅವರ ಇಳಿವಯಸ್ಸಿನಲ್ಲೂ ಅವರಿಗಿರುವ ಜ್ಞಾನದಾಹವನ್ನು ಕಂಡು ಬೆರಗಾದೆ. ಹಾಗೆಯೇ ಅವರು ಇಂದಿನ ಉಪನ್ಯಾಸಕರು ಹಳಗನ್ನಡವನ್ನು ಪಾಠ ಹೇಳಲಾಗದ ಸ್ಥಿತಿಯನ್ನು ತಲುಪಿರುವುದನ್ನು ಪ್ರಸ್ತಾಪಿಸಿ, ತುಂಬಾ ನೊಂದುಕೊಂಡರು. ಅದನ್ನು ವಿಚಾರಗೋಷ್ಠಿಯ ವೇದಿಕೆಯಲ್ಲೂ ಪ್ರಸ್ತಾಪಿಸಿದರು. ಹಾಗೂ ಇಂದಿನ ವಿದ್ಯಾರ್ಥಿಗಳು ಹಳಗನ್ನಡ ಸಾಹಿತ್ಯದಿಂದ ವಂಚಿತರಾಗುತ್ತಿರುವುದನ್ನು ಕಂಡು ಮರುಗಿದರು. ಕನ್ನಡದ ವಿದ್ಯಾರ್ಥಿಗಳಿಗೆ ಹಳಗನ್ನಡ ಸಾಹಿತ್ಯದ ಭದ್ರ ಬುನಾದಿಯಿರಬೇಕೆಂಬುದು ಅವರ ನಿಲುವಾಗಿತ್ತು.

ಇತ್ತೀಚೆಗೆ ೨೨ನೆಯ ಜನವರಿ ೨೦೦೮ರಲ್ಲಿ 'ಸಿಂಚನ; ಕನ್ನಡ ವೇದಿಕೆ' ಪ್ರಕಟಿಸಿದ 'ಸೌಜನ್ಯ ಮತ್ತು ಸಂಸ್ಕೃತಿ' ಎಂಬ ಕೃತಿಯಲ್ಲಿ ಲೇಖನವೊಂದನ್ನು ಬರೆದಿದ್ದೆ. ಆ ಕೃತಿಯ ಲೋಕಾರ್ಪಣೆಯ ಕಾರ್ಯಕ್ರಮಕ್ಕೆ ಸಾಶಿಮ ಅವರು ಆಗಮಿಸಿ ಕೃತಿಯನ್ನು ಲೋಕಾರ್ಪಣೆ

ಮಾಡಿದರು. ಹಾಗೆಯೇ ವೇದಿಕೆಯು ಲೇಖಕರಿಗೆ ಏರ್ಪಡಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಎಲ್ಲರನ್ನೂ ಸನ್ಮಾನಿಸಿದಾಗ, ನನ್ನ ಪೂಜ್ಯ ಗುರುಗಳಿಂದ ಸನ್ಮಾನ ಪಡೆದುಕೊಂಡದ್ದು, ನನಗೆ ಅತ್ಯಂತ ಅವಿಸ್ಮರಣೀಯವಾದ ಪ್ರಸಂಗವಾಯಿತು. ಅದಾದ ನಂತರ ಈಗ ಅವರನ್ನು ಆಗಾಗ ಕಾಣುವ ಅವಕಾಶ ಹಾಗೂ ಅವರೊಂದಿಗೆ ದೂರವಾಣಿಯಲ್ಲಿ ಸಂಭಾಷಣೆ ನಡೆಸುವ ಪ್ರಸಂಗಗಳು ಬರುತ್ತಿವೆ. ತನ್ನ ವಿದ್ಯಾರ್ಥಿ ಎಂದು ಅವರಿಗೆ ತಿಳಿದರೂ ಅವರು ಎಂದೂ ಏಕವಚನವನ್ನು ಬಳಸಿಲ್ಲ. ಅವರು ನನ್ನನ್ನು 'ಸರ್' ಎಂದು ಸಂಬೋಧಿಸಿದಾಗ ಮುಜುಗರವಾದರೂ, ಅವರಲ್ಲಿರುವ ಸೌಜನ್ಯಕ್ಕೆ ನಾನು ಮೂಕನಾಗಿದ್ದೇನೆ. ನನ್ನ ಗುರುಗಳಾದ ಸಾಶಿಮ ಅವರು ಜ್ಞಾನವೃದ್ಧರು. ಸೌಜನ್ಯದ ಸಾಕಾರ ಮೂರ್ತಿಗಳು, ತಮ್ಮ ಮಾತಿನ ಮೋಡಿಯಿಂದ ಸಾವಿರಾರು ವಿದ್ಯಾರ್ಥಿಗಳನ್ನು ಮರುಳು ಮಾಡಿದವರು, ವಿದ್ಯಾರ್ಥಿಗಳ ನೆಚ್ಚಿನ ಮೆಚ್ಚಿನ ಗುರುಗಳು, ನನಗಂತೂ ಅವರು ಪ್ರಾತಃಸ್ಮರಣೀಯರು. ಜ್ಞಾನಚೈತನ್ಯ ತುಂಬಿದ ಶಕ್ತಿಸಂಜೀವಿನಿ ಅವರು.

❖

# ನನ್ನ ಮೆಚ್ಚಿನ ಗುರು
## (ಡಾ॥ ಸಾ. ಶಿ. ಮರುಳಯ್ಯ)

• *ಬಿ.ಕೆ. ಗೋಪಣ್ಣ*

ಸಾವಿರದೊಂಬೈನೂರರವತ್ತೆಂಟನೆಯ ವರ್ಷದ ಜೂನ್ ತಿಂಗಳು. ಬೆಂಗಳೂರು ಸರ್ಕಾರಿ ಕಾಲೇಜಿನ ಪ್ರಥಮ ವರ್ಷದ ವಿಜ್ಞಾನ ತರಗತಿ. ಕನ್ನಡದ ಅಧ್ಯಾಪಕರಾಗಿದ್ದ ಶ್ರೀ ಜಿ. ಬ್ರಹ್ಮಪ್ಪ ಅವರು ಇದ್ದಕ್ಕಿದ್ದಂತೆ ತರಗತಿಯ ಒಳಗೆ ಬಂದರು. ಎಲ್ಲಾ ವಿದ್ಯಾರ್ಥಿಗಳು ಗೌರವ ಪೂರ್ವಕವಾಗಿ ಎದ್ದು ನಿಂತರು. ವಿದ್ಯಾರ್ಥಿಗಳನ್ನು ಕುಳಿತುಕೊಳ್ಳಲು ತಿಳಿಸುತ್ತಾ, ನೋಡ್ರಯ್ಯಾ! ಈಗ ಮುಖ್ಯವಾದ ಒಂದು ವಿಷಯ ನಿಮಗೆಲ್ಲಾ ತಿಳಿಸಬೇಕಾಗಿದೆ. ನಮ್ಮ ಕಾಲೇಜಿನಲ್ಲಿ ಕನ್ನಡ ಮತ್ತು ಇಂಗ್ಲಿಷ್ ಆನರ್ಸ್ ತರಗತಿಗಳು ಈ ವರ್ಷದಿಂದ ಪ್ರಾರಂಭವಾಗುತ್ತೆ. ಎಲ್ಲಾ ವಿದ್ಯಾರ್ಥಿಗಳಿಗೆ ಆನರ್ಸ್ ಓದುವ ಸುದೈವ ಸಿಕ್ಕಿದೆ. ಪಿಯುಸಿ ಕನ್ನಡದಲ್ಲಿ ಶೇಕಡ ೫೦ಕ್ಕಿಂತ ಹೆಚ್ಚಾಗಿ ಅಂಕ ಪಡೆದಿರುವ ವಿದ್ಯಾರ್ಥಿಗಳು ಎದ್ದು ನಿಲ್ಲಿ ಅಂದರು. ಆಗ ತರಗತಿಯಲ್ಲಿ ಐದಾರು ಮಂದಿ ಮಾತ್ರ ನಿಂತುಕೊಂಡೆವು. ನೀವೆಲ್ಲಾ ನನ್ನ ಜೊತೆ ಬನ್ನಿ ಎಂದು ಕನ್ನಡ ವಿಭಾಗದ ಕೊಠಡಿಗೆ ಕರೆದುಕೊಂಡು ಹೋದರು. ಅಲ್ಲಿಗೆ ಹೋಗುತ್ತಿದ್ದಂತೆ ನಮ್ಮ ಕೈಗೆ ಒಂದೊಂದು ಬಿಳಿಹಾಳೆ ಕೊಟ್ಟರು. ಕನ್ನಡ ಆನರ್ಸ್ ತರಗತಿಗೆ ಸೇರುವುದಾಗಿ ಪ್ರಾಂಶುಪಾಲರಿಗೆ ಪತ್ರ ಬರೆಯಿರಿ ಎಂದು, ಏನು ಬರೆಯಬೇಕು, ಹೇಗೆ ಬರೆಯಬೇಕು ಎಂಬುದನ್ನು ಹೇಳಿ ಬರೆಸಿದರು. ನಾವೆಲ್ಲಾ ಪತ್ರಗಳನ್ನು ಬರೆದು ಸಹಿಮಾಡಿದ ನಂತರ ಅವನ್ನು ಕೈಗೆ ತೆಗೆದುಕೊಂಡು ನೋಡ್ರಯ್ಯಾ! ಈಗಿನ ಕಾಲದಲ್ಲಿ ಬೆಳೆದಿರೊ ಹೆಣ್ಣುಮಕ್ಕಳಿಗೆ ಗಂಡು ಸಿಗೋದು, ಕನ್ನಡ ಪದವೀಧರ ಸಿಕ್ಕೋದು ಎರಡೂ ಒಂದೇ, ನೀವು ಉದ್ಧಾರವಾಗ್ತೀರಿ ಹೋಗಿ. ನಾಳೆಯಿಂದ ಹೊಸ ತರಗತಿಯಲ್ಲಿ ಆಸೀನರಾಗಿ ಎಂದು ನಿರ್ದೇಶಿಸಿದರು.

ವಿಜ್ಞಾನದ ವಿದ್ಯಾರ್ಥಿಗಳಾಗಿದ್ದ ನಮಗೆ ಕನ್ನಡ ಆನರ್ಸ್ ಬಗ್ಗೆ ಏನೂ ತಿಳಿದಿರಲಿಲ್ಲ. ಎಲ್ಲಾ ವಿವರಗಳನ್ನು, ಆನರ್ಸ್ ಪದವಿಯ ಮಹತ್ವವನ್ನು ತಿಳಿಸಿದರು. ಮಾರನೆಯ ದಿನ ಹೊಸ ತರಗತಿಗೆ ಬಂದಾಗ ಕೇವಲ ಹದಿನಾಲ್ಕು ಮಂದಿ ವಿದ್ಯಾರ್ಥಿಗಳು ಮಾತ್ರ ತರಗತಿ ಯಲ್ಲಿದ್ದೆವು.

ಮೊದಲನೆಯ ವರ್ಷ ಮುಗಿದು ಎರಡನೆಯ ವರ್ಷದ ತರಗತಿಗಳು ಪ್ರಾರಂಭ ವಾಗುತ್ತಿದ್ದಂತೆ ಶಿವಮೊಗ್ಗ ಸರ್ಕಾರಿ ಕಾಲೇಜಿನಿಂದ ನಮ್ಮ ಕಾಲೇಜಿಗೆ ವರ್ಗಾವಣೆಯಾಗಿ ಬಂದವರೇ ಡಾ॥ ಸಾ. ಶಿ. ಮರುಳಯ್ಯ. ಸಮಕಾಲೀನ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಾಶಿಮ

ಎಂದೇ ಪ್ರಸಿದ್ಧರಾಗಿರುವ ಅವರು ನನ್ನ ವಿದ್ಯಾರ್ಥಿ ದೆಸೆಯಲ್ಲಿ ಮಾತ್ರವಲ್ಲದೆ ಉಪಾಧ್ಯಾಯನಾಗಿ, ಉಪನ್ಯಾಸಕನಾಗಿ, ಕೊನೆಗೆ ಬಿಇಎಲ್ ಪದವಿಪೂರ್ವ ಕಾಲೇಜಿನಲ್ಲಿ ಪ್ರಾಚಾರ್ಯನಾಗಿ ನಿವೃತ್ತನಾಗುವವರೆಗೆ ನನ್ನ ಮೇಲೆ ಅಪರಿಮಿತವಾದ ಪ್ರಭಾವ ಬೀರಿದವರು.

ಡಾ॥ ಸಾಶಿಮ ರವರು ದೇವರದಾಸಿಮಯ್ಯನ ವಚನಗಳನ್ನು ಆ ವರ್ಷ ನಮಗೆ ಬೋಧನೆ ಮಾಡಿದರು. ತರಗತಿ ಕೇವಲ ದಾಸಿಮಯ್ಯನ ವಚನಗಳಿಗೆ ಮಾತ್ರ ಸೀಮಿತವಾಗಿರದೆ ಸಮಗ್ರ ವಚನಸಾಹಿತ್ಯದ ಅನುಭವವಾಗುವಂತೆ ಪ್ರೇರೇಪಿಸುತ್ತಿದ್ದರು. ಮುಂದಿನ ವರ್ಷ ಕಾವ್ಯಮೀಮಾಂಸಾ ಬೋಧನೆ. ಪ್ರತಿದಿನ ಒಂದೊಂದು ಗಂಟೆ ಪಾಠ. ಕಾವ್ಯಶಾಸ್ತ್ರದ ವಿವಿಧ ಅಂಶಗಳನ್ನು ಆಳವಾಗಿ ಉದಾಹರಣೆಗಳೊಂದಿಗೆ ತಿಳಿಸುತ್ತಿದ್ದ ರೀತಿ ಮರೆಯಲಸಾಧ್ಯ. ಅವರ ಬೋಧನಾ ವೈಖರಿ ಅನನ್ಯ. ಕಾವ್ಯಮೀಮಾಂಸೆಯ ಬೋಧನೆಯ ಜೊತೆಜೊತೆ ಸಾಹಿತ್ಯದ ಎಲ್ಲಾ ಪ್ರಕಾರಗಳನ್ನು ಸಿಂಹಾವಲೋಕನ ಕ್ರಮದಲ್ಲಿ ಸಮಸ್ತ ಕನ್ನಡ ಸಾಹಿತ್ಯ ಲೋಕವನ್ನು ಪರಿಚಯಿಸಿದರು. ಅವರ ಆಕರ್ಷಣೀಯ ಬೋಧನೆ ನಮ್ಮಲ್ಲಿ ಕನ್ನಡತನ ಮೂಡಿಸಿತು. ವರ್ಷ ಎಷ್ಟು ಬೇಗನೆ ಮುಗಿಯಿತೆಂದು ತಿಳಿಯಲೇ ಇಲ್ಲ. ಎಂ.ಎ. ಮುಂದುವರಿಸಿದ ನನ್ನ ಗೆಳೆಯರು ಆನರ್ಸ್ ತರಗತಿಗಳಲ್ಲಿ ಸಾಶಿಮ ಬೋಧಿಸಿದ ಕಾವ್ಯಮೀಮಾಂಸೆ ಅಲ್ಲಿ ಸಾಕಷ್ಟು ಪ್ರಯೋಜನವಾಯಿತೆಂದು ತಿಳಿಸಿದರು.

ಆನರ್ಸ್ ಫಲಿತಾಂಶ ಬಂದ ದಿನ ಕಾಲೇಜಿನ ಬಳಿ ಎಲ್ಲಾ ಗೆಳೆಯರು ಬಂದಿದ್ದರು. ಆಗ ಸಾಶಿಮ ರವರನ್ನೂ ಭೇಟಿಯಾದೆವು ಎಲ್ಲರ ಯೋಗಕ್ಷೇಮ ವಿಚಾರಿಸಿ ಕನ್ನಡ ಎಂ.ಎ. ಸೇರುವಂತೆ ಸಲಹೆ ನೀಡಿದರು. ಮುಂದೆ ಅಧ್ಯಯನ ಮಾಡಬೇಕಾದ ಬಗ್ಗೆ ಸೂಕ್ಷ್ಮ ವಿವರಣೆಯನ್ನೂ ನೀಡಿದರು.

ಆ ವರ್ಷ ನಡೆದ ಎರಡು ಘಟನೆಗಳನ್ನು ನಾನು ಮರೆಯಲಾಗದು. ಒಂದು ಆಗ ತಾನೇ ಸುಗಮ ಸಂಗೀತ ಕ್ಷೇತ್ರದಲ್ಲಿ ಹೆಸರು ಮಾಡುತ್ತಿದ್ದ ಶಿವಮೊಗ್ಗ ಸುಬ್ಬಣ್ಣ ನಮ್ಮ ಕಾಲೇಜಿಗೆ ಸಾಶಿಮ ರವರನ್ನು ಕಾಣಲು ಬಂದಿದ್ದರು. ಅವರ ಮಾತುಕತೆಯಲ್ಲಾ ಮುಗಿದ ಬಳಿಕ ನಮ್ಮನ್ನೆಲ್ಲಾ ಕರೆಸಿ ಕನ್ನಡ ಆನರ್ಸ್ ವಿದ್ಯಾರ್ಥಿಗಳಾದ ನಮ್ಮನ್ನು ಅವರಿಗೆ ಪರಿಚಯಿಸಿದರು.

ಮತ್ತೊಂದು ಘಟನೆ ಮೂರುವರ್ಷಗಳ ಅಧ್ಯಯನದ ತರುವಾಯ ಕಾಲೇಜಿಗೆ ವಿದಾಯ ಹೇಳುವ ಸಮಯ. ಅನುಭವಗಳನ್ನು ಮೆಲುಕು ಹಾಕುತ್ತಾ, ಗುರುಗಳಿಗೆ ಕೃತಜ್ಞತಾಪೂರ್ವಕವಾಗಿ ಗೌರವ ಅರ್ಪಿಸಿ ಆಶೀರ್ವಾದ ಪಡೆಯುವ ಬೀಳ್ಕೊಡಿಗೆ ಸಮಾರಂಭ. ಎಲ್ಲಾ ಅಧ್ಯಾಪಕರು ಮಾತನಾಡಿದ ನಂತರ ಡಾ॥ ಸಾಶಿಮ ರವರ ಮಾತು. ಆನರ್ಸ್ ವಿದ್ಯಾರ್ಥಿಗಳಾದ ನಮ್ಮ ಸಾಹಿತ್ಯಾಭ್ಯಾಸ ಏನೇನೂ ಸಾಲದೆಂದು, ಆನರ್ಸ್ ವಿದ್ಯಾರ್ಥಿಗಳು ಸದಾಕಾಲ ಅಧ್ಯಯನ ಶೀಲರಾಗಬೇಕೆಂದು, ಸೃಜನಶೀಲ ಬರವಣಿಗೆಯನ್ನು ರೂಢಿಸಿಕೊಳ್ಳಬೇಕೆಂದು ತಿಳಿಸಿದರು.

ನಮ್ಮ ಮನೆಯ ಆರ್ಥಿಕ ಮುಗ್ಗಟ್ಟಿನಿಂದ ವಿದ್ಯಾಭ್ಯಾಸವನ್ನು ಮುಂದುವರೆಸಲಾಗಲಿಲ್ಲ.

ದೈವಾನುಗ್ರಹದಿಂದ ಪ್ರೌಢಶಾಲೆಯೊಂದರಲ್ಲಿ ಶಿಕ್ಷಕ ವೃತ್ತಿ ದೊರೆಯಿತು. ನನ್ನ ಪುಣ್ಯವೆಂಬಂತೆ ಆ ವರ್ಷ ಶಾಲಾ ವಾರ್ಷಿಕೋತ್ಸವಕ್ಕೆ ಡಾ॥ ಸಾಶಿಮ ರವರೇ ಮುಖ್ಯ ಅತಿಥಿಗಳು. ಕಾರ್ಯಕ್ರಮದಲ್ಲಿ ಪಾಲ್ಗೊಂಡ ಅವರು ವಿದ್ಯಾರ್ಥಿಗಳ ಪ್ರತಿಭೆಯನ್ನು ನೋಡಿ ಮೆಚ್ಚುಗೆ ಸೂಚಿಸಿದರು. ಇದಾದ ಹಲವಾರು ವರುಷಗಳ ತರುವಾಯ ಪಠ್ಯಪುಸ್ತಕ ನಿರ್ದೇಶನಾಲಯದಲ್ಲಿ ಮತ್ತೆ ನಮ್ಮಿಬ್ಬರಿಗೂ ಒಟ್ಟಿಗೆ ಕೆಲಸಮಾಡುವ ಅವಕಾಶ ದೊರಕಿತು. ಹತ್ತನೆಯ ತರಗತಿ ಪಠ್ಯಪುಸ್ತಕ ರಚನಾ ಸಮಿತಿಗೆ ಸಾಶಿಮ ಅಧ್ಯಕ್ಷರು. ಏಳನೆಯ ತರಗತಿಯ ಪಠ್ಯಪುಸ್ತಕ ರಚನಾ ಸಮಿತಿ ಸದಸ್ಯ ನಾನು. ಈ ಕಾರ್ಯಕ್ಕಾಗಿ ಹಲವಾರು ಸಭೆಗಳು. ಮತ್ತೆ ಗುರುಗಳ ಮಾರ್ಗದರ್ಶನ, ಹೀಗೆ ೭–೮ ತಿಂಗಳ ಸತತ ಪರಿಶ್ರಮದ ಫಲ ಹೊಸ ಪಠ್ಯಪುಸ್ತಕಗಳ ರಚನೆಯಾಯಿತು.

ಅನಂತರ ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿ 'ಕನಿಷ್ಠ ಕಲಿಕಾ ಹಂತಗಳ ಕಾರ್ಯಕ್ರಮ' ಯೋಜಿಸಿತು. ಪ್ರಾಥಮಿಕ ತರಗತಿಗಳಲ್ಲಿ ಪ್ರತಿ ವಿದ್ಯಾರ್ಥಿ ಕಲಿಯಲೇಬೇಕಾದ ಕನಿಷ್ಠ ಕಲಿಕಾ ಅಂಶಗಳನ್ನು ತರಗತಿವಾರು ಪ್ರತಿ ಪಠ್ಯದಲ್ಲಿ ಗುರುತಿಸಿ, ಅವನ್ನು ಬೋಧಿಸುವ ವಿಧಾನ, ಅನುಸರಿಸಬೇಕಾದ ತಂತ್ರಜ್ಞಾನ, ನೀಡಬೇಕಾಗಿರುವ ಉದಾಹರಣೆಗಳು ಇತ್ಯಾದಿಗಳನ್ನೊಳಗೊಂಡ ಪುಸ್ತಕಗಳ ರಚನಾಕಾರ್ಯ ಪ್ರಾರಂಭವಾಯಿತು. ಸಾಶಿಮರವರ ಮಾರ್ಗದರ್ಶನದಲ್ಲಿ ಎರಡನೇ ತರಗತಿಯ ಪುಸ್ತಕ ಸಿದ್ಧಪಡಿಸುವ ಕಾರ್ಯ ನನ್ನದಾಯಿತು.

ಪದವಿಪೂರ್ವ ಶಿಕ್ಷಣ ಇಲಾಖೆಯು ಬದಲಾಗುತ್ತಿರುವ ಸಾಮಾಜಿಕ ಹಾಗೂ ಆರ್ಥಿಕ ಜೀವನಕ್ಕೆ ತಕ್ಕಂತೆ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಲು ಸಹಕಾರಿಯಾಗುವಂತೆ ಬೋಧನಾ ಉದ್ದೇಶಗಳನ್ನು ಬದಲಾಯಿಸಲು ತೀರ್ಮಾನಿಸಿತು. ಈ ದಿಸೆಯಲ್ಲಿ ವಿದ್ಯಾರ್ಥಿಗಳಿಗೆ ಒದಗುವ ಸವಾಲುಗಳನ್ನು ಸುಲಲಿತವಾಗಿ ಪರಿಹರಿಸಿಕೊಳ್ಳುವ ಪರಿಪೂರ್ಣತೆಯನ್ನು ನೀಡುವ ನಿಟ್ಟಿನಲ್ಲಿ ಪಠ್ಯವಸ್ತು ಪರಿಷ್ಕರಣಾ ಕಾರ್ಯವನ್ನು ಕೈಗೊಂಡಿತು. ಸಾಮಾನ್ಯ ಕನ್ನಡ ಪಠ್ಯವಸ್ತುವನ್ನು ಸಿದ್ಧಪಡಿಸುವ ಮಹತ್ತರವಾದ ಜವಾಬ್ದಾರಿಯನ್ನು ಡಾ॥ ಸಾ. ಶಿ. ಮರುಳಯ್ಯನವರ ಅಧ್ಯಕ್ಷತೆಯಲ್ಲಿನ ಸಮಿತಿಗೆ ವಹಿಸಲಾಯಿತು. ನಾನು ಆ ಸಮಿತಿಯ ಕಾರ್ಯಕಾರಿ ಸದಸ್ಯನಾಗಿದ್ದೆ.

ಅಧ್ಯಕ್ಷರ ಮಾರ್ಗದರ್ಶನದಲ್ಲಿ ಸಿದ್ಧವಾದ ಕರಡು ಪಠ್ಯಕ್ರಮ ರಾಜ್ಯದ ಎಲ್ಲಾ ಕಾಲೇಜುಗಳಿಗೂ ಕಳುಹಿಸಿಕೊಡಲಾಯಿತು. ಕಾಲೇಜು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಹಲವಾರು ಸಭೆಗಳು, ಸಂವಾದ ಕಾರ್ಯಕ್ರಮಗಳು, ಕಮ್ಮಟಗಳು, ಸಂಕಿರಣಗಳು, ನಡೆದು ಚರ್ಚಿಸಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಇದಲ್ಲದೆ ನೂತನ ಪಠ್ಯಕ್ರಮ ಕುರಿತಂತೆ ದ್ವಿತೀಯ ಪಿಯುಸಿ ಮೌಲ್ಯಮಾಪನ ಕೇಂದ್ರಗಳಲ್ಲೂ ಸಮಿತಿಯೊಡನೆ ಉಪನ್ಯಾಸಕ ಹಾಗೂ ಪ್ರಾಂಶುಪಾಲ ಮಿತ್ರರು ನೇರ ಸಂವಾದದಲ್ಲಿ ಪಾಲ್ಗೊಂಡು ತಮ್ಮ ತಮ್ಮ ಅಭಿಪ್ರಾಯಗಳನ್ನು ಸಲಹೆಗಳನ್ನು ನೀಡಿದರು. ಪದವಿಪೂರ್ವ ಶಿಕ್ಷಣ ಪ್ರೌಢಶಾಲಾ ಶಿಕ್ಷಣದ ಮುಂದುವರಿದ ಶಿಕ್ಷಣ ಕ್ರಮ ವಾಗಿರುವುದರಿಂದ ರಾಜ್ಯ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ಆಶ್ರಯದಲ್ಲಿ ಮತ್ತೊಂದು

ಸಭೆ ನಡೆಯಿತು. ಹಲವಾರು ಉಪಯುಕ್ತ ಮಾಹಿತಿಗಳು ದೊರೆತವು. ಈ ಒಟ್ಟಾರೆ ಎಲ್ಲಾ ಸಭೆಗಳಿಂದ ಬಂದ ಸಲಹೆ ಸೂಚನೆಗಳನ್ನು, ಅಭಿಪ್ರಾಯಗಳನ್ನು ಕುರಿತು ಚರ್ಚಿಸಿ ಕೊನೆಗೆ ಪ್ರಥಮ ಮತ್ತು ದ್ವಿತೀಯ ಪಿ.ಯು. ತರಗತಿಗಳ ಪಠ್ಯವಸ್ತುವನ್ನು ಸಿದ್ಧಪಡಿಸಲಾಯಿತು.

ಅನಂತರ ಪಠ್ಯಪುಸ್ತಕ ತಯಾರಿಕಾ ಕಾರ್ಯ. ಇದಕ್ಕಾಗಿ ಬೆಂಗಳೂರು, ಗುಲ್ಬರ್ಗಾ, ಬೆಳಗಾವಿಗಳಲ್ಲಿ ಹಲವಾರು ಸಭೆಗಳನ್ನು ನಡೆಸಲಾಯಿತು. ಪ್ರಥಮ ಪಿ.ಯು. ವಿದ್ಯಾರ್ಥಿಗಳ ಬೌದ್ಧಿಕ ಮಟ್ಟಕ್ಕೆ ತಕ್ಕಂತೆ-ಸಾಹಿತ್ಯದ ಎಲ್ಲಾ ಪ್ರಕಾರಗಳು ಒಳಗೊಂಡ ಪಾಠಗಳ ಆಯ್ಕೆ. ಆಯ್ಕೆಯಾದ ಭಾಗಗಳ ಕೂಲಂಕಷ ಚರ್ಚೆ. ಜೊತೆಗೆ ಆ ಪಾಠಗಳಿಗೆ ತಕ್ಕಂತೆ ನೀಡಬೇಕಾಗಿರುವ ಆಶಯ, ಟಿಪ್ಪಣಿ ಹಾಗೂ ಅಭ್ಯಾಸ ಭಾಗಗಳು ಇತ್ಯಾದಿ. ಎಲ್ಲಾ ಹಂತಗಳಲ್ಲಿ ಅಧ್ಯಕ್ಷರು ನೀಡುತ್ತಿದ್ದ ಸಲಹೆ, ಮಾರ್ಗದರ್ಶನ ಅನುಕರಣೀಯವಾದುದು. ಪರ ಊರುಗಳಿಗೆ ಸಭೆಗಳಿಗಾಗಿ ಹೋಗಲು ಪ್ರಯಾಣಿಸುತ್ತಿದ್ದಾಗ ಹಾಗೂ ಬಿಡುವಿನ ವೇಳೆಯಲ್ಲಿ ಅಲ್ಲಿಯ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸುತ್ತಿದ್ದಾಗ ಡಾ॥ ಸಾಶಿಮ ರವರು ಎಲ್ಲರೊಡನೆ ಆತ್ಮೀಯವಾಗಿ ವರ್ತಿಸುತ್ತಿದ್ದರು.

ಸುಮಾರು ಎಂಟು–ಒಂಬತ್ತು ತಿಂಗಳ ಕಾಲ ಹಲವಾರು ಸಭೆಗಳಲ್ಲಿ ಚರ್ಚಿಸಿ ವಾದವಿವಾದಗಳ ನಂತರ ಸಿದ್ಧಪಡಿಸಿದ ಕರಡು ಪಠ್ಯ ರಾಜ್ಯದ ಮೂಲೆಮೂಲೆಗಳಿಂದ ಆಗಮಿಸಿದ್ದ ಐವತ್ತು ಮಂದಿ ನುರಿತ ಉಪನ್ಯಾಸಕ ಹಾಗೂ ಪ್ರಾಂಶುಪಾಲರ ಸಮ್ಮುಖದಲ್ಲಿ ಏಳು ದಿನಗಳವರೆಗೂ ವಿಶೇಷ ಕಮ್ಮಟವನ್ನು ಬೆಂಗಳೂರಿನಲ್ಲಿರುವ ಪದವಿಪೂರ್ವ ಕಾಲೇಜಿನ ಆಶ್ರಯದಲ್ಲಿ ನಡೆಸಲಾಯಿತು. ಪ್ರಥಮ ಪಿ.ಯು. ಪಠ್ಯಕ್ಕಾಗಿ ಆಯ್ಕೆ ಮಾಡಿಕೊಂಡಿದ್ದ ಎಲ್ಲಾ ಗದ್ಯ ಪದ್ಯ ಭಾಗಗಳ ಕೂಲಂಕಷ ಚರ್ಚೆಯಾಗಿ ಸಿದ್ಧಪಡಿಸಿದ್ದ ಅಭ್ಯಾಸಗಳನ್ನು ಪರಿಪೂರ್ಣವಾಗಿ ಪರಿಷ್ಕರಿಸಿ ಪ್ರಥಮ ಪಿ.ಯು. ತರಗತಿಯ ವಿದ್ಯಾರ್ಥಿಗಳ ಮಟ್ಟಕ್ಕೆ ಅನುಗುಣವಾಗಿ ರೂಪುಗೊಂಡಿದೆ ಎಂದು ತೀರ್ಮಾನ ಮಾಡಲಾಯಿತು.

ಇದೇ ಕರಡು ಪ್ರತಿಯನ್ನು ಮತ್ತೆ ವಿವಿಧ ವಿಭಾಗಗಳಲ್ಲಿ ನಡೆದ ಕಮ್ಮಟಗಳಲ್ಲಿ ಮತ್ತೊಮ್ಮೆ ಚರ್ಚೆಗಾಗಿ ಕಳುಹಿಸಲಾಯಿತು. ಆಗ ಬಂದ ಅಭಿಪ್ರಾಯ ಸ್ವಲ್ಪ ಭಿನ್ನವಾಗಿದ್ದು, ಆಯ್ಕೆಯಲ್ಲಿನ ಕೆಲವು ಭಾಗಗಳ ಬಗ್ಗೆ ವಿರೋಧ ವ್ಯಕ್ತವಾಯಿತು. ಆಗ ಇಲಾಖೆಯು ಮತ್ತೊಮ್ಮೆ ಪರಿಷ್ಕರಿಸುವಂತೆ ಅಧ್ಯಕ್ಷರನ್ನು ವಿನಂತಿಸಿಕೊಂಡಿತು. ಏಳು-ಎಂಟು ತಿಂಗಳ ಕಾರ್ಯ ಸಫಲವಾಗಲಿಲ್ಲ.

ಅನಂತರ ಅಧ್ಯಕ್ಷರು ನಾಡಿನ ಪ್ರಮುಖ ಸಾಹಿತಿಗಳೊಡನೆ ವಿಚಾರ ವಿನಿಮಯ ಮಾಡಿಕೊಂಡು ಪ್ರಥಮ ಪಿ.ಯು. ಹೊಸ ಪಠ್ಯಪುಸ್ತಕ ತಯಾರಿಕೆಗೆ ಮೊದಲು ಮಾಡಿದರು. ತಮ್ಮ ಆರೋಗ್ಯದ ಕಡೆಗೂ ಗಮನ ಕೊಡದೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿಯೇ ಕುಳಿತು ಹೊಸ ಪಠ್ಯಪುಸ್ತಕವನ್ನು, ಕೇವಲ ೨೨ ದಿನಗಳಲ್ಲಿ ಸಿದ್ಧಪಡಿಸಿದರು. ಸಮಿತಿಯ ಸದಸ್ಯರೆಲ್ಲಾ ಅಧ್ಯಕ್ಷರ ಮಾರ್ಗದರ್ಶನದಂತೆ ಅವಿರತವಾಗಿ ಕಾರ್ಯ ನಿರ್ವಹಿಸಿದರು. ಆಗ ಡಾ॥ ಸಾಶಿಮ ರವರ ಮನದಾಳದಲ್ಲಿ ಉಂಟಾಗುತ್ತಿದ್ದ ಆಲೋಚನೆಗಳು, ಅವರು ಅನುಭವಿಸುತ್ತಿದ್ದ ವೇದನೆ

ಅಕ್ಷರಗಳಿಗೆ ನಿಲುಕದವು. ಆದರೆ ಪೂರ್ಣಪುಸ್ತಕ ಸಿದ್ಧವಾದಾಗ ಅವೆಲ್ಲಾ ಅಗೋಚರವಾದವು. ಕಾರ್ಯಸಾಧನೆಗಾಗಿ ಶ್ರಮಿಸುತ್ತಿದ್ದಾಗ ಉಂಟಾಗುವ ಅಡಚಣೆಗಳನ್ನು ಹೇಗೆ ಎದುರಿಸಬೇಕು ಎಂಥಾ ಮನೋಸ್ಥೈರ್ಯ ಪಡೆಯಬೇಕು ಎಂಬುದು ಅವರೊಡನೆ ನಿಕಟವಾದ ಸಂಪರ್ಕ ಪಡೆದಿದ್ದ ನನಗೆ ಇವೆಲ್ಲಾ ಗ್ರಹಿಸಲು ಸಾಧ್ಯವಾಯಿತು.

ಹೊಸ ಪಠ್ಯಕ್ರಮಕ್ಕೆ ಅನುಗುಣವಾಗಿ ಅಭ್ಯಾಸ ಪುಸ್ತಕವನ್ನು ಮೊಟ್ಟಮೊದಲ ಬಾರಿಗೆ ಪದವಿಪೂರ್ವ ಶಿಕ್ಷಣ ಇಲಾಖೆಯು ಪರಿಚಯಿಸಿತು. ಕನ್ನಡ ಭಾಷಾಕಲಿಕೆಯಲ್ಲಿ ಅಭ್ಯಾಸ ಪುಸ್ತಕಗಳ ತಯಾರಿ ಒಂದು ಸವಾಲಾಗಿ ಪರಿಣಮಿಸಿತು. ಇದಕ್ಕೆ ಸಮಿತಿಯ ಸದಸ್ಯರ ಜೊತೆಗೆ ಹಲವಾರು ಅನುಭವಿ ಉಪನ್ಯಾಸಕರು, ಪ್ರಾಂಶುಪಾಲರುಗಳ ಸಹಾಯವನ್ನೂ ಪಡೆಯುವ ಸಲುವಾಗಿಯೇ ಎರಡು – ಮೂರು ಸಭೆಗಳನ್ನು ನಡೆಸಿದರು. ಪಠ್ಯಪುಸ್ತಕದ ಪ್ರತಿಯೊಂದು ಪಾಠಕ್ಕೆ ಸಂಬಂಧಿಸಿದಂತೆ ಕ್ರಿಯಾತ್ಮಕ ವ್ಯಾಕರಣ, ಸೃಜನಶೀಲ ಬರವಣಿಗೆಯನ್ನು ವೃದ್ಧಿಸಿಕೊಳ್ಳಲು ಸಹಾಯವಾಗುವ ಅಭ್ಯಾಸವನ್ನು ಸಿದ್ಧಪಡಿಸಿ ಎಲ್ಲ ಕನ್ನಡ ಅಧ್ಯಾಪಕರು ಮೆಚ್ಚಿಕೊಳ್ಳುವಂತೆ ಅಭ್ಯಾಸ ಪುಸ್ತಕ ರೂಪುಗೊಳ್ಳಲು ಅಧ್ಯಕ್ಷರು ನೀಡಿದ ಮಾರ್ಗದರ್ಶನ ಸ್ತುತ್ಯವಾದುದು.

ಡಾ॥ ಸಾ. ಶಿ. ಮರುಳಯ್ಯ ಅವರ ಜೊತೆಗಿನ ಮತ್ತೆ ಎರಡು – ಮೂರು ಅವಿಸ್ಮರಣೀಯ ಘಟನೆಗಳು ಸದಾ ಕಾಲ ನನ್ನ ಮನದಾಳದಲ್ಲಿ ಮೆಲುಕು ಹಾಕುತ್ತಿರುತ್ತದೆ. ಪಠ್ಯಪುಸ್ತಕ ಸಿದ್ಧತಾ ಕಾರ್ಯದಲ್ಲಿ ನಮ್ಮ ಬಿಇಎಲ್ ಕಾಲೇಜಿನಲ್ಲಿ ನಾಲ್ಕು-ಐದು ದಿನಗಳ ಕಮ್ಮಟ ನಡೆಯಿತು. ಆಗ ಅಲ್ಲಿನ ಶೈಕ್ಷಣಿಕ ವಾತಾವರಣ ವಿದ್ಯಾರ್ಥಿಗಳ ಶಿಸ್ತು ಸಂಯಮ ಇವನ್ನು ಮನಸಾರೆ ಮೆಚ್ಚಿಕೊಂಡಿದ್ದರು. ಅದೇ ವರ್ಷ ನಡೆದ ಉಪಾಧ್ಯಾಯರ ದಿನಾಚರಣೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಕಾಲೇಜಿನ ಬೆಳವಣಿಗೆಯನ್ನು ಮುಕ್ತಕಂಠದಿಂದ ಪ್ರಶಂಶಿಸಿ ಉಪಾಧ್ಯಾಯರಿಗೆ ನೀಡಿದ ಮಾರ್ಗದರ್ಶನ, ಶಿಕ್ಷಕರ ಸರ್ವತೋಮುಖ ಪ್ರಗತಿಗೆ ಸಹಕಾರಿಯಾಗುವಂತಿತ್ತು.

ನನ್ನ ವೈವಾಹಿಕ ಜೀವನದ ಬೆಳ್ಳಿಹಬ್ಬದ ಸಂದರ್ಭದಲ್ಲಿ ಮೆರಗುಕೊಟ್ಟಂತೆ ಡಾ॥ ಸಾ.ಶಿ. ಮರುಳಯ್ಯ ದಂಪತಿಗಳು ಆಗಮಿಸಿ ನಮ್ಮನ್ನು ಆಶೀರ್ವದಿಸಿದರು. ಒಬ್ಬ ಶಿಷ್ಯನ ಜೀವನದ ಪ್ರಮುಖ ಘಟ್ಟಗಳಲ್ಲಿ ನೆಚ್ಚಿನ ಗುರುಗಳೊಬ್ಬರು ಸಮಾರಂಭದಲ್ಲಿ ಪಾಲ್ಗೊಂಡು, ಹಲವಾರು ಹಿರಿಯ ಶಿಷ್ಯರೊಡಗೂಡಿ ಆಶೀರ್ವಾದ ಪಡೆಯುವ ಸೌಭಾಗ್ಯ ನನ್ನದಾಗಿತ್ತು.

ಈ ರೀತಿ ನನ್ನೊಡನೆ ಅವಿನಾಭಾವ ಪ್ರೇರಣೆಯನ್ನು ಉಂಟುಮಾಡಿದ್ದ ಡಾ॥ ಸಾ. ಶಿ. ಮರುಳಯ್ಯನವರು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸಾಸಲು ಗ್ರಾಮದವರು. ಶ್ರೀ ಶಿವರುದ್ರಯ್ಯ ಮತ್ತು ಶ್ರೀಮತಿ ಸಿದ್ಧಮ್ಮನವರ ಮಕ್ಕಳು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲಿ ಪ್ರಾರಂಭಿಸಿ, ಶೆಟ್ಟೀಕೆರೆಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿದರು. ಪ್ರೌಢವಿದ್ಯಾಭ್ಯಾಸವನ್ನು ತಿಪಟೂರಿನಲ್ಲೂ, ಇಂಟರ್‌ಮೀಡಿಯೆಟ್ ಅನ್ನು ಚಿತ್ರದುರ್ಗದಲ್ಲೂ,

ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎ. ಆನರ್ಸ್ ಮತ್ತು ಎಂ.ಎ. ಪದವಿಯನ್ನು ಪಡೆದರು. ಅನಂತರ ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ ಎಂಬ ಪ್ರೌಢ ಪ್ರಬಂಧಕ್ಕೆ ಪಿಎಚ್.ಡಿ. ಪಡೆದರು.

ಶಿಕ್ಷಣ ಕ್ಷೇತ್ರಕ್ಕೆ ಉಪನ್ಯಾಸಕರಾಗಿ ಕಾಲಿಡುತ್ತಿದ್ದಂತೆ ವಿದ್ಯಾರ್ಥಿಗಳ ಮೆಚ್ಚಿನ ಗುರುಗಳಾಗಿ, ಆದರ್ಶ ಶಿಕ್ಷಕರಾಗಿ, ಸೃಜನಶೀಲ ಸಜ್ಜನರಾಗಿ, ಅಪಾರ ವಿದ್ಯಾರ್ಥಿ ವೃಂದಕ್ಕೆ ಮಾರ್ಗದರ್ಶಕರಾಗಿ ಅವರ ಮನ ಗೆದ್ದರು. ಅನಂತರ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಬಡ್ತಿ ಪಡೆದು ಸಾರ್ಥಕ ಶಿಕ್ಷಕ ವೃತ್ತಿಯಿಂದ ನಿವೃತ್ತರಾದರು. ವೃತ್ತಿಯಲ್ಲಿ ಶಿಕ್ಷಕರಾದರೂ, ಪ್ರವೃತ್ತಿಯಲ್ಲಿ ಸಾಹಿತಿಗಳಾಗಿ, ಕವಿಗಳಾಗಿ, ಶ್ರೇಷ್ಠ ವಿದ್ವಾಂಸರಾಗಿ, ಕನ್ನಡ ಸಾಹಿತ್ಯ ಲೋಕಕ್ಕೆ ಕವಿತೆ, ಸಂಶೋಧನೆ, ವಿಮರ್ಶೆ, ಶಾಸ್ತ್ರಸಾಹಿತ್ಯ, ನಾಟಕ, ಕಥೆ, ಕಾದಂಬರಿ, ನೃತ್ಯರೂಪಕ ಮೊದಲಾದ ಪ್ರಕಾರಗಳಲ್ಲಿ ಹಲವಾರು ಅಮೂಲ್ಯವಾದ ಕೃತಿಗಳನ್ನು ನೀಡಿದ್ದಾರೆ. ಇವರ ಸಂಪಾದಿತ ಗ್ರಂಥಗಳು ಕನ್ನಡ ಕಾವ್ಯಲೋಕಕ್ಕೆ ಒಂದು ಆಗರ. 'ಜ್ಞಾನಗಂಗೋತ್ರಿ' ಮಕ್ಕಳ ವಿಶ್ವಕೋಶದ ಏಳನೆಯ ಸಂಪುಟದ ಪ್ರಧಾನ ಸಂಪಾದಕರ ಕಾರ್ಯ ಒಂದು ಮೈಲಿಗಲ್ಲೇ ಸರಿ. ಜನಪ್ರಿಯ ವಾಗ್ಮಿಗಳಾಗಿ ನಾಡಿನೆಲ್ಲೆಡೆ ಶ್ರೋತೃವರ್ಗವನ್ನು ಪಡೆದಿದ್ದಾರೆ. ಆಕಾಶವಾಣಿಯಲ್ಲಿನ ಚಿಂತನಗಳೇ ಒಂದು ಸಾಹಿತ್ಯ ಭಂಡಾರವಾಗಿ ಪರಿಣಮಿಸಿದೆ.

ಕರ್ನಾಟಕ ರಾಜಭಾಷಾ ಆಯೋಗದ ಸದಸ್ಯರಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಕನ್ನಡ ನಾಡಿಗೆ ಡಾ॥ ಸಾಶಿಮ ರವರ ಅಮೂಲ್ಯವಾದ ಸೇವೆಯೆಂದರೆ ಕೆ.ಎ.ಎಸ್., ಐ.ಎ.ಎಸ್. ಪರೀಕ್ಷಾರ್ಥಿಗಳಿಗೆ ನೀಡುತ್ತಿರುವ ತರಬೇತಿ. ದೇಶದೆಲ್ಲೆಡೆ ಹಲವಾರು ರಾಜ್ಯಗಳಲ್ಲಿ ಕನ್ನಡದ ಕುಡಿಗಳು ಐ.ಎ.ಎಸ್. ಅಧಿಕಾರಿಗಳಾಗಿ ಖ್ಯಾತಿ ಹೊಂದಿದ್ದಾರೆ.

ಬಹುಮುಖ ಪ್ರತಿಭೆಯುಳ್ಳ ಉತ್ತಮ ಆದರ್ಶಮೌಲ್ಯಗಳನ್ನು ಪಾಲಿಸುತ್ತಿರುವ ಡಾ॥ ಸಾ. ಶಿ. ಮರುಳಯ್ಯನವರಿಗೆ ಕರ್ನಾಟಕ ಸರ್ಕಾರದ 'ರಾಜ್ಯೋತ್ಸವ ಪ್ರಶಸ್ತಿ', ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವಿಶ್ವೇಶ್ವರಯ್ಯ ಪ್ರಶಸ್ತಿಗಳಲ್ಲದೆ 'ಸಮನ್ವಯ ಸಾಹಿತ್ಯ ಸುಧಾಕರ', 'ಕವಿತಾ ಚಿಂತಾರತ್ನ' ಮೊದಲಾದ ಬಿರುದುಗಳು ಲಭಿಸಿದೆ. ಈ ಎಲ್ಲಾ ಪ್ರಶಸ್ತಿಗಳಿಗೆ ಕಿರೀಟವಿಟ್ಟಂತೆ ಡಾ॥ ಸಾ. ಶಿ. ಮರುಳಯ್ಯನವರಿಗೆ ೭೦ ವಸಂತಗಳು ತುಂಬಿದ ಸವಿನೆನೆಪಿಗಾಗಿ ಅವರ ಅಭಿಮಾನಿಗಳು, ಶಿಷ್ಯರು ಹಾಗೂ ಹಿತೈಷಿಗಳು ಸಮಸ್ತ ಕನ್ನಡಿಗರ ಪ್ರೀತಿಪ್ರೇಮಗಳ ದ್ಯೋತಕವಾಗಿ 'ಅಭಿಜ್ಞ' ಅಭಿನಂದನಾಗ್ರಂಥವನ್ನು, 'ಅಧ್ಯಾಪನ' ಸಂಸ್ಮರಣ ಸಂಚಿಕೆಯನ್ನು ಅರ್ಪಿಸಿದ್ದಾರೆ.

❖

# ಶ್ರೀಗುರು ಸೇಡಿಯಾಪು

## (ಸೇಡಿಯಾಪು ಕೃಷ್ಣಭಟ್ಟ)

• ಪ್ರೊ॥ ಎಂ. ರಾಮಚಂದ್ರ

ಐವತ್ತಮೂರು ವರ್ಷಗಳ ಹಿಂದಿನ ನೆನಪು: ೧೯೫೬ರ ಜುಲಾಯಿ ತಿಂಗಳು – ಮದರಾಸು ವಿಶ್ವವಿದ್ಯಾನಿಲಯ ೧೯೫೬ರ ತನಕ ದಕ್ಷಿಣ ಕನ್ನಡ ಜಿಲ್ಲೆ ಹಿಂದಿನ ಮದರಾಸು ಪ್ರಾಂತದ ಭಾಗವಾಗಿತ್ತು. ಜಿಲ್ಲೆಯ ಕಾಲೇಜುಗಳೆಲ್ಲ ಮದರಾಸು ವಿಶ್ವವಿದ್ಯಾಲಯಕ್ಕೆ ಅಧೀನವಾಗಿದ್ದುವು. ಆ ವರ್ಷ ತಾನೇ ಪ್ರಾರಂಭಿಸಿದ್ದ ಪಿ.ಯು.ಸಿ. ಚೊಚ್ಚಲ ತಂಡದ ವಿದ್ಯಾರ್ಥಿಯಾಗಿ ನಾನು ಮಂಗಳೂರು ಎಲೋಸಿಯಸ್ ಕಾಲೇಜಿನ ಮೆಟ್ಟಿಲು ಹತ್ತಿದ್ದೆ. ಜೀವವಿಜ್ಞಾನ ವಿದ್ಯಾರ್ಥಿಯಾಗಿದ್ದ ನಾನು ವಿವಿಧ ಪಾಠಗಳಿಗೆ ಕಾಲೇಜಿನ ಬೇರೆ ಬೇರೆ ಕಟ್ಟಡಗಳನ್ನು ಏರಿ ಇಳಿಯಬೇಕಾಗುತ್ತಿತ್ತು. ಇಂಗ್ಲಿಷ್–ಕನ್ನಡ ತರಗತಿಗಳಿದ್ದದ್ದು ಪಶ್ಚಿಮ ಸಮುದ್ರಾಭಿಮುಖವಾದ ಮಹಾಸೌಧದಲ್ಲಿ. ಅದೊಂದು ದಿನ, ಕಾಲೇಜಿನ ಎತ್ತರವನ್ನೂ ಕಡಲಿನ ಬಿತ್ತರವನ್ನೂ ಪರಿಭಾವಿಸುತ್ತ ಸಹಪಾಠಿಗಳೊಂದಿಗೆ ತರಗತಿಯಲ್ಲಿ ಕುಳಿತಿದ್ದೆ. ಘಂಟೆ ಹೊಡೆಯಿತು, ಕನ್ನಡ ಪಾಠ; ಯಾರು ಬರುತ್ತಾರೋ ಎಂಬ ಕುತೂಹಲ. ಒಬ್ಬರು ಹೆಬ್ಬಾಗಿಲ ಬಳಿ ಕಾಣಿಸಿಕೊಂಡರು. ತಲೆಯಲ್ಲಿ ಬಿಳಿ ಟೊಪ್ಪಿ, ಕಪ್ಪು ಕಟ್ಟಿನ ಕನ್ನಡಕ, ಮುಚ್ಚುಕೊರಳಿನ ಉದ್ದ ತೋಳಿನ ಅಂಗಿ, ಕಚ್ಚೆ ಪಂಚೆ–ಉಡುಗೆ ತೊಡುಗೆ ಖಾದಿಯದು; ಮೈ ಬಣ್ಣ ಗೋಧಿಯದು, ಶುಭ್ರ ಸುಂದರ ವ್ಯಕ್ತಿತ್ವ ಬಂದವರು ಗಂಭೀರವಾಗಿ ಕೋಣೆಯನ್ನು ಹೊಕ್ಕರು, ಕಟ್ಟೆಯನ್ನು ಏರಿದರು, ಸನ್ನೆ ಮಾಡಿದರು. ಎದ್ದು ನಿಂತಿದ್ದ ನಾವೆಲ್ಲ ಕುಳಿತುಕೊಂಡೆವು. ಮೈಯೆಲ್ಲ ಕಿವಿಯಾಗಿ ಕೇಳುತ್ತಿದ್ದಂತೆ ಹೇಳಿದರು– "ನಾನು ಸೇಡಿಯಾಪು ಕೃಷ್ಣಭಟ್ಟ; ಕನ್ನಡ ಪಾಠ ನನ್ನದು..." ಓಹ್ ! ಹೈಸ್ಕೂಲಿನ ಪಠ್ಯಪುಸ್ತಕವೊಂದರಲ್ಲಿದ್ದ 'ಚೆನ್ನೆಮಣೆ'ಯನ್ನು ಒಂದಲ್ಲ, ಹತ್ತು ಸಲ ಓದಿ, ಸಾಲು ಸಾಲನ್ನೂ ಸವಿದು ಚಪ್ಪರಿಸಿದ್ದು ನೆನಪಾಯಿತು. ಅದನ್ನು ಬರೆದ ಸೇಡಿಯಾಪು ಕೃಷ್ಣಭಟ್ಟರೇ ಕಣ್ಣಮುಂದೆ ನಿಂತಿದ್ದಾರೆ! 'ಇದು ಭಾಗ್ಯ, ಇದು ಭಾಗ್ಯ, ಇದು ಭಾಗ್ಯವಯ್ಯಾ' ಎಂದುಕೊಂಡೆ. ಕಾಲೇಜಿಗೆ ಬಂದೆ, ಸೇಡಿಯಾಪುರನ್ನು ಕಂಡೆ, ಮೊದಲ ನೋಟದಲ್ಲೇ ಮನಸೋತೆ. 'ಎತ್ತಣ ಮಾಮರ, ಎತ್ತಣ ಕೋಗಿಲೆ...' – ಇರಬಹುದೋ ಏನೋ!

ಕಾಲೇಜು ಮಹಾರಥ ಉರುಳಿತು; ದಿನ, ವಾರ, ತಿಂಗಳು ಕಳೆಯಿತು. ವರ್ಷವೂ ಆಯಿತು. ವರ್ಷಾಂತ್ಯದಂದು ನನ್ನ ಆಟೋಗ್ರಾಫ್ ಪುಸ್ತಕವನ್ನು ಅಂಜುತ್ತಲೇ ಸೇಡಿಯಾಪುರ ಮುಂದಿರಿಸಿದೆ. ಅವರು ತಲೆಯೆತ್ತಿ ನೋಡಿದರು, ಮುಗುಳ್ನಕ್ಕರು: 'ಓಹೋ, ನಿಮಗೂ ಈ

ಹುಚ್ಚುಂಟಾ?' ಎಂದರು; ಏನನ್ನೋ ಬರೆದರು. ಅಧ್ಯಾಪಕರ ಕೊಠಡಿಯಿಂದ ಹೊರಬಂದ ಮೇಲೆ ಕಣ್ಣಾಡಿಸಿದೆ – ಬರೆದಿದ್ದರು:

ಜನಮೆಚ್ಚಿ ನಡಕೊಂಡರೇನುಂಟು ಲೋಕದಿ
ಮನಮೆಚ್ಚಿ ನಡಕೊಂಬುವುದೇ ಚೆಂದವು

– ಅದು ಸೇಡಿಯಾಪು ಅವರು ಹಿಡಿದು ನಡೆದ ದಾರಿ ಎಂಬುದರಲ್ಲಿ ನಾನು ಕಾಲಾಂತರದಲ್ಲಿ ಕಂಡುಕೊಂಡೆ.

ನಾನು ಕಾಲೇಜು ತರಗತಿಯಲ್ಲಿ ಸೇಡಿಯಾಪು ಅವರ ಒಂದೇ ಒಂದು ವರ್ಷ (೧೯೫೬–೫೭) ವಿದ್ಯಾರ್ಥಿ. ಆದರೆ ಅವರು ಆ ಮುಂದಿನ ನಲ್ವತ್ತು ವರ್ಷ ನನಗೆ ಪರಮಗುರು: ನಿಧನಾ ನಂತರವೂ ಪ್ರೇರಕಶಕ್ತಿ. ಸ್ಮರಣೆಗೆ ಮರಣವಿಲ್ಲ ಎನ್ನುತ್ತಾರೆ. ಸೇಡಿಯಾಪು ನಾಮಸ್ಮರಣೆ ನನಗೆ – ಕವಿ ಕುವೆಂಪು ಮಾಡಿದ ಬೇರೊಂದು ಮಹಾವ್ಯಕ್ತಿಯ ವರ್ಣನೆಯಂತೆ – 'ಸುರನದಿಯ ತೀರ್ಥದಂತೆ ಪವಿತ್ರತಮ.'

ಸೇಡಿಯಾಪು ನನ್ನ ಬದುಕಿಗೊಂದು ಕನ್ನಡಿ, ಬಾಳ ದಾರಿಗೊಂದು ತೋರುಬೆಳಕು. ಅನೇಕ ಭಾಗ್ಯವಿಶೇಷಗಳು ಅವರಿಂದಾಗಿ ನನಗೆ ಒದಗಿಬಂದವು. ನಾನು ಒಂದಿಷ್ಟು ಬರವಣಿಗೆಗೆ ತೊಡಗುವುದಕ್ಕೂ ಅಲ್ಲಿ ಇಲ್ಲಿ ನಾಲ್ಕು ಮಾತು ಆಡುವುದಕ್ಕೂ ಸೇಡಿಯಾಪು ಅವರೇ ಮೂಲ ಮತ್ತು ಪ್ರಧಾನ ಕಾರಣ.

೧೯೫೭ರಲ್ಲಿ ಸೇಡಿಯಾಪು ಅವರು ಮಂಗಳೂರು ಎಲೋಸಿಯಸ್ ಕಾಲೇಜಿನಿಂದ ಅಧ್ಯಾಪನ ನಿವೃತ್ತರಾದರು. ಕಾಲೇಜಿನ ಕರ್ನಾಟಕ ಸಂಘ ಅವರಿಗೊಂದು ವಿದಾಯಸಭೆಯನ್ನು ಏರ್ಪಡಿಸಿತು. ಸಂಘದ ಅಧ್ಯಕ್ಷ ಪ್ರೊ. ತೆಕ್ಕುಂಜ ಗೋಪಾಲಕೃಷ್ಣಭಟ್ಟರು ನನಗೂ ಗುರುವಂದನಾವಕಾಶ ನೀಡಿದರು. ಒಂದು ವರ್ಷದ ಸೇಡಿಯಾಪು ಶಿಷ್ಯತ್ವದ ನನ್ನ ಅನುಭವಗಳನ್ನು ಸಭೆಯಲ್ಲಿ ಆಡಿದೆ. ಕಾಲೇಜಿನಲ್ಲಿ ಅದು ನನ್ನ ಮೊದಲ ಭಾಷಣ. ನಮ್ಮ ಹಾಸ್ಟೆಲ್ ವಾರ್ಡನ್ ಬೆಳ್ಳೆ ಭುಜಂಗರಾಯರು (ಅವರು ಗಣಿತ ಉಪನ್ಯಾಸಕ, ಸೇಡಿಯಾಪು ಸನ್ಮಿತ್ರ) ಆ ಸಂಜೆ ನನ್ನನ್ನು ತಮ್ಮ ಕಚೇರಿಗೆ ಕರೆದು ಮೆಚ್ಚು ಮಾತಾಡಿ ಬೆನ್ನುತಟ್ಟಿದರು!

ಆ ಮುಂದಿನ ವರ್ಷ (೧೯೫೮) ಬ್ರಹ್ಮಾವರ ಕರ್ನಾಟಕ ಸಂಘ (ಈಗ ಅಜಪುರ ಕರ್ನಾಟಕ ಸಂಘ) ನಾಡಹಬ್ಬದ ನಿಮಿತ್ತ ಕಾಲೇಜು ವಿದ್ಯಾರ್ಥಿಗಳಿಗಾಗಿ 'ನಾನು ಮೆಚ್ಚಿದ ಸಾಹಿತಿ ಮತ್ತು ಕೃತಿ' ಎಂಬ ವಿಷಯದಲ್ಲಿ ಪ್ರಬಂಧ ಸ್ಪರ್ಧೆ ಏರ್ಪಡಿಸಿತ್ತು. ನಾನೂ ಪ್ರಯತ್ನಿಸಿದೆ. ವಿಷಯ "ನಾನು ಮೆಚ್ಚಿದ ಸಾಹಿತ್ಯ – ಸೇಡಿಯಾಪು". ನನಗೆ ಪ್ರಥಮ ಬಹುಮಾನ ಬಂತು.

ನಾನು ಎಲೋಸಿಯಸ್ಸಿನಲ್ಲಿ ಅಂತಿಮ ಬಿ.ಎ. ವಿದ್ಯಾರ್ಥಿಯಾಗಿದ್ದಾಗ (೧೯೫೯) ಪುಸ್ತಕರೂಪದಲ್ಲಿ ಗುರುವಂದನವನ್ನು ಸಲ್ಲಿಸುವ ಆಸೆಯೊಂದು ಚಿಗುರೊಡೆಯಿತು. ಪ್ರೊ. ತೆಕ್ಕುಂಜರವರು 'ಅಸ್ತು' ಎಂದರು; ಆತ್ಮೀಯರು 'ಶುಭಮಸ್ತು' ಎಂದರು. ಫಲವಾಗಿ 'ಒಸಗೆ'ಯೆಂಬ ಸಂಭಾವನಾಗ್ರಂಥ ಪ್ರಕಟವಾಯಿತು. ಸೇಡಿಯಾಪು ಅವರಿಗೆ ಅದು

ಅರ್ಪಿತವಾಯಿತು. ಅರ್ಪಣೆಯ ದಿನ ಸೇಡಿಯಾಪು ನನ್ನನ್ನು ವೇದಿಕೆಗೆ ಕರೆದು ಅಕ್ಕರೆಯಿಂದ ತಬ್ಬಿದರು, ಮತ್ತೆ ತಲೆ ಮುಟ್ಟಿ ಹರಸಿದರು. ಅಂದಿನ ಅನುಭವ ಅವರ್ಣನೀಯ, ಅವಿಸ್ಮರಣೀಯ.

'ಒಸಗೆ'ಯ ಪ್ರಕಟನೆ – ಅರ್ಪಣೆಗಳಿಂದ ಸೇಡಿಯಾಪು ಅವರ ಮುಡಿಯಲ್ಲಿ ಬಣ್ಣದ ಗರಿಯೇನೂ ಮೂಡಲಿಲ್ಲ. ಅವರು, ಅದನ್ನು ಬಯಸಿದವರೂ ಅಲ್ಲ. 'ಒಲವಿಗೆ ಒಲವಿನ ಕೊಡುಗೆ' ಎಂಬುದರಿಂದ 'ಒಸಗೆ'ಯನ್ನು ಅವರು ಒಪ್ಪಿಕೊಂಡರು ಅಷ್ಟೆ. ಆದರೆ ನನಗೆ ಮಾತ್ರ ಅದರಿಂದ ಲಾಭವಾಯಿತು. ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಸೀಟು ಪಡೆಯುವುದಕ್ಕೆ 'ಒಸಗೆ' ನನಗೊಂದು ಕೈದೋಟಿಯಾಯಿತು! ನಾನು ಸೇಡಿಯಾಪು ಅವರ ಶಿಷ್ಯ, 'ಒಸಗೆ'ಯ ಸಂಪಾದಕ ಎಂಬುದು ಕನ್ನಡ ವಿಭಾಗ ಪ್ರಮುಖರ ತೂಕದ ತೊಲೆಯನ್ನು ನನ್ನತ್ತ ಒಲೆಯುವಂತೆ ಮಾಡಿತು. ಅತ್ತ ಸೇಡಿಯಾಪು ಅವರೂ ಧಾರವಾಡದಲ್ಲಿದ್ದ ತಮ್ಮ ಸಮೀಪಬಂಧು ಪ್ರೊ. ಯು.ಎಸ್. ಭಟ್ಟರಿಗೂ, ಸ್ನೇಹಿತ ಸ. ಸ. ಮಾಳವಾಡರಿಗೂ ಪತ್ರ ಬರೆದು, ಎಂ.ಎ.ಯಲ್ಲಿ ನನಗೆ ಪ್ರವೇಶಾವಕಾಶ ದೊರಕಿಸುವಂತೆ ಕೋರಿದ್ದರು.

'ಒಸಗೆ' ಮತ್ತೊಮ್ಮೆ ನನ್ನ ಭಾಗ್ಯದ ಬಾಗಿಲು ತೆರೆಯುವ 'ಸೂಸಮ್ಮ' ಮಾತ್ರವಾಯಿತು. ಅದು ಹೀಗೆ: ೧೯೬೮ರಲ್ಲಿ ಧಾರವಾಡದಿಂದ ಕನ್ನಡದೆಮ್ಮೆಯನ್ನು ಹಿಡಿದುಕೊಂಡು ಘಟ್ಟ ಇಳಿದೆ; ಅದನ್ನು ಕಟ್ಟುವುದಕ್ಕಾಗಿ ಜಾಗ ಹುಡುಕುತ್ತಿದ್ದೆ. ಕಾರ್ಕಳ ಭುವನೇಂದ್ರ ಕಾಲೇಜಿನ ಪ್ರಾಚಾರ್ಯ ದಾಮೋದರ ಕಿಣಿಯವರು ನನ್ನನ್ನು ಕರೆದರು – "ಬಾ, ನಮ್ಮಲ್ಲಿ ತಲೆಚಾಚಲು ನೆರಳುಂಟು" ಎಂದರು. ಅವರು ೧೯೫೦ರ ದಶಕದಲ್ಲಿ ಎಲೋಸಿಯಸ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಸೇಡಿಯಾಪು ಅವರ ಕಿರಿಯ ಸಹೋದ್ಯೋಗಿಯಾಗಿ ಇದ್ದವರು, ಅವರಲ್ಲಿ ಗುರುಭಾವ ಹೊಂದಿದ್ದವರು. ನಾನು ಸೇಡಿಯಾಪು ಶಿಷ್ಯನೆಂಬುದೂ, 'ಒಸಗೆ'ಯ ಸಹಸಂಪಾದಕ ಎಂಬುದೂ ಅವರಿಗೆ ಗೊತ್ತಿತ್ತು. – 'ಮಾಡಿದ ಪುಣ್ಯಕಾರ್ಯ ಸಣ್ಣದಾದರೂ ದೊಡ್ಡ ಕಷ್ಟವನ್ನು ಕಡೆಗಾಣಿಸುತ್ತದೆ' ಎಂಬುದು ನನ್ನ ವಿಷಯದಲ್ಲಿ ನಿಜವಾಯಿತು. ಸುದ್ದಿ ತಿಳಿದ ಸೇಡಿಯಾಪು ಹೇಳಿದರು – "ಹೋಗು, ಕಾರ್ಕಳಕ್ಕೆ ಹೋಗು. ಬೇರೆಲ್ಲಿಗೂ ಬೇಡ. ಕರ್ನಾಟಕದಲ್ಲೇ ನಾನು ನೋಡಿ ತುಂಬ ಮೆಚ್ಚಿದ ಊರು ಕಾರ್ಕಳ. ಅಲ್ಲಿ ನನಗೆ ಪರಮಪ್ರಿಯನಾದ ಗೊಮ್ಮಟಸ್ವಾಮಿಯೂ ಇದ್ದಾನೆ" ಎಂದರು. ನಾನು ಗುರುವಚನವನ್ನು ಅತಿಕ್ರಮಿಸಲಿಲ್ಲ. ೧೯೬೮ರಲ್ಲಿ ಟ್ಯೂಟರ್ ಆಗಿ ಕಾಲೇಜು ಸೇರಿದೆ. ೧೯೭೭ರಲ್ಲಿ ಪ್ರಾಧ್ಯಾಪಕನಾಗಿ ನಿವೃತ್ತನಾದೆ. ಆ ನಡುವಿನ ಮೂವತ್ತೈದು ವರ್ಷ ಆದದ್ದೆಲ್ಲಾ ಒಳಿತೇ ಆಯಿತು. ಗುರುವಿನ ಹರಕೆ ನನ್ನ ಕಣ್ಗೆ, ಬೆನ್ಗೆ, ಮುಂಗೈಗೆ ರಕ್ಷೆಯಾಯಿತು!

ಆತ್ಮೀಯ ಏರ್ಯ ಲಕ್ಷ್ಮೀನಾರಾಯಣ ಆಳ್ವರ 'ಶ್ರೀ ರಾಮಾಶ್ವಮೇಧದ ರಸತರಂಗಗಳು' ಎಂಬ ಸರಸವಿಮರ್ಶೆಗೆ ಮುನ್ನುಡಿಯ ಮುಕುಟ ಸೇಡಿಯಾಪು ಅವರದು. ಬೆಂಗಳೂರು ಆಕಾಶವಾಣಿಯವರು ರಾಮಾಶ್ವಮೇಧದ ಕವಿ ಮುದ್ದಣನ ಕುರಿತು ಭಾಷಣಕ್ಕಾಗಿ ಏರ್ಯದವರನ್ನು ಆಮಂತ್ರಿಸಿದ್ದರು. ಆ ವಿಷಯವನ್ನು ಧಾರವಾಡದಲ್ಲಿದ್ದ ನನಗೆ ತಿಳಿಸುತ್ತಾ ಸೇಡಿಯಾಪು, "ಆಳ್ವರಿಗೆ ಬೆಂಗಳೂರು ಆಕಾಶವಾಣಿಯಿಂದ ಕರೆ ಬಂದಿದೆ, ಮುದ್ದಣನ

ಕುರಿತು ಮಾತಾಡುವುದಕ್ಕಾಗಿ. ನನ್ನ ಕುರಿತು ಮಾತಾಡುವುದಕ್ಕಾಗಿ ಒಂದು ದಿನ ನಿನ್ನನ್ನೂ ಕರೆಯುತ್ತಾರೆ ನೋಡು!...." ಎಂದು ನಗೆಮಾತು ಆಡಿದ್ದರು; ಹಾಗೆಯೇ ಆಯಿತು.

ಕಾಲೇಜು ಅಧ್ಯಾಪನದ ಒಂದೇ ವರ್ಷದಲ್ಲಿ ಅಜಪುರ ಉಡುಪಿ ಹತ್ತಿರದ ಬ್ರಹ್ಮಾವರವನ್ನು 'ಅಜಪುರ' ಎಂದೂ ಕರೆಯುವುದುಂಟು. ಕರ್ನಾಟಕ ಸಂಘದ ಕಾರ್ಯದರ್ಶಿ ಬೈಕಾಡಿ ವೆಂಕಟಕೃಷ್ಣರಾಯರು ನಾಡಹಬ್ಬಕ್ಕೆ ನನ್ನನ್ನು ಕರೆದರು – "ನೋಡಿ, ನಿಮ್ಮ ಗುರುಗಳನ್ನು ನಮ್ಮ ಸಂಘದಲ್ಲಿ ಸನ್ಮಾನಿಸುತ್ತೇವೆ, ನೀವು ಒಂದು ಅಭಿನಂದನ ಭಾಷಣ ಮಾಡಬೇಕು." ಎಂಬ ತಾಕೀತು ಅವರದು. ನಾನು 'ಒಲ್ಲೆ' ಎನ್ನುವಂತೆಯೇ ಇರಲಿಲ್ಲ. – ಅದು ಗುರುಮಂತ್ರ! ಸೇಡಿಯಾಪು ಅವರಿಗೆ ಸಂದ ಮೊತ್ತಮೊದಲ ಸಾರ್ವಜನಿಕ ಸನ್ಮಾನವೆಂದರೆ ಬ್ರಹ್ಮಾವರದ್ದು! ನನ್ನ ಗುರುವಂದನವಿತ್ತಲ್ಲ – ಅದು ನನ್ನ ಪ್ರಪ್ರಥಮ ಸಾರ್ವಜನಿಕ ಭಾಷಣ. ಬ್ರಹ್ಮಾವರದ ಶ್ರೀ ಮಹಾಲಿಂಗೇಶ್ವರನ ಸನ್ನಿಧಿಯಲ್ಲಿ, ಗುರುಸಾಮೀಪ್ಯದಲ್ಲಿ ನನ್ನ 'ಅರಂಗೇಟ್ರಮ್' ಆಯಿತು!

ಮುಂದೆ ಆಕಾಶವಾಣಿಯವರೂ ನನ್ನನ್ನು ಕರೆದರು: ಮಂಗಳೂರು ಆಕಾಶವಾಣಿಯಲ್ಲಿ ಸೇಡಿಯಾಪು ಕೃತಿಗಳ ಕುರಿತು ನನ್ನ ಭಾಷಣಗಳು ಪ್ರಸಾರವಾದುವು. ಅವರ 'ಅಶ್ವಮೇಧ' ಕಾವ್ಯ ಮತ್ತು 'ಚೆನ್ನೆಮಣೆ' ಕಥೆಗಳನ್ನು ರೇಡಿಯೋ ನಾಟಕವಾಗಿ ರೂಪಾಂತರಿಸಿದೆ. ಅವೂ ಆಕಾಶವಾಣಿಯಲ್ಲಿ 'ಮೂಡಿ' ಬಂದುವು. ಮಂಗಳೂರಿನೊಂದಿಗೆ ಬೆಂಗಳೂರು ಆಕಾಶವಾಣಿ ಗಾಗಿಯೂ ಸೇಡಿಯಾಪು ಅವರ ಸಂದರ್ಶನ ಮಾಡಿದೆ. ಅನೇಕ ಸಂಘ – ಸಂಸ್ಥೆಗಳಲ್ಲಿ ಸೇಡಿಯಾಪು ಬದುಕು – ಬರಹಗಳ ಬಗೆಗೆ ಉಪನ್ಯಾಸ ಮಾಡಿದೆ. ಪತ್ರಿಕೆಗಳಿಗಾಗಿಯೂ ಬರೆದೆ. 'ಸೇಡಿಯಾಪು ಕೃಷ್ಣಭಟ್ಟ' ಎಂಬ ಒಂದು ಪುಸ್ತಿಕೆಯನ್ನೂ ರಚಿಸಿದೆ. ಅದನ್ನು ಪ್ರೊ. ಕು. ಶಿ. ಹರಿದಾಸಭಟ್ಟರು ಪ್ರೀತಿಯಿಂದ ಎತ್ತಿಕೊಂಡರು, ತಮ್ಮ ಎಂ.ಜಿ.ಎಂ. ಕಾಲೇಜಿನಿಂದ ಪ್ರಕಟಿಸಿದರು. (ಸೇಡಿಯಾಪು ನಿಧನಾನಂತರ 'ನಂದಾದೀವಿಗೆ'ಯನ್ನೂ ಸಿದ್ಧಪಡಿಸಿದೆ.) ಡಾ॥ ಕಲ್ಬುರ್ಗಿ ಅಭಿನಂದನ ಗ್ರಂಥ 'ಮಹಾಮಾರ್ಗ'ದಲ್ಲೂ, ರಾಜ್ಯ ಸಾಹಿತ್ಯ ಅಕಾಡೆಮಿಯ 'ಸಾಲುದೀಪ'ಗಳಲ್ಲೂ ನಾನು ಬರೆದ ಸೇಡಿಯಾಪು ಪರಿಚಯ ಪ್ರಬಂಧಗಳು ಪ್ರಕಟವಾದವು.

ಸೇಡಿಯಾಪು ಅವರಿಗೆ ಎಪ್ಪತ್ತು ತುಂಬಿದ ಸಂದರ್ಭದಲ್ಲಿ (೧೯೭೩) ಮಣಿಪಾಲದ 'ಸಾಹಿತ್ಯ ಸಂಘ'ವೂ ಅವರ ಹುಟ್ಟುಹಬ್ಬವನ್ನು ನೆರವೇರಿಸಿತು. ಮಣಿಪಾಲದ ಹಿರಿಯ ಕೆ.ಕೆ. ಪೈಯವರ ಅಧ್ಯಕ್ಷತೆ, ಪ್ರೊ. ಎಸ್.ವಿ. ಪರಮೇಶ್ವರಭಟ್ಟ ಮತ್ತು ಪ್ರೊ. ಕು.ಶಿ. ಹರಿದಾಸಭಟ್ಟರ ಉಪಸ್ಥಿತಿಗಳಲ್ಲಿ ಜರುಗಿದ ಆ ಹಬ್ಬದಲ್ಲಿ ನಾನೂ ಪಾಲ್ಗೊಂಡಿದ್ದೆ. ನನ್ನ ಮಾತುಗಳ ಎಡೆಯಲ್ಲಿ ಸೇಡಿಯಾಪು ನನಗೆ ಬರೆದಿರುವ ಪತ್ರಸ್ವಾರಸ್ಯಗಳನ್ನು ಉಲ್ಲೇಖಿಸಿ, ನಿದರ್ಶನಾರ್ಥ ಎರಡು -ಮೂರು ಪತ್ರಗಳನ್ನು ಓದಿ ಹೇಳಿದೆ. ಆ ಓದು ಕೇಳುಗರಿಗೆ ಒಪ್ಪಿಗೆಯಾಯಿತು. ಕೆ.ಕೆ. ಪೈಯವರು ಕುಳಿತಲ್ಲಿಂದ ಎದ್ದು ಬಂದು ನನ್ನ ಕೈಕುಲುಕಿ, 'ಸೇಡಿಯಾಪು ಪತ್ರಗಳನ್ನು ಸೇರಿಸಿ ಒಂದು ಪುಸ್ತಕವನ್ನೇ ಮಾಡಿಬಿಡಿ' ಎಂದರು. ಆ ಮಾತಿನಿಂದ ಪ್ರೇರಿತನಾಗಿ ಒಂದು ಲೇಖನ ಬರೆದೆ. ಮತ್ತೆ ಇಪ್ಪತ್ತು ವರ್ಷಗಳ ಅನಂತರ, ಸೇಡಿಯಾಪು ಅವರಿಗೆ ತೊಂಬತ್ತು ಹಿಡಿದಾಗ (೧೯೯೧) ಅವರ ಒಂದುನೂರ ಆರು ಪತ್ರಗಳನ್ನು ಆರಿಸಿ 'ಪತ್ರಾವಳಿ'ಯೆಂಬ ಸಂಚಯವನ್ನೂ ಪ್ರಕಟಿಸಿದೆ.

ಮಂಗಳೂರಿನಲ್ಲಿ ನಾನು ಕಾಲೇಜು ವಿದ್ಯಾರ್ಥಿಯಾಗಿದ್ದ ಅವಧಿಯಲ್ಲಿ ನನಗೆ ಸಿದ್ಧಿಸಿದ ಸೇಡಿಯಾಪು ಸಾಮೀಪ್ಯ ಅವರು ಮಂಗಳೂರು ಬಿಟ್ಟು (೧೯೬೪) ನಾಗಪುರ, ಅಲ್ಲಿಂದ ಮೈಸೂರು, ಅಲ್ಲಿಂದ ಬೆಂಗಳೂರುಗಳಿಗೂ, ಮತ್ತೆ ಅಂತಿಮವಾಗಿ ಮಣಿಪಾಲಕ್ಕೂ ಸ್ಥಳಾಂತರಿಸಿ ೧೯೯೬ರಲ್ಲಿ ಅವರು ದೇಹತ್ಯಾಗ ಮಾಡುವವರೆಗೂ ಏಕಪ್ರಕಾರವಾಗಿಯೇ ಉಳಿಯಿತು; ಅಲ್ಲ, ವರ್ಷದಿಂದ ವರ್ಷಕ್ಕೆ ಅದು ಗಾಢತರವಾಯಿತು. ನಲ್ವತ್ತು ವರ್ಷಗಳ ಆ ಅವಧಿಯಲ್ಲಿ ಅವರ ಹಲವಾರು ಸಣ್ಣ ಪುಟ್ಟ ಅವಶ್ಯಕತೆಗಳನ್ನು ಪೂರೈಸುವ ಅವಕಾಶ ನನ್ನದಾಯಿತು. ಆಗಾಗ ತಮಗೆ ಬೇಕಾದ ಅರಿಷ್ಟ, ಆಸವ, ಚೂರ್ಣ, ತೈಲ, ಮಾತ್ರೆ, ನಸ್ಯದ ಪುಡಿಗಳನ್ನೋ ಇಲ್ಲ ಲೇಖನ ಕಾರ್ಯಕ್ಕೆ ಅವಶ್ಯವಾದ ಯಾವುದಾದರೊಂದು ಆಕರಗ್ರಂಥವನ್ನೋ ತಂದು ಕೊಡುವಂತೆ ಅವರು ಬರೆದು ತಿಳಿಸುವುದು, ನಾನು ಅವುಗಳನ್ನು ಹುಡುಕಿ ಪಡೆದು ಒಪ್ಪಿಸುವುದು – ಇದೊಂದು ಪದ್ಧತಿಯೇ ಆಯಿತು. ಈ ವ್ಯವಹಾರ ಹೀಗೆ ನಡೆಯುತ್ತಿತ್ತು, ನನ್ನ ಸಣ್ಣದೊಂದು ಸೇವೆಯನ್ನು ಸೇಡಿಯಾಪು ಹೇಗೆ ಪ್ರೀತಿಯಿಂದ ಗ್ರಹಿಸುತ್ತಿದ್ದರು ಎಂಬುದನ್ನು ಮಹಾಜನರು 'ಪತ್ರಾವಳಿ'ಯಿಂದ ತಿಳಿಯಬಹುದಾಗಿದೆ.

ಸೇಡಿಯಾಪು ಅವರು ಸುಮಾರು ನಲ್ವತ್ತು ವರ್ಷಗಳ ವಾಸ್ತವ್ಯದ ಅನಂತರ, ೧೯೬೪ರಲ್ಲಿ ಮಂಗಳೂರು ಬಿಟ್ಟು ನಾಗಪುರಕ್ಕೆ ಮಗನ ಜತೆ ಇರುವುದಕ್ಕೆ – ಹೊರಟ ಸಂದರ್ಭದಲ್ಲಿ ಅವರ ಶಿಷ್ಯ ಮಿತ್ರ ಆತ್ಮೀಯರಾದ ನಾವೆಲ್ಲ ಸೇರಿ ಒಂದು ವಿದಾಯಸಭೆ ನಡೆಸಿದ್ದಲ್ಲದೆ, ಅವರನ್ನು ಬೀಳ್ಕೊಡುವುದಕ್ಕೆ ನಾವು ಕೆಲವರು ಮಂಗಳೂರು ರೈಲ್ವೇ ನಿಲ್ದಾಣಕ್ಕೂ ಹೋಗಿದ್ದೆವು. ನಮ್ಮಲ್ಲಿ ಒಬ್ಬೊಬ್ಬರನ್ನೂ ಅವರು ಆರ್ದ್ರ ಭಾವದಿಂದ ಆಲಂಗಿಸಿ ಪ್ರೀತಿಯಿಂದ ಮಾತಾಡಿಸಿ ರೈಲು ಹತ್ತಿದ್ದರು. ನಾಗಪುರ ತಲುಪಿದವರೇ ನನಗೊಂದು ಪತ್ರ ಬರೆದರು, ಪತ್ರದಲ್ಲಿ ಹೀಗಿತ್ತು: "ನಿಮ್ಮೆಲ್ಲರ ಕಣ್ಣ ಪನ್ನೀರಿನಿಂದ ಪುಳಕಿತರಾದ ನಾವು ಇಲ್ಲಿಗೆ ಕ್ಷೇಮದಲ್ಲಿ ತಲಪಿದೆವು. ...ಮಂಗಳೂರು ರೈಲ್ವೇ ನಿಲ್ದಾಣದಿಂದ ಬಂಡಿ ಹೊರಟಾಗ – ಮುಂದೆ ಹಿಂದೆ ನಿಂತಿದ್ದ ಎಲ್ಲರ ಮುಖಗಳನ್ನು ಬೇರೆ ಬೇರೆ ನೋಡುವ ಪ್ರಯತ್ನ ಮಾಡಿದೆ. ನಿನ್ನ ಮುಖ ಕಾಣಲೇ ಇಲ್ಲ. ನನ್ನ ಕಣ್ಣುಗಳು ಹುಡುಕುತ್ತಲೇ ಇದ್ದುವು... ನಿನ್ನ ಯೋಚನೆಯಲ್ಲಿಯೇ ನೂರಾರು ಮೈಲು ಪ್ರಯಾಣಮಾಡಿದೆ... ನಿನಗೆ ನನ್ನಲ್ಲಿ ಎಷ್ಟು ಆದರವಿದೆಯೆಂಬುದು ನನಗೆ ಗೊತ್ತಿಲ್ಲವೇ? – ಅದಕ್ಕೆ ಸಾಕ್ಷ್ಯವೇನೂ ಬೇಕಿಲ್ಲ. ಫಲಾಪೇಕ್ಷೆಯ ಅಥವಾ ಕ್ಷಣಿಕ ಭಾವೋದ್ರೇಕದ ಆದರವಲ್ಲ ಅದು; ಜನ್ಮಾಂತರೀಯವಿರಲೂ ಬಹುದು... ಚಂದ್ರಮಾ! ಧೃತಿಗೆಡದೆ, ಮತಿಗೆಡದೆ, ಕೃತಿ ಎನಿಸಿ ಬಾಳು..." – ಇಂತಹ ಗುರುಕೃಪೆಯನ್ನು ನಾನು ಏನೆಂದು ವ್ಯಾಖ್ಯಾನಿಸಲಿ? 'ಬಿನ್ನಹಕೆ ಬಾಯಿಲ್ಲವಯ್ಯಾ' ಎಂದಷ್ಟೇ ಹೇಳಬಲ್ಲೆ. ಜನ್ಮಾಯತ್ತವಾದ ಅನಾರೋಗ್ಯ, ಆಮೇಲೆ ದೃಷ್ಟಿಮಾಂದ್ಯ, ಮತ್ತೆ ವೃದ್ಧಾಪ್ಯ – ಸಹಜವಾದ ಶರೀರ ದೌರ್ಬಲ್ಯಗಳಲ್ಲೂ ಅವರು, ನನ್ನ ಯೋಗಕ್ಷೇಮಗಳಲ್ಲಿ, ಶ್ರೇಯೋಭಿವೃದ್ಧಿಯಲ್ಲಿ ಏಕಪ್ರಕಾರ ಆಸಕ್ತರಾಗಿದ್ದರು. ನಾನು ಕಾಗದ ಬರೆಯುವುದಕ್ಕೆ ಅಥವಾ ಕಂಡು ಮಾತಾಡುವುದಕ್ಕೆ ಸ್ವಲ್ಪ ತಡವಾದರೂ ಅವರ ಕಾರ್ಡು ಬಂದೇ ಬರುತ್ತಿತ್ತು: "ನಿನ್ನ ಕೊಂಬು ಕೇಳದೆ ವಾರವೇ ಆಯಿತು"; "ನೀನು ಊರಲ್ಲಿ ಇದ್ದೀಯೋ ಇಲ್ಲವೋ?" "ಊರಿಗೆ ಬಂದರೆ ದಾಸಯ್ಯ! ನಮ್ಮ ಕೇರೀಗೆ ಬಾ ಕಂಡ್ಯ ದಾಸಯ್ಯ" – ಹೀಗೆಲ್ಲ ಇರುತ್ತಿತ್ತು ಅವುಗಳ ಒಕ್ಕಣೆ!

ಸೇಡಿಯಾಪು ಅವರು ನನ್ನನ್ನು ಪ್ರೀತಿಯಿಂದ 'ಚಂದ್ರಮಾ' ಎಂದು ಕರೆಯುತ್ತಿದ್ದರು. ತಮ್ಮ ಎಲ್ಲಾ ಪತ್ರಗಳಲ್ಲೂ "ಚಂದ್ರಮಾ ನಿನಗೆ ಗೆಲುವಿರಲಿ, ಆರೋಗ್ಯವಿರಲಿ, ಭಗವತ್ಕೃಪೆ ಸದಾ ನಿನ್ನ ಮೇಲಿರಲಿ" ಎಂದು ತಪ್ಪದೇ ಬರೆಯುತ್ತಿದ್ದರು. ಅಷ್ಟೇ ಅಲ್ಲ, ಅದಕ್ಕಿಂತ ಹೆಚ್ಚಿನದನ್ನು, ನಾನು ಊಹಿಸಲೂ ಆಗದುದನ್ನು ಅವರು ನನಗೆ ನೀಡಿದರು, – ೧೯೮೫ರಲ್ಲಿ ಅವರ ಉದ್ಗ್ರಂಥ 'ಛಂದೋಗತಿ'ಯ ಬಿಡುಗಡೆ ಉಡುಪಿಯಲ್ಲಿ ಆಯಿತು. ಪ್ರೊ. ಕು.ಶಿ. ಹರಿದಾಸಭಟ್ಟರು ತಮ್ಮ ಸಂಸ್ಥೆಯಲ್ಲಿ ಅದನ್ನು ಆಯೋಜಿಸಿದ್ದರು. ಬಿಡುಗಡೆಯ ದಿನ ಬೆಳಗ್ಗೆ ಅವರು ನನಗೆ ಫೋನ್ ಮಾಡಿ, "ಈ ಸಂಜೆ ಗುರು ಸೇಡಿಯಾಪು ಅವರ 'ಛಂದೋಗತಿ'ಯ ಬಿಡುಗಡೆ. ಶಿಷ್ಯೋತ್ತಮ ಬರಬೇಕು" ಎಂದರು. (ಕು.ಶಿ.ಯವರೂ ಸೇಡಿಯಾಪು ಅವರನ್ನು 'ಗುರು'ವೆಂದೇ ಆದರಿಸುತ್ತಿದ್ರು.) 'ಶಿಷ್ಯೋತ್ತಮ' ಎಂಬುದು ಕು.ಶಿ.ಯವರದೇ ಮಾತಿನ ಒಂದು ವರಸೆ ಎಂದುಕೊಂಡೆ; ಸಂಜೆ ಸಭೆಗೂ ಹೋದೆ, ಬಿಡುಗಡೆಗೊಂಡ ಪುಸ್ತಕದ ಪುಟ ಬಿಡಿಸಿ ನೋಡುತ್ತೇನೆ: ಅದರ ಆರಂಭದ ಉಪಕಾರ ಸ್ಮರಣೆಯಲ್ಲಿ ಸೇಡಿಯಾಪು ಬರೆದಿದ್ದರು. "...ನನ್ನ ಶಿಷ್ಯೋತ್ತಮನಾದ ಶ್ರೀ ಎಂ. ರಾಮಚಂದ್ರ, ಎಂ.ಎ...! – ಅವರು ನನಗೆ ನೀಡಿದ ತಮ್ಮ ಎಲ್ಲ ಪುಸ್ತಕಗಳ ಶೀರ್ಷಿಕ ಪುಟಗಳಲ್ಲೂ ಸಾಮಾನ್ಯವಾಗಿ "ಕಿರಿಯ ಗೆಳೆಯನಿಗೆ", "ಪ್ರಿಯ ಶಿಷ್ಯನಿಗೆ" ಎಂದು ಬರೆಯುವುದಿತ್ತು. ಇದೀಗ ನನಗೆ 'ಶಿಷ್ಯೋತ್ತಮ'ತ್ವದ ಕೃಪಾಶೀರ್ವಾದ! – ನನ್ನಂತಹ ಗರಿಕೆಹುಲ್ಲು, ಇಲ್ಲವೇ ತುಂಬೆಗಿಡದ ಮೇಲೂ ಅವರು ಅದೆಂತಹ ಪ್ರೀತಿ – ವಾತ್ಸಲ್ಯಗಳ ಹಾಲುಮಳೆಗರೆದರು ಎಂಬುದನ್ನು ಭಾವಿಸುವಾಗೆಲ್ಲ ನಾನು ಶ್ರೀಕೃಷ್ಣನ ವಿಶ್ವರೂಪದರ್ಶನ ಮಾಡಿದ ಮಹಾಭಾರತದ ಅರ್ಜುನನಂತೆ, "ತಚ್ಚ ಸಂಸ್ಮೃತ್ಯ, ಸಂಸ್ಮೃತ್ಯ ಹೃಷ್ಯಾಮಿ ಚ ಪುನಃ ಪುನಃ' – ಎಂದು ಪುಳಕಿತನಾಗುತ್ತಿದ್ದೇನೆ.

ಮಹಾಭಾರತದ ಅರ್ಜುನ ಎಂದೆ – ಹೌದು, ಯುದ್ಧಕ್ಷೇತ್ರದ ಅರ್ಜುನನಂತೆ ನನ್ನ ಜೀವನರಂಗದಲ್ಲೂ ಸರಿಯೋ ತಪ್ಪೋ, ಒಳಿತೋ ಕೆಡುಕೋ, ಮಾಡಲೇ ಬೇಡವೇ, ಈವೊತ್ತೋ ನಾಳೆಯೋ ಎಂಬ ದ್ವಂದ್ವಗಳೆಲ್ಲ ಎದ್ದೆದ್ದು ಬಂದಾಗ ಸೇಡಿಯಾಪು ಅವರನ್ನೇ ನಾನು 'ಶಿಷ್ಯಸ್ತೆಹಂ ಶಾಧಿ ಮಾಂ ತ್ವಾ ಪ್ರಪನ್ನಂ' ಎಂದು ಆಶ್ರಯಿಸಿದ್ದೇನೆ. ಆಗ ಅವರು ಎಚ್ಚರಿಕೆಯ ಮಾತಿನ ಚಾಟಿ ಬೀಸಿದ್ದಾರೆ, ಕರ್ತವ್ಯ ಬೋಧನೆಯ ಪಾಂಚಜನ್ಯ ಊದಿದ್ದಾರೆ. ೧೯೬೭ರಲ್ಲಿ ಅವರ ಕವನ ಹಾಗೂ ಕಥನ ಕಾವ್ಯಗಳ ಸಂಗ್ರಹ 'ಚಂದ್ರಖಂಡ'ವನ್ನು ಪ್ರಕಟಿಸುವ ಸಾಹಸಮಾಡಿದೆ. ಅವರು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಪ್ರಕಟನೆಗೆ ಸಮ್ಮತಿಸಿದ್ದರು. ಅದು 'ಸಾಹಿತ್ಯ ಅಕಾಡೆಮಿ'ಯಿಂದ ಬಹುಮಾನಿತವೂ ಆಯಿತು. ಬಹುಮಾನ ಘೋಷಣೆ ಮಾಡುವಾಗ ಅಕಾಡೆಮಿಯು ಪ್ರಕಾಶಕನಾದ ನನ್ನನ್ನೇ ಪುಸ್ತಕ ಲೇಖಕ ಎಂದು ಭ್ರಮಿಸಿತು, ಹಾಗೆಯೇ ಪ್ರಕಟಿಸಿತು. ಸೇಡಿಯಾಪು ಅವರ ನ್ಯಾಯಸಮ್ಮತ, ಸಾತ್ವಿಕ ಕೋಪ ಹೇಳತೀರದು. 'ನಿನ್ನಿಂದ ಕರ್ತವ್ಯಲೋಪ ಆಗಿದೆ' ಎಂದು ಸಿಟ್ಟಿನಲ್ಲಿ ಬರೆದರು. ನಾನೂ ಏನೇನೋ ಸಮಜಾಯಿಸಿಕೆ ನೀಡಿದೆ. ಸೇಡಿಯಾಪು ಕದಲಲಿಲ್ಲ, ಬದಲಾಗಲಿಲ್ಲ. ನಮ್ಮ ನಡುವೆ ಪತ್ರಗಳ ಪೂರವೇ ಹರಿಯಿತು, ನನ್ನ ಕಣ್ಣುಗಳಿಂದ ನೀರೂ ಸುರಿಯಿತು. ಕೊನೆಗೆ ಬೆಂಗಳೂರಿಗೆ ಹೋಗಿ (ಆಗ ಅವರು ಅಲ್ಲಿದ್ದರು) ಅವರ ಕಾಲಿಗೆ ಬಿದ್ದೆ – ಆ ಹಿರಿಜೀವ ಈ ಕಿರಿಯನನ್ನು ಎತ್ತಿಕೊಂಡರು, ಎದೆಗೆ ಅಪ್ಪಿಕೊಂಡರು.

ಒಮ್ಮೆ ನನ್ನ ಕರ್ಮಕ್ಷೇತ್ರದಲ್ಲೊಂದು ಬಿರುಗಾಳಿಯೆದ್ದು ನನ್ನ ಕಾಲು ಎಲ್ಲಿ ನೆಲೆದಪ್ಪುತ್ತದೋ ಎಂದಾಯಿತು. ನನ್ನ ಹಳವಂಡ ಗುರುಗಳಲ್ಲಿ ತೋಡಿಕೊಂಡೆ. ಅವರು 'ಕಿಂ ಕರ್ಮ, ಕಿಮ ಕರ್ಮೇತಿ' ಎಂಬುದನ್ನು ತಿಳಿಸಿ ಹೇಳಿದರು. ನನಗೆ ಸಮಾಧಾನವಾಗಲಿಲ್ಲ. ಪತ್ರವ್ಯವಹಾರ ನಡೆಯಿತು. ಅವರು ಬರೆದರು : "...ನನ್ನ ಚಂದ್ರಮಾ! ನಿನ್ನಲ್ಲಿ ದುರುದ್ದೇಶವನ್ನು ಶಂಕಿಸುವುದು ಎಂದೂ ಸಂಭವವಲ್ಲ. ನಿನ್ನ ಸ್ವಭಾವವನ್ನು ನಾನು ಚೆನ್ನಾಗಿ ಬಲ್ಲೆ..... ಆದುದರಿಂದಲೇ ನೀನು ಎಷ್ಟೋ ವೇಳೆ ನನ್ನನ್ನು ನೋಯಿಸುವ ಪತ್ರ ಬರೆದಿದ್ದರೂ, ಕೆರಳದೆ – ನಿನ್ನ ತಪ್ಪನ್ನು ತೋರಿಸಿ ತಿದ್ದುವ ಪ್ರಯತ್ನವನ್ನು ಮಾಡಿದ್ದೇನೆಂದು ನನ್ನ ಮನಸ್ಸಾಕ್ಷಿಯನ್ನು ಪರಿಶೋಧಿಸಿ 'ಪಿತೇವ ಪುತ್ರಸ್ಯ' ಹೇಳುತ್ತೇನೆ... ನನ್ನ ಮಾತನ್ನು ನಂಬು! ನಂಬು!...."

ಹೀಗೆ ಹತ್ತು ಹಲವು ಸಲ ಸೇಡಿಯಾಪು ಅವರು ನನಗೆ 'ಪಿತೇವ ಪುತ್ರಸ್ಯ' ಉಪದೇಶ ಮಾಡಿದ್ದಾರೆ. 'ಸಖೇವ ಸಖ್ಯುಃ' ಸಂದೇಶ ನೀಡಿದ್ದಾರೆ. ನನ್ನ ದುಃಖವನ್ನು ತಾವೂ ಹಂಚಿಕೊಂಡು ಅದನ್ನು ತಗ್ಗಿಸಿದ್ದಾರೆ, ನನ್ನ ಸುಖದಲ್ಲಿ ಪಾಲ್ಗೊಂಡು ಅದನ್ನು ಹಿಗ್ಗಿಸಿದ್ದಾರೆ. ಅವರು ತಮ್ಮ ವಾತ್ಸಲ್ಯಹಸ್ತದಿಂದ ನನ್ನ ತಲೆಯನ್ನು ಮುಟ್ಟಿ ಬೆನ್ನನ್ನು ಸವರಿದ್ದಷ್ಟೇ ಅಲ್ಲ, ನನ್ನ ಸಣ್ಣ ಕುಟುಂಬದ ಸದಸ್ಯರ ಮೇಲೂ ಪ್ರೀತಿಯನ್ನು ಸುರಿದಿದ್ದಾರೆ. ನನ್ನ ಮತ್ತು ನನ್ನಾಕೆಯ ದಾಂಪತ್ಯ ಜೀವನದ ಆರಂಭದಲ್ಲಿ ಅವರು ನೀಡಿದ್ದ ಉಪದೇಶ, ತುಂಬಿದ್ದ ಧೈರ್ಯ, ಮಾಡಿದ ಉಪಕಾರ; ನನ್ನ ಇಬ್ಬರು ಮಕ್ಕಳು ಹುಟ್ಟಿದಾಗಲೂ ಅವರು ಪಟ್ಟ ಸಂತೋಷ, ಆಮೇಲೆ ಅವರಾಗಿಯೇ ಮಕ್ಕಳ ಜಾತಕಸ್ಫುಟಮಾಡಿ ಅವುಗಳ ಫಲವನ್ನು ಹೇಳಿದ್ದು; ನನ್ನನ್ನೂ ಆಗಾಗ ಪೀಡಿಸುವ ತ್ರಿದೋಷಗಳಿಗೆ ಶಮನೋಪಾಯ ಹೇಳಿದ್ದು; ಇಂತಹ ಹತ್ತು ನೂರು ಮಾತುಗಳಿವೆ. ಅವು ಹೇಳಿ ಮುಗಿಸುವಂಥವಲ್ಲ. ಮನಸ್ಸಿನಲ್ಲಿಯೇ ನೆನೆನೆನೆದು ಕಲ್ಲುಸಕ್ಕರೆಯಂತೆ ಸವಿಸವಿದು ಚಪ್ಪರಿಸುವಂಥದ್ದು. ಒಮ್ಮೆ ನನ್ನ ಹಿತೈಷಿಯೊಬ್ಬರು ತಾವು ಪ್ರಾಚಾರ್ಯರಾಗಿದ್ದ ಕಾಲೇಜಿಗೆ ನನ್ನನ್ನು ಆಮಂತ್ರಿಸಿ, ಉನ್ನತ ಪದವಿಯನ್ನು ನೀಡುವ ಆಶ್ವಾಸನೆ ಕೊಟ್ಟಾಗ ಆ ಮೊದಲು ಹತ್ತುವರ್ಷ ಕರ್ತವ್ಯ ನಿರ್ವಹಿಸಿದ ಕಾರ್ಕಳದ ಕಾಲೇಜಿನಲ್ಲೇ ಇರುವುದೋ ಅದನ್ನು ಬಿಡುವುದೋ – to be or not to be ಎಂಬ ದ್ವಂದ್ವಕ್ಕೆ ನಾನು ಒಳಗಾದೆ. ಸೇಡಿಯಾಪು ಅವರ ಮಾರ್ಗದರ್ಶನ ಕೇಳಿದೆ. ಅವರು ನನಗೊಂದು ಪದ್ಯಸಂದೇಶವನ್ನೇ ನೀಡಿ, ಮನಸ್ಸಿಗೊಂದು ನೆಮ್ಮದಿಯ ನೆಲೆ ಕಾಣಿಸಿದರು. (ಆ ಪದ್ಯ 'ಆಯ್ಕೆ' ಎಂಬ ಶೀರ್ಷಿಕೆಯಲ್ಲಿ 'ಚಂದ್ರಖಂಡ'ದ ಪರಿವರ್ಧಿತ ಆವೃತ್ತಿಯಲ್ಲಿ ಪ್ರಕಟವಾಗಿದೆ.)

ಸೇಡಿಯಾಪು ಅವರು ನನಗೆ ಬದುಕುವ ದಾರಿಯನ್ನು ಮಾತ್ರ ತೋರಿದ್ದಲ್ಲ, ಬರೆಯುವ ರೀತಿಯನ್ನೂ ತಿಳಿಸಿದ್ದಾರೆ. ಅವರಿದ್ದಷ್ಟು ಕಾಲ, ನನ್ನ ಸಣ್ಣ – ಪುಟ್ಟ ಬರವಣಿಗೆ ಏನಿದ್ದರೂ ಅವರಿಗೆ ಓದಿಹೇಳದೆ ಅವರ ಒಪ್ಪಿಗೆ ಪಡೆಯದೆ ನಾನು ಪ್ರಕಟಿಸಿದ್ದಿಲ್ಲ. ಉದ್ದಿಷ್ಟ ವಿಷಯದ ಔಚಿತ್ಯ, ಅಭಿಪ್ರಾಯ ನಿರೂಪಣೆಯ ತರ್ಕಬದ್ಧತೆ, ಪದಪ್ರಯೋಗಗಳ ಸಾಧುತ್ವ, ಭಾಷಾಶೈಲಿಗಳ ಸೌಷ್ಠವ – ಇವೆಲ್ಲವುಗಳಲ್ಲೂ ಸೇಡಿಯಾಪು ಅಭಿಮತವೇ ನನಗೆ ಒರೆಗಲ್ಲು. ಅವರು ನನಗೊಂದು ಜೀವಂತ ಶಬ್ದಮಣಿದರ್ಪಣ, ಛಂದೋಂಬುಧಿ, ಸಂಜ್ಞಾರ್ಥಕೋಶ, ಪುರಾಣ ನಾಮಚೂಡಾಮಣಿ ಎಲ್ಲವೂ ಆಗಿದ್ದವರು. ಅವರ ಹತ್ತಿರ ಹೋಗಿ, ಅವರು ಹೇಳಿದುದನ್ನು ಕೇಳಿದರೆ ಸಾಕು – ಮೋಹನಸಪ್ತ ಸ್ಮೃತಲಾಭ ಆಗುತ್ತಿತ್ತು.

ನಾನು ಸೇಡಿಯಾಪು ಜತೆ 'ಗಿಂಡಿಮಾಣಿ'ಯ ಹಾಗೆ ನಡೆದುಕೊಂಡಿದ್ದೇನೆ. ಮಂಗಳೂರು, ಮೈಸೂರುಗಳಲ್ಲಿ ಅವರು ಇದ್ದಾಗಲೂ ಮಣಿಪಾಲಕ್ಕೆ ಬಂದಮೇಲೂ ಅವರೊಂದಿಗೆ ಹತ್ತುಕಡೆ ಓಡಾಡಿದ್ದೇನೆ. ಬಾಲಮುರುಳಿಕೃಷ್ಣನ ಗಾಯನ, ಯಾಮಿನೀ ಕೃಷ್ಣಮೂರ್ತಿಯ ನರ್ತನ, ಬಿಸ್ಮಿಲ್ಲಾಖಾನನ ವಾದನಗಳನ್ನು ಅವರ ಜತೆ ಕುಳಿತು ಕೇಳೀ ನೋಡಿ ಸಂತೋಷಪಟ್ಟಿದ್ದೇನೆ. ೧೯೭೭ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸ್ವೀಕಾರಕ್ಕೆ ಬೆಂಗಳೂರಿಗೆ ಹೊರಟಾಗ ಅವರು ನನ್ನನ್ನೂ ಕರೆದರು. ೧೯೭೮ರಲ್ಲಿ ಬೆಂಗಳೂರು ಗೋಖಲೆ ಸಂಸ್ಥೆಯಲ್ಲಿ ಶ್ರೀ ಗೋವಿಂದ ಪೈ ಸ್ಮಾರಕ ಉಪನ್ಯಾಸಕ್ಕೆ ಹೋಗುವಾಗ ನಾನೂ ಜತೆಗಿರುವಂತೆ ತಿಳಿಸಿದರು. ಅಲ್ಲಿ ಅವರು ಮಾಡಿದ ಉಪನ್ಯಾಸ – 'ಕನ್ನಡ ಗೀತಿಕೆಯ ಲಕ್ಷಣ ಮತ್ತು ಧಾಟಿ'ಯನ್ನು ಭಾಗಶಃ ನಾನು ಓದಿ ಹೇಳಿದೆ. ೧೯೯೦ರಲ್ಲಿ, ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಮ್ಮೇಳನದಲ್ಲಿ ಸೇಡಿಯಾಪು ಸಮ್ಮಾನಿತರಾಗುವುದಿತ್ತು. ಸಮ್ಮಾನವನ್ನು ಸ್ವೀಕರಿಸುವುದಕ್ಕೆ ಅವರು ನನ್ನನ್ನು ಕಳುಹಿಸಿಕೊಟ್ಟರು. ಅಲ್ಲಿ ಸಿಕ್ಕಿದ ವಸ್ತು ಒಡವೆಗಳನ್ನು ಮಣಿಪಾಲಕ್ಕೆ ಒಯ್ದು ಅವರಿಗೆ ಒಪ್ಪಿಸಿದೆ. ಅವರು ಮಲಗಿದ್ದಲ್ಲಿಂದ ಎದ್ದು ಕುಳಿತು, ನನ್ನನ್ನು ಪಕ್ಕಕ್ಕೆ ಕರೆದು, ಪರಿಷತ್ತು ನೀಡಿದ್ದ ಶಾಲನ್ನು ನನಗೇ ಹೊದಿಸಿದರು – ಅದು ಅವರ ಬೆಚ್ಚನೆಯ ಪ್ರೀತಿಯ ಸಂಕೇತ. ಈಗಲೂ ಅದು ನನಗೆ ರಕ್ಷೆಯಾಗಿದೆ, ನನ್ನಲ್ಲಿ ಸುಖೋಷ್ಣಭಾವವನ್ನು ಉಂಟುಮಾಡುತ್ತಿದೆ.

೧೯೯೮ರ ಜೂನ್ ೮ – ಸೇಡಿಯಾಪು ಅವರ ತೊಂಬತ್ತೈದನೆಯ ಜಯಂತಿ, ಅವರ ಸಫಲತಾ ತೀರ್ಥಯಾತ್ರೆಯ ಅಂತಿಮ ದಿನ! ಅವರ 'ತಥ್ಯದರ್ಶನ'ದ ಆಂಗ್ಲಾನುವಾದ – Duscovery of Facts – ಬಿಡುಗಡೆಗಾಗಿ ಮಣಿಪಾಲದ 'ಕೈಲಾಸ'ದಲ್ಲಿ ನಾವೆಲ್ಲ ಸೇರಿದ್ದೆವು. ಡಾ॥ ಶಿವರಾಮ ಕಾರಂತರಿಂದ ಪುಸ್ತಕ 'ವಿಮೋಚನೆ' ಒಂದು ಪ್ರತಿಯನ್ನು ಕಾರಂತರು ಸೇಡಿಯಾಪು ಅವರ ಕೈಯಲ್ಲಿರಿಸಿದರು. ಸೇಡಿಯಾಪು ಅದನ್ನು ಮುಟ್ಟಿ ತಡವಿ ನೋಡಿದರು. ಬೆಳಕಿಂದ ಅವರ ಕಣ್ಣು ಹೊಳೆದಂತೆ ತೋರಿತು. ಮುಖದಲ್ಲೊಂದು ಸಂತೃಪ್ತಭಾವ. ನಾವು ಒಬ್ಬೊಬ್ಬರಾಗಿ ಸೇಡಿಯಾಪು ಮಲಗಿದ್ದಲ್ಲಿಗೆ ಹೋಗಿ ಕಾಲು ಮುಟ್ಟಿ ನಮಸ್ಕರಿಸಿದರು. ನಾನು ಹತ್ತಿರ ಹೋದಾಗ ತಲೆ ಮುಟ್ಟಿ ಹರಸಿದರು., ಮತ್ತು ಕ್ಷೀಣಸ್ವರದಲ್ಲಿ ತಡೆತಡೆದು ಹೇಳಿದರು – "ಒಳ್ಳೆಯ ಕೆಲಸಮಾಡುತ್ತ ಆರೋಗ್ಯವಂತನಾಗಿ ನೂರುವರ್ಷ ಬಾಳು. ನಿನಗೆ ಯಾವ ಕಷ್ಟವೂ ಬಾರದೇ ಇರಲಿ, ಎಲ್ಲವೂ ಒಳ್ಳೆಯದೇ ಆಗಲಿ!" ನಲ್ವತ್ತು ವರ್ಷಗಳಲ್ಲಿ ಅದೇ ನಾನು ಕೇಳಿದ ಕೊನೆಯ ಗುರುವಾಣಿ!

ಅದೇ ಮಧ್ಯರಾತ್ರಿ ಸೇಡಿಯಾಪು ಅವರ ಶಿಥಿಲ ದೇಹಪಂಜರದಿಂದ ಅವರ ಪ್ರಾಣಪಕ್ಷಿ ಹಾರಿ ಹೋಯಿತು; ನಮ್ಮೆಲ್ಲರ ದಾರಿಬೆಳಕೂ ಆರಿದಂತೆ ತೋರಿತು. ತೋರಿತು ಅಷ್ಟೇ ಇಲ್ಲ, ಆರಿಲ್ಲ, ಬತ್ತಿಯಷ್ಟೇ ಬತ್ತಿದೆ. ಅದರ ಬೆಳಕು ಇನ್ನೂ ಕುಡಿಯಾಡಿಸುತ್ತಲೇ ಇದೆ. ದಾರಿ ತೋರಿಸುತ್ತಲೇ ಇದೆ!

❖

# ಗುರು 'ಚಂದ್ರಮಾ'

## (ಪ್ರೊ|| ಎಂ. ರಾಮಚಂದ್ರ)

● *ಮುನಿರಾಜ ರೆಂಜಾಳ*

'ನಗುವು ಸಹಜದ ಧರ್ಮ, ನಗಿಸುವುದು ಪರಧರ್ಮ
ನಗುವ ಕೇಳುತ ನಗುವುದತಿಶಯದ ಧರ್ಮ. . . ."

–ಡಿ.ವಿ.ಜಿ.

ಜಗತ್ತಿನಲ್ಲಿ ತಮ್ಮದೇ ಏಳ್ಗೆ, ಸುಖ–ಸಂತೋಷಗಳಿಗಾಗಿ ಕಾರ್ಯ ಪ್ರವೃತ್ತರಾಗಿರುವವರು ಬಹಳ ಜನರಿದ್ದಾರೆ. ಅವರೆಲ್ಲರೂ ಸಾಮಾನ್ಯರು. ಆದರೆ ಇತರರ ಶ್ರೇಯಸ್ಸು, ಸುಖ–ಸಂತೋಷಗಳಿಗಾಗಿ ಕೆಲಸ ಮಾಡುತ್ತಾ ಅವರ ಸಂತೋಷದಲ್ಲಿ ತಾವೂ ಆನಂದ ಪಡುವವರು ಬಹಳ ಕಡಿಮೆ ಜನ – ಅವರೇ ಅಸಾಮಾನ್ಯರು. ಅಂತಹ ಅನೇಕ ಸಂಖ್ಯೆಯ ಅಸಾಮಾನ್ಯ ವ್ಯಕ್ತಿಗಳಲ್ಲೊಬ್ಬರು ನನ್ನ ಪೂಜನೀಯ ಗುರುಗಳಾದ ಕಾರ್ಕಳದ ಪ್ರೊ. ಎಂ. ರಾಮಚಂದ್ರರು.

ನಾನು ಘಟ್ಟದ ಮೇಲಿನ ಊರೊಂದರಲ್ಲಿ ಪ್ರೌಢಶಾಲೆ ಮತ್ತು ಪಿ.ಯು.ಸಿ. ಶಿಕ್ಷಣವನ್ನು ಪೂರ್ಣಪ್ರಮಾಣದಲ್ಲಿ ಕನ್ನಡ ಮಾಧ್ಯಮದಲ್ಲೇ ಮುಗಿಸಿ, ಪದವಿ ಶಿಕ್ಷಣಕ್ಕಾಗಿ ೧೯೮೦ರಲ್ಲಿ ನನ್ನ ಹುಟ್ಟೂರಿಗೆ ಹತ್ತಿರದ ಕಾರ್ಕಳದ ಶ್ರೀ ಭುವನೇಂದ್ರ ಕಾಲೇಜಿನಲ್ಲಿ ಸೇರಿದೆ. ಬಡ ಕುಟುಂಬದಿಂದ, ಗ್ರಾಮೀಣ ಪ್ರದೇಶದಿಂದ, ಕನ್ನಡ ಮಾಧ್ಯಮದಿಂದ, ದೂರದ ಊರಿನಿಂದ ಕಾಲೇಜಿಗೆ ಬಂದ ನಾನು, ಆ ಮೊದಲ ದಿನಗಳಲ್ಲಿ ಅಪರಿಚಿತ ಲೋಕದಲ್ಲಿ ಕಕ್ಕಾಬಿಕ್ಕಿಯಾಗಿದ್ದೆ. ಆಗ ಮರುಭೂಮಿಯಲ್ಲಿ ಓಯಸಿಸ್ ಕಂಡಹಾಗೆ ನನಗೆ ತುಂಬಾ ಹಿತ ಮತ್ತು ಹರ್ಷ ನೀಡಿದ್ದು ಕನ್ನಡದ ತರಗತಿಗಳು. ಪದವಿ ತರಗತಿಯಲ್ಲಿ ಎರಡು ವರ್ಷ ನಮ್ಮ ಪುಣ್ಯವಿಶೇಷದಿಂದ ನಮಗೆ ಪ್ರಾಧ್ಯಾಪಕರಾಗಿ ಒದಗಿ ಬಂದವರು ಪ್ರೊ. ಎಂ. ರಾಮಚಂದ್ರರು. ತಟ್ಟನೆ ನೋಡಿದರೆ ಸರಳವ್ಯಕ್ತಿ ಎನಿಸಿದರೂ, ಗಾಂಭೀರ್ಯ ತುಸು ಹೆಚ್ಚೇ ಎನಿಸುವಂತಿದ್ದ 'ನಿಷ್ಠುರ ನಿರ್ವಹಣೆ'ಗೆ ಹೆಸರಾಗಿದ್ದ ಗುರು 'ಎಂ.ಆರ್.'ರನ್ನು ತರಗತಿಯ ಆಚೆ ಹೋಗಿ ಭೇಟಿಯಾಗುವುದಕ್ಕೆ ಸ್ವಲ್ಪ ಹಿಂಜರಿಯುತ್ತಿದ್ದೆ. ತರಗತಿಯಲ್ಲಿ ಅವರ ಪಾಠ–ಪ್ರವಚನಗಳ ಹಿಂದೆ ಇದ್ದ ವಿಷಯ ಪಾಂಡಿತ್ಯ, ನಿರರ್ಗಳ ವಾಗ್ಝರಿ, ಚಿಂತನಶೀಲವಾದ ನಿರೂಪಣೆ ವಿದ್ಯಾರ್ಥಿಗಳಾದ ನಮ್ಮ ಮೇಲೆ ಮೋಡಿ ಮಾಡಿದ್ದರು, ಅವರು ತುಂಬಾ 'ದೊಡ್ಡವರು' ಎಂಬ ಭಾವ ಬೆಳೆದು ನಾವು ಅವರೆದುರು ನಿಲ್ಲಲು ಹೆದರುತ್ತಿದ್ದೆವು. ಆದರೆ ಸಾಹಿತ್ಯ ಪ್ರೀತಿಯ ತುಡಿತ ನನ್ನನ್ನು ಧೈರ್ಯವಾಗಿ ಅವರೆದುರು ನಿಲ್ಲಿಸಿತ್ತು. ಅಲ್ಲಿಂದ ಇಂದಿನವರೆಗೆ, ಅಂದರೆ ೧೯೮೦ರಿಂದ ೨೦೦೯ರ ಈ ದಿನದ ವರೆಗೆ

ಗುರು ಪ್ರೊ. ಎಂ. ರಾಮಚಂದ್ರರನ್ನು ಕಳೆದ ಮೂವತ್ತು ವರ್ಷಗಳಿಂದ ಹತ್ತಿರದಿಂದ ನೋಡುತ್ತಾ ಬಂದಿದ್ದೇನೆ. ಅವರ ಹಿರಿಮೆಗೆ ಬೆರಗಾಗಿದ್ದೇನೆ, ಮರುಳಾಗಿದ್ದೇನೆ.

'ವಿದ್ಯಾರ್ಥಿಗಳು ಕೇವಲ ಪುಸ್ತಕದ ಹುಳುಗಳಾಬಾರದು, ಬಹುಮುಖ ಆಸಕ್ತಿಯ ನಗೆ, ಬೆಳಸಿಕೊಳ್ಳಬೇಕು, ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯಾಗಬೇಕು' ಎಂಬ ಮಹತ್ವಾಕಾಂಕ್ಷೆ ಯೊಂದಿಗೆ ಅಧ್ಯಾಪನ ವೃತ್ತಿಯನ್ನು ನಿರ್ವಹಿಸಿದವರು ಪ್ರೊ. ಎಂ. ರಾಮಚಂದ್ರರು. ತಮ್ಮ ಸದಾಶಯಕ್ಕೆ ಅನುಸಾರವಾಗಿ ತಮ್ಮ ಸೇವಾವಧಿಯ ಉದ್ದಕ್ಕೂ ವಿದ್ಯಾರ್ಥಿಗಳ ಪಠ್ಯ ಹಾಗ ಪಠ್ಯೇತರ ಚಟುವಟಿಕೆಗಳಿಗೆ ವಿಪುಲವಾದ ಅವಕಾಶಗಳನ್ನು ಸೃಷ್ಟಿಸಿದ ಸೂಕ್ತ ವೇದಿಕೆಗಳನ್ನು ಕಲ್ಪಿಸಿದ ಶ್ರೀ ಗುರು ಅವರು. ನಾನು ಅವರಿಂದ ಎರಡು ವರ್ಷ ಪಾಠ ಕೇಳಿದ್ದೆ. ತರಗತಿಯೊಳಗೆ ಅವರೆಂದೂ ಜಳ್ಳು-ಪೊಳ್ಳು ಮಾತುಗಳನ್ನು ಆಡಿದ್ದೇ ಇಲ್ಲ. ಕಾಡುಹರಟೆಗೆ ಅವರಲ್ಲಿ ಯಾವತ್ತೂ ಅವಕಾಶವಿಲ್ಲ. ಅವರ ತರಗತಿಗಳೆಂದರೆ ಅದು ಕನ್ನಡ ನಾಡು-ನುಡಿಯ ಕುರಿತಾದ, ಸಾಹಿತ್ಯದ ವಿವಿಧ ಮಜಲುಗಳು ಹಾಗೂ ಸಾಹಿತ್ಯದ ಸಾಧಕರ ಬಗೆಗಿನ ಗಂಭೀರ ಚಿಂತನೆಯ ಅವಧಿ ಗಳಾಗಿರುತ್ತಿದ್ದವು. ತಮ್ಮ ಮುಂದಿದ್ದ ತರುಣ ವಿದ್ಯಾರ್ಥಿಗಳಲ್ಲಿ ಕನ್ನಡ ಸಾಹಿತ್ಯ ಪರಂಪರೆಯ ಬಗೆಗೆ ಆದರಾಭಿಮಾನ ಹುಟ್ಟುವಂತೆ, ಆಧುನಿಕ ಸಾಹಿತ್ಯದಲ್ಲಿ ಅಭಿರುಚಿ ಬೆಳೆಯುವಂತೆ ಮಾಡುವ ಪರಿಣಾಮಕಾರೀ ಅಧ್ಯಾಪನ ಅವರದ್ದಾಗಿತ್ತು. ಅದರಿಂದ ಪ್ರೇರಿತರಾಗಿ ಅನೇಕ ಸಂಖ್ಯೆಯ ವಿದ್ಯಾರ್ಥಿಗಳು ಸಾಹಿತ್ಯ ರಚನೆಯಲ್ಲಿ ಆಸಕ್ತಿ ತೋರಿಸಿದಾಗ, ಅವರಿಗೆ ಸೂಕ್ತ ಮಾರ್ಗದರ್ಶನ ನೀಡಿ, ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಿದ್ದರು. ಕಾಲೇಜಿನ ಸಾಹಿತ್ಯ ಸಂಘ. ಭಿತ್ತಿಪತ್ರಿಕೆ, ವಾರ್ಷಿಕ ಸಂಚಿಕೆ, ವಿವಿಧ ಕಮ್ಮಟ-ಕಾರ್ಯಾಗಾರಗಳು, ಗೋಷ್ಠಿ-ಉತ್ಸವಗಳು ಹೀಗೆ ವಿವಿಧ ಚಟುವಟಿಕೆಗಳ ಮೂಲಕ ನಿರಂತರವಾಗಿ ಸಾಹಿತ್ಯಪ್ರಿಯ ವಿದ್ಯಾರ್ಥಿಗಳನ್ನು ತೊಡಗಿಸಿ, ಹುರಿದುಂಬಿಸುತ್ತಿದ್ದರು.

ನನಗೆ ಚೆನ್ನಾಗಿ ನೆನಪಿದೆ 'ಎಂ.ಆರ್.'ರ ಪಾಠಗಳಿಂದ ಪ್ರಚೋದಿತನಾಗಿ, ಕಾಲೇಜಿಗೆ ಸೇರಿದ ಕೆಲವೇ ದಿನಗಳಲ್ಲಿ ಒಂದು ದಿನ ಧೈರ್ಯವಾಗಿ ಅವರ ಚೇಂಬರ್‌ಗೆ ಹೋಗಿ ನಿಂತಿದ್ದೆ. "ನನಗೆ ಸಾಹಿತ್ಯದ ಬಗ್ಗೆ ಹೆಚ್ಚು ತಿಳಿಯಬೇಕು, ಬರೆಯಬೇಕು ಎನಿಸಿದೆ. ಏನು ಮಾಡಲಿ" ಎಂದು ಕೇಳಿದೆ. ತತ್‌ಕ್ಷಣ ಕಾಲೇಜಿನ ಲೈಬ್ರರಿಯಿಂದ ಡಾ॥ ರಂ.ಶ್ರೀ. ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ'ಯನ್ನು ನನಗೆ ಒದಗಿಸಿಕೊಟ್ಟು, "ಮೊದಲು ಇದನ್ನು ಓದಿ, ಆಮೇಲೆ ಬರೆಯಿರಿ" ಎಂದಿದ್ದರು. ಅಲ್ಲಿಂದ ನನ್ನ ಸಾಹಿತ್ಯ ಯಾತ್ರೆ ಆರಂಭವಾಯಿತು. ಮುಂದೆ ಕವಿತೆಗಳನ್ನು ಬರೆದು ಅವರ ಮುಂದಿಟ್ಟೆ. ತಾಳ್ಮೆಯಿಂದ ಓದಿ, ತಿದ್ದಿ ದೋಷಗಳನ್ನು ತಿಳಿಹೇಳಿ, ಭಿತ್ತಿಪತ್ರಿಕೆ - ವಾರ್ಷಿಕ ಸಂಚಿಕೆಗಳಲ್ಲಿ ಪ್ರಕಟಿಸಿ, ಪ್ರೋತ್ಸಾಹಿಸಿದರು. ಈ ಪ್ರೋತ್ಸಾಹ-ದೂರಕ್ಕೆ ಹಾಗೂ ಸ್ವಲ್ಪ ಎತ್ತರಕ್ಕೆ ಕರೆದುಕೊಂಡು ಬಂದಿದೆ.

ಕಾಲೇಜಿನ ವ್ಯಾಸಂಗದ ಕೊನೆಯ ವರ್ಷ ನನ್ನನ್ನು ಸಾಹಿತ್ಯ ಸಂಘದ ಕಾರ್ಯದರ್ಶಿಯನ್ನಾಗಿ ಮಾಡಿದರು. ಆ ವರ್ಷ ಅಭೂತಪೂರ್ವವೆಂಬಂತೆ, ಕತೆ, ಕವನ, ಹರಟೆ, ಪ್ರಬಂಧ - ಇತ್ಯಾದಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ಕಮ್ಮಟಗಳು ನಡೆದವು.

ನಾಡಿನ ಖ್ಯಾತ ಲೇಖಕರು ಈ ಕಮ್ಮಟಗಳಿಗೆ ಬಂದು ಮಾರ್ಗದರ್ಶನ ನೀಡಿದರು. ನಮ್ಮ ಗುರುಗಳ ಕಾರ್ಯವೈಖರಿ ನಿಜಕ್ಕೂ ಮೆಚ್ಚಬೇಕಾದದ್ದು. ನನ್ನಂತಹ ಎಷ್ಟೋ ಜನ ಇಂದು ಪಡೆದ 'ಸಾಹಿತ್ಯ ಶಕ್ತಿ' ನಿಜವಾಗಿಯೂ 'ಶ್ರೀ ರಾಮಚಂದ್ರ ಪ್ರಸಾದ' ಎಂದರೆ ತಪ್ಪಾಗದು.

೧೯೬೭ರ ಹಿಂದೆಯೇ ಪ್ರೊ. ಎಂ. ರಾಮಚಂದ್ರರು ಶ್ರೀ ಭುವನೇಂದ್ರ ಕಾಲೇಜಿಗೆ ಪ್ರಾಧ್ಯಾಪಕರಾಗಿ ಸೇರಿದ್ದರಂತೆ. ಹದಿನೆಂಟು ವರ್ಷಗಳ ಬಳಿಕ ಅವರ ಶಿಷ್ಯನಾಗುವ ಭಾಗ್ಯ ನನ್ನದಾಯಿತು. ಆಗಲೇ ಎರಡು ದಶಕಗಳಲ್ಲಿ ಕಾಲೇಜು ಶ್ರೇಷ್ಠಮಟ್ಟದ ಉನ್ನತ ಶಿಕ್ಷಣಕ್ಕಾಗಿ ಪ್ರಖ್ಯಾತವಾಗಿತ್ತು. ಆ ಸಾಧನೆಯಲ್ಲಿ ಸಂಸ್ಥೆಯ ಸ್ಥಾಪಕ ಪ್ರಾಚಾರ್ಯರಾಗಿದ್ದ ದಿ॥ ಕೆ. ದಾಮೋದರ ಕಿಣಿಯವರಷ್ಟೇ, ಅವರ ಬಲಗೈಯಂತಿದ್ದ ಎಂ.ಆರ್. ರವರ ಪಾತ್ರವೂ ಹಿರಿದಾಗಿತ್ತು. ಸಾಹಿತ್ಯ ಮತ್ತು ಸಂಸ್ಕೃತಿ ಅವರ ಹೃದಯಕ್ಕೆ ಹತ್ತಿರವಾದ ಆತ್ಮೀಯ ಸಂಗತಿಗಳು. ಅವುಗಳ ಕಂಪನ್ನು ಬಿತ್ತರಿಸಲು ಅವರು ತಮ್ಮ ಬದುಕನ್ನು ಮುಡಿಪಾಗಿಟ್ಟವರು. ಎಳವೆಯಿಂದಲೇ ಸಾಹಿತ್ಯಾಭಿರುಚಿಯನ್ನು ಬೆಳೆಸಿಕೊಂಡು ಕಾಲೇಜು ದಿನಗಳಲ್ಲಿ ಸಾಹಿತ್ಯಪರ ಸಂಘಟನೆಯಲ್ಲಿ ತೊಡಗಿದ ಶ್ರೀ ರಾಮಚಂದ್ರರು ೧೯೬೪ರಲ್ಲಿ ಶ್ರೀ ಭುವನೇಂದ್ರ ಕಾಲೇಜಿನಲ್ಲಿ 'ಸಾಹಿತ್ಯ ಸಂಘ' ಆರಂಭಕ್ಕೆ ಕಾರಣರಾದರು. ಮುಂದೆ ಆ ಸಂಘವನ್ನು ಕೇಂದ್ರವನ್ನಾಗಿ ಇರಿಸಿಕೊಂಡು ಅವರು ಮಾಡಿದ ಸಾಧನೆಗಳು ಅಪೂರ್ವ ಅದ್ವಿತೀಯ. ಇತ್ತೀಚಿನ ವರ್ಷಗಳಲ್ಲಿ ಆ ಸಂಘ ಸಾರ್ವಜನಿಕವಾಗಿ ಹಲವೆಡೆಗಳಲ್ಲಿ ಗುರುತಿಸಲ್ಪಟ್ಟಿದೆ. ಅದು ಎಂ.ಆರ್.ರಿಗೆ ಸಂದ ಪುರಸ್ಕಾರಗಳೆಂದೇ ಹೇಳಬಹುದು.

ಕಾರ್ಕಳದ ಶ್ರೀ ಭುವನೇಂದ್ರ ಕಾಲೇಜಿಗೆ ಬಾರದೇ ಇರುವ ಕನ್ನಡದ ಯಾವ ಖ್ಯಾತ ಸಾಹಿತಿಗಳೂ ಇರಲಿಕ್ಕಿಲ್ಲವೆಂದೇ ಹೇಳಬಹುದು. ಅದಕ್ಕೆ ಕಾರಣ ನಮ್ಮ ಗುರುಗಳು. ನಾಡಿನ ಖ್ಯಾತ ನಾಮರೆಲ್ಲಾ ಕಾಲೇಜಿಗೆ ಬಂದಾಗ, ಅವರನ್ನು ನೋಡುವ, ಕೇಳುವ ಭಾಗ್ಯ ಕೇವಲ ವಿದ್ಯಾರ್ಥಿಗಳಿಗಷ್ಟೇ ಸೀಮಿತವಾಗಿರಲಿಲ್ಲ. ಇಡೀ ಜಿಲ್ಲೆಯ ಸಾಹಿತ್ಯಾಸಕ್ತರಿಗೆ ಇದರ ಸೌಭಾಗ್ಯ ಲಭಿಸಿದೆ. ಈಗ ತಮ್ಮ ನಿವೃತ್ತಿಯ ಅನಂತರವೂ ಅದೇ ಕ್ರಿಯಾಶೀಲತೆಯನ್ನು ಉಳಿಸಿಕೊಂಡಿರುವ ಶ್ರೀ ರಾಮಚಂದ್ರರು ಕಾರ್ಕಳ ಹಾಗೂ ಪರಿಸರದ ಸಹೃದಯರನ್ನೆಲ್ಲಾ ಒಟ್ಟುಹಾಕಿ, "ಸಾಹಿತ್ಯ ಸಂಘ, ಕಾರ್ಕಳ"ವನ್ನು ಕಟ್ಟಿ, ಅದರ ಸಂಚಾಲಕರಾಗಿ ಕಳೆದ ಹನ್ನೆರಡು ವರ್ಷಗಳಲ್ಲಿ ಜಗ-ಜನ ಮೆಚ್ಚುವಂತಹ ಕೆಲಸಗಳನ್ನು ಮಾಡುತ್ತಾ ಬಂದಿದ್ದಾರೆ.

ಸಮರ್ಥ ಲೇಖಕರೂ, ವಿಮರ್ಶಕರೂ, ಒಳ್ಳೆಯ ವಾಗ್ಮಿಯೂ ಆಗಿರುವ ಪ್ರೊ. ಎಂ. ರಾಮಚಂದ್ರರು ಕಾರ್ಯಕ್ರಮಗಳ ವ್ಯವಸ್ಥಿತ ಸಂಘಟನೆ ಮತ್ತು 'ಸಾಹಿತ್ಯ ಪರಿಚಾರಿಕೆಗಾಗಿ ನಾಡಲ್ಲೆಲ್ಲ ಸುಪ್ರಸಿದ್ಧರು. ಈ ವಿಚಾರದಲ್ಲಿ ಕಾರ್ಕಳ ಹಾಗೂ ಪರಿಸರದಲ್ಲಿ ತಮ್ಮದೇ ಆದ ವಿಶಿಷ್ಟ 'ಛಾಪು' ಮೂಡಿಸಿರುವ ಶ್ರೀಯುತರ ಪ್ರತಿಯೊಂದು ಕೆಲಸವೂ ಅಚ್ಚುಕಟ್ಟು, ಅವರ ಜೊತೆಗೆ ದುಡಿಯುವುದೆಂದರೆ ಅದೊಂದು ವಿಶಿಷ್ಟ ಅನುಭವ. ತಮ್ಮ ಕಾರ್ಯ ನಿರ್ವಹಣೆ ೧೦೦%ರಷ್ಟು ದೋಷರಹಿತವಾಗಿರಬೇಕೆಂದು ಹಂಬಲಿಸುವ ಅವರು ಇತರರಿಂದಲೂ ಅದನ್ನೇ ನಿರೀಕ್ಷಿಸುವವರು. ನಾವು ಅವರ ನಿರೀಕ್ಷೆಗೆ ಮುಟ್ಟಲಿಲ್ಲವೆಂದಾದರೆ ಅವರಿಗೆ ಎಲ್ಲಿಲ್ಲದ

ಅಸಮಾಧಾನ. ಇದಕ್ಕೆ ಕಾರಣ ತಾವು ಮಾಡುವ ಕೆಲಸದಲ್ಲಿ ಪರಿಪೂರ್ಣತೆಯನ್ನು ಸಾಧಿಸುವ ಹಂಬಲವೇ ಹೊರತು ಬೇರೇನೂ ಅಲ್ಲ.

ಗುರುಗಳಾದ ಶ್ರೀ ರಾಮಚಂದ್ರರು ತಮ್ಮದೇ ಆದ ವಿಶಿಷ್ಟ ಧೋರಣೆ, ನೀತಿ–ನಿಯಮಗಳನ್ನೂ ಇರಿಸಿಕೊಂಡು ಕೆಲಸ ಮಾಡುವ ಜಾಯಮಾನದವರು. ಯಾವುದಾದರೂ ಹೊಣೆಯನ್ನು ಇತರರಿಗೆ ಹೊರಿಸಿ ತಾವು ಸುಮ್ಮನಿರುವವರಲ್ಲ. ಪ್ರತಿಯೊಂದೂ ತಾನೇ ಮಾಡಬೇಕಾದ, ತನ್ನದೇ ಹೊಣೆಗಾರಿಕೆ ಎಂದು ಭಾವಿಸುವವರು ಅವರು. ಆದ್ದರಿಂದಲೇ ಅವರೇನು ಮಾಡಿದರೂ, ಅದು ಯಶಸ್ವಿಯೆನಿಸುತ್ತದೆ. ವಿಫಲತೆಯೆಂಬುದಿಲ್ಲ. ದೊಡ್ಡ ಸಮಾರಂಭಗಳನ್ನು ಮಾಡಬೇಕಾದಾಗ ಎಲ್ಲರ ಅಭಿಪ್ರಾಯ ಸಂಗ್ರಹಿಸಲು, ಸಲಹೆ–ಸೂಚನೆ ಪಡೆಯಲು ಸಭೆ ಕರೆಯುವುದು ಅವರ ವಾಡಿಕೆ. ಆದರೆ ಆ ಸಭೆಗೆ ಬರುವಾಗ, ಮುಂದೆ ಮಾಡಬೇಕಾದ ಕೆಲಸಗಳ ಪೂರ್ಣ ರೂಪು–ರೇಖೆ ಅವರ ಕೈಯಲ್ಲಿರುತ್ತದೆ. ಸಭೆ ಸೇರಿದ ಮೇಲೆ ತಲೆಗೊಂದರಂತೆ ಅಭಿಪ್ರಾಯಗಳು ಪ್ರಕಟವಾಗಿ, ಗೊಂದಲ ಸೃಷ್ಟಿಯಾಗುವ ಸನ್ನಿವೇಶಗಳೇ ಅವರ ಸಭೆಗಳಲ್ಲಿ ಇರುವುದಿಲ್ಲ. ಹಾಗೆಂದು ಒಳ್ಳೆಯ ಸಲಹೆಗಳು ಯಾರಿಂದ ಬಂದರೂ ಅದನ್ನು ಸ್ವೀಕರಿಸುವ ಸಹೃದಯತೆಯೂ ಅವರಲ್ಲಿದೆ. ಪ್ರತಿಯೊಬ್ಬರ 'ನಾಡಿಮಿಡಿತ'ವನ್ನೂ ಚೆನ್ನಾಗಿ ಗ್ರಹಿಸಬಲ್ಲ ಶ್ರೀಯುತರು, ಯಾರಿಗೆ ಯಾವ ಕೆಲಸ ಕೊಟ್ಟರೆ ಒಳ್ಳೆಯದು, ಯಾರನ್ನು ಹಿಡಿದರೆ ಯಾವ ಪ್ರಯೋಜನ ಪಡೆಯಬಹುದು ಎಂಬುದನ್ನೆಲ್ಲ ಅರಿತು, ಕಾರ್ಯಸಾಧ್ಯಗೊಳಿಸುವುದರಲ್ಲಿ ನಿಸ್ಸೀಮರು. ಒಟ್ಟಿನಲ್ಲಿ ಎಲ್ಲರೂ 'ಭೇಷ್; ಎನ್ನುವ ರೀತಿಯಲ್ಲಿ ಕಾರ್ಯಕ್ರಮ ಸಂಘಟಿಸಿ, ನಿರ್ವಹಿಸುವ 'ಎಂ.ಆರ್.'ರಲ್ಲಿರುವ ಜಾಣತನ ಬೇರೆ ಯಾರಲ್ಲೂ ಇಲ್ಲವೆಂದೇ ಹೇಳಬಹುದು. ಇದಕ್ಕೆ ಅವರ ಸುದೀರ್ಘ ಜೀವನದ ಪರಿಶ್ರಮದಿಂದ ಪಡೆದ ಅನುಭವಗಳೇ ಕಾರಣವೆನ್ನಬಹುದು.

ಸಂಘಟನಾ ಚತುರ ಗುರು ಶ್ರೀ ರಾಮಚಂದ್ರರು ಶ್ರೀ ಭುವನೇಂದ್ರ ಕಾಲೇಜಿನ ಆವರಣದಲ್ಲಿ ೧೯೭೭ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ, ಹಾಗೂ ೨೫ ವರ್ಷಗಳ ಬಳಿಕ ೧೯೯೬ರಲ್ಲಿ ಅಲ್ಲಿಯೇ ದ.ಕ. ಜಿಲ್ಲಾ ಒಂಬತ್ತನೆಯ (ಅವಿಭಜಿತ ಜುಲ್ಲೆಯ ಕೊನೆಯ) ಸಾಹಿತ್ಯ ಸಮ್ಮೇಳನವನ್ನು ಅಪೂರ್ವ ರೀತಿಯಲ್ಲಿ ನಡೆಸಿದ್ದು ಇಂದಿಗೆ ಅವಿಸ್ಮರಣೀಯ ಚರಿತ್ರೆ. ಇವುಗಳ ಯಶಸ್ಸಿಗಾಗಿ ದುಡಿದವರು ಹಲವರಿರಬಹುದು ಆದರೂ 'Master Brain' ಎಂ.ಆರ್. ಒಬ್ಬರದೇ. ಇದಲ್ಲದೆ, ತಾಲೂಕು ಸಮ್ಮೇಳನಗಳು, ಕಾಲೇಜಿನ ರಜತಮಹೋತ್ಸವ, ಇತರ ಹತ್ತು–ಹಲವು ಸಭೆ–ಸಮಾರಂಭಗಳು, ಉತ್ಸವಾಚರಣೆಗಳು ಅವರಿಂದಲೇ ಯಶಸ್ಸು ಪಡೆದದ್ದನ್ನು ಯಾರು ಮರೆಯಲಾಗದು. ಕಾರ್ಕಳದಲ್ಲಿ ಮಾತ್ರವಲ್ಲದೆ, ಮಂಗಳೂರು, ಮೂಡುಬಿದಿರೆ, ಉಡುಪಿ, ಧರ್ಮಸ್ಥಳ ಹೀಗೆ ವಿವಿಧ ಕಡೆಗಳಲ್ಲಿ ಇವರು ತಮ್ಮ ಪರಿಶ್ರಮ ಮತ್ತು ಅನುಭವವನ್ನು ಧಾರೆಯೆರೆದು ಎಲ್ಲರ ಮನ್ನಣೆಗೆ ಪಾತ್ರರಾಗಿದ್ದಾರೆ. ಇನ್ನು ಸಣ್ಣ–ಪುಟ್ಟ ಕಾರ್ಯಕ್ರಮಗಳಿಗಂತೂ ಲೆಕ್ಕವಿಲ್ಲ.

ಪ್ರೊ. ಎಂ. ರಾಮಚಂದ್ರರು ವಿಶಿಷ್ಟ ಶಿಸ್ತಿನ ನಡವಳಿಕೆಯ ವ್ಯಕ್ತಿ. ಅವರು ಶಿಷ್ಟಾಚಾರಗಳಿಗೆ ನಿರ್ದಿಷ್ಟ ಆಚಾರ ಸಂಹಿತೆಗಳಿಗೆ ತುಸು ಹೆಚ್ಚು ಗಮನ ನೀಡುವವರು. ಅವರ ಉಡುಪು–

ತೊಡುಪುಗಳಲ್ಲಿ ಬಳಕೆಯ ವಸ್ತುಗಳಲ್ಲಿ ಅಚ್ಚುಕಟ್ಟುತನವನ್ನು ಶಿಷ್ಟತೆಯ ಹೊಳಪನ್ನೂ ಗಮನಿಸಬಹುದು. ಸ್ವಯಂ ಶಿಸ್ತು ಮತ್ತು ಶಿಷ್ಟಾಚಾರಗಳಿಗೆ ಬದ್ಧರಾದ ಅವರು ಇತರರಿಂದಲೂ ಅದನ್ನೇ ನಿರೀಕ್ಷಿಸುತ್ತಾರೆ. 'ಶುಚಿ-ರುಚಿ'ಯ ಬಗ್ಗೆ ಅವರಿಗೆ ವಿಶೇಷ ಕಾಳಜಿ. ಆದರೆ ಆಡಂಬರ, ಕೃತಕತೆಗಳಿಂದ ಅವರು ತುಂಬಾ ದೂರ. ಸಮಯ ನಿಷ್ಠೆಯನ್ನು ಅವರಿಂದ ನೋಡಿ ಕಲಿಯಬೇಕು. ಸಭೆ-ಕಾರ್ಯಕ್ರಮಗಳಿಗೆ ಬರಬೇಕಾದವರು ಸಕಾಲದಲ್ಲಿ ಬಾರದಿದ್ದರೆ, ಅವರು ಅಸಹನೆಯಿಂದ ಚಡಪಡಿಸುತ್ತಾರೆ; ಹತ್ತಾರು ಸಲ ಗಡಿಯಾರ ನೋಡುತ್ತಾರೆ. ಮಾಡುವ ಕೆಲಸದಲ್ಲಿ ಸಹಜತೆಯೊಂದಿಗೆ ಅದು ಒಪ್ಪ-ಓರಣವಾಗಿರಬೇಕೆಂದು ಬಯಸುವವರು ಅವರು. ಇದೆಲ್ಲದರಿಂದ ಒಂದು ಕಾರ್ಯಕ್ರಮವನ್ನು ನೋಡುವ ಮಂದಿಗೆ ಸಂತೋಷ ಸಿಗುತ್ತದೆ ಎಂದು ಅವರಿಗೆ ಗೊತ್ತು. ಸಭಾಸದರ ಸಂತಸವೇ ಅವರ ಸಂತೃಪ್ತಿಯ ಮೂಲ ಸೆಲೆ.

ಸಭೆ-ಸಮಾರಂಭಗಳಿಗೆ ಬರುವ ಅತಿಥಿ-ಗಣ್ಯರಿಗೆ ಅವರು ಮಾಡುವ ಉಪಚಾರದಲ್ಲೂ ಸದಾ ಅಚ್ಚುಕಟ್ಟು, ಆತಿಥ್ಯದಲ್ಲಿ ಯಾವ ಕೊರತೆಯೂ ಆಗದಂತೆ ಎಚ್ಚರ ವಹಿಸುವ 'ಎಂ.ಆರ್.' ಎಲ್ಲವನ್ನೂ ವಿನೀತ ಭಾವದಿಂದ ನಿರ್ವಹಿಸುವವರು. ಆದ್ದರಿಂದಲೇ ಯಾರೇ ಇರಲಿ, ಇವರು ಹತ್ತು ಸಲ ಕರೆದರೂ ಒಲ್ಲೆನೆನ್ನದೆ ಬರುತ್ತಾರೆ. ಬೇರೆಲ್ಲಿಗೂ ಹೋಗದವರೂ ಒಲ್ಲೆ ಎಂದವರೂ ಇಲ್ಲಿಗೆ ಬಂದಿದ್ದಿದೆ. ಇದು ಶ್ರೀ ರಾಮಚಂದ್ರರ ಕಾಂತಶಕ್ತಿ!

ಸಾಹಿತ್ಯ ಪರಿಚಾರಿಕೆಯಲ್ಲೇ ಹೆಚ್ಚು ಮಗ್ನರಾದ ಪ್ರೊ. ಎಂ.ರಾಮಚಂದ್ರರು ಒಳ್ಳೆಯ ಲೇಖಕರೂ ವಿಮರ್ಶಕರೂ ಆಗಿದ್ದರು ಬರೆದದ್ದು ಕಡಿಮೆ. ಬಹುಶಃ ಪರಿಚಾರಿಕೆಯ ಸಮಯವನ್ನು ಅವರು ಬರೆವಣಿಗೆಗೆ ಉಪಯೋಗಿಸುತ್ತಿದ್ದರೆ, ಇಂದು ನಾಡಿನ ಗಣ್ಯಾತಿಗಣ್ಯ ಲೇಖಕರಲ್ಲಿ ಒಬ್ಬರಾಗಿರುತ್ತಿದ್ದರೋ ಏನೊ ಆದರೆ ಅದೇಕೋ ನಮ್ಮ ಗುರುಗಳಿಗೆ ತಾನೊಬ್ಬನೇ ಹೆಮ್ಮರವಾಗಿ ಬೆಳೆಯುವುದರಲ್ಲಿ ಹೆಚ್ಚು ಮನಸ್ಸಿದ್ದಂತಿಲ್ಲ. ಪ್ರಾರಂಭದಲ್ಲೇ ಹೇಳಿದಂತೆ ಬೇರೆಯವರ ಸಂತೋಷದಲ್ಲೇ ಅವರು ಆನಂದ ಹೊಂದುವವರು. ಅಲ್ಲದೆ ಅವರು ಲೇಖನದೆಡೆಗೆ ಹೆಚ್ಚು ಪ್ರವೃತ್ತರಾಗಿದ್ದರೆ, ಕಾರ್ಕಳದ ಸಾಹಿತ್ಯಕ್ಷೇತ್ರ ಖಂಡಿತವಾಗಿಯೂ ಬಡವಾಗುತ್ತಿತ್ತು. ಶ್ರೀ ರಾಮಚಂದ್ರರ ಬರಹಗಳನ್ನು ಓದುವುದೆಂದರೆ, ಭಾಷಣ ಕೇಳುವುದೆಂದರೆ, ಅದೊಂದು ಮೈಮರೆತು ಸಾಗುವ ಪ್ರಯಾಣದಂತೆ. ಅದರ ರಸಾನುಭವ ಅನುಭವಿಸಿದವರಿಗೇ ಗೊತ್ತು. ಅವರ ಬರವಣಿಗೆಗಳಲ್ಲಿ ವ್ಯಕ್ತಿಚಿತ್ರಣ ಮತ್ತು ಕೃತಿವಿಮರ್ಶೆಗಳೇ ಹೆಚ್ಚು.

ಅನ್ಯರನ್ನು ಗೌರವಿಸಿ, ಸನ್ಮಾನಿಸುವುದರಲ್ಲೇ ಹೆಚ್ಚು ಸುಖ ಪಡುವ ನಮ್ಮ ಗುರುಗಳು ಎಂದೂ ಯಾವ ಪ್ರಶಸ್ತಿ, ಸನ್ಮಾನ-ಗೌರವಗಳನ್ನು ಬಯಸಿದ್ದಿಲ್ಲ. ಅವುಗಳಿಗಾಗಿ ವಶೀಲಿ ಮಾಡಿದವರಲ್ಲ. ಆದ್ದರಿಂದ ನಿಜವಾಗಿಯೂ ಇಂದಿಗೂ ಸಮಾಜದಿಂದ ಅವರಿಗೆ ಸಲ್ಲಬೇಕಾದಷ್ಟು ಗೌರವ ನಿಜವಾಗಿ ಸಂದಿಲ್ಲವೆಂದೇ ನನ್ನ ಭಾವನೆ. ಇತ್ತೀಚಿನ ವರ್ಷಗಳಲ್ಲಿ ಕೆಲವು ಪ್ರಶಸ್ತಿಗಳನ್ನು ಅವರ ಮನವೊಲಿಸಿ ನೀಡಲಾಗಿದೆ. ಕೆಲವು ವರ್ಷಗಳ ಹಿಂದೆ ೧೯೯೬ರಲ್ಲಿ ಬೇಲಾಡಿಯಲ್ಲಿ ನಡೆದ ಕಾರ್ಕಳ ತಾ॥ ನಾಲ್ಕನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಒಪ್ಪಿಸಲು ಗುರುಗಳ ಮನೆಗೆ ನಾನೂ ಹೋಗಿದ್ದೆ. ಅವರನ್ನು ಒಪ್ಪಿಸಲು ನಮ್ಮ ಮಾತಿನ

ಜಾಣತನವನ್ನೆಲ್ಲಾ ಉಪಯೋಗಿಸಬೇಕಾಯಿತು. ಕೊನೆಗೂ 'ಹೂಂ' ಎಂದರು. ಸಮ್ಮೇಳನವನ್ನು ಅರ್ಥಪೂರ್ಣವಾಗಿ ನಡೆಸಿಕೊಟ್ಟರು. ಅದರ ಹಿಂದಿನ ಸಮ್ಮೇಳನದಲ್ಲಿ ಅವರನ್ನು ಸನ್ಮಾನಿಸಲಾಗಿತ್ತು. ಇನ್ನೂ ಹಲವು ಗೌರವಗಳು ಅವರಿಗೆ ಸುಯೋಗ್ಯವಾಗಿಯೇ ದಕ್ಕಿದ್ದರೂ, ಸಿಕ್ಕಬೇಕಾದಷ್ಟು ಸಿಗಲಿಲ್ಲವೆಂದೇ ನಮ್ಮ ಭಾವನೆ.

ಒಂದಲ್ಲೊಂದು ಕಾರ್ಯಕ್ರಮದಲ್ಲಿ ತೊಡಗಿ, ನಿರಂತರ ಕ್ರಿಯಾಶೀಲರಾಗಿರುವ ಪ್ರೊ. ಎಂ. ರಾಮಚಂದ್ರರಿಗೆ ಈಗ ಎಪ್ಪತ್ತರ ಪ್ರಾಯ. ಆದರೆ ಅವರದು ಇಪ್ಪತ್ತರ ಉತ್ಸಾಹ, ಕಾರ್ಯಶೀಲತೆಯೆ ಅವರ 'ಚಿರಯೌವನ'ದ ಗುಟ್ಟು. ಸದಾ ಸಾಹಿತ್ಯ ಪರಿಚಾರಿಕೆಯಲ್ಲಿ ಶ್ರದ್ಧೆ ಹಾಗೂ ಸಮರ್ಪಣಾ ಭಾವದಿಂದ ತನ್ನನ್ನು ತೊಡಗಿಸಿಕೊಂಡ ಇವರಿಗೆ ತಮ್ಮ ಇತಿ-ಮಿತಿಗಳ ಅರಿವಿದೆ. ಹಾಗೆಯೇ ವೈಯಕ್ತಿಕ ಬದುಕಿನಲ್ಲಿ ಇದ್ದುದರಲ್ಲಿ ತೃಪ್ತಿ ಪಡುವ ಮನೋಭಾವ ಅವರದು. ಸಾರ್ವಜನಿಕರ ಹಣಕಾಸಿನ ವಿಷಯದಲ್ಲಿ ಸದಾ ಪಾರದರ್ಶಕತೆಯನ್ನು ಕಾಯ್ದುಕೊಂಡು ಬಂದ ಇವರು, ತನ್ನ ಕಿಸೆಯಿಂದ ನಾಲ್ಕು ಕಾಸು ಸಾರ್ವಜನಿಕ ಕಾರ್ಯಗಳಿಗಾಗಿ ವಿನಿಯೋಗಿಸಿರಬಹುದೇ ವಿನಃ ಪರರ ಬಿಡಿಕಾಸನ್ನೂ ತನ್ನ ಉಪಯೋಗಕ್ಕೆ ಬಳಸಿರಲಿಕ್ಕಿಲ್ಲ. ಹೀಗೆ ಶುದ್ಧಹಸ್ತರಾದುದರಿಂದಲೇ ನಮ್ಮ ಗುರುಗಳು ಸದಾ ಎಲ್ಲರ ನಡುವೆ ತಲೆ ಎತ್ತಿ ನಡೆಯಬಲ್ಲರು, ಗೌರವ-ಅಭಿಮಾನಗಳನ್ನು ಪಡೆಯಬಲ್ಲರು. ನಂಬಿದ ಮೌಲ್ಯಗಳನ್ನು ಎಂದೂ ಕೈ ಬಿಡದ, ಬದುಕಿನಲ್ಲಿ ಬಂದ ಸವಾಲುಗಳನ್ನು ದಿಟ್ಟತನದಿಂದ ಎದುರಿಸಿದ ಸಂತೃಪ್ತ ಸಾಧಕ ಇವರು. ಸದಾ ಆಶಾವಾದಿಯಾಗಿ ಮುನ್ನಡೆದ ಇವರು, ನಿನ್ನೆಯ ಟೀಕೆ-ಟಿಪ್ಪಣಿಗಳ ಬಗ್ಗೆ ಹೆಚ್ಚು ಚಿಂತಿಸದೆ, ನಿರಂತರವಾಗಿ ಸುಂದರ ನಾಳೆಗಳ ಬಗ್ಗೆ ಕಾರ್ಯಸಾಧ್ಯವಾಗಬಲ್ಲ ಕನಸುಗಳನ್ನು ಕಟ್ಟಿಕೊಂಡು ಹೆಜ್ಜೆ ಹಾಕಿದವರು.

ಪೂಜ್ಯರ ಕಾಯಕದ ಹಿರಿಮೆಯಿಂದ, 'ಕರಿಗಲ್ಲ' ಕಾರ್ಕಳ ಸಾಹಿತ್ಯ-ಸಂಸ್ಕೃತಿಗಳ ಸುಗಂಧದಿಂದ ಶ್ರೀಮಂತವಾಗಿದೆ. ಕಳೆದ ನಾಲ್ಕುವರೆ ದಶಕಗಳಿಂದ ಈ ನೆಲಕ್ಕೆ ತನ್ನ ಪವಿತ್ರ ಕರ್ಮಭೂಮಿಯೆಂದು ತಿಳಿದು ಪ್ರೀತಿಯಿಂದ ದುಡಿಯುತ್ತಾ ಇರುವ ಪ್ರೊ. ಎಂ. ರಾಮಚಂದ್ರರು ನಿಜವಾದ ಅರ್ಥದಲ್ಲಿ ಈ ನಾಡಿನ ಒಂದು ದೊಡ್ಡ ಆಸ್ತಿ. ಈ ಮಾತು ಕೇವಲ ಅವರನ್ನು ಹತ್ತಿರದಿಂದ ಬಲ್ಲವರಿಗೆ ಮಾತ್ರ ಅರ್ಥವಾದೀತು. ೩೫ ವರ್ಷಗಳ ಸಾರ್ಥಕ ಅಧ್ಯಾಪನದೊಂದಿಗೆ ಶ್ರೇಷ್ಠಮಟ್ಟದ ಸಾಹಿತ್ಯ ಪರಿಚಾರಿಕೆಗಾಗಿ ತನ್ನನ್ನು ಸಮರ್ಪಿಸಿಕೊಂಡ ಇವರನ್ನು ಬಹುಕಾಲದ ಹಿಂದೆ ಇವರ ಪ್ರಿಯ ಗುರುಗಳಾದ ಸೇಡಿಯಾಪು ಕೃಷ್ಣಭಟ್ಟರು "ಚಂದ್ರಮಾ....." ಒಳಗೂ ಹೊರಗೂ ಬೆಳೆಯುತ್ತಿರು, ಬೆಳಗುತ್ತಿರು" ಎಂದು ಹರಸಿದರಂತೆ ಹಾಗೆ ಈ ಶಿಷ್ಯೋತ್ತಮ ತಾನು ಬೆಳೆದು, ಬೆಳಗಿದ್ದಲ್ಲದೆ, ಸಾವಿರಾರು ಜನರನ್ನು ಬೆಳೆಸಿದರು, ಬೆಳಗಿಸಿದರು. ಇದಲ್ಲವೇ ಭಾಗ್ಯ! ನಾಡಿನಲ್ಲಿ ಇಂತಹ ಗುರುಶ್ರೇಷ್ಠರ ಸಂಖ್ಯೆ ಸಾವಿರವಾಗಲಿ ಎಂದು ಹಾರೈಸುತ್ತೇನೆ.

❖

# ಮಾನವೀಯತೆಯ ಮಹಾಗುರು

(ರಂ. ಶ್ರೀ. ಮುಗಳಿ)

* ಡಾ॥ ಶ್ರೀನಿವಾಸ ಹಾವನೂರ

ಯಾರನ್ನು ನಾವು ಗುರುಗಳೆಂದು ತಿಳಿಯಬೇಕು? ಎಲ್.ಕೆ/ಯು.ಕೆ.ಜಿ.ಗಳಲ್ಲಿ ವರ್ಣಮಾತ್ರಂ ಕಲಿಸುತ್ತಾರೆ. ಅಲ್ಲಿಯ 'ಮಿಸ್' ಗುರುವೇ ಸರಿ. ಇನ್ನು ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಪಾಠ ಹೇಳುವವರು ಗುರುಗಳೆನ್ನುವುದು ಅಧಿಕೃತವಾದದ್ದು. ಇವನ್ನುಳಿದು ಶಿಷ್ಯನ ಯೋಗಕ್ಷೇಮ ವನ್ನು, ಅವನ ಕೊರತೆಗಳನ್ನು ತುಂಬುವವನು ಗುರು ಮಾಡಬೇಕಾದ ಪೂರಕ ಕಾರ್ಯಗಳು. ಈ ಬಗೆಯ ಶಿಷ್ಯನ ಸೇವೆಯನ್ನು ಎಲ್ಲರೂ ಮಾಡಬೇಕೆಂದಿಲ್ಲ.

ಮೂರನೆಯ ಪ್ರಕಾರ ಒಂದಿದೆ – 'ಗುರು' ಆದವನಲ್ಲಿ ಅಥವಾ ಹಾಗೆ ಕರೆಯಿಸಿಕೊಳ್ಳ ಬೇಕೆಂದರೆ, ತಮ್ಮ ನಡತೆ, ಜೀವನ ಕ್ರಮಗಳಿಂದಲೂ ಇತರರು ಕಲಿಯಬಹುದು. ಆಗ ಅವರಿಗೂ ಈ ವ್ಯಕ್ತಿ ಗುರುವಿನ ಸ್ಥಾನದಲ್ಲಿ ನಿಲ್ಲಬಲ್ಲ.

ಡಾ॥ ರಂ. ಶ್ರೀ. ಮುಗಳಿಯವರು ನನಗೆ ಕಾಲೇಜು ಮತ್ತು ಯುನಿವರ್ಸಿಟಿ ಕಲಿಕೆಯ ಮಟ್ಟದಲ್ಲಿ ಪಾಠ ಹೇಳಿದ್ದಾರೆ. ಮೇಲೆ ಹೇಳಿದ ಇತರ ರೀತಿಯಿಂದಲೂ ನನಗೆ ಇವತ್ತಿಗೂ ಗುರುಗಳಾಗಿಯೇ ಉಳಿದಿದ್ದಾರೆ. ದೈನಂದಿನ ಕ್ರಮದ ಯಾವುದೇ ಅಂಶವಿರರಲಿ, ಹೊತ್ತಿಗೆ ಸರಿಯಾಗಿ ಕೆಲಸ ಮಾಡುವುದಿರಲಿ, ಜನರೊಡನೆ ನಡೆದುಕೊಳ್ಳುವ ಬಗೆ ಇರಲಿ, ನಾನು ಏನು ಮಾಡುತ್ತಾ ಇದ್ದೇನೆಯೊ ಆಗೆಲ್ಲ ನಾನು ಗುರುವಿನ ಶಿಷ್ಯನಾಗಿಯೇ ಹಾಗೆ ವರ್ತಿಸುತ್ತೇನೆ ಮತ್ತು ಆಗ ಒಮ್ಮೊಮ್ಮೆ ಥಟ್ಟನೆ ಅವರ ನೆನಪಾಗುತ್ತದೆ – ಈಗೂ.

ಅವರನ್ನು ನಾನು ಮೊದಲಿಗೆ ಕಂಡದ್ದು ೧೯೪೪ರಷ್ಟು ಹಿಂದೆ. ಆಗ ನಾನಿನ್ನೂ ೧೮ ವರ್ಷದ ಹುಡುಗ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನನ್ನದು ಅರೆಕಾಲದ ನೌಕರಿ; ಕಾರಕೂನಿಕೆಯ ಜೊತೆಗೆ ಅಲ್ಲಿಯ ಪುಸ್ತಕಾಲಯವನ್ನು ನೋಡಿಕೊಳ್ಳುವುದು ಹಾಗೂ ಭಾಷಣ ಕಾರ್ಯಕ್ರಮಗಳ ವ್ಯವಸ್ಥೆ ಮಾಡುವುದು. ಮುಗಳಿಯವರು ಅಂಥದೊಂದು ಭಾಷಣ ಕಾರ್ಯಕ್ರಮಕ್ಕೆ ಬಂದಿದ್ದರು. ಯಾವುದೋ ಒಂದು ಹಳಗನ್ನಡದ ಪುಸ್ತಕ. "ನಿಮ್ಮಲ್ಲಿದ್ದರೆ ದಯವಿಟ್ಟು ತೆಗೆದು ಇರಿಸುವಿರ? ಕಾರ್ಯಕ್ರಮ ಮುಗಿದ ಮೇಲೆ ಬರುತ್ತೇನೆ" ಎಂದು ಹೇಳಿ ಹೋದರು.

ಸಾಹಿತಿಗಳೆನಿಸಿದ ಅದೆಷ್ಟೋ ಆಢ್ಯತೆಯುಳ್ಳವರನ್ನು ನಾನು ಕಂಡೇ ಇದ್ದೆ. ಆ ಚಿಕ್ಕ

ವಯಸ್ಸಿನಲ್ಲಿಯೇ. ಆದರೆ ಇವರೋ ನನ್ನನ್ನು ಬಹುವಚನದಲ್ಲಿ ಮಾತಾಡಿಸ್ತಾ ಇದ್ದಾರೆ. 'ದಯವಿಟ್ಟು' ಎಂದು ಹೇಳ್ತಾ ಇದ್ದಾರೆ!

ಬದಿಯ ಹಾಲಿನಲ್ಲಿ ಅವರ ಭಾಷಣ ನಡೆದಿತ್ತು. ಅಷ್ಟರಲ್ಲಿ ಸುಶ್ರಾವ್ಯವಾಗಿ ಹೊಮ್ಮಿದ ಹಾಡು – 'ಬಂದಾರ ತಂದಾರ ಮಂದಾರ ಹೂವಾ' ಮುಗಳಿಯವರೇ ಹಾಡುತ್ತಿದ್ದುದ್ದು ಕೇಳಿಸಿತು. ಮುಗಿದಾಗ ಸಭಿಕರೆಲ್ಲ ಜೋರಾಗಿ ಚಪ್ಪಾಳೆ ಹೊಡೆದದ್ದೂ ಕೇಳಿಸಿತು.

ಪುಸ್ತಕವನ್ನೇನೊ ತೆಗೆದಿರಿಸಿದ್ದೆ. ಅವರು ಸಾಂಗಲಿಯಲ್ಲಿರುವವರು ಹೀಗೆ ಹೊರಗಿನವರಿಗೆ ಈ ಲೈಬ್ರರಿಯ ಪುಸ್ತಕ ಹೇಗೆ ಕೊಡುವುದು? ಲೈಬ್ರರಿ ಕೆಲಸದಲ್ಲಿ ನನ್ನ ಅನುಭವ ಕಡಿಮೆ. ಆಗ ಹೇಳಿದರು "ಇಲ್ಲಿ ನನ್ನ ಸೋದರಳಿಯ ವರದರಾಜ ಹುಯಿಲಗೋಳ ಇದ್ದಾರೆ, ಅವರ ಹೆಸರಿನಲ್ಲಿ issue ಮಾಡಿರಿ. ಮುಂದಿನ ಸಲ ನಾನು ಬಂದಾಗ ಹಿಂತಿರುಗಿಸುವೆ" ಎಂದರು. ಇದು ನನ್ನ ಮುಂದಿನ ಸುದೀರ್ಘ ಲೈಬ್ರರಿ ಸರ್ವೀಸಿನಲ್ಲಿ ನೆರವಾದ ಒಂದು ಅಂಶ ವ್ಯಂಗ್ಯವೆಂದರೆ ಅವರು ಸಾಂಗಲಿಯ ವಿಲಂಗ್ಡನ್ ಕಾಲೇಜಿನಲ್ಲಿ 'Professor-in-charge of Library' ಆಗಿದ್ದರು.

ವಿಶಿಷ್ಟ ಪುಸ್ತಕ ಅಥವಾ ಪತ್ರಿಕೆಯೊಂದನ್ನು ಲೈಬ್ರರಿಯಿಂದ ಹೊರಗೆ ಕೊಡಲಾಗದ ನಿಯಮವಿದೆಯೆಂದು ತಿಳಿಯಿರಿ. ಆದರೆ ಅಗತ್ಯವಾಗಿ ಬೇಕೆಂದವರಿಗೆ ಹೇಗಾದರೂ, ಸ್ವಲ್ಪ ಸಮಯವಾದರೂ ಒದಗಿಸುವ ವಿವಿಧೋಪಾಯಗಳನ್ನು ನಾನು ಆಚರಣೆಯಲ್ಲಿ ತಂದಿದ್ದುಂಟು. ಮಹತ್ವದ ಅಂಶವೆಂದರೆ "ಇದನ್ನು ಕೊಡಲಿಕ್ಕೆ ಆಗೋದಿಲ್ರಿ" ಎಂದು ಹೇಳಿಬಿಡಬಹುದು. ಹಾಗೆ "ಮಾಡಬಾರದು" ಎಂಬುದನ್ನು ನಾನು ರೂಢಿಸಿದ್ದೆ. ವಿಶೇಷತಃ ಸಂಶೋಧನೆಯಲ್ಲಿ ಅಥವಾ ಗ್ರಂಥ ಬರೆಯುವುದರಲ್ಲಿ ತೊಡಗಿದವರಿಗೆ ನೆರವಾಗಬೇಕು ಎನ್ನುವ ಮನೋವೃತ್ತಿಯನ್ನು ಬೆಳೆಸಿಕೊಂಡೆ.

ಮುಗಳಿಯವರು ಮೇಲಿಂದ ಮೇಲೆ ಧಾರವಾಡಕ್ಕೆ ಬಂದು ಹೋಗ್ತಾ ಇದ್ದರು. ತಮ್ಮ ಗುರುಗಳಾಗಿದ್ದ ಬೇಂದ್ರೆ ಇಲ್ಲಿ ಇದ್ದರಲ್ಲವೆ. ಇನ್ನೊಂದು ಸಲ ಸಂಘದ ಲೈಬ್ರರಿಗೆ ರಂ. ಶ್ರೀ. ಬಂದಾಗ "ನಿಮ್ಮ ಊರು ಯಾವುದು? ಏನು ಕಲೀತಿದ್ದೀರಿ. ಇಲ್ಲಿ ಯಾರ ಮನೆಯಲ್ಲಿ ಇದ್ದೀರಿ" ಎಂದೆಲ್ಲ ಸಹಜವಾಗಿ ವಿಚಾರಿಸಿದ್ದರು. ಕನ್ನಡ ವಿಷಯ ತೆಗೆದುಕೊಂಡು ಜ್ಯೂ. ಬಿ.ಎ.ದಲ್ಲಿ ಇದ್ದೇನೆ" ಎಂದು ಹೇಳಿದ್ದೆ.

ಬರಬರುತ್ತ, ಅವರಿವರ ಮಾತಿನಿಂದ ಅವರು ಅತ್ಯುತ್ತಮ ಬೋಧಕರೆಂದೂ ಬಡ ವಿದ್ಯಾರ್ಥಿಗಳಿಗೆ ತುಂಬಾ ನೆರವಾಗುವವರೆಂದೂ ತಿಳಿದುಬಂತು. ನನ್ನ ಅಂತಿಮ ಬಿ.ಎ.ಯನ್ನು ಅವರಲ್ಲಿಗೆ ಹೋಗಿ ಕಲಿಯಬೇಕೆಂದು ನಿರ್ಧಾರ ಮಾಡಿದೆ. ೧೯೪೯ರ ಸುರುವಿನಲ್ಲಿ ಹಾಗೆಂದು ಪತ್ರ ಬರೆದೆ, "ಅವಶ್ಯ ಬನ್ನಿರಿ" ಎಂದು ಅವರ ಉತ್ತರ.

ಇನ್ನು ಹೋಗಬೇಕು. ಆದರೆ ಇಡೀ ವರ್ಷದ ವೆಚ್ಚಕ್ಕೆ ನಾನು ತಕ್ಕಮಟ್ಟಿಗಾದರೂ ಹಣ

ಒದಗಿಸಬೇಕಲ್ಲವೆ. ಆದರೇನು ದುಡ್ಡಿನ ಅನುಕೂಲತೆ ಆಗಲಿಲ್ಲ. ಈ ಕಾರಣ ಕೊಟ್ಟು ಕ್ಷಮಿಸಿರಿ" ಎಂದು ಬರೆದೆ. ಆದರೂ ನಾನು ಅವರ ಕೈಯಲ್ಲಿಯೇ ಬಿ.ಎ. ಮುಗಿಸಬೇಕು. ಹೆಚ್ಚು Score ಮಾಡಬೇಕು" ಎಂದು ಅನಿಸುತ್ತಿತ್ತು. ನನ್ನ ಪತ್ರಕ್ಕೆ ಉತ್ತರವಾಗಿ "ಒಮ್ಮೆ ಇಲ್ಲಿಗೆ ಬರ್ರಿ ಮಾತಾಡುವಾ" ಎಂದು ಬರೆದರು.

ಆ ವೇಳೆಗೆ ಕಾಲೇಜು ಅದೇ ಆರಂಭವಾಗಿತ್ತು; ಹೋದೆ. ನಾನು ೧೯೬ರೂ. (೨೦೦ ರೂ. ವಜಾ ೪ ರೂ. ರೈಲು ಚಾರ್ಜ್) ಅವರ ಕೈಯಲ್ಲಿಟ್ಟು ಕಾಲು ಹಿಡಿದು ಹೇಳಿದೆ. "ಏನಾದರೂ ಮಾಡಿರಿ, ಕನ್ನಡವನ್ನು ನಿಮ್ಮಲ್ಲಿಯೇ ಕಲಿಯಬೇಕೆಂಬ ಆಸೆ" ಇತ್ಯಾದಿಯಾಗಿ ಹೇಳಿದೆ.

ಅಂದರೆ ಅಷ್ಟು ಹಣದಲ್ಲಿ ಕಾಲೇಜು ಫೀ, ವಸತಿ, ಊಟ – ಇಷ್ಟೆಲ್ಲ ಆಗಬೇಕು? ಯಾರಿಗೂ ಸಾಧ್ಯವಾಗದ್ದು. ಮುಗಳಿಯವರು ಒಂದೊಂದಾಗಿ ಅವುಗಳ ವ್ಯವಸ್ಥೆ ಮಾಡಿದರು. ಪ್ರಿನ್ಸಿಪಾಲರಿಗೆ ಹೇಳಿ ಪೂರ್ಣ ಮಾಫಿ ಮಾಡಿಸಿದರು. ಕಾಲೇಜಿನ ಆವರಣದಲ್ಲಿ ನಾಲ್ಕು ಹಾಸ್ಟೆಲ್‌ಗಳಿದ್ದವು. ಪ್ರತಿಯೊಂದರಲ್ಲಿ ಒಂದು ಅತಿಥಿಗೃಹ ಪರ ಊರಿನ ವಿದ್ಯಾರ್ಥಿಗಳ ಪಾಲಕರು ಬಂದರೆ ಇರಲಿಕ್ಕೆಂದು, ಆ ವ್ಯವಸ್ಥೆ. ನಾನು ಅಂಥದೊಂದು ಅತಿಥಿ ಗೃಹದಲ್ಲಿ ಇರಬೇಕು. ಅತಿಥಿಗಳು ಯಾರಾದರೂ ಆಗಮಿಸಿದರೆ, ತುಸು ಮುಂಚೆ ನನ್ನ ಪುಸ್ತಕ, ಬಟ್ಟೆ ಬರೆಗಳನ್ನೂ ಕೆಲ ದಿನಗಳ ಮಟ್ಟಿಗೆ ಬೇರೆಡೆ (ಎಲ್ಲಿಯೂ ಇಲ್ಲವಾದರೆ ಗುರುಗಳ ಮನೆಯಲ್ಲಿಯೆ) ಇಡಬೇಕು. ವಸತಿಯ ಸಮಸ್ಯೆ ಬಗೆಹರಿದಿದ್ದು ಹೀಗೆ. ಇನ್ನು ಊಟ? ಆ ನಾಲ್ಕು ಹಾಸ್ಟೆಲುಗಳಲ್ಲಿ ವಾರದ ಒಂದೊಂದು ದಿನ ಊಟಕ್ಕೆ, ಬೆಳಗಿನ ಟಿಫಿನ್‌ಗೆ ಹೋಗೋದು. ಇನ್ನು ಮೂರು ದಿನದಲ್ಲಿ? ಅಲ್ಲೊಂದು ಖಾಸಗಿ ಖಾನಾವಳಿಯೂ ಇತ್ತು. ಅದರ ಮಾಲಿಕನನ್ನೂ ಕರೆಯಿಸಿ ವಾರದಲ್ಲಿ ಎರಡು ದಿನ ನನ್ನ ಊಟಕ್ಕೆ ಒಪ್ಪಿಸಿದರು. ಇನ್ನೂ ಒಂದು ದಿನ ಉಳಿಯಿತಲ್ಲ. ಗುರುಗಳೂ ನಾನೂ ಈ ಬಗ್ಗೆ ಮಾತಾಡುತ್ತಿದ್ದಾಗ ಒಳಗಿನಿಂದ ಅವರ ಶ್ರೀಮತಿ ಬಂದು "ಆ ಒಂದು ದಿನ ನಮ್ಮಲ್ಲಿ ಬರಲಿ ಬಿಡ್ರಿ" ಎಂದರು. ಆಯಿತಲ್ಲ ವಾರವಿಡೀ ಊಟದ ವ್ಯವಸ್ಥೆ.

ಗುರುಗಳ ಮನೆಯಲ್ಲಿ ನನಗೆ ಪ್ರತಿನಿತ್ಯ ಒಂದು ಕೆಲಸ. ಅವರಿಗೆ ಇಬ್ಬರು ಮಕ್ಕಳು. ಒಬ್ಬ ಮಗಳಿಗೆ ಅವರು ಊಟ ಮಾಡಿಸುವಾಗ ನಾನು ಇನ್ನೊಬ್ಬನನ್ನು ಆಡಿಸಬೇಕು. ಒಂದೂವರೆ ವರ್ಷದ ಮಗು ಅವರ ಖುಷಿಗಾಗಿ ಫೋನೊ ಹಚ್ಚುತ್ತಿದ್ದೆ. ಅದರಿಂದಾಗಿ 'ಫೋನೊ ಮಾಮಾ' ಎಂಬ ಉಪಾಧಿಯೂ ನನಗೆ ಒದಗಿತ್ತು. ದಿನವೂ ಅದೇ ಅದೇ ಕೇಳಿ ಯಾರಿಗೆ ಬೇಸರವಾಗಲಿಕ್ಕಿಲ್ಲ! ಆದರೆ ಅವನಿಗೆ ನಿರ್ವಾಹವಿದ್ದಿಲ್ಲ. ಕೊನೆಕೊನೆಗೆ ಆತ ನಾನು ಬಂದೊಡನೆ "ಪೀಡಾ ಮಾಮಾ ಬಂತು" ಎನ್ನುತ್ತಿದ್ದ! ಈಗ ಆತ ಬೆಂಗಳೂರಲ್ಲಿಯೆ ಇರುವ ಸುಪ್ರಸಿದ್ಧ ಡಾ॥ ಆನಂದ ಮುಗಳಿ.

ಒಮ್ಮೆ ಒಂದು ಮೋಜಿನ ಪ್ರಸಂಗ ನಡೆಯಿತು. ದಿನದ ಕ್ರಮದಂತೆ ಬೆಳಗಿನ ೧೦

ಗಂಟೆಗೆ ಹೋದೆ. ಗುರುಗಳು ಇನ್ನೊಂದು ಮಗುವಿಗೆ ಊಣಿಸಿ ಇನ್ನು ತಾವು ಊಟ ಮುಗಿಸಬೇಕು, ಆಮೇಲೆ ನನಗೆ 'ಒಳ್ಳೇದು' ಎಂದು ಹೇಳಬೇಕು. ಅದರ ಅರ್ಥ ನೀನು ಹಾಸ್ಟೆಲ್‌ಗೆ ಹೋಗಿ ಊಟ ಮುಗಿಸಬೇಕು ಎಂದು ಆ ದಿನವೂ ಹಾಗೆ ಹೇಳಿದರು. ಆದರೆ ಅವತ್ತು ನನ್ನ ಊಟದ ದಿನ ಅವರ ಮನೆಯಲ್ಲಿಯೇ. ಅವರಿಗೆ ಅದರ ಗಮನವಿರಲಿಲ್ಲ. ಈ ದಿನ ನನ್ನ ಊಟ ಇಲ್ಲಿಯೇ ಎಂದು ಹೇಳುವ ಗಟ್ಟಿತನ ನನ್ನಲ್ಲಿರಲಿಲ್ಲ. ಹೊರಬಿದ್ದೆ ಎಲ್ಲಿ ಹೋಗಬೇಕು? ಹಸಿವೋ ಹಸಿವು.

ಇತ್ತ ಶ್ರೀಮತಿ ಮುಗಳಿ "ಶ್ರೀನಿವಾಸ ಊಟಕ್ಕೆ ಬರ್ರಿ" ಎಂದು ಕರೆ ಒಳಗಿನಿಂದಲೇ ಕೂಗಿದರು. ಎಲ್ಲಿದ್ದಾನೆ ಶ್ರೀನಿವಾಸ! ಕೂಡಲೇ ಮುಗಳಿಯವರು ತಮ್ಮ ಬಂಗಲೆಯ ತೋಟದ ಆರೈಕೆ ಮಾಡುವವನನ್ನು ಓಡಿಸಿದರು. ಆತ ಸಾಕಷ್ಟು ಹುಡುಕಿ, ೨ ಬಿಲ್ಲಿಯ ಶೇಂಗಾ ತಿನ್ನುತ್ತಿದ್ದ ನನ್ನನ್ನು ಮನೆಗೆ ಕರೆದೊಯ್ದ. ತುಸುವೇ ಗದರಿಸಿದರು.

ಕನ್ನಡದ ಬಿ.ಎ. ಆನರ್ಸ್ ತರಗತಿಯಲ್ಲಿ ನಾವು ನಾಲ್ಕೇ ಜನರಿದ್ದೆವು. ೧೫ ಮಿನಿಟು ತಡೆದು ಕ್ಲಾಸ್ ತೆಗೆದುಕೊಳ್ಳುವುದಾಗಿ ಕ್ಲಾಸಿನಲ್ಲಿ ಕುಳಿತ ಆ ಮೂವರಿಗೆ ಹೇಳಿ ಕಳಿಸಿದರು. ಕೇವಲ ನನಗಾಗಿ ಹಾಗೆ ತಡಮಾಡಿದ್ದು ಎಂಬುದನ್ನು ಇಂದಿಗೂ ನೆನೆಯುತ್ತೇನೆ. ಮುಂದೆ ಯುನಿವರ್ಸಿಟಿಗಳಲ್ಲಿ ನಾನು ಪಾಠ ಹೇಳುತ್ತಿದ್ದಾಗ. ಒಮ್ಮೆಯೂ ನಾನು ತಡಮಾಡಿದ್ದು ನೆನಪಾಗುತ್ತಿಲ್ಲ.

ಅತ್ಯುತ್ತಮವಾಗಿ ಪಾಠ ಹೇಳುವ ಇನ್ನೂ ಕೆಲವು ಅಧ್ಯಾಪಕರು ಇದ್ದಾರೆ. ನಾನು ಮುಗಳಿಯವರಲ್ಲಿ ಕಂಡದ್ದೆಂದರೆ ಪ್ರತಿ ಪಾಠದ ವಿಷಯದ ಬಗ್ಗೆ ಟಿಪ್ಪಣಿ ಬರೆದು ೮-೧೦ ಮಿನಿಟು ಅದನ್ನು ಮನನ ಮಾಡಿಕೊಳ್ಳುತ್ತಿದ್ದರು. ಅವರಿಗೆ ವಿಷಯ ಗೊತ್ತಿರಲಿಲ್ಲ ಎಂದಲ್ಲ. ಯಾವುದೇ ಪುಸ್ತಕ ನೋಡದೆ ಆ ಟಿಪ್ಪಣಿ ಮಾಡಿಕೊಂಡಿರುತ್ತಿದ್ದರು. ಆದರೆ ಅದರ ಉದ್ದೇಶ – ೫೦ ಮಿನಿಟಿನ ಕ್ಲಾಸ್‌ನಲ್ಲಿ ಎಷ್ಟು ಹೇಳಬೇಕು ಎಂಬುದನ್ನು ತಿಳಕೊಳ್ಳುವುದಕ್ಕಿತ್ತು. ಅರಳೆಯನ್ನು ಹಿಂಜಿ ಹಿಗ್ಗಿಸುತ್ತಾರಲ್ಲವೆ. ಆ ರೀತಿಯಲ್ಲಿ ಆ ವಿಷಯವನ್ನು ವಿಶದಗೊಳಿಸುತ್ತಿದ್ದರು. ಅನವಶ್ಯಕ ವಾಗಿ ಹಾಸ್ಯದ ಪ್ರಸಂಗವನ್ನೇನೂ ಹೇಳಹೋಗುತ್ತಿರಲಿಲ್ಲ. ಅನೇಕ ಕಾಲೇಜು ಪ್ರಾಧ್ಯಾಪಕರು ತಮ್ಮ ಪಾಠವು ವಿದ್ಯಾರ್ಥಿಗಳಿಗೆ ಸ್ವಾರಸ್ಯಕರವಾಗಲೆಂದು ಹಾಗೆ ಮಾಡುವುದುಂಟು (ಅವರಲ್ಲಿ ನಾನು ಒಬ್ಬ). ವಿಷಯಕ್ಕೇನೆ ಒತ್ತುಕೊಟ್ಟು ವಿದ್ಯಾರ್ಥಿಗಳಿಗೆ ತಕ್ಷಣ ಮನದಟ್ಟಾಗುವಂತೆ ಬೋಧಿಸುವ ಅವರ ರೀತಿಯನ್ನು ಮಾತ್ರ ನನಗೆ ಅನುಸರಿಸಲಾಗಲೇ ಇಲ್ಲ. 'ಶಬ್ದಮಣಿದರ್ಪಣ' ದಂತಹ ಬಿರುಸು ವಿಷಯವನ್ನು ಕಲಿಸುವಾಗಲೂ ಅವರದು ಅದೇ ಕ್ರಮ. ಬಿ.ಎ. ಪರೀಕ್ಷೆಯ ಕಾಲಕ್ಕೆ ನಾನು ವ್ಯಾಕರಣ ವಿಷಯದ ಪೇಪರಿನಲ್ಲಿ ಚೆನ್ನಾಗಿ ಅಂಕಗಳನ್ನು ಪಡೆದದ್ದು ನೆನಪಾಗುತ್ತದೆ.

ಕಾವ್ಯದ ಪಠ್ಯವಿದ್ದರಂತೂ ನಮಗೆಲ್ಲ ಅದೊಂದು ರಸಗವಳ. ಕವಿಯ ಕಲ್ಪಕತೆ, ರಸಜ್ಞತೆ ಇವನ್ನು ಅವರು ವಿವರಿಸುವಾಗ, ನಾನು ಬೇರೆಯೇ ಲೋಕದಲ್ಲಿ ಇದ್ದಂತೆ ಭಾಸವಾಗುತ್ತಿತ್ತು.

ಹಳಗನ್ನಡ ಕಾವ್ಯವು ಚಂಪೂಗ್ರಂಥವಾಗಿದ್ದರೂ; ಅಕ್ಷರ ವೃತ್ತಗಳಿದ್ದರೂ ಸಹ ಅವರು ರಾಗಹಚ್ಚಿ ಹಾಡಬಲ್ಲವರಾಗಿದ್ದರು. ಪಂಪನ ಒಂದು ರಗಳೆಯ ಬಂಧದ ಪದ್ಯ 'ಅದರ ಪೊರವೊಬಿಲ ವಿಶಾಲ ಕನಕಕೃತಕಗಿರಿಗಳಿಂ ಫಲಪ್ರಕೀರ್ಣ ತರುಗಳಿಂ' ಎಂಬುದನ್ನು ಅವರು ಹೇಳಿದ್ದು ನನ್ನ ಕಿವಿಯಲ್ಲಿ ಇನ್ನೂ ಝೇಂಕರಿಸುವಂತಿದೆ. ಇನ್ನಾವುದಲ್ಲದಿದ್ದರೂ ಆ ಪದ್ಯ ಇವತ್ತಿಗೂ ಇಡಿಯಾಗಿ ನೆನಪಿದೆ.

ಆನರ್ಸ್ ವಿದ್ಯಾರ್ಥಿಗಳಿಗೆ ಸಾಂಗತ್ಯ ಪ್ರಕಾರವನ್ನು ವಿಶೇಷ ಅಭ್ಯಾಸಕ್ಕೆಂದು ಇಟ್ಟಿದ್ದರು. ತ್ರಿಪದಿಯಿಂದ ಒಡಮೂಡಿದ ಆ ಪ್ರಕಾರದ ಆರಂಭ ಹಾಗೂ ಇತರ ವಿಷಯಗಳ ಮೇಲೆ ಕೊನೆಯದಾದ ಭರತೇಶ ವೈಭವವನ್ನು ವಿವರಿಸಿ ಪದ್ಯಗಳನ್ನು ಹಾಡುವಾಗಲಂತೂ ಮುಗಳಿಯವರು ಋಷಿಸದೃಶರಂತೆ ನನ್ನ ಆಗಿನ ಎಳೆಯ ಅನುಭವಕ್ಕೆ ಅನಿಸಿದ್ದಿತು. ಮುಂದೊಮ್ಮೆ ಅವರು ಭರತೇಶ ವೈಭವದ ಕೆಲ ಭಾಗಗಳನ್ನು ಸಾಂಗಲಿಯ ವೃದ್ಧಾ ಜೈನ ಮಹಿಳೆಯರ ಕೂಟದಲ್ಲಿ ಹಾಡಿ ಅರ್ಥವನ್ನು ವಿವರಿಸಿದ್ದರಂತೆ.

ಈಗಿನ ದಿನಗಳಲ್ಲಿ ಕಲಿಸುವ portion ಮುಗಿದ ಮೇಲೆ ಸ್ನಾತಕ, ಸ್ನಾತಕೋತ್ತರದ ವಿದ್ಯಾರ್ಥಿಗಳು ಕೂಡ, likely questions ಯಾವವು ಎಂದು ಕೇಳುವ ಪರಿಪಾಠ ಬಿದ್ದಿದೆಯಷ್ಟೆ. ಅರವತ್ತು ವರ್ಷಗಳ ಹಿಂದೆ ಆ ಪೃಥ ಇರಲಿಲ್ಲ; ಕೊನೆಯ ಕ್ಲಾಸ್ ಮುಗಿಸಿ ಹೇಳಿದ್ದು ಇಷ್ಟೇ; "ಚೆನ್ನಾಗಿ, ಲಕ್ಷ್ಯವಿಟ್ಟು ಉತ್ತರ ಬರೆಯಿರಿ. ಭಾಷಾ ದೋಷಗಳನ್ನು ಮಾಡಬೇಡಿರಿ"

ಎಂ.ಎ.ಕ್ಕೂ ಅವರೇ ನನಗೆ ಗುರುಗಳು. ಆದರೆ ಮೂರು ತಿಂಗಳಿಗೊಮ್ಮೆ ಸಾಂಗಲಿಗೆ ಕರೆಯಿಸಿ ಒಂದು ವಾರ ಮಾತ್ರ ಪಾಠ ಹೇಳುತ್ತಿದ್ದರು. ನಮ್ಮನ್ನು ಬಿಟ್ಟು ಹೋಗುವಾಗ ಅಭ್ಯಾಸಕ್ಕೆ ಸಂಬಂಧಪಟ್ಟ ಲೈಬ್ರರಿಯ ಪುಸ್ತಕಗಳನ್ನು ಸೂಚಿಸಿ, ಇಲ್ಲವೆ ಸ್ವತಃ ತಮ್ಮ ಸಂಗ್ರಹದಿಂದ ಕೊಟ್ಟು "ಮುಂದಿನ ಸಲ ಬರುವಾಗ ತೆಗೆದುಕೊಂಡು ಬಾ" ಎಂದು ಹೇಳುತ್ತಿದ್ದರು.

ಬಿ.ಎ.ದಲ್ಲಿ ಸರೋಜಿನಿ ಮಹಿಷಿಯವರು ನಮ್ಮ ಜೊತೆಗಿದ್ದಂತೆ ಎಂ.ಎ.ದಲ್ಲಿ ಅಕಬರಿ ಅಲಿಯವರು ಇದ್ದರು. ಬಿ.ಎ.ದಲ್ಲಿ ನಾವು ಒಂದನೆಯ ವರ್ಗದಲ್ಲಿ ಪಾಸಾದೆವು. ಆಗಿನ ಕಾಲದಲ್ಲಿ ಅದು ಅಪೂರ್ವದ ಸಂಗತಿಯೇ ಆಗಿದ್ದಿತು. ಎಂ.ಎ.ದಲ್ಲಿ ೨ನೇ ವರ್ಗದಲ್ಲಿ ಪಾಸಾಗಿದ್ದೆ. ಫೇಡ ತೆಗೆದುಕೊಂಡು, ಅವರ ಮನೆಗೆ ಹೋದೆ (೧೯೫೭) ಮಾತು ಮಾತಿಗೆ ಬಂದು "ಈಗಿನ ಕನ್ನಡ ಎಂ.ಎ. ಆದವರು ಆ ವಿಷಯದ 'Master' ಅನ್ನಿಸಿಕೊಳ್ಳುವುದಕ್ಕೆ ಯೋಗ್ಯರೆ ಎಂದು ಆಗಾಗ ಅನಿಸುತ್ತದೆ. ಹಳಗನ್ನಡದ ಐದಾದರೂ ಉತ್ತಮ ಕಾವ್ಯಗಳನ್ನು ಇಡಿಯಾಗಿ ಓದಿ ರಸಗ್ರಹಣ ಮಾಡಿರುತ್ತಾರೆ! ನೀನು ಇನ್ನು ಮುಂದಾದರೂ ಆ ಕೆಲಸವನ್ನು ಬಿಡುವಿನ ಸಮಯದಲ್ಲಿ ಮಾಡು" ಎಂದು ಸ್ವಲ್ಪ ಬೇಸರದಿಂದಲೇ ಹೇಳಿದ್ದರು. ತನ್ನ ನೌಕರಿ, ಸಂಸಾರ ಈ ಗೊಂದಲದಲ್ಲಿ ಇವನೇನು ಮಾಡುವವನಲ್ಲ ಎಂದು ಅವರಿಗೆ ಅನಿಸಿರಲು ಸಾಕು. ಆಗ ನಾನು ಇಲ್ಲ, ನಾನು ಲೈಬ್ರರಿಯನ್ ವೃತ್ತಿಯನ್ನು ಕೈಕೊಳ್ಳುವವನಿದ್ದೇನೆ" ಎಂದು ಹೇಳಿ ಜಾರಿಕೊಂಡೆ.

ಕ್ರಿ.ಶ. ೧೯೬೧ರಲ್ಲಿ ಪಿಎಚ್.ಡಿ.ಗೆ ಪುಣೆ ವಿಶ್ವವಿದ್ಯಾಲಯದಲ್ಲಿ ರಿಜಿಸ್ಟರ್ ಮಾಡಿಸಿದೆ. ಅವರೇ ಗೈಡ್, ಈಗಿನ ಪಿಎಚ್.ಡಿ ಮಾಡಬಯಸುವವರು "ಸಾರ್, ನನಗೆ ಮದುವೆ ವಯಸ್ಸಾಗಿದೆ (ಎಂ.ಎ. ಆಗಿದೆ) ಎಂಥ ಕನ್ಯೆಯನ್ನು ಆರಿಸಬೇಕು, ಹೇಳಿರಿ" ಎಂಬಂತೆ ಆಗ ಪರಿಸ್ಥಿತಿ ಇರಲಿಲ್ಲ. ಒಮ್ಮೆ ಭೆಟ್ಟಿಯಾದಾಗ ಮುಗಳಿಯವರು "ಪಿಎಚ್.ಡಿ ಯಾವ ವಿಷಯ ತಗೊಳ್ಳಬೇಕೆಂದು ಮಾಡಿದ್ದೀಯಾ?" ಎಂದು ಕೇಳಿದರು. ೧೯ನೆಯ ಶತಮಾನದ ಸಾಹಿತ್ಯ ಎಂದೆ, ನಿಜವೆಂದರೆ ಅವರು ತಮ್ಮ ಹೊಸಗನ್ನಡ ಸಾಹಿತ್ಯದ ಇತಿಹಾಸ ಪುಸ್ತಕದಲ್ಲಿ (ಚರಿತ್ರೆಯದಲ್ಲ) ಒಂದು ೧೮೪೮ರಷ್ಟು ಹೊಸಗನ್ನಡದ್ದೆನ್ನಬಹುದಾದ ಕವಿತೆಯನ್ನು ಉದಾಹರಿಸಿದ್ದರು. ಅಲ್ಲದೆ ಕೆಲವು ವರ್ಷಗಳ ಹಿಂದಿನ ಈ ವಿಷಯದ ಕುರಿತು ವಿಚಾರಸಂಕಿರಣದ ಅಧ್ಯಕ್ಷತೆ ವಹಿಸಿ "ಇದರ ಕುರಿತು ಆಳವಾದ ಅಭ್ಯಾಸದ ಅಗತ್ಯವಿದೆ" ಎಂದು ಸಮಾರೋಪ ಮಾಡಿದ್ದಾರೆ.

ರಿಜಿಸ್ಟರ್ ಮಾಡಿಸಿ ಅಭ್ಯಾಸಕ್ಕೆ ಅಣಿಯಾದೆ, ತುಂಬಾ ತುಂಬಾ ಸಾಮಗ್ರಿಯನ್ನು ಕಲೆ ಹಾಕಿದೆ. ಕಕ್ಕಾಬಿಕ್ಕಿಯೆನಿಸಿತು. ಆಗ ಮುಗಳಿಯವರು ಬೆಂಗಳೂರಲ್ಲಿ, ನಾನು ಮುಂಬಯಿಯಲ್ಲಿ. ಆಗಾಗ ಮುಂಬಯಿಗೆ ಬಂದಾಗ ಹೇಳುತ್ತಿದ್ದೆ. "ಹೇಗೆ ಮುಂದುವರಿಯಬಹುದು? ಮುದ್ದಣನಂತಹ ಅದೇ ಶತಮಾನದವರ ಬಗ್ಗೆ ಎಷ್ಟು ಹೇಳುವುದು."

ಅವರು ಹೇಳಿದರು "ಹೊಸಗನ್ನಡ ಸಾಹಿತ್ಯ ಇದರ ಆರಂಭ ಕಾಲವನ್ನು ನೀನು ತಗೊಂಡಿದ್ದೀಯ. ಹೊಸತು ಅಂತ ಏನಿದೆ ಅದನ್ನಷ್ಟೇ ಹೇಳು" ಎಂದರು.

ಆ ಒಂದೇ ವಾಕ್ಯ ನನಗೆ ಸರಿಯಾದ ದಾರಿ ತೋರಿದಂತಾಯಿತು. ಮುಂದೆ ನಾನು ಒಂದೊಂದು ಪ್ರಕರಣವನ್ನು ಬರೆಯುತ್ತ, ಮುಂಬಯಿಗೆ ಅವರು ಬಂದು ಹಿಂತಿರುಗಿ ಹೋಗುವಾಗ, ಆ ವಿಮಾನಯಾತ್ರೆಯಲ್ಲಿ ಓದನ್ನು ಮುಗಿಸಿ ಬೆಂಗಳೂರಿನಿಂದ ಮರಳಿ ಕಳಿಸುತ್ತಿದ್ದರು. ಸುರುವಾತನ ಒಂದು ಪ್ರಕರಣವನ್ನೂ ಓದಿ ಸಣ್ಣ ಕಾಗದದಲ್ಲಿ "ಅಗತ್ಯವಿದ್ದಷ್ಟೇ ಬರೆಯಬೇಕು" ಎಂದು ಕಾಣಿಸಿದ್ದರು. ಮತ್ತೊಂದರಲ್ಲಿ "ಆಧಾರ ಸಹಿತವಾಗಿ, ಪ್ರಮಾಣ ಪೂರ್ವಕವಾಗಿ ನಿನ್ನ ವಿವರಣೆ ಇರಲಿ" ಎಂಬ ಒಕ್ಕಣಿಕೆ ಅಲ್ಲಿಗೆ ಮುಗಿಯಿತು ಅವರ ಮಾರ್ಗದರ್ಶನ. ಈ ಮಧ್ಯೆ ನಾನು ಒಂದು ಸಂಶೋಧನ ಸಂಸ್ಥೆಯಲ್ಲಿ ಗ್ರಂಥಪಾಲಕ ನಾಗಿದ್ದರಿಂದ, ಆ ದಿಸೆಯ ರೀತಿನೀತಿಗಳು ಕರಗತವಾಗಿದ್ದುವು. ಯುನಿವರ್ಸಿಟಿಗೆ ಹಾಜರು ಮಾಡಿದೆ. ಆದರೆ ಫಲಿತಾಂಶ ಬಲು ಬೇಗ, ಅಂದರೆ ಅಷ್ಟು ಬೇಗ ಬಂದುಬಿಟ್ಟಿತು. ಕಾರಣ ವೆಂದರೆ ಇಬ್ಬರೂ ಪರೀಕ್ಷಕರು "ಎಲ್ಲವೂ ಸರಿಯಾಗಿ ಬಂದಿದೆ ಇದಕ್ಕೆ ಮೌಖಿಕ ಪರೀಕ್ಷೆಯ ಅಗತ್ಯವಿಲ್ಲ" ಎಂದು ಅಭಿಪ್ರಾಯ ಪಡಬೇಕೆ?

ಅಲ್ಲಿಗೆ ಗುರು–ಶಿಷ್ಯ ಸಂಬಂಧ ಮುಗಿಯಲಿಲ್ಲ. ಬೆಂಗಳೂರಲ್ಲಿ ಆಗಾಗ ಭೆಟ್ಟಿಯಾಗುತ್ತಿದ್ದೆ. ತಮ್ಮ ಸೌಮ್ಯದನಿಯಲ್ಲಿಯೇ ಅನೇಕ ಹಿತದ ಮಾತುಗಳನ್ನು ಹೇಳುತ್ತಿದ್ದರು. ತಮ್ಮ ಸುಖದುಃಖವನ್ನು ಸಾಹಿತ್ಯ ಲೋಕಕ್ಕೆ ಸಂಬಂಧಿಸಿದಂತೆ ಹೇಳುತ್ತಿದ್ದರು. ಕೆಲವು ಶಿಷ್ಯರು

ದೊಡ್ಡ ಸ್ಥಾನಗಳಲ್ಲಿದ್ದು ತಮ್ಮನ್ನು ಹೇಗೆ ಕಡೆಗಣಿಸಿದರೆಂಬುದಕ್ಕೆ ೨-೩ ಸಂದರ್ಭಗಳನ್ನು ಹೇಳಿದ್ದನ್ನು ಕಾಣಿಸಬೇಕು. ಕೊನೆಯದಾಗಿ ಹೇಳುವುದಾದರೆ ಅವರು ನನ್ನನ್ನು ಯಾವ ಸಂದರ್ಭದಲ್ಲೂ "ಒಳ್ಳೆ ಕೆಲಸ ಮಾಡಿದ್ದೀಯ. ಅಭಿನಂದನೆಗಳು" ಎಂಬಂತಹ ಮಾತುಗಳನ್ನು, ನಾನು ಕೇಳಿದುದಿಲ್ಲ. ಆದರೆ ಆಗಿದ್ದ ಶಿಷ್ಯರಲ್ಲಿ ನಾನೊಬ್ಬ ಗಟ್ಟಿಮುಟ್ಟಾದ ಶಿಷ್ಯ ಎಂಬುದು ಅವರಿಗೆ ಚೆನ್ನಾಗಿ ಮನದಟ್ಟಾಗಿದ್ದಿತು.

ಉಪಸಂಹಾರವಾಗಿ ಒಂದೆರಡು ಮಾತು ಸೇರಿಸಬೇಕು : "ವರ್ಣಮಾತ್ರಂ ಕಲಿಸಿದಾತಂ ಗುರು"ಎಂಬುದಕ್ಕೆ 'ಸಲಹೆ ಮಾತ್ರಂ ಕೊಟ್ಟಾತನೂ ಗುರು' ಎಂದೂ ಅವಶ್ಯವಾಗಿ – ಅದೂ ಈಗಿನ ಜಟಿಲ ಜೀವನದ ಕಾಲದಲ್ಲಿ ಸೇರಿಸಬೇಕು.

ಆ ರೀತಿಯಲ್ಲಿ ನಾವು ಅನೇಕಾನೇಕ ಶಿಷ್ಯರು ಮುಗಳಿಯವರಿಂದ ಕಲಿತಿದ್ದೇವೆ. ನಾನು ಸಾಂಗಲಿಯಲ್ಲಿದ್ದಾಗ ಅವರು ವಿದ್ಯಾರ್ಥಿಯಾದ ನನ್ನನ್ನು ಒಂಟಿ ಹೆಸರಿನಿಂದ ಕರೆಯುತ್ತಿದ್ದದ್ದು ಸ್ವಾಭಾವಿಕ ತಾನೇ. ಆದರೆ ಯಾರಾದರು ಹೊರಗಿನವರು ಬಂದರೆ, ಅವು ಒಮ್ಮಿಂದೊಮ್ಮೆಲೇ ಬಹುವಚನವನ್ನು ಬಳಸುತ್ತಿದ್ದರು. ಯಾರೇ ಇರಲಿ ಜನ ಸಂಪರ್ಕದಲ್ಲಿ ಹೇಗೆ ವರ್ತಿಸಬೇಕೆನ್ನುವು ದನ್ನು ನಾನು ರೂಢಿಸಿಕೊಂಡೆ.

ನನಗೆ ಗೊತ್ತಿದ್ದ ಅವರ ಕೆಲವು ಶಿಷ್ಯರ ಹೆಸರನ್ನು ಹೇಳಬೇಕು. ಹಿರಿಯ ಶಿಷ್ಯರು – ಇಂದಿಗೂ ಬದುಕಿದ್ದವರು – ಪ್ರೊ. ಎಸ್. ಆರ್. ಮಳಗಿ (೯೬ ವರ್ಷದವರು) ಮತ್ತೊಬ್ಬರು ಪ್ರೊ. ಕೆ.ಜಿ. ಶಾಸ್ತ್ರಿ (ಧಾರವಾಡದಲ್ಲಿ ಇದ್ದಾರೆ) ದಿವಂಗತ ವಿ.ಜಿ. ಭಟ್ಟ ಹಾಗೂ ಎಸ್.ಆರ್. ಯಕ್ಕುಂಡಿ – ಈ ಕವಿಗಳೂ ಅವರ ಶಿಷ್ಯರೇ ಆಗಿದ್ದರು.

ಲೆಕ್ಕವಿಲ್ಲದಷ್ಟು ಆಗಿಹೋದ ಶಿಷ್ಯರಲ್ಲಿ ಒಂದಿಬ್ಬರ ವಿಷಯವನ್ನು ದೃಷ್ಟಾಂತ ಸಹಿತ ಹೇಳಬೇಕೆನಿಸುವುದು. ಕೆ.ಬಿ. ಪ್ರಭುಪ್ರಸಾದರು ಗೋಕಾಕರ ಕೈಯಲ್ಲಿ ಎಂ.ಎ. ಇಂಗ್ಲಿಷ್ ಮಾಡಬೇಕೆಂದು ಮೈಸೂರಿನಿಂದ ಸಾಂಗಲಿಗೆ ಬಂದರು. ಆದರೆ ಮುಗಳಿಯವರ ಒಂದೆರಡು ಕ್ಲಾಸ್‌ಗೆ ಹೋಗಿದ್ದಾಗ "ಕನ್ನಡದಲ್ಲೇ ಎಂ.ಎ. ಮಾಡುವೆ" ಎಂದು ಯೋಚಿಸಿದರು. ಆಗ ಮುಗಳಿಯವರು "ಬೇಡ, ಕನ್ನಡ ಹೇಗೂ ನಿಮ್ಮ ಒಲವಿನ ವಿಷಯ. ಆಮೇಲೆ ಓದಿಕೊಳ್ಳ ಬಹುದು. ಈಗ ಇಂಗ್ಲಿಷ್ ಕಲಿಯುವ ಒಳ್ಳೆಯ ಅವಕಾಶ ಇದೆ. ಅದನ್ನು ಕಳೆದುಕೊಳ್ಳುವುದು ಬೇಡ" ಎಂದರಂತೆ.

ಎನ್.ಪಿ. ಭಟ್ಟ ನಾನಿದ್ದ ಮರುವರ್ಷ ಮುಗಳಿಯವರ ಶಿಷ್ಯರಾಗಿ ಬಂದರು. (ಕೇಂದ್ರ ಸರಕಾರದಲ್ಲಿ ದೊಡ್ಡ ಹುದ್ದೆಯಲ್ಲಿದ್ದು ಈಗ ಧಾರವಾಡ ವಾಸಸ್ಥರು) ತಮಗೆ ಯಾವುದೇ ಅಡಚಣೆ ಇದ್ದರೂ ಮುಗಳಿ ಮನೆಗೆ ಧಾವಿಸುತ್ತಿದ್ದರು. ಕಾಲೇಜಿನ ಇಂಟರ್ ಕ್ಲಾಸಿನಲ್ಲಿದ್ದಾಗ ಗಂಭೀರ ಸ್ವರೂಪದ ಜಡ್ಡು ಆಯಿತೆಂದು ತಮ್ಮೂರಿಗೆ ಹೋದರು. ಗುಣಮುಖರಾಗುತ್ತ ನಡೆದಾಗ ಮುಗಳಿಯವರಿಗೆ ಪತ್ರ ಬರೆದು ತಮಗೆ ಲಾಜಿಕ್ ವಿಷಯ ಸರೀ ತಿಳಿಯುತ್ತಿಲ್ಲ" ಎಂದು ತಮ್ಮ ಅಳಲನ್ನು ತೋಡಿಕೊಂಡರಂತೆ. ಆಗ ಗುರುಗಳು ಸುಲಭವಾಗಿ ಅರ್ಥವಾಗುವ

ಲಾಜಿಕ್ ವಿಷಯದ ಪುಸ್ತಕಗಳನ್ನು ಕೊಂಡು ಕಳಿಸಿದರಂತೆ. ಕನ್ನಡವೂ ಜಡ್ಡಿನಿಂದಾಗಿ ಹಿಂದುಳಿದಿತ್ತಲ್ಲವೆ. ಮುಗಳಿಯವರು ಅವರೊಬ್ಬರಿಗಾಗಿ ಮನೆಯಲ್ಲೇ ಪಾಠ ಹೇಳಿದರು. ಭಟ್ಟರಿಗೆ ಒಮ್ಮೆ ಸೊಂಟನೋವು ಅದನ್ನು ಹೇಳಲೆಂದು ಮುಗಳಿಯವರಲ್ಲಿಗೆ ಬಂದರು. ಮುಗಳಿಯವರು ನೋವಿನ ಎಣ್ಣೆ ಹಚ್ಚಿ ತಿಕ್ಕಿದರಂತೆ! ಜಮಖಂಡಿಯ ಎ.ಟಿ. ಪಾಟೀಲ ಎನ್ನುವವರು ಕನ್ನಡ ಕಲಿಕೆ ಅತ್ಯಂತ ಮೋಜಿನದು ಮನೆ ಮಾತು ಕನ್ನಡವಾದರೂ ಮೆಟ್ರಿಕ್‌ವರೆಗೆ ಉದ್ದಕ್ಕೂ ಮರಾಠೀ ಮಾಧ್ಯಮದಲ್ಲಿ ಕಲಿತಿದ್ದರು. ಕಾಲೇಜು ಶಿಕ್ಷಣಕ್ಕೆಂದು ಸಾಂಗಲಿಗೆ ಬಂದರು. ಒಂದೆರಡು ತಿಂಗಳು ದಾಟಿರಬಹುದು. ಒಮ್ಮೆ ಅಕಸ್ಮಾತ್ ಮುಗಳಿಯವರ ಎಫ್.ವಾಯ್.ಎ.ದ ಕನ್ನಡ ಕ್ಲಾಸಿನಲ್ಲಿ ಕುಳಿತಿದ್ದರು. ಆಗೇ ನಿರ್ಧಾರ ಮಾಡಿದರು–ನಾನಿನ್ನು ಕನ್ನಡದಲ್ಲೇ ಶಿಕ್ಷಣ ಮುಂದುವರಿಯಬೇಕು ಎಂದು. ರ ಠ ಈ ಕ – ದಿಂದ ಇವರ ಕನ್ನಡ ಕಲಿಕೆಯ ಆರಂಭ. ಆ ಮುಂದೆ ಹೆಜ್ಜೆ ಹೆಜ್ಜೆಗೂ ಮುಗಳಿಯವರ ಬೋಧನೆ. ಬಿ.ಎ. ಮುಗೀತು. ಎಂ.ಎ. ಮುಗಿಸಿದರು – ಕನ್ನಡವನ್ನೇ ತೆಗೆದುಕೊಂಡು ಅದಾಗಿ ಡಾ. ಪಂಚಮುಖಿ ಯವರ ಮಾರ್ಗದರ್ಶನದಲ್ಲಿ ಪಿಎಚ್.ಡಿಯನ್ನೂ ಗಳಿಸಿದರು. ವಿಷಯ 'ಪ್ರಸನ್ನ ವೆಂಕಟದಾಸರು' (ಅದುವೇ ಕನ್ನಡದಲ್ಲಿ ದಾಸ ಸಾಹಿತ್ಯದ ಪ್ರಥಮ ಪಿಎಚ್.ಡಿ. ೧೯೫೭)

ಹಾಂ. ಬಾಹ್ಯ ಶಿಷ್ಯರೊಬ್ಬರ ಹೆಸರು ಹೇಳಲೇಬೇಕು. ಅವರೇ ಮಿರ್ಜಿ ಅಣ್ಣಾರಾಯರು. ಹತ್ತಿರದ ಶೇಡಬಾಳದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದರು. ವಿನಯದ ಸಾಕಾರ ಮೂರ್ತಿ, ಪ್ರತಿ ರವಿವಾರ ಮುಗಳಿಯವರಲ್ಲಿಗೆ ತಪ್ಪದೇ ಬರುತ್ತಿದ್ದರು. ಅವರ ಮಾಮೂಲಿಯ ಗುರುದಕ್ಷಿಣೆ ಏನು ಗೊತ್ತೆ? ತಮ್ಮ ಹೊಲದಲ್ಲಿ ಬೆಳೆದ ಹಸಿ ಶೇಂಗಾ ಇಲ್ಲವೆ ಯಾವುದೊಂದು ತರಕಾರಿ. ತಾವು ಬರೆದದ್ದನ್ನು ಓದಿ ತೋರಿಸಿ, ಸಲಹೆ ಪಡೆಯುತ್ತಿದ್ದರು.

ಕೊನೆಯದಾಗಿ ಇನ್ನೊಬ್ಬ ಶಿಷ್ಯರು ಹಾಗೆ ನೋಡಿದರೆ ಅವರೇ ಮೇಲೆ ಹೇಳಿದ ವಿಶಿಷ್ಟ ರೀತಿಯಲ್ಲಿ, ಮೊದಲ ಶಿಷ್ಯರು. ಅವರೇ ವಿ. ಕೃ. ಗೋಕಾಕರು! ಮುಗಳಿಯವರು ಅವರಿಗಿಂತ ಒಂದೆರಡು ವರ್ಷ ಮನಸ್ಸಿನಲ್ಲಿ ಹಿರಿಯರೆಂಬುದು ಬಹಳ ಜನಕ್ಕೆ ಗೊತ್ತಿಲ್ಲ. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಮುಗಳಿಯವರು ಇಂಟರ್‌ನಲ್ಲಿ ಇದ್ದಾಗ ಗೋಕಾಕರು ಆ ಕಾಲೇಜಿನಲ್ಲಿ ಸೇರಿದ್ದರು. ಆಗಿನ ತಮ್ಮ ಮುಗಳಿ ಸಂಪರ್ಕದ ಬಗ್ಗೆ ಹೀಗೆ ಬರೆದಿದ್ದಾರೆ:

"ಕಾಲೇಜಿಗೆ ಹೊಸದಾಗಿ ಬಂದ ನಾನು ಅವರನ್ನು ವಿಸ್ಮಿತ ಆದರದಿಂದ ನೋಡುತ್ತಿದ್ದೆ. ಮುಗಳಿಯವರ ಹಾಗೆ ಸ್ಕಾಲರ್ ಆಗಬಾರದು" ಎನಿಸುತ್ತಿತ್ತು. ಹೀಗೆ ನನ್ನ ಪಾಂಡಿತ್ಯಕ್ಕೆ ಮುಗಳಿಯವರೇ ಅಡಿಗಲ್ಲು ಹಾಕಿದರೆನ್ನಬಹುದು."

❖

# ನನ್ನ ಬದುಕಿನ ಗುರು

## (ಡಾ॥ ಶ್ರೀನಿವಾಸ ಹಾವನೂರ)

*● ಡಾ॥ ನಾ. ದಾಮೋದರ ಶೆಟ್ಟಿ*

ಕನ್ನಡದ ಸಂದರ್ಭದಲ್ಲಿ ಗುರುಗಳ ಮೂಲಕ ಶಿಷ್ಯ ಗುರುತಿಸಲ್ಪಡುವುದು ಹೊಸತೇನಲ್ಲ. ಎಷ್ಟೊಂದು ಮಂದಿ ಈಗಲೂ ಕೂಡ ತಾವೆಷ್ಟು ಹಿರಿಯರಾಗಿದ್ದರೂ, ತಮಗಿಂತ ಹಿರಿಯರಾದ ಗುರುಗಳನ್ನು ನೆನೆಯುವುದು, ಮಿಕ್ಕವರೆದುರು ಅಭಿಮಾನದಿಂದ ಅವರ ಬಗ್ಗೆ ಹೇಳಿಕೊಳ್ಳುವುದು, ಅವರು ಪಾಠ ಮಾಡುತ್ತಿದ್ದ ರೀತಿಯನ್ನು ಅನುಕರಿಸಿ ಇತರರಿಗೆ ತೋರಿಸಿ ರಂಜನೆ ನೀಡುವುದು ಇಂದಿಗೂ ನಡೆದೇ ಇದೆ. ನವೋದಯ ಕಾಲಘಟ್ಟದ ಸಾಹಿತ್ಯ ದಿಗ್ಗಜರುಗಳಾದ ಕುವೆಂಪು, ಬೇಂದ್ರೆ, ಬಿ.ಎಂ.ಶ್ರೀ, ಮುಗಳಿ ಮೊದಲಾದವರ ಶಿಷ್ಯರು ಹೆಮ್ಮೆಯಿಂದ ಬೀಗುವ ಬಗೆಯೇ ಹಾಗೆ.

ಅಂಥ ಗುರುಗಳ ಸಾಲಿನಲ್ಲಿ ನಿಲ್ಲಬಹುದಾದ ಗುರುಗಳೊಬ್ಬರ ಶಿಷ್ಯ ನಾನು ಎಂದು ಹೇಳಿಕೊಳ್ಳುವುದೂ ಒಂದು ಭಾಗ್ಯವೆ. ಮಂಗಳೂರಿನ ಕನ್ನಡ ವಿಭಾಗದ ಮುಖ್ಯಸ್ಥರಾಗಿ ೧೯೮೦ರ ಕಾಲಕ್ಕೆ ಡಾ॥ ಶ್ರೀನಿವಾಸ ಹಾವನೂರ ಅವರು ಬಂದಿದ್ರು, ನಗರದ ವೈ.ಎಂ.ಸಿ.ಎ.ನಲ್ಲಿ ಅವರ ವಾಸ್ತವ್ಯವಿತ್ತು. ಆಗೊಮ್ಮೆ ಈಗೊಮ್ಮೆ ಅವರನ್ನು ಹೋಗಿ ಭೇಟಿಯಾಗುತ್ತಿದ್ದೆ. ಅವರು ಮುಂಬಯಿಯ ಮೊದಲ ಇನ್ನಿಂಗ್ಸ್‌ನಲ್ಲಿದ್ದಾಗ ನನ್ನ ಅಣ್ಣ ಕುಂಬಳೆ ಸುಂದರರಾವ್, ಅವರನ್ನು ಭೇಟಿಯಾಗುತ್ತಿದ್ದರಂತೆ, ಅಲ್ಲಿಗೆ ಹೋಗುತ್ತಿದ್ದಾಗಲೆಲ್ಲ. ನನ್ನ ಹಾಗೂ ಹಾವನೂರರ ನಡುವೆ ಸಲುಗೆ ಬೆಳೆಯಲು ಅದೊಂದು ಪಿಳ್ಳೆ ನೆವ. ನನ್ನಣ್ಣ ಯಕ್ಷಗಾನ ಕಲಾವಿದ. ಯಕ್ಷಗಾನ ಪ್ರಸಂಗಗಳನ್ನು ಬರೆದ ಮುದ್ದಣ ಯಾನೆ ನಂದಳಿಕೆ ಲಕ್ಷ್ಮೀನಾರಾಣಪ್ಪ ಡಾ. ಹಾವನೂರರಿಗೆ ಅಚ್ಚುಮೆಚ್ಚು. (ಕಂಪ್ಯೂಟರನ್ನು ಅವನಿಗಾಗಿ ವಿನಿಯೋಗಿಸಿ ಖುಷಿಪಟ್ಟವರು ಡಾ. ಹಾವನೂರರು) ಮುದ್ದಣನ ಕುರಿತಾಗಿ ಸಂಶೋಧನೆ ನಡೆಸುವಂತೆ ಹಾವನೂರರಿಂದ ಒತ್ತಾಯ. 'ಬೆಟ್ಟದ ನೆಲ್ಲಿಕಾಯಿ ಸಮುದ್ರದೊಳಗಣ ಉಪ್ಪು' ಹೇಗೆ ಸೇರಿತೊ ಗೊತ್ತಿಲ್ಲ! ನಾನು ಹಾವನೂರರ ಶಿಷ್ಯನಾದೆ.

ಹಾಗೆ ನೋಡಿದರೆ ಹಾವನೂರರ ಪಾಠ ನಾನು ಕೇಳಿದ್ದಂತೂ ಇಲ್ಲ. ಈ ಇಪ್ಪತ್ತೈದು ವರ್ಷಗಳ ಸುದೀರ್ಘ ಕಾಲಘಟ್ಟದಲ್ಲಿ ನಾನವರ ನಿತ್ಯ ಶಿಷ್ಯ. ಆದ್ದರಿಂದ ಪಾಠ ಯಾಕೆ? ನಾನು ಅವರ 'ಆಪ್ತಶಿಷ್ಯ'ನಾಗುವುದಕ್ಕೆ ತುಸುಕಾಲ ಹಿಡಿದದ್ದು ನಿಜ. ಹಾವನೂರರು ಮಂಗಳೂರು ಬಿಟ್ಟು ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಹೊರಟು ಹೋದಾಗ

ನನ್ನ ಸಂಶೋಧನೆಗೆ ಮಂಕು ಕವಿದಿತ್ತು. ಇದನ್ನು ಗಮನಿಸಿದ ಹಾವನೂರರು ಮುಂಬಯಿಯ ತನ್ನ ವಸತಿಗೆ ಬಂದುಬಿಡುವಂತೆ ಫರ್ಮಾನೆ ಹೊರಡಿಸಿದರು!

ಅದು ಬೇಸಗೆ ರಜೆಯ ಕಾಲ. ನನ್ನ ಪತ್ನಿ, ಇಬ್ಬರು ಪುಟ್ಟ ಮಕ್ಕಳ ಸಮೇತ ನಾನು ಮುಂಬಯಿ ತಲುಪಿದೆ. ಮೂರು ಕೋಣೆಗಳ ವಿಶಾಲವಾದ ಕ್ವಾರ್ಟರ್ಸ್‌ನಲ್ಲಿ ಒಂದು ಕೋಣೆಯನ್ನು ನಾವೂ ಇನ್ನೊಂದನ್ನು ಅವರ ಇನ್ನೊಬ್ಬ ಶಿಷ್ಯ ತಾಳ್ತಜೆ ವಸಂತಕುಮಾರರೂ ಆಕ್ರಮಿಸಿದ್ದೆವು. ಗುರುಕುಲ ಪದ್ಧತಿಯ ಆಧುನಿಕ ರೂಪದ ಆವಿಷ್ಕಾರವನ್ನು ನಾವು ಕಂಡುಂಡೆವು. ಅದರ ವಿಶೇಷವೆಂದರೆ ಶಿಷ್ಯರು ಗುರುಗಳಿಗೆ ಅಡುಗೆ ಮಾಡಿ ಬಡಿಸುತ್ತಿರಲಿಲ್ಲ; ಗುರುಗಳೇ ಶಿಷ್ಯರಿಗಾಗಿ ಆ ಕೆಲಸ ಮಾಡುತ್ತಿದ್ದರು!!

ಹಾವನೂರರು ಸ್ವತಃ ಒಳ್ಳೆಯ ಪಾಕಪ್ರವೀಣ. ಮೊದಮೊದಲು ನಾವು ತರಕಾರಿ ಹೆಚ್ಚುವ, ಮನೆಯನ್ನು ಸ್ವಚ್ಛವಾಗಿರಿಸುವ ಕೆಲಸದಲ್ಲಿ ಭಾಗಿಗಳಾಗುತ್ತಿದ್ದೆವು. ಕ್ರಮೇಣ ನನ್ನ ಮನೆಯಾಕೆಯ ಅಡುಗೆ ರುಚಿ ಅವರಿಗೂ ಹತ್ತಿ ಅವರ ಕೆಲಸ ತುಸು ಹಗುರಾಯಿತು. ಅವರ 'ಅಭ್ಯಾಸ'ಕ್ಕೆ ಹೆಚ್ಚಿನ ಸಮಯಾವಕಾಶ ಒದಗಿತು!

ಅವರ 'ಅಭ್ಯಾಸ' ಎಂದರೆ ಅದು ಬಹುಭಿನ್ನ ಬಗೆಯದು. ಜಗವೆಲ್ಲ ಮಲಗಿರಲು ಅವರೊಬ್ಬರೆದ್ದು 'ಅಭ್ಯಾಸ'ದಲ್ಲಿ ನಿರತರಾಗುತ್ತಿದ್ದರು. ಜಗ ಎದ್ದಾಗ ಮಾತ್ರ ಇವರದ್ದೊಂದು ಕೋಳಿನಿದ್ದೆ! ನಿಜಕ್ಕೂ ಅವರು ಮಲಗುವುದ್ಯಾವಾಗ? 'ಅಭ್ಯಾಸ' ಮಾಡುವುದು ಯಾವಾಗ? ಎಲ್ಲವೂ ರೋಚಕ ವಿಚಾರಗಳೇ! ಮಧ್ಯರಾತ್ರಿಯಲ್ಲಿ ನನಗೆ ಎಚ್ಚರವಾಗಿ ಕಣ್ಣುಬಿಟ್ಟರೆ ಅವರು ಆ ಕಡೆಯ ಕೋಣೆಯಲ್ಲಿ ಸಣ್ಣಕೆ ಹಿಂದೂಸ್ತಾನಿ ಕ್ಯಾಸೆಟ್ ಹಾಕಿ ಓದುವುದೋ ಬರೆಯುವುದೋ ಮಾಡುತ್ತಿದ್ದರು. ನಾನು ಬಿಟ್ಟಕಣ್ಣನ್ನು ಅಲ್ಲಿಗೇ ಮುಚ್ಚಿಬಿಡುತ್ತಿದ್ದೆ!

ನನ್ನ ಎಷ್ಟೋ ಪದಪ್ರಯೋಗಗಳು ಅವರಿಗೆ ಇಷ್ಟವಾಗುತ್ತಿರಲಿಲ್ಲ. ಸ್ಖಾಲಿತ್ಯಗಳೂ ಇರುತ್ತಿದ್ದುವು. ಅವರದನ್ನು ನೇರವಾಗಿ ಹೇಳಿ ತಬ್ಬಿಬ್ಬುಗೊಳಿಸುತ್ತಿರಲಿಲ್ಲ. 'ಪ್ರಕಲ್ಪ' ಎನ್ನುವ ಪದದ ಅರ್ಥವ್ಯಾಪ್ತಿಯ ಬಗ್ಗೆ ಆಗ ನನಗೆ ಅರಿವಿರಲಿಲ್ಲ. ನನಗೆ ಅರಿವಿರಲಿಲ್ಲ ಎಂಬುದರ ಬಗ್ಗೆ ಅವರಿಗೆ ಅರಿವಿತ್ತು. ಆ ಪದ ಬಳಕೆಯಾಗುವ ಇತರ ಸಂದರ್ಭಗಳನ್ನು ಬೇರೆ ಯಾವುದೋ ರೂಪದಲ್ಲಿ ನನ್ನ ಮುಂದೆ ತಂದಿಡುತ್ತಿದ್ದರು. ಅದರ ಉದ್ದೇಶವೇನು ಎಂಬುದು ನನಗೆ ಅರ್ಥವಾಗಿ ನಾಚಿಕೆಯಾಗುತ್ತಿತ್ತಾದರೂ ಅವರು ಉದ್ದೇಶಪೂರ್ವಕ ಹಾಗೆ ಆಗಗೊಡುತ್ತಿರಲಿಲ್ಲ. 'ಪರೋಕ್ಷ' ಪ್ರತಿಕ್ರಿಯೆ ಹಾವನೂರರದು.

ಅವರ ಆದ್ಯತೆಯ ಮೇಲೆ ಕೆಲಸ ಮಾಡು 'ನನ್ನಷ್ಟಕ್ಕೆ ನಾನು' ಇತ್ಯಾದಿ ಸೂತ್ರಗಳು ನನಗೆ ತುಂಬ ಲಾಭ ನೀಡಿವೆ. ಅವರು ಹೇಳಿಕೊಟ್ಟ 'ಬಿಳಿ ಸುಳ್ಳುಗಳು' ಪೂರಕವಾಗಿಯೇ ಕೆಲಸ ಮಾಡುತ್ತಿವೆ, ಇಂದಿಗೂ. ಸುಳ್ಳು ಹೇಳುವುದಕ್ಕೂ ಗುರುಗಳು ತಮ್ಮ ಶಿಷ್ಯರಿಗೆ ಕಲಿಸಿಕೊಡುತ್ತಾರೆಯೇ ಎಂದು ಮಾತ್ರ ಕೇಳಬೇಡಿ. ಬಿಳಿ ಸುಳ್ಳುಗಳ ಮಜಾನೇ ಬೇರೆ!

ಕನ್ನಡ ಸಾಹಿತ್ಯ ಸಂಶೋಧನೆಯಲ್ಲಿ ಕಂಪ್ಯೂಟರ್ ಅಳವಡಿಕೆ ಮೊದಲಬಾರಿಗೆ ಸಾಧ್ಯವಾಗುವಂತಾದುದು ಡಾ॥ ಹಾವನೂರರ ಮುತುವರ್ಜಿಯಿಂದ, ನನ್ನ ಮೂಲಕ! 'ಮುದ್ದಣ ಕಂಡಶಿವ' ಎಂಬ ಲೇಖನವನ್ನು ಕಂಪ್ಯೂಟರ್ ಬಳಸಿ ಅದಾಗಲೇ ಹಾವನೂರರು ಸಿದ್ಧಪಡಿಸಿ ಆಗಿತ್ತು! ಸಂಪ್ರಬಂಧಕ್ಕೂ ಅದೇ ತತ್ವ ಅನ್ವಯವಾಗುವಂತೆ ಮಾಡಿ, ಭಾಷಾವಿಜ್ಞಾನದ ಹತ್ತಿರಕ್ಕೆ ಸಾಹಿತ್ಯ ಸಂಶೋಧನೆಯನ್ನು ತಂದು ನಿಲ್ಲಿಸಿದ್ದರು. 'ಅವರು ಹೇಳಿಕೊಟ್ಟಷ್ಟನ್ನು ಅಚ್ಚುಕಟ್ಟಾಗಿ ಮಾಡಿದ್ದರೆ ಎಷ್ಟೋ ಆಗುತ್ತಿತ್ತು. 'ಈ ಸೋಮಾರಿಗಳು ಅಷ್ಟೂ ಮಾಡದೇ ಹೊದರೆ?' ಎಂಬುದನ್ನು ಭಾವಿಸಿಯೇ 'ಬನ್ನಿ ಮಕ್ಳೆ, ಇರಿ ನನ್ನ ಕಣ್ಣೆದುರಿಗೆ, ಎಂದಂದುಕೊಂಡು ಮುಂಬಯಿಗೆ ಕರೆಸಿಕೊಂಡದ್ದು'.

ಅಂದೆಲ್ಲ ಪತ್ರ ಮೂಲಕವೇ ವ್ಯವಹಾರ. ಫೋನ್ ವ್ಯವಹಾರ ಬಹಳ ಕಡಿಮೆ. ಹಾವನೂರರ ಹಾಗೆ ಅಚ್ಚುಕಟ್ಟಾಗಿ ಪತ್ರವ್ಯವಹಾರ ಮಾಡುವವರು ಗೋವಿಂದ ಪೈ, ಶಿವರಾಮ ಕಾರಂತಾದಿ ಕೆಲವು ಮಂದಿ ಮಾತ್ರ. ನನ್ನ ಕುರಿತಾಗಿಯೇ ಬರೆದ ನೂರಕ್ಕೂ ಅಧಿಕ ಪತ್ರಗಳು ಈಗಲೂ ನನ್ನ ಕೈಯಲ್ಲಿವೆ. ಪ್ರತಿ ಪತ್ರದಲ್ಲೂ ಕುತೂಹಲ ಕೆರಳಿಸುವ ರೀತಿಯಲ್ಲಿ ಸಂಬೋಧನೆ ಇರುತ್ತಿತ್ತು. ಶೆಟ್ಟರೇ, ನಾದಾ, ದಾಮೋ, ದಾಮೋದರ, ನಾದಾಮೋದ, ದಾಮು ಇತ್ಯಾದಿ.

ಈಚೆಗಿನ ಫೋನಿನ ಮೋಜಂತೂ ಹೇಳಬೇಕಾದ್ದೆ. ಅವರು ಫೋನೆತ್ತಿ ಮಾತನಾಡ ಹೊರಟರೆಂದರೆ ಹೇಳಬೇಕಾದ್ದನ್ನೆಲ್ಲ ಒಂದೇ ವೇಗದಲ್ಲಿ ಹೇಳೀ ಮುಗಿಸಿ, 'ಆಯ್ತಾ, ಸರಿ, ಇನ್ನು ನಿಮ್ಮದು ಹೇಳ್ರಿ' ಎಂದುಬಿಡುತ್ತಿದ್ದರು. ಅವರು ಹೇಳುತ್ತಿದ್ದ ಕೆಲವಾರು ವಿಚಾರಗಳಿಗೆ ನಮ್ಮ ಪ್ರತಿಕ್ರಿಯೆ ಇದ್ದೇ ಇರುತ್ತಿತ್ತು. ಅದನ್ನು ಹೇಳಿಬಿಡೋಣವೆಂದು ಮಾರ್ಗಮಧ್ಯದಲ್ಲಿ ಅವರನ್ನು ತಡೆಯಲು ಗಂಟಲು ಬಿರಿಯುತ್ತಾ 'ಸಾರ್, ಸಾರ್' ಎಂದು ಎಷ್ಟೋ ವೇಳೆ ಹೇಳುತ್ತಿದ್ದೆ. ಯಾವುದೂ ಅವರ ಲಕ್ಷ್ಯಕ್ಕೆ ಬರುತ್ತಿರಲಿಲ್ಲ. ಅವರು ಹೇಳುವುದನ್ನು ಹೇಳಿ ಮುಗಿಸಿಯೇ ಮಿಕ್ಕದ್ದು. ಇನ್ನು ಕೆಲವೊಮ್ಮೆ ಅವರದ್ದನ್ನೆಲ್ಲ ಹೇಳಿ ಮುಗಿಸುತ್ತಲೆ ಯಾವ ಮುನ್ಸೂಚನೆಯೂ ಇಲ್ಲದೆ ಫೋನಿಟ್ಟುಬಿಡುತ್ತಿದ್ದರು. ನಾವು 'ಸಾರ್, ಸಾರ್' ಎಂದು ಬಾಯಿ ಬಡಕ್ಕೊಂಡದ್ದಷ್ಟೇ ಬಂತು! 'ಫೋನ್ ಯಾಕೆ ಇಟ್ಟುಬಿಟ್ರಿ ಸಾರ್!' ಎಂದೇನಾದ್ರೂ ಮತ್ತೆ ಕರೆದು ಕೇಳಿದ್ರೆ ಅವರು ೧೦% ಕಿವುಡುತನ ಇರುವುದರ ಬಗ್ಗೆ ಮುಲಾಜಿಲ್ಲದೆ ಹೇಳಿಬಿಡುತ್ತಿದ್ದರು.

ಹಾವನೂರರ 'ಮನೋಬಲ' ದೊಡ್ಡದು. ನಾಲ್ಕು ವರ್ಷಗಳ ಹಿಂದೆ ಅವರನ್ನಾಕ್ರಮಿಸಿದ್ದ ಕಾಯಿಲೆಯೊಂದು ಅವರನ್ನು 'ಕೊಂಡೊಯ್ಯಲು' ಸಕಲ ಏರ್ಪಾಟುಗಳನ್ನು ಮಾಡಿತ್ತು! ಹಾವನೂರರ 'ಮನೋಬಲ' ಅದಕ್ಕೆ ಅವಕಾಶ ಕೊಡಲೇ ಇಲ್ಲ. ಕೊಂಡೊಯ್ಯಲು ಬಂದವರೊಂದಿಗೆ ಸರಸವಾಡಿ ತಾವೂ ಹೊರಟುಬಿಡುತ್ತಿದ್ದರು – ಇಂಗ್ಲೆಂಡಿನ ಓರಿಯಂಟಲ್ ಲೈಬ್ರರಿಗೆ, ಸ್ವಿಡ್ಜರ್‌ಲೆಂಡಿನ ಬಾಸೆಲ್ ಮಿಶನ್‌ಗೆ, ಜರ್ಮನಿಯ ಸ್ಟುಟ್‌ಗಾರ್ಟ್‌ಗೆ–

ಸಾಹಿತ್ಯ, ಚರಿತ್ರೆ, ಸಂಶೋಧನೆ – ಅವರ ಆಡುಂಬೊಲ. ಆಗಾಗ ಅವರ ಶಿಷ್ಯರಾದ ನಮ್ಮ ಕೈಗೆ ಚೆಂಡು ಕೊಟ್ಟು ಆಡುಂಬೊಲಕ್ಕೆ ದಬ್ಬಿಬಿಡುತ್ತಿದ್ದರು. ನವುರಾಗಿ ತೀಡಿ ಜೀವ

ತುಂಬುತ್ತಿದ್ದರು. ನಾವೇ ಅನೇಕ ವೇಳೆ ಗಾಯಾಳುಗಳಾಗಿ ಹೊರಕ್ಕುಳಿದುಬಿಡುತ್ತಿದ್ದೆವು. ಅವರ ಕುಳ್ಳಗಿನ ಮೈಕಟ್ಟಿನೊಳಗೆ 'ಅದೆಲ್ಲ'ವೂ ಕರಗತವಾಗಿ ಕುಳಿತಿದೆ ಎಂದ ಮಾತ್ರಕ್ಕೆ ನಾವೂ ಹಾಗಾಗುವುದು ಹೇಗೆ?

ಹಾವನೂರರು ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಕಾಲಕ್ಕೆ ವಿಶ್ವವಿದ್ಯಾಲಯದ ವಾಹನವೊಂದನ್ನು ಗೊತ್ತು ಮಾಡಿ ಭಾನುವಾರ ಮುಂಜಾನೆ ಯಾವುದೋ ಹಳ್ಳಿಯ ಯಾವುದೋ ಗುತ್ತಿ ಮನೆಗೆ ಭೇಟಿ ನೀಡಿದರೆಂದರೆ ಮುಗಿಯಿತು ಒಳಗೆ ಓಬೀರಾಯನ ಕಾಲದಲ್ಲಿ ತುಂಬಿಟ್ಟಿದ್ದ ಗುತ್ತಿನ ಗತ್ತಿನ ಪುರಾತನ ಸಾಮಾನು ಸರಂಜಾಮುಗಳೆಲ್ಲ ಹೊರಕ್ಕೆ ! ಅವನ್ನು ವಾಹನದಲ್ಲಿ ತುಂಬಿ ಕನ್ನಡ ವಿಭಾಗಕ್ಕೆ ತಂದು ಅಲಂಕಾರಿಕವಾಗಿ ಸ್ಥಾಪನೆಗೊಳಿಸಿದಾಗ ಹಾವನೂರರು ಶಿಷ್ಯರಿಗೆ ಸದ್ದಿಲ್ಲದೆ ಕೊಡುತ್ತಿದ್ದ 'ಅನುಭವ' ಎದ್ದುಕಾಣುತ್ತಿತ್ತು; ಪಾಠವೇಕೆ ಬೇಕು.

ಪಳೆಯುಳಿಕೆಗಳನ್ನು ಗೌರವದಿಂದ ಕಾಣುವ ಗುಣ ಅವರದು. ಕನ್ನಡ ಸಾಹಿತ್ಯ ಲೋಕದಲ್ಲಿ ಆಗಿಹೋದ ಅದೆಷ್ಟೋ ವಿದ್ವಾಂಸರ ಕುರಿತಾದ ಮಾಹಿತಿಗಳಿಗೆ ತಡಕಾಡುವ ಸಂದರ್ಭದಲ್ಲೆಲ್ಲ ನಮ್ಮ ಕಣ್ಣೆದುರಿಗೆ ಕಾಣಿಸುವುದು ಹಾವನೂರರ ಹಳೆ ಕಡತಗಳ ಸಂಗ್ರಹ. ಅಂಥ ಸಂಗ್ರಹದ ಕಡೆಗೊಮ್ಮೆ ಕಣ್ಣಾಡಿಸುವುದಕ್ಕೆ ನಾಡಿನ ಅನೇಕ ಸಂಶೋಧನ ವಿದ್ಯಾರ್ಥಿಗಳು ಸದಾ ಆಸೆ ಪಡುತ್ತಿರುತ್ತಾರೆ. ನಮ್ಮಂತೆಯೇ 'ಹೊಸಗನ್ನಡ ಅರುಣೋದಯ' ರಚನೆಯ ಕಾಲಕ್ಕೆ ಪ್ರಾರಂಭ ಗೊಂಡ ಹಳೆ ಕಡತಗಳ ಸಂಗ್ರಹಕಾರ್ಯ ಇವತ್ತಿಗೂ ಮುಂದುವರಿದಿದೆ. ಅವರ ನಿರಂತರ ವಿದೇಶ ಪ್ರಯಾಣ ಉದ್ದೇಶವೂ ಅಲ್ಲಿಂದ ನಮ್ಮದನ್ನು ನಮಗೇ ತಂದುಕೊಡುವುದಾಗಿದೆ.

ಅರುವತ್ತಕ್ಕೂ ಹೆಚ್ಚಿನ ಗ್ರಂಥಗಳ ದಾತಾರರಾಗಿರುವ ಡಾ॥ ಶ್ರೀನಿವಾಸ ಹಾವನೂರ ಅವರು ಎಂಬತ್ತನ್ನೂ ಮೀರಿ ನಿಂತು ಬೆಳೆಯುತ್ತಾ ನಿಮಿಷ ಕೂಡ ಪೋಲು ಮಾಡದೆ– ಅದರೆಡೆಯಲ್ಲಿ ತನ್ನ ಭೇಟಿಗೆ ಬರುತ್ತಿದ್ದ ಹಿರಿಕಿರಿಯ ಗೆಳೆಯರಿಗೆ ಖುಷಿಕೊಡುತ್ತಾ, ಬರೆಯುತ್ತಾ, ಓದುತ್ತಾ, ದಿನಗಳ ಜೊತೆ ಸ್ಪರ್ಧಿಸುವ ಕ್ರಮ ನೋಡಿ ನಾನು ಈಗಲೂ ನಿಂತಿದ್ದೇನೆ ಕಣ್ಣು ಪಿಳಿಪಿಳಿ ಬಿಡುತ್ತಾ.....

❖

# ನಾಡ ಗುರು ಜಿ.ವಿ.

## (ಪ್ರೊ|| ಜಿ. ವೆಂಕಟಸುಬ್ಬಯ್ಯ)

---

• *ಡಾ|| ಅನಂತಪದ್ಮನಾಭರಾವ್*

**ನಾ**ನು ವಿಜಯ ಕಾಲೇಜಿನಲ್ಲಿ ಪಿಯುಸಿ ವಿದ್ಯಾರ್ಥಿಯಾಗಿ ಸೇರಿದ್ದು ೬-೬-೬೬ರಲ್ಲಿ. ದಿನ, ತಿಂಗಳು, ವರ್ಷ ಇವೆಲ್ಲ ಒಂದೇ ಸಂಖ್ಯೆಯಲ್ಲಿ ಪುನರಾವರ್ತನೆಯಾಗಿ ಬರುವ ಇಂಥ ದಿನಗಳು ಅಪರೂಪ. ಗ್ರಾಮೀಣ ವಾತಾವರಣದಿಂದ ಬಂದು ನಗರ ಪ್ರದೇಶದ ಒಂದು ಪ್ರತಿಷ್ಠಿತ ಕಾಲೇಜಿನಲ್ಲಿ ಪ್ರವೇಶ ಪಡೆದದ್ದು ಆ ಕಾಲಕ್ಕೆ ದೊಡ್ಡ ಸಾಧನೆ. ಪ್ರವೇಶ ಮುಗಿದ ಮೇಲೆ ತರಗತಿಗಳು ಪ್ರಾರಂಭವಾಗಲು ಇನ್ನೂ ಕೆಲವು ದಿನಗಳಿದ್ದವು. ಮತ್ತೆ ಹಳ್ಳಿಗೆ ಹೋಗಿ ನನಗೆ ಪ್ರವೇಶ ದೊರೆತ ಬಗ್ಗೆ ಪ್ರೌಢಶಾಲೆಯ ಮತ್ತು ಮಾಧ್ಯಮಿಕ ಶಾಲೆಯ ಎಲ್ಲ ಅಧ್ಯಾಪಕರಿಗೆ ತಿಳಿಸಿದೆ. ನಮ್ಮ ಕನ್ನಡ ಪಂಡಿತರಾಗಿದ್ದ ಕೆ. ನಾರಾಯಣಭಟ್ಟರು ಕನ್ನಡ, ಹಿಂದಿ, ಸಂಸ್ಕೃತ ಭಾಷೆಗಳ ಉದ್ದಾಮ ಪಂಡಿತರು, ಏಕಸಂಧಿಗ್ರಾಹಿಗಳೆಂದೇ ಹೇಳಬೇಕು. ಅಂಥವರ ಪಾಠ ಕೇಳಿದ್ದ ನನಗೆ ಕಾಲೇಜಿನಲ್ಲಿ ಇನ್ನೆಂಥ ಉಪನ್ಯಾಸಕರು ದೊರೆಯುತ್ತಾರೋ ಎಂಬ ಆತಂಕವಿತ್ತು. ಪಂಡಿತರ ಪಾಠಗಳಿಗೆ ಒಗ್ಗಿ ಹೋಗಿದ್ದ ನಾನು ಪದವೀಧರರ ಪಾಠ ಕೇಳುವುದಾದರೂ ಹೇಗೆ? ಎಂಬ ಮಡಿವಂತಿಕೆ ಮನಸ್ಸಿನಲ್ಲಿ ಬೇರೂರಿತ್ತು. ನಾರಾಯಣಭಟ್ಟರ ಮನೆಗೆ ಹೋದಾಗ ಪ್ರಾಸಂಗಿಕವಾಗಿ ಈ ಮಾತು ಹೇಳಿದೆ. ಭಟ್ಟರು ನಗುಮುಖದಿಂದ "ನಿನ್ನದು ಅದೃಷ್ಟ ಕಣಯ್ಯಾ" ಯೋಚನೆ ಮಾಡಬೇಡ ವಿಜಯ ಕಾಲೇಜಿನಲ್ಲಿ ಶ್ರೀ ವೆಂಕಟಸುಬ್ಬಯ್ಯನವರು ಕನ್ನಡ ಪ್ರಾಧ್ಯಾಪಕರು, ಮಹಾನ್ ವಿದ್ವಾಂಸರು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು, ನಾನು ಟ್ರೈನಿಂಗ್‌ಗೆ ಹೋಗಿದ್ದಾಗ ಅವರ ಪಾಠವನ್ನು ಶ್ರದ್ಧೆಯಿಂದ ಕೇಳಿದ್ದೇನೆ" ಎಂದು ಹೇಳಿದಾಗ ನನಗೆ ಅತ್ಯಾಶ್ಚರ್ಯ. ನಾವು ಪ್ರಕಾಂಡ ಪಂಡಿತರೆಂದು ಭಾವಿಸಿದ್ದ ನಾರಾಯಣಭಟ್ಟರಿಗೇ ಪಾಠ ಹೇಳಿದವರೆಂದರೆ ಅವರು ಇನ್ನೆಂಥವರಾಗಿರಬೇಕು ಎಂಬ ಕುತೂಹಲದಿಂದಲೇ ಬೆಂಗಳೂರಿಗೆ ಹಿಂತಿರುಗಿದೆ.

ಕಾಲೇಜಿನ ತರಗತಿಗಳು ಪ್ರಾರಂಭವಾದವು. ನನ್ನ ಸಹಪಾಠಿಗಳಾದ ಎಲ್ಲ ವಿದ್ಯಾರ್ಥಿಗಳು ನನಗಿಂತ ಬುದ್ಧಿವಂತರಾಗಿಯೇ ಕಂಡರು. ಕನ್ನಡದಲ್ಲಿ ಮಾತನಾಡುವವರೇ ಅಪರೂಪ. ಅಧ್ಯಾಪಕರ ಬಾಯಲ್ಲಂತೂ ಅಪ್ಪಿತಪ್ಪಿಯೂ ಕನ್ನಡ ಬರುತ್ತಿರಲಿಲ್ಲ. ನಾವು ಯಾವುದೋ ಪರಭಾಷಾ ಪ್ರದೇಶದಲ್ಲಿ ಸಿಕ್ಕಿಕೊಂಡಿದ್ದೇನೆಂಬ ಭ್ರಮೆ ಮತ್ತು ಕೀಳರಿಮೆ ಕಾಡತೊಡಗಿತು. ಮೊದಲ ದಿನದ ತರಗತಿಗಳು ಮುಗಿದು ಎರಡನೇ ದಿನದ ವೇಳಾಪಟ್ಟಿಯಲ್ಲಿ ಕನ್ನಡ ತರಗತಿ ಇತ್ತು. ಆ ವೇಳೆಗೆ ಮೂರ್‍ನಾಲ್ಕು ಮಂದಿ ಇಂಗ್ಲಿಷ್ ಬಾರದ ನನ್ನಂಥವರ ಪರಿಚಯ

ಮಾಡಿಕೊಂಡಿದ್ದೆ. ಮೂರನೇ ಬೆಂಚಿನಲ್ಲಿ ನನ್ನ ಪಕ್ಕ ಕುಳಿತಿದ್ದವನು ನರಸಿಂಹಶೆಟ್ಟಿ, ಶಿಡ್ಲಘಟ್ಟದವನು. ನಾನು ಮತ್ತು ಅವನು ಇಬ್ಬರು ಮಾತ್ರ ಕನ್ನಡದಲ್ಲೋ, ತೆಲುಗಿನಲ್ಲೋ ಮಾತನಾಡಿಕೊಳ್ಳುತ್ತಿದ್ದೆವು. ಇಂಗ್ಲಿಷ್ ವಿಷಯದಲ್ಲಿ ಅವನದೂ ನನ್ನ ಪರಿಸ್ಥಿತಿಯೇ. ಕನ್ನಡ ಮೇಷ್ಟ್ರು ಬರುತ್ತಾರೆ, ಅದರಲ್ಲೂ ನಾರಾಯಣಭಟ್ಟರು ಗೌರವಿಸುತ್ತಿದ್ದ ವೆಂಕಟಸುಬ್ಬಯ್ಯನವರು, ಅವರು ಹೇಗಿದ್ದಾರೋ, ಹೇಗೆ ಪಾಠ ಮಾಡುತ್ತಾರೋ, ಎಂಬ ಕುತೂಹಲದಲ್ಲಿದ್ದಾಗಲೇ ಮೇಷ್ಟ್ರ ಪ್ರವೇಶವಾಯಿತು. ಕಡು ಕಪ್ಪು ಬಣ್ಣದ ಸೂಟು, ತೆಳುವಾದ ಕನ್ನಡಕ, ಕುಳ್ಳು ಆಕೃತಿ, ನಗುಮುಖ, ಕೈತುಂಬ ಪುಸ್ತಕಗಳು. ಇಂಥವರು ನಮ್ಮೆದುರು ನಿಂತಾಗ ನನ್ನ ಮನಸ್ಸಿನಲ್ಲಿ ಪ್ರಾಮಾಣಿಕವಾಗಿ ಅನ್ನಿಸಿದ್ದು "ಸೂಟು ಹಾಕುವವರು ಕನ್ನಡ ಪಾಠ ಮಾಡುತ್ತಾರೆಯೇ" ಎಂದು. ತರಗತಿ ತುಂಬ ನಿಶ್ಶಬ್ದವಾಗಿತ್ತು. ಜೀವಿ ತಮ್ಮನ್ನು ಪರಿಚಯಿಸಿಕೊಳ್ಳಲು ಹೋಗಲಿಲ್ಲ. ಕನ್ನಡ ಪದ್ಯ ಮತ್ತು ನಾಟಕವನ್ನು ಬೋಧನೆ ಮಾಡುವುದಾಗಷ್ಟೆ ತಿಳಿಸಿದರು. ಅದೂ ಇಂಗ್ಲಿಷ್‌ನಲ್ಲಿಯೇ. ಹೊಸದಾಗಿ ಬಂದ ವಿದ್ಯಾರ್ಥಿಗಳ ಪರಿಚಯ ಮಾಡಿಕೊಂಡು ಕನ್ನಡದಲ್ಲಿ 'ಶೇಕಡ ೭೦ಕ್ಕಿಂತ ಹೆಚ್ಚು ಅಂಕ ಪಡೆದವರು ಎಷ್ಟು ಮಂದಿ ಇದ್ದೀರ' ಎಂದು ಪ್ರಶ್ನಿಸಿದರು. ಕೆಲವರು ಮಾತ್ರ ಕೈ ಮೇಲೆತ್ತಿದರು, ನಾನೂ ಹೆಮ್ಮೆಯಿಂದ "ನಾನು ಸಾರ್" ಎಂದು ಕೂಗುತ್ತ ಕೈ ಮೇಲೆತ್ತಿದೆ. ೬೦–೭೦ ವಿದ್ಯಾರ್ಥಿಗಳ ತರಗತಿಯಲ್ಲಿ ಕೆಲವರು ಮಾತ್ರ ಶೇಕಡಾ ೭೦ ಕ್ಕಿಂತ ಹೆಚ್ಚು ಅಂಕ ಪಡೆದಿದ್ದರು. ಅವರಲ್ಲಿ ನಾನೂ ಒಬ್ಬ ಎಂಬುದೇ ನನಗೆ ಆಗಿನ ತಾತ್ಕಾಲಿಕ ಹೆಮ್ಮೆಯಾಗಿತ್ತು. ಅಂಥ ವಿದ್ಯಾರ್ಥಿಗಳನ್ನು ಜೀವಿಯವರು ಹೊಗಳಿದರು, ಅಭಿನಂದಿಸಿದರು, ಬುದ್ಧಿವಂತರೆಂದು ಮೆಚ್ಚಿಕೊಂಡರು. ಬುದ್ಧಿವಂತ ವಿದ್ಯಾರ್ಥಿಗಳಲ್ಲಿ ಒಬ್ಬೊಬ್ಬರನ್ನೇ ವೇದಿಕೆಗೆ ಕರೆದು ಕೆಲವು ಪದಗಳನ್ನು ಬೋರ್ಡಿನ ಮೇಲೆ ಬರೆಯುವಂತೆ ಹೇಳಿದರು. ಮೂರ್‍ನಾಲ್ಕು ಮಂದಿ ಎಲ್ಲವನ್ನೂ ತಪ್ಪಾಗಿಯೇ ಬರೆದರು. ಉತ್ಸಾಹದಿಂದ ಪುಟಿಯುತ್ತಿದ್ದ ನನ್ನ ಸರದಿಯೂ ಬಂದಿತು. ಬೋರ್ಡಿನ ಬಳಿ ನಿಂತೆ, ಅವರು ಪದಗಳನ್ನು ಹೇಳುತ್ತಾ ಹೋದರೆ, ನಾನೂ ಬರೆಯುತ್ತಾ ಹೋದೆ. ದುರ್ಯೋಧನ, ಗದಾಯುದ್ಧ, ದ್ರೌಪದಿ, ವಿಶೇಷ, ಭಾಷಾಬೋಧನೆ–ಈ ಎಲ್ಲಾ ಪದಗಳನ್ನೂ ನಾನೂ ತಪ್ಪಾಗಿಯೇ ಬರೆದೆ. ಅಲ್ಪಪ್ರಾಣ–ಮಹಾಪ್ರಾಣಗಳು ಪಲ್ಲಟಗೊಂಡಿದ್ದು ಇದರಿಂದ ಉಂಟಾಗುವ ಅರ್ಥ ದೋಷಗಳು ಏನೆಂಬುದನ್ನು ಸ್ಪಷ್ಟವಾಗಿ ವಿವರಿಸಿ "ಶೇಕಡ ೭೦ಕ್ಕಿಂತ ಹೆಚ್ಚು ಅಂಕ ಪಡೆದ ಬುದ್ಧಿವಂತ ವಿದ್ಯಾರ್ಥಿಗಳೇ ಕನ್ನಡವನ್ನು ಹೀಗೆ ಬರೆಯುವಾಗ ಉಳಿದವರ ಪಾಡೇನು?" ಎಂದು ಪ್ರಶ್ನಿಸಿದರು. ಆ ದಿನದಿಂದಲೇ ನಾನು ಅವರ ಅಭಿಮಾನಿ ಶಿಷ್ಯರಲ್ಲಿ ಒಬ್ಬನಾದೆ. 'ಅಕ್ರೂರ ಚರಿತ್ರೆ' ಅವರು ನಮಗೆ ಪಾಠ ಮಾಡುತ್ತಿದ್ದ ಪದ್ಯಭಾಗ, ಅವರೇ ಸಂಪಾದಿಸಿದ್ದು, ಹಲವಾರು ಪದ್ಯಗಳು ಅವರಿಗೆ ಕಂಠಸ್ಥವಾಗಿದ್ದವು. ನನಗಾದರೋ ಹುಡುಗುತನ, ಕನ್ನಡ ಎಂಬ ಸಲಿಗೆ, ಕನ್ನಡ ಗೊತ್ತೆಂಬ ಸಣ್ಣ ಜಂಬ ಇವುಗಳಿಂದ ಅಲ್ಲಲ್ಲಿ ತರಲೆ ಪ್ರಶ್ನೆಗಳನ್ನು ಕೇಳುತ್ತಿದ್ದುದುಂಟು. ಇದು ನಾರಾಯಣಭಟ್ಟರಿಂದ ಕಲಿತದ್ದು. ಇಲ್ಲಿಯೂ ಅದನ್ನೇ ಪ್ರಯೋಗ ಮಾಡಿದೆ." ಅಕ್ರೂರ ಚರಿತೆಯ ವಿರಚಿಸಿದನು ಆ ಸೋಮನಾಥ ಕವೀಂದ್ರನೊಲವಿನಲಿ" ಎಂಬ ಪದ್ಯಭಾಗ ಬಂದಾಗ ಕವಿತೆ ವಿನಯವಿರಬೇಕು, ಸೋಮನಾಥ ತನ್ನನ್ನು ತಾನು 'ಕವೀಂದ್ರ' ಎಂದು ಕರೆದುಕೊಳ್ಳುವುದು ಸರಿಯೇ? ಅವನಿಗೇನು ಇಂದ್ರಪದವಿ ಇತ್ತೇ? ಎಂದು ಪ್ರಶ್ನಿಸಿದೆ.

ಜೀವಿಯವರು ಸಣ್ಣಗೆ ನಕ್ಕರು. 'ನಿನ್ನ ಹೆಸರೇನು?' ಎಂದರು ನಾನು 'ಅನಂತಪದ್ಮನಾಭರಾವ್' ಎಂದು ಹೇಳಿದೆ. 'ರಾವ್ ಎಂದರೇನು?' ಎಂದರು. ನಾನು ಪೆಚ್ಚಾದೆ. ಅವರೇ ಇದು 'ರಾಯ, ರಾಜ' ಎಂಬ ಪದದ ಬೇರೊಂದು ರೂಪ. ಹಾಗಾದರೆ ನೀನು ಯಾವ ದೇಶಕ್ಕೆ ರಾಜ ಎಂದು ಮರುಪ್ರಶ್ನೆ ಹಾಕಿದರು. ಯಾರ್ಯಾರೊ ತಮ್ಮ ಹೆಸರಿನ ಮುಂದೆ ರಾಜ, ರಾಯ ಎಂದು ಬಳಸಿಕೊಳ್ಳುವಾಗ ಕವಿ ತನ್ನನ್ನು 'ಕವೀಂದ್ರ' ಎಂದು ಕರೆದುಕೊಂಡಿರುವುದರಲ್ಲಿ ಯಾವ ತಪ್ಪೂ ಇಲ್ಲ. ಇದು ಅಹಂಕಾರವೂ ಅಲ್ಲ, ಅಭಿಮಾನ ಅಷ್ಟೇ ಎಂದರು.

ಜೀವಿಯವರು ನಮಗೆ ವಾರದಲ್ಲಿ ಮೂರು ಗಂಟೆಗಳ ಕಾಲ ಪಾಠ ಮಾಡುತ್ತಿದ್ದರು. ಒಂದು ಗಂಟೆ 'ಅಕ್ರೂರ ಚರಿತ್ರೆ' ಮತ್ತೆ ಎರಡು ಗಂಟೆ ಭಾಸನ 'ಪ್ರತಿಮಾ ನಾಟಕ'ದ ಮೈಸೂರು ಸೀತಾರಾಮ ಶಾಸ್ತ್ರಿಗಳ ಹಳಗನ್ನಡ ಅನುವಾದ. ಒಂದೊಂದು ಗಂಟೆಯೂ ಒಂದೊಂದು ಅದ್ಭುತ ಅನುಭವವನ್ನೇ ತಂದುಕೊಡುತ್ತಿತ್ತು. ಪದವಿಭಾಗ, ಅನ್ವಯ, ಅನ್ವಯಾರ್ಥ – ಇವುಗಳನ್ನು ಜೀವಿಯವರು ಬೋಧಿಸುತ್ತಿದ್ದ ರೀತಿ ಅವರಿಗೆ ಅವರೇ ಮಾದರಿ. ಧ್ವನಿಯ ಏರಿಳಿತ, ಉಚ್ಚಾರಣೆ, ಹಳಗನ್ನಡ ಪದಗಳ ವಿಭಾಗ ಕ್ರಮ, ಪದ್ಯವನ್ನು ಓದುವ ರೀತಿ – ಇವುಗಳು ಆ ವಯಸ್ಸಿನಲ್ಲಿಯೇ ಗಾಢವಾದ ಪ್ರಭಾವ ಬೀರಿತು. ಪ್ರತಿಮಾ ನಾಟಕದ ಒಂದು ಪ್ರಸಂಗ ಹೀಗಿದೆ. ವನವಾಸಕ್ಕೆ ಹೋಗಿದ್ದ ರಾಮ ಲಕ್ಷ್ಮಣರನ್ನು ಭರತ ಹುಡುಕಿಕೊಂಡು ಬರುತ್ತಾನೆ. ಭರತನ ಧ್ವನಿಯನ್ನು ರಾಮ ದೂರದಿಂದಲೇ ಗುರುತಿಸುತ್ತಾನೆ ಭರತನ ಧ್ವನಿ ಹೇಗಿರುತ್ತದೆ ಎಂದರೆ "ಘನ, ಧೀರಂ, ಸ್ಪಷ್ಟಂ, ವಿದ್ವತ್ ವೃಷಭರವದವೋಲ್ ಸ್ನಿಗ್ಧಂ, ಮಾಧುರ್ಯ ಯುಕ್ತಂ" ಜೀವಿಯವರ ಕಂಠಶ್ರೀ ಇಂತಹದೇ. ತೂಕವಾದ, ಗಂಭೀರವಾದ, ಸ್ಪಷ್ಟವಾದ, ಸ್ನಿಗ್ಧವಾದ, ಮಾಧುರ್ಯಯುಕ್ತವಾದ ಮಾತುಗಳು – ಎಂಥ ವಿದ್ಯಾರ್ಥಿಗಳನ್ನೂ ಆಕರ್ಷಿಸುತ್ತಿತ್ತು. ಭಾಷಾಶುದ್ಧತೆ ಅವರ ಸ್ವಾಭಾವಿಕ ಲಕ್ಷಣ. "ಮುಖದೊಳಗೆ ಕಿಂಚಿತ್ ಅಪಶಬ್ದ ಇವಗಿಲ್ಲ" ಎಂಬಂತೆ ಅವರದು 'ಮಂಜುಭಾಷಣ'. ಅವರ ತರಗತಿಯಲ್ಲಿ ತರಲೆ ಮಾಡುವವರೇ ಇರುತ್ತಿರಲಿಲ್ಲ. ಎಲ್ಲರೂ ಗಂಭೀರವಾಗಿ, ಸಂತೋಷವಾಗಿರುತ್ತಿದ್ದರು. ಅನೇಕ ಹಿರಿಯ ವಿದ್ಯಾರ್ಥಿಗಳು ತಮಗೆ ತರಗತಿಗಳು ಇಲ್ಲದಿದ್ದಾಗ ನಮ್ಮ ತರಗತಿಯಲ್ಲಿಯೇ ಬಂದು ಕೂಡುತ್ತಿದ್ದರು. ಜೀವಿಯವರು ಪದ್ಯಗಳನ್ನು ನಮ್ಮಿಂದಲೇ ಓದಿಸಿ ಒಂದು ರೀತಿಯ ಸ್ಪರ್ಧಾತ್ಮಕ ಮನೋಭಾವ ಮೂಡುವಂತೆ ಮಾಡುತ್ತಿದ್ದರು.

ಪಿಯುಸಿ ಶಿಕ್ಷಣ ಮುಗಿಸಿ ಬಿ.ಎಸ್ಸಿ ತರಗತಿಗೆ ಸೇರುವ ಹೊತ್ತಿಗೆ ವಿಜ್ಞಾನ ವಿಷಯಗಳಲ್ಲಿ ನನ್ನ ಆಸಕ್ತಿ ಕಡಿಮೆಯಾಗುತ್ತಾ ಹೋಯಿತು. ಕನ್ನಡದ ತರಗತಿಗಾಗಿಯೇ ಕಾದಿರುತ್ತಿದ್ದೆ. ಆ ವರ್ಷ ಜಿ.ವಿ. ಅವರು ನಮಗೆ ಬೋಧಿಸಿದ್ದು ಕಾಳಿದಾಸನ ಮಾಳವಿಕಾಗ್ನಿಮಿತ್ರ ನಾಟಕದ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳ ಅನುವಾದ. ಪ್ರತಿಯೊಂದು ಪದ್ಯ, ಪಾತ್ರ, ಸನ್ನಿವೇಶಗಳನ್ನು ಕಣ್ಣಿಗೆ ಕಟ್ಟುವಂತೆ ಜಿ.ವಿ. ಬಣ್ಣಿಸುತ್ತಿದ್ದರು. ಬೋಧನೆಯಲ್ಲಿ ಶ್ರೇಷ್ಠತೆಯನ್ನು ಸಾಧಿಸಿದ ಅಧ್ಯಾಪಕನ ಲಕ್ಷಣಗಳನ್ನು ನಿರೂಪಿಸುವ ಒಂದು ಪ್ರಸಂಗ ಇಲ್ಲಿ ಬರುತ್ತದೆ. 'ಕೆಲವರು ತುಂಬಾ ವಿದ್ಯಾವಂತರಾಗಿರುತ್ತಾರೆ. ವಿಷಯತಜ್ಞರೂ ಆಗಿರುತ್ತಾರೆ ಆದರೆ ಬೋಧನೆಯ ಮಾರ್ಗ ತಿಳಿದಿರುವುದಿಲ್ಲ. ಇವರು ಮೊದಲ ಗುಂಪಿನ ಅಧ್ಯಾಪಕರು, ಕೆಲವರು ಸ್ವಲ್ಪವೇ ತಿಳಿದಿರುತ್ತಾರೆ

ಆದರೆ ತಿಳಿದಿರುವ ವಿಷಯವನ್ನೇ ಅತ್ಯಂತ ಪರಿಣಾಮಕಾರಿಯಾಗಿ ಬೋಧಿಸುತ್ತಾರೆ. ಇವರದು ಎರಡನೆಯ ವರ್ಗ. ಮತ್ತೆ ಕೆಲವರು ಜ್ಞಾನಿಗಳೂ, ವಿಷಯತಜ್ಞರೂ ಆಗಿದ್ದು ಅದನ್ನು ಪರಿಣಾಮಕಾರಿಯಾಗಿ ಬೋಧನೆ ಮಾಡುವುದರಲ್ಲಿ ಸಾಮರ್ಥ್ಯ ಹೊಂದಿರುತ್ತಾರೆ ಇವರೇ ಉತ್ತಮ ಅಧ್ಯಾಪಕರು. ಜಿ.ವಿ. ಅವರು ಕಾಳಿದಾಸ ಹೇಳುವ ಇಂಥ 'ಸನ್ನುತ ಬೋಧಕಾಗ್ರಣಿ'ಗಳು.

ನಾನು ದ್ವಿತೀಯ ಬಿಎಸ್ಸಿಗೆ ಬರುವ ಹೊತ್ತಿಗೆ ವಿಜಯ ಕಾಲೇಜಿನಲ್ಲಿ ಕನ್ನಡ ಆನರ್ಸ್ ತರಗತಿಗಳು ಪ್ರಾರಂಭವಾದವು. ಡಾ॥ ರಂ.ಶ್ರೀ. ಮುಗಳಿಯವರು ಆನರ್ಸ್ ತರಗತಿಗಳನ್ನು ಉದ್ಘಾಟಿಸಿದರು. ಆರು ಮಂದಿ ವಿದ್ಯಾರ್ಥಿಗಳು ಮಾತ್ರ ಪ್ರವೇಶ ಪಡೆದಿದ್ದರು. ಜಿ.ವಿ. ಅವರ ಪಾಠದಿಂದ ಆಕರ್ಷಿತನಾಗಿದ್ದ ನಾನು ಎರಡನೇ ಬಿ.ಎಸ್ಸಿ. ಬಿಟ್ಟು ಮೊದಲ ಆನರ್ಸ್ ತರಗತಿಗೆ ಪ್ರವೇಶ ಪಡೆದೆ. ಒಟ್ಟು ಐದು ವರ್ಷಗಳ ಕಾಲ ಜಿ.ವಿ. ಅವರ ಪಾಠ ಕೇಳಿದ ವಿಶೇಷ ಅವಕಾಶ ದೊರೆತದ್ದು ನನಗೆ ಒಬ್ಬನಿಗೇ.

ಆನರ್ಸ್ ತರಗತಿಗಳು ಬೆಳಗಿನ ಪಾಳಿಯಲ್ಲಿ ನಡೆಯುತ್ತಿದ್ದವು. ಇದ್ದದ್ದು ಎಂಟೇ ಮಂದಿ ವಿದ್ಯಾರ್ಥಿಗಳು. ಅದರಲ್ಲಿ ಇಬ್ಬರು ಹುಡುಗಿಯರು. ಜಿ.ವಿ. ಅವರ ತರಗತಿ ಪ್ರತಿದಿನ ಸಾಮಾನ್ಯವಾಗಿ ಕೊನೆಯ ಪಿರಿಯಡ್. ೧೧.೩೦ ರಿಂದ ೧೨.೩೦. ಜಿ.ವಿ. ಅವರ ಕೊಠಡಿಯಲ್ಲಿಯೇ ನಮ್ಮ ತರಗತಿಗಳು. ನಾವು ತರಗತಿಯಲ್ಲಿ ಕೂಡುವ ಹೊತ್ತಿಗೆ ಅಟೆಂಡರ್ ಚಿಕ್ಕಣ್ಣ ಹಾಜರಿರುತ್ತಿದ್ದ. ಬೆಳಗ್ಗಿನಿಂದ ನಿರಾಹಾರಿಗಳಾಗಿ ಪಾಠ ಕೇಳಿದ್ದ ನಮಗೆ ಉಲ್ಲಾಸ ವುಂಟಾಗುವ ರೀತಿಯಲ್ಲಿ "One idli one Vada each, Eight coffee and one milk" ಎಂದು ಚಿಕ್ಕಣ್ಣನಿಗೆ ಆದೇಶ ನೀಡಿ ಗರಿ ಗರಿ ನೋಟುಗಳನ್ನು ಅವನ ಕೈಗೆ ಕೊಡುತ್ತಿದ್ದರು. ಅರ್ಧ ತರಗತಿ ಮುಗಿವ ಹೊತ್ತಿಗೆ ಚಿಕ್ಕಣ್ಣ ತಿಂಡಿ ಪೊಟ್ಟಣಗಳೊಂದಿಗೆ ಹಾಜರಾಗುತ್ತಿದ್ದ. ತರಗತಿ ಮಧ್ಯದಲ್ಲಿ 'ಕಾಫಿ ಬ್ರೇಕ್' ಅನಂತರ ಮುಂದುವರಿಕೆ – ಇದು ಜಿ.ವಿ.ಯವರು ನಮ್ಮ ಮೇಲೆ ಹೊರಿಸಿರುವ ತೀರಿಸಲಾಗದ 'ಅನ್ನಋಣ'.

ಬಿ.ಎಂ.ಶ್ರೀ. ಅವರ ಇಂಗ್ಲಿಷ್ ಗೀತೆಗಳು ಮತ್ತು ಅಶ್ವತ್ಥಾಮನ್ – ಈ ಎರಡೂ ಕೃತಿಗಳನ್ನು ಮೊದಲ ಆನರ್ಸ್‌ನಲ್ಲಿ ಜಿ.ವಿ. ಬೋಧಿಸಿದರು. ಇಂಗ್ಲಿಷ್ ಗೀತಗಳ ಪ್ರತಿಯೊಂದು ಪದ್ಯದ ಮೂಲ ಇಂಗ್ಲಿಷ್ ಪಾಠವನ್ನು ಬೋಧಿಸಿ ಅನುವಾದದಲ್ಲಿ ಇರುವ ಕನ್ನಡ ಭಾಷಾ ಮರ್ಯಾದೆಯನ್ನು ತೌಲನಿಕವಾಗಿ ಪರಿಚಯ ಮಾಡಿಸುತ್ತಿದ್ದರು. ವಿದ್ಯಾರ್ಥಿಗಳಿಂದ ಪ್ರಬಂಧಗಳನ್ನು ಬರೆಯಿಸಿ ಓದಿಸಿ ಚರ್ಚಿಸುತ್ತಿದ್ದರು. ಮುಕ್ತ ಚರ್ಚೆಗೆ ಅವಕಾಶ ಒದಗಿಸುತ್ತಿದ್ದರು. ಜಿ.ವಿ. ಅವರ ಭಾಷಾಪಾಂಡಿತ್ಯದ ಹಳಗನ್ನಡ ಪ್ರೌಢಿಮೆಯ ಆಳ-ಅಗಲಗಳು ನಮಗೆ ಅರಿವಾಗಿದ್ದು ಎರಡನೇ ಆನರ್ಸ್‌ನಲ್ಲಿ. ಕೇಶಿರಾಜನ ಶಬ್ದಮಣಿದರ್ಪಣ, ರನ್ನನ ಗದಾಯುದ್ಧ – ಇವುಗಳ ಬೋಧನೆ ಜೀವಮಾನದಲ್ಲಿಯೇ ಮರೆಯುವಂತಹುದಲ್ಲ. ಈ ಎರಡೂ ಕೃತಿಗಳ ಹೊಸ ಆವೃತ್ತಿಗಳನ್ನು ಜಿ.ವಿ. ಅವರೇ ನಮಗೆಲ್ಲ ತರಿಸಿಕೊಟ್ಟರು. ಅನಂತರ ತಮ್ಮ ಪುಸ್ತಕದ ಮಾದರಿ ತೋರಿಸಿದರು. ಪ್ರತಿ ಹಾಳೆ ಆದ ಮೇಲೆ ಒಂದು ಬಿಳಿ ಹಾಳೆ ಸೇರಿಸಿ (ಇಂಟರ್ ಲೀಫ್) ಪುಸ್ತಕಗಳನ್ನು ಬೈಂಡ್ ಮಾಡಿಸುವುದು ಜಿ.ವಿ. ಅವರ ಪದ್ಧತಿ. ನಮ್ಮ ಪುಸ್ತಕಗಳನ್ನೂ

ಅದೇ ರೀತಿ 'ಇಂಟರ್ ಲೀಫ್' ಹಾಕಿಸಿಕೊಳ್ಳಲು ತಿಳಿಸಿದರು. ಪದ್ಯಗಳ ಪಕ್ಕದಲ್ಲೇ ಕಠಿಣಪದಗಳ ಅರ್ಥ, ಟಿಪ್ಪಣಿ, ಉಲ್ಲೇಖಗಳನ್ನು ಬರೆದು ಪುಸ್ತಕದ ಅಂದ ಕೆಡಿಸುವುದು ಜಿ.ವಿ.ಯವರಿಗೆ ಒಗ್ಗದ ಸಂಗತಿ. ಪಾಠ ಮಾಡುವಾಗ ಬರೆದುಕೊಳ್ಳಬಹುದಾದ ಎಲ್ಲ ಟಿಪ್ಪಣಿಗಳನ್ನು 'ಇಂಟರ್ ಲೀಫ್'ನಲ್ಲಿಯೇ ಬರೆಯಬೇಕು ಎಂಬ ಶಿಸ್ತನ್ನು ರೂಪಿಸಿದರು. ಪೂರ್ವಸಿದ್ಧತೆ ಇಲ್ಲದೆ ಅವರು ಪಾಠ ಮಾಡಿದ್ದೇ ಇಲ್ಲ. ದಿನಕ್ಕೆ ಇಂತಿಷ್ಟು ಸೂತ್ರ ಎಂದು ಅವರು ಪಾಠ ಮಾಡಬೇಕು, ಮುಂದಿನ ತರಗತಿಯಲ್ಲಿ ವಿದ್ಯಾರ್ಥಿಗಳು ಸಿದ್ಧಪಡಿಸಿದ ಸೂತ್ರಾರ್ಥಗಳನ್ನು ಬರೆದು ಮಂಡಿಸಬೇಕು. ಪದ್ಯಗಳನ್ನು, ಸೂತ್ರಗಳನ್ನು ಕಂಠಪಾಠ ಮಾಡುವವರನ್ನು ಪಾಲು ಪಡೆಯಲು ನಮ್ಮಲ್ಲಿ ಸ್ಪರ್ಧೆಯೇ ಮೂಡುತ್ತಿತ್ತು. ವರ್ಷದ ಅವಧಿ ಮುಗಿವ ಹೊತ್ತಿಗೆ ಕೇಶಿರಾಜನ ಗರಡಿಯಲ್ಲಿ ಪಳಗಿದ ನಾವು ದರ್ಪಣದ ಅರ್ಧದಷ್ಟಾದರೂ ಸೂತ್ರಗಳನ್ನು ಉದಾಹರಣೆಗಳನ್ನು ಕಂಠಸ್ಥ ಮಾಡಿಕೊಂಡಿದ್ದೆವು. ಶಬ್ದಮಣಿದರ್ಪಣದ ಸೂತ್ರಗಳು ನಮ್ಮ ಉಸಿರಾಟದಂತೆ ನಮ್ಮ ದಿನ ಬಳಕೆಯ ವ್ಯವಹಾರದ ಮಾತುಗಳಲ್ಲಿ ಸೇರಿಹೋಗುತ್ತಿತ್ತು. ವಿದ್ಯಾರ್ಥಿಗಳಾದ ನಾವು ಹಳಗನ್ನಡದಲ್ಲಿ ಮಾತನಾಡುವುದು. ಒಬ್ಬರನ್ನೊಬ್ಬರು ಹಳಗನ್ನಡದಲ್ಲೇ ರೇಗಿಸುವುದು ಪ್ರಾರಂಭವಾಗಿತ್ತು. ಮುಂದೆ ಮೂರನೇ ಆನರ್ಸಿನಲ್ಲಿ ಪಂಪಭಾರತ, ವಡ್ಡಾರಾಧನೆ, ಶಾಸನ ಪಠ್ಯಗಳು ಪಾಠ ಕೇಳಿದ ಮೇಲಂತೂ ನಾವೆಲ್ಲ ಪಂಪನ ಭಾಷೆಯಲ್ಲೇ ಮಾತನಾಡುವ ಅಭ್ಯಾಸ ಮಾಡತೊಡಗಿದೆವು. ಒಬ್ಬರಿಗೊಬ್ಬರು ಪತ್ರ ವ್ಯವಹಾರ ಮಾಡುವಾಗ ಹಳಗನ್ನಡದಲ್ಲಿಯೇ ಪತ್ರಗಳನ್ನು ಬರೆಯುತ್ತಿದ್ದೆವು. ಪ್ರತಿ ಶನಿವಾರ ತಪ್ಪದೆ ಏರ್ಪಾಡು ಮಾಡುತ್ತಿದ್ದ ಸೆಮಿನಾರ್‌ಗಳಲ್ಲಿ ಆನರ್ಸ್ ವಿಭಾಗದ ಎಲ್ಲ ವಿದ್ಯಾರ್ಥಿಗಳೂ ಸೇರುತ್ತಿದ್ದರು. ಜಿ.ವಿ.ಯವರು ಯಾವ ಸೆಮಿನಾರಿಗೂ ಗೈರು ಹಾಜರಾಗುತ್ತಿರಲಿಲ್ಲ. ಪ್ರಬಂಧಗಳನ್ನು ಸಿದ್ಧಪಡಿಸುವವರಿಗೆ ಸಾಕಷ್ಟು ಆಧಾರಗ್ರಂಥಗಳನ್ನು ನೀಡಿ ಪ್ರಬಂಧದ ರೂಪುರೇಷೆಗಳನ್ನು ಚರ್ಚಿಸಿ ಪ್ರಬಂಧ ಸಿದ್ಧಪಡಿಸಲು ಮಾರ್ಗದರ್ಶನ ನೀಡುತ್ತಿದ್ದರು. ಪ್ರಬಂಧಗಳನ್ನು ಮಂಡಿಸುವ ಮೊದಲು ತಮ್ಮ ಕೊಠಡಿಗೆ ಕರೆಸಿಕೊಂಡು ಅದನ್ನು ಓದಿಸಿ ಸೂಕ್ತ ತಿದ್ದುಪಡಿಗಳನ್ನು, ಸಲಹೆಗಳನ್ನು ನೀಡುತ್ತಿದ್ದರು. ಆನರ್ಸ್ ವಿದ್ಯಾರ್ಥಿಗಳ ಯೋಚನಾಲಹರಿ, ಬರವಣಿಗೆಯ ಕ್ರಮ, ಮಾತುಗಾರಿಕೆ ಇವುಗಳೆಲ್ಲ ಸ್ಪಷ್ಟ ರೂಪವನ್ನು ಪಡೆದದ್ದು ಈ ಸೆಮಿನಾರುಗಳಲ್ಲೆ.

ಸಾಹಿತ್ಯಾಸಕ್ತರಾದ ವಿದ್ಯಾರ್ಥಿಗಳನ್ನು ಅಥವಾ ಉದಯೋನ್ಮುಖ ಬರಹಗಾರರನ್ನು ಕಂಡರೆ ಜಿ.ವಿ.ಯವರಿಗೆ ತುಂಬ ಅಕ್ಕರೆ. ಬೆಂಗಳೂರಿನ ವಿವಿಧ ಕಡೆ ನಡೆಯುತ್ತಿದ್ದ ವಿಚಾರಗೋಷ್ಠಿಗಳು ಮತ್ತು ಕವಿಗೋಷ್ಠಿಗಳಲ್ಲಿ ಭಾಗವಹಿಸುವಂತೆ ನಮಗೆ ಉತ್ತೇಜನ ನೀಡುತ್ತಿದ್ದರು. ಅಂಥ ಸಭೆಗಳಿಗೆ ಕೆಲವೊಮ್ಮೆ ಜಿ.ವಿ.ಯವರೂ ಬರುತ್ತಿದ್ದರು. ಸಭೆ ಸಮಾರಂಭಗಳು ಮುಗಿದ ಮೇಲೆ ಭಾಗವಹಿಸಿದ ಸಾಹಿತಿ, ವಿಮರ್ಶಕರನ್ನು ವಿದ್ಯಾರ್ಥಿಗಳಾದ ನಮಗೆ ಪರಿಚಯ ಮಾಡಿಕೊಡುತ್ತಿದ್ದರು. ಅವರ ವಾಹನದಲ್ಲಿಯೇ ಹಿಂತಿರುಗಿ ಬರುವ ವಾಹನ ಭಾಗ್ಯ ನಮ್ಮದಾಗಿತ್ತು. ಬಿಳಿಯ ಬಣ್ಣದ ಅವರ ಸ್ಟ್ಯಾಂಡರ್ಡ್ ಕಾರನ್ನು ನಾವು 'ಐರಾವತ' ಎಂದೇ ಕರೆಯುತ್ತಿದ್ದೆವು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಜಿ.ವಿ.ಯವರಿಗೆ ಕರ್ನಾಟಕದ ಮತ್ತು

ಹೊರನಾಡಿನ ಎಲ್ಲ ಸಾಹಿತಿಗಳ ಪರಿಚಯವೂ ಇತ್ತು. ಅನೇಕ ಮಂದಿ ಅವರನ್ನು ಹುಡುಕಿಕೊಂಡು ಕಾಲೇಜಿಗೆ ಬರುತ್ತಿದ್ದರು. ಅಲ್ಲದೆ ಹಲವಾರು ಸಾಹಿತಿಗಳನ್ನು ಕಾಲೇಜಿಗೆ ಕರೆಯಿಸಿ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸಗಳನ್ನು ಕೊಡಿಸುತ್ತಿದ್ದರು. ಸುಪ್ರಸಿದ್ಧ ಕವಿಗಳಾದ ದ.ರಾ.ಬೇಂದ್ರೆ, ಕೆ.ಎಸ್. ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗ, ಬಿ.ಸಿ. ರಾಮಚಂದ್ರಶರ್ಮ, ಇವರುಗಳನ್ನು ಕಾಲೇಜಿಗೆ ಕರೆಯಿಸಿ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಿದ್ದರು. ನರಸಿಂಹ ಸ್ವಾಮಿಗಳು ಜಿ.ವಿ.ಯವರ ಸಹಪಾಠಿಯೆಂಬುದು, ಅಡಿಗರು ಜಿ.ವಿ.ಯವರ ಶಿಷ್ಯರೆಂಬುದು, ರಾಮಚಂದ್ರಶರ್ಮರು ಜಿ.ವಿ.ಯವರ ಸಹೋದ್ಯೋಗಿಯಾಗಿದ್ದವರು ಎಂಬ ಸಂಗತಿಗಳು ನಮ್ಮ ಅಭಿಮಾನವನ್ನು ಇಮ್ಮಡಿಸಿದ್ದವು.

ಪಂಪ, ರನ್ನ, ಕುಮಾರವ್ಯಾಸ, ಕೇಶಿರಾಜ ಇವರುಗಳನ್ನು ಎಷ್ಟು ಪರಿಣಾಮಕಾರಿಯಾಗಿ ಬೋಧಿಸುತ್ತಿದ್ದರೋ ಅಷ್ಟೇ ಪರಿಣಾಮಕಾರಿಯಾಗಿ ಶಾಸನ ಸಾಹಿತ್ಯವನ್ನು ಬೋಧಿಸುವ ಪಾಂಡಿತ್ಯವೂ ಜಿ.ವಿ.ಯವರಿಗಿತ್ತು. ಹಲ್ಮಿಡಿ ಶಾಸನ, ಬೊಪ್ಪಣನ ಗೊಮ್ಮಟ ಜಿನಸ್ತುತಿ, ಲಕ್ಷ್ಮೀಧರನ ಶಾಸನ, ಬುಕ್ಕರಾಯನ ಶಾಸನ ಇವುಗಳನ್ನು ಬೋಧಿಸುವಾಗ ಅವರು ಸ್ವತಃ ಪಾಠದಲ್ಲಿ ತಲ್ಲೀನರಾಗುವುದಲ್ಲದೆ ನಮ್ಮನ್ನು ಆ ಶಾಸನ ಕಾಲಕ್ಕೆ ಕೊಂಡೊಯ್ಯುತ್ತಿದ್ದರು.

> **"ಸಾಧುಗೆ ಸಾಧು ಮಾಧೂರ್ಯನ್ಗೆ ಮಾಧೂರ್ಯಂ**
> **ಬಾಧಿಪ್ಪ ಕಲಿಗೆ ಕಲಿ, ಯುಗ ವಿಪರೀತ**
> **ನ್ಮಾಧವನೀತನ್ಪೆಱನಲ್ಲ.**

ಈ ಪದ್ಯದಲ್ಲಿ ಕಪ್ಪೆ ಅರಭಟ್ಟ 'ಬಾಧಿಪ್ಪ ಕಲಿಗೆ ಕಲಿ' ಮತ್ತು 'ಯುಗವಿಪರೀತನ್' ಎಂದು ವಿಭಾಗ ಮಾಡಿ 'ಕಲಿಯುಗ ವಿಪರೀತನ್' ಎಂದು ಪದವಿಭಾಗ ಮಾಡುತ್ತಿದ್ದ ದೋಷವನ್ನು ತಿದ್ದಿದ್ದು ನಾನೆಂದಿಗೂ ಮರೆತಿಲ್ಲ.

ಗೊಮ್ಮಟ ಜಿನಸ್ತುತಿಯಲ್ಲಿ "ಮರೆದುಂ ಪಾರದು ಮೇಲೆ ಪಕ್ಷಿ ನಿವಹಂ" ಎನ್ನುವುದನ್ನು ವಿವರಿಸುವಾಗ ಗೊಮ್ಮಟನ ಭವ್ಯತೆ ಕಣ್ಣಿಗೆ ಕಟ್ಟುತ್ತಿತ್ತು. ಹಳಗನ್ನಡ ನಡುಗನ್ನಡಗಳಂತೆಯೇ ಆಧುನಿಕ ಸಾಹಿತ್ಯ ಬೋಧನೆಯಲ್ಲೂ ಜಿ.ವಿ.ಯವರು ಅತ್ಯಂತ ಪ್ರಭಾವಶಾಲಿ ಬೋಧಕರು. ಬೇಂದ್ರೆಯವರ 'ಗರಿ', ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ' ರಾಜರತ್ನಂ ಅವರ 'ಗಂಡುಗೊಡಲಿ', ಅಡಿಗರ 'ಕಟ್ಟುವೆವು ನಾವು', ನರಸಿಂಹಸ್ವಾಮಿಯವರ 'ಆಯ್ದ ಕವನಗಳು' ಪುತಿನ ಅವರ 'ಹರಿಣಾಭಿಸರಣ' ಹೀಗೆ ಹಲವಾರು ಸಾಹಿತ್ಯ ಕೃತಿಗಳನ್ನು ಜಿ.ವಿ.ಯವರಿಂದ ಪಠ್ಯವಾಗಿ ಕೇಳಿದ ಆ ಸಂಭ್ರಮದ ದಿನಗಳನ್ನು ಮರೆಯುವಂತೆಯೇ ಇಲ್ಲ.

ಮುಂದೆ ನಾವು ಸ್ನಾತಕೋತ್ತರ ತರಗತಿಗಳಿಗೆ ಹೋದಾಗ ಸೆಂಟ್ರಲ್ ಕಾಲೇಜಿನ ಕನ್ನಡ ವಿಭಾಗದ ವಿದ್ಯಾರ್ಥಿಗಳಲ್ಲಿ ಮೂರು ಗುಂಪುಗಳಿದ್ದವು. ಸೆಂಟ್ರಲ್ ಕಾಲೇಜಿನಲ್ಲಿಯೇ ಓದಿದವರದು ಒಂದು ಗುಂಪು, ಸರ್ಕಾರಿ ಕಲಾ ಕಾಲೇಜು, ಮಹಾರಾಣಿ ಕಾಲೇಜು ಮತ್ತು ವಿಜಯ ಕಾಲೇಜಿನಲ್ಲಿ ಆನರ್ಸ್ ಮುಗಿಸಿ ಎಂ.ಎ.ಗೆ ಬಂದವರದು ಒಂದು ಗುಂಪು.

ಹೊರಗಿನ ವಿದ್ಯಾರ್ಥಿಗಳದು ಮತ್ತೊಂದು ಗುಂಪು. ಎರಡನೇ ಗುಂಪಿನ ವಿದ್ಯಾರ್ಥಿಗಳಾದ ನಮ್ಮನ್ನು ಇತರರು ತುಂಬಾ ಗಂಭೀರರಾಗಿಯೇ ಗೌರವಿಸುತ್ತಿದ್ದರು. ಹಂಪನಾ, ಎಸ್.ಎಸ್. ಲಕ್ಷ್ಮೀನಾರಾಯಣಭಟ್ಟ ಮೊದಲಾದ ಅಧ್ಯಾಪಕರೂ ಕೂಡ "ನೀವು ಜಿ.ವಿ.ಯವರ ಶಿಷ್ಯರಪ್ಪ" ಎಂದು ವಿಶೇಷ ಗೌರವ ಕೊಡುತ್ತಿದ್ದರು. ಆ ಗೌರವವನ್ನು ಉಳಿಸಿಕೊಂಡು ಹೊರಬಂದೆ ವೆಂಬುದೇ ತೃಪ್ತಿ.

ಎಂ.ಎ. ಪರೀಕ್ಷೆಗಳು ಮುಗಿದು ಫಲಿತಾಂಶಕ್ಕಾಗಿ ಕಾಯುತ್ತಿದ್ದೆವು. ಎಂ.ಎ. ಮುಗಿಸಿದವರಿಗೆ ಉಪನ್ಯಾಸಕ ವೃತ್ತಿಯೊಂದೇ ಆಗ ಇದ್ದ ಆಕರ್ಷಕ ಉದ್ಯೋಗ. ಉಪನ್ಯಾಸಕ ಹುದ್ದೆಗೆ ನಾನು ಜೀವಮಾನದಲ್ಲಿ ಸಲ್ಲಿಸಿದ್ದು ಒಂದೇ ಅರ್ಜಿ. ತೆಗೆದುಕೊಂಡಿದ್ದು ಒಂದೇ ಸಂದರ್ಶನ, ಮೊದಲ ಪ್ರಯತ್ನದಲ್ಲಿಯೇ ನನಗೆ ಯಶಸ್ಸು ದೊರೆಯಿತು.

ಸಂದರ್ಶನಕ್ಕೆ ಪೂರ್ವಭಾವಿಯಾಗಿ ಪ್ರತಿ ಅಭ್ಯರ್ಥಿಯು ಅರ್ಧಗಂಟೆ ಬೋಧನೆ ಮಾಡಬೇಕಿತ್ತು. ವಿಷಯ ತಜ್ಞರಾಗಿ ಬಂದಿದ್ದವರು ಗುರುಗಳಾದ ಜಿ.ವಿ.ಯವರೇ. ಎಂಟು ಮಂದಿ ಸಂದರ್ಶನಕ್ಕೆ ಬಂದಿದ್ದರು. ಹಳಗನ್ನಡದ ಪಾಠಗಳನ್ನು ಮಾಡಿ ಅವರನ್ನು ಮೆಚ್ಚಿಸಬೇಕೆಂದು ನಾನು ಮೊದಲೇ ಸಿದ್ಧಮಾಡಿಕೊಂಡಿದ್ದೆ. ಆದರೆ ನನಗಿಂತ ಮುಂಚೆ ಹೋಗಿ ಪಾಠ ಮಾಡಿದ ನಾಲ್ಕು ಮಂದಿ ಸ್ನೇಹಿತರು ನಾನು ಸಿದ್ಧವಾಗಿದ್ದ ಪಠ್ಯಭಾಗಗಳನ್ನು ಪಾಠ ಮಾಡಿಬಿಟ್ಟಿದ್ದರು. ನನ್ನ ಸರದಿ ಬಂದಾಗ ನನ್ನ ಸಿದ್ಧತೆ ಪೂರ್ಣ ಖಾಲಿಯಾಗಿತ್ತು. ಪುತಿನ ಅವರ 'ಮಳೆಯು ನಾಡ ತೊಯ್ಯುತಿರೆ" ಎಂಬ ಪಠ್ಯವನ್ನು ಎಂದೋ ಓದಿದ್ದೆ. ಪೂರ್ವಸಿದ್ಧತೆ ಇಲ್ಲದೆ ಸ್ವಯಂ ಸ್ಫೂರ್ತಿಯಿಂದ ಪಾಠ ಮಾಡಿದೆ. ಆಯ್ಕೆಯೂ ಆದೆ. ಜಿ.ವಿ.ಯವರು ಕನ್ನಡ ಅಧ್ಯಾಪಕರಾಗಿ ಬೋಧನೆಯನ್ನು ಪ್ರಾರಂಭಿಸಿದ ಸಂಸ್ಥೆಯಲ್ಲಿಯೇ ನನಗೆ ವಿದ್ಯಾದಾನ ನೀಡಿದ ಸಂಸ್ಥೆಯಲ್ಲಿಯೇ ಉಪನ್ಯಾಸಕನಾಗುವ ಅವಕಾಶ ದೊರೆತದ್ದು ಯೋಗಾಯೋಗ ಎಂದೇ ಹೇಳಬೇಕು.

೩೬ ವರ್ಷಗಳ ನನ್ನ ಉಪನ್ಯಾಸಕ ವೃತ್ತಿಯಲ್ಲಿ ಪ್ರತಿ ತರಗತಿಗೆ ಹೋಗುವಾಗಲೂ ನನಗೆ ಜಿ.ವಿ.ಯವರದೇ ಸ್ಫೂರ್ತಿ. ಒಮ್ಮೆ ಅವರನ್ನು ಜ್ಞಾಪಿಸಿಕೊಂಡು ತರಗತಿಯೊಳಗೆ ಕಾಲಿಟ್ಟರೆ ಹಳೆಗನ್ನಡ, ನಡುಗನ್ನಡ, ವ್ಯಾಕರಣ, ಛಂದೋರೂಪಗಳೆಲ್ಲ ಮನಃಪಟಲದಲ್ಲಿ ಸುಳಿದು ಇಡೀ ತರಗತಿ ಉಲ್ಲಾಸದಾಯಕವಾಗಿರುತ್ತದೆ. ಬೋಧನೆ ನನಗೆಂದೂ ಬೇಸರ ತರಿಸಿಲ್ಲ. ಇದಕ್ಕೆ ಜಿ.ವಿ.ಯವರೇ ಸ್ಫೂರ್ತಿ.

ಕನ್ನಡ ಸಾಹಿತ್ಯ ಬೋಧನೆಗೆ ಘನತೆ ಗಾಂಭೀರ್ಯವನ್ನು ತಂದುಕೊಟ್ಟ ಹಿರಿಯ ಭಾಷಾತಜ್ಞರೂ, ಸಂಶೋಧಕರೂ, ನಿಘಂಟುಗಳ ನಿರ್ಮಾಪಕರೂ ಆದ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಮಹೋನ್ನತಿಯನ್ನು ಸಾಧಿಸಿದವರು. ಪ್ರಾಧ್ಯಾಪಕರಾಗಿ ಸಾವಿರಾರು ವಿದ್ಯಾರ್ಥಿಗಳಿಗೆ ಕನ್ನಡವನ್ನು ಕಲಿಸಿ ಸಾರ್ಥಕ ಜೀವಿಯಾದ ಇವರು 'ಇಗೋ ಕನ್ನಡ'ದ ಮೂಲಕ ವಾಗ್ದೇವಿಯ ಭಂಡಾರದ ಮುದ್ರೆಯೊಡೆದು ಅನರ್ಘ್ಯ

ನುಡಿರತ್ನಗಳನ್ನು ಪರಿಚಯಿಸಿ 'ನಾಡೋಜ'ರಾದವರು. ೭ ದಶಕಗಳಿಗೂ ಮೀರಿ ನುಡಿಸೇವಕರಾಗಿ ಸಾವಿರಾರು ಮಂದಿ ಶಿಷ್ಯರ, ಅಭಿಮಾನಿಗಳ ಪ್ರೀತಿಗೆ ಪಾತ್ರರಾದವರು.

ಜಿ.ವಿ.ಯವರು ಜನಿಸಿದ್ದು ೨೩-೮-೧೯೧೩ರಲ್ಲಿ. ಇವರ ತಂದೆ ಅರಮನೆಯ ವಿದ್ವಾಂಸರಾದ ಗಂಜಾರಿ ತಿಮ್ಮಣ್ಣಯ್ಯ. ಸಂಸ್ಕೃತ-ಕನ್ನಡದಲ್ಲಿ ದೊಡ್ಡ ವಿದ್ವಾಂಸರು, ವೇದಪಾರಂಗತರು. ೧೯೩೭ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಪದವಿಯಲ್ಲಿ ಪ್ರಥಮ ಸ್ಥಾನದೊಂದಿಗೆ ಸುವರ್ಣ ಪದಕವನ್ನು ಗಳಿಸಿದ ಜಿ.ವಿ.ಯವರು ೧೯೩೯ರಲ್ಲಿ ಬಿ.ಟಿ. ಪದವಿ ಪಡೆದರು. ಮಹಾರಾಜ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾದರು. ೧೯೪೩ರಿಂದ ವಿಜಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಸಂಜೆ ಕಾಲೇಜಿನ ಪ್ರಿನ್ಸಿಪಾಲರಾಗಿ, ೧೯೭೩ರಲ್ಲಿ ನಿವೃತ್ತರಾದರು. ಶಿಕ್ಷಣ ಸಂಶೋಧನೆ, ಅನುವಾದ, ವಿಮರ್ಶೆ, ನಿಘಂಟುಗಳ ನಿರ್ಮಾಣ, ಭಾಷಾಪಾಂಡಿತ್ಯ ಇವುಗಳಿಗೆ ಹೆಸರಾದ ಜಿ.ವಿ.ಯವರು ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಮತ್ತು ಅಕೆಡಮಿಕ್ ಕೌನ್ಸಿಲ್ ಸದಸ್ಯರಾಗಿಯೂ ಸೇವೆ ಸಲ್ಲಿಸಿದರು. ಕನ್ನಡ ಸಾಹಿತ್ಯ ಪರಿಷತ್ತನ್ನು ಕಟ್ಟಿ ಬೆಳೆಸಿದ ಮಹನೀಯರಲ್ಲಿ ಒಬ್ಬರು.

ಸಾಹಿತ್ಯ, ಶಿಕ್ಷಣ, ಸಂಶೋಧನೆ ಇವುಗಳಲ್ಲಿ ಪರಿಣತಮತಿಗಳಾದ ಜಿ.ವಿ.ಯವರ ಅಭಿಮಾನಿಗಳ ಬಳಗ ತುಂಬ ದೊಡ್ಡದು. ಜಿ.ವಿ.ಯವರಿಗೆ ಅರುವತ್ತು ತುಂಬಿದಾಗ ಅವರ ಅಭಿಮಾನಿಗಳು ಮತ್ತು ಅವರ ಶಿಷ್ಯರು 'ಸಾಹಿತ್ಯಜೀವಿ' ಮತ್ತು 'ಚಿರಂಜೀವಿ' ಎಂಬ ಎರಡು ಅಭಿನಂದನ ಗ್ರಂಥಗಳನ್ನು ಅರ್ಪಿಸಿದರು. ಅವರು ನಿವೃತ್ತರಾದ ಮುವ್ವತ್ತು ವರ್ಷಗಳ ಅನಂತರ ಅವರು ಸಾಹಿತ್ಯ, ಸಂಸ್ಕೃತಿ ಮತ್ತು ನಿಘಂಟು ಕ್ಷೇತ್ರಗಳಲ್ಲಿ ಮಾಡಿದ ಅನನ್ಯ ಸಾಧನೆಯನ್ನು ಗುರುತಿಸಿ 'ಶಬ್ದಸಾಗರ' ಎಂಬ ನುಡಿಗೌರವ ಗ್ರಂಥವನ್ನು ಅರ್ಪಿಸಲಾಯಿತು. ಈ ಎಲ್ಲ ಕೃತಿಗಳು ಅವರ ಜೀವನದ, ವಿದ್ವತ್ತಿನ ಹಲವು ಮುಖಗಳನ್ನು ಪರಿಚಯ ಮಾಡಿಕೊಡುತ್ತವೆ. ಇಂಥ ಗುರುವಿನ ಶಿಷ್ಯರಾಗಿದ್ದೆವೆಂಬುದೇ ನಮಗೆ ಸಾರ್ವಕಾಲಿಕ ಹೆಮ್ಮೆ.

ಇತ್ತೀಚಿನ ಒಂದು ಘಟನೆ–ನಾನು ಕಾಲೇಜಿನ ಹೊಸ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆಯಲ್ಲಿ ಒಂದು ರೀತಿ ತಲ್ಲೀನನೇ ಆಗಿದ್ದೆ. ಹತ್ತಾರು ಮಂದಿ ಸಂದರ್ಶಕರು ಬಂದು ಹೋಗುತ್ತಿದ್ದರು. ನನ್ನ ಸಮವಯಸ್ಕನೇ ಆದ ಒಬ್ಬ ವ್ಯಕ್ತಿ ತನ್ನ ತಮ್ಮನ ಮಗಳ ಪ್ರವೇಶಕ್ಕಾಗಿ ಬಂದು ಕುಳಿತ. ತಾನು ವಿದೇಶದಲ್ಲಿ ೩೦ ವರ್ಷಗಳಿಂದ ಇಂಜಿನಿಯರ್ ಆಗಿರುವುದಾಗಿ ತಿಳಿಸಿದ. ಆ ವೇಳೆಗೆ ಅವನಿಗೆ ನನ್ನ ಗುರುತು ಸಿಕ್ಕಿರಬೇಕು. "ನಾನು ಯಾರು ಗೊತ್ತಾಯಿತೇ?" ಎಂದು ಕೇಳಿದ. ನಾನು ಗಂಭೀರವಾಗಿಯೇ "ಇಲ್ಲ ಸಾರ್ ಕ್ಷಮಿಸಿ" ಎಂದೆ. ನಾನೊಂದು ಪದ್ಯ ಹೇಳುತ್ತೇನೆ. ಆಗ ನಾನು ಯಾರೆಂಬುದು ನಿಮಗೆ ಗೊತ್ತಾಗಬಹುದು" ಎಂದ ನಾನು ಕುತೂಹಲದಿಂದ 'ಹೇಳಿ ಸಾರ್' ಎಂದೆ. ಆತ ಹೀಗೆ ಪ್ರಾರಂಭಿಸಿದ.

**ಶ್ರೀ ರಮಣನಮೃತಾಬ್ಧಿಮಂದಿರ**
**ನೀರಜಾಸನ ಜನಕ ಜಗದಾ**
**ಧಾರ ಪಣಿ ಪರ್ಯಂಕ ಅಹಿರಿಪುಗಮನ ಅಸುರಹರ**

ಹೀಗೆ ಮುಂದುವರೆಸಿದ. ನನ್ನ ದೇಹ ಮತ್ತು ಮನಸ್ಸುಗಳು ನಲವತ್ತು ವರ್ಷಗಳ ಹಿಂದಕ್ಕೆ ಹೋಯಿತು. ಆತ ಮೊದಲ ಪದ್ಯವನ್ನು ಹೇಳುತ್ತಿದ್ದಂತೆಯೇ ನಾನು ಥಟ್ಟನೆ 'ಗೊತ್ತಾಯಿತು ನೀವು ನನ್ನ ಸಹಪಾಠಿ. ಜಿ.ವಿ.ಯವರ ಶಿಷ್ಯ ಎಂ.ಪಿ. ನಾಗರಾಜ್ ಅಲ್ಲವೇ' ಎಂದು ಹೆಸರನ್ನೂ ಹೇಳಿದೆ. ಎರಡನೇ ಪದ್ಯವನ್ನು

**"ಪರಶುಧರ ಫಣಿರತ್ನ ಭೂಷಣ**
**ಕರಿವದನೆ ಕಮನೀಯ ಲಕ್ಷಣ. . . . .**

ಎಂದು ನಾನೇ ಮುಂದುವರಿಸಿದೆ. ಆ ಮಾತು ಈ ಮಾತು ಆದ ಮೇಲೆ ನಾಗರಾಜ್ ಹೇಳಿದ. ಅಮೆರಿಕದ ಪಿಟ್ಸ್‌ಬರ್ಗ್‌ನಲ್ಲಿ ಒಂದು ಹಿಂದೂ ದೇವಾಲಯವಿದೆಯಂತೆ. ಆತ ವಾರಕ್ಕೆ ಎರಡು–ಮೂರು ದಿನ ಸಂಜೆ ಆ ದೇವಾಯಲಕ್ಕೆ ಹೋಗುತ್ತಾನಂತೆ. ಅಲ್ಲಿನ ಅರ್ಚಕರು ದಕ್ಷಿಣ ಭಾರತದವರು. ಸಂಪ್ರದಾಯದಂತೆ ಅಲ್ಲಿ ಅಷ್ಟಾವಧಾನ ಸೇವೆ ನಡೆಯುತ್ತದೆಯಂತೆ. ಆ ಸಂದರ್ಭದಲ್ಲಿ 'ಸ್ತೋತ್ರ ಸೇವೆ' ಮಾಡುವಾಗ ಈ ಪದ್ಯವನ್ನು ನಾಗರಾಜ ಗಮಕರೂಪದಲ್ಲಿ ಹಾಡುತ್ತಾನಂತೆ. ಜಿ.ವಿ.ಯವರನ್ನು ನೆನಪಿಸಿಕೊಳ್ಳುತ್ತಾನಂತೆ. ಒಬ್ಬ ಶ್ರೇಷ್ಠ ಅಧ್ಯಾಪಕನಿಗೆ ಇದಕ್ಕಿಂತ ಇನ್ನೇನು ಬೇಕು?

❖

# ಉದಾರಚರಿತ ಗುರು

## (ಡಾ॥ ಅನಂತಪದ್ಮನಾಭರಾವ್)

● *ಕೆ. ವೈ. ನರಸಿಂಹಮೂರ್ತಿ*

ಬೆಂಗಳೂರು ಮಹಾನಗರದ ಪ್ರತಿಷ್ಠಿತ ಜನನಿಬಿಡ ಬಡಾವಣೆ ಜಯನಗರದ ೪ನೇ ಬಡಾವಣೆ. ಈ ಬಡಾವಣೆಯಲ್ಲಿನ ಹೆಸರಾಂತ ವಿದ್ಯಾಸಂಸ್ಥೆ ಬಿ.ಎಚ್.ಎಸ್. ಶಿಕ್ಷಣ ಸಂಸ್ಥೆ. ಇದರ ಆಶ್ರಯದಲ್ಲಿ ನಡೆಯುತ್ತಿರುವ ವಿಜಯ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿರುವ ಡಾ॥ ಅನಂತಪದ್ಮನಾಭರಾಯರು ಹಲವಾರು ರೀತಿಯಲ್ಲಿ ಇತರರಿಗೆ ಮಾರ್ಗದರ್ಶಕರೂ, ಜನಾನುರಾಗಿಗಳೂ, ಆದರ್ಶ, ಪ್ರತಿಭಾವಂತ ಕನ್ನಡ ಪ್ರಾಧ್ಯಾಪಕರೆನಿಸಿದ್ದಾರೆ.

ವಿಜಯ ಪದವಿಪೂರ್ವ ಕಾಲೇಜು ಇಂದು ಹೆಮ್ಮರವಾಗಿ ಬೆಳೆಯುವುದಕ್ಕೆ ಮೊದಲು ಅಂಕುರಿಸಿದ್ದು ಶಂಕರಪುರ ಬಡಾವಣೆಯ ಬಸವನಗುಡಿ ರಸ್ತೆಯಲ್ಲಿ ಆಡಳಿತ ಮಂಡಳಿ ನಡೆಸುತ್ತಿದ್ದ ಬೆಂಗಳೂರು ಹೈಯರ್ ಸೆಕೆಂಡರಿ ಶಾಲೆಯ ಕಟ್ಟಡದಲ್ಲಿ. ಅಂದಿನಿಂದ ಇಂದಿನವರೆವಿಗೂ ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿಗೆ ಆಡಳಿತ ಮಂಡಳಿಯೊಂದಿಗೆ ಕೈಜೋಡಿಸಿ ಯಶಸ್ವಿಯಾದ ಗೌರವಕ್ಕೆ ಡಾ॥ ಅನಂತಪದ್ಮನಾಭರಾಯರು ಪಾತ್ರರಾಗಿದ್ದಾರೆ. ಒಂದು ಕುಟುಂಬದ ಹೊಣೆಗಾರಿಕೆ ಮುಂದೆ ಹೊರಬೇಕಾದ ವ್ಯಕ್ತಿ ತನ್ನ ಬಾಲ್ಯದ ದಿನಗಳಿಂದಲೇ ಅದರಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವಂತೆ ಅನಂತಪದ್ಮನಾಭರಾಯರು ಈ ಸಂಸ್ಥೆಗೆ ವ್ಯಾಸಂಗ ವಿದ್ಯಾರ್ಥಿಯಾಗಿ ಸೇರಿದಂದಿನಿಂದಲೇ ಒಲವು ಬೆಳೆಸಿಕೊಂಡರು.

ಗೌರಿಬಿದನೂರು ತಾಲ್ಲೂಕಿನ ಮಂಚೇನಹಳ್ಳಿಯವರಾದ ಇವರು ಉನ್ನತ ವ್ಯಾಸಂಗಕ್ಕಾಗಿ ಬೆಂಗಳೂರಿಗೆ ಬಂದಾಗ ಇವರಿಗೆ ಆಶ್ರಯ ನೀಡಿದ ಸಂಸ್ಥೆ ಬಿ.ಎಚ್.ಎಸ್. ವಿದ್ಯಾ ಸಂಸ್ಥೆಯ ಅಂಗಸಂಸ್ಥೆಯಾದ ಬಸವನಗುಡಿ ವಿಜಯ ಕಾಲೇಜು ಇಲ್ಲಿ ಪ್ರೊ॥ ಜಿ. ವೆಂಕಟಸುಬ್ಬಯ್ಯ, ಪಿ.ವಿ. ನಾರಾಯಣ, ಶ್ರೀಪಾದ ಮೊದಲಾದ ಆದರ್ಶ ಶಿಕ್ಷಕರಲ್ಲಿ ಶಿಷ್ಯವೃತ್ತಿ ಹೊಂದಿ ಕನ್ನಡ ಆನರ್ಸ್ ಪದವೀಧರರಾದರು. ವ್ಯಾಸಂಗದ ದಿನಗಳಲ್ಲಿ ಇವರು ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ತೋರಿದ ಶ್ರದ್ಧಾಭಕ್ತಿ ಎಲ್ಲ ಗುರುವೃಂದದವರ ಮನಸೆಳೆದು ಇವರ ಬಗ್ಗೆ ಅತ್ಯಂತ ವಿಶ್ವಾಸ, ಗೌರವ ಭಾವನೆ ಮೂಡುವಂತೆ ಮಾಡಿತು. ಕಾಲೇಜು ವ್ಯಾಸಂಗದ ದಿನಗಳಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಇವರದು ಸಿಂಹಪಾಲು. ಅಂತರ ಕಾಲೇಜು ಚರ್ಚಾಸ್ಪರ್ಧೆಗಳಲ್ಲಿ ಗಳಿಸಿದ ಬಹುಮಾನಗಳು ಪ್ರಶಸ್ತಿಗಳು ಅಸಂಖ್ಯಾತ. ಇದನ್ನೆಲ್ಲ

ಗಮನಿಸಿದ ಗುರುವೃಂದ ಇವರನ್ನು ಚೆನ್ನಾಗಿ ತಯಾರು ಮಾಡಿ ಕನ್ನಡ ಸಾಹಿತ್ಯ ಸೇವೆಯಲ್ಲಿ ತೊಡಗಿಸಲು ಚಿಂತಿಸಿದರಂತೆ.

ಆನರ್ಸ್ ಪರೀಕ್ಷೆಯಲ್ಲಿ ಯಶಸ್ವಿಯಾಗಿ ಪದವಿ ಗಳಿಸಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ ಪದವಿ ಪಡೆದರು. ವ್ಯಾಸಂಗದ ದಿನಗಳಲ್ಲಿ ಇವರು ತಯಾರಿಸುತ್ತಿದ್ದ ಟಿಪ್ಪಣಿಗಳು, ವಿಚಾರಸಂಕಿರಣದ ಪ್ರಬಂಧಗಳು ಸಹಪಾಠಿಗಳ ಶ್ರಮವನ್ನು ಕಡಿಮೆಮಾಡುತ್ತಿತ್ತು. ಎಂದರೆ ಪರೀಕ್ಷಾ ಗುಣಮಟ್ಟಕ್ಕೆ ಅನುಗುಣವಾಗಿ ಸಾಧಾರಿತ ವಿಮರ್ಶಾಪೂರ್ವಕ ಪ್ರಬಂಧಗಳನ್ನು ರಚಿಸುತ್ತಾ ತಮ್ಮ ಸಾಹಿತ್ಯ ಸತ್ವವನ್ನು ಪುಷ್ಟಿಗೊಳಿಸಿಕೊಳ್ಳುವ ಸಮಯದಲ್ಲೇ ಸಹಪಾಠಿಗಳಿಗೂ ವಿಚಾರಧಾರೆಯನ್ನು ತಿಳಿಸಿ ಅವರನ್ನೂ ಜ್ಞಾನಿಗಳನ್ನಾಗಿ ಮಾಡಿದ ಖ್ಯಾತಿ ಇವರದು. ಇತರರಿಗೆ ನೆರವಾಗುವ ಗುಣ ಇವರಿಗೆ ಹುಟ್ಟಿನಿಂದಲೇ ಬಂದಕಾರಣ "ಪರೋಪಕಾರಾರ್ಥಂ ಇದಂ ಶರೀರಂ" ಎಂಬ ನಾಣ್ನುಡಿಗೆ ತಕ್ಕಂತೆ ಇಂದಿಗೂ ಇತರರಿಗೆ ಸಹಾಯಹಸ್ತರಾಗಿ ನಿಂತಿದ್ದಾರೆ.

ಎಂ.ಎ. ಪದವಿ ಪೂರೈಸಿದ ತಕ್ಷಣವೇ ಶಂಕರಪುರದ ಬಿ.ಎಚ್.ಎಸ್. ಜೂನಿಯರ್ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ವೃತ್ತಿಜೀವನ ಆರಂಭ. ಹರೆಯದ ಹುರುಪು, ವೃತ್ತಿ ಪ್ರೇಮ, ಭಾಷಾಪಾಂಡಿತ್ಯ ಇವುಗಳಿಂದಾಗಿ ಪ್ರಾರಂಭದಿಂದಲೆ ಒಬ್ಬ ಸಮರ್ಥ ಉಪನ್ಯಾಸಕರಾಗಿ ತಮ್ಮನ್ನು ಗುರುತಿಸಿಕೊಂಡರು. ಅನಂತಪದ್ಮನಾಭರಾಯರ ಹೆಸರು ವೇಳಾಪಟ್ಟಿಯಲ್ಲಿ ಸಂಕ್ಷಿಪ್ತವಾಗಿ ಎ.ಪಿ.ಆರ್. ಎಂದು ಕಾಣಿಸಿಕೊಂಡದ್ದು ಇಂದಿಗೂ ಸ್ಥಿರವಾಗಿ ಅನಂತಪದ್ಮನಾಭರಾವ್ ಎಂದರೆ ಎ.ಪಿ.ಆರ್. ತಾನೆ ಅನ್ನುವಷ್ಟು ಜನಜನಿತವಾಯಿತು. ಎ.ಪಿ.ಆರ್. ತಮ್ಮ ವೃತ್ತಿಜೀವನ ವನ್ನು ತಾವು ಕಲಿತ ಸಂಸ್ಥೆಯಲ್ಲೆ ಪ್ರಾರಂಭಿಸಿದ್ದು ಅವರಿಗೆ ಮಹದಾನಂದ ಉಂಟುಮಾಡಿತು. ತಾವು ಬಂದು ಸೇರಿದ ಕೆಲವೇ ವರ್ಷಗಳಲ್ಲಿ ತಮ್ಮ ಸಹಪಾಠಿ ಹಾಗೂ ಆತ್ಮೀಯ ಮಿತ್ರರಾದ ಪಿ. ಜನಾರ್ಧನ ತುಂಗ ಅವರನ್ನೂ ತಮ್ಮ ವಿಭಾಗಕ್ಕೆ ಉಪನ್ಯಾಸಕರನ್ನಾಗಿ ಕರೆತಂದರು. ಗಣಿತಶಾಸ್ತ್ರ ಉಪನ್ಯಾಸಕರಾಗಿದ್ದ ಕೆ.ಎಸ್. ಸುಬ್ರಹ್ಮಣ್ಯಂ, ಭೌತಶಾಸ್ತ್ರ ಉಪನ್ಯಾಸಕರಾದ ಕೆ.ಎಸ್. ವಿಜಯರಾಘವನ್, ರಸಾಯನಶಾಸ್ತ್ರ ಉಪನ್ಯಾಸಕರಾದ ಎಂ.ಎನ್. ರಾಮನಾಥ್, ಮೊದಲಾದವರು ಎ.ಪಿ.ಆರ್. ವೃತ್ತಿಬಾಂಧವರಾಗಿ ಸಂಸ್ಥೆಯ ಶೈಶವದಿನಗಳಲ್ಲಿ ಇದರ ಅಭಿವೃದ್ಧಿಗಾಗಿ ಶ್ರಮಿಸಿದ್ದನ್ನು ಸ್ಮರಿಸಲೇಬೇಕು.

ಕಾಲೇಜಿನ ಸಮಾರಂಭಗಳಲ್ಲಿ ಪರೀಕ್ಷಾ ವಿಷಯದಲ್ಲಿ, ಕಾಲೇಜಿನ ಪ್ರವಾಸವೇ ಮೊದಲಾದ ಕಾರ್ಯಗಳಲ್ಲಿ ಇವರದೇ ಪ್ರಮುಖ ಪಾತ್ರ. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ವಿದ್ಯಾರ್ಥಿಗಳನ್ನು ತೊಡಗಿಸುವ ತಂತ್ರಗಾರರು. ಕಾಲೇಜು ದಿನಾಚರಣೆ, ವಿದ್ಯಾರ್ಥಿ ಸಂಘದ ಉದ್ಘಾಟನೆ, ಕನ್ನಡ ರಾಜ್ಯೋತ್ಸವವೇ ಮೊದಲಾದ ಸಮಾರಂಭಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಹೊಣೆಗಾರಿಕೆ ಇವರದು. ವಿದ್ಯಾರ್ಥಿಗಳನ್ನು ವಿದ್ಯಾರ್ಥಿಗಳಂತೆ ಕಾಣದೆ ಸ್ನೇಹಿತರಂತೆ ಬಿಚ್ಚುಮನದಿಂದ ಮಾತನಾಡಿಸಿ ಅವರ ಗೌರವ ಆದರಗಳಿಗೆ ಅರ್ಹರಾಗುವ ಕೆಲವೇ ವ್ಯಕ್ತಿಗಳಲ್ಲಿ ಎ.ಪಿ.ಆರ್. ಕೂಡ ಒಬ್ಬರು.

ಕಾಲೇಜಿನ ಉತ್ತಮ ವ್ಯವಸ್ಥೆ, ಉಪನ್ಯಾಸಕರ ಉತ್ತಮ ಮಾರ್ಗದರ್ಶನ, ಅದರಲ್ಲೂ ಎ.ಪಿ.ಆರ್. ವಿದ್ಯಾರ್ಥಿಗಳ ಬಗ್ಗೆ ವಹಿಸುತ್ತಿದ್ದ ಕಾಳಜಿ, ತೋರುತ್ತಿದ್ದ ಪ್ರೀತಿ–ಗೌರವಗಳಿಂದಾಗಿ ಶಂಕರಪುರದಲ್ಲಿ ಚಿಕ್ಕದಾಗಿ ರೂಪು ತಳೆದ ಬಿ.ಎಚ್.ಎಸ್. ಜೂನಿಯರ್ ಕಾಲೇಜನ್ನು ಆಡಳಿತ ಮಂಡಳಿ ಸ್ವತಂತ್ರ ಪದವಿಪೂರ್ವ ಕಾಲೇಜನ್ನಾಗಿ ಪರಿವರ್ತಿಸಿ ಜಯನಗರದ ಪ್ರಸ್ತುತ ಸ್ಥಳಕ್ಕೆ ಸ್ಥಳಾಂತರಿಸುವಲ್ಲಿ ಇವರ ಪಾತ್ರವೂ ಪ್ರಮುಖವಾದದ್ದು.

ಗ್ರಂಥಾಲಯಕ್ಕೆ ಪುಸ್ತಕಗಳನ್ನು ತರಿಸುವುದು, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವೇದಿಕೆ ಹಾಕಿಸುವುದು, ಅತಿಥಿಗಳ ಆಯ್ಕೆ, ಕಾರ್ಯಕ್ರಮ ನಿರ್ವಹಣೆ ಎಲ್ಲವೂ ಇವರ ಹೊಣೆಗಾರಿಕೆಯೆ. ಕೊಟ್ಟ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಇವರ ಸ್ವಭಾವ ಇತರರಿಗೆ ಅನುಕರಣೀಯ ವಾದದ್ದು. ಹೊಸ ಕಟ್ಟಡಕ್ಕೆ ಕಾಲೇಜು ವರ್ಗಾವಣೆಯಾದ ಮೇಲೆ ಇದರ ಹೆಸರು ವಿಜಯ ಪದವಿಪೂರ್ವ ಕಾಲೇಜು ಎಂದು ನಾಮಾಂತರ ಹೊಂದಿತು.

ಹೊಸ ಕಟ್ಟಡಕ್ಕೆ ಬಂದಾದ ಮೇಲೆ ಎಡೆಬಿಡದ ಕಾರ್ಯಭಾರದ ನಡುವೆಯೂ ಸಾಹಿತ್ಯಾಸಕ್ತರಾಗಿ ಸಾಹಿತ್ಯ ಸಂಶೋಧನೆಯಲ್ಲಿ ತೊಡಗಿ ಡಾ॥ ಸುಮತೀಂದ್ರ ನಾಡಿಗರ ಮಾರ್ಗದರ್ಶನದಲ್ಲಿ ೧೯ನೇ ಶತಮಾನದ ಹರಿದಾಸ ಸಾಹಿತ್ಯ ಎಂಬ ಮಹಾಪ್ರಬಂಧ ರಚಿಸಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆದು ಅಂದಿನಿಂದ ಡಾ॥ ಎ.ಪಿ.ಆರ್. ಆಗಿ ಹೆಸರಾದರು.

ಸಂಪ್ರದಾಯದ ಹಾಡುಗಳ ಸಂಗ್ರಹ, ಅಪರೂಪದ ದಾಸಕೃತಿಗಳ ಸಂಗ್ರಹ, ಶಾಸನ ಸಾಹಿತ್ಯ ಸಂಗ್ರಹದಂಥ ಚಟುವಟಿಕೆಗಳನ್ನು ಹವ್ಯಾಸವಾಗಿ ರೂಢಿಸಿಕೊಂಡು ತಾವು ತರಗತಿಯಲ್ಲಿ ಉಪನ್ಯಾಸ ನೀಡುವಾಗ ಸಂದರ್ಭೋಚಿತವಾಗಿ ಇವುಗಳನ್ನು ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಸುವ ಇವರ ತಂತ್ರವೇ ವಿದ್ಯಾರ್ಥಿಗಳ ಆಕರ್ಷಣಾ ಸಾಮಗ್ರಿ. ಛಂದಸ್ಸು, ವ್ಯಾಕರಣ, ಅಲಂಕಾರ ಮೊದಲಾದ ಶಾಸ್ತ್ರ ವಿಷಯವನ್ನು ಅತ್ಯಂತ ಸರಳವಾಗಿ ವಿದ್ಯಾರ್ಥಿಗಳಿಗೆ ಮನನ ಮಾಡಿಸಿದ ಮೋಡಿಗಾರ ಡಾ॥ ಅನಂತಪದ್ಮನಾಭರಾಯರು. ಒಮ್ಮೆ ಇವರ ಪಾಠವನ್ನು ಕೇಳಿದ ವಿದ್ಯಾರ್ಥಿ ತನ್ನ ಜೀವಿತದಲ್ಲೇ ಅದನ್ನು ಮರೆಯಲಾರದಂಥ ಪ್ರಭಾವಕ್ಕೆ ಒಳಗಾಗುವುದೇ ಇವರ ಉಪನ್ಯಾಸದ ವೈಶಿಷ್ಟ್ಯ.

ಎ.ಪಿಆರ್ ಕಾಲೇಜು ಉಪನ್ಯಾಸಕರಾಗಿ ಸೇರಿದ ದಿನಗಳಲ್ಲೆ ನಾನು ಪದವಿ ಪೂರ್ವ ಶಿಕ್ಷಣಕ್ಕಾಗಿ ಬಿ.ಎಚ್.ಎಸ್. ಜೂನಿಯರ್ ಕಾಲೇಜಿಗೆ ಸೇರಿದೆ. ಸಂಸ್ಕೃತ ಭಾಷಾವಿಷಯವನ್ನು ತೆಗೆದುಕೊಂಡಿದ್ದ ನಾನು ತರಗತಿ ತಪ್ಪಿಸಿ ಕನ್ನಡ ತರಗತಿಯಲ್ಲಿ ಕೂಡುವಷ್ಟು ಎಪಿಆರ್ ಉಪನ್ಯಾಸ ನನ್ನ ಮೇಲೆ ಪ್ರಭಾವ ಬೀರಿತು. ನಾನು ಕಾಲೇಜಿಗೆ ಸೇರುವ ಮೊದಲು ಸಂಸ್ಕೃತ ಸಾಹಿತ್ಯ ಅಧ್ಯಯನ ಪೂರೈಸಿದ್ದ ಕಾರಣ ಸಂಸ್ಕೃತ ವಿಷಯ ಇಲ್ಲಿ ನನಗೆ ಕಷ್ಟವಾಗಲಿಲ್ಲ. ಅದರಿಂದಾಗಿ ಉಪನ್ಯಾಸಕರಾದ ಚಕ್ರವರ್ತಿ ಅನಂತಾಚಾರ್ಯರ ಅನುಮತಿ ಪಡೆದು ಕನ್ನಡ ತರಗತಿಯಲ್ಲಿ ಕುಳಿತು ಪರೋಕ್ಷವಾಗಿ ಎಪಿಆರ್ ಬಳಿ ಶಿಷ್ಯವೃತ್ತಿ ಬೆಳೆಸಿದೆ.

ಪಂಪ, ಕುಮಾರವ್ಯಾಸರಿಂದ ಹಿಡಿದು ಹಂಪನಾ ವರೆಗೆ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಪರಿಚಯ ಎರಡೇ ವರ್ಷಗಳಲ್ಲಿ ನಮಗೆ ಉಂಟಾಯಿತು. ಓದಿದರೆ ಕನ್ನಡವನ್ನೇ ಓದಬೇಕೆಂಬ ವಿಶ್ವಾಸವನ್ನು ನಮ್ಮಲ್ಲಿ ತಂದಿತು. ಪಠ್ಯ ವಿಷಯದಲ್ಲಿ ಹೇಗೆ ನಮ್ಮ ಗಮನವನ್ನು ಸೆಳೆದರೋ ಹಾಗೆಯೇ ಪಠ್ಯೇತರ ಚಟುವಟಿಕೆಗಳಲ್ಲೂ ನಮ್ಮನ್ನು ತೊಡಗಿಸಿದರು. ಇವರ ಪ್ರಭಾವ ಎಷ್ಟರ ಮಟ್ಟಿಗೆ ವಿದ್ಯಾರ್ಥಿಗಳ ಮೇಲೆ ಬೀರಿತೆಂದರೆ ಸಂಸ್ಕೃತ ವಿದ್ಯಾರ್ಥಿಗಳು ಕನ್ನಡ ವಿದ್ಯಾರ್ಥಿಗಳಾಗಿ ಬದಲಾವಣೆ ಪಡೆಯುವುದಿರಲಿ ಬೇರೆ ಕಾಲೇಜಿನ ವಿದ್ಯಾರ್ಥಿಗಳು ಇವರ ಉಪನ್ಯಾಸ ಕೇಳಲು ಬರುತ್ತಿದ್ದರು.

೧೯೭೪ರ ನವೆಂಬರ್ ಒಂದರಂದು ಕಾಲೇಜಿನಲ್ಲಿ ರಾಜ್ಯೋತ್ಸವ ಕಾರ್ಯಕ್ರಮ. ಅಂದಿನ ಮುಖ್ಯ ಅತಿಥಿಗಳು ಬಿ.ಎಚ್.ಎಸ್. ಸಂಸ್ಥೆಯ ಅಂದಿನ ಕಾರ್ಯದರ್ಶಿಗಳೂ, ನಿವೃತ್ತ ಕನ್ನಡ ಪ್ರಾಧ್ಯಾಪಕರೂ ಆದ ಪ್ರೊ|| ಜಿ. ವೆಂಕಟಸುಬ್ಬಯ್ಯನವರು. ಆ ಕಾರ್ಯಕ್ರಮದಲ್ಲಿ ಪ್ರಾರ್ಥನಾಗೀತೆ ಹಾಡುವ ಹೊಣೆಗಾರಿಕೆ ನನ್ನದು. ಅಂದು ಕೂಡಲೂರು ಶಾಸನದ ಎರಡು ಪದ್ಯಗಳನ್ನು ನಾನು ಗಮಕವಾಚನ ಮಾಡಬೇಕಿತ್ತು. ಇದಕ್ಕೆ ಗುರುಗಳಾದ ಅನಂತಪದ್ಮನಾಭರಾಯರದೇ ತರಬೇತಿ. ನನಗೆ ವೇದಿಕೆ ಕಂಪನವಿದ್ದ ಕಾರಣ ಹಿಂಜರಿಯುತ್ತಿದ್ದೆ. "ಹೆದರ ಬೇಡ, ನೀನು ಚೆನ್ನಾಗಿ ಹಾಡುವೆ" ಎಂದು ಪ್ರೋತ್ಸಾಹಿಸಿ ಒಂದು ಹಾಳೆಯಲ್ಲಿ ಬರೆದು ನೋಡಿಕೊಂಡೇ ಹೇಳು ಪರವಾಗಿಲ್ಲ ಎಂದು ಹೇಳಿದರು. ಎಪಿಆರ್ ಪರಿಚಯದಿಂದ ನನ್ನಲ್ಲಿ ಮೂಡಿದ ಹವ್ಯಾಸವೆಂದರೆ ಸಾಹಿತ್ಯ ಕೃತಿಗಳನ್ನು ಸಂಗ್ರಹಿಸುವುದು; ಇದಕ್ಕೆ ಕಾರಣ ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಪರೀಕ್ಷೆಗಳನ್ನು ತೆಗೆದುಕೊಂಡು ಮುಂದೆ ಐಚ್ಛಿಕ ಕನ್ನಡ ವಿದ್ಯಾರ್ಥಿಯಾಗಿ ವ್ಯಾಸಂಗ ಮುಂದುವರೆಸಬೇಕೆಂಬ ಹಂಬಲ. ಅಂದು ಹೀಗೆ ಸಂಗ್ರಹಿಸಿದ ಪುಸ್ತಕಗಳಲ್ಲಿ ಒಂದಾದ ಕೇಶಿರಾಜನ ಶಬ್ದಮಣಿದರ್ಪಣ ಕೃತಿಯನ್ನು ನಡುಗುವ ಕೈಗೆ ಆಸರೆಯಾಗಿ ತಂದಿದ್ದೆ. ಕಾರ್ಯಕ್ರಮ ನನ್ನ ಪ್ರಾರ್ಥನಾ ಪದ್ಯದೊಂದಿಗೆ ಪ್ರಾರಂಭವಾಯಿತು. ಪ್ರೊ|| ಜಿ.ವಿ. ಅವರು ತಮ್ಮ ಅತಿಥಿ ಭಾಷಣದಲ್ಲಿ ಪದ್ಮನಾಭ ಈ ವಿದ್ಯಾರ್ಥಿ ಈಗಲೇ ಕಬ್ಬಿಣದ ಕಡಲೆ ಎನಿಸಿರುವ 'ಶಬ್ದಮಣಿದರ್ಪಣ' ಕೃತಿಯನ್ನು ಹಿಡಿದಿದ್ದಾನೆಂದರೆ ಮುಂದೆ ಕನ್ನಡದ ಉತ್ತಮ ವಿದ್ಯಾರ್ಥಿಯಾಗುತ್ತಾನೆ. ನೀನು ಇವನನ್ನು ತಯಾರು ಮಾಡಬೇಕೆಂದು ಹೇಳಿದರು. ಅಂದಿನಿಂದ ನನ್ನ ಮತ್ತು ಎಪಿಆರ್ ಅವರ ಗುರುಶಿಷ್ಯ ಬಾಂಧವ್ಯ ಖಚಿತರೂಪ ಪಡೆಯಿತು. ನೀನು ಇನ್ನು ಮುಂದೆ ಪ್ರತಿದಿನ ಸಂಜೆ ಕಾಲೇಜಿನ ಅವಧಿಯಲ್ಲಿ ಬಂದುಬಿಡು, ಬಿಡುವಿನ ಅವಧಿಯಲ್ಲಿ ನಿನಗೆ ಶಾಸ್ತ್ರ ವಿಷಯಗಳನ್ನು ತಿಳಿಸುತ್ತೇನೆ ಎಂದು ಹೇಳಿದರು.

ಸಂಜೆ ಕಾಲೇಜಿನ ಬಿಡುವಿನ ಅವಧಿಯಲ್ಲಿ ನನಗೆ ಕವಿರಾಜಮಾರ್ಗ, ಶಬ್ದಮಣಿದರ್ಪಣ, ಛಂದಸ್ಸು, ಭಾರತೀಯ ಕಾವ್ಯಮೀಮಾಂಸೆ ಮೊದಲಾದ ಶಾಸ್ತ್ರ ವಿಷಯಗಳನ್ನು ಬೋಧಿಸುವುದರ ಜೊತೆಗೆ ಕಾವ್ಯ ಭಾಗಗಳ ಬಗ್ಗೆಯೂ ಚರ್ಚಿಸುತ್ತಿದ್ದರು. ಇದರಿಂದಾಗಿ ನಾನು ಪದವಿ ವ್ಯಾಸಂಗಕ್ಕೆ ಸೇರುವ ಮೊದಲೇ ಶಾಸ್ತ್ರವಿಷಯಗಳ ಪರಿಚಯವಾಯಿತು. ತಾವು ಎಂ.ಎ. ತರಗತಿಗೆ ಸಿದ್ಧಪಡಿಸಿಕೊಂಡಿದ್ದ ಪ್ರಬಂಧಗಳನ್ನು ನನಗೆ ಕೊಟ್ಟು ಇವುಗಳನ್ನು ಚೆನ್ನಾಗಿ

ಅಭ್ಯಾಸ ಮಾಡು ಎಂದು ಮಾರ್ಗದರ್ಶನ ನೀಡಿದರು. ಹೀಗೆ ಇವರಿಂದ ಪ್ರಭಾವಿತನಾದ ನಾನು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಎಂ.ಎ. ಪದವಿ ಪಡೆದು ಗುರುಗಳಿಗೆ ತಿಳಿಸಿದಾಗ ವಿಜಯ ಪದವಿಪೂರ್ವ ಕಾಲೇಜಿನಲ್ಲಿ ಖಾಲಿಯಿದ್ದ ಅರೆಕಾಲಿಕ ಉಪನ್ಯಾಸಕ ಹುದ್ದೆ ನೀಡಿದ್ದಲ್ಲದೆ, ಸಂಜೆ ಕಾಲೇಜಿನಲ್ಲೂ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಿಕೊಟ್ಟರು.

ಕಾವ್ಯಾರಾಧನ ಎಂಬ ಕನ್ನಡ ಸಂಘವನ್ನು ಸ್ಥಾಪಿಸಿ ಅದರ ಮುಖಾಂತರ ಕನ್ನಡ ವಿದ್ಯಾರ್ಥಿಗಳಿಗೆ ಉಚಿತ ತರಗತಿಗಳನ್ನು ನಡೆಸಿದ್ದಲ್ಲದೆ ನನ್ನನ್ನು ಶಿಕ್ಷಕನನ್ನಾಗಿ ತೆಗೆದುಕೊಂಡು ಪಾಠ ಮಾಡುವ ರೀತಿಯನ್ನು ರೂಢಿಸಿಕೊಟ್ಟರು. ನಾನು ಚಾಮರಾಜಪೇಟೆ ಪದವಿಪೂರ್ವ ಕಾಲೇಜಿನಲ್ಲಿ ಪೂರ್ಣಾವಧಿ ಉಪನ್ಯಾಸಕನಾಗುವ ವರೆಗೂ ಮಾರ್ಗದರ್ಶನ ನೀಡಿ ಇಂದಿಗೂ ಎಲ್ಲರಿಗೂ ನನ್ನ ನೆಚ್ಚಿನ ಶಿಷ್ಯ ಎಂದು ಪರಿಚಯಿಸುವ ಎಪಿಆರ್ ಅವರನ್ನು ಗುರುಗಳಾಗಿ ಪಡೆದ ನಾನೇ ಧನ್ಯ.

❖

# ಸಕಲ ಜನಪ್ರಿಯ ಗುರು

## (ಎನ್. ಅನಂತರಂಗಾಚಾರ್)

● *ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರೀ*

೧೯೪೮ರ ಮಧ್ಯಭಾಗದಲ್ಲಿ ಕಾಲೇಜು ವಿದ್ಯಾಭ್ಯಾಸಕ್ಕೆ ಎಂದು ನಾನು ಮೈಸೂರು ನಗರಕ್ಕೆ ಬಂದೆ. ಹಳ್ಳದ ಕೇರಿಯಲ್ಲಿದ್ದ ಬಂಧುಗಳ ಮನೆಯಲ್ಲಿ ಬಿಡಾರಮಾಡಿ ಇಂಟರ್‌ಮೀಡಿಯೆಟ್ ತರಗತಿಗೆ ವಿಶ್ವವಿದ್ಯಾನಿಲಯದ ಫಸ್ಟ್ ಗ್ರೇಡ್ ಕಾಲೇಜು (ಈಗ ಯುವರಾಜ ಕಾಲೇಜು) ಸೇರಿದೆ. ಆಗ್ಗೆ ಅಲ್ಲಿದ್ದ ಕನ್ನಡ ಅಧ್ಯಾಪಕರಲ್ಲಿ ಎನ್. ಅಂತರಂಗಾಚಾರ್ಯರೇ ಹಿರಿಯರು. ಅವರು ನಮಗೆ ಕಲಿಸುತ್ತಿದ್ದ ಪಠ್ಯ ಡಿ. ಎಲ್. ನರಸಿಂಹಚಾರ್ಯರು ಸಂಪಾದಿಸಿದ್ದ 'ಪಂಪರಾಮಾಯಣ ಸಂಗ್ರಹ'. ಅವರ ಪಾಠದ ವಿಚಾರವಿರಲಿ, ಅವರ ದೇಹಸೌಷ್ಠವ, ವರ್ಚಸ್ಸು, ಉತ್ಸಾಹಗುಣ ಬಹುಬೇಗ ನಮ್ಮನ್ನು ಅವರತ್ತ ಸೆಳೆದುಕೊಂಡುವು. ಅವರ ಸ್ಮಿತಪೂರ್ವಭಾಷಿತ್ವ, ಮುಖಪ್ರಸನ್ನತೆ, ಧ್ವನಿಗಾಂಭೀರ್ಯ ನಮಗೆ ಮೋಹಕವಾಗಿ ಕಂಡುವು.

ಆಚಾರ್ಯರ ಪಾಠಕ್ರಮ ವಿಶಿಷ್ಟವಾದುದು. ನನಗೆ ತಿಳಿದಂತೆ ಅವರು ಅಂತಹ ಪೂರ್ವ ಸಿದ್ಧತೆಯನ್ನೇನೂ ಮಾಡಿಕೊಂಡು ತರಗತಿಗೆ ಬರುತ್ತಿರಲಿಲ್ಲ. ಆ ಮೊದಲು ಈ ಪಠ್ಯವನ್ನು ಹಲವು ವರ್ಷ ವಿದ್ಯಾರ್ಥಿಗಳಿಗೆ ಅವರು ಕಲಿಸಿದ್ದಿರಬೇಕು. ಹೀಗಾಗಿ ಪೂರ್ವಸಿದ್ಧತೆ ಬೇಕಾಗುತ್ತಿರಲಿಲ್ಲವೇನೋ. ಕೆಲವೊಮ್ಮೆ ವಿದ್ಯಾರ್ಥಿಗಳಿಂದಲೇ ಪಠ್ಯಪುಸ್ತಕವನ್ನು ಕೇಳಿ ಪಡೆದುಕೊಂಡು ಪಾಠಮಾಡುತ್ತಿದ್ದರು. ಅವರು ಗಹನ ಗಂಭೀರವಾದ ವಿಚಾರವಿಮರ್ಶೆಗಳಿಂದ ಎಂದೂ ಪಾಠಕ್ಕಾಗಿ ತಲೆಬಿಸಿ ಮಾಡಿಕೊಂಡವರಲ್ಲ; ವಿದ್ಯಾರ್ಥಿಗಳಿಗೂ ತಲೆಬಿಸಿ ಮಾಡಿದವರಲ್ಲ. ಪಾಠದಲ್ಲಿ ಸರಳತೆ ನಿರರ್ಗಳತೆಗಳು ಎದ್ದುಕಾಣುವ ಲಕ್ಷಣಗಳಾಗಿದ್ದುವು. ಪಾಠದ ಮುಖ್ಯ ಆಕರ್ಷಣೆಯೆಂದರೆ, ಪದ್ಯಗಳನ್ನು ವಾಚಿಸುತ್ತಿದ್ದ ಧಾಟಿ. ಸರಾಗವಾಚನದಿಂದ ಈ ಪದ್ಯಗಳು ವಿದ್ಯಾರ್ಥಿಗಳಿಗೆ ಸುಖಕರವಾದ ಅನುಭವ ಕೊಡುತ್ತಿದ್ದವು. ಇದು ಅವರೇ ಒಮ್ಮೆ ನನಗೆ ಹೇಳಿದಂತೆ, ಅವರ ಗುರುಗಳಾಗಿದ್ದ ಕಾನಕಾನಹಳ್ಳಿ ವರದಾಚಾರ್ಯರ ಪಾಠಪದ್ಧತಿ.

ಆಚಾರ್ಯರ ಪಾಠಕ್ರಮ, ಹಳಗನ್ನಡ ಭಾಷೆಯ ನಾದಮಾಧುರ್ಯ ಗಾಂಭೀರ್ಯಗಳು ನಾನು ಮುಂದೆ ಕನ್ನಡವನ್ನು ವಿಶೇಷವಾಗಿ ಕಲಿಯುವುದಕ್ಕೆ ನನಗೆ ಪ್ರಬಲವಾಗಿ ಪ್ರೇರಣೆ ನೀಡಿದುವು. ನನ್ನ ಹೈಸ್ಕೂಲು ಕನ್ನಡ ಅಧ್ಯಾಪಕರೂ ನನ್ನ ಕನ್ನಡ ಪ್ರೀತಿಗೆ ತಕ್ಕ ಅಡಿಪಾಯ ಹಾಕಿದ್ದರು. ಒಮ್ಮೆ ಆಚಾರ್ಯರು ಫಸ್ಟ್‌ಗ್ರೇಡ್ ಕಾಲೇಜು ಮೆಟ್ಟಿಲು ಹತ್ತಿ ಮೇಲೆ ಹೋಗುತ್ತಿರುವಾಗ, ನಾನು ನೇರವಾಗಿ ಅವರನ್ನು ಕೇಳಿದೆ: "ಸರ್, ಕನ್ನಡ ಬಿ.ಎ. ಆನರ್ಸ್ ಸೇರಬೇಕಾದರೆ ನಾನು

ಏನು ಮಾಡಬೇಕು" ಅವರು ತಕ್ಷಣವೇ ಹಸನ್ಮುಖರಾಗಿ, "ನೂರಕ್ಕೆ ಐವತ್ತರ ಮೇಲೆ ಅಂಕಗಳು ಬರಬೇಕು" ಎಂದರು.

ಕನಸು ನನಸಾಯಿತು. ನಾನು ಕನ್ನಡ ಬಿ.ಎ. ಆನರ್ಸ್ ವಿದ್ಯಾರ್ಥಿಯಾದೆ. ಕುವೆಂಪು ಅವರು ಸೇರಿದಂತೆ ಇಲ್ಲಿ ದೊಡ್ಡ ದೊಡ್ಡ ಅಧ್ಯಾಪಕರು ಪಾಠ ಹೇಳುತ್ತಿದ್ದರು. ಆ ವರ್ಷ (೧೯೫೦) ಅನಂತರಂಗಾಚಾರ್ಯರು ನಮಗೆ 'ಶಬ್ದಮಣಿದರ್ಪಣ'ದ ಪಾಠ ತೆಗೆದುಕೊಂಡರು. ಅವರು ಈ ವ್ಯಾಕರಣ ಪಾಠ ಮಾಡುತ್ತಿದ್ದುದು ೧೦–೧೫ ನಿಮಿಷವಷ್ಟೆ; ಅದೂ ಇನ್ನೇನು ತರಗತಿ ಮುಗಿಯುವ ವೇಳೆ ಬಂದಿದೆ ಎನ್ನುವಾಗ. ಇದು ಅವರಿಗೆ ಇಷ್ಟವಾದ ವಿಷಯ ವಾಗಿದ್ದಂತೆ ತೋರದು. ಆ ಮೊದಲು ಅವರು ವಿದ್ಯಾರ್ಥಿಗಳ ಲೋಕಾನುಭವಕ್ಕೆ ಬೇಕಾಗುವ ಏನೇನೋ ವಿಷಯಗಳನ್ನು ಒಂದೇ ಸಮನೆ ಹೇಳುತ್ತಿದ್ದರು. ಈ ವಿಷಯಗಳು ದಶಕಗಳ ಹಿಂದಿನ ಕನ್ನಡ ಜನದ ಬದುಕು ಬವಣೆಗಳಿಗೆ, ಆಚಾರ ವಿಚಾರಗಳಿಗೆ ಸಂಬಂಧಿಸಿ ಇರುತ್ತಿದ್ದವು. ಈ ವಿಷಯಗಳೇ ಪುಸ್ತಕ ಪಾಠಕ್ಕಿಂತ ಮುಖ್ಯವೆಂದು ಅವರು ಭಾವಿಸಿದ್ದರೆಂದು ತೋರುತ್ತದೆ. ಎಷ್ಟೋ ವೇಳೆ, "ನಾವು ಬದುಕುತ್ತಿರುವ ಕಾಲ ಬರಡುಗಾಲ, ನಾವು ಒಳ್ಳೆಯವು ಸವಿಯಾದವು ಎನ್ನುವುದನ್ನು ಕಾಣದ ನತದೃಷ್ಟರು" ಎನ್ನುವ ಹಾಗೆ ಅವರ ನಿರೂಪಣೆಯಿರುತ್ತಿದ್ದಿತು. "ಮಕ್ಕಳುಣ್ಣುವ ಕಾಲಕ್ಕೆ ಬರ ಬಂತು" ಎನ್ನುವ ಮಾತನ್ನು ನಾನು ಮೊದಲು ಅವರ ಬಾಯಲ್ಲೇ ಕೇಳಿದ್ದು. ಯಾವಾಗಲೂ ಉಲ್ಲಾಸ ಉತ್ಸಾಹ ಅವರ ಮುಖಭಾವದಲ್ಲಿ ಚಿಮ್ಮುತ್ತಿದ್ದುವು. ಬಿರುಗಾಳಿಯಂತೆ ತರಗತಿಯೊಳಗೆ ನುಗ್ಗಿಬಂದು, ವಿಲಕ್ಷಣವಾದ ಋಜುಭಂಗಿ ಯಲ್ಲಿ ನಿಂತು ಅವರು ಪಾಠವನ್ನು ಆರಂಭಿಸುವುದು ನಮಗೆ ಮೋಹಕವಾಗಿ ಕಾಣುತ್ತಿತ್ತು. ಒಂದು ಗತ್ತಿನಲ್ಲಿ ಪಠ್ಯಪುಸ್ತಕವನ್ನು ಬಲಗೈಯಿಂದ ಎದೆಗವಚಿ ಹಿಡಿಯುವಲ್ಲಿಯ ಸೊಗಸು ಗಾಂಭೀರ್ಯಗಳನ್ನು ಕಾಣಬಹುದಾಗಿತ್ತು.

ವಿದ್ಯಾರ್ಥಿಗಳನ್ನು ಪ್ರೇಕ್ಷಣೀಯ ಸ್ಥಳಗಳಿಗೆ ಕರೆದೊಯ್ಯುವುದರಲ್ಲಿ ಅವರಿಗೆ ತುಂಬ ಉತ್ಸಾಹ. ಒಂದು ದಿನದ ಪ್ರವಾಸದಲ್ಲಿ ಒಮ್ಮೆ ಸೋಮನಾಥಪುರ ತಲಕಾಡು ಶಿವನ ಸಮುದ್ರಗಳಿಗೆ ಅವರು ನಮ್ಮನ್ನೆಲ್ಲ ಕರೆದುಕೊಂಡು ಹೋಗಿದ್ದರ ನೆನಪು ನನಗೆ ಚೆನ್ನಾಗಿದೆ. ಅವರ ವಿದ್ಯಾರ್ಥಿಗಳೇ ಆಗಿದ್ದು, ನಮ್ಮ ಕಾಲಕ್ಕೆ ಅಧ್ಯಾಪಕರಾಗಿದ್ದ ಉ. ಕಾ. ಸುಬ್ಬರಾಯಾಚಾರ್ಯರು ಸಹ ಅಂದು ಜೊತೆಗಿದ್ದರು. ಆಚಾರ್ಯರು ತಾವೇ ಶಿಲ್ಪಗಳು ಶಾಸನಗಳು ಮುಂತಾದವುಗಳ ಐತಿಹಾಸಿಕ ವಿವರಗಳನ್ನು ಮಾರ್ಗದರ್ಶಕನಂತೆ ನಿರೂಪಿಸುತ್ತಿದ್ದರು. ಉ.ಕಾ.ಸು. ಅವರನ್ನು ಪಕ್ಕಕ್ಕೆ ಕರೆದು ನಿಲ್ಲಿಸಿಕೊಂಡು ಸೋಮನಾಥಪುರದ ಶಿಲ್ಪಗಳ ಬಗೆಗೆ ವಿವರವಾಗಿ ತಿಳಿಸಿದ್ದು ಸಹ ಕಣ್ಣಿಗೆ ಕಟ್ಟಿದಂತಿದೆ. ಇಂತಹ ಪ್ರವಾಸಗಳಲ್ಲಿ ಆಚಾರ್ಯರು ತಮ್ಮ ಮನೆಯಲ್ಲಿಯೇ ರುಚಿಕರವಾದ ಬಗೆಬಗೆಯ ತಿಂಡಿಗಳನ್ನೂ ಅನ್ನಗಳನ್ನೂ ಮಾಡಿಸಿಕೊಂಡು ಬರುತ್ತಿದ್ದರಲ್ಲದೆ, ತಾವೇ ನಿಂತು ವಿದ್ಯಾರ್ಥಿಗಳಿಗೆ ಉಪಚಾರಮಾಡುತ್ತ ಬಡಿಸುತ್ತಿದ್ದರು. ಸಂಪ್ರದಾಯಸ್ಥರಾದ ತಾವು ಮಾತ್ರ ಏನನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಅಥವಾ ಏನಾದರೂ ಹಣ್ಣು ತಿನ್ನುತ್ತಿದ್ದರೋ ಏನೋ! ನಮ್ಮ ಪ್ರವಾಸಕ್ಕೆ ತಲಾ ಆರೆಂಟು ರೂಪಾಯಿಗಳನ್ನು ವಿದ್ಯಾರ್ಥಿಗಳಿಂದ ವಸೂಲು ಮಾಡಿದ್ದರೆಂದು ತೋರುವುದು. ನಾನು ಆ ಹಣ ಕೊಡುವ ಸ್ಥಿತಿಯಲ್ಲಿರಲಿಲ್ಲ: "ಪರವಾ

ಇಲ್ಲ, ಬಾ" ಎಂದು ಶಿಷ್ಯವಾತ್ಸಲ್ಯ ತೋರಿಸಿದರು. ಆ ವಾತ್ಸಲ್ಯಪಥದಲ್ಲಿ ನಾನು ಮುಂದೆಯೂ ಉದ್ದಕ್ಕೆ ನಡೆದೆ.

ನಾನು ಕನ್ನಡ ಎಂ.ಎ. ತರಗತಿಗೆ ಸೇರಿದಾಗ (೧೯೫೩) ಆಚಾರ್ಯರು ನಮಗೆ ಯಾವ ಪಾಠವನ್ನೂ ತೆಗೆದುಕೊಳ್ಳಲಿಲ್ಲ. ಈ ವರ್ಷ ನಾನು ವಸತಿ ಊಟಗಳಿಗೆ ನನ್ನದೇ ಏರ್ಪಾಟು ಗಳನ್ನು ಮಾಡಿಕೊಳ್ಳಬೇಕಾಗಿ ಬಂತು. ಶಿಷ್ಯಸುಲಭರಾದ ಆಚಾರ್ಯರನ್ನು ವಾರಾನ್ನಕ್ಕೆ ಆಶ್ರಯಿಸಿದೆ. ನನ್ನ ಮನಸ್ಸಿಗೆ ಯಾವ ಕಿಂಕೃತಿಯೂ ಆಗದ ಹಾಗೆ ತಮ್ಮ ಹಾಗೂ ತಮ್ಮ ಒಬ್ಬ ಸೋದರರ ಮನೆಯಲ್ಲಿ ಎರಡು ದಿನಗಳ ಏರ್ಪಾಡು ಮಾಡಿಕೊಟ್ಟರು. ನಮ್ಮ ಇನ್ನೊಬ್ಬ ಗುರುಗಳಾದ ಕ. ವೆಂ. ರಾಘವಾಚಾರ್ಯರೂ ಒಂದು ದಿನಕ್ಕೆ ಅವಕಾಶ ಮಾಡಿಕೊಟ್ಟರು. ಬೇರೊಂದು ರೀತಿಯಲ್ಲಿ ತ. ಸು. ಶಾಮರಾಯರೂ ಎಸ್. ವಿ. ಪರಮೇಶ್ವರ ಭಟ್ಟರೂ ಸಹಾಯ ಮಾಡಿದರು. ಡಿ. ಎಲ್. ನರಸಿಂಹಾಚಾರ್ಯರ ಎದುರಿನಲ್ಲಿ ನಿಂತು ಅವರನ್ನು ಏನು ಕೇಳುವುದಕ್ಕೂ ನನಗೆ ಧೈರ್ಯವಾಗಲಿಲ್ಲ. ಆದರೆ ಮುಂದೆ ನಾನು ಎಂ.ಎ. ಮುಗಿಸಿದ ಮೇಲೆ ಅವರು ನನಗೆ ಮಿಗಿಲಾದ ನೈತಿಕ ಸ್ಥೈರ್ಯವನ್ನು ನೀಡಿದರು, ಅನೇಕ ವಿಧಗಳಲ್ಲಿ ಸಹಾಯವನ್ನೂ ಮಾಡಿದರು.

ಆಚಾರ್ಯರು ತಮ್ಮ ಜೊತೆಗೇ ನನ್ನನ್ನೂ ಊಟಕ್ಕೆ ಕೂರಿಸಿಕೊಳ್ಳುತ್ತಿದ್ದರು. ನಾನೂ ಅವರ ಮಕ್ಕಳೂ ಸಾಲಾಗಿ ಊಟಕ್ಕೆ ಕೂರುತ್ತಿದ್ದೆವು. ಅದರಲ್ಲಿ ಯಾವ ಪಂಕ್ತಿಭೇದದ ಮುಚ್ಚುಮರೆಯೂ ಇರುತ್ತಿರಲಿಲ್ಲ. ಗುರುಪತ್ನಿ ಮೊದಲಲ್ಲಿ ಅನ್ನ ತಂದು ಬಡಿಸುವಾಗ ನನಗೆ ಭಯವಾಗುತ್ತಿತ್ತು. ಅವರು ಒಂದು ಸಲ ಎಲೆಗೆ ಅನ್ನ ಬಡಿಸಿದರೆಂದರೆ, ಅದು ನನಗೆ ಮೂರು ಹೊತ್ತಿಗೆ ಸಾಕಾಗುವಷ್ಟು ಪ್ರಮಾಣದಲ್ಲಿರುತ್ತಿತ್ತು. ಆಚಾರ್ಯರು ತಾವು ಪರಿಷ್ಕಾರವಾಗಿ ಊಟ ಮಾಡುತ್ತಲೇ, ನನಗೆ ಹೀಗೆ ಹೀಗೆ ಊಟ ಮಾಡಬೇಕು, ವ್ಯಂಜನಗಳನ್ನು ಹೀಗೆ ಸವಿಯಬೇಕು ಎಂದು ತಿಳಿಯಹೇಳುತ್ತಿದ್ದರು. ನಾನು ಮಜ್ಜಿಗೆ ಮೊಸರು ಬಳಸುವುದಿಲ್ಲ ಎಂಬುದಕ್ಕೆ ಕನಿಕರ ಪಡುತ್ತಿದ್ದರು. ಅವರ ತಮ್ಮನ ಮನೆಯ ಊಟದಲ್ಲಿ ಸಾಮಾನ್ಯವಾಗಿ ಗೋರಿಕಾಯಿ ಬಾಳಕ ನನಗೆ ತುಂಬ ಇಷ್ಟವಾಗುತ್ತಿತ್ತು. ಮಜ್ಜಿಗೆ ಮೊಸರು ಬಳಸುತ್ತಿರಲಿಲ್ಲವಾದ್ದರಿಂದ ಎರಡು ಸಲ ಸಾರೋ ಹುಳಿಯೋ ಹಾಕಿಸಿಕೊಳ್ಳುತ್ತಿದ್ದೆ. ಒಂದೊಂದು ಸಲ ರಾತ್ರಿಯ ಊಟದಲ್ಲಿ ಅದು ತಕ್ಕ ಪ್ರಮಾಣದಲ್ಲಿ ಉಳಿಯದೆ, ಮನೆಯ ಯಜಮಾನಿತಿ 'ಮಜ್ಜಿಗೆ ಹಾಕಿಸಿಕೊಳ್ಳೀಪ್ಪ' ಎನ್ನುತ್ತಿದ್ದರು. ನನ್ನ ರೂಢಿ ತಿಳಿಯದೆ ಅಥವಾ ಮರೆತುಹೋಗಿ ಅವರು ಪೇಚಿಗೆ ಸಿಕ್ಕಿಕೊಳ್ಳುತ್ತಿದ್ದುದುಂಟು.

ಆಚಾರ್ಯರು ತಮ್ಮ ಮನೆಯ ಯಾವುದೇ ವಿಶೇಷ ಕಾರ್ಯಕ್ರಮದಲ್ಲಿಯೂ ಅದು ಸಾರ್ವತ್ರಿಕವಿರಲಿ ಖಾಸಗಿಯಿರಲಿ, ನನ್ನನ್ನು ಬರಮಾಡಿಕೊಳ್ಳುತ್ತಿದ್ದರು. ಸಾರ್ವತ್ರಿಕ ಎಂದರೆ ಗೋಕುಲಾಷ್ಟಮಿಯ ಕೃಷ್ಣಪ್ರಸಾದದ ಮಧುರವಾದ ಆಹ್ವಾನ. ಪುಳಿಯೋಗರೆಯೊಂದಿಗೆ ಹತ್ತಾರು ಸಿಹಿ ಖಾರದ ತಿಂಡಿಗಳನ್ನು ಕೇಳಿ ಕೇಳಿ ಆಚಾರ್ಯರೂ ಮನೆಯ ಮಕ್ಕಳೂ ಸಂಭ್ರಮದಿಂದ ಬಡಿಸುತ್ತಿದ್ದರು. ಶುಭ್ರ ಸಾಂಪ್ರದಾಯಿಕ ವೇಷಭೂಷಣಗಳಲ್ಲಿ ಆಚಾರ್ಯರು ತಾವು ನಿಂತೇ ಇದ್ದು ಅತಿಥಿಗಳನ್ನು ಉಪಚರಿಸುತ್ತಿದ್ದರು. ತಮಿಳು ಸಿಹಿಭಕ್ಷ್ಯವಾದ ತುಣಿತೇಂಗೊಳಲು ಎಂಬ ಅಪೂರ್ವವಾದ ಸಿಹಿಪದಾರ್ಥವನ್ನು ನಾನು ಮೊದಲ ಸಲ

ಕಂಡಿದ್ದೂ ಉಂಡಿದ್ದೂ ಇಲ್ಲಿಯೇ. ಎಷ್ಟು ಕಾಲದಿಂದ ಅವರ 'ನೃಸಿಂಹಪ್ರಾಸಾದ'ದಲ್ಲಿ ಈ ಸೇವೆ ನಡೆಯುತ್ತಿದ್ದಿತೋ ನನಗೆ ತಿಳಿಯದು. ನಾನು ಈ ಸಲುವಾಗಿ ಅವರ ಮನೆಗೆ ಹೋಗುವುದು ರೂಢಿಯಾದಾಗ ಎಸ್. ವಿ. ರಂಗಣ್ಣ, ಕೆ. ವೆಂಕಟರಾಮಪ್ಪ, ಎಚ್. ಎಂ. ಶಂಕರನಾರಾಯಣರಾವ್ ಮೊದಲಾದವರು ಅಲ್ಲಿ ಸೇರುತ್ತಿದ್ದುದನ್ನು ಕಂಡಿದ್ದೇನೆ. ಕನಿಷ್ಠ ಪಕ್ಷ ೨೦-೨೫ ಜನವಾದರೂ ಹೀಗೆ ಸೇರುತ್ತಿದ್ದರು. ಇನ್ನು ಖಾಸಗಿಯಾದುದು ಎಂದರೆ, ಮನೆಯ ಸಣ್ಣ ದೊಡ್ಡ ಧಾರ್ಮಿಕ ಕಾರ್ಯಕ್ರಮಗಳು, ಪೂಜೆ ಮೊದಲಾದುವು. ತಪ್ಪದೆ ಒಳ್ಳೆಯ ಊಟಕ್ಕೆ ಇವು ಆಹ್ವಾನಗಳಾಗಿರುತ್ತಿದ್ದುವು. ಇಂತಹ ಒಂದು ಸನ್ನಿವೇಶದಲ್ಲಿ ಅವರು 'ಕರ್ಣಾಟಕ ಕಾದಂಬರಿ'ಯ ನಾಂದೀಪದ್ಯವನ್ನು ರಾಗವಾಗಿ ವಾಚಿಸಿ, "ಎಲ್ಲಯ್ಯ, ಈಗ ನೀನು ಹೇಳು ನೋಡೋಣ" ಎಂದರು. ನಾನೇನೂ ಏಕಸಂಧಿಗ್ರಾಹಿಯಲ್ಲ, ದ್ವಿಸಂಧಿ ತ್ರಿಸಂಧಿಗ್ರಾಹಿಯೂ ಅಲ್ಲ. ನನಗೆ ಕಷ್ಟವಾಯಿತು. ನಡುನಡುವೆ ಸಾಲು ತಪ್ಪುತ್ತಿತ್ತು. ಪೂರ್ತಿ ಸರಿಯಾಗಿ ಹೇಳಿದ ಮೇಲೆಯೇ ನಾನು ಬಿಡುಗಡೆ ಪಡೆದದ್ದು. ಹೊರಡಲು ಹೊಸ್ತಿಲಾಚೆಗೆ ನಾನು ನಿಂತಿದ್ದಾಗ ನನಗೆ ಈ ಪರೀಕ್ಷೆಯನ್ನೊಡ್ಡಿದ್ದರು; ಅದೃಷ್ಟದಿಂದ ತೇರ್ಗಡೆಯಾದೆ.

ನಾನು ಮೈಸೂರು ಬಿಟ್ಟು ಬೇರೆ ಬೇರೆ ಕಡೆ ಅಧ್ಯಾಪಕವೃತ್ತಿ ನಡೆಸಿ ೧೯೬೮ರಲ್ಲಿ ಮೈಸೂರಿಗೆ ಮರಳಿ, ಮಾನಸಗಂಗೋತ್ರಿ ಸೇರಿದೆ. ನಾನು ವಿದ್ಯಾರ್ಥಿಯಾಗಿದ್ದಾಗ ಅವರ ಬರಹಗಳಲ್ಲಿ ಕೆಲವನ್ನು ನನಗೆ ಓದಿ ಹೇಳುತ್ತಿದ್ದರು, ನನ್ನಿಂದ ನಕಲು ಮಾಡಿಸುತ್ತಿದ್ದರು. ಮೈಸೂರಿನಲ್ಲಿ ಅಧ್ಯಾಪಕನಾದ ಮೇಲೆ ನಾನು 'ಪ್ರಬುದ್ಧ ಕರ್ಣಾಟಕ'ದ ಸಂಪಾದಕನಾಗಿದ್ದಾಗ ಅವರು ಬರೆದು ಕಳಿಸುತ್ತಿದ್ದ ಬರಹಗಳನ್ನು ಆದ್ಯತೆಯ ಮೇಲೆ ಅಚ್ಚಾಗುವಂತೆ ನೋಡಿಕೊಳ್ಳುತ್ತಿದ್ದೆ. ಅವರೂ ೧೯೪೪-೫೫ರ ನಡುವೆ ತ.ಸು. ಶಾಮರಾಯರೊಂದಿಗೆ ಪತ್ರಿಕೆಯ ಸಂಪಾದಕ ರಾಗಿದ್ದವರು. ಈ ಅವಧಿಯಲ್ಲಿ ಕೆಲವು ಸಂಚಿಕೆಗಳು ಕೃಶಗಾತ್ರದಲ್ಲಿರುತ್ತಿದ್ದುದು ನಿಜ; ಆದರೆ ಎಸ್. ವಿ. ಪರಮೇಶ್ವರ ಭಟ್ಟ, ಆರ್. ಎಲ್. ನರಸಿಂಹಯ್ಯ, ಕೆ. ಕೃಷ್ಣಮೂರ್ತಿ ಮೊದಲಾದವರ ಬರಹಗಳು ಧಾರಾವಾಹಿಗಳಾಗಿ ಬರುತ್ತ ಆಸಕ್ತರನ್ನು ಸೆಳೆಯುತ್ತಿದ್ದವು. ಅವರು ಸಂಪಾದಕ ರಾಗಿದ್ದಾಗ ನನ್ನ ಮೇಲೆ ಕೃಪೆ ತೋರಿ ಆಗ ನಾನು ಬರೆಯುತ್ತಿದ್ದ ವಚನ ಕವನಗಳಿಂದ ಒಂದು ವಚನವನ್ನು ಆಯ್ದು ಪ್ರ.ಕ.ದಲ್ಲಿ ಮುದ್ರಿಸಿದರು ('ಚಂದ್ರಿಕಾ', ೩೩-೩). ಆಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ಉಳಿದವು ಬೇರೊಂದು ಮಾಸಪತ್ರಿಕೆಯಲ್ಲಿ ಕ್ರಮವಾಗಿ ಪ್ರಕಟವಾಗುತ್ತಿದ್ದ ಕಾರಣ, ಅವರು ಅಪೇಕ್ಷಿಸಿದರೂ ನನಗೆ ಮತ್ತೆ ಕೊಡುವುದಾಗಲಿಲ್ಲ. ಈಗ ಆ ಎಲ್ಲ ಬರಹಗಳೂ ಆ ಮಾಸಪತ್ರಿಕೆಯಂತೆಯೇ ಪೂರ್ತಿ ನಷ್ಟವಾಗಿ ಹೋಗಿವೆ. ಈ ವಚನಕವನಗಳು ನನ್ನ ಹಳಗನ್ನಡ ಪ್ರೀತಿಯ ಮೊದಲ ತೊದಲುಗಳು (೧೯೫೨-೫೩).

ಆಚಾರ್ಯರು ೧೯೮೬ ಡಿಸೆಂಬರ್ ತಿಂಗಳಲ್ಲಿ ದೇಹಾಂತವನ್ನೈದುವ ವರೆಗೆ ನನಗೆ ಅವರ ಒಡನಾಟವಿರುತ್ತಿತ್ತು. ಅವರು ನನ್ನನ್ನು ಬಿಡುತ್ತಿರಲಿಲ್ಲ, ನಾನು ಅವರನ್ನು ಬಿಡುತ್ತಿರಲಿಲ್ಲ. ಆಗಿಂದಾಗ್ಗೆ ಅವರ ಮನೆಗೆ ಹೋಗಿ ಅವರೊಂದಿಗೆ, ಮನೆಯವರೊಂದಿಗೆ ಮಾತಾಡಿ ಬರುತ್ತಿದ್ದೆ; ಜೊತೆಗೆ ನನ್ನ ಪತ್ನಿಯನ್ನೂ ಕರೆದುಕೊಂಡು ಹೋಗುತ್ತಿದ್ದೆ. ಯೋಗಕ್ಷೇಮದ ಜೊತೆಗೆ ಏನಾದರೂ ಸಾಹಿತ್ಯವಿಷಯ ಚರ್ಚಿಸುತ್ತಿದ್ದರು, ತಾವು ಬರೆದುದನ್ನು ಓದಿ

ಹೇಳುತ್ತಿದ್ದರು, ಪರಿಷ್ಕರಿಸಿಕೊಡುವಂತೆ ಕೇಳುತ್ತಿದ್ದರು. ನಾನು ಹೋಗುವುದು ತಡವಾದರೆ ಕಾಗದ ಬರೆದು ಕರೆಸಿಕೊಳ್ಳುತ್ತಿದ್ದರು. ಕಾಗದ ಬರೆದರೂ ನಾನು ಹೋಗದ ಸಂದರ್ಭಗಳಿವೆ. ಹೀಗೊಂದು ಸಲ ತಡೆದು ಅವರನ್ನು ಭೇಟಿಯಾದಾಗ, ಅವರು ನೊಂದುಕೊಂಡು ಕಠಿಣವಾಗಿ ಮಾತಾಡಿದರು. ನನ್ನ ಮನಸ್ಸು ಅದನ್ನು ಅಪಮಾನವಾಗಿ ಭಾವಿಸಿತು. ಅವರು ಮಾತು ಮುಗಿಸಿದ ಮೇಲೆ, "ತಾವು ನನ್ನ ಗುರುಗಳು, ಆದ್ದರಿಂದ ಸಹಿಸಿಕೊಳ್ಳುತ್ತೇನೆ" ಎಂದುಬಿಟ್ಟೆ. ಆಮೇಲೆ ಅಂತಹ ಸಂದರ್ಭ ಬಾರದ ಹಾಗೆ ಎಚ್ಚರ ವಹಿಸಿದೆ. ಅವರ ಕಣ್ಣ ಮುಂದೆ ಬೆಳೆದವನು ನಾನು; ಅವರ ಮನೆಯ ಅನ್ನ ಉಂಡು ಬೆಳೆದವನು; ಹಾಗೆ ನಾನು ಮಾತಾಡ ಬಾರದಿತ್ತು ಎಂದು ಆಮೇಲೆ ತುಂಬ ಬೇಸರಪಟ್ಟೆ.

ಆಚಾರ್ಯರು ಕನ್ನಡ ಅಧ್ಯಯನ ಸಂಸ್ಥೆಗೆ ಆಗಾಗ ಬರುತ್ತಿದ್ದರು; ಆಗ ಅವರು ನನ್ನ ಕೋಣೆಗೂ ಬಂದು ಮಾತಾಡಿಸುತ್ತಿದ್ದರು. ಹೀಗೆ ಬಂದು ಹೋಗುವಾಗ ಸೈಕಲ್ ಮೇಲೆಯೇ ಬರುತ್ತಿದ್ದರು. ೭೦ ದಾಟಿದ ಮೇಲೆಯೂ ಇದು ನಡೆದಿತ್ತು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ ಸ್ಪರ್ಧೆಯಲ್ಲಿ ಒಂದು ಸಲ ಇಬ್ಬರಿಗೂ ಪ್ರಶಸ್ತಿ ಬಂತು. ಅವರಿಗಂತೂ ತುಂಬ ಸಂತೋಷವಾಯಿತು. ವಿದ್ಯಾರ್ಥಿಗಳನ್ನು ಅವರು ಉದ್ದೇಶಿಸಿ ಮಾತಾಡುವಾಗ ಸ್ವಾಮಿ (ಎಚ್. ತಿಪ್ಪೇರುದ್ರಸ್ವಾಮಿ), ಶಾಸ್ತ್ರಿ ಎಂದು ಹ್ರಸ್ವಗೊಳಿಸಿ ತಮ್ಮ ಆತ್ಮೀಯತೆಯನ್ನು ಪ್ರಕಟಿಸುತ್ತಿದ್ದರು.

ಆಚಾರ್ಯರು ತಮ್ಮ ಪೂರ್ವವಯಸ್ಸಿನಲ್ಲಿ ಚೆನ್ನಾಗಿ ವ್ಯಾಯಾಮ ಮಾಡುತ್ತಿದ್ದರು. ಕ್ರಮಬದ್ಧವಾಗಿ ಸಾಮು ಮಾಡಿ ತಮ್ಮ ದೇಹಾರೋಗ್ಯ ಕಾಪಾಡಿಕೊಂಡರು. ಅವರು ದಂಡೆ ಬಸ್ತಿ ತೆಗೆಯುತ್ತಿದ್ದರು, ಕರೇಲ ತಿರುಗಿಸುತ್ತಿದ್ದರು, ಕುಸ್ತಿ ಮಾಡುತ್ತಿದ್ದರು. ಕುಸ್ತಿಪಟುವಾಗಿ ಮೈಸೂರಿನ ಪೈಲ್ವಾನರೊಂದಿಗೆ ಕುಸ್ತಿ ಮಾಡಿದರೆಂದು ಸಹ ಬಲ್ಲವರಿಂದ ನಾನು ಕೇಳಿದ್ದೇನೆ. ಇತಿಹಾಸ ಪ್ರಾಧ್ಯಾಪಕ ಎಂ.ಎಚ್. ಕೃಷ್ಣ ಅವರನ್ನು ಅವರ ಮಧ್ಯವಯಸ್ಸಿನಲ್ಲಿಯೋ ಬಳಿಕವೋ ವ್ಯಾಯಾಮ ಮಾಡುವಂತೆ ತಾವು ಪ್ರೋತ್ಸಾಹಿಸಿದ್ದಾಗಿ ಒಮ್ಮೆ ನನಗೆ ತಿಳಿಸಿದರು. ಚಾಮುಂಡಿ ಬೆಟ್ಟದ ಮೆಟ್ಟಿಲು ಹತ್ತಿಳಿಯುವ ಸ್ಪರ್ಧೆಗಳಲ್ಲೂ ಅವರು ಇರುತ್ತಿದ್ದರು. ಈಗಲೂ ಅವರ ಮಕ್ಕಳು, ತಮ್ಮಂದಿರ ಮಕ್ಕಳು ಈ ವಿಷಯವನ್ನು ನೆನೆಯುತ್ತಾರೆ; ತಮಗೆ ದೊರೆತ ಮಾರ್ಗದರ್ಶನಕ್ಕೆ ಕೃತಜ್ಞತೆ ಸಲ್ಲಿಸುತ್ತಾರೆ.

ಮಧುಮೇಹ ತೀವ್ರಗೊಂಡ ಆಚಾರ್ಯರು ಕಾಲಿನ ವ್ರಣಕ್ಕೆ ಚಿಕಿತ್ಸೆಗೆ ಎಂದು ಕೆ. ಆರ್. ಆಸ್ಪತ್ರೆಗೆ ಸೇರುವಂತಾದಾಗ ನಾನು ಬಲುಮಟ್ಟಿಗೆ ನನ್ನ ಪತ್ನಿಯೊಂದಿಗೆ ಅವರನ್ನು ನೋಡಿಕೊಂಡು ಬರಲು ಹೋಗುತ್ತಿದ್ದೆ. ಅಲ್ಲಿ ಚಿಕಿತ್ಸೆ ಅವರಿಗೆ ತೃಪ್ತಿಕರವಾಗಿ ನಡೆದಂತೆ ತೋರಲಿಲ್ಲ. ಆ ವೇಳೆಗೆ ಅವರು ಬೇರೊಂದು ಖಾಸಗಿ ಆಸ್ಪತ್ರೆಯಲ್ಲಿಯೂ ಇದ್ದು ಬಂದಿದ್ದರು. ಆಗ್ಗೆ ಒಮ್ಮೆ ಹಾ. ಮಾ. ನಾಯಕರ ಅಪೇಕ್ಷೆಯಂತೆ ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದೆ. ಅಲ್ಲಿ ಆಚಾರ್ಯರ ಸ್ಥಿತಿ ಚಿಂತಾಜನಕವಾಗಿತ್ತು. ಆ ಸ್ಥಿತಿಯಲ್ಲಿಯೂ ಕನ್ನಡ ಎಂ.ಎ. ಮಾಡಿದ್ದ ತಮ್ಮ ಮಗಳಿಗಾಗಿ ಏನಾದರೂ ಉದ್ಯೋಗ ಸಾಧ್ಯವೇ ಎಂದು ಅವರನ್ನು ಪ್ರಶ್ನಿಸಿದ್ದು ನನ್ನ ನೆನಪಿನಲ್ಲಿದೆ. ಕೆ. ಆರ್. ಆಸ್ಪತ್ರೆಯ ಒಂದು ವಾರ್ಡಿನಲ್ಲಿದ್ದಾಗ ಅವರ ಮನೆಯವರೆಲ್ಲರೂ

ಅವರನ್ನು ತುಂಬ ಮುತುವರ್ಜಿಯಿಂದ ನೋಡಿಕೊಂಡರು. ಒಂದು ಸಲ ಅವರು ಅರೆಪ್ರಜ್ಞಾವಸ್ಥೆಯಲ್ಲಿ ಎನ್ನುವಂತೆ ಇದ್ದಾಗ ನಾನು ಅಲ್ಲಿದ್ದೆ. ಅವರ ದೊಡ್ಡಮಗಳು ವಿಷ್ಣುಸಹಸ್ರನಾಮವನ್ನು ಗಟ್ಟಿಯಾಗಿ ಹೇಳುತ್ತಿದ್ದರು. ಆಚಾರ್ಯರ ಮುಖದತ್ತ ನನ್ನ ಕಣ್ಣು ಹಾಯಿಸಿದೆ. ಅವರು ತಮ್ಮ ಹೊಲದ ಸೂರ್ಯಕಾಂತಿ ಬೆಳೆಯ ವಿಚಾರ ಕನವರಿಸುತ್ತಿದ್ದರು. ಕೃಷಿ ಅವರ ಬದುಕಿನ ಒಳತಳದ ನಚ್ಚಾಗಿತ್ತು.

ತಿರುಮಕೂಡಲು ನರಸೀಪುರದಲ್ಲಿ ಆಚಾರ್ಯರಿಗೆ ಪ್ರತ್ಯೇಕವಾಗಿ ಹಾಗೂ ಬಹುಶಃ ತಾವೇ ರೂಢಿಸಿದ ಹೊಲಗದ್ದೆಗಳಿದ್ದುವೆಂದು ಕಾಣುತ್ತದೆ. ಅವುಗಳಲ್ಲಿ ಒಬ್ಬ ಕೃಷಿಕರಾಗಿ ಬೆಳೆ ಬೆಳೆಯುವ ಹವ್ಯಾಸ ಅವರಿಗೆ ಎಂದಿನಿಂದಲೂ ಇತ್ತು. ಮನೆಯಲ್ಲಿ ಬತ್ತದ ಫಸಲು ಚೀಲಗಳಲ್ಲಿ ತುಂಬಿರುತ್ತ ಅವರು ಸುಭಿಕ್ಷದಲ್ಲಿದ್ದರೆನ್ನುವುದನ್ನು ಸಾರುತ್ತಿತ್ತು. ಇದರಿಂದಾಗಿ ಮನೆಯ ಸಂಸಾರ ದೊಡ್ಡದಾಗಿದ್ದರೂ ಅಲ್ಲಿ ನೆಮ್ಮದಿಗೆ ಯಾವ ಕೊರತೆಯೂ ಇರಲಿಲ್ಲ. ನನ್ನಂಥ ವಾರದ ಹುಡುಗರಿರಲಿ, ತಮ್ಮ ಬಳಗದ ಎಷ್ಟೋ ಜನ ವಿದ್ಯಾರ್ಥಿಗಳನ್ನು ಅವರು ತಮ್ಮ ಮನೆಯಲ್ಲಿ ವರ್ಷಗಟ್ಟಲೆ ಪೋಷಿಸುತ್ತಿದ್ದರು. ಹಾಗೆ ಪೋಷಣೆಗೊಂಡವರು, ತಮ್ಮ ಬದುಕಿನಲ್ಲಿ ಸುಸ್ಥಿತಿಯ ನೆಲೆಗೆ ಏರಿದಾಗ ಕೃತಜ್ಞತೆಯಿಂದ ಸ್ಮರಿಸುವುದನ್ನು ನಾನು ನೋಡಿದ್ದೇನೆ. ಸಂಸ್ಕೃತ ವಿದ್ವಾಂಸ ಎನ್. ಎಸ್. ಅನಂತರಂಗಾಚಾರ್ಯರು ತಾವು ಐದು ವರ್ಷ ಕಾಲ ಏಕಪ್ರಕಾರವಾಗಿ ಅವರ ಮನೆಯಲ್ಲಿದ್ದು ವಿದ್ಯಾಭ್ಯಾಸ ಮಾಡಿದ್ದಾಗಿ ಹೇಳುತ್ತಾರೆ. ಒಮ್ಮೆ ನನಗೆ ಗುರುಗಳು ಅಲ್ಲೇ ಇದ್ದ ಒಬ್ಬ ಕೂಲಿಯಾಳಿನ ಬಗ್ಗೆ ಹೀಗೆ ಒಂದು ಮಾತು ಹೇಳಿದರು: "ನೋಡಯ್ಯ, ಇವನು ಈಗ ಸೌದೆ ಒಡೆದು ಕೆಲಸ ಮುಗಿಸಿದ್ದಾನೆ. ಇವನಿಗೆ ನಾನು ಇಷ್ಟು ಕೂಲಿ ಕೊಡಬಹುದು; ಆದರೆ ಇವನಿಗೆ ಸಂತೋಷವಾಗುವುದಾದರೆ, ಅದು ನಾನು ಕರೆದು ಊಟ ಹಾಕಿದಾಗ ಮಾತ್ರ"; ಇದನ್ನು ನಾನು ಆಗಾಗ ನೆನೆಯುತ್ತಿರುತ್ತೇನೆ. ಆಚಾರ್ಯರು ಮಾಡಿರುವಷ್ಟು ಅನ್ನದಾನ ಬಂಧುಬಳಗದವರಲ್ಲಿ ಯಾರೂ ಮಾಡಿಲ್ಲವೆಂದು ಅವರಿಗೆ ಹತ್ತಿರದವರು ಈಗಲೂ ಹೇಳುತ್ತಿರುತ್ತಾರೆ.

ಆಚಾರ್ಯರ ದೇಹಸ್ಥಿತಿ ತೀರ ಕೆಟ್ಟು ಏನೂ ಸುಧಾರಣೆಯಿಲ್ಲ ಎನ್ನುವಂತಾದಾಗ ಕುಟುಂಬದವರು ಹೇಗಾದರಾಗಲಿ ಎಂದು ಅವರನ್ನು ಅದೇ ಸ್ಥಿತಿಯಲ್ಲಿ ಕೆ. ಆರ್. ಆಸ್ಪತ್ರೆಯಿಂದ ಮನೆಗೆ ಸಾಗಿಸಿ ತಂದರು. ಆದರೆ ನಮ್ಮೆಲ್ಲರ ಸುದೈವ; ಮನೆಗೆ ಬಂದ ಮೇಲೆ ಅದೇ ಆಸ್ಪತ್ರೆಯ ಬೇರೊಬ್ಬ ವೈದ್ಯರು ಮಾಡಿದ ಧೈರ್ಯದಿಂದ, ಆಚಾರ್ಯರ ಪಾದಭಾಗವನ್ನು ಕತ್ತರಿಸಿ ತೆಗೆದ ಮೇಲೆ ಅವರ ದೇಹಸ್ಥಿತಿ ಕ್ರಮಕ್ರಮವಾಗಿ ಸುಧಾರಿಸುತ್ತ ಬಂದಿತು. ಅಲ್ಲಿಂದಾಚೆಗೆ ಕೆಲವು ವರ್ಷಗಳು ಅವರು ಸಮಾಧಾನದಿಂದ ಬದುಕಿದರು. ತಮ್ಮ ಸಾಹಿತ್ಯಕ ಚಟುವಟಿಕೆಗಳನ್ನು ಬಿರುಸಿನಿಂದ ಮುಂದುವರಿಸಿದರು. ಓಡಾಟ ಮಾತ್ರ ನಿಂತಿತು. ಆಗಾಗ ಮನೆಗೆ ಹೋಗಿ ಮಾತಾಡಿಸಿ ಬರುತ್ತಿದ್ದೆ; ಅವರು ತೀರಿಕೊಂಡ ದಿವಸ ನಾನು ಊರಲ್ಲಿ ಇರಲಿಲ್ಲವಾದ್ದರಿಂದ, ಬಳಿಕ ವಿಷಯ ತಿಳಿದಾಗ ಮನಸ್ಸಿನಲ್ಲಿ ಏನೋ ಒಂದು ಬಗೆಯ ಶೂನ್ಯ ಆವರಿಸಿದ ಅನುಭವವಾಯಿತು.

ಅನಂತರಂಗಾಚಾರ್ಯರ ವ್ಯಕ್ತಿತ್ವ ಬಹುಮುಖವಾದುದು, ಬಹುವರ್ಣರಂಜಿತವಾದುದು. ಅವರು ತಮ್ಮನ್ನು ಅಧ್ಯಾಪಕರೆಂದು ತಿಳಿಯುತ್ತಿದ್ದ ಹಾಗೆಯೇ ಕೃಷೀವಲ, ಧಾರ್ಮಿಕ ಸಂಘ ಸಂಸ್ಥೆಗಳ ವ್ಯವಸ್ಥಾಪಕ, ಪುರೋಹಿತ ಎಂದು ಸಹ ತಿಳಿಯುತ್ತಿದ್ದರು. ಅಲ್ಲದೆ ನಟರೂ ನಿರ್ದೇಶಕರೂ ಆಗಿ ಬಿ.ಎಂ.ಶ್ರೀ. ಅವರ 'ಗದಾಯುದ್ಧ ನಾಟಕ'ವನ್ನು ಆಡಿದ್ದೂ ಆಡಿಸಿದ್ದೂ ಅದರಲ್ಲಿ ಪಾತ್ರಧಾರಿಯೂ ನೆನಪುಗಾರನೂ ಆಗಿ ಭಾಗವಸಿದ್ದ ನನಗೆ ಒಂದು ಮರೆಯಲಾಗದ ಅನುಭವ (೧೯೫೧-೫೨). ಈ ನಾಟಕದಲ್ಲಿ ಆಚಾರ್ಯರು ದುರ್ಯೋಧನನಾಗಿ, ಎಚ್.ಎಸ್. ಬಿಳಿಗಿರಿ ಭೀಮಸೇನನಾಗಿ, ಎಚ್.ಎಂ. ಶಂಕರನಾರಾಯಣರಾಯರು ಸಂಜಯನಾಗಿ, ಕೆ.ವಿ. ಸುಬ್ಬಣ್ಣ ದ್ರೌಪದಿಯಾಗಿ, ಜಿ. ರುದ್ರಯ್ಯ ಧೃತರಾಷ್ಟ್ರನಾಗಿ, ಆಚಾರ್ಯರ ದೊಡ್ಡ ಮಗ ನರಸಿಂಹಾಚಾರ್ ಕೃಷ್ಣನಾಗಿ ಮುಖ್ಯಪಾತ್ರಗಳಲ್ಲಿದ್ದರು. ನಾನು ಭೀಷ್ಮನ ಪಾತ್ರದ ಮಾತುಗಳನ್ನು ಒಪ್ಪಿಸುವವನಾಗಿದ್ದೆ; ಆದರೆ ಹೆಚ್ಚುಕಾಲ ನೆನಪುಗಾರನಾಗಿ ತೆರೆಯ ಮರೆಯಲ್ಲೇ ಇರಬೇಕಾಗಿತ್ತಾದ ಕಾರಣ, ನಾಟಕವನ್ನು ಸರಿಯಾಗಿ ನೋಡಲು ನನಗೆ ಅವಕಾಶವೇ ಆಗಲಿಲ್ಲ. ಈಗಿನ ಮೈಸೂರು ಮೆಡಿಕಲ್ ಕಾಲೇಜು ಆ ಕಾಲಕ್ಕೆ ವಸ್ತುಪ್ರದರ್ಶನದ ಅಂಗಳವಾಗಿತ್ತು. ಅಲ್ಲಿ ನಾಟಕ ತುಂಬಿದ ಸಭೆಯ ಮುಂದೆ ಪ್ರದರ್ಶಿತವಾಯಿತು. ಉದ್ದಕ್ಕೆ ನಾಟಕದಲ್ಲಿ ಆಚಾರ್ಯರೂ ಬಿಳಿಗಿರಿಯವರೂ ವಿಜೃಂಭಿಸಿದರು. ಹೀಗೆಯೆ ಆಚಾರ್ಯರು ಬಿ.ಎಂ.ಶ್ರೀಯವರ 'ಅಶ್ವತ್ಥಾಮನ್', 'ಪಾರಸಿಕರು', ನಾಟಕಗಳಲ್ಲಿ ಕೂಡ ಅಭಿನಯಿಸಿದ್ದರೆಂದು ಕೇಳಿದ್ದೇನೆ. 'ಅಶ್ವತ್ಥಾಮನ್' ನಾಟಕದ ಸಾಲುಗಳು ಅವರಿಗೆ ಹೃದ್ಗತವಾಗಿದ್ದುದನ್ನು ನಾನು ಬಲ್ಲೆ. ಯಾವುದೇ ನಾಟಕವಿರಲಿ, ಅವರು ಅದನ್ನು ಉತ್ಸಾಹದಿಂದ ನಿರ್ದೇಶಿಸುತ್ತಿದ್ದರು. ಪಾತ್ರಧಾರಿಗಳಿಗೆಲ್ಲ ಸ್ವಂತ ಖರ್ಚಿನಲ್ಲಿ ಧಾರಾಳವಾಗಿ ತಿಂಡಿ ತೀರ್ಥಗಳನ್ನು ಕೊಡಿಸುತ್ತಿದ್ದರು. ಮಸಾಲೆದೋಸೆಯಂತೂ ತಪ್ಪದೆ ಇರುತ್ತಿತ್ತು!

ಧಾರ್ಮಿಕ ಸಂಘಟನೆಗಳಲ್ಲಿ ಆಚಾರ್ಯರು ಮುಖ್ಯಸ್ಥರಾಗಿ ಭಾಗವಹಿಸುತ್ತಿದ್ದರು. ಅವರು ವೃತ್ತಿಯಿಂದ ಲೌಕಿಕರಾಗಿದ್ದರೂ ಪ್ರವೃತ್ತಿಯಿಂದ ವೈದಿಕರಾಗಿದ್ದರು. ಒಳ್ಳೆಯ ಸಂಪ್ರದಾಯ ಶಿಕ್ಷಣವನ್ನು ಪಡೆದುಕೊಂಡಿದ್ದರು. ವೇದಘೋಷ, ತಮಿಳು ಪ್ರಬಂಧಗಳು ಎರಡೂ ಅವರಿಗೆ ಬಹು ಪ್ರಿಯವಾಗಿದ್ದವು. ಉಚ್ಚಕಂಠದಲ್ಲಿ ಅವನ್ನು ಮನೆಯ ಸಮಾರಂಭಗಳಲ್ಲಿಯೂ ದೇವಾಲಯದ ಸೇವೆಗಳಲ್ಲಿಯೂ ಮೊಳಗಿಸುತ್ತಿದ್ದರು. ಆಚಾರ್ಯರ ಆರಾಧ್ಯ ದೇವತೆ ಟಿ. ನರಸೀಪುರದ ಗುಂಜಾ ನರಸಿಂಹಸ್ವಾಮಿ. ಆ ದೈವದ ಸೇವೆಯಲ್ಲಿ ಅವರು ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು; ದೇಗುಲದ ಸುಸ್ಥಿತಿಗಾಗಿ ಒಂದಲ್ಲ ಒಂದು ಪ್ರಯತ್ನವನ್ನು ನಡೆಸುತ್ತಲೇ ಇದ್ದರು. ದೇವಾಲಯಕ್ಕೆ ವಿದ್ಯುದ್ದೀಪಗಳ ವ್ಯವಸ್ಥೆ, ಹೊಸ ರಥದ ನಿರ್ಮಾಣ, ಬ್ರಾಹ್ಮಣಸಂತರ್ಪಣೆ ಇತ್ಯಾದಿಗಳಲ್ಲಿ ಅವರು ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದರು. ತಮ್ಮ ವಿದ್ಯಾರ್ಥಿಯಾಗಿದ್ದ ಕರ್ನಾಟಕದ ಮಾಜಿ ಮುಖ್ಯಮಂತ್ರಿ ದಿವಂಗತ ದೇವರಾಜ ಅರಸು ಅವರನ್ನು ಕಂಡು ದೇವಸ್ಥಾನದ ಹೊಸ ರಥಕ್ಕೆ ಐವತ್ತು ಸಾವಿರ ರೂಪಾಯಿಗಳ ಸಹಾಯದ್ರವ್ಯವನ್ನು ತಾವು ಪಡೆದುಕೊಂಡುದಾಗಿ ಒಮ್ಮೆ ಅವರೇ ನನಗೆ ತಿಳಿಸಿದರು.

ತಮ್ಮ ಮನೆಯ ಹತ್ತಿರದ ಶ್ರೀವೈಷ್ಣವ ಸಭಾ ಸಂಸ್ಥೆಯನ್ನೂ ಭವನವನ್ನೂ ಆರ್ಥಿಕವಾಗಿ

ಸುಭದ್ರಗೊಳಿಸಲು ತಮ್ಮ ಕುಟುಂಬದವರ ಸಹಕಾರದೊಂದಿಗೆ ವಹಿಸಿದ ಶ್ರಮವೂ ಮಾಡಿದ ತ್ಯಾಗವೂ ಸ್ಮರಣಾರ್ಹವಾದುದು. ಈ ಸಭಾ ಭವನದಲ್ಲಿಯೇ ಅವರ ಮನೆಯ ಕೆಲವು ಶುಭಸಮಾರಂಭಗಳು ಜರುಗುತ್ತಿದ್ದುದನ್ನು ನಾನು ಬಲ್ಲೆ. ಬಹುಶಃ ಆಚಾರ್ಯರ ೮೦ನೆಯ ಜನ್ಮದಿನವೂ ಇಲ್ಲಿಯೇ ನಡೆದು, ನಾನು ಅದರಲ್ಲಿ ಭಾಗವಹಿಸಿದ್ದೆ. ಈ ಸಮಾರಂಭಕ್ಕೆ ಬೆಂಗಳೂರಿನಿಂದ ಆಚಾರ್ಯರ ಸನ್ಮಿತ್ರರಾದ ಎಂ. ವಿ. ಸೀತಾರಾಮಯ್ಯನವರು ಬಂದಿದ್ದರು; ಆಚಾರ್ಯರಿಗೆ ನಮಸ್ಕಾರಪೂರ್ವಕವಾಗಿ ಪಂಚೆ ಶಲ್ಯಗಳ ಉಡುಗೊರೆ ನೀಡಿದರು. ಆಚಾರ್ಯರ ಸ್ವಂತ ಪುಸ್ತಕ ಭಂಡಾರದ ಅನೇಕ ವಿದ್ವತ್‌ಪತ್ರಿಕೆಗಳೂ ಪುಸ್ತಕಗಳೂ ಎಂ.ವಿ.ಸೀ. ಸ್ಥಾಪಿಸಿದ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಪುಸ್ತಕ ಭಂಡಾರವನ್ನು ಸೇರಲು ಅವರಿಬ್ಬರ ನಡುವಣ ಈ ಮೈತ್ರಿಯೇ ಕಾರಣ. ಇಬ್ಬರೂ ಇದ್ದಾಗಲೇ ಈ ಕೆಲಸ ನಡೆಯಿತೆಂದು ಕೇಳಿದ್ದೇನೆ.

ಶ್ರೀವೈಷ್ಣವ ಸಾಹಿತ್ಯದ ಪ್ರಕಟಣೆ ಪ್ರಸಾರಗಳಿಗಾಗಿ ಆಚಾರ್ಯರು ತುಂಬ ಶ್ರಮ ವಹಿಸಿದರು. ವೇದಾಂತ ದೇಶಿಕರ ಜೀವನ ಸಾಹಿತ್ಯಗಳ ಪ್ರಸಾರ ಅವರಿಗೆ ತುಂಬ ಆಪ್ತವಾದ ವಿಷಯವಾಗಿತ್ತು; ಹಾಗೆಯೇ ಆಳ್ವಾರರ ಜೀವನ ಸಂದೇಶ ಸಾಹಿತ್ಯಗಳು ಕೂಡ. ಶ್ರೀವೈಷ್ಣವ ಸಮುದಾಯದ ಹಿರಿಯರಲ್ಲಿ, ತಮ್ಮ ಕಾಲದವರಲ್ಲಿ, ಅವರು ಒಬ್ಬ ನೇತಾರರಂತೆ ಇದ್ದರು. ಮಠಗಳಲ್ಲಿ ಮಾನ್ಯತೆಯನ್ನು ಸಂಪಾದಿಸಿದ್ದರು. ವೈದಿಕವಿದ್ಯೆಯನ್ನು ರೂಢಿಸಿಕೊಂಡು, ಅಪೇಕ್ಷಿಸಿದ ಗೃಹಸ್ಥರ ಮನೆಗಳಲ್ಲಿಯೂ ತಮ್ಮ ಬಳಗದವರ ಮನೆಗಳಲ್ಲಿಯೂ ಪೌರೋಹಿತ್ಯವನ್ನು ವಹಿಸುತ್ತಿದ್ದರು; ಕಲಾಪಗಳಲ್ಲಿ ಏನಾದರೂ ಶಾಸ್ತ್ರೀಯ ಸಮಸ್ಯೆಗಳು ತಲೆದೋರಿದರೆ ಪರಿಹರಿಸುತ್ತಲೂ ಇದ್ದರು.

ಇದು ಒಂದು ಮುಖವಾದರೆ, ಇನ್ನೊಂದು ಲೌಕಿಕ ವಿದ್ಯಮಾನಗಳಿಗೆ ಸಂಬಂಧಿಸಿದ್ದು. ವಯಸ್ಕ ಅಕ್ಷರಸ್ಥರಿಗಾಗಿ ನೂರಾರು ಗ್ರಾಮಪುಸ್ತಕ ಭಂಡಾರಗಳನ್ನು ಏರ್ಪಡಿಸಿದ್ದರು; ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಗಳಲ್ಲಿ ಭಾಗವಹಿಸಿದರು; ಉತ್ತಮ ವಾಗ್ಮಿಗಳಾಗಿದ್ದು ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿಯೂ ಉಪನ್ಯಾಸಗಳನ್ನು ನೀಡಿದರು. ತಮ್ಮ ಬೋಧನೆಯ ಮೂಲಕವೂ ಪ್ರೋತ್ಸಾಹದ ಮೂಲಕವೂ ಕನ್ನಡ ಭಾಷೆ ಸಾಹಿತ್ಯಗಳಲ್ಲಿ ವಿದ್ಯಾರ್ಥಿಗಳಿಗೆ ಆಸಕ್ತಿ ಹುಟ್ಟುವಂತೆ ಮಾಡಿದರು; ಪ್ರವಾಸಗಳ ಮೂಲಕ ಕರ್ನಾಟಕದ ಸಾಂಸ್ಕೃತಿಕ ನೆಲೆಗಳನ್ನು ಅವರಿಗೆ ಪರಿಚಯಿಸಿದರು.

ಆಚಾರ್ಯರ ಗುರುವರ್ಗ ತುಂಬ ಮಾನ್ಯವಾಗಿದ್ದು, ಬಿ.ಎಂ.ಶ್ರೀ. ಅವರು, ವೆಂಕಣ್ಣಯ್ಯನವರು, ಕೃಷ್ಣಶಾಸ್ತ್ರಿಗಳು, ಕಾನಕಾನಹಳ್ಳಿ ವರದಾಚಾರ್ಯರು, ಎಸ್.ವಿ. ರಂಗಣ್ಣನವರು, ರಾಳ್ಳಪಲ್ಲಿ ಅನಂತಕೃಷ್ಣ ಶರ್ಮರು ಇವರೆಲ್ಲ ಅವರ ಗುರುವರ್ಗಕ್ಕೆ ಸೇರಿದವರು. ಕನ್ನಡ ಎಂ.ಎ. ಮೊದಲ ತಂಡದ ವಿದ್ಯಾರ್ಥಿಯಾಗಿದ್ದ ಕಾರಣ (೧೯೨೭), ಕುವೆಂಪು, ಡಿ. ಎಲ್. ನರಸಿಂಹಾಚಾರ್, ಕೆ. ವೆಂಕಟರಾಮಪ್ಪ, ಡಿ. ಕೆ. ಭೀಮಸೇನರಾವ್ ಮೊದಲಾದವರು ಅವರಿಗೆ ಸಹಪಾಠಿಗಳಾಗಿದ್ದರು. ಅವರ ಶಿಷ್ಯಸಂಪತ್ತಿಯೂ ವಿಸ್ತಾರವಾದುದು, ಗಣ್ಯವಾದುದು. ಇಲ್ಲಿ ರಾಜಕೀಯಸ್ಥರಿದ್ದಾರೆ, ವಿಜ್ಞಾನಿಗಳಿದ್ದಾರೆ, ಇತಿಹಾಸತಜ್ಞರಿದ್ದಾರೆ, ಸಾಹಿತಿಗಳಿದ್ದಾರೆ, ಸಾಮಾಜಿಕರಿದ್ದಾರೆ, ಹಿರಿಯ ಅಧಿಕಾರಿಗಳಿದ್ದಾರೆ. ಆಚಾರ್ಯರು ಯಾವ ಬಿಂಕ ಬಿಗುಮಾನಗಳೂ

ಇಲ್ಲದೆ ಎಲ್ಲರೊಂದಿಗೂ ಧಾರಾಳವಾಗಿ ವ್ಯವಹರಿಸುತ್ತಿದ್ದರು. ಸಂಸ್ಕೃತ ಕನ್ನಡ ತಮಿಳು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ತದ್‌ಜ್ಞತೆಯಿದ್ದವರಾದ ಕಾರಣ, ಅವರು ಆಯಾ ಭಾಷೆಗಳ ವಿದ್ವಾಂಸರೊಂದಿಗೆ ಅಧ್ಯಾಪಕರೊಂದಿಗೆ ಸುಖವಾಗಿ ವ್ಯವಹರಿಸಬಲ್ಲವರಾಗಿದ್ದರು.

ತಮ್ಮ ವಿದ್ಯಾಗುರುಗಳಾಗಿದ್ದ ಬಿ.ಎಂ. ಶ್ರೀಕಂಠಯ್ಯನವರು, ಟಿ.ಎಸ್. ವೆಂಕಣ್ಣಯ್ಯನವರು, ಎ.ಆರ್. ಕೃಷ್ಣಶಾಸ್ತ್ರಿಗಳು ಈ ಮೂವರ ವಿಷಯದಲ್ಲಿಯೂ ಅವರಿಗೆ ಅಪರಿಮಿತವಾದ ಗೌರವ. ಶ್ರೀಯವರು ಮಹಾರಾಜ ಕಾಲೇಜು ಕರ್ಣಾಟಕ ಸಂಘದಲ್ಲಿ ಮೊದಲ ಸಲ ಉಪನ್ಯಾಸ ಮಾಡಲು ಆಹ್ವಾನಿತರಾದಾಗ, ಅವರು ಇಂಗ್ಲಿಷ್ ಭಾಷೆಯಲ್ಲಿ ಉಪನ್ಯಾಸ ಮಾಡಲು ಆರಂಭಿಸಿದರಂತೆ; ಆಗ ಸಂಘದ ಕಾರ್ಯದರ್ಶಿಯೋ ಕಾರ್ಯಕರ್ತರೋ ಆಗಿದ್ದ ಆಚಾರ್ಯರು ಕರ್ಣಾಟಕ ಸಂಘದ ಕಾರ್ಯಕ್ರಮವಾದ್ದರಿಂದ ಕನ್ನಡದಲ್ಲೇ ಉಪನ್ಯಾಸ ಮಾಡಬೇಕೆಂಬುದಾಗಿ ಧೈರ್ಯವಾಗಿ ಮೇಲೆದ್ದು ಅವರಿಗೆ ಸೂಚಿಸಿದರಂತೆ. ಆ ಗಳಿಗೆಗೆ ಅದು ಅನಿರೀಕ್ಷಿತ; ಶ್ರೀಯವರಿಗೆ ಕೋಪ ಬಂತು. ಆದರೆ ಅಂದಿನಿಂದ ಶ್ರೀಯವರು ಮೈಚಳಿ ಬಿಟ್ಟು ಸಾರ್ವಜನಿಕ ಉಪನ್ಯಾಸಗಳನ್ನು ಕನ್ನಡದಲ್ಲೇ ಮಾಡತೊಡಗಿದರಂತೆ. ಈ ವಿಷಯ ಆಚಾರ್ಯರಿಂದಲೇ ನಾನು ಕೇಳಿದ್ದು. ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಪ್ರಾರಂಭವಾದ ವರ್ಷ (೧೯೨೭) ಸೂಕ್ತ ಸಂಖ್ಯೆಯ ವಿದ್ಯಾರ್ಥಿಗಳನ್ನು ಕೂಡಿಸಲು ಆಚಾರ್ಯರೂ ತುಂಬ ಪ್ರಯತ್ನಪಟ್ಟರೆಂದು ಕೇಳಿದ್ದೇನೆ. ವೆಂಕಣ್ಣಯ್ಯನವರಿಗೆ ವಾಸದ ಮನೆಯನ್ನು ಒಮ್ಮೆ ಬಾಡಿಗೆಗೆ, ಇನ್ನೊಮ್ಮೆ ಕ್ರಯಕ್ಕೆ ಕೊಡಿಸುವಲ್ಲಿಯೂ ಸಹಾಯಮಾಡಿದರಂತೆ. ಅವರೇ ಒಂದು ಕಡೆ ಈ ಮಾತು ನೆನೆದಿದ್ದಾರೆ.

ಎನ್. ಅನಂತರಂಗಾಚಾರ್ಯರ ಸಾಹಿತ್ಯಕ ಸಾಧನೆ ವಿಶಾಲ ವ್ಯಾಪ್ತಿಯದು, ಅಗಾಧ ಪರಿಶ್ರಮಕ್ಕೆ ಮಾತ್ರ ಸಾಧ್ಯವಾಗುವಂಥದು. ಆ ಸಾಧನೆಗೆ ಅದರದೇ ಗುರಿಯಿದೆ, ಮಿತಿಯಿದೆ. ಅವರು ಕರ್ನಾಟಕ ಇತಿಹಾಸ ಸಂಸ್ಕೃತಿಗಳ ಭವ್ಯತೆಯನ್ನು ಎಲ್ಲಾ ದಿಕ್ಕುಗಳಲ್ಲಿಯೂ ಎಲ್ಲಾ ಮುಖಗಳಲ್ಲಿಯೂ ನೋಡಲು ಅಪೇಕ್ಷಿಸಿದರು. ತಮ್ಮ ನೋಟವನ್ನು ಆಸಕ್ತರಾದ ಎಲ್ಲಾ ಕನ್ನಡಿಗರಿಗೆ ತಮ್ಮ ಬರಹಗಳ ಮೂಲಕ ತಲುಪಿಸಲು ಪ್ರಯತ್ನಿಸಿದರು. ಕನ್ನಡ ಸಂಸ್ಕೃತಿಯ ದೂರ ದಿಗಂತಗಳ ವರ್ಣರಂಜಿತ ಪ್ರಭೆಯ ಮೋಹಕ್ಕೆ ಒಳಗಾದ ಅವರು ಅದರಿಂದ ಹೊರಬಂದುದೇ ಇಲ್ಲ. ಅವರ ಬರಹಗಳು ಹೆಚ್ಚಾಗಿ ಪರಿಚಯಗಳು, ಸಮೀಕ್ಷೆಗಳು, ಕಥನ ಗತಿಯುವು ಎಂಬುದು ನಿಜ; ಅಲ್ಲಿ ವಿಮರ್ಶೆ, ಸಂಶೋಧನೆ ಎಂಬವು ಕಡಿಮೆ ಎಂಬುದೂ ನಿಜ. ಇದಕ್ಕೆ ಹಲವು ಕಾರಣಗಳಿವೆ. ಅವರ ಸೇವೆ ಹೆಚ್ಚಾಗಿ ಪದವಿ ತರಗತಿಗಳ, ಪೂರ್ವಪದವಿ ತರಗತಿಗಳ ವಿದ್ಯಾರ್ಥಿಗಳಿಗೇ ವಿನಿಯೋಗವಾಯಿತು. ಅವರು ವಸ್ತುವೈವಿಧ್ಯ, ಗ್ರಂಥ ಬಾಹುಳ್ಯಗಳನ್ನು ಹೆಚ್ಚು ಇಷ್ಟಪಟ್ಟರು. ಅಲ್ಲದೆ ಪದವಿ ತರಗತಿಗಳ ಅಧ್ಯಾಪಕರ ನಡುವೆ ಅವರು ಹಿರಿಯರಾಗಿದ್ದ ಕಾರಣ, ಕಿರಿಯರಿಗೆ ಮಾರ್ಗದರ್ಶನ ಮಾಡುವ, ಸಾಂಸ್ಥಿಕ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಗುರುತರ ಜವಾಬ್ದಾರಿಯನ್ನು ಅವರು ಹೊತ್ತಿದ್ದರು.

ಆಚಾರ್ಯರ ವಿದ್ವತ್ತೆಯ, ಸಂಶೋಧನೆಯ ದೃಷ್ಟಿ ವಿಶೇಷವಾಗಿ ಕಾಣುವುದು ಗ್ರಂಥ ಸಂಪಾದನೆಯ ಕ್ಷೇತ್ರದಲ್ಲಿ. 'ಸೂಕ್ತಿಸುಧಾರ್ಣವ', 'ಕಾವ್ಯಸಾರ'ಗಳ ಸಂಪಾದನೆಯಲ್ಲಿ ಅವರ

ಪರಿಶ್ರಮ ದೊಡ್ಡದು. ಇವಕ್ಕೆ ಬರೆದ ಪ್ರಸ್ತಾವನೆಗಳಲ್ಲಿ ಸಂಶೋಧನೆಯ ದೃಷ್ಟಿಯನ್ನು ಕಾಣಬಹುದಾಗಿದೆ; ಪ್ರಾಚೀನ ಕವಿ ಕಾವ್ಯಗಳ ವಿಮರ್ಶೆಯಲ್ಲಿ, ಸಂಪಾದಿತ ಗ್ರಂಥಗಳ ಮೌಲ್ಯಮಾಪನದಲ್ಲಿ ಕೂಡ ಆ ದೃಷ್ಟಿ ನಿಚ್ಚಳವಾಗಿದೆ. ಸಾಹಿತ್ಯದ ಉಪಾಸನೆ ಶೋಧನೆ ಪ್ರಕಟನೆಗಳಲ್ಲಿ ಸಂಶೋಧನೆಯೇ ಸರ್ವಸ್ವವಲ್ಲ; ಅದು ಒಂದು ವಿಧಾನ, ವಿದ್ಯಮಾನ ಮಾತ್ರ.

ಆಚಾರ್ಯರ ಮಾಹಿತಿಗಳ ಕ್ರೋಢೀಕರಣ ಸೂಚೀಕರಣಗಳ ಹುಚ್ಚು ಅವರ ಆಯುಷ್ಯದ ಬಹುಭಾಗವನ್ನು ತಿಂದುಹಾಕಿದಂತೆ ತೋರುತ್ತದೆ. ಆದರೆ ಸಾಹಿತ್ಯಾಭ್ಯಾಸಿಗಳಿಗೆ, ಸಂಶೋಧಕರಿಗೆ ಇವುಗಳಿಂದ ಆಗಿರುವ ಉಪಕಾರ ದೊಡ್ಡದು. ಉಪಯುಕ್ತ ಎಂಬ ಕಾರಣದಿಂದಲೇ ಆಚಾರ್ಯರ ಕೆಲವು ಪುಸ್ತಕಗಳು ಹಲವು ಸಲ ಪುನರ್ಮುದ್ರಣಗೊಂಡಿವೆ.

ಅನಂತರಂಗಾಚಾರ್ಯರು ೮೨ ವರ್ಷಗಳ ಕಾಲ ತುಂಬುಜೀವನ, ಚಟುವಟಿಕೆಯ ಜೀವನ ನಡೆಸಿದರು. ಸಾವು ನೋವುಗಳನ್ನು, ಕಷ್ಟನಷ್ಟಗಳನ್ನು ಕಂಡರು. ಆದರೆ ಎಲ್ಲವನ್ನೂ ಧೈರ್ಯದಿಂದ ನಗುನಗುತ್ತಲೇ ಎದುರಿಸಿದರು, ಸುಖ ಸಂತೋಷಗಳನ್ನೂ ಕಂಡರು. ಗಣ್ಯ ಸಾಮಾಜಿಕರಾಗಿ ಬಾಳುವೆ ಮಾಡಿದರು. ಅವರ ಸಾಹಿತ್ಯಕ ಸಾಧನೆಗಳಲ್ಲಿ ಅರೆಕೊರೆಗಳನ್ನು ಹುಡುಕಿ ತೋರಿಸುವುದು ಕಷ್ಟವೇನೂ ಅಲ್ಲ. ಆದರೆ ಆಗಿರುವ ಪ್ರಯೋಜನಗಳ ದೃಷ್ಟಿಯಿಂದ ಅವಕ್ಕೆ ಮಹತ್ತ್ವ ಕೊಡಬೇಕಾಗಿಲ್ಲ. ಅವರ ಸ್ವಭಾವದಲ್ಲಿ ಇಂಥ ಅಂಥ ದೌರ್ಬಲ್ಯಗಳಿದ್ದುವು ಎಂದು ಹೇಳುವವರಿದ್ದಾರೆ. ದೌರ್ಬಲ್ಯಗಳು ಯಾರಲ್ಲಿ ಇಲ್ಲವೋ ನನಗೆ ತಿಳಿಯದು. ನನ್ನ ಗುರುಗಳಾದ ಕುವೆಂಪು ಅವರು, "ದೇವರು ನಮ್ಮನ್ನು ಕರಡಚ್ಚುಗಳ ರೂಪದಲ್ಲಿ ಲೋಕಕ್ಕೆ ಕಳಿಸಿದ್ದಾನೆ" ಎಂದು ಹೇಳುತ್ತಿದ್ದರು. ನಾವೆಲ್ಲಾ ಕರಡಚ್ಚುಗಳೇ, ತಪ್ಪಿಲ್ಲದೆ ತಿದ್ದಿ ಮುದ್ರಿಸಿದ ಹಾಳೆಗಳಲ್ಲ.

ಆಚಾರ್ಯರು ತಾವು ಬದುಕಿದ್ದ ಕಾಲದಲ್ಲಿ ತಮ್ಮ ವಿದ್ಯಾರ್ಥಿಗಳಿಗೆ, ಮಿತ್ರರಿಗೆ, ಸಹೋದ್ಯೋಗಿಗಳಿಗೆ ಪ್ರಿಯರಾಗಿದ್ದರು; ಬಂಧುಗಳ, ಸಮುದಾಯದವರ, ಸಾರ್ವಜನಿಕರ ಪ್ರೀತಿ ಗೌರವಗಳನ್ನು ಸಂಪಾದಿಸಿದ್ದರು. ತಮ್ಮ ಸುತ್ತಣ ಹತ್ತು ಜನಕ್ಕೆ ಬೇಕಾದವರಾಗಿದ್ದರು. ಅವರು ತಮ್ಮ ವೈವಿಧ್ಯಮಯವೂ ಉಪಯುಕ್ತರೂ ಆದ ಸಾಹಿತ್ಯ ಕೃತಿಗಳಿಂದ ಕನ್ನಡ ಸಾಹಿತ್ಯದ ಸಂಪತ್ತನ್ನು ಹೆಚ್ಚಿಸಿದರು. ನಿರಂತರ ಉದ್ಯೋಗಶೀಲತೆಯನ್ನು, ಪರಿಶ್ರಮವನ್ನು ಜೀವನದ ಉಸಿರಾಗಿ ಇಟ್ಟುಕೊಂಡು, ನಂಬಿದ ದೈವವನ್ನು ದೃಢವಾಗಿ ನೆಚ್ಚಿಕೊಂಡು ಸಾರ್ಥಕವಾಗಿ ತಮ್ಮ ಜೀವನಯಾತ್ರೆಯನ್ನು ಪೂರೈಸಿದರು. ಇದಕ್ಕಿಂತ ಇನ್ನೇನು ಬೇಕು? ಆಚಾರ್ಯರಿಗೆ ಪ್ರಿಯವಾದ ಕಾವ್ಯವಾಗಿದ್ದ ರನ್ನನ 'ಗದಾಯುದ್ಧ'ದ ಮಾತನ್ನು ಬಳಸಿ "ನಿಜಸಾಹಸೈಕದೇಶಾನುಮರಣ ಮೆಮಗಕ್ಕೆ ಗಡಾ" ಎಂದು ಹಾರೈಸುತ್ತೇನೆ.

# ವಿದ್ವನ್ಮಣಿ ಗುರುವರ್ಯ

## (ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರೀ)

• *ಕೆ. ಅನಂತರಾಮು*

**ಡಾ॥** ಟಿ.ವಿ. ವೆಂಕಟಾಚಲಶಾಸ್ತ್ರೀಗಳು ನನಗೆ ವಿದ್ಯಾಗುರುಗಳು. ಮೂವತ್ತೈದು ವರ್ಷಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ, ಈಗ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಎಂದು ಕರೆಯಲಾಗುತ್ತಿರುವ 'ಕನ್ನಡ ಅಧ್ಯಯನ ಸಂಸ್ಥೆ'ಯಲ್ಲಿ ನಾನು ಎಂ.ಎ ವಿದ್ಯಾರ್ಥಿಯಾಗಿದ್ದೆ. ಛಂದಸ್ಸು ಸಾಹಿತ್ಯಚರಿತ್ರೆ, ಪ್ರಾಚೀನ ಕಾವ್ಯಗಳು ಮುಂತಾದ ವಿಷಯಗಳನ್ನು ಅವರು ಬೋಧಿಸುತ್ತಿದ್ದರು. ತರಗತಿಗಳ ಒಂದೊಂದು ಗಂಟೆಯನ್ನೂ ಅದೊಂದು ಜ್ಞಾನಯಜ್ಞವೆಂಬಂತೆ ನಡೆಸಿಕೊಡುತ್ತಿದ್ದರು. ಆ ಗಂಟೆಯಲ್ಲಿ ಬೋಧಿಸಬೇಕಾದ ವಿಷಯಕ್ಕೆ ಸಂಬಂಧಿಸಿದಂತೆ ಸಮಗ್ರ ಮಾಹಿತಿಯನ್ನು ತಮ್ಮ ಕಣ್ಣ ಮುಂದಿರಿಸಿಕೊಂಡು ಪಾಠ ಹೇಳುತ್ತಿದ್ದರು. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದ ವಿಶಾಲವಾದ ಜಗತ್ತು ಆ ಮುಹೂರ್ತದಲ್ಲಿ ನಮ್ಮ ಮುಂದೆ ಪ್ರತ್ಯಕ್ಷವಾಗುತ್ತಿತ್ತು.

ನಾನು ಮೈಸೂರು ವಿಶ್ವವಿದ್ಯಾನಿಲಯದ ಸಂಜೆ ಕಾಲೇಜಿನಲ್ಲಿ ಅಧ್ಯಾಪಕನಾದ ಹಲವು ವರ್ಷಗಳ ಮೇಲೆ 'ಕವಿ ಬ್ರಹ್ಮಶಿವಃ ಒಂದು ಅಧ್ಯಯನ' ಎಂಬ ವಿಷಯವನ್ನು ಸಂಶೋಧನೆಗೆಂದು ಕೈಗೆತ್ತಿಕೊಂಡಾಗ ವೆಂಕಟಾಚಲಶಾಸ್ತ್ರೀಗಳು ನನಗೆ ಮಾರ್ಗದರ್ಶಕರಾದರು. ತನ್ನ ಸಮಕಾಲದಲ್ಲಿ ಜೈನಧರ್ಮಕ್ಕಾಗುತ್ತಿದ್ದ ಹಿನ್ನಡೆಯನ್ನು ಕಂಡು ನೋವಿಗೊಳಗಾಗಿದ್ದ ಆ ಕವಿಯು ಕೋಪದಿಂದಲೂ ಅಸಹಾಯಕತೆಯಿಂದಲೂ ಬೇಸರದಿಂದಲೂ ತನ್ನ ಮನಸ್ಸನ್ನೂ ಮಾತುಗಳನ್ನೂ ಗೋಜಲು ಗೋಜಲಾಗಿಸಿಕೊಂಡುಬಿಟ್ಟಿದ್ದನು. ಬ್ರಹ್ಮಶಿವನ ವಿಚಾರಸರಣಿಯನ್ನು ಹೇಗೆ ಪರಿಭಾವಿಸಬೇಕು, ಹೇಗೆ ವಿಶ್ಲೇಷಿಸಬೇಕು, ಅವನ ಸ್ಥಾನವನ್ನು ಹೇಗೆ ನಿಶ್ಚಯಿಸಬೇಕು ಎಂಬಿತ್ಯಾದಿ ವಿಚಾರಗಳಲ್ಲಿ ಶಾಸ್ತ್ರೀಯವರ ಸಮರ್ಥವಾದ ಮಾರ್ಗದರ್ಶನ ಲಭ್ಯವಾಗದಿದ್ದಲ್ಲಿ ನನ್ನ ಅಧ್ಯಯನವು ಪಾರಗಾಣುತ್ತಲೇ ಇರಲಿಲ್ಲ. ಜೈನಶಾಸ್ತ್ರ ಮತ್ತು ಜೈನಸಾಹಿತ್ಯಗಳನ್ನು ಕುರಿತಂತೆ ಅವರ ವಿಸ್ತಾರವೂ ತಲಸ್ಪರ್ಶಿಯೂ ಆದ ವಿದ್ವತ್ತು ನಾನು ಕೈಗೆತ್ತಿಕೊಂಡ ಕಾರ್ಯವನ್ನು ಪೂರ್ಣಗೊಳಿಸಿಕೊಟ್ಟಿತು.

೧೯೭೦ರಿಂದ ಸುಮಾರು ಎರಡು ದಶಕಗಳಷ್ಟು ಕಾಲಾವಧಿಯನ್ನು ಕನ್ನಡ ಅಧ್ಯಯನ ಸಂಸ್ಥೆಯ ಬಹುಮುಖವಾದ ಕಾರ್ಯಯೋಜನೆಗಳ ದೃಷ್ಟಿಯಿಂದ ಕನ್ನಡದ ಸುವರ್ಣ ಕಾಲವೆಂದೇ ಹೇಳಬೇಕು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ನಾಡೋಜ

ದೇಜಗೌ ಅವರ ಪ್ರೋತ್ಸಾಹದಿಂದಲೂ ಡಾ. ಹಾ. ಮಾ. ನಾಯಕರು ಅಧ್ಯಯನ ಸಂಸ್ಥೆಯ ಸಮರ್ಥ ನಿರ್ದೇಶಕರಾಗಿದ್ದು ಅವರ ಕರ್ತೃತ್ವ ಶಕ್ತಿಯಿಂದಲೂ ಕನ್ನಡದ ಹಲವು ಹತ್ತು ಯೋಜನೆಗಳು ಆಗ ಯಶಸ್ವಿಯಾಗಿ ನೆರವೇರಿದುವು. ಕಠಿಣ ಪರಿಶ್ರಮಕ್ಕೊಗ್ಗುವ ಪ್ರತಿಭೆಗಳನ್ನೇ ಆ ಕಾಲಕ್ಕೆ ದೇಜಗೌ ಅವರು ಅಧ್ಯಯನ ಸಂಸ್ಥೆಯಲ್ಲಿ ಗುಡ್ಡೆ ಹಾಕಿದ್ದರು. ಯಾರಾದರೂ ಸರಿಯೆ, ಅಧ್ಯಯನ ಸಂಸ್ಥೆಗೆ ಕಾಲಿಟ್ಟ ಬಳಿಕ ಅಹರ್ನಿಶಿ ದುಡಿಯಲೇಬೇಕಾಗಿತ್ತು. ಕನ್ನಡ ಶಾಸನಗಳ ಪರಿಷ್ಕರಣ, ದಾಸಸಾಹಿತ್ಯದ ಸಂಪಾದನೆ, ವಿಶ್ವಕೋಶ ನಿರ್ಮಾಣ, ಜನಪದ ಸಾಹಿತ್ಯ ಸಂಗ್ರಹಣೆ ಮತ್ತು ಪ್ರಕಟಣೆ, ಪ್ರಸಾರಾಂಗದ ವೈವಿಧ್ಯಮಯ ಕಾರ್ಯಚಟುವಟಿಕೆಗಳು, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ಕನ್ನಡ ವಿಭಾಗದ ಕಾರ್ಯನಿರ್ವಹಣೆ ಮುಂತಾದ ಅನೇಕ ಕಾರ್ಯಗಳು ಗಂಗಾಪ್ರವಾಹದಂತೆ ನುಗ್ಗಿ ನೆರವೇರುತ್ತಿದ್ದುವು. ಅಂತಹ ಪರ್ವಕಾಲದಲ್ಲಿ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾನಿಲಯದಿಂದ ಅಧ್ಯಯನ ಸಂಸ್ಥೆಗೆ ಆಗಮಿಸಿದ್ದ ಶಾಸ್ತ್ರಿಗಳು ಕಠಿಣ ಪರಿಶ್ರಮಕ್ಕೆ ಜಗ್ಗದೆ, ಮೇಲೆ ಹೇಳಿದ ಕನ್ನಡ ಚಟುವಟಿಕೆಗಳಲ್ಲಿ ಕೆಲವಲ್ಲಿ ಪ್ರತ್ಯಕ್ಷವಾಗಿ, ಕೆಲವಲ್ಲಿ ಪರೋಕ್ಷವಾಗಿ ಭಾಗವಹಿಸಿ ತಮ್ಮ ವಿದ್ವತ್ತನ್ನು ಧಾರೆಯೆರೆದರು. ಅಂದಿನ ಕನ್ನಡದ ಕೆಲಸಗಳ ಒತ್ತಡವೆಷ್ಟಿತ್ತೆಂಬುದನ್ನು ಕಣ್ಣಾರೆ ನೋಡಿದವರು ಮಾತ್ರವೇ ಅರ್ಥಮಾಡಿಕೊಳ್ಳುವುದು ಸಾಧ್ಯವೆಂಬಂತಿತ್ತು.

ಪಾಠಪ್ರವಚನಗಳ ಜೊತೆಗೆ, ಸಂಶೋಧನ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದರ ಜೊತೆಗೆ ಅಧ್ಯಯನ ಸಂಸ್ಥೆಯ ವಿವಿಧ ಯೋಜನೆಗಳಲ್ಲಿ ಸಲಹೆ ಸೂಚನೆಗಳನ್ನು ಕೊಟ್ಟು ಪಾಲ್ಗೊಳ್ಳುವುದರ ಜೊತೆಗೆ ವೆಂಕಟಾಚಲ ಶಾಸ್ತ್ರೀಗಳು 'ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ' ಎಂಬೊಂದು ಯೋಜನೆಯ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತರು. ಸಾಹಿತ್ಯ ಚರಿತ್ರೆಯ ಹಲವಾರು ಸಂಪುಟಗಳು ಪರಮಾದ್ಭುತವಾಗಿ ಪ್ರಕಟವಾದುವು. ಆ ಸಂಪುಟಗಳ ಲೇಖನಗಳ ಪರಿಷ್ಕರಣ ಕಾರ್ಯ, ಆ ಸಂಪುಟಗಳಿಗೆ ತಾವೂ ಲೇಖನಗಳನ್ನು ಬರೆಯುವುದು, ಆ ಸಂಪುಟಗಳು ಅಚ್ಚಿನ ಮನೆಗೆ ಹೋದಾಗ ಅವುಗಳ ಆರೈಕೆ ಮಾಡುವುದು ಮುಂತಾದ ಎಲ್ಲ ಕಾರ್ಯಗಳನ್ನೂ ಸಮರ್ಥವಾಗಿ ಅವರು ನಿರ್ವಹಿಸಿದರು. ಡಾ. ಎನ್.ಎಸ್. ತಾರಾನಾಥ ಎಂಬ ಯುವ ವಿದ್ವನ್ಮಣಿಯೊಬ್ಬರು ಅವರಿಗೆ ಸಹಾಯಕರಾಗಿ ಸದಾ ಅವರ ನೆರಳಾಗಿರುತ್ತಿದ್ದುದನ್ನು ನಾನು ನೋಡುತ್ತಿದ್ದೆ. ಶಾಸ್ತ್ರಿಗಳ ಪಾಂಡಿತ್ಯ, ಪ್ರತಿಭೆ, ವಿದ್ವತ್ತು ಮುಂತಾದವುಗಳ ಪ್ರಕಾಶನಕ್ಕೆ ಅಂದಿನ ಅಧ್ಯಯನ ಸಂಸ್ಥೆಯ ಕಾರ್ಯಚಟುವಟಿಕೆಗಳೆಲ್ಲವೂ ಒರೆಗಲ್ಲಾದವು.

ನಾನು ಕಂಡಂತೆ ಶಾಸ್ತ್ರಿಗಳವರದು ಅತ್ಯಂತ ನೇರವೂ ಸರಳವೂ ನಿರಾಡಂಬರಪೂರ್ಣವೂ ಆದ ಜೀವನಮಾರ್ಗ. ಯಾವ ವಾಹನಗಳ ಹಂಗೂ ಇಲ್ಲದೆ ಓಡಾಡಿಕೊಂಡೇ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪದವಿಗೇರಿ ಯಶಸ್ವಿಯಾದ ವ್ಯಕ್ತಿತ್ವ ಅವರದು. ಸತ್ಯಭಾಷಿತೆ, ಪ್ರಿಯಭಾಷಿತೆ, ಹಿತಭಾಷಿತೆ, ಮಿತಭಾಷಿತೆ ಮುಂತಾದ ಎಲ್ಲ ಸದ್ಗುಣಗಳೂ ಅವರಲ್ಲಿ ಮನೆಮಾಡಿಕೊಂಡಿವೆ. ಸ್ನೇಹಮಯತೆ ಅವರ ಜನ್ಮಜಾತ ಗುಣ. ಅವರ ನೆನಪಿನ ಶಕ್ತಿ ಅಪಾರ. ನಿವೃತ್ತಿಯ ಬಳಿಕವೂ ಶಾಸ್ತ್ರೀಗಳದು ಅತ್ಯಂತ ಕ್ರಿಯಾಶೀಲವಾದ ಬದುಕು. ಅವರ

ವಿದ್ವತ್ಪೂರ್ಣ ಲೇಖನ ಕೃಷಿಗಾಗಲಿ, ಬೇರೆ ಬೇರೆ ಸಂಘ ಸಂಸ್ಥೆಗಳ ಕನ್ನಡ ಕಾರ್ಯಚಟುವಟಿಕೆಗಳಿಗೆ ಚಾಲನೆ ನೀಡುವುದಕ್ಕಾಗಲಿ ವಿಶ್ರಾಂತಿಯೆಂಬುದೇ ಇಲ್ಲ. ಅದನ್ನವರು ಬಯಸುವವರೂ ಅಲ್ಲ.

ಮೈಸೂರಿನಲ್ಲಿ ಮುಲಕನಾಡು ಬ್ರಾಹ್ಮಣ ಸಭಾ ಎಂಬ ಸಂಸ್ಥೆಯೊಂದಿದೆ. ಅದಕ್ಕೊಂದು ಸ್ವತಂತ್ರವಾದ ಕಟ್ಟಡವನ್ನು ಕಟ್ಟಿ ನಿಲ್ಲಿಸಬೇಕು ಎಂಬ ಕಾರ್ಯಯೋಜನೆ ರೂಪುಗೊಂಡಾಗ ತಾವು ಹುಟ್ಟಿ ಬೆಳೆದ ಸಮಾಜದ ಋಣವನ್ನು ಕೈಲಾದಮಟ್ಟಿಗೆ ತೀರಿಸಬೇಕೆಂಬ ಹಂಬಲ ಶಾಸ್ತ್ರೀಗಳಲ್ಲಿ ಚಿಗುರೊಡೆಯಿತು. ಅದಕ್ಕೆ ಸಂಬಂಧಿಸಿದ ಕಾರ್ಯಕರ್ತರನ್ನು ಕೂಡಿಕೊಂಡು ಧನಸಂಗ್ರಹದಲ್ಲಿ ತೊಡಗಿದರು. ಆ ಸಂಸ್ಥೆಗಾಗಿ ಲಕ್ಷ್ಮಿಯನ್ನು ಚೆನ್ನಾಗಿ ಒಲಿಸಿಕೊಟ್ಟರು. ಇಂದು ಮೈಸೂರು ನಗರದ ಹುಣಸೂರು ರಸ್ತೆ ಎಂದು ಕರೆಯುವ ಹೆದ್ದಾರಿಯ ಮಗ್ಗುಲಲ್ಲೇ ಮುಲಕನಾಡು ಸಮುದಾಯ ಭವನವೊಂದು ಸರ್ವಲಕ್ಷಣ ಸಂಪನ್ನವಾಗಿ ತಲೆಯೆತ್ತಿ ನಿಂತಿದೆ. ಅಲ್ಲೊಂದು ಗ್ರಂಥಭಂಡಾರವನ್ನೂ ಅಭಿವೃದ್ಧಿ ಪಡಿಸಿದ್ದು, ಶಾಸ್ತ್ರೀಗಳು ತಮ್ಮ ಸ್ವಂತದ ಭಂಡಾರ ದಿಂದಲೂ ಸಾಕಷ್ಟು ಗ್ರಂಥಗಳನ್ನು ಕೊಡುಗೆಯಾಗಿ ನೀಡಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ಹಿಂದೆ ಕಾನಕಾನಹಳ್ಳಿ ಎಂದು ಕರೆಯುತ್ತಿದ್ದ, ಕನಕಪುರವು ಶಾಸ್ತ್ರೀಗಳ ಬಾಲ್ಯದ ಆಡುಂಬೊಲ. ಅವರ ಅಧ್ಯಾಪಕ ಜೀವನ ಪ್ರಾರಂಭವಾದುದು ಅಲ್ಲಿನ ರೂರಲ್ ಕಾಲೇಜಿನಿಂದ. ಬ್ರಾಹ್ಮಣರ ಬೀದಿಯಲ್ಲಿದ್ದ ತಮ್ಮ ಮನೆಯನ್ನು ಪಟ್ಟಣದ ಸಾರ್ವಜನಿಕ ಉಪಯೋಗಕ್ಕಾಗಿ ಸಮರ್ಪಿಸಿರುವುದು ಅವರ ದಾನಗುಣಕ್ಕೆ ಸಾಕ್ಷಿಯಾಗಿದೆ. ಈಗ ಅವರು ಕನಕಪುರ ತಾಲ್ಲೂಕನ್ನು ಕುರಿತಂತೆ ಅದರ ಪುರಾಣೇತಿಹಾಸ ಸಂಸ್ಕೃತಿಗಳೆಲ್ಲವೂ ಸಮಸ್ತವಾಗಿ ಕೂಡಿಕೊಳ್ಳುವಂತಹ ಸರ್ವಜನೋಪಯೋಗಿಯಾಗುವ ಗ್ರಂಥವೊಂದರ ರಚನೆಯಲ್ಲಿ ತಲ್ಲೀನರಾಗಿದ್ದಾರೆ. 'ಆರು ಮುನಿದು ನಮ್ಮನೇನ ಮಾಡುವರು, ಊರು ಮುನಿದು ನಮ್ಮನೆಂತು ಮಾಡುವುದು' ಎಂಬ ಬಸವಣ್ಣನವರ ವಾಣಿಯಲ್ಲಿ ಬರುವ ಆದರ್ಶವನ್ನು ಅವರು ಮೈದುಂಬಿಸಿಕೊಂಡಿದ್ದಾರೆ. ತನ್ಮೂಲಕ ಅವರ ವ್ಯಕ್ತಿತ್ವಕ್ಕೊಂದು ಮೆರುಗು ಬಂದಿದೆ.

ಕನ್ನಡ ಭಾಷೆ ಮತ್ತು ಸಾಹಿತ್ಯ ಸಂಶೋಧನೆಗಳಿಗಾಗಿ ಕಾಯೇನ ವಾಚಾ ಮನಸಾ ದುಡಿಯುತ್ತಿರುವ, ಸಮಾಜಸೇವೆಗಾಗಿ ತಮ್ಮನ್ನು ಸಮರ್ಪಿಸಿಕೊಂಡಿರುವ, ಹುಟ್ಟೂರಿನ ಅಭಿವೃದ್ಧಿಯಲ್ಲಿ ತಮ್ಮನ್ನು ಗುರುತಿಸಿಕೊಂಡಿರುವ, ತನ್ಮೂಲಕ ಎಲ್ಲ 'ಋಣ'ಗಳನ್ನೂ ತೀರಿಸಿ ಕೃತಾರ್ಥರಾಗಿರುವ ವಿರಳಮಹನೀಯರ ಪರಂಪರೆಗೆ ಡಾ. ವೆಂಕಟಾಚಲಶಾಸ್ತ್ರೀಗಳು ಸೇರಿದ್ದಾರೆ.

❖

# ನನ್ನ ಗುರುಶ್ರೇಷ್ಠರು

## (ಪ್ರೊ॥ ಎ. ಎನ್. ಮೂರ್ತಿರಾವ್)

*● ಪ್ರೊ॥ ಎಲ್. ಎಸ್. ಶೇಷಗಿರಿರಾವ್*

**ನಾ**ನು ಪ್ರೊ॥ ಎ. ಎನ್. ಮೂರ್ತಿರಾಯರನ್ನು ಮೊದಲು ಕಂಡದ್ದು ೧೯೪೮ರಲ್ಲಿ. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷಿನಲ್ಲಿ ಬಿ.ಎ. (ಆನರ್ಸ್) ಪ್ರಥಮ ತರಗತಿಯಲ್ಲಿ ಪ್ರಥಮನಾಗಿ ಮುಗಿಸಿ, ಎಂ.ಎ. ಓದಲು ಮೈಸೂರಿನ ಮಹಾರಾಜ ಕಾಲೇಜಿಗೆ ಸೇರಿದೆ. ಇಂಗ್ಲಿಷ್ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದ ಮೂರ್ತಿರಾಯರು ಆಕಾಶವಾಣಿಯ ಅಸಿಸ್ಟೆಂಟ್ ಡೈರೆಕ್ಟರ್ ಆಗಿದ್ದರು. ವಾರಕ್ಕೆ ಎರಡು ಗಂಟೆ ಮಹಾರಾಜ ಕಾಲೇಜಿನಲ್ಲಿ ನಮ್ಮ ತರಗತಿಯನ್ನು ತೆಗೆದುಕೊಳ್ಳುತ್ತಿದ್ದರು. ಹದಿನೇಳನೆಯ ಶತಮಾನದ ಇಂಗ್ಲಿಷ್ ಸಾಹಿತ್ಯ ನಮ್ಮ ವಿಶೇಷ ಅಧ್ಯಯನಕ್ಕಾಗಿ ಆಯ್ಕೆಯಾಗಿತ್ತು. ಆ ಶತಮಾನದ ವಿನೋದ ನಾಟಕವನ್ನು ಮೂರ್ತಿರಾಯರು ಪಾಠ ಮಾಡಬೇಕಾಗಿತ್ತು.

ನನಗೆ ಮೊದಲು ಗಮನ ಸೆಳೆದದ್ದು ಅವರ ಇಂಗ್ಲಿಷ್ ಅವರ 'ಇಲೋಕ್ವೆನ್ಸ್' ಎದ್ದು ಕಾಣುವಂತಹುದಲ್ಲ ಆದರೆ 'ಇಲೋಕ್ವೆನ್ಸ್' ಇತ್ತು. ಅದರ ನಿಖರತೆ ಬೆರಗುಗೊಳಿಸುವಂಥದು. ಅವರ ವಿದ್ವತ್ತು ಅಬ್ಬರದ್ದಲ್ಲ. ಅವರು ವಿಮರ್ಶಕರ ಹೆಸರುಗಳನ್ನು ಹೇಳಿ ಅವರ ಅಭಿಪ್ರಾಯ ಗಳನ್ನು ಚರ್ಚಿಸುತ್ತಿದ್ದುದು ಕಡಿಮೆ, ಅಗತ್ಯವಾದಾಗ ಅದನ್ನು ಮಾಡುತ್ತಿದ್ದರು. ಆದರೆ ನಾವೇ ವಿಮರ್ಶಕರ ಕೃತಿಗಳನ್ನು ಓದಿದಾಗ, ಮೂರ್ತಿರಾಯರು ಅವೆಲ್ಲವನ್ನು ಓದಿ ಅವರ ವಿಮರ್ಶೆಯನ್ನು ಜೀರ್ಣಿಸಿಕೊಂಡು ತಮ್ಮದೇ ಅಭಿಪ್ರಾಯವನ್ನು ರೂಪಿಸಿಕೊಂಡಿದ್ದದ್ದು ನಮಗೆ ಅರಿವಾಗುತ್ತಿತ್ತು. ಏನನ್ನೇ ಅಗಲಿ ಓದಿದ ನಂತರ ಅದನ್ನು ಹೇಗೆ ಅರಗಿಸಿಕೊಳ್ಳಬೇಕು, ನಾವು ಹಲವರು ವಿಮರ್ಶಕರ ಅಭಿಪ್ರಾಯಗಳನ್ನು ಪುನರುಚ್ಚರಿಸುವ 'ರೆಕಾರ್ಡ್'ಗಳಾಗದೆ ವಿಮರ್ಶಕರ ಅಬಿಪ್ರಾಯಗಳನ್ನು ವಿವೇಚಿಸಿ ನಮ್ಮ ಅಭಿಪ್ರಾಯಗಳನ್ನು ಹೇಗೆ ರೂಪಿಸಿಕೊಳ್ಳಬೇಕು ಎಂಬುದನ್ನು ತೋರಿಸಿಕೊಟ್ಟ ಕೆಲವರೇ ಅಧ್ಯಾಪಕರಲ್ಲಿ ಮೂರ್ತಿರಾಯರು ಒಬ್ಬರು.

ಮೂರ್ತಿರಾಯರ ಸಾಹಿತ್ಯವು ಬಹು ಸೊಗಸಾದದ್ದು. ಓದು ಬಹು ಸೂಕ್ಷ್ಮವಾದದ್ದು. ಇದರಿಂದ ನಮ್ಮ ಅಭಿರುಚಿಗೆ ಶಿಕ್ಷಣ ದೊರೆಯಿತು, ಓದು ಸೂಕ್ಷ್ಮವಾಯಿತು. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಷೇಕ್ಸ್‌ಪಿಯರನ 'ದ ಮರ್ಚೆಂಟ್ ಆಫ್ ವೆನಿಸ್' ವಿನೋದ ನಾಟಕ ಪ್ರಸಿದ್ಧವಾದದ್ದು. ಅದರ ಕಥೆ ಎಲ್ಲರಿಗೂ ತಿಳಿದಿರುವುದೇ. ಷೈಲಾಕ್ ಎಂಬ ಕಠಿಣ ಹೃದಯದ ಯೆಹೂದ್ಯ ಆ್ಯಂಟೋನಿಯೋ ಎನ್ನುವ ಕ್ರೈಸ್ತನಿಗೆ ಮೂರು ಸಾವಿರ ಡಕೆಟ್‌ಗಳ ಸಾಲ ನೀಡುವ ಒಂದು 'ಬಾಂಡ್' ಬರೆಸಿಕೊಳ್ಳುತ್ತಾನೆ. ಮೂರು ತಿಂಗಳಲ್ಲಿ

ಹಣವನ್ನು ಹಿಂದಿರುಗಿಸದಿದ್ದರೆ ತಾನು ಆ್ಯಂಟೋನಿಯೊನ ದೇಹದ ಯಾವ ಭಾಗದಿಂದಲಾದರೂ ಒಂದು ಪೌಂಡ್ ಮಾಂಸವನ್ನು ಕತ್ತರಿಸಿಕೊಳ್ಳಬಹುದೆಂದು ಬರೆಸಿಕೊಳ್ಳುತ್ತಾನೆ. ದುರದೃಷ್ಟದಿಂದ ಆ್ಯಂಟೋನಿಯೊ ಹಣವನ್ನು ಹಿಂದಿರುಗಿಸಲು ಸಾಧ್ಯವಾಗದಿದ್ದಾಗ, ಷೈಲಾಕ್ ತನಗೆ ಆ್ಯಂಟೋನಿಯೊ ದೇಹದ ಒಂದು ಪೌಂಡ್ ಮಾಂಸವೇ ಬೇಕು, ಬಾಂಡನ್ನು ಅಕ್ಷರಶಃ ಪಾಲಿಸಬೇಕು ಎಂದು ಹಠ ಹಿಡಿಯುತ್ತಾನೆ. ಪೋರ್ಷಿಯ ಎನ್ನುವ ತರುಣಿ ಗಂಡಸು ವಕೀಲನ ವೇಷದಲ್ಲಿ ಬಂದು ಆ್ಯಂಟೋನಿಯೊನ ಪರವಾಗಿ ವಾದಮಾಡುತ್ತಾಳೆ. 'ಆ್ಯಂಟೋನಿಯೋಗೆ ಕರುಣೆಯನ್ನು ತೋರಿಸು' ಎಂದು ಷೈಲಾಕನಿಗೆ ಮನವಿ ಮಾಡಿ, ಕರುಣೆಯನ್ನು ಕುರಿತು ಒಂದು ಅದ್ಭುತ ಭಾಷಣ ಮಾಡುತ್ತಾಳೆ. ಷೈಲಾಕ್ ಒಪ್ಪುವುದಿಲ್ಲ. ಅವನ ಹಠದ ಷರತ್ತಿನಿಂದಲೇ ಅವನನ್ನು ಸೋಲಿಸುವ ಪರ್ಷಿಯಾ, ಅವನು ಸೋಲನ್ನೊಪ್ಪಿಕೊಂಡಾಗ, ರಾಜ್ಯದ ಹಳೆಯ ಶಾಸನವೊಂದನ್ನು ಬಳಸಿ ಅವನ ಆಸ್ತಿ ಎಲ್ಲ ಸರ್ಕಾರಕ್ಕೆ ಸೇರುತ್ತದೆ, ಅವನಿಗೆ ಮರಣದಂಡನೆ ಎಂದು ಘೋಷಿಸುತ್ತಾಳೆ. ಕಡೆಗೆ ಅವನನ್ನು ಕ್ಷಮಿಸುವಂತೆ ಮಾಡಿ, ಅವನ ಆಸ್ತಿ ಎಲ್ಲವನ್ನು ಕಿತ್ತುಕೊಂಡು, ಅವನು ದ್ವೇಷಿಸುವ ಕ್ರೈಸ್ತಮತವನ್ನು ಸೇರಬೇಕೆಂದು ವಿಧಿಸುತ್ತಾಳೆ. ಈ ಭಾಗವನ್ನು ಪ್ರಸ್ತಾಪಿಸುತ್ತ ಮೂರ್ತಿರಾಯರು "ಮನುಷ್ಯನಿಗೆ ಆದರ್ಶಗಳ ಮಟ್ಟಕ್ಕೇರುವುದು ಎಷ್ಟು ಕಷ್ಟ ಎಂದು ಇಲ್ಲಿ ತೋರಿಸುತ್ತಿದ್ದಾನೆ. ಪೋರ್ಷಿಯ ಉದಾತ್ತ ಸ್ವಭಾವದವಳು, ವಿವೇಕಿ, ಅನುಮಾನವಿಲ್ಲ. ಅವಳು ಕ್ಷಮೆಯನ್ನು, ಕರುಣೆಯನ್ನು ಕುರಿತು ಆಡುವ ಮಾತುಗಳೇ ಅವಳ ಉದಾತ್ತ ಸ್ವಭಾವಕ್ಕೆ ಕನ್ನಡಿ. ಆದರೆ ಅವಳು ಸೋತ ಷೈಲಾಕನಿಗೆ – ಅವಳು ಕ್ಷಮೆಯನ್ನು ಕುರಿತು ಆಡಿದ ಮಾತುಗಳು ನಮ್ಮ ಕಿವಿಯಲ್ಲಿರುವಾಗಲೇ ತೋರಿಸುವ ಕ್ಷಮೆ ಎಂತಹುದು. ಶ್ರೀಮಂತ ಷೈಲಾಕನನ್ನು ತಿರುಕನನ್ನಾಗಿ ಮಾಡಿ ಅವನು ದ್ವೇಷಿಸುವ ಮತಕ್ಕೆ ಸೇರುವಂತೆ ಮಾಡುತ್ತಾಳೆ. ಇದು ಅವಳ ನಿಷ್ಕರುಣೆಯಲ್ಲಿ ಮಾನವ ಸ್ವಭಾವದ ದೌರ್ಬಲ್ಯ" ಎಂದರು. ಈ ಮಾತನ್ನು ನಾನು ಯಾವ ವಿಮರ್ಶಕನ ವಿಮರ್ಶೆಯಲ್ಲಿಯೂ ಕಂಡಿರಲಿಲ್ಲ. ಇಂಥ ಹೊಳಹುಗಳನ್ನು ಲಭ್ಯ ಮಾಡುತ್ತಿದ್ದರು ಮೂರ್ತಿರಾಯರು.

ಮೂರ್ತಿರಾಯರ ಪಾಠದ ಮತ್ತೊಂದು ಗುಣ ಎಂದರೆ ಹೇಳುವುದನ್ನು ಸ್ಪಷ್ಟವಾಗಿ ಹೇಳುವುದು. ಷೇಕ್ಸ್‌ಪಿಯರನ ಕಾಲದಲ್ಲಿಯೇ ಅವನಿಗಿಂತ ಹತ್ತು ವರ್ಷ ಚಿಕ್ಕವನಾದ ಬೆನ್ ಜಾನ್‌ಸನ್ ಎನ್ನುವವನಿದ್ದ. ಇವರಿಬ್ಬರ ವಿನೋದ ನಾಟಕಗಳು ತೀರ ಭಿನ್ನ. ಒಂದು ಉತ್ತರ ಧ್ರುವವಾದರೆ ಮತ್ತೊಂದು ದಕ್ಷಿಣ ಧ್ರುವ. ಇವುಗಳ ಸಾದೃಶ್ಯ–ವೈದೃಶ್ಯಗಳ ಅಧ್ಯಯನ ಬಹಳ ಕುತೂಹಲಕಾರಿಯಾದ್ದು. ಮೂರ್ತಿರಾಯರು ಈ ಹೋಲಿಕೆ–ವ್ಯತ್ಯಾಸಗಳನ್ನು ಎರಡು ಗಂಟೆಗಳ ಕಾಲ ಸೊಗಸಾಗಿ, ಸ್ಪಷ್ಟವಾಗಿ ವಿವರಿಸಿದರು. ಇದು ಎಷ್ಟು ಪರಿಣಾಮಕಾರಿಯಾಯಿತೆಂದರೆ ಸ್ಪಷ್ಟವಾಗಿ, ದೃಢವಾಗಿ ನನ್ನ ಮನಸ್ಸಿನಲ್ಲಿ ಉಳಿಯಿತು. ಇಪ್ಪತ್ತು ವರ್ಷಗಳ ನಂತರ ನಾನು ಎಂ.ಎ. ತರಗತಿಯಲ್ಲಿ ಷೇಕ್ಸ್‌ಪಿಯರ್, ಬೆನ್ ಜಾನ್‌ಸನ್ ಇವರ ನಾಟಕಗಳನ್ನು ಪಾಠ ಮಾಡುವಾಗ ನನ್ನ ಗುರುಗಳೂ ಹೇಳಿದ್ದನ್ನೆ ನಾನು ಹೇಳುತ್ತಿದ್ದೇನೆ ಎಂದು ವಿವರಿಸಿ, ಮೂರ್ತಿರಾಯರು ಹೇಳಿದ್ದುದನ್ನು ವಿಷಯ ಪ್ರವೇಶವನ್ನಾಗಿ ಬಳಸಿಕೊಳ್ಳುತ್ತಿದ್ದೆ. ಅನಂತರ, ಈಚೆಗಿನ ವಿಮರ್ಶೆಯ ಚರ್ಚೆ ಮಾಡುತ್ತಿದ್ದೆ.

ಎಂ.ಎ. ತರಗತಿಯಲ್ಲಿ ಅಧ್ಯಯನಕ್ಕೆ ಗೊತ್ತುಮಾಡಿದ ಪುಸ್ತಕಗಳನ್ನು ವಿವರವಾಗಿ ತರಗತಿಯಲ್ಲಿ ಪಾಠ ಮಾಡಲು ಕಾಲಾವಕಾಶ ಇರುತ್ತಿರಲಿಲ್ಲ. ನಾವು ಅಭ್ಯಾಸ ಮಾಡಬೇಕಾದ ಅಂಶಗಳನ್ನು ಓದಬೇಕಾದ ವಿಮರ್ಶಾಗ್ರಂಥಗಳನ್ನು ಮೊದಲು ಹೇಳಿ ಸ್ವಲ್ಪ ಕಾಲಾವಕಾಶ ನೀಡಿ, ತರಗತಿಯಲ್ಲಿ ಚರ್ಚೆ ಮಾಡುವುದು ಪಾಠದ ರೀತಿ. ನಾವು ತರಗತಿಯಲ್ಲಿ ಇದ್ದವರು ಮೂವರೇ. ಮೂರ್ತಿರಾಯರು ಚರ್ಚೆಯ ಮಾರ್ಗದರ್ಶಕರಾಗಿರುತ್ತಿದ್ದರು. ಅಂದು ಆರಿಸಿದ್ದ ವಿಷಯವನ್ನು ಕುರಿತು ಮುಕ್ತ ಚರ್ಚೆ. ನಾವು ಒಬ್ಬೊಬ್ಬರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಕಡೆಗೆ ಮೂರ್ತಿರಾಯರು ವಿಶ್ಲೇಷಿಸಿ ಸಾಧಾರವಾಗಿ ತಮ್ಮ ನಿಲುವನ್ನು ಪ್ರತಿಪಾದಿಸುತ್ತಿದ್ದರು. ಅವರು ತಾಳ್ಮೆ ಕಳೆದುಕೊಂಡದ್ದನ್ನು ನಾನು ಎಂದೂ ನೋಡಲಿಲ್ಲ.

ಮೂರ್ತಿರಾಯರು ಸಾಹಿತ್ಯವನ್ನು ಸಾಹಿತ್ಯ ಕೃತಿಗಳನ್ನು ಪಾಠ ಹೇಳುತ್ತಿದ್ದ ರೀತಿಯಲ್ಲೆ ನಮಗೆ ಸಾಹಿತ್ಯದ ಅನುಭವದಲ್ಲಿ ಭಾವ, ಬುದ್ಧಿಗಳೆರಡರ ಪ್ರಾಧಾನ್ಯವೂ ಅರಿವಾಗುತ್ತಿದ್ದಿತು. ಕುವೆಂಪು ಕಾವ್ಯವನ್ನು 'ಭಾವಬುದ್ಧಿಗಳ ವಿದ್ಯುದಾಲಿಂಗನ' ಎಂದು ಕರೆದರು. ಭಾವಬುದ್ಧಿಗಳ ವಿದ್ಯುದಾಲಿಂಗನದಿಂದ ಸಾಹಿತ್ಯವನ್ನು ಗ್ರಹಿಸಬೇಕಾದರೆ ಓದುಗನ ಭಾವ, ಬುದ್ಧಿಗಳೆರಡೂ ಜಾಗ್ರತವಾಗಿರಬೇಕು. ಬೆನ್ ಜಾನ್‌ಸನ್‌ನ ವಿನೋದ ನಾಟಕಗಳಲ್ಲಿ ಬುದ್ಧಿ ಜಾಗ್ರತವಾಗಿರುತ್ತದೆ. ಆದರೆ ಇಲ್ಲಿ ಹೃದಯಕ್ಕೆ ಸ್ಥಾನವಿಲ್ಲ, ಷೇಕ್ಸ್‌ಪಿಯರನ ವಿನೋದ ನಾಟಕಗಳಲ್ಲಿ ಎರಡೂ ಮಿಡಿಯುತ್ತಿರುತ್ತವೆ. ಅವನು ಎಲ್ಲ ಯುಗಗಳ ವಿನೋದ ನಾಟಕಗಳ ಕರ್ತೃಗಳಲ್ಲಿ ಒಬ್ಬನಾಗಿರುವುದಕ್ಕೆ ಮುಖ್ಯ ಕಾರಣಗಳಲ್ಲಿ ಇದೊಂದು ಎನ್ನುವುದನ್ನು ನಮ್ಮ ಅನುಭವಕ್ಕೆ ತಂದುಕೊಟ್ಟರು. 'ದ ಮರ್ಚೆಂಟ್ ಆಫ್ ವೆನಿಸ್'ನಲ್ಲಿ ಹೃದಯವನ್ನು ಭಾರ ಮಾಡುತ್ತ ತೀವ್ರ ಭಾವಗಳ ಭಾಗವೆಲ್ಲ ಮುಗಿದು ಉಲ್ಲಾಸದ ಭಾಗದಲ್ಲಿ ಅನಿರೀಕ್ಷಿತವಾಗಿ ನಾಯಕಿ ಪೋರ್ಷಿಯಳ ಬಾಯಿಂದ, ಕತ್ತಲಲ್ಲಿ ಮೋಂಬತ್ತಿಯ ಬೆಳಕನ್ನು ಕಂಡಾಗ

How for that little candle it throws his bearns'
So shines a good deed in a naughty world

(naughty ಎಂದರೆ ಇಲ್ಲಿ 'ದುಷ್ಟ') ಎಂದು ಬರುವ ಮಾತುಗಳ ಮಹತ್ವವನ್ನು ಮನಗಾಣಿಸಿದರು. ದುಷ್ಟತನ-ಸಜ್ಜನಿಕೆಗಳ ವಿರೋಧ ಜಗತ್ತಿಗೆ ಸಜ್ಜನಿಕೆಯ ಮಹತ್ವ ಇವು ಷೇಕ್ಸ್‌ಪಿಯರನ ಪ್ರಜ್ಞೆಯಲ್ಲಿ ಸದಾ ಎಚ್ಚರವಾಗಿರುತ್ತವೆ ಎಂದು ಹೇಳಿದರು. ಒಟ್ಟಿನಲ್ಲಿ ಸಾಹಿತ್ಯವನ್ನು ಓದುವ ಮತ್ತು ಮೌಲ್ಯಮಾಪನ ಮಾಡುವ ಪ್ರಕ್ರಿಯೆಗಳನ್ನು ರೂಪಿಸುವುದರಲ್ಲಿ ನೆರವಾದರು.

ನನ್ನ ಅದೃಷ್ಟ (೧೯೪೬) ಎಂದು ಕಾಣುತ್ತದೆ, ಮೂರ್ತಿರಾಯರು ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಇಂಗ್ಲಿಷ್ ಪ್ರೊಫೆಸರ್ ಆಗಿ ಬಂದರು. ನಾನು ಅಲ್ಲಿಯ ಇಂಗ್ಲಿಷ್ ಅಧ್ಯಾಪಕನಾಗಿದ್ದೆ. ಅದು ಸೆಂಟ್ರಲ್ ಕಾಲೇಜಿನ ಇಂಗ್ಲಿಷ್ ವಿಭಾಗದ ಸುವರ್ಣ ಯುಗ. ವಿಭಾಗದ ಮುಖ್ಯಸ್ಥರು ಶ್ರೇಷ್ಠ ವಿದ್ವಾಂಸರೂ, ಶ್ರೇಷ್ಠ ಪ್ರಾಧ್ಯಾಪಕರೂ ಆಗಿದ್ದ ಪ್ರೊ. ಕೆ. ಅನಂತರಾಮಯ್ಯನವರು. ಅಧ್ಯಾಪಕರಲ್ಲಿ ಶ್ರೀ ಆರ್. ಗುರುರಾಜರಾವ್, ಶ್ರೀ ಎಂ. ರಾಮರಾವ್,

ಶ್ರೀ ಕೆ. ನರಸಿಂಹಮೂರ್ತಿ ಇಂಥ ಶ್ರೇಷ್ಠ ಅಧ್ಯಾಪಕರು. ಸಂಸ್ಕೃತ ಅಧ್ಯಾಪಕರಾಗಿದ್ದ ಎಸ್. ರಾಮನಾಥರಾಯರು, ಶ್ರೀ ಎನ್. ಶಿವರಾಮಶಾಸ್ತ್ರಿಗಳು ಮೊದಲಾದವರು ನಮ್ಮ ಜೊತೆಗೇ ಕುಳಿತುಕೊಳ್ಳುತ್ತಿದ್ದರು. ಮೂರ್ತಿರಾಯರು ನಮ್ಮ ಕೊಠಡಿಗೇ ಬಂದು ಸಾಕಷ್ಟು ಕಾಲ ಕಳೆಯುತ್ತಿದ್ದರು. ಖುಷಿಯಾದ, ಹಾಸ್ಯದ ಹೊನಲಿನ ಲವಲವಿಕೆಯ ಹರಟೆಯೂ ನಡೆಯುತ್ತಿತ್ತು, ಸಾಹಿತ್ಯ ಶಿಕ್ಷಣ ಸಮಾಜದ ಆಗುಹೋಗುಗಳನ್ನು ಎಲ್ಲವನ್ನೂ ಕುರಿತು ಗಂಭೀರವಾದ ಚರ್ಚೆಯೂ ನಡೆಯುತ್ತಿತ್ತು. ಈ ವರ್ಷಗಳಲ್ಲಿಯೇ ಆಗಿನ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ (ಈಗಿನ ಗೌರ್ನ್‌ಮೆಂಟ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನಲ್ಲಿ) ವಾರಕ್ಕೊಮ್ಮೆ 'ಸಹೃದಯ ಗೋಷ್ಠಿ' ಎನ್ನುವ ಸಂಘದ ಸಭೆ ನಡೆಯುತ್ತಿತ್ತು. ನಾನು ಆಗಲೇ ಹೆಸರಿಸಿದ ಪ್ರಾಧ್ಯಾಪಕರಲ್ಲದೆ ತೀ.ನಂ.ಶ್ರೀ., ನಾ. ಕಸ್ತೂರಿ, ಜಿ. ವೆಂಕಟಸುಬ್ಬಯ್ಯ ಮೊದಲಾದವರೂ ಪ್ರಾಧ್ಯಾಪಕರಲ್ಲದ ಪರ್ವತವಾಣಿ, ಪು.ತಿ.ನ. ಮೊದಲಾದವರು ಬರುತ್ತಿದ್ದರು. ಉಪಹಾರದ ನಂತರ ಯಾರಾದರೊಬ್ಬರು ತಮ್ಮ ಕೃತಿ ಒಂದನ್ನು ಅಥವಾ ತಾವು ಮೆಚ್ಚಿದ ಕೃತಿ ಒಂದನ್ನು ಒಂದು ಗಂಟೆ ಓದುತ್ತಿದ್ದರು. ಅನಂತರ ಒಂದು ಗಂಟೆ ಮುಕ್ತ ಚರ್ಚೆ. ಇವುಗಳಲ್ಲಿ ಪ್ರಧಾನವಾಗಿ ಭಾಗವಹಿಸುತ್ತಿದ್ದವರಲ್ಲಿ ಮೂರ್ತಿರಾಯರು ಒಬ್ಬರು. ನನ್ನಂಥ ತರುಣ ಅಧ್ಯಾಪಕರಿಗೆ ಸೆಂಟ್ರಲ್ ಕಾಲೇಜಿನ ಇಂಗ್ಲಿಷ್ ವಿಭಾಗದ ಕೊಠಡಿಯಲ್ಲಿ ಸಹೃದಯ ಗೋಷ್ಠಿಯು ಅಮೂಲ್ಯ ತರಬೇತಿ ಯನ್ನು ನೀಡಿದವು. ಈ ಹರಟೆ-ಚರ್ಚೆಗಳಲ್ಲಿಯೇ ನನಗೆ ಮೂರ್ತಿರಾಯರ ಸೊಗಸಾದ ಹಾಸ್ಯಪ್ರಜ್ಞೆ, ಸಂಭಾಷಣೆಯ ಕೌಶಲ ಇವುಗಳ ಪರಿಚಯ ಆದದ್ದು.

೧೯೫೨ರಲ್ಲಿ ನಾನು ವರ್ಗವಾಗಿ ದಾವಣಗೆರೆಗೆ ಹೋದೆ. ಮೂರ್ತಿರಾಯರೂ ನಿವೃತ್ತರಾಗಿ ಮೈಸೂರಿಗೆ ಹೋದರು. ೧೯೬೪ರಲ್ಲಿ ನಾನು ಬೆಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಇಂಗ್ಲಿಷ್ ವಿಭಾಗಕ್ಕೆ ಬಂದೆ. ಆ ಸುಮಾರಿನಲ್ಲಿ ಮೂರ್ತಿರಾಯರು ಬೆಂಗಳೂರಿನಲ್ಲಿ ಮಗನ ಮನೆಗೆ ಬಂದರು. ಆಗಿನಿಂದ ಅವರು ೨೦೦೪ರಲ್ಲಿ ೧೦೪ನೆ ವಯಸ್ಸಿನಲ್ಲಿ ತೀರಿಕೊಳ್ಳುವವರೆಗೆ ನನಗೆ ಅವರೊಡನೆ ನಿಕಟ ಸಂಪರ್ಕವಿತ್ತು. ಅವರು ನಮ್ಮ ಮನೆಯ ಒಬ್ಬ ಹಿರಿಯರೇ ಆಗಿಹೋಗಿದ್ದರು. ಇನ್ನಿಬ್ಬರು ಸ್ನೇಹಿತರೊಡನೆ ನಾವು ಕೆಮ್ಮಣ್ಣುಗುಂಡಿಗೆ ಹೋಗಿ ನಾಲ್ಕು ದಿನ ಇದ್ದು ಬಂದೆವು. ನಾನು ಮೂರ್ತಿರಾಯರು ಒಂದೇ ಕೊಠಡಿಯಲ್ಲಿದ್ದೆವು. ಆ ನಾಲ್ಕು ದಿನ ನಾವು ಚರ್ಚೆ ಮಾಡದ ವಿಷಯವಿಲ್ಲ.

ಕಾಲ ಕಳೆದಂತೆ ನನಗೆ, ಮೂರ್ತಿರಾಯರು ಪರಿಪಕ್ವತೆಗೆ ಮತ್ತೊಂದು ಹೆಸರು ಎನ್ನುವ ಭಾವನೆ ಬಲವಾಗುತ್ತ ಬಂದಿತು. ಪರಿಪಕ್ವತೆ ಎನ್ನುವುದು ಹಲವು ಗುಣಗಳ ಸಮ್ಮಿಲನದಿಂದ ಮೂಡುತ್ತದೆ. ಜೀವನಾನುಭವ, ಚಿಂತನೆ ಮಿದುಳು-ಹೃದಯಗಳಿಗೆ ಎಷ್ಟು ಸಲ್ಲಬೇಕೊ ಅಷ್ಟು ಪ್ರಾಧಾನ್ಯವನ್ನು ನೀಡುವುದು, ತಾಳ್ಮೆ ನನಗೆ ಒಪ್ಪಿಗೆ ಇಲ್ಲದ ಅಭಿಪ್ರಾಯಗಳನ್ನೂ ವಾದಗಳನ್ನೂ ಗಂಭೀರವಾಗಿ ಪರಿಶೀಲಿಸುವ ಸಹನೆ, ತತ್ಕಾಲದ ಪರಿಣಾಮವಷ್ಟನ್ನೆ ಗಮನಿಸಿ ನಿರ್ಧಾರಗಳನ್ನು ಕೈಗೊಳ್ಳದೆ ಎಂದಿಗೂ ಸಲ್ಲುವ ಮೌಲ್ಯಗಳ ಬೆಳಕಿನಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು, ಬದುಕಿನ ಪ್ರೀತಿ – ಇಂಥ ಹಲವಾರು ಗುಣಗಳು ಸೇರಿ ಪರಿಪಕ್ವತೆಯಾಗಿ ಮೂಡುತ್ತವೆ ಎಂದು ನನ್ನ ಭಾವನೆ. ಮೂರ್ತಿರಾಯರೊಡನೆ ವಾದಮಾಡಿದ್ದೇನೆ ತೀವ್ರ

ಭಿನ್ನಾಭಿಪ್ರಾಯವನ್ನು ಹೇಳಿದ್ದೇನೆ. ಇದರಿಂದ ನಮ್ಮ ವಿಶ್ವಾಸಕ್ಕೆ ಎಳ್ಳಷ್ಟೂ ಕುಂದು ಬರಲಿಲ್ಲ. ಒಮ್ಮೊಮ್ಮೆ ಅವರು ಆಡುತ್ತಿದ್ದ ಮಾತುಗಳು ನನ್ನ ಮನಸ್ಸಿನಲ್ಲಿ ಉಳಿದಿವೆ. ಒಮ್ಮೆ 'ಸಂಸ್ಕೃತಿ' ಎಂದರೆ ಏನು ಎಂದು ಚರ್ಚೆ ಮಾಡುತ್ತಿದ್ದೆವು. ಮೂರ್ತಿರಾಯರು ಒಬ್ಬ ಪರ್ಷಿಯನ್ ಕವಿಯ ವಾಕ್ಯವನ್ನು ಉದ್ಧರಿಸಿದರು: "ತಬ್ಬಲಿ ಮಗು ಎದುರಿಗಿರುವಾಗ ನಿನ್ನ ಮಗುವಿಗೆ ಮುತ್ತು ಕೊಡಬೇಡ" ಅವರಿಗೆ ಒಂದು ನೂರು ವರ್ಷಗಳಾದ ದಿನ ನಾನು ಅವರನ್ನು ಕೇಳಿದೆ, "Sir, how does it feel to be a hundred?" ಅವರು ಹೇಳಿದರು. "I feel grateful to life for all that it has given me"

ಇದೇ ಜೀವನ ಪ್ರೀತಿ, ಇದೇ ಸಂಸ್ಕೃತಿ ಅವರ ಸಾಹಿತ್ಯದಲ್ಲಿ ಕಾಣುತ್ತೇವೆ. ಮೂರ್ತಿರಾಯರು ನಮ್ಮ ನವೋದಯ ಯುಗದ ಒಬ್ಬ ಮುಖ್ಯ ಬರಹಗಾರರು, ನವೋದಯ ಯುಗದಲ್ಲಿ ಇಂಗ್ಲಿಷ್ ಸಾಹಿತ್ಯದಿಂದ ನಾವು ಹಲವು ಪ್ರಕಾರಗಳನ್ನು ತೆಗೆದುಕೊಂಡು ನಮ್ಮ ಸಾಂಸ್ಕೃತಿಕ ವಾತಾವರಣಕ್ಕೆ ಅನುಗುಣವಾಗಿ ಬೆಳೆಸಿಕೊಂಡೆವು. ಇವುಗಳಲ್ಲಿ ಒಂದು ಲಲಿತಪ್ರಬಂಧ. ಇದು ಮೂರ್ತಿರಾಯರಿಗೆ ಹೇಳಿ ಮಾಡಿಸಿದ ಪ್ರಕಾರ. ಅವರ ವಿದ್ವತ್ತು ಚಿಂತನಶೀಲತೆ, ಪ್ರಸನ್ನತೆ, ತಿಳಿಹಾಸ್ಯ ಎಲ್ಲ ಈ ಮಾಧ್ಯಮಕ್ಕೆ ಒದಗಿಬಂದವು. ಅವರು ದಿವಾನಖಾನೆಯ ಅಂದಚೆಂದಗಳನ್ನು ಕುರಿತು ಬರೆಯಲಿ ಎತ್ತಿನ ಬಂಡಿಯ ಪ್ರಯಾಣವನ್ನು ಕುರಿತು ಬರೆಯಲಿ, 'ವ್ಯಾಘ್ರಗೀತೆ'ಯನ್ನು ರಚಿಸಲಿ ಕಾವ್ಯಗಳನ್ನು ಕುರಿತು ಬರೆಯಲಿ, ಅವರ ವಿಶಿಷ್ಟ ವ್ಯಕ್ತಿತ್ವ ಅದರಲ್ಲಿ ಪ್ರಕಟವಾಗುತ್ತದೆ. ದೆವ್ವದ ವಿಷಯದಲ್ಲಿಯೂ ಅವರು ಅನುಕಂಪ ತೋರಿಸಬಲ್ಲರು. ಫ್ರೆಂಚ್ ನಾಟಕಕಾರ ಮೋಲಿಯೇರ್‌ನ ಒಂದು ನಾಟಕವನ್ನು ಆಧರಿಸಿ, ಕನ್ನಡದ ನೆಲದಲ್ಲಿಯೇ ಹುಟ್ಟಿದಷ್ಟು ಸಹಜವಾದ ಸೊಗಸಾದ ನಾಟಕ 'ಆಷಾಢಭೂತಿ'ಯನ್ನು ಬರೆದರು. ಅದು ಹಾಸ್ಯ ನಾಟಕವಷ್ಟೇ ಅಲ್ಲ, ದುಷ್ಟತನದ ಭಯಂಕರ ಸ್ವರೂಪವನ್ನು ಕುರಿತು ಚಿಂತನೆಗೆ ಪ್ರಚೋದಿಸುತ್ತದೆ. ಆತ್ಮಚರಿತ್ರೆಯೂ ನಮಗೆ ಪಶ್ಚಿಮದಿಂದ ಬಂದ ಪ್ರಕಾರವಲ್ಲ ಮೂರ್ತಿರಾಯರ 'ಸಂಜೆಗಣ್ಣಿನ ಹಿನ್ನೋಟ' ಒಂದು ವಿಶಿಷ್ಟ ಆತ್ಮಚರಿತ್ರೆ. ಒಂದು ಶತಮಾನದ ಹಿಂದಿನ ಸಮಾಜ-ಸಂಸ್ಕೃತಿಗಳಿಂದ ಪ್ರಾರಂಭಿಸಿ, ಕ್ರಮೇಣ ಆದ ಬದಲಾವಣೆಗಳನ್ನು ಚಿತ್ರಿಸುತ್ತದೆ. ಈ ಹಿನ್ನೆಲೆಯಲ್ಲಿ ಮೂರ್ತಿರಾಯರ ವ್ಯಕ್ತಿತ್ವ ಚಿಂತನೆ ಬೆಳೆದುದನ್ನು ಚಿತ್ರಿಸುತ್ತದೆ. ಸೊಗಸಾದ ಆತ್ಮವೃತ್ತದೊಂದಿಗೆ ಇದೊಂದು ಸಾಂಸ್ಕೃತಿಕ ದಾಖಲೆಯಾಗುತ್ತದೆ. ಪ್ರವಾಸ ಸಾಹಿತ್ಯ ನಮ್ಮಲ್ಲಿ ಈಚೆಗೆ ಬೆಳೆದು ಬಂದ ಪ್ರಕಾರ. 'ಅಪರ ವಯಸ್ಕನ ಅಮೆರಿಕ ಯಾತ್ರೆ" ಒಂದು ಸೊಗಸಾದ ಕೃತಿ. ಉದ್ದಕ್ಕೂ ಅಮೆರಿಕ ಮತ್ತು ಭಾರತೀಯ ಸಂಸ್ಕೃತಿಗಳನ್ನು ಪಕ್ಕಪಕ್ಕದಲ್ಲಿಟ್ಟು ನೋಡುತ್ತಾರೆ. ಎಲ್ಲಿಯೂ ಭಾವಾವೇಶದ ನಿರ್ಣಯಗಳಿಲ್ಲ. ಈ ವೃತ್ತಾಂತದಲ್ಲಿ ಬರುವ ವ್ಯಕ್ತಿಗಳು ಜೀವಂತವಾಗುತ್ತಾರೆ, ನಮಗೆ ವಾಸ್ತವವಾಗುತ್ತಾರೆ. ಸಾಹಿತ್ಯ ವಿಮರ್ಶೆಗೆ ಮೂರ್ತಿರಾಯರ ಕೊಡುಗೆ ವೈವಿಧ್ಯಮಯವಾದದ್ದು. ಮೌಲಿಕವಾದದ್ದು. ಭಾರತೀಯ ಸಾಹಿತ್ಯ, ಅದರ ಭಾಗವಾಗಿ ಕನ್ನಡ ಸಾಹಿತ್ಯ, ಪಾಶ್ಚಾತ್ಯ ಸಾಹಿತ್ಯ ಮೂರನ್ನೂ ಕುರಿತು ಬರೆದಿದ್ದುದಲ್ಲದೆ 'ಸಾಹಿತ್ಯ ಮತ್ತು ಸತ್ಯ'ದಂತಹ ಕೃತಿಯಲ್ಲಿ ಸಾಹಿತ್ಯ ಮೀಮಾಂಸೆಯನ್ನೂ ಕೊಟ್ಟಿದ್ದಾರೆ ('ಸಾಹಿತ್ಯ ಮತ್ತು ಸತ್ಯ' ಉಪನ್ಯಾಸವನ್ನು ಪ್ರೊ|| ಮೂರ್ತಿರಾಯರು ಮಾಡಿದಾಗ ನಾನು ಹೋಗಿದ್ದೆ. ಅದೊಂದು ಅದ್ಭುತ ರಚನೆ. ಹೂವಿನ ಬೇರೆ ಬೇರೆ ಎಳೆಗಳನ್ನು ಸಿದ್ಧಮಾಡಿಕೊಂಡು ಮೊದಲು ಎರಡೆರಡನ್ನು

ಹೆಣೆದು ಅನಂತರ ಇವನ್ನು ಹೆಣೆದು ಸೊಗಸಾದ ಹಾರವನ್ನು ಮಾಡುವ ಕಲೆ ಇಲ್ಲಿನದು) ಬೇರೆ ಬೇರೆ ಅಂಶಗಳನ್ನು ಸ್ಥಾಪಿಸಿ ಮತ್ತೆ ಅವಕ್ಕೆ ಹಿಂದಿರುಗಿ ಜೋಡಿಸಿಕೊಂಡು ನಮ್ಮ ಎದುರಿಗೇ ಉಪನ್ಯಾಸವನ್ನು ಅಂದು ಹೆಣೆದರು. 'ಪೂರ್ವ ಸೂರಿಗಳು' ಎನ್ನುವ ಪುಸ್ತಕದಲ್ಲಿ ಸೀತಾಪರಿತ್ಯಾಗ ಪ್ರಸಂಗವನ್ನು ಬೇರೆ ಬೇರೆ ಕವಿಗಳು ನಿರೂಪಿಸಿರುವ ವಿಧಾನಗಳನ್ನು ಹೋಲಿಸುತ್ತಾರೆ. ಮಾಸ್ತಿಯವರ ಕಥೆಗಳನ್ನು ಅಧ್ಯಯನ ಮಾಡುವ ಸೊಗಸಾದ ಪುಸ್ತಕವನ್ನು ಬರೆದರು. ಷೇಕ್ಸ್‌ಪಿಯರನನ್ನು ಕುರಿತು ಎರಡು ಸಂಪುಟಗಳ ವಿಮರ್ಶೆಯನ್ನು ಬರೆಯಲು ಉದ್ದೇಶಿಸಿದ್ದರು. ಮೊದಲನೆಯ ಸಂಪುಟ ಮಾತ್ರ ಪ್ರಕಟವಾಯಿತು. ಇದೇ ಅನೇಕ ಹೊಸ ಹೊಳಹುಗಳಿರುವ ಅಸಾಧಾರಣ ವಿಮರ್ಶೆ; ಎರಡನೆಯ ಸಂಪುಟವನ್ನು ಅವರು ಬರೆಯಲಿಲ್ಲವಲ್ಲ ಎಂದು ನಾವು ವಿಷಾದಿಸುವಂತೆ ಮಾಡುವ ವಿಮರ್ಶೆ. ಮಕ್ಕಳಿಗಾಗಿಯೇ ಮೂರ್ತಿರಾಯರು ಇಂಗ್ಲಿಷಿನಿಂದ ಅನುವಾದಿಸಿ 'ಹವಳದ ದೀಪ'ದಂತಹ ಕೃತಿಗಳನ್ನು ಬರೆದಿದ್ದಾರೆ.

ಮೂರ್ತಿರಾಯರ ಕನ್ನಡ ಮನಸ್ಸನ್ನು ಸೆಳೆಯುವಂಥದು. ಅದರ 'ರೇಂಜ್' ಅಸಾಧಾರಣ. ಸರಳತೆ, ಖಚಿತತೆ, ಲವಲವಿಕೆ, ಪ್ರಸಾರ ಗುಣಗಳ ಸಮ್ಮಿಳನ ಅದಕ್ಕೆ ವೈಶಿಷ್ಟ್ಯವನ್ನು ತರುತ್ತದೆ. ವೃತ್ತಾಂತ, ವರ್ಣನೆ, ಚಿಂತನೆ, ವಾದ, ಮನಒಲಿಕೆ, ಗಾಢವಾದ ಭಾವ – ಎಲ್ಲಕ್ಕೂ ಶಕ್ತವಾದ ಶೈಲಿ ಅದು. ಅದರಲ್ಲಿ ಸಾಮಾನ್ಯವಾಗಿ ಹರಿಯುವ ತಿಳಿಹಾಸ್ಯ ಅದಕ್ಕೊಂದು ಮೆರುಗನ್ನು ಕೊಡುತ್ತದೆ. ಅವರ ನಿರುದ್ವಿಗ್ನ, ಸ್ನೇಹಪೂರ್ಣ, ಸ್ಫುಟವಾದ ರೀತಿಗೆ ಹೊಂದಿಕೊಂಡ ಶೈಲಿ.

ಗುರುಗಳ ವಿಷಯದಲ್ಲಿ ನಾನು ಅದೃಷ್ಟವಂತ. ಬಿ.ಎಂ.ಶ್ರೀ., ಎಸ್. ವಿ. ರಂಗಣ್ಣ, ಕೆ. ಅನಂತರಾಮಯ್ಯ, ವಿ.ಸೀ., ಜಿ.ಪಿ. ರಾಜರತ್ನಂ ಮೊದಲಾದ ಗುರುಶ್ರೇಷ್ಠರು ನನಗೆ ಲಭ್ಯವಾದರೂ ಅವರನ್ನೆಲ್ಲ ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಅಂಥ ಮತ್ತೊಬ್ಬ ಗುರು ಪ್ರೊ॥ ಎ. ಎನ್. ಮೂರ್ತಿರಾಯರು.

❖

# ಆತ್ಮೀಯ ಗುರು
## (ಎಲ್. ಎಸ್. ಎಸ್.)

---

*● ಟಿ.ಜಿ. ನರಸಿಂಹಮೂರ್ತಿ*

"ಗುರುವೋ ಬಹಸ್ಸಂತಿ ಶಿಷ್ಯ ವಿತ್ತಾಪಹಾರಕಾಃ
ಗುರುವೋ ವಿರಳಸ್ಸಂತಿ ಶಿಷ್ಯ ಹೃತ್ತಾಪಹಾರಕಾಃ ॥

ಎಂಬುದೊಂದು ಸಂಸ್ಕೃತ ಸುಭಾಷಿತ.

ತೀರ್ಥರೂಪ ಸಮಾನರೂ, ಪ್ರಾತಃಸ್ಮರಣೀಯರೂ ಆದ ಶ್ರೀ ಎಲ್ಲೆಸ್ಸೆಸ್ ನನ್ನ ವಿದ್ಯಾಗುರು. ಶಿಷ್ಯ ಹೃತ್ತಾಪಹಾರಕರಾದ ನಮ್ಮ ಆತ್ಮೀಯ ಮೇಷ್ಟ್ರು. ಚಿಕ್ಕ ಮೂರ್ತಿ, ದೊಡ್ಡ ಕೀರ್ತಿ– ಕ್ಲೀಷೆಯಾದರೂ ಅನ್ವರ್ಥ.

ಸುಮಾರು ಐದಡಿ ಶರೀರ, ದೃಢ ಶಾರೀರ, ಕಂದು ಅಥವಾ ಕರಿಯ ಬಣ್ಣದ ಸೂಟು, ಕೆಂಪು ಟೈ, ಫಾರ್ ಎ ಚೇಂಜ್ ಎಂಬಂತೆ ಕೆಲವು ಬಾರಿ ಅವೇ ಬಣ್ಣದ ಸಫಾರಿ ಸೂಟು, ಶಾಲಾ ವಿದ್ಯಾರ್ಥಿಯಂತೆ ನೀಟಾಗಿ ಬೈತಲೆ ತೆಗೆದು ಪಕ್ಕಕ್ಕೆ ಬಾಚಿದ ತಲೆಗೂದಲು, ಮುಖಕ್ಕೆ ಸ್ವಲ್ಪ ದೊಡ್ಡದೇ ಎನಿಸುವ ಕಪ್ಪು ಫ್ರೇಮಿನ ಕನ್ನಡಕ, ಕೈಯಲ್ಲೊಂದು ಜಿಪ್ ಹಾಕಿ ತೆಗೆಯುವಂತಹ ನಾನ್ – ಎಕ್ಸಿಕ್ಯುಟಿವ್ ಬ್ರೀಫ್ ಕೇಸ್, ಸದಾ ನಗುಮುಖ – ಇದು ಮೇಷ್ಟ್ರರ ಸಾಮಾನ್ಯ ಗೆಟಪ್. ವಿನಯ, ಸೌಜನ್ಯ, ಸಜ್ಜನಿಕೆಗಳ ಸಾಕಾರಮೂರ್ತಿ – ಮತ್ತೆ ಕ್ಲೀಷೆಯಾದರೂ ಅನ್ವರ್ಥ.

೧೯೭೭ರಲ್ಲಿ ಸರಕಾರಿ ಕಲಾ ಕಾಲೇಜಿನಲ್ಲಿ ಬಿ.ಎ. ಇಂಗ್ಲಿಷ್ ಆನರ್ಸ್ ಮುಗಿಸಿ ಮೊದಲ ವರ್ಷದ ಎಂ.ಎ. ತರಗತಿಗೆ ಎದುರಿಗಿರುವ ಸೆಂಟ್ರಲ್ ಕಾಲೇಜು ಸೇರಿದಾಗ ಈ ವಾಮನ ಮೂರ್ತಿಯ ದೈತ್ಯ ಪ್ರತಿಭೆಯ ವಿರಾಟ್ ದರ್ಶನಾರಂಭ. ಆಗ ತಾನೇ ಬೆಂಗಳೂರು ವಿಶ್ವವಿದ್ಯಾಲಯದ ಪಿಜಿ ತರಗತಿಗಳು ತನ್ನ ನೂತನ ಕ್ಯಾಂಪಸ್ 'ಜ್ಞಾನಭಾರತಿ'ಗೆ ಸ್ಥಳಾಂತರ ಗೊಳ್ಳುವ ಪ್ರಕ್ರಿಯೆ ಪ್ರಾರಂಭವಾಗಿತ್ತು. ಒಂದೊಂದೇ ವಿಭಾಗ ಅಲ್ಲಿಗೆ ಶಿಫ್ಟ್ ಆಗುತ್ತಿತ್ತು ಕೂಡ. ನಮ್ಮ ಇಂಗ್ಲಿಷ್ ವಿಭಾಗದ ಜ್ಯೂನಿಯರ್ ಎಂ.ಎ. ತರಗತಿಗಳು ಆ ವೇಳೆಗಾಗಲೇ ಇಲ್ಲಿಯೇ ಪ್ರಾರಂಭಗೊಂಡಿದ್ದುದರಿಂದಲೋ ಅಥವಾ ಜ್ಞಾನಭಾರತಿಯಲ್ಲಿ ಇಂಗ್ಲಿಷ್ ವಿಭಾಗದ ಕಟ್ಟಡ ಇನ್ನೂ ಪೂರ್ಣಗೊಂಡಿರಲಿಲ್ಲವೆಂಬ ಕಾರಣಕ್ಕಾಗಿಯೋ ನಾವೆಲ್ಲ ಈ ಐತಿಹಾಸಿಕ ಕೆಂಪು ಕಟ್ಟಡದಲ್ಲಿಯೇ ಪಾಠ ಕೇಳುತ್ತಿದ್ದೆವು. ಜಯನಗರದಲ್ಲಿ ನಮ್ಮ ಮನೆ. ಸಾಮಾನ್ಯವಾಗಿ

ಕಾಲೇಜಿಗೆ ಸೈಕಲ್ ಸವಾರಿ. ಕಾರಣಾಂತರಗಳಿದ್ದರೆ ನಾಲ್ಕನೇ ನಂಬರ್ ಬಸ್ಸು. ಹತ್ತು ಪೈಸೆ ಟಿಕೀಟು. ಇಂತಹ ಸಂದರ್ಭದಲ್ಲೊಮ್ಮೆ ಭರ್ತಿ ಬಸ್ಸು ಹತ್ತಿದಾಗ, ಎಲ್ಲೋ ಒಂದೆರಡು ಸೀಟುಗಳಿದ್ದವು. ಒಂದು ಕಿಟಕಿ ಕಡೆಯ ಸೀಟಿನಲ್ಲಿ ಪುಸ್ತಕದಲ್ಲಿ ತಲ್ಲೀನರಾದ ಮೇಷ್ಟ್ರು. ಪಕ್ಕದಲ್ಲಿ ಸಂಕೋಚದಿಂದ ನಿಂತಿದ್ದ ನನ್ನನ್ನು "ಬನ್ನಿ" ಎಂದಷ್ಟೇ ಹೇಳಿ ಜರುಗಿ ಸ್ಥಳಾವಕಾಶ ಮಾಡಿಕೊಟ್ಟಾಗ, ಒಂದು ರೀತಿಯ ಅವ್ಯಕ್ತಾನಂದ, ಭಯ, ಬಿಗುಮಾನ, "ಇಲ್ಲೇನಾ ಮನೆ?" ಎಂದಾಗ ಈಗಾಗಲೇ ಅವರಿಂದ ಗುರುತಿಸಲ್ಪಟ್ಟಿರುವ ಹೆಮ್ಮೆ. ಆಂಗ್ಲ ಸಾಹಿತ್ಯದ ಬಗ್ಗೆ ಆನರ್ಸ್ ವಿದ್ಯಾರ್ಥಿಗೆ ಇರಬೇಕಾದಷ್ಟು ಪ್ರವೇಶವಿಲ್ಲದ ನನ್ನನ್ನು ಅದಕ್ಕೆ ಸಂಬಂಧಿಸಿದಂತೆ ಏನಾದರೂ ಕೇಳಿಬಿಟ್ಟರೆ ಹೇಗೆಂಬ ದಿಗಿಲಿನಿಂದ ಕುಳಿತದ್ದನ್ನು ಗಮನಿಸಿಯೇ ಏನೋ, ಮೇಷ್ಟ್ರು ಅಂತಹುದೇನನ್ನೂ ಕೇಳಲಿಲ್ಲ. ಉಭಯ ಕುಶಲೋಪರಿ, ಊರು ಕೇರಿಗಳ ಬಗ್ಗೆ ನಾಲ್ಕು ಸಾಮಾನ್ಯ ಮಾತುಗಳ ನಂತರ ಪುನಃ ತಮ್ಮ ಪುಸ್ತಕದಲ್ಲಿ ತಲ್ಲೀನ. ಇದಾದ ಮೇಲೆ ಹಲವಾರು ಬಾರಿ ವಿವಿದೆಡೆ ಭೇಟಿಯಾದಾಗ ಮೇಷ್ಟರು ತೋರಿದ ಆತ್ಮೀಯತೆ, ಪ್ರೀತಿ ವಿಶ್ವಾಸ, ಪಿತೃವಾತ್ಸಲ್ಯಗಳು ನನಗೆ ಇಂದಿಗೂ ಲಭಿಸುತ್ತಿವೆ (ಪ್ರತೀ ದಿನ ಬೆಳಿಗ್ಗೆ ೬ ರಿಂದ ೬.೧೫ರ ಮಧ್ಯೆ ಜೆ. ಪಿ. ನಗರದ ರಂಗಶಂಕರದ ಆಸುಪಾಸಿನಲ್ಲಿ "ಕೈ ಹಿಡಿದು ನಡೆಸುವ" ತಮ್ಮ ಪತ್ನಿಯೊಡನೆ ವಾಕಿಂಗ್‌ಗೆ ಬರುವ ಮೇಷ್ಟ್ರ ದರ್ಶನ ಭಾಗ್ಯ ಲಭ್ಯ. "ಹೇಗಿದ್ದೀರಿ?, ಮನೆಯವರು ಚೆನ್ನಾಗಿದ್ದಾರಾ?" ಎಂಬ ಎಂದಿನ – ಅಫಬಲ್ ಎನ್‌ಕ್ವೈರಿ).

ನಮ್ಮ ಸ್ನಾತಕೋತ್ತರ ವಿದ್ಯಾರ್ಥಿ ಜೀವನ ತನ್ನದೇ ಆದ ವಿಶೇಷಗಳನ್ನೊಳಗೊಂಡಿತ್ತು. ೨೦ ವಿದ್ಯಾರ್ಥಿಗಳು, ೬೦ ವಿದ್ಯಾರ್ಥಿನಿಯರ ಇಂಗ್ಲಿಷ್ ವಿಭಾಗವಂತೂ ವರ್ಣರಂಜಿತವಾಗಿತ್ತು. ಸೂಟುಬೂಟುಗಳ, ಗತ್ತುಗಮ್ಮತ್ತುಗಳ ಪಾಂಡಿತ್ಯವಂತರಾದ ಅಧ್ಯಾಪಕ ವೃಂದವಿತ್ತು. ಅಲ್ಲಿ "ಏಮಪ್ಪಾ, ಮೂರ್ತಿ, ಬಾಗುಂಡಾವಾ?" ಎಂಬ ಲಿಂಗ್ವಿಸ್ಟಿಕ್ ಅಫಿನಿಟಿ ತೋರುವ ಇಲಾಖಾ ಮುಖ್ಯಸ್ಥ ಪ್ರೊ. ಭರತ್‌ರಾಜ್ ಸಿಂಗ್ ಇದ್ದರು; ಓದಲು ಇನ್ನೇನೂ ಉಳಿಸಿಯೇ ಇಲ್ಲವೇನೋ ಎಂಬಷ್ಟು ಅಧ್ಯಯನಶೀಲರಾದ ಡಾ. ಎಸ್. ರಾಮಸ್ವಾಮಿ ಇದ್ದರು; ಹೈಸ್ಕೂಲಿನ ಗಣಿತದ ಶಿಕ್ಷಕರಂತೆ ಇಡೀ ಚಾಕ್‌ಪೀಸ್‌ನ ಡಬ್ಬದೊಂದಿಗೆ ರಿಜಿಸ್ಟರ್, ಪಠ್ಯಗಳೊಂದಿಗೆ ಸಮಯಕ್ಕೆ ಸರಿಯಾಗಿ ಹಾಜರಾಗಿ, ಬೋರ್ಡ್ ಭರ್ತಿ ಸುಂದರವಾಗಿ ಬರೆದು ಪಾಠಮಾಡುತ್ತಿದ್ದ ಪ್ರೊ. ಡಬ್ಲ್ಯೂ.ಡಬ್ಲ್ಯೂ.ಎಸ್. ಭಾಸ್ಕರ್ ಇದ್ದರು; ಟಿ.ಎಸ್. ಎಲಿಯಟ್ ನಿಂದ ಮೈಕೇಲ್ ಜಾಕ್ಸನ್‌ವರೆಗೆ ವೈವಿಧ್ಯಮಯ ವಿಷಯಗಳನ್ನು ಡಿಸ್ಕಸ್ ಮಾಡುತ್ತಿದ್ದ ಟಿ. ಜಿ. ವೈದ್ಯನಾಥನ್ ಇದ್ದರು. ಡ್ರೆಸ್ ಮಾಡಿಕೊಳ್ಳುವುದರ ಬಗ್ಗೆ ಸಾಕಷ್ಟು ಗಮನಕೊಡುತ್ತಿದ್ದ, ಇಂಗ್ಲಿಷಿನವರಂತೆ ಕಾಣುತ್ತಿದ್ದ ಪ್ರೊ. ಹಸನ್ ಮನ್ಸೂರ್ ಇದ್ದರು; ಲಂಚ್ ಅವರ್‌ನಲ್ಲಿ ನೆಚ್ಚಿನ ವಿದ್ಯಾರ್ಥಿಗಳ ಗುಂಪಿನೊಂದಿಗೆ ನೂತನ ಕ್ಯಾಂಪಸ್ಸಿನ ಕಾಡುಮೇಡು ಅಲೆಯುತ್ತಿದ್ದ ಡಾ. ವಿಮಲಾ ರಾವ್ ಇದ್ದರು; ಉಂಡೆ ಮಾಡಿದ ಕರವಸ್ತ್ರವನ್ನು ಬಾಯಿಗೆ ಅಡ್ಡಹಿಡಿದು, ಇಂಗ್ಲಿಷ್ ಪಾಠದ ಮಧ್ಯೆ ಕನ್ನಡದಲ್ಲಿ ಬೈಯ್ಯುತ್ತಿದ್ದ ಪಿ. ಲಂಕೇಶ್ ಇದ್ದರು; ಸೂಟುಧಾರಿ, ಅಕೆಡೆಮಿಕ್ಸ್ ಮಾತ್ರ ಮಾತನಾಡುತ್ತಿದ್ದ ಡಾ. ಶ್ರೀನಾಥ್ ಇದ್ದರು. ಅಲ್ಲಿ ಎಲ್ಲೆಸ್ಸೆಸ್ ಇದ್ದರು.

ಅಚ್ಚ ಕನ್ನಡಿಗರಾದ ಮೇಷ್ಟ್ರು ಇಂಗ್ಲಿಷ್ ಭಾಷಾಕೋವಿದರಾದರೂ, ಅವಶ್ಯವಿದ್ದೆಡೆ ಮಾತ್ರ

ಆ ಭಾಷೆ ಬಳಸುತ್ತಿದ್ದರು – ಒಂದು ತರಗತಿ, ಎರಡು – ಅದರ ಹೊರತು ಬೇರೆ ಭಾಷೆ ಅರಿಯದಿದ್ದವರೊಂದಿಗೆ, ಇದರ ವಿನಃ ಅವರ ಯೋಚನೆ, ವ್ಯವಹಾರ, ಎಲ್ಲ ಕನ್ನಡವೇ. ಹಾಗಾಗಿ ಅವರೊಡನೆ ಸ್ವಲ್ಪ ಹೆಚ್ಚಿನ ಸಲುಗೆ.

ತರಗತಿಗಳಲ್ಲಿ ಅವರ ಸರಳ ಪಾಠ ಪ್ರೌಢವೂ, ವಿದ್ವತ್ಪೂರ್ಣವೂ ಆಗಿತ್ತು. ಒಂದು ಗಂಟೆಯ ಅವಧಿಯ ಪ್ರವಚನಕ್ಕೆ ಅವರ ಬಳಿ ನಾಲ್ಕು ಗಂಟೆಗೆ ಸಾಕಾಗುವಷ್ಟು ಸರಕು ಇದ್ದದ್ದು ಎಲ್ಲರಿಗೂ ತಿಳಿಯುತ್ತಿತ್ತು. ಎಂಬತ್ತರಷ್ಟು ವಿದ್ಯಾರ್ಥಿಗಳ ಪ್ಲಾಟ್‌ಫಾರಂ ರಹಿತ ಕೊಠಡಿಯಲ್ಲಿ, ಪ್ರತಿಧ್ವನಿಸುವ 'ಬೇಸ್‌ವಾಯ್ಸ್'ನಲ್ಲಿ 'ಕಾಂಟರ್‌ಬರಿ ಟೇಲ್ಸ್', 'ಫೇರಿ ಕ್ವೀನ್', 'ಟೆಂಪೆಸ್ಟ್', ರೊಮಾಂಟಿಕ್ಸ್, ಕ್ಲಾಸಿಕಲ್ ಮತ್ತು ನಿಯೋ ಕ್ಲಾಸಿಕಲ್ಸ್‌ಗಳು ವಿಮರ್ಶಾತ್ಮಕವಾಗಿ, ಸ್ವಲ್ಪ ಸ್ವಲ್ಪವಾಗಿ ನಮ್ಮನ್ನು ತಲುಪುತ್ತಿದ್ದವು. ಸಂಪೂರ್ಣವಾಗಿ ಅರ್ಥವಾಗದ ಭಾಗಗಳನ್ನು ಉಪನ್ಯಾಸಕರ ಕೊಠಡಿಯಲ್ಲಿ, ತರಗತಿಯ ಬಿಗುವಿಲ್ಲದ ವಾತಾವರಣದಲ್ಲಿ ಸ್ನೇಹಪೂರ್ವಕವಾಗಿ ಮೇಷ್ಟ್ರು ವಿವರಿಸುತ್ತಿದ್ದ ರೀತಿ ಆಪ್ಯಾಯಮಾನವಾಗಿತ್ತು.

ಎಂ.ಎ. ತರಗತಿಗೆ ನಾನು ಆರಿಸಿಕೊಂಡ ಐಚ್ಛಿಕ ವಿಷಯ ಕನ್ನಡ. ಈ ತರಗತಿಗೆ ಮೂರೇ ವಿದ್ಯಾರ್ಥಿಗಳು – ನಾನು, ನನ್ನೊಡನೆ ಆನರ್ಸ್ ಓದಿದ ಪ್ರಸ್ತುತ ಆರೆಸ್ಸೆಸ್‌ನಲ್ಲಿ ರಾಷ್ಟ್ರೀಯ ಮಟ್ಟದ ಸ್ಥಾಮಾನ ಹೊಂದಿರುವ ದತ್ತಾತ್ರೇಯ ಹೊಸಬಾಳೆ, ಹಾಗೂ ಮಿಸ್ ವಾಸುಕಿ (ಪ್ರಸ್ತುತ ನನ್ನ ಮಿಸೆಸ್). ಇಂಗ್ಲಿಷಿನಷ್ಟೇ ಕನ್ನಡದಲ್ಲೂ (ಅಥವಾ ಕನ್ನಡದಷ್ಟೇ ಇಂಗ್ಲಿಷಿನಲ್ಲೂ) ತಲಸ್ಪರ್ಶಿ ಪಾಂಡಿತ್ಯವಂತರಾದ ಎಲ್ಲೆಸ್ಸೆಸ್ ಇದ್ದುದರಿಂದ, ಇಂತಹ ತುಲನಾತ್ಮಕ ಸಾಹಿತ್ಯ ಕಲಿಕೆ ಸಾಧ್ಯವಾಯಿತು. ೧೯೭೫ರಲ್ಲಿ ದೇಶದಲ್ಲಿ ಎಮರ್ಜೆನ್ಸಿ ಘೋಷಣೆಯಾದಾಗ ದತ್ತಾತ್ರೇಯ ಭೂಗತರಾಗಬೇಕಾಯಿತು. ಇನ್ನು ಉಳಿದವರು ನಾವಿಬ್ಬರು. ಇಬ್ಬರಿಗಾಗಿ ಟೈಂಟೇಬಲ್‌ನಲ್ಲಿ ಪ್ರತ್ಯೇಕ ಬೋಧನಾ ತರಗತಿಗಳನ್ನು ನಿಗದಿ ಮಾಡುವುದರ ಬದಲು, ಮೇಷ್ಟ್ರು ನೀಡಿದ ಸಲಹೆ 'ಮನೆಪಾಠ'. ಅಂದರೆ, ಮೇಷ್ಟರ ಬಿಡುವಿನ ಸಮಯದಲ್ಲಿ ನಾವಿಬ್ಬರೂ ಅವರ ಮನೆಗೆ ಹೋಗಿ 'ಆಧುನಿಕ ಕನ್ನಡ ಸಾಹಿತ್ಯದ ಪ್ರಾತಿನಿಧಿಕ ಬರಹಗಾರರು' ಪೇಪರ್‌ಗಾಗಿ ಪಾಠ ಕೇಳುವುದು. ಇದಂತೂ ಬಹುಶಃ ಯಾರಿಗೂ ಲಭ್ಯವಾಗದ ವಿಶೇಷ ಅನುಭವ– ಮೇಷ್ಟರ ವಾತ್ಸಲ್ಯಪೂರಿತ ಸ್ನೇಹಮಯ ಸನ್ನಿಧಿಯಲ್ಲಿ ಕಲಿಕೆ. ತತ್ರಾಪಿ ಅವರ ಆದರಾತಿಥ್ಯಗಳು ನಮ್ಮನ್ನು ಮತ್ತಷ್ಟು ಸಾಮೀಪ್ಯಕ್ಕೆ ಕೊಂಡೊಯ್ದದ್ದು ಸ್ಮರಣೀಯ. ಮಾಮೂಲಾಗಿ ಮಧ್ಯಾಹ್ನ ಮೂರು ಅಥವಾ ನಾಲ್ಕರ ವೇಳೆಗೆ ಪ್ರಾರಂಭವಾಗುತ್ತಿದ್ದ ತರಗತಿಗೆ ನಾವು ಹೋದಾಗ, "ನರಸಿಂಹಮೂರ್ತಿ, ವಾಸುಕಿ ಬಂದರು. ಕಾಫಿ ಕೊಡ್ತೀಯಾ?" ಎಂದು ಮೇಷ್ಟ್ರು ಕೇಳಿದರೆ, ನಮ್ಮ ಗುರುಪತ್ನಿ ಕಾಫಿಯೊಡನೆ ಒಂದೆರಡು ಚಕ್ಕುಲಿ, ಬಿಸ್ಕೆಟ್‌ಗಳನ್ನು ತರುತ್ತಿದ್ದರು. ಇದರ ನಂತರವೇ ತರಗತಿ ಪ್ರಾರಂಭ. ಒಮ್ಮೆಯಂತೂ ನಮ್ಮ ಗುರುಪತ್ನಿಯ ಅನುಪಸ್ಥಿತಿಯಲ್ಲಿ ಮೇಷ್ಟ್ರೇ ನಮಗೆ ಫ್ರಿಜ್ಜಿನಿಂದ ಜ್ಯೂಸ್ ತಂದು ನೀಡಿದ್ದುಂಟು. ೧೯೭೬ರಲ್ಲಿ ಬೆಂಕಿ ಆಕಸ್ಮಿಕದಲ್ಲಿ ಇಂತಹ ಆತಿಥೇಯ ಗುರುಪತ್ನಿ ತೀರಿಕೊಂಡಾಗ, ತಮ್ಮ ತೊಡೆಯ ಮೇಲೆ ಇರಿಸಿಕೊಂಡಿದ್ದ 'ಶಾಂತ' ಮುಖವನ್ನು ಮೇಷ್ಟ್ರು ತದೇಕಚಿತ್ತದಿಂದ ಮೂಕರಾಗಿ ದಿಟ್ಟಿಸುತ್ತಿದ್ದ ದೃಶ್ಯ ನನ್ನಲ್ಲಿ ನಾಟಿದೆ.

*"But at my back I always hear*
*Times winged chariot hurrying near"*

ಜಾನ್ ಡನ್‌ನ ಮಾತು ನೆನಪಾಗಿತ್ತು.

ನಮ್ಮ ಕನ್ನಡ ತರಗತಿ ನಡೆಯುತ್ತಿದ್ದದ್ದು ಮೇಷ್ಟರ ಲೈಬ್ರರಿಯಲ್ಲಿ. ಅಚ್ಚುಕಟ್ಟಾಗಿ ಸೈಜುವಾರು ಜೋಡಿಸಲ್ಪಟ್ಟ ಗ್ಲಾಸಿನ ಬಾಗಿಲಿನ ಮರದ ಕಪಾಟುಗಳಲ್ಲಿ ಏನೆಲ್ಲ ಇತ್ತು! ಎಲ್ಲಾ ಇತ್ತು – "A good book is the precious life blood of a master spirit" ಎಂದು ಮಿಲ್ಟನ್ ಹೇಳಿದಂತೆ, ಮೇಷ್ಟ್ರು ಪುಸ್ತಕಪ್ರೇಮಿ. ಕನ್ನಡ, ಇಂಗ್ಲಿಷ್ ಸಂಸ್ಕೃತ ಗ್ರಂಥಗಳ ಅಮೂಲ್ಯ ಭಂಡಾರದ ಮಧ್ಯೆ ಶಾಂತವಾದ, ಗಂಭೀರವಾದ, ವಿದ್ವತ್ಪೂರ್ಣ ವಾಗ್ಝರಿ. ಅದು ಪಾಠವಲ್ಲ, ಎದುರಿಗಿದ್ದವರ ಪರಿವೆ ಇಲ್ಲದೆ ಸ್ವಸಂತೋಷಕ್ಕಾಗಿ ಹಾಡಿಕೊಂಡ ಸಂಗೀತ–'ಅನಿರ್ವಚನೀಯ' ಅನುಭವ.

ಎಂ. ಎ. ಮುಗಿದ ಮೇಲೆ ನಾನು ಸರಕಾರಿ ಸೇವೆಗೆ ಸೇರಿದುದರಿಂದ ಬೆಂಗಳೂರಿನ ಮತ್ತು ಮೇಷ್ಟರ ಸಂಪರ್ಕ ಸ್ವಲ್ಪಮಟ್ಟಿಗೆ ಕಡಿಮೆಯಾಯಿತಾದರೂ ಒಂದು ದಶಕದ ನಂತರ ಪುನಃ ಲಭ್ಯವಾಯಿತು. ಗೆಜೆಟಿಯರ್ ಇಲಾಖೆಗೆ ಬಂದ ನಂತರ ಹಲವಾರು ಸಮಾರಂಭ, ಸೆಮಿನಾರು, ಗೋಷ್ಠಿಗಳಲ್ಲಿ ಮೇಷ್ಟ್ರ ಮಾತು ಕೇಳುವ ಸುಯೋಗ ಲಭಿಸಿತು, ಒಡನಾಟ ಮುಂದುವರೆಯಿತು.

೧೯೭೬ರಲ್ಲಿ ನಾನು ಉಪನ್ಯಾಸಕ ವೃತ್ತಿ ಪ್ರಾರಂಭಿಸಿದ ವಿಜಯ ಪದವಿಪೂರ್ವ ಕಾಲೇಜಿನ ಸಂಜೆ ವಿಭಾಗದಲ್ಲಿ ೧೯೯೦ರ ನಂತರ ಕೆಲಕಾಲ ನಾನು ಗೌರವ ಉಪನ್ಯಾಸಕನಾಗಿದ್ದೆ. ಅದೇ ಕಾಲೇಜಿನ ಹಗಲು ವಿಭಾಗದಲ್ಲಿ ನನ್ನ ಮಡದಿ ಪೂರ್ಣಕಾಲಿಕ ಉಪನ್ಯಾಸಕಿ; ಸಂಜೆ ವಿಭಾಗದಲ್ಲಿ ಅರೆಕಾಲಿಕ ಉಪನ್ಯಾಸಕಿ, ನನ್ನ ಸಹೋದ್ಯೋಗಿ. ೨೦೦೨–೦೩ನೇ ಶೈಕ್ಷಣಿಕ ವರ್ಷಾಂತ್ಯ, ಸಂಜೆ ಕಾಲೇಜು ದಿನಾಚರಣೆಗೆ ಎಲ್ಲೆಸ್ಸೆಸ್ ಮುಖ್ಯ ಅತಿಥಿ. "ಈಗ ಮುಖ್ಯ ಅತಿಥಿಗಳಿಗೆ ಅವರ ಹಳೆ ವಿದ್ಯಾರ್ಥಿ ದಂಪತಿಯಿಂದ ಗುರುವಂದನೆ" – ಮೈಕಿನಲ್ಲಿ ಪ್ರಾಚಾರ್ಯ ಡಾ॥ ಅನಂತಪದ್ಮನಾಭರಾಯರ ಆದೇಶ! ನಮ್ಮಿರ್ವರಿಗೂ ಮೈ ಪುಳಕ. ಪ್ರೀತಿಯ ಮೇಷ್ಟ್ರಿಗೆ ಶಾಲುಹೊದಿಸಿ, ಫಲಪುಷ್ಪ ಸಮರ್ಪಣೆ ಮಾಡಿ ಅಡಿಗೆರಗಿದಾಗ ಭಾವುಕತೆ, ಧನ್ಯತಾಭಾವ. ಇಂತಹ ಆನಂದಾತಿಶಯ, ಸೌಭಾಗ್ಯ, ನಮ್ಮದಾಗಿತ್ತು. ಎಲ್ಲೆಸ್ಸೆಸ್‌ರ ಮುಖದಲ್ಲಿ ಎಂದಿನ ಮುಗುಳ್ನಗೆ ಇತ್ತು.

ಒಂದಂತೂ ನಿಜ. ಮೇಷ್ಟರ Person ಹಾಗೂ Personalityಗಳು ಪಲವೆಡೆ ನಮ್ಮ ಸುಪ್ತ ಚೇತನಗಳಾಗಿ ಕೆಲಸ ಮಾಡಿವೆ. ಭದ್ರಾವತಿಯ ಕಾಲೇಜಿನಲ್ಲಿ ಇಂಗ್ಲಿಷ್ ಬೋಧಿಸುತ್ತಿದ್ದ ಸಮಯದಲ್ಲಿ ಎರಡನೇ ಪಿಯುಸಿಗೆ ವರ್ಡ್ಸ್‌ವರ್ತನ 'ಡ್ಯಾಫಡಿಲ್ಸ್' ಪದ್ಯ ಪಾಠ ಮಾಡಬೇಕಿತ್ತು. ಕವಿಯ ಈ ರೆಪ್ರೆಸೆಂಟಿಟೀವ್ ಪದ್ಯ ತುಂಬ ಸಿಂಪಲ್ ಅನಿಸಿದರೂ ಕನ್ನಡ ಮಾಧ್ಯಮದಿಂದ ಬಂದ ಪಿಯುಸಿ ಮಟ್ಟದ ಮಕ್ಕಳಿಗೆ ಅರ್ಥಮಾಡಿಸುವುದು ಸುಲಭ ಸಾಧ್ಯವಲ್ಲ. ಸ್ಪಷ್ಟ

ಉಚ್ಚಾರಣೆ ಹೊಂದಿದ್ದ ಹತ್ತು ಮಕ್ಕಳಿಂದ ಪದ್ಯ ಓದಿಸಿದ ನಂತರ ನ್ಯೂನತೆಗಳನ್ನು ತಿದ್ದುವ ನನ್ನ ಪತನ ಆರಂಭವಾಯಿತು. ಆ ಪದ್ಯದ ಮೆಲೊಡಿಯಾಗಲೀ. ಪದಗಳ ಮಾಧುರ್ಯವಾಗಲೀ ಮಕ್ಕಳಿಗೆ ತಲುಪಲಿಲ್ಲವೆಂದು ಅವರ ಮುಖಗಳೇ ಹೇಳುತ್ತಿದ್ದವು. ನಿಜವಾಗಿ ಅವರಿಗೆ ಗಾಬರಿಯಾಗಿತ್ತು. (ಇಂಗ್ಲಿಷ್ ಭಾಷೆಯ ಬಗ್ಗೆ ಈ ಗಾಬರಿ ಗ್ರಾಮಾಂತರ ಪ್ರದೇಶದ ಮಕ್ಕಳಲ್ಲಿ ಇನ್ನೂ ಇದೆ). ಇದ್ದಕ್ಕಿದ್ದಂತೆ ನಾನು ದ್ವಿಭಾಷಾ ರೀತಿಯನ್ನನುಸರಿಸಿ ಆ ಸುಂದರ ಹೂಗಳ ಸೊಬಗನ್ನು ಗದ್ಯ ಪದ್ಯಗಳ ಮೂಲಕ ಮಕ್ಕಳಿಗೆ ತಲುಪಿಸಿದೆ. "ರಸಪುರಿ ಮಾವಿನ ಹಣ್ಣನ್ನು ಇಡಿಯಾಗಿಯೂ ಸವಿಯಬಹುದು. ಚಾಕುವಿನಲ್ಲಿ ಹೋಳು ಮಾಡಿಯೂ ಸವಿಯಬಹುದು" ಎಂದು ಯಾವುದೋ ಪದ್ಯ ವಿಶ್ಲೇಷಣೆಯ ಸಂದರ್ಭದಲ್ಲಿ ಎಲ್ಲೆಸ್ಸೆಸ್ ಹೇಳಿದ್ದ ಮಾತು ನೆನಪಿಗೆ ಬಂದಿತ್ತು. ಮಕ್ಕಳಿಗೆ ಖುಷಿಯಾಗಿತ್ತು. ಈಗ ನಾನು ಮಾಸ್ತರಿಕೆ ಮಾಡುತ್ತಿಲ್ಲವಾದರೂ, ಮೇಷ್ಟರ ನೆನಪಾದಾಗ.

*"Then my heart with pleasure fills,*
*And dances with the Daffodils"*

ಇಂತಹ joyous moment ಗಳನ್ನು ಮೇಷ್ಟರ ಸಾವಿರಾರು ವಿದ್ಯಾರ್ಥಿಗಳು ಅನುಭವಿಸಿಯೂ ಇರಬಹುದು. ತಂತಮ್ಮ ವಿದ್ಯಾರ್ಥಿಗಳಿಗೆ ನೀಡಿಯೂ ಇರಬಹುದು.

ಇಂಗ್ಲಿಷ್, ಕನ್ನಡ ಸಾಹಿತ್ಯಕ ಪರಂಪರೆಗಳನ್ನು ರಕ್ತಗತ ಮಾಡಿಕೊಂಡಿರುವ ಬಹುಶ್ರುತ ಪಾಂಡಿತ್ಯ ಪರಿಶ್ರಮಗಳ ವ್ಯಕ್ತಿ ಎಲ್ಲೆಸ್ಸೆಸ್. ಇಂಗ್ಲಿಷ್ ಉಪನ್ಯಾಸಕರಾಗಿದ್ದ ಸಮಯದಲ್ಲಿಯೇ ಅಪಾರ ಸಾಹಿತ್ಯ ಕೃಷಿ ಮಾಡಿದ್ದ ಇವರು ಸಂಪಾದಿಸಿದ ಹಲವಾರು ಇಂಗ್ಲಿಷ್ ಗ್ರಂಥಗಳೂ, ನಾಟಕಗಳೂ ಸುಲಲಿತ ಶೈಲಿ, ಪದಲಾಲಿತ್ಯ ಹಾಗೂ ಭಾಷಾ ಪ್ರೌಢಿಮೆಯಿಂದ ಪಠ್ಯ ಪುಸ್ತಕಗಳಾಗಿದ್ದವು. ಸಾಹಿತ್ಯಕ ಸಂದರ್ಭಗಳಲ್ಲಿ ಬಳಸಲ್ಪಡುವ 'ಸಹೃದಯ' ಶಬ್ದ ಇವರಿಗೆ ಸಂಪೂರ್ಣ ಅನ್ವಯ. ಸುಸಂಸ್ಕೃತ ಸಜ್ಜನಿಕೆಯ ನಮ್ಮ ಮೇಷ್ಟ್ರು ವಿರಸ, ವಿವಾದಗಳಿಂದ ದೂರ. ಇವರ ಇಳಿವಯಸ್ಸಿನ ಅಧ್ಯಯನಶೀಲತೆ, ಜೀವನೋತ್ಸಾಹಗಳು, ಗೊಂದಲವಿಲ್ಲದ ವಿದ್ವತ್ಪೂರ್ಣ ಸ್ಪಷ್ಟ ವಿಚಾರಮಂಡನೆ; ರಾಮಾಯಣ ಮಹಾಭಾರತಗಳಿಂದ ಹಿಡಿದು ದಲಿತ ಬಂಡಾಯ ಸಾಹಿತ್ಯದವರೆಗೆ ಹರಡಿದ ಇವರ ಕ್ಯಾನ್ವಾಸು; ಕನ್ನಡ, ಇಂಗ್ಲಿಷ್ ಸಾಹಿತ್ಯಕ ಚಿಂತನೆ, ಹೇಳಿಕೆ, ಬರವಣಿಗೆಗಳಿಗೆ ಇವರು ನೀಡುವ ಅಧಿಕೃತತೆಯ ಮುದ್ರೆ-ಇವು ಅನುಕರಣೀಯ. ಉಸಿರಾಟದಷ್ಟೇ ಸಹಜವಾದ ಸೃಜನಶೀಲತೆ ಮತ್ತು ವಿಮರ್ಶಾ ಪ್ರಜ್ಞೆಗಳೊಂದಿಗೆ ಮಾಗಿ ಪರಿಪಕ್ವವಾದ ಈ ಹಿರಿಯ ಚೇತನದ ಸಮಕಾಲೀನರು ನಾವು ಎಂಬುದೇ ಅತ್ಯಂತ ಹೆಮ್ಮೆಯ ಸಂಗತಿ.

ಸಾರಸ್ವತ ಲೋಕದ ಈ ಮಹಾಚೇತನ ತಮ್ಮ ಜೀವನಾನುಭವವನ್ನೆಲ್ಲ ತುಂಬಿ ಜೀವನ ಸಂಧ್ಯಾಕಾಲದಲ್ಲಿ ಹೊರತಂದ ಇಂಗ್ಲಿಷ್-ಇಂಗ್ಲಿಷ್-ಕನ್ನಡ ನಿಘಂಟು ಒಂದು ಅನರ್ಘ್ಯ ರತ್ನವಾದರೆ, ಮಹಾಭಾರತದ ಇಂಗ್ಲಿಷ್ ಅನುವಾದ ಇವರ ಮೇರುಕೃತಿ Magnum opus.

ಇವರ 'ಬದುಕು-ಬರಹ' ಕೃತಿಯಲ್ಲಿ ಕಾಣಬಹುದಾದ ವಿಕೃ ಗೋಕಾಕ್, ಎ.ಎನ್. ಮೂರ್ತಿರಾವ್, ಎಸ್.ಎಲ್. ಭೈರಪ್ಪ ಮುಂತಾದ ಸಾಹಿತ್ಯ ದಿಗ್ಗಜಗಳು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಎಲ್ಲೆಸ್ಸೆಸ್‌ರ ವ್ಯಕ್ತಿತ್ವ, ಸಾಧನೆಗಳ ಅಳತೆಗೋಲುಗಳು. ಮೇಷ್ಟ್ರು ಯಾವುದೇ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪಡೆಯಲಿಲ್ಲ. ಆದರೆ ಇವರ ಒಂದೊಂದು ಕೃತಿಯೂ ಒಂದೊಂದು ಡಾಕ್ಟರೇಟ್‌ಗೆ ಅರ್ಹ ಕೇಂದ್ರ ರಾಜ್ಯ ಸರಕಾರಗಳ, ಹಲವಾರು ಸಂಘ ಸಂಸ್ಥೆಗಳ ಬಿರುದುಗಳು, ಗೌರವ ಪ್ರಶಸ್ತಿ, ಪುರಸ್ಕಾರಗಳು ಇವರಿಗೆ ಸಂದಿದ್ದರೆ ಅವುಗಳಿಗೆ ಮೇಷ್ಟ್ರು ಸಂಪೂರ್ಣ ಭಾಜನರು.

ಅಧ್ಯಯನ, ಅಧ್ಯಾಪನ, ವಿಮರ್ಶೆ, ಗ್ರಂಥಸಂಪಾದನೆ, ಅನುವಾದ, ಕನ್ನಡಪರ ಚಳವಳಿಗಳ ಮುಂದಾಳತ್ವ, ಸಭೆ ಸಮಾರಂಭಗಳಲ್ಲಿ ಸಂಘ ಸಂಸ್ಥೆಗಳಲ್ಲಿ ಪಾಲ್ಗೊಳ್ಳುವಿಕೆ ಒಂದೇ ಎರಡೇ! ಅದಕ್ಕೇ ಅವರು 'ಸವ್ಯಸಾಚಿ'.

ತನ್ನ 'ದಿ ಡೆಸರ್ಟೆಡ್ ವಿಲೇಜ್'ನಲ್ಲಿ ಗ್ರಾಮದ ಶಾಲೆಯ ಮೇಷ್ಟ್ರ ಬಗ್ಗೆ ಆಲಿವರ್ ಗೋಲ್ಡ್‌ಸ್ಮಿತ್ ಹೇಳುವ ಮಾತು ನಮ್ಮ ಮೇಷ್ಟ್ರಿಗೂ ಅನ್ವಯ:

*"Still they gazed and still the wonder grew*
*That one small head could carry all he knew"*

ನಾವೂ ಅಷ್ಟೆ, ಮೇಷ್ಟ್ರರ ಶಕ್ತಿ, ಸಾಮರ್ಥ್ಯ, ಪಾಂಡಿತ್ಯ, ಮಾನವೀಯತೆ, ಪ್ರೀತಿ ವಿಶ್ವಾಸಗಳ ಬಗ್ಗೆ ಬೆರಗುಗಣ್ಣುಗಳಿಂದ ನೋಡುತ್ತಿರಬೇಕಷ್ಟೆ!

ಸಾರಸ್ವತ ಕ್ಷೇತ್ರಕ್ಕೆ ಇನ್ನೂ ಮಹತ್ತರ ಕಾಣಿಕೆಗಳನ್ನು ನೀಡಲು ಮೇಷ್ಟರಿಗೆ ಆರೋಗ್ಯ ಭಾಗ್ಯವನ್ನು ಭಗವಂತ ನೀಡಲೆಂಬುದೇ ಎಲ್ಲರ ಪ್ರಾರ್ಥನೆ.

❖

# ನನ್ನ ಗುರುತ್ರಯರು

## (ಎಂ.ವಿ. ಕೃಷ್ಣರಾವ್, ಹೆಚ್. ಆರ್. ದಾಸೇಗೌಡ, ಡಿ. ಪದ್ಮನಾಭಶರ್ಮ)

● *ಪ್ರೊ॥ ಜಿ. ಅಶ್ವತ್ಥನಾರಾಯಣ*

ಒಂದು ಮಲ್ಲಿಗೆ ಬಳ್ಳಿಯನ್ನೋ ಬಾಳೆಗಿಡವನ್ನೋ ತೆಂಗಿನ ಸಸಿಯನ್ನೋ ಯಾರಾದರೂ ನೆಡಬಹುದು, ಹೂವಿನಾಸೆಯಿಂದ ಹಣ್ಣಿನಾಸೆಯಿಂದ ನೆರಳಿನಾಸೆಯಿಂದ ಅವುಗಳನ್ನು ಬೆಳೆಸಬಹುದು. ಆದರೆ ಅವು ನೆಟ್ಟವರು ಹಾಕಿದ ನೀರು ಗೊಬ್ಬರಗಳಿಂದ ಕಟ್ಟಿದ ಬೇಲಿಯಿಂದ ಅದನ್ನು ಬೆಳೆಸಿದ್ದೇವೆ ಎಂದರೆ ಆ ಮಾತು ನಿಜವೇ? ಒಂದರ್ಥದಲ್ಲಿ ನಿಜ. ಇನ್ನೊಂದರ್ಥದಲ್ಲಿ ಅಲ್ಲ. ಅದು ಭಾಗಶಃ ಸತ್ಯವಾದುದು.

ಪ್ರತಿಯೊಬ್ಬ ವ್ಯಕ್ತಿಗೂ ಜೀವ-ದೇಹಗಳಿರುತ್ತವೆ. ಜೀವರಕ್ಷಣೆ – ದೇಹಪೋಷಣೆ ಇಲ್ಲದಿದ್ದರೆ ಆ ವ್ಯಕ್ತಿ ಬದುಕಲಾರ ಬೆಳೆಯಲಾರ, ಲೋಕದಲ್ಲಿ ಜೀವವಿಲ್ಲದವನಿಂದ ಮೃತದೇಹದಿಂದ ಏನೊ ಸಾಧನೆ ಆಗಲಾರದು. ಹಾಗೆಯೇ ಪಂಚೇಂದ್ರಿಯಗಳು ವಿಕಲಾಂಗವಾಗಿ ಪರಾವಲಂಬಿಯಾಗಿ ಬದುಕಿದವರಿಂದಲೂ ಏನೊ ಲೋಕೋಪಕಾರ ಆಗಿದೆ ಒಂದು ವೇಳೆ ಅಂಥವರು ಅಧಿಕಾರಿಗಳಾದರೂ ಅದರ ಪ್ರಮಾಣ ಅತ್ಯಲ್ಪ.

ಒಬ್ಬ ವ್ಯಕ್ತಿ ಸ್ವಾವಲಂಬಿ ಆಗಬೇಕಾದರೆ ಲೋಕೋಪಕಾರಿ ಆಗಬೇಕಾದರೆ ಸಾತ್ತ್ವಿಕ ಜೀವಿ-ಸಾರ್ಥಕ ಜೀವಿ ಆಗಬೇಕಾದರೆ ಸಮಾಜ ಆತನನ್ನು ನೆನೆಯಬೇಕಾದರೆ ಆ ವ್ಯಕ್ತಿ ಮಾನವೀಯತೆಯಿಂದ ತನ್ನಲ್ಲಿರುವ ವಿದ್ಯೆಯಿಂದ ಹಲವರ ಬದುಕಿಗೆ ನೆರವಾಗಬೇಕು, ಬೆಳಕಾಗಬೇಕು, ಮರೆಯಲಾಗದ ಮಾರ್ಗದರ್ಶನವನ್ನು ಆ ವ್ಯಕ್ತಿ ನೀಡಬೇಕು, ಅಂಥ ವ್ಯಕ್ತಿ ಗುರುವಾಗಬಲ್ಲ, ಆಚಾರ್ಯನಾಗಬಲ್ಲ, ಆದರೆ ಲೋಕದಲ್ಲಿ ವಿದ್ಯಾಕ್ಷೇತ್ರದಲ್ಲಿ ಗುರುಗಳೂ, ಆಚಾರ್ಯರೂ ಬಹಳಮಂದಿ ಇಲ್ಲ. ಎಲ್ಲ ಕಡೆ ಇರುವವರು ಮೇಷ್ಟ್ರುಗಳು, ಮೇಡಂಗಳು. ಹೊಟ್ಟೆಪಾಡಿಗೆ ಶಿಕ್ಷಕರಾಗಿ ಗಿಣಿಪಾಠ ಒಪ್ಪಿಸಿ, ತರಗತಿಗಳಲ್ಲಿ ಕಾಯಕಮಾಡಿ ವಿದ್ಯಾರ್ಥಿಗಳ ಬಾಳಿನಲ್ಲಿ ಬೆಳಕನ್ನೂ ಸ್ಫೂರ್ತಿಯನ್ನೂ ನೀಡುವ, ಆತನಲ್ಲಿ ಬದುಕಲು ಆದರ್ಶಮೌಲ್ಯಗಳನ್ನು ಅಳವಡಿಸಿಕೊಳ್ಳಲು ಮಾರ್ಗದರ್ಶನ ಮಾಡಿ ಪ್ರಭಾವ ಬೀರುವವರು ನೂರಕ್ಕೆ ತೊಂಬತ್ತು ಜನರಿಲ್ಲ. ಬೆಲ್ಲು-ಬಿಲ್ಲುಗಳಿಂದ ಹೊಟ್ಟೆ ಹೊರೆದುಕೊಳ್ಳುವ ಜ್ಞಾನದೇಗುಲದ ಕೂಲಿಗಳು ಅಷ್ಟೆ. ಇಂಥವರ ಸಂಖ್ಯೆ ಹಿಂದೆಯೂ ಇತ್ತು. ಅತಿ ಕಮ್ಮಿ ಇತ್ತು. ಇಂದು ನಾನಾ ಕಾರಣಗಳಿಂದ ಅತ್ಯಧಿಕವಾಗಿದೆ.

ಇಂಥ ವಾತಾವರಣದಲ್ಲಿ ಪ್ರತಿಶಾಲೆ ಕಾಲೇಜುಗಳಲ್ಲಿ ವನಸುಮದಂತೆ, ಎಲೆಮರೆಯ

ಕಾಯಿಯಂತೆ ನಾಟಕದಲ್ಲಿ ರಂಗದ ಮೇಲೆ ಕಾಣಿಸಿಕೊಳ್ಳದಿದ್ದರೂ ನಾಟಕವನ್ನೇ ನಿರ್ದೇಶಿಸಿ, ಅದರ ಯಶಸ್ಸಿಗೆ ಕಾರಣಕರ್ತನಾಗುವ ನಿರ್ದೇಶಕನಂತೆ, ಇರುವ ಅಧ್ಯಾಪಕರುಗಳು ವಿರಳ ವಾದರೂ ಇದ್ದಾರೆ ಎಂಬುದು ಸಂತೋಷದ ಸಂಗತಿ.

ಆದರೆ, ನರನನ್ನು ಹರನನ್ನಾಗಿಸುವ ಮಾನವನನ್ನು ಮಾಧವನನ್ನಾಗಿಸುವ ಲೋಕದಲ್ಲಿ ವಿನಾದೈನ್ಯೇನ ಜೀವನವನ್ನು ಸ್ವಾವಲಂಬಿಯಾಗಿ ನಡೆಸುವುದಷ್ಟೇ ಅಲ್ಲ ತನ್ನ ಕಾಲಮೇಲೆ ತಾನು ನಿಲ್ಲುವುದಕ್ಕಿಂತ ಉಳಿದವರು ತಮ್ಮ ಕಾಲಿನ ಮೇಲೆ ನಿಂತು ಮುನ್ನಡೆಯುವ ಹಾಗೆ ಮಾಡುವ ತಾಯಿ. ಕೈಹಿಡಿದು ಪುಟ್ಟಮಗುವಿಗೆ ನಡಿಗೆ ಕಲಿಸಿ ಆಮೇಲೆ ಅದೇ ನಡೆಯುವಂತೆ ಮಾಡುವ ಸ್ಫೂರ್ತಿದಾಯಕ, ಮಾರ್ಗದರ್ಶಕ ಗುರುಗಳು ವಿರಳ–ಅತಿ ವಿರಳ.

ಅಂಥವರೇ ನಿಜವಾದ ಗುರುಗಳು, ಉಳಿದವರು ನಾಟಕದಲ್ಲಿ ರಾಜನ ಪಾತ್ರ ಮಾಡುವ ಭಿಕ್ಷುಕರಂತೆ ತೋರ್ಪಡಿಕೆಯ ಗುರುಗಳು. ಸ್ಫೂರ್ತಿದಾಯಕ ಬಾಳಿಗೆ ಬೆಳಕಾಗುವ ಗುರುಗಳು ದೊರೆಯುವುದು ಶಿಷ್ಯರ ಭಾಗ್ಯ ತಾಯಿ ತಂದೆಗಳ ಪುಣ್ಯ. ಇಂಥ ಗುರುಗಳು ನನಗೆ ಬಾಳಿನಲ್ಲಿ ಸಿಕ್ಕಿದ್ದು ನನ್ನ ಪುಣ್ಯ ವಿಶೇಷ. ಅಂಥವರಲ್ಲಿ ಕೆಲವರನ್ನು ನಾನಿಲ್ಲಿ ನೆನೆಯುತ್ತಿದ್ದೇನೆ. ಇವರು ಇಂದು ನಾನೇನಾಗಿದ್ದೇನೋ ಅದಕ್ಕೆ ಜನ್ಮದಾತರಾದರು.

ನನ್ನ ಶಾಲಾದಿನಗಳಲ್ಲಿ ಇಬ್ಬರು ಸ್ಫೂರ್ತಿಯ ಗುರುಗಳು ನೆನಪಾಗುತ್ತಾರೆ. ಒಬ್ಬರು ಜ್ಞಾನದಾಹ ಉಂಟುಮಾಡಿದ ಗುರು. ಇನ್ನೊಬ್ಬರು ಸಾತ್ತ್ವಿಕ ಮನೋಭಾವ ಉಂಟುಮಾಡಿದ ಗುರುಗಳು. ನಾನಿಂದು ಪುಸ್ತಕ ಪ್ರೇಮಿ ಆಗಿ ನಿರಂತರ ಓದುಗನಾಗಿ ಸದಾ ತಿಳಿಯಬೇಕು – ತಿಳಿಸಬೇಕು ಎಂಬ ಶಿಕ್ಷಕವೃತ್ತಿಗೆ ಬರಲು ಕಾರಣಕರ್ತರಾದವರು ಕನ್ನಡ ಸಾಹಿತ್ಯ ಪರಿಷತ್ತಿನ ಪುಸ್ತಕ ಭಂಡಾರಿ ಆಗಿದ್ದು ಒಳ್ಳೆಯ ವಿದ್ವಾಂಸರಾಗಿದ್ದು ತೀನಂಶ್ರೀ, ಡಿಎಲ್‌ಎನ್, ಎಎಸ್ ಉಪಾಧ್ಯೆ, ವಿಸೀ, ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿ ಮುಂತಾದ ಜ್ಞಾನಪ್ರಪಂಚದ ದಿಗ್ಗಜರು ಮೆಚ್ಚಿಕೊಂಡಂಥ ಪುಸ್ತಕ ಭಂಡಾರಿ ಅವರು. ಆ ವಿದ್ವಾಂಸರಿಗೆ ಬೇಕಾದ, ಅವರಿಗೆ ಗೊತ್ತಿಲ್ಲದ ಪುಸ್ತಕಗಳನ್ನು ಭಂಡಾರದಿಂದ ಒದಗಿಸುತ್ತಿದ್ದವರು. ನಾನು ಕೋಟೆ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಶಾಲೆಯ ಎದುರು ಕಟ್ಟಡದಲ್ಲಿದ್ದ ಪರಿಷತ್ತಿನ ಕಾರ್ಯಕ್ರಮಗಳನ್ನು ನೋಡುತ್ತಾ ಅಲ್ಲಿನ ವಿದ್ವಾಂಸರ ಸಾಹಿತಿಗಳ ಭಾಷಣದಿಂದ ಬೆರಗಾಗಿ ಅವರ ಹಾಗೆ ಓದಬೇಕು ಎಂದು ಅರಿತು ಪುಸ್ತಕ ಭಂಡಾರ ವಾಚನಾಲಯಗಳಲ್ಲಿ ಓದುತ್ತಿದ್ದಾಗ, ಪರಿಚಯ ಆದವರು ಕೆ. ನಾಗರಾಜ್ ಅವರು.

ನಾನು, ಪರಿಷತ್ತಿನಲ್ಲಿ ಓದಲು ಹೋದಾಗ, ಆಗ ಅಲ್ಲಿ ಬೀರುಗಳಿಗೆ ಬೀಗ ಹಾಕಿದ್ದು ಕೇಳಿದ ಪುಸ್ತಕ ತೆಗೆದು ಕೊಡುತ್ತಿದ್ದರು. ನಾನು ನನಗೆ ಬೇಕಾದ ಪುಸ್ತಕ ಓದಬೇಕು ಬೀಗ ತೆಗೆಯಿರಿ ಎಂದಾಗ ನಿಮಗೇನು ಬೇಕು ಎಂದಾಗ ಅದ್ಯಾಕೆ ನಿಮಗೆ ನನಗೆ ಬೇಕಾದ ಪುಸ್ತಕ ನಿಮಗೇನು ತಿಳಿಯುತ್ತೆ ಎಂದ ಹುಡುಗುಬುದ್ಧಿಯ ಬಾಲಕ ನಾನು. ನಿಮಗೆ ಓದಲು ಮಕ್ಕಳ ಕಥೆ ಬೇಕಲ್ವಾ, ಪುಸ್ತಕದ ಹೆಸರು ಹೇಳಿ ಎಂದರು. ಗೊತ್ತಿಲ್ಲ ಓದಬೇಕು ಅಷ್ಟೆ ಎಂದೆ. ಆಗ ಅವರು ನಕ್ಕು ನೋಡಿ ಬೀಗ ತೆಗೇತೀನಿ. ಇದರಲ್ಲಿ ಇರೋ ಪುಸ್ತಕಗಳಲ್ಲಿ ನೀವು ಓದೋ

ಪುಸ್ತಕಗಳು ಇವು, ಇವನ್ನು ನನ್ನ ಮೇಜಿನ ಮೇಲಿಟ್ಟಿರುತ್ತೇನೆ. ಒಂದೊಂದಾಗಿ ಓದಿ, ಯಾವುದಾದರೂ ಪುಸ್ತಕ ಓದಿದಾಗ ಬೇಜಾರಾದರೆ ಪುಸ್ತಕ ಚೆನ್ನಾಗಿಲ್ಲ ಅಂದರೆ ಹೇಳಿ. ನಿಮಗೆ ನಾನು ಒಂದು ರೂಪಾಯಿ ಕೊಡ್ತೇನೆ. ನಾನು ನಿಮಗೆ ಓದಲು ಆರಿಸಿದ ಪುಸ್ತಕ ಸರಿಯಿಲ್ಲದ್ದಕ್ಕೆ ಎಂದರು. ಸರಿ ಎಂದೆ. ಒಂದೊಂದಾಗಿ ಓದತೊಡಗಿದೆ. ಈಸೋಪನ ಕಥೆಗಳು, ನೀತಿ ಚಿಂತಾಮಣಿ, ಪಂಚತಂತ್ರ, ಭೇತಾಳನ ಕಥೆಗಳು, . . ಒಂದಕ್ಕಿಂತ ಒಂದು ಆಕರ್ಷಕವಾಗಿ, ನಾನು ಓದಬೇಕಾದ ಪುಸ್ತಕಾನ ನನಗಿಂತ ಚೆನ್ನಾಗಿ ಇವರಿಗೆ ಗೊತ್ತು ಅಂತ ಅವರ ಬಗ್ಗೆ ಗೌರವ–ಪ್ರೀತಿ ಹುಟ್ಟಿತು. ನಮ್ಮನೆ ಹಿಂದಿನ ರಸ್ತೆಯಲ್ಲೇ ಇದ್ದು ಪರಿಷತ್ತಿಗೆ ಅವರೂ ನಾನು ಹೋಗುತ್ತಾ ಬರುತ್ತಾ ಪರಿಚಯವಾಗಿ, ವಿದ್ವಾಂಸರ ವಿದ್ವತ್ತಿನ ಪರಿಚಯ ಪಾಂಡಿತ್ಯ, ವ್ಯಕ್ತಿತ್ವ ತಿಳಿದು ಅವರಿಂದ ಕನ್ನಡ ದೀಕ್ಷೆ ಸಿಕ್ಕಿತು. ಎಂಥೆಂಥಾ ಪುಸ್ತಕಗಳಿವೆ ಕನ್ನಡದಲ್ಲಿ ಎಲ್ಲಾ ಓದಿಬಿಡಬೇಕು ಎಂದು ನಿರ್ಧರಿಸಿದೆ, ಓದಲು ತೊಡಗಿದೆ. ಕಾರಂತರ ಬಾಲಪ್ರಪಂಚ, ಅರ್ಥರ್‌ಮೀ ಎನ್‌ಸೈಕ್ಲೋಪೀಡಿಯಾ ಕೊಟ್ಟು ಓದಿಸಿ ಪ್ರಪಂಚದಲ್ಲಿ ಓದಿ ತಿಳಿಯಲು ಕುತೂಹಲದ ಸಂಗತಿಗಳು ಎಷ್ಟಿವೆ ಗೊತ್ತಾ! ಎಂದು ಕಣ್ತೆರೆಸಿ, ಫುಟ್ಬಾಲ್ ಕ್ರಿಕೆಟ್ ಆಟದಲ್ಲಿ ಆಸಕ್ತಿ ಇದ್ದ ನನ್ನನ್ನು ಪುಸ್ತಕದ ಪ್ರಾಣಿಯನ್ನಾಗಿ ಮಾಡಿದವರು ಅವರು. ನನ್ನ ಓದಿನ ಹುಟ್ಟಿಗೆ ಕನ್ನಡ ಆಸಕ್ತಿಗೆ ಬುನಾದಿ ಹಾಕಿದವರು ಅವರು.

ನನ್ನ ಓದಿನ ಗುರು ಕೆ. ನಾಗರಾಜ್ ಅವರ ವ್ಯಕ್ತಿತ್ವ ವಿಶಿಷ್ಟವಾದುದು. ಕೇವಲ ಹೈಸ್ಕೂಲ್ ವಿದ್ಯಾಭ್ಯಾಸ ಆಗಿದ್ದರೂ, ಪಾಂಡಿತ್ಯದ ಓದು ಅವರದು. ಸಾಹಿತ್ಯ ಪರಿಷತ್ತಿನ ಪುಸ್ತಕ ಭಂಡಾರದಲ್ಲಿ ಒಂದೇ ಸಮನೆ ಓದುತ್ತಿದ್ದ ಈ ವ್ಯಕ್ತಿ ಪರಿಷತ್ತಿಗೆ ಬರುತ್ತಿದ್ದ ವಿದ್ವಾಂಸರ ಬಳಿ ಚರ್ಚಿಸುತ್ತಾ ಎಲ್ಲರಿಗೂ ಪರಿಚಯವಾಗಿದ್ದರು. ಒಮ್ಮೆ ಪರಿಷತ್ತಿನಲ್ಲಿ ಪುಸ್ತಕಭಂಡಾರಿ ಹುದ್ದೆ ಖಾಲಿ ಆದಾಗ ಡಿಎಲ್‌ಎನ್ ಇವರ ಹೆಸರು ಸೂಚಿಸಿದಾಗ ಸಮಿತಿ ಆಯ್ಕೆಗೆ ಒಪ್ಪಿತು. ಆಗ ಡಿಎಲ್‌ಎನ್ ಇವರ ಬಳಿ ಬಂದು; ಮಗೂ ನೀನು ಇಲ್ಲಿ ಕುಳಿತು ಓದುವ ಬದಲು ಅಲ್ಲಿ ಕುಳಿತು (ಲೈಬ್ರರಿಯನ್ ಜಾಗದಲ್ಲಿ ಕುಳಿತು) ನೀನು ಬೇಕಾದ ಹಾಗೆ ಓದಬಹುದು, ನಿನಗೆ ಬೇಕಾದ ಪುಸ್ತಕ ತರಿಸಬಹುದು ಎಂದರು. ಸಂತೋಷವಾಗಿ ಎಂದು ಹೇಳಿ ಲೈಬ್ರರಿಯನ್ ಆದ ನಾಗರಾಜ್ ಅವರು ಯಾವ ಶೈಕ್ಷಣಿಕ ಅರ್ಹತೆ ಇಲ್ಲದೆ ಓದಿನ ಬಲದಿಂದ ಲೈಬ್ರರಿಯನ್ ಆದವರು ಅವರು.

ಅವರ ಪುಸ್ತಕ ಪ್ರೇಮ ಅಗಾಧವಾದುದು (ಆ ಚಟ ಹತ್ತಿದ್ದು ನನಗೆ ಅವರಿಂದಲೇ) ಬಡತನವಿದ್ದು ಆರ್ಥಿಕ ತೊಂದರೆ ಇದ್ದರೂ ಸಿಗರೇಟು ಪುಸ್ತಕ ಎರಡಕ್ಕೆ ಅವರು ಹಣ ಖರ್ಚು ಮಾಡುತ್ತಿದ್ದರು. ನಮ್ಮ ಹಿಂದಿನ ರಸ್ತೆಯಲ್ಲಿ ಒಂದು ವಠಾರದ ಚಿಕ್ಕಮನೆಯಲ್ಲಿ ಅಜ್ಜಿ ಮೊಮ್ಮಕ್ಕಳು ವಾಸಮಾಡುತ್ತಿದ್ದರು. ಸದಾ ಬಿಡುವಾದಾಗಲೆಲ್ಲ ನನಗೆ ಅವರದೇ ಜತೆ. ಒಮ್ಮೆ ಅವರ ಮನೆ ಪುಟ್ಟ ಹಾಲಿನಲ್ಲಿ ಮಾತಾಡುತ್ತ ಕುಳಿತಿದ್ದೆವು. ದಿಢೀರನೆ ಕುಂಭದ್ರೋಣ ಮಳೆ ಬಂದು, ಬಿರುಗಾಳಿ ಬೀಸಿ ಮನೆ ಹೆಂಚು ಹಾರಿ ಛಾವಣಿ ಸೋರತೊಡಗಿ ಧಡಧಡ ಮಳೆ ಮನೆಯೊಳಗೆ ಗೋಡೆಗಳಲ್ಲಿಳಿಯಿತು. ಆಗ ನಾವಿಬ್ಬರು ಪುಸ್ತಕಗಳನ್ನು ಕಪಾಟಿನಿಂದ ಗೋಡೆ ಬಳಿಯಿಂದ ನೆಲದ ಮೇಲಿಂದ ತೆಗೆದು ನಡುಮನೆ ಮಧ್ಯದಲ್ಲಿ ಸರಸರನೆ ಗುಡ್ಡೆ ಹಾಕಿದೆವು. ಅಲ್ಲಿಯೂ ಹೆಂಚಿನಿಂದ ಸೋರ ತೊಡಗಿತು. ಆಗ ಅವರು ಕೂತಿದ್ದ ಚಾಪೆಯನ್ನು

ಅದರ ಮೇಲೆ ಹಾಸಿ ತಾವು ಉಟ್ಟಿದ್ದ ಪಂಚೆ ಬಿಚ್ಚಿ ಅದರ ಮೆಲೆ ಹಾಸಿದರು. ಆದರೂ ಮೇಲೆ ಬೀಳುತ್ತಿದ್ದ ಭಾರೀ ಸೋರಿಕೆಯ ನೀರನ್ನು ತಡೆಯಲು ನಾವಿಬ್ಬರು ಆ ಪುಸ್ತಕದ ಗುಡ್ಡೆ ಮೇಲೆ ಅಡ್ಡಮಲಗಿದೆವು. ಮಳೆ ಕಡಿಮೆ ಆದಮೇಲೆ ಒದ್ದೆಯಾದ ಪುಸ್ತಕಗಳನ್ನು ಹೊರಗೆ ಬಂದಿದ್ದ ಬಿಸಿಲಿಗಿಟ್ಟು ಕಾವಲು ಕೂತೆವು. ಇದು ಅವರ ಪುಸ್ತಕ ಪ್ರೇಮ.

ಕೋಟೆ ಹೈಸ್ಕೂಲಿನಲ್ಲಿ ಓದುವಾಗ ನಾನು ಸಂಸ್ಕೃತ ವಿದ್ಯಾರ್ಥಿ ಆದರೂ ಕನ್ನಡ ಸಾಹಿತ್ಯ ಪರಿಷತ್ತಿನ 'ಓದಿನಗುರು'ವಿನ ಪ್ರಭಾವದಿಂದ ಕನ್ನಡಾಸಕ್ತನಾಗಿದ್ದೆ. ಸಂಸ್ಕೃತ ತರಗತಿ ಬಿಟ್ಟು ಕನ್ನಡ ತರಗತಿಗಳಿಗೆ ಹಾಜರಾಗುತ್ತಿದ್ದೆ. ಕನ್ನಡ ಮಾಧ್ಯಮದ ವಿದ್ಯಾರ್ಥಿ ಆದ್ದರಿಂದ ಎಲ್ಲ ವಿಷಯಗಳೂ ಕನ್ನಡದಲ್ಲಿ ಬೋಧಿಸುತ್ತಿದ್ದರು. ಕನ್ನಡಕ್ಕೆ ಆಗ ಭುವನಹಳ್ಳಿ ಡಿ. ಪದ್ಮನಾಭಶರ್ಮ (ಡಿಪಿಎಸ್) ಎಂಬ ಸಂಸ್ಕೃತ–ಕನ್ನಡ ಜೈನವಿದ್ವಾಂಸರು ಕನ್ನಡ ಅಧ್ಯಾಪಕರಾಗಿ ಬಂದರು. ಅವರ ಸರಳತೆ, ವಿನಯತೆಗಳಿಂದ ಮೆಲು ನುಡಿಗಳಿಂದ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಾದರು. ಸಾಹಿತ್ಯದ ಚಟುವಟಿಕೆಗಳಲ್ಲಿ ಭಾಷಣಸ್ಪರ್ಧೆ, ಚರ್ಚಾಸ್ಪರ್ಧೆ, ಲೇಖನ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದ ನನ್ನ ಬಗ್ಗೆ ಅಪಾರ ವಾತ್ಸಲ್ಯ ತೋರಿ ಮಾರ್ಗದರ್ಶನ ಮಾಡಿದರು. ಅವರು ಸಂಪಾದಿಸಿದ ಕಂತಿ ಹಂಪನ ಸಮಸ್ಯೆಗಳು ಪುಸ್ತಕವನ್ನು ನನಗೆ ಪ್ರೀತಿಯಿಂದ ಕೊಟ್ಟರು. ಅದು ಬಹಳ ಖುಷಿಕೊಟ್ಟು. ಸಾಹಿತ್ಯದ ಬಗ್ಗೆ ಆಸಕ್ತಿ ಹೆಚ್ಚಾಯಿತು. ಅನಂತರ ಸುಮಾರು ೪೦ ವರ್ಷಗಳಿಗೂ ಮಿಗಿಲಾಗಿ ಅವರು ಜೈನಧರ್ಮ ಸಾಹಿತ್ಯದಲ್ಲಿ ಮಾರ್ಗದರ್ಶಕ ರಾಗಿ, ನನಗೆ ಜೈನಸಾಹಿತ್ಯದ ಆಳವಾದ ಅಧ್ಯಯನಕ್ಕೆ ನೆರವಾದರು. ಅವರು ಪಾಠಕ್ಕಿಂತ ತಮ್ಮ ನಡೆನುಡಿಗಳಿಂದ ಬೀರಿದ ಪ್ರಭಾವ ದೊಡ್ಡದು. ಸಾತ್ತ್ವಿಕರಾದ ಅವರು ಮಿತಭಾಷಿ ಗಳಾಗಿದ್ದರು. ಕೆಲವೇ ಜನ ಸಜ್ಜನರೊಡನೆ ಸದಾ ಇರುತ್ತಿದ್ದರು. ಸದಾ ಓದು ಬರಹಗಳಲ್ಲಿ ತೊಡಗಿದ್ದರು. ಕನ್ನಡ ಜೈನಸಾಹಿತ್ಯ ಇತಿಹಾಸದಲ್ಲಿ ಜೈನಧರ್ಮ ಸಾಹಿತ್ಯ ಕ್ಷೇತ್ರದಲ್ಲಿ ವಿವಿಧ ವಿಷಯಗಳ ಬಗ್ಗೆ ಸ್ವತಂತ್ರ ಮತ್ತು ಅನುವಾದಿತ ಧರ್ಮ ಸಾಹಿತ್ಯ ಗ್ರಂಥಗಳನ್ನು ರಚಿಸಿದವರಲ್ಲಿ ಜಿ.ಪಿ. ರಾಜರತ್ನಂ, ಎರ್ತೂರು ಶಾಂತಿರಾಜಶಾಸ್ತ್ರಿಗಳನ್ನು ಬಿಟ್ಟರೆ ಪದ್ಮನಾಭಶರ್ಮರೇ ಅಗ್ರಗಣ್ಯ ರಾಗಿದ್ದಾರೆ. ಅವರೊಡನೆ ಮಾತುಕತೆಗಳಲ್ಲಿ ಕಲಿತದ್ದು ಪಾಠಗಳು ಅನೇಕ.

ಒಮ್ಮೆ ರಾಯಚೂರಿನಲ್ಲಿ ಮಹಾವೀರ ಜಯಂತಿ ಭಾಷಣಕ್ಕೆ ನಾವಿಬ್ಬರೂ ಆಹ್ವಾನಿತ ರಾಗಿದ್ದೆವು. ಅಲ್ಲಿಯ 'ರಾಯಚೂರು ವಾಣಿ' ಪತ್ರಿಕೆಯಲ್ಲಿ ಪ್ರಸಿದ್ಧರಾದ ಜೈನ ವಿದ್ವಾಂಸರಾದ ಪದ್ಮನಾಭಶರ್ಮರು ಮತ್ತು ಆಧ್ಯಾಪಕ ಜಿ. ಅಶ್ವತ್ಥನಾರಾಯಣ ಅವರು ಇಂದು ಸಂಜೆ ಕೋಟೆ ಮೈದಾನದಲ್ಲಿ ಉಪವಾಸ ಮಾಡುವರು ಎಂದು ಅಚ್ಚಾಗಿತ್ತು. ಅಂದು ಸಂಜೆ ಉಪನ್ಯಾಸವಾದ ಮೇಲೆ ಸಂಪ್ರದಾಯಸ್ಥ ಜೈನರು ರಾತ್ರಿ ಕತ್ತಲೆ ಆದಮೇಲೆ ಊಟ ಮಾಡುವುದಿಲ್ಲ. ಆದ ಕಾರಣ ಶಾಸ್ತ್ರವೇತ್ತರಾದ ಸಂಪ್ರದಾಯಸ್ಥ ಪದ್ಮನಾಭಶರ್ಮರು ಊಟ ಮಾಡುವುದಿಲ್ಲವೆಂದು, ಅವರ ಜತೆಯಲ್ಲಿದ್ದ ನನ್ನನ್ನು ಜೈನನೆಂದು ಭಾವಿಸಿ ರಾತ್ರಿ ಊಟಕ್ಕಾಗಲೀ ಫಲಹಾರಕ್ಕಾಗಲೀ ವ್ಯವಸ್ಥೆ ಮಾಡಿರಲಿಲ್ಲ. ಆಗ ನಾನು ರಾಯಚೂರು ವಾಣಿ ಭವಿಷ್ಯ ನಿಜವಾಯಿತು ಶರ್ಮರೇ ಎಂದೆ. ಅದಕ್ಕೆ ಅದೆಲ್ಲಾದರೂ ಉಂಟೆ. ನೀವು ಉಪವಾಸ ಇರಬಾರದು ಏನನ್ನಾದರೂ

ತಿನ್ನಲೇಬೇಕು ಎಂದರು. ಹತ್ತಿರದಲ್ಲಿ ಎಲ್ಲಿಯೂ ಹೋಟೆಲ್ ಇರಲಿಲ್ಲ. ಆಗ ಬಲವಂತವಾಗಿ ಬೀಡಿ ಅಂಗಡಿ ಒಂದರ ಬಳಿ ನಿಂತು ಬಲವಂತವಾಗಿ ಬಾಳೆಹಣ್ಣು ತಿನ್ನಿಸಿದರು. ಆಗ ನಾನು ಒಂದು ದಿನ ಉಪವಾಸವಿದ್ದರೆ ಪ್ರಾಣ ಏನೂ ಹೋಗೋಲ್ಲ ಎಂದೆ. ಅದಕ್ಕೆ ಅವರು ಹೇಳಿದರು. ನಿಜ. ಆದರೆ ನಾನು ಜೈನ ಅಹಿಂಸಾವ್ರತಸ್ಥ. ಅಹಿಂಸೆ ಎಂದರೆ ನಾವು ಹಿಂಸೆ ಮಾಡಬಾರದು ಎಂದಷ್ಟೇ ಅರ್ಥವಲ್ಲ. ನಮ್ಮಿಂದ ಯಾವ ರೀತಿಯೂ ಇತರರಿಗೂ ಹಿಂಸೆ ಆಗಬಾರದು ಎಂದರ್ಥ. ನನ್ನಿಂದ ನೀವು ಉಪವಾಸಿಗಳಾಗಿದ್ದಕ್ಕೆ ನಾನು ಹೊಣೆ. ನಿಮ್ಮ ಹಸಿವಿನ ಹಿಂಸೆಗೆ ನಾನು ಕಾರಣ ಆದ್ದರಿಂದ ನಿಮ್ಮ ಹಸಿವನ್ನು ನೀಗಿಸಲೇಬೇಕು. ನೀವು ಬಾಳೆಹಣ್ಣು ತಿನ್ನಲೇಬೇಕು ಎಂದರು. ಅವರ ಮನೆಗೆ ಹೋದಾಗಲೆಲ್ಲ ತಾವು ಕಾಫಿ ಕುಡಿಯದಿದ್ದರೂ ನನಗೆ ಕಾಫಿ ಕೊಡುತ್ತಿದ್ದರು. ಕಾಫಿ ವೇಳೆಯಲ್ಲಿ ನೀವು ಕಾಫಿ ಕುಡಿಯದಿದ್ದರೆ ಆ ಪಾಪ ನನಗೆ ಬರುತ್ತೆ ಅದಕ್ಕೆ ನಿಮಗೆ ಕಾಫಿ ಕೊಡುತ್ತೇನೆ ಎನ್ನುತ್ತಿದ್ದರು. ಅವರ ಜತೆ ಧರ್ಮಸ್ಥಳಕ್ಕೆ ಹೋದಾಗ ವೀರೇಂದ್ರ ಹೆಗ್ಗಡೆ ಅವರು ಅವರ ತಾಯಿ ಖುದ್ದಾಗಿ ಶರ್ಮರನ್ನು ಅವರ ಜತೆ ಇದ್ದ ನನ್ನನ್ನು ಸ್ವಾಗತಿಸಿ ಅವರೇ ಊಟ ಹಾಕಿದಾಗ ಅವರೊಂದಿಗೆ ಶಾಸ್ತ್ರವಿಚಾರವಾಗಿ ಮಾತಾಡಿದಾಗ ನಾನು ಬೆರಗಾದೆ. "ಯಾಕಪ್ಪಾ ಇವೆಲ್ಲಾ?" ಅವರೆಂದಾಗ, 'ನೀವು ಕೇವಲ ಜೈನಪಂಡಿತರಲ್ಲಿ ಸದ್ಗೃಹಸ್ಥಶ್ರಾವಕರು ನಮಗೆಲ್ಲಾ ಮಾದರಿ ಆದ ಗುರುಗಳು ಎಂದಿದ್ದರು ಹೆಗ್ಗಡೆ ಅವರು. ಆಗ ಶರ್ಮರ ಇನ್ನೊಂದು ಮುಖ ತಿಳಿಯಿತು. ಹೀಗೆ ಶಾಲಾಬೋಧನೆಗಿಂತ ಒಬ್ಬ ಅಧ್ಯಾಪಕ ಜೀವನದಲ್ಲಿ ಸಾತ್ವಿಕ ಬದುಕನ್ನು ನಡೆಸುವುದು ಹೇಗೆ, ಶಾಸ್ತ್ರ ಸಾಹಿತ್ಯ ಅಧ್ಯಯನ ಹೇಗೆ ಮಾಡಬೇಕು. ಇತರರ ಮನನೋಯಿಸದಂತೆ ಬಾಳುವುದು ಹೇಗೆ. ಜೈನಧರ್ಮದ ಸೂಕ್ಷ್ಮಗಳು ಇವೇ ಮೊದಲಾದ ಜೀವನ ಪಾಠಗಳನ್ನು ಕಲಿಸಿದ ಬಾಳಿನ ವಿದ್ಯಾಗುರು ಅವರು.

ಕಾಲೇಜಿಗೆ ಬಂದಾಗ, ಆಚಾರ್ಯ ಪಾಠಶಾಲಾ ಬೆಳಗಿನ ಕಾಲೇಜಿನಲ್ಲಿ ವಿದ್ಯಾರ್ಥಿ ಆಗಿದ್ದಾಗ, ಇಬ್ಬರು ಅಧ್ಯಾಪಕರು ನನ್ನ ಬದುಕನ್ನು ರೂಪಿಸಿದರು. ಒಬ್ಬರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ರಾಜ್ಯಶಾಸ್ತ್ರ ಇತಿಹಾಸದ ಪ್ರಾಧ್ಯಾಪಕರಾಗಿದ್ದು ಅನೇಕ ವಿದ್ವತ್ಪೂರ್ಣ ಗ್ರಂಥಗಳನ್ನು ಇಂಗ್ಲಿಷಿನಲ್ಲಿ ಬರೆದ ಮತ್ತು ಅದ್ಭುತವಾದ ಇಂಗ್ಲಿಷ್ ವಾಗ್ಮಿ ಹೊಂದಿ ಎಂಥವರನ್ನು ಇಂಗ್ಲಿಷ್ ಭಾಷಣ ವೈಖರಿಯಿಂದ ಮಂತ್ರಮುಗ್ಧರಾಗಿಸುತ್ತಿದ್ದ ಇಂಗ್ಲೆಂಡಿನಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಿ ಬಂದಿದ್ದ ಪ್ರೊಫೆಸರ್ ಎಂ. ವಿ. ಕೃಷ್ಣರಾಯರು. ತರಗತಿಗಳಲ್ಲಿ ಸಾರ್ವಜನಿಕ ಸಭೆಗಳಲ್ಲಿ ಅವರ ಭಾಷಣ ಎಂದರೆ ಜನ ಕಿಕ್ಕಿರಿದು ಸೇರುತ್ತಿದ್ದರು. ಅವರು ಮೊದಲ ದಿನ ತರಗತಿ ತೆಗೆದುಕೊಂಡಾಗ ರಾಜ್ಯಶಾಸ್ತ್ರದ ಬಗ್ಗೆ ಇಂಗ್ಲಿಷಿನಲ್ಲಿ ಉಪನ್ಯಾಸ ಕೊಟ್ಟರು. ನಾನು ಕನ್ನಡ ಮಾಧ್ಯಮ ವಿದ್ಯಾರ್ಥಿ ಆದ್ದರಿಂದ ಕನ್ನಡದಲ್ಲಿ ಉತ್ತರಿಸುವವನಾದ್ದರಿಂದ ಅವರ ಇಂಗ್ಲಿಷ್ ಉಪನ್ಯಾಸವನ್ನು ಕೇಳುತ್ತ ಕೇಳುತ್ತಲೇ ಕನ್ನಡ ಮಾಡಿಕೊಂಡು ಟಿಪ್ಪಣಿ ಮಾಡಿಕೊಂಡೆ. ತರಗತಿ ಮುಗಿದ ಮೇಲೆ ಅವರಿಗೆ ಸರಿ ಇದೆಯೇ ಅಂತ ತೋರಿಸಿದೆ ಅವರು ನಿಬ್ಬೆರಗಾದರು. "ನನ್ನ ಭಾಷಣವೇ ಅನೇಕ ವಿದ್ಯಾರ್ಥಿಗಳಿಗೆ ಅರ್ಥವಾಗೊಲ್ಲ ಅಂಥದರಲ್ಲಿ, ಅದನ್ನು ಕೇಳುತ್ತಲೇ ಕನ್ನಡದಲ್ಲಿ ಟಿಪ್ಪಣಿ ಮಾಡಿದ್ದೀಯಲ್ಲಾ ಭಲೇ" ಎಂದರು. ಹೀಗಾಗಿ ಅವರಿಗೂ ನನಗೂ ತರಗತಿ ಆಚೆಗೂ ಆತ್ಮೀಯತೆ ಬೆಳೆದು ನನಗೆ ತಿಂಡಿ ಕೊಡಿಸುತ್ತಿದ್ದರು. ಅವರು ಭಾಷಣಗಳಿಗೆ ಕರೆದುಕೊಂಡು

ಹೋಗುತ್ತಿದ್ದರು. ಜೀವಣ್ಣರಾವ್ ಎಂಬ ಪತ್ರಿಕೋದ್ಯಮಿ ಮತ್ತು ದೇಶಭಕ್ತರನ್ನು ಬಿಟ್ಟರೆ ಅವರಿಗೆ ಹತ್ತಿರವಾದವನು ನಾನೇ ಆಗಿದ್ದೆ. ಅವರ ವಿದ್ಯಾರ್ಥಿಗಳಾಗಿದ್ದು ಅವರೊಂದಿಗೇ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಹಲವಾರು ಜನ ಮೇಷ್ಟ್ರು-ಮೇಡಂಗಳಿಗೆ ಅಚ್ಚರಿ ಮೂಡಿಸಿತ್ತು ನಮ್ಮ ಪ್ರೊಫೆಸರ್‌ರನ್ನು ಈಗಲೂ ಫ್ರೀ ಆಗಿ ಮಾತಾಡಿಸಲು ಹೆದರಿಕೆ ನಮಗೆ. ನೀವೇನು ಅಷ್ಟು ಸಲೀಸು ಮತ್ತು ನಿಮ್ಮ ಮೇಲೆ ಅವರಿಗೇಕೆ ಅಭಿಮಾನ ಎಂದು ಕೇಳುತ್ತಿದ್ದರು ಗೊತ್ತಿಲ್ಲ ಎನ್ನುತ್ತಿದ್ದೆ. ಅವರೊಡನೆ ಮಾತುಕತೆಗಳಿಂದ ಅವರ ಉಪನ್ಯಾಸಗಳಿಂದ ಅಧ್ಯಾಪಕರಿಗೆ ಭಾಷಾಪ್ರೌಢಿಮೆ ವಿಷಯದ ಪಾಂಡಿತ್ಯ ಹೇಗಿರಬೇಕು ಎಷ್ಟಿರಬೇಕು ಎಂಬ ಪಾಠ ಕಲಿತೆ ಅದು ನನಗೆ ಮಾದರಿ ಆಯಿತು. ಅಷ್ಟೇ ಅಲ್ಲ, ಅವರು ಆರ್ಥಿಕವಾಗಿ ಓದಲು ಕಷ್ಟವಾದಾಗ ಅವರು ನೀಡಿದ ನೆರವು ಚಿರಸ್ಮರಣೀಯ. 'ನೀವೇಕೆ ನನಗಿಷ್ಟು ಸಹಾಯ ಮಾಡುತ್ತೀರಿ ನಾನೇನು ನಿಮ್ಮ ಮಗನಲ್ಲ' ಎಂದು ಒಮ್ಮೆ ಕೇಳಿದೆ, ಅದಕ್ಕವರು ಹೇಳಿದರು: "ನೀನು ನನ್ನ ಮಕ್ಕಳಲ್ಲಿ ಒಬ್ಬ ಇದ್ದಂತೆ. ನಿಜವಾದ ಗುರು-ಶಿಷ್ಯ ಸಂಬಂಧ ಎಂದರೆ ತಂದೆ-ಮಗನಂತೆ. ಕೇವಲ ಪಾಠ ಮಾಡಿದ ಮಾತ್ರಕ್ಕೆ ಒಬ್ಬ ಗುರುವಾಗುವುದಿಲ್ಲ, ವಿದ್ಯಾರ್ಥಿ ಜೀವನಕ್ಕೆ ಬೆಳಕಾಗಬೇಕು" ಎಂದಿದ್ದರು. ಆ ಮಾತು ಇಂದೂ ನನ್ನ ಕಿವಿಯಲ್ಲಿ ಗುಂಗುಣಿಸುತ್ತಿದೆ. ಅವರೊಡನೆ ಎಷ್ಟು ಆತ್ಮೀಯತೆ ಇತ್ತು ಎಂದರೆ ನನ್ನ ಪಾಲಿನ ದೇವರು ಎಂದು ಭಾವಿಸಿದ್ದೆ. ಅನಿವಾರ್ಯವಾಗಿ ಹಣ ಬೇಕಾದರೆ ಕೇಳುವಷ್ಟು ಆತ್ಮೀಯತೆ ಹೊಂದಿದ್ದೆ. ರಾಜಭೋಗ ಅನುಭವಿಸಿದ ಅವರು ನಿವೃತ್ತಿನಂತರ ಆರ್ಥಿಕ ಸಂಕಷ್ಟದಿಂದ ಆಚಾರ್ಯ ಪಾಠಶಾಲೆಯಲ್ಲಿ ಅವರ ಶಿಷ್ಯರು ಆಚಾರ್ಯ ಪಾಠಶಾಲಾ ಸ್ಥಾಪಕರು ಪ್ರಿನ್ಸಿಪಾಲರೂ ಆದ ಅನಂತಾಚಾರ್ಯರ ಒತ್ತಾಯದ ಮೇಲೆ ಗೌರವ ಪ್ರಾಧ್ಯಾಪಕರಾಗಿದ್ದರು. ಒಮ್ಮೆ ಯಾವುದೇ ಸಂದರ್ಭದಲ್ಲಿ ಅನಿವಾರ್ಯವಾಗಿ ಸ್ವಲ್ಪ ಹಣ ಕೇಳಿದೆ. ಆಗ ಅವರು ನೋಡು ಈಗ ಸದ್ಯದಲ್ಲಿ ೧೦ ರೂ. ಅಷ್ಟೇ ಇದೆ. ನಿನಗೈದು ನನಗೈದು ಎಂದು ೫ ರೂ. ಕೊಟ್ಟಿದ್ದರು. ಏನು ತಿಳಿದುಕೋಬೇಡ ಸುಖ ದುಃಖಗಳನ್ನು ಸಮಾನವಾಗಿ ಹಂಚಿಕೊಳ್ಳಬೇಕು. ತಂದೆ-ಮಗ ಅಂದಿದ್ದರು. ಗುರು-ಶಿಷ್ಯರು ಎನ್ನಲಿಲ್ಲ. ಇಂಥ ಸನ್ನಿವೇಶಗಳೂ ಅದೆಷ್ಟೋ!

ನನ್ನ ಇನ್ನೊಬ್ಬ ಬಾಳಿನ ಗುರು ಪಾಂಡಿತ್ಯದಲ್ಲಿ ಅಲ್ಲದಿದ್ದರೂ ಮಾನವೀಯ ಸದ್ಗುಣಗಳಿಂದ ಇಂದಿಗೂ ಆದರ್ಶಪ್ರಾಯವಾಗಿರುವವರು ಕಾಲೇಜಿನಲ್ಲಿ ನಮ್ಮ ಪ್ರೊಫೆಸರರ ವಿದ್ಯಾರ್ಥಿ ಆಗಿದ್ದು ಅಧ್ಯಾಪಕರಾಗಿದ್ದ ಹೆಚ್.ಆರ್. ದಾಸೇಗೌಡರು. ಅವರು ಕ್ಲಾಸಲ್ಲಿ ಪಾಠ ಮಾಡುತ್ತಿದ್ದಾಗ ಅವರ ಪಾಠಕ್ಕಿಂತ ಅವರು ಕೊಡುತ್ತಿದ್ದ ನೋಟ್ಸ್ ಪರೀಕ್ಷೆಗೆ ಬಹಳ ಉಪಯುಕ್ತವಾಗಿತ್ತು. ಅವರ ಗುರುಗಳಾದ ಕೃಷ್ಣರಾಯರ ವಾಗ್ಝರಿ ಪಾಂಡಿತ್ಯಕ್ಕೆ ಬೆರಗಾದ ನಮಗೆ ಪಾಠದಲ್ಲಿ ಇವರು ಸಾದಾ ಮೇಷ್ಟ್ರು ಆಗಿದ್ದರು. ಆದರೆ ಒಬ್ಬ ಅಧ್ಯಾಪಕ ಪಾಠದಲ್ಲಿ ಗುರು ಆಗುವುದಕ್ಕಿಂತ ಬಾಳಿನಲ್ಲಿ ಗುರು ಆಗಬೇಕು ಎಂಬ ಪಾಠ ಕಲಿಸಿದವರು ಅವರು. ಅದಕ್ಕೊಂದು ಸನ್ನಿವೇಶ ಬಂತು.

ಕಾಲೇಜಿನಲ್ಲಿ ವಾರ್ಷಿಕೋತ್ಸವ ಸಂದರ್ಭದಲ್ಲಿ ವಿದ್ಯಾರ್ಥಿ ಸಂಘದವರಾದ ನಾನು ನಮ್ಮ ಮಿತ್ರರು (ಅವರೆಲ್ಲ ಸಾಮಾನ್ಯರೇನಲ್ಲ ಮುಂದೆ ಬಾಳಿನಲ್ಲಿ ಪ್ರಸಿದ್ಧರಾದರು) ನಾಟಕದ

ರಿಹರ್ಸಲ್ ರಂಗಸಜ್ಜಿಕೆ ಇತ್ಯಾದಿ ಸಂಜೆ ಆದಮೇಲೆ ಮಾಡುತ್ತಿದ್ದೆವು. ರಾತ್ರಿ ೧೧ ಗಂಟೆ ಆಗಿಬಿಟ್ಟಿತು. ಆಗ ನಮಗೆ ಕಾಲೇಜು ಎಂದರೆ ಕೇವಲ ಪಾಠದ ಮನೆ ಆಗಿರಲಿಲ್ಲ. ನಾನಾ ಬಗೆಯ ಚಟುವಟಿಕೆಗಳ ನೆಲೆ ಆಗಿತ್ತು. ಕಾಲೇಜು ಬೆಳಿಗ್ಗೆ ಮುಗಿದರೂ ಕಾಲೇಜಲ್ಲೇ ಇರುವ ಲೈಬ್ರರಿಯಲ್ಲೋ, ನಾಟಕದ ತಯಾರಿಯಲ್ಲೋ ಇತರೆ ಚಟುವಟಿಕೆಗಳಲ್ಲೇ ನಿರತರಾಗಿರುತ್ತಿದ್ದೆವು. ವಾರ್ಷಿಕೋತ್ಸವ ಬಂದರಂತೂ ಸಂಭ್ರಮವೋ ಸಂಭ್ರಮ. ರಾತ್ರಿ ೧೧ ಆಗಿ ಊಟ ತಿಂಡಿ ಇಲ್ಲದೆ ಎಲ್ಲೂ ಏನು ಸಿಗದೆ ಇದ್ದಾಗ ಹಸಿವಿನ ನಡುವೆ ರಂಗವ್ಯವಸ್ಥೆ ಮುಂದುವರೆಸಿದ್ದೆವು. ರಾತ್ರಿ ಅಲ್ಲೇ ಜಂಖಾನ ಹಾಸಿಕೊಂಡು ಮಲಗಿಕೊಳ್ಳಲು ನಿರ್ಧರಿಸಿದ್ದೆವು. ಬೆಳಿಗ್ಗೆ ತಯಾರಿ ಮಾಡಲು ಆಗುವುದಿಲ್ಲವೆಂಬುದಾಗಿತ್ತು. ಆಗ ಇದೇನಿದು ಕಾಲೇಜಲ್ಲಿ ಸದ್ದು ಎಂಬ ಅಲ್ಲೇ ಕಾಲೇಜಿನ ಬಳಿ ಮನೆಯಲ್ಲಿದ್ದ ದಾಸೇಗೌಡರು ಒಳಗೆ ಬಂದು ವಿಚಾರಿಸಿದರು. ನಾವೆಲ್ಲ ಊಟ ತಿಂಡಿ ಇಲ್ಲದ್ದನ್ನು ಅರ್ಥಮಾಡಿಕೊಂಡರು. ಏನೋ ವಿಚಾರಿಸಲು ಬಂದವರಂತೆ ಮಾತಾಡಿ ಹೊರಟುಹೋದರು. ಸ್ವಲ್ಪ ಹೊತ್ತಿನನಂತರ ಬಂದು ಬನ್ನಿ ಎಲ್ಲರೂ ಊಟಕ್ಕೆ ಎಂದರು. ೧೨ ಘಂಟೆ ರಾತ್ರಿ ಆಗ ನಾವು ಅವಾಕ್ಕಾದೆವು. ಎಲ್ಲರನ್ನು ಒಬ್ಬಿಬ್ಬರಲ್ಲ ೮-೧೦ ಜನ ಇದ್ದೆವು. ಅಷ್ಟು ಜನಕ್ಕೆ ರಾತ್ರಿ ಬಿಸಿಬಿಸಿ ಊಟ ಹಾಕಿದರು. ಆಗ ನಮಗೆ ಅವರು ಅಚ್ಚುಮೆಚ್ಚಾದರು. ಬಡವಿದ್ಯಾರ್ಥಿಗಳಿಗೆ ನೆರವಾಗುವುದು. ಕಾಲೇಜಿಗೆ ಗ್ರಾಂಟು ಬರಲು ಪ್ರಿನ್ಸಿಪಾಲರ ಜತೆ ಮೈಸೂರಿಗೆ ಹೋಗಿಬರುವುದು ಸಹೋದ್ಯೋಗಿಗಳಿಗೆ ನೆರವಾಗುವುದು ಮೊದಲಾದ ಸಂಗತಿಗಳು ತಿಳಿದಾಗ ಅವರ ಜನಪ್ರಿಯತೆಯ ಗುಟ್ಟು ಮಾನವೀಯತೆ ಎಂದು ತಿಳಿಯಿತು. ಮಿತಭಾಷಿ, ನಗುಮುಖ ವೇದಿಕೆ ಮೇಲೆ ಕಾಣಿಸಿಕೊಳ್ಳದಿರುವುದು ಸದಾ ಕ್ರಿಯಾಶೀಲರಾಗಿರುವುದು ಅವರ ಸ್ವಭಾವ. ಸದ್ದಿಲ್ಲದೆ ದುಡಿಯುವವರು ಹೇಗಿರುತ್ತಾರೆ ಎಂಬುದಕ್ಕೆ ಅವರೊಂದು ಮಾದರಿ. "ನಾ ಮಾಡಿದೆನೆಂದರೆ ಏಡಿಸಿ ಕಾಡಿತ್ತು ಶಿವನ ಡಂಗುರ" ಎಂಬ ಬಸವಣ್ಣನವರ ಮಾತನ್ನು ಅಕ್ಷರಶಃ ಪಾಲಿಸಿದವರು. ಅವರು ಬೆಂಗಳೂರಿನ – ತುಮಕೂರಿನ ಹಲವಾರು ಕಾಲೇಜುಗಳನ್ನು ಕಟ್ಟಿದ್ದಾರೆ. ಹತ್ತಾರು ಸಂಸ್ಥೆಗಳನ್ನು ಸ್ಥಾಪಿಸಿ ದುಡಿದಿದ್ದಾರೆ. ಆದರೆ ಎಲ್ಲಿಯೂ ಅವರ ಹೆಜ್ಜೆಗುರುತುಗಳಿಲ್ಲ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾ ನಿಯಂತ್ರಕರಾಗಿ ಅವರು ಮಾಡಿದ ಸಾಧನೆ ಅಮೋಘ. ಅವರ ಕಾಲದಲ್ಲಿ ನನಗೆ ತಿಳಿದಂತೆ ಯಾವ ರೀತಿ ಪರೀಕ್ಷಾ ಅವ್ಯವಸ್ಥೆ ಆಗಲಿಲ್ಲ. ಪ್ರಶ್ನೆಪತ್ರಿಕೆಗಳು ಲೀಕ್ ಆಗಲಿಲ್ಲ; ಮೌಲ್ಯಮಾಪನ, ಅಂಕಮಾಪನ ಅವ್ಯವಸ್ಥೆ ಗೂಡಾಗಲಿಲ್ಲ. ಅಧ್ಯಾಪಕರ ಪ್ರೇಮ ವಿಶ್ವಾಸದಿಂದಲೇ ಎಲ್ಲ ಕೆಲಸಗಳನ್ನು ನಿಭಾಯಿಸಿದರು. ಅವರು ಅಧಿಕಾರಿಗಳಾಗಿದ್ದರೂ ಎಂದೂ ಅಧಿಕಾರ ಚಲಾಯಿಸದೆ ಸಹೋದ್ಯೋಗಿಯಾಗಿ, ಅಧ್ಯಾಪಕರಾಗಿ ವರ್ತಿಸಿದರು. ಒಬ್ಬ ಅಧ್ಯಾಪಕ ಜೀವನದುದ್ದಕ್ಕೂ ಹೇಗಿರಬೇಕು ಎಂಬುದಕ್ಕೆ ಅವರು ಮಾದರಿ. ಗಾಂಧಿವಾದಿಗಳಾಗಿ ಇಂದೂ ಗಾಂಧೀ ಸ್ಮಾರಕ ನಿಧಿ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅವರ ಕಾರ್ಯವಿಧಾನ ಅನುಕರಣೀಯವಾಗಿದೆ.

ಅವರು ವಿದ್ಯಾರ್ಥಿಗಳಿಗೆ ಸಹೋದ್ಯೋಗಿಗಳಿಗೆ ನೆರವು ನೀಡುವ ವಿಧಾನವೇ ವಿಶಿಷ್ಟ ವಾದುದು. ಯಾರಿಗೂ ಪತ್ತೆ ಆಗದಂತೆ ನೆರವು ನೀಡುವುದು ಅವರ ವೈಶಿಷ್ಟ್ಯ. ನನ್ನದೇ ಒಂದು ನಿದರ್ಶನ ಹೇಳಬಹುದು. ನಾನು ಧಾರವಾಡಕ್ಕೆ ಒಂಟಿಯಾಗಿ ಯಾವುದೇ ಆರ್ಥಿಕ ನೆರವಿಲ್ಲದೆ ಧಾರವಾಡದಲ್ಲಿ ಯಾರ ಪರಿಚಯವೂ ಇಲ್ಲದೆ ಭಂಡಸಾಹಸದಲ್ಲಿ ಕನ್ನಡ ಎಂ.ಎ.

ಮಾಡಲು ಹೊರಟಿದ್ದೆ. ಮನೆಯವರು ನಮಗೆ ಅಷ್ಟೊಂದು ಓದಿಸಲು ಸಾಧ್ಯವಿಲ್ಲ ಎಂದುಬಿಟ್ಟಿದ್ದರು.

ಅಂದು ಧಾರವಾಡಕ್ಕೆ ಹೊರಟಾಗ ನನ್ನ ಬಳಿ ಇದ್ದಿದ್ದು ಒಂದೇ ಒಂದು ಕಾಗದ ಅನಕೃ ಕೊಟ್ಟಿದ್ದು ಎಸ್.ಎಸ್. ಒಡೆಯರಿಗೆ. "ಇವರಿಗೆ ಸಹಾಯಮಾಡಿದರೆ ನನಗೆ ಸಹಾಯ ಮಾಡಿದಂತೆ ಇವರು ನನ್ನ ಮಿತ್ರರು" ಎಂಬ ತಾರಕ ವಾಕ್ಯದ ಪತ್ರ, ಆ ಕಾಗದ ಕಂಡು ಬೆಕ್ಕಸಬೆರಗಾದ ಒಡೆಯರ್ ಕೃಷ್ಣರಾಯರ ಆತ್ಮೀಯತೆ ಹೊಂದಿದ ನೀವೇ ಭಾಗ್ಯವಂತರು ಅಂತ ಹೇಳಿ ಹಾಸ್ಟೆಲಿನಲ್ಲಿ ಜಾಗ ಕೊಡಿಸಿ ಎಂ.ಎ. ಪ್ರವೇಶ ನೀಡಿದರು. ಅಭ್ಯರ್ಥಿಯಾಗಿ ಕಚೇರಿಯಲ್ಲಿ ಅರ್ಜಿ ಹಿಡಿದು ನಿಂತಿದ್ದ ನನ್ನನ್ನು ಅನಕೃ ಕಾಗದ ಕಂಡಮೇಲೆ ಕೂಡಿಸಿ ಚಾ ತರಿಸಿ ಪ್ರೀತಿಯಿಂದ ಮಾತಾಡಿಸಿದರು. ಅನಕೃ ಮಹಿಮೆ ಅದು.

ಕಲಾಸಿಪಾಳ್ಯದ ಬಸ್‌ಸ್ಟ್ಯಾಂಡಿನಲ್ಲಿ ಧಾರವಾಡದ ಬಸ್ಸಿಗೆ ಕಾಯುತ್ತಿದ್ದಾಗ, ದಾಸೇಗೌಡರು ಬಂದರು. ನನ್ನ ಕೈಗೆ ಒಂದು ಪಾರ್ಸೆಲ್ ಕೊಟ್ಟು, ಇದರೊಳಗೆ ವಿಳಾಸವಿದೆ ಧಾರವಾಡದಲ್ಲಿ ಅದನ್ನು ತಲುಪಿಸಿಬಿಡು ಎಂದು ಹೇಳಿ ಬೀಳ್ಕೊಟ್ಟರು. ಧಾರವಾಡಕ್ಕೆ ಕಳಿಸಲು ಬಂದಿದ್ದ ಇಬ್ಬರು ಮಿತ್ರರು ಮತ್ತೆ ಅವರು, ಅಲ್ಲಿ ಹೋದಮೇಲೆ ಸಂಬಂಧಪಟ್ಟವರಿಗೆ ತಲುಪಿಸಲು ಪಾರ್ಸೆಲ್ ಒಡೆದು ನೀಡಿದಾಗ, ಒಳಗಿದ್ದ ಕಾಗದದ ಒಕ್ಕಣೆ ಇದು, ಇದು ನಿನಗೇನೆ. ಅಲ್ಲಿ ಚಳಿ ಇರುತ್ತೆ, ಅದಕ್ಕಾಗಿ ಈ ಬಟ್ಟೆಗಳು. ಹೋದ ತಕ್ಷಣ ಖರ್ಚಿಗೆ ಕಾಸು ಬೇಡವೇ, ಜಾಗ ಅಪರಿಚಿತ ನೀನು ಒಂಟಿ ಅದಕ್ಕಾಗಿ ಖರ್ಚಿಗೆ ಸ್ವಲ್ಪ ಹಣ, ಸಂಕೋಚ ಬೇಡ ಬಳಸು ಎಂಬರ್ಥದ ಕಾಗದ. ಇದು ಅವರು ನೆರವು ನೀಡುವ ರೀತಿ.

ಇಂದೂ ಸಹಾ ಅವರದು ಎಲ್ಲರಿಗೂ ಸಹಾಯಸ್ತ, ಗುಪ್ತಹಸ್ತ, ಕೇವಲ ಓದಿನಿಂದ ದೊಡ್ಡವರಾಗುವುದಲ್ಲ ಬದುಕುವ ರೀತಿಯಲ್ಲಿ ದೊಡ್ಡವರಾಗಬೇಕು ಎಂಬ ಪಾಠ ಕಲಿಸಿದವರು. ಅವರು ಕೇವಲ ಕಾಲೇಜಿನಲ್ಲಷ್ಟೇ ಗುರುವಾದವರಲ್ಲ ಬಾಳಿನುದ್ದಕ್ಕೂ ನೆರವಾದ ಬಾಳಿನಗುರು ಅವರು. ನಿಜವಾದ ಗುರು ಶಿಷ್ಯಬಾಂಧವ್ಯ ಆಜೀವ ಪರ್ಯಂತ ಇರುತ್ತದೆ. ಇಂದಿಗೂ ಅವರು ನನಗೆ ಮೇಷ್ಟ್ರು ನಾನು ಅವರ ವಿದ್ಯಾರ್ಥಿ. ಒಂದು ವ್ಯತ್ಯಾಸ ಅಂದರೆ ಈಗ ಅವರು ಬೇಡ ಅಂದರೂ ಬಹುವಚನದಲ್ಲಿ ಮಾತಾಡಿಸುತ್ತಾರೆ. ಇದು ಸರಿಯೇ ಅಂದರೆ ಯಾರಲ್ಲೇ ಆಗಲಿ ಎಷ್ಟೇ ಪ್ರೀತಿ ವಿಶ್ವಾಸ ಇದ್ದರೂ ಇನ್ನೊಬ್ಬರಲ್ಲಿ ಇರುವ ವಿದ್ಯೆ, ಗುಣಗಳನ್ನು ಗೌರವಿಸಬೇಕು ಎನ್ನುತ್ತಾರೆ. ಈ ಮಾತು ವಿದ್ಯಾರ್ಥಿಗಳ ಬಗ್ಗೆ ಗುರುಗಳಿಗೂ ಅನ್ವಯಿಸುತ್ತದೆ ಎಂಬುದು ಅವರ ದೃಷ್ಟಿ. ನಾನು ಸರಳ ವಿವಾಹ ಆಗುತ್ತೇನೆ. ಅಕ್ಷರಶಃ ಸರಳವಿವಾಹ ಕೈಬೆರಳಲ್ಲಿ ಎಣಿಸುವಷ್ಟು ಜನರ ನಡುವೆ ಯಾರ ಕಡೆಗೂ ಯಾವ ರೀತಿಯಲ್ಲೂ ಹಣ ಖರ್ಚಾಗಬಾರದು ಎಂಬ ನಿರ್ಧಾರ ಕೈಗೊಂಡಾಗ ಅದನ್ನು ಬೆಂಬಲಿಸಿ ನೈತಿಕ ಧೈರ್ಯ ಮೂಡಿಸಿದವರು ಅವರು. ಕೆಲವೇ ನೂರುಗಳ ವೆಚ್ಚದಲ್ಲಿ ಆಯಿತು ನಮ್ಮ ಮದುವೆ. ವಿದ್ಯಾರ್ಥಿಯಾಗಿ ಓದುತ್ತಿದ್ದ ಕಾಲದಲ್ಲಿ ಊಟ ಬಟ್ಟೆಗೆ ಪ್ರೀತಿಗೆ ಸಾಕಷ್ಟು, ಅನುಕೂಲವಿಲ್ಲದಾಗ, ಪರೋಕ್ಷವಾಗಿ ನನಗೆ ತಿಳಿಯದ ಹಾಗೆ ಇತರರ ಮೂಲಕ ತಾವೇ ನೆರವನ್ನು ದೊರಕಿಸಿದರು. ನೇರವಾಗಿ ನೀಡಿದರೆ ನಾನು ತಿರಸ್ಕರಿಸಬಹುದು ಎಂಬ ಕಾರಣಕ್ಕೆ ವಿದ್ಯಾರ್ಥಿವೇತನ ದೊರಕಿಸಿ ಓದಿಗೆ ನೆರವಾದವರು

ಅವರು. ಈವತ್ತಿಗೂ ನಾನು ಅವರ ವಿದ್ಯಾರ್ಥಿಯೇ ಅವರನ್ನು ಭೇಟಿ ಆದಾಗಲೆಲ್ಲ ಮೊದಲು ಕಾಫಿ ಆಯಿತೇ ತಿಂಡಿ ಆಯಿತೇ, ಆಮೇಲೆ ಇಲ್ಲೇ ಊಟ ಮಾಡಿ ಹೋಗೋಣ ಇಲ್ಲಿಗೇ ತಿಂಡಿ ತರಿಸುವೆ, ಇಂಥ ಮಾತುಗಳೇ ಮೊದಲು. ಬಂದವರ ಹೊಟ್ಟೆಪಾಡು ನೋಡುವುದರಲ್ಲಿ ಅವರ ಹಾಗೆ ಇನ್ನೊಬ್ಬರಿಲ್ಲ. ಎಷ್ಟೇ ದುಃಖ ಚಿಂತೆ ವ್ಯಾಧಿ ಇದ್ದರೂ ಅದನ್ನು ತೋರ್ಪಡಿಸಿ ಕೊಳ್ಳದೇ ಏನೂ ಆಗದವರಂತೆ ಕೆಲಸ ಮಾಡುವುದು ಅವರ ಜಾಯಮಾನ. ಒಬ್ಬರ ಮಾತನ್ನು ಇನ್ನೊಬ್ಬರ ಬಳಿ ಅಪ್ಪಿತಪ್ಪಿಯೂ ಕೇಳಿದರೂ ಹೇಳೋಲ್ಲ. ಹೀಗಾಗಿ ಇಂದೂ ಜೀವನಪಾಠ ಹೇಳುತ್ತಿರುವ ಮೇಷ್ಟ್ರು ಅವರು. ಯಾವುದೇ ಕೆಲಸವಿದ್ದರೂ ನೇರವಾಗಿ ಇದನ್ನು ಮಾಡಿಕೊಡಬೇಕು ಆಗುತ್ತಾ ಎಂದು ಕೇಳುತ್ತಾರೆ, ಅವರ ವಿನಯ, ಸೌಮ್ಯತೆ ಎಲ್ಲರಿಗೂ ಮಾದರಿ ಆಗಿದೆ. ಅವರು ಕೋಪಮಾಡಿಕೊಂಡಿದ್ದು, ರೇಗಿದ್ದೂ, ಬೈದಿದ್ದು ನಾನು ಕಂಡಿಲ್ಲ. ಇಂದೂ ಸಹ ಅವರು ನನಗೆ ಮೇಷ್ಟ್ರೇ. ಊರಿಗೆ ದೊರೆ ಆದರೂ ತಾಯಿಗೆ ಮಗನೇ ಅಂದಹಾಗೆ. ಏನೇ ವಿಶ್ವಾಸದ ಕೆಲಸ ಇದ್ದರೂ ಹೇಳಿ ಕಳಿಸಿದಾಗ ಇಲ್ಲ ಎಂಬ ಪ್ರಶ್ನೆಯೇ ಇಲ್ಲ ಅವರಿಗೂ ನನಗೂ. ಒಮ್ಮೆ ಒಂದು ವೃತ್ತಿಯಲ್ಲಿದ್ದಾಗ ಇರುವ ಸ್ಥಾನಮಾನ ಗೌರವಗಳು ನಿವೃತ್ತಿ ಆದಾಗ ಇರುವುದಿಲ್ಲ. ಆದರೆ ಅಧ್ಯಾಪಕ ವೃತ್ತಿಯಲ್ಲಿರುವವರು ನಿವೃತ್ತರಾದರೂ ಅವರು ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಮೇಷ್ಟ್ರೇ ಆಗಿರುತ್ತಾರೆ. ನಿವೃತ್ತರಾಗಿರುವುದಿಲ್ಲ ಮಾಜಿ ಆಗುವುದಿಲ್ಲ. ಇದು ಎಲ್ಲರ ಅನುಭವ. ಈ ದೃಷ್ಟಿಯಲ್ಲಿ ನಿವೃತ್ತಿ ಆಗದ ಉದ್ಯೋಗ ಅಧ್ಯಾಪಕ ವೃತ್ತಿ.

ಅಧ್ಯಾಪಕರು ಎಂದರೆ ದುಡ್ಡು ಬಟ್ಟೆಯಿಂದ ದೊಡ್ಡವರಾಗೋದಿಲ್ಲ; ದೊಡ್ಡಗುಣದಿಂದ ದೊಡ್ಡವರಾದೋರೆಲ್ಲ ಎಂಬ ರವೀಂದ್ರರ ಮಾತಿಗೆ ಸಾಕ್ಷಿ ಆದವರು. ನನ್ನ ಅಧ್ಯಾಪಕರು ಅಂಥವರು ಅದು ನನ್ನ ಭಾಗ್ಯ. ಪಾಠ ಮಾಡುವುದರಲ್ಲಿ ಮಾತ್ರ ಮರೆಯಲಾಗದ ಅಧ್ಯಾಪಕರು ಹಲವರಿದ್ದಾರೆ. ಅವರಲ್ಲಿ ಕೆ. ವೆಂಕಟರಾಮಪ್ಪನವರು. ಇಂಟರ್‌ಮೀಡಿಯೆಟ್‌ನಲ್ಲಿ ಅವರು ಮಾಡಿದ ಭಾಷಣ ಏಕಾಂಕಗಳು ನಾನು ಅಧ್ಯಾಪಕನಾದಾಗ ಪಾಠ ಹೇಗೆ ಮಾಡಬೇಕು ಎಂಬುದಕ್ಕೆ ಆದರ್ಶವಾಯಿತು ಸ್ಫೂರ್ತಿ ಆಯಿತು.

ಪ್ರತಿಯೊಬ್ಬ ವ್ಯಕ್ತಿ ಇಂದು ಏನಾಗಿರುತ್ತಾನೋ ಅದಕ್ಕೆ ಮುಖ್ಯ ಕಾರಣ ತಾಯಿತಂದೆಗಳ ಜತೆಗೆ ಅವರಿಗಿಂತ ಹೆಚ್ಚಾಗಿ ಶಾಲಾ ಕಾಲೇಜುಗಳಲ್ಲಿ ಅಧ್ಯಾಪಕರಾದವರು ಸ್ಫೂರ್ತಿ ಮತ್ತು ಮುಖ್ಯ ಕಾರಣರಾಗಿರುತ್ತಾರೆ. ಒಬ್ಬ ವಿದ್ಯಾರ್ಥಿ ತನ್ನ ಬಾಳನ್ನು ತಿದ್ದುವಂಥ, ತನ್ನ ಜ್ಞಾನಕ್ಷೇತ್ರದಲ್ಲಿ ನೈಪುಣ್ಯ ಪಡೆಯಲು ಕಾರಣವಾಗುವಂಥ, ಆದರ್ಶ ಪ್ರಜೆಯಾಗುವಂಥ ಶ್ರೇಷ್ಠ ಅಧ್ಯಾಪಕರನ್ನು ಪಡೆಯುವುದು ಅವನ ಬಾಳಿನ ಪುಣ್ಯದ ಫಲ ಈ ವಿಚಾರದಲ್ಲಿ ಎಷ್ಟೋ ವಿದ್ಯಾರ್ಥಿಗಳಿಗೆ ಸಿಗದಂಥ ಅಧ್ಯಾಪಕರನ್ನು ಪಡೆವಂಥ ಭಾಗ್ಯಶಾಲಿ ನಾನು. ನಾನಿಂದು ನನ್ನ ಶಿಷ್ಯರ ಕಣ್ಣಲ್ಲಿ ಸ್ಫೂರ್ತಿಯ ಗುರು ಆಗಿದ್ದರೆ ಅದಕ್ಕೆ ಕಾರಣ ನಾನಲ್ಲ ನನ್ನ ಗುರುಗಳು.

ನನ್ನೆಲ್ಲ ಗುರುಗಳಿಗೆ ನಮೋ ನಮೋ.

❖

# ನನ್ನ ಮೆಚ್ಚಿನ ಗುರು

## (ಪ್ರೊ॥ ಜಿ. ಅಶ್ವತ್ಥನಾರಾಯಣ)

● *ಡಾ॥ ಎಸ್.ಎಚ್. ಭುವನೇಶ್ವರ್*

ಜಗತ್ತಿನಾದ್ಯಂತ ಗುರುಶಿಷ್ಯ ಪರಂಪರೆ ಇದೆ. ಭಾರತದಲ್ಲಿಯೂ ಗುರುಶಿಷ್ಯ ಪರಂಪರೆ ಗುರುಕುಲದ ಹಿನ್ನೆಲೆಯಲ್ಲಿ ಆರಂಭಗೊಂಡು ಇಂದಿನವರೆಗೂ ಬೆಳೆದುಬಂದಿದೆ. ಹಿಂದೆ 'ಗುರುವೇ ನಮಃ' ಎನ್ನುವ ಕಾಲವೊಂದಿತ್ತು. ಇಂದು 'ಗುರುವೇನ್ ಮಹಾ' ಎನ್ನುವ ಕಾಲಬಂದಿದೆ ಎಂದರೆ ಶಿಷ್ಯ ಗುರುವನ್ನು ಮೀರಿಸಿದ ಶಿಷ್ಯನಾಗಿ ಬೆಳೆದು ನಿಂತಿರುವುದೇ ಆಗಿದೆ. ಆದರೆ ಶಿಷ್ಯ ಎಷ್ಟೇ ಎತ್ತರಕ್ಕೆ ಬೆಳೆದರೂ ಗುರು ಗುರುವೇ ಆಗುತ್ತಾರೆ, ಶಿಷ್ಯ ಶಿಷ್ಯನೇ ಆಗಿರುತ್ತಾನೆ. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ದಾಸರ ನುಡಿಯಂತೆ. ಗುರುವಿನಲ್ಲಿ ಶಿಷ್ಯ ಸಮರ್ಪಣಭಾವ ತಳೆಯದಿದ್ದರೆ ಜ್ಞಾನ ದೊರೆಯಲು ಸಾಧ್ಯವಿಲ್ಲ. ಗುರುವಿಗೆ ಶಿಷ್ಯರನ್ನು ಕಂಡರೆ ಪ್ರೀತಿ ಇರಬೇಕು ಹಾಗೆಯೇ ಶಿಷ್ಯರಿಗೆ ಗುರುವನ್ನು ಕಂಡರೆ ಭಯಭಕ್ತಿ ಇರಬೇಕು. ಆಗಲೇ ನಿಜವಾದ ಆಲೋಚನೆ ಹೊರಬರಲು ಸಾಧ್ಯ ವಾಗುವಂತಹದು. ಮಹಾಕವಿ ಕಾಳಿದಾಸ ಹೇಳಿರುವಂತೆ ಕೆಲವು ಗುರುಗಳು ತಾವು ಮಾತ್ರ ಬೆಳೆಯುತ್ತಾರೆ, ಕೆಲವು ಗುರುಗಳು ತಾವು ಬೆಳೆಯದೆ ಶಿಷ್ಯರನ್ನು ಮಾತ್ರ ಬೆಳೆಸುತ್ತಾರೆ. ಆದರೆ ಇವರ್‍ಯಾರೂ ಪೂರ್ಣ ಗುರುಗಳಾಗುವುದಿಲ್ಲ. ನಿಜವಾದ ಗುರುವೆಂದರೆ ತಾನೂ ಬೆಳೆದು, ತನ್ನ ಶಿಷ್ಯರನ್ನೂ ಬೆಳೆಸುವುದಾಗಬೇಕು, ಅಂತಹ ಗುರುಪರಂಪರೆಗೆ ಸೇರುವವರೆ ನನ್ನ ಅಚ್ಚುಮೆಚ್ಚಿನ ಗುರುಗಳಾದ ಪ್ರೊ॥ ಜಿ. ಅಶ್ವತ್ಥನಾರಾಯಣ ಅವರು. ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದ ಇವರು ಬಾಲ್ಯದಿಂದಲೂ ಸಂಸ್ಕೃತವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿ, ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್‌ನಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಡಿಪ್ಲೋಮಾವನ್ನು ಪಡೆದಿದ್ದರೂ, ಎಂ. ಆರ್. ಶ್ರೀನಿವಾಸಮೂರ್ತಿ, ಡಿ. ಎಲ್. ನರಸಿಂಹಾಚಾರ್, ತೀ.ನಂ. ಶ್ರೀಕಂಠಯ್ಯ, ದ.ರಾ. ಬೇಂದ್ರೆ, ಕುವೆಂಪು ಮುಂತಾದ ಕನ್ನಡದ ವಿದ್ವಾಂಸರ ಪ್ರಭಾವಕ್ಕೊಳಗಾಗಿ ಕಲಾವಿಭಾಗವನ್ನು ಆಯ್ಕೆ ಮಾಡಿಕೊಂಡು ಮತ್ತೇ ಪಿ.ಯು.ಸಿ.ಯಿಂದ ಅಭ್ಯಾಸ ಪ್ರಾರಂಭಿಸಿ ಕನ್ನಡ ಎಂ.ಎ. ಮಾಡಬೇಕೆಂದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಬಯಸಿದರು. ಇವರು ಕನ್ನಡ ಐಚ್ಛಿಕ ಓದಿಲ್ಲವೆಂಬ ಕಾರಣಕ್ಕೆ ಕನ್ನಡ ಎಂ.ಎ.ಗೆ ಪ್ರವೇಶ ನಿರಾಕರಿಸಿದರು. ಆದರೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಯಾವುದಾದರೂ ಎಂ.ಎ. ಮಾಡಿದ್ದರೆ ಸಾಕು ಕನ್ನಡ ಎಂ.ಎ. ಮಾಡಬಹುದೆಂಬುದನ್ನು ತಿಳಿದು, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರ ಎಂ.ಎ. ಮಾಡಿ, ನಂತರ ಕರ್ನಾಟಕ ವಿಶ್ವವಿದ್ಯಾಲಯಲದಲ್ಲಿ ಕನ್ನಡ ಎಂ.ಎ ಮಾಡಿದರು. ಕನ್ನಡಕ್ಕೆ ಸಂಬಂಧಿಸಿದ ಕನ್ನಡ ಭಾಷಾಶಾಸ್ತ್ರ

ಡಿಪ್ಲೋಮಾ, ಶಾಸನಶಾಸ್ತ್ರ ಡಿಪ್ಲೋಮಾ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮೊದಲಿಗೆ ಶ್ರೀ ಶಿವಮೂರ್ತಿ ಶಾಸ್ತ್ರಿಯವರು ಪ್ರಾರಂಭಿಸಿದ ಭಾಷಣ ಕಲಾಪ್ರವೀಣ ಕೋರ್ಸ್‌ನ ಮೊದಲ ತಂಡದ ವಿದ್ಯಾರ್ಥಿಯಾಗಿದ್ದು, ಮೇಲ್ದರ್ಜೆಯಲ್ಲಿ ಉತ್ತೀರ್ಣರಾದರು. ಇದರ ಜೊತೆಗೆ ಕನ್ನಡ ಶೀಘ್ರಲಿಪಿ, ಕನ್ನಡ ಬೆರಳಚ್ಚು ಮುಂತಾದ ಶಿಕ್ಷಣ ತರಬೇತಿಯನ್ನು ಪಡೆದಿದ್ದಾರೆ. ಕನ್ನಡಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದವರು ಕನ್ನಡ ಶಿಶುವಿಹಾರ ಶಿಕ್ಷಣ ಪ್ರಾರಂಭಿಸುವುದಕ್ಕೆ ಕಾರಣಕರ್ತರಾದ ಎಚ್.ಎಸ್. ದೊರೆಸ್ವಾಮಿ ಮತ್ತು ಇತರರ ಜೊತೆಯಲ್ಲಿ ಸೇರಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದ್ದಾರೆ. ಅ.ನ.ಕೃ. ರಾಮಮೂರ್ತಿಯವರ ಜೊತೆಗೂಡಿ ಕನ್ನಡ ಚಳವಳಿಯಲ್ಲಿ ಪ್ರಾರಂಭದ ಕಾರ್ಯಕರ್ತರಲ್ಲಿ, ಒಬ್ಬರಾಗಿದ್ದುಕೊಂಡು, ಅನೇಕ ಕನ್ನಡ ಪ್ರಚಾರೋಪನ್ಯಾಸಗಳನ್ನು ಮಾಡಿದ್ದಾರೆ. ಮಾಧ್ಯಮಿಕ ಶಾಲೆಯಿಂದ ಸ್ನಾತಕ ಶಿಕ್ಷಣ ಪೂರೈಸುವವರೆಗೂ ಕನ್ನಡ ಚರ್ಚಾಸ್ಪರ್ಧೆಗಳಲ್ಲಿ ಸಾಹಿತ್ಯ ಸ್ಪರ್ಧೆಗಳಲ್ಲಿ ಭಾಗವಹಿಸುವ ಹವ್ಯಾಸವಿದ್ದ ಇವರು ಅನೇಕ ಬಹುಮಾನಗಳನ್ನು ಪಡೆದಿದ್ದಾರೆ. ಕನ್ನಡ ಸಾಹಿತ್ಯ ಅಭಿರುಚಿ ಇದ್ದ ಇವರಿಗೆ ಪ್ರಭಾವ, ಪ್ರೋತ್ಸಾಹ ನೀಡಿದವರೆಂದರೆ ಕನ್ನಡದ ಪ್ರಸಿದ್ಧ ವಿದ್ವಾಂಸರಾದ, ನೂರಾರು ಜೈನ ಕೃತಿಗಳನ್ನು ಬರೆದಿರುವ ಡಾ|| ಎಂ. ವಿ. ಕೃಷ್ಣರಾವ್, ಪ್ರೊ. ಹೆಚ್. ಆರ್. ದಾಸೇಗೌಡ, ಭುವನಹಳ್ಳಿ ಡಿ. ಪದ್ಮನಾಭಶರ್ಮ ಮತ್ತು ಕನ್ನಡ ಸಾಹಿತ್ಯ ಪುಸ್ತಕ ಭಂಡಾರದ ಕೆ. ನಾಗರಾಜ್ ಅವರು ಮುಖ್ಯರಾದವರು. ಕನ್ನಡ ಎಂ.ಎ ಮಾಡಿದ್ದ ಇವರು ಬೆಂಗಳೂರಿನ ದಯಾನಂದ ಕಲೆ, ವಾಣಿಜ್ಯ ಮತ್ತು ವಿಜ್ಞಾನ ಸಂಜೆ ಮತ್ತು ಹಗಲು ಕಾಲೇಜುಗಳಲ್ಲಿ ೧೯೬೭ರಲ್ಲಿ ವೃತ್ತಿ ಆರಂಭಿಸಿದರು. ಆನಂತರ ಸರ್ಕಾರಿ ಕಾಲೇಜು ಶಿಕ್ಷಣ ಇಲಾಖೆಗೆ ಸೇರಿ ಬೆಂಗಳೂರು, ಮಂಡ್ಯ, ಹಾಸನ, ಕೊಳ್ಳೇಗಾಲ, ಮಾಗಡಿ ಮುಂತಾದ ವಿವಿಧ ಡಿಗ್ರಿ ಕಾಲೇಜುಗಳಲ್ಲಿ ೩೦ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಹೀಗೆ ಸೇವೆ ಸಲ್ಲಿಸುವಾಗ ಹಾಸನದ ಸರ್ಕಾರಿ ಪದವಿ ಕಾಲೇಜಿನಲ್ಲಿ ೧೯೭೭–೭೮, ೧೯೭೯–೮೧ರ ವರೆಗೆ ೪ ವರ್ಷಗಳ ಕಾಲ ಉಪಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಸಂದರ್ಭದಲ್ಲಿ ನನ್ನ ನೆಚ್ಚಿನ ಗುರುಗಳಾಗಿದ್ದರು. ಆಗ ನಾನು ಕನ್ನಡ ಐಚ್ಛಿಕ ವಿದ್ಯಾರ್ಥಿಯಾಗಿ ಪದವಿ ತರಗತಿಯಲ್ಲಿ ಅಧ್ಯಯನ ಮಾಡುತ್ತಿದ್ದೆ. ಹಾಗೆಯೇ ಇವರ ಸಾಹಿತ್ಯ ಜ್ಞಾನದ ಪ್ರಭಾವಕ್ಕೊಳಗಾಗಿದ್ದೆ. ಸರ್ಕಾರಿ ಕಾಲೇಜಾಗಿದ್ದುದರಿಂದ ಐಚ್ಛಿಕ ವಿಷಯ ಬಿಟ್ಟು ಬೇರೆ ವಿಷಯಗಳಿಗೆ ೧೫೦ಕ್ಕೂ ಹೆಚ್ಚು ವಿದ್ಯಾರ್ಥಿಗಳಿರುತ್ತಿದ್ದರು.

ಅನಾಜಿಯವರೆಂದೇ ಪ್ರಖ್ಯಾತವಾಗಿರುವ ಇವರು ಭಾಷಣ ಮಾಡುವಾಗಲು, ಪಾಠ ಮಾಡುವಾಗಲೂ ಕೂಡ ವಿಷಯ ಪ್ರತಿಪಾದನೆಯಲ್ಲಿ ತ್ರಾಸವಿಲ್ಲದೆ ಪ್ರಾಸ ಬಳಸುವ ವಿಧಾನ, ಹೋಲಿಸುವ ಕ್ರಮ, ಅರ್ಥೈಸುವ ರೀತಿ ಅಮೋಘವಾದುದು. ಯಾವುದೇ ವಿಷಯ ಕೊಡಲಿ ನಿರರ್ಗಳವಾಗಿ, ನಿರಾತಂಕವಾಗಿ, ಸ್ಪಷ್ಟವಾಗಿ ಅನೇಕ ದೃಷ್ಟಾಂತಗಳ ಮೂಲಕ, ಒಂದು ವಿಚಾರಕ್ಕೆ ಹಲವಾರು ವಿಚಾರಗಳನ್ನು ಹೇಳುವುದರ ಮೂಲಕ, ನಮ್ಮನ್ನೆಲ್ಲಾ ಮಂತ್ರಮುಗ್ಧ ರನ್ನಾಗಿಸುತ್ತಿದ್ದರು. ನಮಗೆ ಪ್ರತಿಯೊಂದು ಸಂದರ್ಭವೂ ಅಮೂಲ್ಯವಾಗಿದ್ದುದಾಗಿರುತ್ತಿತ್ತು ಏಕೆಂದರೆ ಯಾವಾಗ ಏನನ್ನು ಹೇಳುತ್ತಾರೆ, ಅದು ಎಲ್ಲಿ ನಮ್ಮ ಗ್ರಹಿಕೆಗೆ ಬಾರದೆ ಬಿಟ್ಟು ಹೋಗುತ್ತದೆಯೋ ಎಂಬ ದೃಷ್ಟಿಯಿಂದ ಎಚ್ಚರವಾಗಿರುತ್ತಿದ್ದೆವು. ಇವರ ಇನ್ನೊಂದು

ವಿಶೇಷವೆಂದರೆ ಒಂದು ಬಾರಿ ಹೇಳಿದ ವಿಚಾರವನ್ನು ಮತ್ತೊಮ್ಮೆ ಹೇಳುತ್ತಿರಲಿಲ್ಲ. ಹೀಗಾಗಿ ಅವರನ್ನು ವಿಚಾರಗಳ ವಿಶ್ವಕೋಶವೆಂದರೆ ತಪ್ಪಾಗಲಾರದು. ಸಾಮಾನ್ಯವಾಗಿ ಭಾಷಣಗಳಲ್ಲಿ ಸಭಿಕರನ್ನು ಮೆಚ್ಚಿಸಲು ರಂಜನೀಯವಾಗಿ ಹೇಳುವುದು ಸುಲಭ. ಆದರೆ ಪಠ್ಯಗಳನ್ನು ಬೋಧಿಸುವಾಗ ವಿದ್ಯಾರ್ಥಿಗಳು ಮೆಚ್ಚುವಂತೆ ವಿಚಾರ ಮಂಡಿಸುವುದು ಕಷ್ಟ. ಕಾವ್ಯಗಳನ್ನು ರಂಜನೀಯವಾಗಿ ಹೇಳುವಂತೆಯೇ ಶಾಸ್ತ್ರಗಳನ್ನೂ ರಂಜನೀಯಗೊಳಿಸುತ್ತಿದ್ದರು.

ಕನ್ನಡ ಸಾಹಿತ್ಯ ಚರಿತ್ರೆ ಪಾಠ ಮಾಡುವಾಗ ಶಾಸನಗಳ ವಿಚಾರ ಹೇಳಿದಾಗ ಹಾಸನದ ಪಬ್ಲಿಕ್ ಲೈಬ್ರರಿ ಬಳಿ ಇದ್ದ ಹಾಸನದ ಪ್ರಾಚೀನ ಶಾಸನ ಓದಿ ತೋರಿಸಿ ಅದರಲ್ಲಿ ಹಾಸನಕ್ಕೆ ಅರಸೀಕೆರೆ ಎಂಬ ಹೆಸರಿಟ್ಟಿದ್ದನ್ನು ಹೇಳಿ, ರೈಲ್ವೆಸ್ಟೇಷನ್ ಪ್ರದೇಶವನ್ನು ಕಳ್ಳಅರಸೀಕೆರೆ ಎಂದು ಹಿಂದಿನವರು ಕರೆಯುತ್ತಿದ್ದುದನ್ನು ತಿಳಿಸಿದರು. ಸ್ಥಳದ ಇತಿಹಾಸ ತಿಳಿಯಬೇಕಾದ್ದು ಪ್ರತಿ ವಿದ್ಯಾರ್ಥಿ ಕರ್ತವ್ಯ ಎಂದು ತಿಳಿಸಿದರು.

ಶ್ರವಣಬೆಳಗೊಳಕ್ಕೆ ನಮ್ಮನ್ನೆಲ್ಲ ಪ್ರವಾಸ ಕರೆದೊಯ್ದಾಗ ಅಲ್ಲಿನ ಪ್ರತಿ ಶಾಸನ ಓದಿ ಹೇಳಿ ನಮಗೆಲ್ಲಾ ಅಚ್ಚರಿ ಹುಟ್ಟಿಸಿದರು. ಅವರು ಶಾಸನಗಳನ್ನು ವಿವರಿಸುತ್ತಿದ್ದಾಗ ಅಲ್ಲಿಗೆ ಬಂದಿದ್ದ ಪ್ರವಾಸಿಗಳು ಇವರು ಪ್ರವಾಸಿಗಳ ಗೈಡು ಎಂದು ಭಾವಿಸಿ ನಮ್ಮ ಜತೆಗೇ ಬರಲಾರಂಭಿಸಿದರು. ಇಂಥ ಪ್ರಸಂಗಗಳು ಎಷ್ಟೋ ನೆನಪಾಗುತ್ತವೆ.

ಉಪನ್ಯಾಸಗಳಲ್ಲಿ ಸರ್ವಧರ್ಮ ಪ್ರತಿಪಾದನೆ ಇವರ ವೈಶಿಷ್ಟ್ಯವಾಗಿತ್ತು. ಹಾಸನದ ಶಂಕರಮಠದಲ್ಲಿ ಜನಮಿತ್ರ ಸಂಪಾದಕರಾದ ಕೃ.ನ. ಮೂರ್ತಿ ಅವರ ಕನ್ನಡ ಅನುವಾದ ಭಜಗೋವಿಂದ ಕೃತಿ ಬಿಡುಗಡೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಅದರ ಬಿಡುಗಡೆಗೆ ಶ್ರವಣ ಬೆಳಗೊಳದ ಚಾರುಕೀರ್ತಿ ಜಗದ್ಗುರುಗಳನ್ನು ಕರೆಸಲಾಗಿತ್ತು. ಗ್ರಂಥ ಪರಿಚಯ ಮಾಡಿಕೊಟ್ಟ ನಮ್ಮ ಗುರುಗಳು, ಜೈನಧರ್ಮ ವೈದಿಕಧರ್ಮದ ಸಾಹಿತ್ಯ ಸಮನ್ವಯ ತಿಳಿಸುತ್ತಾ, ಜೈನರಲ್ಲಿ ಪ್ರಸಿದ್ಧವೂ ಜನಪ್ರಿಯವು ಆದ ಮಾನತುಂಗಾಚಾರ್ಯರ ಭಕ್ತಾಮರಸ್ತೋತ್ರವನ್ನು ಆದಿಶಂಕರರ ಭಜಗೋವಿಂದಂ ಅನ್ನು ಹೋಲಿಸಿ ಅದ್ಭುತಭಾಷಣ ಮಾಡಿದ್ದನ್ನು ನಾನೆಂದೂ ಮರೆಯಲಾರೆ. ನಮ್ಮ ಗುರುಗಳು ನಮ್ಮ ಕಾಲೇಜಿನಲ್ಲಷ್ಟೇ ಅಲ್ಲ ಊರಿನಲ್ಲೂ ಪ್ರಸಿದ್ಧ ಉಪನ್ಯಾಸಕರಾಗಿದ್ದರು.

ಇವರು ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಹಾಜರಾತಿಯನ್ನು ಕಡ್ಡಾಯ ಮಾಡುತ್ತಿರಲಿಲ್ಲ. ನೇರವಾಗಿ ವಿದ್ಯಾರ್ಥಿಗಳಿಗೆ ಪಾಠ ಕೇಳಬೇಕಾದವರು ಇರಬಹುದು ಇಲ್ಲವೇ ಎದ್ದು ಹೋಗಬಹುದು. ಆದರೆ ಮಧ್ಯದಲ್ಲಿ ತೊಂದರೆ ಕೊಡಬಾರದು. ತರಗತಿಯಲ್ಲಿ ಇದ್ದು ನಿದ್ದೆ ಮಾಡುವವರು ನಿದ್ದೆ ಮಾಡಬಹುದು. ಆದರೆ ಗೊರಕೆ ಹೊಡೆಯಬಾರದು ಎಂದು ಹೇಳುತ್ತಿದ್ದರು. ಆದರೂ ತುಂಬಿದ ಹಾಜರಾತಿ ಇರುತ್ತಿತ್ತು. ಯಾವ ವಿದ್ಯಾರ್ಥಿಯೂ ಎದ್ದು ಹೋಗುತ್ತಿರಲಿಲ್ಲ. ಅವರ ಹಾಸ್ಯ ಪ್ರಸಂಗಗಳಿಗಾಗಿ ಕಾಯುತ್ತಾ ಕುಳಿತುಕೊಳ್ಳುತ್ತಿದ್ದೆವು. ಇವರು ಮೊದಲ ಐದು ತಿಂಗಳು ಪಠ್ಯದ ಹಿನ್ನೆಲೆಯಲ್ಲಿ ಲೋಕಾನುಭವವನ್ನು, ಜೀವನಕ್ಕೆ ಬೇಕಾಗುವ ಮಾರ್ಗದರ್ಶನ

ನೀಡುತ್ತಿದ್ದರು. ಹಾಗೆಯೇ ಉಳಿದ ಐದು ತಿಂಗಳು ಪರೀಕ್ಷಾ ದೃಷ್ಟಿಯಿಂದ ಬೇಕಾಗುವ ವಿಚಾರಗಳನ್ನು ಪರೀಕ್ಷೆ ಎದುರಿಸಬೇಕಾದ, ಬರೆಯುವ ವಿಧಾನಗಳನ್ನು ಹೇಳಿಕೊಡುತ್ತಿದ್ದರು. ಪಠ್ಯಪುಸ್ತಕಗಳನ್ನು ಮತ್ತು ಅವುಗಳ ಗೈಡುಗಳನ್ನು ಕೊಂಡುಕೊಂಡು ಅದರಲ್ಲಿರುವ ಲೋಪದೋಷಗಳನ್ನು ಹೇಳುವುದರೊಂದಿಗೆ ನಾವು ಅನುಸರಿಸಬೇಕಾದ ಕ್ರಮಗಳನ್ನು ಮನವರಿಕೆ ಮಾಡಿಕೊಡುತ್ತಿದ್ದರು. ಐಚ್ಛಿಕ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಸಾಹಿತ್ಯ ಕೃತಿ ಇದ್ದರೆ ಅದಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ಕೃತಿಗಳ ಪರಿಚಯಿಸುತ್ತಿದ್ದರು. ಆ ಎಲ್ಲಾ ಕೃತಿಗಳು ಅವರ ಬಳಿಯಲ್ಲಿರುತ್ತಿದ್ದವು. ನಾವು ಕನ್ನಡ ಐಚ್ಛಿಕ ವಿಭಾಗದಲ್ಲಿ ಹತ್ತು ವಿದ್ಯಾರ್ಥಿಗಳು ಮಾತ್ರ ಇದ್ದುದರಿಂದ, ಅವರ ಪುಸ್ತಕ ಸಂಗ್ರಹವನ್ನು ಚೆನ್ನಾಗಿಯೇ ಬಳಸಿಕೊಂಡಿದ್ದೇವೆ. ಕೆ. ವೆಂಕಟರಾಮಪ್ಪ ಮತ್ತು ಜಿ.ಪಿ. ರಾಜರತ್ನಂರವರ ಪ್ರಭಾವಕ್ಕೆ ಒಳಗಾಗಿದ್ದ ಇವರು ನಾಟಕಗಳನ್ನು ನಾಟಕೀಯವಾಗಿಯೇ ಓದುತ್ತಿದ್ದರು. ಒಮ್ಮೆ ಅಭಿನವ ಕಾಳಿದಾಸ ಬಿರುದಾಂಕಿತ ಬಸವಪ್ಪಶಾಸ್ತ್ರಿಯವರ ಅನುವಾದದ ಕಾಳಿದಾಸನ ನಾಟಕ ಕರ್ನಾಟಕ ಅಭಿಜ್ಞಾನ ಶಾಕುಂತಲ ಗೊತ್ತುಪಡಿಸಿದ್ದರು. ಈ ಸಂದರ್ಭದಲ್ಲಿ ಬಸವಪ್ಪಶಾಸ್ತ್ರಿ ಮತ್ತು ಕಾಳಿದಾಸರ ಪರಿಚಯ ಮತ್ತು ಅವರ ಎಲ್ಲಾ ನಾಟಕಗಳನ್ನು ತಂದು ತರಗತಿಯಲ್ಲಿ ಓದಿ ಪರಿಚಯಿಸುತ್ತಿದ್ದರು. ಯಾವುದೇ ಕವಿಗಳನ್ನು ಪರಿಚಯಿಸುವಾಗ ಅವರ ಎಲ್ಲಾ ಕೃತಿಗಳನ್ನು ಕೊಂಡು ತಂದು ನಮಗೆ ನೀಡುತ್ತಿದ್ದರು. ಆ ಕೃತಿಗಳಲ್ಲಿ ಅವರು ಮಾಡಿಕೊಳ್ಳುತ್ತಿದ್ದ ಟಿಪ್ಪಣಿಗಳು ನಮಗೆ ಹೆಚ್ಚು ಪ್ರಭಾವ ಬೀರುತ್ತಿದ್ದವು. ಹೀಗಾಗಿ ಅವರಲ್ಲಿದ್ದ ಎಲ್ಲಾ ಪುಸ್ತಕಗಳನ್ನು ಪಡೆಯುತ್ತಿದ್ದೆವು. ಜಿ.ಪಿ. ರಾಜರತ್ನಂರವರ ಸ್ಫೂರ್ತಿಯಿಂದ ಸುಮಾರು ೧೫,೦೦೦ಕ್ಕೂ ಹೆಚ್ಚು ಕೃತಿಗಳನ್ನು ಸಂಗ್ರಹಿಸಿದ್ದಾರೆ. ಮನೆಯಲ್ಲಿಯೇ ಒಂದು ಗ್ರಂಥಾಲಯವಿದೆ. ಕಾಲೇಜಿನ ಗ್ರಂಥಾಲಯದಲ್ಲಿ ಎಲ್ಲೆಲ್ಲಿಯೋ ಇದ್ದ ಐಚ್ಛಿಕ ವಿಷಯದ ಕೃತಿಗಳನ್ನು ಒಂದೆಡೆ ದೊರಕಲು ಗ್ರಂಥಪಾಲಕರ ನೆರವಿಂದ ಪಠ್ಯ, ಪಠ್ಯೇತರ ಕೃತಿಗಳನ್ನು ವರ್ಗೀಕರಿಸಿ ಇಟ್ಟು ನಮಗೆಲ್ಲಾ ಅಧ್ಯಯನಕ್ಕೆ ಸಹಾಯಮಾಡಿದ್ದಾರೆ. ಇವರು ಪುಸ್ತಕಪ್ರಿಯರು ಅವುಗಳನ್ನೇ ಮಕ್ಕಳಂತೆ ನೋಡಿಕೊಂಡವರು. ಅವರೇ ಹೇಳುತ್ತಿದ್ದಂತೆ, ಅಧ್ಯಾಪಕರಲ್ಲಿ ನಾಲ್ಕು ಬಗೆಯ ಅಧ್ಯಾಪಕರಿರುತ್ತಾರೆ. ತರಗತಿ ಅಧ್ಯಾಪಕರು, ಕಾಲೇಜು ಅಧ್ಯಾಪಕರು, ಊರಿನ ಅಧ್ಯಾಪಕರು, ದೇಶದ ಅಧ್ಯಾಪಕರು. ಅನಾಜಿಯವರು ತರಗತಿ ಅಧ್ಯಾಪಕರಾಗಿ ನಮ್ಮನ್ನೆಲ್ಲಾ ಮಂತ್ರಮುಗ್ಧರಾಗಿರಿಸುತ್ತಿದ್ದರು. ಕಾಲೇಜು ಅಧ್ಯಾಪಕರಾಗಿ, ಕಾಲೇಜು ವಿದ್ಯಾರ್ಥಿಗಳಿಗೆ ಬೇಕಾಗುವ ಎಲ್ಲಾ ರೀತಿಯ ಸಾಮಗ್ರಿಯನ್ನು ಒದಗಿಸುತ್ತಿದ್ದರು. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಯಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಾ, ಕ್ರೀಡಾ ಚಟುವಟಿಕೆಯಲ್ಲಿ ಕನ್ನಡದಲ್ಲಿ ಕಾಮೆಂಟ್ರಿ ಕೊಡುವುದರ ಮೂಲಕ ರಂಜಿಸುತ್ತಿದ್ದರು. ಇನ್ನೂ ಊರಿನ ಅಧ್ಯಾಪಕರಾಗಿ ಹಳ್ಳಿಗಳಿಂದ ಹಳ್ಳಿಗಳಿಗೆ ಹೋಗಿ ಉಪನ್ಯಾಸ ನೀಡುತ್ತಿದ್ದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಸಕ್ರಿಯವಾಗಿ ಭಾಗವಹಿಸಿ, ವಿವಿಧ ವಿಷಯಗಳಲ್ಲಿ ಮಾಹಿತಿ ನೀಡುತ್ತಿದ್ದರು. ಸಾರ್ವಜನಿಕರ ದೃಷ್ಟಿಯಲ್ಲಿ ಶ್ರೇಷ್ಠವಾಗ್ಮಿಯಾಗಿದ್ದರು. ಜಿ.ಪಿ. ರಾಜತ್ನಂ, ಎಂ.ವಿ. ಸೀತಾರಾಮಯ್ಯನವರು ಸೆಂಟ್ರಲ್‌ಕಾಲೇಜಿನಲ್ಲಿ ಪಠ್ಯಪುಸ್ತಕಗಳ ಅರಿವನ್ನು ಮೂಡಿಸಲು ಅನುಸರಿಸುತ್ತಿದ್ದ ಕ್ರಮಕ್ಕೆ ಪ್ರಭಾವಿತರಾಗಿ, ಹಾಸನದಲ್ಲಿ ಪ್ರಸಿದ್ಧವಾಗಿದ್ದ ಜನಮಿತ್ರ ಪತ್ರಿಕೆಯಲ್ಲಿ ಪರೀಕ್ಷಾ ದೃಷ್ಟಿಯಿಂದ

ಪಠ್ಯಪುಸ್ತಕಗಳ ಅವಲೋಕನ ಮಾಲೆಯನ್ನು ಪ್ರಾರಂಭಿಸಿ, ತಾವೂ ಬರೆದು, ಬೇರೆಯವರಿಂದಲೂ ಬರೆಸಿ, ಪ್ರಸಿದ್ಧರಾಗಿದ್ದರು.

ಅನಾಜಿಯವರು ಸಮಯ ಸಿಕ್ಕಾಗಲೆಲ್ಲಾ ಯಾವುದೇ ವಿಚಾರದ ಬಗ್ಗೆಯಾದರೂ ಮಾಹಿತಿಯನ್ನು ನೀಡುತ್ತಿದ್ದರು. ಒಮ್ಮೆ ಹೊಸದಾಗಿ ಕಾಲೇಜಿಗೆ ಅಧ್ಯಾಪಕರಾಗಿ ಬಂದಿದ್ದ ಕೆ.ಎಸ್. ನರಸಿಂಗರಾವ್ ಎಂಬುವರನ್ನು ನಮ್ಮ ತರಗತಿಗೆ ಪರಿಚಯಿಸಲು ಬಂದಿದ್ದರು. ಅವರನ್ನು ಪರಿಚಯಿಸುವುದರ ಜೊತೆಗೆ ಪಾಠಮಾಡುವ ಕಲೆಯನ್ನು, ವಿಷಯ ಪ್ರತಿಪಾದನೆ ಮಾಡುವ ರೀತಿಯನ್ನು ಅಧ್ಯಾಪಕನೊಬ್ಬನಿಗೆ ಇರಬೇಕಾದ ವಿಚಾರಗಳನ್ನು ತಿಳಿಸಿ, ಅವರಿಗೆ ಧೈರ್ಯ ತುಂಬಿದರು. ಯಾರಾದರೂ ಕವಿಗಳು ಪ್ರಶಸ್ತಿ ಪಡೆದರೆ, ನಿಧನರಾದರೆ ಅಂದು ಅವರ ತರಗತಿಯಿದ್ದಾಗ ಇಡೀ ಅವಧಿಯಲ್ಲಿ ಆ ಕವಿಯ ಎಲ್ಲಾ ಕೃತಿಗಳು ಮತ್ತು ಅವರ ಪರಿಚಯವನ್ನು ಮಾಡಿಕೊಡುತ್ತಿದ್ದ ಅವರ ಸ್ವಭಾವ ನನಗೆ ಅಚ್ಚುಮೆಚ್ಚಿನದಾಗಿತ್ತು. ನನ್ನಲ್ಲಿ ಸಾಹಿತ್ಯದ ಅಭಿರುಚಿಯನ್ನು ಬೆಳೆಸಿ, ನಾನೊಬ್ಬ ಕನ್ನಡ ಅಧ್ಯಾಪಕನಾಗಲು ಕಾರಣೀಭೂತರಾಗಿದ್ದಾರೆ. ಅವರೇ ನನಗೆ ಸ್ಫೂರ್ತಿಯಾಗಿ ಅವರಂತೆಯೇ ಅನುಸರಿಸಿ ನನ್ನ ವಿದ್ಯಾರ್ಥಿಗಳ ಮನಸ್ಸನ್ನು ಗೆದ್ದಿದ್ದೇನೆ. ಅಧ್ಯಾಪಕನಾದವನಿಗೆ ಮೂಲಭೂತವಾಗಿ ಮಾಹಿತಿ ಒದಗಿಸುವ ಮತ್ತು ಪ್ರಭಾವ ಬೀರುವಶಕ್ತಿ ಇರಬೇಕು ಇದೆಲ್ಲವನ್ನು ನನ್ನ ನೆಚ್ಚಿನ ಗುರುಗಳಲ್ಲಿ ಕಂಡಿದ್ದೇನೆ ಅದನ್ನೇ ಅಳವಡಿಸಿಕೊಂಡಿದ್ದೇನೆ.

❖

# ಬಾಳ ರೂಪಿಸಿದ ಶಾಲಾಗುರುಗಳು

## (ಲಕ್ಷ್ಮೀಪತಯ್ಯ-ಬಾಲಸರಸ್ವತಿ ಮತ್ತಿತರರು)

● *ಕ.ವೆಂ. ರಾಘವಾಚಾರ್*

ತಾಯಿಲ್ಲದ ತಬ್ಬಲಿ ಎಂದು ಎಲ್ಲರ ಮುದ್ದಾಗಿ ಸಲಿಗೆಯಿಂದ ಬೆಳೆದು ಕಡಬ, ಸಂಪಿಗೆ, ಬೇಲೂರು, ಮೇಲುಕೋಟೆ, ಬೆಂಗಳೂರು ಹೀಗೆ ಊರೂರಲ್ಲಿ ನಂಟರಿಷ್ಟರ ಮನೆಯಲ್ಲಿ ತಿಂಗಳುಗಟ್ಟಲೆ ಅಲೆಯುತ್ತಿದ್ದ ನಾನು ನಿಜವಾಗಿ ಓದುಬರಹ ತೊಡಗಿದ್ದು ನನ್ನ ಎಂಟನೆಯ ವಯಸ್ಸಿನಲ್ಲಿ, ತುಮಕೂರಲ್ಲಿ ಪ್ರಾಥಮಿಕ ಮೂರು ವರ್ಷ, ಮಾಧ್ಯಮಿಕ (ಎ.ವಿ. ಸ್ಕೂಲು) ಐದು ವರ್ಷ, ಕೊಲಿಜಿಯೇಟ್ ಹೈಸ್ಕೂಲಿನಲ್ಲಿ ನಾಲ್ಕನೆಯ ಫಾರಂ ಒಂದು ವರ್ಷ, ಹೀಗೆ ಒಟ್ಟು ಒಂಬತ್ತು ವರ್ಷ ಸಾಂಗವಾಗಿ ವಿದ್ಯಾರ್ಜನೆ ನಡೆಯಿತು.

### ಚೇಳಿನ ಪಾಠ

ಬಿ. ಕ್ಲಾಸಿನಲ್ಲಿ (ಪ್ರಾಥಮಿಕ ಎರಡನೆಯ ತರಗತಿಯಲ್ಲಿ) ಓದುತ್ತಿದ್ದಾಗ ನಡೆದ ಚೇಳಿನ ಪಾಠ ಚೆನ್ನಾಗಿ ನೆನಪಿದೆ. ಕನ್ನಡ ಒಂದನೆಯ (ಪ್ರಾಥಮಿಕ ಮೂರನೆಯ) ತರಗತಿಯಲ್ಲಿ ಪಾಠ ನಡೆಯುತ್ತಿದ್ದಾಗ, ಇದ್ದಕ್ಕಿದ್ದಂತೆ ಸೂರಿನಿಂದ ಒಂದು ದೊಡ್ಡ ಚೇಳು ನೆಲದ ಮೇಲೆ ಬಿದ್ದು ಮಕ್ಕಳೆಲ್ಲಾ ಗಾಬರಿಯಿಂದ ಹೊರಕ್ಕೆ ಓಡಿ ಬಂದರು. ಅಲ್ಲಿ ಪಾಠ ಮಾಡುತ್ತಿದ್ದ ಮೇಷ್ಟರು ಅದನ್ನು ಹೊಡೆದುಹಾಕುವುದಕ್ಕೆ ಕೋಲು ಹುಡುಕಾಡುತ್ತಿದ್ದದ್ದನ್ನು ಎ., ಬಿ. ಕ್ಲಾಸುಗಳಲ್ಲಿ ಪಾಠ ಮಾಡುತ್ತಿದ್ದ ಶ್ರೀ ಲಕ್ಷ್ಮೀಪತಯ್ಯನವರೂ, ಶ್ರೀ ಕೆಂಪಣ್ಣನವರೂ ಕೊಠಡಿಯಿಂದ ನೋಡಿ, ಹೊರಗೆಹೋಗಿ ಚೇಳನ್ನು ಹೊಡೆಯಗೊಡದೆ, ಉದ್ದನೆಯ ದಾರ ತೆಗೆದುಕೊಂಡು ಎಚ್ಚರಿಕೆಯಿಂದ ಅದರ ಕೊಂಡಿಗೆ ಕುಣಿಕೆ ಹಾಕಿ ಬಿಗಿದರು. ತರುವಾಯ ಮೂರು ತರಗತಿಗಳ ಮಕ್ಕಳನ್ನೂ ಹೊರಕ್ಕೆ ಕರೆದು ಗುಂಡಾಗಿ ನಿಲ್ಲಿಸಿ, ನಡುವೆ ದಾರ ಕಟ್ಟಿದ ಚೇಳನ್ನು ಹರಿದಾಡಬಿಟ್ಟು ಅದರ ಅಂಗಾಂಗಗಳನ್ನೆಲ್ಲಾ ಬಿಡಿ ಬಿಡಿಯಾಗಿ ವರ್ಣಿಸಿ ಒಂದು ಪೀರಿಯಡ್ ಪೂರ್ತಿ ಪ್ರತ್ಯಕ್ಷ ನಿದರ್ಶನ ಪಾಠ ನಡೆಸಿದರು. ನಾವೆಲ್ಲ ನಮ್ಮ ನಮ್ಮ ತರಗತಿಗಳಿಗೆ ಹೋದಮೇಲೆ ಆ ಚೇಳಿನ ಗತಿ ಏನಾಯಿತೊ ದೇವರೆ ಬಲ್ಲ.

### ಮರು ಪರೀಕ್ಷೆ

ಕನ್ನಡ ಒಂದನೆಯ ಕ್ಲಾಸಿನಲ್ಲಿ ಅಂದರೆ ಪ್ರಾಥಮಿಕ ಮೂರನೆಯ ತರಗತಿಯಲ್ಲಿ ಓದುತ್ತಿದ್ದಾಗ ನಮಗೆ ವರ್ಷಾಂತ ಪರೀಕ್ಷೆ. ಗಣಿತ ಪರೀಕ್ಷೆ ನಡಸಿದವರು ಎ.ವಿ. ಸ್ಕೂಲಿನ ಒಂದನೆಯ ಫಾರಂ ಮೇಷ್ಟರಾದ ಬಿ. ವೆಂಕಟನಾರಣಪ್ಪನವರು. ಇವರು ಕನ್ನಡ ಪ್ರಪಂಚದಲ್ಲಿ ಸುಪ್ರಸಿದ್ಧರಾದ

ಪೂಜ್ಯ ಬೆಳ್ಳಾವೆ ವೆಂಕಟನಾರಣಪ್ಪನವರ ಬಂಧುಗಳು. ಬಡ ಮೇಷ್ಟರಾದರೂ ನಿಯಮ ನಿಯತ್ತುಗಳಲ್ಲಿ, ಶ್ರದ್ಧೆ ನಿಷ್ಠೆಗಳಲ್ಲಿ ಪ್ರೊಫೆಸರಷ್ಟೆ ಹೆಸರಾಗಿದ್ದವರು. ಪ್ರಶ್ನೆಪತ್ರಿಕೆಯ ಪ್ರಶ್ನೆಗಳನ್ನು ಒಂದೊಂದಾಗಿ ಬೋರ್ಡಿನ ಮೇಲೆ ಬರೆದು, ಅದನ್ನು ಹುಡುಗರೇ ಬರೆದುಕೊಂಡು ಸ್ಲೇಟಿನ ಮೇಲೆ ಉತ್ತರಿಸಬೇಕು. ಹಾಗೆ ಉತ್ತರಿಸಿದ ಒಂದೊಂದು ಪ್ರಶ್ನೆಯನ್ನೂ ಪರೀಕ್ಷಕರು ನೋಡಿ ತಮ್ಮ ಪಟ್ಟಿಯಲ್ಲಿ ಅಂಕಗಳನ್ನು ಗುರುತು ಹಾಕಿಕೊಂಡು, ಮುಂದಿನ ಪ್ರಶ್ನೆಯನ್ನು ಬರೆಯುತ್ತಿದ್ದರು. ಹೀಗೆ ಪ್ರಶ್ನೆಗಳೆಲ್ಲಾ ಮುಗಿದ ಮೇಲೆ ಒಟ್ಟು ಲೆಕ್ಕ ತೆಗೆದಾಗ ಇಬ್ಬರಿಗೆ ನೂರಕ್ಕೆ ನೂರು ಬಂದಿತ್ತು: ಜಿಲ್ಲಾ ವಿದ್ಯಾಧಿಕಾರಿಗಳ ಮಗನಿಗೆ, ನನಗೆ. ಪರೀಕ್ಷಕರ ಮನಸ್ಸಿಗೆ ವಿಚಿತ್ರ ಸಂಶಯ ಮೂಡಿತು. ಕಾಪಿ ಮಾಡಿದ ಸಂಶಯವಲ್ಲ; ನಾವಿದ್ದದ್ದು ಬೇರೆ ಬೇರೆ ಮೂಲೆಗಳಲ್ಲಿ. ಅವರ ಸಂಶಯ, ಹೇಗೋ ನಮಗೆ ಪ್ರಶ್ನೆಗಳು ಮೊದಲೆ ತಿಳಿದುಬಿಟ್ಟಿದ್ದುವು ಎಂದು. ನಿಜವಾಗಿಯೂ ವಿಚಿತ್ರ ಸಂಶಯವೇ. ಅವರ ಜೇಬಿನಲ್ಲಿ ಭದ್ರವಾಗಿದ್ದ ಕೈ ಬರಹದ ಪ್ರಶ್ನಪತ್ರಿಕೆ ನಮಗೆ ಹೇಗೆ ಗೊತ್ತಾಗಬೇಕು! ಅಂತೂ ನಮ್ಮಿಬ್ಬರಿಗೆ ಮಾತ್ರ ಮಾರನೆಯ ದಿನ ಮರುಪರೀಕ್ಷೆ ನಡಸಿಯೇ ಬಿಟ್ಟರು. ಆಗಿನದು ಹಕ್ಕುಬಾಧ್ಯತೆಗಳ, ರಿಟ್‌ಕೇಸುಗಳ, ಮುಷ್ಕರಗಳ ಕಾಲವಲ್ಲ. ಪ್ರಶ್ನೆಗಳು ಕೊಂಚ ಕಠಿಣವಾಗಿಯೇ ಇದ್ದುವು. ಆದರೂ ಮತ್ತೆ ನಮ್ಮಿಬ್ಬರಿಗೂ ನೂರಕ್ಕೆ ನೂರು ಬಂದು ಪರೀಕ್ಷಕರಿಂದ ಶಾಬಾಸುಗಿರಿ ಗಿಟ್ಟಿಸಿಕೊಂಡೆವು.

**ಬಾಲಸರಸ್ವತಿ**

ನಾನು ನನ್ನ ಚಿಕ್ಕಂದಿನಿಂದ ಕಂಡಂತೆ ತುಮಕೂರಿಗೆ ಪ್ಲೇಗು ಪಿಡುಗು ಎರಗದಿದ್ದ ವರ್ಷವೆ ಇಲ್ಲವೆನ್ನಬಹುದು. ಪ್ಲೇಗು ಎಂದರೆ ನಮ್ಮ ತಂದೆಯವರಿಗಂತೂ ವಿಪರೀತ ಭಯ. ಹೊರಪೇಟೆಯಲ್ಲಿ ಇಲಿ ಬಿತ್ತಂತೆ ಎಂದು ಗಾಳಿವರ್ತಮಾನ ಬಂದರೆ ಸಾಕು, ಸಂಸಾರವನ್ನೆಲ್ಲಾ ಕಡಬಕ್ಕೊ ಸಂಪಿಗೆಗೋ ಕಳಿಸಿಬಿಟ್ಟು ಮನೆಗೆ ಬೀಗ ಹಾಕಿಬಿಡುತ್ತಿದ್ದರು. ನಮ್ಮ ತಂದೆಯವರ ಪುಕ್ಕಲನ್ನು ಅರಿತಿದ್ದ ಅವರ ಸಹೋದ್ಯೋಗಿಗಳು ಬೇಕೆಂದೆ ಕೋರ್ಟಿನಲ್ಲಿ "ವೆಂಕಟಾಚಾರ್ಯರೇ ನೆನ್ನೆ ರಾತ್ರಿ ಸಂತೆಪೇಟೆಯಲ್ಲಿ ಇಲಿ ಬಿತ್ತಂತೆ" ಎಂದು ಸುಳ್ಳು ಹೆದರಿಸುತ್ತಿದ್ದದ್ದೂ ಉಂಟು. ೧೯೧೦ರ ಉತ್ತರಾರ್ಧದಲ್ಲಿ ಹೀಗೊಮ್ಮೆ ಪ್ಲೇಗು ತಲೆದೋರಿದಾಗ ಸಂಸಾರವನ್ನು ಬೆಂಗಳೂರಿಗೆ ಸಾಗಿಸಿದರು. ನಾನು ಆಗ ಇಂಗ್ಲಿಷ್ ಒಂದನೆಯ ಕ್ಲಾಸಿನಲ್ಲಿ ಓದುತ್ತಿದ್ದೆ. ಮೊದಲನೆಯ ಟರ್ಮು ಕಳೆದು ಎರಡನೆಯ ಟರ್ಮು ತೊಡಗಿತ್ತು. ಕೋಟೆ ಎ.ವಿ. ಸ್ಕೂಲಿಗೆ (ಈಗ ಕೋಟೆ ಹೈಸ್ಕೂಲು) ಸೇರಿಕೊಂಡೆ. ಸೇರಿಕೊಂಡ ಒಂದೆರಡು ದಿನಗಳಲ್ಲೆ ವೇಳಾಪಟ್ಟಿಯಂತೆ ಡ್ರಾಯಿಂಗ್ ಪೀರಿಯಡ್ ಬಂತು. ಆಗ ಡ್ರಾಯಿಂಗಿಗಾಗಿಯೇ ಪ್ರತ್ಯೇಕ ಕೊಠಡಿ ಇದ್ದು ಒಂದು ಗೋಡೆಯ ಉದ್ದಕ್ಕೂ ಬೋರ್ಡು ಹದ್ದಿಸಿದ್ದರು. ಹುಲುಸು ಗಡ್ಡ ಬೆಳಸಿ ಕೆಂಪು ಕೋರೆ ರುಮಾಲು ಸುತ್ತಿದ್ದ ಗಂಭೀರ ವ್ಯಕ್ತಿ ಕುರ್ಚಿಯ ಮೇಲೆ ಮಂಡಿಸಿದ್ದನ್ನು ನೋಡಿ ನಾನು ಬೆರಗಾದೆ. ಪತ್ತೆದಾರಿ ಕಥೆಗಳಿಗೆ ಹೆಸರಾಗಿದ್ದ, ಪ್ರಸಿದ್ಧ ಸಂಸ್ಕೃತ ವಿದ್ವಾಂಸರಾಗಿದ್ದ ವಿದ್ವಾನ್ ಬಾಲಸರಸ್ವತಿಗಳೇ ಆ ವ್ಯಕ್ತಿ. ಬೋರ್ಡಿನ ಮೇಲೆ ಒಂದು ಹೂಜಿಯ ಚಿತ್ರ ಬರೆದು, ಅದನ್ನು ನಮ್ಮ ಡ್ರಾಯಿಂಗ್ ಪುಸ್ತಕದಲ್ಲಿ ಬರೆಯುವಂತೆ ಹೇಳಿದರು. ನಾನು ಬರೆದು ಪೂರೈಸಿ ಸುಮ್ಮನೆ ಕುಳಿತಿದ್ದನ್ನು ನೋಡಿ ಪುಸ್ತಕ ತಂದು ತೋರಿಸುವಂತೆ ಹೇಳಿದರು. ಪುಸ್ತಕ ನೋಡಿ "ತುಂಬ ಚೆನ್ನಾಗಿದೆ" ಎಂದು ಹೇಳಿ, ಪಕ್ಕದ ಅಲಮಾರಿನ ಬಾಗಿಲು ತೆಗೆಯ ಹೋದರು. ನಾನು ಏನು ಮಾಡುತ್ತಾರೋ

ಎಂದು ಕುತೂಹಲದಿಂದ ನೋಡುತ್ತಿದ್ದಂತೆಯೆ, ಅದರೊಳಗಿಂದ ಒಂದು ಭಾರಿ ಪೆಟ್ಟಿಲುಗೊಳವೆಯನ್ನು ತೆಗೆದುಕೊಂಡು "ಕೈಹಿಡಿ" ಎಂದು ಗದರಿಸಿ ಗೆಣ್ಣಮೇಲೆ ಬಲವಾಗಿ ಹೊಡೆದರು. ನಾನು ಕಕ್ಕಾಬಿಕ್ಕಿಯಾಗಿ ಅಳತೊಡಗಿದೆ. ಜತೆ ಹುಡುಗರು "ಸಾರ್! ಅವನು ಹೊಸ ಹುಡುಗ, ತುಮಕೂರಿಂದ ಬಂದಿದಾನೆ" ಎಂದು ವಿವರಣೆ ಕೊಟ್ಟರು. ನಾನು ಬರೆದ ಚಿತ್ರವನ್ನು ನನ್ನ ಮುಖಕ್ಕೆ ಹಿಡಿದು "ಏನಿದು ನಿನ್ನ ತಲೆ?" ಎಂದು ಹೂಜಿಯ ಹೊಟ್ಟೆಯಲ್ಲಿ ಚಿತ್ರಿಸಿದ್ದ ತಿರುಪುಮೊಳೆಯ ತಲೆಯನ್ನು ತೋರಿಸಿದರು. ನಾನು ಹುಡುಗಾಟಕ್ಕಾಗಿ ಅದನ್ನು ಕೊರೆದಿದ್ದೆನೆಂದು ಅವರ ಭಾವನೆ. ನಾನು ಅಳುತ್ತಲೆ ಅವರ ಕೈಯನ್ನು ಹಿಡಿದುಕೊಂಡು ಬೋರ್ಡಿನ ಹತ್ತಿರ ಹೋಗಿ ಅವರ ಬರೆದಿದ್ದ ಚಿತ್ರದಲ್ಲೂ ಆ ಗುರುತು ಇರುವುದನ್ನು ತೋರಿಸಿದೆ. ಸನ್ನಿವೇಶ ವೈಚಿತ್ರ್ಯ! ಬೋರ್ಡನ್ನು ಗೋಡೆಗೆ ಹದ್ದಿಸಿ ಅಲ್ಲಲ್ಲಿ ದೊಡ್ಡ ತಿರುವುಮೊಳೆ ಗಳನ್ನು ಮುರುಕಿದ್ದರು. ಅಂಥ ಒಂದು ಮೊಳೆ ಹೂಜಿಯ ಚಿತ್ರದ ನಟ್ಟ ನಡುವೆ ಸಿಕ್ಕಿಕೊಂಡಿತ್ತು. ಸೀಮೆಸುಣ್ಣದ ಪುಡಿ ಹತ್ತಿಕೊಂಡು ಅದೂ ಒಂದು ಚಿತ್ರವಾಗಿ ಕಂಗೊಳಿಸುತ್ತಿತ್ತು. ನನಗೆ ಅದೊಂದೂ ತಿಳಿಯದೆ ಅದೂ ಚಿತ್ರದ ಭಾಗವೆಂದು ತಿಳಿದು ಪ್ರಾಮಾಣಿಕವಾಗಿ ಗುರುತಿಸಿದ್ದೆ. ವಿಷಯವೆಲ್ಲಾ ತಿಳಿದಮೇಲೆ, ತಾವು ತಿಳಿಯದೆ ಹೊಡೆದದ್ದಕ್ಕೆ ಪಶ್ಚಾತ್ತಾಪಪಟ್ಟು "ಹೋಗಲಿ ಬಿಡು, ಡ್ರಾಯಿಂಗ್ ಚೆನ್ನಾಗಿದೆ" ಎಂದು ಸಮಾಧಾನ ಪಡಿಸಿದರು.

## ಬೃಹಸ್ಪತಿ ಮುರುಕು

ಇಂಗ್ಲಿಷ್ ಎರಡನೆಯ ಕ್ಲಾಸಿನ (ಈಗಿನ ಮಾಧ್ಯಮಿಕ ಮೊದಲನೆಯ ತರಗತಿಯ) ವರ್ಷಾಂತ ಪರೀಕ್ಷೆ ಮುಗಿದು ಬೇಸಗೆ ರಜೆ ಬಂದಿತ್ತು. ಮೇ ೨೨ರಂದು ಮತ್ತೆ ಶಾಲೆ ಪ್ರಾರಂಭ. ಮೇ ಕೊನೆಯ ವಾರದಲ್ಲಿ ನನಗೆ ಕಡಬದಲ್ಲಿ ಉಪನಯನ. ಅದನ್ನು ಮುಗಿಸಿಕೊಂಡು ಜೂನ್ ಮೊದಲವಾರ ಸ್ಕೂಲಿಗೆ ಹೋದಾಗ ಮೊದಲನೆಯ ಫಾರಮ್ಮಿನ (ಮಾಧ್ಯಮಿಕ ಎರಡನೆಯ ತರಗತಿಯ ಎರಡು ಸೆಕ್ಷನ್ (ವಿಭಾಗ) ರಿಜಿಸ್ಟರಿನಲ್ಲೂ ನನ್ನ ಹೆಸರೇ ಇಲ್ಲ. ನಾನು ಗುಮಾಸ್ತೆ ಶ್ರೀನಿವಾಸ ಅಯ್ಯಂಗಾರರನ್ನು ಹೋಗಿ ಕಾಣಲು, ಅವರು ನನ್ನ ರಟ್ಟೆ ಹಿಡಿದು ಕರೆದುಕೊಂಡು ಹೋಗಿ "ಯಾರು ಸೇರಿಸಿಕೋತೀರಪ್ಪ ಈ ಹುಡುಗನನ್ನ" ಎಂದು ಹೊರಗೇ ನಿಂತು ಕೇಳಿದರು. ಎ. ಸೆಕ್ಷನ್ ಮೇಷ್ರು ವೆಂಕಟನಾರಣಪ್ಪನವರು. ಬಿ. ಸೆಕ್ಷನ್ ಮೇಷ್ಟರು ನಂಜುಂಡಯ್ಯನವರು; ಅವರೇ ಬಾಗಿಲ ಬಳಿ ಬಂದು ನನ್ನನ್ನು ಸೇರಿಸಿಕೊಳ್ಳುವುದಾಗಿ ಹೇಳಿದರು. ಒಡನೆಯೆ ವೆಂಕಟನಾರಣಪ್ಪನವರು ಹಾರಿಬಂದು ನನ್ನನ್ನು ತಮ್ಮ ಕೊಠಡಿಗೆ ಎಳೆದುಕೊಂಡು "ಕನ್ನಡ ಒಂದನೆಯ ಕ್ಲಾಸಿನಿಂದ ಈ ಹುಡುಗನ ಮೇಲೆ ಕಣ್ಣಿಟ್ಟಿದ್ದೇನೆ. ನನಗೇ ಬೇಕು ಇವನು" ಎಂದು ಹೇಳಿ ಸೇರಿಸಿಕೊಂಡರು. ನನಗಂತೂ ಹೆಮ್ಮೆಯೋ ಹೆಮ್ಮೆ. ಮಧ್ಯಾಹ್ನ ಚರಿತ್ರೆಯ ಪಾಠ. ಚರಿತ್ರೆಯೂ ನಾನೂ ಜನ್ಮಾಂತರ ವೈರಿಗಳು. ಮೇಷ್ಟ್ರು ಕೇಳಿದ ಯಾವ ಪ್ರಶ್ನೆಗೂ ಉತ್ತರವೇ ಇಲ್ಲ. ಅಪ್ಪಿತಪ್ಪಿ ಉತ್ತರ ಕೊಟ್ಟರೆ, ತಪ್ಪು ಉತ್ತರ. ಇದನ್ನು ಕಂಡು ಅವರಿಗೆ ಆಪಾದ ಮಸ್ತಕ ರೇಗಿಹೋಗಿ "ಅಯ್ಯೋ ಹುಚ್ಚು ಮುಂಡೆ! ಬೃಹಸ್ಪತಿ ಮುರುಕು ಎಂದು ನಂಬಿ, ನಂಜುಂಡಯ್ಯನ ಹತ್ತಿರ ನಿಷ್ಠುರ ಕಟ್ಟಿಕೊಂಡು ಕರೆದುಕೊಂಡೆನಲ್ಲಾ ನನ್ನ ಕ್ಲಾಸಿಗೆ. ಬೇಸ್ತು ಬಿದ್ದೆನಲ್ಲಾ" ಎಂದು ಪೇಚಾಡಿಕೊಂಡರು. ಆದರೆ ಮಿಕ್ಕ ಪಾಠಗಳಲ್ಲಿ

ನಾನು ಚೆನ್ನಾಗಿ ಮಾಡುತ್ತಿದ್ದದ್ದರಿಂದ ಅವರ ಅಸಮಾಧಾನ ಕೊಂಚ ಪರಿಹಾರವಾದಂತೆ ಕಂಡಿತು.

### ಸಕ್ಕರೆಗುಪ್ಪಂ ಸರಿಮಾಳ್ಪರೆ

ಆ ವರ್ಷದ (೧೯೧೯ನೆಯ) ಲೋಯರ್ ಸೆಕಂಡರಿ ಪರೀಕ್ಷೆಗೆ ಕನ್ನಡ ಪಠ್ಯ ಗ್ರಂಥಗಳಲ್ಲಿ ಪದ್ಯಸಾರದ ಕೆಲವು ಸಂಕಲನಗಳಿದ್ದುವು. ಅದರಲ್ಲಿ ಒಂದು ಪದ್ಯ ಇದು:

**ಸರಿಯೇ ಸೂರ್ಯಗೆ ಕೋಟಿ ಮಿಂಚುಬುಳುಗಳ್, ನಕ್ಷತ್ರಮೆಪ್ಪಾದೊಡಂ**
**ದೊರೆಯೇ ಚಂದ್ರಗೆ, ಜೀವರತ್ನಕೆಣೆಯೇ ಮಿಕ್ಕಾದ ಪಾಷಾಣಗಳ್,**
**ಉರಗೇಂದ್ರಂಗೆ ಸಮಾನವೊಳ್ಳೆಯೆ, ಸುಪರ್ಣಂಗೀಡೆ ಕಾಕಾಳಿ, ಸ**
**ಕ್ಕರೆಗುಪ್ಪಂ ಸರಿಮಾಳ್ಪರೇ ಹರಹರಾ ಶ್ರೀ ಚೆನ್ನಸೋಮೇಶ್ವರಾ**

ಕನ್ನಡ ಪಾಠವನ್ನು ಮಾಡುತ್ತಿದ್ದವರು ಮುನ್ಷಿ ಹಿರಣ್ಯಪ್ಪನವರು. ಇವರು ತುಂಬ ದಕ್ಷರಾದ ಉಪಾಧ್ಯಾಯರಾಗಿದ್ದು ಹಾಸ್ಯ ಕಥೆಗಳ ಮೂಲಕ ವಿದ್ಯಾರ್ಥಿಗಳ ಮನಮುಟ್ಟುವಂತೆ ಎಂಥ ಕ್ಲಿಷ್ಟ ಪದ್ಯಗಳೂ ಸುಲಭವಾಗಿ ಅರ್ಥವಾಗುವಂತೆ ಮಾಡುತ್ತಿದ್ದರು. ಇವರು ಕನ್ನಡದ ಜತೆಗೆ ಚರಿತ್ರೆಯ ಪಾಠವನ್ನೂ ಸ್ವಾರಸ್ಯಕರವಾಗಿ ನಡಸಿ ನಮಗೆಲ್ಲಾ ಮೆಚ್ಚಾಗಿದ್ದರು. ಮೇಲಿನ ಪದ್ಯವನ್ನು ಮಾಡುತ್ತಿದ್ದಾಗ ಕೊನೆಯ ಸಾಲಿನ "ಸಕ್ಕರೆಗುಪ್ಪಂ ಸರಿಮಾಳ್ಪರೆ" ಎಂಬ ಮಾತು ಬಂದಾಗ, ಅದರ ಅರ್ಥ ಸಮನ್ವಯಕ್ಕಾಗಿ ಒದ್ದಾಡುತ್ತಿದ್ದಂತೆ ತೋರುತ್ತಿತ್ತು. ನಮಗೆಲ್ಲಾ ಸುಲಭವಾಗಿ ಅರ್ಥವಾಗುವ ಈ ಮಾತು ಈ ಪಂಡಿತರಿಗೇಕೆ ತಲೆ ನೋವು ತಂದು ತಿಣುಕಾಡುವಂತೆ ಮಾಡಿತು ಎಂದು ನಮಗೆ ಆಶ್ಚರ್ಯ. ಸಮಸ್ಯೆಯನ್ನು ಅಂದು ಹಾಗೆಯೇ ಉಳಿಸಿ ಪಾಠ ಪೂರೈಸಿದರು. ಮರುದಿನ ಪಾಠಕ್ಕೆ ತೊಡಗಿದಾಗ ಆ ಮಾತನ್ನು ಎತ್ತಿಕೊಂಡು ಹೀಗೆ ಅರ್ಥ ವಿವರಿಸಿದರು: "ಸಕ್ಕರೆಗುಪ್ಪಂ ಸರಿಮಾಳ್ಪರೆ" ಎಂದರೆ ಅರ್ಥ ಸಕ್ಕರೆಗಿಂತ ಉಪ್ಪು ಕೀಳು ಎಂದಲ್ಲ; ಅದರದರ ಸ್ಥಾನದಲ್ಲಿ ಎರಡೂ ಪ್ರಶಸ್ತವೆ; ಸಕ್ಕರೆ ಹಾಕಬೇಕಾದ ಪದಾರ್ಥಕ್ಕೆ ಉಪ್ಪು ಹಾಕುತ್ತಾರೆಯೆ, ಹಾಗೆ ಹಾಕಿದರೆ ರುಚಿ ಕೆಡುವುದಿಲ್ಲವೆ ಎಂಬುದು ಇದರ ನಿಜವಾದ ಅರ್ಥಸಮನ್ವಯ." ಆಗ ನಮಗೆ ಅರಿವಾಯಿತು ಅವರ ಹಿಂದಿನ ದಿನದ ಒದ್ದಾಟ. ಅವರ ಪ್ರಕಾರ, ಸಕ್ಕರೆಗೆ ಏನು ಬೆಲೆಯೊ ಉಪ್ಪಿಗೂ ಅದೇ ಬೆಲೆ ಅದರದರ ಸ್ಥಾನದಲ್ಲಿ.

### ಮುಷ್ಕರ

ತುಮಕೂರಿನ ಕೊಲಿಜಿಯೇಟ್ ಹೈಸ್ಕೂಲು ಸಂಸ್ಥಾನದಲ್ಲೇ ಶ್ರೇಷ್ಠ ಪ್ರೌಢಶಾಲೆಯೆಂದು ಹೆಸರು ಗಳಿಸಿತ್ತು. ಕಟ್ಟಡದ ಅಂದ ಅಚ್ಚುಕಟ್ಟು, ಆಟದ ಮೈದಾನದ ಹರವು, ಹಾಸ್ಟೆಲಿನ ಏರ್ಪಾಟು, ಉಪಾಧ್ಯಾಯರ ಯೋಗ್ಯತೆ ಸಾಮರ್ಥ್ಯ–ಯಾವ ದೃಷ್ಟಿಯಿಂದ ನೋಡಿದರೂ ಅದು ಶ್ರೇಷ್ಠವೆನಿಸಿಕೊಂಡಿತ್ತು. ಸೆಂಟ್ರಲ್ ಕಾಲೇಜಿನ ಪ್ರಾಧ್ಯಾಪಕರು ತಮ್ಮ ಮಕ್ಕಳನ್ನು ಈ ಹಾಸ್ಟೆಲಿನಲ್ಲಿಟ್ಟು ಎಂಟ್ರನ್ಸ್ (ಈಗಿನ ಪಿ.ಯು.ಸಿ) ಪರೀಕ್ಷೆಗೆ ಓದಿಸುತ್ತಿದ್ದರು ಎಂದ ಮೇಲೆ ಕೇಳಬೇಕೆ ಇದರ ಹಿರಿಮೆಯನ್ನು. ನಾವು ಓದುವಾಗ (೧೯೧೯) ಅದರ ಮುಖ್ಯೋಪಾಧ್ಯಾಯರು

ತಮ್ಮ ದರ್ಶನ ಜ್ಞಾನಕ್ಕೂ ಇಂಗ್ಲಿಷ್ ಪಾಂಡಿತ್ಯಕ್ಕೂ ಹೆಸರಾಗಿದ್ದ ಶ್ರೀ ಕೆ.ಎ. ಕೃಷ್ಣಸ್ವಾಮಯ್ಯರವರು. ಅವರೂ ಇಂಗ್ಲಿಷ್ ಅಧ್ಯಾಪಕರಾಗಿದ್ದ ಶ್ರೀ ಜಿ. ಜಿ. ವೀರರಾಘವಾಚಾರ್ಯರೂ ಸೇರಿ ೧೯೧೯ರಲ್ಲಿ ಸ್ಕೂಲಿನ ಕರ್ಣಾಟಕ ಸಂಘವನ್ನು ಸ್ಥಾಪಿಸಿದರು. ಮದರಾಸು ಪ್ರಾಂತದ ಸುಪ್ರಸಿದ್ಧ ವಿದ್ವಾಂಸರುಗಳಾದ ಕೆ.ಎಸ್. ರಾಮಸ್ವಾಮಿ ಶಾಸ್ತ್ರಿ, ಎಲ್.ಎ. ಗೋವಿಂದರಾಘವ ಅಯ್ಯರ್ ಮೊದಲಾದವರ ಭಾಷಣಗಳು ಈ ಸಂಘದ ಆಶ್ರಯದಲ್ಲಿ ನಡೆದು ಊರ ಪ್ರಮುಖರನ್ನು ಆಕರ್ಷಿಸುತ್ತಿದ್ದುವು. ಭಾಷಣಗಳು ಇಂಗ್ಲಿಷಿನಲ್ಲಿ ನಡೆದರೂ ಮೊದಲ ತರಗತಿಯಲ್ಲಿ ಓದುತ್ತಿದ್ದ ನಮಗೂ ಅರ್ಥವಾಗುತ್ತಿದ್ದುದ್ದು ಆ ಕಾಲದ ಶಿಕ್ಷಣದ ಮಟ್ಟಕ್ಕೂ ವಕ್ತಾರರ ಭಾಷಣ ಸಾಮರ್ಥ್ಯಕ್ಕೂ ಸಾಕ್ಷಿ. ಅಲ್ಲದೆ ಶಾಲೆಯ ವತಿಯಿಂದ ಸ್ಕೂಲ್ ಫೋಕ್ ಎಂಬ ಇಂಗ್ಲಿಷ್ ಕಾಲಿಕ ಪತ್ರಿಕೆಯೂ ಪ್ರಕಟವಾಗುತ್ತಿತ್ತು. ನಾವು ಸ್ಕೂಲಿಗೆ ಸೇರಿದ ವರ್ಷವೇ ಮೂಲ ಕಟ್ಟಡದಲ್ಲಿ ಸ್ಥಳ ಸಾಲದೆ ಅದರ ಹಿಂದುಗಡೆ ಬಯಲಲ್ಲಿ ಆರೋ ಎಂಟೋ ಕೊಠಡಿಗಳ ಸಾಲನ್ನು ಕಟ್ಟಿ, ಅದರ ಗೃಹಪ್ರವೇಶ ನಮ್ಮ ತಂಡದವರಿಂದಲೆ ಆಗಬೇಕಿತ್ತು. ಏಕೋ ಏನೋ ಆ ಕೊಠಡಿಗಳ ಸಂಕೇತವನ್ನು ಕಚ್ಚಾಕೋಣೆ ೧, ೨, ೩, ಎಂದು ವೇಳಾಪಟ್ಟಿಯಲ್ಲಿ ಗುರುತಿಸಿತ್ತು. ಜತೆಗೆ ಮೊದಲ ವರ್ಷದ ತರಗತಿಯ ಪಾಠಗಳನ್ನೆಲ್ಲಾ ಅಲ್ಲಿ ನಡೆಸುವ ಏರ್ಪಾಟಾಗಿತ್ತು. ನಮ್ಮ ಯಾರ ತಲೆಯಲ್ಲಿ ಏನು ಹೊಳೆಯಿತೋ ಏನೋ! ಕಚ್ಚಾಕೋಣೆ ಎಂದು ಕರೆದದ್ದೂ ಮೊದಲ ವರ್ಷದ ತರಗತಿಗಳು ಮಾತ್ರ ಅಲ್ಲಿ ನಡೆಯುವಂತೆ ಏರ್ಪಡಿಸಿದ್ದೂ ನಮ್ಮ ಅಂತಸ್ತಿಗೂ ಸ್ವಾಭಿಮಾನಕ್ಕೂ ಕಡಮೆ ಎಂಬ ಸಲ್ಲದ ಭಾವನೆ ನಮಗೆ ಬಂದು ನಾವು ಅಲ್ಲಿಗೆ ಹೋಗುವುದಿಲ್ಲವೆಂದು ಹಠ ಹಿಡಿದೆವು. ಈ ಹಠವೇ ಬಲಕಾಯಿಸಿದರೆ ಮುಷ್ಕರ ಎನಿಸಿಕೊಳ್ಳುತ್ತದೆ. ಜ್ಞಾನಾನುಭವ ವೃದ್ಧರೂ ಶಿಷ್ಯವತ್ಸಲರೂ ಆದ ಮುಖ್ಯೋಪಾಧ್ಯಾಯರು ನಮ್ಮ ಹುಡುಗಾಟದ ಮೊಂಡುತನವನ್ನು ನೋಡಿ ನಕ್ಕು, ತಾವೇ ಬಂದು "ಹುಚ್ಚಪ್ಪಗಳಿರ! ಬನ್ನಿ, ನಾನೇ ಮೊದಲ ಪಾಠ ತೆಗೆದುಕೊಳ್ಳುತ್ತೇನೆ. ನನ್ನ ಎಂಟ್ರನ್ಸ್ ಕ್ಲಾಸಿನ ಇಂಗ್ಲಿಷ್ ಪಾಠವನ್ನೂ ಈ ಕಚ್ಚಾಕೋಣೆಯಲ್ಲೆ ತೆಗೆದುಕೊಳ್ಳುತ್ತೇನೆ" ಎಂದು ಪುಸಲಾಯಿಸಿ ನಮ್ಮ ಮನವೊಪ್ಪಿಸಿ ಪಾಠಕ್ಕೆ ತೊಡಗಿದರು. ನಮ್ಮ ಅವಿವೇಕಕ್ಕೆ ನಾವೇ ನಾಚಿ, ತಲೆ ತಗ್ಗಿಸಿಕೊಂಡು ತೆಪ್ಪಗೆ ಹೋಗಿ ಕುಳಿತುಕೊಂಡೆವು. ಈಗಲೂ ಆ ಕಟ್ಟಡ ಇದೆ; ಇನ್ನೂ ಬಡಾಯಿಸಿದೆ. ಅದನ್ನು ಈಗ ಕಚ್ಚಾಕಟ್ಟಡ ಎನ್ನುತ್ತಾರೊ ಅಚ್ಚಾಕಟ್ಟಡ ಎನ್ನುತ್ತಾರೊ ತಿಳಿಯದು. ಗುರುಭಕ್ತಿ, ಶಿಷ್ಯವಾತ್ಸಲ್ಯವಿದ್ದರೆ ಎಲ್ಲಾ ಸಮಸ್ಯೆಗಳೂ ಸುಗಮವಾಗಿ ಬಗೆಹರಿಯುತ್ತವೆ.

**ಕಸಬಿಯಂಕ**

ಶ್ರೀ ಎಸ್. ತಿರುಮಲೆ ಅವರು ಎಂಟ್ರನ್ಸ್ ತರಗತಿಗೆ ಲಾಜಿಕ್ (ತರ್ಕ) ಹೇಳುವುದಕ್ಕಾಗಿ ನೇಮಕಗೊಂಡವರು. ಅವರು ನಮಗೆ ಇಂಗ್ಲಿಷ್ ಪದ್ಯ ಪಾಠವನ್ನೂ ಕೆಲವು ಕಾಲ ಗಣಿತ ಪಾಠವನ್ನೂ ನಡೆಸಿದರು. ಗಣಿತದ ಉಪಾಧ್ಯಾಯರಿಗಿಂತ ಇವರು ಗಣಿತವನ್ನೂ ಚೆನ್ನಾಗಿ ಹೇಳಿಕೊಟ್ಟರು ಎನ್ನಬೇಕು. ಇಂಗ್ಲಿಷ್ ಕವಿತೆಗಳಲ್ಲಿ 'ಕಸಬಿಯಂಕ' ಎಂಬ ಒಂದು ಕವಿತೆ ಪಠ್ಯವಾಗಿತ್ತು. ಪಾಠಗಳೆಲ್ಲಾ ಫೆಬ್ರವರಿ ಮಧ್ಯಕ್ಕೇ ಮುಗಿದು ಇನ್ನೂ ಎರಡು ಮೂರು ವಾರಗಳ ಕಾಲ ಉಳಿದಿತ್ತು. ಅವರು ಲೋಕಾಭಿರಾಮವಾಗಿ ಎನ್ನುವಂತೆ ಪಾಠದ ನಡುವೆ "ತನ್ನ ಕೂಗಿಗೆ ಯಾವ ಉತ್ತರವೂ ಬರದಿದ್ದರೂ ಹುಡುಗ ಕಸಬಿಯಂಕ ಉರಿಯುತ್ತಿದ್ದ ಹಡಗಿನಲ್ಲೆ ಕದಲದೆ ನಿಂತು ಬೆಂಕಿಗೆ ಆಹುತಿಯಾದ್ದು ಸರಿಯೆ" ಎಂಬ ಪ್ರಶ್ನೆ ಕೇಳಿ, "ಸರಿ ಎನ್ನುವವರೆಲ್ಲ

ಎದ್ದು ನಿಲ್ಲಿ" ಎಂದರು. ಒಬ್ಬನುಳಿದು ಇಡೀ ತರಗತಿಯೇ ಎದ್ದು ನಿಂತಿತು. "ಸರಿಯಲ್ಲ ಎನ್ನುವವರು ಎದ್ದು ನಿಲ್ಲಿ" ಎಂದಾಗ ಒಬ್ಬ ಮಾತ್ರ ನಿಂತ. ತಾವೂ ಅವನ ಕಡೆ ಸೇರಿಕೊಳ್ಳುವುದಾಗಿ ಹೇಳಿ ಅವನಿಗೆ ಅಭಯವಿತ್ತು, ಒಬ್ಬೊಬ್ಬರೂ ಅವರವರ ನಿಲವಿಗೆ ಕಾರಣ ಕೊಡಬೇಕೆಂದು ಹೇಳಿ ಎರಡು ವಾರಗಳು ಸ್ವಾರಸ್ಯವಾದ ಚರ್ಚೆ ನಡೆಸಿದರು. ಈ ಪಾಠವನ್ನೇ ತೆಗೆದುಕೊಂಡು ಇದೇ ಕ್ರಮವನ್ನು ಅನುಸರಿಸಿ, ಮುಂದೆ ನನ್ನ ಬಿ.ಟಿ. ಪರೀಕ್ಷೆಯಲ್ಲಿ ಪ್ರಾಯೋಗಿಕ ಪಾಠ ನಡಸಿ ಪರೀಕ್ಷಕರಿಂದ ಶಾಬಾಸುಗಿರಿ ಪಡೆದೆ. ತರುವಾಯ ಅವರಿಗೆ ನಿವೇದಿಸಿದೆ ಆ ಶಾಬಾಸುಗಿರಿಯ ಗೌರವ ಗುರು ತಿರುಮಲೆಯವರಿಗೆ ಸಲ್ಲಬೇಕು ಎಂದು.

### ಆಗಂತುಕ

ನಾಲ್ಕನೆಯ ಫಾರಮ್ಮಿನ ವಾರ್ಷಿಕ ಪರೀಕ್ಷೆ, ಇಂಗ್ಲಿಷ್ ಎರಡನೆಯ ಪತ್ರಿಕೆಯಲ್ಲಿ ಪಠ್ಯೇತರ ಕವಿತೆಯೊಂದನ್ನು ಕೊಟ್ಟು ಅದರ ಅರ್ಥವಿವರಣೆ ಕೇಳಿದ್ದರು. ಕವಿತೆಯ ಹೆಸರು "ದಿ ಸ್ಟ್ರೇಂಜರ್" ಕವಿತೆಯ ಸಾರಾಂಶ: ಅಲೆದು ಸೋತು ಹಸಿದು ಕಂಗೆಟ್ಟಿದ್ದ ಕುಸಿಮುಪ್ಪಿನ ಆಗಂತುಕನೊಬ್ಬ ಬಿರುಗಾಳಿ ಬಡಿತಕ್ಕೆ ಸಿಕ್ಕಿ ಕಗ್ಗತ್ತಲಲ್ಲಿ ಏಬ್ರಹಾಮಿನ ಗೂಡಾರದೊಳಕ್ಕೆ ಬರುತ್ತಾನೆ; ಬಂದವನನ್ನು ಆದರಿಸಿ ಏಬ್ರಹಾಂ ತಿನ್ನಲು ರೊಟ್ಟಿ ಕೊಡುತ್ತಾನೆ; ಅದನ್ನು ಆಗುಂತಕ ಬಾಯಿಗಿಟ್ಟುಕೊಳ್ಳ ಹೋದಾಗ ಏಬ್ರಹಾಂ "ತಡೆ, ದೇವರಿಗೆ ಪ್ರಾರ್ಥನೆ ಮಾಡುವುದಿಲ್ಲವೆ" ಎಂದು ಕೇಳುತ್ತಾನೆ; ಆಗಂತುಕ ಕಕ್ಕಾಬಿಕ್ಕಿಯಾಗಿ ನೋಡಿ, ತಲೆಯಲ್ಲಾಡಿಸಿ "ದೇವರು? ನನಗೆ ಯಾವ ದೇವರೂ ಗೊತ್ತಿಲ್ಲ" ಎಂದಾಗ, ಏಬ್ರಹಾಂ "ಹಾಗಾದರೆ ನನ್ನ ರೊಟ್ಟಿ ತಿನ್ನಬೇಡ" ಎನ್ನುತ್ತಾನೆ; ಆಗುಂತುಕ ಮರುಮಾತಾಡದೆ ರೊಟ್ಟಿಯನ್ನು ಕೆಳಗಿಟ್ಟು ಕಾಲೆಳೆದುಕೊಂಡು ಹೊರಟು ಹೋಗುತ್ತಾನೆ; ಒಡನೆಯೇ ಗೂಡಾರದಲ್ಲಿ ಒಂದು ಅಲೌಕಿಕ ಜ್ಯೋತಿ ಬೆಳಗುತ್ತದೆ; ಅದು ತನ್ನ ದೇವರ ಪ್ರತ್ಯಕ್ಷವೆಂದು ಏಬ್ರಹಾಮಿಗೆ ಅರಿವಾಗುತ್ತದೆ; ದಿವ್ಯವಾಣಿ ನುಡಿಯುತ್ತದೆ "ಇಷ್ಟು ದಿನ ಅವನನ್ನು ಸಹಿಸಿಕೊಂಡಿದ್ದೇನೆ; ಇನ್ನೂ ಅವನಿಗಾಗಿ ಕಾಯುತ್ತಿದ್ದೇನೆ, ಒಂದು ರಾತ್ರಿ ಅವನಿಗೆ ನಿನ್ನ ಗೂಡಾರದಲ್ಲಿ ಇಂಬು ಕೊಡಲಾರದೆ ಹೋದೆಯಾ ನೀನು" (I have borne him long and still I wait. Could'st thou not lodge him one night in thy tent?). ಆ ಕವಿತೆಯನ್ನು ಮತ್ತೆ ಮತ್ತೆ ಓದಿ ಮೆಚ್ಚಿಕೊಂಡೆ. ಹಸಿದು ಕಂಗೆಟ್ಟಿದ್ದರೂ ಚೂರು ರೊಟ್ಟಿಗಾಗಿ ತಾನು ಕಂಡಿರದ, ನಂಬಿರದ ದೇವರಿಗಾಗಿ ಸುಳ್ಳು ಪ್ರಾರ್ಥನೆಯ ಸೋಗುಹಾಕದ ಮುದುಕನ ದಿಟ್ಟ ನಿಲವು ಮನನಾಟಿತು. ಕಡೆಯ ಎರಡು ಸಾಲಂತೂ ಅಂದಿನಿಂದ ಇಂದಿನವರೆಗೆ ಮನವೂರಿ ಬಾಳಿಗೆ ಒಂದು ಹದ ತಂದಿದೆ.

### ವೆಂಕಟರಾಮನ್

ತಾಯಿಲ್ಲದವನನ್ನು ಎತ್ತಿ ಲಾಲಿಸಿ ಆರೈಕೆ ಮಾಡಿದ ಪುಣ್ಯ ಕಡಬದ ಚಿಕ್ಕಪ್ಪನವರದಾದರೆ, ತಂದೆಯನ್ನು ನೀಗಿಕೊಂಡವನನ್ನು ಮನೆಯಲ್ಲಿಟ್ಟುಕೊಂಡು ಓದಿಸಿ ಮುಂದಕ್ಕೆ ತಂದ ಪುಣ್ಯ ಬೆಂಗಳೂರ ಚಿಕ್ಕಪ್ಪನವರದು. ಚಿಕ್ಕಪ್ಪನವರು ಮಾತ್ರ ನಂಟರಾಗಿದ್ದರೆ ಹೊಂದಾಣಿಕೆ ಹೇಗಾಗುತ್ತಿತ್ತೋ ಏನೋ. ಅವರ ಹೆಂಡತಿ ನನ್ನ ಸ್ವಂತ ದೊಡ್ಡಮ್ಮನವರ ಮಗಳಾಗಿದ್ದು ನನಗೆ ಏಕಕಾಲದಲ್ಲಿ ಅಕ್ಕನೂ ಚಿಕ್ಕಮ್ಮನೂ ಆಗಿದ್ದರು. ಜತೆಗೆ ಎಳವೆಯಲ್ಲೆ ತಾಯಿ ನೀಗಿಕೊಂಡ ತಬ್ಬಲಿ ಎಂದು

ಮೊದಲಿಂದ ಇವರೆಲ್ಲರ ಪ್ರೀತಿಕರುಣೆಗಳಿಗೆ ಪಾತ್ರನಾಗಿದ್ದೆ. ಹೀಗಾಗಿ, ನಾನು ಅವರ ಮನೆಯಲ್ಲಿ ಅವರ ಮಕ್ಕಳಿಗಿಂತ ಹೆಚ್ಚಾಗಿಯೆ ಹೆತ್ತ ಮಗನಂತೆ ಬೆಳೆದೆ. ಬೆಂಗಳೂರಲ್ಲಿ ಆಗ ತಾನೆ ಸ್ಥಾಪಿತವಾಗಿದ್ದ ನ್ಯಾಷನಲ್ ಹೈಸ್ಕೂಲಿನಲ್ಲಿ ಓದಬೇಕೆಂಬ ಆಸೆ ನನಗೆ. ಆದರೆ, ನಮ್ಮ ಮನೆಯ ಪಕ್ಕದಲ್ಲಿ ವೆಸ್ಲಿಯನ್ ಹೈಸ್ಕೂಲಿನ ಉಪಾಧ್ಯಾಯರು ಶ್ರೀ ಪುಟ್ಟನರಸಯ್ಯನವರು ಇದ್ದದ್ದರಿಂದ ನನ್ನನ್ನು ಆ ಸ್ಕೂಲಿಗೆ ಸೇರಿಸಿದರು. ನಾನು ಉದ್ದೇಶಪೂರ್ವಕವಾಗಿ ಸೇರದಿದ್ದರೂ, ಒಂದು ದೃಷ್ಟಿಯಲ್ಲಿ ಇಷ್ಟವಿಲ್ಲದೆ ಗೊಣಗಿಕೊಂಡು ಸೇರಿದರೂ, ವೆಸ್ಲಿಯನ್ ಹೈಸ್ಕೂಲಿನಲ್ಲಿ ನಾನು ಸೇರುವಂತಾದ್ದು ನನ್ನ ಪುಣ್ಯ ವಿಶೇಷವೆಂದು ನನ್ನ ಭಾವನೆ. ನನ್ನ ಜೀವನದ ಮೇಲೆ ಆಂತರಿಕ ಗಾಢ ಪ್ರಭಾವ ಬೀರಿದ ಕೆಲವೇ ಹಿರಿಯರಲ್ಲಿ ಒಬ್ಬರು ಇಲ್ಲಿ ದೊರೆತು ಈಗಲೂ ನನ್ನ ಭಕ್ತಿಗೌರವಗಳಿಗೆ ಪಾತ್ರರಾಗಿ ನನ್ನನ್ನು ಹರಸುತ್ತಿದ್ದಾರೆ. ವಿದ್ಯಾವಿನಯಗಳಿಂದ ಶೋಭಿಸಿ, ಬೋಧನಪಾಟವದಿಂದ ವಿದ್ಯಾರ್ಥಿಗಳ ಪ್ರೀತಿ ಮನ್ನಣೆಗಳನ್ನು ಗಳಿಸಿ, ಸರಳತೆ ಸತ್ಯನಿಷ್ಠೆಗಳಿಂದ ಆದರ್ಶಪ್ರಿಯರಾಗಿ ನಮ್ಮೆಲ್ಲರ ಮೆಚ್ಚಾದ ಪೂಜ್ಯ ಎಸ್. ವೆಂಕಟರಾಮನ್ ಅವರು ಮಿಷನ್ ಸ್ಕೂಲಿನಲ್ಲಿದ್ದರೂ ಮೊದಲಿಂದ (ನಾನು ಕಂಡಂತೆ ೧೯೨೦ರಿಂದ) ಉತ್ಕಟದೇಶಾಭಿಮಾನಿಗಳೂ ಪ್ರಾಮಾಣಿಕ ಖಾದಿಧಾರಿಗಳೂ ನಿಷ್ಕಪಟ ಗಾಂಧೀಮಾರ್ಗಾನುಯಾಯಿಗಳೂ ಆದವರು.

### ಎ.ಆರ್. ಫುಲರ್

ರೆವರೆಂಡ್ ಎ.ಆರ್. ಫುಲರ್ ಅವರು ಸ್ಕೂಲಿನ ಪ್ರಿನ್ಸಿಪಾಲರು. ಇವರು ನುರಿತ ಪಾದ್ರಿ, ನಯವಿನಯಶೀಲರು. ವೆಂಕಟರಾಮನ್ ಅವರು ಗಾಂಧೀ ಚಳವಳಿಯ ಪ್ರಭಾವಕ್ಕೆ ಸಿಕ್ಕಿ ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟು ಬೆಂಗಳೂರು ದಂಡಿನಲ್ಲಿ ಅತ್ಯುತ್ಸಾಹದಿಂದ ಆರಂಭವಾದ ಕಿಲಾಫತ್ ಹೈಸ್ಕೂಲಿನಲ್ಲಿ ಕೆಲಸವಹಿಸಿಕೊಂಡು, ಎರಡು ವರ್ಷಗಳ ತರುವಾಯ ಅದು ಮುಚ್ಚಿ, ಅವರು ಮನೆಯಲ್ಲಿ ಕುಳಿತಿದ್ದಾಗ, ತಾವಾಗಿ ಅವರ ಮನೆಗೆ ಹೋಗಿ ಕರೆದು ಅವರ ಮನವೊಪ್ಪಿಸಿ ಮತ್ತೆ ತಮ್ಮ ಸ್ಕೂಲಿನ ಕೆಲಸಕ್ಕೆ ತೆಗೆದುಕೊಂಡ ಹಿರಿಯ ವಿದ್ಯಾಗುಣಪಕ್ಷಪಾತಿಗಳು ಈ ಫುಲರ್ ಮಹಾಶಯರು. ೧೯೨೦ರಲ್ಲಿ ಲೋಕಮಾನ್ಯ ತಿಲಕರ ಮರಣಾನಂತರ ಮಹಾತ್ಮಗಾಂಧಿಯವರ ಚಳವಳಿ ತೀವ್ರರೂಪುಗೊಂಡಿತು. ಅದರ ಸುಳಿಯಲ್ಲಿ ಸಿಕ್ಕಿಕೊಂಡ ಕೆಲವು ವಿದ್ಯಾರ್ಥಿಗಳಲ್ಲಿ ನಾನೂ ಒಬ್ಬ. ಆಗ ನಮ್ಮ ದೇಶಪ್ರೇಮದ ಮೊದಲ ಕುರುಹೆಂದರೆ ವಿದೇಶೀ ವಸ್ತ್ರದ್ವೇಷ ಮತ್ತು ವಿದೇಶೀ ವಸ್ತ್ರದಹನ. ಫೆಲ್ಟ್‌ಟೋಪಿ, ಉಣ್ಣೆಯಂಗಿ, ರೇಷ್ಮೆಯಂಚಿನ ಪಂಚೆ ಎಲ್ಲವನ್ನೂ ಸುಟ್ಟು ಭಸ್ಮಮಾಡಿ, ಆಗ ಗೋಣಿಪಟ್ಟೆಗಿಂತ ಒರಟಾಗಿದ್ದ ಖಾದಿಯನ್ನು ಧರಿಸಲು ತೊಡಗಿದೆ. ನಮ್ಮ ತರಗತಿಯಲ್ಲಿ ಖಾದಿಧಾರಿ ನಾನೊಬ್ಬನೆ. ಖಾದಿದಟ್ಟಿ, ಜುಬ್ಬ, ಟೋಪಿ ಇದೇ ನನ್ನ ಉಡುಪು. ಇದು ಪ್ರಿನ್ಸಿಪಾಲರಿಗೆ ಕಣ್‌ಗೆಂಡವಾಗಿತ್ತು. ಒಂದು ದಿನ ಅವರ ಕೊಠಡಿಗೆ ನನ್ನನ್ನು ಬರಮಾಡಿಕೊಂಡು "ಅಂಗಿ ಏಕೆ ಹಾಕುವುದಿಲ್ಲ" ಎಂದು ತುಂಬ ನಯವಾಗಿ ಕೇಳಿದರು. ನಾನು "ನನ್ನ ಹತ್ತಿರ ಅಂಗಿ ಇಲ್ಲ" ಎನ್ನಲು, "ಮೊನ್ನೆ ಮೊನ್ನೆಯವರೆಗೆ ಹಾಕಿಕೊಂಡು ಬರುತ್ತಿದ್ದೆಯಲ್ಲಾ" ಎಂದರು. ನಾನು ಜರ್ಬಿನಿಂದ "ಎಲ್ಲಾ ಸುಟ್ಟುಹಾಕಿಬಿಟ್ಟೆ" ಎನ್ನಲು, "ಅಯ್ಯೋ ಮೂರ್ಖ ಹುಡುಗ! ಹೋಗಲಿ ಇನ್ನೊಂದು ಹೊಲಿಸಿಕೊಂಡು ಹಾಕಿಕೊಂಡು ಬಾ" ಎಂದು, ತಮ್ಮ ನಯವಾದ ಬಟ್ಟೆಯನ್ನು ಸವರಿ ತೋರಿಸುತ್ತಾ "ಇಂಥ ನಯವಾದ ಬಟ್ಟೆ ನಿನಗೆ ಬೇಡವಾದರೆ, ನಿನ್ನ ಮೆಚ್ಚಿನ ಗೋಣಿಪಟ್ಟೆಯನ್ನೇ

ತೆಗೆದುಕೊ. ಆದರೆ, ಅಂಗಿ ಹಾಕಿಕೊಳ್ಳುತ್ತೇನೆ ಎಂದು ಮಾತು ಕೊಡು" ಎಂದರು. ನಾನು ಪಟ್ಟು ಬಿಡದೆ "ವಾಗ್ದಾನ ಮಾಡಲಾರೆ, ನನ್ನಲ್ಲಿ ಈಗ ದುಡ್ಡಿಲ್ಲ" ಎಂದು ನೆವ ಹೂಡಲು, ಅವರು ಕೊಂಚವೂ ಬೇಸರಿಸದೆ" ಒಳ್ಳೆಯದು, ಚಿಂತೆಯಿಲ್ಲ. ಆದಷ್ಟು ಬೇಗ ಕೊಳ್ಳಲು ಪ್ರಯತ್ನಿಸುತ್ತೇನೆ ಎಂದಾದರೂ ಹೇಳಬಹುದಲ್ಲ" ಎಂದರು. ನಾನು "ಆಗಲಿ ನೋಡುತ್ತೇನೆ" ಎಂದು ಬೇಕಾಬಿಟ್ಟಿ ಉತ್ತರ ಕೊಟ್ಟರೂ "ಅದೀಗ ಸರಿ, ಹೋಗು" ಎಂದು ನಯವಾಗಿ ನಗುತ್ತಲೆ ಬೀಳುಕೊಟ್ಟರು. ಇಂಥವರು ಇದ್ದರೆ ಮುಷ್ಕರಗಳು ಏಕೆ ನಡೆಯುತ್ತವೆ, ಹೇಗೆ ನಡೆಯುತ್ತವೆ?

## ನಿಮ್ಮಪ್ಪನ್ನ ಕೇಳು

ಈ ಸಂದರ್ಭದಲ್ಲಿ ಒಂದು ಕಹಿ ಪ್ರಸಂಗವೂ ನೆನಪಾಗುತ್ತದೆ. ನಮ್ಮ ಕನ್ನಡ ಪಂಡಿತರು ಕೃಷ್ಣಪ್ಪನವರು ವಿದ್ವಾಂಸರು, ಶಿಷ್ಯಪ್ರಿಯರು. ಒಮ್ಮೆ ಪಾಠ ಮಾಡುತ್ತಿದ್ದಾಗ ಒಂದು ಪದ್ಯದಲ್ಲಿ "ಕುಂಟಣಿ" ಎಂಬ ಮಾತು ಬಂದಿತ್ತು. ಅವರು ಆ ಪದಕ್ಕೆ ಅರ್ಥ ಹೇಳುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಿ ಮುಂದಕ್ಕೆ ಹೋಗಿದ್ದರು. ನಾನು ಅರ್ಥ ಬರೆದುಕೊಳ್ಳುವುದರಲ್ಲಿ ಮಗ್ನನಾಗಿದ್ದು ಅವರ ಸ್ಪಷ್ಟ ಹೇಳಿಕೆ ನನ್ನ ಕಿವಿಗೆ ಬಿದ್ದಿರಲಿಲ್ಲ. ಅವರು ಮುಂದಿನ ಪದ್ಯಕ್ಕೆ ತೊಡಗಿದಾಗ, ಅರ್ಥ ತಿಳಿದುಕೊಳ್ಳಬೇಕೆಂಬ ಸದಿಚ್ಛೆಯಿಂದ, ಸರಳಭಾವದಿಂದ "ಸಾರ್ ಕುಂಟಣಿ ಪದಕ್ಕೆ ಅರ್ಥ" ಎಂದು ಕೇಳಿದೆ. ನಾನು ಉದ್ದೇಶಪೂರ್ವಕವಾಗಿ ಕೀಟಲೆಗಾಗಿ ಕೇಳುತ್ತಿದ್ದೇನೆಂದು ಅವರು ತಪ್ಪಾಗಿ ಗ್ರಹಿಸಿ "ನಿಮ್ಮಪ್ಪನ ಕೇಳು" ಎಂದು ಗುಡುಗಿದರು. ನಮ್ಮಪ್ಪ ಇರಲಿಲ್ಲ ನಿಜ. ಆದರೂ, ನನಗೂ ಪಿತ್ತನೆತ್ತಿಗೇರಿ "ನಮ್ಮಪ್ಪ ನಿಮ್ಮನ್ನು ಕೇಳು ಅಂತ ದುಡ್ಡು ಕೊಟ್ಟು ಸ್ಕೂಲಿಗೆ ಸೇರಿಸಿದ್ದಾರೆ" ಎಂದು ಒದರಿಬಿಟ್ಟೆ, ಅವರಿಗೂ ಸಹನೆ ಮೀರಿ, ಯಾವಾಗಲೂ ಜೇಬಿನಲ್ಲೆ ಇಟ್ಟಿರುತ್ತಿದ್ದ ತರಗತಿಯ ಅಂಕಪಟ್ಟಿ ತೆಗೆದುಕೊಂಡು, ನನ್ನ ಹೆಸರಿನ ಮುಂದೆ ಒಂದು ಸೊನ್ನೆ ಹಾಕಿ, "ಒಂದು ಸೊನ್ನೆ ಹಾಕಿದೇನೆ, ಕೂತುಕೊ" ಎಂದು ಹೆದರಿಸಿದರು. ಅಷ್ಟು ಹೊತ್ತಿಗೆ ನನಗೆ ಮೈಮೇಲೆ ಪ್ರಜ್ಞೆಯೇ ಇರಲಿಲ್ಲವೆನ್ನಬೇಕು. ಹೊಸದಾಗಿ ಕೊಂಡಿದ್ದ ನೆಪ್ಚೂನ್ ಪೆನ್ನನ್ನು ಜೇಬಿನಿಂದ ತೆಗೆದು "ತಗೋಳಿ ಸಾರ್! ಹೊಸಾಹೊಸ ಪೆನ್ನು; ಎಷ್ಟು ಬೇಕೊ ಅಷ್ಟೂ ಸೊನ್ನೆ ಹಾಕಿ" ಎಂದು ಕೂಗಿದೆ. ತರಗತಿಯೆಲ್ಲಾ ಬೆರಗು ಬಡಿದು ನೋಡುತ್ತಿತ್ತು. ಮಿತಿಮೀರಿದ ಈ ವಿಪರೀತದ ಪ್ರಸಂಗವನ್ನು. ಅಷ್ಟು ಹೊತ್ತಿಗೆ ಗಂಟೆ ಬಾರಿಸಿ, ಎಲ್ಲರೂ ಹೊರಟುಹೋದರು. ಪಂಡಿತರು ನನ್ನನ್ನು ಕರೆದು "ನಿನಗೇನಾಗಿದೆ ಇವೊತ್ತು" ಎಂದು ಕೇಳಿದರು. "ಅಲ್ಲ ಸಾರ್! ತಿಳಿಯದ ಮಾತಿಗೆ ಅರ್ಥ ಕೇಳಿದರೆ, ನಿಮ್ಮಪ್ಪನ ಕೇಳು ಅನ್ನೋದೆ ನೀವು" ಎಂದು ಮತ್ತೆ ಆರಂಭಿಸಿದೆ. ಯಾರೂ ಉದ್ದೇಶಿಸದೆ ಈ ವಿಷಯ ಪರಿಸ್ಥಿತಿಗೆ ಇಟ್ಟುಕೊಂಡದ್ದು ತರುವಾಯದ ಮಾತುಕತೆಯಿಂದ ಮನವರಿಕೆಯಾಗಿ, ಅನಾವಶ್ಯಕವಾಗಿ ದುಡುಕಿದ್ದಕ್ಕೆ ಇಬ್ಬರಿಗೂ ಪಶ್ಚಾತ್ತಾಪವಾಯಿತು. ಆದರೂ ನನ್ನ ವರ್ತನೆ ಆಕ್ಷಮ್ಯವಾಗಿತು. ಮಾಡುವುದೇನು? ನನ್ನದು ತಪ್ಪಿಲ್ಲವೆಂಬ ಸೊಕ್ಕು; ಎಳೆನಿಂಬೆಕಾಯಿ.

❖

# ನನ್ನ ಪಾಲಿನ ಬಾಳಗುರು

## (ಪ್ರೊ. ಕ.ವೆಂ. ರಾಘವಾಚಾರ್)

● *ಡಾ॥ ವಿನೋದಾಬಾಯಿ*

'ತ್ವಮೇವ ಮಾತಾಚ ಪಿತಾತ್ವಮೇವ
ತ್ವಮೇವ ಬಂಧುಶ್ಚ ಸಖಾ ತ್ವಮೇವ
ತ್ವಮೇವ ವಿದ್ಯಾ ದ್ರವಿಣಂ ತ್ವಮೇವ
ತ್ವಮೇವ ಸರ್ವಂ ಮಮ ದೇವದೇವ ॥"

ಬೆಳಗ್ಗೆ ಎದ್ದ ಕೂಡಲೇ "ಕರಾಗ್ರೇ..." ಎಂದಾದ ಕೂಡಲೇ ಈ ಶ್ಲೋಕವೇ ನನ್ನ ನಿತ್ಯದ ಪ್ರಾರ್ಥನೆ. ಇದು ಕ.ವೆಂ.ರಾ. ಅವರಿಗೆ ನಾನು ಮಾಡುವ ಸ್ಮರಣೆ.

ನಾನು ಮೆಟ್ರಿಕ್ ಮುಗಿದ ಕೂಡಲೇ ಮೈಸೂರಿಗೆ ಕಾರ್ಡಿನಲ್ಲಿ ನಾನು ಪಾಸಾದ ವಿಷಯ ತಿಳಿಸಿದೆ. ೧೯೪೭ರಲ್ಲಿ ಕ.ವೆಂ.ರಾ. ಅವರು ೭-೮ ಸ್ನೇಹಿತರೊಡನೆ ಹಾವೇರಿಗೆ ಬಂದಾಗ ಅವರ ಆದರಾತಿಥ್ಯ ನನ್ನ ಪಾಲಿಗೆ ಬಿತ್ತು. ಮನೆಗೆ ಹಿರಿಮಗಳಷ್ಟೇ ಅಲ್ಲ. ಆ ದಿನ ಮನೆಯಲ್ಲಿ ನಮ್ಮ ತಾಯಿ ನಾನು ಮಾತ್ರ ಇದ್ದೆವು. ಇನ್ನೂ ಚಿಕ್ಕ ವಯಸ್ಸಾದರೂ ಅವರನ್ನೆಲ್ಲ ಬಹು ಚೆನ್ನಾಗಿ ಸತ್ಕಾರ ಮಾಡಿದೆ. ಕ.ವೆಂ.ರಾ. ಅವರಿಗೆ ಬಳ ಸಂತೋಷವಾಯಿತು. ಓದಿನ ಬಗ್ಗೆ ವಿಚಾರಿಸಿದಾಗ, ವಿಷಯ ತಿಳಿದು "ಮುಂದೆ ಏನು ಮಾಡುತ್ತೀಯಮ್ಮ?" ಎಂದು ಕೇಳಿದರು. "ಮುಂದೆ ಓದಬೇಕೆಂಬ ಆಸೆ, ಆದರೆ...." ಎಂದು ನಿಂತಾಗ, ಕೂಡಲೇ ಅವರು "ಅಷ್ಟೇ ಸಾಕು, ನೀನು ಮೈಸೂರಿಗೆ ಬಂದುಬಿಡು" ಎಂದು ತಮ್ಮ ವಿಳಾಸವನ್ನು ಬರೆದುಕೊಟ್ಟರು. ಆ ವಿಳಾಸಕ್ಕೇ ನಾನು ಬರೆದದ್ದು. ಅವರೊಬ್ಬರ ಹೊರತು ಅವರ ಮನೆಯ ಯಾರ ಪರಿಚಯವೂ ಇರಲಿಲ್ಲ. ಈಗ ಅದನ್ನು ನೆನಸಿಕೊಂಡರೆ ನನಗೇ ಆಶ್ಚರ್ಯವಾಗುತ್ತದೆ. ಕಂಡಿಲ್ಲ ಕೇಳಿಲ್ಲದವರ ಮನೆಗೆ, ಅದೂ ಓದು ಮುಂದುವರಿಸುವುದಕ್ಕೆ ಹೇಗೆ ಹೋದೆನೋ! ಎಂದು.

ಅಂತೂ ೧೯೪೮ರ ಹೊತ್ತಿಗೆ – ಬಹುಶಃ ಮೇ – ಜೂನ್‌ನಲ್ಲಿ ನಾನು ಮೈಸೂರು ತಲುಪಿದೆ. ನಾನು ಬರುವ ವಿಷಯ ಇಲ್ಲಿ, ಮೈಸೂರಲ್ಲಿ ಮೊದಲೇ ತಿಳಿದಿತ್ತೇನೋ! ಸರಸ್ವತೀಪುರದಲ್ಲಿ ಒಂದು ಕೋಣೆ ಇರುವ ಮನೆಯಲ್ಲಿದ್ದವರು "ಪಾಪ! ಆ ಹುಡುಗಿ ಓದುವುಕ್ಕೆಂದೇ ಬರುತ್ತಾಳೆ. ಬೇರೆ ಒಂದು ಕೋಣೆ ಬೇಡವೇ?" ಎಂದು ಯೋಚಿಸಿ ಎರಡು ಕೋಣೆಯ ಮನೆಯನ್ನು ಚಾಮುಂಡಿಪುರದಲ್ಲಿ ನೋಡಿ ಅಲ್ಲಿ ಬದಲಾಯಿಸಿದರಂತೆ. ನಾನು ಬಂದು ೪-೫ ತಿಂಗಳ ನಂತರ ನನಗೆ ಇದು ತಿಳಿಯಿತು. ನಾನು ದಂಗಾದೆ. "ನನಗಾಗಿ ಇಷ್ಟು ಕಾಳಜಿ ವಹಿಸಿದರಲ್ಲ, ದೇವರೇ!" ಎಂದುಕೊಂಡಿದ್ದೆ ಅಷ್ಟೆ.

ಹಾವೇರಿಯಲ್ಲಿ ತುಂಬು ಸಂಸಾರ, ಕೂಡು ಸಂಸಾರ, ಅದು ಮನೆಯಲ್ಲ ಛತ್ರ ಎನ್ನಬಹುದು. ಯಾರೇ ಬರಲಿ ಊಟ ಮಾಡಿಯೇ ಹೋಗಬೇಕು. ನಮಗಂತೂ ಅವರೆದುರಿಗೆ ಮಾತಾಡುವ ಧೈರ್ಯವೇ ಇಲ್ಲ. ಈಗಿನ ಹುಡುಗರಂತೆ "ನನಗೆ ಇದು ಬೇಡ", "ನನಗೆ ಇದು ಸೇರುವುದಿಲ್ಲ" ಇತ್ಯಾದಿ ಹೇಳುವ ಪರಿಪಾಠವೂ ಇಲ್ಲ. ಸಾಲಾಗಿ ಕೂತು ತಟ್ಟೆಗೆ ಏನು ಬಡಿಸುತ್ತಾರೋ ಅದನ್ನು ಕೈಮುಗಿದು ಊಟ ಮಾಡುತ್ತಿದ್ದೆವು. ಎಲ್ಲರ ಮನೆಗಳಲ್ಲೂ ಆಗ ಇದೇ ಕ್ರಮ ಇತ್ತು.

ನನ್ನ ಬಾಲ್ಯವೆಲ್ಲ ಬೆಂಗಳೂರಲ್ಲಿ; ಮಿಡ್ಲ ಸ್ಕೂಲ್ ಅಲ್ಲೇ ಪೂರೈಸಿ ಹೈಸ್ಕೂಲ್ ವಿದ್ಯಾಭ್ಯಾಸ ಹಾವೇರಿಯಲ್ಲಿ ಮುಗಿಸಿ ಈಗ ಮೈಸೂರಿಗೆ ಉನ್ನತ ವಿದ್ಯಾಭ್ಯಾಸಕ್ಕೆ ಬಂದಿದ್ದು. ಬೆಂಗಳೂರಲ್ಲಿ ಇದ್ದುದರಿಂದ ನನಗೆ ತಮಿಳು ಅರ್ಥವಾಗುತ್ತಿತ್ತು. ಮಾತಾಡುವ ಅಭ್ಯಾಸವಿರಲಿಲ್ಲ. ಇಲ್ಲಿ ಮೈಸೂರಿನಲ್ಲಿ ಅಪ್ಪ (ಕ.ವೆಂ.ರಾ.ರನ್ನು ನಾನು ಹಾಗೆ ಕರೆಯುತ್ತಿದ್ದೆ.) ತಮಿಳಿನಲ್ಲಿ ಮಾತಾಡುವುದು ನನಗೆ ಚೆನ್ನಾಗಿ ಅರ್ಥವಾಗುತ್ತಿತ್ತು. ಯಾವ ಅಂಥ ದೊಡ್ಡ ಸಮಸ್ಯೆ ಇಲ್ಲದೆ ಜೀವನ ಸಾಗಿತು. ಹಾವೇರಿಯಲ್ಲಿದ್ದಂತೆಯೇ ಇಲ್ಲಿಯೂ ಒಂದು ಚಿಕ್ಕ ಛತ್ರವೇ. ಬಂದವರು ಬಂದ ಹಾಗೇ ಹೋದವರು ಹೋದ ಹಾಗೆ.

ನಾನು ಮನೆಗೆ ಬಂದ ದಿನ ಅಪ್ಪ ಅಡಿಗೆಮನೆಗೆ ಹೋಗಿ "ಇವಳು ಇನ್ನು ಮೇಲೆ ನಮ್ಮ ಮಗಳು. ಇಲ್ಲೇ ಇದ್ದು ಓದುತ್ತಾಳೆ" ಎಂದು ಅಮ್ಮನಿಗೆ ಹೇಳಿದ್ದು ಕೇಳಿಸಿತು. ಆ ತಾಯಿ ಎಂದೂ ನನ್ನನ್ನು ಬೇರೆಯಾಗಿ ಎಣಿಸಲಿಲ್ಲ. ಇದೂ ಒಂದು ಭಾಗ್ಯವೇ? ಜಗಳ ವಿರಸ ಆರಂಭವಾಗುವುದೇ ಹೆಂಗಸರಿಂದ. ಇಲ್ಲಿ ಅಂಥದ್ದೇನೂ ಒಂದು ಸಲವೂ ನಡೆಯಲಿಲ್ಲ. ನಾವು ತಾಯಿ ಮಗಳಂತಲ್ಲದೆ ಸ್ನೇಹಿತರಂತೆ ಇದ್ದೆವು. ಇದೂ ಒಂದು ಸೌಭಾಗ್ಯವೇ ಅಲ್ಲವೇ? ಸಂಜೆ ನಾನು ಕಾಲೇಜಿನಿಂದ ಬರುವವರೆಗೂ ಅವರು ಕಾದಿದ್ದು, ನಾನು ಬಂದ ನಂತರವೇ ಇಬ್ಬರೂ ಕಾಫಿ ಕುಡಿಯುತ್ತಿದ್ದುದು.

ನಾನು ಬಂದು ೮ ತಿಂಗಳಿಗೆ ಮನೆಯಲ್ಲಿ ಒಂದು ಹೆಣ್ಣುಮಗುವಿನ ಜನನವಾಯಿತು. ಅಪ್ಪ, ತಮ್ಮ ತಂಗಿಗೆ ಸಹಾಯಕ್ಕೆ ಬರಹೇಳಿ ಮೂರು ಕಾಗದ ಬರೆದರೂ ಯಾರಿಂದಲೂ ಉತ್ತರ ಬರಲಿಲ್ಲ. ಒಂದು ಸಂಜೆ ಕಾಫಿ ಕೊಟ್ಟು, ನಾನು ಒಳಗೆ ಹೋಗಿ ನನ್ನ ಕಾಫಿ ತಂದೆ. ಅಪ್ಪನ ಕಾಫಿ ಅಲ್ಲೇ ಇತ್ತು. "ಏನಾಯಿತು? ಏಕೆ ಹೀಗೆ ಕೂತಿರುವಿರಿ? ಕಾಫಿ ಆರಿ ಹೋಯಿತಲ್ಲ? ಬಿಸಿ ಮಾಡಿ ತರುತ್ತೇನೆ ಇರಿ" ಎಂದು ಹೇಳಿದಾಗಲೂ ಅವರಿಂದ ಯಾವ ಉತ್ತರವೂ ಬರಲಿಲ್ಲ. ತಕ್ಷಣ ನನಗೆ ಹೊಳೆಯಿತು – ಹಾವೇರಿಯಲ್ಲೂ ಹೀಗೆಯೇ ಇರುತ್ತಿತ್ತು. ಇಲ್ಲೂ ಅದೇ ಸಮಸ್ಯೆ! ನಾನು ಧೈರ್ಯವಾಗಿ ಅವರಿಗೆ "ಏನೂ ಯೋಚನೆ ಮಾಡಬೇಡಿ, ದೇವರಿದ್ದಾನೆ! ಹೇಗೋ ಆಗುತ್ತದೆ" ಎಂದೆ, ನಾನು ಮನೆಯ ಹಿರಿಮಗಳಲ್ಲ!

ಅದೇ ರೀತಿಯೇ ಆಯಿತು. ಹೆಣ್ಣುಮಗು ೧೯೪೯ ಮಾರ್ಚ್ ೯ಕ್ಕೆ ಆಯಿತು. ನಾನು ಬಂದು ಇನ್ನೂ ೭–೮ ತಿಂಗಳಾಗಿತ್ತು ಅಷ್ಟೇ. ಅಲ್ಲಿಗೆ ನನ್ನ ಪರೀಕ್ಷೆ ಮುಗಿದು ಎರಡು ದಿನಗಳಾಗಿದ್ದವು. ಮಾತು ಕೊಟ್ಟಂತೆ ಮಗುವಿಗೆ ಬಾಣಂತಿಗೆ ನೀರು ಊಟ ಪಥ್ಯ ಇತ್ಯಾದಿ

ಎಲ್ಲ ಸರಿಯಾಗಿ ನೋಡಿಕೊಳ್ಳಲು ಆಯಿತು. ಅಂತೂ ದೇವರು ಯಾರಿಂದ ಯಾವ ಕೆಲಸ ಹೇಗೆ ಎಲ್ಲಿ ಮಾಡಿಸುತ್ತಾನೋ! ಅಂತೂ ಕೆಲಸ ನಿಲ್ಲುವುದಿಲ್ಲ.

ಮಗುವಿನ ನಾಮಕರಣ ಇತ್ಯಾದಿ ಎಲ್ಲ ನನ್ನ ಮೇಲ್ವಿಚಾರಣೆಯಲ್ಲೇ ನಡೆಯಿತೆನ್ನಬೇಕು. ಅವರ ಕಡೆಯವರಾರೂ ಬರಲೇ ಇಲ್ಲ. ಈ ಮಗು ಹೆಚ್ಚಾಗಿ ನನ್ನನ್ನೇ ಹೆಚ್ಚಿಕೊಂಡಿತ್ತು. ಇದೂ ಒಂದು ಆಶ್ಚರ್ಯವೇ. ಅಮ್ಮ ಅಡಿಗೆ ಮನೆಯ ಕೆಲಸಕ್ಕೆ ಹೋದಾಗ ಈ ಮಗುವನ್ನು ನಾನೇ ನೋಡಿಕೊಳ್ಳಬೇಕಲ್ಲ! ತಾಯ ಹಾಲು ಅಷ್ಟಾಗಿ ಇಲ್ಲದ್ದರಿಂದ ಬಾಟಲ್ ಹಾಲು ಕುಡಿಸಲು ನಾನೇ ಬೇಕಾಯಿತು.

ಈಗಿನಂತೆ ಗ್ಯಾಸ್, ಕುಕ್ಕರ್ ಇತ್ಯಾದಿ ಸೌಲಭ್ಯಗಳಿಲ್ಲದ ಆ ಕಾಲದಲ್ಲಿ ಅಡಿಗೆ ಮಾಡುವುದೇ ಬಹು ಪ್ರಯಾಸ. ನಿತ್ಯ ಒರಳಲ್ಲಿ ತಿರುವುದುದಂತೂ ಇದ್ದೇ ಇರುತ್ತಿತ್ತು. ಮಗು ಮಲಗಿದಾಗ ನಾನು ಈ ಕೆಲಸ ಮಾಡಿಕೊಡುತ್ತಿದ್ದೆ. ಮನೆಗೆ ಬರುವಹೋಗುವವರಂತೂ ಇದ್ದದ್ದೇ. ಅಲ್ಲಿ ಅಪ್ಪ, ಅಮ್ಮ, ನಾನು, ಇಬ್ಬರು ಗಂಡುಮಕ್ಕಳು, ಈ ಮಗು. ಇಷ್ಟೇ ಜನ ಊಟ ಮಾಡಿದ ದಿನವೇ ಇಲ್ಲವೆನ್ನಬೇಕು. ಇಷ್ಟು ಖರ್ಚು ಹೇಗೆ ನಿಭಾಯಿಸುತ್ತಿದ್ದರೋ! ಆದರೆ ಆಗಿನ ಕಾಲ ಈಗಿನದಕ್ಕೆ ಹೋಲಿಸಿದರೆ, ನಿಜಕ್ಕೂ ಸುಭಿಕ್ಷ ಕಾಲವೇ.

ನಾನು ಈ ಮನೆಗೆ ಹಿರಿಯಮಗಳಾಗಿ ಬಂದುದು ಅಪ್ಪನ ಸ್ನೇಹಿತರಿಗೆಲ್ಲ ತಿಳಿದ ವಿಷಯ. ಇಂಟರ್‌ಮೀಡಿಯೆಟ್ ಪಾಸಾದ ವಿಷಯ ಅವರ ಸ್ನೇಹಿತರೇ ಮನೆಗೆ ಬಂದು ಹೇಳಿದರು. ನಿಜವಾಗಿ ಪುಣ್ಯವಂತೆಯಲ್ಲವೇ? ನಾನು ಪಾಸಾದುದಕ್ಕೆ ಮನೆಯಲ್ಲಿ ಸತ್ಕಾರವಾಯಿತು. ೭–೮ ಜನ ಸ್ನೇಹಿತರಿಗೆ. ನಾನೂ ಅಮ್ಮನೂ ಸೇರಿ ಎಲ್ಲ ಮಾಡಿ ಬಡಿಸಿದೆವು. ಅತಿಥಿಗಳೆಲ್ಲ ಬಹುಸಂತೋಷದಿಂದ ಹರಸಿ ಹೋದರು.

ಮುಂದಿನ ವಿದ್ಯಾಭ್ಯಾಸ ಹೇಗೋ ಏನೋ ಎಂದು ಯೋಚಿಸುತ್ತಾ ನಾನು ೩–೪ ದಿನ ಹಾವೇರಿಗೆ ಹೋಗಿದ್ದೆ. ಅಲ್ಲಿ ನನ್ನ ತಂಗಿಯ ಮದುವೆ ಸಮಾರಂಭ ನಡೆಯುತ್ತಿತ್ತು. ನನ್ನನ್ನು ಒಂದು ಮಾತೂ ಕೇಳದೆ ತಂಗಿಯ ಮದುವೆ ಆಯಿತು. "ನೀನು ಇನ್ನೇಕೆ ಮೈಸೂರಿಗೆ ಹೋಗಬೇಕು? ಇಲ್ಲೇ ಇರು, ೩–೪ ತಿಂಗಳಲ್ಲಿ ನಿನ್ನ ಮದುವೆಯೂ ಆಗುತ್ತದೆ" ಎಂದು ಎಲ್ಲರೂ ಹೇಳಿದಾಗ, ನನಗೆ ಏನು ಅನ್ನಿಸಿರಬೇಕು ಎಂಬ ಬಗ್ಗೆ ಅವರಿಗೆ ಕಿಂಚಿತ್ತೂ ಯೋಚನೆ ಇರಲಿಲ್ಲ. "ನಾನೇನು ಮಾಡಲಿ ದೇವರೆ!" ಎಂದು ಮೌನವಾಗಿದ್ದೆ. ಇದೆಲ್ಲವನ್ನೂ ಮೊದಲೇ ತಿಳಿದಿದ್ದರೆಂಬಂತೆ ಅಪ್ಪನ ಕಾಗದ ಬಂದೇಬಿಟ್ಟಿತು. "ತಂಗಿಯ ಮದುವೆ ಆಯಿತಲ್ಲಾ ಮಗಳೆ! ನೀನು ನಾಳೆ ಸಂಜೆ ಹೊರಟು ಬಾ, ನಾನು ನಿಲ್ದಾಣಕ್ಕೆ ಬಂದಿರುತ್ತೇನೆ." ಮನೆಯವರೆಲ್ಲರ ಬಾಯಿಗೆ ಬೀಗ ಬಿತ್ತು! ನಾನು ಮೈಸೂರಿಗೆ ಬಂದಾಯಿತು.

ಶ್ರೀ ರಾಮಕೃಷ್ಣರು ತಮ್ಮ ಪ್ರಿಯ ಭಕ್ತರ ಮನಸ್ಸನ್ನು ತಾವು ಇದ್ದಲ್ಲಿಂದಲೇ ತಿಳಿದು, ಅದಕ್ಕೆ ಪರಿಹಾರ ನೀಡಿ ಸಮಸ್ಯೆ ಬಿಡಿಸುತ್ತಿದ್ದರೆಂದು ಅವರ ಜೀವನ ಚರಿತ್ರೆಯಲ್ಲಿ ನಾನು ಓದಿದ್ದೆ. ನನಗೂ ಹಾಗೆಯೇ ಈ ರಾಮ (ಕವೆಂರಾ) ಮಾಡಿದ. ಶ್ರೀ ರಾಮಕೃಷ್ಣ ಅಲ್ಲ, ಬರೀ

ರಾಮ! ಇಂದಿಗೂ ಆಗಾಗ ನನ್ನ ಸಮಸ್ಯೆ ಪರಿಹಾರ ನೀಡಲು ಕನಸಿನಲ್ಲಿ ಬರುತ್ತಾರೆ. ಜೀವನದಲ್ಲಿ ತುಂಬ ಜಿಗುಪ್ಸೆಪಟ್ಟ ದಿನವಂತೂ ಶತಸಿದ್ಧ ಅವರು ಕನಸಿನಲ್ಲಿ ಬರುವುದು "ಯಾಕಮ್ಮ ಇಷ್ಟು ಬೇಸರ? ನೀನು ಮಾಡಿದ್ದೆಲ್ಲ ಸರಿಯಾಗಿಯೇ ಇದೆ" ಎಂದು ಸಾಂತ್ವನ ನೀಡುತ್ತಾರೆ!

ಮಾರ್ಕ್ಸ್‌ಕಾರ್ಡ್ ತೆಗೆದುಕೊಂಡು ನೋಡಿದೆ. ನಾನೆಣಿಸಿದಕ್ಕಿಂತ ನಂಬರು ಹೆಚ್ಚಾಗಿಯೇ ಬಂದಿತ್ತು. ಮುಂದೇನು ಮಾಡುವುದು ಎಂದು ಯೋಚಿಸುತ್ತಿರುವಾಗ ಅಪ್ಪನ ಪ್ರೀತಿಯ ಕೈ ನನ್ನ ತಲೆಯ ಮೇಲಾಡಿತು [ಇದು ಅವರ ಪದ್ಧತಿ] ತಲೆ ಎತ್ತಿ ನೋಡಿದೆ. "ಹೋಗಮ್ಮ, ಕಾಲೇಜಿಗೆ ಹೋಗಿ ಒಂದು Form ತಂದುಬಿಡು" ಎಂದು ಹೇಳಿ, ತಾವೂ ನನ್ನ ಜತೆಗೆ ಹೊರಟರು. ಅವರು ನನ್ನ ಜತೆಗೆ! ಅವರೇ ಹೋಗಿ ಒಂದು ಅರ್ಜಿ ತಂದು, ನನ್ನ ಕೈಯಿಂದ ಎಲ್ಲ ತುಂಬಿಸಿ, ಫೀಯೊಂದಿಗೆ ಅದನ್ನು ಕೊಟ್ಟೂ ಬಂದರು, ಒಂದು ರಶೀದಿಯೊಂದಿಗೆ! ನಾನು ಮುಂದಿನ ಮಾವಿನಮರದಡಿ ಕುಳಿತಿದ್ದೆ. ಅಂದೇ ನಾನು Kannada (Hons) ಗೆ ಸೇರಿಯಾಯಿತು.

ಕನ್ನಡವೇ ಏಕೆ? ಇದರಲ್ಲೂ ಒಂದು ಗುಟ್ಟು. ಕನ್ನಡದಲ್ಲಿ ನಂಬರು ಚೆನ್ನಾಗಿ ಬಂದದ್ದಂತೂ ಸರಿಯೇ! ಆದರೆ ನಾನು ಕನ್ನಡ ಮುಂದುವರಿಸಿದರೆ ಪುಸ್ತಕಗಳನ್ನು ಕೊಳ್ಳುವುದಿರಲಿಲ್ಲ. ಪುಸ್ತಕಗಳ ಖಜಾನೆಯೇ ಮನೆಯಲ್ಲಿತ್ತು! ಅಂತೂ ತಿಂಗಳಿಗೆ ೭೧/೨ ರೂ. ಕೊಡುತ್ತ ಓದು ಮುಂದುವರಿಸಿದೆ. ಮಾನ್ಯ ಕುವೆಂಪು, ಡಿ.ಎಲ್.ಎನ್., ಎಸ್.ವಿ.ಪಿ., ಕ.ವೆಂ.ರಾ., ಇವರೆಲ್ಲರ ಕೈಕೆಳಗೆ ಓದುವ ಸೌಭಾಗ್ಯ ನನ್ನದಾಯಿತು. ದೇವರಿಗೆ ಎಷ್ಟು ನಮಸ್ಕಾರ ಹಾಕಿದರೂ ಸಾಲದು! ಅವನು ಮಾಡುವುದೆಲ್ಲ ನಮ್ಮ ಒಳ್ಳೆಯದಕ್ಕೇ!

ಈ ರೂ. ೭೧/೨ ಹಣವನ್ನೂ ಆಗಾಗ ಅಪ್ಪ ತಾವೇ ಕೊಡುತ್ತಿದ್ದರು. ಊರಿಂದ ಎಂ.ಓ. ಸರಿಯಾಗಿ ಬಾರದ್ದರಿಂದ, ಇದಕ್ಕಾಗಿ ನಾನು ಆ ತಂದೆಯನ್ನು ದೂಷಿಸುವುದಿಲ್ಲ; ಅಲ್ಲಿನ ಸ್ಥಿತಿಯೇ ಹಾಗೆ ಇತ್ತು. ಒಬ್ಬರ ಸಂಪಾದನೆ (ಅದೂ ೮೦ ರೂ. ಇದ್ದಿತೋನೋ ಅದೂ ನನಗೆ ತಿಳಿಯದು. ಕೇಳುವ ಧೈರ್ಯವೂ ಇರಲಿಲ್ಲ) ಮನೆಯಲ್ಲಿ ೧೨ ಜನ ಸರಿಯಾಗಿ ಊಟ ಮಾಡುವವರು! ಹಬ್ಬ – ಹರಿದಿನಗಳಂತೂ ಇದ್ದದ್ದೇ ಹತ್ತರಗೂಡ ಹನ್ನೊಂದು ಎಂಬಂತೆ ಊಟ ಆಗಬಹುದು. ಆದರೆ ಕೈಯೆತ್ತಿ ದುಡ್ಡು ಕೊಡುವುದು ಕಷ್ಟವೇ. ಹೀಗಿರುವಾಗ ನಾನು ಏಕೆ ಕಾಲೇಜು ಸೇರಿದೆನೋ ಎಂದುಕೊಳ್ಳುತ್ತಿದ್ದೆ. "ನಂಬಿ ಕರೆದಡೆ ಓ ಎಂಬ ಶಿವನು" ಇಲ್ಲಿ ಶಿವನಲ್ಲ ಈ ರಾಮ ನನ್ನ ಸಹಾಯಕ್ಕೆ ಬಂದುದು. ಎಷ್ಟು ಜನರಿಗೆ ಈ ರೀತಿಯ ಸಹಾಯ ಸಿಕ್ಕೀತು! ಭಕ್ತ ನಿರೀಕ್ಷಿಸಿದ ರೂಪದಲ್ಲಿ ಭಗವಂತ ಬರುವುದಿಲ್ಲವಲ್ಲ?

ಅಂತೂ ಆನರ್ಸ್ ಪರೀಕ್ಷೆ ಕಟ್ಟಾಯಿತು. ತಕ್ಕಮಟ್ಟಿಗೆ ಚೆನ್ನಾಗಿ ಮಾಡಿದ್ದೆ. ಫಲಿತಾಂಶ ಹೊರಬಿತ್ತು. ಅಪ್ಪ ತಾವೇ ಹೋಗಿ ಫಲಿತಾಂಶ ನೋಡಿ ಮಾರ್ಕ್ಸ್‌ಕಾರ್ಡ್‌ನ್ನೂ ತಂದೇಬಿಟ್ಟರು. ಎಷ್ಟು ಸಂತೋಷ ಅವರಿಗೆ, ಅಮ್ಮನಿಗೆ ಅಂದು! "ಅಂತೂ ಇಲ್ಲಿಗೆ ಬಂದು ಯಶಸ್ವಿ ಯಾದೆಯಮ್ಮ" ಇಬ್ಬರ ಆಶೀರ್ವಾದ. "ಇದೆಲ್ಲ ನಿಮಗೆ ಸೇರಿದ್ದಲ್ಲವೇ?" ನಾನು ಹೇಳಿದೆ.

ಆನರ್ಸ್ ನನಗೆ ಚೆನ್ನಾಗಿ ನಂಬರು ಬಂದು ನಾನು Class II ಬಂದಿದ್ದೆ. ಫಸ್ಟ್ ವಿದ್ಯಾರ್ಥಿಗೆ ಕೂಡಲೇ ಕೆಲಸ ಸಿಕ್ಕ ಕಾರಣ, ಅವನಿಗೆ ಬರಬೇಕಾದ ವಿದ್ಯಾರ್ಥಿ ವೇತನ ರೂ. ೧೨೦/- ನನಗೆ ಬಂದಿತು. ಜತೆಗೆ ಫೀ ರಿಯಾಯಿತಿಯೂ ಸಿಕ್ಕಿತು. ನನಗಂತೂ ಎಂ.ಎ. ಓದುವ ಯೋಚನೆ ಇರಲೇ ಇಲ್ಲ. ಈ ವಿದ್ಯಾರ್ಥಿವೇತನವೇ ನನ್ನನ್ನು ಎಂ.ಎ. ಓದಲು ಮುಂದೆ ತಳ್ಳಿತು.

"ಫೀಜು ಹೇಗೂ ಇಲ್ಲ, ಪರೀಕ್ಷೆಯ ನೂರು ರೂಪಾಯಿಯನ್ನು ಅವರೇ ಕೊಟ್ಟರಲ್ಲ" ಹೀಗೆ ಯೋಚಿಸುತ್ತ ಇರುವಾಗಲೇ ಈ ಹಣ Aprilಗೆ ಕೊಡುವರೆಂದು ತಿಳಿಯಿತು. ಮಾರ್ಚ್‌ನಲ್ಲೇ ಎಂ.ಎ. ಪರೀಕ್ಷೆಯ ಹಣ ತುಂಬುಬೇಕಿತ್ತು. ಯಾರನ್ನು ಕೇಳುವುದು? ಒಂದಲ್ಲ ಎರಡಲ್ಲ ಪೂರಾ ನೂರಒಂದು ರೂಪಾಯಿ! ಅಪ್ಪ ಆದರೂ ಎಲ್ಲಿಂದ ತಂದಾತು? ಒಂದು ವರ್ಷದ ಓದು ವ್ಯರ್ಥವಾಗುವುದಲ್ಲ! ಇನ್ನೇನು ಮಾಡಲಿ? ಹಾವೇರಿಯಿಂದಂತೂ ಇದು ನಿರೀಕ್ಷೆ ಮಾಡುವಂತಿಲ್ಲ. ಅವರನ್ನು ದೂಷಿಸಿ ಪ್ರಯೋಜನವೂ ಇಲ್ಲ. ಅವರಿಗೂ ಇದೇ ಸಮಸ್ಯೆಯಲ್ಲವೇ? ಹೀಗೆ ತಲೆ ಕೆಳಗೆ ಹಾಕಿ ಕೂತಿದ್ದೆ.

ಅಪ್ಪ ಬಂದದ್ದು ನನಗೆ ತಿಳಿಯಲೇ ಇಲ್ಲ. ಅವರು ಬಂದು ೫-೬ ನಿಮಿಷವೇ ಆಗಿರಬಹುದು. ಪದ್ಧತಿಯಂತೆ ತಲೆಯ ಮೇಲೆ ಕೈಯಾಡಿಸುತ್ತಾ "ಏನಮ್ಮ? ಏನಾಯಿತು?" ಏನು ಹೇಳಲಿ ನಾನು? ತಲೆ ಬಗ್ಗಿಸಿ ಕಣ್ಣೀರು ಒರಸಿಕೊಂಡೆ ಅಷ್ಟೆ.

ಅವರಿಗೆ ಏನು ಅನ್ನಿಸಿತೋ! ಅಡಿಗೆ ಮನೆಗೆ ಹೋದಾಗ ಅವರಿಗೆ ವಿಷಯ ತಿಳಿಯಿತು. ಅವರಿಗೂ ತಲೆ ಬಿಸಿ ಅಲ್ಲವೇ? ಮಾರನೆಯ ಬೆಳಗ್ಗೆ ೧೦ ಗಂಟೆಗೆ ಮನೆಯಿಂದ ಹೊರಟು ಅವರ ಸ್ನೇಹಿತರಿಂದ ಹಣ ಪಡೆದು ಫಾರಂ ತುಂಬಿ ಮನೆಗೆ ಬಂದರು ೧೧/೧೨ ಗಂಟೆಗೆ. ಎಂದೂ ಅಷ್ಟು ಬೇಗ ಬಂದವರಲ್ಲ! ನಾನು ಮನೆಯಲ್ಲೇ ಇದ್ದೆ. ಬಂದವರೇ ಬೆನ್ನ ಮೇಲೆ ಕೈಯಾಡಿಸುತ್ತ ರಶೀದಿ ಕೊಟ್ಟು "ಏಳು ಏಳು, ಹೋಗಿ ಓದು, ನಿಶ್ಚಿಂತೆಯಾಗಿ ಓದು" ಎಂದು ಹೇಳುತ್ತ ಪದ್ಧತಿಯಂತೆ ತಲೆಯ ಮೇಲೆ ಕೈಯಾಡಿಸಿದರು. ಬೆಟ್ಟದಂತಿದ್ದ ನನ್ನ ಸಮಸ್ಯೆ ಬಿಸಿಲಿಗೆ ಮಂಜು ಕರಗುವಂತೆ ಕರಗಿ ನೀರಾಯಿತು. ತಕ್ಷಣ ಅವರ ಪಾದ ಮುಟ್ಟಿ ನಮಸ್ಕರಿಸಿದೆ. ನಾನು ಧನ್ಯೆ ಅಲ್ಲವೇ? ಇಂಥವರು ಈಗ ಎಲ್ಲಿ ಇದ್ದಾರೆ?

ಹಾವೇರಿ ಮುನಸಿಪಲ್ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದ ನನ್ನ ಆ ತಂದೆ ನಿವೃತ್ತ ರಾಗುವುದು ಹತ್ತಿರ ಬಂದಿತ್ತು. ಅದು ಪೆನ್‌ಶನ್ ಕೊಡುವಂಥ ಕೆಲಸ ಅಲ್ಲ. ಮುಂದೆ ರಥ ಸಾಗುವುದು ಹೇಗೆ? ಮಾನ್ಯ ಡಿವಿಜಿಯವರ ಮಂಕುತಿಮ್ಮ "....ಕುದುರೆ ನೀನು ಬೇಕೆಂದಕಡೆಗೋಡು" ಎಂದು ಹೇಳಿದ್ದ. ಆದರೆ ಆ ಕುದುರೆಗೂ ಹುಲ್ಲು ನೀರು ಸಿಕ್ಕರಲ್ಲವೇ ಓಡುವುದು?

ಈಗ ಈ ಕುದುರೆ ಹುಲ್ಲು ನೀರು ಹುಡುಕಬೇಕು. ದಾಸರು ಇದಕ್ಕೂ ಒಂದು ದಾರಿ ತೋರಿಸಿದ್ದಾರಲ್ಲ! "ತಲ್ಲಣಿಸದಿರು ಕಂಡ್ಯ ತಾಳು ಮನವೇ? ಎಲ್ಲರನು ರಕ್ಷಿಪನು." "ಈಸಬೇಕು ಇದ್ದು ಜಯಿಸಬೇಕು", ನಿಜ ಎಷ್ಟು ದೂರ ಈಸುವುದು?

ಎಂ.ಎ. ಮುಗಿಸಿದಾಗ ನನಗೆ ಕೆಲಸಕ್ಕೆ ಸೇರುವ ಯೋಜನೆ ಕಿಂಚಿತ್ತೂ ಇರಲಿಲ್ಲ. ಆದರೆ ದೇವರ ಕೈವಾಡ ಬೇರೆಯೇ ಇತ್ತಲ್ಲ! ಯಾರಿಂದ ಯಾವ ಕೆಲಸ ಹೇಗೆ ಮಾಡಿಸಬೇಕು ಎಂಬುದು ನಾವು ಹುಟ್ಟಿದಾಗಲೇ ನಿರ್ಧಾರವಾಗಿರುತ್ತದಲ್ಲ. ಅದನ್ನು ಹೇಗೆ ಮೀರುವುದು?

ಇಲ್ಲೂ ಹಾಗೆಯೇ ಆಯಿತು. ಎಂ.ಎ. ಫಲಿತಾಂಶ ಬಂತು. ನಾನು ಪಾಸಾಗಿದ್ದೆ. ಎಲ್ಲರ ತಲೆಭಾರ ಕಮ್ಮಿಯಾಯಿತು. ಯಥಾಪ್ರಕಾರ ಅಪ್ಪನ ೧೫–೨೦ ಜನ ಸ್ನೇಹಿತರು 'ಪಾರ್ಟಿ' ಕೇಳಿದರು. ಎಲ್ಲ ಮೊದಲಿನಂತೆಯೇ ಆಯಿತು. ಒಂದು ಮನಸ್ಸಿಗೆ ವ್ಯಥೆಯುಂಟು ಮಾಡುವ ವಿಷಯ – ಇಲ್ಲಿನ ನನ್ನ ತಮ್ಮ ದೊರೆಸ್ವಾಮಿ ಡಿಪ್ಲೋಮೊಗೆ ಕೂತಿದ್ದು ಪಾಸಾಗಲಿಲ್ಲ. ಅಮ್ಮನಿಗೆ ದುಃಖವೂ ಆಯಿತು. ಆದರೆ ಅದನ್ನು ಹಿಡಿದಿಟ್ಟು ಅಪ್ಪನ ಸ್ನೇಹಿತರಿಗಾಗಿ, ಅದೂ ನನ್ನ ಸಲುವಾಗಿ, ಸಿಹಿ ಅಡಿಗೆ ಸಿದ್ಧ ಮಾಡಿದರು! ನಾನು ಅವರ ಜತೆಜತೆಗೆ ಕೆಲಸ ಮಾಡಿದೆ. ಪುಳಿಯೋಗರೆ, ಪೊಂಗಲು, ಆಂಬೊಡೆ, ಕಾಫಿ ಇತ್ಯಾದಿ ಎಲ್ಲರಿಗೂ ಸರಬರಾಜಾಯಿತು. ಇದು ಆ ತಾಯಿಗೆ ನನ್ನ ಮೇಲಿನ ಪ್ರೀತಿಯನ್ನು ತೋರಿಸುವುದಿಲ್ಲವೇ? ಇನ್ನು ಯಾರೇ ಆಗಿದ್ದರೂ ಇದು ಹೀಗೆ ನಡೆಯುತ್ತಿರಲಿಲ್ಲ.

ಅವರ ಮನಸ್ಸಿನಲ್ಲಿದ್ದ ವಿಚಾರ: "ನಮ್ಮ ಈ ಮಗಳು ಇನ್ನೂ ತುಂಬ ಚಿಕ್ಕವಳು. ಅವಳ ಮದುವೆ ನಾವು ಮಾಡುತ್ತೇವೋ ಇಲ್ಲವೋ! ಈ ದೊಡ್ಡ ಮಗಳ ಮದುವೆ ನಾವೇ ಮಾಡೋಣ. ಹೇಗೂ ಅವಳು ನಮ್ಮ ಮಗಳೇ ಅಲ್ಲವೇ?" ಹೀಗೆ ಅವರಿಬ್ಬರೂ ಯೋಚಿಸಿದ್ದರೆಂದು ಬಹಳ ದಿನಗಳ ನಂತರ ನನಗೆ ತಿಳಿಯಿತು.

ಅವರ ಎಲ್ಲ ಲೆಕ್ಕ ತಲೆಕೆಳಗಾಯಿತು. ನಾನು ಕೆಲಸಕ್ಕೆ ಸೇರಬೇಕೆಂದೂ ನನ್ನ ಆ ಸಂಸಾರದ ನೊಗಕ್ಕೆ ಹೆಗಲನ್ನೀಯಬೇಕೆಂದೂ ದೇವರೇ ನಿರ್ಧಾರ ಮಾಡಿರುವಾಗ ನಮ್ಮ ಯೋಚನೆ ಏನು ನಡೆದೀತು? ಅದರ ಎದುರು ನಾವೆಲ್ಲಿ? ಇಂಗ್ಲಿಷಿನಲ್ಲಿ ಹೇಳುವಂತೆ Man proposes God disposes ಇಲ್ಲಿ ಮ್ಯಾನ್ ಅಲ್ಲ ಉಮನ್ ಅಷ್ಟೆ ವ್ಯತ್ಯಾಸ.

ಸರಿ, ನಾನು ಮೈಸೂರಿಗೆ ಬಂದು ಓದು ಮುಂದುವರಿಸಿದಾಗ ಆದ ಆರೋಪ ದೂಷಣೆಗಳೇ ಈಗ ಮತ್ತೆ ಚಿಗುರಿಕೊಂಡು ತಲೆ ಎತ್ತಿದವು. "ಎಂಥೆಂಥವರಿಗೋ ಆಗದ ಕೆಲಸ ಈ ಹುಡುಗಿ ಮಾಡುತ್ತಾಳಂತೋ?" "ತಮ್ಮನನ್ನು ಕರೆದುಕೊಂಡು ಹೋದದ್ದು ತನಗೆ ಜತೆ ಇರಲೆಂದು ಅಷ್ಟೆ. ಎಷ್ಟು ದಿನ ಓದಿಸುತ್ತಾಳೋ ನೋಡೋಣ" ಇತ್ಯಾದಿ ಇತ್ಯಾದಿ.

ನನ್ನ ಮೊತ್ತ ಮೊದಲ ನೌಕರಿ ಶಿವಮೊಗ್ಗದ ಒಂದು ಕಾನ್ವೆಂಟಿನಲ್ಲಿ. ಅಲ್ಲಿ ೧–೨ ತಿಂಗಳು ಕೆಲಸ ಮಾಡುವುದರಲ್ಲೇ ಏನೇನೋ ನಡೆದು, ಅಲ್ಲಿಂದ ಬಂದೆ, ಮೈಸೂರಿಗೆ ತಮ್ಮನೊಂದಿಗೆ. ಅಲ್ಲಿಗೆ ಸರಿಯಾಗಿ ಯಾದಗಿರಿಯ ಶಂಕರ್ ಕಾಲೇಜಿನಲ್ಲಿ ನನಗೆ ನೇಮಕಾತಿಯ ಕಾಗದ ಬಂತು. ಮತ್ತೆ ಗಂಟುಮೂಟೆ ಕಟ್ಟಿದೆ. ಅಲ್ಲಿಯೇ ತಮ್ಮನಿಗೂ Intercom ಗೆ ಭರ್ತಿ ಮಾಡಿಸಿ ಆಯಿತು. ಈ ಕೆಲಸ ಒಂದು ವರ್ಷಕ್ಕೆ ಮಾತ್ರ. ಹೀಗಾಗಿ March ೩೦ಕ್ಕೆ ಮತ್ತೆ

ಮೈಸೂರಿಗೆ. ಇಲ್ಲಿ ೪-೮ ದಿನ ಇರುತ್ತಿರುವಂತೆ ಕಾನಕಾನಹಳ್ಳಿಯ Rural Collegeನಲ್ಲಿ ಕನ್ನಡ ಅಧ್ಯಾಪಕಿಯ ಕೆಲಸ ಸಿಕ್ಕಿತು. ಅದು ಚೆನ್ನಾಗಿ ನಡೆಯಿತು. ಎರಡು ವರ್ಷ. ಪ್ರತಿ ಶನಿವಾರ ಮೈಸೂರಿಗೆ ಹೋಗಿ ಸೋಮವಾರ ಬೆಳಗ್ಗೆ ನಮ್ಮ ಕೆಲಸಕ್ಕೆ ಹಾಜರಾಗುತ್ತಿದ್ದೆ. ಶನಿವಾರ ರಾತ್ರಿಗೆ ಅವರೆಕಾಳು ರೊಟ್ಟಿ ಎಲ್ಲರಿಗೂ ಮಾಡಿಕೊಟ್ಟು, ಕಲಸಿದ ಹಿಟ್ಟನ್ನು ಹಾಗೇ ಇಟ್ಟು ನನಗಾಗಿ ಕಾದಿರುತ್ತಿದ್ದರು ಅಮ್ಮ. ನಾನು ಬಂದ ಕೂಡಲೆ ಒಲೆ ಸರಿ ಮಾಡಿ ಬಿಸಿ ಬಿಸಿ ರೊಟ್ಟಿ, ಚಟ್ನಿ, ಮೊಸರು ನನಗೆ ಕೊಡುತ್ತಿದ್ದರು. ಯಾವ ಜನ್ಮದ ಮೈತ್ರಿಯೋ ಇದು! ತಂದೆತಾಯಿಯರ ಪ್ರೀತಿ ನಿಜವಾಗಿ ನನಗೆ ಸಿಕ್ಕಿದ್ದು ಮೈಸೂರಲ್ಲೇ. ಹಾವೇರಿಯಲ್ಲಿ ಅದು ಸಿಗಲಿಲ್ಲವೆಂದೂ ನಾನು ದೂರುವುದು ತಪ್ಪಾಗುತ್ತದೆ. ಹಿಂಡು ಜನ ಇರುವ ಮನೆಯಲ್ಲಿ ಇದು ಹೇಗೆ ಸಾಧ್ಯ? ಅವರಿಗೆ ಪ್ರೀತಿಯೇ ಇರಲಿಲ್ಲವೆಂದಲ್ಲ; ಅದು ಬೇರೆ, ಇಲ್ಲಿ ಇದು ಬೇರೆ ಅಷ್ಟೆ.

೧೯೫೭ರಲ್ಲಿ ನಾನು ಶಾರದಾ ವಿಲಾಸ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕಿಯಾದೆ. ಮನೆಯಲ್ಲಿ ಎಲ್ಲರಿಗೂ ಸಮಾಧಾನ. ಎರಡು ವರ್ಷ ಬಹಳ ಸುಖವಾಗಿ ಜೀವನ ಸಾಗಿತು.

೧೯೫೯ರಲ್ಲಿ ಅಪ್ಪ ನಿವೃತ್ತರಾದರು. ಅದೇ ವರ್ಷ ದೆಹಲಿ ವಿಶ್ವವಿದ್ಯಾಲಯದಲ್ಲಿ ಸೌತ್ ಇಂಡಿಯನ್ ಲಾಂಗ್ವೇಜಸ್ ಪ್ರಾರಂಭಿಸಬೇಕೆಂದು, ಅಂದಿನ V.C. ನಿರ್ಧರಿಸಿದರು. ಆಗ ಇಂಟರ್‌ವ್ಯೂಗೆ ಅಪ್ಪ ಹೋಗಿದ್ದರು. ಆಗಲೇ ಅವರು ಕನ್ನಡ ಅಧ್ಯಾಪಕರೆಂದು ಅಲ್ಲಿಯೇ ತಿಳಿಯಿತು. ಅಪ್ಪ ಮೈಸೂರಿಗೆ ಬಂದು ಈ ವಿಷಯ ಹೇಳಿದಾಗ ಮನೆಯಲ್ಲಿ ದೊಡ್ಡ ಕೋಲಾಹಲವೇ ನಡೆಯಿತು. "ಅಷ್ಟು ದೂರ ಏಕೆ ಹೋಗಬೇಕು? ಇದ್ದುದರಲ್ಲೇ ಜೀವನ ನಡಸುತ್ತ ಇಲ್ಲೇ ಇರಬಾರದೇ?" ಎಂದು ಎಲ್ಲರೂ ಹೇಳುವವರೇ. ಆಗ ಅಪ್ಪನಿಗೆ ಉತ್ತೇಜನ ಕೊಟ್ಟವಳು ನಾನು ಒಬ್ಬಳೇ. ಕರ್ನಾಟಕದಿಂದ ದೆಹಲಿ ವಿಶ್ವವಿದ್ಯಾಲಯಕ್ಕೆ ಹೋಗುವ ಸಂತೋಷ ಮಿಕ್ಕವರಿಗಾಗಲೇ ಇಲ್ಲ; ನನಗಂತೂ ಬಹಳ ಸಂತೋಷವಾಯಿತು. ನಾನು ಅಪ್ಪನಿಗೆ ಹೇಳಿದೆ "ನೀವು ಹೋಗಿ ದೆಹಲಿಗೆ; ಇಲ್ಲಿ ನಾನು ನಿಭಾಯಿಸುತ್ತೇನೆ" ಎಂದು ಉತ್ತೇಜಿಸಿದೆ. ಅಮ್ಮನಿಗೆ ಸ್ವಲ್ಪನೂ ಇಷ್ಟವಿಲ್ಲ. ಆಗ ಅಪ್ಪ ಹೇಳಿದ್ದರು – "ಇನ್ನೂ ಈ ಇಬ್ಬರ ವಿದ್ಯಾಭ್ಯಾಸ ಮುಗಿದಿಲ್ಲ. ಇದು ಇನ್ನೂ ಚಿಕ್ಕದು ಇದರ ಓದು ಮದುವೆ ಎಲ್ಲದಕ್ಕೂ ಹಣ ಬೇಡವೇ." ಅಂತೂ ಅವರು ದೆಹಲಿಗೆ ಮೈಸೂರಿಂದ ಜುಲೈ ೧೦ನೇ ತಾರೀಖು ಹೊರಟರು.

ಬೇಸಿಗೆ ರಜ ಕಳೆದು ಜುಲೈ ೧೬ಕ್ಕೆ ವಿಶ್ವವಿದ್ಯಾಲಯ ಪ್ರಾರಂಭವಾಗುವುದು ದೆಹಲಿಯಲ್ಲಿ. ಅಂತೂ ಅಪ್ಪ ಅಲ್ಲಿಗೆ ಹೋಗಿ Gwyer Hall ನ ಕೋಣೆಯೊಂದರಲ್ಲಿ ಸ್ಥಾಪಿತಗೊಂಡರು.

ಇಲ್ಲಿ ನಮ್ಮ ಸಂಸಾರ ಹೇಗೆ ಸಾಗಿತೋ ದೇವರೇ ಬಲ್ಲ. ಹಾವೇರಿಯಲ್ಲಿ ಇಬ್ಬರು ತಮ್ಮಂದಿರ ಓದು, ಇಬ್ಬರು ಚಿಕ್ಕ ತಂಗಿಯರು, ತಾಯಿ ತಂದೆ – ಇಷ್ಟು ಜನರ ಜವಾಬ್ದಾರಿ ನನ್ನ ಮೇಲಿತ್ತು. ಇಲ್ಲಿ ಮೈಸೂರಲ್ಲೂ ಇಬ್ಬರು ತಮ್ಮಂದಿರು, ಒಬ್ಬ ತಂಗಿ, ಅಮ್ಮ ಇಷ್ಟು ಜನ! ಹಾಗೂ ಹೀಗೂ ಆಗಸ್ಟ್ ಮುಗಿಯುತ್ತ ಬಂದಿತೆಂದು ಅಂದುಕೊಂಡೆ.

ಅಂದುಕೊಂಡೆ ಅಷ್ಟೆ. ಜನ್ಮಾಷ್ಟಮಿ ಬಂತು, ಬಹಳ ವಿಜೃಂಭಣೆಯಿಂದ ನಮ್ಮ ಮನೆಯಲ್ಲಿ ಆಚರಿಸುತ್ತಿದ್ದೆವು. ನಾವಿಬ್ಬರೂ ಸೇರಿ ೧೫-೨೦ ಬಗೆಯ ಸಿಹಿ ಉಪ್ಪು ತಿಂಡಿಗಳನ್ನು ತಯಾರಿಸಿ ಇಡುತ್ತಿದ್ದೆವು. ಪೂಜೆ ಆದ ನಂತರ ಅವನ್ನು ಎಲ್ಲರ ಮನೆಗೂ ತಲುಪಿಸುವುದೊಂದು ಸಂಭ್ರಮ. ಯಾರನ್ನಾದರೂ ಮರೆತಿದ್ದರೆ ಅವರು ಸ್ವತಃ ಮನೆಗೆ ಬಂದು ಬೇಡಿ ತೆಗೆದು ಕೊಳ್ಳುತ್ತಿದ್ದರು. ಇದಲ್ಲದೇ ಅಪ್ಪನ ಸಹೋದ್ಯೋಗಿಗಳು, ಅವರ ಶಿಷ್ಯಂದಿರು, ಎಲ್ಲರಿಗೂ ಪ್ರಸಾದಕ್ಕೆ ಮನೆಗೆ ಬರಹೇಳುವುದು ವಾಡಿಕೆ.

ಒಂದು ಕೃಷ್ಣಾಷ್ಟಮಿ ದಿನ – ರಾಮ ಬಂದಾಗ ಹನುಮಂತ ಬಂದಂತೆ ಎಂದು ಅತಿಥಿಯಾಗಿ ಬಂದಿದ್ದ ಹನುಮಂತರಾವ ಅವರಿಗೆ ಹೇಳಿದ್ದರಿಂದ ಕ.ವೆಂ.ರಾ. ಅವರಿಂದ ಬೈಗುಳಕ್ಕೆ ಸಿಕ್ಕಿದೆ. ಸುಮಾರು ಒಂದು ವಾರ ಬೇಸರದಲ್ಲಿದ್ದೆ. ನಂತರ ಅವರೇ ನೀನು ಹೇಳಿದ್ದು ಸರಿ ಎಂದು ಹೇಳಿ ಸಮಾಧಾನ ಮಾಡಿದರು.

ಈಗ ದೆಹಲಿಯಿಂದ ಅಪ್ಪನ ಕಾಗದ "ನಾನು ಅಲ್ಲಿ ಇಲ್ಲವೆಂದು ಹಬ್ಬ ಮೊಟಕು ಮಾಡಬೇಡಿ, ಪ್ರತಿವರ್ಷ ಮಾಡುವಂತೆ ಸಾಂಗವಾಗಿ ಮಾಡಿ," ಸರಿ, ಅಮ್ಮ ಮಗಳು ಬೀಸುವ, ಕುಟ್ಟುವ ಕೆಲಸದಲ್ಲಿ ತೊಡಗಿದೆವು. ಜನ್ಮಾಷ್ಟಮಿಯ ಮೊದಲ ದಿನ ರೇಡಿಯೋನಲ್ಲಿ ಯಾವುದೋ ನಾಟಕ ಪ್ರಸಾರವಾಗುತ್ತಿತ್ತು. ನಾವಿಬ್ಬರೂ ಊಟ ಮುಗಿಸಿ, ಎಲೆ ಅಡಕೆ ಜಗಿಯುತ್ತ ಅದನ್ನು ೧೧ ಗಂಟೆಯವರೆಗೆ ಕೇಳಿ ನಂತರ ಮಲಗಿದೆವು.

ಸುಮಾರು ೨ ೧/೨ ಗಂಟೆಗೆ ಅಮ್ಮ ಬಚ್ಚಲು ಮನೆಗೆ ಹೋಗಲು ಎದ್ದರು. ಸೊಳ್ಳೆಪರದೆ ಸರಿಸಿದಾಗ ನನಗೂ ಎಚ್ಚರ ಆಯಿತು. ಬೆಡ್‌ಲೈಟ್ ಯಾವಾಗಲೂ ಉರಿಯುತ್ತಲೇ ಇದ್ದುದೂ ಅವರ ಕಣ್ಣಿಗೆ ಕಾಣಲಿಲ್ಲ ಅಂದು. "ದೀಪ ಹಾಕು ವಿನೋದ, ಕತ್ತಲಲ್ಲಿ ಹೇಗೆ ಹೋಗುವುದು?" ಎಂದಾಗ ಲೈಟ್ ಆನ್ ಮಾಡಿ ನಾನೂ ಅವರ ಜತೆಗೆ ಹೋದೆ. ಬಚ್ಚಲು ಮನೆಯಿಂದ ಹೊರಬಂದಾಗ ಹದಿನೆಂಟು ಮೊಳದ ಅವರ ಸೀರೆ ಒದ್ದೆಯಾಗಿತ್ತು; ಅಷ್ಟು ಬೆವರಿದ್ದರು! ಕೂಡಲೇ "ರಂಗರಾಜೂ" ಎಂದು ಕೂಗಿದೆ. ಎರಡನೆಯ ಮಗ ರಂಗರಾಜು, ಮೊದಲನೆಯವನು ಚಾಮರಾಜನಗರದಲ್ಲಿ ಕೆಲಸದಲ್ಲಿದ್ದ. ಅವರು ಹೊರ ಬಂದಾಗ "ಬೇಗ ಹೋಗಿ ಡಾಕ್ಟರನ್ನು ಕರೆದುಕೊಂಡು ಬಾ" ಎಂದೆ. ಅವನು ಹೋಗಿ ೧೦ ನಿಮಿಷದಲ್ಲೇ ಡಾಕ್ಟರನ್ನು ಕರೆದುಕೊಂಡು ಬಂದ. ಅಷ್ಟರಲ್ಲಿ ಕಾಫಿ ಬಿಸಿ ಮಾಡಿಕೊಟ್ಟಿದ್ದೆ, ಸ್ವಲ್ಪ ಮಾತ್ರ ಕುಡಿದಿದ್ದರು. 'ಬಾಮ್ಮ ಇಲ್ಲಿ, ಇಲ್ಲೇ ಕೂತುಕೋ" ಎಂದರು. ನಾನು ಕೂತ ಕೂಡಲೇ ನನ್ನ ತೊಡೆಯ ಮೇಲೆ ತಲೆ ಇಟ್ಟು ಮಲಗಿದರು. ಇನ್ನು ಸ್ವಲ್ಪ ಕಾಫಿ ಕುಡಿಸಿದೆ, ಅಷ್ಟೆ. ಅದೇ ಕೊನೆಯಾಯಿತು. ಡಾಕ್ಟರೇನೋ ಬಂದರು "ಹಾರ್ಟ್ ಅಟ್ಯಾಕ್ ಆಗಿದೆಯಮ್ಮ, ಆಂಬ್ಯುಲೆನ್ಸ್ ತರಿಸಬೇಕು" ಎಂದ ಕೂಡಲೇ ರಂಗರಾಜೂ ಓಡಿದ. ಗೇಟಿನ್ನೂ ತೆಗೆದೇ ಇರಲಿಲ್ಲ. ಇಲ್ಲಿ ಅಮ್ಮನು ಕೊನೆಯುಸಿರೆಳೆದಾಯಿತು! ಅದೂ ನನ್ನ ತೊಡೆಯ ಮೇಲೆ!

ಇದೂ ಒಂದು ಪುಣ್ಯಕಾರ್ಯವೇನೋ ನಿಜ. ಆದರೆ ಅಪ್ಪ ಅಲ್ಲಿ ಅಷ್ಟು ದೂರ. ಬರುವುದು ಹೇಗೆ? ಅಮ್ಮ ಹೋದಾಗ ಗಂಟೆ ೩-೧೫ ಆಗಿತ್ತು. ಬೆಳಗಿನ ಜಾವ. ಪ್ರೊ. ಸಿ.ಡಿ. ನರಸಿಂಹಯ್ಯ

ಅವರ ಮನೆಗೆ ಹೋಗಿ ಎಬ್ಬಿಸಿ, ಅಲ್ಲಿಂದ ನೇರ ವೈಸ್‌ಚಾನ್ಸೆಲರ್ ವಿ.ಕೆ.ಆರ್.ವಿ. ರಾವ್‌ಗೆ ಫೋನ್ ಹಚ್ಚಿ, ವಿಷಯ ತಿಳಿಸಿದೆವು. "ಓ! ಸೋ ಬ್ಯಾಡ್!" ಅಷ್ಟು ಮಾತ್ರ ಕೇಳಿಸಿತು. ವಿ.ಸಿ., ಅವರೇ ಕಾರ್‌ನಲ್ಲಿ ನೇರ Gwyer Hall ಅಪ್ಪ ಇದ್ದ ರೂಮಿಗೆ ಹೋಗಿ ವಿಷಯ ತಿಳಿಸಿದರಂತೆ. ಬರುವುದು ಹೇಗೆ ಮೈಸೂರಿಗೆ? ಕೆಲಸಕ್ಕೆ ಸೇರಿ ಕೇವಲ ೧೫ ದಿನಗಳ ಸಂಬಳ ಕೈಗೆ ಬಂದಿದೆ. ರಾವ್ ಅವರು ತಾವೇ ಪ್ಲೇನ್ ಟಿಕೆಟ್ ಖರೀದಿಸಿ, ಅಪ್ಪನನ್ನು ತಮ್ಮ ಕಾರಿನಲ್ಲಿ ವಿಮಾನ ನಿಲ್ದಾಣಕ್ಕೆ ಬಿಡಲು ತಮ್ಮ ಚಾಲಕನಿಗೆ ಹೇಳಿದ್ದೂ ಅಲ್ಲದೆ, ಕೂಡಲೇ ಸಿ.ಡಿ.ಎನ್.ಗೆ ಫೋನ್‌ನಲ್ಲಿ "ಕೆ.ವಿ.ಆರ್. ಫ್ಲೈಯಿಂಗ್ ವೈಟ್" ಎಂದೂ ತಿಳಿಸಿದರಂತೆ.

ಅಂತೂ ಅಪ್ಪ ಬರುವುದರೊಳಗೆ ಎಲ್ಲ ಬಳಗ ಅಲ್ಲಿ ಸೇರಿತು. ಅಪ್ಪ ಬಂದಾಗ ೮ ಗಂಟೆ ಆಗಿತ್ತು. ಸುಮಂಗಲಿಗೆ ಬೇಕಾದ ಅರಿಷಿಣ ಕುಂಕುಮ ಹೂವು ಹೊಸ ಸೀರೆ ಎಲ್ಲ ನಾನು ಸಿದ್ಧಪಡಿಸಿದೆ. ಅಂತೂ ಈ ಅಂಕ ಹೀಗೆ ಆಗುವುದೆಂದು ನಾನು ಎಣಿಸಿರಲಿಲ್ಲ. ಅದೂ ದೈವೇಚ್ಛೆ ತಾನೇ! "ಯದ್ಯತ್ ಭವ್ಯಂ ಭವತು ಭಗವನ್ ಪೂರ್ವಕರ್ಮಾನುರೂಪಂ"

ದಿನ ಕರ್ಮ ಮುಗಿದ ನಂತರ ಒಂದು ತಿಂಗಳು ಇಲ್ಲೇ ಇದ್ದು ಮತ್ತೆ ದೆಹಲಿಗೆ ಪ್ರಯಾಣಿಸಿದವರು ಅಪ್ಪ. ಮೂರು ಮಕ್ಕಳ ಜವಾಬ್ದಾರಿ ನನ್ನ ಮೇಲೆ ಬಿತ್ತು. ಅವರಿಗೂ ಬಹಳ ಮುಜುಗರವೇ, ಆದರೇನು ಮಾಡುವುದು? ಕೆಲಸಕ್ಕೆ ಸೇರಿ ಕೇವಲ ೨-೩ ತಿಂಗಳಿಗೇ ಕೆಲಸ ಬಿಡುವುದು, ಅದೂ ಹೊಚ್ಚ ಹೊಸ ವಿಭಾಗಕ್ಕೆ, ಸರಿಯಲ್ಲ. ಬೇರೆ ಯೋಚನೆ ಮಾಡುವಂತಿಲ್ಲ. ಮತ್ತೆ ನಾನೇ ಇಂಜಿನ್ನಿಗೆ ಕಲ್ಲಿದ್ದಲು ತುಂಬಿ ಕಳಿಸಿದೆ.

ನನ್ನ ಕೆಲಸ ಇಲ್ಲಿ ಯಥಾಪ್ರಕಾರ ನಡೆಯಿತು. ಕ್ರಮವಾಗಿ ದೆಹಲಿಯಿಂದ ಪತ್ರ ಬರುತ್ತಿತ್ತು. ಹಣವೂ ಬರುತ್ತಿತ್ತು. ಅದು ಯಾವುದಕ್ಕೂ ಸಾಲುತ್ತಿರಲಿಲ್ಲ. ಹೇಗೋ ತೇಪೆ ಹಾಕುತ್ತಾ ನಡೆಸಿದೆ.

ಮನೆ ಕೆಲಸ, ಕಾಲೇಜು ಕೆಲಸ ಮಾಡಿ ನನಗೆ ಬಹಳ ಸುಸ್ತಾಯಿತು. ಆದರೆ ಬಿಡುವಂತಿಲ್ಲವಲ್ಲ? ನಾನೇ ಕರೆದುಕೊಂಡ ಜವಾಬ್ದಾರಿ! ಹೀಗೆ ಮಾಡೆಂದೂ ಯಾರೂ ನನಗೆ ಹೇಳಿರಲಿಲ್ಲ. ನನ್ನ ಸ್ವಂತ ಇಚ್ಛೆಯಿಂದ ಮಾಡಿದೆ. ನನ್ನ ಕರ್ತವ್ಯವನ್ನು ಮನಸಾರೆ ಮೆಚ್ಚಿಕೊಂಡವರು ಅಪ್ಪ ಒಬ್ಬರೇ?! ಮಿಕ್ಕೆಲ್ಲರ ಉಹಾಪೋಹಗಳೇ ಬೇರೆ. ಎರಡು ವರ್ಷ ಕಳೆಯುವುದರೊಳಗೆ ನನಗೂ ದೆಹಲಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕಿಯ ಕೆಲಸ ಸಿಕ್ಕಿತು. ಈ ಭಾಷಾವಿಭಾಗದಲ್ಲಿ ಪ್ರತಿ ಭಾಷೆಗೂ ಇಬ್ಬರು ಅಧ್ಯಾಪಕರಿರಬೇಕೆಂಬ ನೇಮದ ಪ್ರಕಾರ ನನಗೆ ಈ ಕೆಲಸ ಸಿಕ್ಕಿತು. ಈ ಭಾಷಾವಿಭಾಗ ಬಹಳ ಚೆನ್ನಾಗಿ ನಡೆಯಿತು ಪ್ರಾರಂಭದಲ್ಲಿ. ನಂತರ ಗೊತ್ತೇ ಇದೆಯಲ್ಲ ಏನಾಗಬಹುದೋ ಅದೇ ಆಗುತ್ತಾ ಬಂತು.

ಪ್ರೊ. ಸುನೀತಿಕುಮಾರ್ ಚಟರ್ಜಿಯವರು ದೆಹಲಿಗೆ ಯಾವುದೋ ಕೆಲಸಕ್ಕೆ ಬಂದವರು ನಮ್ಮ ವಿಭಾಗಕ್ಕೂ ಭೇಟಿ ನೀಡಿದರು. ಅಂದು ಒಂದು ಚಿಕ್ಕ 'ಪಾರ್ಟಿ' ಆಯಿತು. ನಮ್ಮ ವಿಭಾಗದ ಮುಖ್ಯಸ್ಥರಾದ Dr. R.K. Dassgupta ಅವರು ನಮ್ಮನ್ನೆಲ್ಲ ಚಟರ್ಜಿಯವರಿಗೆ

ಪರಿಚಯ ಮಾಡಿಕೊಡುತ್ತಾ ಅಪ್ಪನ ಹತ್ತಿರ ಬಂದಾಗ "This is Mr. K.V. Raghavachar, he has translated Greek dramas directly form Greek to Kannada, As far as I know nobady has done it." ನನ್ನ ಹತ್ತಿರ ಬಂದು "This is his daughter Vinoda, She also is lecturer in Kannada. This is unique feature of our Dept.' ಎಂದಾಗ ಚಟರ್ಜಿಯವರು ಖುರ್ಚಿ ಮೇಲಿಂದ ಇಳಿದು ಬಂದು ಅಪ್ಪನನ್ನು ಆಲಂಗಿಸಿಕೊಂಡು "Really I am proud of you Mr. Raghavachar, you are really great" ಎಂದು ತಮಗಾಗಿ ತಂದು ಇಟ್ಟಿದ್ದ ಗಂಧದ ಹಾರವನ್ನು ಅಪ್ಪನಿಗೆ ಹಾಕಿ " Really you deserve it" ಎಂದ ದೃಶ್ಯ ನನಗೆ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಕರ್ನಾಟಕದಲ್ಲಿ, ಸಾಹಿತ್ಯ ಪರಿಷತ್ತಿನಿಂದಾಗಲಿ, ಮಿಕ್ಕ ಕನ್ನಡ ಸಂಘ ಗಳಿಂದಾಗಲಿ ಬಹಳ ಹಿಂದೆ ಆಗಬೇಕಾಗಿದ್ದ ಗೌರವ ಮರ್ಯಾದೆ ಅವರಿಗೆ ದೆಹಲಿಯಲ್ಲಿ ಸಿಕ್ಕಿತು? ನನಗಂತೂ ಅಂದು ಆದ ಸಂತೋಷ ಹೇಳತೀರದು. ನಮ್ಮ ಇತರ ಸಹೋದ್ಯೋಗಿ ಗಳಿಗೂ ಸಂತೋಷವಾಯಿತೆಂದು ಹೇಳುವ ಅವಶ್ಯಕತೆ ಇಲ್ಲ. ಈ ನಡುವೆ ಅಪ್ಪ ಮೈಸೂರಿಗೆ ಬಂದಾಗ ದೊಡ್ಡ ಮಗನ ಮದುವೆ ಆಯಿತು. ಸಾಕಷ್ಟು ಚೆನ್ನಾಗಿಯೇ ಆಯಿತು.

ನಾನು Ph.D. ಮಾಡಿದ್ದು ದೆಹಲಿಯಿಂದ. ಅದರ ನೆನಪಿಗಾಗಿ ದೆಹಲಿಯ ಶ್ರೀರಾಮ ಮಂದಿರದಲ್ಲಿ ಪಂಚಲೋಹದ ಆಂಡಾಳ್ ವಿಗ್ರಹವನ್ನು ಕೊಟ್ಟರು. ಇದೂ ಅಪ್ಪನ ವಿಚಾರವೇ. ವಿಗ್ರಹದ ಪಾದದ ಬಳಿ ತಮಿಳಿನಲ್ಲಿ "ರಾಘವಾಚಾರ್ ಪೇಟ್ರೇಡುತ್ತ ಪೆಣ್‌ಪಿಳ್ಳೆ ವಿನೋದಾ ಉಡೆಯಕಾಣಿಕ್ಕೈ" ಎಂದು ಬರೆದಿದೆ.

ಹೀಗಾಗಿ ನಾನು ತಮಿಳರ ಗುಂಪಿನಲ್ಲೂ ಸಾಕಷ್ಟು ಹೆಸರು ಗಳಿಸಿದ್ದೆ. ಅಲ್ಲಿ ಸಭೆಗೆ ಬಂದವರಿಗೆ ಎಲ್ಲರ ಪರಿಚಯ ಮಾಡಿಸುವುದಿತ್ತು. ನನ್ನ ಕಡೆ ತಿರುಗಿ "ಇಂದ ಅಮ್ಮ ಆಂಡಾಳೈ ಪತ್ತಿ Thesis ಏಳುದಿಕ್ಕಿರಾಳ್" ಎಂದೂ ಹೇಳುವ ಪರಿಪಾಠವಾಯಿತು. ಬರುಬರುತ್ತಾ "ಇಂದ ಆಂಡಾಳಮ್ಮ Thesis ಏಳುದಿರಿಕ್ಕಿರಾಳ್" ಎಂದು ಆಯಿತು. ಹೀಗಾಗಿ ನಾನು ಆಂಡಾಳ್ ಆದರೆ ಅಪ್ಪ ಪೆರಿಯಾಳ್ವಾರ್ ಆಗಬೇಕಲ್ಲ! ಹೀಗಾಗಿ ಆಂಡಾಳ್ ಪೆರಿಯಾಳ್ವಾರ್ ವಂದಾರ್ ಎಂದೇ ಹೇಳತೊಡಗಿದರು. ಇದೂ ಒಂದು ಪುಣ್ಯ. ನನ್ನಿಂದ ಅವರಿಗೆ, ಅವರಿಂದ ನನಗೆ!

ಅಪ್ಪನ ಸ್ನೇಹಿತರಿಗೆಲ್ಲರಿಗೂ ನನ್ನ ಬಗ್ಗೆ ಬಹಳ ಅಭಿಮಾನ. ಒಂದಿಬ್ಬರು ಅಪ್ಪನನ್ನು "ಎಲ್ಲಿಂದ ತಂದೆಯೋ ಈ ಒರೆ ಹಚ್ಚಿದ ವಜ್ರವನ್ನು!" ಎಂದೂ ಕೇಳಿದರಂತೆ. ಎಷ್ಟೋ ವರ್ಷಗಳಾದ ನಂತರ ನನಗೆ ಗೊತ್ತಾಯಿತು.

ದೆಹಲಿಯಲ್ಲಿದ್ದಾಗಲೇ ಅಪ್ಪನ ಚಿಕ್ಕಮಗಳ ಮದುವೆ, ಅವಳಿಗೆ ಒಬ್ಬ ಮಗಳ ಜನನ, ಮಗನ ಜನನ ಎಲ್ಲಾ ನಡೆಯಿತು. ಎಲ್ಲದಕ್ಕೂ ನನ್ನನ್ನು ಕೇಳಿಯೇ ಮಾಡುವುದಿತ್ತು. ಅಂತೂ ದೇವರ ದಯದಿಂದ ಎಲ್ಲ ಸುಗಮವಾಗಿ ಆಯಿತು.

೧೯೭೭ ಆಗಸ್ಟ್ ೨೭ರಂದು ಅಪ್ಪ ದೈವಾಧೀನರಾದರು. ಸುಮಾರು ೧೫ ದಿನ Nursing Homeನಲ್ಲಿ ಇರಬೇಕಾಯಿತು. ನಾನೂ ಅವರೊಂದಿಗೆ ಅಲ್ಲೇ ಇದ್ದೆ. ಭಾಷಾ ಸಮಸ್ಯೆಯಲ್ಲ! Nurse Hindiಯಲ್ಲಿ ಏನಾದರೂ ಕೇಳಿದರೆ ಉತ್ತರ ಕೊಡಲು ನಾನಿರಬೇಕಿತ್ತು, ಅಲ್ಲೂ ಕೂಡ Injection ಮಾತ್ರ nurse ಕೊಡಬೇಕು ಅಷ್ಟೆ. ಮಿಕ್ಕೆಲ್ಲದಕ್ಕೂ Call my daughter ಎಂದೇ ಹೇಳುತ್ತಿದ್ದರು. ೨೭ರ ಬೆಳಗ್ಗೆ ಅಳಿಯ ಬಂದು ನೋಡಿಕೊಂಡು Bankಗೆ ಹೋದ. ೧೦ ಗಂಟೆಯ ಹೊತ್ತಿಗೆ ಉಸಿರಾಟ ಕಷ್ಟವಾಯಿತು. Oxygen Cylendar ತರಬೇಕು. ಅಷ್ಟರಲ್ಲಿ ನಾನು ಅವರ ಗಂಟಲು ಒಣಗಿತೇನೋ ಎಂದು ಸ್ವಲ್ಪ ನೀರು ಕುಡಿಸಿದೆ ಅಷ್ಟೆ. Cylendarನ ಅವಶ್ಯಕತೆ ಆಗಲಿಲ್ಲ. ಎಲ್ಲವೂ ಮುಗಿದಿತ್ತು. ಅಂತೂ ಇಬ್ಬರ ಸೇವೆ ನನ್ನಿಂದ ಆಯಿತು ಅಷ್ಟೆ.

೨ನೇ ಶತಮಾನದ ತಮಿಳು ಕವಿ ತಿರುವಳ್ಳುವರ್ ಹೇಳುತ್ತಾರೆ: "ತಾಯ ಋಣ ತಂದೆಯ ಋಣ ತೀರಿಸಲಾಗುವುದಿಲ್ಲ ಎನ್ನುವುದು ಸುಳ್ಳು. ಮಗ ದೊಡ್ಡವನಾಗಿ ನಾಲ್ಕಾರು ಜನ ಅವನನ್ನು ಇಂಥ ಮಗನನ್ನು ಪಡೆಯಲು ಇವನ ಅಪ್ಪ ಅಮ್ಮ ಎಷ್ಟು ಪುಣ್ಯ ಮಾಡಿದ್ದರೋ! ಎಂದರೆ ಸಾಕು ಅಪ್ಪ ಅಮ್ಮ ಧನ್ಯರಾದರು."

ಇಲ್ಲಿ ಮಗ ಅಲ್ಲ, ಮಗಳು. ನನಗೂ ಅಂಥ ಒಂದು ಸುಯೋಗ ಒದಗಿದ್ದು ಈ ಅಪ್ಪ ಅಮ್ಮನಿಂದ!

ನನ್ನ ಜನ್ಮನಾಮ ಅಹಲ್ಯಾ ಎಂದು, ಜನ ಅದನ್ನು ಸರಿಯಾಗಿ ಉಚ್ಚಾರ ಮಾಡದೆ 'ಹಲ್ಯಾ' ಎಂದಾಯಿತಂತೆ. ಅದಕ್ಕೆ ನನ್ನ ಹೆಸರು ಬದಲಾಯಿಸಿ 'ವಿನೋದ' ಎಂದು ಕರೆದರು. ಅಹಲ್ಯಾ ಎಂದಿಟ್ಟದ್ದು ಎಷ್ಟು ವಿವೇಚನೆಯಿಂದ ಕೂಡಿದೆ! ಮುಂದೆ ನಾನು ಕವೆಂರಾ ಅವರ ಹತ್ತಿರ ಬರುವುದು ಮೊದಲೇ ತಿಳಿದಿತ್ತೇನೋ ಹೆಸರಿಟ್ಟವರಿಗೆ. ಆ ಅಹಲ್ಯಾ ಆ ರಾಮನಿಂದ, ಈ ಅಹಲ್ಯಾ ಈ ರಾಮನಿಂದ ಪುನೀತಳಾದಳು!

ನಾನು ಕೆಲಸಕ್ಕೆ ಸೇರಿದ ನಂತರ ಪ್ರತಿ ತಿಂಗಳೂ ಊರಿಗೆ MO ಹೋಗುತ್ತಿತ್ತು. ಇಲ್ಲಿಂದ MO ಬಂದ ಮೇಲೆಯೇ ಒಲೆ ಹಚ್ಚುವಂಥ ಸ್ಥಿತಿ ಅಲ್ಲಿ! ಆ ತಿಂಗಳು ಏಕೋ ತುಂಬಾ ಬೇಸರವಾಗಿ MO ಕಳಿಸಲಿಲ್ಲ. ಇನ್ನೂ ೩ನೇ ತಾರೀಖು ಅಷ್ಟೆ. ಅಪ್ಪ ಹೊರಗಿನಿಂದ ಬಂದ ಕೂಡಲೇ "ಊರಿಗೆ ಕಳಿಸಿ ಆಯಿತೇನಮ್ಮ? ಎಂದು ಕೇಳುವ ಪದ್ಧತಿ. ಆ ದಿನ ನಾನು ಮೌನವಾಗಿದ್ದೆ. "ಏನಮ್ಮ ಇನ್ನೂ ಕಳಿಸಿಲ್ಲವೇ? ಅಲ್ಲಿ ಅವರ ಸ್ಥಿತಿ ಏನು ಎಂದು ಯೋಚಿಸಿದ್ದೀಯಾ?" ಹೀಗೆ ಹೇಳುತ್ತಾ ಮತ್ತೆ ಚಪ್ಪಲಿ ಹಾಕಿಕೊಂಡು ಹೊರಟೇಬಿಟ್ಟರು. ತಟ್ಟೆಗೆ ಅನ್ನ ಬಡಿಸಿದ್ದನ್ನು ಮುಚ್ಚಿಟ್ಟು ನಾನು ಕಾಯುತ್ತಾ ಕುಳಿತೆ. "ಅಯ್ಯೋ ದೇವರೇ! ನಾನೆಂಥ ತಪ್ಪು ಮಾಡಿದೆನಲ್ಲ!" ಎಂದು ವ್ಯಥೆಗೊಂಡೆ. MO ಮಾಡಿ ಬಂದು ಮಧ್ಯಾಹ್ನ ೩ ಗಂಟೆಗೆ ಊಟ ಮಾಡಿದರು. "ನಿನ್ನನ್ನು ಯಾಕೆ ಕೇಳುತ್ತಾರೆ? ನಿನ್ನ ಹತ್ತಿರ ಇದೆ. ನೀನು ಕೊಡಬಲ್ಲೆ. ಕೊಡುತ್ತೀಯಾ' ಎಂದಲ್ಲವೇ? ನಿನ್ನ ಕಡೆ ಕೈ ಚಾಚುವಾಗ ಅವರಿಗೂ ಎಷ್ಟು

ಹಿಂಸೆ ಆಗುತ್ತದೆಂಬುದನ್ನು ಯೋಚಿಸಿ ನೋಡು. ಇಷ್ಟು ನೆನಪಿಟ್ಟುಕೋ– ಯಾರೇ ಬಂದು ಸಹಾಯ ಕೇಳಿದಾಗ ಇಲ್ಲ ಎನ್ನದೇ ನಿನ್ನ ಕೈಲಾದಷ್ಟು ಕೊಡು" ಎಂದರು.

ಎಂಥ ದೊಡ್ಡ ಮಾತು! ಇದನ್ನು ನಾನು ಇಂದಿಗೂ ನಡೆಸಿಕೊಂಡು ಬರುತ್ತಿದ್ದೇನೆ. ಅವರಲ್ಲದೆ ಬೇರೆ ಯಾರೇ ಅವರ ಸ್ಥಾನದಲ್ಲಿದ್ದಲ್ಲಿ 'ಸಂಬಳ ಇಲ್ಲಿ ಕೊಡಮ್ಮ, ಇಷ್ಟು ದಿನ ನಾನು ಕೊಟ್ಟಿಲ್ಲವೇ?' ಎಂದೇ ಹೇಳುತ್ತಿದ್ದರು. ಆದರೆ ಇಂಥ ಮಾತು ಬರಲಿಲ್ಲ. ನನ್ನ ಪುಣ್ಯಕ್ಕೆ ಎಣೆಯುಂಟೇ?

ಆ ಭಗವಂತನು ನನಗೆ ಕೊಟ್ಟ ಪಾತ್ರವನ್ನು ನಾನು ಅತ್ಯಂತ ನಿಷ್ಠೆಯಿಂದ ನಿರ್ವಹಿಸಿದ್ದೇನೆ ಎಂಬ ತೃಪ್ತಿ ನನಗಿದೆ. ಇದೇ ಕೊನೆಯವರೆಗೂ ಇರಲಿ, ದೇವರೇ!

ಅಶೋಕವನದಲ್ಲಿ ಸೀತೆ ಹನುಮಂತನಿಗೆ ಹೇಳುತ್ತಾಳೆ: 'ದಶರಥನ ಸೊಸೆ ಜನಕ ರಾಜನ ಮಗಳು ಶ್ರೀರಾಮನ ಹೆಂಡತಿ ಮಾರನೆಯ ದಿನ ಅಭಿಷೇಕಗೊಂಡು ರಾಣಿ ಯಾಗುವವಳು ಇಲ್ಲಿ ಈ ರಾಕ್ಷಸರ ನಡುವೆ ಇರಬೇಕಾದರೆ "ಮಮೈನ ದುಷ್ಕೃತಂ ಕಿಂಚಿತ್ ಮಹದತ್ತಿನ ನ ಸಂಶಯಃ" ನಾನು ಇದನ್ನು ಕೊಂಚ ತಿರುಚಿ" ಮಮೈನ ಸುಕೃತಂ ಕಿಂಚಿತ್ ಮಹದತ್ತಿನ ಸಂಶಯಃ" ಎಂದರೆ ತಪ್ಪಾಗಲಾರದಷ್ಟೆ?

ಅಪ್ಪ ಎಷ್ಟು ವಿಶಾಲ ದೃಷ್ಟಿಯವರು, ವಿಶಾಲ ಮನಸ್ಸಿನವರು ಎಂದು ವಿವರಿಸಲು ಈ ಘಟನೆಯೊಂದೇ ಸಾಕು ಎಂದು ನನ್ನ ನಂಬಿಕೆ.

೧೯೬೧–೬೨ರಲ್ಲಿರಬಹುದು – ಅಪ್ಪ, ನಾನು, ಅವರ ಕೆಲವು ಸ್ನೇಹಿತರು ಹರಿದ್ವಾರಕ್ಕೆ – ಅದೇ ಮೊದಲು ಸಲ – ಹೊರಟೆವು. ಅವರ ಸ್ವಭಾವ ಪರಿಚಯವಿದ್ದುದರಿಂದ ತರ್ಪಣದ ಪುಸ್ತಕ, ಅಕ್ಕಿ, ದರ್ಭೆ ಎಲ್ಲ ನನ್ನ ಚೀಲದಲ್ಲಿ ಮುಂಚಿತವಾಗಿ ಇಟ್ಟಿದ್ದೆ. ನಾನು ಅಂದುಕೊಂಡಂತೆಯೇ ಅಲ್ಲಿಗೆ ಹೋದ ಕೂಡಲೇ ಅಪ್ಪ "ನೋಡಮ್ಮ ಇಲ್ಲಿ ತರ್ಪಣ ಬಿಡೋಣ ಅನ್ನಿಸ್ತಿದೆಯಲ್ಲ!" ಅಂದರು. ಕೂಡಲೇ ನಾನು ಅಲ್ಲಿಯೇ ಇದ್ದ ಒಬ್ಬ ಪಂಡನಿಗೆ ಹೇಳಿ ಗೊತ್ತುಮಾಡಿದೆ. ಮಾರನೆಯ ಬೆಳಗ್ಗೆ ಸ್ನಾನ ಸಂಧ್ಯಾದಿಗಳನ್ನು ಮುಗಿಸಿ ಗಂಗೆ ಬಳಿ ಕಾಯುತ್ತಿದ್ದೆವು. ಪಂಡ ಬಂದ – ಕಾಲಲ್ಲಿ ಚಪ್ಪಲಿ ಹಾಕಿಕೊಂಡು! ಮಂತ್ರ ಹೇಳುವಾಗ ತೆಗೆಯಬಹುದು; ಅದರೆ ಸ್ನಾನವಾಗಿ ಪೂಜಾದಿಗಳು ಮುಗಿಯುವವರೆಗೆ ಅದು ನಿಷಿದ್ಧ ಅಲ್ಲವೇ? ಅವನ್ನು ನೋಡಿದೊಡನೆ ಅಪ್ಪನಿಗೆ ದುರ್ವಾಸ ಆವಿರ್ಭಾವವಾಗಿಯೇಬಿಟ್ಟನಲ್ಲ! ಇಂಥವನಿಂದ ಮಂತ್ರ ಹೇಳಿಸುವುದೇ? ತರ್ಪಣ ಬಿಡುವುದೇ? ಇವನೆಲ್ಲಿ ಸಿಕ್ಕನಮ್ಮ ನಿನಗೆ?" ಅವನಿಗೂ ನನಗೂ ಕೂಡಿಯೇ ಅಷ್ಟೋತ್ತರ ಆಯಿತು. ಪಂಡಾನಿಗೆ ಹಿಂದಿಯಲ್ಲಿ "ಓ ಕರನಾ ನಹೀ ಚಾಹತೇ ಹೈ, ಆಪ್ ಕೃಪಾಕರಕೇ ಚಲೇ ಜಾಯಿಯೇ" ಎಂದು ಅವನ ಕೈಗೆ ಹತ್ತು ರೂಪಾಯಿ ಕೊಟ್ಟೆ. ಅವನು ಹೊರಟೂ ಹೋದ.

ಸರಿ! ಪಿಂಡಪ್ರದಾನಕ್ಕೆ ಅನ್ನ ಬೇಯಿಸಬೇಕಲ್ಲ! ಅಲ್ಲಿ ಕಲ್ಲಿದ್ದಲ ಒಲೆ ಬೇರೆ. "ಏನು ಮಾಡುವುದು". ಎಂದು ನಾನು ಕೇಳುತ್ತಿರುವಂತೆಯೇ ಅವರ ಬಾಯಿಂದ ಬಂದ ಮಾತುಗಳು:

"ನಿನ್ನ ಸ್ನಾನ ಆಯಿತಲ್ಲಮ್ಮ, ನೀನೇ ಮಾಡು ಪಿಂಡಪ್ರದಾನಕ್ಕೆ ಅನ್ನವನ್ನು, ನಿನಗಿಂತ ಶುದ್ಧ ಯಾರಮ್ಮ! ಈ ಗಂಗೆಗೂ ನಿನಗೂ ವ್ಯತ್ಯಾಸವಿಲ್ಲವಮ್ಮ. ಇಬ್ಬರೂ ಅಷ್ಟೇ ಶುದ್ಧರು! ನೀನೇ ಬೇಗ ಎಲ್ಲ ಮಾಡಿಬಿಡು. ನಿನ್ನಂಥ ಮೊಮ್ಮಗಳಿಂದ ಈ ಕೆಲಸ ಮಾಡಿಸಿಕೊಂಡ ನನ್ನ ತಂದೆ ತಾಯಿಯರೇ ಪುಣ್ಯ ಮಾಡಿದ್ದರು" ಇಷ್ಟು ಹೇಳಿದ ಮೇಲೆ ನಾನು ಇನ್ನೇನು ಹೇಳಲಿ? ಎಲ್ಲ ಪಾಂಗಿತವಾಗಿ ನಡೆಸಿಕೊಂಡು ಹಿಂದಿರುಗಿದೆವು.

ಇನ್ನು ಯಾರೇ ಆಗಿದ್ದರೂ ಈ ರೀತಿ ಹೇಳುತ್ತಿರಲಿಲ್ಲ. ಇಂಥ ವಿಶಾಲ ಮನಸ್ಸು ಅವರಿಗೆ! ಶಂಕರ – ರಾಮಾನುಜರು ಹೀಗೆ ಒಂದುಗೂಡಿದರು ಇಲ್ಲಿ!

ಈ ಮಗಳಿಗೆ ಅವರಲ್ಲಿ, ಆ ಅಪ್ಪನಿಗೆ ಈ ಮಗಳಲ್ಲಿ "ಪರಸ್ಪರಂ ಭಾವಯಂತಃ" ಅನ್ನುವಂತೆ ಅತ್ಯಂತ ನಂಬಿಕೆ ಪ್ರೀತಿ ಇತ್ತು ಎಂದಲ್ಲವೆ. ಅವರಿಂದ ಈ ಮಾತುಗಳು ಬಂದವು? ಒಟ್ಟಿನಲ್ಲಿ ಪ್ರೀತಿಗೆ ಹೇಗೋ ಹಾಗೆ ಬೈಗುಳಗಳಿಗೂ ನನಗೇ ಸಿಂಹಪಾಲು! ಇನ್ನಾರೂ ಅವರಿಗೆ ಸಿಗುತ್ತಲೇ ಇರಲಿಲ್ಲವಲ್ಲ!

ನೋಡಿ ದಣಿಯನು, ಹೊಗಳಿ ದಣಿಯನು ಬೈದೂ ದಣಿಯನು ಇಂಥ ರಾಘವನ ನಾನೆಂದು ಮರೆದಪೆನು?

ಜೀವನ ನಾಟಕದಲ್ಲಿ ಭಗವಂತ ನನಗೆ ಕೊಟ್ಟಿರುವ ಪಾತ್ರವನ್ನು ನಾನು ಯಶಸ್ವಿಯಾಗಿ ನೆರವೇರಿಸಿದ್ದೇನೆ ಎಂಬ ತೃಪ್ತಿ ನನಗಿದೆ.

❖

# ನನ್ನ ನೆಚ್ಚಿನ ಶಾಲಾಗುರುಗಳು

## (ತ. ಸು. ಶಾಮರಾಯರು)

● *ಡಾ॥ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ*

ನನ್ನ ಹುಟ್ಟೂರು ಶಿವಮೊಗ್ಗ. ಅಲ್ಲಿ ನಮ್ಮ ಮನೆಯ ಎದುರಿಗೆ ಲಕ್ಷ್ಮೀನಾರಾಯಣ ಸ್ವಾಮಿಯ ದೊಡ್ಡ ದೇವಸ್ಥಾನ. ವಿಶಾಲವಾದ ಒಳಹಜಾರವಿದ್ದ ಆ ದೇವಾಲಯಲದಲ್ಲಿ ವಾರಕ್ಕೆ ಒಂದೆರಡು ದಿನವಾದರೂ ಹರಿಕಥೆ, ಗಮಕ ವಾಚನ, ಸಂಗೀತ ಕಚೇರಿ, ಧಾರ್ಮಿಕ ಪ್ರವಚನ ಹೀಗೆ ಏನಾದರೊಂದು ಕಾರ್ಯಕ್ರಮ ಇರುತ್ತಿತ್ತು. ಕುಮಾರವ್ಯಾಸ ಭಾರತದ ಗಮಕ ವಾಚನವಂತೂ ಒಂದೆರಡು ವಾರ, ಕೆಲವು ಸಲ ಒಂದೆರಡು ತಿಂಗಳು ಸತತವಾಗಿ ನಡೆಯುತ್ತಿತ್ತು.

**ಮೊದಲ ಗುರುಗಳು :** ಗಮಕವಾಚನ ನಡೆಸಿಕೊಡುತ್ತಿದ್ದ ಇಬ್ಬರು ವಿದ್ವಾಂಸರು ಪಕ್ಕದ ಗ್ರಾಮವಾದ ಮತ್ತೂರಿನವರು. ಪದ್ಯಗಳ ವಾಚನ ಮಾಡುತ್ತಿದ್ದವರು ವೆಂಕಟೇಶಯ್ಯ. ಮಧುರವಾದ ಧ್ವನಿ, ಸ್ಪಷ್ಟ ಉಚ್ಚಾರ ಶ್ರುತಿಸ್ವರ ಶುದ್ಧವಾದ, ಭಾವಮಯವಾದ ಇಂಪಾದ ವಾಚನ. ಎಲ್ಲರೂ ತಲೆದೂಗುವಂಥ ಸುಶ್ರಾವ್ಯವಾದ ವಾಚನ ಕೇಳುವಾಗಲೇ ಪದ್ಯ ಬಹುಮಟ್ಟಿಗೆ ಅರ್ಥವಾಗಿ ಬಿಡುತ್ತಿತ್ತು. ಅವರು ಪದ್ಯ ಓದಿಯಾದ ಮೇಲೆ ಅದಕ್ಕೆ ಲಕ್ಷ್ಮೀಕೇಶವ ಶಾಸ್ತ್ರಿಗಳ ಅರ್ಥ, ವ್ಯಾಖ್ಯಾನ. ಅದಂತೂ ಅದ್ಭುತ. ಎಂಥವರನ್ನೂ ಮರುಳುಮಾಡಿಬಿಡುವಷ್ಟು ಆಕರ್ಷಕ ವಾಗಿರುತ್ತಿತ್ತು. ಶಾಸ್ತ್ರಿಗಳ ಸರಳ ಭಾಷೆ, ಆಡುಮಾತಿನ ಸಹಜ ನಿರೂಪಣೆ, ನಡುನಡುವೆ ತರುತ್ತಿದ್ದ ಸ್ವಾರಸ್ಯಕರ ಉಪಕಥೆ, ನಿರೂಪಿಸುವಾಗಿನ ಅವರ ನಗುಮುಖ, ಆತ್ಮೀಯ ಹಾವಭಾವ ಇದೆಲ್ಲದರಿಂದ ವ್ಯಾಖ್ಯಾನ ಅಪೂರ್ವವಾಗಿರುತ್ತಿತ್ತು. ಕಾರ್ಯಕ್ರಮವಿದ್ದ ದಿನ ಆರಂಭದಲ್ಲೇ ಇಡೀ ಸಭಾಂಗಣ ಜನರಿಂದ ತುಂಬಿ ಹೋಗಿರುತ್ತಿತ್ತು.

ನಾನು ಹೇಳುತ್ತಿರುವುದು ೧೯೪೦ರ ದಶಕದ ಸಂಗತಿ. ಆಗ ನನಗೆ ಹತ್ತು ವರುಷ. ಭಾರತದ ಕಥೆ ಕೇಳುವ ಅದಮ್ಯ ಕುತೂಹಲ. ಸಂಜೆ ಆಟಕ್ಕೂ ಹೋಗದೆ, ಕಾಲು ಗಂಟೆ ಮುಂಚೆಯೇ ಹೋಗಿ ಸಭೆಯ ಮುಂದಿನ ಸಾಲಿನಲ್ಲೇ ಕೂತುಬಿಡುತ್ತಿದ್ದೆ. ಬಿಟ್ಟ ಬಾಯಾಗಿ ನೆಟ್ಟ ಕಣ್ಣಾಗಿ ವಾಚನ ವ್ಯಾಖ್ಯಾನಗಳನ್ನು ಆಲಿಸುತ್ತಿದ್ದೆ. ಅದು ಮುಗಿದ ಮೇಲೆ ಮುಂದೆ ಹೋಗಿ ಇನ್ನೂ ಕೂತಿರುತ್ತಿದ್ದ ಅವರ ಕಾಲುಗಳನ್ನು ಕಣ್ಣಿಗೆ ಒತ್ತಿಕೊಂಡು ಮನೆಗೆ ಓಡಿ ಬಿಡುತ್ತಿದ್ದೆ. ಆ ವಿದ್ವಾಂಸರಿಬ್ಬರೂ ನನ್ನ ಪಾಲಿಗೆ ಅತ್ಯಂತ ಮೆಚ್ಚಿನ ಗುರುಗಳಾಗಿದ್ದರು. ವಾಚನದ ಆರಂಭದಲ್ಲಿ ವೆಂಕಟೇಶಯ್ಯ ಕಾವ್ಯದ ಮೊದಲ ಏಳೆಂಟು ಪದ್ಯಗಳನ್ನು ವಾಚಿಸಿ ನಂತರ ಆ ದಿನದ ಕಥಾ ಭಾಗಕ್ಕೆ ಬರುತ್ತಿದ್ದರು. ದಿನವೂ ಕೇಳಿ ಕೇಳಿ ಆ ಪದ್ಯಗಳೆಲ್ಲ ನನಗೆ

ಬಾಯಿಪಾಠವಾಗಿಬಿಟ್ಟಿದ್ದವು. ಮನೆಯಲ್ಲಿ ದೇವರಿಗೆ ನಮಸ್ಕಾರ ಮಾಡುವಾಗ ಉಳಿದವರು ಸಂಸ್ಕೃತ ಶ್ಲೋಕಗಳನ್ನು ಹೇಳುವಂತೆ ನಾನು ಕುಮಾರವ್ಯಾಸ ಭಾರತದ ಶ್ರೀವನಿತೆಯರಸನೆ, ವಿಮಲ ರಾಜೀವ ಪೀಠನ ಪಿತನೆ' ಮೊದಲಾದ ಪ್ರಾರ್ಥನಾ ಪದ್ಯಗಳನ್ನು ಹೇಳಿಕೊಂಡು ದೇವರಿಗೆ ಅಡ್ಡ ಬೀಳುತ್ತಿದ್ದೆ. ಅವು ಕಲ್ಲು ಹಿತ್ತಾಳೆಗಳ ಮೂರ್ತಿಗಳಾದರೆ ತಾನೆ ಏನು? ದೇವರಲ್ಲವೆ? ಅವುಗಳ ಕಲ್ಲೆದೆಯೂ ಕರಗಿರಬೇಕು! ಎಲಾ! ಇಷ್ಟು ಚಿಕ್ಕ ಹುಡುಗ ಕನ್ನಡದ ಮಹಾಕವಿಯೊಬ್ಬನ ಕವಿತೆ ಹೇಳಿಕೊಂಡು ನಮಗೆ ನಮಸ್ಕಾರ ಮಾಡುತ್ತಿದೆಯಲ್ಲ! ಪಾಪ! ಇದಕ್ಕೂ ಕೊಂಚ ಕವಿತೆ ಬರೆಯುವ ಶಕ್ತಿ ಕೊಡೋಣ ಅನ್ನಿಸಿ ಅನುಗ್ರಹ ಮಾಡಿರಬೇಕು. ಮುಂದೆ ನಾನು ಕನ್ನಡದಲ್ಲಿ ಕವಿತೆ ಬರೆಯಲು ತೊಡಗಿದ್ದಕ್ಕೆ ಇದೇ ಕಾರಣ ಇದ್ದರೂ ಇರಬಹುದು!

ಇದೆಲ್ಲ ಹೇಳಿದ್ದಕ್ಕೆ ಕಾರಣ ಇಷ್ಟೆ. ನನ್ನ ಮೊದಲ ಶ್ರೇಷ್ಠ ಗುರುಗಳು ಶಾಲೆಯೊಳಗಿನ ಉಪಾಧ್ಯಾಯರಲ್ಲ. ಹೊರಗಿನ ಹಿರಿಯರು ಕುಮಾರವ್ಯಾಸ ಭಾರತದಂಥ ಮಹಾಕಾವ್ಯವನ್ನು ಓದಿ, ಅರ್ಥ ಹೇಳಿ ನನ್ನ ಬಾಳಿಗೆ ಚಿಕ್ಕ ವಯಸ್ಸಿನಲ್ಲೇ ಅಸಾಮಾನ್ಯ ಸಂಸ್ಕಾರ ಕೊಟ್ಟ ಪೂಜ್ಯರು. ಅವರಿಂದಾಗಿ ಆ ಕೃತಿಯ ಸಂಪನ್ನ ಭಾಗಗಳ ಸಾವಿರಾರು ಪದ್ಯಗಳು ನನ್ನ ತಲೆಯ ಮೇಲೆ ನಿರ್ಭರ ಜಲಪಾತದಂತೆ ನಿರಂತರ ಸುರಿದು ಹೋದುವು. ಆ ಕಾವ್ಯದ ಲಯ, ಪದಪುಂಜ ಕಾವ್ಯ ಭಾಷೆಗಳೆಲ್ಲ ನನ್ನ ಬಾಹ್ಯಪ್ರಜ್ಞೆಗೆ ಅರಿವಿಲ್ಲದಂತೆ ಆಳ ಮನಸ್ಸಿನ ಮೇಲೆ ಬಹು ಸೂಕ್ಷ್ಮ ಪ್ರಭಾವ ಮಾಡಿರಲೇಬೇಕು. ಮುಂದೆ ನಾನು ಕನ್ನಡ ಸಾಹಿತ್ಯವನ್ನೇ ವಿಶೇಷ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡುದಕ್ಕೆ ಈ ಅಜ್ಞಾತ ಸಂಸ್ಕಾರವೇ ಹಿನ್ನೆಲೆಯಾಗಿರಬೇಕು. ಇದನ್ನೆಲ್ಲ ಯೋಚಿಸುತ್ತ ಮನಸ್ಸು ಚಿಕ್ಕಂದಿನ ಆ ಅನುಭವಕ್ಕೆ ಹೊಸ ಅರ್ಥ ತುಂಬಿಕೊಳ್ಳುತ್ತ ಹೋಗುತ್ತದೆ. ಯಾರಿಗೆ ಗೊತ್ತು, ಆ ಇಬ್ಬರು ಮಹನೀಯರು ನಾಲ್ಕು ಮೈಲು ದೂರದ ಮತ್ತೂರಿನಿಂದ ನಡೆದು ಶಿವಮೊಗ್ಗಕ್ಕೆ ಬರುತ್ತಿದ್ದುದು ನನಗೆ ಇಂಥ ಸಂಸ್ಕಾರ ಕೊಡಲೆಂದೇ ಎಂದು ಭಾವಿಸಿ ನನ್ನ ಮನಸ್ಸು, ನೆನೆದಾಗಲೆಲ್ಲ ಕೃತಜ್ಞತೆಯಿಂದ ಆ ಹಿರಿಯರ ಪಾದಕ್ಕೆ ಬೀಳುತ್ತದೆ.

### ಕೇಶವ ಘನಪಾಠಿಗಳು

ಕೇಶವ ಘನಪಾಠಿಗಳು ಶಿವಮೊಗ್ಗದ ವೈದಿಕ ವಲಯದಲ್ಲಿ ಬಹಳ ಗಣ್ಯರೆನಿಸಿ ಕೊಂಡಿದ್ದವರು. ಶಿವಮೊಗ್ಗ ಮಾತ್ರವಲ್ಲದೆ ಸುತ್ತಮುತ್ತಲ ಊರುಗಳಲ್ಲೆಲ್ಲ ಅವರು ದೊಡ್ಡ ವೇದಪಾರಂಗತರು. ಜೊತೆಗೆ ಅಷ್ಟೇ ದೊಡ್ಡ ಸಂಸ್ಕೃತ ವಿದ್ವಾಂಸರು. ಅವರು ತಮ್ಮ ಗಂಭೀರ ದನಿಯಲ್ಲಿ ವೇದಮಂತ್ರಗಳನ್ನು ಸ್ವರಬದ್ಧವಾಗಿ ಪಠಣಮಾಡುತ್ತಿದ್ದರೆ ಗಂಟೆಗಟ್ಟಲೆ ಅದನ್ನು ಕೇಳಬಹುದಾದಷ್ಟು ಆಕರ್ಷಕವಾಗಿರುತ್ತಿತ್ತು. ವ್ಯಕ್ತಿಯಾಗಿ ಕೂಡ ಅವರು ಸರಳರೂ ಶಾಂತಚಿತ್ತರೂ ಆಗಿದ್ದವರು. ಸುತ್ತಮುತ್ತ ನಡೆಯುತ್ತಿದ್ದ ಶಾಂತಿ, ಹೋಮ, ಹವನಗಳಲ್ಲೆಲ್ಲ ಅವರಿಗೆ ವಿಶೇಷ ಪ್ರಾಧಾನ್ಯ ಇರುತ್ತಿತ್ತು. ಊರಿನವರಿಗೆ ಅವರ ಬಗ್ಗೆ ಬಹಳ ಗೌರವ, ಪೂಜ್ಯಭಾವ. ದಾರಿಯಲ್ಲಿ ಅವರು ಎದುರಾದರೆ ಜನ ಅವರಿಗೆ ತಲೆಬಾಗಿ ನಮಸ್ಕರಿಸಿ ಹೋಗುವರು. ಎತ್ತರವಾಗಿ

ಸ್ಫುರದ್ರೂಪಿಯಾಗಿದ್ದ ಅವರು ನಡೆದಾಡುವ ದೇವತೆ ಎಂದೇ ನನ್ನಂಥ ಅನೇಕರಿಗೆ ಅನ್ನಿಸಿದ್ದರೆ ಆಶ್ಚರ್ಯವಿಲ್ಲ.

ಆ ದಿನಗಳಲ್ಲಿ ಇನ್ನೂ ಹುಡುಗನಾಗಿದ್ದ ನಾನು ಬೆಳಗಿನ ಜಾವದಲ್ಲೇ ಎದ್ದು ಮನೆಗೆ ಹತ್ತಿರವಿದ್ದ ಭೀಮೇಶ್ವರ ದೇವಸ್ಥಾನಕ್ಕೆ ಸಂಪಿಗೆ ಹೂವು ಕೊಯ್ಯಲು ಹೋಗುತ್ತಿದ್ದೆ. ನನ್ನ ಜೊತೆಗೆ ರಂಗನಾಥ ಅಡಿಗ ಎಂಬ ಇನ್ನೊಬ್ಬ ಹುಡುಗನೂ ಇರುತ್ತಿದ್ದ. ನಾವು ಹೋಗುತ್ತಿದ್ದುದು ಯಾರಿಗೂ ಗೊತ್ತಾಗದಂತೆ ಕದ್ದು ಹೂವು ಕೊಯ್ಯುವುದಕ್ಕೆ! ಆ ಹೂವುಗಳನ್ನು ಅಕ್ಕಪಕ್ಕದ ಮನೆಗಳಿಗೆ ದೇವರ ಪೂಜೆಗೆಂದು ಕೊಡುತ್ತಿದ್ದೆವು. ಆ ಮನೆಗಳಲ್ಲಿ ನಮಗೆ ಆಗೀಗ ಕಾಫಿ ತಿಂಡಿ ಬೇರೆ ಸಿಗುತ್ತಿತ್ತು! ದೇವರ ಪೂಜೆಗೆ ಹೂ ಒದಗಿಸುವ ಉದ್ದೇಶ ಒಳ್ಳೆಯದೇ ನಿಜ, ಆದರೆ ಅದಕ್ಕೆ ನಾವು ಅನುಸರಿಸುತ್ತಿದ್ದ ವಿಧಾನ ಮಾತ್ರ ತಪ್ಪು ಎಂದು ನಮಗನ್ನಿಸಿರಲೇ ಇಲ್ಲ.

ಒಂದು ಬೆಳಗಿನ ಜಾವ ನಾವು ದೇವಸ್ಥಾನದ ಮರದ ಮೇಲೆ ಇದ್ದೇವೆ. ಆ ಹೊತ್ತಿಗೆ ಕೇಶವ ಘನಪಾಠಿಗಳು ದೇವಸ್ಥಾನದೊಳಕ್ಕೆ ಬಂದುಬಿಟ್ಟರು. ಕೈಯಲ್ಲಿ ದರ್ಭೆ ಹಿಡಿದು ವೇದಮಂತ್ರಗಳನ್ನು ಹೇಳುತ್ತ ಒಳಕ್ಕೆ ಬಂದ ಅವರನ್ನು ನೋಡಿ ಮರದ ಮೇಲಿದ್ದ ನಮಗೆ ಉಸಿರೇ ಅಡಗಿ ಹೋದಂತಾಯಿತು! ಬೆಳಿಗ್ಗೆ ಆರುಗಂಟೆಯ ಹೊತ್ತಿಗೇ ಬಂದು ದೇವಸ್ಥಾನದ ಒಳ ಜಗುಲಿಯಲ್ಲಿ ಕೂತು ಒಬ್ಬಿಬ್ಬರು ವಿದ್ಯಾರ್ಥಿಗಳಿಗೆ ವೇದಮಂತ್ರ ಹೇಳಿಕೊಡುವುದು ಅವರ ನಿತ್ಯದ ಪದ್ಧತಿ. ದಿನವೂ ಅವರು ಬರುವ ಮುಂಚೆಯೇ ನಾವು ಹೂ ಕೊಯ್ದುಕೊಂಡು ಹೋಗಿಬಿಟ್ಟಿರುತ್ತಿದ್ದೆವು. ಆ ದಿನ ಅವರೇ ಸ್ವಲ್ಪ ಮುಂಚೆ ಬಂದರೋ ಅಥವಾ ನಾವೇ ಕೊಂಚ ತಡವಾಗಿ ಹೋಗಿದ್ದೆವೋ ಹೇಗೋ. ನಾವು ಇರುವುದು ಅವರಿಗೆ ತಿಳಿಯದಿರಲಿ ಅಂತ ಮಾತು ನಿಲ್ಲಿಸಿ ಮರದ ಮೇಲೆ ತೆಪ್ಪಗೆ ಹಾಗೇ ಮುದುಡಿ ಹುದುಗಿಕೊಂಡೆವು. ಆದರೆ ಹೇಗೋ ಮರದ ಮೇಲಿರುವುದು ಅವರಿಗೆ ತಿಳಿದು ಹೋಗಿತ್ತು. ಮರದ ಕೆಳಗೆ ನಿಂತು "ಯಾರ್ರೋ ಅದು? ಇಷ್ಟು ಹೊತ್ತಿನಲ್ಲಿ ಮರ ಹತ್ತಿರುವವರು" ಅಂತ ಎತ್ತರದ ದನಿಯಲ್ಲಿ ಕೂಗಿದರು. ಉಪಾಯವಿಲ್ಲದೆ ಕೆಳಗಿಳಿದೆವು. "ಯಾಕೆ ಮರ ಹತ್ತಿದ್ದಿರಿ" ಎಂದು ಕೇಳಿದಾಗ ಊರು ನೋಡುವುದಕ್ಕೆ ಎಂದು ನಾನು ಉತ್ತರ ಕೊಟ್ಟೆ! ಅವರಿಗೆ ನಗು ಬಂದಿರಬೇಕು. "ಹೀಗೆ ಮಂಜು ಸುರಿಯುತ್ತಿರುವಾಗ ಊರು ನೋಡಲು ಮರ ಹತ್ತಿದ್ದಿರೋ. ಬಹಳ ಚಾಲಾಕಿ ಹುಡುಗನಂತೆ ಕಾಣುತ್ತೀ. ಅದಿರಲಿ, ಮೇಲೆತ್ತಿ ಕಟ್ಟಿರುವ ನಿಮ್ಮ ಪಂಚೆಯೊಳಗೆ ಇರುವುದೇನು" ಎಂದರು. ಈಗ ನಾವು ಸಿಕ್ಕಿ ಬಿದ್ದೆವು "ಅದು ಸಂಪಿಗೆ ಹೂವು ದೇವರ ಪೂಜೆಗೆ ಅಂತ ಕೊಯ್ದದ್ದು" ಎಂದೆ. ಘನಪಾಠಿಗಳು "ಓಹೋ ದೇವರ ಪೂಜೆಗೆ ಕದ್ದು ಹೂ ಕೊಯ್ಯುತ್ತಿದ್ದಿರೋ? ಪರವಾಗಿಲ್ಲ, ಕಿಲಾಡಿಗಳು" ಅಂತ ನಕ್ಕು ನಮ್ಮ ತಲೆ ಸವರಿ, "ಇರಲಿ ಆ ಹೂವು ನೀವೇ ಇಟ್ಟುಕೊಳ್ಳಿ, ನಿಮಗೆ ದೇವರ ಪೂಜೆಯ ಸರಿಯಾದ ರೀತಿಯನ್ನು ಹೇಳಿಕೊಡುತ್ತೀನಿ, ಬನ್ನಿ" ಅಂತ ಹೇಳಿ ನಮ್ಮನ್ನು ಕರೆದೊಯ್ದು ಅಲ್ಲೇ ಇದ್ದ ಒಳ ಜಗಲಿಯ ಮೇಲೆ ಕೂರಿಸಿಕೊಂಡರು. "ಎಲ್ಲಿ, ನಾನು ಹೇಳಿಕೊಡುವುದನ್ನು ತಪ್ಪಿಲ್ಲದೆ ಹೇಳುತ್ತೀರಾ" ಎಂದರು. ಆಗಲಿ ಅಂತ ಗೋಣು ಹಾಕಿದೆವು. ಘನಪಾಠಿಗಳು ತಮ್ಮ ಸೊಗಸಾದ ದನಿಯಲ್ಲಿ.

**ವಾಗರ್ಥಾವಿವ ಸಂಪೃಕ್ತೌ ವಾಗರ್ಥ ಪ್ರತಿಪತ್ತಯೇ**
**ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ**

ಎಂಬ ಶ್ಲೋಕವೊಂದನ್ನು ಭಾಗ ಭಾಗವಾಗಿ ಹೇಳಿಕೊಟ್ಟರು. "ಇದು ಮಹಾಕವಿ ಕಾಳಿದಾಸನ ರಘುವಂಶ ಎಂಬ ಕಾವ್ಯದ ಮೊದಲ ಶ್ಲೋಕ" ಎಂದು ಹೇಳಿ ಅದರ ಅರ್ಥವನ್ನು ವಿವರಿಸಿದರು. "ನಾಳೆ ಮತ್ತೆ ಬನ್ನಿ, ಹೂ ಕೊಯ್ಯುವುದಕ್ಕೆ ಅಲ್ಲ, ಸಂಸ್ಕೃತ ಕಲಿಯುವುದಕ್ಕೆ! ಕದ್ದು ಹೂ ಕೊಯ್ಯುವ ಬದಲು ಸಂಸ್ಕೃತ ಕಾವ್ಯ ಕಲಿಯಿರಿ. ಅದೇ ನಿಜವಾದ ಪೂಜೆ" ಎಂದರು. ಅವರು ನಮ್ಮನ್ನು ಮರದಿಂದ ಕೆಳಗಿಳಿಸಿದಾಗ ಭಯವಾಗಿತ್ತು. ನಮ್ಮನ್ನು ಶಿಕ್ಷಿಸಬಹುದು ಅಥವಾ ದೇವಸ್ಥಾನದ ಅರ್ಚಕರಿಗೆ ಒಪ್ಪಿಸಬಹುದು ಅಂತ ಭಾವಿಸಿದ್ದೆವು. ಆದರೆ ತಪ್ಪು ಮಾಡಿದ್ದ ನಮ್ಮ ತಲೆ ನೇವರಿಸಿ, ಪ್ರೀತಿಯಿಂದ ಒಳ್ಳೆಯ ಶ್ಲೋಕ ಹೇಳಿಕೊಟ್ಟ ಅವರ ಬಗ್ಗೆ ನಮಗೆ ಗೌರವ ಹುಟ್ಟಿತು. ಅವರ ಬಗ್ಗೆ ಮೊದಲೇ ಒಳ್ಳೆಯ ಮಾತು ಕೇಳಿದ್ದ ನಮಗೆ ಅವರು ಇನ್ನಷ್ಟು ದೊಡ್ಡವರಾಗಿ ತೋರಿದರು.

ಅಲ್ಲಿಂದ ಮುಂದೆ ಬಹಳ ಕಾಲ ಅವರ ಬಳಿ ಪಾಠಕ್ಕೆ ಹೋಗುತ್ತಿದ್ದೆ. ಅವರ ಬೋಧನೆಯ ರೀತಿ ಬಹಳ ಮೇಲು ನೆಲೆಯದಾಗಿತ್ತು. ಮೊದಲು ಶ್ಲೋಕ, ಆ ಮೇಲೆ ಅದರ ಅರ್ಥ, ಪದಗಳ ಅನ್ವಯ ಕ್ರಮ, ಸಂಧಿ ಸಮಾಸದಂಥ ವ್ಯಾಕರಣಾಂಶಗಳ ವಿವರಣೆ, ಆಕಾಂಕ್ಷೆ, ಇದೆಲ್ಲ ಮುಗಿಯುವ ಹೊತ್ತಿಗೆ ಒಂದು ಶ್ಲೋಕಕ್ಕೆ ಅರ್ಧಗಂಟೆ ಆಗಿರುತ್ತಿತ್ತು. ಆದರೆ ಶ್ಲೋಕ ಪ್ರತ್ಯಂಗಲ ವಶವಾಗುತ್ತಿತ್ತು. ಹಿಂದಿನ ದಿನ ಕಲಿತ ಶ್ಲೋಕವನ್ನು ಬರೆದುಕೊಂಡು ಮಾರನೆಯ ದಿನ ಕಂಠಪಾಠ ಮಾಡಿ ಒಪ್ಪಿಸಬೇಕಾಗಿತ್ತು. ಇದನ್ನೆಲ್ಲ ನಾನು ಉತ್ಸಾಹದಿಂದಲೇ ಮಾಡುತ್ತಿದ್ದೆ. ಅವರ ಹತ್ತಿರ ಅಷ್ಟು ಕಾಲ ಕಲಿಯಲು ಬೇಕಾದ ಶಿಷ್ಯನ ಶ್ರದ್ಧೆಯೂ ನನ್ನಲ್ಲಿದ್ದುದನ್ನು ಗಮನಿಸಿದರೆ ಈಗ ನನಗೆ ಆಶ್ಚರ್ಯವಾಗುತ್ತದೆ. ಶಿಷ್ಯನಾಗುವವನಲ್ಲಿ ನಿಜವಾಗಿ ಶ್ರದ್ಧೆ ಇದ್ದರೆ ಗುರುವೇ ಅವನನ್ನು ಹುಡುಕಿಕೊಂಡು ಬರುತ್ತಾನೆ ಎಂಬ ವೇದಾಂತದ ಮಾತು ನನ್ನ ವಿಷಯದಲ್ಲಿ ಲೌಕಿಕವಾಗಿಯೂ ನಿಜವಾಯಿತು. ಆಗ ಕಲಿತ ಸಂಸ್ಕೃತ ಮುಂದೆ ನನ್ನ ಸಾಹಿತ್ಯಾಧ್ಯಯನದಲ್ಲಿ ಬಹಳ ನೆರವಿಗೆ ಬಂತು. ನನಗೇ ಗೊತ್ತಿಲ್ಲದೆ ಹಿರಿಯರೊಬ್ಬರು ಗುರುವಾಗಿ ದೊರೆತು ನನ್ನನ್ನು ಸರಿಯಾದ ದಾರಿಗೆ ಹಚ್ಚಿದ್ದರು. ನನ್ನ ಅದೃಷ್ಟವೇ ಅದೃಷ್ಟ. ಚಿಕ್ಕವಯಸ್ಸಿನಲ್ಲೇ ಕುಮಾರವ್ಯಾಸ, ಕಾಳಿದಾಸರಂಥ ಮಹಾಕವಿಗಳ ಕಾವ್ಯ ನನ್ನ ಮೇಲೆ ಕೃಪೆ ಮಾಡಿದ್ದವು. ಮುಂದೆ ಪಂಪ, ರನ್ನ, ರುದ್ರಭಟ್ಟರಂಥ ಕವಿಗಳ ಸಂಸ್ಕೃತ ಶಬ್ದಭರಿತವಾದ ಕಾವ್ಯವನ್ನು ಅಭ್ಯಾಸಮಾಡುವಾಗ ಅವು ಜೊತೆ ವಿದ್ಯಾರ್ಥಿಗಳಿಗಿಂತ ನನಗೆ ಹೆಚ್ಚು ಹತ್ತಿರವಾದವು.

ನಾನು ಶಿವಮೊಗ್ಗದಲ್ಲಿರುವಾಗಲೇ ನನ್ನ ಮೇಲೆ ಪ್ರಭಾವ ಬೀರಿದ ಇನ್ನಿಬ್ಬರು ಗುರುಗಳು ನನಗೆ ವಿದ್ಯಾಲಯದಲ್ಲಿ ದೊರೆತವರು. ಇವರಲ್ಲಿ ಒಬ್ಬರು ನಾನು 'ಪೇಟೆ ಪ್ರೈಮರಿ ಶಾಲೆ'ಯಲ್ಲಿ ಓದುತ್ತಿದ್ದಾಗ ಅಲ್ಲಿ ಹೆಡ್ ಮಾಸ್ಟರ್ ಆಗಿದ್ದ ಶಾಮಣ್ಣನವರು; ಇನ್ನೊಬ್ಬರು ಸರ್ಕಾರಿ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದ ಜಿ.ಎಸ್. ಶಿವರುದ್ರಪ್ಪನವರು.

ನಾನು ಪ್ರೈಮರಿ ಶಾಲೆಯ ಒಂದನೆಯ ತರಗತಿಯಲ್ಲಿ ಓದುತ್ತಿರುವಾಗ ನನ್ನ ಅಕ್ಕ

ವಿಶಾಲಾಕ್ಷಿಯ ಮದುವೆಯ ಏರ್ಪಾಟಾಯಿತು. ಮದುವೆಯ ದಿನವೇ ನನಗೆ ಪರೀಕ್ಷೆ ಇತ್ತು. ಒಂದನೇ ಕ್ಲಾಸಿನ ಪರೀಕ್ಷೆ ತಾನೆ? ಏನು ಮಹಾ? ಅಕ್ಕನ ಮದುವೆಯ ದಿನ ಲಾಜಾಹೋಮಕ್ಕೆ ತಮ್ಮ ಇರದಿದ್ದರೆ ಹೇಗೆ ಅಂತ ಹೇಳಿ ನಾನು ಪರೀಕ್ಷೆಗೆ ಹೋಗಬೇಕಾಗಿಲ್ಲವೆಂದು ಮನೆ ಹಿರಿಯರು ತೀರ್ಮಾನಿಸಿಬಿಟ್ಟರು. ಪರೀಕ್ಷೆಗೆ ಹೋಗದಿದ್ದರೆ ಫೇಲು ಮಾಡಿಬಿಡುತ್ತಾರೆ ಅಂತ ನಾನು ಎಷ್ಟು ಗೋಗರೆದರೂ ಯಾರೂ ಜಪ್ಪಯ್ಯ ಅನ್ನಲಿಲ್ಲ. ಹಾಗಾಗಿ ನಾನು ಪರೀಕ್ಷೆಗೆ ಹೋಗಲಿಲ್ಲ. ಅದಾದ ಮೂರನೆಯ ದಿನ ನನ್ನ ಸಹಪಾಠಿ ನಾಗೇಶ್ ಸ್ಕೂಲಿನಿಂದ ನಮ್ಮ ಮನೆಗೆ ಏದುಸಿರು ಬಿಡುತ್ತ ಓಡಿ ಬಂದ. "ಹೆಡ್ ಮಾಸ್ಟರ್ ನಿನ್ನನ್ನು ಕರೆದುಕೊಂಡು ಬಾ ಅಂತ ಕಳಿಸಿದ್ದಾರೆ – ನೀನು ಪರೀಕ್ಷೆಗೆ ಬರಲಿಲ್ಲವಲ್ಲ ಅದಕ್ಕೆ" ಅಂದ. ಅವನಿಗೆ ಖುಷಿಯೋ ಖುಷಿ. ಹೆಡ್ ಮಾಸ್ಟರ್ ನನಗೆ ತಕ್ಕ 'ಪೂಜೆ' ಮಾಡ್ತಾರೆ ಅಂತ! ನಾನು ಅಂಜುತ್ತಲೇ ಸ್ಕೂಲಿಗೆ ಹೋದೆ. ಶಾಮಣ್ಣನವರು ನನ್ನ ಕಂಕುಳಲ್ಲಿದ್ದ ಪಠ್ಯಪುಸ್ತಕ ತೆಗೆದುಕೊಂಡು ಒಂದು ಪಾಠದ ಹಾಳೆ ತೆಗೆದು "ಎಲ್ಲಿ, ಇದನ್ನು ಓದು' ಎಂದರು. ನಾನು ಲಕ್ಷಣವಾಗಿ ಆ ಪಾಠ ಓದಿದೆ. ಅವರಿಗೆ ಮೆಚ್ಚಿಕೆಯಾಯಿತು. "ವೆರಿಗುಡ್, ನೀನು ಪಾಸಾಗಿದ್ದೀಯ. ಇನ್ನು ಮುಂದೆ ನೀನು ಎರಡನೆಯ ತರಗತಿಗೆ ಹೋಗಬೇಕು, ಗೊತ್ತಾಯಿತೆ" ಎಂದರು. ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಇದನ್ನೆಲ್ಲ ನೋಡುತ್ತ ಅಲ್ಲೇ ನಿಂತಿದ್ದ ನಾಗೇಶನ ಮುಖ ಹುಳಿ ಹುಳಿಯಾಯಿತು. ಪರೀಕ್ಷೆಯ ದಿನ ನನ್ನ ಹೆಸರು ಕರೆದಾಗ "ಅವನು ಬರಲ್ಲ ಸಾರ್. ಇವತ್ತು ಅವನ ಅಕ್ಕನ ಮದುವೆಯಂತೆ. ಫೇಲಾದರೆ ಪರವಾಗಿಲ್ಲ ಅಂತ ಹೇಳಿದ್ದಾನೆ" ಅಂತ ಹೆಡ್‌ಮಾಸ್ಟರಿಗೆ ಹೇಳಿದ್ದವನು ಅವನೇ ಅಂತೆ! ನಾನು ಹೇಳದ ಮಾತನ್ನೂ ಸೇರಿಸಿ ಹೇಳಿದ್ದ.

ಶಾಮಣ್ಣನವರ ಮನಸ್ಸು ದೊಡ್ಡದು. ಪರೀಕ್ಷೆಗೆ ಹೋಗದಿದ್ದ ನನ್ನನ್ನು ಅವರು ಸಹಜವಾಗಿಯೇ ಫೇಲ್ ಮಾಡಬಹುದಾಗಿತ್ತು. ಆದರೆ ಶಾಮಣ್ಣನವರು ಮಾತ್ರ ಮೂರು ದಿನ ಬಿಟ್ಟು, ಮದುವೆಯ ಗಲಾಟೆಗಳೆಲ್ಲ ಮುಗಿದ ಮೇಲೆ ನನ್ನನ್ನು ಕರೆಸಿ, ಪಾಠ ಓದಿಸಿ ಪಾಸ್ ಮಾಡಿದ್ದರು. ಸದಾ ಕೈಯಲ್ಲಿ ಒಂದು ಬೆತ್ತ ಹಿಡಿದು ಶಿಸ್ತಿನ, ಶಿಕ್ಷೆಯ ಪ್ರತಿಮೂರ್ತಿಯಾಗಿ ಕಾಣುತ್ತಿದ್ದ ಅವರು ಎಷ್ಟು ಉದಾರಿಗಳು ಅಂತ, ಯೋಚಿಸಿದಾಗಲೆಲ್ಲ ನನಗೆ ಅನಿಸುತ್ತದೆ ಬೆತ್ತ ಅವರ ಕೈಯಲ್ಲಿರುತ್ತಿದ್ದುದು ತುಂಟ ಹುಡುಗರನ್ನು ಕೊಂಚ ಭಯದಲ್ಲಿಡಲೇ ಹೊರತು ಹೊಡೆಯಲೆಂದಲ್ಲ. ಎಂದೂ ಅವರು ಯಾರನ್ನಾದರೂ ಹೊಡೆದದ್ದನ್ನು ನಾನು ನೋಡಲಿಲ್ಲ. ಫೇಲ್ ಮಾಡಿದ್ದರೆ ನಾನು ಒಂದು ವರ್ಷ ಓದಿನಲ್ಲಿ ಹಿಂದೆ ಬಿದ್ದು ನನ್ನ ಜೀವನದಲ್ಲಿ ಮುಂದೆ ಏನೆಲ್ಲ ಪಲ್ಲಟವಾಗುತ್ತಿತ್ತೋ ಏನೋ. ಆದರೆ ಶಾಮಣ್ಣನವರ ಔದಾರ್ಯದಿಂದ ನಾನು ಪಾರಾದೆ.

ಶುದ್ಧವಾಗಿ ಬರೆಯಬೇಕು ಮತ್ತು ಹಾಡುವುದನ್ನು ಕಲಿಯಬೇಕು – ಇಷ್ಟನ್ನು ಶಾಮಣ್ಣನವರು ಎಲ್ಲ ಹುಡುಗರಿಂದ ನಿರೀಕ್ಷಿಸುತ್ತಿದ್ದರು! ನಾನು ನಾಲ್ಕನೆಯ ತರಗತಿಯಲ್ಲಿ ಅವರ ಕ್ಲಾಸಿನ ವಿದ್ಯಾರ್ಥಿಯಾಗಿದ್ದಾಗ ಪ್ರತಿದಿನವೂ ಅವರು ವಿದ್ಯಾರ್ಥಿಗಳಿಗೆ ಉಕ್ತಲೇಖನ ಬರೆಸುತ್ತಿದ್ದರು. ನಂತರ ನಮಗೆ ಕೆಲವು ಲೆಕ್ಕ ಮಾಡಲು ಕೊಟ್ಟು ನಮ್ಮ ಬರೆಹಗಳನ್ನು ಅಲ್ಲಿಯೇ ತಿದ್ದುತ್ತಿದ್ದರು.

ಸ್ಲೇಟಿನ ಮೇಲೆಯೇ ಅಂಕಗಳನ್ನು ಹಾಕುತ್ತಿದ್ದರು. ನಾನು ಕನ್ನಡ ಶುದ್ಧವಾಗಿ ಬರೆಯಲು ಕಲಿತಿದ್ದೆ. ಪ್ರತಿ ಉಕ್ತಲೇಖನದಲ್ಲೂ ನನಗೆ ಹತ್ತಕ್ಕೆ ಹತ್ತು ಅಂಕ ಬರುತ್ತಿತ್ತು. ಒಂದು ದಿನ ಮಾತ್ರ ಒಂಬತ್ತು ಅಂಕ ಬಂತು. ಉಕ್ತಲೇಖನದಲ್ಲಿ ಯಾವ ಅಕ್ಷರವನ್ನು ತಿದ್ದಿರಲಿಲ್ಲ. ಎಲ್ಲ ಸರಿಯಾಗಿತ್ತು. ತಪ್ಪಿಲ್ಲದಿದ್ದರೂ ಕಡಿಮೆ ಅಂಕ ಕೊಟ್ಟಿದ್ದಾರಲ್ಲ ಅಂತ ನನಗೆ ಅಳುವೇ ಬರುವಂತಾಯಿತು. ಧೈರ್ಯ ಮಾಡಿ ಶಾಮಣ್ಣನವರ ಹತ್ತಿರ ಹೋಗಿ ಆ ಬಗ್ಗೆ ಕೇಳಿದೆ. ಅವರು ಕೂಡಲೇ ಉಕ್ತಲೇಖನದ ಕೆಳಗೆ ಬರೆದಿದ್ದ ನನ್ನ ಹೆಸರನ್ನು ತೋರಿಸಿದರು. ಅಲ್ಲಿ ಲಕ್ಷ್ಮಿನಾರಾಯಣ ಭಟ್ಟ ಅಂತ ಬರೆದಿದ್ದೆ. "ಲಕ್ಷ್ಮಿ ಆದ ಮೇಲೆ ದೀರ್ಘ ಹಾಕಬೇಕು. ಬಿಡಿ ಪದವಾಗಿ ಬಂದಾಗ ಮಾತ್ರ ಅದು 'ಲಕ್ಷ್ಮಿ' ಅಷ್ಟೆ. ಉಳಿದಂತೆ 'ಲಕ್ಷ್ಮೀ' ಅಂತಲೇ ಇರಬೇಕು ಅಂದರು. ನಾನು ಕೂಡಲೇ "ನನ್ನ ಹೆಸರು ಉಕ್ತಲೇಖನಕ್ಕೆ ಸೇರಿದ್ದಲ್ಲವಲ್ಲ" ಎಂದೆ. ಅವರು ನಕ್ಕು, ಸೇರಿದೆಯೋ ಇಲ್ಲವೋ, ಅದು ತಪ್ಪು ತಾನೆ? ತಿದ್ದಿಕೊಳ್ಳಬೇಕಾದದ್ದಲ್ಲವೆ" ಎಂದರು. ಹೀಗೆ ನಾನು ಮುಂದೆ ಕನ್ನಡದಲ್ಲಿ ತಪ್ಪಿಲ್ಲದೆ ಬರೆಯುವಂತೆ ಮಾಡಿದರು. ಇಂದಿಗೂ ನಾನು ನೂರಾರು ಪುಟ ಕನ್ನಡದಲ್ಲಿ ಬರೆದರೂ (ಕೈತಪ್ಪಿನಿಂದಾಗಬಹುದಾದದ್ದನ್ನು ಬಿಟ್ಟರೆ) ಎಲ್ಲೂ ಕಾಗುಣಿತದ ತಪ್ಪು ಮಾಡುವುದಿಲ್ಲ. ನನ್ನ ಈ ಹೆಮ್ಮೆಗೆ ಕಾರಣರಾದವರು ಶಾಮಣ್ಣನವರು.

ಎಲ್ಲ ಮಕ್ಕಳೂ ಹಾಡುವುದನ್ನು ಕಲಿಯಬೇಕು ಎನ್ನುವುದು ಅವರ ಒಂದು ವಿಚಿತ್ರ ಅಪೇಕ್ಷೆಯಾಗಿತ್ತು. ನನ್ನ ಮನೆಯಲ್ಲಿ ಅಕ್ಕಂದಿರಿಂದಾಗಿ ಸ್ವಲ್ಪ ಸಂಗೀತದ ವಾತಾವರಣ ಇತ್ತು. ಬಾಲಕನಾಗಿದ್ದಾಗ ನಾನು ಹಾಡುತ್ತಿದ್ದುದೂ ಉಂಟು. ನಮ್ಮ ತರಗತಿಯಲ್ಲಿ ಹಾಡುವ ಶಕ್ತಿ ಇದ್ದ ಸುಂದರರಾಜ್ ಎಂಬ ಇನ್ನೊಬ್ಬ ಹುಡುಗ ಇದ್ದ. ಶಾಮಣ್ಣನವರು ನಮ್ಮಿಂದ ಹಾಡಿಸುತ್ತಿದ್ದುದಲ್ಲದೆ ಕೆಲವು ಹೊಸ ಹಾಡು ಹೇಳಿಕೊಟ್ಟರು. ಅವುಗಳಲ್ಲಿ 'ರಾಮತಾರಕ ನಾಮ ಮಹಿಮಾನಂದ ಪರವಶವೇ ಸುಖ' ಎಂಬ ಹಾಡು, ಮತ್ತು ನಾಟಕದ್ದೆಂಬಂತೆ ತೋರುವ 'ಮಾತೇ ಮಾತನಾಡದೆ ಕುಳಿತಿರಲ್ಯಾಕೆ, ಅಮ್ಮಾ ಸಂಶಯವೇನಮ್ಮಾ ನಿನ್ನ ಪಾದಕೆ ಎರಗುವೆನಮ್ಮಾ' ಎಂಬ ಹಾಡು ಇಂದಿಗೂ ನನಗೆ ಅರ್ಧಂಬರ್ಧ ಜ್ಞಾಪಕ ಇದೆ. ಸಂಗೀತದ ಬಗ್ಗೆ ನನ್ನೊಳಗಿದ್ದ ಆಸ್ಥೆಯನ್ನು ಎಚ್ಚರಿಸಿದವರೂ ಶಾಮಣ್ಣನವರೇ.

### ಡಾ. ಜಿ. ಎಸ್. ಶಿವರುದ್ರಪ್ಪನವರು

ನಾನು ಶಿವಮೊಗ್ಗದ ಇಂಟರ್‌ಮಿಡಿಯೆಟ್ ಕಾಲೇಜಿನಲ್ಲಿದ್ದಾಗ ಡಾ. ಜಿ. ಎಸ್. ಶಿವರುದ್ರಪ್ಪನವರು ನಮಗೆ ಕನ್ನಡ ಅಧ್ಯಾಪಕರಾಗಿ ಬಂದರು. ಅವರು ನಮಗೆ 'ರುದ್ರವೀಣೆ' ಎಂಬ ಕಥಾಸಂಕಲನವನ್ನು ಹರಿಹರ ಕವಿಯ 'ಗಿರಿಜಾ ಕಲ್ಯಾಣ' ಎಂಬ ಕಾವ್ಯವನ್ನೂ ಪಾಠ ಮಾಡುತ್ತಿದ್ದರು. ಅವರ ಪಾಠದ ರೀತಿ ವಿದ್ಯಾರ್ಥಿಗಳಿಗೆಲ್ಲ ಬಹಳ ಪ್ರಿಯವಾಗಿತ್ತು. ಉಳಿದ ಪೀರಿಯಡ್ಡುಗಳಲ್ಲಿ ಅರ್ಧಂಬರ್ಧ ಖಾಲಿ ಇರುತ್ತಿದ್ದ ನಮ್ಮ ತರಗತಿ ಅವರ ಪೀರಿಯಡ್ಡಿನಲ್ಲಿ ತುಂಬಿ ಹೋಗಿರುತ್ತಿತ್ತು.

ಫಸ್ಟ್ ಟರ್ಮ್ ಪರೀಕ್ಷೆ ಆದ ಮೇಲೆ ಜಿ.ಎಸ್.ಎಸ್. ಮೌಲ್ಯಮಾಪನ ಮಾಡಿದ ಉತ್ತರ ಪತ್ರಿಕೆಗಳನ್ನು ತರಗತಿಗೆ ತಂದರು. ಉಪಾಧ್ಯಾಯರು ಉತ್ತರದ ಪ್ರತಿಯೊಂದು ಸಾಲನ್ನೂ

ಓದಿ ನಂಬರು ಹಾಕುತ್ತಿದ್ದ ಕಾಲ ಅದು! ಜಿ.ಎಸ್.ಎಸ್. ಪತ್ರಿಕೆಗಳ ಕಟ್ಟಿನಿಂದ ಒಂದು ಉತ್ತರ ಪತ್ರಿಕೆಯನ್ನು ಹೊರಗೆ ತೆಗೆದು ಅದರ ಕೆಲವು ಸಾಲುಗಳನ್ನು ಓದಿ ಮೆಚ್ಚಿಕೆ ಸೂಚಿಸಿದರು. "ಗಿರಿಜಾ ಕಲ್ಯಾಣ ಯಾವುದೋ ಕಾಲದ ಒಂದು ಪುರಾಣಕಥೆ ಮಾತ್ರ ಅಲ್ಲ, ಶಕ್ತಿ ಸ್ವರೂಪಳಾದ ಗಿರಿಜೆ ವಿಜ್ಞಾನದ ಸಂಕೇತ. ನೃತ್ಯ ಗುರುವಾದ ಶಿವ ಕಲೆಯ ಸಂಕೇತ. ಅವರ ಕಲ್ಯಾಣ ಕೇವಲ ಗಂಡು ಹೆಣ್ಣಿನ ವಿವಾಹವಲ್ಲ, ವಿಜ್ಞಾನ ಕಲೆಗಳ ಮಹಾಸಂಗಮ. ಅಂಥ ಸಂಗಮ ದಿಂದಲೇ ಇಂದಿನ ಜಗತ್ತಿಗೆ ಮುಕ್ತಿ" – ಇತ್ಯಾದಿ ಮಾತು ಅಲ್ಲಿತ್ತು. ಅದು ನನ್ನ ಪತ್ರಿಕೆ. ನಾನು ನಂಬಿದ್ದ ಥೋಂಗಿಗಳನ್ನೆಲ್ಲ ಬಹಳ ಭಾವುಕವಾಗಿ ವರ್ಣಿಸಿದ್ದೆ! ಮೇಷ್ಟ್ರು "ಇದನ್ನು ಬರೆದ ವಿದ್ಯಾರ್ಥಿ ಯಾರು?" ಎಂದು ಕೇಳಿದರು. ನಾನು ಹೊರಗೆ ಸಂಕೋಚ ಪಡುತ್ತ, ಒಳಗೆ ಬಹಳ ಹೆಮ್ಮೆ ಪಟ್ಟುಕೊಳ್ಳುತ್ತ ಮೆಲ್ಲಗೆ ಎದ್ದು ನಿಂತೆ. ಜಿ.ಎಸ್.ಎಸ್. "ಬಹಳ ಚೆನ್ನಾಗಿ ಬರೆದಿದ್ದೀರಿ. ತಗೊಳ್ಳಿ. ಹೀಗೆ ಚೆನ್ನಾಗಿ ಓದಿ" ಅಂತ ಹೇಳಿ ಪತ್ರಿಕೆ ಕೊಟ್ಟರು. ಕೈತುಂಬ ನಂಬರು ಹಾಕಿದ್ದರು. ನಾನೇ ಕ್ಲಾಸಿಗೆ ಫಸ್ಟು, ಎಲ್ಲರಿಗಿಂತ ಬಹಳ ಮೇಲೆ. ಎರಡನೆಯವನು ಅಲ್ಲೆಲ್ಲೋ ಕೆಳಗೆ ಪಾತಾಳದಲ್ಲಿದ್ದ!

ಇಂಟರ್‌ಮೀಡಿಯೆಟ್ ಪಾಸಾದ ಮೇಲೆ ನಾನು, ಶ್ರೀಕಂಠಭಟ್ಟ, ಸತ್ಯ – ಹೀಗೆ ಮೂವರು ಸಹಪಾಠಿಗಳು ಮೇಸ್ಟರ ಮನೆಗೆ ಹೋದೆವು. ಶ್ರೀಕಂಠಭಟ್ಟ ಕೊಪ್ಪದವರು; ಮಾವಿನ ತೋಟ ಇದ್ದವರ ಮಗ; ಎರಡು ಗಿಣಿಮೂತಿ ಮಾವಿನಕಾಯಿ ಗುರುದಕ್ಷಿಣೆಯಾಗಿ ತಂದಿದ್ದ. ಸತ್ಯ ಕಡೂರಿನಲ್ಲಿ ತೆಂಗಿನ ತೋಟ ಇದ್ದವರ ಮಗ; ಎರಡು ಗಿಟುಕು ಕೊಬ್ಬರಿ ತಂದಿದ್ದ. ನನಗೆ ಗುರುಗಳ ಬಗ್ಗೆ ಅಪಾರ ಭಕ್ತಿಯೇನೋ ಇತ್ತು. ಆದರೆ ಬರಿಗೈ ಸುದಾಮ! ಮೇಷ್ಟ್ರು ಬೇಡವೆಂದು ತಡೆಯುತ್ತಿದ್ದರೂ ಉಳಿದವರು ಗುರುದಕ್ಷಿಣೆ ಒಪ್ಪಿಸಿಯೇಬಿಟ್ಟರು. ನನಗೆ ಕಣ್ಣಲ್ಲಿ ನೀರು ಹಣಿಕುತ್ತಿತ್ತು. ಆದರೂ ಸಾವರಿಸಿಕೊಂಡು ದಿಢೀರನೆ ಗುರುಗಳ ಎದುರು ಸಾಷ್ಟಾಂಗ ಬಿದ್ದುಬಿಟ್ಟೆ. ಅವರಿಗೆ ಏನೋ ಕನಿಕರ. ನನ್ನನ್ನೆಬ್ಬಿಸಿ "ಮುಂದೆ ಏನು ಮಾಡುತ್ತೀರಿ?" ಎಂದರು. "ನನಗೆ ಓದು ಮುಂದುವರಿಸಲು ಸಾಧ್ಯವೇ ಇಲ್ಲ ಸಾರ್, ಬಹುಶಃ ನನ್ನ ಕತೆ ಮುಗೀತು. ಆದರೂ ಒಮ್ಮೊಮ್ಮೆ ಮೈಸೂರಿಗೆ ಹೋಗಿ ವಾರಾನ್ನ ಮಾಡಿಕೊಂಡಾದರೂ ಓದಬೇಕು ಅಂತ ಆಸೆಯಾಗುತ್ತೆ. ಅಲ್ಲಿ ತ. ಸು. ಶಾಮರಾಯರು ಅಂತ ಇದ್ದಾರಂತಲ್ಲ, ಬಹಳ ಒಳ್ಳೆಯವರಂತೆ. ಅವರೇನಾದರೂ ಸಹಾಯಮಾಡುತ್ತಾರೋ ಅಂತ ನೋಡಬೇಕು" ಅಂದೆ. ಮೇಷ್ಟ್ರು "ಹೌದು, ಇದಾರೆ. ತುಂಬ ಒಳ್ಳೆಯವರು. ನನ್ನನ್ನು ಒಬ್ಬ ತಾಯಿಯೆನ್ನುವಂತೆ ಕಂಡವರು" ಎಂದರು. ನಾನು ಮನಸ್ಸಿನಲ್ಲಿ ಆಗಲೇ ಗುರುತು ಮಾಡಿಕೊಂಡಿದ್ದ ಹೆಸರು, ಅವರ ಬಾಯಲ್ಲಿ ಬಂತಷ್ಟೆ. ಮೈಸೂರಿಗೆ ಹೋದರೆ ಅವರನ್ನು ಕಾಣಲೇಬೇಕು ಅನ್ನುವ ಭಾವನೆ ಬಲವಾಯಿತು.

### ತ. ಸು. ಶಾಮರಾಯರು

ಇಂಟರ್‌ಮೀಡಿಯೆಟ್ ಮುಗಿದ ಮೇಲೆ ನಾನು ಬಿ.ಎ. ಆನರ್ಸ್ ಸೇರಲು ಮೈಸೂರಿಗೆ ಹೊರಟೆ. ನನ್ನದು ಆಗ ಕಿತ್ತು ತಿನ್ನುವ ಬಡತನ. ಆದರೂ ಓದಲೇಬೇಕೆಂಬ ಗಟ್ಟಿ ಹುಚ್ಚು. ಟಿಕೆಟ್ ಇಲ್ಲದೆಯೇ ರೈಲು ಹತ್ತಿಬಿಟ್ಟೆ. ಸಿಕ್ಕಿ ಬೀಳದೆ ಮೈಸೂರು ಸೇರಿದೆ! ಆಗ ನನ್ನ ಜೇಬಿನಲ್ಲಿ ಇದ್ದುದೆಲ್ಲ ಒಂದು ರೂಪಾಯಿ ಹದಿಮೂರು ಆಣೆ!

ಮೈಸೂರಿನಲ್ಲಿ ಬಹಳ ಅಲೆದು ತ.ಸು. ಶಾಮರಾಯರ ಮನೆ ಪತ್ತೆ ಮಾಡಿದೆ. ಅವರನ್ನು ಕಂಡೆ. ನನ್ನ ಕಷ್ಟವನ್ನೆಲ್ಲ ಹೇಳಿಕೊಂಡೆ. "ಏನೇ ಆದರೂ ಓದಲೇಬೇಕೆಂದು ಬಂದುಬಿಟ್ಟಿದ್ದೇನೆ ಸಾರ್" ಅಂದೆ. ಶಾಮರಾಯರು ಹೇಳಿದರು.

"ಎಲಾ ನಿನ್ನ, ಇಷ್ಟು ಕಷ್ಟ ಇದೆ ನಿನಗೆ. ಆದರೂ ಓದ್ತೀನಿ ಅಂತಿಯಲ್ಲೋ, ಪರವಾಗಿಲ್ಲ, ಗಟ್ಟಿಪಿಂಡ, ಇರಲಿ, ನಾನೇನು ಮಾಡಬೇಕು?"

"ನಿಮ್ಮ ಮನೆಗೆ ವಾರದಲ್ಲಿ ಒಂದು ದಿನ ಊಟಕ್ಕೆ ಬರಲಾ?"

"ಅಯ್ಯೋ ಮುಂಡೇದೇ, ಅದಕ್ಕೆ ಕೇಳಬೇಕೇನೋ? ಒಂದಲ್ಲದಿದ್ದರೆ ನಾಲ್ಕು ದಿನ ಬಾ. ಬೇರೆ ಮನೇಲೂ ವಾರ ಸಿಕ್ಕರೆ ನೋಡು. ನಮ್ಮ ಮನೆಗೆ ಈಗಾಗಲೇ ನಾಲ್ಕೈದು ಹುಡುಗರು ಬರ್ತಾ ಇರೋದ್ರಿಂದ ಹಾಗೆ ಹೇಳ್ತಿದೀನಿ ಅಷ್ಟೆ."

"ಆಗಲಿ ಸಾರ್ ಬರ್ತೀನಿ"

"ಸ್ವಲ್ಪ ನಿಲ್ಲು, ನಿನ್ನ ಊಟ ಆಗಿದೆಯಾ?" ನಾನು ಊಟ ಮಾಡಿರಲಿಲ್ಲ. ಆದರೆ ಸಂಕೋಚ.

"ಪರವಾಗಿಲ್ಲ ಸಾರ್"

"ನಿನ್ನ ಮುಂಡಾಮೋಚ್ತು, ಪರವಾಗಿಲ್ಲವಂತೆ, ಏನು ಪರವಾಗಿಲ್ಲ? ವಾರಾನ್ನಕ್ಕೆ ಬರ್ತೀನಿ ಅಂತೀಯ. ಆದರೂ ಊಟ ಆಗಿಲ್ಲ ಅಂತ ಹೇಳೋದಕ್ಕೆ ನಾಚಿಕೆ. ಸಂಕೋಚ ಬೇಡ. ಈಗ ನಿನಗೋಸ್ಕರ ಹೊಸದಾಗಿ ಅಡಿಗೆ ಮಾಡಿಸಲ್ಲ. ಎಲ್ಲರ ಊಟ ಆಗಿದೆ. ಏನಾದರೂ ಇದ್ದರೆ ತಿನ್ನುವಿಯಂತೆ."

ಶಾಮರಾಯರು ಅಲ್ಲೇ ಕುಳಿತಿದ್ದ ಹುಡುಗನಿಗೆ ಹೇಳಿದರು. "ಏ ಸುಬ್ಬಣ್ಣ ಕೆಳಗೆ ಹೋಗಿ ನೋಡು, ತಿನ್ನಲು ಏನಾದರೂ ಇದ್ದರೆ ಸ್ವಲ್ಪ ತಗೊಂಡು ಬಾ!"

ಸುಬ್ಬಣ್ಣ (ಅವರ ಅಣ್ಣನ ಮಗ) ಒಳಗೆ ಹೋದ. ಬರುವಾಗ ಒಂದು ಪ್ಲೇಟಿನಲ್ಲಿ ಎಲೆಕೋಸಿನ ಹುಳಿ ಕಲೆಸಿದ ಅನ್ನ ತಂದುಕೊಟ್ಟ. ಶಾಮರಾಯರು ಹೇಳಿದರು.

"ಅದನ್ನು ತಗೊ. ಆ ಕುರ್ಚಿ ಮೇಲೆ ಕುಳಿತುಕೊಂಡು ನಿಧಾನ ತಿನ್ನು" ತಿಂದಾದ ಮೇಲೆ ಶಾಮರಾಯರು ಕೇಳಿದರು.

"ಊಟಕ್ಕೆ ಯಾವಾಗಿನಿಂದ ಬರ್ತೀಯ?"

"ನಾಳೆಯಿಂದ"

"ಇವತ್ತು ರಾತ್ರಿ ಬರೀ ನೀರು ಕುಡಿದು ಮಲಗ್ತೀಯಾ, ಹುಚ್ಚಪ್ಪ? ರಾತ್ರೀನೇ ಬಂದು ಬಿಡು, ಸಂಕೋಚ ಪಟ್ಟುಕೊಳ್ಳಬೇಡ. ರಾತ್ರಿ ಊಟಕ್ಕೆ ನಿನಗಾಗೇ ಕಾಯ್ತೀನಿ"

ನನ್ನ ಕಂಠ ಕಟ್ಟಿ ಬಂತು. ಕಣ್ಣಲ್ಲಿ ನೀರು ತುಂಬಿಕೊಂಡಿತು. ಅವರು ಮಹಾರಾಜ ಕಾಲೇಜಿನಲ್ಲಿ ಪ್ರಸಿದ್ಧ ಅಧ್ಯಾಪಕರು. ನಾನೋ ಊಟಕ್ಕೂ ದಿಕ್ಕಿಲ್ಲದ ಒಬ್ಬ ಬೀದಿ ಹುಡುಗ. ಅವರು ಊಟಕ್ಕೆ ನನಗಾಗಿ ಕಾಯ್ತಾರಂತೆ. ನಾನು ಎಲ್ಲಿ ಊಟವಿಲ್ಲದೆ ಉಪವಾಸ ಬೀಳ್ತೀನೋ ಅಂತ ಇದೆಲ್ಲ! "ಖಂಡಿತ ಬರ್ತೀನಿ ಸರ್" ಅಂದೆ.

"ಅದು ಸರಿ, ಎಲ್ಲಿ ಇಳಕೊಂಡಿದೀಯ?"

"ನನ್ನ ಸ್ನೇಹಿತರೊಬ್ಬರು ರೂಮು ಮಾಡ್ಕೊಂಡಿದ್ದಾರೆ. ಅವರ ವಿಳಾಸ ಇದೆ. ಅಲ್ಲಿಗೆ ಹೋಗ್ತೀನಿ" ಅಂತ ನಮಸ್ಕಾರ ಹೇಳಿ ಹೊರಬಂದೆ. ನನ್ನ ಮನಸ್ಸು ಆಗಲೇ ಹುರುಪುಗೊಂಡಿತ್ತು. ನಾನು ಮೈಸೂರಿನಲ್ಲಿ ಓದುವುದು ನಿಶ್ಚಿತವಾಗಿತ್ತು.

ಮೈಸೂರಿನಲ್ಲಿ ಭಗಿನೀ ಸೇವಾ ಸಮಾಜ ಎಂಬ ಒಂದು ಸಂಸ್ಥೆ ಇದೆ. ಅಲ್ಲಿ ಕಲಿಯುವ ವಿದ್ಯಾರ್ಥಿನಿಯರಿಗೆ ಸಂಜೆ ಹೊತ್ತು ಪ್ರತಿದಿನ ಒಂದು ಗಂಟೆ ಕಾಲ ಕನ್ನಡ ಸಾಹಿತ್ಯದ ಪಾಠ ಹೇಳುವ ಕೆಲಸವನ್ನು ಶಾಮರಾಯರು ನನಗೆ ಕೊಡಿಸಿದರು. ತಿಂಗಳಿಗೆ ಇಪ್ಪತ್ತು ರೂಪಾಯಿ ಸಂಬಳ. ಆ ಕಾಲಕ್ಕೆ ಅದು ಒಳ್ಳೆಯ ಮೊತ್ತವೇ ಆಗಿತ್ತು. ಆ ಕೆಲಸದಿಂದ ನನಗೆ ಸಾಹಿತ್ಯದ ಪಾಠ ಹೇಳುವ ಅನುಭವವೂ ದೊರೆತು ಮುಂದಕ್ಕೆ ನನ್ನ ಅಧ್ಯಾಪಕ ವೃತ್ತಿಯಲ್ಲಿ ಸಹಾಯವಾಯಿತು.

ಹೆಸರು ಹೇಳಿ ದೀಪ ಹಚ್ಚಬೇಕು ಎಂಬ ಒಂದು ಮಾತಿದೆಯೆಷ್ಟೆ? ಅದು ಯಾರ ವಿಷಯಕ್ಕೆ ಎಷ್ಟು ನಿಜವೊ. ನಾನು ಮಾತ್ರ ಎಲ್ಲೇ ಇರಲಿ, ದೀಪದ ಸ್ವಿಚ್ಚು ಒತ್ತುವಾಗ ತಪ್ಪದೆ ಅವರನ್ನು ನೆನೆಯುತ್ತೇನೆ. ಶಾಮರಾಯರ ನೆನಪು ನನ್ನ ಮನಸ್ಸಿನಲ್ಲಿ ನಿರಂತರವಾಗಿ ಬೆಳಗುತ್ತಿರುವ ಒಂದು ನಂದಾದೀಪ.

ಮೈಸೂರಿನಲ್ಲಿ ನನಗೆ ಇನ್ನೂ ಹಲವರು ಹಿರಿಯರ ಸಹಾಯ ಲಭಿಸಿತು. ತೀ.ನಂ. ಶ್ರೀಕಂಠಯ್ಯ ಮತ್ತು ಎಸ್.ವಿ. ರಂಗಣ್ಣನವರ ಮನೆಗಳಲ್ಲಿ ನನಗೆ ವಾರಾನ್ನದ ಅವಕಾಶ ಸಿಕ್ಕಿತು. ಡಿ.ಎಲ್. ನರಸಿಂಹಾಚಾರ್ಯ ಮತ್ತು ಎಸ್. ವಿ. ಪರಮೇಶ್ವರ ಭಟ್ಟರು ನನಗೆ ಮಹಾರಾಜ ಕಾಲೇಜಿನ 'ಹೆಲ್ತ್ ಕಿಚನ್' ಎಂಬ ಕ್ಯಾಂಟೀನಿನಲ್ಲಿ ವಾರಕ್ಕೆ ಒಂದು ದಿನದಂತೆ ಊಟದ ಅವಕಾಶ ಕಲ್ಪಿಸಿಕೊಟ್ಟರು.

ಕನ್ನಡ ಸಾಹಿತ್ಯದ ಬಿ.ಎ. ಆನರ್ಸ್ ಮತ್ತು ಎಂ.ಎ. ಓದುವಾಗ ನನಗೆ ಹಲವರು ಹಿರಿಯ ಅಧ್ಯಾಪಕರ ಪಾಠ ಕೇಳುವ ಭಾಗ್ಯ ದೊರೆಯಿತು. ತೀ.ನಂ.ಶ್ರೀ., ಡಿ.ಎಲ್.ಎನ್. ರಂಥ ಶ್ರೇಷ್ಠ ವಿದ್ವಾಂಸರು ನನಗೆ ಗುರುಗಳಾಗಿದ್ದರು ಎನ್ನುವುದು ನನಗೆ ಹೆಮ್ಮೆಯ ವಿಷಯ.

ಡಿ.ಎಲ್.ಎನ್. ಅವರ ತರಗತಿಯಲ್ಲಿ ಕನ್ನಡ ವಿದ್ವತ್ತಿಗೆ ಸಂಬಂಧಿಸಿದ, ಆದರೆ ಬರೆಹದಲ್ಲಿ ಇನ್ನೂ ಬೆಳಕೇ ಕಂಡಿರದ ಅನೇಕ ಅಂಶಗಳು ಪ್ರಸ್ತಾಪವಾಗುತ್ತಿದ್ದವು. ಇದು ಬೇರೆ ಎಲ್ಲೂ ಸಾಧ್ಯವಿರದಿದ್ದ ಒಂದು ಅಪರೂಪದ ಸಂಗತಿ.

ತೀ.ನಂ.ಶ್ರೀ. ಒಬ್ಬ ಶ್ರೇಷ್ಠ ಅಧ್ಯಾಪಕರು. ಮಾದರಿ ಎಂದರೂ ಸರಿಯೆ. ಪೂರ್ವಸಿದ್ಧತೆ ಇಲ್ಲದೆ ಅವರು ಎಂದೂ ತರಗತಿ ತೆಗೆದುಕೊಳ್ಳುತ್ತಿರಲಿಲ್ಲ. "ಅಧ್ಯಾಪಕ, ಎಂಥ ಮೇಧಾವಿಯೇ ಇರಲಿ ಸಿದ್ಧತೆ ಮಾಡಿಕೊಳ್ಳದೆ ಪಾಠ ಹೇಳುವುದು ವಿದ್ಯಾರ್ಥಿಗಳನ್ನು ಅವಮಾನಿಸಿದಂತೆ ಅದೊಂದು ಸರಸ್ವತಿ ದ್ರೋಹ" ಎಂದು ಅವರ ಭಾವನೆ. "ಮುಂದೆ ನೀವೂ ಅಧ್ಯಾಪಕರಾಗ ಬಹುದು; ಈ ಮಾತು ನೆನಪಿರಲಿ" ಎಂದು ನಮಗೆಲ್ಲ ಅವರು ಹೇಳುತ್ತಿದ್ದುದುಂಟು. ಪಾಠದ ವಿಷಯವನ್ನು ಅದರ ಸ್ಥೂಲ ವಿವರಗಳ ಸಹಿತ ಅವರು ಮನಸ್ಸಿಗೆ ಖಚಿತ ಮಾಡಿಕೊಂಡಿರುತ್ತಿದ್ದರು. ಹಾಗೆಂದೇ ಅವರ ಉಪನ್ಯಾಸದಲ್ಲಿ ಎಂದೂ ಅರ್ಥ ಸಂದಿಗ್ಧತೆ ಇರುತ್ತಿರಲಿಲ್ಲ. ಅರ್ಥ ವ್ಯಕ್ತಿ ಅವರ ವಾಗ್ಮಿತೆಯ ಒಂದು ಮುಖ್ಯ ಲಕ್ಷಣವಾಗಿತ್ತು. ಕಾವ್ಯಮೀಮಾಂಸೆ ಇರಲಿ, ಭಾಷಾಶಾಸ್ತ್ರ ಇರಲಿ, ಅವರ ತರಗತಿ ಎಂದೂ ನೀರಸವಾದದ್ದಿಲ್ಲ. ಮಾತನಾಡುವಾಗ ಪ್ರತಿ ವಿಷಯಕ್ಕೆ ಒಂದು ಸೊಗಸಾದ ನಿದರ್ಶನ. ಅದು ಅವರಿಗೆ ಅಲ್ಲಿಯೇ ಸ್ಫುರಿಸಿತೆಂಬಂಥ ಸಹಜತೆಯಲ್ಲಿ ಹಾಯುತ್ತಿತ್ತು. ಜಗತ್ತಿನ ಹಿರಿಯ ಲೇಖಕರಾದ ವಾಲ್ಮೀಕಿ, ಕಾಳಿದಾಸ, ಭಾಸ, ಅಶ್ವಘೋಷ, ಹಾಲರಾಜ, ಅಮರು, ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಕೀಟ್ಸ್, ಪಂಪ, ರನ್ನ, ಕುಮಾರವ್ಯಾಸ, ಕುವೆಂಪು, ಬೇಂದ್ರೆ, ಪುತಿನ – ಹೀಗೆ ಸಂಸ್ಕೃತ, ಇಂಗ್ಲಿಷ್, ಹಳಗನ್ನಡ ಹೊಸಗನ್ನಡ, ಕವಿಗಳಿಂದ ಅವರು ರುಚಿಕಟ್ಟಾದ ಕಾವ್ಯ ಭಾಗಗಳನ್ನು ಉದ್ಧರಿಸುತ್ತ ವಿದ್ಯಾರ್ಥಿಗಳ ಜ್ಞಾನವನ್ನು, ರುಚಿ ಶುದ್ಧಿಯನ್ನು ಬೆಳೆಸುತ್ತಿದ್ದರು; ಅವರು ಹಾಯಬೇಕಾದ ಕ್ಷೇತ್ರಗಳನ್ನೂ ಹತ್ತಬೇಕಾದ ಶಿಖರಗಳನ್ನೂ ಸೂಚಿಸುತ್ತಿದ್ದರು. ಅವರ ಹಲವು ಉಪನ್ಯಾಸಗಳು ತುಂಬ ರಸಭರಿತವಾಗಿರುತ್ತಿದ್ದವು. ಹಾಲುಖೀರು ತನ್ನಷ್ಟಕ್ಕೆ ತಾನೇ ರುಚಿಯಾದದ್ದು. ಅಂಥದರಲ್ಲಿ ಗುಟುಕಿಗೊಮ್ಮೆ ಕರಿದ ಗೋಡಂಬಿ ದ್ರಾಕ್ಷಿಗಳು ಸಿಗುವಂತಿದ್ದರೆ ಹೇಗಿರಬೇಡ!

ಇದೆಲ್ಲದರ ಜೊತೆಗೆ ರಾಮಕೃಷ್ಣ ಪರಮಹಂಸ, ವಿವೇಕಾನಂದ, ರಮಣ ಮಹರ್ಷಿಗಳಿಗೆ ಸಂಬಂಧಿಸಿದ ಅನೇಕ ಆಧ್ಯಾತ್ಮಿಕ ಬರೆಹಗಳೂ ನನ್ನ ಮನಸ್ಸಿನ ಒಂದು ಮುಖ್ಯ ಭಾಗವನ್ನು ದೀಪ್ತಗೊಳಿಸಿದೆ. ಈವರೆಗೆ ನನಗೆ ಓದಲು ದೊರೆತ ನೂರಾರು ಉತ್ತಮ ಪುಸ್ತಕಗಳ ಲೇಖಕರೂ ನನ್ನ ಗುರುಗಳೇ. ಇವರೆಲ್ಲರಿಂದ ಗಳಿಸಿದ ಜ್ಞಾನದ ಋಣವನ್ನು ನೆನೆಯುವುದಷ್ಟೇ ನಾನು ಅವರಿಗೆ ಸಲ್ಲಿಸಬಹುದಾದ ಗುರುಕಾಣಿಕೆ.

❖

# ವಾತ್ಸಲ್ಯದ ಗುರು

## (ಡಾ॥ ಎಸ್.ಎಸ್. ಲಕ್ಷ್ಮೀನಾರಾಯಣ ಭಟ್ಟ)

*● ಡಾ॥ ಡಿ. ಮಂಗಳಾ ಪ್ರಿಯದರ್ಶಿನಿ*

**ನಾ**ನು ಬಿ.ಎ. ಓದುತ್ತಿದ್ದಾಗ, ನಮ್ಮ ಮನೆಗೆ ಬಂದ ಅತಿಥಿಗಳೊಡನೆ ಮತ್ತೊಬ್ಬ ಅಪರಿಚಿತ ವ್ಯಕ್ತಿ ಬಂದಿದ್ದರು. ಪರಿಚಯ ಮಾಡಿಸಿದ ಸಂಬಂಧಿಗಳು, 'ಇವರು ಎಸ್. ಎಸ್. ಲಕ್ಷ್ಮೀನಾರಾಯಣ ಭಟ್ಟ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಕನ್ನಡ ಮೇಷ್ಟ್ರು', ಎಂದರು. ಅವರು ನನ್ನನ್ನು ಬಹಳ ಅಭಿಮಾನದಿಂದ ಮಾತನಾಡಿಸಿ, 'ಕನ್ನಡ ಎಂ.ಎ. ಮಾಡಿ. ನಮ್ಮ ವಿಭಾಗಕ್ಕೆ ವಿದ್ಯಾರ್ಥಿನಿಯಾಗಿ ಬನ್ನಿ' ಎಂದರು. ಹೀಗೆ, ಕನ್ನಡ ಎಂ.ಎ. ಮಾಡಬೇಕು ಎನ್ನೋ ಮೊದಲ ಹೆಜ್ಜೆಯಲ್ಲಿ ನನಗೆ ಈ ಗುರುಗಳ ಆಶೀರ್ವಾದ ದೊರೆಯಿತು. ಅಲ್ಲಿಂದ ಇಲ್ಲಿಯವರೆಗೆ ಈ ಗುರುಗಳು ನನ್ನ ಬದುಕಿನಲ್ಲಿ ಸದಾ ಮಾರ್ಗದರ್ಶನ ಮಾಡುತ್ತಾ ಬಂದಿದ್ದಾರೆ.

'ನಮ್ಮ ಮೇಷ್ಟ್ರ'ನ್ನು ನೆನಪು ಮಾಡಿಕೊಳ್ಳಲು ಹೊರಟಾಗ, ನನ್ನ ಮನಸ್ಸು ಎಪ್ಪತ್ತರ ದಶಕದ ಕೊನೆಯ ಭಾಗಕ್ಕೆ ಓಡುತ್ತದೆ. ಬೆಂಗಳೂರು ವಿಶ್ವವಿದ್ಯಾಲಯ, ಸ್ನಾತಕೋತ್ತರ ವಿಭಾಗಗಳಿಗೆ 'ಸೆಮೆಸ್ಟರ್ ಪದ್ಧತಿ'ಯನ್ನು ಅದೇ ವರ್ಷ ಆರಂಭಿಸಿತ್ತು. ನಾವು ಆ ಪದ್ಧತಿಯ ಮೊದಲನೇ ಬ್ಯಾಚಿನ ವಿದ್ಯಾರ್ಥಿಗಳು. ಜ್ಞಾನಭಾರತಿಯ ಕನ್ನಡ ವಿಭಾಗಕ್ಕೆ ಆಗ ತುಂಬು ಉತ್ಸಾಹ ಪುಟಿಯುತ್ತಿದ್ದ ಹರೆಯ. ಅಲ್ಲಿದ್ದ ಎಲ್ಲ ಮೇಷ್ಟ್ರುಗಳೂ ಒಬ್ಬರ ಮೇಲೆ ಒಬ್ಬರು ಸ್ಪರ್ಧಿಸುವಂತೆ ನಮಗೆ ತರಗತಿಗಳನ್ನು, ವಿಶೇಷ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಸದಾ ಅಸೈನ್‌ಮೆಂಟುಗಳು, ನೋಟ್ಸುಗಳು, ಟೆಸ್ಟುಗಳು, ವಿಚಾರ ಸಂಕಿರಣಗಳು – ಹೀಗೆ ಸಾಹಿತ್ಯಲೋಕದ ಗಾಢ ಪರಿಚಯ ನಮಗಾಯಿತು. ಆ ಹೊತ್ತಿನಲ್ಲಿ ನಮಗೆ ಪಾಠ ಹೇಳುತ್ತಿದ್ದವರು ಕನ್ನಡ ನಾಡಿನ ಖ್ಯಾತ ಕವಿಗಳು, ಕಾದಂಬರಿಕಾರರು, ನಾಟಕಕಾರರು, ವಿಮರ್ಶಕರು, ಭಾಷಾ ವಿಜ್ಞಾನಿಗಳು, ಸಂಶೋಧಕರು – ಹೀಗೆ ಸಾಲು ಸಾಲು ಪ್ರತಿಭಾವಂತ ಅಧ್ಯಾಪಕರು.

ನಾನು ಕನ್ನಡ ವಿಭಾಗಕ್ಕೆ ಹೊಸ ವಿದ್ಯಾರ್ಥಿನಿಯಾಗಿ ಮೊದಲನೇ ದಿನ ಎಂ.ಎ. ತರಗತಿಗೆ ಹಿಂಜರಿಕೆಯಿಂದಲೇ ಹೋದೆ. ಅದಾಗಲೇ ಒಂದು ತರಗತಿ ಪ್ರಾರಂಭವಾಗಿತ್ತು. ಕೊಠಡಿ ಬಾಗಿಲು ಹಾಕಿತ್ತು. ಹೊರಗೆ ನಿಂತ ನಾನು ಬಾಗಿಲನ್ನು ತಟ್ಟಲೋ ಬೇಡವೋ ಎನ್ನುವ ಅನುಮಾನದಲ್ಲಿಯೇ ಇದ್ದಾಗ, ಒಳಗಿನಿಂದ ಬರುತ್ತಿದ್ದ ಕಂಚು ಕಂಠದ ಸ್ಪಷ್ಟ ಉಚ್ಚಾರಣೆಯ ದನಿ ನನ್ನ ಕಿವಿಗಳನ್ನು ಸೆಳೆಯಿತು.

'ಮಲ್ಲಮ್ಮಾ ಮಲ್ಲಮ್ಮಾ, ಎಲ್ಲಿ ಹೋದೆಯೇ ಮಲ್ಲಮ್ಮಾ' – ಆ ಸಿರಿಕಂಠದಿಂದ

ಹೊರಹೊಮ್ಮುತ್ತಿದ್ದ ಸಾಲುಗಳು ಇವು, ಎಂಬುದು ಈಗಲೂ ನನಗೆ ಸ್ಪಷ್ಟವಾಗಿ ನೆನಪಿನಲ್ಲಿದೆ. ಬಾಗಿಲು ಬಡಿದು ಆ ವ್ಯಕ್ತಿಯನ್ನು ನೋಡಲೇಬೇಕೆನ್ನುವ ಕುತೂಹಲ. ಬಾಗಿಲು ಬಡಿದಾಗ ಆ ವ್ಯಕ್ತಿಯೇ ಬಾಗಿಲು ತೆರೆದರು. ಅವರ ಪಾಠಕ್ಕೆ ಭಂಗ ತಂದೆನೆಂದು. ಬೈಯಲಿಲ್ಲ. ಬದಲಾಗಿ, 'ಏಕೆ? ನಿನ್ನೆಯೇ ಕಾಲೇಜು ಪ್ರಾರಂಭವಾಯಿತು. ತಿಳಿಯಲಿಲ್ಲವೇ? ಬನ್ನಿ', ಎಂದು ಆತ್ಮೀಯತೆಯಿಂದ ಬರಮಾಡಿಕೊಂಡರು. ಆ ಅಪರಿಚಿತ ವಾತಾವರಣದಲ್ಲಿ ಪರಿಚಯದವರನ್ನು ಕಂಡು ತುಂಬಾ ಆನಂದವಾಯಿತು. ಅವರು ಬೇರೆ ಯಾರೂ ಆಗಿರಲಿಲ್ಲ. ನಮ್ಮ ಮನೆಗೆ ಬಂದಿದ್ದಾಗ, 'ಕನ್ನಡ ಎಂ.ಎ. ಮಾಡಿ' ಎಂದು ಹೇಳಿದ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು, ಎಂದರೆ 'ನಮ್ಮ ಮೇಷ್ಟ್ರೇ' ಆಗಿದ್ದರು.

ವಿದ್ಯಾರ್ಥಿಗಳು ಪ್ರೀತಿಯಿಂದ ಎನ್.ಎಸ್.ಎಲ್. ಎಂದೇ ಕರೆಯುವ ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ ಪ್ರತಿಭೆಗೆ ನಾನಾ ಮುಖಗಳು. ಕವಿಗಳಾಗಿ, ವಿಮರ್ಶಕರಾಗಿ, ಅನುವಾದಕರಾಗಿ, ಸಂಪಾದಕರಾಗಿ ಭಟ್ಟರ ಸಾಹಿತ್ಯಸೇವೆ ಅನುಪಮವಾದುದು. ಮಕ್ಕಳ ಸಾಹಿತ್ಯಕ್ಕೂ ಅವರ ಕೊಡುಗೆ ಅಪಾರವಾದುದು. ಶಿಶುನಾಳ ಶರೀಫರ ಕಾವ್ಯವನ್ನು ಸಂಪಾದಿಸಿ, ಕನ್ನಡ ನಾಡಿನ ಉದ್ದಗಲಕ್ಕೂ ಹರಡಿ, ಮರೆತು ಹೋದ ಕವಿಯನ್ನು ನೆನಪು ಮಾಡಿಕೊಡುವಲ್ಲಿನ ಅವರ ಪಾತ್ರ ಸ್ಮರಣೀಯವಾದುದು.

ವಿದ್ಯಾರ್ಥಿ ಜೀವನ, ವ್ಯಕ್ತಿಯ ಬದುಕಿನಲ್ಲಿ ಬಹಳ ಅಮೂಲ್ಯವಾದ ಘಟ್ಟ. ಈ ಘಟ್ಟದಲ್ಲಿ ಅಧ್ಯಾಪಕರು, ಸ್ನೇಹಿತರು ಪ್ರಭಾವ, ಪ್ರೇರಣೆ ನೀಡಿ ಯಾವ ಬಗೆಯ ಮಾರ್ಗದರ್ಶನ ಮಾಡುತ್ತಾರೋ, ಅದನ್ನು ಅವರ ಇಡೀ ಭವಿಷ್ಯದ ಬದುಕು ಆಧರಿಸಿರುತ್ತದೆ. ಕೆಲವು ಅಧ್ಯಾಪಕರು ವಿದ್ಯಾರ್ಥಿಗಳ ಶೈಕ್ಷಣಿಕ ಬದುಕು ಮುಗಿದು ಬದುಕಿನಲ್ಲಿ ಭದ್ರವಾಗಿ ನೆಲೆ ಊರಿದ ಮೇಲೂ ಅವರ ಜೀವನದ ಮೇಲೆ ತಮ್ಮ ಅಚ್ಚಳಿಯದ ನೆನಪನ್ನು ಉಳಿಸುತ್ತಾರೆ.

ನಮ್ಮ ಪ್ರೀತಿಯ ಮೇಷ್ಟ್ರು ಎನ್.ಎಸ್.ಎಲ್. ಈ ವರ್ಗದ ಅಪರೂಪದ ಅಧ್ಯಾಪಕರು. ಕಾಲೇಜಿನಲ್ಲಿ ಅವರು ಅತ್ಯಂತ ಜನಪ್ರಿಯ ಅಧ್ಯಾಪಕರು. ಎಂದೂ ಮುಖ ಗಂಟಿಕ್ಕದೆ, ಸದಾ ಹಸನ್ಮುಖಿಯಾಗಿಯೇ ಇರುತ್ತಿದ್ದ ಇವರು, ನಮ್ಮ ತರಗತಿಗೆ ಎರಡು ವರ್ಷಗಳಲ್ಲಿ ಅನೇಕ ವಿಷಯಗಳನ್ನು ಕುರಿತು ಪಾಠ ಮಾಡಿದ್ದರೂ, ಒಮ್ಮೆಯಾದರೂ ಒಬ್ಬ ವಿದ್ಯಾರ್ಥಿಯನ್ನೂ ಬೈದದ್ದಿಲ್ಲ. ಇದು ಅಧ್ಯಾಪಕನೊಬ್ಬನ ಪ್ರಮುಖ ಮಾನವೀಯ ಗುಣ. ಏನೇ ಸಮಸ್ಯೆಗಳಿದ್ದರೂ ಸಲೀಸಾಗಿ, ಯಾವ ಹಿಂಜರಿಕೆಯೂ ಇಲ್ಲದೆ ಅವರ ಕೊಠಡಿಗೆ ಹೋಗುತ್ತಿದ್ದೆವು. ಆಗ ಮತ್ತೆ ಒಂದೆರಡು ಗಂಟೆಗಳ ಚರ್ಚೆ, ಜೊತೆಗೆ ಹೆಚ್ಚುವರಿ ಓದಿಗಾಗಿ ಅಪರೂಪದ ಪುಸ್ತಕಗಳೂ ಕೈಗೆ ಬರುತ್ತಿದ್ದವು.

ನಾವು ಮೊದಲನೆಯ ಸೆಮಿಸ್ಟರ್‌ನಲ್ಲಿದ್ದಾಗ ಎನ್.ಎಸ್.ಎಲ್. ನಮಗೆ ಗ್ರಂಥ ಸಂಪಾದನೆ ಹಾಗೂ ಮಿಲ್ಟನ್ನನ 'ಪ್ಯಾರಡೈಸ್ ಲಾಸ್ಟ್' ಮಹಾಕಾವ್ಯವನ್ನು ಪಾಠ ಮಾಡುತ್ತಿದ್ದರು. ಗ್ರಂಥ ಸಂಪಾದನೆಯಂತಹ ನೀರಸ ಶಾಸ್ತ್ರವನ್ನು ಪಾಠ ಮಾಡುವಾಗಲೂ ನಗುವಿನ ಹೊಳೆ ಹರಿಸುತ್ತಿದ್ದರು. ಅವರು ಕಂಠಪಾಠ, ಜಟಪಾಠಗಳನ್ನು ಕುರಿತು ಹೇಳುವಾಗ, 'ತಲೆಯ

ಮೇಲೆ ನಿಂಬೆ ಹಣ್ಣಿಟ್ಟುಕೊಂಡರೂ ಅದು ಅಲ್ಲಾಡದಂತೆ ವೇದಪಾಠಗಳನ್ನು ಹೇಳಬೇಕು' ಎಂದು ಅಭಿನಯಿಸಿ ತೋರಿಸಿದ್ದು, ವಿದ್ಯಾರ್ಥಿಗಳು ನಕ್ಕು ಆನಂದಿಸಿ ಆ ಪಾಠವನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೊಂಡದ್ದು, ನನಗೆ ಈಗಲೂ ಜ್ಞಾಪಕವಿದೆ. ಮಿಲ್ಟನ್ನನ ಸೇಟನ್ ಪಾತ್ರವನ್ನು ಅವರು ಮನಮುಟ್ಟುವಂತೆ ವರ್ಣಿಸುತ್ತಿದ್ದರು.

ಎನ್.ಎಸ್.ಎಲ್. ನಮಗೆ ಥಾಮಸ್ ಹಾರ್ಡಿಯ 'ರಿಟರ್ನ್ ಆಫ್ ದಿ ನೇಟಿವ್', ಬ್ರಾಂಟೆಯ 'ವುದರಿಂಗ್ ಹೈಟ್ಸ್' ಕಾದಂಬರಿಗಳನ್ನು ಅತ್ಯಂತ ಮನೋಜ್ಞವಾಗಿ ಪಾಠ ಮಾಡಿದ್ದರು. ಅವರು ಕಾದಂಬರಿಗಳ ಹಲವು ಭಾಗಗಳನ್ನು ಸಂಗ್ರಹಿಸಿ, ಸಾಲು ಸಾಲುಗಳನ್ನು ಓದಿ, ವಿಮರ್ಶಿಸಿ, ತುಲನೆ ಮಾಡಿ ಹೇಳುತ್ತಿದ್ದ ರೀತಿ ಎಂದಿಗೂ ಮರೆಯಲಾರದ್ದು. ತೀ.ನಂ.ಶ್ರೀ.ಯವರ ಪಾಠ ಕೇಳುವ ಸೌಭಾಗ್ಯವಿಲ್ಲದ ನಮಗೆ ಆ ಪರಂಪರೆ, ಎನ್.ಎಸ್.ಎಲ್. ಅವರಿಂದ ಪರಿಚಯವಾಯಿತು.

ಎನ್.ಎಸ್.ಎಲ್. ನಮಗೆ ಪ್ರಾಚೀನ, ಆಧುನಿಕ, ಪಾಶ್ಚಾತ್ಯ ಸಾಹಿತ್ಯಗಳನ್ನು ತೆಗೆದುಕೊಳ್ಳುತ್ತಿದ್ದರೂ, ನಮ್ಮ ಮನಸ್ಸನ್ನು ಸೂರೆ ಮಾಡಿದ್ದು, ಅವರ ಛಂದಃಶಾಸ್ತ್ರದ ವಿವರಣೆಗಳು. ಇವತ್ತು ನಾನು ಅಧ್ಯಾಪಕಿಯಾಗಿ, ವಿದ್ಯಾರ್ಥಿಗಳಿಗೆ ಛಂದಸ್ಸಿನ ಪಾಠ ಮಾಡಲು ಹೋದಾಗ ನನಗೆ ಎನ್.ಎಸ್.ಎಲ್. ಅವರ ಕಂಠ, ದನಿಯ ಏರಿಳಿತಗಳು, ಅವರ ಆಂಗಿಕ ಅಭಿನಯ, ತಾಳದ ಘಾತಗಳು, ನಿಸ್ಸಂಕೋಚವಾಗಿ ರಾಗವಾಗಿ ಹಾಡನ್ನು ಬಿಡಿಸಿ ಹೇಳುವ ಕ್ರಮ ಕಿವಿಯಲ್ಲಿ ಇನ್ನೂ ನಿನದಿಸುತ್ತಲೇ ಇರುತ್ತದೆ. ಆಧುನಿಕ ಛಂದಸ್ಸಿನ 'ಮುಡಿ', 'ಪದ್ಮಗಣ', 'ಗಣ ಪರಿವೃತ್ತಿ'ಗಳನ್ನು ವಿವರಿಸಲು ಅವರು ಯಾವಾಗಲಾದರೊಮ್ಮೆ ತಮ್ಮ ಕವನವನ್ನೂ ಉದಾಹರಿಸುತ್ತಿದ್ದರು. 'ಬಾರೋ ವಸಂತ ಬಾರೋ ಬಾ' ಕವನವನ್ನು ಅವರು ಬರೆದ ಹೊಸತು. ಅವರು ಆ ಕವನವನ್ನು ಪ್ರಕಟಿಸುವುದಕ್ಕೆ ಮುಂಚೆಯೇ ನಮ್ಮ ಮುಂದೆ ಓದಿದ್ದರು. ವಿದ್ಯಾರ್ಥಿಗಳು ಆ ಕವನದ ಭಾವಲಹರಿಗೆ ತಲೆದೂಗಿ, 'ಆಕಾಶವಾಣಿ'ಯಲ್ಲಿ ಅದು ಉತ್ತಮ ಭಾವಗೀತೆಯಾಗಿ ಹೊರಬಿದ್ದು ಜನಪ್ರಿಯವಾದಾಗ, ಆ ಕವನದ ಮೊದಲ ಶ್ರೋತೃಗಳು ತಾವೇ ಎಂದು ಗರ್ವದಿಂದ ಬೀಗಿದ್ದನ್ನು ನಾನು ಮರೆಯಲಾರೆ.

ನಾನು ಎಂ.ಫಿಲ್. ವಿದ್ಯಾರ್ಥಿನಿಯಾದಾಗ ಮತ್ತೆ ಕಂಬಾರರೊಂದಿಗೆ ಎನ್.ಎಸ್.ಎಲ್. ನನಗೆ 'ರೊಮ್ಯಾಂಟಿಸಿಸಂ' ಬಗ್ಗೆ ಉಪನ್ಯಾಸಗಳನ್ನು ನೀಡುತ್ತಿದ್ದರು. ಒಬ್ಬ ವಿದ್ಯಾರ್ಥಿನಿಗೆ ಏಕಕಾಲದಲ್ಲಿ ಇಬ್ಬರು ಅಧ್ಯಾಪಕರು. ಆ ಸಂದರ್ಭದಲ್ಲಿ ಕನ್ನಡ ನಾಡಿನ ಇಬ್ಬರು ಪ್ರತಿಭಾವಂತ ಕವಿ, ವಿಮರ್ಶಕರ ಪಾಠ ಕೇಳುವ ಅವಕಾಶ ಸಿಕ್ಕಿದ್ದು ನನ್ನ ಸುದೈವ. ಆಗ ಎನ್.ಎಸ್.ಎಲ್. ಅವರ 'ರೊಮ್ಯಾಂಟಿಕ್ ಚಳುವಳಿ', 'ಭಾವಗೀತೆ'ಗಳ ಬಗೆಗಿನ ಚರ್ಚೆ ಬಹಳ ಗಂಭೀರವಾಗಿರುತ್ತಿದ್ದವು.

ಎನ್.ಎಸ್.ಎಲ್.ರವರು ಕನ್ನಡದಲ್ಲಿ ಮತ್ತೆ ರಮ್ಯ ಸಂಪ್ರದಾಯದ 'ಭಾವಗೀತೆ'ಗಳನ್ನು ಜನಪ್ರಿಯಗೊಳಿಸಲು ಕಾರಣರಾಗಿದ್ದಾರೆ. ಕೆ.ಎಸ್.ನ. ಅವರ 'ಮೈಸೂರು ಮಲ್ಲಿಗೆ' ಕಾವ್ಯದ ಕ್ಯಾಸೆಟ್ಟಿನ ಮುನ್ನುಡಿಯಲ್ಲಿ ಅವರು ಈ ಸಂಪ್ರದಾಯದ ಅವಶ್ಯಕತೆ, ಅಗತ್ಯಗಳನ್ನು ಬಹಳ

ಚೆನ್ನಾಗಿ ಸಮರ್ಥಿಸಿಕೊಳ್ಳುತ್ತಾರೆ. ಅನೇಕರು ಸಾಹಿತ್ಯಕ್ಕೆ ಸಂಗೀತದ ಅಗತ್ಯವಿದೆಯೇ ಎಂಬ ಬಗ್ಗೆ ನಾನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಅವರೊಂದಿಗೆ ವಾದ, ಜಗಳ ತೆಗೆದರೂ, ತಮ್ಮ ಪಾಡಿಗೆ ಸುಶ್ರಾವ್ಯವಾದ, ಇಂಪಾದ ಅನೇಕ ಕವನಗಳನ್ನು ನೀಡಿ, ಜನಪ್ರಿಯತೆಯ ತುತ್ತತುದಿಯಲ್ಲಿದ್ದಾರೆ. ಜನಸಾಮಾನ್ಯರಲ್ಲಿ ಉತ್ತಮ ಅಭಿರುಚಿ ಮೂಡಿಸಲು ಈ ಮೂಲಕ ಗಂಭೀರ ಪ್ರಯತ್ನಗಳನ್ನು ಮಾಡಿದ್ದಾರೆ.

ಎನ್.ಎಸ್.ಎಲ್. ವಿದ್ಯಾರ್ಥಿ ಸಮುದಾಯಕ್ಕೆ ಅತ್ಯಂತ ಪ್ರೀತಿಯ ಮೇಷ್ಟ್ರು. ಎಂದೂ, ಯಾರ ಮೇಲೂ ಕೋಪ ಮಾಡಿಕೊಳ್ಳದ, ಎಲ್ಲರಿಗೂ ಬೇಕಾದ ಅಧ್ಯಾಪಕರು. ಯಾವುದೇ ವಿದ್ಯಾರ್ಥಿಯ ಮೇಲೂ ಅಚ್ಚಳಿಯದ ಪ್ರಭಾವ ಮೂಡಿಸುವ ಅತ್ಯುತ್ತಮ ಅಧ್ಯಾಪಕರು. ವಿದ್ಯಾರ್ಥಿಗಳನ್ನು ಮಕ್ಕಳಂತೆ ಕಾಳಜಿಯಿಂದ ಕಾಣುವ ಅಧ್ಯಾಪಕ ಪರಂಪರೆ ಮಾಯ ವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಇಂತಹ ಅಪರೂಪದ ಮೇಷ್ಟ್ರುಗಳು ಆಗೀಗ ಕಾಣಿಸಿಕೊಳ್ಳುತ್ತಾರೆ. ಅಂದು ನನ್ನೊಡನೆ ಒಂದೇ ತರಗತಿಯಲ್ಲಿ ಕೂತು, ಪಾಠ ಕೇಳಿ, ಅನುಭವಗಳನ್ನು ಹಂಚಿಕೊಂಡ ನನ್ನ ಎಲ್ಲ ಸಹಪಾಠಿಗಳ ಅಭಿಪ್ರಾಯಗಳು, ಅನುಭವಗಳು ನನ್ನದಕ್ಕಿಂತ ಬೇರೆ, ಎಂದು ಖಂಡಿತ ನಾನು ಭಾವಿಸುವುದಿಲ್ಲ. ಅವರೆಲ್ಲರ ಈ ಭಾವನೆ, ಅನುಭವಗಳ ರೋಮಾಂಚಕ ನೆನಪಿನ ಜಗಿತಗಳ ಪ್ರತಿನಿಧಿ ನಾನು. ಈಗ ಹಲವು ಕಡೆಗೆ ಹರಡಿ ಹೋಗಿ, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣ್ಯಬಾಳ್ವೆ ಮಾಡುತ್ತಿರುವ ಪ್ರಿಯ ಸಹಪಾಠಿಗಳ ಅನುಭವಕ್ಕೆ ಅಭಿವ್ಯಕ್ತಿ ನೀಡುವ ಅವಕಾಶ ನನ್ನದಾಗಿದೆ.

ನಮ್ಮ ಪ್ರೀತಿಯ ಮೇಷ್ಟ್ರು 'ವೃತ್ತ' ಕಾವ್ಯ ಸಂಗ್ರಹದಿಂದ ಸಾಕಷ್ಟು 'ಸುದ್ದಿ' ಮಾಡಿ, 'ಅರುಣಗೀತ' ಹಾಡುತ್ತ ಪರಿಪಕ್ವ ಬದುಕಿನ ಹೊಂಬಣ್ಣದಿಂದ ರಾಗರಂಜಿತರಾಗಿದ್ದಾರೆ. 'ನೀಲಾಂಜನ'ದಲ್ಲಿ ಬೆಳಗುವ 'ಜ್ಯೋತಿ'ಯೊಡನೆ, ತಂಪಾದ 'ಕ್ಷಮಾ–ಚೈತ್ರ' ವಾತ್ಸಲ್ಯದ ಸಿಂಚನದಲ್ಲಿ ತೃಪ್ತರಾಗಿದ್ದಾರೆ.

ಭಟ್ಟಗುರು ಅರವತ್ತರ ಹರೆಯಕ್ಕೆ ಸಂದಿದ್ದಾರೆ. ಎಷ್ಟೋ ಒಳ್ಳೆಯ ಕೆಲಸಗಳನ್ನು ಮಾಡಿದ್ದರೂ, ಅವರಿಂದ ಆಗುವ ಕೆಲಸಗಳು ಇನ್ನೂ ಸಾಕಷ್ಟಿವೆ. ವಿಶ್ರಾಂತ ಜೀವನದಲ್ಲಿ ಬಿಡುವಿಲ್ಲದ ಕೆಲಸಗಳು ಅವರಿಂದ ಆಗುತ್ತವೆ, ಎಂಬುದು ನಮೆಲ್ಲರ ನಂಬಿಕೆ. ಬದುಕಿನ ಸಾರ್ಥಕ್ಯದ ಕ್ಷಣದಲ್ಲಿ ಅವರಿಗೆ ಎಲ್ಲ ಯಶಸ್ಸು ಕೋರುತ್ತ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡುವ ಅವರ ಹುಮ್ಮಸ್ಸು, ಶಕ್ತಿ ಇನ್ನಷ್ಟು ಹೆಚ್ಚಲಿ ಎಂದು ಎಲ್ಲ ವಿದ್ಯಾರ್ಥಿಗಳ ಪರವಾಗಿ ಹಾರೈಸುತ್ತೇನೆ.

ಆಗಿಹೋದ ನಮ್ಮ ಬದುಕನ್ನು ಕೆದಕಿದಾಗ, ನಮ್ಮ ಪ್ರೀತಿಯ ಮೇಷ್ಟ್ರು, ಕಲ್ಲು ಸಕ್ಕರೆ ಚಪ್ಪರಿಸಿದ ಅನುಭವ ನೀಡುತ್ತಾರೆ. ಇಂಥವರಿಂದ ಕಲಿತ ನಾವು ಧನ್ಯರು, ಎಂಬ ಧನ್ಯಭಾವ ಮೂಡಿಸುತ್ತಾರೆ. ಇವರು ಬರೀ ಅನ್ನ ಸಂಪಾದಿಸುವ ಮಾರ್ಗ ಹೇಳಿಕೊಟ್ಟವರಲ್ಲ. ಬದುಕಿನ ಸೂಕ್ಷ್ಮ ಸಂವೇದನೆಗಳನ್ನು ಪರಿಚಯಿಸಿದವರು, ಜೀವನವನ್ನು ಪ್ರೀತಿಸುವ ಪಾಠ ಕಲಿಸಿದವರು. ಎಲ್ಲಕ್ಕಿಂತ ಹೆಚ್ಚಾಗಿ ದೃಢವಾಸ್ತವದ ಬದುಕನ್ನು ಮುಖಾಮುಖಿಯಾಗಿ, ಎದುರಿಸಲು ಕಲಿಸಿಕೊಟ್ಟವರು. ಇಂಥ ನನ್ನ ಗುರುಗಳು ಪ್ರಾತಃಸ್ಮರಣೀಯರು.

❖

# ಭಾಗ – ೨

# ಗುರುಶಿಷ್ಯರು

# ಕನ್ನಡ ದ್ರೋಣಾಚಾರ್ಯರು

## (ಡಾ॥ ಎ.ಆರ್. ಕೃಷ್ಣಶಾಸ್ತ್ರಿ)

*● ಸಿ.ಕೆ. ವೆಂಕಟರಾಮಯ್ಯ*

ಕೀರ್ತಿಶೇಷರಾದ ಗುರುವರ್ಯ ಡಾಕ್ಟರ್ ಎ.ಆರ್. ಕೃಷ್ಣಶಾಸ್ತ್ರಿಗಳ ನಿಧನದಿಂದ, ಸಾಹಿತ್ಯಾಕಾಶದಲ್ಲಿ ಉಜ್ವಲವಾಗಿ ಬೆಳಗುತ್ತಿದ್ದ ಶುಭತಾರೆಯೊಂದು ಕಣ್ಮರೆಯಾದಂತಾಯಿತು. ಅವರು ಉದ್ದಾಮ ವಿದ್ವಾಂಸರೂ, ಆದರ್ಶ ಗುರುವರ್ಯರೂ, ಪ್ರಸಿದ್ಧ ಸಂಪಾದಕರೂ, ಪ್ರಖ್ಯಾತ ಲೇಖಕರೂ, ಮಾರ್ಗದರ್ಶಕರಾದ ಭಾಷಾಭಿಮಾನಿಗಳೂ, ಪೂಜ್ಯರಾದ ಕರ್ಮಯೋಗಿಗಳೂ ಆಗಿದ್ದರು. ಅವರು ಐವತ್ತು ವರ್ಷಗಳ ದೀರ್ಘಕಾಲ ಅವಿಶ್ರಾಂತರಾಗಿ ಸಾಹಿತ್ಯ ಸೇವೆಮಾಡಿ ಚರಿತಾರ್ಥರಾದರು. ನಿಗರ್ವಿಗಳೂ ಸರಳಹೃದಯರೂ ಆಗಿದ್ದ ಆ ಮಹನೀಯರು ಎಲೆಯ ಮರೆಯ ಅಮೃತಫಲದಂತಿದ್ದರೆ, ಅದರಲ್ಲಿ ಲೇಶಮಾತ್ರವೂ ಅತಿಶಯೋಕ್ತಿಯಿಲ್ಲ. ಅವರ ಕಾಯವೇನೋ ಅಳಿದಿದ್ದರೂ, ಅವರದು ಎಂದಿಗೂ ಮಾಸದೆ ನುಡಿಭಕ್ತರಿಗೆ ನಿರಂತರವಾಗಿ ಸ್ಫೂರ್ತಿಯನ್ನು ನೀಡುವ ಶಾಶ್ವತಕೀರ್ತಿ. ಅವರ ನಿಧನದಿಂದ ಅವರ ಕುಟುಂಬದವರಿಗೂ, ಅವರ ಬಂಧುಮಿತ್ರರಿಗೂ, ಅವರ ಅಸಂಖ್ಯಾತ ಶಿಷ್ಯರಿಗೂ ದುಸ್ಸಹವಾದ ವಿಯೋಗ ದುಃಖವುಂಟಾಗಿದೆ. ಅವರ ವಾತ್ಸಲ್ಯವನ್ನು ಸ್ಮರಿಸಿದರೆ, ಕಣ್ಣುಗಳಿಂದ ತಟಕ್ಕನೆ ಕಂಬನಿಯುರುಳುತ್ತದೆ; ಅವರು ತೋರುತ್ತಿದ್ದ ಶಿಷ್ಯಪ್ರಿಯತೆಯ ವೈಶಿಷ್ಟ್ಯವೇ ಅದಕ್ಕೆ ಕಾರಣ. ಅವರ ಆದ್ಯ ಶಿಷ್ಯರಲ್ಲೊಬ್ಬನಾಗಿದ್ದುದೇ ನನ್ನ ಜೀವನದೊಂದು ಸೌಭಾಗ್ಯ. ಯಾವ ದೃಷ್ಟಿಯಿಂದ ವಿಚಾರಮಾಡಿ ನೋಡಿದರೂ, ದೊಡ್ಡ ಬಾಳಿನ ಪುಣ್ಯಶ್ಲೋಕರವರು. ಪೂಜ್ಯರಾದ ಮತ್ತು ಪುಣ್ಯಶ್ಲೋಕರಾದ ಆ ಮಹನೀಯರನ್ನು ನೆನೆಯುವುದೇ ಒಂದು ಪುಣ್ಯ. ಅವರ ವಿಚಾರವಾಗಿ ಎಷ್ಟು ಬರೆದರೂ ಸಾಲದು. ಆದರೂ, ಅವರೊಂದಿಗಿನ ನನ್ನ ಸಂಬಂಧದ ನೆನಪುಗಳಲ್ಲಿ ಕೆಲವನ್ನು ಮಾತ್ರವೇ ಸಂಕ್ಷೇಪವಾಗಿ ಸೂಚಿಸಿ ಪ್ರೀತಿ ಭಕ್ತಿಗಳನ್ನು ತೋರುವುದು ಈ ಲೇಖನದ ಉದ್ದೇಶ. ಅವರ ನೆನಪಿನ ಸಂಚಿಕೆಗೆ ಲೇಖನವನ್ನು ಬರೆಯಬೇಕೆಂದು ನನ್ನನ್ನು ಕೇಳಿದ ವಿಶ್ವಾಸಕ್ಕಾಗಿ ನಾನು "ಪ್ರಬುದ್ಧ ಕರ್ಣಾಟಕದ" ಸಂಪಾದಕರಿಗೆ ಕೃತಜ್ಞ.

ಗುರುವರ್ಯರು, ಬೆಂಗಳೂರು ಸೆಂಟ್ರಲ್ ಕಾಲೇಜಿನ ಕನ್ನಡ ಅಧ್ಯಾಪಕರಾಗಿ ಬಂದು ಪಾಠ ಹೇಳಿದ ಮೊದಲನೆಯ ದಿನವೇ ಅವರ ಶಿಷ್ಯರಿಗೆ ಅಚ್ಚುಮೆಚ್ಚಾದರು; ಕನ್ನಡದ ಪಾಠ ನಡೆಯುವಾಗ್ಗೆ ಮೌನವಾಗಿರದೆ ಕೆಲವರು ಮಾತನಾಡಿ "ಗಲಾಟೆ" ಮಾಡುತ್ತಿದ್ದುದು ಅದುವರೆಗಿನ ಪದ್ಧತಿ. ಆ ದಿನವೂ ಆ ಕೆಲವರು ಸಂಪ್ರದಾಯ ಲೋಪವಾಗದಂತೆ ಆ ರೀತಿ ಮಾಡಿದರು. ಗುರುಗಳು ಶಾಂತರಾಗಿಯೇ ಇದ್ದು "ಹೀಗೆ ಮಾಡಿದರೆ ಪರಿಣಾಮದಲ್ಲಿ ನಿಮಗೇ ನಷ್ಟ;

ಸದ್ಯದಲ್ಲಿ ಪಾಠವನ್ನು ಕೇಳಲು ನಿಮ್ಮ ಸಹಪಾಠಿಗಳಿಗೆ ಅಡ್ಡಿ, ನನಗೆ ವೃಥಾ ಕಂಠಶೋಷಣೆ, ಹೀಗೆ ಮಾಡಬೇಡಿ. ಸೆಂಟ್ರಲ್ ಕಾಲೇಜಿನ ದೊಡ್ಡ ಹೆಸರಿಗೆ ಕಳಂಕವನ್ನು ತರಬೇಡಿ. ನಮ್ಮೆಲ್ಲರಿಗಿಂತ ನಮ್ಮ ಕಾಲೇಜು ದೊಡ್ಡದು" ಎಂದರು. ಆ ಮಾತುಗಳಿಂದ – ಮೇಲಾಗಿ ಅವರು ಆ ಮಾತುಗಳನ್ನಾಡಿದ ರೀತಿಯಿಂದ ಒಟ್ಟು ತರಗತಿಯೇ ನಿಶ್ಶಬ್ದವಾಯಿತು. ಪಾಠ ಹೇಳಿದ ವೈಖರಿಯಿಂದ ಶಿಷ್ಯರೆಲ್ಲರ ಹೃದಯಗಳನ್ನೇ ತಮ್ಮ ಕಡೆಗೆ ಸೆಳೆದು ಅವರಿಗೆ ಅಚ್ಚುಮೆಚ್ಚಾದರು, ನಮ್ಮ ಗುರುವರ್ಯರು. ಅವರ ವಿದ್ವತ್ತೂ, ಅವರ ಬೋಧಕ ಸಾಮರ್ಥ್ಯವೂ, ಅವರ ವಾತ್ಸಲ್ಯವೇ ಮುಂತಾದ ಸದ್ಗುಣಗಳೂ, ವ್ಯಕ್ತವಾದಂತೆಲ್ಲ, ಅವರಲ್ಲಿ ಶಿಷ್ಯರ ಪ್ರೀತಿ ಭಕ್ತಿಗಳು ಕ್ರಮಕ್ರಮವಾಗಿ ವೃದ್ಧಿ ಹೊಂದಿದವು; ಇಂಗ್ಲಿಷ್ ಭಾಷೆಯನ್ನು ಅನನ್ಯ ಸುಲಭ ರೀತಿಯಲ್ಲಿ ಬೋಧಿಸುತ್ತಿದ್ದ ಟೇಟ್ ಸಾಹೇಬರಂತೆಯೇ, ಕನ್ನಡವನ್ನು ಬೋಧಿಸುವುದರಲ್ಲಿ ನಿಷ್ಣಾತರಾಗಿದ್ದ ಶಾಸ್ತ್ರಿಗಳು ಶಿಷ್ಯರ ಮನಸ್ಸನ್ನು ಆಕರ್ಷಿಸಿ ಅವರ ಪ್ರೀತಿಯನ್ನು ಗಳಿಸಿದರು. ಅವಿರತವಾದ ವ್ಯಾಸಂಗದಿಂದ ಅವರ ವಿದ್ವತ್ತೂ, ವಿದ್ಯಾರ್ಥಿಗಳ ಮೇಲಿನ ಸಂತತ ವಾತ್ಸಲ್ಯದಿಂದ ಅವರ ಶಿಷ್ಯಪ್ರಿಯತೆಯೂ, ಮಹಾವೃಕ್ಷದ ಶಾಖೆಗಳಂತೆ ಕ್ರಮಕ್ರಮವಾಗಿ ಇನ್ನೂ ವೃದ್ಧಿಹೊಂದಿದುವು. ಕನ್ನಡದ ಅಧ್ಯಾಪಕರು ಕಪ್ಪುಹಲಗೆಯ ("ಬ್ಲ್ಯಾಕ್ ಬೋರ್ಡ್") ಮೇಲೆ, ಪಠ್ಯಪುಸ್ತಕಗಳಲ್ಲಿಯ ಪಾತ್ರಗಳ ಗುಣ ದೋಷಗಳು, ಪಾತ್ರಗಳ ಪರಸ್ಪರ ಸಾದೃಶ್ಯ ವೈದೃಶ್ಯಗಳು ಮುಂತಾದ ನಾನಾ ವಿಚಾರಗಳನ್ನು ಬರೆದು ಬೋಧಿಸುವ ಪರಿಪಾಠವನ್ನು, ಸೆಂಟ್ರಲ್ ಕಾಲೇಜಿನಲ್ಲಿ ಅವರೇ ಮೊಟ್ಟಮೊದಲು ಪ್ರಾರಂಭಿಸಿ ತಮ್ಮ ಶಿಷ್ಯರನ್ನೆಲ್ಲ ಅಚ್ಚರಿಗೊಳಿಸಿದರು. ಪಠ್ಯಪುಸ್ತಕಗಳನ್ನು ಹೃದಯಂಗಮವಾಗಿ ಬೋಧಿಸುವಷ್ಟರಿಂದ ಮಾತ್ರವೇ ಅವರಿಗೆ ತೃಪ್ತಿಯಿರಲಿಲ್ಲ. ಸಂದರ್ಭಾನುಸಾರವಾಗಿ, ಅವುಗಳ ವಿಚಾರದ ಜೊತೆಗೆ ಶ್ರೇಷ್ಠ ಗ್ರಂಥಗಳ ವಿಚಾರವನ್ನೆತ್ತಿ ತುಲನಾತ್ಮಕವಾಗಿ ಶಿಷ್ಯರ ಮನಮುಟ್ಟುವಂತೆ ವಿಮರ್ಶಿಸಿ ಪಾಠ ಹೇಳುತ್ತಿದ್ದರು. ಅವರ ಪಾಠ ಪ್ರವಚನಗಳು ವಿದ್ವತ್ಪೂರ್ಣವಾಗಿಯೂ ಸ್ವಾರಸ್ಯವಾಗಿಯೂ ಇರುತ್ತಿದ್ದವು. ಪಾಠ ನಡೆಯುತ್ತಿದ್ದ ಪ್ರತಿಸಲದ ಅವಧಿಯ ಅರುವತ್ತು ನಿಮಿಷಗಳೂ ಅರುವತ್ತು ಕ್ಷಣಗಳಂತೆ ತೋರುತ್ತಿದ್ದವು. ಶಿಷ್ಯರು ಅವರ ಕೊಠಡಿಗೆ ಹೋದಾಗ ತಾವು ಅಧ್ಯಾಪಕರೆಂಬುದನ್ನು ಮರೆತು ಹಿರಿಯ ಮಿತ್ರರಂತೆ ಪ್ರೀತಿ ವಿಶ್ವಾಸಗಳಿಂದ ಅವರು ಮಾತನಾಡುತ್ತಿದ್ದರು. ಅವರಿಗೆ ಶಿಷ್ಯರಲ್ಲಿದ್ದ ಪೂರ್ಣವಾತ್ಸಲ್ಯದ ಪರಿಣಾಮವಾಗಿ ಅವರ ಅಕ್ಕರೆಯ ಮಾತುಗಳನ್ನು ಎಷ್ಟು ಹೊತ್ತು ಕೇಳಿದರೂ ಯಾರಿಗೂ ತೃಪ್ತಿಯಾಗುತ್ತಿರಲಿಲ್ಲ. ಅವರ ಕೊಠಡಿಗೆ ಶಿಷ್ಯರು ಹೋದಾಗ ಅವರು ಪಾಠ ಪ್ರವಚನಗಳ ಸಂಬಂಧವಾದ ವಿಚಾರಗಳನ್ನೇ ಎತ್ತುತ್ತಿರಲಿಲ್ಲ, ಆಗಿನದು, ವಿದ್ಯಾರ್ಥಿಗಳ ಹಿತಸಾಧನೆಗೆ ಅವಶ್ಯವೆಂದು ಅವರು ಭಾವಿಸಿದ್ದ ಇತರ ಶ್ರೇಷ್ಠ ವಿಚಾರ ಚರ್ಚಾರೂಪದ "ಸುಖ ಸಂಕಥಾ ಪ್ರಸಂಗ"; ಮತ್ತು ಜೀವನದಲ್ಲಿ ಸತ್ಯ, ನೀತಿ, ಧರ್ಮ. ಸಂಪ್ರದಾಯ, ಸುಧಾರಣೆ, ದೈವಭಕ್ತಿ, ದೇಶಾಭಿಮಾನ, ಭಾಷಾಭಿಮಾನ ಮುಂತಾದವುಗಳ ಅವಶ್ಯಕತೆಗಳೆಷ್ಟೆಂಬ ವಿಚಾರಧಾರೆ: ಪಠ್ಯಪುಸ್ತಕಗಳ ಸಂಬಂಧವಾಗಿ ಶಿಷ್ಯರಲ್ಲಾರಾದರೂ ಪ್ರಶ್ನೆಯನ್ನೇನಾದರೂ ಕೇಳಿದರೆ, "ಇದನ್ನು ಕ್ಲ್ಯಾಸಿನಲ್ಲಿ ಕೇಳಿ. ಇದಕ್ಕೆ ಅಥವಾ ನಿಮ್ಮ ಇತರ ಪ್ರಶ್ನೆಗಳಿಗೆ ಎಷ್ಟು ಬೇಕಾದರೂ ಉತ್ತರ ಹೇಳುತ್ತೇನೆ. ನಿಮಗೆ ಮಾತ್ರ ಇಲ್ಲಿ ಉತ್ತರ ಹೇಳಿದರೆ, ಇತರ ವಿದ್ಯಾರ್ಥಿಗಳಿಗೆಲ್ಲ ನಾನು ಪಕ್ಷಪಾತ ಮಾಡುವವನೆಂದೂ, ನನ್ನ ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಮಾತ್ರ ಗೋಪ್ಯವಾಗಿ ವಿಶೇಷ ರೀತಿಯಲ್ಲಿ ನಾನು ಪಾಠ ಹೇಳುವೆನೆಂದೂ, ತಪ್ಪು

ತಿಳಿವಳಿಕೆಯುಂಟಾಗಬಹುದು. ಅದಕ್ಕೆ ಅವಕಾಶ ಕೊಡಬಾರದು" ಎಂದು ಉತ್ತರ ಹೇಳುತ್ತಿದ್ದರು. ಅವರ ಶಿಸ್ತಿಗೂ ನ್ಯಾಯಪರತೆಗೂ ಇದೊಂದು, ನಿದರ್ಶನ.

ಪದಪ್ರಯೋಗ ಮಾಡುವುದರಲ್ಲಿ ಬಹಳ ಎಚ್ಚರಿಕೆಯಿಂದಿರಬೇಕೆಂಬುದು – ಅವರ ಮಾತುಗಳನ್ನೇ ಉಪಯೋಗಿಸುವುದಾದರೆ ಮೈಯೆಲ್ಲ ಮೆದುಳಾಗಿರಬೇಕೆಂಬುದು – ಅವರೊಮ್ಮೆ ತಿಳಿಸಿದ ಅಭಿಪ್ರಾಯ. ಅವರು ಹಾಗೆ ತಿಳಿಸಿ, ಔಚಿತ್ಯಜ್ಞಾನವಿಲ್ಲದೆ ಪದಗಳನ್ನು ಪ್ರಯೋಗಿಸುವುದು ಅಕ್ಷಮ್ಯವೆಂದು ಸೂಚಿಸಿದ ಸಂದರ್ಭವಿದು : ಶೀಲಶುದ್ಧಿಯಿಲ್ಲದ ಕಲಾವಿದನೊಬ್ಬನನ್ನು ಬಣ್ಣಿಸುವಲ್ಲಿ, ಸಂತತವಾದ ಆತನ ತಪಸ್ಸಿನಿಂದ ಕಲಾಭಿವೃದ್ಧಿಯಾದುದಾಗಿ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದುದನ್ನು ಉದಾಹರಣೆಯಾಗಿ ಪ್ರಸ್ತಾವಿಸಿ, "ಆತನಿಂದ ಕಲಾಭಿವೃದ್ಧಿ ಯಾಯಿತೆಂಬುದನ್ನು ಕೃತಜ್ಞತೆಯಿಂದ ಒಪ್ಪಿಕೊಳ್ಳೋಣ. ಅವರ ಸಂತತ ಪ್ರಯತ್ನದಿಂದ ಕಲಾಭಿವೃದ್ಧಿಯಾಯಿತೆಂದೋ ಅಥವಾ ಆತನು ನಿರಂತರವಾಗಿ ಶ್ರಮಿಸಿದುದರಿಂದ ಕಲಾಭಿವೃದ್ಧಿಯ ಉಪಕಾರವಾಯಿತೆಂದೋ ಹೇಳಿ, ಅವರ ಕಲಾಭಿಜ್ಞತೆಯನ್ನು ಕೊಂಡಾಡೋಣ. ಹಾಗೆ ಕೃತಜ್ಞತೆಯನ್ನು ಸೂಚಿಸಿ ಪ್ರಶಂಸಿಸುವುದು ಮಾನವ ಧರ್ಮ. ಆದರೆ, ತಪಸ್ಸೆಂಬ ಮಾತನ್ನು ಬಿಟ್ಟುಬಿಡೋಣ; ತಪಸ್ಸೆಂಬ ಪದವನ್ನು ಪ್ರಯೋಗಿಸಿದರೆ, ಅದು ತಪಸ್ಸೆಂಬ ಪದದ ದುರುಪಯೋಗ. ಯಾವ ಸಂದರ್ಭದಲ್ಲಿ ಯಾವ ಪದವನ್ನು ಪ್ರಯೋಗಿಸಬೇಕೆಂಬ ಔಚಿತ್ಯವನ್ನರಿತು ವರ್ತಿಸಬೇಕು" ಎಂದು ಅವರು ಐವತ್ತು ವರ್ಷಗಳಿಗೂ ಹಿಂದೆ ಹೇಳಿದ ಅವರ ಮಾತುಗಳನ್ನು ನಿನ್ನೆ ಕೇಳಿದಂತಿದೆ. ಅಂದು ಅವರು ಆ ಮಾತುಗಳನ್ನಾಡಿದ ಕೂಡಲೆ, ನಾನು "ಅವರು ಶ್ರದ್ಧೆಯಿಂದ ಸಂತತವಾಗಿ ಶ್ರಮಿಸಿ ಕಲಾಸೇವೆ ಮಾಡಿದ ಪ್ರತಿಭಾಮಯವಾದ ಅದ್ಭುತಶಕ್ತಿಯನ್ನು ತಪಸ್ಸೆಂದು ಬಣ್ಣಿಸಿದರೇನು ತಪ್ಪು, ಸಾರ್? ಅದನ್ನು ತಪಸ್ಸೆನ್ನಕೂಡದೆ, ಸಾರ್?" ಎಂದು ಕೇಳಿದೆ. ನನ್ನ ಜೊತೆಯಲ್ಲಿದ್ದ ನನ್ನ ಸಹಪಾಠಿಯೊಬ್ಬರೂ "ಅದನ್ನು ತಪಸ್ಸೆನ್ನಕೂಡದೆ, ಸಾರ್?" ಎಂದು ಕೇಳಿದರು. ಒಡನೆಯೇ ಬಂದುವು: "ಕೂಡದು, ಕೂಡದು, ಸರ್ವಥಾ ಕೂಡದು. ಅದನ್ನು ಅದ್ಭುತಶಕ್ತಿಯೆನ್ನಬಹುದು ಕಲಾಸಿದ್ಧಿಯೆನ್ನಬಹುದು, ಯಾವ ಮಾತುಗಳಲ್ಲಿ ಎಷ್ಟಾದರೂ ಕೊಂಡಾಡಬಹುದು. ತಪಸ್ಸೆಂದು ಮಾತ್ರ ಕರೆಯಕೂಡದು, ನನ್ನ ಮಾತನ್ನು ಒಪ್ಪುವ ಅಥವಾ ಒಪ್ಪದಿರುವ ಸ್ವಾತಂತ್ರ್ಯವೇನೋ ನಿಮಗಿದೆ. ವಯಸ್ಸಿನಲ್ಲಿ ನನಗಿಂತ ಕಿರಿಯರಾದ ನನ್ನ ಶಿಷ್ಯರಾಗಿದ್ದರೂ ನಿಮಗೆ ಆ ಸ್ವಾತಂತ್ರ್ಯವುಂಟು. ನನ್ನ ಅಭಿಪ್ರಾಯವನ್ನು ಪ್ರಾಮಾಣಿಕತೆಯಿಂದ ನಾನಿಟ್ಟುಕೊಂಡಿದ್ದು, ಅದು ತಪ್ಪೆಂದು ಯಾರಾದರೂ ತೋರಿಸಿಕೊಟ್ಟಾಗ ಅದನ್ನು ಬದಲಾಯಿಸಿ ತಿದ್ದಿಕೊಳ್ಳೋ ಸ್ವಾತಂತ್ರ್ಯ ನನಗೂ ಉಂಟು. ತಪಸ್ಸೆಂಬ ಈ ಪದಪ್ರಯೋಗದ ವಿಷಯದಲ್ಲಿ ನನ್ನ ಅಭಿಪ್ರಾಯ ಖಚಿತವಾಗಿದೆ. ಶೀಲಶುದ್ಧಿ ಯುಳ್ಳವನಾಗಿ ಧರ್ಮನಿಷ್ಠೆಯಿಂದ ಯಾವುದಾದರೂ ಮಹೊತ್ತಮ ಕಾರ್ಯಸಾಧನೆಗಾಗಿ ಸಂತತವಾಗಿ ಪ್ರಯತ್ನಿಸಿ ಶ್ರಮಿಸುವವನ ವಿಚಾರದಲ್ಲಿ ಮಾತ್ರವೇ ತಪಸ್ಸೆಂಬ ಪ್ರಯೋಗ ಸುಸಂಗತ" ಎಂಬ ಮಾತುಗಳು. ಆಗಲೂ ನಾನು ಸುಮ್ಮನಿರದೆ, "ಪೇಪರಿನಲ್ಲಿ ಬರೆದಿರೋರು ಅದನ್ನ ಪ್ರಯೋಗಿಸಿಬಿಟ್ಟಿದ್ದಾರಲ್ಲಾ, ಸಾರ್!" ಎಂದೆ, ಆ ಮಾತುಗಳನ್ನು ಕೇಳಿ ಅವರಿಗೆ ಕೊಂಚ ಅಸಮಾಧಾನವಾಯಿತೆಂದು ತೋರಿತು. ಅವರು "ಹೀಗೇಕೆ ಚಂಡಿಸುತ್ತೀರಿ? ಪೇಪರಿನಲ್ಲಿ ಬರೆದಿರೋರು ಅದನ್ನ ಪ್ರಯೋಗಿಸಿದ್ದಾರೆ, ಅಂತೀರಿ. ಅದಕ್ಕೆ ನಾನೇನು ಮಾಡಲಿ? ನನಗೆ

ಸರಿಯೆಂತ ತೋರಿದ್ದನ್ನ ನನ್ನ ಶಿಷ್ಯರಿಗೆ ಹೇಳೋದು ನನ್ನ ಕರ್ತವ್ಯ. ಇನ್ಯಾರೋ ಏನೋ ಮಾಡಿದರೆ, ಅದಕ್ಕೆ ನಾನು ಹೊಣೆಯೆ? ಮೊನ್ನೆ ಒಬ್ಬರು ವಿದ್ವಾಂಸರು, ಒಬ್ಬರು ದೊಡ್ಡ ಅಧಿಕಾರಿಯವರನ್ನ ಶ್ರೀಮನ್ನಾರಾಯಣನಿಗೇ ಹೋಲಿಸಿ, ಆತನೇ ನಾರಾಯಣನಿಗಿಂತ ಒಂದು ಕೈ ಮೇಲೆಂದು ತೋರೋ ಹಾಗೆ ಹೊಗಳಿ ಹಲ್ಲುಕಿರಿದರಂತೆ. ಅದಕ್ಕೇನು ಮಾಡೋದು? ದೊಡ್ಡ ಅಧಿಕಾರಿಗಳನ್ನ – ಅವರು ನಿಜವಾಗಿಯೂ ಯೋಗ್ಯರಾಗಿದ್ದರೆ – ಎಷ್ಟು ಬೇಕಾದರೂ ಕೊಂಡಾಡಬಹುದು. ಕೊಂಡಾಡಲಿ! ಆದರೆ, ಮನುಷ್ಯರು ಎಂಥವರೇ ಆಗಿದ್ದರೂ ಅವರನ್ನ ಶ್ರೀಮನ್ನಾರಾಯಣನಿಗೆ ಹೋಲಿಸುವುದು ತಪ್ಪು, ದೊಡ್ಡ ತಪ್ಪು. ಅದು ಮಾಡಬಾರದ ಕೆಲಸ. ಶ್ರೀಮನ್ನಾರಾಯಣ ತ್ರಿಮೂರ್ತಿಗಳಲ್ಲೊಬ್ಬ. ಅವನು ಇಲ್ಲವೆಂದು ವಾದಿಸುವಂಥೋರ ಕೂಡ, ಶ್ರೀಮನ್ನಾರಾಯಣನೆಂಬ ಕಲ್ಪನೆಯ ಹಿನ್ನೆಲೆಲಿರುವ ಪಾರಮ್ಯ ಭಾವನೆಯೂ ಪಾವಿತ್ರ್ಯಭಾವನೆಯೂ ಯಾವ ಮಾನವ ಮಹನೀಯನಿಗೂ ಅನ್ವಯಿಸಕೂಡದಷ್ಟು ಅಮೋಘವೆಂಬುದನ್ನ ಒಪ್ಪಲೇಬೇಕು. ಹೀಗಿರುವಾಗ, ಅಧಿಕಾರಿಯವರನ್ನ – ನಾನು ಈಗ ಹೇಳಿದಂತೆ – ಒಬ್ಬರು ವಿದ್ವಾಂಸರು ಶ್ರೀಮನ್ನಾರಾಯಣನಿಗೆ ಹೋಲಿಸಿದರೆಂದು ಕೇಳಿದೆ, ಅದು ವಿದ್ವತ್ತಿನ ದುರುಪಯೋಗ. ಅದಕ್ಕೆ ಯಾರು ಹೊಣೆ? ಹ್ಯಾಗೆ ಮಾತಾಡಬೇಕು, ಹ್ಯಾಗೆ ಬರೆಯಬೇಕು, ಅನ್ನೋದನ್ನ ಅವರವರೇ ಸಾವಧಾನವಾಗಿ ಯೋಚಿಸಿ ನಿರ್ಧರಿಸಿಕೊಳ್ಳೋದು ವಿವೇಕ. ವಿವೇಕ ತಪ್ಪಿದವರನ್ನೆಲ್ಲಾ ತಿದ್ದೋದಕ್ಕಾದೀತೆ? ಅಥವಾ ತಿದ್ದಲು ನಾವು ಯಾರು? ನಮ್ಮನ್ನ ನಾವು ತಿದ್ದಿಕೊಳ್ಳೋದೇ ಬೇಕಾದಷ್ಟಿದೆ" ಎಂದರು.

ಅವರು ಆ ದಿನ ಆಡಿದ ಮಾತುಗಳು ಎಂದಿಗೂ ಮರೆಯಲಾಗದ ವಿವೇಕವಾಣಿಗಳು, ಉಪದೇಶವಾಣಿಗಳು. ಆದರೂ, "ಹೀಗೇಕೆ ಚಂಡಿಸುತ್ತೀರಿ?" ಎಂಬ ಮಾತುಗಳು ನನ್ನ ಕಿವಿಗಳಲ್ಲಿ ಮೊರೆಯತೊಡಗಿದುವು. ಅವರಲ್ಲಿ ನಾನೇಕೆ ಹಾಗೆ ಅಪಚಾರ ಮಾಡಿದೆನೆಂದು ಮನಸ್ಸಿಗೆ ವ್ಯಥೆಯಾಯಿತು. ನನ್ನಲ್ಲಿ ಅವರಿಗೆ ಬಹಳ ವಾತ್ಸಲ್ಯವಿದ್ದುದನ್ನು ನೆನೆದಷ್ಟೂ ನನ್ನ ಮನೋವ್ಯಥೆಯೂ, ಪಶ್ಚಾತ್ತಾಪವೂ ಹೆಚ್ಚಿದುವು. ನಾವು ಅವರ ಕೊಠಡಿಯಿಂದ ಹೊರಟಾಗ ಅವರೇನೊ "ಮನಸ್ಸಿನಲ್ಲಿರುವುದನ್ನು ದಿಟ್ಟತನದಿಂದ ಹೇಳಿ ವಾದಿಸುವವರನ್ನು ಕಂಡರೆ ನನಗೆ ಇಷ್ಟ. ಅಂಥೋರೇ ನನಗೆ ಬೇಕು. ಕುರಿಗಳಂತೆ ತಲೆಬೊಗ್ಗಿಸಿ ಹೂಗುಟ್ಟುವವರು ಬೇಡ" ಎಂದು ಹೇಳಿದರು. ಆದರೂ ನನ್ನ ವ್ಯಥೆಯೇನೂ ಕಡಿಮೆಯಾಗಲಿಲ್ಲ. ಜೀವನವೇ ವಿಚಿತ್ರ! ಆ ಬಳಿಕ ಕೆಲವೇ ದಿನಗಳು ಕಳೆದ ಮೇಲೆ, ಅವರ ಮನಸ್ಸಿಗೆ ತಾತ್ಕಾಲಿಕವಾಗಿ ಅಸಮಾಧಾನವನ್ನುಂಟುಮಾಡಿದ ಕೆಲಸವೊಂದು ನನ್ನಿಂದ ನಡೆಯಿತು. ನನ್ನ ಉದ್ದೇಶವೇ ಒಂದು, ಆದುದೇ ಒಂದು! ಒಂದು ದಿನ, ತರಗತಿಯಲ್ಲಿ ಶಿಷ್ಯರೆಲ್ಲರೂ ಸೇರಿದ್ದೆವು; ಗುರುಗಳು ಬರುವ ಸಮಯ. ಅವರು ಕುಳಿತುಕೊಳ್ಳಬೇಕಾಗಿದ್ದ ಕುರ್ಚಿಯ ಎದುರಿಗಿದ್ದ ಮೇಜಿನ ಮೇಲೆ ಒಂದು ಗಡಿಗೆ; ಅದರ ಬಾಯಿಗೆ ಸಿಕ್ಕಿಸಿದ್ದ ಒಂದು ಪೊರಕೆ! ನನ್ನ ಸಹಪಾಠಿಗಳೆಲ್ಲಾರ ಗಮನವನ್ನೂ ಅದು ಸೆಳೆಯದಿರಲಿಲ್ಲ. ಅಸಹ್ಯವಾದ ಆ ಗಡಿಗೆಯನ್ನು ಮೇಜಿನ ಮೇಲಿನಿಂದ ತೆಗೆದಿಡುವ ಉದ್ದೇಶದಿಂದ ಮೇಜಿನ ಬಳಿಗೆ ಹೋಗಿ ಗಡಿಗೆಯ ಬುಡಕ್ಕೆ ಅಂಗೈಗಳನ್ನು ನಾನು ಹಾಕುವ ವೇಳೆಗೂ, ಅವರು ಬರುವ ವೇಳೆಗೂ ಸರಿ ಹೋಯಿತು. ಅವರು ಮೇಜಿನ ಬಳಿಗೆ ಬರುವಷ್ಟರಲ್ಲಿ ಅದನ್ನು ತೆಗೆದಿಡುವ ಆತುರದಿಂದ ಕೊಂಚ ಮೇಲಕ್ಕೆತ್ತಿದೆ. ಅಷ್ಟರಲ್ಲಿ

ಅವರು ಸರಸರನೆ ಮುಂದೆ ಬಂದು, 'ಬೇಡಿ, ಬೇಡಿ, ತೆಗೆಯಬೇಡಿ, ನಿಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಿ" ಎಂದರು. ನಾನು ಕುಳಿತುಕೊಳ್ಳಲು ಹೊರಟೆ. ಅಷ್ಟರಲ್ಲಿ ಅವರು ನಗುತ್ತ "ಹೂದಾನಿಗೆ ತುರಾಯಿ ಸೆಕ್ಕಿದಂತಿದೆ. ಹೇಗೂ ಸೆಕ್ಕಿಸಿದ್ದೀರಿ. ಗಡಿಗೆ ಏಕೆ ಬೇರೆ ಕಡೆಗಿಡಬೇಕು?" ಎಂದರು; ಮತ್ತೆ ನಕ್ಕರು. ಆಗ ನನ್ನ ಮನಸ್ಸಿನ ಸ್ಥಿತಿಯು ಹೇಗಾಗಿರಬೇಕೆಂಬುದನ್ನು ಊಹೆಗೆ ಬಿಡಬೇಕೆ ಹೊರತು, ಈಗಲೂ ವರ್ಣಿಸಲಳವಲ್ಲ. ನಾನು ಅಪರಾಧಿಯಲ್ಲವೆಂದು ತಿಳಿಸುವ ಸಾಮರ್ಥ್ಯವೂ ನನಗಿರಲಿಲ್ಲ; ಮಾತೇ ಹೊರಡದಂತಾಯಿತು. ನಾನು ನನ್ನ ಸ್ಥಳಕ್ಕೆ ಹೋಗುವುದಕ್ಕೆ ಮುಂಚಿತವಾಗಿಯೇ ಅವರು ನನ್ನನ್ನು ಉದ್ದೇಶಿಸಿ "ಕೊಳ್ಳಿ, ಬೀಗದಕೈ. ನನ್ನ ಕೊಠಡಿಗೆ ಹೋಗಿ ಬಾಗಿಲು ಬೀಗ ತೆಗೆದು, ಒಳಗಿಟ್ಟಿರುವ ಕವಿರಾಜಮಾರ್ಗ ಪುಸ್ತಕ ತೆಗೆದುಕೊಂಡು ಬನ್ನಿ" ಎಂದು ಬೀಗದ ಕೈಯನ್ನು ಕೊಟ್ಟರು. ನಾನು ತರಗತಿಯಿಂದ ಹೊರಟು "ನನ್ನ ಮೇಲೆ ರೇಗಲಿಲ್ಲ. ನನ್ನನ್ನ ಗದರಿಸಲಿಲ್ಲ. ಇಂಥ ಗುರುಗಳಿಗೆ ಅಸಮಾಧಾನವಾಯಿತಲ್ಲಾ!" ಎಂದು ನನ್ನಲ್ಲಿ ನಾನೇ ಪೇಚಾಡಿಕೊಳ್ಳುತ್ತ ಅವರ ಕೊಠಡಿಯ ಬಳಿಗೆ ಹೋದೆ. ಅಲ್ಲಿ ಎಷ್ಟು ಹುಡುಕಿದರೂ ಅವರು ಹೇಳಿದ ಪುಸ್ತಕವೇ ಸಿಕ್ಕಲಿಲ್ಲ. ಬೀರುವಿನಲ್ಲಿ, ಮೇಜಿನ ಮೇಲೆ, ಎಲ್ಲಿ ಹುಡುಕಿದರೂ "ಕವಿರಾಜಮಾರ್ಗ" ಗ್ರಂಥ ಸಿಕ್ಕಲಿಲ್ಲ. ಬಾಗಿಲಿಗೆ ಬೀಗವನ್ನು ಹಾಕಿ ಹಿಂತಿರುಗಿದೆ. ತರಗತಿಯೊಳಕ್ಕೆ ("ಓಲ್ಡ್ ಕೆಮೆಸ್ಟ್ರಿಥಿಯೇಟರ್" ಒಳಕ್ಕೆ) ಪ್ರವೇಶಿಸುತ್ತಿದ್ದಂತೆಯೇ ಅವರು ನಗುತ್ತ "ಪುಸ್ತಕ ಸಿಕ್ಕಲಿಲ್ಲ. ಅಲ್ಲವೆ? ಪುಸ್ತಕ ಅಲ್ಲಿಲ್ಲ. ಇಲ್ಲಿ ನಡೆದದ್ದನ್ನ ವಿಚಾರಿಸುವಾಗ ನೀವು ಇಲ್ಲಿರಬಾರದೆಂತ ನಿಮ್ಮನ್ನ ಕಳಿಸಿದೆ. ನಾನು ಇಲ್ಲಿಗೆ ಬರುವುದಕ್ಕೆ ಮುಂಚೆ ನೀವು ಮೇಲಕ್ಕೆದ್ದು ಮೇಜಿನ ಕಡೆಗೆ ಬಂದಾಗ, ಇಲ್ಲಿರುವವರು ಅದರ ಮೇಲೆ ಗಡಿಗೆಯಿದ್ದುದನ್ನು ನೋಡಿದರಂತೆ. ಅದನ್ನು ತೆಗೆಯಬೇಕೆಂತ ನೀವು ಅದರ ಬಳಿಗೆ ಹೋದಿರೆಂತ ಗ್ರಹಿಸಿದರಂತೆ. ನಿಮ್ಮ ಮೇಲೆ ಸಂದೇಹ ಹುಟ್ಟುವಂತಿದ್ದ ಸನ್ನಿವೇಶ. ಅನ್ಯಾಯವಾಗಿ ಸಂದೇಹ ಹುಟ್ಟಿತು. ನಿಮ್ಮ ಮನಸ್ಸಿಗೆ ನೋವಾಯಿತು. ಜೀವನದಲ್ಲಿ ಹೀಗೆ ವಿಧಿಯ ಕುಹಕವಿರುತ್ತೆ. ಬನ್ನಿ, ಬನ್ನಿ" ಎಂದರು. ವ್ಯಥೆಯಿಂದ ಪಾತಾಳಕ್ಕಿಳಿದು ಹೋಗಿದ್ದ ನನ್ನ ಮನಸ್ಸು ಉಲ್ಲಾಸದಿಂದ ಹುರಿದುಂಬಿ ಆಕಾಶಕ್ಕೇರಿತು. ಅವರ ಸಂಯಮ, ತಾಳ್ಮೆ ಶಿಷ್ಯಪ್ರಿಯತೆ, ನ್ಯಾಯದೃಷ್ಟಿ, ಔಚಿತ್ಯಜ್ಞಾನ ಮುಂತಾದ ಸದ್ಗುಣಗಳು ಅಂದಿನ ಘಟನೆಯಿಂದ ವ್ಯಕ್ತವಾದುವು. ಅವರು ಕುರ್ಚಿಯನ್ನು ಮೇಜಿಗೆ ದೂರವಾಗಿರುವಂತೆ ಎಳೆದುಕೊಂಡು ಕುಳಿತಿದ್ದರು. ಗಡಿಗೆಯೂ ಅದಕ್ಕೆ ಸಿಕ್ಕಿದ ಪೊರಕೆಯೂ ಮೇಜಿನ ಮೇಲೆ ವಿರಾಜಿಸುತ್ತಿದ್ದುವು, ಗುರುಗಳು ಪ್ರಸನ್ನವದನರಾಗಿ ನಗುತ್ತ "ಇವೊತ್ತು ಪೊರಕೆಯನ್ನು ಕುರಿತು ಒಂದು ಪ್ರಬಂಧ ಬರೆಯಿರಿ" ಎಂದು ಹೇಳಿದರು. ನಾನು "ಸಮ್ಮಾರ್ಜನಿಯ ಹೇಳಿಕೆ" ಎಂಬ ಶೀರ್ಷಿಕೆಯಲ್ಲಿ ಬರೆದ ಪ್ರಬಂಧವನ್ನು ಅವರು ಬಹಳವಾಗಿ ಮೆಚ್ಚಿ, ಅದನ್ನು ತಮ್ಮ ಬಳಿಯಲ್ಲಿಟ್ಟುಕೊಂಡು ತಾವು ಪಾಠ ಹೇಳುತ್ತಿದ್ದ ಇತರ ತರಗತಿಗಳಲ್ಲಿ ಕೂಡ, ಓದಿ ಹೇಳಿ ಮೆಚ್ಚಿಕೆಯನ್ನು ಸೂಚಿಸಿದರು. ಕೆಳಗಿನ ತರಗತಿಯವನ ಪ್ರಬಂಧವನ್ನು ಮೇಲಿನ (Senior) ತರಗತಿಯಲ್ಲಿ ಓದಿ ಹೇಳಿ ಪ್ರಶಂಸೆಮಾಡಿದುದರಿಂದ ತಮಗೆ ಅಪಮಾನವಾಯಿತೆಂದು ಮೇಲಿನ ತರಗತಿಯ ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಅಸಮಾಧಾನವೂ ಆಯಿತು. ಆ ಮಾತು ಹಾಗಿರಲಿ. ಆಗಿನಿಂದ ನನ್ನಲ್ಲಿ ಗುರುಗಳ ವಾತ್ಸಲ್ಯವೂ, ಕೃಪೆಯೂ ಏಕಪ್ರಕಾರವಾಗಿ ವೃದ್ಧಿಹೊಂದಿದುವು.

ಗುರುಗಳು ಶಿಕ್ಷಣಕ್ಷೇತ್ರದಲ್ಲಿ ನ್ಯಾಯಕ್ಕಾಗಿ ಹೋರಾಡುವುದರಲ್ಲಿ ಕೆಚ್ಚೆದೆಯ ಕಟ್ಟಾಳಿನಂತಿದ್ದ ಧೀರರು. ಉಪನಿಷತ್ತುಗಳೇ ಮುಂತಾದ ಆಧ್ಯಾತ್ಮಿಕ ಮತ್ತು ಧಾರ್ಮಿಕ ಗ್ರಂಥಗಳಲ್ಲಿ ಪ್ರಯೋಗ ವಾಗಿರುವ ಧೀರ ಶಬ್ದವು ಬಹಳ ಅರ್ಥಗರ್ಭಿತವಾದ ಶಬ್ದವೆಂಬುದನ್ನರಿತೇ ಅವರನ್ನು ಧೀರರೆಂದಿದ್ದೇನೆ. ನಾನು ಸೆಂಟ್ರಲ್ ಕಾಲೇಜಿನಲ್ಲಿ ಅವರ ಶಿಷ್ಯನಾಗಿದ್ದ ಅವಧಿಯಲ್ಲಿ ನಡೆದ ಹಲವು ನಿದರ್ಶನಗಳಿಂದ ಅದನ್ನು ಸಮರ್ಥಿಸಬಹುದಾದರೂ, ಕೇವಲ ಎರಡು ನಿದರ್ಶನ ಗಳನ್ನು ಮಾತ್ರವೇ ಇಲ್ಲಿ ಸೂಚಿಸಿ ತೃಪ್ತಿ ಹೊಂದಬೇಕಾಗಿದೆ. ಅನ್ಯಾಯವಾದರೆ ಅವರು ಸಹಿಸುತ್ತಿರಲಿಲ್ಲ. ವಿಜ್ಞಾನದ ಅಧ್ಯಾಪಕರೊಬ್ಬರು ಪ್ರಶ್ನಪತ್ರಿಕೆಗೆ ವಿದ್ಯಾರ್ಥಿಗಳು (ತರಗತಿಯ ಪರೀಕ್ಷೆಯಲ್ಲಿ) ಬರೆದ ಉತ್ತರಗಳನ್ನು ಪರಿಶೀಲಿಸಿ ಅಂಕಗಳನ್ನು ಕೊಡುವುದರಲ್ಲಿ ನೂತನ ಮಾರ್ಗವೊಂದನ್ನವಲಂಬಿಸಿದರು; ಒಂದೊಂದು ಪ್ರಶ್ನೆಯ ಉತ್ತರವನ್ನು ಓದಿನೋಡಿ ಅಂಕಗಳನ್ನು ಕೊಡುವ ವಾಡಿಕೆಯ ವಿಧಾನವನ್ನನುಸರಿಸದೆ, ಉತ್ತರವನ್ನು ಪತ್ರಿಕೆಯ ಉತ್ತರಗಳನ್ನೆಲ್ಲ (ಪ್ರತ್ಯೇಕ ಪ್ರತ್ಯೇಕವಾಗಿ ಓದಿ ಅಂಕಗಳನ್ನು ಕೊಟ್ಟು ಅವುಗಳನ್ನೆಲ್ಲಾ ಕೂಡಿ ಆ ವಿದ್ಯಾರ್ಥಿಗೆ ಬಂದ ಒಟ್ಟು ಅಂಕಗಳನ್ನು ಬರೆದು ಸೂಚಿಸುವುದನ್ನು ಬಿಟ್ಟು) ಕೊನೆಯವರೆಗೂ ಉದ್ದಕ್ಕೆ ಓದಿ ಒಟ್ಟಾರೆ ತೋರಿದಷ್ಟು ಅಂಕಗಳನ್ನು ಅ ಉತ್ತರಪತ್ರಿಕೆಯ ಮೇಲೆ ಬರೆದು ಸೂಚಿಸಿದುದೇ ಅವರು ಅನುಸರಿಸಿದ ನೂತನ ಮಾರ್ಗ. ಅದರಿಂದ ಉತ್ತರ ಪತ್ರಿಕೆಗಳನ್ನು ಪರಿಶೀಲಿಸುವುದರಲ್ಲಿ ಅಧ್ಯಾಪಕರ ಶ್ರಮವೇನೊ ಕಡಿಮೆಯಾಯಿತು. ಆದರೆ, ಅನೇಕ ವಿದ್ಯಾರ್ಥಿಗಳಿಗೆ ಬರಬೇಕಾದಷ್ಟು ಅಂಕಗಳು ಬಾರದೆ ಅನ್ಯಾಯವಾಯಿತು; ಪ್ರತ್ಯೇಕ ಪ್ರತ್ಯೇಕವಾಗಿ ಉತ್ತರಗಳನ್ನು ಪರಿಶೀಲಿಸಿ ಅಂಕಗಳನ್ನು ಕೊಟ್ಟಿದ್ದರೆ ಇನ್ನೂ ಹೆಚ್ಚು ಅಂಕಗಳು ಬರುತ್ತಿದ್ದುವೆಂದು ಸಿದ್ಧವಾಯಿತು. ಆ ವಿಚಾರವೇ ತಮಗೆ ಸಂಬಂಧಪಟ್ಟಿಲ್ಲದಿದ್ದರೂ ನಮ್ಮ ಗುರುವರ್ಯರು ತಮ್ಮ ಶಿಷ್ಯರಲ್ಲಿ ಕೆಲವರಿಗೆ ಅನ್ಯಾಯವಾಗಿದ್ದುದನ್ನು ಸಹಿಸಲಾರದೆ, ವಿಜ್ಞಾನದ ಅಧ್ಯಾಪಕರ ಬಳಿಗೆ ಹೋಗಿ ಉತ್ತರಪತ್ರಿಕೆಗಳನ್ನು ಪರಿಶೀಲಿಸುವುದರಲ್ಲಿ ವಾಡಿಕೆಯ ವಿಧಾನವನ್ನನುಸರಿಸಿ ಮತ್ತೆ ಅಂಕಗಳನ್ನು ಕೊಡಬೇಕೆಂದು ಅವರಿಗೆ ಬಿನ್ನೈಸಿದರಂತೆ. ಅದು, ಅವರಿಂದ ಯಾರೂ ನಿರೀಕ್ಷಿಸುವಂತಿಲ್ಲದಿದ್ದ ಧೀರತೆಯ ಕೆಲಸ; ಕೆಲವರಿಗೆ ಅನ್ಯಾಯವಾಗಿದ್ದುದನ್ನು ತಪ್ಪಿಸುವ ಉದ್ದೇಶದಿಂದ ದಾಕ್ಷಿಣ್ಯವನ್ನು ಬದಿಗೊತ್ತಿ ಧೀರತೆಯಿಂದ ಕೈಕೊಂಡ ಪ್ರಾಮಾಣಿಕ ವರ್ತನೆ. ವಿಜ್ಞಾನದ ಅಧ್ಯಾಪಕರೂ ಅವರ ಸಲಹೆಗೆ ಸುಲಭವಾಗಿ ಒಪ್ಪದೆ ಇದು 'ಜನರಲ್ ಇಂಪ್ರೆಷನ್ ಮೆಥಡ್'; ದೊಡ್ಡ 'ರಿಫಾರಂ' ನಡೆದಿದೆ" ಎಂದು ಮುಂತಾಗಿ ವಾದಿಸಿದರಂತೆ: ಗುರುಗಳು ದಿಟ್ಟತನದಿಂದ "ಈ ವಿಧಾನದಿಂದ ಅನ್ಯಾಯವಾಗಿದೆ, ಕೆಲವರಿಗೆ. ಸುಧಾರಣೆಯಿಂದ ನಿಜವಾಗಿಯೂ ಹೆಚ್ಚು ಹಿತಸಾಧನೆಯಾಗುವಂತಿದ್ದರೆ, ಅದು ಅವಶ್ಯವಾಗಿ ನಡೆಯಬಹುದು. ವಿದ್ಯಾರ್ಥಿಗಳಿಗೆ ಅನ್ಯಾಯ. ಈ ಸುಧಾರಣೆ ಬೇಡ, ಖಂಡಿತ ಬೇಡ" ಎಂದು ಮುಂತಾಗಿ ಪ್ರತಿ ವಾದವನ್ನು ಹೂಡಿದರು. ಕೊನೆಗೆ ಅವರ ಉದ್ದೇಶವೇ ನೆರವೇರಿತು. ಅವರ ಧೀರತೆಯ ಎರಡನೆಯ ನಿದರ್ಶನವಿದು: ಮಿ. ಟೇಟ್ ಸಾಹೇಬರು ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲ್ ಹುದ್ದೆಯಿಂದ ನಿವೃತ್ತರಾಗಿ ಮಿ. ಮೆಟ್ಕಾಫ್ ಸಾಹೇಬರು ಆ ಹುದ್ದೆಯಲ್ಲಿದ್ದಾಗಿನ ಅವಧಿಯಲ್ಲೊಂದು ದಿನ. ಅಪರಾಹ್ನ ಮೂರು ಗಂಟೆಗೆ ಕಾಲೇಜಿನ ತರಗತಿಗಳೆಲ್ಲ ಬರಿದು. ಪಾಠ ಹೇಳಲು ತರಗತಿಗಳಿಗೆ ಹೋದ ಅಧ್ಯಾಪಕರು ಪ್ರಾಧ್ಯಾಪಕರುಗಳಿಗೆಲ್ಲ ಅಚ್ಚರಿ. ನಾಲ್ಕು ಗಂಟೆಗೆ ಶ್ರೀಮತಿ ಸರೋಜಿನಿನಾಯ್ಡು ಅವರ ಭಾಷಣದ, ಸ್ವಂತ ಕವನಗಳ ವಾಚನದ

ರಸದೂಟವಿದ್ದ ಸಾರ್ವಜನಿಕ ಸಭೆಗೆ ಹಕ್ಕಿಗಳೆಲ್ಲ ಹಾರಿಹೋಗಿದ್ದುವು. ಪೂರ್ವಭಾವಿಯಾಗಿ ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಅಧ್ಯಾಪಕರ ಮತ್ತು ಪ್ರಾಧ್ಯಾಪಕರ ರಹಸ್ಯಸಭೆ ನಡೆಯಿತು, ಕಾಲೇಜು ತರಗತಿಗಳಿಗೆ ಯಥಾಪ್ರಕಾರ ಬಂದಿದ್ದ ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳು ಪೂರೈಸಿ ಕಾಲೇಜಿನ ದಿನಚರಿ ಮುಗಿದಮೇಲೆ. ಹಿಂದಿನ ದಿನ ಅಪ್ಪಣೆ ಪಡೆಯದೆ ಸಭೆಗೆ ಹೋಗಿದ್ದ ವಿದ್ಯಾರ್ಥಿಗಳ ವಿಚಾರದಲ್ಲಿ ಹೇಗೆ ಕ್ರಮ ಕೈಕೊಳ್ಳಬೇಕೆಂಬುದನ್ನು ಚರ್ಚೆಮಾಡುವುದು ರಹಸ್ಯ ಸಭೆಯ ಉದ್ದೇಶ. ಪ್ರಾಧ್ಯಾಪಕರುಗಳಲ್ಲಿ ಕೆಲವರು ಕೂಡ, ಬಿಚ್ಚುಮನಸ್ಸಿನಿಂದ ಏನನ್ನೂ ಹೇಳದೆ, ವಿದ್ಯಾರ್ಥಿಗಳ ಮೇಲೆ ಕ್ರಮ ಜರುಗಿಸಬೇಕೆಂಬ ಅಭಿಪ್ರಾಯವನ್ನೇ ಸಮರ್ಥಿಸ ತೊಡಗಿದರಂತೆ. ಆಗ ನಮ್ಮ ಗುರುವರ್ಯರು ಇಂಗ್ಲಿಷಿನಲ್ಲಿ ಭಾಷಣ ಮಾಡಿ, ಪ್ರಿನ್ಸಿಪಾಲರು ವಿದ್ಯಾರ್ಥಿಗಳ ಮೇಲೆ ಕ್ರಮ ಜರುಗಿಸಬೇಕೆಂದಿದ್ದ ಶಿಸ್ತುಪಾಲಕರೆಂಬುದಕ್ಕೂ ಗಮನ ಕೊಡದೆ ದಿಟ್ಟತನದಿಂದ ವಿಷಯವನ್ನು ಮಂಡಿಸಿದರಂತೆ. ಅವರು ಸೂಚಿಸಿದ ಮುಖ್ಯ ಸಂಗತಿಗಳಿವು: "ಶ್ರೀಮತಿಯವರು ಬಹಳ ಪ್ರಖ್ಯಾತರು. ಅವರ ಕವನಗಳು ಜಗತ್ಪ್ರಸಿದ್ಧ, ಅವರ ಕವನಗಳ ವಾಚನವನ್ನು ಕೇಳಬೇಕೆಂಬ ಉತ್ಸಾಹಭರದಲ್ಲಿ ವಿದ್ಯಾರ್ಥಿಗಳು ಕಾಲೇಜಿನಿಂದ ಓಡಿಹೋದರು. ಬಹುಜನರು ಹೊರಟು ಹೋಗಿದ್ದು ಕಾರಣ, ಆ ಬಳಿಕ ತರಗತಿಗಳ ಕೊಠಡಿಗಳಿಗೆ ಹೋದ ಇತರ ಕೆಲವರೂ, ಹೊರಟು ಹೋದರು. ನಾವುಗಳು ತರಗತಿಗಳ ಕೊಠಡಿಗಳಿಗೆ ಹೋದಾಗ, ಯಾರೂ ಇರಲಿಲ್ಲ. ವಿದ್ಯಾರ್ಥಿಗಳಲ್ಲಿ ಸಾಹಿತ್ಯಾಭಿಮಾನ ಮೂಡಬೇಕೆಂದೂ, ವೃದ್ಧಿಯಾಗ ಬೇಕೆಂದೂ ಬೋಧಿಸುವ ನಾವೇ ಅವರು ತೋರಿದ ಸಾಹಿತ್ಯ ಪ್ರೇಮಕ್ಕಾಗಿ ಅವರ ಮೇಲೆ ಕ್ರಮ ಜರುಗಿಸುವುದು ಸರಿಯೆ? ಪೂರ್ವಭಾವಿಯಾಗಿ ಅನುಮತಿ ಪಡೆಯದೆ ಕಾಲೇಜನ್ನು ಬಿಟ್ಟು ಹೋದುದು ತಪ್ಪೆಂಬುದನ್ನು ತಿಳಿಸಿ, ಮುಂದೆ ಹಾಗೆ ಮಾಡಬಾರದೆಂದು ಅವರವರ ತರಗತಿಯಲ್ಲಿ ಎಚ್ಚರಿಕೆ ಹೇಳಿದರೆ ಸಾಕು. ಇಷ್ಟಕ್ಕೂ ಇವೊತ್ತು ಎಲ್ಲರೂ ತರಗತಿಗಳಿಗೆ ಬಂದಿದ್ದಾರೆ. ವಿಧೇಯತೆಯಿಂದ ವರ್ತಿಸಿ ಕಾಲೇಜಿನಿಂದ ಹೋಗಿದ್ದಾರೆ." ಅವರ ಸಲಹೆಯೇ 'ಉಳಿದವರಿಗೆ ಒಪ್ಪಿಗೆಯಾಯಿತಂತೆ. ರಹಸ್ಯ ಸಭೆಯಲ್ಲಿ ನಡೆದ ಚರ್ಚೆಯ ಸಂಗತಿಗಳು ಹೇಗೋ ಬೇಗ ಹೊರಬಿದ್ದವು. ವಿದ್ಯಾರ್ಥಿಗಳಿಗೆ ಅತ್ಯಾನಂದವಾಯಿತು; ತಮ್ಮ ಪರವಾಗಿ ವಾದಿಸಿದ ಮಹನೀಯರಲ್ಲಿ ಪ್ರೀತಿಗೌರವಗಳು ವೃದ್ಧಿಹೊಂದಿದುವು.

ಕನ್ನಡದ ಮೇಲಿನ ಉಜ್ವಲವಾದ ಅಭಿಮಾನದಿಂದ ನಮ್ಮ ಗುರುವರ್ಯರು ೧೯೧೮ನೆಯ ಸಂವತ್ಸರದಲ್ಲಿ ಕಾಲೇಜಿನ "ಕರ್ಣಾಟಕ ಸಂಘ"ವನ್ನು ಸ್ಥಾಪಿಸಿದರು. ಆಗ್ಗೆ ಮೈಸೂರು ಸಂಸ್ಥಾನದಲ್ಲಿ ಆ ಬಗೆಯ ಮತ್ತಾವ ಸಂಘವೂ ಇರಲಿಲ್ಲ. ಅಂತಹ ಸಮಯದಲ್ಲಿ ಸಂಘವನ್ನು ಸ್ಥಾಪಿಸಿದ ದೂರದೃಷ್ಟಿಯನ್ನು ಎಷ್ಟು ಕೊಂಡಾಡಿದರೂ ಸಾಲದು. ಆಗ್ಗೆ ಕನ್ನಡ ಭಾಷೆಯ ಮತ್ತು ಕನ್ನಡ ಸಾಹಿತ್ಯದ ವಿಚಾರದಲ್ಲಿ ಕನ್ನಡಿಗರಲ್ಲೇ ಬಹುಭಾಗದವರಿಗಿದ್ದ ತಾತ್ಸಾರದ ದೃಷ್ಟಿಯನ್ನು ವಿಚಾರಮಾಡಿ ನೋಡಿದರೆ, ಸಂಘ ಸ್ಥಾಪನೆಯನ್ನು ದೊಡ್ಡ ಸಾಹಸವೆನ್ನಬೇಕು. ವಿಶ್ವವಿದ್ಯಾನಿಲಯದ ಪದವೀಧರರಾಗಿ ದೊಡ್ಡ ಹುದ್ದೆಯಲ್ಲಿದ್ದ ಕನ್ನಡಿಗರೊಬ್ಬರು "ಕನ್ನಡವೂ ಒಂದು ಭಾಷೆಯೆ?" ಎಂದು ಪ್ರಶ್ನಿಸಿ ತಿರಸ್ಕಾರವನ್ನು ಸೂಚಿಸಿದ್ದ ಕಾಲವದು. ಆಗ್ಗೆ, ಇಂಗ್ಲಿಷ್ ಭಾಷೆಯನ್ನು ಬಲ್ಲವರಿಗೆ ತಾವು ಕನ್ನಡದಲ್ಲಿ ಮಾತನಾಡುವುದೇ ಅಪಮಾನವೆಂಬ ಭಾವನೆ, ಕನ್ನಡದಲ್ಲಿ ಗ್ರಂಥಗಳನ್ನು ಬರೆದ ಪೂಜ್ಯರಾದ ಚನ್ನಪಟ್ಟಣದ ವಾಸುದೇವಯ್ಯನವರೇ

ಮುಂತಾದವರಲ್ಲಿ ಏನೋ ಒಂದು ಬಗೆಯ ಮರುಕ ಮತ್ತು ಕನ್ನಡ ಭಾಷೆಯಲ್ಲಿ ಮಾತನಾಡುವುದು ಹೆಂಗಸರಿಗೂ ಮಕ್ಕಳಿಗೂ ಉಚಿತವೆಂಬ ನಂಬಿಕೆ; ಯತ್ನವಿಲ್ಲದೆ ತಾವು ಅವರೊಡನೆ ಕನ್ನಡದಲ್ಲಿ ಮಾತನಾಡಬೇಕಾಗಿದ್ದುದಕ್ಕಾಗಿ ಮನಸ್ಸಿಗೆ ಹೀನಾಯ ಮತ್ತು ಮುಜಗರ. ೧೯೧೫ನೆಯ ಸಂವತ್ಸರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿತವಾಗಿದ್ದಿತಾದರೂ, ಹೆಚ್ಚು ಜನರಿಗೆ ಅದರ ಕಾರ್ಯಕಲಾಪಗಳಲ್ಲಿ ಆಸಕ್ತಿಯಿರಲಿಲ್ಲ. ಕನ್ನಡದ ಏಳಿಗೆಗಾಗಿ ಶ್ರಮಿಸುವುದರಲ್ಲಿ ಕನ್ನಡಿಗರಿಗೇ ಆದರವಿಲ್ಲದ ಸನ್ನಿವೇಶ. ಆಗ್ಗೆ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಕನ್ನಡದ ಮೇಲಿನ ಅಭಿಮಾನದಿಂದ ಸೂಚಿಸಿದಂತೆ ಪ್ರಾಧ್ಯಾಪಕ ಬೆಳ್ಳಾವೆ ವೆಂಕಟನಾರಾಯಣಪ್ಪನವರಿಂದ ಭೌತವಿಜ್ಞಾನವನ್ನು ಕುರಿತ ಭಾಷಣವೊಂದು ಕನ್ನಡದಲ್ಲಿ ನಡೆಯಬೇಕೆಂದೂ, ವಿದ್ಯಾಭ್ಯಾಸ ಖಾತೆಯ ಮುಖ್ಯಾಧಿಕಾರಿಗಳಾಗಿದ್ದ ರಾಜಕಾರ್ಯಪ್ರಸಕ್ತ ರಾವ್ ಬಹದ್ದೂರ್ ಶ್ರೀ ಎಂ. ಶಾಮರಾಯರ ಅಧ್ಯಕ್ಷತೆಯಲ್ಲಿ ಅದು ನಡೆಯಬೇಕೆಂದೂ ಗೊತ್ತಾಯಿತು. ಮೈಸೂರಿನ ರಂಗಾಚಾರ್ಲು ಸ್ಮಾರಕ ಭವನದಲ್ಲಿ ಆ ಭಾಷಣವನ್ನು ಕನ್ನಡದಲ್ಲಿ ಸಂಜೆ ಆರು ಗಂಟೆಗೆ ನಡೆಯಿಸಬೇಕೆಂದೂ ಗೊತ್ತಾಗಿದ್ದ ದಿನ ಐದೂ ಮುಕ್ಕಾಲು ಗಂಟೆಯ ವೇಳೆಗೆ ಭಾಷಣಕಾರರೂ, ಅಧ್ಯಕ್ಷತೆ ವಹಿಸಬೇಕಾಗಿದ್ದವರೂ ಅಲ್ಲಿಗೆ ಹೋದರು. ಭಾಷಣವನ್ನು ಕೇಳಲು ಬಂದಿದ್ದವರು ಶ್ರೀ ಎಂ. ವೆಂಕಟಕೃಷ್ಣಯ್ಯನವರು ಮತ್ತು ಇತರ ಏಳುಜನ ಶ್ರೋತೃಗಳು ಮಾತ್ರವೇ. ಆರೂವರೆ ಗಂಟೆಯವರೆಗೂ ಕಾದುನೋಡಿದರೂ ಯಾವುದೊಂದು ನರಪಿಳ್ಳೆಯೂ ಬರಲಿಲ್ಲ. ನಿರುತ್ಸಾಹದಿಂದ ಭಾಷಣ ಸಮಾರಂಭವನ್ನು ಮುಗಿಸಿ ಅಲ್ಲಿಂದ ಎಲ್ಲರೂ ತೆರಳಿದರು. ಇದು ಸಾಹಿತ್ಯ ಪರಿಷತ್ತು ಸ್ಥಾಪಿತವಾದ ಸ್ವಲ್ಪಕಾಲದ ತರುವಾಯ ನಡೆದ ಘಟನೆ. ಈ ಬಗೆಯದು, ಆಗ್ಗೆ ಕನ್ನಡಿಗರಿಂದ ಕನ್ನಡ ಭಾಷೆಗೆ ಸಮಾಜದಲ್ಲಿ ಲಭಿಸುತ್ತಿದ್ದ ಪ್ರೋತ್ಸಾಹ!

ಅಂತಹ ಸನ್ನಿವೇಶದಲ್ಲಿ ನಮ್ಮ ಗುರುವರ್ಯರು ಅನಿರ್ವಚನೀಯವಾದ ಧೀರತೆಯಿಂದಲೂ, ಅಸಾಮಾನ್ಯವಾದ ಭಾಷಾಭಿಮಾನದಿಂದಲೂ ಅಸೀಮವಾದ ಉತ್ಸಾಹದಿಂದಲೂ ಸಂಘವನ್ನು ಸ್ಥಾಪಿಸುವ ಸಂಕಲ್ಪ ಮಾಡಿದರು ಮತ್ತು ಸಂಘದ ಅಧ್ಯಕ್ಷರಾಗಿರಲು ಪ್ರಾಧ್ಯಾಪಕ ಬೆಳ್ಳಾವೆ ವೆಂಕಟನಾರಾಯಣಪ್ಪನವರು ಕೃಪೆ ಮಾಡಿ ಸಮ್ಮತಿಸುವಂತೆ ಅವರನ್ನು ಒಪ್ಪಿಸಿದರು. ಸಂಘದ ಕಾರ್ಯದರ್ಶಿಗಳು ವಿದ್ಯಾರ್ಥಿಗಳೇ ಆಗಿರಬೇಕೆಂದು ನಿರ್ಣಯವಾಗಿ ಸಂಘವು ವಿದ್ಯಾರ್ಥಿವೃಂದಕ್ಕೆ ಸೇರಿದ ಸಂಸ್ಥೆಯೆಂಬ ಭಾವನೆಯುಂಟಾಯಿತು. ವಿಧಿವತ್ತಾಗಿ ಸಂಘ ಸ್ಥಾಪನೆಯಾದ ಶುಭದಿನ ಪ್ರಾಕ್ತನವಿಮರ್ಶಾವಿಚಕ್ಷಣ ರಾವ್‌ಬಹದ್ದೂರ್ ಶ್ರೀ ಆರ್. ನರಸಿಂಹಾಚಾರ್ಯರಿಂದ ಸಮಾರಂಭ ಭಾಷಣವಾಯಿತು. ಅಂದಿನ ಉತ್ಸಾಹವನ್ನೂ ಸಡಗರವನ್ನೂ ವರ್ಣಿಸಲಳವಲ್ಲ. ಪೂಜ್ಯರಾದ ನರಸಿಂಹಾಚಾರ್ಯರಿಗೂ ನನ್ನ ಪೂಜ್ಯಗುರುಗಳಾದ ಪ್ರಾಧ್ಯಾಪಕ ವೆಂಕಟನಾರಾಯಣಪ್ಪನವರು ಮತ್ತು ಶ್ರೀ ಶಾಸ್ತ್ರಿಯವರಿಗೂ, ವಿದ್ಯಾರ್ಥಿವೃಂದಕ್ಕೂ ಉಂಟಾದ ಸಂತೋಷಕ್ಕೆ ಇತಿಮಿತಿಯೇ ಇರಲಿಲ್ಲ. ಗುರುಗಳು ಸಂಘದ ಆಶ್ರಯದಲ್ಲಿ ವಿದ್ಯಾರ್ಥಿಗಳೂ ಭಾಷಣ ಮಾಡಬೇಕೆಂದು ಉದಾರ ಭಾವನೆಯಿಂದ ತೀರ್ಮಾನಿಸಿದರು; ಅವರೇ ಸಂಘದ ಕಾರ್ಯಾಧ್ಯಕ್ಷರು; ಸಂಘದ ಆಧಾರಸ್ತಂಭ. ನಾನು ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಅವಧಿಯಲ್ಲಿ ನನಗೆ ಲಭಿಸಿದ ನನ್ನ ಜೀವನದ

ಮತ್ತೊಂದು ಸುಯೋಗವೆಂದರೆ, ಅದು ಶ್ರೀ ಎಸ್.ವಿ. ರಂಗಣ್ಣನವರ ಸ್ನೇಹ. ಇಂದಿಗೂ ನಮ್ಮಿಬ್ಬರಿಗೂ ಗಾಢಸ್ನೇಹ. ಅದು ನನಗೆ ಅಮೂಲ್ಯ. ಸಂಘ ಸ್ಥಾಪನೆಯ ಸಮಾರಂಭವಾದ ಬಳಿಕ ಕೆಲವು ದಿನಗಳು ಕಳೆದಮೇಲೆ, ನನ್ನ ಭಾಷಣವನ್ನೂ ಅನಂತರ ಶ್ರೀ ಎಸ್.ವಿ. ರಂಗಣ್ಣನವರ ಭಾಷಣವನ್ನೂ ಏರ್ಪಡಿಸಿದರು ಗುರುಗಳು. ತಮ್ಮ ಪ್ರೀತಿಯ ಶಿಷ್ಯರಾಗಿದ್ದ ನಮ್ಮಿಬ್ಬರ ಭಾಷಣಗಳನ್ನೂ ಮೆಚ್ಚಿ ಮನಸಾರೆ ಹರಸಿದರು. ಆ ತರುವಾಯ ಸ್ವಲ್ಪಕಾಲಾನಂತರ, ಗುರುಗಳು ಸಂಘದ ಆಶ್ರಯದಲ್ಲಿ "ಪ್ರಬುದ್ಧ ಕರ್ಣಾಟಕ" ಪತ್ರಿಕೆಯನ್ನು ಪ್ರಕಟಿಸುವ ಮಹತ್ತರ ಕಾರ್ಯವನ್ನಾರಂಭಿಸಿದರು. ಕನ್ನಡದ ಪುರೋಭಿವೃದ್ಧಿ ಸಾಧನೆಯಲ್ಲಿ ಅವರಿಗಿದ್ದ ಅಪಾರವಾದ ಆಸಕ್ತಿಯನ್ನು ಎಷ್ಟು ಕೊಂಡಾಡಿದರೂ ಸಾಲದು, ಶ್ರೀ ಎಸ್.ವಿ. ರಂಗಣ್ಣನವರೂ, ನಾನೂ, ಮಾಡಿದ್ದ ಭಾಷಣಗಳು ಆ ಪತ್ರಿಕೆಯಲ್ಲಿ ಪ್ರಕಟವಾಗಿ ಜನಪ್ರಿಯವಾದುದನ್ನು ಕಂಡು ನಮ್ಮಿಬ್ಬರಿಗಿಂತಲೂ ನಮ್ಮ ಗುರುಗಳಿಗೇ ಹೆಚ್ಚಿನ ಸಂತೋಷವಾಯಿತು; ಅವರದೆಷ್ಟು ಮಟ್ಟಿನ ಉದಾರ ಸ್ವಭಾವ – ಎಂಬ ಸಂಗತಿಗಳನ್ನು ಸೂಚಿಸುವುದಕ್ಕಾಗಿ ಇದನ್ನು ಇಲ್ಲಿ ಪ್ರಸ್ತಾಪಿಸಿದ್ದೇನೆ. ಪ್ರಾಮಾಣಿಕತೆ, ಕಲಾಪ್ರೇಮ, ಅಚ್ಚುಕಟ್ಟು, ಶಿಸ್ತು–ಇವು ರಕ್ತಗತವಾಗಿ ಅವರಲ್ಲಿದ್ದ ಅಮೋಘ ಗುಣಗಳಲ್ಲಿ ನಾಲ್ಕು. ಪತ್ರಿಕೆಯ ಸಂಪಾದಕೀಯ ಲೇಖನ, ಪತ್ರಿಕೆಯನ್ನು ನೋಡಿದೊಡನೆಯೇ ಆಹ್ಲಾದಗೊಳಿಸುತ್ತಿದ್ದ ಕನ್ನಡ ಸುರ್ಯೋದಯದ ಸಂಕೇತವಾದ ಮುಖಚಿತ್ರ, ಪತ್ರಿಕೆಯ ಸೊಗಸಾದ ಮುದ್ರಣ ಮತ್ತು ಕಾಲಕ್ಕೆ ಸರಿಯಾಗಿ ಸಂಚಿಕೆಗಳ ಪ್ರಕಟಣೆ – ಇವು ನಾಲ್ಕೂ ಅನುಕ್ರಮವಾಗಿ ಆ ನಾಲ್ಕು ಗುಣಗಳಿಗೆ ನಿದರ್ಶನಗಳು. ಪತ್ರಿಕೆಯನ್ನು ನೋಡಿ ಹರ್ಷಿಸಿದವರು ಹೆಚ್ಚಾಗಿದ್ದರೂ, ಕನ್ನಡದ ಪತ್ರಿಕೆಗೇಕೆ ಇಷ್ಟು ಅಲಂಕಾರವೆಂಬ ಭಾವನೆಯವರೂ ಕೆಲವರಿದ್ದರು. ಅವರಲ್ಲೊಬ್ಬರು "ಪತ್ರಿಕೆಗೆ ಅರಳೇಪೇಟೆ ರೇಷ್ಮೆಸೀರೆ ಉಡಿಸಿದ್ದೀರಿ" ಎಂದು ಅವರೊಡನೆ ಕುಹಕದ ಮಾತನ್ನಾಡಿದಾಗ, "ದೇವರ ದಯೆಯಿದ್ದರೆ ಕಾಶಿಯ ಪೀತಾಂಬರವನ್ನೇ ಉಡಿಸುತ್ತೇನೆ" ಎಂಬ ದಿಟ್ಟತನದ ಉತ್ತರವನ್ನು ಕೇಳಬೇಕಾಯಿತು. ನಮ್ಮ ಸಂಘದ ಸ್ಥಾಪನೆಯಿಂದ ಮತ್ತು ಪತ್ರಿಕೆಯ ಪ್ರಕಟಣೆಯಿಂದ ವಿದ್ಯಾರ್ಥಿವೃಂದಕ್ಕೆ ಉಂಟಾದ ಸಂತೋಷಕ್ಕೆ ಪಾರವೇ ಇರಲಿಲ್ಲ. ನಮ್ಮ ಗುರುಗಳಿಗೆ ತಮ್ಮ ಶಿಷ್ಯರಲ್ಲಿ ಯಾರನ್ನು ಕಂಡರೂ ಪ್ರೀತಿವಾತ್ಸಲ್ಯಗಳು ಅಮಿತವಾಗಿದ್ದುವು. ಅದರ ಪರಿಣಾಮವಾಗಿ ಶಿಷ್ಯರಿಗೆ ಅವರ ಮೇಲಿನ ಪ್ರೀತಿ ಭಕ್ತಿಗಳು ವೃದ್ಧಿಯಾದುವು. ಮುಂದೆ, ಡಾಕ್ಟರ್ ಕೆ.ವಿ. ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ತರುಣ ಕವಿ ಸಮ್ಮೇಳನವನ್ನು ನಡೆಸಿದರು. ಅವರ ಪ್ರಿಯ ಮಿತ್ರರಾದ ಡಾಕ್ಟರ್ ಡಿ.ವಿ. ಗುಂಡಪ್ಪನವರು, ಡಾಕ್ಟರ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು, ದಿವಂಗತರಾದ ಶ್ರೀ ಟಿ.ಎಸ್. ವೆಂಕಣಯ್ಯನವರು ಮತ್ತು ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿಯವರು ಮುಂತಾದ ಮಹನೀಯರ ನೆರವಿನಿಂದಲೂ, ಶಿಷ್ಯ ಪೀಳಿಗೆಗಳ ಸೇವೆಯಿಂದಲೂ, ಅವರ ಕ್ರಿಯಾಶಕ್ತಿಯಿಂದಲೂ, ಸಂಘದ ಅಧ್ಯಕ್ಷರಾಗಿದ್ದ ಪ್ರಾಧ್ಯಾಪಕ ಬೆಳ್ಳಾವೆ ವೆಂಕಟನಾರಾಯಣಪ್ಪನವರು ಮತ್ತು ಪ್ರಾಧ್ಯಾಪಕ ಬಿ.ಎಂ. ಶ್ರೀಕಂಠಯ್ಯನವರು ಮುಂತಾದ ಹಿರಿಯರ ಸಲಹೆಗಳಿಂದಲೂ, ಸಂಘವೂ, ಪತ್ರಿಕೆಯೂ ದಿನದಿನವೂ ವೃದ್ಧಿಯಾಗಿ ಕನ್ನಡಕ್ಕೆ ಅಮೂಲ್ಯ ಸೇವೆಯನ್ನು ಸಲ್ಲಿಸಿದುವು; ಈಗಲೂ ಅವುಗಳಿಂದ ಅಮೂಲ್ಯ ಸೇವೆಯು ಸಲ್ಲುತ್ತಿದೆ.

ಗುರುವರ್ಯ ಡಾಕ್ಟರ್ ಎ.ಆರ್. ಕೃಷ್ಣಶಾಸ್ತ್ರಿಯವರಿಗೆ ಕನ್ನಡ, ಸಂಸ್ಕೃತ, ಇಂಗ್ಲಿಷು,

ಬಂಗಾಳಿ ಮುಂತಾದ ಭಾಷೆಗಳಲ್ಲಿದ್ದ ಅಪಾರ ವಿದ್ವತ್ತು, ಅದರ ಪರಿಣಾಮವಾಗಿ ನಾನಾ ರೀತಿಗಳಲ್ಲಿ ಕನ್ನಡ ಭಾಷೆಯ ಉನ್ನತಿಗೆ ಸಾಧಕವಾಗುವಂತೆ ಸಮರ್ಪಿತವಾದ ಸೇವೆ, ಅವರ ಸಾತ್ವಿಕ ಜೀವನ, ಅವರು ಕನ್ನಡದ ಪುರೋಭಿವೃದ್ಧಿಗಾಗಿ ತಳೆದಿದ್ದ ತ್ರಿಕರಣ ಶುದ್ಧವಾದ ದೀಕ್ಷೆ, ಅವರಿಂದ ರಚಿತವಾಗಿರುವ ಭಾಸಕವಿ, ಸಂಸ್ಕೃತ ನಾಟಕ, ವಚನಭಾರತ, ಕಥಾಮೃತ ಮುಂತಾದ ಗ್ರಂಥ ರತ್ನಗಳು ಉತ್ತಮ ಗದ್ಯ ಲೇಖನಕ್ಕೆ ಮಾದರಿಗಳಾಗಿರುವ ಸಂಗತಿ, ಬಂಕಿಂಚಂದ್ರರ ಕೃತಿಗಳ ವಿಚಾರವಾಗಿ ಅವರು ರಚಿಸಿದ ಗ್ರಂಥಕ್ಕೆ ಭಾರತದ ಸಾಹಿತ್ಯ ಅಕಾಡಮಿ ಪ್ರಶಸ್ತಿಯು ಲಭಿಸಿದ ವಿಷಯ, ಮೈಸೂರು ವಿಶ್ವವಿದ್ಯಾನಿಲಯದಿಂದ ಆ ಮೊದಲೇ ಅವರಿಗೆ "ಡಾಕ್ಟರೇಟ್" ಪ್ರಶಸ್ತಿ ಲಭಿಸಿ ಅವರು ಸನ್ಮಾನಿತರಾಗಿದ್ದ ಸಂಗತಿ ಮುಂತಾದವುಗಳನ್ನು ಎಲ್ಲರೂ ಬಲ್ಲರು. ಯಾವ ಕಾಲದವರಾದರೂ, ಹೆಮ್ಮೆ ಪಡುವಂತಿದೆ, ಅವರ ಕ್ರಿಯಾಸಿದ್ಧಿ. ಶ್ರೇಷ್ಠ ಗದ್ಯಗ್ರಂಥಗಳನ್ನು ಬರೆಯಲಿಚ್ಛಿಸುವವರಿಗೆ ಸ್ಫೂರ್ತಿದಾಯಕವಾದ ನಿಧಿಗಳಂತಿವೆ ಅವರ ಗ್ರಂಥಗಳು. "ಗಮನವಿಟ್ಟು ಓದಬೇಕು, ಕಣ್ಣಿಟ್ಟು ನೋಡಬೇಕು, ಲಕ್ಷ್ಯವಿಟ್ಟು ಬರೆಯಬೇಕು" ಎಂಬಿವು ಲೇಖಕರಿಗೆ ಅವರು ಕರುಣಿಸಿರುವ ಅಮೂಲ್ಯವಾದ ಮೂರು ಸೂತ್ರ ಸಂದೇಶಗಳು. ದಿವಂಗತರಾದ ಅರ್ಥಶಾಸ್ತ್ರವಿಶಾರದ ಡಾಕ್ಟರ್ ಆರ್. ಶ್ಯಾಮಶಾಸ್ತ್ರಿಯವರ ವಿಚಾರವಾಗಿ "ಉದ್ಯೋಗದಿಂದ ವಿಶ್ರಾಂತಿ ಪಡೆದ ಬಳಿಕವೂ ಶಾಸ್ತ್ರನಿಷ್ಠೆಯಿಂದ ಕೆಲಸಮಾಡುತ್ತಿದ್ದ ನೋಟವೂ ಅನುಭವವೂ ಯಾರಿಗೂ ಸ್ಫೂರ್ತಿಯನ್ನು ಕೊಡುವಂತಹವೇ!" ಎಂದು ಅವರು ಬರೆದಿದ್ದರು; ಆ ಮಾತುಗಳನ್ನು ಅವರಿಗೇ ಅನ್ವಯಿಸಬಹುದಾಗಿದೆ. ಹೈದರಾಬಾದಿನಲ್ಲಿ ೧೯೫೪ನೆಯ ಸಂವತ್ಸರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅವರು ಮಾಡಿದ ಭಾಷಣವನ್ನು ಕನ್ನಡ ಭಾಷಾಭಿಮಾನದ ಅಮೃತಝುರಿಯೆನ್ನಬಹುದು. ಅವರು ಕನ್ನಡ ಭಾಷಾಭಿಮಾನದಿಂದ ಹಲವು ಭಾಷಣಗಳಲ್ಲಿ ಆಡಿದ ಮಾತುಗಳು, ನಾನು ಲೇಖನಗಳಲ್ಲಿ ಬರೆದಿರುವ ವಾಕ್ಯಗಳು ಭಾವುಕರ ಹೃದಯಗಳಲ್ಲಿ ಭಾಷಾಭಿಮಾನವನ್ನು ಉಕ್ಕಿಸುತ್ತವೆ; ಅವರ "ಕನ್ನಡಿಗರೇ, ನಿಮ್ಮ ಕನ್ನಡವನ್ನು ಇಂಡಿಯಾದೇಶದ ದಕ್ಷಿಣಭಾಗದಲ್ಲಿ ಒಂದು ಅಂಗೈಯಗಲ ಬಿಟ್ಟರೆ ಮತ್ತೆಲ್ಲಿಯೂ ನೋಡಲಾರಿರಿ. ನೀವು ಅದನ್ನು ಅಲಕ್ಷ್ಯ ಮಾಡಿದರೆ, ಮಿಕ್ಕ ಯಾವ ಜನರೂ ಅದನ್ನು ಎತ್ತಿ ಹಿಡಿಯಲಾರರು. ಅದು ಹೋದರೆ ಹೋಗಲಿ ಎನ್ನುವ ಹಾಗಿದ್ದರೆ ಈ ಕಡೆ ಬಂಗಾಳ ಕೊಲ್ಲಿಯಿದೆ, ಆ ಕಡೆ ಅರಬ್ಬಿ ಸಮುದ್ರವಿದೆ, ಗುಡಿಸಿ ಹಾಕಿಬಿಡಿ. ಇತರ ಭಾಷೆಗಳು ಒತ್ತಿಕೊಂಡು ಬರಲಿ, ಆಕ್ರಮಿಸಿಕೊಳ್ಳಲಿ" ಎಂಬ ಅಭಿಮಾನದ ಮಾತುಗಳು ಅವರ ಗುಂಡಿಗೆಯ ಬಿಸಿರಕ್ತದಿಂದಲೇ ಬರೆದಂತೆ ತೋರುವ ಅವರ ನೊಂದ ನುಡಿಗಳು; "ಕನ್ನಡಿಗರಿಗೆ ಕನ್ನಡ ದೇಶದಲ್ಲಿ ಹಿರಿಯ ಆಸ್ತಿಯಾಗಿ ಉಳಿದಿರುವುದು ಅವರ ಭಾಷೆ. ಅದನ್ನು ಉಳಿಸಿಕೊಳ್ಳಿರಿ" ಎಂಬುದು ಅವರ ಅಮರ ಸಂದೇಶ. ಹಿಂದಿ ಭಾಷೆಯ ಆಕ್ರಮಣ ಪ್ರವೃತ್ತಿಯನ್ನು ಖಂಡಿಸಿ, ೧೯೫೪ರ ಸಮ್ಮೇಳನಾಧ್ಯಕ್ಷ ಭಾಷಣದಲ್ಲಿ "ಕನ್ನಡಿಗರೇ, ನೀವು ಮಾತ್ರ ನಿಮ್ಮ ಕನ್ನಡದ ಅಭಿಮಾನವನ್ನು ಕಾಪಾಡಿಕೊಳ್ಳಿ. ಮೋಹಕ್ಕೆ ಸಿಲುಕಬೇಡಿ. ನಿಮ್ಮ ಕನ್ನಡದ ಅಭಿಮಾನವೆಂಬ ಕಾಮಧೇನು ಎಚ್ಚರವಾಗಿದ್ದರೆ, ಬ್ರಹ್ಮದಂಡ ಮುಂದೆ ಇದ್ದರೆ, ನಮ್ಮನ್ನು ಯಾವ ವಿಶ್ವ ಮಿತ್ರರ ಪಡೆಯೂ ಏನೂ ಮಾಡಲಾರದು" ಎಂದು ಎಚ್ಚರಿಕೆ ಹೇಳಿದ್ದರು. ಇಂಗ್ಲಿಷ್ ಭಾಷೆಯ ವಿಚಾರವಾಗಿ ಅವರು, "ಇಂಗ್ಲಿಷಿನ ಮೂಲಕ ಸಾಕ್ಷಾತ್ತಾಗಿಯೋ ಪರಂಪರೆ ಯಿಂದಲೋ ಗಳಿಸುವುದು ಸಾಧ್ಯವಾಗಿರುವಾಗ, ಅದಕ್ಕೆ ಅವಕಾಶವಿರುವಾಗ ಗಳಿಸೋಣ.

ಅಲ್ಲದೆ ನಮ್ಮನ್ನು ನಾವು ತಿಳಿದುಕೊಳ್ಳುವುದಕ್ಕೆ ಸಹಾಯಮಾಡಿದ್ದು ಇಂಗ್ಲಿಷು. ನಮ್ಮಲ್ಲಿ ನವ ಚೈತನ್ಯವನ್ನುಂಟುಮಾಡಿದ್ದು ಇಂಗ್ಲಿಷು. ಸ್ವಹಸ್ತ ಪರಹಸ್ತಗಳಿಂದ ನಮ್ಮ ಕಣಜವನ್ನು ತುಂಬುವ ಸಂಪತ್ತು ಉಳ್ಳದ್ದು ಇಂಗ್ಲಿಷು. ಅದರ ಸಹಾಯದಿಂದ ಪಾಶ್ಚಾತ್ಯ ಪ್ರಪಂಚದೊಡನೆ, ವಿಶ್ವದೊಡನೆ ವ್ಯವಹಾರ ನಡೆಸಬಹುದು. ಆದ್ದರಿಂದ ಅದನ್ನು ಸದ್ಯಕ್ಕಾದರೂ ತಿರಸ್ಕರಿಸುವುದು ನನಗೆ ಒಪ್ಪಿಗೆಯಾದದ್ದಲ್ಲ" ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ವಿದ್ಯಾರ್ಥಿಯಾಗಿದ್ದಾಗಿನಿಂದ ಸುಮಾರು ಐವತ್ತು ವರ್ಷಗಳ ಅವಧಿಯ ವರೆಗೆ, ಅವರೊಂದಿಗಿನ ನನ್ನ ಸಂಬಂಧದ ಸವಿನೆನಪುಗಳು ಇನ್ನೂ ಬಹಳವಾಗಿವೆ. ಅವರು ಏಕ ಪ್ರಕಾರವಾಗಿ ನನ್ನಲ್ಲಿ ಕೃಪೆ ತೋರಿದ್ದರು. ನನ್ನ ಗ್ರಂಥಗಳ ಮತ್ತು ನನ್ನ ಭಾಷಣಗಳ ವಿಚಾರವಾಗಿ ಮೆಚ್ಚಿಕೆಯನ್ನು ಸೂಚಿಸಿ ಹರಸಿದ್ದರು. ನಾನು ಬರೆದ ನಾಟಕಗಳ ರಂಗಪ್ರದರ್ಶನಗಳನ್ನು ನೋಡಿ ಹರ್ಷಿಸಿದ್ದರು. ವಿದ್ಯಾಶಾಖೆಯ, ಮೈಸೂರು ವಿಶ್ವಾವಿದ್ಯಾನಿಲಯದ ಅನೇಕ ಸಮಿತಿಗಳಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಸಂಬಂಧವಾಗಿ ಮತ್ತು ಇಂಗ್ಲಿಷ್ – ಕನ್ನಡ ನಿಘಂಟು ಸಂಪಾದಕ ಮಂಡಲಿಯಲ್ಲಿ ಅವರೊಡನೆ ಸದಸ್ಯನಾಗಿ ಕೆಲಸಮಾಡಿ ಹರ್ಷಿಸಿದ್ದೇನೆ. ಅವರ ವಾತ್ಸಲ್ಯದ ಸುಯೋಗ ಸಂತೋಷಗಳನ್ನನುಭವಿಸಿ ಭಕ್ತಿ ತೋರಿದ್ದೇನೆ. ಅವರದು ಪರಿಶುದ್ಧವಾದ ಸಾತ್ವಿಕ ಜೀವನ, ಉದ್ದಾಮ ಪಾಂಡಿತ್ಯ, ತ್ರಿಕರಣ ಶುದ್ಧವಾದ ನಡೆನುಡಿ, ಅನೂನ ಪ್ರತಿಭೆ, ನಾಡು ನುಡಿಗಳ ಮೇಲಿನ ಗಾಢ ಭಕ್ತಿ, ಸರಳ ಹೃದಯದ ಶಿಷ್ಯಪ್ರಿಯತೆ ಮತ್ತು ವರ್ಣಿಸಲಳವಲ್ಲದಷ್ಟು ಮಟ್ಟಿನ ಸದ್ಗುಣ ಸಂಪತ್ತು. ಅವರ ಪವಿತ್ರ ಜೀವನವೂ, ಅವರು ರಚಿಸಿರುವ ಉದ್ದಾಮ ಗ್ರಂಥಗಳೂ, ಅವರು ನೀಡಿರುವ ಸ್ಫೂರ್ತಿದಾಯಕ ಸಂದೇಶವೂ, ನಾಡು ನುಡಿಗಳ ಭಕ್ತರಿಗೆ ಚಿರಕಾಲ ಮಾರ್ಗದರ್ಶಕವಾಗಿರುತ್ತವೆ. ಅವರ ದೇಹವು ಕಣ್ಮರೆಯಾಗಿದ್ದರೂ, ಅವರ ಶ್ರೀಮೂರ್ತಿಯು ಅವರ ಶಿಷ್ಯರ ಹೃದಯದಲ್ಲಿ ವಿರಾಜಿಸುತ್ತಿರುತ್ತದೆ. ಅವರನ್ನು ನೆನೆಯುವುದೇ ಒಂದು ಪುಣ್ಯ; ಅವರನ್ನು ನೆನೆದವನು ಧನ್ಯ.

❖

# ಶಿಷ್ಯವತ್ಸಲರು

## (ಡಾ|| ಎ.ಆರ್. ಕೃಷ್ಣಶಾಸ್ತ್ರಿ)

● *ಡಾ|| ಕೆ.ಎಂ. ಕೃಷ್ಣರಾವ್*

'ಪ್ರಬುದ್ಧ ಕರ್ಣಾಟಕ' ತನ್ನ ಸಂಸ್ಥಾಪಕರ ಸ್ಮಾರಕ ಸಂಚಿಕೆಯನ್ನು ಪ್ರಕಟಿಸುತ್ತಿರುವುದು ಉಚಿತವೂ ಆವಶ್ಯಕವೂ ಆದ ಕಾರ್ಯ. ಐವತ್ತು ವರ್ಷಗಳ ಹಿಂದೆ ಸಾವಿರದ ಒಂಬೈನೂರ ಹದಿನೆಂಟರಲ್ಲಿ ಬೆಂಗಳೂರಿನ ವಿಜ್ಞಾನ ವಿಷಯ ಪ್ರಧಾನವಾದ ಸೆಂಟ್ರಲ್ ಕಾಲೇಜಿನಲ್ಲಿ ಕರ್ಣಾಟಕ ಸಂಘವನ್ನೂ ಅದರೊಂದಿಗೇ ಅದರ ಆಶ್ರಯದಲ್ಲೇ 'ಪ್ರಬುದ್ಧ ಕರ್ಣಾಟಕ'ವೆಂಬ ಕನ್ನಡ ಪತ್ರಿಕೆಯನ್ನೂ, ಸರ್ವವೂ ಆಂಗ್ಲಮಯವಾಗಿದ್ದ ಆ ಕಾಲದಲ್ಲಿ ಸ್ಥಾಪಿಸಿದ ಕೀರ್ತಿ, ಕೆಚ್ಚು ಕೃಷ್ಣಶಾಸ್ತ್ರಿಗಳವರದು. ಐವತ್ತು ವರ್ಷಗಳ ತರುವಾಯ ಆ ಕರ್ಣಾಟಕ ಸಂಘವೂ ಆ ಪ್ರಬುದ್ಧ ಕರ್ಣಾಟಕ ಪತ್ರಿಕೆಯೂ ತಮ್ಮ ಸ್ವರ್ಣ ಮಹೋತ್ಸವ ಆಚರಿಸುವ ಸುವರ್ಣ ಸಂಚಿಕೆಯನ್ನು ಪ್ರಕಟಿಸುವ ಸನ್ನಾಹದಲ್ಲಿದ್ದಾರೆ! ಪ್ರಬುದ್ಧ ಕರ್ಣಾಟಕದಂತಹ ಹಿರಿಯ ಪತ್ರಿಕೆಯನ್ನು ಕಾಲೇಜಿನ ಸಂಘವೊಂದರ ಆಶ್ರಯದಲ್ಲಿ ಧೈರ್ಯದಿಂದ ಪ್ರಾರಂಭಿಸಿ, ಅನೇಕ ವರ್ಷಗಳ ಕಾಲ ಅದರ ಸಂಪಾದಕರಾಗಿದ್ದುಕೊಂಡು ಉತ್ಕೃಷ್ಟ ಲೇಖನ – ವಿಮರ್ಶೆಗಳನ್ನು ತಾವೇ ಬರೆದು, ಇತರ ಅನೇಕರಿಂದ ಬರೆಸಿ, ಕಷ್ಟದಿಂದಲೇ ಆದರೂ ಪ್ರೀತಿಯಿಂದ ದುಡಿದು, ಆ ಪತ್ರಿಕೆಗೆ ಕನ್ನಡ ನಾಡಿನ ವಿದ್ವತ್ಪ್ರಪಂಚದಲ್ಲಿ ಭದ್ರವೂ ಚಿರಸ್ಥಾಯಿಯೂ ಆದ ಸ್ಥಾನವನ್ನು ಗಳಿಸಿಕೊಟ್ಟು, ಅದು ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೆಯಾಗುವಂತೆ ಮಾಡಿದ ಶ್ರೇಯಸ್ಸು ಅದರ ಸಂಸ್ಥಾಪಕ – ಸಂಪಾದಕ ಡಾ|| ಎ.ಆರ್. ಕೃಷ್ಣಶಾಸ್ತ್ರಿಗಳಿಗೆ ಸಲ್ಲತಕ್ಕುದಾಗಿದೆ. ಅವರ ಆತ್ಮ, ಪಾರ್ಥಿವ ಶರೀರವನ್ನು ಬಿಟ್ಟುಹೋದ ಈ ದುಃಖಮಯ ಸನ್ನಿವೇಶದಲ್ಲಿ ಅವರ ಗೌರವಾರ್ಥವಾಗಿ ಪ್ರಬುದ್ಧ ಕರ್ಣಾಟಕದ ೫೦ನೆಯ ಸಂಪುಟದ ಮೊದಲನೆಯ ಸಂಚಿಕೆ ಅವರ ಸ್ಮರಣ ಸಂಚಿಕೆಯಾಗಿ ಹೊರಬೀಳುತ್ತಿರುವುದು ಕೇವಲ ಉಚಿತವಾಗಿದೆ.

ಈ ಸ್ಮರಣ ಸಂಚಿಕೆಗೆ ಡಾ|| ಶಾಸ್ತ್ರಿಗಳ ಅನೇಕ ಶಿಷ್ಯರಲ್ಲಿ ಒಬ್ಬನಾದ ನಾನು ಗುರುಗಳ ವಿಚಾರವಾಗಿ ಅಲ್ಪಸ್ವಲ್ಪವಾದರೂ, ತಿಳಿದುದನ್ನು ಬರೆಯುವುದು ಉಚಿತವೂ, ನನ್ನ ಆದ್ಯ ಕರ್ತವ್ಯವೂ ಆಗಿದೆ. ಲೇಖನವೊಂದನ್ನು ಕಳಿಸಿಕೊಡಬೇಕೆಂದು ಸಂಪಾದಕರ ಪತ್ರ ಬಂದ ಮೇಲಂತೂ, ಅದನ್ನು ಮಾಡಲೇಬೇಕು ಎಂಬ ನಿಷ್ಠೆಯಿಂದ, ಕಾಲಾವಕಾಶ ಸಾಕಷ್ಟು ಇಲ್ಲದಿದ್ದರೂ, ಒಂದೆರಡು ವಿಚಾರವನ್ನಾದರೂ ಬರೆಯೋಣವೆಂದೂ ಪ್ರವೃತ್ತನಾಗಿದ್ದೇನೆ.

ಐದು ವರ್ಷಗಳ ಕಾಲ ಪ್ರೊ. ಕೃಷ್ಣಶಾಸ್ತ್ರಿಗಳ ಅಪಾರ ಶಿಷ್ಯವೃಂದದಲ್ಲಿ ನಾನೂ ಒಬ್ಬನಾಗುವ ಸುಯೋಗ ನನಗೆ ಮೈಸೂರಿನ ಮಹಾರಾಜರ ಕಾಲೇಜಿನಲ್ಲಿ ಒದಗಿತ್ತು (೧೯೪೧–೧೯೪೬).

ಕನ್ನಡ ಆನರ್ಸ್ ಮತ್ತು ಎಂ.ಎ. ತರಗತಿಗಳಲ್ಲಿ ಅವರ ಸಮರ್ಥ ನೇತೃತ್ವದಲ್ಲಿ ಕನ್ನಡಭಾಷೆ ಸಾಹಿತ್ಯಗಳನ್ನು ವ್ಯಾಸಂಗಮಾಡುವ ಸದವಕಾಶ ಪಡೆದಿದ್ದುದನ್ನು ನಾನು ಸದಾ ಸ್ಮರಿಸುವವನಾಗಿದ್ದೇನೆ. ಆಗಿನ ಆ ಕಾಲೇಜು ಪ್ರಖ್ಯಾತ ವಿದ್ವಾಂಸರೂ, ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಅಧ್ಯಾಪಕರೂ ಆದ ಅನೇಕ ಮಹನೀಯರಿಂದ ತುಂಬಿ ಕಂಗೊಳಿಸುತ್ತಿತ್ತು. ಮಾನ್ಯ ಕೃಷ್ಣಶಾಸ್ತ್ರಿಗಳು ಕನ್ನಡದ ಪ್ರೊಫೆಸರ್ ಆಗಿದ್ದರು. (ಅವರು ಕಾರ್ಯನಿಮಿತ್ತ ಆರು ತಿಂಗಳು ರಜ ಪಡೆದಾಗ ಆ ಸ್ಥಾನದಲ್ಲಿ ಕನ್ನಡ ಕವಿಪುಂಗವ ಶ್ರೀ ಕುವೆಂಪು ಅವರು ತಾತ್ಕಾಲಿಕ ಪ್ರೊಫೆಸರಾಗಿ ಬಂದರು). ಪ್ರೊ. ಬಿ.ಎಂ. ಶ್ರೀಕಂಠಯ್ಯನವರು ಆಗಾಗ್ಗೆ ಬಂದು ಉಪನ್ಯಾಸಗಳನ್ನು ಮಾಡುತ್ತಿದ್ದರು. ಶ್ರೀ ವಿ.ಸೀ., ಶ್ರೀ ತೀ.ನಂ. ಶ್ರೀಕಂಠಯ್ಯ, ಶ್ರೀ ಡಿ.ಎಲ್.ಎನ್., ಶ್ರೀ ಎನ್. ಅನಂತರಂಗಾಚಾರ್ಯ, ಶ್ರೀ ಕ.ವೆಂ.ರಾಘವಾಚಾರ್ ಅವರುಗಳು ಕನ್ನಡ ಪಾಠ ಹೇಳುತ್ತಿದ್ದರು ಭಾಷಾಶಾಸ್ತ್ರಕ್ಕೆ ಡಾ॥ ಎ.ಎನ್. ನರಸಿಂಹಯ್ಯನವರಿದ್ದರು. ಸಂಸ್ಕೃತಕ್ಕೆ ಪ್ರೊ. ಸಿ.ಆರ್. ನರಸಿಂಹಶಾಸ್ತ್ರಿಗಳು, ಪ್ರೊ. ಎಂ. ಲಕ್ಷ್ಮೀನರಸಿಂಹಯ್ಯನವರೂ, ಕೆಲಕಾಲ ಶ್ರೀ ಎಂ.ಪಿ.ಎಲ್. ಶಾಸ್ತ್ರಿಗಳವರೂ, ಇದ್ದರು. ಇಂಗ್ಲಿಷ್‌ಗೆ ಪ್ರಖ್ಯಾತ ಪ್ರಾಧ್ಯಾಪಕ ರಾಲ್ಲೊ, ಪ್ರೊ. ಡಬ್ಲ್ಯೂ. ಜಿ. ಈಗಲ್‌ಟನ್, ಶ್ರೀ ಬಿ.ಎಸ್. ಕೇಶವನ್ ಇದ್ದರು. ಕರ್ಣಾಟಕದ ಸಾಂಸ್ಕೃತಿಕ ಇತಿಹಾಸ ಬೋಧನೆಗೆ ಇದ್ದ ಡಾ॥ ಎಂ.ಎಚ್. ಕೃಷ್ಣ ಮತ್ತು ಡಾ॥ ಎಸ್. ಶ್ರೀಕಂಠಶಾಸ್ತ್ರಿಗಳವರಿಬ್ಬರೂ ಸುಪ್ರಸಿದ್ಧ ವಿದ್ವಾಂಸರಾಗಿದ್ದರು. ತಮಿಳನ್ನು ತುಂಬ ಪ್ರೀತಿಯಿಂದ ದಿವಂಗತ ಶ್ರೀ ಎನ್. ರುದ್ರಪತಿ ಅವರು ಹೇಳಿಕೊಡುತ್ತಿದ್ದರು.

ಈ ಗುರುವೃಂದದ ಪ್ರೀತಿ–ವಿಶ್ವಾಸ ವಾತ್ಸಲ್ಯಗಳನ್ನು ಎಂದೂ ಮರೆಯುವಂತಿಲ್ಲ.

ದಿವಂಗತ ಪ್ರೊ. ಕೃಷ್ಣಶಾಸ್ತ್ರಿಗಳು ತುಂಬಿದ ಕೊಡದಂತಿದ್ದ ವಿದ್ವಾಂಸರು, ಆದರ್ಶ ಅಧ್ಯಾಪಕರು. ಅವರ ಹೃದಯ ತುಂಬ ಮೃದು, ಕೋಮಲ ಮತ್ತು ವಾತ್ಸಲ್ಯಪೂರ್ಣ, ಹೊರಗೆ ಮಾತ್ರ ಅವರು ಕೊಂಚ ಗಡುಸು ಎಂಬಂತೆ ತೋರುತ್ತಿತ್ತು.

ಕನ್ನಡ ಬಿ.ಎ. (ಆನರ್ಸ್) ಮತ್ತು ಎಂ.ಎ. ತರಗತಿಗಳಲ್ಲಿ ಇಬ್ಬರೇ ವಿದ್ಯಾರ್ಥಿಗಳಿದ್ದ ನಮಗೆ ಪ್ರೊ. ಕೃಷ್ಣಶಾಸ್ತ್ರಿಗಳು ಗಂಟೆ ಗಂಟೆಗಳ ಕಾಲ, ಕಾಲ ಪರಿಮಿತಿಯ ಪರಿವೆಯಿಲ್ಲದೆ ಪಂಪ ಭಾರತದ ಸೊಗಸನ್ನೂ ಯಕ್ಷಗಾನಗಳ ಸ್ವಾರಸ್ಯವನ್ನೂ, ಭಾಷಾ ಚರಿತ್ರೆಯ ವಿಕಾಸವನ್ನೂ, ಕಾವ್ಯಮೀಮಾಂಸೆಯ ರಸದೌತಣವನ್ನೂ ಉಣಿಸುತ್ತಿದ್ದರು. ಸಾವಧಾನವಾಗಿ ವಿವರ ವಿವರವಾಗಿ ಪದರು ಪದರಾಗಿ ವಿಷಯಗಳನ್ನು ವಿಭಜಿಸಿ ವಿಶ್ಲೇಷಿಸಿ ಮಧ್ಯೆ ಮಧ್ಯೆ ಹಾಸ್ಯವನ್ನು ಹುದುಗೊಳಿಸಿ, ಕೇವಲ ನಿರಾಡಂಬರವಾದ ಮನ ಮುಟ್ಟುವ ಹೃದಯಂಬುಗುವ ಸರಳ ಸವಿಶೈಲಿಯ ಅವರ ಉಪನ್ಯಾಸಗಳನ್ನು ನಾವೆಂದೂ ಮರೆಯುವಂತಿಲ್ಲ. ಅವರ ಸಂಸ್ಕೃತ, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ವಿದ್ವತ್ತು ತುಂಬ ಆಳವಾದುದಾಗಿತ್ತು. ಪಾಂಡಿತ್ಯ ಎಷ್ಟು ಆಳವಾಗಿದ್ದಿತೋ ಅವರ ಬಾಹ್ಯ ವ್ಯಕ್ತಿತ್ವ ಅಷ್ಟೇ ಸರಳವಾಗಿಯೂ ನಿರಾಡಂಬರವಾಗಿ ಇದ್ದಿತು. ಕೋಪ ದರ್ಪ ಅಹಂಕಾರ ಅವಜ್ಞೆಗಳನ್ನು ಎಂದೂ ನಾವು ಅವರ ಮುಖದಲ್ಲಿ ಮಾತಿನಲ್ಲಿ ಕಂಡ ನೆನಪು ನನಗಿಲ್ಲವೇ ಇಲ್ಲ.

ವಿದ್ಯಾರ್ಥಿಗಳನ್ನು ವಾತ್ಸಲ್ಯಪೂರ್ಣವಾಗಿ ಮಾತನಾಡಿಸಿ ಅವರ ಯೋಗಕ್ಷೇಮವನ್ನು ಆಗಾಗ್ಗೆ ವಿಚಾರಿಸಿ, ಕಷ್ಟಸುಖಗಳನ್ನು ಪ್ರೀತಿಯಿಂದ ಕೇಳಿ ತಮ್ಮಿಂದಾದಷ್ಟು ಉಪಕಾರ – ಸಹಾಯಮಾಡುತ್ತಿದ್ದ, ವಿದ್ಯಾರ್ಥಿಗಳಿಗೆ ತಂದೆಯೋಪಾದಿಯಲ್ಲಿದ್ದ ಗುರುಗಳು ಕೃಷ್ಣಶಾಸ್ತ್ರಿಗಳು. ಈ ಮಾತು ಹೇಳುವಾಗ, ಇಪ್ಪತ್ತನಾಲ್ಕು ವರ್ಷಗಳ ಹಿಂದೆ ಅಂದು ನಡೆದ ಒಂದು ಘಟನೆ, ದೃಷ್ಟಾಂತವಾಗಿ ಜ್ಞಾಪಕಕ್ಕೆ ಬರುತ್ತಿದೆ.

ನನ್ನ ಸಹಪಾಠಿ (ಇದ್ದವನೇ ಒಬ್ಬ) ಅಷ್ಟೇನೂ ಸುಖವಾಗಿರಲಿಲ್ಲ. ಆತನಿಗಿಂತ ಕೊಂಚ ವಾಸಿ ನಾನು, ಅಷ್ಟೆ. ಇಬ್ಬರೂ ಸ್ಕಾಲರ್‌ಷಿಪ್ – ಫ್ರೀಷಿಪ್ಪುಗಳ ಬೇಟೆಯಲ್ಲಿ ಸ್ಪರ್ಧಿಸುತ್ತಿದ್ದೆವು. ಸ್ನೇಹಕ್ಕೆ ಕೊರತೆ ಬಾರದಂತೆ. ಒಮ್ಮೆ ಶಾಸ್ತ್ರಿಗಳು ನಮ್ಮಿಬ್ಬರನ್ನು ಕರೆದು ಒಟ್ಟಿಗೆ ಕೂಡಿಸಿ ಕೊಂಡು ನಮ್ಮ ನಮ್ಮ ಸ್ಥಿತಿಗತಿಗಳನ್ನು ಕೂಲಂಕಷವಾಗಿ ವಿಚಾರಿಸಿ ತಿಳಿದುಕೊಂಡು, ಕಾಲೇಜಿನಿಂದ ಇಬ್ಬರಿಗೂ ಒಂದೊಂದು ಬಗೆಯ ಸಹಾಯ ದೊರಕುವಂತೆ ಏರ್ಪಾಟು ಮಾಡಿಕೊಟ್ಟು, ಇಬ್ಬರೂ ತಕ್ಕಮಟ್ಟಿಗೆ ನಿರಾತಂಕವಾಗಿ ವ್ಯಾಸಂಗವನ್ನು ಮುಂದುವರಿಸಲು ಅನುವು ಮಾಡಿಕೊಟ್ಟರು.

ಅಂತಿಮ ಆನರ್ಸ್ ಪರೀಕ್ಷೆಗೆ ಹಣ ಕಟ್ಟುವ ಸಮಯ ಬಂದಾಗ, ನಾನೇನೋ ತೀರ್ಥರೂಪರು ಕಳಿಸಿಕೊಟ್ಟ ಹಣವನ್ನು ನೇರವಾಗಿ ಕಾಲೇಜಿಗೆ ತಲುಪಿಸಿ ಕೆಲಸ ಪೂರೈಸಿಬಿಟ್ಟೆ. ಆದರೆ ತೀರ್ಥರೂಪರು ದಿವಂಗತರಾಗಿದ್ದು, ಕಷ್ಟದ ಪರಿಸ್ಥಿತಿಯಲ್ಲಿ ವಿದ್ಯಾರ್ಜನೆಮಾಡುತ್ತಿದ್ದ ನನ್ನ ಸಹಪಾಠಿಗೆ ಹಣ ಕೊಡುವವರು ಯಾರೂ ಇಲ್ಲದೆ, ಪರೀಕ್ಷೆಗೆ ಈ ವರ್ಷ ಹೋಗುವುದೇ ಬೇಡ ಎಂಬ ತೀರ್ಮಾನಕ್ಕೆ ಆತ ಬಂದು, ಅದನ್ನು ನನಗೆ ತಿಳಿಸಿ, ಒಂದುವಾರ ಮುಂಚೆಯೇ ಕ್ಲಾಸಿಗೂ ಬರುವುದನ್ನು ನಿಲ್ಲಿಸಿಬಿಟ್ಟನು. ನಾನು ಕಟ್ಟಿ ಆತನಿಗೂ ಹಣ ಕೊಡುವಷ್ಟು ಸೌಕರ್ಯ ನನಗೂ ಇರಲಿಲ್ಲ.

ಕೃಷ್ಣಶಾಸ್ತ್ರಿಗಳು ಮೂರು ನಾಲ್ಕು ದಿನ ಆತ ಏಕೆ ಬರಲಿಲ್ಲ, ಬರುತ್ತಿಲ್ಲ ಎಂದು ನನ್ನನ್ನೇ ವಿಚಾರಿಸಿದರು. ಅನಂತರ ಒಂದು ದಿನ ಆತನ ಯೋಗಕ್ಷೇಮವನ್ನು ಆರೋಗ್ಯವನ್ನು ಪರಿಸ್ಥಿತಿಯನ್ನು ಕುರಿತು ಕೇಳಿದರು; ಪರೀಕ್ಷೆಯ ವಿಚಾರಕ್ಕೂ ಬಂದರು. ನಾನು ಇದ್ದುದನ್ನು ಅವರಿಗೆ ತಿಳಿಸಿದೆ. 'ಆತ ಪರೀಕ್ಷೆಗೆ ಕೂಡುವುದಿಲ್ಲವಂತೆ – ಓದಿಯೂ ಇಲ್ಲವಂತೆ, ಮುಖ್ಯವಾಗಿ ಹಣವೂ ಇಲ್ಲವಂತೆ' ಎಂದು ವರದಿಮಾಡಿದೆ.

"ನೀನೇನು ಮಾಡಿದೆಯಯ್ಯಾ? ಪರೀಕ್ಷೆಗೆ ನೀನು ಹಣಕಟ್ಟಿ ಆಯಿತೋ ಹೇಗೆ?" ಎಂದು ನನ್ನನ್ನು ಕೇಳಿದರು.

"ತಂದೆಯವರಿಂದ ಹಣ ಬಂದಿತು. ಪರೀಕ್ಷೆಗೆ ಹಣ ಕಟ್ಟಿದ್ದೇನೆ ನಿನ್ನೆ ತಾನೆ" ಎಂದೆ. ಕೂಡಲೆ ಗುರುಗಳು:

"ನೀನು ಎಲ್ಲಾದರೂ ಪತ್ತೆಮಾಡಿ ಆತನನ್ನು ನನ್ನ ಬಳಿಗೆ ಇಂದು ಸಂಜೆಯೇ ಕರೆದುಕೊಂಡು ಬರಬೇಕು" ಎಂದು ಪ್ರೀತಿಯಿಂದ ಅಪ್ಪಣೆ ಮಾಡಿದರು.

ಗುರುಗಳ ಪ್ರೀತಿಯ ಅಪ್ಪಣೆಯನ್ನು ಶಿರಸಾವಹಿಸಿ ಸಹಪಾಠಿಯನ್ನು ಹುಡುಕುತ್ತಾ ಹೊರಟೆ. ಆತ ಮನೆಯಲ್ಲಾಗಲೀ ನಿರ್ದಿಷ್ಟವಾಗಿ ಒಂದು ಕಡೆಯಾಗಲೀ ಇರುವುದು ಕಷ್ಟವಾಗಿದ್ದುದರ ಪರಿಚಯ ನನಗೆ ಚೆನ್ನಾಗಿತ್ತು. ಈಗಂತೂ ಆತನ ಮನಸ್ಸೂ ಸರಿಯಾಗಿರಲಿಲ್ಲ. ಆದರೆ ಸಾಮಾನ್ಯವಾಗಿ ಆತ ಇರುವ ಸ್ಥಳಗಳೆಲ್ಲಾ ನನಗೆ ತಿಳಿದಿದ್ದುದರಿಂದ ಅಲ್ಲೆಲ್ಲಾ ಹೋಗಿ ನೋಡಿ ಅಂತೂ ಪತ್ತೆಮಾಡಿ ಗುರುಗಳ ಅಪ್ಪಣೆಯನ್ನು ತಿಳಿಸಿದೆ.

"ಈಗ ಅವರನ್ನು ನೋಡುವುದು ಬೇಡ" ಎಂದೇ ಆತ ಮೊದಲು ಹಟಹಿಡಿದ,

ಆದರೂ ಆತನನ್ನು ಬಲವಂತದಿಂದ ಒಪ್ಪಿಸಿ, ಮಾರನೆಯ ದಿನ ಕಾಲೇಜು ಪ್ರಾರಂಭ ವಾಗುವ ವೇಳೆಗೆ ನನ್ನ ಜೊತೆಯಲ್ಲಿಯೇ ಆತನನ್ನು ಶಾಸ್ತ್ರಿಗಳ ಬಳಿಗೆ ಕರೆದುಕೊಂಡು ಹೋದೆನು.

ಮೊದಲು ಗುರುಗಳು ಗಡುಸಾಗಿಯೇ ಇದ್ದರು. "ಹಣ ಇಲ್ಲ, ಪರೀಕ್ಷೆ ಕಟ್ಟುವುದಿಲ್ಲ, ಎಂದು ಇರುವ ಇಬ್ಬರಲ್ಲಿ ಒಬ್ಬ ತಲೆ ತಪ್ಪಿಸಿಕೊಂಡು ತಿರುಗಿದರೆ ಹೇಗೆ? ಇದು ಜವಾಬ್ದಾರಿಯ ವರ್ತನೆಯೆ? ನಾವೆಲ್ಲಾ ಇರುವುದೇಕೆ? ವಾರದಿಂದ ಕ್ಲಾಸಿಗೂ ಚಕ್ಕರ್ ಹೊಡೆದು ಓಡಾಡಿದರೆ ಬಂದ ಭಾಗ್ಯವೇನು?" ಎಂದೆಲ್ಲಾ ಆಕ್ಷೇಪಿಸಿದರು.

ಆತ ಮಾತ್ರ ಯಾವುದಕ್ಕೂ ಉತ್ತರ ಕೊಡದೆ, ತಾನು ಹೇಳುವುದೆಲ್ಲ ನನ್ನ ಮೂಲಕ ಅವರಿಗೆ ತಿಳಿದಿದೆ, ಅದು ಸಾಕು ಎಂಬಂತೆ, ಸುಮ್ಮನೆ ಕುಳಿತಿದ್ದ.

ಶಾಸ್ತ್ರಿಗಳು ಮಾತನಾಡುತ್ತಾ ಇದ್ದಂತೆಯೇ ಜೇಬಿನಿಂದ ಚೆಕ್ ಪುಸ್ತಕ ತೆಗೆದು ಪೆನ್ನನ್ನು ಕೈಯಲ್ಲಿ ತೆಗೆದು ಹಿಡಿದರು!

"ದುಡ್ಡು ಎಷ್ಟಯ್ಯಾ ಪರೀಕ್ಷೆಗೆ ಕಟ್ಟಬೇಕಾದ್ದು?" ಎಂದು ನನ್ನನ್ನು ಕೇಳಿದರು. ನಾನು:

"ಅರವತ್ತು ರೂಪಾಯಿ ಸಾರ್" ಎಂದೆ. "ಸರಿ," ಎಂದವರೆ ಚೆಕ್ ಬರೆಯಲು ತೊಡಗಿದರು. ಅದುವರೆಗೂ ಸುಮ್ಮನೆ ಮೌನವಾಗಿ ಕುಳಿತಿದ್ದ ಸಹಪಾಠಿ – ಶಿಷ್ಯ ಇದ್ದಕ್ಕಿದ್ದಂತೆಯೇ:

"ಇಲ್ಲ ಸಾರ್ ನನಗೆ ಹಣ ಬೇಡ" ಎಂದುಸುರಿದ! ಗುರುಗಳಿಗೆ ಈತನ ಮಾತು ಅರ್ಥವಾಗಲಿಲ್ಲ.

"ಮತ್ತೇನು ಮಾಡುತ್ತೀಯೆ"? ಎಂದು ಕಣ್ಣಿಗೆ ಏರಿಸಿದ್ದ ಕನ್ನಡಕವನ್ನು ತೆಗೆದು ಕೈಯಲ್ಲಿ ಹಿಡಿದು, ಪೆನ್ನನ್ನು ಮೇಜಿನಮೇಲಿಟ್ಟು, ಅಚ್ಚರಿಯಿಂದ ಅವನ ಮುಖ ನೋಡುತ್ತಾ ಕುಳಿತರು.

ಗುರುಗಳು ಗಂಭೀರರಾಗಿದ್ದರು. ಶಿಷ್ಯರೂ ಗಂಭೀರವಾಗಿಯೇ ಕುಳಿತಿದ್ದೆವು.

ಒಂದೆರಡು ನಿಮಿಷ ಮೌನ ಕೋಣೆಯನ್ನು ಆವರಿಸಿತ್ತು.

ಗುರುಗಳೇ ಶಿಷ್ಯನ ಇಂಗಿತವನ್ನು ಪೂರ್ಣವಾಗಿ ಅರಿತುಕೊಂಡರು. ಒಮ್ಮೆ ನಸುನಕ್ಕು ಮತ್ತೆ ಕನ್ನಡಕ ಏರಿಸಿ, ಪೆನ್ನು ಹಿಡಿದು ಸರಸರನೆ ಚೆಕ್‌ಬರೆದು ರುಜುವನ್ನೂ ಮಾಡಿಯೇ ಬಿಟ್ಟರು – ನೂರು ರೂಪಾಯಿಗೆ!

ಚೆಕ್ ಹಾಳೆಯನ್ನು ಪುಸ್ತಕದಿಂದ ಹರಿದು ನನ್ನ ಕೈಗಿತ್ತು, ಅವನನ್ನು ಕುರಿತು ಹೇಳಿದರು!

"ನಿನಗೆ ನನ್ನಿಂದ ಧರ್ಮಾರ್ಥವಾಗಿ ಹಣ ಪಡೆಯಲು ಇಷ್ಟವಿಲ್ಲವಾದರೆ ಚಿಂತೆಯಿಲ್ಲ. ಇದನ್ನು ಸಾಲ ಎಂದು ತೆಗೆದುಕೊ. ಪ್ಯಾಸುಮಾಡಿದ ಮೇಲೆ ಉದ್ಯೋಗ ಸಂಪಾದಿಸಿ ಹಣ ಗಳಿಸಿದಾಗ ನಿಧಾನವಾಗಿ ನನಗೆ ಈ ಹಣವನ್ನು ಹಿಂದಕ್ಕೆ ಕೊಡುವೆಯಂತೆ. ಇನ್ನೇನಯ್ಯಾ– ಸಮಾಧಾನವಾಯಿತೆ? ಆದರೆ ನೀನು ಪರೀಕ್ಷೆಗೆ ಕಟ್ಟಲೇಬೇಕು, ತಿಳಿಯಿತೊ? ಓದುವುದಕ್ಕೆ ಇನ್ನೂ ಕಾಲಾವಕಾಶವಿದೆ. ಇನ್ನು ಮೇಲೂ ಸರಿಯಾಗಿ ಓದಿಕೊಂಡರೆ ಸಾಕು, ನೀನೇನೂ ದಡ್ಡನಲ್ಲ."

ಎಂದು ಹೇಳಿ ನನ್ನ ಕಡೆಗೆ ತಿರುಗಿ:

"ಏನಪ್ಪಾ ಇವನು ಪರೀಕ್ಷೆಗೆ ಕಟ್ಟುವಂತೆ ಮಾಡುವುದು ನಿನ್ನ ಜವಾಬ್ದಾರಿ, ತಿಳಿಯಿತೆ? ಚೆಕ್ಕಿನಿಂದ ಹಣ ಪಡೆದು ಆತನ ಪರವಾಗಿ ಬೇಕಾದರೆ ನೀನೇ ಕಾಲೇಜಿಗೆ ಹಣ ತಲುಪಿಸಿಬಿಡು. ನಾಳೆ ಸಂಜೆಹೊತ್ತಿಗೆ ಬಂದು ನೀನು ನನಗೆ ತಿಳಿಸಬೇಕು ಏನು ಮಾಡಿದಿರಿ ಎಂದು, ಏನಯ್ಯಾ?" ಎಂದರು.

"ಆಗಲಿ ಸಾರ್" ಎಂದು ನಾನು ತಲೆಯಲ್ಲಾಡಿಸಿದೆ. ಸಹಪಾಠಿ ಮಾತ್ರ ಏನೂ ಹೇಳದೆ ಮೌನವಾಗಿಯೇ ಕುಳಿತಿದ್ದ.

"ಸರಿ, ಇನ್ನು ಹೊರಡಿ. ನಾನು ಹೇಳಿದ್ದು ಜ್ಞಾಪಕವಿರಲಿ" ಎಂದರು.

ಅನಂತರ ಸಹಪಾಠಿಯನ್ನು ಒತ್ತಾಯ ಮಾಡಿ ಗುರುಗಳ ಮಾತು ಮೀರುವುದು ಬೇಡ ಎಂದು ಹೇಳಿ ಬಲಾತ್ಕಾರವಾಗಿಯೇ ಪರೀಕ್ಷೆಗೆ ಹಣ ಕಟ್ಟಿಸಿದ್ದಾಯಿತು.

ಈ ಘಟನೆಯಿಂದ ಪ್ರೊ. ಕೃಷ್ಣಶಾಸ್ತ್ರಿಗಳ ಶಿಷ್ಯವಾತ್ಸಲ್ಯ ಎಂತಹುದು ಎಂಬುದು ಸ್ಪಷ್ಟವಾಗುತ್ತದೆ.

ಆ ಕಾಲದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾದ ಪುಸ್ತಕಗಳನ್ನು ಬಡವಿದ್ಯಾರ್ಥಿಗಳಿಗೆ ಅರ್ಧ ಬೆಲೆಗೆ ಕೊಡುವ ಒಂದು ನಿಯಮವಿತ್ತು. "ಕನ್ನಡ ಕೈಪಿಡಿ" ಮತ್ತು "ಕುಮಾರವ್ಯಾಸ ಭಾರತ" ಪುಸ್ತಕಗಳನ್ನು ಕೊಳ್ಳಲು ಹೋದ ನನಗೆ ಈ ನಿಯಮವಿರುವ ವಿಚಾರ ತಿಳಿದು, ಅದನ್ನು ಉಪಯೋಗಿಸಿಕೊಳ್ಳುವ ಆಸೆಯಾಯಿತು. ಆದರೆ ಅದಕ್ಕೆ ಪ್ರೊಫೆಸರರ ಪತ್ರ ಬೇಕಾಗಿದ್ದಿತು. ನಾನು ಗುರುಗಳನ್ನು ಹೋಗಿ ಕೇಳಿದೆ. ಅವರು "ಬಡವರಿಗಂತೋ ಈ

ಸೌಲಭ್ಯ? ಭಾರತದಲ್ಲಿರುವ ನಾವೆಲ್ಲಾ ಬಡವರೇ ಅಲ್ಲದೆ ಶ್ರೀಮಂತರು ಯಾರಿದ್ದಾರಯ್ಯಾ? ನಾನೂ ಬಡವನೇ ನೀನೂ ಬಡವನೆ. ಹೋಗು, ಈಗಲೇ ಪುಸ್ತಕಗಳನ್ನು ಕೊಂಡುಕೊಂಡು ಬಾ" ಎಂದು ಹೇಳಿ, ಪತ್ರವನ್ನು ಬರೆದುಕೊಟ್ಟರು. ನನ್ನ ತಂದೆಯ ವರಮಾನ, ಸ್ಥಿತಿಗತಿ ಇತ್ಯಾದಿ ಯಾವ ವಿಚಾರಗಳನ್ನೂ ಕೇಳುವ ತಂಟೆಗೆ ಅವರು ಹೋಗಲಿಲ್ಲ.

ಶಿಷ್ಯರು ನಾವು ಲೇಖನ ಬರೆದು, ಪುಸ್ತಕ ಪ್ರಕಟಿಸಿ ತೋರಿದರೆ, ಗುರುಗಳು ತುಂಬ ಸಂತೋಷ ಪಡುತ್ತಿದ್ದರು: ಅದರಲ್ಲಿ ತಮ್ಮ ಮನಮೆಚ್ಚಿದ ಅಂಶಗಳನ್ನು ಎತ್ತಿ ಎತ್ತಿ ಹೇಳಿ ಕೊಂಡಾಡುತ್ತಿದ್ದರು. ಹಾಗೆಯೇ ದೋಷಗಳೇನಾದರೂ ಇದ್ದರೂ, ಅವುಗಳನ್ನು ತೋರಿಸಿ ತಿದ್ದುತ್ತಿದ್ದರು.

ಶಿಷ್ಯನಾಗಿದ್ದ ಆ ಕಾಲವಾದ ಇಪ್ಪತ್ತುವರ್ಷಗಳ ತರುವಾಯವೂ, ಅವರು ಹಾಗೆಯೇ ಈಗಲೂ ಮಾಡುತ್ತಿದ್ದರು. ನನ್ನ ಅನೇಕ ಕೃತಿಗಳನ್ನು ವಾತ್ಸಲ್ಯದಿಂದ ಓದಿ ಸಂತೋಷವನ್ನು ವ್ಯಕ್ತಪಡಿಸಿ, ಬೇರಾವುದೋ ಊರಿನಲ್ಲಿದ್ದ ನನಗೆ ಕೂಡಲೇ ಮೆಚ್ಚಿಗೆಯ ಪತ್ರ ಬರೆದರು. ಅವರಿಗೆ ಕಾಗದ ಬರೆದರೂ ಅಷ್ಟೆ. ಕೂಡಲೇ ಉತ್ತರ ಬರೆಯುತ್ತಿದ್ದರು.

ಶಿಷ್ಯರು ಅವರಿಗೆ ಸಮರ್ಪಿಸಿದ "ಅಭಿವಂದನೆ" ಗ್ರಂಥವಂತೂ ಅವರಿಗೆ ತುಂಬ ಸಂತೋಷ ಸಮಾಧಾನಗಳನ್ನು ತಂದಿತ್ತು. ಆ ವಿಚಾರವನ್ನು ನನಗೇ ಅವರು ಅನೇಕಬಾರಿ ಹೇಳಿದ್ದರು.

ಕನ್ನಡದಲ್ಲಿ ಉತ್ತಮ ಗ್ರಂಥಗಳು ಬರಬೇಕು ಎಂಬುದು ಅವರ ಹೃದಯಪೂರ್ವಕವಾದ ಆಸೆಯಾಗಿದ್ದಿತು. ಗುಣವಿರುವ ಕಡೆ ಅದನ್ನು ಗುರುತಿಸಿ ಮೆಚ್ಚಿ ಪ್ರಶಂಸಿಸಿ ಪ್ರೋತ್ಸಾಹಿಸುವ ಹಿರಿಯಗುಣ ಅವರಲ್ಲಿ ಮನೆಮಾಡಿದ್ದಿತು. ಈ ಬಗೆಯ ಪ್ರೋತ್ಸಾಹವನ್ನು ಪಡೆದವರಲ್ಲಿ ನಾನೂ ಒಬ್ಬನಾಗಿದ್ದೇನೆ.

ಧಾರವಾಡದ ಕಾಲೇಜಿನ ಪತ್ರಿಕೆಯಲ್ಲಿ ಬಂದ ವಿದ್ಯಾರ್ಥಿಯೊಬ್ಬರ ಕಿರುಕವನವೊಂದನ್ನು ಓದಿ ಮೆಚ್ಚಿಕೊಂಡ ಕೃಷ್ಣಶಾಸ್ತ್ರಿಗಳು ಆ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಪ್ರೊ. ಫ್ಯಾರೆನ್ ಅವರಿಗೆ ಪತ್ರಬರೆದು, ಆ ಕವನವನ್ನು 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟಿಸಲು ಅನುಮತಿ ಕೇಳಿದರಂತೆ! ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟವಾಗುವುದೆಂದರೆ ಒಂದು ಹೆಮ್ಮೆ ಎಂದು ತಿಳಿದಿದ್ದ ಆ ಕಾಲದಲ್ಲಿ ಆ ವಿದ್ಯಾರ್ಥಿಗೆ ಇದರಿಂದ ಸಿಕ್ಕ ಪ್ರೋತ್ಸಾಹ ಸಣ್ಣದೇನಲ್ಲ. ಅನುಮತಿ ಪಡೆದು ಆ ಕವನ ಪ್ರಕಟವಾದ ಸಂಚಿಕೆಯನ್ನು ತಪ್ಪದೆ ಆ ವಿದ್ಯಾರ್ಥಿಗೆ ಸಂಪಾದಕ ಶಾಸ್ತ್ರಿಗಳು ಕಳಿಸಿಕೊಟ್ಟರು. ಆ ವಿದ್ಯಾರ್ಥಿ ಮುಂದೆ ಕನ್ನಡ ಎಂ.ಎ. ಮಾಡಿ ಈಗ ಮೂವತ್ತು ವರ್ಷಗಳಿಂದಲೂ ಸಮರ್ಥ ಕನ್ನಡ ಅಧ್ಯಾಪಕರಾಗಿದ್ದಾರೆ.

ಪ್ರೊ. ಕೃಷ್ಣಶಾಸ್ತ್ರಿಗಳು ಹೆಚ್ಚು ಮಾತಿನವರಾಗಿರಲಿಲ್ಲ. ಆಡಂಬರವಂತೂ ಅವರ ಬಳಿಯೇ ಸುಳಿಯಲು ಶಕ್ಯವಿರಲಿಲ್ಲ. ಹೇಳುವುದನ್ನು ಹೃದಯಪೂರ್ವಕವಾಗಿ, ಅದು ಕಟುವಾದರೂ ಚಿಂತೆಯಿಲ್ಲ, ಎದುರಿಗೇ ನೇರವಾಗಿಯೇ ಹೇಳಿಬಿಡುತ್ತಿದ್ದ ಸ್ವಭಾವ ಅವರದು; ಮುಂದೊಂದು

ಹಿಂದೊಂದು ಹೇಳುವಂತಹರಾಗಿರಲಿಲ್ಲ. ಸ್ಕಾಲರ್‌ಷಿಪ್ ಕೊಡಿಸುವಾಗೊಮ್ಮೆ, ಉದ್ಯೋಗಕ್ಕೆ ಶಿಫಾರ್ಸು ಮಾಡುವಾಗೊಮ್ಮೆ ಎರಡು ಬಾರಿಯೂ ಅವರು ನನಗೆ ಎದುರಿಗೆ, ನಿರ್ದಾಕ್ಷಿಣ್ಯ ವಾಗಿಯೇ ಹೇಳಿದರು.

"ನಿನಗೆ ಅದು ಸಿಗುವುದು ನನಗೆ ಇಷ್ಟವಿಲ್ಲ. ಅದಕ್ಕೆ ನೀನು ಅನರ್ಹ ಎಂದಲ್ಲ. ನಿನಗಿಂತ ಕಷ್ಟದ ಪರಿಸ್ಥಿತಿಯಲ್ಲಿ ಅವನಿದ್ದಾನೆ. ನಿನಗಿಂತಲೂ ಮುಂಚೆ ಪ್ಯಾಸು ಮಾಡಿದವರು ಇದ್ದಾರೆ. ಅವರಿಗೆ ಸಿಕ್ಕ ತರುವಾಯ, ನಾನೇ ಕರೆದು ನಿನಗೆ ಆ ಸ್ಥಾನವನ್ನು ಕೊಡಿಸಲು ಪ್ರಯತ್ನಿಸುತ್ತೇನೆ. ಈಗ ಬೇಡ. ಅದುವರೆಗೂ ನೀನು ಬೇರೆ ಕಡೆ ಇರಬಹುದು.... ಅವರಿಗೆ ನಾನು ಕಾಗದ ಬರೆದುಕೊಡುತ್ತೇನೆ ಅನುಕೂಲವಾಗುತ್ತದೆ" ಎಂದು. ಆ ವಿಚಾರವಾಗಿ ಅವರು ಮಾಡಿದ ಶಿಫಾರ್ಸಿನ ಕಾಗದವನ್ನು ನನಗೆ ತೋರಿಸಿ ಅನಂತರ ಮೇಲಕ್ಕೆ ಕಳಿಸಿಕೊಟ್ಟರು. ಇದು ಅವರ ನೇರ – ನಿರ್ದಾಕ್ಷಿಣ್ಯ, ನಿಷ್ಕಲ್ಮಷ ಸ್ವಭಾವ. ಆಗ ಅವರು ಸಹಾಯಮಾಡಲಿಲ್ಲ ಎಂದು ಕೊಂಚ ನನಗೆ ನಷ್ಟವಾದರೂ ಅಸಮಾಧಾನವಾಗಲಿಲ್ಲ. ಒಂದು ನೀತಿ, ತತ್ತ್ವವನ್ನು ಅನುಸರಿಸಿ ನಡೆದರೆ, ನಮಗೆ ನಷ್ಟವಾದರೂ ಅಸಮಾಧಾನಕ್ಕೆ ಎಡೆಯಿಲ್ಲ, ಆದರೂ ಇಂತಹ ಸ್ವಭಾವವನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಅನೇಕರು ಅವರ ವಿಚಾರದಲ್ಲಿ ಅನ್ಯಥಾ ಭಾವಿಸಿದುದುಂಟು. ಅದಕ್ಕಾಗಿ ಅವರು ತಾವು ಮಾಡುವುದನ್ನು ಹೇಳುವುದನ್ನು ಎಂದೂ ಬಿಡುತ್ತಿರಲಿಲ್ಲ. ಈ ಬಗೆಯ ತತ್ತ್ವನಿಷ್ಠೆ ಇರುವ ಜನ ದೊರೆಯುವುದು ಅಪೂರ್ವ.

ಒಮ್ಮೆ ಗುರುಗಳು ದಾರಿಯಲ್ಲಿ ಸಿಕ್ಕಿ ಮಾತನಾಡಿಸಿ ಮನೆಗೆ ಬಾ ಎಂದು ಕರೆದರು. ಮರುದಿನ ನಾನು ಅವರ ಮನೆಗೆ ಹೋದೆ.

"ಏನಿಲ್ಲ ಪುಸ್ತಕ ಒಂದನ್ನು ಕೊಡೋಣ ಅಂತ ಬಾ ಎಂದೆನಯ್ಯಾ ಅಷ್ಟೆ." ಎಂದು ಹೇಳಿ ತಮ್ಮ ಮೂರು ನಾಲ್ಕು ಪುಸ್ತಕಗಳನ್ನು ತೆಗೆದರು. ಪೆನ್ನು ಹಿಡಿದು ಬರೆಯುವಾಗ

"ಏನ್ರೀ – ಈಗ ನೀವು ಪಿಎಚ್.ಡಿ. ಪದವಿಯನ್ನು ಗಳಿಸಿ ಡಾಕ್ಟರ್ ಆಗಿದ್ದೀರಿ. ವಿದ್ವಾಂಸರೆಂದು ಹೆಸರು ಪಡೆದಿದ್ದೀರಿ ನಿಮಗೆ ಈಗ ಏನಂತ ಬರೀಲಿ? 'ವಿಶ್ವಾಸ ಪೂರ್ವಕ' ಎಂದು ಬರೆಯಲೋ? ಎಂದು ಹೇಳಿ ಕೂಡಲೇ ನಸುನಗುತ್ತಾ "ಅಥವಾ 'ಆಶೀರ್ವಾದಪೂರ್ವಕ' ಎಂದು ಬರೆಯಬಹುದೋ?" ಎಂದು ಕೇಳಿದರು.

"ತಮ್ಮ ಮುಂದೆ ನಾನು ವಿದ್ವಾಂಸನೆ? ಡಾಕ್ಟರ್ ಆದರೆ ತಾನೆ ಏನು ಸಾರ್? ದಯವಿಟ್ಟು 'ಆಶೀರ್ವಾದಪೂರ್ವಕ' ಎಂದೇ ಬರೆಯಬೇಕು ಸಾರ್. ತಮ್ಮ ಆಶೀರ್ವಾದ ನನ್ನ ಮೇಲೆ ಎಂದೆಂದೂ ಎಂದಿನಂತೆಯೇ ಇರಬೇಕು" ಎಂದು ವಿನಯದಿಂದ ಪ್ರಾರ್ಥಿಸಿದೆ.

ಗುರುಗಳು ತುಂಬ ಸಂತೋಷದಿಂದ: "ಹಾಗೇ, ಆಗಲಪ್ಪ, ನೀವು ಮುಂದಕ್ಕೆ ಬರುವುದು ನನಗೆ ತುಂಬ ಸಂತೋಷ" ಎಂದು ಹೇಳಿ 'ಆಶೀರ್ವಾದಪೂರ್ವಕ' ಎಂದೇ ಬರೆದು

ರುಜುಮಾಡಿ ಪುಸ್ತಕಗಳನ್ನು ಕೊಟ್ಟರು. ಆ ಮಧ್ಯೆ ಒಂದು ಪುಸ್ತಕಕ್ಕೆ 'ವಿಶ್ವಾಸಪೂರ್ವಕ' ಎಂದೂ ಬರೆದುಬಿಟ್ಟಿದ್ದರು.

ಇದು ಅವರ ಸರಳ ಸ್ವಭಾವವನ್ನು ತೋರಿಸುತ್ತದೆ. ನನಗೆ ಡಾಕ್ಟರೇಟ್ ಪದವಿ ಬಂದ ಮೇಲೆ ಅವರು ಎಲ್ಲಿ ಸಿಕ್ಕರೂ "ಏನು ಡಾಕ್ಟ್ರೇ ಚೆನ್ನಾಗಿರುವಿರಾ?" "ಈಗ ಏನು ಬರೆಯುತ್ತಿದ್ದೀರಿ" "ನಿಮ್ಮ ಆ ಪುಸ್ತಕ ಚೆನ್ನಾಗಿತ್ತು ಓದಿದೆ." ಎಂದು ಅನಗತ್ಯ ಮರ್ಯಾದೆಯಿಂದ, ಆದರೂ ತುಂಬು ವಾತ್ಸಲ್ಯದಿಂದ ಮಾತನಾಡಿಸುತ್ತಿದ್ದರು. ಅವರ ಶಿಷ್ಯವಾತ್ಸಲ್ಯ ಆ ಮಾತುಗಳಲ್ಲಿ ತುಂಬಿದ್ದುದನ್ನು ಕಂಡುಕೊಳ್ಳಬಹುದಾಗಿದ್ದಿತು. ಅದರಿಂದ ಮನಸ್ಸಿಗೆ ತುಂಬ ಆಪ್ಯಾಯಮಾನ ವಾಗಿ ಹೃದಯ ಉಬ್ಬುತ್ತಿತ್ತು. ಆ ವಾತ್ಸಲ್ಯ ಇನ್ನೆಲ್ಲಿ?

ಡಾ॥ ಎ.ಆರ್. ಕೃಷ್ಣಶಾಸ್ತ್ರಿಗಳು ಐವತ್ತು ವರ್ಷಗಳ ಹಿಂದೆ, ಸದುದ್ದೇಶದಿಂದ, ದೂರ ದೃಷ್ಟಿಯಿಂದ, ಕನ್ನಡದ ಅತೀವ ಅಭಿಮಾನ ನಿಷ್ಠೆ ಮಮತೆಗಳಿಂದ, ಹುಟ್ಟುಹಾಕಿ ಪೋಷಿಸಿ ಅಭಿವೃದ್ಧಿ ಪಡಿಸಿದ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ ಈಗ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡಾಭಿಮಾನಿಗಳೂ, ಕನ್ನಡದಲ್ಲಿ ನಿಷ್ಠೆವುಳ್ಳವರೂ ಆದ ಹಿರಿಯ ಅಧಿಕಾರಿಗಳ ನೆರವು ಪ್ರೋತ್ಸಾಹಗಳಿಂದ, ೧೯೬೮ರ ಆಗಸ್ಟ್ ತಿಂಗಳಲ್ಲಿ ತನ್ನ ಸುವರ್ಣ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸಿದ್ಧತೆ ಮಾಡಿಕೊಳ್ಳುತ್ತಿದೆ. ಆ ಸಂಘದಲ್ಲೇ ಅವರಿಂದಲೇ ಜನ್ಮತಾಳಿ, ಈಗ ಮೈಸೂರು ವಿಶ್ವವಿದ್ಯಾನಿಲಯದ ಪ್ರಮುಖ ಪತ್ರಿಕೆಯಾಗಿ, ಕನ್ನಡನಾಡಿನ ಪ್ರೌಢವೂ ಕೀರ್ತಿಯುತವೂ ಆದ ತ್ರೈಮಾಸಿಕ ಪತ್ರಿಕೆ ಪ್ರಬುದ್ಧ ಕರ್ಣಾಟಕವೂ ಸಾವಿರ ಪುಟಗಳ ಬೃಹತ್ ಸ್ವರ್ಣ ಸಂಚಿಕೆಯಾಗಿ ಹೊರಬೀಳುವುದರಲ್ಲಿದೆ.

ಈ ಸುವರ್ಣಮಹೋತ್ಸವ ನಡೆಯುವುದನ್ನೂ, ಆ ಸ್ವರ್ಣಸಂಚಿಕೆ ಹೊರಬೀಳುವುದನ್ನೂ ಶಾಸ್ತ್ರಿಗಳು ಕಣ್ಣಾರೆ ಕಂಡಿದ್ದರೆ ಅವರಿಗೆಷ್ಟು ಸಂತೋಷ ಸಮಾಧಾನಗಳುಂಟಾಗುತ್ತಿದ್ದುವೊ. ಅಲ್ಲದೆ ಅವುಗಳನ್ನು ನಡೆಸಿದ ಮಹನೀಯರಿಗೂ, ಸಂಸ್ಥಾಪಕರ ಸನ್ನಿಧಿಯಲ್ಲಿ, ಅವರ ಕಣ್ಣೆದುರಿಗೇ ಈ ಉತ್ಸವಗಳನ್ನು ನೆರವೇರಿಸಿದ ಸಮಾಧಾನ ಸಂತೃಪ್ತಿಗಳೂ ಉಂಟಾಗುತ್ತಿದ್ದುವು. ಆ ಸುಸಮಯ ಒದಗುವ ಕೆಲವೇ ಸಮಯದ ಮುಂಚೆ ಅವರು ನಮ್ಮಿಂದ ಕಣ್ಮರೆಯಾದರಲ್ಲಾ, ಆ ಸಮಾಧಾನ – ಸಂತೃಪ್ತಿ ನಮ್ಮ ಪಾಲಿಗೆ ಇಲ್ಲವಾಯಿತಲ್ಲಾ, ಎಂದು ಮನ ಮರುಗುತ್ತಿದೆ; ಉಪಾಯವಿಲ್ಲ.

ಆದರೂ ಅಪಾರ ಶಿಷ್ಯವೃಂದದ ಹೃದಯಮಂದಿರದಲ್ಲೂ, ಕನ್ನಡಸಾಹಿತ್ಯ ಪ್ರಪಂಚ ದಲ್ಲಿಯೂ, ಡಾ॥ ಎ.ಆರ್. ಕೃಷ್ಣಶಾಸ್ತ್ರಿಗಳ ಹೆಸರು, ಸ್ಮರಣೆ, ಚಿರವಾಗಿ ಹಸಿರಾಗಿ ಇದ್ದೇ ಇರುತ್ತದೆ.

❖

# ಕವಿಗುರು

## (ಡಾ॥ ದ.ರಾ.ಬೇಂದ್ರೆ)

• *ಪ್ರೊ. ವಸಂತ ದಿವಾಣಜಿ*

ಬೇಂದ್ರೆಯವರದು ವಿರಾಟ್ ವ್ಯಕ್ತಿತ್ವ, ವಿಶೇಷ ವ್ಯಕ್ತಿತ್ವ, ಅವರು ಕಡೆಕಡೆಗೆ ಒಂದು ಮಾತು ಹೇಳಿದ್ದರು. ನಿಮ್ಮ ಆಸೆ ಏನು ಎಂದು ನಾವು ಕೇಳಿದಾಗ,

ಇದ್ದವರ ಎದೆಯಲ್ಲಿ
ತನ್ನ ಬಗೆ ಇರಲಿಲ್ಲ
ಸಪ್ತಸ್ವರ್ಗಕ್ಕೂ ಅದುವೆ ಹೆಚ್ಚು

ಎಂದರು. ಇದ್ದವರು ಎಂದರೆ ಬರಿಯ ಉಸಿರಾಡುವವರು ಮಾತ್ರ ಅಲ್ಲ, ಖರೇ ಬದುಕಿದ್ದವರು ಅಂತ. ಬೇಂದ್ರೆಯವರು ಇಷ್ಟು ಜನ ಖರೇ ಬದುಕಿದ್ದವರ ಎದೆಯಲ್ಲಿ ಇದ್ದಾರೆ, ಬದುಕಿದ್ದಾರೆ ಎಂದರೆ ಅದು ನಿಜಕ್ಕೂ ಅತ್ಯಂತ ಸಂತೋಷದ ವಿಚಾರ.

ನಾನು ಬೇಂದ್ರೆಯವರ ವಿದ್ಯಾರ್ಥಿ, ಅನೇಕ ವಿಚಾರಗಳನ್ನು ಗುರುವಾಗಿ ಬೇಂದ್ರೆ ನನಗೆ ಕಲಿಸಿದ್ದಾರೆ. ಅವರು ಕಲಿಸುತ್ತಿದ್ದ ಬಗೆ ಒಂದು ರೀತಿಯಲ್ಲಿ ಬೇರೆಯದೇ ಆಗಿರುತ್ತಿತ್ತು.

ಒಂದು ಮುಂಜಾನೆ, ಬೇಂದ್ರೆಯವರೊಡನೆ ಅಡ್ಡಾಡಲು ಹೋದೆ. ಒಂದು ಮನೆಯ ಮುಂದೆ ಹುಡುಗನೊಬ್ಬ ಅಶ್ಲೀಲವೆನ್ನಬಹುದಾದ ಬೈಗುಳಗಳನ್ನು ಉಪಯೋಗಿಸುತ್ತಿದ್ದ ಆ ಶಬ್ದಗಳನ್ನು ಕೇಳದ ಬೇಂದ್ರೆಯವರು ಅಲ್ಲಿಯೇ ಸ್ವಲ್ಪಕಾಲ ನಿಂತರು, 'ಮನೆಯ ಒಳಗೆ ಹೋಗಿ ಆ ಹುಡುಗನ ತಾಯಿಯನ್ನು ಕರೆದುಕೊಂಡು ಬಾ' ಎಂದು ನನಗೆ ಹೇಳಿದರು. ನಾನು 'ಬೇಂದ್ರೆ ಮಾಸ್ತರರು ಕರೆಯುತ್ತಿದ್ದಾರೆ' ಎಂದು ಆಕೆಯನ್ನು ಕರೆದುಕೊಂಡು ಬಂದೆ. ಆಗ ಬೇಂದ್ರೆಯವರು ಆ ಹುಡುಗನನ್ನು ಉದ್ದೇಶಿಸಿ' ತಮ್ಮಾ ನಿಮ್ಮ ತಾಯಿ ಬಂದಿದ್ದಾರೆ, ನೀ ಎನ್ ಮಾಡಬೇಕು ಅಂತ ಇದ್ದಿಯೋ ಅದನ್ನು ಮಾಡು' ಎಂದರು. ಅಷ್ಟು ಹೊತ್ತಿಗಾಗಲೇ ಅಲ್ಲಿ ಜನ ಸೇರಿದ್ದರು. ಆ ತಾಯಿಗೆ ತುಸು ಮುಜುಗರ, ನಾಚಿಕೆಯಾದಂತೆ ಆಯಿತು. ಬೇಂದ್ರೆಯವರು ಅಲ್ಲಿನ ಸಭ್ಯಜನರನ್ನು ಕುರಿತು ಈ ಹುಡುಗನಿಗೆ ಇಷ್ಟು ಬೈಗುಳ ಬಂದದ್ದಾರೂ ಹೇಗೆ? ಎಂದು ಪ್ರಶ್ನಿಸುತ್ತಾ, "ಮನಸ್ಸಿನಲ್ಲಿರುವ ಹಿಂಸೆಯೇ ಬೈಗುಳದ ರೂಪ ತಾಳುತ್ತದೆ. ನಮ್ಮ ಜೀವನವನ್ನು ಸುಧಾರಿಸಿಕೊಳ್ಳದ ಹೊರತು ಜೀವನಕ್ಕೆ ಸಂಸ್ಕಾರ ಸಿಗುವುದು ಸಾಧ್ಯವಿಲ್ಲ." ಎಂದು ಬೈಗುಳದ ಬಗ್ಗೆ ವಿಸ್ತೃತವಾದ ವ್ಯಾಖ್ಯಾನವನ್ನೇ ಮಾಡಿದರು. ಅಷ್ಟೇ ಅಲ್ಲ ನನಗೆ ಒಂದು assignment ಸಹಾ ನೀಡಿದರು. ನಿನಗೆ ಎಷ್ಟು ವಿಧದ ಬೈಗುಳ ಗೊತ್ತು? ಉತ್ತರ

ಕರ್ನಾಟಕದ ಕೆಲವು ವಿಶಿಷ್ಟ ವರ್ಗಗಳು ಉಪಯೋಗಿಸುವ ಬೈಗುಳದ ಸ್ವರೂಪವೇನು ಎಂದು ಕೇಳಿದರು. ಅಷ್ಟೇ ಅಲ್ಲದೆ ಅಂತಹ ಬೈಗುಳಗಳ ಒಂದು ಯಾದಿಯನ್ನು ತಯಾರಿಸಿ ತರಲು ಹೇಳಿದರು. ನಾನು ಕೆಲವು ಗಲ್ಲಿಗಳಲ್ಲಿ ಅಡ್ಡಾಡಿ, ಒಬ್ಬ ವ್ಯಕ್ತಿಯನ್ನು ಬೈಗುಳಗಳಯಾದಿ ಮಾಡಿಕೊಡುವಂತೆ ಕೇಳಿದೆ. ಅದಕ್ಕೆ ಅವರು "ಅದು ಹಂಗ ಬರೋದಿಲ್ಲರಿ, ಜಗಳವಾಡೋವಾಗ ಸಹಜವಾಗಿ ಬರುತ್ತದೆ" ಅಂದ. ಅನಂತರ ಬೇಂದ್ರೆಯವರು ಉತ್ತರ ಕರ್ನಾಟಕದ ವಿಶೇಷವರ್ಗಗಳಲ್ಲಿ ಬಳಸುವ 'ಸುಡಲಿ', 'ಬೆಂಕಿಗೆ ಹಚ್ಚಲಿ' ಮುಂತಾದ ಬೈಗುಳಗಳ ಬಗ್ಗೆ ಹೇಳಿದರು. ಅಷ್ಟೇ ಅಲ್ಲದೇ, ಪಂಪನಿಂದ ಕುಮಾರವ್ಯಾಸನವರೆಗೆ ಕನ್ನಡ ಕವಿಗಳು ಬಳಸಿರುವ ಬೈಗುಳಗಳು, ಕಿಟೆಲ್ ಶಬ್ದಕೋಶದಲ್ಲಿರುವ ಬೈಗುಳಗಳ ಪಟ್ಟಿ ತಯಾರಿಸುವಂತೆ ಹೇಳಿದರು. ಅಷ್ಟೇ ಅಲ್ಲ, ದೇಶ–ವಿದೇಶಗಳ ಬೈಗುಳಗಳನ್ನು, ಹಿಂಸೆಗೂ ಬೈಗುಳಕ್ಕೂ ಇರುವ ಸಂಬಂಧ ವನ್ನು ವಿವರಿಸಿದರು.

ಷೇಕ್ಸ್‌ಪಿಯರ್‌ನ ಒಂದು ನಾಟಕ, ರೋಮಿಯೋ ಜೂಲಿಯೆಟ್ ಇರಬೇಕು. ಎರಡು ಪಾತ್ರಗಳು ಹೆಣ್ಣೊಂದನ್ನು ವರ್ಣಿಸುವುದನ್ನು ಉಲ್ಲೇಖಿಸುತ್ತಾ ಬೇಂದ್ರೆಯವರೊಮ್ಮೆ ಆ ಪಾತ್ರಗಳು ಬಳಸಿರುವ ಭಾಷೆಯ ಹಿಂದೆ ಅವರ ಮನಸ್ಥಿತಿ ಇರುವುದನ್ನು ತೋರಿದರು. ಒಬ್ಬ ಹೆಣ್ಣಿನ ಬಾಹ್ಯ ಸೌಂದರ್ಯಕ್ಕೆ ಪ್ರಾಮುಖ್ಯತೆ ನೀಡಿದ್ದರೆ, ಮತ್ತೊಬ್ಬ, ಆಕೆಯ ಪ್ರೇಮಿ, ಅವಳ ಆಂತರಂಗಿಕ ಚೆಲುವನ್ನು ವರ್ಣಿಸುತ್ತಿದ್ದುದನ್ನು ಬೇಂದ್ರೆ ಅತ್ಯಂತ ಸ್ಪಷ್ಟವಾಗಿ ವಿವರಿಸಿದರು.

ಸಂಸ್ಕೃತದ ನಾಟಕವೊಂದು ನಮಗೆ ಪಠ್ಯವಾಗಿತ್ತು. ಕರಮಕರ್ ಎಂಬುವರು ಮಾಡಿರುವ ಇಂಗ್ಲಿಷ್ ಅನುವಾದವನ್ನು ಓದುತ್ತಾ ಇದ್ದೆ. ಬೇಂದ್ರೆಯವರಿಗೆ ಇದು ಗೊತ್ತಾಯಿತು. 'ನೀನು ಭಾಷಾಂತರ ಓದಬೇಡ, ಏನು ಅಸಡ್ಡಾಳ ಮಾಡಿದ್ದಾನೆ, ನಾನೇ ಈ ಪಾಠ ಮಾಡುತ್ತೇನೆ' ಎಂದರು. ಮೊದಲನೆಯ ಪದದ ವ್ಯಾಖ್ಯಾನಕ್ಕೇ ಅನೇಕ ದಿನಗಳನ್ನು ತೆಗೆದುಕೊಂಡದ್ದನ್ನು ಕಂಡು 'ಬೇಂದ್ರೆಯವರೇ ನಾ ಪರೀಕ್ಷಾ ಮುಗಿದ ನಂತರ ಬರುತ್ತೇನೆ. ಆಮೇಲೆ ಕಲಿಸುವಿರಂತೆ' ಎಂದೆ. 'ಸರಿ' ಎಂದರು. ಯಾಕೆ ಈ ಪ್ರಸಂಗಗಳನ್ನು ಹೇಳಿದೆನೆಂದರೆ ಬೇಂದ್ರೆಯವರಿಗೆ ಒಂದು ನಿಗದಿತ ಕ್ರಮದಲ್ಲಿ ಕಲಿಸುವುದಕ್ಕಿಂತ ಅಡ್ಡಾಡೋ ಮುಂದೆಲ್ಲ ಶಿಕ್ಷಣ ಕೊಡುವ ಇರಾದೆ ಬಹಳವಿತ್ತು.

ಒಂದು ಮುಂಜಾನೆ, ತಮಗೆ ಬಿದ್ದ ಒಂದು ಕನಸನ್ನು ಕುರಿತು ಹೇಳಿದರು. ಅಲ್ಲಿ ಅವರು ಅರ್ಜುನನಾಗಿದ್ದರು. ಭಗವಂತನ ವಿಶ್ವರೂಪದರ್ಶನವನ್ನು ಅರ್ಜುನನಿಗೆ ನೋಡಲಾಗಲಿಲ್ಲ. ಏಕೆಂದರೆ ತನ್ನ ಮಗ ಅಭಿಮನ್ಯುವಿನ ಮರಣದ ದೃಶ್ಯ ಅವನಿಗೆ ಕಾಣಿಸಿತ್ತು. ಈ ವಿಷಯದ ಮೇಲೆಯೇ ಮುಂದೆ ಅನೇಕ ಕವಿತೆಗಳನ್ನು ಬರೆದರು.

ಬೇಂದ್ರೆಯವರದು ತುಂಬಾ ಚಂಚಲವಾದ ಪ್ರವೃತ್ತಿ. ಒಮ್ಮೆ ಗಂಗಾ ಲಹರಿಯನ್ನು ಓದುತ್ತಿದ್ದರು. ಮೊದಲನೆಯ ಪದ್ಯವನ್ನು ಓದುವಷ್ಟರಲ್ಲಿಯೇ, ಮೊದಲನೆಯ ಪದ್ಯದ ಶಬ್ದಗಳ ಬಗ್ಗೆ ಅನೇಕ ಕವಿತೆಗಳನ್ನು ಬರೆದರು. ಅವರ ದೃಷ್ಟಿಯಲ್ಲಿ ಕಾವ್ಯವೆನ್ನುವುದು ಅಧ್ಯಯನದ, ಅಭ್ಯಾಸದ ವಸ್ತುವಾಗಬಾರದು. ಅದು ಆನಂದದ ವಸ್ತುವಾಗಬೇಕು. ಹೀಗಾಗಿಯೇ

ಬೇಂದ್ರೆಯವರನ್ನು ಒಬ್ಬ ವಿದ್ವಾಂಸನೆನ್ನುವುದಕ್ಕಿಂತ ಒಬ್ಬ ರಸಿಕನೆನ್ನುವುದು ಹೆಚ್ಚು ಸಮರ್ಪಕವೆನ್ನಿಸುತ್ತದೆ.

ಇನ್ನೊಂದು ಪ್ರಸಂಗ, ಒಬ್ಬರ ಮನೆಗೆ ಹೋಗಿದ್ದೆವು. ಸಣ್ಣ ಮಗುವೊಂದು ಬೊಂಬೆಗಳೊಂದಿಗೆ ಆಟವಾಡುತ್ತಿತ್ತು. ಒಂದು ಬೊಂಬೆ ಕೆಳಗೆ ಬಿದ್ದಿತ್ತು. ಮಗು ತನ್ನ ತಾಯಿಯನ್ನು 'ಆ ಮಗುವನ್ನು ಕೊಡು, ಹಾಲನ್ನು ಕುಡಿಸಬೇಕು' ಎಂದು ಕೇಳಿತು. ತಾಯಿ ನಿರ್ಭಾವುಕತೆಯಿಂದ ಅದನ್ನು ಮಗುವಿನತ್ತ ಎಸೆದಳು. ಆಗ ಬೇಂದ್ರೆ "ನೀವು ಹೀಗೆ ಮಾಡಬಾರದಿತ್ತು, ಆ ಬೊಂಬೆಯನ್ನು ಬೊಂಬೆಯೆಂದುಕೊಂಡು ಮಗು ಸೃಷ್ಟಿಸಿದ್ದ ಭಾವಲೋಕವನ್ನು ಹಾಳುಮಾಡಬಾರದಿತ್ತು, ಆ ಮಗುವಿಗೆ ಬೊಂಬೆಯನ್ನು ಮಗುವಿನಂತೆಯೇ ಎತ್ತಿಕೊಡಬೇಕಿತ್ತು" ಎಂದು ಹೇಳಿದರು. ಕವಿಯಾದರೂ ಮಗುವಿನ ರೀತ್ಯಾ ತನ್ನದೇ ಆದ ಭಾವಲೋಕವನ್ನು ಸೃಷ್ಟಿಸಿಕೊಂಡಿರುತ್ತಾನೆ. ರಸಿಕನಾದವನು, ಓದುಗನಾಗದವನು ಆ ಭಾವ ಲೋಕವನ್ನು ಪ್ರವೇಶಿಸಿಯೇ ಕವಿಯ ಕವಿತೆಗಳನ್ನು ಆಸ್ವಾದಿಸಬೇಕು. ಅಂತಹ ಭಾವಲೋಕವನ್ನು ನಿರಾಕರಿಸುವ, ಪ್ರಶ್ನಿಸುವ ಕೆಲಸವನ್ನು ಮಾಡಬಾರದು.

ಬೇಂದ್ರೆಯವರ ಬಗ್ಗೆ ಮಾತನಾಡುತ್ತಾ ಹೋದಾಗ ನನಗೆ ಅವರೊಟ್ಟಿಗೆ ಕಳೆದ ಅನೇಕ ಪ್ರಸಂಗಗಳು ಕಣ್ಣಮುಂದೆ ಬರುತ್ತವೆ.

ಒಮ್ಮೆ ದೊಡ್ಡ ಸಭಾದೊಳಗ ವಿಮರ್ಶಕರೊಬ್ಬರು ಬೇಂದ್ರೆಯವರ ಕಾವ್ಯದ ಬಗ್ಗೆ ಹೇಳಿದ ಅಭಿಪ್ರಾಯವನ್ನು ಸುತಾರಾಂ ಒಪ್ಪಲಿಲ್ಲ. ಸಿದ್ಧಾರೂಢರ ಭಕ್ತೆಯೊಬ್ಬಳು ಬೇಂದ್ರೆಯವರ 'ಇನ್ನೂ ಯಾಕ ಬರಲಿಲ್ಲಾವ ಹುಬ್ಬಳ್ಳಿಯಾಂವ' ಕವಿತೆಯನ್ನು ಸಿದ್ಧಾರೂಢರ ಆರತಿ ಪದವೆಂದು ತಿಳಿದುಕೊಂಡು ಆರತಿಯ ಸಂದರ್ಭದಲ್ಲಿ ಹಾಡುತ್ತಿದ್ದಳು. ನಾನು ಆಕೆಗೆ ಅದು ಸಿದ್ಧಾರೂಢರ ಆರತಿಯ ಪದವಲ್ಲವೆಂದು, ಅದನ್ನು ಬರೆದವರು ಬೇಂದ್ರೆಯವರೆಂದು ಹೇಳಿದೆ. ಆಕೆಗೆ ನಂಬಿಕೆಯಾಗಲೊಲ್ಲದು. ಬೇಂದ್ರೆಯವರಿಗೆ ಆ ಮಹಿಳೆಯ ಬಗ್ಗೆ ಹೇಳಿದೆ. ಬೇಂದ್ರೆಯವರೂ ನನ್ನೊಡನೆ ಆಕೆಯ ಮನೆಗೆ ಬಂದರು. ಅಚ್ಚರಿಯೆಂಬಂತೆ ಅದು ಸಿದ್ಧಾರೂಢರ ಆರತಿ ಪದವೆಂಬ ಆಕೆಯ ಅಭಿಪ್ರಾಯಕ್ಕೆ ತಮ್ಮ ಅಸಮ್ಮತಿಯನ್ನೇನೂ ಸೂಚಿಸಲಿಲ್ಲ.

ಬೇಂದ್ರೆಯವರಿಗೆ ದುಃಖವನ್ನು ಕಂಡರೆ ಅದರಲ್ಲೂ ಮನುಷ್ಯ ನಿರ್ಮಿತವಾದ ದುಃಖವನ್ನು ಕಂಡರೆ ಕಣ್ಣಲ್ಲಿ ನೀರು ಬರುತ್ತಿತ್ತು. ಅವರ 'ಪುಟ್ಟ ವಿಧವೆ' ಕವಿತೆಯಲ್ಲಿ ಋಗ್ವೇದದಲ್ಲಿ ಉಲ್ಲೇಖಿತವಾಗಿರುವ ಭೂಮಿ ದುಷ್ಟರ ಕೈಯಲ್ಲಿ ಸಿಕ್ಕಿ ನಲುಗಿದ ಚಿತ್ರ, ಪುರುಷ ದುರ್ಬಲರ ಮೇಲೆ ಮಾಡಿದ ಆಕ್ರಮಣದ ಚಿತ್ರವಿದ್ದರೆ, 'ಚಿಗರೆ ಗಂಗಳ ಚೆಲುವಿ' ಕವಿತೆಯಲ್ಲಿ power ಮತ್ತು innocence ನ ಸಂಘರ್ಷವಿದೆ.

ಕರ್ನಾಟಕದ ಹಿರಿಯ ಲೇಖಕರೊಬ್ಬರು, ಮುಂಬಯಿನವವರು, ಪ್ರೀತಿಸಿ ಮದುವೆಯಾಗಿದ್ದರು. ಮೂರು ಮಕ್ಕಳಾದ ಮೇಲೆ ಯಾವುದೋ ಭಿನ್ನಾಭಿಪ್ರಾಯದಿಂದ ಪತ್ನಿಯಿಂದ ದೂರವಾಗಿ ಬೇರೆ ಮದುವೆಯಾಗಿದ್ದರು. ಮೊದಲ ಪತ್ನಿ ಬೇಂದ್ರೆಯವರ ಮನೆಗೆ ಬಂದರು.

ಬೇಂದ್ರೆಯವರೂ ಎಷ್ಟೋ ಹೇಳಿದರೂ ಆತ ಕೇಳಲಿಲ್ಲ, ಬೇಂದ್ರೆ ಮನುಷ್ಯನ ಅವಿವೇಕ ದಿಂದಾಗುವ ದುಃಖವನ್ನು ಭರಿಸಲಾರದೇ ನೊಂದದ್ದು ಕಣ್ಣ ಮುಂದೆ ಇವೆ.

ಬೇಂದ್ರೆಯವರ ಪ್ರಕಾರ ಕಾವ್ಯಕ್ಕೆ ನಿರ್ದಿಷ್ಟವಾದ ಅರ್ಥವಿರಬೇಕಾಗಿಲ್ಲ. ಅದು ಬೀಜಗಣಿತದ 'X' ನಂತೆ ಒಂದು ಕಡೆ ಅದರ ಮೌಲ್ಯ '೬' ಆಗಬಹುದು, ಮತ್ತೊಂದೆಡೆ ಅದು '೫' ಆಗಬಹುದು. ಓದುಗರ ಯೋಗ್ಯತೆಯ ಪ್ರಕಾರ ಕಾವ್ಯ ಅರ್ಥವಾಗುತ್ತದೆ. ಅವನ ರಸಾಸ್ವಾದನ ಶಕ್ತಿಯಿಂದ, ಅವನ ಹಿನ್ನೆಲೆಯಿಂದ ಕಾವ್ಯ ಅರ್ಥವಾಗುತ್ತದೆ ಎನ್ನುತ್ತಿದ್ದರು. ಕವಿತೆಗೆ ಇದೇ ಅರ್ಥವೆಂದು ಹೇಳಬೇಕಾಗಿಲ್ಲ. ಕವಿತೆ ವಕೀಲನನ್ನು ಅಪೇಕ್ಷೆ ಪಡುವುದಿಲ್ಲ. ಬದಲಾಗಿ ಒಬ್ಬ ಸಹೃದಯನನ್ನು ಅಪೇಕ್ಷೆ ಪಡುತ್ತದೆ. ಕವಿತೆ ಒಂದು ಚಿತ್ರವನ್ನು ಕಣ್ಣಮುಂದೆ ಕಟ್ಟುವಷ್ಟು ಸಶಕ್ತವಾಗಿರಬೇಕು ಎಂಬ ಅಭಿಪ್ರಾಯ ಅವರದು. ಒಂದು ಕುದುರೆಯ ಚಿತ್ರ ಬರೆದು ಅವರ ಕೆಳಗೆ ಇದು ಕುದುರೆ ಎಂದು ಬರೆದರೆ ಅದು ಕಲೆಯ ಸೋಲು. ಹಾಗೆಯೇ ಒಂದು ಕವಿತಾದ ಅರ್ಥ ತನ್ನಿಂದ ತಾನೇ ಸ್ಫುರಿಸಬೇಕಲ್ಲದೆ, ಅದರ ಅರ್ಥ ಇದು ಎಂದು ಹೇಳಬೇಕಾದರೆ ಅದು ಕವಿಯ ಸೋಲು ಎನ್ನುತ್ತಿದ್ದರು.

ಬೇಂದ್ರೆಯವರು ಒಂದು ರೀತಿಯ ವಿಲಕ್ಷಣ ವ್ಯಕ್ತಿ. ಅಗಾಧವಾದ ನೆನಪಿನ ಶಕ್ತಿ ಅವರದ್ದು. ತದ್ವಿರುದ್ಧವಾಗಿ ಕೆಲವೊಮ್ಮೆ ಸಣ್ಣ ವಿಚಾರವನ್ನೂ ಮರೆತುಬಿಡುತ್ತಿದ್ದರು. ಅವರಿಗೆ ಸಾಮಾನ್ಯವಾಗಿ ಒಬ್ಬರೇ ಪ್ರಯಾಣಿಸಲು ಇಷ್ಟವಾಗುತ್ತಿರಲಿಲ್ಲ. ಒಮ್ಮೆ ಎಲ್ಲಿಗೋ ಪ್ರವಾಸ ಹೊರಟಿದ್ದರು. ಮಾರ್ಗಮಧ್ಯದಲ್ಲಿ ಭೇಟಿಯಾಗುವಂತೆ ಟೆಲಿಗ್ರಾಮ್‌ನ ಮೂಲಕ ಸೂಚಿಸಿದ್ದರು. ಅದರಂತೆಯೇ ನಾನು ಅವರನ್ನು ರೈಲ್ವೆ ಸ್ಟೇಷನ್‌ನಲ್ಲಿ ಭೇಟಿಯಾದೆ, ಮುಂದಿನ ಪ್ರಯಾಣಕ್ಕೆ ಜತೆಯಾಗುವಂತೆ ತಿಳಿಸಿದರು, ಸರಿ ಎಂದೆ. ನಾನು ರೈಲ್ವೆ ಟಿಕೇಟ್ ತೆಗೆದುಕೊಂಡಿರಲಿಲ್ಲ. ಇಬ್ಬರೂ ರೈಲ್‌ನಲ್ಲಿ ಪ್ರಯಾಣ ಮುಂದುವರೆಸಿದೆವು. ಟಿಕೇಟ್ ಕಲೆಕ್ಟರ್ ತಪಾಸಣೆಯಾಗಿ ಬಂದಾಗ ಬೇಂದ್ರೆಯವರು ತಮ್ಮ ರೈಲ್ವೆ ಟಿಕೇಟ್‌ಗಾಗಿ ಹುಡುಕಾಡತೊಡಗಿದರು. ಇಟ್ಟಿರುವ ಜಾಗ ಮರೆತುಬಿಟ್ಟಿದ್ದರು. ಟಿಕೇಟ್ ಕಲೆಕ್ಟರ್‌ಗೆ ಬೇಂದ್ರೆಯವರ ಬಗ್ಗೆ ತಿಳಿದಿತ್ತು. "ನೀವು ಟಿಕೇಟ್ ಇಲ್ಲದೆ ಪ್ರಯಾಣ ಮಾಡುವವರಲ್ಲ, ನಾನು ನಿಮ್ಮನ್ನು ತಪಾಸಣೆ ಮಾಡುವುದಿಲ್ಲ" ಎಂದು ಹೇಳಿದ. ಬೇಂದ್ರೆಯವರೆಂದರು 'ಸರಿಯಪ್ಪಾ, ನೀನೇನೋ ತಪಾಸಣೆ ಮಾಡುವುದಿಲ್ಲ. ಆದರೆ ನಾನು ಯಾವ ಊರಿನಲ್ಲಿ ಇಳಿಯಬೇಕು ಎಂಬುದು ಗೊತ್ತಿಲ್ಲವಲ್ಲ!' ಎಂದರು. ಆತ 'ನೀವು ಪ್ರಾಯಃ ಯಾವುದೋ ಭಾಷಣಕ್ಕೆಂದು ಹೋಗುತ್ತಿರುತ್ತೀರಿ, ಎಲ್ಲಿ ಜನ ಹಾರ ಹಿಡಿದುಕೊಂಡು ಕಾಯುತ್ತಿರುತ್ತಾರೋ ಅಲ್ಲಿ ಇಳಿಯಿರಿ' ಎಂದು ಸಲಹೆ ನೀಡಿದ. ಬೇಂದ್ರೆ ಸರಿ ಎಂದರು. ಅಂತಹ ಮರೆವು ಅವರದು. ವಿಚಿತ್ರವೆಂದರೆ, ಒಮ್ಮೆ ಸರ್. ಎಂ. ವಿಶ್ವೇಶ್ವರಯ್ಯನವರು ಬರೆದಿದ್ದ ಒಂದು ಪುಸ್ತಕದ ಶೀರ್ಷಿಕೆಯನ್ನು ನಾನು ತಪ್ಪಾಗಿ "Prose Poetry Through Industry" ಎಂದು ಬೇಂದ್ರೆಯವರಿಗೆ ಹೇಳಿದೆ. ಸುಮಾರು ಹನ್ನೆರಡು ವರ್ಷಗಳ ನಂತರ ಒಮ್ಮೆ ಇದ್ದಕ್ಕಿದ್ದಂತೆ ಅದು "Prose Poetry Through Industry" ಅಲ್ಲ, "Prosperity Through Industry" ಎಂದರು. ನಾನು ಆ ವಿಚಾರ ಪೂರ್ತಿ ಮರೆತೇ ಹೋಗಿದ್ದೆ.

ಗೋಕಾಕರ 'ಇಂದಿನ ಕರ್ನಾಟಕ' ಎಂಬ ಪುಸ್ತಕ text ಆಗಿತ್ತು. ಅಷ್ಟೇನೂ ಒಳ್ಳೆಯ

ಪುಸ್ತಕವಲ್ಲವದು. 'text ಅಂದ್ರೆ ಬಹಳ ಕೆಟ್ಟಪುಸ್ತಕನೇ ಇಡುತ್ತಾರೆ, ಏಕೆಂದರೆ ಒಳ್ಳೆಯ ಪುಸ್ತಕನ ಜನ ಓದಿಯೇ ಇರುತ್ತಾರೆ, ಓದದ ಪುಸ್ತಕಗಳನ್ನು text ಆಗಿ ಇಡುವುದರಿಂದ ಓದಲಿಕ್ಕೇ ಬೇಕು, ನಿನಗ text ಬಿಟ್ಟು ಉಳಿದದ್ದನ್ನು ಕಲಿಸುತ್ತೀನಿ' ಎಂದು ಬೇರೇನೇ ಕಲಿಸಿದರು ಬೇಂದ್ರೆ ಮಾಸ್ತರು.

ಬೇಂದ್ರೆಯವರೊಡನೆ ನನಗೆ ತುಂಬಾ ಸಲಿಗೆ ಇತ್ತು. ಒಮ್ಮೆ 'ಗಾಥಾ ಸಪ್ತಶತಿ'ಯಲ್ಲಿನ ಒಂದು ಪದ್ಯ ನನಗೆ ಆಶ್ಲೀಲವೆಂದು ತೋರಿತು. ತೀ.ನಂ.ಶ್ರೀಕಂಠಯ್ಯನವರ 'ಭಾರತೀಯ ಕಾವ್ಯ ಮೀಮಾಂಸೆ'ಯಲ್ಲಿಯೂ ಆ ಪದ್ಯ ಅಚ್ಚಾಗಿದೆ. ಪತಿ ವ್ಯಾಪಾರಕ್ಕೆಂದು ದೂರದೇಶಕ್ಕೆಂದು ಹೋದಂತಹ ಸಂದರ್ಭದಲ್ಲಿ ಆತನ ಪತ್ನಿ ಪಥಿಕನೋರ್ವನಿಗೆ ತಾನು ಏಕಾಂಗಿ ಎಂಬುದನ್ನು ಸೂಚಿಸುವ ಪ್ರಸಂಗ. ಅದನ್ನು ಬೇಂದ್ರೆಯವರಿಗೆ ತಿಳಿಸಿದೆ. ಬೇಂದ್ರೆಯವರು ಆ ಪ್ರಸಂಗವನ್ನು ಮತ್ತೊಂದು ರೀತಿಯಲ್ಲಿ ವಿಶ್ಲೇಷಿಸಿದರು. ಎಲ್ಲಿ ಎಲ್ಲಿ ಬದುಕು ವ್ಯಾಪಾರೀಕರಣ, ವಾಣಿಜ್ಯೀಕರಣ ವಾಗುತ್ತದೆಯೋ ಅಲ್ಲಿ ಈ ರೀತಿಯ ವಿಕೃತಿಗಳು ಸಹಜ, ಇದಕ್ಕೆ ಜಗತ್ತಿನ ಇತಿಹಾಸವೇ ಸಾಕ್ಷಿಯಾಗಿದೆ ಎಂದು ವಿವರಿಸಿದರು. ಇದು ಬೇಂದ್ರೆಯವರ ವಿಶ್ಲೇಷಣೆಯ ವೈಶಿಷ್ಟ್ಯ.

ಕುಮಾರವ್ಯಾಸನ ಮಹಾಭಾರತದಲ್ಲಿನ ದೂರ್ವಾಸಾತಿಥ್ಯದ ಸಂದರ್ಭ. ಪರಿಸ್ಥಿತಿಯ ಗಾಂಭೀರ್ಯವನ್ನರಿಯದೆ ಕುಮಾರವ್ಯಾಸ ದ್ರೌಪದಿಯ ನೀಲಕೇಶವನ್ನು ವರ್ಣಿಸುತ್ತಿದ್ದಾನೆಯೆ ಎಂದು ಒಮ್ಮೆ ಕೇಳಿದೆ. ಬೇಂದ್ರೆಯವರ ಉತ್ತರ ಅವರ ಸೂಕ್ಷ್ಮತೆಗೆ ದ್ಯೋತಕವಾಗಿತ್ತು. ಕೃಷ್ಣನಿಗೆ ತನ್ನ ಕೂದಲಿನ ಕಥೆ ಗೊತ್ತಿದೆ. ಅದಕ್ಕೆ ಮತ್ತೆ ತೊಂದರೆ ಬಂದಿದೆ ಎಂಬುದನ್ನು ಅವನಿಗೆ ಪುನಃ ಮನದಟ್ಟು ಮಾಡಿಕೊಡುವ ಉದ್ದೇಶ ದ್ರೌಪದಿಗೆ ಇರುವುದನ್ನೂ ಕುಮಾರವ್ಯಾಸ ಅರಿತಿದ್ದಾನೆ ಎಂದು ಬೇಂದ್ರೆ ವಿವರಿಸಿದರು.

ಶ್ಲೀಲ, ಅಶ್ಲೀಲ ಪ್ರಶ್ನೆ ನಮ್ಮ ಮನಸ್ಸು ಯಾವ ರೀತಿಯಲ್ಲಿ ಪ್ರತಿಕ್ರಿಯಿಸುತ್ತದೆ ಎಂಬುದರ ಮೇಲೆ ನಿರ್ಧಾರವಾಗುತ್ತದೆ ಎಂಬ ನಿಲುವು ಬೇಂದ್ರೆಯವರದು. ರಾಜಸೂಯ ಯಾಗದ ಸಂದರ್ಭ. ಒಂದು ಪ್ರಸಂಗ ಬಹಳಷ್ಟು ಮಹಾಭಾರತದಲ್ಲಿ ಕಾಣಸಿಗುವುದಿಲ್ಲ. ದುರ್ಯೋಧನಾದಿಗಳು, ಪಾಂಡವರು ಊಟಕ್ಕೆ ಕುಳಿತಿದ್ದಾರೆ. ದ್ರೌಪದಿ ಬಡಿಸುತ್ತಿದ್ದಾಳೆ, ಅವಳ ಕಂಚುಕ ಬಿಚ್ಚಿ ಹೋಗುತ್ತದೆ. ಕೈಯಲ್ಲಿದ್ದ ಪಾತ್ರೆಯನ್ನು ಕೆಳಗಿಡುವ ಹಾಗಿಲ್ಲ, ಅಂತಹ ಸಂದರ್ಭದಲ್ಲಿ ಕೃಷ್ಣ ದ್ರೌಪದಿಯ ಕಂಚುಕವನ್ನು ಕಟ್ಟುತ್ತಾನೆ. ತುಂಬಾ ಹೃದಯತಟ್ಟುವ ಸಂದರ್ಭ, ಬಹಳಷ್ಟು ಮಹಾಭಾರತದ ಪ್ರತಿಗಳಲ್ಲಿ, ರೂಪಾಂತರಗಳಲ್ಲಿ ಈ ಪ್ರಸಂಗವೇಕೆ ಸಿಗುವುದಿಲ್ಲ ಎಂದೊಮ್ಮೆ ಬೇಂದ್ರೆಯವರನ್ನು ಕೇಳಿದೆ. ಬೇಂದ್ರೆಯವರ ಉತ್ತರ ಅತ್ಯಂತ ಮಾರ್ಮಿಕವಾಗಿತ್ತು. "ಧರ್ಮರಾಜನ ವೇಷದಲ್ಲಿ ಅನೇಕ ಬಾರಿ ದುರ್ಯೋಧನಾದಿಗಳಿರುತ್ತಾರೆ, ಅವರಿಗೆ ಇಂತಹ ಪ್ರಸಂಗವೂ ಅಪಾರ್ಥವಾಗಬಹುದು" ಎಂದರು.

ಮಹಾರಾಷ್ಟ್ರದಲ್ಲಿ 'ತಮಾಷಾ' ಎಂಬ ಕಾರ್ಯಕ್ರಮ ಬಹಳ ಜನಪ್ರಿಯ. ಸ್ವಲ್ಪಮಟ್ಟಿಗೆ ಅಶ್ಲೀಲವೆನ್ನಬಹುದಾದ ಪ್ರಸಂಗಗಳನ್ನೂ ಒಳಗೊಂಡಿರುವ 'ತಮಾಷಾ' ಸಭ್ಯ ಸಂಸ್ಕೃತಿಗೆ ಅನುಗುಣವಾಗಿ ಅಶ್ಲೀಲ ಪ್ರಸಂಗಗಳನ್ನು, ಸಂಭಾಷಣೆಗಳನ್ನು ಹ್ರಸ್ವಗೊಳಿಸಿ ಪ್ರದರ್ಶಿಸುವುದುಂಟು.

ಸಮ್ಮೇಳನವೊಂದಕ್ಕೆ ಬೇಂದ್ರೆಯವರೂ ಆಹ್ವಾನಿತರಾಗಿದ್ದರು. ಸಮ್ಮೇಳನದ ಆಯೋಜಕರು 'ಅಸಲ್‌ತಮಾಷಾ' ನೋಡಬೇಕೆಂದು ಅಪೇಕ್ಷಿಸಿ ಅದರಂತೆಯೇ ಸೂಚಿಸಿದ್ದರು. ಆದರೆ ಪ್ರದರ್ಶಿತಗೊಂಡ 'ತಮಾಷಾ'ದಲ್ಲಿ ಯಥಾ ಪ್ರಕಾರ ಅಶ್ಲೀಲ ಪ್ರಸಂಗಗಳು ಕಡಿಮೆಯಾಗಿದ್ದವು. ಅಸಲ್ ತಮಾಷಾ ಆಡಿರಲೇ ಇಲ್ಲ. ಹೀಗೇಕೆಂದು ಆಯೋಜಕರು ತಮಾಷಾ ತಂಡವನ್ನು ಕೇಳಿದರು. ಆಗ ತಮಾಷಾ ತಂಡದವರು "ನೀವು ನಿಮ್ಮ ಹೆಂಡತಿ, ತಾಯಿ, ಮಕ್ಕಳೊಂದಿಗೆ ತಮಾಷಾ ನೋಡಲು ಬಂದಿರುತ್ತೀರಿ, ಅವರ ಮುಂದೆ ಅಸಲ್ ತಮಾಷ್ ಮಾಡುವುದು ಸಂಸ್ಕೃತಿಯಲ್ಲ" ಎಂದು ಉತ್ತರಿಸಿದರು. ಅವರ ಉತ್ತರವನ್ನು ಕೇಳಿದ ಬೇಂದ್ರೆಯವರ ಕಣ್ಣಲ್ಲಿ ನೀರು. ಬೇಂದ್ರೆಯವರೆಂದರು "ನಿಮ್ಮ ಕೈಯಲ್ಲಿ ಭಾರತೀಯ ಸಂಸ್ಕೃತಿ ಸುರಕ್ಷಿತವಾಗಿದೆ". ಈ ಪ್ರಸಂಗಗಳೊಂದಿಗೆ ಬೇಂದ್ರೆಯವರೊಡನೆ ಕಳೆದ ಹಲವು ಕ್ಷಣಗಳಲ್ಲಿ ಕೆಲವು ಕ್ಷಣಗಳನ್ನು ತಮ್ಮೊಂದಿಗೆ ಹಂಚಿಕೊಂಡಿದ್ದೇನೆ. ವಿರಾಟ ವ್ಯಕ್ತಿತ್ವದ ವಿರಾಟ್ ಕವಿ ಬೇಂದ್ರೆಯವರು ಸೃಷ್ಟಿಸಿದ ಭಾವಲೋಕಕ್ಕೆ ಈ ವಿಚಾರ ಸಂಕಿರಣ ಪ್ರವೇಶ ನೀಡುತ್ತದೆ ಎಂದು ಆಶಿಸುತ್ತೇನೆ.

●

# ಗುರುಮಾವುಲಿ

## (ಡಾ॥ ಡಿ.ಎಸ್. ಕರ್ಕಿ)

*• ನಾರಾಯಣ ಘಳಗಿ*

ಮರಾಠಿ ಭಾಷೆಯಲ್ಲಿ ಸಂತರು ತಮ್ಮ ಗುರುಗಳನ್ನು 'ಮಾವುಲಿ' ಅಂದರೆ ತಾಯಿ – 'ಗುರುಮಾವುಲಿ' ಎಂದು ಗೌರವಿಸುತ್ತಾರೆ. ಡಾ॥ ಡಿ.ಎಸ್. ಕರ್ಕಿ ಅವರನ್ನು ನಾನು ಹಾಗೂ ನನ್ನ ಅನೇಕ ಸಹಪಾಠಿಗಳು 'ಕರ್ಕಿ ಅಜ್ಜಾ' ಎಂದು ಕರೆಯುತ್ತಿದ್ದೆವು. ಆದರೆ ನನ್ನ ಹೃದಯ ಹೇಳುತ್ತದೆ. ಅವರೊಬ್ಬ 'ತಾಯಿ' ಎಂದು. ಡಾ॥ ಕರ್ಕಿಯವರದು ತಾಯಿಯ ಅಂತಃಕರಣ.

ನಾಲ್ಕು ವರ್ಷ ಅವರ ಶಿಷ್ಯನಾಗಿ ಕಾಲೇಜಿನಲ್ಲಿ ಕಳೆದ ಸುಮಧುರ ಸ್ಮೃತಿಗಳು. ಆಗಾಗ ನಾನು ಎದುರಿಸಿದ ಹಲವಾರು ಅಡೆ–ತಡೆಗಳ ನೆನಹು ಅಂತಹ ಸಂಘರ್ಷದ ಸಮಯದಲ್ಲಿಯೂ ಆಗಿನ ನನ್ನ ವಯೋಮಾನಕ್ಕನುಗುಣವಾಗಿ ಮಂಗಚೇಷ್ಟೆಗಳಲ್ಲಿ ತೊಡಗಿದ ಸಂದರ್ಭ, ಅವರು ನನ್ನನ್ನು ತಿದ್ದಿ ಸರಿಯಾದ ಮಾರ್ಗಕ್ಕೆ ಹಚ್ಚಿದ ರೀತಿ – ಇವೆಲ್ಲವೂ ಡಾ॥ ಕರ್ಕಿಯವರನ್ನು ತನ್ನ ತಾಯಿಯ ಸ್ಥಾನದಲ್ಲಿ ನಿಲ್ಲಿಸುತ್ತವೆ.

ಕರ್ಕಿ ಅಜ್ಜನವರು, ಕೀಟ್ಸ್‌ನ 'ಲಾ ಬೆಲ್ ಡೇಮ್ ಸ್ಯಾನ್ಸ್ ಮರ್ಸಿ' ಕವನದ ಪಾಠ ಮಾಡುತ್ತಿದ್ದಂತೆಯೇ ನನ್ನ ಮನಸ್ಸು, ದುರ್ಬಲ ಕ್ಷಣಗಳಲ್ಲಿ ನಮ್ಮಿಬ್ಬರ ಪ್ರೀತಿ ಇದೆ ಎಂದು ಭಾವಿಸಿ ಕಳೆದುಕೊಂಡ ಓರ್ವಳ ಬಗ್ಗೆ ಚಿಂತನೆಯಲ್ಲಿ ತೊಡಗಿತ್ತು. ಕರ್ಕಿಯವರು ಕ್ಲಾಸಿನಲ್ಲಿ ಯಾರಿಗೂ ಏನೂ ಪ್ರಶ್ನೆ ಹಾಕುತ್ತಿರಲಿಲ್ಲ. ಆದರೂ ನನಗೆ ಪ್ರಶ್ನೆಯೊಂದನ್ನು ಹಾಕಿ, ನಾನು ಅದಕ್ಕೆ ಉತ್ತರಿಸದೆ ತತ್ತರಿಸಿದಾಗ, 'ನೀನು ಅದ್ಯಾವ ಭಾವನಾಲೋಕದಲ್ಲಿ ಮುಳುಗಿದ್ದೀಯೆ?' ಎಂದು ಪ್ರಶ್ನಿಸಿದರು, ನನ್ನ ನೋಟ್‌ಬುಕ್ಕನ್ನು ತೆಗೆದುಕೊಂಡರು. ಭಗ್ನಪ್ರಣಯಿಯಾಗಿ ನಾನು ಬರೆದ ಕೆಲ ಸಾಲು ಅಂದರೆ 'ಕೀಟ್ಸ್'ನ ಪದ್ಯಾನುವಾದವನ್ನು ಗಟ್ಟಿಯಾಗಿ ಓದಿದರು. ಮೆಚ್ಚುಗೆಯನ್ನೂ ವ್ಯಕ್ತಪಡಿಸಿದರು. ಆದರೆ, ಪ್ರಗತಿಯ ಹಾದಿ ಇದಲ್ಲ, ಮನಸ್ಸುಗೊಟ್ಟು ಅಧ್ಯಯನ ಮಾಡು ಎಂದು ಕಿವಿ ಹಿಂಡುವುದನ್ನು ಅವರು ಮರೆಯಲಿಲ್ಲ. ನೂರೈವತ್ತು ವಿದ್ಯಾರ್ಥಿ–ವಿದ್ಯಾರ್ಥಿನಿಯರಲ್ಲಿ ನನ್ನನ್ನೆ ಹೀಗೆ ಆಯ್ಕೆಮಾಡಿ ನನ್ನ ಹೃದಯದೌರ್ಬಲ್ಯ ಅರ್ಥಮಾಡಿಕೊಳ್ಳುವುದು ಕರ್ಕಿ ತಾಯಿ ಅಲ್ಲದಿದ್ದರೆ ಸಾಧ್ಯವೇ?

ಇನ್ನೂ ಒಂದು ಪ್ರಸಂಗ, ಕರ್ಕಿಯವರು ಕ್ಲಾಸಿನಲ್ಲಿ ತಿರುಗಾಡುತ್ತ ಪಾಠ ಹೇಳುತ್ತಿದ್ದರು. ಪಾಠ ಹೇಳುವುದರಲ್ಲಿ ತನ್ಮಯರಾಗಿರುತ್ತಿದ್ದ ಕರ್ಕಿಯವರಿಗೆ ಬೇರೆ ಯಾವ ಕಡೆಗೂ ಲಕ್ಷ್ಯಹೋಗುತ್ತಿರಲಿಲ್ಲ. ನೌಕರಿ ಮಾಡಿಕೊಂಡು ಶಿಕ್ಷಣ ಮುಂದುವರಿಸುತ್ತಿದ್ದ ಕೆಲ ಹಿರಿಯ

ವಿದ್ಯಾರ್ಥಿಗಳು ತಮ್ಮ ಕಚೇರಿಗೆ ಹೋಗುವ ವೇಳೆಯಾದ ಕೂಡಲೆ ಕ್ಲಾಸನ್ನು ಅರ್ಧಕ್ಕೇ ತ್ಯಜಿಸಿ ಹೋಗುತ್ತಿದ್ದರು. ಡಾ॥ ಕರ್ಕಿಯವರು ಅದಕ್ಕೆ ಅವಕಾಶವನ್ನೂ ನೀಡಿದ್ದರು. ಆದರೆ ಅವರ ಸೂಕ್ಷ್ಮದೃಷ್ಟಿ ಅಂತಹ ವಿದ್ಯಾರ್ಥಿ ಯಾರು ಎಂದು ಗಮನಿಸಿ, ಅವರನ್ನು ಬಿಟ್ಟು ಬೇರೆ ಯಾರಾದರೂ ಎದ್ದರೆ ಮೃದುವಾಗಿ ಆಕ್ಷೇಪಿಸುವಂತೆ ಮಾಡುತ್ತಿತ್ತು. ನನ್ನೊಬ್ಬ ಕಲಾಕಾರ ಮಿತ್ರ ಆ ರೀತಿ ಎದ್ದುಹೋದಾಗ ಅವರ ಗಮನ ನನ್ನ ಕಡೆಗೆ ಹರಿಯಿತು. ನಾನು ಹಾಗೂ ಅವನು ಒಂದೇ ಡೆಸ್ಕಿನಲ್ಲಿ ಕೂಡುತ್ತಿದ್ದು ಮಂಗಚೇಷ್ಟೆಗಳ ಕೆಲಪ್ರಸಂಗಗಳಲ್ಲಿ ನಾನೂ ಪಾಲ್ಗೊಂಡಿದ್ದನ್ನು ಗಮನಿಸಿದ್ದ ಕರ್ಕಿ ನೇರವಾಗಿ ನನ್ನ ಡೆಸ್ಕಿನ ಬಳಿ ಬಂದರು. ಏನೂ ಮಾತಾಡದೇ ಪಾಠವನ್ನು ಅಷ್ಟಕ್ಕೇ ಮುಗಿಸಿಬಿಟ್ಟು ನನ್ನನ್ನು ತಮ್ಮ ಆಫೀಸಿಗೆ ಕರೆಸಿಕೊಂಡರು. ನನ್ನ ಡೆಸ್ಕಿನ ಮೇಲೆ ನನ್ನ ಆ ಕಲಾಕಾರ ಸಹಪಾಠಿ ನಮ್ಮ ಕ್ಲಾಸಿನ ಸುಂದರವಾದ ಹುಡುಗಿಯೊಬ್ಬಳ ಚಿತ್ರವನ್ನು ಯಥಾವತ್ತಾಗಿ ಬಿಡಿಸಿದ್ದ. ನಾನೇ ಆ ಚಿತ್ರ ತೆಗೆದವನು ಎಂದು ಭಾವಿಸಿದ ಡಾ॥ ಕರ್ಕಿ ನನ್ನನ್ನು ತರಾಟೆಗೆ ತೆಗೆದುಕೊಂಡರು. ಹಾಗೂ ಬುದ್ಧಿವಾದ ಹೇಳಲಾರಂಭಿಸಿದರು. “ಸರ್, ಆ ಚಿತ್ರ ಬರೆದವನು ನಾನಲ್ಲ, ನನಗೆ ಚಿತ್ರ ಬರೆಯಲು ಬರುವುದೂ ಇಲ್ಲ ಬರೆಯಲು ನನಗೆ ಬರುತ್ತಿದ್ದರೆ ನನಗೆ ಸಂತಸ ಹಾಗೂ ಅಭಿಮಾನ ಎನಿಸಬಹುದಿತ್ತು” ಎಂದು ವಿವರಣೆ ನೀಡಿದೆ. ಕರ್ಕಿಯವರು ನಂತರ ನನ್ನ ಮೂಲಕವೇ ನನ್ನ ಆ ಕಲಾಕಾರ ಮಿತ್ರನನ್ನು ಕರೆಯಿಸಿಕೊಂಡು ಅವನನ್ನೂ ಸನ್ಮಾರ್ಗಕ್ಕೆ ಹಚ್ಚಿದರು.

ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಖಾಸಗಿಯಾಗಿ ಪಾಠ ಹೇಳಿ, ಅವರು ಕೊಡುತ್ತಿದ್ದ ಹಣದಿಂದ ನಾನು ಶಿಕ್ಷಣ ಮುಂದುವರಿಸುತ್ತಿದ್ದೇನೆ, ಆರ್ಥಿಕ ಮುಗ್ಗಟ್ಟಿನಲ್ಲಿದ್ದೇನೆ, ಎಂಬುದನ್ನು ಕರ್ಕಿ ಹೇಗೋ ತಿಳಿದುಕೊಂಡಿದ್ದರು. ನನಗೆ ಕಾಲೇಜಿನಲ್ಲಿ ಫೀ ತುಂಬುವಲ್ಲಿ ಎಷ್ಟೊಂದು ರಿಯಾಯಿತಿ ನೀಡಿದ್ದರೆಂದರೆ ನಾನು ಬಿ.ಎ. ಪಾಸಾಗಿ ಎರಡು ವರ್ಷಗಳಾದ ಮೇಲೆ ಆ ಹಣ ತುಂಬಿದ್ದೆ. ಮೊದಲ ಬಾರಿ ಬಿ.ಎ.ಯಲ್ಲಿ ಅನುತ್ತೀರ್ಣನಾದಾಗ ಕರ್ಕಿಯವರೇ ಸ್ವತಃ ಧೈರ್ಯ ಹೇಳಿ, ‘ಮರಳಿ ಯತ್ನವ ಮಾಡು’ ಎಂದು ಬೆನ್ನು ತಟ್ಟಿದರು. ‘ಜೀವನ ಒಂದು ಜಂತುಗಳ ಮಾಲೆ, ಕ್ಷಣಿಕ ಸೋಲಿಗೆ ಬೆದರುವುದು ಸಲ್ಲ’ ಎಂಬ ಅವರ ಉಪದೇಶವೇ ನನ್ನ ಹೃದಯದಲ್ಲಿ ನನಗೆ ನಿತ್ಯ ಬೆಳಕು ತೋರಲು ಅವರು ಹಚ್ಚಿದ ನಂದಾದೀಪ.

ಕರ್ಕಿಯವರು ವರಕವಿಗಳು, ಆದರ್ಶ ಶಿಕ್ಷಕರು, ದೊಡ್ಡವರು, ಸಾಮಾನ್ಯವಾಗಿ ಇಂಥವರ ದೃಷ್ಟಿ ಹಾಗೂ ಕೃಪೆ ಜಾಣ ವಿದ್ಯಾರ್ಥಿಗಳ ಕಡೆಗೆಯೇ ಹೆಚ್ಚು ಇರುವುದು ಸಹಜ. ಆದರೆ, ಕೋಣನಂತಿರುವ ಶುದ್ಧ ಪೆದ್ದನಾದ, ಸದಾಕಾಲ ಗಾಂಧಿಕ್ಲಾಸಿನಲ್ಲಿಯೇ ಕೊನೆಯ ಬೆಂಚನ್ನು ನನಗಾಗಿಯೇ ಮೀಸಲಾಗಿರಿಸಿಕೊಂಡ ನನ್ನಂಥವನನ್ನೂ ಸಹ ಡಾ॥ ಕರ್ಕಿ ಆತ್ಮೀಯತೆಯಿಂದ ಕಂಡದ್ದನ್ನು ನೆನದಾಗ,

**ಪೃಥಿವ್ಯಾಂ ಪುತ್ರಾಸ್ತೇ**
**ಜನನಿ ಬಹವಃ ಸಂತಿ ಸರಲಾಃ**
**ಪರಮ ತೇಷಾಮ್ ಮಧ್ಯೇ**
**ವಿರಲತರಲೋಹಮ್ ತವಸುತಃ**

**ಮದೀಯೋಯಮ್ ತ್ಯಾಗಃ**
**ಸಮುಚಿತಮಿದಂ ನೋ ತವಶಿವೇ**
**ಕುಮತ್ರೋ ಜಾಯೇತ ಕ್ವಚಿದಪಿ**
**ಕುಮಾತಾ ನ ಭವತಿ**

ಎಂಬ ಶಂಕರಾಚಾರ್ಯರ ಶ್ಲೋಕ ನೆನಪಿಗೆ ಬಂದು,

**ಅಮ್ಮಾ ನಿನ್ನ ಮಕ್ಕಳಲ್ಲಿ**
**ಚೆನ್ನಾಗಿರ್ಪರು ಬಹಳೇ ಜನ**
**ನಾನು ಒಬ್ಬ ದಡ್ಡ ಮೂಢ**
**ನನ್ನ ಕೈ ನೀ ಬಿಡಬ್ಯಾಡ**
**ಕೆಟ್ಟ ಮೂಢ ಮಕ್ಕಳು ಹಲವು**
**ಕೆಟ್ಟ ತಾಯಿಯ ಎಲ್ಲೂ ಕಾಣೆನು**

ಎಂದು ನನ್ನ ಮನಸ್ಸು ಹಾಡಲಾರಂಭಿಸುತ್ತದೆ.

ಹೆಸರಾಂತ ವರ್ತಕ ಸಿದ್ದಪ್ಪ ಕರ್ಕಿಯವರು ಹೊಲದಲ್ಲಿಯ ಫಸಲನ್ನು ದೂರದಿಂದಲೇ ನೋಡಿ, ಬೆಲೆ ಕಟ್ಟಿ ವ್ಯವಹಾರ ಮಾಡುವ ಚತುರರಾಗಿದ್ದರಂತೆ. ತಮ್ಮ ಮಗ ದುಂಡಪ್ಪನು ತಮ್ಮಂತೆಯೇ ಶ್ರೀಮಂತಿಕೆಯನ್ನು ಇಮ್ಮಡಿ, ಮುಮ್ಮಡಿ, ನೂರ್ಮಡಿ ಹೆಚ್ಚಿಸಿಕೊಂಡು ಸಾಹುಕಾರ ಶೆಟ್ಟಿಯಾಗಿ ಅಪ್ಪನಂತೆ ಮಗ ಎಂಬುದನ್ನು ಸಿದ್ಧಮಾಡಿ ತೋರಿಸಲಿ ಎಂದು ಬಯಸಿದ್ದರು. ಆದರೆ, ಅವರ ಸತ್ಪುತ್ರ ಡಾ॥ ಡಿ.ಎಸ್.ಕರ್ಕಿ ಕನ್ನಡದ ದಿವ್ಯವಾದ, ವಿಶಾಲವಾದ ಸಾರಸ್ವತ ಕ್ಷೇತ್ರದ ಫಸಲನ್ನು ನೋಡಿಯೇ ಬೆಲೆ ಕಟ್ಟಿ ಬೆಳೆಸಿದರು. ಕನ್ನಡ ಸರಸ್ವತಿಯ ಭಂಡಾರದ ಬೀಗಮುದ್ರೆಯನ್ನು ಒಡೆದು ಶ್ರೀಮಂತರಾದರು. ತಾವು ಪಡೆದದ್ದನ್ನು ನಾಡ ಜನರಿಗೆ ಹಂಚಿ ಮಹಾದಾನಿಗಳೂ ಆದರು.

**ಮುಂಗುರುಳ ನೇವರಿಸಿ**
**ಕಣ್ಣಿನಲಿ ಕಣ್ಣಿರಿಸಿ**
**ಮನತೆರೆದು ಮರೆಯಲಾದ**
**ಎನ್ನ ತಾಯಿಯೆಲ್ಲಿ?**

ಚಿಕ್ಕಂದಿನಲ್ಲಿ ಅಕ್ಕರೆಯ ತಾಯಿಯೊಡನೆ ಹೀಗೆ ಕಣ್ಣುಮುಚ್ಚಾಲೆ ಆಡಿದ ಅಲ್ಪ ಸಮಯದಲ್ಲೇ ಜನ್ಮದಾತೆಯನ್ನು ಕಳೆದುಕೊಂಡು, 'ಅವ್ವಾ, ಅವ್ವಾ' ಎಂದು ಹುಡುಕಾಡಿದ ಬಾಲಕ ಕರ್ಕಿ, ಕೇವಲ ಮೂರು ವರ್ಷಗಳಲ್ಲೇ ಮಾತೃವಾತ್ಸಲ್ಯದ, ತಾಯಿತನದ ಪರಿಪಕ್ವತೆಯನ್ನು ಅರಿತು ಜೀವನದುದಕ್ಕೂ ಮೈಗೂಡಿಸಿಕೊಂಡು ಕನ್ನಡ ತಾಯಿಯ ಸೇವೆ ಮಾಡಿದರು. ಅಸಂಖ್ಯ ಅಭಿಮಾನಿಗಳಿಗೆ, ಶಿಷ್ಯಕೋಟಿಗೆ ಸ್ವತಃ ತಾವೇ ತಾಯಿಯಾದರು. ಕರ್ಕಿ–ಅಪ್ಪನಿಗೆ ತಕ್ಕ ಮಗ ಹೇಗೋ ಹಾಗೆಯೇ ಅವ್ವನಿಗೂ ತಕ್ಕ ಮಗನೇ.

ಕರ್ಕಿಯವರು ಆದರ್ಶ ಗುರು. ಗುರುಗಳ ಗುರುವೇ ಅವರು. ಮಮತೆಯ ಮಾತೆಯೂ ಸಹ. ದೀಪದಿಂದ ದೀಪ ಬೆಳಗುವಂತೆ ಕರ್ಕಿಯವರ ಚೈತನ್ಯಮಯ ಜೀವನ ಅನೇಕ

ಜೀವಗಳನ್ನು ತನ್ನಂತೆಯೇ ಬೆಳಗಿದೆ, ಅವರಂತೆ ಜ್ಯೋತಿಗಳಾದವರು ಹಲವರು. ಅವರ ದೀಪದಾನದಿಂದ ಚಿಕ್ಕ ಹಣತೆಗಳಾಗಿ ತಮ್ಮ ಪರಿಸರವನ್ನು ಮಿನುಗುವಂತೆ ಮಾಡಿದವರು ಅಸಂಖ್ಯರು. ಅವರ ಜೀವನದತ್ತ ಕಿರುನೋಟವೊಂದು ಸಹ ದಿವ್ಯ ಜೀವನದ ಮಾರ್ಗದರ್ಶಿ.

ಗದಗಿನಲ್ಲಿ ಸೇರಿದ ಅಖಿಲ ಭಾರತ ಮಟ್ಟದ ಒಂದು ಭಾರೀ ಸಾಹಿತ್ಯಕೂಟದ ಭರ್ಜರಿ ಸಮಾರಂಭದಲ್ಲಿ ಕವಿಗಳಾದ ಡಾ॥ ಎಸ್.ಡಿ. ಇಂಚಲ ಅವರು, 'ಇದೋ ಸಾಹಿತ್ಯ ಸರಸ್ವತಿ ಹಾಗೂ ವಿದ್ಯಾಧೀಶ ಗಣಪತಿ ಇವರ ಅರ್ಚನೆಗೆ ನಾವು ಇಲ್ಲಿ ಕರಕಿಯಲ್ಲಿ ತಂದಿದ್ದೇವೆ' ಎಂದು ಡಾ॥ ಡಿ.ಎಸ್. ಕರ್ಕಿಯವರ ಪರಿಚಯ ಮಾಡಿಕೊಟ್ಟರೆಂದು ಕೇಳಿ ತಿಳಿದಿದ್ದೇನೆ. ಎಂತಹ ಯಥಾವತ್ತಾದ ಬಣ್ಣನೆ ಇದು! ಕರ್ಕಿಯವರು ಈಗ ನಮ್ಮ ಮಧ್ಯದಲ್ಲಿ ಇಲ್ಲ. ಆದರೆ, ಅವರ ಸ್ಮರಣೆ ಹಾಗೂ ಅವರ ಸಾಹಿತ್ಯದ ಅಧ್ಯಯನ ಇವುಗಳೇ ನಾವೆಲ್ಲರೂ ಕೈಕೊಳ್ಳಬೇಕಾದ ಅಖಂಡ ಅರ್ಚನೆ.

❖

# ಗುರುಸ್ಮೃತಿ

## (ಡಾ॥ ಎಂ. ಮರಿಯಪ್ಪ ಭಟ್ಟ)

---

• ಪ್ರೊ. ಕೆ. ಕುಶಾಲಪ್ಪಗೌಡ

**ಪ್ರೊ**ಫೆಸರ್ ಮರಿಯಪ್ಪ ಭಟ್ಟರು ೨೧-೦೩-೧೯೮೦ರಂದು ಶುಕ್ರವಾರ ರಾತ್ರೆ ೧೦ ಗಂಟೆಯ ಹೊತ್ತಿಗೆ ಭೌತಿಕ ಜೀವನದಿಂದ ಮುಕ್ತರಾದರು. ೨೭-೦೭-೧೯೦೬ರಂದು ಜನಿಸಿದ ಇವರು ಮುಕ್ಕಾಲು ಶತಮಾನದ ತುಂಬುಜೀವನ ನಡೆಸಿದರು. ಅವರು ತಮ್ಮ ಜೀವನದ ಆರಂಭದಲ್ಲಿ ಕಲ್ಲುಕೊರಕಲುಗಳಿಂದ ಕೂಡಿದ ದಾರಿಯಲ್ಲಿ ನಡೆದು, ದೂರದ ನೇರ ಗುರಿಯನ್ನು ಹಿಡಿದು, ಸಾಧನೆ – ಸಿದ್ಧಿಗಳನ್ನು ಪಡೆದು, ಆದರ್ಶ ವ್ಯಕ್ತಿಯಾದರು. ತಮ್ಮ ಪರಿಧಿಯೊಳಗೆ ಬಂದ ಕಿರಿಯರಿಗೆ ಸ್ಫೂರ್ತಿಯ ನೆಲೆಯಾದರು; ಸಮಾನರಿಗೆ ಆತ್ಮೀಯ ಗೆಳೆಯರೂ, ಬಂಧುವರ್ಗಕ್ಕೆ ಪ್ರೀತಿಯ ಸಾಕ್ಷಾತ್ಕಾರವೂ ವಾತ್ಸಲ್ಯ, ಸ್ನೇಹ, ಸೌಹಾರ್ದ, ಸೌಜನ್ಯ, ಸುಜ್ಞಾನ ಎಂಬ ಏನೇನು ಒಳ್ಳೆಯ ಪದಗಳಿವೆಯೋ ಅವಕ್ಕೆಲ್ಲ ಸರಿಯಾದ ಅರ್ಥವನ್ನು ತೋರಿಸುವ ಸಜೀವ ಕೋಶವೂ ಆಗಿ ಬಾಳಿದರು.

ಅವರ ಕಾರ್ಯಕ್ಷೇತ್ರ ವಿಶಾಲವಾಗಿದ್ದು ಹಲವು ಸಂಘ ಸಂಸ್ಥೆಗಳಲ್ಲಿ, ಸಮಿತಿಗಳಲ್ಲಿ ಅವರು ಕಾರ್ಯನಿರ್ವಹಿಸುತ್ತಿದ್ದುದರಿಂದ ಅವರಿಗೆ ಕಾರ್ಯಸಖರಾಗಿದ್ದವರು ಅನೇಕಾನೇಕ ಮಂದಿ. ಮೂರು ದಶಕಗಳಿಗಿಂತಲೂ ಹೆಚ್ಚು ಕಾಲ ಅವರ ಕಾರ್ಯಕ್ಷೇತ್ರದ ಕೇಂದ್ರ ಬಿಂದು ಮದ್ರಾಸು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗವಾಗಿತ್ತು. ಅವರಿಂದ ಈ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗಕ್ಕೊಂದು ಸ್ಥಿರತೆ, ಗೌರವ ಮತ್ತು ಹೆಮ್ಮೆ ಉಂಟಾಯಿತು. ಅನೇಕ ಹಳಗನ್ನಡ ಗ್ರಂಥಗಳು, ಕಿಟೆಲ್ ಕೋಶ, ತುಳು ಅರ್ಥಕೋಶ ಮುಂತಾದುವು ಬೆಳಕಿಗೆ ಬರಲು ಅವರು ಕಾರಣರಾದರು. ಈ ಸಂಪಾದಿತ ಗ್ರಂಥಗಳಲ್ಲಿಯ ಪ್ರೌಢ ಪ್ರಸ್ತಾವನೆ, ಕವಿ – ಕಾವ್ಯ ಚರ್ಚೆ ಮುಂತಾದುವುಗಳಲ್ಲದೆ ಇತರ ಅನೇಕ ಸಂಶೋಧನಾ ಲೇಖನಗಳು ಅವರ ಲೇಖನಿಯಿಂದ ಹೊರಬಂದುವು.

ತಾವು ಕಟ್ಟಿ ಬೆಳೆಸಿದ ಕನ್ನಡ ವಿಭಾಗದ ಉನ್ನತಿಯ ಬಗ್ಗೆ, ಅದರ ಕೆಲಸ ಕಾರ್ಯಗಳ ಬಗ್ಗೆ ಅವರಿಗೆ ಅತ್ಯಂತ ಕಳಕಳಿ ಇತ್ತು. ತಮ್ಮ ಅಂತ್ಯದ ಕೆಲವು ತಿಂಗಳುಗಳ ಹಿಂದೆಯೂ ಕನ್ನಡ ವಿಭಾಗಕ್ಕೆ ಅವರು ಬಂದಾಗ, ಮತ್ತೆ ಅಸೌಖ್ಯದಿಂದ ಹಾಸಿಗೆ ಹಿಡಿದ ಕಾಲದಲ್ಲಿ ನಾವು ಅವರನ್ನು ಕಾಣಲು ಹೋದಾಗಲೆಲ್ಲ ಈ ಭಾವನೆ ಅವರ ಮಾತಿನಲ್ಲಿ, ಮುಖದಲ್ಲಿ, ಕಣ್ಣುಗಳಲ್ಲಿ ವ್ಯಕ್ತವಾಗುತ್ತಿತ್ತು. 'ಹೀಗೆ ಮಾಡಿ, ಹಾಗೆ ಮಾಡಿ' ಎಂದು ಹಿತೋಪದೇಶ ಮತ್ತು

ಪ್ರೋತ್ಸಾಹ ಕೊಡುತ್ತಿದ್ದರು. ನಮ್ಮ ಅಲ್ಪಸಾಧನೆಗಳನ್ನೇನಾದರೂ ನಿವೇದಿಸಿದರೆ ಸಂತೋಷದಿಂದ ಉಬ್ಬಿ ಬೆನ್ನು ತಟ್ಟುತ್ತಿದ್ದರು. ರಕ್ತದ ಒತ್ತಡ ಮುಂತಾದ ಖಾಹಿಲೆಯ ಕಾರಣದಿಂದ ಅರ್ಧ ಪ್ರಜ್ಞಾವಸ್ಥೆಯಲ್ಲಿದ್ದಾಗಲೂ "ಸರ್ವೇ ಜನಾಃ ಸುಖಿನೋಭವಂತು" ಎಂಬ ಮಾತನ್ನು ಅವರು ಪಿಸುಗುಡುತ್ತಿದ್ದರು. ಅದು ಅವರಿಗೆ ಯಾವಾಗಲೂ ಪ್ರಿಯವಾಗಿತ್ತಲ್ಲದೆ ಅವರ ಏಕೈಕ ಧ್ಯೇಯ ಧೋರಣೆಯ ಪ್ರತೀಕವಾಗಿತ್ತು. ಅವರು 'ಸತ್' ಎಂಬ ಪರಿಮಳ ಬೀರುವ, ಭೂಮಿಯಲ್ಲಿದ್ದ ದೇವಲೋಕದ ಪುಷ್ಪದಂತಿದ್ದರು.

ಕರ್ನಾಟಕದಿಂದ ದೂರವಿರುವ ಮದ್ರಾಸು ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ ಬರುವ ಕನ್ನಡ ವಿದ್ಯಾರ್ಥಿಗಳ ಸಂಖ್ಯೆ ಹಿಂದಿನಿಂದಲೂ ಕಡಿಮೆಯೇ. ಆದುದರಿಂದ ನೇರವಾಗಿ ಪ್ರೊ. ಮರಿಯಪ್ಪ ಭಟ್ಟರ ವಿದ್ಯಾರ್ಥಿಗಳಾಗುವ ಭಾಗ್ಯ ದೊರೆತುದು ಕೆಲವರಿಗೆ ಮಾತ್ರ. ಅಂತಹ ಬೆರಳೆಣಿಕೆಯ ವಿದ್ಯಾರ್ಥಿಗಳಲ್ಲಿ ನಾನೂ ಒಬ್ಬನೆಂಬ ಸೌಭಾಗ್ಯದೆಣಿಕೆ ನನ್ನನ್ನು ಪುಳಕಿತಗೊಳಿಸುತ್ತದೆ. ೧೯೫೨ರಿಂದಲೇ ಅವರ ಸಂಪರ್ಕ ನನಗೊದಗಿತ್ತು. ದೈವಯೋಗದಿಂದ, ಉದ್ಯೋಗಾವಧಿಯಲ್ಲಿ ನಾನೂ ತಮಿಳುನಾಡಿನಲ್ಲಿ ನೆಲೆಸುವಂತಾಯಿತು. ಅವರು ನನ್ನ ಹುಟ್ಟೂರಿಗೆ ಸಮೀಪವಾದ ಸುಳ್ಯದ ಉಬರಡ್ಕ ಎಂಬಲ್ಲಿ ಆಸ್ತಿ ಕೊಂಡುಕೊಂಡು, 'ನಿವೃತ್ತಿಯ ಅನಂತರ ಅಲ್ಲಿ ನೆಲೆಸಬೇಕೆಂದು, ಅದಕ್ಕೆ ಪೂರ್ವಭಾವಿಯಾಗಿ ಆಗಾಗ ಈ ಕಡೆ ಊರಿಗೆ ಬರುತ್ತಿದ್ದರು. ಅಲ್ಲದೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಕೆಲವು ಕೆಲಸಗಳಲ್ಲಿ ನಾನೂ ಅವರ ಜತೆಗಿರುತ್ತಿದ್ದ ಕಾರಣದಿಂದ ನನಗೆ ಅವರ ಸಾಮೀಪ್ಯ – ಸಾನ್ನಿಧ್ಯಗಳು ಅನೇಕ ಸಲ ಒದಗಿಬಂದುವು. ಹಾಗಾಗಿ ಅವರ ವಿದ್ಯಾರ್ಥಿಗಳಲ್ಲಿ ಇತರರಿಗಿಂತ ನಾನು ಹೆಚ್ಚು ಅದೃಷ್ಟವಂತ ಎಂದು ಸಂತೋಷಗೊಳ್ಳುತ್ತೇನೆ. ಒಂದು ಸಮ್ಮೇಳನಕ್ಕೆ ನಾನು ವಾರಣಾಸಿಗೆ ಹೋದಾಗ ನನ್ನನ್ನು ಅವರು ಬಹಳ ಜೋಪಾನವಾಗಿ ನೋಡಿಕೊಂಡ ಹಾಗೂ ಅವರ ಜತೆಯಲ್ಲಿಯೇ ವಾರಣಾಸಿ, ಅಲಹಾಬಾದಿನಲ್ಲಿ ಗಂಗಾಸ್ನಾನ ಇತ್ಯಾದಿಗಳನ್ನು ಮಾಡಿಸಿದ ಸಂದರ್ಭ ಮರೆಯಲು ಸಾಧ್ಯವಾಗದ ಅನುಭವ.

ಪ್ರೊ. ಮರಿಯಪ್ಪಭಟ್ಟರು ನಮ್ಮ ಪಾಲಿಗೆ 'ಮಾತಾಪಿತಾ ಗುರು ದೈವ' ಸ್ವರೂಪರು. ಮಾತೆಯ ಅಕ್ಕರೆ, ಪಿತನ ವಾತ್ಸಲ್ಯ, ಗುರುವಿನ ಅರಿವು, ದೈವದ ಕರುಣೆ ಎಲ್ಲವೂ ಅವರಲ್ಲೇ ಕೇಂದ್ರೀಕೃತವಾಗಿ ಅವೆಲ್ಲವೂ ಗಾಳಿಯಂತೆ, ಬೆಳಕಿನಂತೆ, ನಮ್ಮೆಡೆಗೆ ಹರಿದು ಬರುತ್ತಿದ್ದುವು. ಅವರನ್ನು ನೋಡಿ ಮಾತಾಡಿದಾಗಲೆಲ್ಲ ಒಂದೊಂದಿಂಚಿನಷ್ಟು ಹೆಚ್ಚು ಎತ್ತರವಾಗಿ ಬೆಳೆದಂತೆ ಭಾಸವಾಗಿ, ಹಿಂದೆ ಬರುವಾಗ ಗಾಳಿಯಲ್ಲಿ ನಡೆಯುವಂತೆ ನಡಿಗೆ ಹಗುರವಾಗಿ ತೋರುತ್ತಿತ್ತು.

ನಮ್ಮ ಬಾಲಿಶವಾದ ಅನೇಕ ವಿಚಾರಗಳನ್ನು, ಸಮಸ್ಯೆಗಳನ್ನು, ಅವರೆದುರು ಹೇಳಿಕೊಳ್ಳುವ ಸ್ವಾತಂತ್ರ್ಯ ನಮಗಿತ್ತು. ಆಗೆಲ್ಲ ಕನ್ನಡಿಯಂತೆ 'ನಮ್ಮತನ'ವನ್ನು ನಮಗೆ ತೋರಿಸಿಕೊಡುತ್ತಿದ್ದರು. ಭಾಷಾವಿಜ್ಞಾನಕ್ಕೆ ಸಂಬಂಧಿಸಿದಂತೆ ಗಹನ ವಿಚಾರಗಳನ್ನು ಅನೇಕ ಸಲ ಚರ್ಚಿಸುವಾಗ, ಹತ್ತಿರ ಕೂರಿಸಿಕೊಂಡು ಒಮ್ಮೊಮ್ಮೆ, 'ಈ ವಿಚಾರದಲ್ಲಿ ನಿಮ್ಮ ಸಲಹೆ ಕೇಳಬೇಕೆಂದಿದ್ದೆ' ಎಂದು ಹೇಳುತ್ತಿದ್ದರು. ಅವರು ಹೀಗೆನ್ನುವಾಗ, ಕಿರಿಯನಾದ ನನ್ನಲ್ಲಿ, ಹಿರಿಯರು, ಪೂಜ್ಯರು,

ಗುರುಗಳು 'ಸಲಹೆ ಕೇಳುತ್ತೇನೆ' ಎಂದು ಅಷ್ಟು ದೊಡ್ಡ ಮಾತಾಡಿದರೆಂದು ಮನಸ್ಸಿಗೆ ಕಸಿವಿಸಿಯಾಗುತ್ತಿತ್ತು. ಮಾನಸಿಕವಾಗಿ ನನ್ನ ಹೃದಯ, ದೃಷ್ಟಿಗಳು ಅವರ ಪಾದಮೂಲಕ್ಕೆ ಬಾಗಿ ಮತ್ತೆ ಉನ್ಮುಖವಾಗುತ್ತಿದ್ದ ಸಂದರ್ಭಗಳು ಅವೆಷ್ಟೋ.

ಇಲ್ಲಿ ಪೂಜ್ಯ ಮರಿಯಪ್ಪ ಭಟ್ಟರನ್ನು ನಾನು ಒಬ್ಬ ವಿದ್ಯಾರ್ಥಿಯ ನೋಟದಿಂದ ನೋಡುತ್ತೇನೆ. ಇದು ವೈಯಕ್ತಿಕವಾದರೂ, ಅನುಭವ ಸಾರ್ವತ್ರಿಕತೆ ಇದರಲ್ಲಿ ಇರಬಹುದು ಎಂದುಕೊಳ್ಳುತ್ತೇನೆ.

೧೯೫೧ರಲ್ಲಿ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕನ್ನಡ ಬಿ.ಎ. ಆನರ್ಸ್ ತರಗತಿಗಳನ್ನು ತೆರೆದರು. ಆಗಿನ ಇಂಟರ್‌ಮೀಡಿಯೆಟ್ ಮುಗಿಸಿ ಈ ತರಗತಿಗೆ ನೇರವಾಗಿ ಸೇರಬಹುದಿತ್ತು. ಆನರ್ಸ್ ಮುಗಿಸಿದ ಮರುವರ್ಷ ಅದೇ ಡಿಗ್ರಿ ಎಂ.ಎ. ಎಂದು ಪರಿವರ್ತಿತವಾಗಿ ದೊರಕುತ್ತಿತ್ತು. ಬಿ.ಎ. ಆಗಿ ಎಂ.ಎ. ಮಾಡುವುದಾದರೆ ಒಟ್ಟು ನಾಲ್ಕು ವರ್ಷ ಅಧ್ಯಯನ ಮಾಡಬೇಕಾಗುತ್ತಿತ್ತು. ಇದರಲ್ಲಾದರೆ ಮೂರೇ ವರ್ಷ ಎಂದಾಗ ಒಂದು ವರ್ಷ ಲಾಭವಾಗುತ್ತಿತ್ತು. ನಾನು ಮಡಿಕೇರಿ ಕಾಲೇಜಿನಲ್ಲಿ ಇಂಟರ್‌ಮೀಡಿಯೆಟ್ ಮುಗಿಸಿ, ಬಿ.ಎಸ್‌ಸಿ. ಅಗ್ರಿಕಲ್ಚರಲ್ ಮಾಡೋಣವೆಂದು ಸ್ವಲ್ಪ ಕಾಲ ಧಾರವಾಡದ ಅಗ್ರಿಕಲ್ಚರಲ್ ಕಾಲೇಜು ಸೇರಿ, ಅದನ್ನು ಕಾರಣಾಂತರಗಳಿಂದ ಬಿಟ್ಟು, ಮುಂದೆ ಏನು ಮಾಡಲಿ ಎಂಬ ಗೊತ್ತುಗುರಿಯಿಲ್ಲದೆ ತೊಳಲುತ್ತಿದ್ದೆ. ಆಗ ನನ್ನ ಸಹಪಾಠಿಯಾಗಿದ್ದ ಮಿತ್ರ ಪಿ.ಎಂ. ಗಣಪತಿ, ಸಸ್ಯಶಾಸ್ತ್ರ ವಿಭಾಗಕ್ಕೆ ಆನರ್ಸ್ ವಿದ್ಯಾರ್ಥಿಯಾಗಿ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿಗೆ ಸೇರಿದ್ದುದರಿಂದ ಕನ್ನಡ ಆನರ್ಸ್‌ನ ವಿಚಾರ ಆತನ ಕಾಗದದ ಮೂಲಕ ತಿಳಿದುಬಂತು. ಗುರುಗಳಾಗಿದ್ದ ಪ್ರೊ. ರಾಮಕೃಷ್ಣ ಉಡುಪರೂ ಪ್ರೋತ್ಸಾಹಿಸಿದರು. ಹೇಗೆ ಹೇಗೋ ಮಾಡಿ, ಪ್ರೆಸಿಡೆನ್ಸಿ ಕಾಲೇಜಿಗೆ ಕನ್ನಡ ಆನರ್ಸ್ ವಿದ್ಯಾರ್ಥಿಯಾಗಿ ೧೯೫೨ರಲ್ಲಿ ಸೇರಿದೆ. ಪ್ರೊ. ಎಂ.ಆರ್. ಶಾಸ್ತ್ರಿಗಳು, ಶ್ರೀ ಶಂಕರ ಕೆದಿಲಾಯರು, ಮತ್ತೆ ಕೆಲಕಾಲಾನಂತರ ಶ್ರೀ ಪಿ. ಸುಬ್ರಾಯ ಭಟ್ಟರು ಪ್ರೆಸಿಡೆನ್ಸಿ ಕಾಲೇಜಿನ ಕನ್ನಡ ಅಧ್ಯಾಪಕ ವೃಂದದಲ್ಲಿದ್ದರು. ವಾರದಲ್ಲಿ ಎರಡು ಗಂಟೆ ಯೂನಿವರ್ಸಿಟಿಯಲ್ಲಿ ನಮಗೆ ಪಾಠ. ಎರಡನೇ ತಂಡದವರಾದ ನಾವು ಮೂವರು ಅಂದರೆ, ಮಿತ್ರ ಸಂಜೀವ ಭಂಡಾರಿಯವರು, ಮಿತ್ರ ಮಹಂತಸ್ವಾಮಿಯವರು ಮತ್ತು ನಾನು ಯೂನಿವರ್ಸಿಟಿಗೆ ಹೋದೆವು. ಅಲ್ಲಿ ಕನ್ನಡ ವಿಭಾಗದ ಅಧ್ಯಾಪಕರಾಗಿದ್ದ ಪ್ರೊ. ಮರಿಯಪ್ಪ ಭಟ್ಟರು ಮತ್ತು ಎಂ. ಗೋವಿಂದರಾಯರು ನಮ್ಮನ್ನು ಬಹಳ ಅಕ್ಕರೆಯಿಂದ ಬರಮಾಡಿಕೊಂಡರು.

ಪ್ರೊ. ಮರಿಯಪ್ಪ ಭಟ್ಟರು ಕನ್ನಡದ ಮೊದಲ ಕೃತಿ ಕವಿರಾಜಮಾರ್ಗವನ್ನು ಪಾಠ ಮಾಡುತ್ತಿದ್ದರು. ಕವಿ ಕಾವ್ಯ ಪರಿಚಯದ ಸಂದರ್ಭದಲ್ಲಿ ಸಂಪಾದಕರು 'ಪ್ರತಿಯೊಬ್ಬ ಕವಿಯೂ ಮೊದಲ ನಾಂದೀಪದ್ಯವನ್ನು "ಶ್ರೀ"ಯೆಂಬ ಅಕ್ಷರದಿಂದ ಪ್ರಾರಂಭಿಸುತ್ತಾನೆ'ಂದು ಹೇಳಿದ್ದನ್ನು ಅವರು ಪ್ರತಿಪಾದಿಸುತ್ತಿದ್ದರು. ಆ ಹಿಂದೆ ನಾನು ಪೊನ್ನನ ಶಾಂತಿಪುರಾಣವನ್ನು ನೋಡಿದ್ದೆ. "ಅದರ ನಾಂದೀಪದ್ಯದಲ್ಲಿ ಮೊದಲಿಗೆ 'ಶ್ರೀ' ಎಂಬ ಅಕ್ಷರ ಇಲ್ಲವಲ್ಲ ಸಾರ್, 'ಪರಮಶ್ರೀ' ಎಂದಿದೆ" ಎಂದುಬಿಟ್ಟೆ. ಅವರಿಗೆ ಆಶ್ಚರ್ಯ, ಸಂತೋಷ ಎರಡೂ ಆಯಿತು. ಪ್ರಶ್ನಿಸಿದಾಗ

ನನಗೆ ಸಂದೇಹ ಬರತೊಡಗಿತು. ಮುಂದಿನ ಸಲ ಹೋದಾಗ ಅವರು ಆ ಪುಸ್ತಕ ತರಿಸಿ ಪರಿಶೀಲಿಸಿಟ್ಟಿದ್ದರು. ನಾನೂ ಅದನ್ನು ಮತ್ತೊಮ್ಮೆ ನೋಡಿ, ಧೈರ್ಯಗೊಂಡಿದ್ದೆ. "ಇಲ್ಲಿ 'ಪರಮ' ಎಂಬ ಪದದ ಮೇಲೆ 'ಶ್ರೀ' ಎಂಬ ಅಕ್ಷರವಾದರೂ ಇದೆ. ಭರತೇಶ ವೈಭವದಲ್ಲಿ ನಾಂದೀಪದ್ಯದಲ್ಲಿ ಅದೂ ಇಲ್ಲ, 'ಪರಮ ಪರಂಜ್ಯೋತಿ.....' ಇತ್ಯಾದಿಯಾಗಿದೆ"ಯೆಂದೂ ತೊದಲಿದೆ. ಅವರಿಗೆ ಹಿಡಿಸಲಾರದಷ್ಟು ಸಂತೋಷವಾಗಿ, ತುಂಬ ಮೆಚ್ಚಿಕೆಯ ಮಾತಾಡಿದರು. ಇದನ್ನು ಹೇಳಿಕೊಳ್ಳಲು ಈಗ ಸಂಕೋಚವಾದರೂ, ಅಂದು ನನಗೆ ಅವರಾಡಿದ ಪ್ರೋತ್ಸಾಹಕರ ಮಾತುಗಳನ್ನು ನೆನೆದರೆ ಎಷ್ಟೋ ಸಂತೋಷವಾಗುತ್ತದೆ. ವಿದ್ಯಾರ್ಥಿಗಳಿಗೆ ಯಾವ ರೀತಿ ಪ್ರೇರೇಪಣೆ ಕೊಡಬೇಕು. ಅವರ ಸಣ್ಣ ಕೆಲಸವನ್ನೂ ಮೆಚ್ಚಿಕೊಂಡರೆ ಅವರಿಗೆ ಅದು ಎಷ್ಟು ಶಕ್ತಿಯನ್ನೊದಗಿಸುತ್ತದೆ – ಎಂಬುದನ್ನು ಅಂದಿನ ನನ್ನ ಅನುಭವದಿಂದ ಕಂಡುಕೊಂಡಿದ್ದೇನೆ. ನನ್ನ ಅಧ್ಯಾಪಕ ವೃತ್ತಿಯಲ್ಲೂ ಅವರ ಆದರ್ಶವನ್ನು ಪಾಲಿಸಿದ್ದೇನೆ.

ಆಮೇಲೆ, ಕಾಲೇಜಿನ ಪಾಠಗಳಿಲ್ಲದ ಹೊತ್ತಿನಲ್ಲೆಲ್ಲ ಅವರಲ್ಲಿಗೆ ಹೋಗುತ್ತಿದ್ದೆ. ಕೆಲಸವೇನೂ ಇಲ್ಲದೆಯೂ ಅವರಲ್ಲಿಗೆ ನಾನು ಯಾಕೆ ಹೋಗುತ್ತಿದ್ದೆನೆಂದು ನನಗೆ ಈಗ ಅರಿವಾಗುವುದಿಲ್ಲ. ಅವರ ಅಮೂಲ್ಯ ಸಮಯವನ್ನು ಹಾಳುಮಾಡುತ್ತಿದ್ದೇನೆಂಬ ಅರಿವೇ ನನ್ನ ಮುಗ್ಧ ಮನಸ್ಸಿಗೆ ಅಂದು ಬರುತ್ತಿರಲಿಲ್ಲ. ಹೋಗಿ ಅವರ ಕೋಣೆಯ ಬಾಗಿಲ ಮುಂದೆ ಸುಳಿದಾಡಿದೊಡನೆ 'ಬನ್ನಿ, ಬನ್ನಿ' ಎಂದು ಕರೆದು 'ಕೂತುಕೊಳ್ಳಿ' ಎಂದು ಹೇಳುತ್ತಿದ್ದರು. ವಿದ್ಯಾರ್ಥಿಗಳಿಗೆ ಸಲಿಗೆ ಕೊಡಬಾರದು. ಸ್ವಲ್ಪ ದೂರವೇ ಅವರನ್ನು ಇಡಬೇಕು – ಎಂಬುದು ಈಗಲೂ ಕೆಲವು ಉಪಾಧ್ಯಾಯರಲ್ಲಿರುವ ಧೋರಣೆ. ತರಗತಿಯಲ್ಲಿ ಹೊರತು, ಅವರ ಕೋಣೆಯಲ್ಲಿ ಪ್ರೊಫೆಸರರೆದುರು ಕುಳಿತುಕೊಳ್ಳುವುದು ಅವರಿಗೆ ಅಗೌರವವೆಂಬ ತಿಳಿವಳಿಕೆಗೆ ಅವರ ದೊಡ್ಡ ಮನಸ್ಸಿನಲ್ಲಿ ಸ್ವಲ್ಪವೂ ಎಡೆಯಿಲ್ಲ. ಪ್ರೀತಿ – ಸೌಜನ್ಯದ ಮೂರ್ತಿಯಾಗಿದ್ದ ಅವರ ಸರ್ವಸಮನ್ವಯ ದೃಷ್ಟಿಗೆ, ಪ್ರಪಂಚದ ಒಂದು ಹುಲ್ಲುಕಡ್ಡಿಯೂ ಅರ್ಥಪೂರ್ಣ; ಅದಕ್ಕದಕ್ಕಿರುವ ಬೆಲೆ ಅದಕ್ಕದಕ್ಕಿದೆಯೆಂಬ ವಿಶಾಲ ಹೃದಯಕ್ಕೆ, ಅಲ್ಪಬುದ್ಧಿಯ, ಸಂಕುಚಿತ ಅಹಂನ ರೇಖೆ ಕೂಡ ಕಾಣಿಸದು. ಹಾಗೆ ನಿಂತಿರಲು ನಮಗೆ ಅವಕಾಶ ಕೊಡದೆ ಕೂತುಕೊಳಿಸಿ, ಆತ್ಮೀಯ ಮಾತಾಡಿ, ತಾವು ಮಾಡುತ್ತಿದ್ದ ಕೆಲಸದ ಪರಿಚಯ ಮಾಡಿ, ಅದರಲ್ಲಿಯೂ ನಮ್ಮನ್ನು ಸೇರಿಸಿ ಚರ್ಚಿಸಿ ಮತ್ತೆ ಕಳುಹಿಸಿಕೊಡುತ್ತಿದ್ದರು.

ಅವರ ಕೋಣೆಗೆ ಹಲವು ದೊಡ್ಡ ಮನುಷ್ಯರು ಬರುತ್ತಿದ್ದರು. ಅವರಿಗೂ ನಮ್ಮ ಪರಿಚಯ ಮಾಡಿಕೊಡುತ್ತಿದ್ದರು. ಇಂಥವರಲ್ಲಿ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತವರು ಆಗ ಅಲ್ಲಿ ತಮಿಳು ಪ್ರೊಫೆಸರರಾಗಿದ್ದ ಆರ್.ಪಿ. ಸೇತು ಪಿಳ್ಳೆಯವರು. ಹೀಗೆ ದೊಡ್ಡವರು ಸೇರಿದಾಗ ನಾವು ಕಿರಿಯವರು, ಬೇರೆ ಎಂಬ ಹಿಂಜರಿಯುವಿಕೆ ಬರಬಾರದೆಂದು ಪ್ರೊ. ಭಟ್ಟರು ಎಚ್ಚರಿಕೆಯಿಂದ ನಮ್ಮನ್ನೂ ಮಾತಿನಲ್ಲಿ ಒಂದಾಗಿಸುತ್ತಿದ್ದರು. ಮುಂದೆ ಆನರ್ಸ್ ಮುಗಿದು ಉದ್ಯೋಗದ ಬೇಟೆ ಆರಂಭವಾದ ಸಂದರ್ಭ. ಆಗ ಉಬರಡ್ಕಕ್ಕೆ ತಮ್ಮ ಆಸ್ತಿಯ ಮೇಲ್ವಿಚಾರಕ್ಕೆಂದು ಬಂದವರು ನನಗೆ ಡಾ॥ ವೆಂಕಪ್ಪಯ್ಯನವರ ಮೂಲಕ ಹೇಳಿ ಕಳುಹಿಸಿ, ಬರಿಸಿ ಅಣ್ಣಾಮಲೈ ವಿಶ್ವ ವಿದ್ಯಾನಿಲಯದಲ್ಲಿ ಲೆಕ್ಚರರ್ ಹುದ್ದೆಗಾಗಿ ಪ್ರಕಟಣೆ ಬಂದಿದೆ.

ಕೂಡಲೇ ಅಲ್ಲಿಗೆ ಅರ್ಜಿ ಹಾಕುವಂತೆ ಸೂಚಿಸಿದರು. ಮುಂದೆ ಆರ್.ಪಿ. ಸೇತು ಪಿಳ್ಳೆಯವರ ಮೂಲಕ ಪ್ರೊ. ಭಟ್ಟರು ಅಣ್ಣಾಮಲೈ ವಿಶ್ವವಿದ್ಯಾನಿಲಯದಿಂದ ನೇರವಾಗಿ, ಸಂದರ್ಶನ ವಿಲ್ಲದೆಯೇ, ನನಗೆ ಕೆಲಸದ ಆದೇಶ ಬರುವುದಕ್ಕೆ ಕಾರಣಕರ್ತರಾಗಿ, ನನ್ನ ಅಭ್ಯುದಯದ ಬಾಗಿಲನ್ನು ತೆರೆದರು.

ನೆನಪುಗಳು ತಾಕಲಾಡುತ್ತವೆ; ಒಂದಲ್ಲ, ಎರಡಲ್ಲ, ಹಲವಾರು. ಮದ್ರಾಸು ವಿಶ್ವವಿದ್ಯಾನಿಲಯದಲ್ಲಿ ಲೆಕ್ಚರರ್ ಹುದ್ದೆ ಖಾಲಿಬಿದ್ದಾಗ ನಾನೂ ಅರ್ಜಿಹಾಕಿದ್ದೆ. ಉದ್ಯೋಗ ಸಿಗುವುದು ದುರ್ಲಭವಾಗಿದ್ದ ಕಾಲ ಇಂದಿನಂತೆ ಅಂದೂ ಇತ್ತು. ಕಂಡಲ್ಲಿಗೆಲ್ಲ ಅರ್ಹತೆ – ಅನುಭವ ಇರಲಿ, ಇಲ್ಲದಿರಲಿ, ಅಧೀರತೆಯಿಂದ ಅರ್ಜಿ ಹಾಕುವುದು ಇದ್ದದ್ದೇ. ಈ ಸಂದರ್ಭದಲ್ಲಿ ಅದು ನನಗೆ ಸಿಗಲಾರದೆಂದು ಸ್ಪಷ್ಟವಾಗಿ, ಒಂದಿಷ್ಟೂ ನೋವಾಗದಂತೆ ತಿಳಿಸಿದರು. ಅಲ್ಲದೆ ಬೇರೆ ಕೆಲವು ಸಂದರ್ಶನಗಳಲ್ಲೂ ಅವರು ಆಯ್ಕೆ ಸಮಿತಿಯಲ್ಲಿದ್ದು, ನಾನು ಅಭ್ಯರ್ಥಿಯಾಗಿದ್ದ ಸಂದರ್ಭಗಳಿದ್ದುವು. ಯಾವುದರಲ್ಲೂ ನಾನು ಆಯ್ಕೆಯಾಗುವ ಸಾಧ್ಯತೆಯಿರಲಿಲ್ಲ. ಆ ನೆಲೆಯಲ್ಲಿ ಯಾರದೇ ಪಕ್ಷ ವಹಿಸಿಕೊಳ್ಳದೆ ಇದ್ದ ಅವರ ನಿಸ್ಪೃಹ ಆದರ್ಶಕ್ಕೆ ಇದಕ್ಕಿಂತ ಒಳ್ಳೆ ಉದಾಹರಣೆ ಬೇಕಿಲ್ಲ. ಆಮೇಲೂ ಮದ್ರಾಸು ವಿಶ್ವವಿದ್ಯಾನಿಲಯದಲ್ಲಿ ಒಂದು ಲೆಕ್ಚರರ್ ಹುದ್ದೆಯ ಪ್ರಕಟಣೆ ಬಂದಾಗ ನಾನು ಅಣ್ಣಾಮಲೈ ವಿಶ್ವವಿದ್ಯಾನಿಲಯ ದಲ್ಲಿದ್ದುಕೊಂಡೇ ಅರ್ಜಿ ಹಾಕಬಹುದೇ ಎಂದು ಅವರಿಗೆ ಬರೆದೆ. ಅವರು ಬೇಡವೆಂದೇ ತಿಳಿಸಿದರು. ನನಗೆ ಅವರ ಸಾಮೀಪ್ಯ ದೊರಕಬಹುದೆಂಬ ಆಕರ್ಷಣೆ. ಅವರು ನನಗೆ ಒಂದೇ ಕಡೆ ನೆಲೆಯಾಗಿದ್ದು, ನಮ್ಮ ಸ್ಥಾನವನ್ನು ಭದ್ರಪಡಿಸಿ, ನಮ್ಮ ರಂಗದಲ್ಲಿ ಸಾಕಷ್ಟು ಬೆಳೆಯಬೇಕು – ಅದೇ ಒಳ್ಳೆಯದೆಂದು ಉಪದೇಶಿಸಿದರು. ಆಗ ನಮ್ಮನ್ನು ಕಂಡಾಗಲೆಲ್ಲ ಅವರು ಹೇಳುತ್ತಿದ್ದುದು 'ಸಂಶೋಧನಾ ಡಿಗ್ರಿ ಪಿಎಚ್.ಡಿ. ಮೊದಲು ಮಾಡಿಕೊಳ್ಳಿ; ನಮ್ಮ ಕಾಲದಲ್ಲಿ ಎಂ.ಎ. ದೊಡ್ಡ ಡಿಗ್ರಿಯಾಗಿತ್ತು. ಈಗ ಹಾಗಲ್ಲ. ಮುಂದೆ ಒಳ್ಳೆಯದಾಗುತ್ತದೆ' – ಎಂದು. ಹಾಗೆ ನಾನು ಎಂ.ಲಿಟ್ ಮತ್ತು ಪಿಹೆಚ್.ಡಿ. ಪದವಿಗಳನ್ನು ಅಣ್ಣಾಮಲೈಯಲ್ಲಿ ಮಾಡಿಕೊಂಡಾಗ, ಅವರಿಗೆ ತಮ್ಮ ಮಕ್ಕಳ ಉನ್ನತಿಯನ್ನು ಕಂಡಷ್ಟೇ ಹರ್ಷವಾಯ್ತೆಂಬುದರಲ್ಲಿ ನನಗೆ ಎಳ್ಳಷ್ಟು ಸಂಶಯವಿಲ್ಲ. ಅವರ ಮಾತು, ಅಭಿಪ್ರಾಯ, ದೂರದೃಷ್ಟಿಯೆಲ್ಲ ನೂರಕ್ಕೆ ನೂರು ನಿಜವೆಂಬುದು ನನ್ನ ಸಂಪೂರ್ಣ ಅನುಭವಕ್ಕೆ ಬಂದಿದೆ. ಕೊನೆಗೆ ಮದ್ರಾಸು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕ ಹುದ್ದೆಗೆ ಎರಡನೆ ಸಲವೂ ಪ್ರಕಟಣೆ ಬಂದಾಗ ಸಂದಿಗ್ಧತೆ ನನ್ನನ್ನು ಕಾಡಿತು. ಈ ಸಲ ಅರ್ಜಿ ಹಾಕಲು ನನಗೆ ಒಪ್ಪಿಗೆ ಕೊಟ್ಟರು. ಆಯ್ಕೆಯ ಸಂದರ್ಶನ ಮುಗಿದ ಬಳಿಕ ಅಣ್ಣಾಮಲೈ ನಗರಕ್ಕೆ ಅವರ ಆಶೀರ್ವಾದಪೂರ್ವಕ ಕಾಗದ ಬಂತು. ಸಮಿತಿಯವರೆಲ್ಲರೂ ಒಮ್ಮತದಿಂದ ನನ್ನನ್ನು ಆಯ್ಕೆ ಮಾಡಿದ್ದಾರೆಂದು ತಿಳಿಸಿ ಅದಕ್ಕೆ ಅಭಿನಂದನೆಯನ್ನೂ ಬರೆದಿದ್ದರು.

ಆಮೇಲೆ ರಜೆಯಲ್ಲಿ ಊರಿಗೆ ಬಂದವನು ಅವರನ್ನು ನೋಡಲು ಉಬರಡ್ಕದ ಅವರ ಮನೆಗೆ ಹೋದಾಗ, ಅವರ ಆದರ, ಪ್ರೀತಿ, ವಾತ್ಸಲ್ಯಗಳ ಅಮೃತವರ್ಷದಲ್ಲಿ ಆರ್ದ್ರಗೊಂಡೆ. ಆಗ ಅವರ ಸಹಧರ್ಮಿಣಿ ಮದ್ರಾಸು ವಿಶ್ವವಿದ್ಯಾನಿಲಯದಲ್ಲಿ ನನಗೆ ಪ್ರೊಫೆಸರ್ ಹುದ್ದೆ

ದೊರಕಿ ಗುರುವಿನ ಸ್ಥಾನವನ್ನೇ ಪಡೆಯುವಂತಾದುದಕ್ಕೆ ತಮ್ಮ ಕಣ್ಣು, ಮುಖಗಳಲ್ಲಿ ಸಂತೋಷ ಚಿಮ್ಮಿಸುತ್ತ ಆಶೀರ್ವಾದಪೂರ್ವಕ ಹೇಳಿದ ಮಾತುಗಳು ಗುರುವಿನ ಶಿಷ್ಯವಾತ್ಸಲ್ಯಕ್ಕೆ ಸರಿ – ಮಿಗಿಲಾದ ವರವಾಗಿ, ನನ್ನನ್ನು ಆನಂದಪುಲಕಿತನನ್ನಾಗಿಸಿದುವಲ್ಲದೆ, ಇಂದಿಗೂ ಅಂತರಂಗದಲ್ಲಿ ಅವು ಗುಂಯ್ಗುಡುತ್ತಿವೆ. ಪರಮ ವಾತ್ಸಲ್ಯದ ಮಾತೃದೇವಿಯ ಸಾಕ್ಷಾದ್ರೂಪವಾಗಿ ಕಂಡ ಅವರಿಗೆ ಮನಸ್ಸಿನಲ್ಲೇ ನಮಸ್ಕರಿಸಿದೆ. ಆ ಸಂದರ್ಭವನ್ನು ನೆನೆದಾಗಲೆಲ್ಲ ನನ್ನ ಹೃದಯ ವಿಕಸಿಸುತ್ತದೆ. ಇಂದು ನನ್ನ ಆ ಗುರು ದಂಪತಿಗಳನ್ನು ಪ್ರತ್ಯಕ್ಷ ನೋಡುವಂತಿಲ್ಲ ಎಂಬುದನ್ನು ನೆನೆದಾಗ, ನನ್ನ ಪತ್ನಿಯನ್ನೂ ಕಳಕೊಂಡು ಒಂಟಿಯಾದ ನನಗೆ, ನೆರಳೇ ಇಲ್ಲದಂತಾಯ್ತೇ ಎಂಬ ದುಃಖದ ಬೇಗುದಿಯಲ್ಲಿ ಕಂಗೆಡುತ್ತೇನೆ.

ನಮ್ಮ ಕನ್ನಡ ವಿಭಾಗದ ಕೆಲಸಗಳಿಗಾಗಿ, ಮರಿಯಪ್ಪ ಭಟ್ಟರು ವರ್ಷಕ್ಕೆ ಎರಡು ಸಲವಾದರೂ ಮದ್ರಾಸಿಗೆ ಬರಬೇಕಾಗುತ್ತಿತ್ತು. ನಡುನಡುವೆ ಸರಕಾರದ ಕೆಲಸಕ್ಕೋಸ್ಕರವಾಗಿಯೂ ಬರುವುದಿತ್ತು. ಮೊದಮೊದಲು ಒಬ್ಬರೇ ಊರಿಂದ ಬರುತ್ತಿದ್ದರು. ಆರೋಗ್ಯ ಕುಂದಿದ ಮೇಲೆ ಪತ್ನೀಸಮೇತರಾಗಿಯೇ ಬರುತ್ತಿದ್ದರು. ಮದ್ರಾಸು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಪ್ರೊಫೆಸರ್ ಹುದ್ದೆಗೆ ನೇಮಕಗೊಂಡ ನಾನು ಆ ಹೊಸ ಹುದ್ದೆಗೆ ಸೇರಲು ಅವರು ಮದ್ರಾಸಿಗೆ ಬಂದಿರುವ ಸಮಯವನ್ನೇ ಕಾದಿದ್ದೆ. ೧೯೭೬ನೇ ಆಗಸ್ಟ್ ೨೦ನೇ ದಿನಾಂಕ ಶುಕ್ರವಾರ ನಾನು ಕೆಲಸಕ್ಕೆ ಸೇರುವ ದಿನ. ನಾನು ತಂಗಿದ್ದ ಹೋಟೆಲಿನಿಂದ ಬೆಳಗ್ಗೆ ಫೋನ್ ಮಾಡಿದ ಕೂಡಲೇ, ಸಂತೋಷದಿಂದ 'ವೆಲ್‌ಕಂ ಟು ಮಡ್ರಾಸ್' ಎಂದು ಹಾರ್ದಿಕ ಸ್ವಾಗತ ಹೇಳಿದರು. ಮನೆಗೆ ಹೋಗಿ ಮೊದಲು ಅವರ ಪಾದಗಳಿಗೆ ನಮಸ್ಕರಿಸಿದಾಗ, 'ಉತ್ತರೋತ್ತರ'ವೆಂದು ಹೇಳುತ್ತಾ ಹಿಡಿದೆತ್ತಿದರು. ಸಂತೋಷದ ಆರ್ದ್ರ ಕಣ್ಣುಗಳಿಂದ ನೋಡಿದರು. ಹಿತವಚನ ಹೇಳಿ ಹೇಗೆ ಹೇಗೆ ನಡೆದುಕೊಳ್ಳಬೇಕೆಂದು ಮಾರ್ಗದರ್ಶನ ಮಾಡಿದರು. ಮರುದಿನ ವಿಭಾಗಕ್ಕೆ ಬಂದು ಅವರ ಸ್ಥಾನದಲ್ಲಿ ಕುಳಿತ ನನ್ನನ್ನು ಕಣ್ತುಂಬ ನೋಡಿ ಹರಸಿದರು. ತುಂಬ ಮಾತಾಡಿದರು. ನಾನು ಆಗಿನ ಕನ್ನಡ ಎಂ.ಎ. ವಿದ್ಯಾರ್ಥಿಗಳನ್ನು ಕರೆದು ಅವರಿಗೆ ಪರಿಚಯ ಮಾಡಿಸಿ, ವಿದ್ಯಾರ್ಥಿಗಳನ್ನುದ್ದೇಶಿಸಿ, 'ನಮ್ಮ ಗುರುಪಿತಾಮಹರು, ಅವರ ಆಶೀರ್ವಾದ ಪಡೆದುಕೊಳ್ಳಿ' ಎಂದು ಹೇಳಿದೆ. ಅವರೆಲ್ಲ ವಂದಿಸಿ, ಮುಗ್ಧಹಾಸದಿಂದ, ಪ್ರೊ. ಭಟ್ಟರ ಪರಿಚಯವಾದ ಹಿಗ್ಗಿನಿಂದ ಮಾತುಗಳನ್ನು ಆಲಿಸುತ್ತಿದ್ದರು.

ಪ್ರೊ. ಮರಿಯಪ್ಪ ಭಟ್ಟರು ಆರೋಗ್ಯವಂತರಾಗಿದ್ದಾಗ, ಊರಿಂದ ಮದರಾಸಿಗೆ ಬಂದ ಸಂದರ್ಭಗಳಲ್ಲಿ ಅವರ ಮನೆಯಿಂದ ಅರ್ಧ ಮೈಲು ದೂರವಿದ್ದ ನಮ್ಮ ಮನೆಗೆ ಒಮ್ಮೊಮ್ಮೆ ಒಬ್ಬರೇ ಬರುತ್ತಿದ್ದರು. ಬರುವಾಗ ಊರಿಂದ ತಮ್ಮ ಮಕ್ಕಳಿಗಾಗಿ ತಂದಿದ್ದ ಏನಾದರೂ ತರಕಾರಿ, ಬಾಳೆಹಣ್ಣು ಮುಂತಾದುವನ್ನು ನಮಗೂ ತಂದುಕೊಡುತ್ತಿದ್ದರು. ನಾವೆಲ್ಲ ಸುತ್ತ ಕುಳಿತುಕೊಂಡು, ಅವರ ಮಾತನ್ನು ಕೇಳುವ ಅಪೂರ್ವ ಸಂದರ್ಭಗಳು ನಮಗೆ ಎಷ್ಟೋ ಸಲ ಒದಗುತ್ತಿದ್ದುವು. ಮಕ್ಕಳ ಯೋಗಕ್ಷೇಮ ಕೇಳುತ್ತಾ ನಗು ಮಾತಾಡುತ್ತಾ ನಮ್ಮನ್ನು ಸಂತೋಷಪಡಿಸುತ್ತಿದ್ದರು. ತಾವೂ ಆನಂದಪಡುತ್ತಿದ್ದರು. ತಮ್ಮ ಮನೆಯಲ್ಲಿ ಅವರು ನನಗೆ

ಊಟ ಮಾಡಿಸಿದ್ದು. ಕಾಫಿ ತಿಂಡಿ ಕೊಟ್ಟು ಉಪಚರಿಸಿದ್ದು ಎಷ್ಟು ಸಲವೆಂದು ಹೇಳಲು ಸಾಧ್ಯವಿಲ್ಲ.

ಈ ಕುರಿತು ಮಾತನಾಡಿದಾಗಲೆಲ್ಲ, ಒಂದು ಸಂದರ್ಭದಲ್ಲಿ ಅವರು ಯು.ಜಿ.ಸಿ.ಯ ತಜ್ಞ ಸಮಿತಿಯ ಸದಸ್ಯರಾಗಿ ಆಗ ನಾನು ಇದ್ದ ಅಣ್ಣಾಮಲೈ ವಿಶ್ವವಿದ್ಯಾನಿಲಯದ ಭಾಷಾ ವಿಜ್ಞಾನ ವಿಭಾಗಕ್ಕೆ ಬಂದಿದ್ದಾಗ ನಡೆದುದನ್ನು ನನ್ನ ಕೊನೆಯ ಮಗಳು ನೆನಪು ಮಾಡಿಕೊಳ್ಳುತ್ತಾಳೆ. ಅದೇ ದಿನ ವಿಶ್ವವಿದ್ಯಾನಿಲಯದಲ್ಲಿ ಬೇರೊಂದು ದೊಡ್ಡ ಕಾರ್ಯಕ್ರಮವಿದ್ದು ಅತಿಥಿ ಗೃಹದಲ್ಲಿ ತಂಗಲು ಸ್ಥಳಾವಕಾಶವಿಲ್ಲದ ಪರಿಸ್ಥಿತಿ ಉಂಟಾಗಿತ್ತು. ಸಮಿತಿಯ ಸದಸ್ಯರನ್ನು ವಿಭಾಗದ ನಾವು ಒಬ್ಬೊಬ್ಬರು ನಮ್ಮ ನಮ್ಮ ಮನೆಯಲ್ಲಿ ನೋಡಿಕೊಳ್ಳುವುದೆಂದು ನಿಶ್ಚಯ ಮಾಡಿದ್ದೆವು. ಹಾಗೆ ಪ್ರೊ. ಭಟ್ಟರು ನಮ್ಮ ಮನೆಯಲ್ಲಿ ತಂಗುವ ಅನಿವಾರ್ಯತೆಯೊದಗಿತು. ಅವರು ಮಧ್ಯಾಹ್ನದ ವಿಶ್ರಾಂತಿಗಾಗಿ ಸ್ವಲ್ಪ ಹೊತ್ತು ಮಲಗಿಕೊಂಡಿದ್ದರು. ಈ ನಾಲ್ಕೈದು ವರ್ಷದ ತುಂಟ ಮಗಳು ನಾನು ಸ್ವಲ್ಪ ದೂರ ಹೋಗಿದ್ದ ಸಮಯ, ಬೆಕ್ಕಿನ ಕಳ್ಳ ಹೆಜ್ಜೆಯಿಂದ ಅವರ ಮಂಚದ ಬಳಿ ಹೋಗಿ ಮೆಲ್ಲ ಅವರ ಕಿವಿಗೆ ಬೆರಳಿಟ್ಟು ಆಡಿಸಿಬಿಟ್ಟಳು. ನನಗೂ ನನ್ನ ಹೆಂಡತಿಗೂ ಅವರ ವಿಶ್ರಾಂತಿ ಭಂಗವಾಯ್ತೆಂದು ತುಂಬ ಬೇಸರವಾಯ್ತು. ಅವರು ನನಗೆ ಸಮಾಧಾನ ಹೇಳಿ, ಕೊಂಡಾಟದಿಂದ ಅವಳನ್ನೆತ್ತಿ ತೊಡೆಯ ಮೇಲೆ ಕೂರಿಸಿ ಮುದ್ದಾಡಿದರು. ತಮ್ಮ ಮೊಮ್ಮಕ್ಕಳ ಆಟ, ತುಂಟತನಗಳಿಂದ ಆನಂದಿತರಾಗುತ್ತಿದ್ದಂತೆ, ಒಂದು ಕ್ಷಣ ಸಂತೋಷಭರಿತರಾದರು.

ಹಿಂದೆ ಹೇಳಿದ್ದಂತೆ ಮದ್ರಾಸಿನಲ್ಲಿ ನಮ್ಮ ಮನೆಗೆ ಬಂದು, ಎಷ್ಟೋ ಮಾತಾಡಿ, ಮನಸಾರೆ ನಕ್ಕು, ನಗಿಸಿ, ಮತ್ತೆ ಸ್ವಲ್ಪ ಹೊತ್ತಿನಲ್ಲಿ ಎದ್ದು ಹೊರಟು, ನನ್ನ ಮಡದಿ ಮಕ್ಕಳಿಗೆಲ್ಲ ಹೋಗಿ ಬರುತ್ತೇನೆಂದು ಹೇಳಿ ಮೆಟ್ಟಿಲಿಳಿಯುತ್ತಿದ್ದರು. ಎರಡು ಮಹಡಿಗಳನ್ನಿಳಿದು, ನಾನೂ ಅವರೂ ಸ್ವಲ್ಪ ದೂರ ನಡೆದು, ಮಧ್ಯದಲ್ಲಿ ಅವರು ನಿಂತು, 'ನೀವು ನಿಮ್ಮ ಮನೆಗೆ ಹೋಗಿ ಇನ್ನು; ನಾನು ಹೋಗುತ್ತೇನೆ' ಎನ್ನುತ್ತಿದ್ದರು. ಆಗ ನಾನು, 'ಇಲ್ಲ ಸಾರ್, ಇನ್ನು ಸ್ವಲ್ಪ ದೂರ ಬರುತ್ತೇನೆ' ಎಂದುಕೊಂಡು ಮಾತಾಡುತ್ತ ಜತೆಜತೆಯೇ ಸಾಗಿ ಅವರ ಮನೆಯ ಗೇಟಿನವರೆಗೆ ಹೋಗಿ ಹಿಂದೆ ಬರುತ್ತಿದ್ದೆ. ಬರುವಾಗ ಹೇಗಿರುತ್ತಿದ್ದೆನೆಂದು ಹಿಂದೆಯೇ ಹೇಳಿದ್ದೇನೆ. ಮನೆಗೆ ಬಂದಾಗ, ನನ್ನ ಮಡದಿ ಮಕ್ಕಳೆಲ್ಲ ಏನೋ ಒಂದು ಲವಲವಿಕೆಯಿಂದ, ಗೆಲವಿನಿಂದ, ಅವರ ಮಾತು ನಗುವನ್ನೇ ನೆನೆಯುತ್ತಾ, ಆಡುತ್ತಾ ಇರುತ್ತಿದ್ದರು. ಅಂತಹ ನನ್ನ ಪೂಜ್ಯ ಗುರುಗಳು ದಿವಂಗತರಾದುದನ್ನು ತಿಳಿದ ನಾನು, ಕೊನೆಯ ಬಾರಿಗೆ ಕಳುಹಿಸಿಕೊಡುವ ಬಂಧುವರ್ಗವನ್ನು ಹಿಂಬಾಲಿಸಿ ಹೋಗಿ ಹಿಂದೆ ಬರುತ್ತಿದ್ದಾಗ, ಕವಿ ರನ್ನ ಗದಾಯುದ್ಧ ಕಾವ್ಯದಲ್ಲಿ ಬರೆದ ಒಂದು ಪದ್ಯ ನನ್ನ ಮನಸ್ಸಿನಲ್ಲಿ ಸುಳಿಯುತ್ತಿತ್ತು. ಕರ್ಣನನ್ನು ಕಳಕೊಂಡ ದುರ್ಯೋಧನ 'ಎನಗಿಂದು ಮನೆ ಶೂನ್ಯಂ, ಮನ ಶೂನ್ಯಂ, ಸಕಲಾವನಿ ಶೂನ್ಯಂ' ಎಂದು ವಿಲಪಿಸುತ್ತಾನೆ. ಆ ಸಂದರ್ಭ ಬೇರಾದರೂ, ಪರಿಣಾಮ ಒಂದೇ ಆಗಿ ನಾನು ಭಾರವಾಗಿದ್ದೆ; ನಿಧಾನವಾಗಿ ಹಿಂದೆ ಬಂದು ವಿಷಣ್ಣವದನನಾಗಿ ನನ್ನ ಮನೆಯನ್ನು ಸೇರಿಕೊಂಡೆ.

ಕೊನೆಕೊನೆಗೆ ಯೂನಿವರ್ಸಿಟಿಯ ನಮ್ಮ ವಿಭಾಗದ ಸಭೆಗಳಿಗೆ ಒಬ್ಬಂಟಿಯಾಗಿ ಬರಲು

ಅವರಿಗೆ ಕಷ್ಟವಾಗುತ್ತಿದ್ದುದರಿಂದ ನಾನೇ ಜತೆಯಲ್ಲಿ ಕರೆದುಕೊಂಡು ಬಂದು, ಪುನಃ ಕರೆದುಕೊಂಡು ಹೋಗಿ, ನಾನಾಗಲೀ, ಶ್ರೀಕೃಷ್ಣ ಭಟ್ಟರಾಗಲೀ ಅವರ ಮನೆಗೆ ಬಿಡುತ್ತಿದ್ದೆವು. ರಿಕ್ಷಾ ಅಥವಾ ಟ್ಯಾಕ್ಸಿಯ ಬಾಡಿಗೆಯನ್ನು ನೀವು ಕೊಡುವುದು ಬೇಡವೆಂದರೂ ಅವರು ಬಿಡುತ್ತಿರಲಿಲ್ಲ. 'ನಮಗೆ ಟಿ.ಎ. ಸಿಗುವಾಗ ನೀವೇಕೆ ಕೊಡಬೇಕು? ನಿಮ್ಮ ಸ್ವಂತ ವಾಹನದಲ್ಲಿ ಕರೆದುಕೊಂಡು ಹೋಗುವ ಸಮಯ ಬೇಗನೆ ಬರಲಿ, ಮತ್ತೆ ಕೊಡುವುದಿಲ್ಲ' ಎಂದು ಮಾತು ಸೇರಿಸಿ ಕಾರ್ಯದೊಟ್ಟಿಗೆ ಶುಭಹಾರೈಕೆಯನ್ನೂ ಕೋರುತ್ತಿದ್ದರು.

ಕೊನೆಯ ಸಲ ಅಂದರೆ ೧೯೭೯ರ ಜೂನ್ ಜುಲೈ ತಿಂಗಳಲ್ಲಿ ನಡೆದ ನಮ್ಮ ಕನ್ನಡ ವಿಭಾಗದ ಸಭೆಗೆ ಬಂದಿದ್ದಾಗ ತುಂಬ ನಿಶ್ಶಕ್ತರಾಗಿದ್ದರು. 'ಮದ್ರಾಸಿಗೆ ಬರುವುದೆಂದರೆ ನನಗೆಷ್ಟೋ ಸಂತೋಷ. ಮಕ್ಕಳನ್ನು ನಿಮ್ಮನ್ನೆಲ್ಲ ನೋಡಬಹುದು. ನೋಡಿ ಮಾತಾಡಿದರೆ ಶಕ್ತಿಗೆ ಇಂಜೆಕ್ಷನ್ ಹಾಕಿಸಿಕೊಂಡಂತಾಗುತ್ತದೆ' – ಎಂದು ಎಷ್ಟೋ ಸಲ ಅಂದಿದ್ದರು. ಯೂನಿವರ್ಸಿಟಿಗೆ ಅವರನ್ನು ಕರೆದುಕೊಂಡು ಹೋಗುವ ಸಮಯ, ಅಮ್ಮ (ಪ್ರೊ. ಮರಿಯಪ್ಪ ಭಟ್ಟರ ಧರ್ಮಪತ್ನಿ) ನನ್ನನ್ನು ಕರೆದು ಸಭೆ ಮುಗಿಸಿ ಮರಳಿ ಬರುವಾಗ ಪ್ರೊಫೆಸರ್ ಅವರನ್ನು ಜತೆಯಲ್ಲಿ ಯಾರಾದರೂ ಕರೆದುಕೊಂಡು ಬರಬೇಕೆಂದರು. ನಾನೇ ಬರುತ್ತೇನೆ ಎಂದಿದ್ದೆ. ವಿಭಾಗದ ಸಭೆಯ ಕೆಲಸಗಳನ್ನೆಲ್ಲ ಮುಗಿಸಿ, ಆಟೋರಿಕ್ಷಾ ಹಿಡಿದು ಅವರ ಮನೆ ತಲುಪಿದಾಗ, ಗೇಟಿನಲ್ಲಿ ನಿಂತಿದ್ದ ಅಮ್ಮನವರನ್ನು ಕಂಡು ಪ್ರೊಫೆಸರ್ ಭಟ್ಟರು ನಗುತ್ತ, ನನ್ನನ್ನು ಕುರಿತು, 'ಇನ್ನು ಅಮ್ಮನ ಕೈಗೆ ನನ್ನನ್ನು ಒಪ್ಪಿಸಿಕೊಟ್ಟ ಮೇಲೆ ನಿಮ್ಮ ಜವಾಬ್ದಾರಿ ಮುಗಿಯಿತು' – ಎಂದು ಸರಸವಾಡಿಬಿಟ್ಟರು. ಈ ತರದ ಸರಸ ಚಿಕ್ಕವರೆದುರು ದೊಡ್ಡವರು ಹೇಳುವುದು ತೀರ ಅನಿರೀಕ್ಷಿತವಾದ್ದರಿಂದ, ಒಮ್ಮಿಂದೊಮ್ಮೆಗೆ ಅಲ್ಲಿ ನಾಚಿಕೆ ಮಿಶ್ರಿತವಾದ ಅಮ್ಮನವರ ಆನಂದದ ನಗು ಹೊರಹೊಮ್ಮಿತು. ನನಗೋ ತರಂಗ ತರಂಗವಾಗಿ ವಿಕಾಸಗೊಳ್ಳುವ ಹೃದಯಾನಂದ. ಗುರುಗಳಲ್ಲಿ ಸಂತೃಪ್ತಿಯ ಸಮೃದ್ಧ ನಗು ಉಕ್ಕಿ ಹರಿಯಿತು. ಹೀಗೆ ನಗುವಿನಿಂದಲೇ ಅಂದು ಬೀಳ್ಕೊಂಡು ಮನೆಗೆ ಬಂದೆ. ಈ ರಸಗಳಿಗೆ ಇಂದು ಅಮೂಲ್ಯವಾಗಿದೆ. ಇದಕ್ಕೆ ಕೇಂದ್ರಬಿಂದು ವಾಗಿದ್ದ ಆ ಇಬ್ಬರೂ ಇಂದು ನಮ್ಮೆದುರಿಗಿಲ್ಲ ಎಂಬ ರಿಕ್ತಜೀವನ ನಮ್ಮದಾಗಿದೆ.

ಪ್ರೊಫೆಸರ್ ಭಟ್ಟರ ಕಾಲಾನಂತರ ಪೆನ್‌ಶನ್ ನಿಯಮಾವಳಿಯಲ್ಲಿ ತಿದ್ದುಪಡಿಯಾಗಿ ಮೃತ ಉದ್ಯೋಗಿಯ ಸಹಧರ್ಮಿಣಿಗೂ ಪೆನ್‌ಶನ್ ಸಲ್ಲಬೇಕೆಂದು ಸೆನೇಟಿನಲ್ಲಿ ತೀರ್ಮಾನ ವಾದಾಗ, ಅದು ಅಮ್ಮನವರಿಗೆ ದೊರೆಯುವಂತೆ ಪ್ರಯತ್ನಿಸಿ ಸಫಲನಾದಾಗ ಗುರುವಿನ ಕೊನೆಯ ಕೈಂಕರ್ಯ ಮಾಡಿದೆನೆಂಬ ಸಂತೃಪ್ತಿ ನನಗುಂಟಾಯ್ತು. ತಮ್ಮ ಸ್ವಂತ ಮಕ್ಕಳ ಮೇಲೆ ತೋರುವಂತಹ ವಾತ್ಸಲ್ಯವನ್ನು ಅಮ್ಮ ನನ್ನ ಮೇಲೂ ತೋರಿದರು. ಅವರು ತಮ್ಮ ಬಂಧು ವರ್ಗದವರಿಗೆ ಯಾರಿಗಾದರೂ ನನ್ನನ್ನು ಪರಿಚಯ ಮಾಡುವ ಸಂದರ್ಭದಲ್ಲಿ, 'ಅವರಿಗೆ ಏಕಲವ್ಯನಂತಿದ್ದ ಶಿಷ್ಯ ಇವರು' ಎಂದು ಹೇಳುತ್ತಿದ್ದರು. ಆ ಮಹಾತಾಯಿಯೂ, ತಮ್ಮ ಪತಿ ಗತಿಸಿದ ಬಳಿಕ ೧೦–೧೧ ವರ್ಷಗಳ ಅವಧಿಯಲ್ಲಿ ಯಾವ ತರಹದ ಆದಿ ವ್ಯಾಧಿಗಳಿಂದ ಬಳಲದೆ ಥಟ್ಟನೆ ತಮ್ಮ ಪತಿಯ ಸನ್ನಿಧಿಗೆ ತೆರಳಿದ ಸಂಗತಿ, ಕೆಲವು ದಿನಗಳ

ಅನಂತರ ನನಗೆ ತಲುಪಿತು. ಈಗ ಈ ಗುರು ದಂಪತಿಗಳು ಸ್ವರ್ಗದಲ್ಲಿ ಒಂದಾಗಿದ್ದುಕೊಂಡು ನಮ್ಮನ್ನು ಹರಸುತ್ತಿರಲೆಂಬುದು ನನ್ನ ವಿನೀತ ಪ್ರಾರ್ಥನೆ.

ನಮ್ಮ ಜೀವನದಲ್ಲಿ, ನಾವು ಹಿಂದೆಂದೋ ಮಾಡಿದ ಪುಣ್ಯಫಲದಿಂದ ಕೆಲವು ವ್ಯಕ್ತಿಗಳನ್ನು ಸಂಧಿಸುತ್ತೇವೆ; ನಿಕಟವರ್ತಿಗಳಾಗುತ್ತೇವೆ. ಕೀರ್ತಿ, ಹಣ, ಪದವಿ ಎಲ್ಲವನ್ನೂ ಪ್ರಯತ್ನದಿಂದ ಗಳಿಸಬಹುದು. ಆದರೆ ಒಳ್ಳೆಯ ನಡತೆ, ಹಣ, ಸೌಜನ್ಯ ಮುಂತಾದ ಅಮೂಲ್ಯ ಸಂಪತ್ತು ಹೇಗೆ ಬರಬೇಕು? ಅವು ಇಂತಹ ಆದರ್ಶ ವ್ಯಕ್ತಿಗಳಿಂದ. ಅವರ ನಡತೆಯನ್ನು ಪರಿಶೀಲಿಸಿ, ನಮಗೆ ಅರಿವಾಗದಂತೆಯೇ ನಾವು ಅದರಲ್ಲಿ ಲೀನವಾಗುವುದರಿಂದ ಪ್ರೊಫೆಸರ್ ಮರಿಯಪ್ಪ ಭಟ್ಟರ ಸಾನ್ನಿಧ್ಯ-ಸಂಪರ್ಕ ಪಡೆದವರಿಗೆಲ್ಲ ಇದು ಸ್ವಯಂ ವೇದ್ಯವಾಗಿರಬಹುದು. ನಿರಾಡಂಬರ ಜೀವನ, ಉತ್ತಮ ಧ್ಯೇಯ, ನಿರ್ಮಲ ಮನಸ್ಸು, ಸರ್ವ ಶ್ರೇಯಾಕಾಂಕ್ಷೆ, ನೆಮ್ಮದಿ, ಸಂತೃಪ್ತಿ, ದುಡಿಮೆ, ಇವು ನನ್ನ ದೃಷ್ಟಿಗೆ ಗೋಚರವಾಗುವ ಪ್ರೊಫೆಸರ್ ಮರಿಯಪ್ಪ ಭಟ್ಟರ ಜೀವನ ಸಂದೇಶ. ಬಾಲ್ಯ ಕಾಲದಲ್ಲಿ ಕಷ್ಟಕಾರ್ಪಣ್ಯಗಳನ್ನು ಅನುಭವಿಸಿದರೂ, ಸ್ವಪ್ರಯತ್ನದಿಂದ ಮೇಲೆ ಮೇಲೆ ಏರಿ, ತುಂಬು ಸಂಸಾರಕ್ಕೆ ಸುಖಜೀವನದ ದಾರಿ ಕಲ್ಪಿಸಿದ ಅವರ ಬಗ್ಗೆ ಚಂದ್ರಕಲಾ ಅವರು ಬರೆದ ಕಿರು ಹೊತ್ತಗೆಯಲ್ಲಿ, 'ನೆಲ್ಲಿಯನ್ನು ತಿಂದು ಸಿಹಿ ಅನುಭವಿಸುವವರಂತೆ ತುಂಬು ಜೀವನ ನಡೆಸುತ್ತಿದ್ದಾರೆ.' ಎಂಬ ಸುಂದರ ಹೋಲಿಕೆ ಕೊಟ್ಟಿದ್ದಾರೆ; ಇದು ನಿಜ. ಜೀವನದಲ್ಲಿ ಎಲ್ಲರಿಗೂ ಆರಂಭದಲ್ಲಿ ಬೇಕಾದ ಸೌಲಭ್ಯಗಳಿರುವುದಿಲ್ಲ. ನೆಲ್ಲಿಕಾಯಿಯನ್ನು ತಿನ್ನುವಾಗ ಒಗರು ರುಚಿಯನ್ನು ಅನುಭವಿಸಿದಂತೆ ಮೊದಲಿಗೆ ಕಂಡರೂ, ಮತ್ತೆ ಅದು ಸಿಹಿಯನ್ನು ಕೊಡುತ್ತದೆ – ಎಂಬುದಕ್ಕೆ ಪ್ರೊಫೆಸರ್ ಮರಿಯಪ್ಪ ಭಟ್ಟರ ಜೀವನ ಸರಿಯಾದ ಉದಾಹರಣೆ. 'ಈಸಬೇಕು ಇದ್ದು ಜೈಸಬೇಕು' ಎಂದು ಈಸಿ ಜೈಸಿದ ಅವರ ಬಾಳಿನ ಕತೆ, ಎಷ್ಟೋ ಜನರಿಗೆ ಧೈರ್ಯವನ್ನೀಯುತ್ತದೆ. ಕಾರ್ಯೋನ್ಮುಖರಾದವರನ್ನು ಅವರ ಹಸನ್ಮುಖ ಹುರಿದುಂಬಿಸುತ್ತದೆ.

❖

# ಅಂತಃಕರಣದ ಗುರು

## (ಪ್ರೊ. ಎಸ್.ವಿ. ಪರಮೇಶ್ವರಭಟ್ಟ)

● *ಡಾ|| ಎಚ್.ಎಸ್. ಸುಜಾತಾ*

**ಬೆಂ**ಗಳೂರು ವಿಶ್ವವಿದ್ಯಾನಿಲಯದಿಂದ ವಿಜ್ಞಾನದಲ್ಲಿ ಪದವಿ ಪಡೆದ ಮೇಲೆ ನಾನು ಕನ್ನಡ ಎಂ.ಎ. ವ್ಯಾಸಂಗ ಮಾಡಲು ಆಸೆಪಟ್ಟೆ. ನನ್ನ ಆಸೆಗಳೆಲ್ಲ ವಿಚಿತ್ರ ಎಂಬ, ವಾಸ್ತವದೂರ ಎಂಬ ನನ್ನ ಹಿತೈಷಿಗಳ ಕುಚೋದ್ಯಕ್ಕೆ ಕೊನೆಯಿರಲಿಲ್ಲ. ಮುಂದೆ ಮದುವೆಯ ನಂತರ ಮೈಸೂರಿನ ಮಾನಸಗಂಗೋತ್ರಿ ಅಧ್ಯಾಪಕರ ನಿವಾಸದಲ್ಲಿ ನನ್ನವರೊಡನೆ ವಾಸವಾಗಿದ್ದ ದಿನಗಳು. ನಮ್ಮ ನೆರೆಯಲ್ಲಿದ್ದ ಇಂಗ್ಲಿಷ್ ವಿಭಾಗದ ಶ್ರೀಮತಿ ವಿಮಲಾರಾವ್ ಅವರಿಗೆ ನನ್ನಲ್ಲಿ ಅವ್ಯಾಜ ಪ್ರೀತಿ, "ನಿಮ್ಮ ಇಂಗ್ಲಿಷ್ ಚೆನ್ನಾಗಿದೆ. ನೀವೇಕೆ ಇಂಗ್ಲಿಷ್ ಎಂ.ಎ. ಓದಬಾರದು? ಮೊದಲು ಡಿಪ್ಲೋಮಾ ಮಾಡಿಕೊಳ್ಳಿ" ಎಂದು ಹುರಿದುಂಬಿಸುತ್ತಿದ್ದರು. ಅದಕ್ಕಾಗಿ ಅರ್ಜಿ ತರುವ ಹೊಣೆ ಹೊತ್ತರು. "ನನಗೆ ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ಇದೆ" ಎನ್ನುತ್ತಿದ್ದೆ. ಆದರೆ ಅವರು ಅಷ್ಟು ಬೇಗ ಸೋಲೊಪ್ಪಲು ಸಿದ್ಧರಿರಲಿಲ್ಲ. "ಕನ್ನಡವಾಗಲಿ, ಇಂಗ್ಲಿಷಾಗಲಿ ನೀವು ಡಿಪ್ಲೋಮ ಮಾಡಿಕೊಳ್ಳಲೇಬೇಕಲ್ಲ" ಎಂದು ವಾದ ಹೂಡಿದರು. "ಸರಿಯೇ. ಡಿಪ್ಲೋಮ ಓದಿ ಎಂ.ಎ.ಗೆ ಸೇರಲಾರೆ. ನನಗಷ್ಟು ತಾಳ್ಮೆಯಿಲ್ಲ. ಓದಿದರೆ ನೇರವಾಗಿ ಕನ್ನಡ ಎಂ.ಎ. ಇಲ್ಲವಾದರೆ ಇಲ್ಲ" ಎನ್ನುತ್ತ ಮಾತು ನಿಲ್ಲಿಸುತ್ತಿದ್ದೆ. ೧೯೬೮ರಲ್ಲಿ ಮಂಗಳೂರಿನ ಸ್ನಾತಕೋತ್ತರ ಕೇಂದ್ರ ಪ್ರಾರಂಭವಾಗಿತ್ತು. ಯಾವುದೇ ಒಂದು ಪದವಿಯ ಜೊತೆಗೆ, ದ್ವಿತೀಯ ಭಾಷೆಯಾದ ಕನ್ನಡದಲ್ಲಿ ಉತ್ತಮ ಅಂಕಗಳು ಬಂದವರಿಗೆ ನೇರವಾಗಿ ಕನ್ನಡ ಎಂ.ಎ. ವ್ಯಾಸಂಗ ಮಾಡಲು ಅಲ್ಲಿ ಅವಕಾಶವಿತ್ತು. ಎಂ.ಎ. ತರಗತಿಗಳು ಪ್ರಾರಂಭವಾಗಿದ್ದರೂ ಅಲ್ಲಿನ ಪದವಿ ತರಗತಿಗಳಲ್ಲಿ ಕನ್ನಡ ಐಚ್ಛಿಕ ಬಿ.ಎ. ಇರಲಿಲ್ಲವಾದ್ದರಿಂದ ಈ ಕ್ರಮ ಅನಿವಾರ್ಯವಾಗಿತ್ತು. ವಿವಾಹಿತೆಯಾದ ನನಗೆ ಎಂ.ಎ. ವ್ಯಾಸಂಗಕ್ಕಾಗಿ ಮಂಗಳೂರಿಗೆ ಹೋಗುವುದು ಅಸಾಧ್ಯ ಎಂದು ಶ್ರೀಮತಿ ರಾವ್ ಭಾವಿಸಿದ್ದರೇನೋ. ಆದರೆ ಅಸಾಧ್ಯ ಎಂದುಕೊಂಡದ್ದೇ ಜೀವನದಲ್ಲಿ ಅನೇಕ ಬಾರಿ ಘಟಿಸುತ್ತದೆ. ಮರುವರ್ಷ ಅಂದರೆ ೧೯೬೯ರಲ್ಲಿ ಎಂ.ಎ. ತರಗತಿಗೆ ಪ್ರವೇಶ ಕೋರಿ ಅರ್ಜಿ ಹಾಕಿದೆ. ಇತರ ವಿಶ್ವವಿದ್ಯಾನಿಲಯದವರಿಗೆಂದು ಒಂದು ಸ್ಥಾನ ಮೀಸಲಿತ್ತು. ಬೇರೆ ವಿಶ್ವವಿದ್ಯಾನಿಲಯಗಳಿಂದ ಬಂದ ಅರ್ಜಿಗಳಲ್ಲಿ ನನ್ನದು ಅತಿ ಹೆಚ್ಚಿನ ಅಂಕ ಗಳಿಸಿದ್ದಾದ್ದರಿಂದ ಪ್ರವೇಶ ಸಹಜವಾಗಿ ದೊರೆಯಿತು. ಪ್ರೊ. ಎಸ್.ವಿ. ಪರಮೇಶ್ವರಭಟ್ಟರ ಶಿಷ್ಯವರ್ಗದಲ್ಲಿ ನಾನೂ ಒಬ್ಬಳಾದೆ.

೧೯೬೯-೭೦, ೧೯೭೦-೭೧ ಈ ಎರಡೂ ವರ್ಷಗಳು ನನ್ನ ಜೀವನದ ಅವಿಸ್ಮರಣೀಯ

ದಿನಗಳು. ಮಂಗಳೂರು ವಿಶ್ವವಿದ್ಯಾನಿಲಯ ಆಗಿನ್ನೂ ಅಸ್ತಿತ್ವಕ್ಕೆ ಬಂದಿರಲಿಲ್ಲ. ಮೈಸೂರು ವಿಶ್ವವಿದ್ಯಾನಿಲಯದ ಒಂದು ಭಾಗವಾಗಿ ನಮ್ಮ ಕೇಂದ್ರ ಪ್ರಾರಂಭವಾಗಿತ್ತು. ಕನ್ನಡ ಎಂ.ಎ. ತರಗತಿಗಳ ಪಾಠ ಪ್ರವಚನಗಳು ನಡೆಯುತ್ತಿದ್ದುದು ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ನಮ್ಮ ಕೇಂದ್ರದಲ್ಲಿ ಋಷ್ಯಾಶ್ರಮದಂತಹ ವಾತಾವರಣ, ಅಜಾತಶತ್ರು, ಪರಮೇಶ್ವರಭಟ್ಟರ ಮುಂದಾಳತ್ವ. ಕನ್ನಡ ವಿಭಾಗದ ಮಿಕ್ಕ ಅಧ್ಯಾಪಕರಾದ ಡಾ॥ ಎಚ್.ಜೆ. ಲಕ್ಕಪ್ಪಗೌಡ, ಡಾ॥ ಗುಂಡ್ಮಿ ಚಂದ್ರಶೇಖರ ಐತಾಳ, ಡಾ॥ ಬಿ.ಎ. ವಿವೇಕ ರೈ ಅವರುಗಳೂ ಭಟ್ಟರ ಶಿಷ್ಯರಾಗಿದ್ದವರೇ ಸಂಸ್ಕೃತ ಬೋಧನೆಗೆ ಶ್ರೀ ಮಂಜುನಾಥಭಟ್ಟರು.

ಮೊದಲ ತರಗತಿಯಲ್ಲೇ ಭಟ್ಟರ ವಾಗ್ಝರಿಯ ಮೋಡಿಗೆ ನಾವೆಲ್ಲ ಮರುಳಾದೆವು. ಸದಾ ಮಂದಹಾಸದಿಂದ ಕೂಡಿದ ಮುಖಭಾವ, ಮುಚ್ಚುಮರೆಯಿಲ್ಲದ ಮಾತುಗಾರಿಕೆ, ಅಕಳಂಕ ವ್ಯಕ್ತಿತ್ವಗಳು ಅವರದು. ನಮ್ಮ ತರಗತಿಯಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಬಹಳವಿಲ್ಲ. ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಮಹಿಳೆಯರದು ಮೂರನೇ ಒಂದು ಭಾಗವೂ ಇಲ್ಲ. ಬೇರೆ ಊರುಗಳಿಂದ ಬಂದ ನಾವು ಕೆಲವರು ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ನಿಲಯದಲ್ಲಿ ವಸತಿಯ ವ್ಯವಸ್ಥೆಯನ್ನು ಮಾಡಿಕೊಂಡೆವು. ನಮ್ಮಂತಹವರನ್ನು ಕಂಡರೆ ಭಟ್ಟರಿಗೆ ಅತೀವ ಪ್ರೀತಿ, ಕನಿಕರ. "ಕನ್ನಡ ಎಂ.ಎ.ಗಾಗಿ ಇಷ್ಟು ದೂರ ಬಂದಿದ್ದೀರಾ? ಅಡಿಗೆಗೆ ಇಲ್ಲಿನವರು ಕೊಬರಿ ಎಣ್ಣೆ ಹಾಕ್ತಾರೆ, ಜೊತೆಗೆ ಕುಸುಬಲಕ್ಕಿ ಅನ್ನ, ಸಾಲದು ಅಂತ ಮೀನುವಾಸನೆ, ಇನ್ನು ಈ ಮಳೆ.... ಈ ಬಿಸಿಲು...." ಎಂದು ಅನುಕಂಪ ಸೂಸುತ್ತಿದ್ದರು.

ಹಲವು ಸಾಹಿತ್ಯಕ ಸಂಜೆಗಳು ಕೇಂದ್ರದಲ್ಲಿ ಜರುಗಿದವು. ಸೇಡಿಯಾಪು ಕೃಷ್ಣಭಟ್ಟರು, ಎಂ.ಮರಿಯಪ್ಪ ಭಟ್ಟರು, ತೆಕ್ಕುಂಜ ಗೋಪಾಲಕೃಷ್ಣ ಭಟ್ಟರು, ಶಿವರಾಮ ಕಾರಂತರು, ಗೋಪಾಲಕೃಷ್ಣ ಅಡಿಗರು ಮೊದಲಾದ ಹಿರಿಯ ಸಾಹಿತಿಗಳನ್ನು ನಾವು ಅಲ್ಲಿ ಮೊದಲ ಬಾರಿ ನೋಡಿದೆವು, ಅವರ ಭಾಷಣಗಳನ್ನು ಕೇಳಿದೆವು. ನೆನೆಸಿಕೊಂಡರೆ ಈಗಲೂ ಮನಸ್ಸು ಮುದಗೊಳ್ಳುತ್ತದೆ. ಅಂಥ ಹಲವು ಸಂದರ್ಭಗಳಲ್ಲಿ ಪ್ರಾರ್ಥನೆ ಹೇಳಲೋ, ಭಾವಗೀತೆ ಹಾಡಲೋ ನನಗೆ ವೇದಿಕೆಯ ಮೇಲೆ ಹೋಗುವ ಪ್ರಸಂಗ ಬರುತ್ತಿತ್ತು. ಅಲ್ಲಿಯವರೆಗೆ ನನ್ನ ಸೀನಿಯರ್ ಶ್ರೀಮತಿ ತಾರಿಣಿ ಒಬ್ಬರೇ ಹಾಡುಗಾರ್ತಿ ಆಗಿದ್ದವರು. ನಾನು ಜೂನಿಯರ್ ಎಂ.ಎ.ಗೆ ಸೇರಿದ ಕೂಡಲೇ ಅವರು ಹೊತ್ತಿದ್ದ ಭಾರದಲ್ಲಿ ಅರ್ಧ ಭಾಗ ನನ್ನ ಪಾಲಿಗೆ ಬಂತು. ನಾನು ಅದನ್ನು ಸಂತೋಷದಿಂದ ಹೊತ್ತೆ. ಈ ಹೊತ್ತಿನಲ್ಲಿ ನಡೆದ ಒಂದು ಘಟನೆ ನೆನಪಿಗೆ ಬರುತ್ತದೆ. ದಕ್ಷಿಣ ಕನ್ನಡದ ಹಿರಿಯ ಸಾಹಿತಿಯೊಬ್ಬರು ಆ ಸಂಜೆಯ ಭಾಷಣಕಾರರು. ಅಂದಿನ ಪ್ರಾರ್ಥನೆ ಅಪರೂಪಕ್ಕೆ ನನ್ನ ಸಹಪಾಠಿಯೊಬ್ಬರಿಂದ ನೆರವೇರಲಿತ್ತು. ಸ್ವಾಗತ ಭಾಷಣದ ನಂತರ ನಾನು ಭಾವಗೀತೆಯೊಂದನ್ನು ಹಾಡಬೇಕಿತ್ತು. ನನ್ನ ಸಹಪಾಠಿ ವೇದಿಕೆ ಹತ್ತಿ ಪ್ರಾರ್ಥನೆ ಪ್ರಾರಂಭಿಸಿದ ಕೂಡಲೇ ನನ್ನ ಹೃದಯ ಬಾಯಿಗೆ ಬಂತು. ನಾನು ಹಾಡಬೇಕೆಂದಿದ್ದ ಗೀತೆಯನ್ನು ಅನುದ್ದೇಶಿತವಾಗಿ ಅವರು ಪ್ರಾರ್ಥನೆಗೆ ಬಳಸಿಕೊಂಡುಬಿಟ್ಟಿದ್ದರು. ನನ್ನ ಬಳಿ ಬೇರೆ ಯಾವ ಕವಿತೆಯ ಪಠ್ಯವೂ ಇರಲಿಲ್ಲ. ಬೆಂಗಳೂರಿನಲ್ಲಿ ವಿದ್ಯಾರ್ಥಿನಿಯಾಗಿದ್ದ ಕಾಲದಿಂದ ಆಕಾಶವಾಣಿಯಲ್ಲಿ ಕಾರ್ಯಕ್ರಮ ನೀಡುತ್ತಿದ್ದ ನಾನು ಕೈಯಲ್ಲಿ ಸ್ಕ್ರಿಪ್ಟ್ ಇಲ್ಲದೆ

ಹಾಡು ಹೇಳಲಾಗದ ಅಭ್ಯಾಸಕ್ಕೆ ಒಗ್ಗಿಹೋಗಿದ್ದೆ. ಕೆಲವೇ ನಿಮಿಷಗಳಲ್ಲಿ ನಾನು ಏನು ಮಾಡಬೇಕೆಂದು ನಿರ್ಧರಿಸಬೇಕಿತ್ತು. ಆದರೆ ಏನೂ ಹೊಳೆಯದ ಸ್ಥಿತಿಯನ್ನು ತಲುಪಿದ್ದೆ. ಆ ಹೊತ್ತಿಗೆ ನನ್ನ ಸಹಾಯಕ್ಕೆ ಬಂದವರು ತಾರಿಣಿ. ತಮ್ಮ ಬಳಿಯಿದ್ದ ಎಕ್ಸರ್‌ಸೈಜ್ ಪುಸ್ತಕವನ್ನು ನನ್ನ ಕೈಯಲಿಟ್ಟು, "ನೋಡಿ, ಏನಾದರೂ ಮಾಡಲು ಸಾಧ್ಯವಾಗ್ತದಾ ಅಂತ?" ಎಂದರು. ತಾರಿಣಿಯವರೇ ಪ್ರತಿಮಾಡಿಟ್ಟುಕೊಂಡಿದ್ದ, ಹಾಡಲು ಒಗ್ಗುವ, ಬೇರೆ ಬೇರೆ ಕವಿಗಳ ಕವನಗಳು ಅದರಲ್ಲಿ ಇದ್ದವು. ಮುಳುಗಲಿದ್ದ ನನಗೆ ಆ ಪುಸ್ತಕ ಹುಲ್ಲುಕಡ್ಡಿಯಂತೆ ಕಾಣಲಿಲ್ಲ. ಆಧಾರಸ್ತಂಭದಂತೆ ಭಾಸವಾಯಿತು. ಸರಸರನೆ ಹಾಳೆ ಮಗುಚಿದೆ, ಅರ್ಥಪೂರ್ಣವೂ ಸರಳವೂ ಆದ ಕವಿತೆಯೊಂದನ್ನು ಆಯ್ಕೆ ಮಾಡಿದೆ. ಅದು ಭಟ್ಟರ 'ತಿಳಿಮುಗಿಲ ತೊಟ್ಟಿಲಲಿ' ಕವನ, ಒಂದೆರಡು ನಿಮಿಷಗಳಲ್ಲಿ ನನಗೆ ಪರಿಚಿತವಾಗಿದ್ದ ಒಂದು ಶಾಸ್ತ್ರೀಯ ರಾಗದ ಆಧಾರದ ಮೇಲೆ ಹಾಡಿನ ಮಟ್ಟನ್ನು ಸಂಯೋಜಿಸಿದೆ. ಆ ವೇಳೆಗೆ ನನ್ನ ಹೆಸರನ್ನು ಅಧ್ಯಕ್ಷರು ಕರೆಯುವುದು ಕೇಳಿಸಿತು. ವೇದಿಕೆ ಹತ್ತಿ ಯಾವುದೇ ರಸಾಭಾಸ ಆಗದಂತೆ ಹಾಡಿ ಕೆಳಗಿಳಿದು ಬಂದಾಗ ಶ್ರೋತೃವೃಂದದ ಚಪ್ಪಾಳೆಯಿಂದ ನೆಮ್ಮದಿಗೊಂಡೆ ಆದರೆ ನನ್ನ ಮನಸ್ಸಿನಲ್ಲಿ ಸ್ವಲ್ಪ ಭಯವೂ ಇತ್ತು. ಭಟ್ಟರಿಗೆ ತಮ್ಮ ಕವನ ಹಾಡಿದ್ದು ಪ್ರಿಯವಾಗದಿದ್ದರೆ ಅಥವಾ ಹಾಡಿದ ರೀತಿ ಇಷ್ಟವಾಗದಿದ್ದರೆ ಎಂಬ ಅಳುಕಿನಿಂದ ಅವರ ಕಡೆ ನೋಡಿದೆ. ಸಭೆ ಮುಕ್ತಾಯವಾದ ಮೇಲೆ ಅವರ ಬಳಿ ಮಾತಾಡದೆ ಹಾಸ್ಟೆಲ್‌ಗೆ ಹೊರಟುಹೋದೆ. ಮರುದಿನ ಕಾಲೇಜಿಗೆ ಬಂದಾಗ ಭಟ್ಟರು ದೂರದಿಂದಲೇ "ಇಲ್ಲಿ ಬನ್ನಿ, ಸುಜಾತಾ" ಎಂದು ಜೋರಾಗಿ ಕೂಗಿದರು. ಪಕ್ಕದಲ್ಲೇ ಇದ್ದ ಅವರ ಮನೆಗೆ ಕರೆದುಕೊಂಡು ಹೋದರು. ತಮ್ಮ ಎಲ್ಲ ಕವನ ಸಂಗ್ರಹಗಳ ಒಂದೊಂದು ಪ್ರತಿಯನ್ನು ತಮ್ಮ ಹಸ್ತಾಕ್ಷರ ಹಾಕಿಕೊಟ್ಟರು. "ನಿನ್ನೆ ನೀವು ನನ್ನ ಕವಿತೆಯನ್ನು ಬಹಳ ಚೆನ್ನಾಗಿ ಹಾಡಿದಿರಿ ಸುಜಾತಾ, ಥ್ಯಾಂಕ್ಸ್, ಆಕಾಶವಾಣಿಯಲ್ಲಿ ಬರುವ ರಾಗಕ್ಕಿಂತ ನಿಮ್ಮದು ಭಿನ್ನವೂ ಆಗಿತ್ತು" ಎಂದರು. ಭಟ್ಟರು ಮತ್ತೆ ಎಷ್ಟೋ ದಿನ "ಆ ಹಾಡು ಹೇಳ್ತಿರಾ ಸುಜಾತಾ" ಎಂದು ಕೇಳಿ, ನನ್ನಿಂದ ಹಾಡಿಸಿ ಸಂತೋಷಪಡುತ್ತಿದ್ದರು.*

ತಮ್ಮ ತಂಡದಲ್ಲಿ ಅನೇಕ ಬಗೆಯ ಹಿಂಜರಿಕೆಗಳಿದ್ದವು. ಅವು ಸಕಾರಣವಾಗಿಯೂ ಇದ್ದವು. ನಮ್ಮಲ್ಲಿ ಹೆಚ್ಚಿನವರು ವಿಜ್ಞಾನದಲ್ಲಿ ಪದವಿ ಗಳಿಸಿದ್ದವರು. ಸಾಹಿತ್ಯದ ಶಾಸ್ತ್ರೀಯ ಹಿನ್ನೆಲೆಯ ಅರಿವು, ಪರಿಚಯಗಳು ನಮಗೆ ಇರಲಿಲ್ಲ. ಜೊತೆಗೆ ಕನ್ನಡ ಐಚ್ಛಿಕ ಬಿ.ಎ. ವಿದ್ಯಾರ್ಥಿಗಳೊಂದಿಗೆ ನಾವು ಸ್ಪರ್ಧಿಸಬೇಕಿತ್ತು. ಎಂ.ಎ. ಪದವಿಯಲ್ಲಿ ಅವರಿಗಾಗಲೀ ನಮಗಾಗಲೀ ಭೇದವಿಲ್ಲದ್ದರಿಂದ ಈಗಾಗಲೇ ಅವರು ಓದಿದ್ದ ಹಳಗನ್ನಡ ವ್ಯಾಕರಣ ಇತ್ಯಾದಿಗಳಿಂದ ಕೂಡಿದ್ದ ಒಂದು ವಿಷಯವನ್ನು ನಾವು ಮೊದಲ ವರ್ಷದಲ್ಲಿ ಹೆಚ್ಚಿಗೆ ಓದಬೇಕಿತ್ತು. ನಮ್ಮ ಕೇಂದ್ರದ ಗ್ರಂಥಾಲಯ ಆಗಷ್ಟೇ ಹೊಸದಾಗಿ ಪ್ರಾರಂಭವಾಗಿತ್ತು. ಮೈಸೂರಿನ ಮಾನಸಗಂಗೋತ್ರಿಯ ಗ್ರಂಥಾಲಯದ ವ್ಯಾಪ್ತಿ ಇದಕ್ಕಿರಲಿಲ್ಲ. ನಮ್ಮ ಈ ಹಿಂಜರಿಕೆಯ ವಾಸನೆ ಅದು ಹೇಗೋ ಭಟ್ಟರಿಗೆ ತಟ್ಟಿತು. ಆದರೆ ಈ ವಿಷಯ ತಮಗೆ ತಿಳಿದೇ ಇಲ್ಲವೆಂಬಂತೆ ಇದ್ದರು. ಅಚಾನಕವೆಂಬಂತೆ ಒಂದು ದಿನ ತರಗತಿಯಲ್ಲಿ ನಮ್ಮನೆಲ್ಲ ಉಬ್ಬಿಸಿದರು. ನಮ್ಮ ಬರವಣಿಗೆಯಲ್ಲಿನ ಅನೇಕ ಒಳ್ಳೆಯ ಸಂಗತಿಗಳನ್ನು ಎತ್ತಿ ತೋರಿಸಿ ಬಿ.ಎ. ಐಚ್ಛಿಕ ಕನ್ನಡ ವಿದ್ಯಾರ್ಥಿಗಳಿಗಿಂತ ನಾವು ಕಡಿಮೆಯಿಲ್ಲ ಎಂದು ಹೊಗಳಿ ಅಟ್ಟಕ್ಕೇರಿಸಿದರು. ನನ್ನದೊಂದು

ಪ್ರಬಂಧ ಆಗ ಭಟ್ಟರ ಬಳಿ ಇತ್ತು. ಅದರ ಪ್ರಾರಂಭದ ಕೆಲವು ಭಾಗ ಓದಿ "ಸುಜಾತಾ ವಿಜ್ಞಾನದ ಪದವೀಧರೆ. ಅದಕ್ಕೆ ಅವರ ಉತ್ತರಗಳಲ್ಲಿನ ಪೀಠಿಕೆ ಪುರಾಣದಂತೆ ಇರುವುದಿಲ್ಲ. ಎರಡು ವಾಕ್ಯಗಳ ಪೀಠಿಕೆಯ ನಂತರ ನೇರವಾಗಿ ವಿಷಯಕ್ಕೆ ಬರ್ತಾರೆ. ಗಟ್ಟಿ ಅಂಶಗಳನ್ನು ಮಾತ್ರ ಹೇಳಿ ಮುಕ್ತಾಯ ಮಾಡುತ್ತಾರೆ. ಮುಂದಿನ ಪ್ರಶ್ನೆ ಕೈಗೆತ್ತಿಕೊಳ್ತಾರೆ. ಸಾಹಿತ್ಯದ ವಿದ್ಯಾರ್ಥಿಗಳ ಮಾಮೂಲು ತೊಂದರೆ ಸಮಯ ಸಾಕಾಗಲಿಲ್ಲ ಎಂಬುದು – ಅವರಿಗೆ ಎಂದೂ ಉಂಟಾಗುವುದಿಲ್ಲ" ಎಂದು ಹೇಳಿದರು. ಭಟ್ಟರ ವಿಶ್ಲೇಷಣೆಯಿಂದ ನಮ್ಮಲ್ಲಿ ಹಲವರಿಗೆ ಚೈತನ್ಯ ಕೂಡಿದ್ದು ನಿಜ.

ಭಟ್ಟರ ಪಾಠ ಎಂದರೆ ರಸಗಟ್ಟಿಯೇ. ಯಾವುದೇ ಕಾಲದ, ದೇಶದ ವಿಚಾರವನ್ನು ಸಮಕಾಲೀನ ವಿಚಾರವೊಂದಕ್ಕೆ ತಳಕು ಹಾಕಿ ನಗೆಬುಗ್ಗೆಯೆಬ್ಬಿಸುತ್ತಿದ್ದರು. ಅವರ ಹಾಸ್ಯದ ಹಿಡಿತದಿಂದ ಅವರ ಹಿರಿಯರು, ಸಮಾನರು, ವಿದ್ಯಾರ್ಥಿಗಳು ಯಾರೂ ತಪ್ಪಿಸಿಕೊಳ್ಳಲಾಗುತ್ತಿರಲಿಲ್ಲ. ಸೋಜಿಗದ ಸಂಗತಿಯೆಂದರೆ ಅವರಿಂದ ಹಾಸ್ಯಕ್ಕೀಡಾದ ವ್ಯಕ್ತಿಗೂ ನೋವಾಗುತ್ತಿರಲಿಲ್ಲ, ಮುಜುಗರವಾಗುತ್ತಿರಲಿಲ್ಲ. ಭಟ್ಟರು ತಮ್ಮನ್ನು ತಾವು ಹಾಸ್ಯ ಮಾಡಿಕೊಳ್ಳುತ್ತಿದ್ದುದೇ ಅದಕ್ಕೆ ಕಾರಣ. ಇನ್ನು ಅವರ ವಿನಯ ಅವರಿಗೆ ಮಾತ್ರ ಸಾಧ್ಯವಾಗುವಂಥದ್ದು. ಬಸವಪ್ಪಶಾಸ್ತ್ರಿಗಳ 'ಶಾಕುಂತಲಾ' ಅನುವಾದವನ್ನು ಕುರಿತು ಮಾತನಾಡುವಾಗ ಅನೇಕ ಪದ್ಯಗಳನ್ನು ಅವರು ಲೀಲಾಜಾಲವಾಗಿ ಉದಾಹರಿಸುತ್ತಿದ್ದರು. "ನೋಡಿ, ಎಷ್ಟು ಚೆಲುವಿನ ಭಾಷಾಂತರ ಶಾಸ್ತ್ರಿಗಳದ್ದು, ನನ್ನಿಂದ ಅನುವಾದಗೊಂಡ ಪದ್ಯಗಳೇ ನನಗೆ ನೆನಪಿಲ್ಲ. ಆದರೆ ಶಾಸ್ತ್ರಿಗಳ ಪಠ್ಯ ಮರೆಯುವುದಿಲ್ಲ. ಭಾಷಾಂತರದ ಸೊಗಸೇ ಇದಕ್ಕೆ ಕಾರಣ" ಎಂದದ್ದು ನೆನಪಿದೆ. ಭಟ್ಟರ ಮಾತು ಪೂರ್ಣ ಸತ್ಯ ಎಂದು ಯಾರೂ ನಂಬಬೇಕಿಲ್ಲ. ಅವರ ಮಾತು ಅವರ ನಮ್ರತೆಗೆ ಸಾಕ್ಷಿ ಅಷ್ಟೇ.

ನೆನಪಿಗೆ ಬಂದ ಗಾದೆಗಳ ಸಂಗ್ರಹವೊಂದನ್ನು ಹೊರತರಲು ಉದ್ದೇಶಿಸಿದ್ದ ಭಟ್ಟರು ತೀರ ಸಾಂದರ್ಭಿಕವಾಗಿ ತಾವು ಕೈಗೊಂಡ ಕೆಲಸವನ್ನು ತಿಳಿಸಿ ನಮಗೆ ಯಾರಿಗಾದರೂ ಅಪರೂಪದ ಗಾದೆಗಳು ತಿಳಿದಿದ್ದಲ್ಲಿ ಕೊಡಬೇಕೆಂದು ಹೇಳಿದರು. ಮಲೆನಾಡಿನ ಹಲವು ಅಪೂರ್ವ ಗಾದೆಗಳನ್ನು ನಾನು ಸಂಗ್ರಹಿಸಿ ಭಟ್ಟರಿಗೆ ಕೊಟ್ಟೆ. ನನ್ನ ಕೆಲಸದಲ್ಲಿ ಪೂರ್ಣ ನೆರವು ನೀಡಿದವರು ಎಂ.ಕೆ. ಇಂದಿರಾ. ಅವರು ಭಟ್ಟರ ಸಮೀಪದ ಬಂಧುವೂ ಹೌದು. ಗಾದೆಗಳನ್ನು ಭಟ್ಟರ ಕೈಲಿಟ್ಟಾಗ ಅವರು ಹೇಳಿದ ಮಾತು ಇಂದಿಗೂ ನೆನಪಿದೆ. "ನಗರದಲ್ಲಿ ಹುಟ್ಟಿ ಬೆಳೆದ ನಿಮ್ಮಿಂದ ಈ ಸಹಾಯವನ್ನು ನಿರೀಕ್ಷಿಸಿರಲಿಲ್ಲ. ಗತಕಾಲಕ್ಕೆ ಸೇರಿಹೋಗಲಿದ್ದ ಈ ಗಾದೆಗಳನ್ನು ಇದ್ದ ಕಡೆಯಿಂದ ನನ್ನೆಡೆಗೆ ಬರಮಾಡಿದಿರಲ್ಲ!" ಮುಂದೆ ಅವರ ಗಾದೆಗಳ ಸಂಕಲನ ಅಚ್ಚಾದಾಗ ನನ್ನ ಹೆಸರನ್ನು ಸ್ಮರಿಸುವ ಸೌಜನ್ಯವನ್ನೂ ಅವರು ತೋರಿದರು.

ಭಟ್ಟರ ಸಮಯಸ್ಫೂರ್ತಿ, ಚುರುಕುಗಳು ವಿಶಿಷ್ಟವಾದುವು. ಪ್ರೊ॥ ಜಿ.ಎಸ್. ಶಿವರುದ್ರಪ್ಪನವರು ನಮ್ಮ ಕೇಂದ್ರಕ್ಕೆ ಬಂದಿದ್ದಾಗ "ನಾವಿಲ್ಲಿ ಐದು ತಲೆಮಾರಿನವರು ಇದ್ದೇವೆ" ಎಂದ ಭಟ್ಟರ ಮಾತು ಯಾರಿಗೂ ತಿಳಿಯಲಿಲ್ಲ. ಅನಂತರ ಭಟ್ಟರೇ ವಿವರಿಸಿದರು: "ನೋಡಿ, ನಾನು

ಮೊದಲ ತಲೆಮಾರಿನವನು. ಶಿವರುದ್ರಪ್ಪ ನನ್ನ ಶಿಷ್ಯರು, ಆದ್ದರಿಂದ ಎರಡನೆಯ ತಲೆಮಾರಿನವರು ಅವರು ಲಕ್ಕಪ್ಪಗೌಡರಿಗೆ ಪಾಠ ಹೇಳಿದ್ದಾರೆ. ಆದ್ದರಿಂದ ಗೌಡರು ಮೂರನೆಯ ಪೀಳಿಗೆಯವರು. ವಿವೇಕ ರೈ ಅವರಿಗೆ ಶಿಷ್ಯರು, ನಾಲ್ಕನೆಯ ಸಾಲಿನವರು. ನೀವು ರೈಗಳಿಗೆ ಶಿಷ್ಯರಾದ್ದರಿಂದ ಐದನೆಯ ತಲೆಮಾರಿನವರು."

ಜೂನಿಯರ್ ಎಂ.ಎ. ಪರೀಕ್ಷೆಗೆ ಅರ್ಜಿ ತುಂಬಿಸಿ ರಸೀದಿಯೊಂದಿಗೆ ನಾವು ಹುಡುಗಿಯರೆಲ್ಲ ಕಚೇರಿಯ ಮುಖ್ಯಸ್ಥರಿಗೆ ಒಟ್ಟಿಗೆ ಕೊಟ್ಟೆವು. ಅಲ್ಲಿದ್ದ ಒಬ್ಬ ಗುಮಾಸ್ತರು ಆ ದಿನ ಮಂಗಳವಾರ ಎಂದೂ, ಆದ್ದರಿಂದ ಅರ್ಜಿಯನ್ನು ಮರುದಿನ ಕೊಡಬೇಕೆಂದೂ ಹೇಳಿದರು. ಮಿಕ್ಕ ಹುಡುಗಿಯರು ಭಯದಿಂದಲೋ ಇಲ್ಲಾ ಬೇರೆ ಕಾರಣದಿಂದಲೋ ಕೂಡಲೇ ಅರ್ಜಿ ಹಿಂತೆಗೆದುಕೊಂಡರು. ಮತ್ತೆ ಹಾಸ್ಟೆಲ್‌ಗೆ ತೆಗೆದುಕೊಂಡು ಹೋಗಿ ಮರುದಿನ ತರಲು ನಾನಂತೂ ಸಿದ್ಧಳಿರಲಿಲ್ಲ. ನಾನು ಅರ್ಜಿಯನ್ನು ವಾಪಸ್ಸು ಪಡೆಯುವುದಿಲ್ಲ ಎಂದೆ. ಗುಮಾಸ್ತರು ತಮ್ಮ ಪಟ್ಟು ಬಿಡವಲ್ಲ, ನಾನಾದರೂ ಅಷ್ಟೇ. ಅಷ್ಟರಲ್ಲಿ ಆ ವಿಷಯ ಭಟ್ಟರಿಗೆ ತಲುಪಿತು. "ಇಬ್ಬರೂ ಗೆಲ್ಲುವ ದಾರಿ ಒಂದಿದೆ. ಸುಜಾತಾ ಅವರು ಅರ್ಜಿಯನ್ನು ನನ್ನ ಬಳಿ ಕೊಟ್ಟಿರಲಿ, ಅಂದರೆ ಅವರು ಹಾಸ್ಟೆಲ್ಲಿಗೆ ತೆಗೆದುಕೊಂಡು ಹೋಗಿ ಮತ್ತೆ ತರುವ ಕಷ್ಟವಿಲ್ಲ ಅರ್ಜಿಯನ್ನು ಗುಮಾಸ್ತರು ನಾಳಿನ ಲೆಕ್ಕಕ್ಕೆ ತೆಗೆದುಕೊಳ್ಳಲಿ. ಅಂದರೆ ಮಂಗಳವಾರ ಕೊಟ್ಟಂತೆ ಆಗುವುದಿಲ್ಲ" ಎಂದರು. ಹಾಗೇ ಮಾಡಿದ್ದಾಯಿತು. ಮುಂದೆ ನನ್ನೊಬ್ಬಳ ಪ್ರವೇಶಪತ್ರ ಮಾತ್ರ ಬರಲಿಲ್ಲ. ಆಗಿನ ನನ್ನ ಕಳವಳ ನನಗೆ ಮಾತ್ರ ಗೊತ್ತು: ಆ ಹೊತ್ತಿನಲ್ಲಿ ನನ್ನ ಸಹಪಾಠಿಗಳೆಲ್ಲ ನನಗೆ ಬುದ್ಧಿವಾದ ಹೇಳಿದವರೇ, ನಯವಾಗಿ ಗದರಿಸಿ ಛೀಮಾರಿ ಹಾಕಿದವರೇ. "ಬೇಡ, ಬೇಡ ಎಂದರೂ ಮಂಗಳವಾರ ಅರ್ಜಿ ಕೊಟ್ಟರು" ಎಂದು ಭಟ್ಟರ ಎದುರಿಗೆ ಕೆಲವರು ಪ್ರಲಾಪಿಸಿದರು. "ಏನೂ ಹೆದರಬೇಡಿ ಸುಜಾತಾ, ನಿಮ್ಮದೇನೂ ತಪ್ಪಿಲ್ಲ, ಇಂಥದ್ದೆಲ್ಲ ಆಗೋದು ಉಂಟು. ನಿಮ್ಮ ಪ್ರವೇಶಪತ್ರ ತರಿಸೋದು ನನ್ನ ಜವಾಬ್ದಾರಿ" ಎಂದು ಭಟ್ಟರು ಧೈರ್ಯ ತುಂಬಿದರು. ಪರೀಕ್ಷೆಯ ದಿನ ಅಂತೂ ಇಂತೂ ಪ್ರವೇಶಪತ್ರ ಬಂತು. ನಿರಾಳವಾಗಿ ಉಸಿರಾಡಿದೆ. ಪರೀಕ್ಷೆ ಮುಗಿಯಿತು. ಫಲಿತಾಂಶ ಬಂತು. ಮಹಿಳೆಯರಲ್ಲಿ ನನ್ನದೊಬ್ಬಳದೇ ಪ್ರಥಮದರ್ಜೆ. ಭಟ್ಟರ ಹಾಸ್ಯಚಟಾಕಿಗೆ ಇನ್ನೊಂದು ಅವಕಾಶ. "ಬೇಡ, ಬೇಡ ಎಂದರೂ ಮಂಗಳವಾರ ಅರ್ಜಿ ಕೊಟ್ಟಿರಿ. ನೋಡಿ, ಈಗಲೂ ನೀವು ಒಂಟಿ" ಎಂದೂ ಹುಸಿಪರಿತಾಪ ವನ್ನು ಪ್ರದರ್ಶಿಸಿದರು. ನನ್ನ ಸ್ನೇಹಿತೆಯರು ಉಸಿರೆತ್ತಲಿಲ್ಲ.

ಕೇಂದ್ರದಿಂದ ಬೀಳ್ಕೊಳ್ಳುವಾಗ ಕಡೆಯ ದಿನ ಅವರಿಂದ ಆಟೋಗ್ರಾಫ್ ಪಡೆದೆವು. ನನ್ನ ಪುಸ್ತಕದಲ್ಲಿ ಭಟ್ಟರು "ಕನ್ನಡದ ದಾಸೋಹ ನಿಮ್ಮಿಂದ ನಡೆಯಲಿ" ಎಂದು ಬರೆದು ಸಹಿ ಹಾಕಿದರು. ಎಂಥ ಶುಭಕರ ಹಾರೈಕೆ! ಭಟ್ಟರ ಈ ಆಶೀರ್ವಾದ ನನ್ನ ಜೀವನದ ನಿಯಂತ್ರಣ ಶಕ್ತಿಯೋ ಎಂದು ಅನೇಕ ಬಾರಿ ನನಗೆ ಅನ್ನಿಸಿದ್ದು ಉಂಟು.

ಅಂತಿಮ ಪರೀಕ್ಷೆಯಲ್ಲಿ ನಮ್ಮ ಕೇಂದ್ರಕ್ಕೆ ಮೊದಲ ಮೂರು ರ‍್ಯಾಂಕ್‌ಗಳು ಲಭಿಸಿದ್ದು ಭಟ್ಟರಿಗೆ ಅಪರಿಮಿತ ಸಂತೋಷವನ್ನು ಉಂಟುಮಾಡಿತು. ರ‍್ಯಾಂಕ್ ವಿಜೇತರಿಗಿಂತ ಅವರ

ಹೆಮ್ಮೆಯೇ ಹೆಚ್ಚಾಗಿತ್ತು, ಅದು ತೀರ ಸಹಜವೂ ಆಗಿತ್ತು. ಫಲಿತಾಂಶ ಬಂದಾಗ ನಮ್ಮನ್ನೆಲ್ಲ ಎಷ್ಟು ಆಪ್ಯಾಯಮಾನತೆಯಿಂದ ನಡೆಸಿಕೊಂಡರೋ! ಅವರನ್ನು ಮುಖತಃ ಕಂಡಾಗ "ರೀ, ಸುಜಾತಾ ನಿಮ್ಮದು ಎರಡನೆಯ ರ್‍ಯಾಂಕ್ ಅಲ್ವೇನ್ರೀ? ನಾನು ಎಂ.ಎ. ಓದಿದಾಗ ನಂದು ಫಸ್ಟ್ ರ್‍ಯಾಂಕ್ ಗೊತ್ತಾ?" ಎಂದು ಕ್ಷಣ ನಿಲ್ಲಿಸಿ, "ನಿಮಗೊಂದು ಗುಟ್ಟಿನ ಸಂಗತಿ ಹೇಳ್ತೀನಿ. ನನ್ನ ಬ್ಯಾಚ್‌ನಲ್ಲಿ ನಾನೊಬ್ನೇ ಇದ್ದಿದ್ದು" ಎಂದು ಹೇಳುತ್ತಾ ಗಹಗಹಿಸಿ ನಕ್ಕರು, ಸುತ್ತಲಿನ ಎಲ್ಲರನ್ನೂ ನಗಿಸಿದರು. ಇದು ಭಟ್ಟರ ಪರಿ, ನಕ್ಕು ನಗಿಸುವ ಪರಿ.

ಭಟ್ಟರಿಗೆ ನಾನು ಸ್ವಲ್ಪ ಅಸಮಾಧಾನ ಮಾಡಿದೆನೇನೋ ಎಂಬ ಸಂಶಯ ನನ್ನನ್ನು ಕಾಡಿದ್ದು ಒಂದೇ ಒಂದು ಬಾರಿ. ಫಲಿತಾಂಶ ಬಂದ ಹೊಸದರಲ್ಲಿ ಮತ್ತೊಮ್ಮೆ ಅವರನ್ನು ಭೇಟಿಯಾದಾಗ ನನ್ನ ಪ್ರಥಮ ದರ್ಜೆ, ಎರಡನೆಯ ರ್‍ಯಾಂಕ್‌ಗಳನ್ನೆಲ್ಲ ಹೊಗಳಿ, "ಬೆಂಗಳೂರಿನಲ್ಲಿ ಒಂದು ಎಗ್ಸಿಕ್ಯೂಟಿವ್ ಪೋಸ್ಟ್ ಇದೆ ಸುಜಾತಾ, ಹೋಗ್ತೀರಾ? ಪ್ರವರ್ಧಮಾನಕ್ಕೆ ಬರುವ ಅನೇಕ ಅವಕಾಶಗಳಿವೆ" ಎಂದರು. "ಇಲ್ಲ ಸರ್, ನನಗೆ ಅಧ್ಯಾಪಕ ವೃತ್ತಿಯಲ್ಲಿ ಆಸಕ್ತಿ, ಸಂಶೋಧನೆ ಮಾಡುವ ಇಚ್ಛೆ ಇದೆ. ಥ್ಯಾಂಕ್ಸ್" ಎಂದೆ. "ನಿಮ್ಮಿಷ್ಟ" ಎಂದರು ಭಟ್ಟರು. ಮಾತು ಮುಂದುವರೆಸಲಿಲ್ಲ, ಒತ್ತಾಯ ಮಾಡಲಿಲ್ಲ. ಅನಂತರ ನಾನು ಅಧ್ಯಾಪಕಿಯಾದೆ. ಸಂಶೋಧನೆ ಮಾಡಿದೆ, ನನ್ನ ಪಿಹೆಚ್.ಡಿ. ಪ್ರಬಂಧ ಪ್ರಕಟಗೊಂಡಿತು. ಭಟ್ಟರಿಗೆ ಪ್ರತಿ ಕೊಡಲು ಹೋದಾಗ' ಅವರೇ ಹಿಂದಿನ ಪ್ರಸ್ತಾಪ ತೆಗೆದು, "ನಿಮ್ಮ ಆಯ್ಕೆ ಸರಿ ಸುಜಾತಾ, ನಾನು ಹಿಂದೆ ಸೂಚಿಸಿದ್ದ ಕೆಲಸವನ್ನು ನೀವು ಒಪ್ಪಿಕೊಂಡಿದ್ದರೆ, ದುಡ್ಡು ಅಂತಸ್ತುಗಳು ದೊರಕುತ್ತಿದ್ದವು ನಿಜ. ಆದರೆ ಸಂಶೋಧನೆ, ಬರವಣಿಗೆಗಳು ನಿಮ್ಮಿಂದ ಸಾಧ್ಯವಾಗುತ್ತಿರಲಿಲ್ಲ. ನಿಮ್ಮಿಂದ ಇಂಥ ಹಲವು ಪುಸ್ತಕಗಳು ಬಂದದ್ದನ್ನು ಕಾಣುವ ಭಾಗ್ಯ ನನ್ನದಾಗಲಿ" ಎಂದರು. ಕಿರಿಯರ ಅಂತರಂಗವನ್ನು ತಾಳ್ಮೆಯಿಂದ ಅರಿಯುವ ಈ ಅಂತಃಕರಣಕ್ಕೆ ಸರಿಸಾಟಿ ಯಾವುದೇ ನನಗೇ ತಿಳಿಯದು.

ಮುಂದೆ ನಾನು ರೀಡರ್ ಆದೆ; ನನ್ನ ಇತರ ಕೃತಿಗಳು ಪ್ರಕಟವಾದ, ಅವುಗಳಿಗೆ ಬಹುಮಾನ, ಪ್ರಶಸ್ತಿಗಳು ಲಭಿಸಿದ ಸಂತಸದ ಸಂದರ್ಭಗಳಲ್ಲಿ ಭಟ್ಟರು ತೋರಿದ ಪ್ರೀತಿ ಅವರಿಗೆ ಸಹಜವಾದದ್ದು. ಹೊಳಪುಗಣ್ಣುಗಳಿಂದ, ಪ್ರೀತಿಯ ನುಡಿಗಳಿಂದ ತುಂಬುಮೆಚ್ಚುಗೆಯನ್ನು ಅವರು ವ್ಯಕ್ತಪಡಿಸಿದ್ದಾರೆ. ಹೊಗಳುವಾಗ ಒಂದಿಷ್ಟು ಜಾಸ್ತಿಯೇ ಹೊಗಳುತ್ತಾರೆಯೇ ಹೊರತು ಅದರಲ್ಲಿ ಮಿತಿಯನ್ನು ಕಾಣರು. ಒಂದು ಒಳ್ಳೆಯ ಕೆಲಸವನ್ನು ಗುಮಾನಿಯಿಂದ ನೋಡುವ ಜನರ ನಡುವೆ ಭಟ್ಟರ ರೀತಿ, ಸರಿದುಹೋಗುತ್ತಿರುವ ಅಂತಃಕರಣ ತುಂಬಿದ ಕಾಲದ ಒಂದು ತುಣುಕು ಎಂದೇ ನನಗೆ ಹಲವು ಬಾರಿ ಭಾಸವಾಗಿದೆ.

❖

# ಶ್ರೇಷ್ಠ ಗುರು

## (ವಿದ್ವಾನ್ ಎನ್. ರಂಗನಾಥಶರ್ಮ)

---

• *ಜಿ. ಮಹಾಬಲೇಶ್ವರ ಭಟ್ಟ*

'ನನ್ನ ಪೂಜ್ಯ ಗುರುಗಳು ವಿದ್ವಾನ್ ಎನ್. ರಂಗನಾಥಶರ್ಮರು ಎಂದು ಹೃದಯತುಂಬಿ ಬಾಯಿತುಂಬ ಯಾವಾಗಲೂ ಹೇಳಿಕೊಳ್ಳುವದು ಒಂದು ಸೌಭಾಗ್ಯಾತಿಶಯವೇ. ಅಲಂಕಾರಶಾಸ್ತ್ರವು ನನಗೆ ಆಸಕ್ತಿಯ ವಿಷಯವಾಗಿತ್ತು. ಆದ್ದರಿಂದ ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಅಲಂಕಾರಶಾಸ್ತ್ರದ ವಿಭಾಗದಲ್ಲಿ ಪ್ರವೇಶ ಪಡೆದೆ. ಉತ್ತರ ಕನ್ನಡದ ಹಳ್ಳಿಯಿಂದ ಬಂದ ನಾನು ಉದ್ದಾಮ ಪಂಡಿತರಾದ ಶ್ರೀ ಕೆ.ಪಿ. ಶಂಕರಶಾಸ್ತ್ರಿಗಳು ಮತ್ತು ಶ್ರೀ ಎನ್. ರಂಗನಾಥ ಶರ್ಮರ ಹೆಸರನ್ನು ಕೇಳಿ ಬಲ್ಲವನಾಗಿದ್ದೆ. ಸಂಸ್ಕೃತ ಕಾಲೇಜಿನಲ್ಲಿರುವ ಅಧ್ಯಾಪಕರೆಲ್ಲರೂ ಶಾಸ್ತ್ರಿಗಳು ಶರ್ಮರಂತೆ ಘನವಿದ್ವಾಂಸರೆಂಬ ಭಾವನೆ ಇತ್ತು. ಆದರೆ ವಸ್ತುಸ್ಥಿತಿಯ ಅರಿವಾಗುವ ಹೊತ್ತಿಗೆ ಮೂರುನಾಲ್ಕು ತಿಂಗಳುಗಳು ಗತಿಸಿದ್ದವು. ಅದಕ್ಕೆ ತೆತ್ತ ಬೆಲೆ ಒಂದು ವರ್ಷ. ಮರುವರ್ಷ ವ್ಯಾಕರಣವಿಭಾಗದಲ್ಲಿ ಪುನಃ ಮೊದಲನೆಯ ವರ್ಷದಲ್ಲಿ ನನ್ನ ಹೆಸರನ್ನು ನೋಂದಾಯಿಸಿದೆ. ಶ್ರೀ ಶರ್ಮರು ಮತ್ತು ಶ್ರೀ ಎನ್.ಟಿ. ಶ್ರೀನಿವಾಸ ಅಯ್ಯಂಗಾರ್ಯರು ನನಗೆ ಗುರುಗಳಾಗಿ ದೊರಕಿದ್ದು ಹೀಗೆ. ಸರಿಯಾದ ಕಾಲ ಸನ್ನಿಹಿತವಾಗುವವರೆಗೂ ಯೋಗ್ಯಗುರುಗಳ ಪ್ರಾಪ್ತಿಯೂ ದುರ್ಲಭವೆಂದು ತೋರುತ್ತದೆ. ಅಂದು ಒಂದು ವರ್ಷ ನಷ್ಟವಾದರೂ ಜೀವಮಾನದ ಅವಶಿಷ್ಟ ವರ್ಷಗಳು ಸಾರ್ಥಕವಾಗುವದಕ್ಕೆ ಶ್ರೀ ಶರ್ಮರಲ್ಲಿ ಅಂತೇವಾಸಿತ್ವ ಪಡೆದಿರುವದೇ ಎನ್ನುವದು ನನ್ನ ದೃಢವಾದ ನಂಬಿಕೆ.

### ವೈದುಷ್ಯ

ಸಂಸ್ಕೃತ ಬಲ್ಲವರನ್ನೆಲ್ಲ ಪಂಡಿತರೆಂದು ಕರೆಯುವದು ಈಗ ರೂಢಿಯಾಗಿದೆ. ಇಷ್ಟೆ ಅಲ್ಲದೆ ವೇದ, ವೇದಾಂತ, ಭಗವದ್ಗೀತೆ, ಜ್ಯೋತಿಷ, ಪೂಜಾವಿಧಾನ, ತರ್ಕ, ವ್ಯಾಕರಣ, ಕಾವ್ಯ, ನಾಟಕ ಮತ್ತು ಸಕಲ ದರ್ಶನಗಳನ್ನೂ ಈ ಪಂಡಿತ ತಿಳಿದಿರುತ್ತಾನೆ ಎನ್ನುವ ಸಾಮಾನ್ಯ ತಿಳುವಳಿಕೆಯು ಲೋಕದಲ್ಲಿ ಇದೆ. ಆದರೆ ಇಲ್ಲಿ ವಿವಿಚ್ಯ ಜ್ಞಾತವ್ಯಾಂಶ ಒಂದಿದೆ. ಸಂಸ್ಕೃತದಲ್ಲಿ ಕಾವ್ಯಲೋಕ ಒಂದಾದರೆ ಶಾಸ್ತ್ರಸಾಮ್ರಾಜ್ಯ ಇನ್ನೊಂದು. ಸಂಸ್ಕೃತದಲ್ಲಿ ಕಾವ್ಯವೆಂದರೆ ಗದ್ಯ-ಪದ್ಯ, ಚಂಪೂ, ರೂಪಕಗಳೆಲ್ಲವೂ ಒಳಗೊಳ್ಳುತ್ತವೆ. ಸಂಸ್ಕೃತಭಾಷೆಯನ್ನು ಈ ಕಾವ್ಯಗಳ ಮೂಲಕವೇ ಅಭ್ಯಾಸಮಾಡಬೇಕು. ನಾಟಕಾಂತ ಸಾಹಿತ್ಯಾಭ್ಯಾಸವನ್ನು ಐದಾರು ವರ್ಷಗಳ ಕಾಲ ಸರಿಯಾದ ಕ್ರಮದಲ್ಲಿ ಮಾಡಿದರೆ ಸಂಸ್ಕೃತ ಭಾಷೆಯಲ್ಲಿ ಒಂದು ಹಿಡಿತ ಬರುತ್ತದೆ.

ಇವರು ವ್ಯಾಖ್ಯಾನಗಳ ಸಹಾಯದಿಂದ ಕಾವ್ಯದ ಎಲ್ಲ ಪ್ರಕಾರಗಳನ್ನು ಅರ್ಥೈಸಲು ಸಮರ್ಥರಾಗಿರುತ್ತಾರೆ. ಇವರೆಲ್ಲ ಸಂಸ್ಕೃತಜ್ಞರಾಗಿದ್ದು ಅಭಿನಂದನೀಯರೇ ಸರಿ. ಆದರೆ ಇವರು ಪೂರ್ವಮೀಮಂಸಾ, ಉತ್ತರಮೀಮಾಂಸಾ (ವೇದಾಂತ), ವ್ಯಾಕರಣ, ತರ್ಕ, ಅಲಂಕಾರ, ಜ್ಯೋತಿಷ್ಯ ಮೊದಲಾದ ಶಾಸ್ತ್ರಗಳನ್ನು ಅರ್ಥಮಾಡಿಕೊಳ್ಳಲಾರರು. ಅದಕ್ಕಾಗಿ ನಾಟಕಾಂತ ಸಾಹಿತ್ಯವನ್ನು ಓದಿದವನು ಅಂದರೆ ವ್ಯುತ್ಪನ್ನನು ಹಿಂದೆ ಹೇಳಿದ ಶಾಸ್ತ್ರಗಳಲ್ಲಿ ಯಾವುದಾದರೂ ಒಂದು ಶಾಸ್ತ್ರವನ್ನು ಆಯ್ಕೆಮಾಡಿಕೊಂಡು ಗುರುಮುಖದಿಂದಲೇ ಕನಿಷ್ಠ ಐದು ವರ್ಷಗಳ ಕಾಲವಾದರೂ ಅದೊಂದೇ ಶಾಸ್ತ್ರವನ್ನು ಓದಬೇಕು. ಹೀಗೆ ಓದಿದವನನ್ನು ಪಂಡಿತಲೋಕವು ಶಾಸ್ತ್ರಜ್ಞನೆಂದು ಗುರುತಿಸುತ್ತದೆ. ಮುಂದೆಯೂ ಎಂಟು ಹತ್ತು ವರ್ಷಗಳ ಕಾಲ ಈ ಶಾಸ್ತ್ರದ ನಿರಂತರ ಅಧ್ಯಯನ ಅಧ್ಯಾಪನಗಳನ್ನು ಮಾಡಿ ಪ್ರಮೇಯಭಾಗವನ್ನು 'ಇದಮಿತ್ಥಂ' ಎಂದು ಹೇಳಬಲ್ಲವನನ್ನು ಆಯಾ ಶಾಸ್ತ್ರಕ್ಕೆ ಸಂಬಂಧಪಟ್ಟಂತೆ ವೈಯಾಕರಣ, ನೈಯಾಯಿಕ, ಮೀಮಾಂಸಕ, ಜ್ಯೋತಿಷಿಕ, ವೇದಾಂತಿ, ಆಲಂಕಾರಿಕ ಎಂದು ಲೋಕ ಗುರುತಿಸುತ್ತದೆ. ಹಾಗಾಗಿ ಸಂಸ್ಕೃತಜ್ಞರೆಲ್ಲ ಶಾಸ್ತ್ರಜ್ಞರಲ್ಲ ಆದರೆ ಶಾಸ್ತ್ರಜ್ಞರೆಲ್ಲ ಸಂಸ್ಕೃತಜ್ಞರಾಗಿಯೇ ಇರುತ್ತಾರೆ. 'ಏಕಸ್ಮಿನ್ ಜನ್ಮನಿ ಏಕಮೇವ ಶಾಸ್ತ್ರಂ' ಒಂದು ಜನ್ಮದಲ್ಲಿ ಒಂದೇ ಶಾಸ್ತ್ರ ಎನ್ನುವುದು ಶಾಸ್ತ್ರಗಳ ಅಧ್ಯಯನದ ಗಭೀರತೆಯನ್ನು ತಿಳಿಸಿಕೊಡುತ್ತದೆ. ಹೀಗೆ ಸಾಂಪ್ರದಾಯಿಕಾಧ್ಯಯನ ಕ್ರಮದಲ್ಲಿ ಎರಡು ಹಂತ. ಈ ಕ್ರಮದಲ್ಲಿ ಅಪಾರ ಪರಿಶ್ರಮದಿಂದ ವ್ಯಾಕರಣ ಮತ್ತು ಅಲಂಕಾರಶಾಸ್ತ್ರಗಳನ್ನು ಅಧ್ಯಯನ ಮಾಡಿ, ಗುರುಮುಖದಿಂದಲೇ ವೇದಾಂತ ಶಾಸ್ತ್ರವನ್ನೂ ಸಂಪ್ರದಾಯಬದ್ಧವಾಗಿ ಓದಿದವರು ಶ್ರೀ ಶರ್ಮರು. ಅಧ್ಯಾಪನವನ್ನು ಎಪ್ಪತ್ತೈದು ವರ್ಷಗಳಿಗೂ ಮೀರಿ ನಿರಂತರವಾಗಿ ಮಾಡಿದ ಮಾಡುತ್ತಿರುವ ಶ್ರೀ ಶರ್ಮರ ಪರಿಪಕ್ವವಾದ ಶಾಸ್ತ್ರವೈದುಷ್ಯವನ್ನು ಲೇಖನಿಯ ಮೂಲಕ ತಿಳಿಸುವದು ಅಸಾಧ್ಯ. ವ್ಯಾಕರಣಶಾಸ್ತ್ರದಲ್ಲಿ ಪತಂಜಲಿಯ ಮಹಾಭಾಷ್ಯವೊಂದು ಮೇರುಕೃತಿ. 'ಮಹಾಭಾಷ್ಯಂ ವಾ ಪಠನೀಯಂ ಮಹಾರಾಜ್ಯಂ ವಾ ಶಾಸನೀಯಂ' ಸಾಮ್ರಾಜ್ಯವನ್ನಾದರೂ ಆಳಬೇಕು ಇಲ್ಲವೇ ಮಹಾಭಾಷ್ಯವನ್ನಾದರೂ ಓದಬೇಕು ಎಂಬ ಮಾತು ಮಹಾಭಾಷ್ಯದ ಆಳ, ವೈಶಾಲ್ಯ ಮತ್ತು ಮಹತ್ತ್ವವನ್ನು ತಿಳಿಸುತ್ತದೆ. ಅಲಂಕಾರಶಾಸ್ತ್ರದಲ್ಲಿ ಜಗನ್ನಾಥ ಪಂಡಿತನ ರಸಗಂಗಾಧರವು ಪ್ರೌಢತಮವಾದ ಗ್ರಂಥ ಇದನ್ನು ಮೀರಿಸುವ ಗ್ರಂಥ ಅಲಂಕಾರಶಾಸ್ತ್ರದಲ್ಲಿ ಇಲ್ಲ. ವ್ಯಾಕರಣಶಾಸ್ತ್ರದ ಶೇಖರ, ಭೂಷಣಸಾರ, ಮಂಜೂಷಾ ಮೊದಲಾದ ಪ್ರೌಢಗ್ರಂಥಗಳನ್ನು ಓದಿದವನು ಮಹಾಭಾಷ್ಯದ ಬಾಗಿಲುತಟ್ಟಲು ಅರ್ಹನಾದರೆ, ಅಲಂಕಾರಶಾಸ್ತ್ರದ ಧ್ವನ್ಯಾಲೋಕ, ಕಾವ್ಯಪ್ರಕಾಶಾದಿಗಳನ್ನು ಅಭ್ಯಾಸ ಮಾಡಿದವನು ರಸಗಂಗಾಧರವನ್ನು ಪ್ರವೇಶಿಸಬಹುದು. ಈ ಗ್ರಂಥಗಳನ್ನು ಹೃದ್ಗತಮಾಡಿಕೊಂಡವರು ಬಹಳ ವಿರಳ. ಅಖಿಲಭಾರತ ಸ್ತರದಲ್ಲಿ ಹದಿನೈದರಿಂದ ಇಪ್ಪತ್ತು ಜನರಲ್ಲಿ ಶ್ರೀ ಶರ್ಮರೂ ಒಬ್ಬರೆಂದರೆ ಅವರ ವೈದುಷ್ಯದ ಅರಿವಾದೀತು.

**ಕಾವ್ಯವ್ಯಾಸಂಗ**

ಶಾಸ್ತ್ರಗಳ ಆಳವಾದ ಅಭ್ಯಾಸದಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡವರು ಕಾವ್ಯಗಳತ್ತ ಅಷ್ಟಾಗಿ ತಮ್ಮ ದೃಷ್ಟಿಯನ್ನು ಹರಿಸುವದಿಲ್ಲ. ಹಾಗೆಂದ ಮಾತ್ರಕ್ಕೆ ಇವರಿಗೆ ಕಾವ್ಯಗಳ ಬಗ್ಗೆ ಅನಾದರವೇನೂ ಇಲ್ಲ. ಆದರೆ ಶಾಸ್ತ್ರವ್ಯಾಸಂಗವು ಕಾವ್ಯ ಪರಿಶೀಲನೆಯ

ಕಾಲವನ್ನು ತನ್ನದಾಗಿಸಿಕೊಂಡು ಬಿಡುತ್ತದೆ. ಕವಿಯೊಬ್ಬ ಶಾಸ್ತ್ರವ್ಯಾಸಂಗಕ್ಕೆ ತೊಡಗಿ ತನ್ನ ಕವಿತಾ ಶಕ್ತಿಯು ಕುಂಠಿತವಾಗುತ್ತಿರುವದನ್ನು ಗಮನಿಸಿ, 'ನಮಃ ಪ್ರಾಮಾಣ್ಯವಾದಾಯ ಮತ್ಕವಿತ್ವಾಪಹಾರಿಣೇ' ಎಂದು ಹೇಳಿರುವುದು. ಈ ಹಿನ್ನೆಲೆಯಲ್ಲಿಯೇ ಸಂಸ್ಕೃತದಲ್ಲಿ ತೊಂಭತ್ತರಷ್ಟು ಭಾಗವನ್ನು ಪದ್ಯಕಾವ್ಯವೇ ಆಕ್ರಮಿಸಿಕೊಂಡಿದೆ. ಗದ್ಯ, ಚಂಪೂ ಮತ್ತು ರೂಪಕಗಳು ಉಳಿದ ಹತ್ತು ಭಾಗಗಳನ್ನು ತುಂಬಿವೆ. ಸಂಸ್ಕೃತದಲ್ಲಿ ಉಪಲಭ್ಯವಾಗಿರುವ ಪ್ರಸಿದ್ಧ ಮತ್ತು ಅಪ್ರಸಿದ್ಧವಾದ ಎಲ್ಲ ಕಾವ್ಯಗಳನ್ನು ಆದ್ಯಂತವಾಗಿ ಶ್ರೀ ಶರ್ಮರು ಪರಿಶೀಲಿಸಿರುವದಕ್ಕೆ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಪುಸ್ತಕ ಭಂಡಾರದಲ್ಲಿರುವ ಪುಸ್ತಕಗಳೇ ಸಾಕ್ಷಿ. ಮುದ್ರಣದೋಷವಿದ್ದರೆ ತಿದ್ದುವುದು, ವ್ಯಾಕರಣಕ್ಕೆ ವಿರುದ್ಧವಾದ ಪ್ರಯೋಗಗಳು ಕಂಡುಬಂದರೆ ಪ್ರಶ್ನೆ ಚಿಹ್ನೆ ಹಾಕುವುದು ಅವರ ಸ್ವಭಾವ. ಹೀಗೆ ತಿದ್ದಿದ ಅಕ್ಷರಗಳನ್ನು ಪ್ರಶ್ನೆ ಚಿಹ್ನೆಗಳನ್ನು ಆ ಪುಸ್ತಕಗಳಲ್ಲಿ ಇಂದಿಗೂ ನೋಡಬಹುದು.

ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಎಂ.ಇ.ಎಸ್. ಕಾಲೇಜಿನ ಸಂಸ್ಥಾಪಕರೂ, ವಾಗ್ಮಿಗಳೂ, ಸಂಸ್ಕೃತಜ್ಞರೂ ಆದ ಮಾನ್ಯ ಶ್ರೀ ಎಂ.ಪಿ.ಎಲ್. ಶಾಸ್ತ್ರಿಗಳು ವಿಧಾನ ಪರಿಷತ್ತಿನ ನಾಮಕರಣ ಸದಸ್ಯರೂ ಆಗಿದ್ದರು. ಅವರೊಮ್ಮೆ ಐವತ್ತು ಅರುವತ್ತು ವರ್ಷಗಳ ಹಿಂದೆ ಸಂಸ್ಕೃತಜ್ಞರ ಸಭೆಯಲ್ಲಿ ಒಂದು ಸವಾಲು ಎಸೆದರಂತೆ. ಸಂಸ್ಕತ ಕಾವ್ಯ ಪ್ರಪಂಚದಲ್ಲಿ ಪಂಚಮಹಾಕಾವ್ಯ ಗಳೆಂದು ಪ್ರಸಿದ್ಧವಾಗಿರುವ ರಘುವಂಶ, ಕುಮಾರಸಂಭವ, ಕಿರಾತಾರ್ಜುನೀಯ, ಮಾಘ ಮತ್ತು ನೈಷಧಗಳನ್ನು ಆದ್ಯಂತವಾಗಿ ಓದಿದವರು ಯಾರಿದ್ದಾರೆ? ಎಂದು. ಒಬ್ಬರಿಂದಲೂ ಉತ್ತರ ಬರಲಿಲ್ಲ. ಆ ಸಭೆಯಲ್ಲಿ ಶ್ರೀ ಶರ್ಮರೂ ಇದ್ದರಂತೆ. ಎಲಾ! ಏನಿದು! ಒಂದು ಕೈ ನೋಡಿಯೇ ಬಿಡೋಣವೆಂದು ಸಭೆಯಿಂದ ಹಿಂದಿರುಗಿದವರು ಮರುದಿನದಿಂದಲೇ ಮಲ್ಲಿನಾಥನ ವ್ಯಾಖ್ಯಾನದೊಂದಿಗೆ ಒಂದೊಂದೇ ಮಹಾಕಾವ್ಯಗಳನ್ನು ಓದಲಾರಂಭಿಸಿ ಪಂಚಮಹಾಕಾವ್ಯಗಳನ್ನು ಆದ್ಯಂತವಾಗಿ ಒಂದೂ ಶ್ಲೋಕವನ್ನು ಬಿಡದೆ ಕಾವ್ಯ ವ್ಯಾಸಂಗರೀತಿಯಲ್ಲಿ ಅಧ್ಯಯನ ಮಾಡಿದರಂತೆ ಓದುವಾಗ ತರಗತಿಯಲ್ಲಿ ಅವರೇ ಹೇಳಿದ ಪ್ರಸಂಗವಿದು. 'ಒಂದು ಗ್ರಂಥವನ್ನು ಅವರು ಓದಿದ್ದಾರೆ' ಎಂದರೆ ಒಂದಕ್ಷರವನ್ನು ಬಿಡದೆ ಓದಿದ್ದಾರೆಂದೇ ಅದರ ಅರ್ಥವೆನ್ನುವುದು ಅವರ ಎಲ್ಲ ವಿದ್ಯಾರ್ಥಿಗಳಿಗೂ ಅನುಭವವೇದ್ಯವಾದ ವಿಷಯ. ತರಗತಿಯಲ್ಲಿ ಅವರು ಹೇಳಿದ ಈ ಘಟನೆಯಿಂದ ದಪ್ಪ ಚರ್ಮದ ಈ ಲೇಖಕನಿಗೆ ಯಾವ ಕೆಚ್ಚೂ ಹುಟ್ಟದೇ ಇರುವದು ನಾಚಿಕೆಗೇಡಿನ ವಿಷಯವೇ ಸರಿ. ಎಲ್ಲರಂತೆ ಪಂಚಮಹಾಕಾವ್ಯಗಳ ಒಂದೋ ಎರಡೋ ಸರ್ಗಗಳನ್ನು ಪರೀಕ್ಷೆಗಾಗಿ ಓದಿ ಕಾಲಹಾಕಿದವನೇ ನಾನು. ಇರಲಿ ವಾಲ್ಮೀಕಿ ರಾಮಾಯಣವನ್ನು ನಾಲ್ಕಾರುವ್ಯಾಖ್ಯಾನಗಳೊಂದಿಗೆ ಅದೆಷ್ಟು ಬಾರಿ ಓದಿರುವರೋ! ಅದರ ಇಪ್ಪತ್ನಾಲ್ಕು ಸಾವಿರ ಶ್ಲೋಕಗಳ ಭಾವವನ್ನು ಕನ್ನಡಭಾಷೆಗೆ ಒಗ್ಗಿಸಿ ಸುಲಭವಾಗಿ ಹೇಳುವದು ಅಪಾರ ಬೌದ್ಧಿಕಶ್ರಮದಿಂದ ಮಾತ್ರ ಸಾಧ್ಯ. ನಾನು ಓದುತ್ತಿರುವ ಸಮಯದಲ್ಲಿಯೇ ಶ್ರೀ ಮದ್ರಾಮಾಯಣದ ಅನುವಾದ ಕಾರ್ಯವು ನಡೆಯುತ್ತಿತ್ತು. ವಿದ್ವತ್ತರಗತಿಗಳಿಗೆ ಪ್ರೌಢಗ್ರಂಥಗಳನ್ನು ನಾಲ್ಕು ಅವಧಿಗಳ ಕಾಲ ಪಾಠ ಮಾಡುವ ಹೊತ್ತಿಗೆ ಬುದ್ಧಿಯು ದಣಿದು ಹೋಗುತ್ತದೆ. ಆದರೆ ಶ್ರೀ ಶರ್ಮರು ಪಾಠ ಮುಗಿದಕೂಡಲೇ ಅನುವಾದ ಕಾರ್ಯವನ್ನು ಆರಂಭಿಸುತ್ತಿದ್ದರು. ಅಡಿರಟ್ಟಿನ ಮೇಲೆ ಮೂವತ್ತು, ನಲವತ್ತು ಬಿಳಿಯ

ಕಾಗದಗಳು, ಕಪ್ಪು ಮತ್ತು ಕೆಂಪು ಶಾಹಿಯ ಎರಡು ಪೆನ್ನುಗಳು ಅವರ ಮೇಜಿನ ಮೇಲೆ ಯಾವಾಗಲೂ ಇದ್ದೇ ಇರುತ್ತಿದ್ದವು. ಬೃಹಸ್ಪತಿಗಳಾದ ನಾವು (ವಿದ್ಯಾರ್ಥಿಗಳು) 'ಏನೋ ಬರೆಯುತ್ತಿದ್ದಾರೆ' ಅಂದುಕೊಂಡು ಉದಾಸೀನರಾಗಿ ತಿಳಿದುಕೊಂಡಿದ್ದೇವೆ ಹೊರತು ಅವರ ಶ್ರಮವನ್ನು ಅರ್ಥಮಾಡಿಕೊಂಡಿರಲಿಲ್ಲ. ನಿವೃತ್ತಿಯಾದ ಮೇಲೆ ಸಂಪೂರ್ಣ ವಿಷ್ಣುಪುರಾಣವನ್ನು ಶ್ರೀಮದ್ಭಾಗವತದ ಹತ್ತು, ಹನ್ನೊಂದು ಮತ್ತು ಹನ್ನೆರಡನೆಯ ಸ್ಕಂಧಗಳನ್ನು ಅನುವಾದಿಸಿದರು. ಭಾಗವತದ ಹನ್ನೊಂದು ಮತ್ತು ಹನ್ನೆರಡನೆಯ ಸ್ಕಂಧಗಳನ್ನು ಅಮೆರಿಕಾದಲ್ಲಿರುವ ಮಗಳನ್ನು ನೋಡಲು ಹೋದಾಗ ಪ್ರವಾಸದ ಅಲ್ಪ ಸಮಯದಲ್ಲಿಯೇ ಅನುವಾದಿಸಿದ್ದು ವಿಶೇಷ ಸ್ವಭಾವ.

'ಅದೃಶ್ಯಶ್ಚಾಭಿಗಮ್ಯಶ್ಚ' ಇದು ಕಾಳಿದಾಸನ ಮಾತು ದಿಲೀಪ ಚಕ್ರವರ್ತಿಯ ಬಗ್ಗೆ ಶ್ರೀಶರ್ಮರಲ್ಲಿ ಕಾಡುಹರಟೆಗೆ ಅವಕಾಶವಿಲ್ಲ. ಆದ್ದರಿಂದ ಅದೃಶ್ಯರು. ಶಾಸ್ತ್ರೀಯ ವಿಚಾರವನ್ನೋ ಕಾವ್ಯದ ಪ್ರಸಂಗಗಳನ್ನೋ, ರಾಮಾಯಣ, ಮಹಾಭಾರತ, ಭಾಗವತ ಪುರಾಣಗಳ ಪಾತ್ರಗಳ ಬಗ್ಗೆಯೋ, ಹಳೆಗನ್ನಡದ ಕಾವ್ಯಗಳ ಕುರಿತೋ, ಗ್ರಂಥ ಸಂಶೋಧನೆ, ಪರಿಷ್ಕಾರಗಳ ರೀತಿಯನ್ನೋ, ಪ್ರಸ್ತಾಪ ಮಾಡಿದರೆ ಆತ್ಮೀಯತೆಯಿಂದ ಹೇಳುವ ಪರಿ ವಿಶಿಷ್ಟವಾದದ್ದು. ಹಾಗಾಗಿ ಅಭಿಗಮ್ಯರು. ಕಾಡುಹರಟೆಗೆ ಅವಕಾಶವಿಲ್ಲದಿರಬಹುದು. ಆದರೆ ಬೇರೆಯವರ ಕಷ್ಟ-ನಷ್ಟಗಳನ್ನು ಆತ್ಮೀಯತೆಯಿಂದ ಕೇಳಿ ಪರಿಹಾರವನ್ನು ಹೇಳಿ, ಮತ್ತೆರಡು ದಿನಗಳು ಕಳೆದ ಮೇಲೆ ದೂರವಾಣಿಯ ಮುಖಾಂತರ ಪುನಃ ವಿಚಾರಿಸಿ ಏನಾಯಿತೆನ್ನುವದನ್ನು ಖಾತ್ರಿಮಾಡಿಕೊಳ್ಳುವವರೆಗೂ ಅವರಿಗೆ ಸಮಾಧಾನವಿಲ್ಲ. ಈಗ ಸದ್ಯದಲ್ಲಿ ನನಗೇ ಒಂದು ವಿಪತ್ತು ಒದಗಿತು, ನಾನು ಹೇಳಿರಲಿಲ್ಲ. ಬೇರೆಯವರ ಮುಖಾಂತರ ತಿಳಿದಾಗ ಒಂದು ವಾರ ಸರಿಯಾಗಿ ನಿದ್ರೆಯನ್ನು ಮಾಡಲಿಲ್ಲವೆಂದು ಹೇಳುತ್ತ ನನ್ನನ್ನು ನೋಡಿ ಅವರು ಸಂಕಟಪಟ್ಟ ಬಗೆ ನನ್ನ ಜೀವಮಾನದಲ್ಲಿಯೇ ಮರೆಯಲು ಸಾಧ್ಯವಿಲ್ಲ.

ವಿದ್ಯಾರ್ಥಿಜೀವನದ ಒಂದೆರಡು ಘಟನೆಗಳು ಉಲ್ಲೇಖನೀಯವಾಗಿವೆ. ಒಮ್ಮೆ ಮೂರು ನಾಲ್ಕು ದಿನಗಳು ತರಗತಿಗೆ ಹೋಗಿರಲಿಲ್ಲ. ಅನಾರೋಗ್ಯದಿಂದಾಗಿ ಬೆಂಗಳೂರಿನ ಚಾಮರಾಜಪೇಟೆಯ ಈಗಿನ ಶಿವಗಂಗಾಶುಭಸದನವು ಸಂಸ್ಕೃತ ಕಾಲೇಜಿನ ವಿದ್ಯಾರ್ಥಿನಿಲಯ ವಾಗಿತ್ತು. ಅಲ್ಲಿಗೇ ಶ್ರೀ ಶರ್ಮರು ಬಂದು ಕೇಳಿದರು.

ಶ್ರೀ.ಶ. : ಹೇಗಿದ್ದೀಯಾ ಮಹಾಬಲೇಶ್ವರ, ಕೈಯಲ್ಲಿ ದುಡ್ಡಿದೆಯೋ?

ನಾನು : ದುಡ್ಡಿದೆ, ಸದ್ಯದಲ್ಲಿಯೇ ಮನೆಯಿಂದ ಕಳುಹಿಸಿದ್ದಾರೆ.

ಶ್ರೀ.ಶ. : ಹಾಸ್ಟೇಲಿನಲ್ಲಿ ಈಗ ಆಹಾರಕ್ಕೆ ಏನು ಮಾಡಿಕೊಂಡಿದ್ದೀಯಾ?

ನಾನು : ಸಹಪಾಠಿಗಳು ಸ್ಟೌವಿನಲ್ಲಿ ಗಂಜಿಯನ್ನು ಮಾಡಿಕೊಡುತ್ತಿದ್ದಾರೆ. ಯಾವ ತೊಂದರೆಯೂ ಇಲ್ಲ.

ಶ್ರೀ.ಶ. : ದುಡ್ಡಿನ ಅವಶ್ಯಕತೆ ಇರುತ್ತದೆ. ಡಾಕ್ಟರನ್ನು ನೋಡಬೇಕಾಗುತ್ತೆ. ನನ್ನನ್ನು "ಕೇಳಿ"

ದುಡ್ಡನ್ನು ತಗೋಬೇಕು. ಕೊಂಚವೂ ಸಂಕೋಚಕೂಡದು ತಗೋ, ಈಗ ಇರಲಿ ಈ ಐದು ರೂಪಾಯಿಗಳು ನಿನ್ನಲ್ಲಿ (೧೯೬೬-೬೭ರಲ್ಲಿ ೧೫ರಿಂದ ೨೦ ರೂಪಾಯಿಗಳು ಇದ್ದರೆ ಒಂದು ತಿಂಗಳು ನಾವು ಆರಾಮವಾಗಿ ಇರುತ್ತಿದ್ದ ಕಾಲ)

ವಿದ್ಯಾರ್ಥಿಗಳಿಂದ ಸ್ವಂತಕ್ಕೆ ಸಹಾಯ ಪಡೆಯುವದು ಅವರಲ್ಲಿ ಇಲ್ಲವೇ ಇಲ್ಲ. ಒಮ್ಮೊಮ್ಮೆ ಅನಿವಾರ್ಯವಾದಾಗ ಸಣ್ಣ ಪುಟ್ಟ ಕೆಲಸಗಳನ್ನು ಹೇಳುತ್ತಿದ್ದರು. ಆದರೆ ಅದರಲ್ಲಿಯೂ ನಾವು ಕಲಿಯಬೇಕಾದ ಒಂದಂಶ ಇರುತ್ತಿತ್ತು.

ಶ್ರೀ ಶರ್ಮರ ಊರು ಸೊರಬ ತಾಲೂಕಿನ ನಡಹಳ್ಳಿ ಅಲ್ಲಿಗೆ ಹೋಗಲು ಸಾಗರದವರೆಗೆ ರೈಲಿನ ಪ್ರಯಾಣ ಅದಕ್ಕಾಗಿ 'ರಿಝರ್ವೇಶನ್' ಮಾಡಿಸಲು ನನ್ನನ್ನು ಒಂದೆರಡು ಬಾರಿ (ಐದು ವರ್ಷಗಳಲ್ಲಿ) ಕಳುಹಿಸಿದ್ದರು. ಹೀಗೆ ಕಳುಹಿಸಿಕೊಡುವ ಅವರ ಕ್ರಮವನ್ನು ಇಂದು ನಾವು ತಿಳಿದುಕೊಳ್ಳಬೇಕಾಗಿದೆ. ಹೋಗುವ ದಿನಾಂಕ, ವೇಳೆ, ಎಲ್ಲಿಂದ ಎಲ್ಲಿಗೆ ಪ್ರಯಾಣ ಎನ್ನುವ ವಿವರಗಳನ್ನೊಳಗೊಂಡ ಒಂದು ಸಣ್ಣ ಚೀಟಿಯೊಂದಿಗೆ ಟಿಕೆಟ್ಟಿನ ಮತ್ತು ರಿಝರ್ವೇಶನ್‌ನ ದುಡ್ಡನ್ನು ಕೊಟ್ಟು ಆಮೇಲೆ ಎಂಟಾಣೆಯನ್ನು ಇದು ನನ್ನ ಸಿಟಿ ಬಸ್ ಚಾರ್ಜ್ ಎಂದು ಪ್ರತ್ಯೇಕವಾಗಿ ನೀಡುತ್ತಿದ್ದರು. (ಆಗ ಚಾಮರಾಜಪೇಟೆಯಿಂದ ರೈಲ್ವೆ ಸ್ಟೇಷನ್ನಿಗೆ ೧೫ ಪೈಸೆ ೧೫+೧೫=೩೦ ಹಾಗಾಗಿ ೨೦ ಪೈಸೆ ನಮಗೆ ಉಳಿಯುತ್ತಿತ್ತು) ವಿದ್ಯಾರ್ಥಿಯ ಕೈಯಿಂದ ಒಂದಿನಿತೂ ಖರ್ಚಾಗಬಾರದು. ಆದರೆ ಸ್ವಲ್ಪ ಸಹಾಯವೇ ಆಗಬೇಕೆಂಬ ದೃಷ್ಟಿ ಅವರದ್ದು.

೧೯೭೦ರಲ್ಲಿ ಅಖಿಲ ಭಾರತ ಸಂಸ್ಕೃತ ಶಾಸ್ತ್ರಪ್ರತಿಯೋಗಿತಾ ದಿಲ್ಲಿಯಲ್ಲಿ ನಡೆಯಿತು. ಕರ್ನಾಟಕದಿಂದ ನಾವು ನಾಲ್ಕು ವಿದ್ಯಾರ್ಥಿಗಳು ಭಾಗವಹಿಸಿದ್ದೆವು. ನಾಲ್ವರಿಗೂ ಬಹುಮಾನ ಬಂದ ಕಾರಣ ಆ ವರ್ಷ ಪರ್ಯಾಯ ಪಾರಿತೋಷಕವೂ ಕರ್ನಾಟಕಕ್ಕೇ ಬಂದಿತು. ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ (ಸಂಸ್ಕೃತ ವಿಶ್ವವಿದ್ಯಾನಿಲಯ) ಕುಲಪತಿಗಳಾಗಿ ಈಗ ನಿವೃತ್ತಿರಾಗಿರುವ ಸಂಮಾನ್ಯ ಶ್ರೀ ಡಿ. ಪ್ರಹ್ಲಾದಾಚಾರ್ಯರು ನಮ್ಮ ಕಾಲೇಜಿನ ನ್ಯಾಯಶಾಸ್ತ್ರದ ವಿಭಾಗದಲ್ಲಿ ಆಗ ಪ್ರಾಧ್ಯಾಪಕರಾಗಿದ್ದರಿಂದ ನಮಗೆ ಮಾರ್ಗದರ್ಶಕರಾಗಿ ಬಂದಿದ್ದು ಒಂದು ವಿಶೇಷವಾಗಿತ್ತು. ಬಹುಮಾನ ಪಡೆದ ನನಗೆ ನಮ್ಮ ಕಾಲೇಜಿನಲ್ಲಿ ಅಭಿನಂದನೆಯನ್ನು ಮಾಡಿದರು. ಆಗ ಶ್ರೀ ಶರ್ಮರು ಬಹಳ ಸಂತೋಷದಿಂದ ಹರಸಿದ್ದು ಹೀಗೆ – "ನನ್ನ ಶಿಷ್ಯನೊಬ್ಬ ಅಖಿಲ ಭಾರತಮಟ್ಟದಲ್ಲಿ ಅದರಲ್ಲಿಯೂ ಶಾಸ್ತ್ರೀಯ ವಿಷಯದಲ್ಲಿ ಪ್ರಥಮ ಬಹುಮಾನ ಪಡೆದದ್ದು, ಸಾವಿರಾರು ಶ್ಲೋಕಗಳನ್ನು ಕಂಠಪಾಠ ಮಾಡಿ ಅಂತ್ಯಾಕ್ಷರಿಯಲ್ಲಿ ಮೊದಲ ಬಹುಮಾನ ಪಡೆದದ್ದು ನೋಡಿ ಹೃದಯ ತುಂಬಿ ಬರುತ್ತದೆ. ನನ್ನ "ಮಕ್ಕಳಿಗೆ ಬಹುಮಾನ ಬಂದಿದ್ದರೆ ಇಷ್ಟು ಸಂತೋಷವಾಗುತ್ತಿರಲಿಲ್ಲ. ಯಾಕೆಂದರೆ ನಾನು ಅವರಿಗೆ ಪಾಠ ಹೇಳಿಕೊಡಲಿಲ್ಲ. (ಶ್ರೀ ಶರ್ಮರ ಮಕ್ಕಳಲ್ಲಿ ಇಬ್ಬರು ಡಾಕ್ಟರಾಗಿದ್ದಾರೆ. ಇನ್ನಿಬ್ಬರು ಸ್ನಾತಕೋತ್ತರ ಪದವೀಧರರು) ನನ್ನ ವಿದ್ಯೆಯ ವಾರಸುದಾರನಾದ ಈತನು ಶ್ರೇಯೋವಂತನಾಗಿ

ಚಿರಕಾಲ ಬಾಳಲಿ." ಹೀಗಿದೆ ನಮ್ಮ ಗುರುಗಳ ಹೃದಯ ಶ್ರೀಮಂತಿಕೆ ನಿವೃತ್ತಿಯಾದ ಮೇಲೆ ನಮ್ಮ ಕಾಲೇಜಿಗೆ ಒಮ್ಮೆ ಬಂದಿದ್ದರು. ವ್ಯಾಕರಣಕ್ಕೆ ಸಂಬಂಧಪಟ್ಟಂತೆ ಯಾವುದೋ ಸಂದೇಹವನ್ನು ಕೇಳಿದೆ. ಆ ಕ್ಷಣದಲ್ಲಿ ಅವರಿಗೂ ತೋರಲಿಲ್ಲ. ಬೇರೆಯ ಮಾತನ್ನು ಮುಗಿಸಿ ಉತ್ತರವನ್ನು ಚಿಂತಿಸುತ್ತ ಒಂದು ಕಿಲೋ ಮೀಟರ್‌ನಷ್ಟು ದೂರ ಹೋದವರು ಹಿಂದಿರುಗಿ ಬಂದು "ನೀನು ಕೇಳಿದ ಸಂದೇಹಕ್ಕೆ ಇದು ಸರಿಯಾದ ಉತ್ತರವೆಂದು" ಹೇಳಿ ಹಿಂತಿರುಗಿದರು.

ಇನ್ನೊಮ್ಮೆ ಅವರ ಮನೆಗೆ ಹೋದಾಗ ಈ ಸಂದೇಹವನ್ನು ಮುಂದಿಟ್ಟೆ. 'ವಿಕಸ್ಯಮಾನ', 'ಸ್ಪರ್ಧ್ಯಮಾನಂ' ಇವೇ ಮೊದಲಾದವುಗಳ ಪ್ರಯೋಗ ಹೇಗೆ, ಇವು ಭಾವಾರ್ಥದಲ್ಲಿ ಬಂದ ಶಾನಚ್ ಪ್ರತ್ಯಯಾಂತ ಶಬ್ದಗಳಷ್ಟೆ! ಎಂದು 'ಸರಿಯಾದ ಸಂದೇಹವೇ ಪರಿಶೀಲಿಸಬೇಕು' ಎಂದಷ್ಟೆ ಹೇಳಿದರು. ಉಳಿದಂತೆ ಅವರೊಡನೆ ಮಾತನಾಡಿ ಮನೆಗೆ ನಾನು ಹಿಂದಿರುಗಿದೆ. ಮರುದಿನವೇ ನನಗೆ ಒಂದು ದೀರ್ಘಪತ್ರವನ್ನು ಬರೆದು ಸೂತ್ರಗಳನ್ನು ಉಲ್ಲೇಖಿಸಿ ನನ್ನ ಪ್ರಶ್ನೆಗೆ ಸಮಾಧಾನ ಬರೆದಿದ್ದರು. (ಆಗ ನನ್ನ ಮನೆಗೆ ದೂರವಾಣಿ ಇರಲಿಲ್ಲ). 'ಪುಷ್ಪೇಣ ವಿಕಸ್ಯಮಾನಂ ಪಶ್ಯ', 'ಛಾತ್ರೈಃ ಸ್ಪರ್ಧ್ಯಮಾನಂ ದೃಷ್ಟ್ವಾ ತುಷ್ಯಂತಿ' ಇವೇ ಮೊದಲಾದ ಪ್ರಯೋಗಗಳನ್ನು ಸ್ವಯಂ ಊಹೆ ಮಾಡಿ ಬರೆದು ನನಗೊಂದು ಚಿಕ್ಕ ಪಾಠವನ್ನೇ ಮಾಡಿದ್ದರು. ದೂರವಾಣಿ ಬಂದ ಮೇಲೆ ಅದೆಷ್ಟು ಸಂದೇಹಗಳಿಗೆ ಉತ್ತರಿಸಿದ್ದಾರೆನ್ನುವುದನ್ನು ಲೆಕ್ಕ ಇಟ್ಟಿಲ್ಲ. ಪ್ರಶ್ನೆ ಕೇಳಿದರೆ ಉತ್ತರ ಸಿಗುವವರೆಗೂ ಈ ತೊಂಭತ್ತಮೂರನೆಯ ವಯಸ್ಸಿನಲ್ಲಿಯೂ ಅವರ ಬುದ್ಧಿ ವಿರಮಿಸುವದೇ ಇಲ್ಲ. ರಾತ್ರಿ ನಿದ್ರೆಯೂ ಬರದು. ಉತ್ತರವನ್ನು ದೂರವಾಣಿಯ ಮುಖಾಂತರ ತಿಳಿಸಿದ ಬಳಿಕವಷ್ಟೇ ಬುದ್ಧಿಗೆ ವಿಶ್ರಾಂತಿ. ಇದು ಅವರ ಚಿಂತನೆಯ ಪ್ರಕಾರ ವಿನಯ – ವಿನೋದ

ರಾಜ್ಯ ಪ್ರಶಸ್ತಿಯಿಂದ ಆರಂಭಿಸಿ ರಾಷ್ಟ್ರಪತಿ ಪ್ರಶಸ್ತಿಯವರೆಗಿನ ಹತ್ತಾರು ಪ್ರಶಸ್ತಿಗಳಿಗೆ ಭಾಜನರಾಗಿ ಆ ಪ್ರಶಸ್ತಿಗಳಿಗೇ ಒಂದು ಗೌರವವನ್ನು ತಂದುಕೊಟ್ಟವರು ಶ್ರೀ ಶರ್ಮರು ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠವು (ಸಂಸ್ಕೃತ ವಿಶ್ವವಿದ್ಯಾನಿಲಯ) ಅವರಿಗೆ ಮಹಾಮಹೋಪಾಧ್ಯಾಯ ಪದವಿಯನ್ನು ನೀಡಿ ಗೌರವಿಸಿತು. ಆಗ ಅವರನ್ನು ನೋಡಿ ನಮಸ್ಕರಿಸಿ ಬರಲು ನಾನು ಮತ್ತು ಮಿತ್ರರಾದ ಶ್ರೀ ಸೋ.ತಿ. ನಾಗರಾಜರು (ಇವರೂ ಶ್ರೀ ಶರ್ಮರ ಶಿಷ್ಯರು ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣ ಪ್ರಾಧ್ಯಾಪಕರು) ಅವರ ಮನೆಗೆ ಹೋದೆವು. ನಾನು ಸಪತ್ನೀಕನಾಗಿ ಹೋಗಿದ್ದೆ. ಅಭಿವಾದನ ಮಾಡಿ ಕುಳಿತೆವು.

ಶ್ರೀ.ಶ. : ಸಪತ್ನೀಕನಾಗಿ ಬಂದಿದ್ದೀಯ, ಏನಮ್ಮಾ ಚೆನ್ನಾಗಿದ್ದೀಯಾ? ಮನೆಯಲ್ಲಿ ಮಕ್ಕಳೆಲ್ಲ ಚೆನ್ನಾಗಿದ್ದಾರೆಯೇ?

ನಾನು : ಹೌದು ಚೆನ್ನಾಗಿದ್ದೇವೆ.

ಶ್ರೀ.ಶ. : ಏನಯ್ಯ ನಾಗರಾಜ ನೀನು ನೈಷ್ಠಿಕ ಬ್ರಹ್ಮಚಾರಿ ಕುಶಲ ಪ್ರಶ್ನೆಯನ್ನು ಏನೆಂದು ಮಾಡಲಿ? (ನಗುತ್ತ) "ಅಪಿ ತಪೋವರ್ಧತೇ"! (ಇದು ಶಾಕುಂತಲ ನಾಟಕದಲ್ಲಿ ಬರುವ ಮಾತು. ಶ್ರೀ ನಾಗರಾಜರು ವೇದಜ್ಞರು. ನಿತ್ಯ ವೇದಪಾರಾಯಣವನ್ನು ಮಾಡುವವರು. ಹಾಗಾಗಿ ಈ ಅಪೂರ್ವವಾದ ವಾಕ್ಯವನ್ನು ಹೇಳಿದ್ದು.)

ನಾ.ರಾ. : (ದೊಡ್ಡದಾಗಿ ನಗುತ್ತ) ಎಲ್ಲ ತಮ್ಮ ಆಶೀರ್ವಾದ.

ಶ್ರೀ.ಶ. : ಏನು, ಎಲ್ಲರೂ ಒಟ್ಟಾಗಿ ಬಂದಿದ್ದೀರಿ?

ನಾವು : ತಮಗೆ ಮಹಾಮಹೋಪಾಧ್ಯಾಯ ಪದವಿ ನೀಡಿದ್ದಾರೆಂದು ಗೊತ್ತಾಯಿತು. ಹಾಗಾಗಿ ತಮ್ಮನ್ನು ನೋಡಿ ಹೋಗೋಣವೆಂದು ಬಂದೆವು.

ಶ್ರೀ.ಶ. : ಕೊಟ್ಟಿದ್ದಾರೆ ಹಿಂದೆ ಹಾನಗಲ್ ಶ್ರೀ ವಿರೂಪಾಕ್ಷ ಶಾಸ್ತ್ರಿಗಳಿಗೂ ಕೊಟ್ಟಿದ್ದಾರೆ. ಈಗ ನನಗೂ ಕೊಟ್ಟಿದ್ದಾರೆ. (ಶ್ರೀ ವಿರೂಪಾಕ್ಷ ಶಾಸ್ತ್ರಿಗಳು ಅಖಿಲಭಾರತ ಮಟ್ಟದ ವಿದ್ವಾಂಸರು, ನೈಯಾಯಿಕರು ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರೂ ಜೀವನ್ಮುಕ್ತರೂ ಆದ ಶ್ರೀ ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳಿಗೆ ಪಾಠ ಹೇಳಿದವರು) ಕಾಲ ಇಲ್ಲಿಗೆ ಬಂದಿದೆ. ಏನು ಮಾಡುವದು.

ನಾವು : ತಮ್ಮಂತಹವರೂ ಹೀಗೆ ಹೇಳಿದರೆ ಇಂಥ ಪದವಿಯನ್ನು ಯಾರಿಗೆ ನೀಡಬೇಕು?

ಶ್ರೀ.ಶ. : ನನಗೆ ಇದು ಬಹಳ ಮುಜುಗರವನ್ನು ಉಂಟುಮಾಡಿದೆ. (ನಗುತ್ತ) ಒಂದು ಕೆಲಸವನ್ನು ನೀವು ಮಾಡಬಹುದು– ನಾವೆಲ್ಲ ಮಹಾಮಹೋಪಾಧ್ಯಾಯರ ಶಿಷ್ಯರೆಂದು ಹೇಳಿಬಿಡಿ. ಹೀಗೆಂದು ಹೇಳಿ ಅಲ್ಲಿಯೇ ಇದ್ದ ಪ್ರಶಸ್ತಿಯನ್ನು ತೋರಿಸುತ್ತ, ಅದರ ಜೊತೆಗಿದ್ದ ಲಟ್ಟಣಿಗೆಯಂತಹ ಮರದ ಒಂದು ಕೋಲನ್ನು ತೋರಿಸಿ ವಿನೋದ ಮಿಶ್ರಿತ ಧ್ವನಿಯಲ್ಲಿ "ನೋಡಿ ಒಂದು ದೊಣ್ಣೆಯನ್ನೂ ಕೊಟ್ಟಿದ್ದಾರೆ" ಎಂದು ಹೇಳಿದರು. ಅನೇಕ ಸಂಘ ಸಂಸ್ಥೆಗಳು ಮಠ ಮಾನ್ಯಗಳು ಶ್ರೀ ಶರ್ಮರನ್ನು ಗೌರವಿಸಿವೆ. ಒಮ್ಮೆ ಪ್ರಶಸ್ತಿಪತ್ರವನ್ನು ತೋರಿಸುತ್ತ ಇದೊಂದು 'ಹೊರೆ' ಇನ್ನೊಂದು 'ತೊರೆ' ಎಂದು ಹೇಳುತ್ತ ಶಾಲನ್ನು ತೋರಿಸಿದರು. ಶಾಲುಗಳೆಲ್ಲವನ್ನು ಮನೆಗೆ ಬಂದ ವಿದ್ವಾಂಸರಿಗೆ ಹೊದಿಸಿ ಖಾಲಿಮಾಡಿ ಬಿಡುವದು ಅವರ ಪದ್ಧತಿ. ಶಾಲಿನ ಈ ಪ್ರಸಂಗದಲ್ಲಿಯೇ ಇನ್ನೊಂದನ್ನು ಇಲ್ಲಿಯೇ ಉಲ್ಲೇಖಿಸಿ ಬಿಡುತ್ತೇನೆ. ವಿದ್ಯಾರ್ಥಿಯೊಬ್ಬ ಶಾಸ್ತ್ರ, ವೇದಗಳೆರಡರಲ್ಲಿಯೂ ಬಹಳ ಪಟು ವಾಗುತ್ತಿರುವದನ್ನು ಗಮನಿಸಿ ಒಂದು ಒಳ್ಳೆಯ ಜರಿಶಾಲನ್ನು ಹೊದಿಸಿ ಆಶೀರ್ವಾದಿಸಿದರು. ಆದರೆ ಆ ಶಾಲು ಕಳೆದುಹೋಯಿತು. ದೊಡ್ಡವರು ಆಶೀರ್ವಾದ ಮಾಡಿ ನೀಡಿದ ಶಾಲು ಕಳೆದುಹೋಯಿತೆಂದು ಆತ ಬಹಳ ನೊಂದುಕೊಂಡ ಈ ವಿಷಯವು ಶ್ರೀ ಶರ್ಮರ ಕಿವಿಗೆ ಬಿತ್ತು ಆಗ ನನ್ನ ಹತ್ತಿರ ಹೇಳಿದರು – "ಆ ನಿನ್ನ ಶಿಷ್ಯನಿಗೆ ನಮ್ಮ ಮನೆಗೆ ಬರಲು ಹೇಳು ಶಾಲು ಕಳೆದುಕೊಂಡಿದ್ದಾನಂತೆ. ಇನ್ನೊಂದನ್ನು ಕೊಡುವೆ. ಶಾಲನ್ನು ಮತ್ತೆ ಕೊಡುವೆನೆಂಬ ವಿಷಯವನ್ನು ಹೇಳಬೇಡ. ನಮ್ಮ ಮನೆಗೆ ಬರದೇ ಇದ್ದಾನು" ಎಂಬ ಎಚ್ಚರಿಕೆಯನ್ನು ಕೊಟ್ಟರು. ಹೀಗೆ ಅವನನ್ನು ಮತ್ತೆ ಮನೆಗೆ ಕರೆಸಿ ಶಾಲು ಹೊದಿಸಿ ಆಶೀರ್ವಾದಿಸಿದರು. ಓದುವ ವಿದ್ಯಾರ್ಥಿಗಳನ್ನು ಕಂಡರೆ ಅಷ್ಟು ಅಕ್ಕರೆ.

**ಕವಿತ್ವ – ಅನುವಾದ**

ಸಂಸ್ಕೃತ ಕಾವ್ಯಗಳನ್ನು ಅವರಷ್ಟು ಪರಿಶೀಲಿಸಿದವರು ಯಾರೂ ಇರಲಿಕ್ಕಿಲ್ಲವೆಂದು ಹಿಂದೆ ಹೇಳಿದೆಯಷ್ಟೆ. ಅವರು ಬರೆದ ಶ್ಲೋಕಗಳನ್ನು ಲಘುಕಾವ್ಯದಂತಿರುವ 'ಶಂಕರ ಚರಿತಾಮೃತ'ವನ್ನು ಸಹೃದಯರೆಲ್ಲರೂ ಓದಬೇಕಾಗಿದೆ. 'ಬಾಹುಬಲಿವಿಜಯಂ' 'ಏಕಚಕ್ರಂ' ಎನ್ನುವ ಎರಡು ಕೃತಿಗಳು ಸೊಗಸಾದ ರೂಪಕಗಳು. ವಿದ್ವಾನ್ ಎನ್. ರಂಗನಾಥ ಶರ್ಮಾ ಎಂಬ ಹೆಸರನ್ನು ಪಕ್ಕಕ್ಕಿಟ್ಟು ಓದಿದರೆ ಕಾಳಿದಾಸ, ಭವಭೂತಿ, ಭಟ್ಟನಾರಾಯಣರ ಕಾಲದ ಕೃತಿಗಳನ್ನು ಓದುತ್ತಿದ್ದೇವೆಯೋ ಎನ್ನುವದು ಓದಿದವನ ಪ್ರತಿಯೊಬ್ಬನ ಅನುಭವವು ರೂಪಕಗಳಲ್ಲಿ ಬರುವ ಗದ್ಯಪದ್ಯಗಳಂತೂ ಶೈಲಿಯಲ್ಲಿ ಪರಸ್ಪರ ಸ್ಪರ್ಧಿಸುತ್ತಿರುವಂತಿವೆ. "ಉಪಪನ್ನಮೇತತ್ ಸತಾಂ ಯದನ್ಯದುಃಖ ಸಂವೇದನಮ್" (ಬೇರೆಯವರ ದುಃಖ ಸಜ್ಜನರಿಗೆ ಬೇಗ ಅರ್ಥ ವಾಗುವದು) ಈ ರೀತಿಯ ಸೊಗಸಾದ ಮಾತುಗಳನ್ನು ರೂಪಕಗಳ ತುಂಬ ಕಾಣಬಹುದು. ಶ್ಲೋಕಗಳು ಅವು ಮುಕ್ತಕಗಳೋ ದೇವತಾ ಸ್ತುತಿಯೊ ಸುಪ್ರಭಾತವೊ, ಸಮಸ್ಯಾಪೂರ್ತಿಯೋ – ಯಾವುದೇ ಪ್ರಕಾರಕ್ಕೆ ಸೇರಿದವಾರಾಗಿರಬಹುದು, ಅಲ್ಲಿ ಅಲಂಕಾರವನ್ನೋ ಧ್ವನಿಯನ್ನೋ, ಪ್ರಾಸವನ್ನೋ ನೋಡಬಹುದು. ಇವಿಷ್ಟು ಕಾವ್ಯದ ಬಗ್ಗೆ ಸಂಕ್ಷಿಪ್ತ ವಿವರಣೆ ಆದರೆ ಅವರ ಗದ್ಯದ ಪ್ರಸನ್ನ ಗಂಭೀರ ಶೈಲಿಯನ್ನು 'ಸಂಸ್ಕೃತಂ ನಾಮ ದೈವೀವಾಕ್', 'ಸಂಸ್ಕೃತಭಾಷಾಯಾಃ ವ್ಯಾವಹಾರಿಕತ್ವೇ ಪಾಣಿನೀಯ ಶಾಸ್ತ್ರೇಗಮಕಾನಿ', 'ಪಂಚಮ ಸಮ್ಮೇಲನೇ ಅಧ್ಯಕ್ಷಭಾಷಣಂ' ಇವೇ ಮೊದಲಾದ ಪ್ರೌಢಪ್ರಬಂಧಗಳಲ್ಲಿ ನೋಡಿ ಆಸ್ವಾದಿಸಬೇಕು.

ರಾಮಾಯಣ, ವಿಷ್ಣುಪುರಾಣ ಮತ್ತು ಭಾಗವತಗಳ ಅನುವಾದದ ಬಗ್ಗೆ ಹಿಂದೆ ಉಲ್ಲೇಖವಾಗಿದೆ. ಪ್ರೌಢಕಾವ್ಯವಾದ ಶಂಕರದಿಗ್ವಿಜಯ, ಅಮರಕೋಶ, ಶಾಸ್ತ್ರಗ್ರಂಥವಾದ ವಾಕ್ಯಪದೀಯದ ಬ್ರಹ್ಮಕಾಂಡ, ಕಾಲ ಮತ್ತು ಕ್ರಿಯೆ ಇವುಗಳನ್ನು ನಾಮ್ನಾ ಆದರೂ ಅವಶ್ಯ ನಿರ್ದೇಶಿಸಲೇಬೇಕು. ಇವರ ಅನುವಾದದ ಬಗ್ಗೆ ಡಿ.ವಿ.ಜಿ. ಎಂಬ ಮೂರು ಅಕ್ಷರಗಳಿಂದಲೇ ಲೋಕಪ್ರಸಿದ್ಧರಾದ ಸಂಮಾನ್ಯ ಶ್ರೀ ಡಿ.ವಿ. ಗುಂಡಪ್ಪನವರ ವಾಕ್ಯಗಳನ್ನೆ ಇಲ್ಲಿ ಉದ್ಧರಿಸಿ ಕೊಡುತ್ತಿದ್ದೇನೆ. ಇವು ಡಿ.ವಿ.ಜಿ. ಯವರ ವಾಕ್ಯಗಳು – "ಶ್ರೀ ರಂಗನಾಥಶರ್ಮರವರ ಕನ್ನಡ ಬರಿಯ ತರ್ಜುಮೆಯಲ್ಲ. ಸ್ವತಂತ್ರ ಪ್ರಸನ್ನವಾದದ್ದು. ಕನ್ನಡದಲ್ಲಿ ವ್ಯಾಕರಣದ ಕಡೆ ಹೆಚ್ಚು ಗಮನವಿಟ್ಟರೆ ವಾಕ್ಯವು ಪೆಡಸಾಗುತ್ತದೆ. ಸುಲಭತೆಯ ಕಡೆ ನೋಡಿದರೆ ವಾಕ್ಯವು ದುರ್ಬಲವಾಗುತ್ತದೆ. ಪಾಂಡಿತ್ಯದ ಅತಿಯೂ, ಪಾಮರತೆಯ ಅತಿಯೂ ಇಲ್ಲದಂತೆ ಬರೆಯುವದು ಕನ್ನಡದಲ್ಲಿ ಬಲುಕಷ್ಟ. ನಾಲ್ಕು ಬಗೆಯ ವಾಕ್ಯರಚನೆ ಸಾಧ್ಯವಾಗಿರುವಾಗ ಅದರಲ್ಲಿ ಯಾವದು ರಸಪೋಷಕವೆಂದು ಶ್ರೀ ರಂಗನಾಥಶರ್ಮರು ಹುಡುಕಿ ತಿಳಿದಿದ್ದಾರೆ. ಅವರ ವಾಕ್ಪ್ರವಾಹದಲ್ಲಿ ಸಹಜತೆ, ಲಾಲಿತ್ಯ, ವೈಶದ್ಯ, ಗಾಂಭೀರ್ಯ, ಓಜಸ್ಸು – ಈ ಗುಣಗಳು ಪ್ರಕಾಶಮಾನವಾಗಿದೆ. ಅವರ ಮುಖ್ಯದೃಷ್ಟಿ ರಸಪುಷ್ಟಿಯ ಕಡೆ ಮಾತು ಮಾತು ಅದಕ್ಕೆ ಸಹಾಯವಾಗಿದೆ. ಒಳ್ಳೆಯ ಕನ್ನಡ ಹೇಗಿರುತ್ತೆಂದು ಕೇಳುವವರಿಗೆ ಇದು ನಾನು ತೋರಿಸುವ ಮಾದರಿ" ಶ್ರೀ ಶರ್ಮರಿಂದ ಅನುವಾದಿತವಾದ ರಾಮಾಯಣದ ಪ್ರಸ್ತಾವನೆ ಯಲ್ಲಿರುವ ಮಾತುಗಳಿವು. ಇವು ಎಲ್ಲ ಅನುವಾದ ಕೃತಿಗಳಿಗೂ ಅನ್ವಯವಾಗುತ್ತವೆ.

## ಕೃತಿಗಳು

ಶ್ರೀ ಶರ್ಮರ ಸಂಸ್ಕೃತ ಕೃತಿಗಳು ಹತ್ತರಿಂದ ಹನ್ನೆರಡು ಆಗಬಹುದು. ಇವೆಲ್ಲವೂ ಸ್ವತಂತ್ರ ಕೃತಿಗಳು. ಅನುವಾದಿತ ಕೃತಿಗಳಲ್ಲ ಈಗ ಒಂದು ವಾರದ ಹಿಂದೆ 'ಕಾವ್ಯೋದ್ಯಾನಂ' ಎಂಬ ಪುಸ್ತಕದ ಬಿಡುಗಡೆಯಾಯಿತು. ಇದರಲ್ಲಿ ಹಿಂದೆ ಉಲ್ಲೇಖಿಸಿದ 'ಬಾಹುಬಲಿ ವಿಜಯಂ' ಮತ್ತು 'ಏಕಚಕ್ರಂ' ಎರಡು ರೂಪಕಗಳು, ಸಮಗ್ರಪದ್ಯ ಸಾಹಿತ್ಯವೂ ಅಡಕವಾಗಿವೆ. ಬೇರೆ ಬೇರೆಯ ಪುಸ್ತಕಗಳಲ್ಲಿ ಹರಡಿ ಹಂಚಿಹೋಗಿದ್ದ ಶ್ರೀ ಶರ್ಮರ ಸಂಸ್ಕೃತ ಕಾವ್ಯ ಪ್ರಪಂಚವನ್ನು ಈ ಒಂದೇ ಪುಸ್ತಕದಲ್ಲಿ ನೋಡಬಹುದು. ಕನ್ನಡದಲ್ಲಿ ಸ್ವತಂತ್ರಕೃತಿಗಳೂ ಇವೆ. ಅನುವಾದಿತಕೃತಿಗಳೂ ಇವೆ. ಸ್ವತಂತ್ರ ಕೃತಿಗಳಲ್ಲಿ 'ವ್ಯಾಕರಣ ಶಾಸ್ತ್ರದ ಪರಿವಾರ', 'ಹೊಸಗನ್ನಡ ವ್ಯಾಕರಣ' ಶಾಸ್ತ್ರೀಯ ಕೃತಿಗಳು, 'ಶ್ರೀರಾಮಕಥಾಮಂಜರಿ' ಒಂದು ಸೊಗಸಾದ ಗ್ರಂಥ. ಆ ಬಾಲವೃದ್ಧರೂ ಓದಿ ರಾಮಾಯಣದ ಕಥೆಯನ್ನು ಆಸ್ವಾದಿಸಬಹುದು. ನಾನೂರ ಐವತ್ತು ಪುಟಗಳಿಗೂ ಮೀರಿರುವ ಈ ಗ್ರಂಥದಲ್ಲಿ ವಾಲ್ಮೀಕಿಯ ರಾಮಾಯಣವನ್ನು ಆಧರಿಸಿ ಕಥೆಯ ಹಂದರಗಳು ಬಿಚ್ಚಿಕೊಂಡಿವೆ. ಪ್ರತಿಯೊಬ್ಬರ ಮನೆಯಲ್ಲೂ ಮನದಲ್ಲೂ ಇರಬೇಕಾದ ಗ್ರಂಥವಿದು. 'ಆಸ್ತಿಕಪರ್ವ'ವು ದೇವರ ಅಸ್ತಿತ್ವವನ್ನು ತಿಳಿಸಿಕೊಡಲು ಇತ್ತೀಚೆಗೆ ಬರೆದ ಒಂದು ಪ್ರಾಮಾಣಿಕ ಗ್ರಂಥ. ಹೀಗೆ ಸುಮಾರು ಇಪ್ಪತ್ತಕ್ಕೂ ಮೀರಿ ಕನ್ನಡ ಸ್ವತಂತ್ರ ಗ್ರಂಥಗಳನ್ನು ಬರೆದಿದ್ದಾರೆ. ಅನುವಾದಿತ ಕೃತಿಗಳ ಬಗ್ಗೆ ಹಿಂದೆಯೇ ಹೇಳಲಾಗಿದೆ. ಶ್ರೀ ಮದ್ರಾಮಾಯಣದ ಏಳೂ ಕಾಂಡಗಳನ್ನು ಅನುವಾದ ಮಾಡಿ ಕರ್ನಾಟಕದಾದ್ಯಂತ ವಿಖ್ಯಾತರಾದ ಶ್ರೀ ಶರ್ಮರ ಅನುವಾದಿತ ಕೃತಿಗಳು ಸುಮಾರು ಇಪ್ಪತ್ತರ ಗಡಿಯನ್ನು ದಾಟಿವೆ. ಸಂಪಾದಿತ ಕೃತಿಗಳಲ್ಲಿ ಡಿ.ವಿ.ಜಿ.ಯವರ 'ಮರುಳ ಮುನಿಯನ ಕಗ್ಗ' ಸುಪ್ರಸಿದ್ಧ.

## ನ್ಯಾಯಾಧೀಶರಲ್ಲಿ ನಂಬಿಕೆ ಹುಟ್ಟಿಸಿದ ವ್ಯಕ್ತಿತ್ವ

ಈ ಲೇಖನ ಬರೆಯಲು ಪ್ರಾರಂಭಿಸುವುದಕ್ಕೆ ಮೊದಲು ಶ್ರೀ ಶರ್ಮರನ್ನು ಕಾಣಲು ಅವರ ಮನೆಗೆ ಹೋದಾಗ ಮಾತಿನ ಮಧ್ಯದಲ್ಲಿ ಸುಮಾರು ಮೂವತ್ತೈದು ನಲವತ್ತು ವರ್ಷಗಳ ಹಿಂದೆ ನಡೆದ ಒಂದು ಘಟನೆಯನ್ನು ಹೇಳಿದರು. ಚಾಮರಾಜಪೇಟೆಯಿಂದ ವಿಜಯನಗರಕ್ಕೆ ಸಿಟಿ ಬಸ್ಸಿನಲ್ಲಿ ತಮ್ಮ ಮನೆಗೆ ಶ್ರೀ ಶರ್ಮರು ಹೋಗುತ್ತಿದ್ದರು. ಅದೇ ಬಸ್ಸಿನಲ್ಲಿ ಅವರ ಪರಿಚಿತರೊಬ್ಬರು ಹಿಂದಿನ ಬಾಗಿಲಿನ ಎದುರಿನ ಸೀಟಿನಲ್ಲಿ ಕುಳಿತಿದ್ದರು. ಮಾಗಡಿರೋಡಿನ ರಾಜಾಜಿನಗರದ ತಿರುವಿನಲ್ಲಿ ವೇಗವಾಗಿ ಬಸ್ಸನ್ನು ತಿರುಗಿಸಿದ್ದರಿಂದ ಆ ರಭಸಕ್ಕೆ ಹಿಂದೆ ಕುಳಿತಿದ್ದ ಇವರ ಪರಿಚಿತರು ಹಿಂಬಾಗಿಲಿನಿಂದ ಹೊರಕ್ಕೆ ಎಸೆಯಲ್ಪಟ್ಟು ಅಲ್ಲಿಯೇ ಮರಣಹೊಂದಿದರು. ಮುಂದಿನ ಅಂತ್ಯಸಂಸ್ಕಾರದವರೆಗಿನ ವ್ಯವಸ್ಥೆ ಮಾಡಿದ್ದಲ್ಲದೇ ಆರ್ಥಿಕವಾಗಿ ದುರ್ಬಲವಾಗಿದ್ದ ಅವರ ಕುಟುಂಬಕ್ಕೆ ಪರಿಚಿತರ ಮುಖಾಂತರ ಹಣ ಕೊಡಿಸಿ ಮುಂದಿನ ವಿಧಿ ವಿಧಾನಗಳನ್ನು ನಡೆಸಲು ನೆರವನ್ನೂ ಮಾಡಿದರು. ಆದರೆ ಇವರ ಕುಟುಂಬಕ್ಕೆ ಆರ್ಥಿಕವಾಗಿ ಸಹಾಯವಾಗಲೆಂದು ಮೃತರ ಪರಿಚಿತ ವಕೀಲರೊಬ್ಬರು ಇದನ್ನು ನ್ಯಾಯಾಲಯದಲ್ಲಿ ದಾಖಲಿಸಿ ಕೇಸು ನಡೆಸಿದರು. ಆಗ ಸಾಕ್ಷಿಹೇಳುವ ಪ್ರಸಂಗವು ಶ್ರೀ ಶರ್ಮರಿಗೆ ಬಂದೊದಗಿತು. "ಬಸ್ಸನ್ನೇರುವ ಮೆಟ್ಟಿಲಿನ ಮೇಲೆ ಆ ವ್ಯಕ್ತಿ ನಿಂತಿದ್ದರಿಂದ ಅವರು ಬಿದ್ದಿದ್ದಾರೆ. ಇದರಲ್ಲಿ ಚಾಲಕನ ತಪ್ಪಿಲ್ಲವೆನ್ನುವುದು" ಪ್ರತಿವಾದಿಗಳ ವಾದ. ಸಾಕ್ಷಿಯಾಗಿ

ಬಂದಿದ್ದ ಶ್ರೀ ಶರ್ಮರ ಮಾತನ್ನು ಕೇಳಿ ನ್ಯಾಯಾಧೀಶರು ಹೇಳಿದರಂತೆ–" ಇವರ ಮಾತನ್ನು ನಂಬುತ್ತೇನೆ" ಎಂದು. ಅನಂತರ ನಗರ ಸಾರಿಗೆಯ ಸಂಸ್ಥೆಯ ಮೂಲಕ ನ್ಯಾಯಾಲಯದ ತೀರ್ಪಿನಂತೆ ಮೃತರ ಕುಟುಂಬಕ್ಕೆ ಪರಿಹಾರ ಧನ ಸಿಕ್ಕಿತಂತೆ. ಇಲ್ಲಿ ಇನ್ನೊಂದು ವಿಷಯವನ್ನು ಹೇಳಿದರು. ಇಲ್ಲಿ ಚಾಲಕನ ತಪ್ಪೇನೂ ಅಷ್ಟಾಗಿ ಇರಲಿಲ್ಲ. ತಿರುವಿನಲ್ಲಿ ಅದು ಸಹಜ. ವಯಸ್ಸಾಗಿದ್ದ ಅವರು ಆ ರಭಸಕ್ಕೆ ಹೊರಗೆ ಬಿದ್ದರು. ಆದರೆ ಒಬ್ಬರಿಗೆ ಉಪಕಾರ ಮಾಡಲು ಹೋಗಿ ಬಡ ಚಾಲಕನಿಗೆ ತೊಂದರೆಯಾಗಬಾರದಷ್ಟೆ. ಅದಕ್ಕಾಗಿ ವಕೀಲರನ್ನು ಕೇಳಿ ಮೊದಲೇ ಖಚಿತಪಡಿಸಿಕೊಂಡಿದ್ದರಂತೆ–ಪರಿಹಾರಕೊಡುವವರು ಸಂಸ್ಥೆಯವರೇ ಹೊರತು ಚಾಲಕನಲ್ಲ ವೆಂದು.

ಒಬ್ಬ ವ್ಯಕ್ತಿಯ ನಡೆ – ನುಡಿಗಳ ಬಗ್ಗೆ ಇದಕ್ಕೂ ಮಿಗಿಲಾದ ಇನ್ನೊಂದು ಉದಾಹರಣೆ ಸಿಗಲಾರದು. ಪ್ರಾಮಾಣಿಕ, ಪ್ರಾಮಾಣಿಕತೆ ಎಂಬ ಶಬ್ದಗಳೇ ಶಬ್ದಕೋಶದಿಂದ ಬಹುದೂರ ಹೋಗುತ್ತಿರುವ ಈ ಕಾಲದಲ್ಲಿ ಪ್ರಾಮಾಣಿಕತೆಯ ಮೂರ್ತಿಮದ್ರೂಪವಾಗಿರುವ ಶ್ರೀ ಶರ್ಮರನ್ನು ಒಮ್ಮೆಯಾದರೂ ಕಣ್ತುಂಬ ನೋಡಬೇಕು, ಅವರೊಡನೆ ಎರಡು ಮಾತುಗಳನ್ನಾದರೂ ಆಡಬೇಕು.

ಮುಂದೆ ಹೇಳುವ ಘಟನೆಯೊಂದಿಗೆ ಈ ಲೇಖನವನ್ನು ಉಪಸಂಹರಿಸಲು ಬಯಸುತ್ತೇನೆ. 'ಶ್ರೀ ಶಂಕರಚರಿತಾಮೃತಂ' ಎಂಬ ಲಘುಕಾವ್ಯವನ್ನು ಬರೆದ ಮೇಲೆ ಶ್ರೀಶೃಂಗೇರಿಯ ಶಾರದಾಪೀಠಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಶ್ರೀ ಭಾರತೀತೀರ್ಥಮಹಾಸ್ವಾಮಿಗಳ ದರ್ಶನ ಪಡೆದು ಕಾವ್ಯವನ್ನು ಶ್ರೀ ಶರ್ಮರು ಅವರ ಮುಂದಿಟ್ಟು ಅನುಗ್ರಹಸಂದೇಶವನ್ನು ಕೇಳಿದರು. ಸ್ವಯಂ ಕವಿಗಳೇ ಬಂದಿದ್ದೀರಿ. ತಮ್ಮ ಮುಖದಿಂದಲೇ ಓದಿಸಿ ಶ್ರವಣ ಮಾಡಲು ಇಷ್ಟಪಡುತ್ತೇವೆ. ನಾಲ್ಕೈದು ದಿನಗಳು ಇಲ್ಲಿಯೇ ಇದ್ದು ತಾವೇ ಓದಿ ಕೇಳಿಸಿ, ಎಂದು ಹೇಳಿ ನಾಲ್ಕೈದು ದಿನಗಳ ಕಾಲ ನಿಯತ ಸಮಯದಲ್ಲಿ ಇನ್ನೂರ ನಲುವತ್ತು ಶ್ಲೋಕಗಳನ್ನು ಜಗದ್ಗುರುಗಳು ಆಲಿಸಿ ಪ್ರತಿನಿತ್ಯವೂ ಬಹಳ ಆನಂದಪಟ್ಟು ಅನುಗ್ರಹಸಂದೇಶವನ್ನಿತ್ತರಂತೆ. ಜಗದ್ಗುರುಗಳವರಿಗೆ ಗ್ರಂಥ ನೀಡಿದ ಮೇಲೆ ಅವರು ಸ್ವಯಂ ಪರಿಶೀಲಿಸಿ ಅನುಗ್ರಹ ಸಂದೇಶ ನೀಡುವುದು ಪದ್ಧತಿ. ಆದರೆ ಈ ರೀತಿಯ ವಿಶೇಷಾನುಗ್ರಹಕ್ಕೆ ಪಾತ್ರರಾದವರು ಶ್ರೀ ಶರ್ಮರು ಮಾತ್ರ ಆಗಿರಬೇಕು. ಅದಕ್ಕೆ ಕಾರಣವೂ ಇದೆ. ಶೃಂಗೇರಿಯಲ್ಲಿ ಜಗದ್ಗುರುಗಳ ಸಾನ್ನಿಧ್ಯದಲ್ಲಿಯೇ ನಡೆಯುವ ಮಹಾಗಣಪತಿ ವಾಕ್ಯಾರ್ಥಸಭೆಯು ದೇಶ–ವಿದೇಶಗಳಲ್ಲೂ ಪ್ರಸಿದ್ಧ. ಈ ಸಭೆಯಲ್ಲಿ ಅಗಾಧಪಾಂಡಿತ್ಯವನ್ನು ಪಡೆದವರು ಮಾತ್ರ ಪ್ರವೇಶಮಾಡಲು ಅರ್ಹರಾಗಿರುತ್ತಾರೆ. ಶೃಂಗೇರಿಯ ಮಹಾಗಣಪತಿಯ ವಾಕ್ಯಾರ್ಥಸಭೆಯಲ್ಲಿ ಭಾಗವಹಿಸುವ ವಿದ್ವಾಂಸನೆಂದರೆ ವಿದ್ವತ್‌ಸಮಾಜ ದಲ್ಲಿಯೇ ಒಂದು ಗೌರವವಿದೆ. ಆ ಸಭೆಗೆ ಭಾಗವಹಿಸಲು ಆಮಂತ್ರಣ ಬಂದಿದೆ ಎನ್ನುವುದೇ ವಿದ್ವಾಂಸನ ವೈದುಷ್ಯಕ್ಕೆ ಒಂದು ಪ್ರಮಾಣ ಪತ್ರ. ಭಾರತದ ಎಲ್ಲ ರಾಜ್ಯಗಳಿಂದಲೂ ಬಂದ ವಿದ್ವನ್ಮೂರ್ಧನ್ಯರು ಈ ಸಭೆಯಲ್ಲಿ ವಿಷಯಮಂಡನೆಯನ್ನು ಜಗದ್ಗುರುಗಳ ಸನ್ನಿಧಿಯಲ್ಲಿ ಮಾಡುತ್ತಾರೆ. ಈ ಸಭೆಯಲ್ಲಿ ಶಾಸ್ತ್ರವಿಷಯಗಳ ಪ್ರಸ್ತಾವಕ್ಕೆ ಮಾತ್ರ ಅವಕಾಶ ಇಂಥ ಸಭೆಗೆ ಹಲವಾರು ವರ್ಷಗಳವರೆಗೆ ಹೋಗಿ ವ್ಯಾಕರಣಶಾಸ್ತ್ರದ ವಿಷಯವನ್ನು ಮಂಡಿಸಿದವರು

ಶ್ರೀಶರ್ಮರು ಈಗ ವಾರ್ಧಕ್ಯದಿಂದಾಗಿ ಪ್ರವಾಸಮಾಡಲು ಆಗದೆ ಸಭೆಯಲ್ಲಿ ಭಾಗವಹಿಸಲಾಗುತ್ತಿಲ್ಲವೆಂಬ ವಿಷಾದ ಅವರ ಹೃದಯದಲ್ಲಿದೆ. ಹೀಗೆ ಶಾಸ್ತ್ರದಲ್ಲಿ ಅಗಾಧ ಪಾಂಡಿತ್ಯ ಹೊಂದಿದ ಶ್ರೀ ಶರ್ಮರ ಕಾವ್ಯಮುಖವನ್ನೂ ಅವರ ಮುಖದಿಂದಲೇ ಓದಿಸಿ ಕೇಳಲು ಜಗದ್ಗುರುಗಳು ಇಷ್ಟಪಟ್ಟಿದ್ದು.

ಈ ಲೇಖನದಲ್ಲಿ ಶ್ರೀ. ಶರ್ಮರ ಸಮಯ ಪಾಲನೆ, ಕರಡು ತಿದ್ದುವ ರೀತಿ, ಗೌರವಪೂರ್ವಕವಾಗಿ ನಿವೇಶನವೊಂದನ್ನು ದಾನನೀಡಲು ಮುಂದಾದವರಿಗೆ "ನನಗೆ ವಾಸಕ್ಕೆ ಸ್ವಂತ ಮನೆ ಇದೆ, ಅದರ ಅವಶ್ಯಕತೆ ಇಲ್ಲ" ಎಂದು ಹೇಳಿ ಆದರಪೂರ್ವಕವಾಗಿ ಅವರನ್ನು ಹಿಂದಿರುಗಿಸಿದ್ದು, ಮನೆಗೆ ಬಂದ ಪ್ರತಿಯೊಬ್ಬರಿಗೂ ಗೌರವ ನೀಡುವ ಬಗೆ ಮತ್ತು ಅತಿಥಿ ಸತ್ಕಾರ ಇವೇ ಮೊದಲಾದವನ್ನು ವಿಸ್ತರಿಸಿ ಬರೆಯಲಾಗದ್ದಕ್ಕೆ ಕ್ಷಮೆಯನ್ನು ಕೋರಿ ಈ ಪುಟ್ಟ ಲೇಖನವನ್ನು ಶ್ರೀ ಶರ್ಮರ ಚರಣಗಳಿಗೆ ಅರ್ಪಿಸುತ್ತೇನೆ.

❖

# ಪ್ರಭಾವಪೂರ್ಣಗುರು

## (ಡಾ॥ ವಿ.ಕೃ.ಗೋಕಾಕ್)

● *ವ್ಹಿ.ಎಸ್. ಹನುಮಂತಗಡ*

**ಹೋ**ದ ಶತಮಾನದ ಐದನೆಯ ದಶಕದಲ್ಲಿ ಕರ್ನಾಟಕ ಕಾಲೇಜು ತನ್ನ ಕೀರ್ತಿಯ ಪರಾಕಾಷ್ಠೆಯಲ್ಲಿ ಇತ್ತು ಎಂದರೆ ಅತಿಶಯೋಕ್ತಿಯಾಗಲಾರದು. ಆಗ ಕಾಲೇಜಿನ ಪ್ರತಿ ವಿಭಾಗದಲ್ಲಿಯೂ ಒಬ್ಬೊಬ್ಬ ದಿಗ್ಗಜ ಪಂಡಿತರಿದ್ದರು. ಅವರೆಲ್ಲರ ಮಧ್ಯದಲ್ಲಿ ಮೇರು ಶಿಖರದಂತೆ ಪ್ರಾಚಾರ್ಯ ಗೋಕಾಕರಿದ್ದರು.

ಪ್ರಾಚಾರ್ಯರಾಗಿ ಗೋಕಾಕರು ಧಾರವಾಡದಲ್ಲಿರುವವರೆಗೆ ಅವರು ಧಾರವಾಡದ ಸಾರಸ್ವತಲೋಕವನ್ನು ರಾಜನಂತೆ ಆಳಿದರು. ಬೇಂದ್ರೆ, ಗೋಕಾಕರ ಜೋಡಿ ಧಾರವಾಡದಲ್ಲಿ ವಿಜೃಂಭಿಸಿತು. ೧೯೫೩ ಅಥವಾ ೫೪ರಲ್ಲಿ ಇರಬಹುದು. ಯಾವುದೋ ಒಂದು ನೆರೆಹಾವಳಿಯ ಸಹಾಯಾರ್ಥವಾಗಿ ಕಾಲೇಜಿನಲ್ಲಿ ವಿಜ್ಞಾನ ಪ್ರದರ್ಶನವನ್ನು ನೋಡಲು ಹುಬ್ಬಳ್ಳಿಯಿಂದ ಧಾರವಾಡಕ್ಕೆ ಬಂದಿದ್ದೆನು. ಅದು ಕರ್ನಾಟಕ ಕಾಲೇಜಿಗೆ ನನ್ನ ಪ್ರಥಮ ಭೇಟಿ. ರಸಾಯನ ಶಾಸ್ತ್ರವಿಭಾಗದ ಕಟ್ಟಡದ ಹತ್ತಿರ ನಿಂತು ಎತ್ತರದಲ್ಲಿದ್ದ ಮುಖ್ಯ ಕಟ್ಟಡದತ್ತ ನೋಡಿದಾಗ ಏನೋ ಒಂದು ರೋಮಾಂಚಕ ಅನುಭವ. ಆದರ ಆ ಭವ್ಯತೆ, ನನ್ನನ್ನು ಹುಚ್ಚು ಹಿಡಿಸಿತು. ಆಗಲೇ ಗೋಕಾಕರ ಬಗ್ಗೆ ಸಾಕಷ್ಟು ಕೇಳಿದ್ದೆ. ಒಂದು ಸಲ ಭಾಷಣವನ್ನೂ ಕೇಳಿದ್ದೆ. ಅಂದಿನಿಂದ ಆ ಕಾಲೇಜನ್ನು ಯಾವಾಗ ಸೇರಿಯೇನೋ ಎಂಬ ಉತ್ಸುಕತೆಯಲ್ಲಿದ್ದು ಎಸ್.ಎಸ್.ಸಿ.ಯನ್ನು ಮುಗಿಸಿದೆ. ಕಾಲೇಜೂ ಸೇರಿದೆ.

ಬೆಳಗಾವಿ, ಮುಂಬಯಿ ಹಾಗೂ ಧಾರವಾಡ ಈ ಊರುಗಳಲ್ಲಿ ನನ್ನ ಕಾಲೇಜು ಶಿಕ್ಷಣ ನಡೆದರೂ ಧಾರವಾಡದಲ್ಲಿ ಕರ್ನಾಟಕ ಕಾಲೇಜಿನಲ್ಲಿ ಕಳೆದ ಎರಡು ವರ್ಷಗಳು ಮಾತ್ರ ಅತ್ಯಂತ ಸ್ಮರಣೀಯ ದಿನಗಳು. ಇದಕ್ಕೆ ಕಾರಣ ಗೋಕಾಕರ ಪ್ರಭಾವಿ ವ್ಯಕ್ತಿತ್ವ.

ಸ್ವಲ್ಪ ದೂರದಿಂದ ನೋಡಿದರೆ ಭಯಭಕ್ತಿ ಹುಟ್ಟಿಸುವಂಥ ಎತ್ತರದ ಗಂಭೀರ ನಿಲುವು. ಗಂಭೀರ ತೇಜಃಪುಂಜ ಮುಖ. ಆದರೆ ಒಮ್ಮೆ ಸಮೀಪ ಹೋಗಿ ಮಾತನಾಡಿಸಿದರೆ ಆ ಗಾಂಭೀರ್ಯ ಸಡಿಲಾಗಿ ಸಲೀಸಾಗಿ ಆತ್ಮೀಯತೆಯಿಂದ ಮಾತನಾಡುತ್ತಿದ್ದರು. ಬೇಗನೆ ಭಯ ತೊಲಗಿ ಭಕ್ತಿ. ಆದರ ಮಾತ್ರ ಉಳಿಯುತ್ತಿದ್ದವು. ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಎಂದೂ ಬೇಸರಿಸದೇ ಉತ್ತರಿಸುತ್ತಿದ್ದರು.

ಉಳಿದ ಕಾಲೇಜುಗಳಿಗಿಂತ ಕರ್ನಾಟಕ ಕಾಲೇಜಿನ ಎತ್ತರವೇ ಬೇರೆ. ಆ ಕಾಲೇಜಿನ ಪ್ರಿನ್ಸಿಪಾಲರ ಸ್ಥಾನ ವಿಶಿಷ್ಟವಾದುದು. ಆದರೆ ಅವರನ್ನು ಮಾತನಾಡಿಸಲು ಹಾಗೂ ನೋಡಲು ನಮ್ಮ ಉತ್ಸುಕತೆಯಲ್ಲಿ ಒಮ್ಮೊಮ್ಮೆ ಔಚಿತ್ಯ ಪ್ರಜ್ಞೆ ಮೀರಿ ವರ್ತಿಸುತ್ತಿದ್ದೆವು. ಆದರೆ ಅವರು ಮಾತ್ರ ಅದನ್ನು ಗಣನೆಗೆ ತಂದುಕೊಳ್ಳುತ್ತಿರಲಿಲ್ಲ. ಒಮ್ಮೆ ಏನೋ ಒಂದು ಸಣ್ಣ ಪ್ರಶ್ನೆ ಕೇಳಿ ಸಂಶಯ ಪರಿಹರಿಸಿಕೊಳ್ಳಬೇಕೆಂದು ನೇರವಾಗಿ ಪ್ರಿನ್ಸಿಪಾಲರ ರೂಮಿಗೆ ನುಗ್ಗಿದೆ. ಪ್ರಶ್ನೆ ಕೇಳಿದೆ. ಅವರು ಶಾಂತವಾಗಿ ಉತ್ತರಿಸಿದರು. ಆದರೆ ಈಗ ಅನಿಸುತ್ತಿದೆ. ಹಾಗೆ ಹೋಗಬಾರದಿತ್ತು ಎಂದು. ಮತ್ತೆ ಯಾರಾದರೂ ಅವರ ಸ್ಥಾನದಲ್ಲಿದ್ದದ್ದರೆ, "ನಿಮಗೆ ಒಳಗೆ ಯಾರು ಬಿಟ್ಟರು? ಪರವಾನಿಗಿ ಇಲ್ಲದೆ ಒಳಗೆ ಬರಲಿಕ್ಕೆ ತಿಳಿಯುವದಿಲ್ಲೇನು?" ಅಂತ ಬೈಯಬಹುದಾಗಿತ್ತು. (ಆಗ ದ್ವಾರಪಾಲಕಪ್ಪ ಎಲ್ಲೋ ತುರ್ತು ಕೆಲಸದ ನಿಮಿತ್ತ ಒಂದೆರಡು ನಿಮಿಷ ಹೊರಗೆ ಹೋಗಿದ್ದನೆಂದು ತೋರುತ್ತದೆ)

೧೯೫೬ ಅಥವಾ ೫೭ರಲ್ಲಿ ಹುಬ್ಬಳ್ಳಿಯಲ್ಲಿ ಕಾಲೇಜು ಯುವಜನೋತ್ಸವ ನಡೆಯಿತು. ಆಗ ಹುಬ್ಬಳ್ಳಿಯ ಎನ್.ಸಿ.ಸಿ. ವಿದ್ಯಾರ್ಥಿಗಳು ಶಿಸ್ತುಪಾಲನೆಗೆ ನಿಯಮಿಸಲ್ಪಟ್ಟಿದ್ದರು. ಅವರು ತಮ್ಮ ಕಾಲೇಜಿನ ವಿದ್ಯಾರ್ಥಿಗಳನ್ನು ಮಾತ್ರ ಬಿಟ್ಟು ಕರ್ನಾಟಕ ಕಾಲೇಜಿನ ವಿದ್ಯಾರ್ಥಿಗಳನ್ನು ಒಳಗೆ ಬಿಡದೆ ಗೋಳಾಡಿಸಹತ್ತಿದರು. ಆಗ ಗೋಕಾಕರು ಎಲ್ಲ ವಿದ್ಯಾರ್ಥಿಗಳನ್ನು ಸಮಾಧಾನಗೊಳಿಸಿ ಎನ್.ಸಿ.ಸಿ. ಕ್ಯಾಡೆಟ್‌ಗಳನ್ನು ಹಿಂತೆಗೆದು, ಎಲ್ಲ ವಿದ್ಯಾರ್ಥಿಗಳನ್ನು ಒಳಗೆ ಬಿಟ್ಟರು. ಪರಿಸ್ಥಿತಿ ಶಾಂತವಾಯಿತು. ಮರುದಿನ ನಾಟಕಸ್ಪರ್ಧೆಯ ಫಲಿತಾಂಶದಲ್ಲಿ ಪಕ್ಷಪಾತ ವಾಯಿತೆಂದು ಕೂಗೆಬ್ಬಿಸಿ ವಿದ್ಯಾರ್ಥಿಗಳು ಗೊಂದಲವೆಬ್ಬಿಸಿದರು. ಅವರು ಆವೇಶಗೊಂಡು ರೊಚ್ಚಿಗೆದ್ದರು. ಉಳಿದ ಯಾವ ಪ್ರಿನ್ಸಿಪಾಲರಿಗೂ ಅವರ ಮಧ್ಯೆ ಹೋಗಿ ಶಾಂತಗೊಳಿಸುವ ಧೈರ್ಯವಾಗಲಿಲ್ಲ. ಅಂಥದರಲ್ಲಿ ಗೋಕಾಕರು ಮುಂದೆ ಹೋಗಿ ಅವರನ್ನು ಸಮಾಧಾನಗೊಳಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು. ಅವರ ನೈತಿಕ ಧೈರ್ಯ ಅವರಿಗೆ ಅದನ್ನು ಎದುರಿಸುವ ಶಕ್ತಿಯನ್ನು ಕೊಟ್ಟಿತ್ತು.

ಗೋಕಾಕರು ಯಾವ ಕಾಲೇಜಿಗೇ ಹೋಗಲಿ ಅಲ್ಲಿ ಅವರು ವಿದ್ಯಾರ್ಥಿಗಳಲ್ಲಿ ಕಾವ್ಯಪ್ರೀತಿ ಹಾಗೂ ಕಾವ್ಯ ವಿಮರ್ಶೆಯ ರೀತಿ-ನೀತಿಗಳನ್ನು ಅಳವಡಿಸಲು ಪ್ರೇರಣೆ ನೀಡುತ್ತಿದ್ದರು. ಸಾಂಗಲಿಯಲ್ಲಿ 'ವರುಣಕುಂಜ', ಧಾರವಾಡದಲ್ಲಿ 'ಕಮಲಮಂಡಲ' ಇತ್ಯಾದಿ ಕೂಟಗಳನ್ನು ಕಾಲೇಜಿನಲ್ಲಿ ಸ್ಥಾಪಿಸಿದ್ದರು. ಯಾವನಾದರೊಬ್ಬ ವಿದ್ಯಾರ್ಥಿ ಒಂದು ಕವಿತೆ ಬರೆದು ಕಾಲೇಜು ನೋಟೀಸ ಬೋರ್ಡ ಮೇಲೆ ಹಚ್ಚಬೇಕು. ಮುಂದಿನ ವಾರ ಅದರ ವಿಮರ್ಶೆಯಾಗಬೇಕು. ಅದಕ್ಕೆ ಅಧ್ಯಕ್ಷರು ಶ್ರೀ ಗೋಕಾಕರೇ. ಆಗ ಕವಿತೆ ಬರೆದು ಓದಿದವರಲ್ಲಿ ಶ್ರೀ ಗಿರೀಶ ಕಾರ್ನಾಡ, ಶ್ರೀ ಜಿ.ಎನ್. ಕುಂದರಗಿ, ಶ್ರೀ ಆರ್. ಜಿ. ಕುಲಕರ್ಣಿ ಪ್ರಮುಖರು. ಒಂದು ಸಲ ಈ ಸಭೆಗೆ ಶ್ರೀ ಚೆನ್ನವೀರ ಕಣವಿಯವರೂ ಬಂದಿದ್ದರು. ಕೊನೆಗೆ ಗೋಕಾಕರು ಎಲ್ಲ ವಿದ್ಯಾರ್ಥಿಗಳ ವಿಮರ್ಶೆಗಳನ್ನು ವಿಶ್ಲೇಷಿಸಿ, ಯಾವ ರೀತಿಯಲ್ಲಿ ಸಾಗಬೇಕೆಂಬುದನ್ನು ಸೂಚಿಸುತ್ತಿದ್ದರು. ಇದು ಕಾವ್ಯ ವಿಮರ್ಶೆಯ ವಿದ್ಯಾರ್ಥಿಗಳಿಗೆ ಬಹಳೇ ಉಪಯುಕ್ತವಾಗುತ್ತಿತ್ತು. ಈ 'ಕಮಲಮಂಡಲ' ಮಾಡಿದ ಇನ್ನೊಂದು ಸ್ಮರಣೀಯ ಕೆಲಸವೆಂದರೆ 'ವಂಶವೃಕ್ಷ'

ಎಂಬ ಕವನ ಸಂಕಲನವನ್ನು ಪ್ರಕಟಿಸಿದುದು. ಕರ್ನಾಟಕ ಕಾಲೇಜಿನಲ್ಲಿ ಓದಿದ ಹಳೆಯ ವಿದ್ಯಾರ್ಥಿಗಳ ಕವನಗಳ ಜೊತೆಗೆ ಅಂದಿನ (೧೯೫೬ರ ವರೆಗಿನ) ವಿದ್ಯಾರ್ಥಿಗಳ ಕೆಲವು ಕವನಗಳನ್ನು ಸೇರಿಸಿ ಕವನ ಸಂಕಲನ ತಯಾರಾಗಿತ್ತು. ಬೇಂದ್ರೆಯವರ ಆಶೀರ್ವಾಚನದ ಕವಿತೆಯೂ ಸೇರಿತ್ತು. ಒಂದು ದೃಷ್ಟಿಯಿಂದ ಇದು ಧಾರವಾಡದಲ್ಲಿಯ ಭಾವಗೀತೆ ಬೆಳೆದು ಬಂದ ಕ್ರಮವನ್ನು ಸೂಚಿಸುವ ಸಂಕಲನವಾಗಿತ್ತು. ಇದಕ್ಕೆ ಇನ್ನೊಂದು ಆಕರ್ಷಣೆ ಎಂದರೆ ಈ ಪ್ರತಿಯನ್ನು ಕೊಂಡ ಕಾಲೇಜು ವಿದ್ಯಾರ್ಥಿ ತನ್ನ ಹೆಸರು ಬರೆದು ಪ್ರಿನ್ಸಿಪಾಲ್ ಗೋಕಾಕರ ಹತ್ತಿರ ಕೊಟ್ಟರೆ ಅವರು ಅವನ ಹೆಸರಿನ ಮೇಲೆ ನಾಲ್ಕು ಸಾಲುಗಳ ಪದ್ಯ ಬರೆದು ಸಹಿ ಮಾಡಿಕೊಡುತ್ತಿದ್ದರು. ಹೀಗಾಗಿ ಪುಸ್ತಕಗಳ ಮಾರಾಟ ಚೆನ್ನಾಗಿ ಆಯಿತು. ನನ್ನ ಪ್ರತಿಯನ್ನು ಗೋಕಾಕರಿಗೆ ಕೊಟ್ಟಾಗ ಮರುದಿನ ಈ ಸಾಲುಗಳೊಂದಿಗೆ ಅದನ್ನು ಹಿಂದಿರುಗಿಸಿದರು.

**ರಾಮಗಡದ ಹತ್ತಿರವಿದೆ**
**ಹನುಮಂತಗಡ**
**ಜೋಡಿಸೊಂದು ಗಡಕೊಂದನು**
**ಮತ್ತದೇಕೆ ತಡ**

–ವಿನಾಯಕ

ಈ ಸಾಲುಗಳ ಅರ್ಥ ನನಗೆ ಬೇಗನೆ ಹೊಳೆಯಲಿಲ್ಲ. ನಾವಿನ್ನೂ ಆಗ ಸಾಕಷ್ಟು ಅಪ್ರಬುದ್ಧ. ಆಗ ಅವರನ್ನೇ ನೇರವಾಗಿ ಕೇಳಿದೆ 'ಏನು ಸರ್ ಇದರ ಅರ್ಥ ಆಗಲೇ ಇಲ್ಲ. ಏನಿದರ ಮರ್ಮ?' ಎಂದು. ಆಗ ಅವರು ಹೇಳಿದರು. "Rama stands for divine Grace. Hanuman stands for Good will. If both are combined, any task, however difficult it can be easily fulfilled" ಎಂದು. ಅದೊಂದು ದಿವ್ಯ ಸಂದೇಶ. ಹೀಗೆ ಅವರು ಎಷ್ಟೊ ವಿದ್ಯಾರ್ಥಿಗಳ ಜೀವನಕ್ಕೆ ದಾರಿದೀಪ ತೋರಿಸಿದ್ದಾರೆ.

೧೯೫೬ರಲ್ಲಿ ಸ್ನೇಹ ಸಮ್ಮೇಲನದ ಕಾಲಕ್ಕೆ ಮುಖ್ಯ ಅತಿಥಿ ಬೇಗ ಬರಲಿಲ್ಲವೆಂದು ತೋರುತ್ತದೆ. ಆಗ ಸಂಜೆ ವಿವಿಧ ವಿನೋದಾವಳಿಗಳು ಆರಂಭವಾಗುವದಕ್ಕೆ ಮೊದಲೇ ವೇದಿಕೆಯ ಮೇಲೆ ಅವರೇ ಬಂದು ಹತ್ತು ನಿಮಿಷ ಮಾತನಾಡಿದರು. ಅದರಲ್ಲಿ ಅವರು ಹೇಳಿದ ಒಂದು ಮಾತು ಇನ್ನೂ ನೆನಪಿದೆ. "The younger generation is really lucky. When you entered high school you got independence for India, and when you entered college, you got Karnataka State." ಈ ರೀತಿ ಅವರು ಯಾವಾಗಲೂ ವಿದ್ಯಾರ್ಥಿಗಳಿಗೆ ಜೀವನದ ಹೊಳಪಿನತ್ತ, ಆದರ್ಶದತ್ತ ಕರೆದೊಯ್ಯಲು ಪ್ರಯತ್ನಿಸುತ್ತಿದ್ದರು.

ಗೋಕಾಕರ ಸಂಪರ್ಕದ ಮೂಲಕ ಅಂದು ಕರ್ನಾಟಕ ಕಾಲೇಜಿಗೆ ಅನೇಕ ಮಹಾನ್ ವ್ಯಕ್ತಿಗಳು ಭೇಟಿ ನೀಡಿದರು. ಬೇಂದ್ರೆಯವರ ಅರವತ್ತನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಬೇಂದ್ರೆ, ಗೋಕಾಕ ಹಾಗೂ ಹಿರಿಯಣ್ಣ ಮಾಸ್ತಿಯವರನ್ನು ಕಾಲೇಜಿನ ಒಂದೇ ವೇದಿಕೆಯ

ಮೇಲೆ ಕಾಣಲು ಸಾಧ್ಯವಾಯಿತು. ಇದಲ್ಲದೇ ಶ್ರೀ ರಂ.ಶ್ರೀ. ಮುಗಳಿಯವರ ವಿದ್ವತ್ಪೂರ್ಣ ಭಾಷಣ ('ಕನ್ನಡ ಸಾಹಿತ್ಯದಲ್ಲಿ ಸರಸ್ವತಿ ದರ್ಶನ')ವನ್ನು ಗೋಕಾಕರ ಸನ್ನಿಧಿಯಲ್ಲ ಕೇಳಲು ಸಾಧ್ಯವಾಯಿತು. ಅದೊಂದು ದಿವ್ಯ ಅನುಭವ. ಅವರಿದ್ದಾಗಲೇ ಅವರಿಂದಾಗಿಯೇ All India English Teacher's Conference ಧಾರವಾಡದಲ್ಲಿ ಜರುಗಿತು. ಬೆಂಗಳೂರಿನ Servants of India Societyಯ ಶ್ರೀ ಪಿ. ಕೋದಂಡರಾವ ಕೂಡ ಬಂದಿದ್ದರು.

ಅವರು ಧಾರವಾಡದಲ್ಲಿದ್ದಾಗಲೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆ ಯಾದರು. ಆಗ ನಾನು ಅವರನ್ನು ಅಭಿನಂದಿಸಿ ಪತ್ರ ಬರೆದಾಗ ಅವರು ಅದಕ್ಕೆ ಉತ್ತರಿಸಿದ ಪತ್ರ ಇನ್ನೂ ನನ್ನಲ್ಲಿದೆ. ಅವರ ಹಸ್ತಾಕ್ಷರಗಳ ಅಪೂರ್ವ ಸಾಕ್ಷಿಯಾಗಿ ಅದನ್ನು ಜತನದಿಂದ ಕಾಯ್ದಿರಿಸಿಕೊಂಡಿದ್ದೇನೆ.

ಆಕಾಶದೆತ್ತರಕ್ಕೆ ಬೆಳೆದರೂ ಸಾಮಾನ್ಯ ವಿದ್ಯಾರ್ಥಿಗಳೊಡನೆ ಆತ್ಮೀಯವಾಗಿ ಬೆರೆಯಬಲ್ಲಂಥ ಇಂಥ ಪ್ರಾಧ್ಯಾಪಕರು ತೀರ ಅಪರೂಪ. ಧಾರವಾಡದ ಪುಣ್ಯ ಪುರುಷರಲ್ಲಿ ಅವರೊಬ್ಬರು. ಇಂದಿಗೂ (ಈ ಇಳಿವಯಸ್ಸಿನಲ್ಲಿ) ಧಾರವಾಡಕ್ಕೆ ಹೋದಾಗ ಧಾರವಾಡದ ನೆಲದಲ್ಲಿ, ವಿಶೇಷವಾಗಿ ಕರ್ನಾಟಕ ಕಾಲೇಜಿನ ಕಟ್ಟಡದಲ್ಲಿ, ಆವಾರದಲ್ಲಿ ಒಬ್ಬ ಯಾತ್ರಿಕನಂತೆ ಭಕ್ತಿ-ಭಾವದಿಂದ ಸುತ್ತಾಡಿ ಬರುತ್ತೇನೆ. ಆ ಕಾಲೇಜಿನ ವಿದ್ಯಾರ್ಥಿಗಳ ಪರಂಪರೆಯಲ್ಲಿ ನಾನೂ ಒಬ್ಬ ಎಂಬ ಹೆಮ್ಮೆ ಹಾಗೂ ಧನ್ಯತೆಯ ಭಾವವನ್ನು ಅನುಭವಿಸುತ್ತೇನೆ.

❖

# ಸದ್ಗುಣ ಸಂಪನ್ನ ಗುರು

**(ಪ್ರೊ. ಎಂ.ವಿ. ಸೀತಾರಾಮಯ್ಯ)**

---

*• ಡಾ|| ಕೈದಾಳ ರಾಮಸ್ವಾಮಿ ಗಣೇಶ*

೧೯೬೮-೬೯ರಲ್ಲಿ ನಾನು ಎಂ.ಎ. ಕನ್ನಡ ವಿದ್ಯಾರ್ಥಿಯಾಗಿ ಸೆಂಟ್ರಲ್ ಕಾಲೇಜಿಗೆ ಸೇರಿದಾಗ, ಕನ್ನಡದ ಇತಿಹಾಸದ ಬಗೆಗೆ ಮೂರು ಕಾಸಿನ ವಿಷಯಗೊತ್ತಿರಲಿಲ್ಲ. ಬಿ.ಎಸ್.ಸಿ.ಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನು ಓದಿದ ಮೇಲೆ ಬಿ.ಎಡ್.ನಲ್ಲಿ ಕನ್ನಡ ಮಾಧ್ಯಮವೇ ಇರಲಿಲ್ಲ. ಕನ್ನಡದಲ್ಲಿ ಬರೆದ ಟಿ.ಸಿ.ಎಚ್.ನ ಪುಸ್ತಕಗಳನ್ನು ಓದಿಕೊಂಡು, ಇಂಗ್ಲಿಷ್‌ನಲ್ಲಿ ಬರೆದ ಒಂದಷ್ಟನ್ನು ಗಟ್ಟು ಮಾಡಿ ಬರೆದು, ಹೇಗೋ ಮುಂದಕ್ಕೆ ಬಂದಿದ್ದೆ. ಒಂದು ವರ್ಷ ವಿಜ್ಞಾನದ ಅಧ್ಯಾಪಕನಾಗಿಯೂ ಕೆಲಸ ಮಾಡಿದ್ದೆ. ಎಂ.ಎ.ಗೆ ನಮಗೆ ಪಾಠ ಮಾಡಲು ಬಂದ ಶ್ರೀ ಎಂ.ವಿ. ಸೀತಾರಾಮಯ್ಯನವರು ಯಾರು ಎಂಬುದು ಗೊತ್ತೇ ಇರಲಿಲ್ಲ. ಅವರು ಹೇಳುತ್ತಿದ್ದ 'ಗ್ರಂಥ ಸಂಪಾದನೆ'ಯ ಗಂಧವೇ ಇರಲಿಲ್ಲ. ಆದರೆ ಎಂ.ವಿ.ಸೀ. ಅವರ ಪಾಠ ಹೇಳುವ ಕ್ರಮ, ಉದಾಹರಣೆಗಳ ಮೂಲಕ, ಅದರಲ್ಲೂ ಕವಿರಾಜಮಾರ್ಗದ ಪಾಠಾಂತರಗಳನ್ನು ಉದಾಹರಿಸಿ ಮಾಡುತ್ತಿದ್ದ ನಿರೂಪಣೆಯಿಂದ, ನನಗೆ ಆ ವಿಷಯದಲ್ಲಿ ಆಸಕ್ತಿ ಮೂಡಿತು. ನಮ್ಮ ತಾಯಿಯ ಊರಿನಲ್ಲಿ ದೊರೆತ ಲಕ್ಷ್ಮೀಶನ ಜೈಮಿನಿ ಭಾರತದ ಪ್ರತಿಯ ಕಾಲದ ಉಲ್ಲೇಖ ಇರುವ ಭಾಗವನ್ನು ಓದಿಕೊಂಡು ಬಂದು ಎಂ.ವಿ.ಸೀ. ಅವರಿಗೆ ತಿಳಿಸಿದಾಗ ಅವರು ಪಟ್ಟ ಸಂತೋಷ ಅಷ್ಟಿಷ್ಟಲ್ಲ. ಅವರ ಪಾಠದ ಟಿಪ್ಪಣಿಗಳ ಒಂದು ಪುಸ್ತಕ ಇಂದು ನನ್ನ ಕೈಗೆ ಸಿಗುತ್ತಿಲ್ಲ. ನೆನಪಿನಿಂದ ಒಂದೆರಡು ಸಂಗತಿಗಳನ್ನು ಹೇಳಲು ಬಯಸುತ್ತೇನೆ.

ಸೊಟ್ಟಗೆ ಆಗಿದ್ದ ತಮ್ಮ ಕೈ ಬೆರಳುಗಳಲ್ಲಿ ಸೀಮೆಸುಣ್ಣ ಹಿಡಿದು, ಕರಿಹಲಗೆಯನ್ನು ಅವರು ಬಳಸುತ್ತಿದ್ದುದು ಅಪೂರ್ವವಾಗಿತ್ತು. ಇಮ್ಮಡಿ ಗುಣವರ್ಮನ 'ಪುಷ್ಪದಂತ ಪುರಾಣ'ದ ಒಂದು ಪ್ರತಿಯನ್ನು ನವಿಲ್ಗುಂದದ ಮಾದಿರಾಜನು ಬರೆದಿದ್ದಾನೆ. ಅವನು ತನ್ನ ಲೇಖನ ಕಲೆಯ ವಿಷಯವಾಗಿ 'ಬಿಂದುವಿನೊಂದು ಶೋಭೆ ತಲೆಕಟ್ಟಿನ ಪೊರ್ಕುಟಿ ಚೆಲ್ವು' ಎಂದು ಪದ್ಯವೊಂದರಲ್ಲಿ ಹೇಳಿಕೊಂಡಿದ್ದಾನೆ. ಕನ್ನಡ ಲಿಪಿಗಳಲ್ಲಿ, ಬಳ್ಳಿಗಳನ್ನು ತೋರಿಸಿ, ಮಾದಿರಾಜನ ಮಾತುಗಳಿಗೆ ಆಕಾರವನ್ನು ಕೊಟ್ಟು ಎಂ.ವಿ.ಸೀ. ಅವರು ಹೇಳುತ್ತಿದ್ದ ಅನೇಕ ವಿಚಾರಗಳು ನನ್ನ ಬುದ್ಧಿಗೆ ಆಗ ಎಟಕುತ್ತಿರಲಿಲ್ಲ. ಆದರೆ ಸಮಯಕ್ಕೆ ಸರಿಯಾಗಿ ಆಟೋದಲ್ಲಿ ಬಂದು, ಸಮಯಪೂರ್ತಿ ತರಗತಿಯನ್ನು ಅಚ್ಚುಕಟ್ಟಾಗಿ ನಡೆಸುತ್ತಿದ್ದ ಅವರ ಆದರ್ಶ, ತರಗತಿಯನ್ನು ನಡೆಸಿದುದಕ್ಕೆ ದಿನಚರಿಯನ್ನು ಬರೆದಿಟ್ಟುಕೊಳ್ಳಬೇಕೆಂಬ ಅವರ ನಿಷ್ಠೆ, ಇವುಗಳನ್ನು ನಾನು ಉಪಾಧ್ಯಾಯನಾದ ಮೇಲೆ ಸಾಕಷ್ಟು ಉಳಿಸಿಕೊಳ್ಳಲು ಪ್ರಯತ್ನಿಸಿದೆ. ತಾವು ಸರ್ಕಾರಿ

ಕಾಲೇಜಿನಲ್ಲಿ 'ಕವಿರಾಜಮಾರ್ಗ' ಪಾಠ ಮಾಡುವಾಗ ಅದರ ಪಠ್ಯ ದೊರೆಯದೆ ಒದ್ದಾಡಿದ್ದು, ಅದೇ ಕಾರಣವಾಗಿ ಆ ಗ್ರಂಥವನ್ನು ಅವರು ಹೊಸ ಪ್ರತಿಗಳ ಸಹಾಯದಿಂದ ಸಂಪಾದಿಸಿ, ಅದೇ ಕಾಲೇಜಿನ ಕರ್ನಾಟಕ ಸಂಘದಿಂದ ಪ್ರಕಟಿಸಿದ್ದು, ಇವು ಎಂ.ವಿ.ಸೀ. ಅವರ ಕಾಳಜಿಯನ್ನು ತೋರಿಸುತ್ತದೆ.

ನಮ್ಮ ಎರಡನೆಯ ಎಂ.ಎ. ತರಗತಿಗೆ ಅವರು 'ರತ್ನಾಕರನ ಭರತೇಶ ವೈಭವ'ವನ್ನು ಪಾಠ ಮಾಡಿದರು. ಆಗ ಬರೆದುಕೊಂಡ ಟಿಪ್ಪಣಿಗಳನ್ನು ಈಗಲೂ ನಾನು ಕಾಪಾಡಿಕೊಂಡಿದ್ದೇನೆ. ರತ್ನಾಕರನ ಬಗೆಗೆ ಎಲ್ಲಾದರೂ ಹೇಳಬೇಕಾದರೆ, ಆ ಟಿಪ್ಪಣಿಗಳನ್ನು ಧಾರಾಳವಾಗಿ ಉಪಯೋಗಿಸಿಕೊಳ್ಳುತ್ತಿದ್ದೇನೆ. ಶಾಸ್ತ್ರ ವಿಷಯವಾಗಿ ಹೇಗೆ ಅಧಿಕೃತವಾಗಿ ಪಾಠ ಮಾಡುತ್ತಿದ್ದರೋ, ಅಷ್ಟೇ ಪ್ರಾಮಾಣಿಕತೆಯಿಂದ ಕಾವ್ಯವನ್ನು ಅದಕ್ಕೆ ಬೇಕಾದ ಸಹೃದಯಗುಣದಿಂದ ವ್ಯಾಖ್ಯಾನಿಸುತ್ತಿದ್ದರು. ಭರತೇಶ ವೈಭವದ ಬಗೆಗೆ ಅವರು ಹೇಳಿದ ಒಂದೆರಡು ಮಾತುಗಳನ್ನು ಇಲ್ಲಿ ಗುರುತಿಸಲು ಬಯಸುತ್ತೇನೆ.

'ಭರತೇಶ ವೈಭವ ಒಂದು ರಸ ಸಮುದ್ರ, ಆದರೆ ಇಲ್ಲಿ ಅಲ್ಲೋಲ ಕಲ್ಲೋಲವಾದ ಅಲೆಗಳು ಏಳುವುದಿಲ್ಲ.'

'ಭರತೇಶ ಜಡ ಬ್ರಹ್ಮಚಾರಿಯಲ್ಲ. ಆತನು ಆತ್ಮರತಿಯೊಂದನ್ನು ಬಿಟ್ಟು ಉಳಿದ ಎಲ್ಲವನ್ನೂ ಬಿಟ್ಟ ಕಡು ಬ್ರಹ್ಮಚಾರಿ'.

ನಾನು ಆಚಾರ್ಯ ಪಾಠಶಾಲಾ ಸಂಜೆ ಕಾಲೇಜಿಗೆ ಅಧ್ಯಾಪಕನಾಗಿ ಸೇರಿದ ಮೇಲೆ, ಹನುಮಂತನಗರದಲ್ಲಿದ ಎಂ.ವಿ.ಸೀ. ಅವರ ಮನೆಗೆ ಹೋಗಿ ಬರುವುದು ಹೆಚ್ಚಾಯಿತು. ಸಂಜೆ ಕಾಲೇಜಿಗೆ ಹೋಗುವುದಕ್ಕೆ ಮುಂಚೆ, ೩–೪ ಗಂಟೆಯ ಹೊತ್ತಿಗೆ ಅವರ ಮನೆಗೆ ಹೋಗಿ, ಅವರು ಹೇಳುವುದನ್ನು ಬರೆದುಕೊಳ್ಳುವ ಅವರು ಬರೆದದ್ದನ್ನು ಮತ್ತೆ ಪ್ರತಿ ಮಾಡಿ ಕೊಡುವ ಕೆಲಸವನ್ನು ಮಾಡುತ್ತಿದ್ದೆ. ಅಂತಹ ಕೆಲಸಗಳಲ್ಲಿ ನಾನು ಅತ್ಯಂತ ಆಸಕ್ತಿಯಿಂದ ಹಾಗೂ ಪ್ರೀತಿಯಿಂದ ಮಾಡಿದುದು ಮೂರು ಕೃತಿಗಳು ಪ್ರಾಚೀನ ಕನ್ನಡ ವ್ಯಾಕರಣಗಳು, ಕನ್ನಡದಲ್ಲಿ ಜೀವನ ಚರಿತ್ರೆ ಹಾಗೂ ಮೈಸೂರು ವಿಶ್ವವಿದ್ಯಾಲಯದ ಛಂದಸ್ಸಂಪುಟದಲ್ಲಿ ಕರ್ನಾಟಕ ವಿಷಯ ಜಾತಿಯನ್ನು ಕುರಿತ ಭಾಗ; ನನ್ನ ಮಿತ್ರರಾದ ವಿ. ವೆಂಕಟರಾವ್ ಅವರೊಂದಿಗೆ ಸರ್ವಜ್ಞನ ವಚನಗಳ ಸಂಗ್ರಹವನ್ನು ಸಂಪಾದನೆ ಮಾಡಿದಾಗಲೂ, ಪಾಠ ನಿರ್ಣಯ ಮಾಡಿದ್ದೆಲ್ಲಾ ಎಂ.ವಿ.ಸೀ. ಅವರೇ. ಸಂಸ್ಕೃತ ಭೂಯಿಷ್ಠವಾಗಿ ಮಾತನಾಡದೇ ಇದ್ದರೂ, ಹಾಗೆ ಬರೆಯದೇ ಇದ್ದರೂ ಎಂ.ವಿ.ಸೀ. ಅವರಿಗೆ ಸಂಸ್ಕೃತ ಪದಗಳನ್ನು ಕಂಡರೆ ಮೋಹ. ಅವರು 'ರಸ್ತೆ' ಪದದ ಬದಲು 'ಮಾರ್ಗ' ಎಂದು ಬಳಸಬೇಕು ಎನ್ನುತ್ತಿದ್ದರು. ಆದರೆ ಕನ್ನಡದ ವಿಚಾರವಾಗಿ ಗೋಕಾಕ್ ಚಳವಳಿ ನಡೆದಾಗ, ಅವರು ಅದರಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡರು.

ಕನ್ನಡ ಸಾಹಿತ್ಯ ಪರಿಷತ್ತಿನಿಂದ ೧೯೭೭ರಲ್ಲಿ 'ಕೌಸ್ತುಭ' ಎಂಬ ಸ್ಮರಣ ಸಂಚಿಕೆ

ಪ್ರಕಟವಾಯಿತು. ಹೆಸರಾಂತ ವಿದ್ವಾಂಸರೊಬ್ಬರು ಜನಪದ ಸಾಹಿತ್ಯದ ಭವಿಷ್ಯವನ್ನು ಕುರಿತು ಲೇಖನವನ್ನು ಬರೆದು ಕೊಡುತ್ತೇನೆಂದು ಹೇಳಿದ್ದರು. ನಮ್ಮ ಕಾಟವನ್ನು ಸಹಿಸಲಾರದೆ ಅವರು ಒಂದು ಪುಟ್ಟ ಎಕ್ಸೈಸ್ ಹಾಳೆಯಲ್ಲಿ ಟಿಪ್ಪಣಿಯೊಂದನ್ನು ಬರೆದುಕೊಟ್ಟು ಕೈ ತೊಳೆದುಕೊಂಡರು. ಅದರಿಂದ ರೇಗಿದ ಎಂ.ವಿ.ಸೀ. ಆ ಟಿಪ್ಪಣಿಯನ್ನು ಲೇಖನ–೧ ಎಂದು ಪ್ರಕಟಿಸಿ ತಾವೇ ಮತ್ತೊಂದು ಲೇಖನವನ್ನು ಬರೆದು, ಆದ ಕೊರತೆಯನ್ನು ತುಂಬಿದರು. ಆಕ್ಷೇಪಣೆಯನ್ನು ಮಾಡಲು ಹೋಗಲೇ ಇಲ್ಲ. ಭಾಷಾಂತರ ಕೃತಿಗಳ ಬಗ್ಗೆ ಬರೆದುಕೊಂಡು ಎಂದು ಹೇಳಿ ನನ್ನಿಂದಲೂ ಒಂದು ಲೇಖನವನ್ನು ಬರೆಸಿದರು. ನಾನು, ಮಿತ್ರರಾದ ವೆಂಕಟರಾವ್, ಕೆ.ಎಸ್. ಮಧುಸೂದನ್, ಬಿ.ಎಸ್. ರಾಮಪ್ರಸಾದ್, ನಾ. ಗೀತಾಚಾರ್ಯ– ಮೊದಲಾದವರು ಬರೆಯಲು ಏನಾದರೂ ಕಲಿತಿದ್ದರೆ. ಅದು ಎಂ.ವಿ.ಸೀ. ಅವರ ಪ್ರಭಾವದಿಂದಲೇ ಎಂದು ನಾನು ನಂಬಿದ್ದೇನೆ.

ವೈಯಕ್ತಿಕ ಕಾರಣಗಳಿಂದಾಗಿ ನಾನು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಿಂದ ಹೊರಗೆ ಬಂದಾಗಲೂ ಎಂ.ವಿ.ಸೀ. ನನ್ನನ್ನು ವಿಶ್ವಾಸದಿಂದಲೇ ನಡೆಸಿಕೊಂಡರು. ನನ್ನ ತಂದೆಯವರಿಂದ ನಾನು ಕಲಿತಿದ್ದ ಲೆಕ್ಕಪತ್ರಗಳ ದಾಖಲೆ ಹಾಗೂ ತಪಾಸಣೆಯ ಕೆಲಸ ಎಂ.ವಿ.ಸೀ. ಅವರಿಗೆ ತುಂಬಾ ಮೆಚ್ಚಿಗೆಯಾಗಿತ್ತು.

ತಿಮ್ಮಪ್ಪದಾಸರ ಕೀರ್ತನೆಗಳ ಸಂಪಾದನೆಯಾದ 'ಅರ್ಚನ' (೧೯೭೧), ಉದಯಾದಿತ್ಯಾಲಂಕಾರ (೧೯೬೯), ಭಾರತೀಯ ಕಾವ್ಯ ಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ (೧೯೭೦), ಕನ್ನಡ ಸಾಹಿತ್ಯದಲ್ಲಿ ಶಾಂತರಸ, – ಈ ಕೃತಿಗಳು ಎಂ.ವಿ.ಸೀ. ಅವರು ಕನ್ನಡ ಶಾಸ್ತ್ರ ಸಾಹಿತ್ಯಕ್ಕೆ ಕೊಟ್ಟ ಅಮೂಲ್ಯ ಕೊಡುಗೆ. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆಯ ಭಾಗವಾಗಿ ಬಂದ 'ಶಾಸ್ತ್ರ ಸಾಹಿತ್ಯ'ದಂತಹ ಇನ್ನೊಂದು ಕೃತಿ ಈವರೆಗೆ ಬಂದಿಲ್ಲ.

ಕವನ ಸಂಗ್ರಹಗಳು, ಕಥಾ ಸಂಗ್ರಹಗಳು, ಮಾದನ ಮಗಳು ಮೊದಲಾದ ಕಾದಂಬರಿಗಳು, ಪ್ರಬಂಧಗಳು, ಕೆಲವು ನಾಟಕಗಳು – ಎಂ.ವಿ.ಸೀ. ಅವರ ಅಪಾರ ಪ್ರತಿಭೆಗೆ ಸಾಕ್ಷಿಯಾಗಿವೆ. ಅವರ ಅಭಿನಂದನೆಯಾಗಿ 'ಆಸ್ವಾದ' ಎಂಬ ಗ್ರಂಥವೂ ಬಂದಿದೆ. ಪ್ರಾಚೀನ ಸಾಹಿತ್ಯ ಸಂಶೋಧನಾ ಸೇವಾ ಕೇಂದ್ರವಾಗಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಎಂ.ವಿ.ಸೀ. ಅವರ ಕನಸುಗಳನ್ನು ನನಸಾಗಿಸಲು ಪ್ರಯತ್ನ ಮಾಡುತ್ತಿದೆ. ಹಸ್ತಪ್ರತಿಗಳನ್ನು ಸಂರಕ್ಷಿಸಬೇಕು ಎಂಬ ಅವರ ಆಸೆಗೆ ಇಂದು ಜೀವ ಬರುತ್ತಿದೆ. ನಾನು, ಡಾ॥ ಆರ್.ಶೇಷಶಾಸ್ತ್ರಿ ಡಾ॥ ದೇವರಕೊಂಡಾರೆಡ್ಡಿ, ಡಾ॥ ಕೆಳದಿ ಗುಂಡಾಜೋಯಿಸ್ – ಅಂತಹ ಹಸ್ತಪ್ರತಿಗಳನ್ನು ತಂದು ಸಂಗ್ರಹಿಸಿ ಟಿಪ್ಪಣಿಗಳನ್ನು ತಯಾರಿಸಿ ಕೊಟ್ಟಾಗ ಅವರು ಪಡುತ್ತಿದ್ದ ಸಂತೋಷ, ಅವರ ಮನೆಯವರು ಕೊಡುತ್ತಿದ್ದ ರುಚಿರುಚಿಯಾದ ತಿಂಡಿ ಎಂದಿಗೂ ಮರೆಯಲಾಗದ ವಿಷಯ.

೧೯೧೧ರಲ್ಲಿ ಮೈಸೂರಿನಲ್ಲಿ ಹುಟ್ಟಿ, ಅಲ್ಲಿಯ ಸ್ಕೂಲು, ಕಾಲೇಜುಗಳನ್ನು ಶಿಕ್ಷಣವನ್ನು ಪಡೆದ ಎಂ.ವಿ.ಸೀ. ಅವರು ಒಂದಾನೊಂದು ಕಾಲದಲ್ಲಿ ಮೃದಂಗ ನುಡಿಸುತ್ತಿದ್ದರು. ವೀಣಾ

ಎಸ್. ರಾಜಾರಾಯರೊಂದಿಗೆ ಸಂಗೀತ ಅಭ್ಯಾಸ ಮಾಡುತ್ತಿದ್ದರು ಎಂಬುದು ಬಹುಜನಕ್ಕೆ ತಿಳಿಯದ ಸಂಗತಿ. ರೇಖಾಚಿತ್ರಗಳನ್ನು ಬರೆಯುವುದರಲ್ಲಿ ಅವರು ಸಿದ್ಧಹಸ್ತರಾಗಿದ್ದರು. ೧೯೨೨ರಲ್ಲಿ ಮೈಸೂರಿನ ದಸರಾ ವಸ್ತು ಪ್ರದರ್ಶನದಲ್ಲಿ ಅದಕ್ಕಾಗಿ ಅವರು ಪ್ರಶಸ್ತಿಯನ್ನು ಪಡೆದಿದ್ದರು. 'ಕೌಸ್ತುಭ' ಪುಸ್ತಕದ ಪುಟ ಪೂರೈಕೆಗಾಗಿ ಅವರೇ ಅನೇಕ ರೇಖಾ ಚಿತ್ರಗಳನ್ನು ಬರೆದುಕೊಟ್ಟಿದ್ದಾರೆ. ಕಲಾ ತಪಸ್ವಿ ಕೆ. ವೆಂಕಟಪ್ಪನವರ ಬಳಿ ಚಿತ್ರಕಲಾಭ್ಯಾಸ ಮಾಡಿದ್ದಾರೆ. ಚಿತ್ರಕಲೆಯನ್ನು ಇನ್ನಷ್ಟು ಕಲಿಯಲು ಶಾಂತಿನಿಕೇತನಕ್ಕೆ ಹೋಗಿ ಬಂದಿದ್ದಾರೆ. ೧೯೩೩ರಲ್ಲಿ ಎಂ.ಎ. ಪದವಿಯನ್ನು ಪಡೆದರೂ ಅವರು ಅಧ್ಯಾಪಕರಾದದ್ದು ೧೯೪೬ರಲ್ಲಿ. ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ, ಆಗ ಅದು GAS ಕಾಲೇಜು ಎಂದು ಹೆಸರುವಾಸಿಯಾಗಿತ್ತು. ತಮ್ಮ ಕಾವ್ಯ ನಾಮವಾದ 'ರಾಘವ' ಎಂಬ ಹೆಸರಿನಲ್ಲಿ ಪ್ರಕಾಶನ ಸಂಸ್ಥೆಯೊಂದನ್ನು ಪ್ರಾರಂಭಿಸಿ. ತಮ್ಮ ಕೃತಿಯನ್ನು ತಾವೇ ಪ್ರಕಟಿಸಿದರು. ೧೯೬೦ರಲ್ಲಿ ನಿವೃತ್ತರಾಗಿ, ೧೯೭೯ರಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವನ್ನು ಸ್ಥಾಪಿಸಿದರು.

ಕನ್ನಡದಲ್ಲಿ ಹೇಗೆಯೋ ಎಂ.ವಿ.ಸೀ. ಇಂಗ್ಲಿಷ್‌ನಲ್ಲೂ ಪ್ರಕಾಂಡ ಪಂಡಿತರು. ಮಿಥಿಕ್ ಸೊಸೈಟಿ ಆಶ್ರಯದಲ್ಲಿ ನಡೆದ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯರ ವಿಚಾರ ಗೋಷ್ಠಿಗಳಲ್ಲಿ ಇತಿಹಾಸದ ವಿದ್ವಾಂಸರು ಬೆರಗಾಗುವಂತೆ ಅಚ್ಚುಕಟ್ಟಾಗಿ ಸಾಹಿತ್ಯದ ವಿಚಾರಗಳನ್ನು ಸದ್ದುಗೊಂದಲಕ್ಕೆ ಅವಕಾಶವಿಲ್ಲದಂತೆ ಇಂಗ್ಲಿಷ್‌ನಲ್ಲಿ ನಿರೂಪಿಸಿದುದನ್ನು ಕಣ್ಣಾರೆ ಕಂಡಿರುವ ನನಗೆ, ಹಾಗೆ ಪ್ರಬಂಧ ಮಂಡಿಸುವವರನ್ನು ಇಂದು ಕಾಣದೆ ನಿರಾಶೆ ಯಾಗುತ್ತದೆ. ಕವಿರಾಜಮಾರ್ಗದ ಕರ್ತೃ ನೃಪತುಂಗನಲ್ಲ ಶ್ರೀವಿಜಯ ಎಂದು ಅವರು ಸಾಧಾರವಾಗಿ ನಿರೂಪಿಸುತ್ತಿದ್ದರು. ಅದು ಈಗ ನಿರ್ಣಯವಾಗಿರುವ ವಿಚಾರ. ಆದರೂ ಅದನ್ನು ಗಮನಿಸಿದ ಇಂದಿನ ಇತಿಹಾಸ – ಕನ್ನಡ ಪಠ್ಯ ನಿರ್ಮಾತೃಗಳು, ನೃಪತುಂಗನ ಹೆಸರನ್ನು ಪರ್ಯಾಯವಾಗಿ ಹೇಳುತ್ತಿರುವುದರ ಔಚಿತ್ಯವೇನೋ ತಿಳಿಯುವುದಿಲ್ಲ. ಎಂ.ವಿ.ಸೀ. ಅವರು ಬದುಕಿದ್ದಿದ್ದರೆ ಖಂಡಿತ ಪ್ರತಿಭಟಿಸುತ್ತಿದ್ದರು.

ಯಾವುದಾದರೂ ಕೆಲಸ ಮಾಡಬೇಕಾದರೆ, ನಾವು ಏನಾದರೂ ನೆಪವನ್ನು ಹೇಳಿ ತಪ್ಪಿಸಿಕೊಳ್ಳುತ್ತೇವೆ. ಇಲ್ಲ ನಿಧಾನಿಸುತ್ತೇವೆ. ವರ್ಷದ ಬಹುಕಾಲ ಆರೋಗ್ಯದ ತೊಂದರೆಯಿಂದ ಚಡಪಡಿಸುತ್ತಿದ್ದ ಎಂ.ವಿ.ಸೀ. ಯಾವ ಕೆಲಸವನ್ನು ಸಾಮಾನ್ಯವಾಗಿ ಮುಂದೆ ಹಾಕುತ್ತಿರಲಿಲ್ಲ. ಎಲ್ಲವನ್ನು ಪೂರ್ವ ತಯಾರಿ ಮಾಡಿಕೊಂಡೇ ನಡೆಯುತ್ತಿದ್ದರು. ತಾವು ತಿಮ್ಮಪ್ಪ ದಾಸರ ವಂಶದಲ್ಲಿ ಬಂದವರು ಎಂದು ಅವರಿಗೆ ತುಂಬಾ ಅಭಿಮಾನವಿತ್ತು. ಅದನ್ನು ಅವರು ಆಗಾಗ್ಗೆ ಹೇಳಿಕೊಳ್ಳುತ್ತಿದ್ದರು. ಪಠ್ಯ ಪುಸ್ತಕಗಳ ಆಯ್ಕೆಯಲ್ಲಿ ನಡೆಯುತ್ತಿದ್ದ ಅವ್ಯವಹಾರಗಳನ್ನು ನೆನೆಸಿಕೊಳ್ಳುತ್ತಿದ್ದರು. ಅವರು ಕೋಪಗೊಳ್ಳುತ್ತಿದ್ದುದೇ ಅಪರೂಪ. ನಾನು ಲೆಕ್ಕಪತ್ರಗಳನ್ನು ಬರೆಯುತ್ತಾ ಪರೀಕ್ಷಿಸುತ್ತಾ ಏನಾದರೂ ಆಕ್ಷೇಪಣೆಗಳನ್ನು ಎತ್ತುತ್ತಿದ್ದೆ. ಚಾರ್ಟರ್ಡ್ ಅಕೌಂಟೆಂಟ್‌ರೇ ಆಕ್ಷೇಪಿಸುವುದಿಲ್ಲ. ನೀನು ಯಾಕೆ ಕೇಳುತ್ತೀಯಾ ಎಂದು ಕೋಪಿಸಿಕೊಂಡದ್ದು ಮಾತ್ರ ನನಗೆ ನೆನಪು.

'ಆಸ್ವಾದ'ದಲ್ಲಿ ಎಂ.ವಿ.ಸೀ. ಅವರೇ ಹೇಳಿರುವ ಕೆಲವು ಮಾತುಗಳು ಇವು:

"ನಮ್ಮ ಲಾಕ್ಷಣಿಕರು ಗ್ರಂಥ ರಚನೆಯ ಸಂಕಷ್ಟವನ್ನು ಪ್ರಸವ ವೇದನೆಗೆ ಹೋಲಿಸಿದ್ದಾರೆ. ಗ್ರಂಥ ರಚನೆಯಾದ ಮೇಲೆ ಆತ್ಮತೃಪ್ತಿಯಾದರೂ, ಸಹೃದಯರ ಮೆಚ್ಚುಗೆಯ ಪೂರ್ಣತೃಪ್ತಿ ದೊರಕಲು ಬಹುಕಾಲ ಕಾಯಬೇಕು. ಇದು ಅಚ್ಚಿನ ಯುಗ, ಬರೆದ ಗ್ರಂಥ ಅಚ್ಚಿನ ಮನೆ ಕಾಣಬೇಕಾದರೆ ಆಶ್ವಮೇಧಯಾಗ ಮಾಡಿದ ಹಾಗೆ. ಅಚ್ಚಾಗದೆ ಜನ ಓದುವಂತಿಲ್ಲ. ಓದುಗರು ದೊರೆಯದೆ, ಸಹೃದಯರು ದೊರೆಯುವಂತಿಲ್ಲ. ಒಂದು ಗ್ರಂಥ ರಚಿತವಾಗುವ ಕಾಲಕ್ಕೂ ಅಚ್ಚಾಗುವ ಕಾಲಕ್ಕೂ, ಅಚ್ಚಾಗಿ ಅದರ ವಿಮರ್ಶೆಗಳು ಹೊರ ಬರುವ ಕಾಲಕ್ಕೂ ನಡುನಡುವೆ ವರ್ಷಗಳ ಅಂತರ ಕಾಣಿಸಿಕೊಂಡು, ಸಹೃದಯರ ಮೆಚ್ಚುಗೆಯನ್ನು ತಿಳಿಯಲು ಗ್ರಂಥಕರ್ತ ವರ್ಷಗಟ್ಟಲೆ ಕಾಯಬೇಕಾಗುತ್ತದೆ. ಗ್ರಂಥ ಅಚ್ಚಾಗಿ ಅದರ ವಿಮರ್ಶೆಗಳು ಹೊರಬರುವ ಕಾಲಕ್ಕೂ ನಡುನಡುವೆ ವರ್ಷಗಳ ಅಂತರ ಕಾಣಿಸಿಕೊಂಡು, ಸಹೃದಯರ ಮೆಚ್ಚುಗೆಯನ್ನು ತಿಳಿಯಲು ಗ್ರಂಥಕರ್ತ ವರ್ಷಗಟ್ಟಲೆ ಕಾಯಬೇಕಾಗುತ್ತದೆ. ಗ್ರಂಥ ಅಚ್ಚಾಗಿ ಬಂದ ಕೂಡಲೇ, ನೂರು ಪ್ರತಿಗಳನ್ನು ಗೌರವಾರ್ಥ ಗುರುಹಿರಿಯ ಮಿತ್ರವರ್ಗಕ್ಕೆ ಕಳಿಸಿಕೊಟ್ಟರೆ, ಮೂರು ಮೆಚ್ಚುಗೆಯ ಪತ್ರ ಬಂದರೆ ಹೆಚ್ಚು. ಆದರೂ ಈ ಮೂರು ಮೆಚ್ಚುಗೆಯ ಪತ್ರ ಸ್ವತಃ ಬರಹಗಾರರೂ, ಸಹೃದಯರೂ ಆದವರಿಂದ ಬಂದಾಗ ಅವು ನೂರು ಪತ್ರಕ್ಕೆ ಸಮನಾಗುತ್ತವೆ. ಸಹೃದಯರಾದ ವಿಮರ್ಶಕರ ಮೆಚ್ಚುಗೆಯ ಮಾತೂ ಒಡಗೂಡಿದಾಗ ಕೃತಿಕಾರನಿಗೆ ಪೂರ್ಣ ತೃಪ್ತಿ ಲಭಿಸುತ್ತದೆ."

ಕೃತಿಕಾರನೊಬ್ಬನ ಕೃತಿಗಳ ಅವಸ್ಥೆಗೆ ಈ ಮಾತುಗಳಿಗಿಂತ ಬೇರೆ ವ್ಯಾಖ್ಯಾನ ಬೇಕಿಲ್ಲ. 'ಬರಹ ಹೇಗಾದರೂ ಇರಲಿ ಎಲ್ಲ ಬಗೆಯ ಬರಹವನ್ನು ಬರೆಯುತ್ತಿರುವುದರಲ್ಲೇ ನನಗೆ ಪೂರ್ಣ ತೃಪ್ತಿ' ಎನ್ನುತ್ತಿದ್ದ ಎಂ.ವಿ.ಸೀ. ಅವರ ಬರಹಗಳಿಗೆ ಇಂದು ಸಲ್ಲಬೇಕಾದ ಗೌರವ ಗುರುತಿಸುವಿಕೆ ಸಲ್ಲುತ್ತಿಲ್ಲ ಎಂಬುದೇ ಇಂದು ಕನ್ನಡ ಸಾಹಿತ್ಯವನ್ನು ಅಭ್ಯಾಸ ಮಾಡುತ್ತಿರುವ ಕ್ರಮದ ಬಗೆಗೆ ಯೋಚಿಸುವಂತೆ ಮಾಡುತ್ತದೆ.

❖

# ಮಾನವಾನುಕಂಪದ ಗುರು

## (ಡಾ|| ಆರ್.ಸಿ. ಹಿರೇಮಠ)

*• ಪ್ರೊ. ಆರ್. ರಾಚಪ್ಪ*

ಒಬ್ಬ ವ್ಯಕ್ತಿ ತನ್ನ ಸಂವೇದನಾಶೀಲತೆಯಿಂದ, ಅಭಿವ್ಯಕ್ತಿ ಚಾತುರ್ಯದಿಂದ ಸಾಹಿತಿಯ ಮಟ್ಟಕ್ಕೇರುತ್ತಾನೆ. ಆತನ ಸಾಹಿತ್ಯ ನಾನಾ ಪ್ರಕಾರದ್ದಿರಬಹುದು ಅಥವಾ ಯಾವುದಾದರೊಂದು ಪ್ರಕಾರಕ್ಕೆ ಮೀಸಲಾಗಿರಬಹುದು. ಅದು ಸೃಜನಾತ್ಮಕ ಆಗಬಹುದು ಅಥವಾ ಸೃಜನೇತರ ಸಾಹಿತ್ಯವೂ ಆಗಬಹುದು. ಸೃಜನಾತ್ಮಕ ಹಾಗೂ ಸೃಜನೇತರ ಎರಡೂ ಪ್ರಕಾರಗಳಲ್ಲಿ ವಿಶಿಷ್ಟ ಯಶಸ್ಸನ್ನು ಸಾಧಿಸಿದವರಿದ್ದಾರೆ. ಆದರೆ ಅವರು ಬೆರಳೆಣಿಕೆಯಷ್ಟು, ಆ ಬೆರಳೆಣಿಕೆಯಲ್ಲಿ ಡಾ|| ಆರ್.ಸಿ. ಹಿರೇಮಠ ಅವರೂ ಒಬ್ಬರು. ಡಾ|| ಆರ್.ಸಿ. ಹಿರೇಮಠ ಅವರ ಪೂರ್ಣ ಹೆಸರು "ರುದ್ರಯ್ಯ ಚಂದ್ರಯ್ಯ ಹಿರೇಮಠ." ಅವರ ಜನ್ಮದಿನ ೧೯೨೦ ಜನವರಿ ೧೫. ತಂದೆ ಚಂದ್ರಯ್ಯನವರು ತಾಯಿ ವೀರಮ್ಮನವರು. ರಾಚಪ್ಪ ಹಿರಿಯ ಸಹೋದರ. ವೀರಯ್ಯ, ಪಂಚಾಕ್ಷರಿ, ಷಡಕ್ಷರಿ ಕಿರಿಯ ಸಹೋದರರು. ಏಕೈಕ ಸಹೋದರಿ ವೀರಮ್ಮ. ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಶ್ರೀಯುತರು ಸ್ವಪ್ರತಿಭೆಯಿಂದ ಹಂತ ಹಂತವಾಗಿ ಮೇಲೇರಿ, ಕಾಲೇಜು ಅಧ್ಯಾಪಕರಾಗಿ, ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ, ಅದು ಮುಂದೆ ಕನ್ನಡ ಅಧ್ಯಯನ ಪೀಠವಾಯಿತು. ಡಾ|| ಆರ್.ಸಿ. ಹಿರೇಮಠರು ಅದರ ನಿರ್ದೇಶಕರೂ ಆದರು. ಆ ವಿಭಾಗವನ್ನು ತ್ರಿವಿಕ್ರಮನಂತೆ ಬೆಳೆಸಿ, ಅದನ್ನು ತಮ್ಮ ಸಹೋದ್ಯೋಗಿಗಳಿಗೆ ವಹಿಸಿಕೊಟ್ಟು, ವಿಶ್ವವಿದ್ಯಾನಿಲಯದ ಉಪಕುಲಪತಿ ಪಟ್ಟಕ್ಕೇರಿದ ಸಾಹಸಿ ಡಾ|| ಆರ್.ಸಿ. ಅವರು. (ಡಾ|| ಆರ್.ಸಿ. ಹಿರೇಮಠ ಅವರನ್ನು ೧೯೫೯-೬೦ರ ಕಾಲಕ್ಕಾಗಲೇ ಅವರ ವಿದ್ಯಾರ್ಥಿಗಳಾದ ನಾವು ಆತ್ಮೀಯತೆಯಿಂದ ಡಾ|| ಆರ್.ಸಿ. ಅವರು ಎಂದೇ ಕರೆಯುತ್ತಿದ್ದೆವು). ಡಾ|| ಆರ್.ಸಿ. ಅವರ ಸಾಹಿತ್ಯ ಸೇವೆಯನ್ನು ಗುರುತಿಸಿದ ಕನ್ನಡ ಜನತೆ ೫೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಗೇರಿಸಿ ತನ್ನ ಅಭಿಮಾನವನ್ನು ವ್ಯಕ್ತಪಡಿಸಿ ಗೌರವಿಸಿತು.

> **ಸುಲಲಿತ ಶೀಲಲೋಲ ಜಯಪಾಲ ವಿಶಾಲ ವಿಲೋಲ ಮಾಲಮೇಣ್**
> **ಕುಲಗಿರಿ ವಾಸ ಈಶ ಸರ್ವೇಶ ಮಹೇಶ ಸುಖಾಶಯಾಬ್ಧಿ ಕಣ್**
> **ದಲಪದ ಪಾದ ಪೂಜಿತ ವಿರಾಚಿತ ಶಶಿಯುತ ಭಾಳ ನೇತ್ರಬಾನ್**
> **ಕುಲಪತಿ ಶಕ್ತಿ – ಮುಕ್ತಿಪತಿ ವಿಶ್ವದಿ ಸಮ ನಿನಗಾರ ಕಾಣೆಕಾಣ್ ॥**

ಎಂದು ಹಾಡಿ ತಮ್ಮ ಸ್ವಂತಿಕೆಯನ್ನು ಮೆರೆದಿದ್ದರು. ಅವರ ಶಿಕ್ಷಕರೆಲ್ಲಾ ಇವರ ಪ್ರತಿಭೆಗೆ ಮೆಚ್ಚುಗೆ ವ್ಯಕ್ತಮಾಡಿ ಬೆನ್ನುತಟ್ಟಿದ್ದು ನಿಜಕ್ಕೂ ಅವರ ಕಾವ್ಯಶಕ್ತಿಗೆ ದೊರೆತ ಪುರಸ್ಕಾರ.

ಡಾ॥ ಆರ್.ಸಿ. ಅವರ ಮೊದಲ ಕವನ ಸಂಕಲನ ಪ್ರಕಟವಾದದ್ದು ೧೯೪೮ರಲ್ಲಿ 'ಸುಮಾಂಜಲಿ' ಎಂಬ ಶಿರೋನಾಮೆಯ ಈ ಕವನ ಸಂಕಲನದ ಆರಂಭದಲ್ಲಿಯೇ

**"ಗುರುಕುಲವಿದು ಭಾರತಕೀ ನಾಡುಮೋಹನ**
**ಅರುಹಿನ ತೊರೆ ನೀರನುಣಿಸಲಾಯ್ತು ಪಾವನ**
**ಮೆರೆವ ಧರ್ಮ ತರುಗಳೆಲ್ಲ ಬೆಳೆದ ನಂದನ**
**ಧರೆಗೆ ಅಮೃತ ಫಲವನಿತ್ತ ನಾಡು ಚಂದನ"**

ಎಂದು ನಾಡು – ನುಡಿಗಳ ಬಗೆಗೆ ಅಭಿಮಾನಪಟ್ಟ ಕವಿ ಇವರು. ಹಾಗಾಗಿ –

**"ಹೂವನಲ್ಲದೆ ಹುಲ್ಲತಾರೆನು**
**ನಾಡ ದೇವಿಯ ಮುಡಿಗೆ ನಾ!**
**ಹುಲ್ಲ ತಂದರು ಹೂ ಕಾಣುವ**
**ತಾಯ್ಗೆ ಹರಣವೆ ಅರುಪಣಾ!"**

ಎಂದು ನಾಡ ತಾಯಿಗೆ ಅರ್ಪಣೆಯನ್ನು ಮಾಡಿಕೊಂಡಿದ್ದರು. ಮುಂದೆ ಹತ್ತು ವರ್ಷಗಳ ಕಾಲ ಈ ಕಾವ್ಯ ವಾಹಿನಿ ಹರಿಯಲಿಲ್ಲ. ೧೯೫೮ರಲ್ಲಿ ವಿದೇಶಕ್ಕೆ ಹೋದಾಗ ಅಲ್ಲಿನ ನಿಸರ್ಗರಮಣೀಯತೆಯನ್ನು ಗಮನಿಸಿದ ಇವರು ಮತ್ತೆ ಕಾವ್ಯ ರಚನೆಗೆ ಆರಂಭಿಸಿದರು. "ಮೌನಸ್ಪಂದನ"ದಲ್ಲಿ ವಿದ್ಯುಚ್ಛಕ್ತಿ ಚಿಗುರೊಡೆಯಲು ಕವನ ತಾನೇ ತಾನಾಗಿ –

**ಕನಸಿನಲಿ ಕನವರಿಸಿ ಕನ್ನಡ ಕೇಳುವವರೇ ಇಲ್ಲಲಾ!**
**ಹೆತ್ತತಾಯ ನುಡಿಯ ಬೆಡಗನು**
**ಎತ್ತೊ ಮರೆವಂತಾಯ್ತುಲಾ"**

ಎಂದು ಕೊರಗಿದುದುಂಟು.

**ದೂರ ಬೆಟ್ಟವ ಸೇರಿ ಕನ್ನಡ**
**ರಾಗವನು ನಾ ಹಾಡಲೇ?**
**ಮಂದಿಯಿಲ್ಲದಿರೇನು ಮುಗಿಲೇ**
**ಕೇಳಿ ಸಿರಿದಲೆ ತೂಗೆಲೇ"**

ಎಂದು ಹಾಡಿದರು. ಡಾ॥ ಆರ್.ಸಿ. ಅವರ ಕವನ ಸಂಕಲನಗಳಲ್ಲಿ ಆಳವಾದ ಜೀವನಾನುಭವ, ಭಾವ ತೀವ್ರತೆ, ಭಾಷಾಪ್ರಭುತ್ವ, ಪ್ರಯೋಗಶೀಲತೆ, ನಿರೂಪಣಾ ವಿಧಾನದಲ್ಲಿ ವೈವಿಧ್ಯತೆ – ನೈಪುಣ್ಯತೆ ಇವೆ. ಇವೆಲ್ಲಕ್ಕೂ ಮಿಗಿಲಾಗಿ ಕವಿ ಹೃದಯವಿದೆ.

Every man is a poet, and every poet must be a critic ಎಂಬ ಹೇಳಿಕೆ ಇದೆ. ಒಬ್ಬ ವ್ಯಕ್ತಿಯು ಕವಿಯಾಗಿ ಕಾವ್ಯ ರಚಿಸುವಾಗ ಒಬ್ಬ ಕವಿಗೆ ಅವಶ್ಯಕವಾಗಿ ಇರಬೇಕಾದ ಒಳತೋಟಿ, ತಿಕ್ಕಾಟ, ತಲ್ಲಣ, ತುಡಿತಗಳಿರಬೇಕು. ಇವುಗಳೊಂದಿಗೆ ಕಾವ್ಯದ ರಸನಿಷ್ಕರ್ಷ – ನಿಷ್ಪತ್ತಿಗಳ ಬಗೆಗೆ ವಿಚಾರ ಮಾಡಬೇಕು. ಈ ಹಿನ್ನೆಲೆಯಲ್ಲಿ ಡಾ॥ ಆರ್.ಸಿ. ಅವರನ್ನು

ಪರಿಶೀಲಿಸಿದಾಗ ಅವರು ಪಂಡಿತರೂ ಹೌದು, ಕವಿಗಳೂ ಹೌದು ಎಂದು ತಿಳಿಯುತ್ತದೆ. ಡಾ॥ ಆರ್. ಸಿ. ಅವರಲ್ಲಿ ಜೀವನಾನುಭವವನ್ನು ವಿಚಕ್ಷಣತೆಯಿಂದ ವಿಮರ್ಶಿಸುವ ಜಾಣತನವಿದೆ. ಹೀಗಾಗಿ ಅವರು ಕವಿ ಹೃದಯದ ವಿಮರ್ಶಕರು. ಡಾ॥ ಆರ್.ಸಿ. ಅವರ ಈ ಎರಡೂ ಆದ್ಯಕ್ಷರಗಳು (Initials) 'R' stands for research and 'C' stands for criticism. ಅಂದರೆ ತಮ್ಮ ಯಾವುದೇ ವಿಚಾರವನ್ನಾಗಲೀ, ಅನುಭವವನ್ನಾಗಲೀ ವಿಮರ್ಶೆಯ ಒರೆಗಲ್ಲಿಗೆ ತೀಡಿದಲ್ಲದೆ ಒಪ್ಪುವವರಲ್ಲ; ಅವರ ವಿಮರ್ಶೆಯಲ್ಲಿ ಎದ್ದು ಕಾಣುವ ಗುಣಗಳೆಂದರೆ, ಮಾತಿನ ಮರ್ಮಜ್ಞತೆ; ನಿರ್ದಿಷ್ಟ ಅಭಿಪ್ರಾಯ, 'ವೈಚಾರಿಕ ಗದ್ಯದ ಪ್ರಸನ್ನ ಶೈಲಿ', 'ತಮ್ಮ ಅಭಿಪ್ರಾಯ ನಿರೂಪಣೆಗೆ ಉದ್ಧರಿಸುವ ಸೂಕ್ತ ಉದಾಹರಣೆಗಳ ಆಯ್ಕೆ', 'ಅದನ್ನು ಮಂಡಿಸುವ ವಾದ ಸರಣಿ' ಇವು ಓದುಗರಲ್ಲಿ ಆಸಕ್ತಿಯನ್ನು ಕೆರಳಿಸುತ್ತವೆ.

ಡಾ॥ ಆರ್. ಸಿ. ಅವರ ವಿಮರ್ಶೆಯ ಸೊಬಗು ತೌಲನಿಕ ವಿಮರ್ಶೆಯಲ್ಲಿ ಕಾಣಬಹುದು. ಸೋಮನಾಥ ಚಾರಿತ್ರದಲ್ಲಿ ಬರುವ 'ನಾರದ' ಪ್ರಸಂಗ ಮತ್ತು ಮಾಘನ 'ಶಿಶುಪಾಲವಧಾ'ದಲ್ಲಿ ಬರುವ ನಾರದ ಪ್ರಸಂಗ; ಹಾಗೂ ಪಂಪನಲ್ಲಿ ಬರುವ ನಾರದ ಪ್ರಸಂಗಗಳನ್ನು ವಿಮರ್ಶಿಸಿ, ಮಾಘ ಮತ್ತು ಪಂಪನಿಗಿಂತ ರಾಘವಾಂಕನೇ ಮಿಗಿಲು ಎಂದು ಸಾಧಿಸಿ ತೋರಿಸಿದ್ದಾರೆ. ಹೀಗೆ ವಿಮರ್ಶಾ ಸಾಹಿತ್ಯ ರಚನೆಯಲ್ಲಿ ತಮ್ಮ ಪ್ರತಿಭೆಯನ್ನು ಮೆರೆದು ಮೆಚ್ಚುಗೆಗಳಿಸಿದವರು. ವಿಮರ್ಶಾ ಕ್ಷೇತ್ರವಿರಲಿ ತತ್ವಜ್ಞಾನವಿರಲಿ ಡಾ॥ ಆರ್.ಸಿ. ಅವರು ಏಕಾಗ್ರ ದೃಷ್ಟಿ, ಸಮಗ್ರ ಧೋರಣೆಯನ್ನು ತಪ್ಪದೆ ಸಾಧಿಸುವ ಧೀಮಂತಿಕೆಯುಳ್ಳವರು.

ಭಾಷಾಶಾಸ್ತ್ರ, ಸಂಶೋಧನೆ, ಗ್ರಂಥ ಸಂಪಾದನೆಗಳಿಗೆ ಹೆಚ್ಚು ಮನವೊಲಿದ ಡಾ॥ ಆರ್.ಸಿ. ಅವರು ಸೃಜನಾತ್ಮಕ ಸಾಹಿತ್ಯ ಸೃಷ್ಟಿಯಲ್ಲಿ ಹಿಂದೆ ಬಿದ್ದದ್ದು ನಿರಾಶೆಯ ಸಂಗತಿಯೇ ಆದರೂ, ಅವರಿಂದ ಸೃಜನೇತರ ಸಾಹಿತ್ಯ ಪ್ರಕಾರದಲ್ಲಿ ವಿಶಿಷ್ಟ ಸೇವೆ ನಡೆದದ್ದು ಅಷ್ಟೇ ಸಮಾಧಾನದ ಸಂಗತಿ.

ಡಾ॥ ಆರ್.ಸಿ. ಅವರ ಸೃಜನೇತರ ಸಾಹಿತ್ಯವನ್ನು 'ಗ್ರಂಥ ಸಂಪಾದನೆ' ಮತ್ತು 'ಸಂಶೋಧನೆ' ಎಂದು ಎರಡು ವರ್ಗಗಳಾಗಿ ಗುರುತಿಸುವುದು ಸೂಕ್ತ.

ಗ್ರಂಥ ಸಂಪಾದನೆಯಲ್ಲಿ ವಿಶಿಷ್ಟ ಕಾರ್ಯ ಮಾಡಿರುವ ಶ್ರೀಯುತರು ಕನ್ನಡ ವೀರಶೈವ ಗ್ರಂಥಗಳನ್ನು ಸಮರ್ಥವಾಗಿ ಸಂಪಾದಿಸಿಕೊಟ್ಟಿದ್ದಾರೆ. ಭೀಮಕವಿಯ 'ಬಸವ ಪುರಾಣ'; ಬಸವಕವಿಯ 'ಮಹಲಿಂಗ ಲೀಲೆ'; ಪದ್ಮಣಾಂಕನ 'ಪದ್ಮರಾಜ ಪುರಾಣ'; ಷಡಕ್ಷರಿಯ 'ರಾಜಶೇಖರ ವಿಳಾಸ', (ಸಮಗ್ರ ಹಾಗೂ ಸಂಗ್ರಹ); ರಾಘವಾಂಕನ ಸೋಮನಾಥ ಚಾರಿತ್ರ (ಸಮಗ್ರ ಹಾಗೂ ಸಂಗ್ರಹ); ಬಸವ ಲಿಂಗ ಕವಿಯ 'ಕೊಟ್ಟೂರ ಬಸವೇಶ್ವರ ಚಾರಿತ್ರ; ಶಾಂತ ಲಿಂಗ ದೇಶಿಕನ "ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ"; ಸುರಂಗನ "ತ್ರಿಷಷ್ಟಿಪುರಾತನ ಚಾರಿತ್ರಂ"; ಷಡಕ್ಷರಕವಿಯ 'ಬಸವರಾಜ ವಿಜಯಂ'; ಹರಿಹರನ 'ಪುರಾತನ ರಗಳೆಗಳು'; 'ಆರು ರಗಳೆಗಳು;' ಚಾಮರಸನ ಪ್ರಭುಲಿಂಗಲೀಲೆ, ಇವಲ್ಲದೆ ಕನಕದಾಸರ

'ಮೋಹನ ತರಂಗಿಣಿ'; ನಾಗಚಂದ್ರನ 'ರಾಮಚಂದ್ರ ಚರಿತ ಪುರಾಣಂ' ಕಾವ್ಯಗಳನ್ನು ಸಮರ್ಥವಾಗಿ ಸಂಪಾದಿಸಿ ಕೊಟ್ಟಿದ್ದಾರೆ.

ನಾನು ಬಿ.ಎ. ಪದವಿ ಪಡೆದು ಮುಂದೇನು ಎಂದು ಯೋಚಿಸುತ್ತಿರುವಾಗ ನನ್ನ ಅಜ್ಜ ಬೆಳ್ಳಾವೆ ಯಜಮಾನ್ ಗಟ್ಟಪ್ಪನವರು ಮುಂದೆ ಎಂ.ಎ. ಪದವಿಗೆ ಅಭ್ಯಾಸ ಮುಂದುವರೆಸಲು ಹೇಳಿದರು. ನನಗೆ ಅತೀವ ಆನಂದವಾಗಿತ್ತು. ಕನ್ನಡ ಎಂ.ಎ. ಓದಲು ಅವಕಾಶವಿದ್ದ ಮದ್ರಾಸ್ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ ಹಾಗೂ ಕರ್ಣಾಟಕ ವಿಶ್ವವಿದ್ಯಾಲಯ ಗಳಿಂದ ವಿವರಗಳನ್ನು ತರಿಸಿದೆ. ಮೈಸೂರಿನಲ್ಲಿ ಎರಡು ವರ್ಷ ಆನರ್ಸ್ ಓದಿ ಅನಂತರ ಎಂ.ಎ. ಪರೀಕ್ಷೆಗೆ ಕೊಡಬೇಕಾಗಿತ್ತು. ಆದರೆ ಮದ್ರಾಸ್ ವಿಶ್ವವಿದ್ಯಾಲಯ ಹಾಗೂ ಕರ್ಣಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಎರಡು ವರ್ಷಗಳಲ್ಲಿ ಎಂ.ಎ. ಪದವಿ ಪಡೆಯಲವಕಾಶವಿತ್ತು. ಇದರಿಂದ ಮದ್ರಾಸ್ ಹಾಗೂ ಧಾರವಾಡಗಳಿಗೆ ಅರ್ಜಿ ಸಲ್ಲಿಸಿದೆ. ಕೆಲ ದಿವಸಗಳ ನಂತರ ಮದ್ರಾಸ್ ವಿಶ್ವವಿದ್ಯಾಲಯದಿಂದ ಸಂದರ್ಶನಕ್ಕೆ ಆಹ್ವಾನ ಬಂದಿತು. ಈ ಪತ್ರ ಬಂದ ಒಂದೆರಡು ದಿವಸಗಳಲ್ಲಿ ಕರ್ಣಾಟಕ ವಿಶ್ವವಿದ್ಯಾಲಯದಿಂದ ನನಗೆ ಕನ್ನಡ ಎಂ.ಎ.ಗೆ ಸೀಟು ನೀಡಿರುವುದಾಗಿಯೂ ಒಂದು ವಾರದಲ್ಲಿ ಪ್ರವೇಶ ಪಡೆಯಬೇಕೆಂದು ಆದೇಶ ಬಂದಿತು. ನಾನು ಎರಡೂ ವಿಷಯಗಳನ್ನ ನನ್ನ ಅಜ್ಜನಿಗೆ ತಿಳಿಸಿ ಧಾರವಾಡದಲ್ಲಿ ಓದುವ ಇಂಗಿತ ಮುಂದೆ ಇಟ್ಟೆ. ಅದಕ್ಕೆ ಅವರು ಒಪ್ಪಿದರು. ನಾನು ಗಂಟು ಮೂಟೆ ಕಟ್ಟಿಕೊಂಡು ಧಾರವಾಡಕ್ಕೆ ಹೋಗಿ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದೆ.

ತರಗತಿಗಳು ಪ್ರಾರಂಭವಾದುವು. ಪ್ರಾಧ್ಯಾಪಕ ಆರ್. ಸಿ. ಹಿರೇಮಠ ಅವರು, ಪ್ರೊ. ಬಿ.ಎಸ್. ಕುಲಕರ್ಣಿ ತರಗತಿಗಳನ್ನು ನಡೆಸುತ್ತಿದ್ದರು. ಸಂದರ್ಶಕ ಪ್ರಾಧ್ಯಾಪಕರಾಗಿ ಪ್ರೊ. ಎಸ್.ಎಸ್. ಮಾಳವಾಡರು ತರಗತಿ ತೆಗೆದುಕೊಳ್ಳುತ್ತಿದ್ದರು. ಕೆಲ ದಿವಸಗಳ ನಂತರ ಡಾ॥ ಎಂ.ಎಸ್, ಸುಂಕಾಪುರ ಅವರು ನೇಮಕಗೊಂಡು ತರಗತಿಗಳು ಸತತ ನಡೆಯುತ್ತಿದ್ದವು. ಪ್ರತಿವಾರವೂ ವಿಚಾರಗೋಷ್ಠಿ ಇರುತ್ತಿತ್ತು. ಒಬ್ಬೊಬ್ಬ ವಿದ್ಯಾರ್ಥಿ ಪ್ರಬಂಧವನ್ನು ಓದುವುದು ಚರ್ಚೆ ಮಾಡುವುದು ಪ್ರಶ್ನೋತ್ತರಗಳು ನಡೆಯುತ್ತಿದ್ದುವು. ಇದೆಲ್ಲ ಪ್ರಾಧ್ಯಾಪಕ ಡಾ॥ ಆರ್.ಸಿ. ಅವರ ನೇತೃತ್ವದಲ್ಲಿ ನಡೆಯುತ್ತಿತ್ತು. ಎಲ್ಲಾ ಪ್ರಾಧ್ಯಾಪಕರು ಹಾಗೂ ಎರಡನೇ ಎಂ.ಎ. ವಿದ್ಯಾರ್ಥಿಗಳೂ ಭಾಗವಹಿಸುತ್ತಿದ್ದರು. ಒಂದು ವಾರ ನನ್ನ ಸರದಿ ಬಂದು ನಾನು ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿ ಬಗೆಗೆ ಪ್ರಬಂಧ ಬರೆದು ಓದಿದೆ. ಪ್ರಶ್ನೋತ್ತರಗಳಾದುವು. ಚರ್ಚೆಯಾಯಿತು. ಉತ್ತರ ಸಾಧ್ಯವಾಗದಿದ್ದಾಗ ಡಾ॥ ಆರ್.ಸಿ. ಅವರು ಪ್ರಶ್ನೆಗಳಿಗೆ ಉತ್ತರ ವಿವರ ನೀಡುತ್ತಿದ್ದರು. ಎಲ್ಲಾ ಮುಗಿದು ಚಹಾ ಕುಡಿದು ಹೊರ ಹೊರಟಾಗ ಡಾ॥ ಆರ್.ಸಿ. ಅವರು "ನೀವು ಬಹಳೆ ಶಾಣೆ ಇದ್ದೀರಿ" ಎಂದು ಹೇಳಿ ತಮ್ಮ ಕೊಠಡಿ ಸೇರಿದರು. ಈ ಮಾತುಗಳು ನನ್ನಲ್ಲಿ ಗಾಬರಿ ಉಂಟು ಮಾಡಿದುವು. ಬಹುಶಃ ನನ್ನ ಪ್ರಬಂಧ ದೋಷದಿಂದ ಕೂಡಿರಬಹುದು. ಅದಕ್ಕಾಗಿ ಪ್ರಾಧ್ಯಾಪಕರು ಈ ಮಾತುಗಳಲ್ಲಿ ತಮ್ಮ ಅಸಮಾಧಾನ ವ್ಯಕ್ತಮಾಡಿರಬಹುದು ಎನಿಸಿತು. ನಾನು ಗ್ರಂಥಾಲಯ ಹೊಕ್ಕೆನು. ಯಾವುದೋ ಪುಸ್ತಕ ತೆಗೆದು ಓದಲಾರಂಭಿಸಿದೆ. ಆದರೆ ಮನಸ್ಸು ಓದಿನಲ್ಲಿ ತೊಡಗಲಿಲ್ಲ. ನನ್ನ ಮನಸ್ಸನ್ನು

'ಶಾಣೆ' ಶಬ್ದ ಆವರಿಸಿದ್ದಿತು. ಸುಮಾರು ೪-೩೦ರ ವೇಳೆಗೆ ಪ್ರಾಧ್ಯಾಪಕರ ಕೊಠಡಿಗೆ ಹೋದೆ. ಬಾಗಿಲನ್ನು ತಟ್ಟಿದಾಗ 'Come in' ಎಂದು ಅಪ್ಪಣೆ ದೊರೆಯಿತು. ನಾನು ಒಳಗೆ ಹೋದಾಗ ಡಾ॥ ಆರ್.ಸಿ. ಅವರು ಅಧ್ಯಯನದಲ್ಲಿ ಮುಳುಗಿದ್ದರು. ನಾನು 'ನಮಸ್ಕಾರ ಸಾರ್' ಎಂದಾಗ ತಲೆ ಎತ್ತಿ "ಓ ರಾಚಪ್ಪ, ಬನ್ನಿ ಕುಳಿತುಕೊಳ್ಳಿ" ಎಂದು ತಮ್ಮ ಎದುರಿನಲ್ಲಿ ಕುರ್ಚಿ ತೋರಿದರು. ನಾನು ನಿಂತೇ ಇದ್ದೆ. 'ಪರವಾಗಿಲ್ಲ ಕುಳಿತುಕೊಳ್ಳಿ' ಎಂದು ಮತ್ತೆ ಆದೇಶಿಸಿದರು. ನಾನು ಕುಳಿತು 'ಶಾಣೆ' ಶಬ್ದದಿಂದ ನನಗೆ ಆಗಿರುವ ಗಾಬರಿಯನ್ನು ಮುಂದಿಟ್ಟು, 'ಒಂದು ಪ್ರಬಂಧ ಚೆನ್ನಾಗಿ ಬರೆಯಲಾಗದ ನಾನು ಎಂ.ಎ. ಪದವಿ ಪಡೆಯಲಾಗುವುದಿಲ್ಲ' ಎಂದೆನು. ನನ್ನ ಆತಂಕವನ್ನು ಕೇಳಿ ಅರಿತುಕೊಂಡು ಅವರು ನಿಮ್ಮ ಪ್ರಬಂಧ ಚೆನ್ನಾಗಿತ್ತು. ಕಾದಂಬರಿಯನ್ನು ನೀವು ಸರಿಯಾಗಿಯೇ ವಿಮರ್ಶಿಸಿದ್ದೀರಿ.

"ಆದರೆ ತಾವು ಕೊನೆಯಲ್ಲಿ ನೀವು ಬಹಳ ಶಾಣೆ ಇದ್ದೀರಿ" ಎಂದಿರಿ ಎಂದೆನು. ಇದನ್ನು ಕೇಳಿ ಡಾ॥ ಆರ್.ಸಿ. ಅವರು ಜೋರಾಗಿ ನಗಲಾರಂಭಿಸಿದರು. ಕೊನೆಗೆ ಅವರೇ ತಮ್ಮ ನಗುವನ್ನು ತಡೆದುಕೊಂಡು "ನೀವು ಹಳೇ ಮೈಸೂರು ಪ್ರದೇಶದಿಂದ ಬಂದವರು. ಅದಕ್ಕೆ ನಿಮಗೆ 'ಶಾಣೆ' ಮಾತು ಅರ್ಥವಾಗದೆ ಗೊಂದಲಕ್ಕೀಡಾಗಿದ್ದೀರಿ. 'ಶಾಣೆ' ಎಂದರೆ ಬುದ್ಧಿವಂತ ಎಂದು ಅರ್ಥ. ಜಾಣ ಎಂದೂ ಆಗುತ್ತದೆ. ಇದು ಮರಾಠಿ ಶಬ್ದ. ಇಲ್ಲಿ ಮರಾಠಿ ಪ್ರಭಾವವಿದ್ದು ಅನೇಕ ಮರಾಠಿ ಶಬ್ದಗಳು ಕನ್ನಡದಲ್ಲಿ ಸೇರಿ ಪ್ರಯೋಗವಾಗಿವೆ. ಇದು ಭಾಷೆಯ ಪ್ರಮುಖ ಲಕ್ಷಣ. ಯಾವುದೇ ಭಾಷೆ ತನ್ನ ವ್ಯಾಪ್ತಿಯೊಳಗೆ ಪ್ರತಿ ಮೂವತ್ತು ನಲವತ್ತು ಮೈಲಿಯೊಳಗೆ ವ್ಯತ್ಯಾಸ ಹೊಂದುತ್ತದೆ. ಮತ್ತೊಂದು ಭಾಷೆಯ ಪ್ರಭಾಕ್ಕೂ ಒಳಗಾಗುತ್ತದೆ. ಇದಕ್ಕೆ ಕನ್ನಡವು ಹೊರತಲ್ಲ. ನೀವು ಹಳೇ ಮೈಸೂರಿನಿಂದ ಬಂದವರು. ಬೆಳಗಿನ ಉಪಹಾರವನ್ನು 'ತಿಂಡಿ' ಎನ್ನುತ್ತೀರಿ. ಇಲ್ಲಿ 'ತಿಂಡಿ' ಎಂದರೆ ಕೆರೆತ, ನವೆ ಎಂದು ಅರ್ಥ. ಪ್ರಾದೇಶಿಕವಾಗಿ ಅರ್ಥ ವ್ಯತ್ಯಾಸ ಹೊಂದುವುದು, ಅನ್ಯ ಭಾಷೆಯ ಪ್ರಭಾವಕ್ಕೆ ಒಳಗಾಗಿ ಆ ಭಾಷಾ ಶಬ್ದಗಳನ್ನು ತನ್ನವಾಗಿಸಿಕೊಳ್ಳುವುದು ಜೀವಂತ ಭಾಷೆಯ ಲಕ್ಷಣ" ಎಂದು ಭಾಷಾಶಾಸ್ತ್ರದತ್ತ ಹೊರಳಿದರು. ನಾನು ಎಲ್ಲವನ್ನೂ ಕೇಳಿ, "ನನ್ನ ಪ್ರಬಂಧ ದೋಷಯುಕ್ತವಾಗಿದೆ. ಆದ್ದರಿಂದಲೇ ಪ್ರಾಧ್ಯಾಪಕರ ಮೆಚ್ಚುಗೆ ಗಳಿಸಲಿಲ್ಲ. ನನ್ನ ಅಧ್ಯಯನ, ವಿಮರ್ಶನ ಶಕ್ತಿ ಸಾಲದು.  ಆದ್ದರಿಂದ ಎಂ.ಎ. ಓದುವ ಆಸೆ ಬಿಟ್ಟು ಊರಿಗೆ ಹೋಗಿ ಯಾವುದಾದರೂ clerk ಕೆಲಸ ಹಿಡಿಯಬೇಕೆಂದುಕೊಂಡು ತಮ್ಮ ಬಳಿ ಬಂದು ಇದನ್ನು ತಿಳಿಸಿ ಹೋಗಲು ಬಂದೆ" ಎಂದೆನು. ಡಾ॥ ಆರ್.ಸಿ. ಅವರು ನನ್ನನ್ನು ನೆಟ್ಟದೃಷ್ಟಿಯಿಟ್ಟು ನೋಡಿ ಹಾಗೆಲ್ಲಾ ಯೋಚಿಸಬೇಡಿ. ನೀವು ಸರಿಯಾದ ಹಾದಿಯಲ್ಲಿ ಇದ್ದೀರಿ. ನಿಮ್ಮ ವಿಚಾರ ಲಹರಿ, ನಿಮ್ಮ ಆಲೋಚನೆ, ವಿಮರ್ಶನ ಶಕ್ತಿ ಸಮರ್ಪಕವಾಗಿವೆ. ನೀವು ಇಲ್ಲಿಂದ ಎಂ.ಎ. ಪದವಿ ಪಡೆದೇ ಹೋಗಬೇಕು. "ನಿಮ್ಮನ್ನು ಎಂ.ಎ. ಪದವೀಧರನನ್ನಾಗಿಸುವುದು ನನ್ನ ಹೊಣೆ" ಎಂದು ಹೇಳಿ ಮನೆಗೆ ಹೊರಡುವ ಸಮಯವಾಯಿತೆಂದು ಹೊರಟರು. 'ಸರಿ ಸರ್ ನಾನು ಬರುತ್ತೇನೆ, ನಿಮ್ಮ ಆಶಯವನ್ನು ಪೂರ್ಣಗೊಳಿಸುತ್ತೇನೆ' ಎಂದು ಹೊರ ಹೊರಡಲನುವಾದಾಗ. "ಇರಿ ನಾವಿಬ್ಬರೂ ಕೂಡಿ ನಮ್ಮ ಮನೆಗೆ ಹೋಗೋಣ. ಅಲ್ಲಿ ನಿಮಗೆ ಭಾಷಾಶಾಸ್ತ್ರದ ಒಂದೆರಡು ಪುಸ್ತಕಗಳನ್ನು ಕೊಡುತ್ತೇನೆ. ನೀವು ಅದನ್ನು ಓದಿರಿ,

ನಿಮ್ಮ ಅಧ್ಯಯನಕ್ಕೆ ಅವು ಬೆಂಬಲವಾಗುತ್ತವೆ" ಎಂದು ಮನೆಗೆ ಕರೆದುಕೊಂಡು ಹೋಗಿ ಚಹಾ ಕೊಟ್ಟು ಸಾಂತ್ವನ ಹೇಳ ಧೈರ್ಯ ತುಂಬಿ ಕಳುಹಿಸಿದರು. ಈ ಘಟನೆಯಲ್ಲಿ ನಾನು ಶಿಷ್ಯವತ್ಸಲ್ಯ, ಮಾನವಾನುಕಂಪೆಯುಳ್ಳ ಪ್ರಾಧ್ಯಾಪಕ ಆರ್.ಸಿ. ಅವರನ್ನು ಕಂಡೆನು.

ಒಂದು ದಿವಸ ಭಾಷಾ ವಿಜ್ಞಾನ ತರಗತಿಯಲ್ಲಿ ದ್ರಾವಿಡ ಭಾಷೆಗಳಾವುವು ಎಂಬ ಪ್ರಶ್ನೆ ನನಗೆ ಬಂದಿತು. ನಾನು ಎದ್ದು ನಿಂತು "ತಮಿೞ್, ತೆಲುಗು, ಕನ್ನಡ, ಮಲೆಯಾಳಂ" ಎಂದು ಉತ್ತರಿಸಿದೆ. ಆರ್.ಸಿ. ಅವರು "ಮತ್ತೊಮ್ಮೆ ಹೇಳಿ" ಎಂದರು. ನನಗೆ ಗಾಬರಿಯಾಯಿತು. ತಲೆತಗ್ಗಿಸಿದೆ. "ನಿಮ್ಮ ಉತ್ತರ ಸರಿಯಾಗಿದೆ ಮತ್ತೊಮ್ಮೆ ಹೇಳಿ" ಎಂದರು. ನಾನು ಹಿಂದಿನಂತೆ ಹೇಳಿದೆ. ಆಗ ಪ್ರಾಧ್ಯಾಪಕರು ಉಳಿದ ವಿದ್ಯಾರ್ಥಿಗಳನ್ನು ಕುರಿತು 'ತಮಿೞ್' ಉಚ್ಚಾರ ಹೀಗಿರಬೇಕು. ರಾಚಪ್ಪ ಅದನ್ನು ಸರಿಯಾಗಿ ಉಚ್ಚಾರಮಾಡುತ್ತಿದ್ದಾರೆ. ಇದು ಸರಿಯಾದ ಉಚ್ಚಾರಣಾಕ್ರಮ" ಎಂದರು. ನಾನು ಆ ಹೊತ್ತಿಗಾಗಲೇ ಕಾಲ್ಡ್‌ವೆಲ್, ಎಡ್ವರ್ಡ್ ಸಫೀರ್, ಪ್ರೊ. ಎಮಿನೋ ಬ್ಲೂಮ್‌ಫೀಲ್ಡ್, ಫರ್ಗ್ಯೂಸನ್, ಗ್ಲೀಸನ್ ಮೊದಲಾದ ಭಾಷಾಶಾಸ್ತ್ರಜ್ಞರ ಕೃತಿಗಳನ್ನು ಅಭ್ಯಾಸ ಮಾಡಿದ್ದೆ. ವರ್ಣನಾತ್ಮಕ ಭಾಷಾಶಾಸ್ತ್ರ, ತೌಲನಿಕ ಭಾಷಾಶಾಸ್ತ್ರಗಳ ಬಗೆಗೆ ನನಗೆ ಹೆಚ್ಚಿನ ಆಸಕ್ತಿ ಇದ್ದಿತು. ಡಾ॥ ಆರ್.ಸಿ. ಅವರು ನನ್ನ ಈ ಆಸಕ್ತಿಯನ್ನು ಗಮನಿಸಿ ಹೆಚ್ಚು ಪ್ರೋತ್ಸಾಹ ನೀಡುತ್ತಿದ್ದರು. ಹಾಗಾಗಿ ಭಾಷಾಶಾಸ್ತ್ರದ ತರಗತಿ ಎಂದರೆ ನನಗೆ ಹೆಚ್ಚು ಉತ್ಸಾಹ. ಇದಕ್ಕೆ ಕಾರಣ ಡಾ॥ ಆರ್.ಸಿ. ಅವರ ಬೋಧನಾಕ್ರಮ. ಶಬ್ದಗಳ ಉಚ್ಚಾರಣೆ, ಅವುಗಳ ಉಗಮಸ್ಥಾನ, ಉಚ್ಚಾರಣಾ ಸಂದರ್ಭದಲ್ಲಿ ನಡೆಯುತ್ತಿದ್ದ ವ್ಯತ್ಯಾಸಗಳನ್ನು ಮನಮುಟ್ಟುವಂತೆ ವಿವರಿಸುತ್ತಿದ್ದರು. ಇವರ ಈ ಬೋಧನಾ ಕ್ರಮವು ಎಂತಹವರನ್ನೂ ಆಕರ್ಷಿಸುತ್ತಿದ್ದುವು.

ಮತ್ತೊಂದು ದಿವಸ ಪಂಪನ ವಿಕ್ರಮಾರ್ಜುನವಿಜಯ ಪಾಠ ನಡೆಯುತ್ತಿತ್ತು. ಪಂಪನನ್ನು ಹೇಳುವಾಗ ಆರ್.ಸಿ. ಭಾವತನ್ಮಯರಾಗುತ್ತಿದ್ದರು. ಅವರ ಪಾಠ ಎಂದರೆ ಸತತ ಮೂರು ಗಂಟೆ. ಆ ದಿವಸ ಅತ್ಯಂತ ಉತ್ಸಾಹಿತರಾಗಿ ಪಾಠ ಹೇಳುತ್ತಿದ್ದರು. ಅತ್ಯಂತ ಭಾವುಕರಾಗಿ ಪಾಠ ಮಾಡುವ ಅವರ ತನ್ಮಯತೆ ನನ್ನನ್ನು ಮುಗ್ಧನನ್ನಾಗಿಸಿತ್ತು. ಕರ್ಣ-ದುರ್ಯೋಧನರ ಸ್ನೇಹದ ಗಾಢತೆಯನ್ನು ಹೇಳುತ್ತಿದ್ದರು. ಕರ್ಣಾವಸಾನವಾದಾಗ ದುರ್ಯೋಧನನಿಗೆ ಆಗಿದ್ದ ದುಃಖ ವಿವರಿಸುತ್ತಿದ್ದರು. ದುಃಖ ತಪ್ತನಾಗಿದ್ದ ದುರ್ಯೋಧನನಿಗೆ ಕೃಪಾಚಾರ್ಯನಿಂದ ಸಂಧಿಮಾತು ಬರಲು ಅವನಿಗೆ ಸಹಿಸಲಾಗಲಿಲ್ಲ. ಕರ್ಣನನ್ನು ಬದುಕಿಸಿ ತಂದು ನನ್ನ ಮುಂದೆ ಇಳುಪುವುದಾದರೆ ನಾನು ಸಂಧಿಗೆ ಒಪ್ಪುವೆನು ಎಂದನು. ಆಗ ಅಶ್ವತ್ಥಾಮ ಕೋಪೋನ್ಮತ್ತನಾಗಿ ಕರ್ಣನನ್ನು ಹೀಯಾಳಿಸಿ ನುಡಿಯುವನು. ಇದನ್ನು ಸಹಿಸದ ದುರ್ಯೋಧನ

"ನಿನ್ನಿಂದಂತ್ರಿಭುವನ ರಾ
ಜ್ಯೋನ್ನತಿ ಬಂದೆನಗೆ ಸಾರ್ಗುಮಪ್ಪೊಡಮೊಲ್ಲೆಂ
ನೀನ್ನುಡಿದು ಬರ್ದುಕಿದ್ಪೈ ಪೆಱ
ರೆನ್ನಿದಿರೊಳ್ ನುಡಿದು ಕರ್ಣನಂ ಬರ್ದುಕುವರೆಱ್"

ಎಂದು ಹೇಳುವನು. ಭಾವತನ್ಮಯರಾಗಿದ್ದ ಆರ್.ಸಿ. ಅವರು ಈ ಪದ್ಯ ವಿವರಿಸುವಾಗ "ಅಶ್ವತ್ಥಾಮ ಬ್ರಾಹ್ಮಣ ಮಾತನಾಡಿ ಬದುಕುವವನೇ ಹೊರತು, ಕರ್ಣನಂತೆ ಪರಾಕ್ರಮಿಯಾಗಿ ಇರಿಯಲಾರ. ಅವನು ಬ್ರಾಹ್ಮಣನಾದುದರಿಂದ ದುರ್ಯೋಧನ ಅವನನ್ನು ಕೊಲ್ಲದೆ ಬಿಡುವನು" ಎಂದು ಅರ್ಥೈಸಿದರು. ಈ ವಿವರ ನನಗೆ ಸಮಾಧಾನವಾಗಲಿಲ್ಲ. ಇದು ಸರಿಯಲ್ಲವೆನಿಸಿತು. ಎದ್ದು ನನ್ನ ಅನಿಸಿಕೆ ಹೇಳಬೇಕೆನಿಸಿತು. ಆದರೆ ಪ್ರಾಧ್ಯಾಪಕರ ಎದುರು ವಾದಕ್ಕಿಳಿಯುವುದು ಸರಿಯಲ್ಲವೆನಿಸಿ ನನ್ನ ಅತೃಪ್ತಿಯನ್ನು ಒತ್ತಿಹಿಡಿದೆ. ಸಂಜೆ ನಾಲ್ಕು ಗಂಟೆಗೆ ತರಗತಿ ಮುಗಿಯಿತು. ನಾನು ನೇರವಾಗಿ ಆರ್.ಸಿ. ಅವರನ್ನು ಹಿಂಬಾಲಿಸಿ ಅವರ ಕೋಣೆಯನ್ನು ಹೊಕ್ಕೆನು. ನನ್ನ ಕಂಡೊಡನೆಯೆ ಆರ್.ಸಿ. ಅವರು "ಬನ್ನಿ ರಾಚಪ್ಪ Any doubt'' ಎಂದರು. ನಾನು ಪಂಪ ಭಾರತವನ್ನು ತೆಗೆದು ಆ ಪದ್ಯವನ್ನು ಓದಿ ಹೇಳಿ ಈ ಪದ್ಯದ ವಿವರವನ್ನು ಅವರು ತಿಳಿಸಿದ್ದು ಸರಿಯಲ್ಲವೆಂದು ಅದರ ಅರ್ಥ ಬೇರೆ ಎನಿಸುತ್ತದೆ ಎಂದೆನು. ಒಂದು ನಿಮಿಷ ತಡೆದು "ನಿಮ್ಮ ಅರ್ಥವನ್ನು ಹೇಳಿ" ಎಂದರು. "ಕರ್ಣ ಪರಾಕ್ರಮಿ ನಿಜ. ಅಶ್ವತ್ಥಾಮನೂ ಪರಾಕ್ರಮಿ. ಕರ್ಣನ ಪರಾಕ್ರಮವನ್ನು ಕಣ್ಣಾರೆ ಕಂಡಿದ್ದ ಅಶ್ವತ್ಥಾಮ ಕರ್ಣ ಇಲ್ಲದಿರುವಾಗ ಕರ್ಣನನ್ನು ಹೀಯಾಳಿಸಿ ಆಡಿದ ಮಾತು ದುರ್ಯೋಧನನಿಗೆ ಸಹಿಸಲಾಗಲಿಲ್ಲ. ಅವನಲ್ಲಿ ಆ ಮಾತನಾಡಿದವರನ್ನು ಕತ್ತರಿಸಿ ಬಿಸಾಡುವ ಕೋಪಬಂದಿತ್ತು. ಆದರೆ ಆ ಮಾತನ್ನು ಆಡಿದವನು ಅಶ್ವತ್ಥಾಮ. ಆದ್ದರಿಂದ ತನ್ನ ಕೋಪವನ್ನು ನುಂಗಿಕೊಂಡು "ಅಶ್ವತ್ಥಾಮ, ಭುಜಬಲದಿಂದ ನೀನು ಗೆದ್ದು ಮೂರು ಲೋಕಗಳ ಒಡೆತನವನ್ನು ನನಗೆ ತಂದುಕೊಟ್ಟರೆ ಅದು ನನಗೇಬೇಡ. ಕರ್ಣನನ್ನು ಹೀಯಾಳಿಸಿ ಮಾತನಾಡಿ ನೀನಾಗಿರುವುದರಿಂದ ಬದುಕಿದೆ. ಬೇರೆ ಯಾರಾದರೂ ಹೀಗೆ ಮಾತನಾಡಿದ್ದರೆ ಅವರು ಯಮನ ಅತಿಥಿಯಾಗುತ್ತಿದ್ದರು." ಎಂಬುದು ಅರ್ಥ. ಇಲ್ಲಿ ಅಶ್ವತ್ಥಾಮ ಬ್ರಾಹ್ಮಣ. ಮೆಲಾಗಿ ಗುರುಪುತ್ರ, ಮಿತ್ರನೂ ಹೌದು. ಅಶ್ವತ್ಥಾಮ ಕರ್ಣನನ್ನು ಹೀಯಾಳಿಸಿದನೆಂದು ಇರಿದು ಕೊಲ್ಲುವಂತಿಲ್ಲ. ಕಾರಣ ಬ್ರಹ್ಮಹತ್ಯಾದೋಷ; ಮಿತ್ರಹತ್ಯಾದೋಷ; ಗುರುಪುತ್ರ ಹತ್ಯಾದೋಷಗಳಲ್ಲದೆ ಅಪಕೀರ್ತಿ ಬರುವುದೆಂದು ದುರ್ಯೋಧನ ಈ ಮಾತನ್ನು ಹೇಳಿದ್ದಾನೆ. "ನೀನ್ನುಡಿದು ಬರ್ದುಕಿದೈ..... ಪೆಱರ್ ಬರ್ದುಕವರೆ" ಎಂಬಲ್ಲಿ 'ಧ್ವನಿ' ಇದೆ. ಈ ಧ್ವನಿ ಪಂಪನ ವೈಶಿಷ್ಟ್ಯ. "ಧ್ವನಿರಾತ್ಮಾ ಕಾವ್ಯಸ್ಯ" ಎಂಬ ಮಾತು ಇಲ್ಲಿ ಸಮರ್ಥಿತವಾಗಿದೆ. ಅಂತ ನನಗನ್ನಿಸುತ್ತೆ. ಇಲ್ಲಿ ನನ್ನ ಅರ್ಥ ತಪ್ಪಿರಬಹುದು. ಅದಕ್ಕೆ ತಮಗೆ ತಿಳಿಸಿ ನನ್ನ ತಪ್ಪನ್ನು ತಿದ್ದಿಕೊಳ್ಳಲು ಬಂದೆ." ಎಂದು ಹೇಳಿ ಸುಮ್ಮನಾದೆ. ಆರ್.ಸಿ. ಅವರು ಏನೂ ಮಾತನಾಡಲಿಲ್ಲ. "ಬನ್ನಿ ವೇಳೆ ಆಗಿದೆ. ಮನೆಗೆ ಹೋಗಿ ಅಲ್ಲಿ ಕುಳಿತು ಚರ್ಚೆ ಮಾಡೋಣ." ಎಂದು ಮನೆಗೆ ಕರೆದೊಯ್ದರು. ಯಥಾ ಪ್ರಕಾರ ಚಹಾ ಆಯ್ತು. ಆರ್.ಸಿ. ಅವರು ನಿಧಾನವಾಗಿ "ನೀವು ಹೇಳಿದ ಅರ್ಥ ಸರಿ. ನಾನು ಹಾಗೆ ಏಕೆ ಹೇಳಿದೆನೋ ತಿಳಿಯದು. ನೀವು ಸರಿಯಾಗಿ ಅರ್ಥಮಾಡಿದ್ದೀರಿ. ನಿಮ್ಮ ಅರ್ಥ ಸಮಂಜಸ" ಎಂದರು. ನನಗೆ ಗರಿಗೆದರಿದಂತಾಯಿತು. "ಇಷ್ಟೊಂದು ವಿವರವಾಗಿ ಪಂಪನನ್ನು ಹೇಗೆ ಅಭ್ಯಾಸ ಮಾಡಿದಿರಿ" ಎಂದಾಗ, ನನಗೆ ಉತ್ಸಾಹಗರಿಗೆದರಿತು. ನಾನು ಬಿ.ಎ. ಓದುವಾಗ ಪಂಪ ಭಾರತವನ್ನು ಪಾಠ ಹೇಳಿದ ಶ್ರೀ 'ದೊಡ್ಡವೀರಯ್ಯ'ನವರ ಹೆಸರನ್ನು ಹೇಳಿ "ಪಂಪನನ್ನು ಚೆನ್ನಾಗಿ ಓದಿದವರು ಅವರು. ಅವರ ಕೃಪೆಯಿಂದ ಪಂಪನನ್ನು ಅಲ್ಪ ಸ್ವಲ್ಪ ಅರ್ಥಮಾಡಿಕೊಂಡಿದ್ದೇನೆ. ಪಂಪ ಬಹಳ deep. ಅವನನ್ನು ಅರ್ಥಮಾಡಿಕೊಳ್ಳಲು ಇನ್ನೂ ಶ್ರಮಿಸಬೇಕು. ತಮ್ಮಿಂದ ಅವನನ್ನು

ಅರ್ಥಮಾಡಿಕೊಳ್ಳುವುದು ನನಗೆ ಸಾಧ್ಯವಾಗಬಹುದು." ಎಂದು ಹೇಳಿದೆ. ಗಡಿಯಾರ ಆಗಲೇ ಏಳು ಗಂಟೆ ತೋರಿಸುತ್ತಿತ್ತು. ಗುರುಗಳ ಅಪ್ಪಣೆ ಪಡೆದು ನಾನು ಮಾಳಮಡ್ಡಿಯಲ್ಲಿದ್ದ ನನ್ನ ಕೋಣೆ ಸೇರಿದೆ. ಮಾರನೇ ದಿವಸ ಷಡಕ್ಷರ ಮಹಾಕವಿಯ ಪಾಠವಿದ್ದಿತು. ಅದನ್ನೂ ಆರ್.ಸಿ. ಅವರೇ ನಮಗೆ ಕಲಿಸುತ್ತಿದ್ದರು. ತರಗತಿಗೆ ಬಂದ ಆರ್.ಸಿ. ಅವರು ಪಾಠ ಆರಂಭ ಮಾಡುವ ಮುನ್ನ, ನೆನ್ನೆ ನನ್ನ ಅವರ ನಡುವೆ ನಡೆದ ವಿಚಾರ ವಿಮರ್ಶೆಯನ್ನು ಹೇಳಿ 'ನೆನ್ನೆ ನಾನು ಹೇಳಿದ ಅರ್ಥ ಸರಿಯಲ್ಲ. ರಾಚಪ್ಪ ಅದನ್ನು ಸರಿಯಾಗಿ ಅರ್ಥೈಸಿದ್ದಾರೆ. "I am really proud of his knowledge about pampa" ಎಂದು ಹೇಳಿದರು. ನಾನು ಕುಸಿದುಹೋದೆ. ಆ ಹೃದಯ ಶ್ರೀಮಂತಿಕೆಯ ತ್ರಿವಿಕ್ರಮನ ಎದುರು ನಾನು ವಾಮನನಾದೆ. ಶಿಷ್ಯನೊಬ್ಬನ ವಿಚಾರಲಹರಿಯನ್ನು ಅತ್ಯಂತ ಅಭಿಮಾನದಿಂದ ಮೆಚ್ಚಿದ ಆ ಗುರುವರ್ಯರ ವಿದ್ವತ್ತು ವಿನಯ ಪ್ರಪೂರ್ಣವಾದುದು. ಹಾಗೂ ಪರವಿಚಾರವನ್ನೂ ಗೌರವಿಸುವ ಚಿನ್ನ ಗುಣವನ್ನು ಅಭಿಮಾನದಿಂದ ಹೇಳಲಿಚ್ಛಿಸುತ್ತೇನೆ.

ಸೆಪ್ಟೆಂಬರ್ ತಿಂಗಳಿನಲ್ಲಿ ಡಾ॥ ಆರ್.ಸಿ. ಅವರು ಅಮೆರಿಕೆಯ ರ್‍ಯಾಕ್ ಫೆಲರ್ ಸಂಸ್ಥೆಯ ಸೀನಿಯರ್ ಫೆಲೋಷಿಪ್ ಪಡೆದು ಅಮೆರಿಕೆಗೆ ಹೊರಟಿದ್ದರು. ಆಗ ಡಾ॥ ಸುಂಕಾಪುರ ಅವರು ವಿಭಾಗದ ಮುಖ್ಯರಾಗಿ ಅಧಿಕಾರವಹಿಸಿಕೊಂಡರು. ವಿಭಾಗದಿಂದ ಬೀಳ್ಕೊಡಿಗೆ ಸಮಾರಂಭವನ್ನು ವ್ಯವಸ್ಥೆಗೊಳಿಸಿದೆವು. ಪ್ರೊ. ಸ.ಸ. ಮಾಸವಾಡ, ಡಾ॥ ಎಂ.ಎಸ್. ಸುಂಕಾಪುರ ಪ್ರೊ. ಬಿ.ಎಸ್. ಕುಲಕರ್ಣಿ ವಿಶ್ವವಿದ್ಯಾಲಯದ ಕುಲಸಚಿವ ಶ್ರೀ ಎಸ್.ಎಸ್. ಒಡೆಯರ್, ಗ್ರಂಥಪಾಲಕ ಶ್ರೀ ದೇಶಪಾಂಡೆ ಮೊದಲಾದ ಹಿರಿಯರು ಅಲ್ಲಿ ಉಪಸ್ಥಿತರಿದ್ದರು. ಎಲ್ಲರೂ ಡಾ॥ ಆರ್.ಸಿ. ಅವರಿಗೆ ಶುಭ ಕೋರಿದರು. ವಿದ್ಯಾರ್ಥಿಗಳ ಪರವಾಗಿ ನಾನು ಮಾತನಾಡಬೇಕಾಗಿ ಬಂದು "ಡಾ॥ ಆರ್.ಸಿ. ಅವರು ಸೀನಿಯರ್ ಫೆಲೋ ಆಗಿ ಅಮೆರಿಕೆಗೆ ಹೊರಟಿರುವುದು ನಮಗೆಲ್ಲಾ ಅತ್ಯಂತ ಆನಂದದ ಸಂಗತಿ. ಇದರಿಂದ ವಿಶ್ವವಿದ್ಯಾಲಯದ ಗೌರವಕ್ಕೆ ಒಂದು ಹೆಮ್ಮೆ ಬಂದಂತಾಯಿತು. ಪ್ರಾಧ್ಯಾಪಕರು ಅಮೆರಿಕೆಯಿಂದ ಹಿಂದಕ್ಕೆ ಬರುವವರೆಗೆ ಅವರ ಅಧ್ಯಾಪನ ನಮಗೆ ಲಭ್ಯವಿಲ್ಲ. ಈ ಕೊರತೆ ನಮಗೆ ಕೊರತೆಯಾಗಿ ಉಳಿಯುವುದಾದರೂ ಡಾ॥ ಸುಂಕಾಪುರ ಅವರು ಕೊಂಚಮಟ್ಟಿಗೆ ಆ ಕೊರತೆಯನ್ನು ತುಂಬಬಲ್ಲರೆಂಬ ವಿಶ್ವಾಸ ನಮಗಿದೆ." ಎಂದು ಹೇಳುತ್ತಾ ವಿದ್ಯಾರ್ಥಿಗಳ ಪರವಾಗಿ ಡಾ॥ ಆರ್.ಸಿ. ಅವರಿಗೆ ಶುಭಕೋರಿ ವಿರಮಿಸಿದೆ. ನಮ್ಮ ಈ ಅಭಿಮಾನಾದರಗಳಿಗೆ ಉತ್ತರಿಸುತ್ತಾ ಆರ್.ಸಿ. ಅವರು "ಈ ಗೌರವ ನನಗೆ ಸಂದಿರುವುದು ನನ್ನ ಪುಣ್ಯ ವಿಶೇಷ. ಇದರಿಂದ ನಾನು ಮತ್ತಷ್ಟು ಬೆಳೆಯಲವಕಾಶವಿದೆ. ಬೆಳೆಯುತ್ತೇನೆ. ವಿದ್ಯಾರ್ಥಿ ಮಿತ್ರ ರಾಚಪ್ಪ ಹೇಳಿದ ಹಾಗೆ ನನ್ನ ಗೈರು ಹಾಜರಿ ಅಧ್ಯಾಪನದ ಕೊರತೆಯೇನೂ ಆಗುವುದಿಲ್ಲ. ಈ ಕೊರತೆಯನ್ನು ಸುಂಕಾಪುರ ಅವರು ಸಮರ್ಥವಾಗಿ ತುಂಬಬಲ್ಲರು. ಹಿರಿಯರಾದ ಪ್ರೊ. ಮಾಳವಾಡರಿದ್ದಾರೆ. ಅವರು ಎಲ್ಲ ರೀತಿಯಿಂದಲೂ ವಿದ್ಯಾರ್ಥಿಗಳಿಗೆ ನೆರವಾಗುವರು. ನಿಮ್ಮೆಲ್ಲರ ಶುಭಕಾಮನೆಯ ರಕ್ಷೆಯಲ್ಲಿ ಅಮೇರಿಕೆಯಲ್ಲಿ ನನ್ನತನವನ್ನು ಮೆರೆದು ಬರುತ್ತೇನೆ" ಎಂದು ಹೇಳಿ ವಿರಮಿಸಿದರು. ಸಭೆ ಮುಗಿದು ಹೊರಡುವಾಗ ಡಾ॥ ಸುಂಕಾಪುರ ಹಾಗೂ ನನ್ನನ್ನು ಒತ್ತಟ್ಟಿಗೆ ಕರೆದು "ರಾಚಪ್ಪ ಚುರುಕಾದ ವಿದ್ಯಾರ್ಥಿ ನೇರ ಸ್ವಭಾವದವನು. ಆತನ ಮಾತನ್ನು ತಪ್ಪಾಗಿ ಭಾವಿಸಬೇಡಿ. ಆತನನ್ನು

ಅತ್ಯಂತ ಜತನದಿಂದ ನೋಡಿಕೊಳ್ಳಿ" ಎಂದು ಹೇಳಿದರು. ಈ ರೀತಿ ಒಬ್ಬ ಶಿಷ್ಯನ ಬಗೆಗೆ ಅಭಿಮಾನ ಹೊಂದಿ, ಆತನಲ್ಲಿನ ಸ್ವಲ್ಪ ಜ್ಞಾನವನ್ನು ಎತ್ತರಕ್ಕೇರಿಸುವಲ್ಲಿ ವಿಶೇಷ ಆಸಕ್ತಿವಹಿಸುತ್ತಿದ್ದ ಪ್ರಾಧ್ಯಾಪಕರು ಅಪರೂಪ. ಈ ವಾತ್ಸಲ್ಯ ಇಂದಿಗೂ ನನ್ನ ಮನಸ್ಸಿನಲ್ಲಿ ಹಸಿರಾಗಿದೆ. ಸಹೋದ್ಯೋಗಿಗಳಲ್ಲಿ ಆತ್ಮೀಯತೆ, ಹಿರಿಯ ಪ್ರಾಧ್ಯಾಪಕರುಗಳಲ್ಲಿ ಗೌರವ, ಶಿಷ್ಯರಲ್ಲಿ ಮಮಕಾರ ಹೊಂದಿದ್ದ ಡಾ॥ ಆರ್.ಸಿ. ಅವರು ಎತ್ತರಕ್ಕೇರಿದರು ಎಂಬುದು ಗಮನಾರ್ಹ ಸಂಗತಿ.

ಎರಡನೇ ವರ್ಷದ ಎಂ.ಎ. ತರಗತಿಗಳು ಆರಂಭವಾಗಿದ್ದುವು. ಡಾ॥ ಆರ್.ಸಿ. ಅವರು ಅಮೇರಿಕಾದಿಂದ ಹಿಂತಿರುಗಿ ಬಂದು ವಿಭಾಗದ ಚುಕ್ಕಾಣಿ ಹಿಡಿದಿದ್ದರು. ಈ ವೇಳೆಗಾಗಲೇ ತರಗತಿಗಳನ್ನು ಛೋಟಾಮಹಾಬಲೇಶ್ವರದಲ್ಲಿನ ವಿಶ್ವವಿದ್ಯಾಲಯದ ಆವರದಲ್ಲಿದ್ದ ಶೈಕ್ಷಣಿಕ ಕಟ್ಟಡಕ್ಕೆ ವರ್ಗಾಯಿಸಲಾಗಿತ್ತು. ಕನ್ನಡ ವಿಭಾಗಕ್ಕೆ ಮೂರನೆ ಮಹಡಿಯಲ್ಲಿನ ಕೊಠಡಿಗಳನ್ನು ಕೊಡಲಾಗಿತ್ತು. ತರಗತಿಗಳು ಬಿರುಸಿನಿಂದ ನಡೆಯಲಾರಂಭಿಸಿದುವು. ಒಂದು ದಿವಸ ಆರ್.ಸಿ. ಅವರು ಹುಬ್ಬಳ್ಳಿಗೆ ವೈದ್ಯಕೀಯ ತಪಾಸಣೆ ಹೋಗಿದ್ದರು. ಅಂದೇ ಸಂಜೆ ಹುಬ್ಬಳ್ಳಿಯಿಂದ ನಮ್ಮ ಹಾಸ್ಟಲಿಗೆ ದೂರವಾಣಿ ಕರೆಬಂದಿತು. ನಾನು ದೂರವಾಣಿಗೆ ನನ್ನ ಕಿವಿ ಒಡ್ಡಿದಾಗ ತುರ್ತಾಗಿ ಶಸ್ತ್ರಚಿಕಿತ್ಸೆ ಆಗಬೇಕಿದೆ. ನೀನು ಮನೆಗೆ ಹೋಗಿ ಕೆಲವು ಅಗತ್ಯವಸ್ತುಗಳನ್ನು ತೆಗೆದುಕೊಂಡು, ಶ್ರೀಮತಿ ಸುಮತಿಯನ್ನು (ಅವರ ಧರ್ಮಪತ್ನಿ) ಕರೆದುಕೊಂಡು ವಿಶ್ವವಿದ್ಯಾಲಯದ ವಾಹನದಲ್ಲಿ ಬರಬೇಕೆಂದೂ ಈ ಬಗ್ಗೆ ರಿಜಿಸ್ಟ್ರಾರ್ ಅವರಿಗೆ ತಿಳಿಸಿರುವದಾಗಿ ತಿಳಿಸಿದರು. ಅದರಂತೆ ನಾನು ನನ್ನ ಸಹಪಾಠಿ (ಹಾಸ್ಟಲಿನಲ್ಲಿದ್ದ) ಶ್ರೀ ಬಿರಾದರ್ ಒಡನೆ ಆರ್.ಸಿ. ಅವರ ಮನೆಗೆ ಹೋದೆವು. ಅಲ್ಲಾಗಲೇ ವಿಶ್ವವಿದ್ಯಾಲಯದ ವಾಹನ ಸಿದ್ಧವಾಗಿದ್ದಿತು ವಿಷಯವನ್ನು ಶ್ರೀ ಒಡೆಯರ್ ಶ್ರೀಮತಿ ಹಿರೇಮಠ ಅವರಿಗಾಗಲೇ ತಿಳಿಸಿದ್ದರು. ನಾವು ಅಗತ್ಯವಸ್ತುಗಳೊಂದಿಗೆ ಹುಬ್ಬಳ್ಳಿಗೆ ಧಾವಿಸಿದೆವು. ಆಸ್ಪತ್ರೆಗೆ ಹೋದಾಗ ಡಾ॥ ಆರ್.ಸಿ. ಅವರು ಗೆಲುವಾಗೇ ಇದ್ದರು. ಅವರು ಅಮೆರಿಕೆಗೆ ಹೋಗಿ ಬಂದ ಕೆಲವು ದಿವಸಗಳಲ್ಲಿಯೇ ಶಸ್ತ್ರಚಿಕಿತ್ಸೆಯೇ ಎಂಬ ಆತಂಕ ನಮ್ಮನ್ನು ಆವರಿಸಿದ್ದಿತು. ನಮ್ಮನ್ನು ನೋಡಿ ಒಳಗನ್ನು ಅರಿತವರಂತೆ ಡಾ। ಆರ್.ಸಿ. ಅವರು "It is a minor operation, there is nothing to worry. I will be back with in a week. Don't worry concentrate on your studies" ಎಂದು ಧೈರ್ಯ ಹೇಳಿ ಅದೇ ವಾಹನದಲ್ಲಿ ನಮ್ಮನ್ನು ಧಾರವಾಡಕ್ಕೆ ಹಿಂತಿರುಗಲು ಸೂಚಿಸಿದರು. ನಲಿವು ಬಂದಾಗ ಹಿಗ್ಗದ, ನೋವು ಬಂದಾಗ ಕುಗ್ಗದ ಸ್ಥಿತ ಪ್ರಜ್ಞ ನಿಲುವು ಆರ್.ಸಿ. ಅವರದ್ದಾಗಿದ್ದಿತು. ಇದನ್ನು ಕಂಡ ನನಗೆ "ಸ್ತುತಿನಿಂದೆಗಳು ಬಂದೆಡೆ ಮನದಲ್ಲಿ ಕೋಪವ ತಾಳದೆ ಸಮಧಾನಿಯಾಗಿರಬೇಕು" ಎಂಬ ಅಕ್ಕನ ಅಮೃತವಾಣಿ ಸಾಕಾರ ಡಾ॥ ಆರ್.ಸಿ. ಅವರು ಎನ್ನಿಸಿತು.

ಸಕ್ಷೇಮವಾಗಿ ಶಸ್ತ್ರಚಿಕಿತ್ಸೆ ಮುಗಿಸಿ ಬಂದ ಆರ್.ಸಿ. ಅವರು ತಮ್ಮ ಗೈರು ಹಾಜರಿಯಲ್ಲಿ ಬಾಕಿ ಉಳಿದಿದ್ದ ಪಾಠಗಳನ್ನು ಅತ್ಯಂತ ಮುತವರ್ಜಿ, ಶ್ರಮದಿಂದ ನಡೆಸಿದರು. ಮಧ್ಯಾಹ್ನ ಹನ್ನೆರಡು ಗಂಟೆಗೆ ಆರಂಭಗೊಂಡ ತರಗತಿಗಳು ಮುಗಿಯುತ್ತಿದ್ದುದು ಸಂಜೆ ನಾಲ್ಕು ಗಂಟೆಗೆ. ತನಗೆ ತಿಳಿದಿರುವ ಜ್ಞಾನವನ್ನೆಲ್ಲಾ ಶಿಷ್ಯರಿಗೆ ಧಾರೆ ಎರೆದು ಅವರನ್ನೂ ತಮ್ಮೆತ್ತರಕ್ಕೇರಿಸಿಕೊಳ್ಳುವ

ತವಕ ಆರ್.ಸಿ. ಅವರಲ್ಲಿದ್ದಿತು. ಪಾಠ ಹಿಂದೆ ಬಿದ್ದಿತೆಂದು ಎಂದೂ ಆತುರಾತುರವಾಗಿ ಪಾಠ ಮಾಡಲಿಲ್ಲ. ಅಥವಾ ಅನಗತ್ಯವೆಂದು ಯಾವ ಪಾಠವನ್ನೂ ಕೈಬಿಡಲಿಲ್ಲ. ತಮ್ಮ ಶ್ರಮವನ್ನು ಲೆಕ್ಕಿಸದೆ ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಿದ್ದ ಅಂತಹ ನಿಷ್ಠಾವಂತ ಪ್ರಾಧ್ಯಾಪಕರು ಅಪರೂಪ. "ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದರೆ ಆಗಲಿ ಮಹಾಪ್ರಸಾದವೆಂದನಯ್ಯಾ" ಎಂಬ ಅಲ್ಲಮ ವಾಣಿಯಂತೆ ಶಿಷ್ಯರನ್ನು ತಮ್ಮೆತ್ತರಕ್ಕೆ ಬೆಳೆಸಿ ಆ ಬೆಳವಣಿಗೆಯನ್ನು ಕಂಡು ಅಭಿಮಾನಭಾರದಿಂದ ತಲೆತೂಗಿ ಬಾಗುತ್ತಿದ್ದ ಡಾ॥ ಆರ್.ಸಿ. ಅವರ ವ್ಯಕ್ತಿತ್ವ ಅನುಪಮವಾದದ್ದು.

ಒಂದು ದಿವಸ ತರಗತಿ ಆರಂಭವಾಗುತ್ತಿದ್ದಂತೆ ಆರ್.ಸಿ. ಅವರು ಕ್ಲಾಸಿಗೆ ಬಂದು ನಮ್ಮನ್ನು ಉದ್ದೇಶಿಸಿ "ಎಲ್ಲರೂ ಪರೀಕ್ಷೆಗೆ ಹಣ ತುಂಬಿದಿರಾ?" ಎಂದು ಪ್ರಶ್ನಿಸಿದರು. ಎಲ್ಲ ವಿದ್ಯಾರ್ಥಿಗಳು ಹಣಕಟ್ಟಿದ್ದೇವೆಂದು ತಿಳಿಸಿದರು. ನಾನು ಮೌನವಾಗಿದ್ದೆ. ನನ್ನ ಸಹಪಾಠಿ ಶ್ರೀ ಎಚ್.ಎ. ಕುಲಕರ್ಣಿ 'ಸರ್ ರಾಚಪ್ಪ ಇನ್ನೂ ಹಣ ತುಂಬಿಲ್ಲ' ಎಂದನು. "ಹೌದೇನು?" ಎಂದು ನನ್ನ ಕಡೆ ತಿರುಗಿದರು. ಆರ್.ಸಿ. ನಾನು ಅಪರಾಧಿಯಂತೆ ತಲೆ ತಗ್ಗಿಸಿ "ಊರಿನಿಂದ ಹಣ ಬಂದಿಲ್ಲ. ಇವತ್ತು ಅಥವಾ ನಾಳೆ ಬರಬಹುದು. ಬಂದೊಡನೆ ತುಂಬುತ್ತೇನೆ" ಎಂದೆನು. 'ಹೌದಾ' ಎಂದು ಆರ್.ಸಿ. ಅವರು ತಮ್ಮ ಪರ್ಸನ್ನು ಹೊರತೆಗೆದು ೭೫-೦೦ ರೂಗಳನ್ನು ಎತ್ತಿ ವಿಭಾಗದ ಜವಾನ 'ಸಿಂಗ'ನನ್ನು ಕರೆಯಲು ಹೇಳಿದರು. 'ಸಿಂಗ'ನನ್ನು ಕರೆತಂದೆನು. ನನ್ನಿಂದ ಅರ್ಜಿ ತೆಗೆದುಕೊಂಡು ಹಣವನ್ನು 'ಸಿಂಗ'ನಿಗೆ ಇತ್ತು "ಈ ಅರ್ಜಿ ಮತ್ತು ಹಣವನ್ನು ಲೆಕ್ಕ ವಿಭಾಗದಲ್ಲಿ ಕೊಟ್ಟು ರಸೀದಿ ತೆಗೆದುಕೊಂಡು ಬಾ ನಾನು ಕಳುಹಿಸಿರುವುದಾಗಿ ಲೆಕ್ಕಾಧಿಕಾರಿಗೆ ತಿಳಿಸು" ಎಂದು ಕಳುಹಿಸಿದರು. ಈ ಘಟನೆಯಿಂದ ನಾನೂ ಮೂಕವಿಸ್ಮಿತನಾದೆ. ಪಿತೃವಾತ್ಸಲ್ಯದ ಇಂತಹ ಗುರುಗಳನ್ನು ಪಡೆದುದು ನನ್ನ ಪೂರ್ವ ಜನ್ಮದ ಸುಕೃತ ಎಂದು ಭಾವಿಸಿದೆ. ಆರ್.ಸಿ. ಅವರಿಗೆ ನನ್ನ ಬಗ್ಗೆ ಇದ್ದ ಪ್ರೀತಿ ವಾತ್ಸಲ್ಯಗಳು ತುಂಬಿ ಹರಿವುದನ್ನು ಕಂಡು ನಾನು ಭಾವನಾತ್ಮಕವಾಗಿ ಆನಂದ ಭಾಷ್ಪ ಹೊರಚೆಲ್ಲಿದೆ. ಆಗ ಗುರುವರ್ಯರು "ಹುಚ್ಚ ಇದಕ್ಕೆಲ್ಲಾ ದುಃಖಿಸುವುದೇ? ನಿನಗೆ ಹಣ ಬಂದೊಡನೆಯೇ ನನ್ನ ಸಾಲ ತೀರಿಸುವೆಯಂತೆ. ಅಳಬಾರದು" ಎಂದರು. ಆಗ ನಾನು ವಿನೀತನಾಗಿ "ಇದು ದುಃಖದ ಕಣ್ಣೀರಲ್ಲ ಸರ್. ನಿಮ್ಮ ವಾತ್ಸಲ್ಯಕ್ಕೆ ತುಂಬಿ ಬಂದ ಹೃದಯದ ಆನಂದ ಭಾಷ್ಪ" ಎಂದೆ. ಅಲ್ಲಿಗೆ ಆ ಪ್ರಕರಣ ಮುಗಿದು ಗುರುಶಿಷ್ಯರಿಬ್ಬರೂ ಪಾಠದ ಮ್ಯಾರಥಾನ್ ಓಟಕ್ಕೆ ಸಿದ್ಧರಾದೆವು.

ನಮ್ಮ ಪರೀಕ್ಷೆಗಳು ಆರಂಭಗೊಂಡುವು. ಡಾ॥ ಆರ್.ಸಿ. ಅವರು ಯಾವುದೋ ಸಭೆಯ ಕಾರಣ ಬೇರೆ ವಿಶ್ವವಿದ್ಯಾಲಯಕ್ಕೆ ಹೋಗಿದ್ದರು. ನಾವು ಅವರ ಆಶೀರ್ವಾದದ ನೆನಪಿನಿಂದ ಉತ್ಸಾಹಿತರಾಗಿ ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಿದ್ದೆವು. ನಾಲ್ಕು ಪತ್ರಿಕೆಗಳು ಮುಗಿದಿದ್ದುವು. ಅಂದು ಸಂಜೆ ಸಭೆ ಮುಗಿಸಿ ಹಿಂತಿರುಗಿದ್ದ ಆರ್.ಸಿ. ಅವರನ್ನು ಅವರ ಕೊಠಡಿಯಲ್ಲಿ ಭೇಟಿಯಾದೆವು. 'ಹೇಗೆ ಮಾಡಿದ್ದೀರಿ; ಪತ್ರಿಕೆಗಳು ಸುಲಭ ಎನಿಸಿದುವೆ' ಎಂದು ಕೇಳಲು ನಾನು "ಎಲ್ಲವೂ ಸುಲಭವಾಗಿದ್ದುವು. ನಿಮ್ಮ ಆಶೀರ್ವಾದದಿಂದ ಚೆನ್ನಾಗಿ ಮಾಡಿದ್ದೇವೆ. ಪ್ರತಿ ಪತ್ರಿಕೆಯಲ್ಲೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿದ್ದೇವೆ. ಶೇಕಡ ೭೦% ಅಂಕಗಳು ಬರಬಹುದು

ಎಂದೆನು." ಏಕೆ ಹಾಗೆ ಮಾಡಿದಿರಿ? ನಾಲ್ಕು ಪ್ರಶ್ನೆಗಳಿಗೇ ಏಕೆ ಉತ್ತರಿಸಿದಿರಿ. ಎಲ್ಲ ಪ್ರಶ್ನೆಗಳನ್ನೂ ಉತ್ತರಿಸಬೇಕಿತ್ತು. ಎಂದರು. ನಾವು ಕುಸಿದು ಹೋದೆವು. ಆದರೂ ಧೈರ್ಯ ತಂದುಕೊಂಡು "ನಾವು ಮಾಡಿದುದು ಸರಿ ಅಲ್ಲವೆ? Quality of Answers" ಮೇಲೆ ಉಳಿದ ಪ್ರಶ್ನೆಗಳಿಗೆ ಲೆಕ್ಕ ಮಾಡುವುದರಿಂದ ನಾವು ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿದೆವು" ಎಂದೆನು. "ಇಲ್ಲಿ ನೀವು ತಪ್ಪು ಮಾಡಿದಿರಿ Quality of Answers" ಎಂದು ಸಿಂಡಿಕೇಟ್ ತೀರ್ಮಾನವಾಗಿದೆ. ನೀವು ಎಲ್ಲಾ ಆರು ಪ್ರಶ್ನೆಗಳಿಗೆ ಉತ್ತರಿಸಬೇಕಿತ್ತು." ಎಂದು ಆರ್.ಸಿ. ಅವರು ಹೇಳಿದಾಗ ನಾವು ನಿರಾಶರಾಗಿ ಒಬ್ಬರ ಮುಖ ಒಬ್ಬರು ನೋಡಿಕೊಂಡೆವು. ಉಳಿದ ಪತ್ರಿಕೆಗಳನ್ನು ತೆಗೆದುಕೊಳ್ಳದೆ ಪರೀಕ್ಷೆಯಿಂದ ವಿಮುಖರಾಗುವುದಾಗಿ (Drop out) ಹೇಳಿದೆವು. ಆಗ ಆರ್.ಸಿ. ಅವರು 'ಉಳಿದ ಎರಡು ಪತ್ರಿಕೆಗಳನ್ನು ತೆಗೆದುಕೊಳ್ಳಿ. Drop out ವಿಚಾರ ಮಾಡದೆ ಉಳಿದ ಎರಡು ಪತ್ರಿಕೆಗಳನ್ನು ಚೆನ್ನಾಗಿ ಉತ್ತರಿಸಿ. ನಿಮಗೆ ಪ್ರಥಮ ದರ್ಜೆ ಕೊಡಲಾಗದಿದ್ದರೆ ದ್ವಿತೀಯ ದರ್ಜೆ ಬರುವ ಹಾಗೆ ನಾನು ನೋಡಿಕೊಳ್ಳುತ್ತೇನೆ." ಎಂದು ಧೈರ್ಯ ಹೇಳಿ ಕಳುಹಿಸಿದರು. ನಾವು ಯಥಾ ಪ್ರಕಾರ ಮುಂದಿನ ಪರೀಕ್ಷೆಗಳನ್ನು ಮುಗಿಸಿ ನಮ್ಮ ಊರಿಗೆ ತೆರಳಿದೆವು. ಫಲಿತಾಂಶ ಹೊರಬಿದ್ದಿತು. ನಾವು ನಾಲ್ಕು ಜನ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದೆವು. ನಾನು ಧಾರವಾಡಕ್ಕೆ ಹೋಗಿ ಪ್ರಾಧ್ಯಾಪಕ ಆರ್.ಸಿ. ಅವರನ್ನು ಅವರ ಮನೆಯಲ್ಲಿ ಕಂಡು ಕಾಲು ಮುಟ್ಟಿ ನಮಸ್ಕರಿಸಿ ನನ್ನ ಕೃತಜ್ಞತೆಯನ್ನು ತಿಳಿಸಿದೆ.

ಆರ್.ಸಿ. ಅವರು ನನ್ನನು ಎಬ್ಬಿಸಿ ತಲೆನೇವರಿಸಿ "ನೋಡಿ ನೀವು ನಾಲ್ಕು ಜನ ನೀವಾಗೀಯೇ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾದಿರಿ. ನಾವು ಕೊಡುವುದೇನೂ ಉಳಿಯಲಿಲ್ಲ. ನನಗೆ ನಿನ್ನ ಬಗ್ಗೆ ಅಭಿಮಾನ ಎನಿಸಿದೆ. ನಿನ್ನ ಭಾಷಶಾಸ್ತ್ರದ ಪತ್ರಿಕೆ ಪ್ರೊ. ತೀ.ನಂ.ಶ್ರೀ. ಬಹಳ ಮೆಚ್ಚಿದರು. ಅಭಿಮಾನಪಟ್ಟರು. ಆದರೆ ಧರಣಿಗೆ ದ್ವಿತೀಯ ದರ್ಜೆ ನೀಡಲಾಗಲಿಲ್ಲ. I am sorry for him" ಎಂದರು. ಈ ಮಾತು ಕೇಳಿ ನನಗೆ ಆನಂದ ಬೇಸರಗಳು ಉಂಟಾದವು. ಆನಂದ ನಾವು ನಾಲ್ಕು ಜನ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದುದಕ್ಕೆ. ಬೇಸರ ನಮ್ಮ ಸಹಪಾಠಿ ದ್ವಿತೀಯ ದರ್ಜೆಗಳಿಸದಿದ್ದುದಕ್ಕಾಗಿ. ಹೀಗೆ ಆರ್.ಸಿ. ಅವರು ಸದಾಕಾಲ ತಮ್ಮ ಶಿಷ್ಯರ ಪುರೋಭಿವೃದ್ಧಿಯನ್ನೇ ಚಿಂತಿಸುತ್ತಿದ್ದ ವಿಶಾಲ ಹೃದಯಿಯಾಗಿದ್ದರು.

ಡಾ|| ಆರ್.ಸಿ. ಹಿರೇಮಠ ಅವರು ಶ್ರೇಷ್ಠ ಮಾನವ. ಮಾನವಾನುಕಂಪೆ ಹೊಂದಿದ್ದ ಪ್ರಾಧ್ಯಾಪಕ. ಶ್ರೇಷ್ಠ ವಿದ್ವಾಂಸ. ಸೃಜನ–ಸೃಜನೇತರ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಸಿ ಕೊಂಡಿದ್ದ ಪ್ರಾಧ್ಯಾಪಕ ನಿಜವಾದ ಅರ್ಥದಲ್ಲಿ ಶ್ರೇಷ್ಠ ಸಂಶೋಧಕ. ಗ್ರಂಥ ಸಂಪಾದನೆಗೆ ಅವರ ಕೊಡುಗೆ ವಿಶಿಷ್ಟವಾದುದು. ಕ್ರಿಯಾಶೀಲ ವಸ್ತುನಿಷ್ಠ ವಿಮರ್ಶಕರೂ ಆಗಿದ್ದರು. ಇಂತಹ ಪ್ರಾಧ್ಯಾಪಕರ ಶಿಷ್ಯ ಎಂದು ಹೇಳಿಕೊಳ್ಳುವುದು ಹೆಮ್ಮೆಯ ವಿಷಯ. ಈ ವಿದ್ವಾಂಸ ಪ್ರಾಧ್ಯಾಪಕರ ಅಗಲಿಕೆಯಿಂದ ಕನ್ನಡ ವಿದ್ವತ್ ಪರಂಪರೆ ಬಡವಾಯಿತು.

❖

# ಸಜ್ಜನ ಸ್ನೇಹಿ ಗುರುದ್ವಯರು

## (ಡಾ।। ಎಸ್.ಎಂ. ವೃಷಭೇಂದ್ರಸ್ವಾಮಿ, ಡಾ।। ಎಂ.ಎಸ್. ಸುಂಕಾಪುರ)

*● ಡಾ।। ಎಸ್.ವಿದ್ಯಾಶಂಕರ*

ನಾನು ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜಾ ಕಾಲೇಜಿನಲ್ಲಿ ೧೯೬೪ರಲ್ಲಿ ಬಿ.ಎ. ಅಂತಿಮ ಪರೀಕ್ಷೆ ಬರೆದು ಬಂದಿದ್ದೆ. ಪರೀಕ್ಷೆಯಲ್ಲಿ ಉತ್ತೀರ್ಣನಾಗುವ ಭರವಸೆಯಿದ್ದಿತು. ನನ್ನ ತಂದೆ ಕನ್ನಡ ಪಂಡಿತರಾಗಿದ್ದುದರಿಂದ ನಾನೂ ಅಧ್ಯಾಪಕನಾಗುವ ಕನಸು ಕಾಣುತ್ತಿದ್ದೆ. ಬಿ.ಎಡ್. ಮಾಡಿದರೆ ಕೂಡಲೇ ಪ್ರೌಢಶಾಲೆಯಲ್ಲಿ ಕೆಲಸ ಸಿಗುತ್ತದೆಂದು ಮಿತ್ರರು ಮಾತನಾಡಿಕೊಳ್ಳುತ್ತಿದ್ದುದು ನನ್ನ ಗಮನಕ್ಕೂ ಬಂದಿದ್ದಿತು. ನನಗೆ ಕೂಡಲೇ ವಿದ್ಯಾಭ್ಯಾಸ ಮುಗಿಸಿ ಅಧ್ಯಾಪಕನಾಗುವ ಕಡೆಗೆ ಒಲವಿರಲಿಲ್ಲ. ತಂದೆಯವರು ಎಂ.ಎ. ಮಾಡು ಎಂದು ಪ್ರೋತ್ಸಾಹದ ಮಾತನಾಡಿದ್ದರು. ನನ್ನ ಅಣ್ಣ ಬಿ.ಕಾಂ. ಮುಗಿಸಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ ಮೈಸೂರು ಶಾಖೆಯಲ್ಲಿ ಕೆಲಸಕ್ಕೆ ಸೇರಿದ್ದರು. ಹೀಗಾಗಿ ನನಗಿಂತ ಒಂದು ವರ್ಷ ಹಿರಿಯರಾದ ಅವರೂ ಎಂ.ಎ. ಮಾಡಲು ಒತ್ತಾಯಿಸಿದ್ದರು. ನನಗೆ ಆರ್ಥಿಕ ತೊಂದರೆಯೇನೂ ಇರಲಿಲ್ಲವಾದುದರಿಂದ ಎಂ.ಎ. ಓದುವ ಉಮೇದು ಮನಸ್ಸನ್ನು ತುಂಬಿಕೊಂಡಿದ್ದಿತು. ಯಾವ ವಿಷಯದಲ್ಲಿ ಎಂ.ಎ. ಮಾಡಬೇಕೆನ್ನುವುದು ಸಮಸ್ಯೆಯಾಗಿದ್ದಿತು. ನನ್ನ ತಂದೆ ಪೂನಾದಲ್ಲಿ ನಡೆದ ಭಾಷಾಶಾಸ್ತ್ರ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದ್ದರು. ಅಲ್ಲಿ ಕನ್ನಡಿಗರಾದ ಬಿಳಿಗಿರಿ, ಡಿ.ಎನ್. ಶಂಕರಭಟ್ ಕರ್ನಾಟಕದಿಂದ ಬಂದವರಿಗೆ ಭಾಷಾಶಾಸ್ತ್ರದಲ್ಲಿ ಎಂ.ಎ. ಮಾಡಲು ಎಲ್ಲ ಸೌಲಭ್ಯ ಒದಗಿಸಿದ್ದರು. ಅದಕ್ಕಿಂತ ಮಿಗಿಲಾಗಿ ಬಿಳಿಗಿರಿ ನಮ್ಮ ಭಾಗದವರು; ಅವರು ಬಂಧುಗಳು ಕೊಳ್ಳೇಗಾಲದಲ್ಲಿದ್ದರು; ಅವರೆಲ್ಲಾ ನನ್ನ ತಂದೆಯವರಿಗೆ ಪರಿಚಿತರು. ಈ ಹಿನ್ನೆಲೆಯಲ್ಲಿ ನನ್ನ ತಂದೆಯವರು ಭಾಷಾಶಾಸ್ತ್ರದಲ್ಲಿ ಎಂ.ಎ. ಮಾಡು ಎಂದು ಸಲಹೆ ನೀಡಿದ್ದರು. ಪ್ರೊ. ಅಗಸ್ತ್ಯಲಿಂಗಂ ಅವರಿಗೆ ಪತ್ರ ಬರೆದು ಎಂ.ಎ. ಓದಲು ಸ್ಕಾಲರ್‌ಷಿಪ್ ಕೊಡಲು ಸಾಧ್ಯವೇ? ಎಂದು ವಿಚಾರಿಸಿದ್ದೆ ಅವರು ಖಂಡಿತಾ ಕೊಡುವುದಾಗಿ ಪತ್ರ ಬರೆದಿದ್ದರು. ಆ ವೇಳೆಯಲ್ಲಿ ನನ್ನ ಸೋದರಮಾವ (ತಾಯಿಯ ಅಣ್ಣ) ಬೆಳಗಾಂನಲ್ಲಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿದ್ದರು. ಅವರು ಧಾರವಾಡಕ್ಕೆ ಬಾ ಅಲ್ಲಿ ಎಲ್ಲ ಅನುಕೂಲ ಮಾಡಿಕೊಡುತ್ತೇನೆ ಎಂಬ ಆಸೆ ಹುಟ್ಟಿಸಿದ್ದರು. ಮನೆಯಲ್ಲಿ ಈ ವಿಷಯ ಚರ್ಚೆಗೆ ಬಂದು ಧಾರವಾಡಕ್ಕೆ ಹೆಚ್ಚಿನ ಶಿಕ್ಷಣ ಪಡೆಯಲು ನನ್ನನ್ನು ಕಳುಹಿಸಲು ತೀರ್ಮಾನಿಸಿದರು. ನಾನು ಜೂನ್ ತಿಂಗಳ ಕೊನೆಯಲ್ಲಿ ಧಾರವಾಡಕ್ಕೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎ. ಶಿಕ್ಷಣ ಪಡೆಯಲು ಬಂದೆ. ಧಾರವಾಡದಲ್ಲಿ ಜೂನ್ ಜುಲೈನಲ್ಲಿ ಬಿರುಸಾದ ಮಳೆ. ಅಂತಹ ಮಳೆಯನ್ನು ಮೈಸೂರು ಸೀಮೆಯವನಾದ ನಾನು ನೋಡಿಯೇ

ಇರಲಿಲ್ಲ. ಮಳೆಗಾಲದಲ್ಲಿ ನಾನು ಧಾರವಾಡಕ್ಕೆ ಬಂದಾಗ ಅಲ್ಲಿನ ಜನರ ವೇಷ ಭಾಷೆ, ಊಟ ಎಲ್ಲವೂ ವಿಚಿತ್ರವಾಗಿ ನನಗೆ ಕಂಡಿತು. ನಾನು ಧಾರವಾಡಕ್ಕೆ ಬರುವ ಮುನ್ನ ನನ್ನ ಸೋದರಮಾವನವರು ತಮ್ಮ ಕೋರ್ಟ್‌ನ ಇನ್ನೋರ್ವ ಜಡ್ಜ್ ಶ್ರೀ ಮಹಾಂತಯ್ಯನವರನ್ನು ಧಾರವಾಡಕ್ಕೆ ಕಳುಹಿಸಿ ನಾನು ಕನ್ನಡ ಎಂ.ಎ.ಗೆ ಸೇರಲು ಪೂರ್ವಭಾವಿ ವ್ಯವಸ್ಥೆ ಮಾಡಿದ್ದರು. ಡಾ॥ ಆರ್.ಸಿ. ಹಿರೇಮಠರು ಆಗ ಕನ್ನಡ ವಿಭಾಗದ ಮುಖ್ಯಸ್ಥರು. ನಾನು ಅವರನ್ನು ಕಂಡಕೂಡಲೇ ಅಪ್ಲಿಕೇಷನ್ ಫಾರಂ ತರಿಸಿ ಎಂ.ಎ. ತರಗತಿಗೆ ಸೇರಲು ಅವಕಾಶ ಕಲ್ಪಿಸಿದರು. ಮುರುಘಮಠಕ್ಕೆ ಹೋಗಿ ಅಪ್ಪಗಳವರನ್ನು ಕಂಡು ನಾನು ಕಳುಹಿಸಿರುವುದಾಗಿ ಹೇಳಿ ಎಂದರು. ಪ್ರವೇಶಶಾಸ್ತ್ರ ಮುಗಿದ ಮೇಲೆ ನಾನು ಮುರುಘಮಠಕ್ಕೆ ಹೋಗಿ ಅಪ್ಪಗಳವರನ್ನು ಕಂಡೆ. ಆ ವೇಳೆಗೆ ಶ್ರೀ ಮಹಾಂತಯ್ಯನವರು ನನಗೆ ಹಾಸ್ಟೆಲ್‌ನಲ್ಲಿ ಪ್ರವೇಶ ಕೊಡಬೇಕೆಂದು ಹೇಳಿದ್ದರು. ಹೀಗಾಗಿ ನನಗೆ ಅಲ್ಲಿ ಪ್ರವೇಶ ಸುಲಭವಾಗಿ ದೊರೆಯಿತು. ಜುಟ್ಟು ತೆಗೆಯುವುದು, ಪ್ರಾತಃಕಾಲ ೫ ಗಂಟೆಗೆ ಎದ್ದು ಪ್ರಾರ್ಥನೆಗೆ ಸೇರಬೇಕೆನ್ನುವುದು, ತಣ್ಣೀರಿನ ಸ್ನಾನ, ಕಡ್ಡಾಯ ಪೂಜೆ, ರೊಟ್ಟಿ, ಊಟ, ಸಂಜೆ ಪ್ರಾರ್ಥನೆಗೆ ಕಡ್ಡಾಯ ಹಾಜರಿ – ಈ ರೀತಿಯ ಹಲವು ನಿಬಂಧನೆಗಳು ನನಗೆ ಒಪ್ಪಿಗೆಯಾಗಲಿಲ್ಲ ಹೀಗಾಗಿ ನಾನು ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿದ್ದ ನಿಜಲಿಂಗಪ್ಪ ಹಾಸ್ಟಲ್‌ಗೆ ಪೇಯಿಂಗ್ ವಿದ್ಯಾರ್ಥಿಯಾಗಿ ಸೇರಿದೆ.

ನಾನು ಕನ್ನಡ ಎಂ.ಎ. ತರಗತಿಗೆ ಹಾಜರಾದಾಗ ನನಗೆ ಆಶ್ಚರ್ಯ ಕಾದಿತ್ತು. ಸುಮಾರು ಆರುಮಂದಿ ತರುಣರನ್ನು ಬಿಟ್ಟರೆ ಉಳಿದು ಸು. ೧೬ಮಂದಿ ವಯಸ್ಸಾದವರು – ಡೆಪ್ಯೂಟೇಷನ್ ಮೇಲೆ ಓದಲು ಬಂದವರು ಸೀನಿಯರ್ ಎಂ.ಎ. ವಿದ್ಯಾರ್ಥಿಗಳ ಜೊತೆ ಜೂನಿಯರ್ ಎಂ.ಎ. ವಿದ್ಯಾರ್ಥಿಗಳು ಕೂರಬೇಕಾಗಿತ್ತು. ಇದರ ಜೊತೆಗೆ ಇಂಗ್ಲಿಷ್ ಎಂ.ಎ. ವಿದ್ಯಾರ್ಥಿಗಳಲ್ಲಿ ಕೆಲವರು ಎರಡು ಪೇಪರ್ ಕನ್ನಡದ ವಿಷಯಗಳನ್ನು ತೆಗೆದುಕೊಳ್ಳಲು ಅವಕಾಶವಿದ್ದುದರಿಂದ ಅವರೂ ಬರುತ್ತಿದ್ದರು. ತರಗತಿಯು ಪ್ರಾರಂಭವಾದ ಮೊದಲನೆ ದಿನ ಎಸ್.ಎಂ. ವೃಷಭೇಂದ್ರಸ್ವಾಮಿ ಪಾಠ ಮಾಡಲು ಬಂದರು. ತೀರಾ ಎತ್ತರವಲ್ಲದ ಆದರೆ ತುಂಬುಶರೀರದ ಅವರು ಮೊದಲ ದಿನವೇ ನನ್ನನ್ನು ಆಕರ್ಷಿಸಿದರು. ಅವರು ಉಪನ್ಯಾಸಕರಾಗಿ ಬಳ್ಳಾರಿ ವೀರಶೈವ ಕಾಲೇಜಿನಿಂದ ವಿಶ್ವವಿದ್ಯಾಲಯಕ್ಕೆ ಬಂದಿದ್ದರು. ಒಳ್ಳೆಯ ಅಧ್ಯಾಪರಿಗಿರಬೇಕಾದ ಲಕ್ಷಣಗಳೆಲ್ಲವೂ ಅವರಲ್ಲಿ ಮೇಳವಿಸಿದ್ದವು. ಮಾತುಗಾರಿಕೆ ಅವರ ವ್ಯಕ್ತಿತ್ವದ ಪ್ರಧಾನಗುಣ. ಅವರು ತರಗತಿಯಲ್ಲಿ ಪಾಠ ಮಾಡುವಾಗ ಗಾಂಭೀರ್ಯವನ್ನು ಕಾಪಾಡಿಕೊಂಡು ಬಂದಿದ್ದರು. ನಮಗೆ ಅವರು ತೆಗೆದುಕೊಳ್ಳುತ್ತಿದ್ದುದು ಕನ್ನಡ ಸಾಹಿತ್ಯ ಚರಿತ್ರೆ, ಮೊದಲೇ ಅವರು ಶ್ರಮವಹಿಸಿ ನೋಟ್ಸ್ ಸಿದ್ಧಮಾಡಿಕೊಂಡಿದ್ದರು. ತಮ್ಮ ನೋಟ್ಸ್ ಮುಂದಿಟ್ಟುಕೊಂಡು ಆಗಾಗ ಅದರ ಮೇಲೆ ಕಣ್ಣಾಡಿಸುತ್ತ ನಿರರ್ಗಳವಾಗಿ ಮಾತನಾಡುತ್ತಿದ್ದರು. ಕನ್ನಡ ಸಾಹಿತ್ಯದ ಪ್ರಾಚೀನತೆ ಕುರಿತು ಹೇಳುವಾಗ ಆವರೆಗೆ ನಡೆದಿರುವ ಎಲ್ಲ ಸಂಶೋಧನೆಗಳ ವಿವರಗಳನ್ನು ನಮ್ಮ ಮುಂದಿಡುತ್ತಿದ್ದರು. ಕವಿ/ಕೃತಿ ಮೌಲ್ಯಮಾಪನ ಮಾಡುವಾಗ ಅವರು ನಿಷ್ಪಕ್ಷಪಾತವಾಗಿ ತಮ್ಮ ಅಭಿಪ್ರಾಯ ಸೂಚಿಸುತ್ತಿದ್ದರು. ಸಾಹಿತ್ಯ ಚರಿತ್ರೆಯನ್ನು ಕುರಿತು ಹೇಳುವಾಗ ಪೌರ್ವಾತ್ಯ ಹಾಗೂ ಪಾಶ್ಚಾತ್ಯ ಕಾವ್ಯಮೀಮಂಸೆಯ ಚರ್ಚೆಯೂ ಅಪ್ರಾಸಂಗಿಕವಾಗಿ ಬರುತ್ತಿತ್ತು. ವಚನಕಾರರನ್ನು, ಹರಿದಾಸರನ್ನು ಕುರಿತು; ವಿಜಯನಗರ ಹಾಗೂ ಮೈಸೂರರಸರ ಕಾಲದ

ಕನ್ನಡ ಸಾಹಿತ್ಯವನ್ನು ಕುರಿತು ಅವರು ಕೊಟ್ಟ ಮಾಹಿತಿಗಳು ಈಗಲೂ ನನ್ನ ನೆನಪಿನಲ್ಲಿವೆ. ನನ್ನ ಚಿಂತನ ಕ್ರಮವನ್ನು ರೂಪಿಸಿದ ಪ್ರಭಾವಶಾಲಿ ವ್ಯಕ್ತಿಗಳಲ್ಲಿ ಎಸ್.ಎಂ. ವೃಷಭೇಂದ್ರಸ್ವಾಮಿಯವರೂ ಒಬ್ಬರು.

ನನ್ನ ಯೌವನದ ದಿನಗಳಲ್ಲಿ ನಾನು ಕವಿಯಾಗಿದ್ದೆ. ನಾನು ನೋಡಿದ್ದು, ಕೇಳಿದ್ದು, ಓದಿದ್ದು ಕವಿತೆಯ ರೂಪಧಾರಣ ಮಾಡುತ್ತಿತ್ತು. ನಾನು ಆಗ ಬರೆದದ್ದನ್ನು ಎಸ್.ಎಂ. ವೃಷಭೇಂದ್ರಸ್ವಾಮಿಯವರಿಗೆ ತೋರಿಸುತ್ತಿದ್ದೆ. ಅವರು ನನ್ನೆದುರಿಗೇ ಓದಿ ನನ್ನ ಕವಿತೆಯ ಗುಣ–ದೋಷಗಳ ವಿಮರ್ಶೆಮಾಡುತ್ತಿದ್ದರು. ಕವಿತೆ ಬರೆಯುವುದು ಹೇಗೆ ಎನ್ನುವುದನ್ನು, ಕವಿತಾವಾಚನ ಹೇಗಿರಬೇಕೆಂಬುದನ್ನು, ಒಂದು ಕವಿತೆಯನ್ನು ಗ್ರಹಿಸುವ ವಿಧಾನವನ್ನು ನನಗೆ ತರಗತಿಯ ಬಿಡುವಿನ ವೇಳೆಯಲ್ಲಿ ಹೇಳಿಕೊಡುತ್ತಿದ್ದರು. ಏಕೋ ಏನೋ ಕವಿತೆ ನನ್ನನ್ನು ಬಲವಾಗಿ ಆಕರ್ಷಿಸಲಿಲ್ಲ. ನಾನು ಜೀವನರಂಗದಲ್ಲಿ ಹೋರಾಟಕ್ಕೆ ಇಳಿದ ಮೇಲೆ ನನ್ನಲ್ಲಿನ ಕವಿತೆಯ ಸೆಲೆ ಬತ್ತಿಹೋಯಿತು. ವೃಷಭೇಂದ್ರಸ್ವಾಮಿಯವರು ನನಗೆ ಭಾಷೆಯ ಮಾಂತ್ರಿಕಶಕ್ತಿಯನ್ನು ಅದನ್ನು ಸಮರ್ಥವಾಗಿ ಬಳಸುವ ಕಲೆಯನ್ನೂ ತರಗತಿಯ ಪಾಠಗಳ ಮುಖಾಂತರ ತಿಳಿಸಿಕೊಟ್ಟರು. ನಾನು ಕವಿಯಾಗಲಿಲ್ಲ. ಆದರೆ ನನ್ನ ಬರವಣಿಗೆಯ ಭಾಷೆಯಲ್ಲಿನ ಜೀವಂತಿಕೆಯನ್ನು ಹಲವರು ಮೆಚ್ಚಿರುವರು. ಅದು ಚಿಂತನಾಂಶವನ್ನು ಭಾಷೆಯಲ್ಲಿ ಸಮರ್ಥವಾಗಿ ಹಿಡಿದ ಪ್ರಯತ್ನದಲ್ಲಿ ಕವಿತ್ವದ ಮೂಲಸೆಲೆಯಾದ ಅಭಿವ್ಯಕ್ತಿವಿಧಾನದಲ್ಲಿ ಪ್ರಕಟಗೊಂಡಿದೆ. ನಾನು ನನ್ನ ಗುರುಗಳ 'ಬರೆಯುವ ದಾರಿ'ಯನ್ನು ಹಲವಾರು ಬಾರಿ ಓದಿರುವೆನು. ಅದು ನನ್ನ ಯೌವನದ ದಿನಗಳಲ್ಲಿ ನನ್ನ ಬರವಣಿಗೆಗೆ ಮಾರ್ಗದರ್ಶಿಯಾಯಿತು.

ಕನ್ನಡ ವಿಭಾಗದಲ್ಲಿ ಆಗ ವಚನವಾಙ್ಮಯ ಸಂಶೋಧನೆ ಹಾಗೂ ಪ್ರಕಟಣೆಯ ಕೆಲಸ ತ್ವರಿತ ಗತಿಯಲ್ಲಿ ನಡೆದಿದ್ದಿತು. ಅದರ ಜವಾಬ್ದಾರಿಯ ಹೊಣೆಯನ್ನು ಆರ್.ಸಿ. ಹಿರೇಮಠ ಹಾಗೂ ಎಂ.ಎಸ್. ಸುಂಕಾಪುರ ಅವರು ಹೊತ್ತಿದ್ದರು. ವಿಭಾಗದ ಅಧ್ಯಾಪನ ಕಾರ್ಯಭಾರ ವೃಷಭೇಂದ್ರಸ್ವಾಮಿ ಹಾಗೂ ಬಿ.ಎಸ್. ಕುಲಕರ್ಣಿಯವರ ಮೇಲೇ ಬಿದ್ದಿತ್ತು. ಸಂದರ್ಶಕ ಪ್ರಾಧ್ಯಾಪಕರಾಗಿ ಪ್ರೊ. ವ್ಹಿ.ಜಿ. ಕುಲಕರ್ಣಿ ಬರುತ್ತಿದ್ದರು. ಆರ್.ಸಿ. ಹಿರೇಮಠ ಹಾಗೂ ಎಂ.ಎಸ್. ಸುಂಕಾಪುರ ಅವರೂ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರೂ ನಮಗೆಲ್ಲಾ ಸಲುಗೆಯಿದ್ದುದು. ವೃಷಭೇಂದ್ರಸ್ವಾಮಿಯವರಲ್ಲಿ. ಎಸ್.ಎಂ. ವೃಷಭೇಂದ್ರಸ್ವಾಮಿಯವರು ಪ್ರತಿಭಾವಂತರೆನ್ನುವುದರಲ್ಲಿ ಸಂಶಯವೇ ಇಲ್ಲ ಅವರು ಹೆಚ್ಚಿಗೆ ಬರೆಯಲಿಲ್ಲವೆನ್ನುವುದು ಅವರ ಶಿಷ್ಯರಲ್ಲಿ ಒಬ್ಬನಾದ ನನ್ನ ಅತೃಪ್ತಿ. ನಾನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕನಾದ ಮೇಲೂ ಸು. ೩೫ ವರ್ಷಗಳಿಂದ ನನ್ನ ಅವರ ಸಂಬಂಧ ಮಧುರವಾಗಿದೆ. ನಾನು ಏನೇ ಬರೆದರೂ ಮೆಚ್ಚಿ ಅಭಿಮನದ ಮಾತುಗಳನ್ನಾಡಿರುವರು. ಅದು ನನ್ನ ಭಾಗ್ಯ. ಅವರ 'ಕುವೆಂಪು ನನ್ನ ದಿನಚರಿಯಲ್ಲಿ' ಎನ್ನುವ ಮಹತ್ವದ ಕೃತಿಯನ್ನು ನಾನು ಪ್ರಕಟಿಸಿದೆ. ಅದು ನನ್ನ 'ಗುರುಕಾಣಿಕೆ'. ತಮ್ಮ ಅನೇಕ ಯೋಜನೆಗಳನ್ನು ನನ್ನೊಂದಿಗೆ ಹಂಚಿಕೊಂಡಿರುವರು. ತರಗತಿಗಳಲ್ಲಿ ಕುವೆಂಪು (ತೌಲನಿಕ ಕಾವ್ಯಮೀಮಾಂಸೆ) ಅವರ ಇನ್ನೊಂದು ಮಹತ್ವದ ಕೃತಿ. ಕುವೆಂಪುರವರ ಆತ್ಮೀಯ ಶಿಷ್ಯಬಳಗದಲ್ಲಿ ಪ್ರೊ. ವೃಷಭೇಂದ್ರಸ್ವಾಮಿಯವರೂ ಒಬ್ಬರು.

ಕುವೆಂಪು ಹೆಸರಿನ ಸ್ಮರಣೆ ಮಾಡಿದರೇ ಭಾವುಕರಾಗುವ ಅವರ ಮೈಸೂರು ಹಾಗೂ ಕುವೆಂಪು ವಿಶ್ವವಿದ್ಯಾನಿಲಯಗಳಲ್ಲಿ ಕುವೆಂಪು ಪೀಠದ ಅಧ್ಯಕ್ಷರಾಗಿದ್ದರು.

ವೃಷಭೇಂದ್ರಸ್ವಾಮಿಯವರಿಗೆ ಪತ್ನೀವಿಯೋಗ (ಶ್ರೀಮತಿ ಲಲಿತಾಂಬಾ) ಒಂದು ವರ್ಷದ ಹಿಂದೆ ಆಯಿತು. ಈಗ ಹೆಚ್ಚು ಅಂತರ್ಮುಖಿಗಳಾಗಿ ಓದು ಬರವಣಿಗೆಯಲ್ಲಿ ತಲ್ಲೀನ ರಾಗಿರುವರು. ಅವರಿಂದ ಮಹತ್ವದ ಕೃತಿಗಳ ನಿರೀಕ್ಷೆಯಲ್ಲಿದ್ದೇನೆ.

## ಜಾನಪದತಜ್ಞ ಡಾ॥ ಎಂ.ಎಸ್. ಸುಂಕಾಪುರ

ಡಾ॥ ಎಂ.ಎಸ್. ಸುಂಕಾಪುರ (ಜನನ ೧೦-೧೦-೧೯೨೧, ಮರಣ ૩೦-೦೬-೧೯೭೨) ಮೂಲತಃ ಸುಂಕಾಪುರ ಗ್ರಾಮದವರು. ಇದು ಬಾಗಲಕೋಟೆ ಜಿಲ್ಲೆಯ ಹುನಗುಂದದಿಂದ ರಾಯಚೂರು ಜಿಲ್ಲೆಯ ಮುದಗಲ್ಲಿಗೆ ಹೋಗುವ ಮಾರ್ಗದಲ್ಲಿದೆ. ಅವರ ಹಿರಿಯರು ಯಾವುದೋ ಕಾರಣಕ್ಕಾಗಿ ಅಲ್ಲಿಂದ ಮುಳಗುಂದಕ್ಕೆ ವಲಸೆಬಂದು ನೆಲೆಸಿದರು. ಸುಂಕಾಪುರ ಗ್ರಾಮದಿಂದ ಬಂದವರಾದ ಕಾರಣಕ್ಕಾಗಿ ಇವರ ಮನೆತನದವರನ್ನು ಸುಂಕಾಪುರದವರೆಂದು ಕರೆಯುತ್ತ ಬಂದರು. ಇವರ ಹೆಸರು ಮರಿಬಸಪ್ಪ. ಆ ಕಾರಣಕ್ಕಾಗಿ ಮರಿಬಸಪ್ಪ ಸಣ್ಣಬಸಪ್ಪ ಸುಂಕಾಪುರ ಎಂದು ಕರೆಯಲಾಯಿತು. ಇವರ ತಂದೆ ಸಣ್ಣಬಸಪ್ಪನವರು ಒಕ್ಕಲುತನವನ್ನು ಮಾಡುತ್ತಿದ್ದರು. ಇವರ ಐವರು ಗಂಡುಮಕ್ಕಳಲ್ಲಿ ನಾಲ್ಕನೆಯವರೇ ಎಂ.ಎಸ್. ಸುಂಕಾಪುರ ಅವರು. ಗ್ರಾಮೀಣ ಒಕ್ಕಲುತನದ ಪರಿಸರದಿಂದ ಬಂದ ಕಾರಣಕ್ಕಾಗಿ ಸುಂಕಾಪುರ ಅವರಿಗೆ ಜಾನಪದ ಸಾಹಿತ್ಯದಲ್ಲಿ ವಿಶೇಷ ಒಲವು. ಬೆಳಗಾವಿಯ ಲಿಂಗರಾಜಾ ಕಾಲೇಜಿನಲ್ಲಿ ಬಿ.ಎ. ಪದವಿಯಲ್ಲಿ ಪ್ರಥಮವರ್ಗದಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ ಉತ್ತೀರ್ಣರಾದರು. ಮುಂಬಯಿ ವಿಶ್ವವಿದ್ಯಾಲಯದ ಎಂ.ಎ. ಪದವಿಯನ್ನು ಪಡೆದರು (೧೯೪೮). ತಾವು ಓದಿದ ಬೆಳಗಾವಿಯ ಲಿಂಗರಾಜಾ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಯನ್ನು ಪ್ರಾರಂಭಿಸಿದರು. ಬಾಗಲಕೋಟೆಯ ಬಸವೇಶ್ವರ ಕಾಲೇಜಿನಲ್ಲಿ ಕೆಲವು ಕಾಲ (೧೯೫೧-೧೯೫೮) ಅಧ್ಯಾಪಕ ರಾಗಿದ್ದರು. ಪ್ರೊ. ಕೆ.ಜಿ. ಕುಂದಣಗಾರ ಅವರ ಮಾರ್ಗದರ್ಶನದಲ್ಲಿ 'ಕನ್ನಡ ಸಾಹಿತ್ಯದಲ್ಲಿ ಹಾಸ್ಯ' ಎಂಬ ವಿಷಯ ಕುರಿತು ಸಂಶೋಧನೆ ನಡೆಯಿಸಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದರು (೧೯೫೭). ಮರುವರ್ಷವೇ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ರೀಡರ್ ಆಗಿ ನೇಮಕಗೊಂಡರು. ಈ ಮೊದಲೇ ೧೯೫೧ರಲ್ಲಿ ಡಾ॥ ಆರ್.ಸಿ. ಹಿರೇಮಠ ಅವರು ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದರು. ಡಾ॥ ಆರ್.ಸಿ. ಹಿರೇಮಠ ಹಾಗೂ ಡಾ॥ ಎಂ.ಎಸ್. ಸುಂಕಾಪುರ ಬಾಲ್ಯದ ಆತ್ಮೀಯ ಗೆಳೆಯರು, ಒಂದೇ ಕಾಲೇಜಿನಲ್ಲಿ ಓದಿದವರು. ಈಗ ಈ ಗೆಳೆಯರು ಕನ್ನಡವನ್ನು ಕಟ್ಟುವ, ಬೆಳೆಸುವ ಕೈಂಕರ್ಯದಲ್ಲಿ ಜೊತೆಯಾದರು. ಈ ಗೆಳೆತನ ಎಷ್ಟು ಆಳವಾದದ್ದೆಂದರೆ, ವಚನ ವಾಙ್ಮಯ ಸಂಶೋಧನ ಹಾಗೂ ಪ್ರಕಟಣ ವಿಭಾಗದಿಂದ ಯಾವುದೇ ಪುಸ್ತಕ ಹೊರಬರಲಿ ಇಬ್ಬರ ಹೆಸರಿನಲ್ಲೂ ಪ್ರಕಟವಾಗುತ್ತಿದ್ದಿತು.

ನಾನು ಡಾ॥ ಎಂ.ಎಸ್. ಸುಂಕಾಪುರ ಅವರ ವಿದ್ಯಾರ್ಥಿಯಾಗಿದ್ದುದು ೧೯೬೪ರಲ್ಲಿ ಎಂ.ಎ. ತರಗತಿಯ ಎರಡು ವರ್ಷ ಅವರ ಪಾಠ ಕೇಳುವ ಭಾಗ್ಯ ನನ್ನದಾಗಿತ್ತು. ಅವರು ಜನ್ಮತಃ ಪ್ರತಿಭಾಶಾಲಿ ನಟರು; ಹಾಸ್ಯ ಅವರ ಬದುಕಿನಲ್ಲಿ ಹಾಸುಹೊಕ್ಕಾಗಿದ್ದಿತು. ನನಗೆ ಅವರ ತರಗತಿ ತಪ್ಪಿಸಿಕೊಳ್ಳಲು ಎಂದೂ ಮನಸ್ಸಾಗಲಿಲ್ಲ. ಏಕೆಂದರೆ, ಪಾಠದೊಂದಿಗೆ ಸಹಜಸ್ಫುರಣವಾಗಿ ಬರುತ್ತಿದ್ದ ಹಾಸ್ಯದ ಚಟಾಕಿಗಳು. ಅವರು ನಮ್ಮನ್ನು ನಗಿಸಬೇಕೆಂದು ಎಂದೂ ಹಾಸ್ಯವನ್ನು ಬಳಸಲಿಲ್ಲ. ಮೊದಲ ನೋಟಕ್ಕೆ ಅವರು ಗಂಭೀರ ಸ್ವಭಾವದವರು ಆದರೆ ಪಾಠ ಮಾಡಲು ನಿಂತಾಗ ಅವರು ನಿಜವಾದ ನಗೆಗಾರರು ಗ್ರಾಮೀಣ ಭಾಗದಿಂದ ಬಂದವರಾದ ಕಾರಣ ದಷ್ಟಪುಷ್ಟವಾಗಿದ್ದರು. ಆದರೆ, ಮಾತು ಕಡಿಮೆ ವಿದ್ಯಾರ್ಥಿಗಳ ಜೊತೆ ಅತಿಯಾದ ಸಲುಗೆ ಎಂದೂ ಹೊಂದಿರಲಿಲ್ಲ. ಮೃದು ಮನಸ್ಸು. ಯಾರನ್ನೂ ಗಟ್ಟಿಯಾಗಿ ಮಾತನಾಡಿಸಿದವರಲ್ಲ. ಅವರ ಚೇಂಬರ್‌ನಲ್ಲಿ ಸದಾ ಹಸ್ತಪ್ರತಿಗಳನ್ನು ಓದುವುದರಲ್ಲಿ ಮಗ್ನರಾಗಿರುತ್ತಿದ್ದರು. ಅವರು ಫುಲ್ ಸೂಟ್‌ನಲ್ಲಿ ಟೈ ಧರಿಸಿ ತರಗತಿಗೆ ಬರುತ್ತಿದ್ದರು. ನಮಗೆ ಷಡಕ್ಷರಿಯ ರಾಜಶೇಖರ ವಿಳಾಸ ಪಠ್ಯ ಮಾಡುತ್ತಿದ್ದರು. ಪಠ್ಯ ಎಂದೂ ನೀರಸವಾಗಿರುತ್ತಿರಲಿಲ್ಲ. ಅವರು ನಾಟಕಕಾರರು, ನಟರೂ ಆಗಿದ್ದುದರಿಂದ ಅವರ ಹಾಸ್ಯಕ್ಕೊಂದು ಮೆರುಗು ಬರುತ್ತಿತ್ತು. ಆಗ ಕನ್ನಡ ವಿಭಾಗದಲ್ಲಿ ಒಳ್ಳೆಯ ಭಾಷಣಕಾರರಾಗಿ ಎಸ್.ಎಂ. ವೃಷಭೇಂದ್ರಸ್ವಾಮಿ, ಅತ್ಯುತ್ತಮ ನಗೆಗಾರರಾಗಿ ಎಂ.ಎಸ್. ಸುಂಕಾಪುರ ಪ್ರಸಿದ್ಧಿ ಪಡೆದಿದ್ದರು. ಅವರು ಉತ್ತರ ಕರ್ನಾಟಕದ ಹಳ್ಳಿ ಪಟ್ಟಣಗಳಲ್ಲಿ ಉಪನ್ಯಾಸ ಕೊಟ್ಟಿರುವರು. ಕಾಲೇಜು ಗ್ಯಾದರಿಂಗ್‌ಗಳಿಗೆ ಮುಖ್ಯ ಅತಿಥಿಗಳಾಗಿ ಬರಲು ಬೇಡಿಕೆ ವಿಶೇಷವಾಗಿ ಇರುತ್ತಿತ್ತು. ಅವರು ೧೯೭೦ರಲ್ಲಿ ಒಂದು ವರ್ಷ ಗುಲ್ಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ಮತ್ತೆ ಧಾರವಾಡಕ್ಕೆ ಹಿಂತಿರುಗಿದ್ದರು. ಡಾ॥ ಆರ್.ಸಿ. ಹಿರೇಮಠರು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದಾಗ ಡಾ॥ ಎಂ.ಎಸ್. ಸುಂಕಾಪುರ ಅವರು ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕ ಹಾಗೂ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ೧೯೮೧ರಲ್ಲಿ ನಿವೃತ್ತರಾದ ಮೇಲೆ ಎರಡು ವರ್ಷ ಯು.ಜಿ.ಸಿ ಪ್ರಾಧ್ಯಾಪಕರಾಗಿ 'ಜನಪದ ರಂಗಭೂಮಿ' ಎಂಬ ವಿಷಯ ಕುರಿತು ಸಂಶೋಧನೆ ನಡೆಸಲು ನಿಯೋಜಿತರಾದರು.

ಕನ್ನಡ ಅಧ್ಯಯನ ಪೀಠದ ಅವಿಭಾಜ್ಯ ಭಾಗವಾದ ವಚನ ವಾಙ್ಮಯ ಸಂಶೋಧನಾ ಹಾಗೂ ಪ್ರಕಟಣ ವಿಭಾಗದ ಮೂಲಕ ಡಾ॥ ಆರ್.ಸಿ. ಹಿರೇಮಠ ಹಾಗೂ ಡಾ॥ ಎಂ.ಎಸ್. ಸುಂಕಾಪುರ ಅವರು ವಚನ ಸಾಹಿತ್ಯ ಹಾಗೂ ಮಧ್ಯಕಾಲೀನ ಸಾಹಿತ್ಯ ಕೃತಿಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸಿದರು. ಹಳಕಟ್ಟಿಯವರ ನಂತರ ದೊಡ್ಡ ಪ್ರಮಾಣದಲ್ಲಿ ವೀರಶೈವ ವಾಙ್ಮಯವನ್ನು ಹೊರತಂದ ಶ್ರೇಯಸ್ಸು ಈ ಗೆಳೆಯರದು. ಉದಾಹರಣೆಗೆ ಸೋಮನಾಥ ಚಾರಿತ್ರ (೧೯೬೧), ರಾಜಶೇಖರ ವಿಳಾಸ, ಭೈರವೇಶ್ವರಕಾವ್ಯದ ಕಥಾಮಣಿ ಸೂತ್ರರತ್ನಾಕರ ಭಾಗ ೧ ಮತ್ತು ೨ (೧೯೬೪), ಗುರುಬಸವನ ಸಪ್ತಕಾವ್ಯಗಳು (೧೯೬೮) ಇತ್ಯಾದಿ. ವಚನಸಾಹಿತ್ಯಕ್ಕೆ ಸಂಬಂಧಿಸಿದಂತೆ ಸಂಪಾದಿತ ಕೃತಿಗಳು ಇಂತಿವೆ; ವಿಶೇಷಾನು ಭವ ಷಟ್‌ಸ್ಥಲ (೧೯೭೧), ಲಿಂಗಚಿದಮೃತಬೋಧೆ (೧೯೭೫), ಅಲ್ಲಮಪ್ರಭು ದೇವರ ವಚನಗಳು (೧೯೭೬) – ಡಾ॥ ಆರ್.ಸಿ. ಹಿರೇಮಠರ ಜೊತೆಗೂಡಿ, ಬಾಲಸಂಗಯ್ಯನ

ವಚನಗಳು (೧೯೭೬), ಪರಮಮೂಲ ಜ್ಞಾನ ಷಟ್‌ಸ್ಥಲ (೧೯೭೭), ಪ್ರಸಾದಿಸ್ಥಲದ ವಚನಗಳು (೧೯೭೮), ಸಕಲಪುರಾತನರ ವಚನಗಳು ಸಂಪುಟ ೨ ಮತ್ತು ೩ (೧೯೭೮), ಸಕಲಪುರಾತನರ ಬೆಡಗಿನ ವಚನಗಳು (೧೯೭೮) ಇತ್ಯಾದಿ. ಸ್ವತಂತ್ರವಾಗಿ ಅನೇಕ ಮಧ್ಯಕಾಲೀನ ವೀರಶೈವಕವಿಗಳ ಕೃತಿಗಳನ್ನು ಸಂಪಾದಿಸಿರುವರು. ಉದಾಹರಣೆಗೆ ಹಮ್ಮೀರಕಾವ್ಯ (೧೯೫೪), ಪ್ರಭುಲಿಂಗಲೀಲೆ (೧೯೭೬), ಶಬರಶಂಕರವಿಳಾಸ (೧೯೭೬). ಪ್ರಸನ್ನಶಂಕರಲಿಂಗ ರಗಳೆಗಳು (೧೯೭೬), ಹರಿಹರದೇವಕೃತ ನೂತನ ಪುರಾತನರ ರಗಳೆಗಳು (೧೯೭೬), ಮೈಲಾರ ಬಸವಲಿಂಗ ಶರಣರ ಗುರುಕರುಣ ತ್ರಿವಿಧಿ (೧೯೭೬), ಗಿರಿಜಾಕಲ್ಯಾಣ (೧೯೭೭) ಹರಳಯ್ಯನ ಚರಿತ್ರೆ (೧೯೭೯), ರೇವಣಸಿದ್ಧೇಶ್ವರ ಕಾವ್ಯ (೧೯೮೦); ಏಳು ಶತಕಗಳನ್ನು ಸಂಪಾದಿಸಿರುವರು. ಅವು ಇಂತಿವೆ; ಗುಮ್ಮಟ ಶತಕ (೧೯೫೭), ರಕ್ಷಾಶತಕ (೧೯೭೬) ಚನ್ನವೀರೇಶ್ವರ ಶತಕ (೧೯೭೭), ವಿರೂಪಾಕ್ಷ ಶತಕ (೧೯೭೮), ಶ್ರೀಗುರು ಶಂಕರೇಶ್ವರ ಶತಕ (೧೯೭೯), ನಿಜಲಿಂಗ ಶತಕ (೧೯೮೦), ಸೋಮೇಶ್ವರ ಶತಕ (೧೯೮೦).

ಡಾ॥ ಎಂ.ಎಸ್. ಸುಂಕಾಪುರ ಅವರ ಆಸಕ್ತಿಯ ಅಧ್ಯಯನ ಕ್ಷೇತ್ರಗಳಲ್ಲಿ ಜಾನಪದ ಸಾಹಿತ್ಯವೂ ಒಂದು. ಬೇರೆ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಮಟ್ಟದಲ್ಲಿ ಜಾನಪದ ಸಾಹಿತ್ಯದ ಅಧ್ಯಯನ, ಸಂಶೋಧನ ಬೋಧನ ಕಾರ್ಯಗಳು ಪ್ರಾರಂಭವಾದಂತೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಡಾ॥ ಎಂ.ಎಸ್. ಸುಂಕಾಪುರರ ಆಸಕ್ತಿಯ ಫಲದ ಜಾನಪದ ವಿಭಾಗ ಪ್ರತ್ಯೇಕ ವಿಭಾಗವಾಗಿ ಪ್ರಾರಂಭವಾಯಿತು. ಡಾ॥ ಎಂ.ಎಸ್. ಸುಂಕಾಪುರ ಅವರು ಜಾನಪದ ಅಧ್ಯಯನ ವಿಭಾಗಕ್ಕೆ ಬೇಕಾದ ಪೂರಕ ಪಠ್ಯಗಳನ್ನು ಜೀವನ ಜೋಕಾಲಿ ಎಂಬ ಮಾಲಿಕೆಯಲ್ಲಿ ಸಿದ್ಧಪಡಿಸಿದರು. ಉದಾಹರಣೆಗೆ ಚೌಪದನಗಳು ಭಾಗ–೧ (೧೯೭೧), ಸರಸ ವಿರಸ ಭಾಗ–೨ (೧೯೭೧) ಗರತಿಯರ ಗರಿಮೆ ಭಾಗ–೨ (೧೯೭೨) ಹೋಳಿಹಾಡು ಭಾಗ–೪ (೧೯೭೪), ದುಂದುಮೆ ಪದ ಭಾಗ–೫ (೧೯೭೫), ಡೊಳ್ಳಿನ ಹಾಡು ಭಾಗ–೬ (೧೯೭೬), ಗಂಗಿ ಗೌರಿ ಸಂವಾದ ಭಾಗ–೨ (೧೯೭೬), ಕೋಲುಪದ ಭಾಗ–೮ (೧೯೭೬), ಜೋಗತಿ ಹಾಡು ಭಾಗ–೯ (೧೯೭೭). ಅವರು ಯಕ್ಷಗಾನ ಬಯಲಾಟಗಳನ್ನು ಸಂಪಾದಿಸಿದರು. ಉದಾಹರಣೆಗೆ ಶ್ರೀಕೃಷ್ಣ ಪಾರಿಜಾತ (೧೯೭೨), ಅಲ್ಲಮಪ್ರಭು ಸಣ್ಣಾಟ (೧೯೭೩), ಪ್ರಮೀಳೆ ದೊಡ್ಡಾಟ (೧೯೭೬), ತಿರುನೀಲಕಂಠ ಸಣ್ಣಾಟ (೧೯೭೭), ಶ್ರೀಕೃಷ್ಣ ಸಂಧಾನ (ಯಕ್ಷಗಾನ) (೧೯೭೮), ಬಭ್ರುವಾಹನ ಯಕ್ಷಗಾನ (೧೯೮೧), ಇವುಗಳ ಜೊತೆಗೆ ಜಾನಪದ ಸಾಹಿತ್ಯ ದರ್ಶನ ಮಾಲಿಕೆಯಲ್ಲಿ ಭಾಗ ೨ ರಿಂದ ೭ರ ವರೆವಿಗೆ ಐದು ಕೃತಿಗಳನ್ನು ಸಂಪಾದಿಸಿರುವರು.

ಪ್ರೊ॥ ಎಂ.ಎಸ್. ಸುಂಕಾಪುರ ಅವರಿಗೆ ಬಾಲ್ಯದಿಂದಲೂ ಜಾನಪದದ ಬಗೆಗೆ ಹತ್ತಿಕ್ಕಲಾಗದ ಆಸಕ್ತಿ. ಅವರು ಗ್ರಾಮೀಣಭಾಗದಿಂದ ಬಂದವರು ಹಾಗೂ ರೈತಾಪಿ ಕುಟುಂಬಕ್ಕೆ ಸೇರಿದವರು. ಹೀಗಾಗಿ ಅವರ ನಾಲಗೆಯ ಮೇಲೆ ಜಾನಪದ ವಾಙ್ಮಯದ ಬೇರೆ ಬೇರೆ ಪ್ರಕಾರಕ್ಕೆ ಸೇರಿದ ಹಾಡುಗಳು ನಲಿದಾಡುತ್ತಿದ್ದುವು. ಅವರಿಗೆ ಜಾನಪದ ಹಾಡಿನ ಮಟ್ಟು ತಿಳಿದಿದ್ದರಿಂದ ರಾಗಬದ್ಧವಾಗಿ ಹಾಡುತ್ತಿದ್ದರು. ನಾಟಕ ಬದುಕಿನ ಭಾಗವಾಗಿದ್ದುದರಿಂದ ಜಾನಪದ ನಾಟಕಗಳ ಸಂಭಾಷಣೆಯನ್ನು ನಿಂತ ನಿಲವಿನಲ್ಲಿಯೇ ಹೇಳಬಲ್ಲವರಾಗಿದ್ದರು. ಒಟ್ಟಿನಲ್ಲಿ ಕರ್ನಾಟಕದ

ಶ್ರೇಷ್ಠ ಜಾನಪದ ತಜ್ಞರಲ್ಲಿ ಅವರ ಹೆಸರು ಮರೆಯಲಾಗದ್ದು. ಡಾ॥ ಬಿ.ಎಸ್. ಗದ್ದಗಿಮಠದ ನಂತರ ಜಾನಪದ ಸಾಹಿತ್ಯವನ್ನು ಕಲೆಹಾಕಿದವರು, ಅಧಿಕೃತವಾಗಿ ಮಾತನಾಡಬಲ್ಲ ಉತ್ತರ ಕರ್ನಾಟಕದ ಏಕೈಕ ವಿದ್ವಾಂಸರು ಪ್ರೊ. ಎಂ.ಎಸ್. ಸುಂಕಾಪುರ ಅವರಾಗಿದ್ದರು.

ಪ್ರೊ॥ ಎಂ.ಎಸ್. ಸುಂಕಾಪುರ ಸೃಜನಶೀಲ ಲೇಖಕರೂ ಆಗಿದ್ದರು. ನಗೆಗಾರನಯಸೇನ (೧೯೬೬), ಜೀವನದಲ್ಲಿ ಹಾಯ (೧೯೬೭), ರೇಡಿಯೋ ನಾಟಕಗಳು (೧೯೭೭) ಎಂಬ ಕೃತಿಗಳನ್ನು ಬರೆದರು. ಅವರ ನಗೆಹೊಗೆ, ಗಪ್‌ಚಿಪ್ ಮತ್ತು ತಲೆಹರಟೆಗಳು ಆ ಕಾಲಕ್ಕೆ ಪ್ರಸಿದ್ಧಿ ಪಡೆದಿದ್ದುವು. ನಗೆಹೊಗೆ ಏಕಾಂಕ ನಾಟಕಗಳ ಸಂಗ್ರಹವಾದರೆ ಗಪ್‌ಚಿಪ್ ಹರಟೆಗಳ ಸಂಗ್ರಹ.

ಪ್ರೊ॥ ಎಂ.ಎಸ್. ಸುಂಕಾಪುರ ಹಲವಾರು ಪ್ರತಿಭೆಯ ಸುಮ್ಮಿಶ್ರಪಾಕ, ನಗೆಗಾರ, ನಾಟಕಕಾರ, ಹರಟೆಮಲ್ಲ, ಪ್ರಾಚೀನ ಹಾಗೂ ನಡುಗನ್ನಡ ಸಾಹಿತ್ಯದ ಅಸಾಧಾರಣ ವಿದ್ವಾಂಸ, ಶ್ರೇಷ್ಠ ಜಾನಪದ ತಜ್ಞ – ಹೀಗೆ ಅವರ ವ್ಯಕ್ತಿತ್ವದಲ್ಲಿ ಹಲವು ಮಗ್ಗಲುಗಳು ಎಲ್ಲಕ್ಕಿಂತ ಮಿಗಿಲಾಗಿ ಅವರು ಒಳ್ಳೆಯ ಸ್ನೇಹಿತರು, ನಯ-ವಿನಯ ಸಂಪನ್ನರು, ಯಾರೇ ಬರಲಿ ತಮ್ಮಿಂದಾದಷ್ಟು ಸಹಾಯ ಮಾಡುವ ಹೃದಯವಂತ ಎಪ್ಪತ್ತಕ್ಕೂ ಹೆಚ್ಚು ವರ್ಷ ಬಾಳಿದ ಅವರು ಜೂನ್ ಮೂವತ್ತು, ೧೯೯೨ರಂದು ಸದ್ದಿಲ್ಲದೆ ನಮ್ಮನ್ನಗಲಿದರು. ಕನ್ನಡ ಸಾಹಿತ್ಯದ ಒಂದು ಸುಸಂಸ್ಕೃತ ಜೀವ ಕಣ್ಣು ಮುಚ್ಚಿದುದು ಕನ್ನಡದ ಪಾಲಿಗೆ ದೊಡ್ಡ ನಷ್ಟ.

❖

# ಗುರುತ್ರಿಮೂರ್ತಿ

## (ಡಾ।। ಜಿ.ಪಿ. ರಾಜರತ್ನಂ)

● *ನೀಲತ್ತಳ್ಳಿ ಕಸ್ತೂರಿ*

"ವಿಚಾರ ರಶ್ಮಿ" ಜಿ.ಪಿ. ರಾಜರತ್ನಂ ಅವರ ಒಂದು ಬೃಹತ್ ಕೃತಿ." ಸುಧಾ ಪತ್ರಿಕೆಯಲ್ಲಿ ವಾರವಾರವೂ "ಭ್ರಮರ" ಹೆಸರಿನಲ್ಲಿ ಅವರು ಬರೆಯುತ್ತಿದ್ದ ವಿಚಾರ ತುಣುಕುಗಳ ಸಂಗ್ರಹ. ಪರಿಣತ ವಯಸ್ಸಿನಲ್ಲಿ ಪರಿಣತ ಅಧ್ಯಯನದ ಫಲವಾಗಿ ಪರಿಪಕ್ವ ಅನುಭವಗಳ ಹಾಗೂ ಚಿಂತನೆಗಳ ಮೂಸೆಯಲ್ಲಿ ಮೂಡಿಬಂದ ವಿಚಾರ ಖಂಡಗಳ ಗೊಂಚಲು.

"ವಿಚಾರ ರಶ್ಮಿ"ಯ ೧೩೦ನೆಯ ರಶ್ಮಿ "ಗುರುತ್ರಿಮೂರ್ತಿ", ಅದರಲ್ಲಿ ರಾಜರತ್ನಂ ಮೂರು ವಿಧದ ಗುರುಗಳನ್ನು ಹೆಸರಿಸುವ ಹಳೆಯ ಸುಭಾಷಿತ ಶ್ಲೋಕವೊಂದನ್ನು ಉದಹರಿಸುತ್ತಾರೆ.

**ಗುರುವೋ ಬಹವಸ್ಸಂತಿ ಶಿಷ್ಯ ವಿತ್ತಾಪಹಾರಕಾಃ ।**
**ದುರ್ಲಭಃ ನ ಸ ಗುರುರ್ಲೋಕೇ ಶಿಷ್ಯ ಚಿತ್ತಾಪಹಾರಕಾಃ ॥**

ಗುರುಗಳಲ್ಲಿ ಮೂರು ಬಗೆ – ಶಿಷ್ಯರ ವಿತ್ತವನ್ನು (ಹಣ) ಅಪಹರಿಸುವವರು, ಶಿಷ್ಯರ ಚಿತ್ತವನ್ನು ಅಪಹಾರ ಮಾಡುವವರು (ಮನ ಸೆಳೆಯುವವರು) ಮತ್ತು ಶಿಷ್ಯರ ಚಿತ್ ತಾಪವನ್ನು ಹರಿಸುವವರು.

ರಾಜರತ್ನ ವಿವರಿಸುತ್ತಾರೆ –

"ಮೊದಲೇ ಹೆದರಿರುವ ಶಿಷ್ಯರನ್ನು ಇನ್ನಷ್ಟು ಹೆದರಿಸಿ, ವ್ರತನೇಮ ಪೂಜೆ ಎಂದು ಹೆಸರಿಟ್ಟು, ಅವರ ಹತ್ತಿರ ಇರುವ ಹಣವನ್ನು ಲಪಟಾಯಿಸುವ ಗುರುಗಳು ಶಿಷ್ಯ ವಿತ್ತಾಪಹಾರಕರು. ಇಂಥವರು ಬಹಳ ಮಂದಿ.

"ದುಡ್ಡು ಕಾಸು ಕೇಳದೆ ಹೋದರೂ, ತಮ್ಮ ಓದಿನಿಂದ, ವಿದ್ಯೆಯಿಂದ ವಾಗ್ಧೋರಣೆಯಿಂದ, ಪ್ರಮಾಣ ವಾಕ್ಯ ಪ್ರಧಾನಗಳಿಂದ ಶಿಷ್ಯರ ಚಿತ್ತವನ್ನು ಅಪಹರಿಸಿ, ಅವರನ್ನು ತಾತ್ಕಾಲಿಕವಾಗಿ 'ಡಂಗ್' ಮಾಡುವವರು ಚಿತ್ತಾಪಹಾರಕರು, ಇಂಥವರು ಸಿಗುವುದೂ ಸುಲಭವಲ್ಲ. "ನಿಜವಾದ ಗುರು ಎಂದರೆ "ಶಿಷ್ಯ ಚಿತ್ ತಾಪಹಾರಕರು" ಇವರು ತಮ್ಮ ಚಿತ್ತದ ತಾಪರನ್ನು ತಾವು ಮೊದಲೇ ಹೋಗಲಾಡಿಸಿಕೊಂಡಿರುತ್ತಾರೆ. ಅನಂತರ ತಮ್ಮ ಶಿಷ್ಯರ ಚಿತ್ತದ ತಾಪರನ್ನು

ತಿಳಿಯುತ್ತಾರೆ. ಅವರವರ ತಾಪಗಳಿಗೆ ಉಪಶಯನಗಳನ್ನು ಅನುಗ್ರಹಿಸುತ್ತಾರೆ. ಇವರೇ 'ಗುರು' ಎಂಬ ಹೆಸರಿಗೆ ಅರ್ಹರಾದವರು ಇಂಥವರು ದೊರಕುವುದು ದುರ್ಲಭ."

ರಾಜರತ್ನಂ ಖಂಡಿತವಾಗಿಯೂ ಮೊದಲನೆಯ ಗುಂಪಿಗೆ ಸೇರುವವರಲ್ಲ. ಎರಡನೆಯ ಗುಂಪಿಗೆ ಅಂದರೆ ಶಿಷ್ಯರ ಚಿತ್ತವನ್ನು ಅಪಹರಿಸುವವರ ಗುಂಪಿಗೆ ಸ್ವಲ್ಪಮಟ್ಟಿಗೆ ಸೇರಬಹುದು. ಅವರ ಓದು ವಿದ್ಯೆ ವಾಗ್ಧೋರಣೆ ಪ್ರಮಾಣ ವಾಕ್ಯಪ್ರಧಾನಗಳು ಹಾಗಿರುತ್ತಿದ್ದವು. ಆದರೆ ಅವರು ಅಷ್ಟಕ್ಕೇ ನಿಂತವರಲ್ಲ. ಮೂರನೆಯ ಗುಂಪಿಗೆ ಸೇರತಕ್ಕವರಾಗಿದ್ದರು. ಶಿಷ್ಯರ ಚಿತ್ತದ ತಾಪವನ್ನು ಹೋಗಲಾಡಿಸುವವರು ಆಗಿದ್ದರು.

ಇದು ಅವರ ಪಾಠವನ್ನು ಕೇಳಿದ ವಿದ್ಯಾರ್ಥಿಗಳಿಗೆ ಗೊತ್ತು, ಅವರ ಭಾಷಣ, ಅವರ ಚಿಂತನ ಕೇಳಿದವರಿಗೆ (ಅವರೂ ವಿದ್ಯಾರ್ಥಿಗಳೇ, ಜ್ಞಾನ ಪಿಪಾಸುಗಳೇ) ಗೊತ್ತು.

ಆಲಿವರ್ ಗೋಲ್ಡ್‌ಸ್ಮಿತ್ ಇಂಗ್ಲಿಷಿನ ಹೆಸರಾಂತ ಕವಿ, ಹದಿನೆಂಟನೆಯ ಶತಮಾನದವರು. ಆತನ deserted village (ಹಾಳಾದ ಹಳ್ಳಿ) ಒಂದು ಕಾಲಕ್ಕೆ ತುಂಬ ಜನಪ್ರಿಯವಾಗಿದ್ದ ಕವಿತೆ, ಇಂಗ್ಲೆಂಡಿನಲ್ಲಿ ಕೈಗಾರಿಕಾ ಕ್ರಾಂತಿಯ ದಾಂಧಲೆ ಆರಂಭವಾದ ಅದರ ಬಿರುಸಿನಲ್ಲಿ ಸಿಕ್ಕಿ ನಾಶವಾಗುತ್ತಿದ್ದ ನೆಮ್ಮದಿಯ ನಿರಾಳವಾದ ಗ್ರಾಮಜೀವನದ ಗೋಳಿನ ಕತೆ ಆ ಕವಿತೆ (ಈಗ ನಮ್ಮ ದೇಶದಲ್ಲೂ ಅಂಥದೇ ಗೋಳು ಆವರಿಸಿದೆ). ಆ ಕವಿತೆಯಲ್ಲಿ ಒಬ್ಬ village person ನ (ಹಳ್ಳಿಯ ಪಾದ್ರಿ ಅಥವಾ ಗುರು) ಚಿತ್ರ ಬರುತ್ತದೆ.

ಈ ಸಾಲುಗಳನ್ನು ಓದಿದಾಗ, ನೆನೆದಾಗ ಮನಸ್ಸಿನ ಮುಂದೆ ಹಾಯ್ದು ಬರುವುದು ಗುರು ಜಿ.ಪಿ. ರಾಜರತ್ನಂ ಚಿತ್ತವೇ, ಆ ಪಾದ್ರಿ ಗುರುವಿನ ಹಾಗೆಯೇ ರಾಜರತ್ನಂ ಶ್ರವಣನಂತೆಯೇ ಇದ್ದರು. ಎಲ್ಲರಿಗೂ ಬೇಕಾಗಿದ್ದವರು. ಅವರ ಸಂಬಳ ಆರಂಭವಾದುದೂ ನಲವತ್ತು ರೂಪಾಯಿಯಲ್ಲೆ ಬೇರೆ ಗೋಮಾಳಗಳನ್ನು ಹುಡುಕಲಿಲ್ಲ. ಅಧಿಕಾರ ಸ್ಥಾನಗಳಿಗೆ ಹಪಹಪಿಸಲಿಲ್ಲ. ತಾನು ಬೆಳೆಯುವುದರ ಜೊತೆಗೇ ಅಥವಾ ಅದಕ್ಕಿಂತ ಒಂದು ಗುಂಜಿ ಹೆಚ್ಚಾಗಿಯೆ, ಇತರರು ಬೆಳೆಯಬೇಕೆಂದು ಬಯಸಿದರು. ಶಿಷ್ಯರು ಅಥವಾ ಹತ್ತಿರಕ್ಕೆ ಬಂದವರು ತಮ್ಮ ಓರೆಕೋರೆಗಳನ್ನು ತಿದ್ದಿಕೊಳ್ಳಲು ನೆರವಾಗುತ್ತಿದ್ದರು. ತಪ್ಪು ಮಾಡಿದವರನ್ನು ಛೇಡಿಸಿದರೂ ವಾತ್ಸಲ್ಯದಿಂದ ಕೈಹಿಡಿದು ಸರಿದಾರಿಗೆ ತರುವ ಹಂಬಲವಿದ್ದವರು. ಎಲ್ಲರ ಹಿತ ಬಯಸಿದವರು. ಶಿಷ್ಯರು ಮುಂದೆ ಬರಲಿ ಎಂದು ಸರ್ವಪ್ರಯತ್ನವಾಡುತ್ತಿದ್ದರು, ತಾಯಿ ಹಕ್ಕಿಯ ಹಾಗೆ, ಅವರ ಮಾತು ಮಧುರ, ಗಂಭೀರ. ಟೀಕೆ ಮಾಡಲು ಬಂದವರೂ ಮನ ತೆರೆದು ಕೇಳುತ್ತಿದ್ದರು. ಮಕ್ಕಳ ರಾಜರತ್ನಂ ಎಂದೇ ಖ್ಯಾತರು ಬೊಚ್ಚುಬಾಯಿಯ ವೃದ್ಧ ಎಳೆಯ ಚಿಣ್ಣರ ನಡುವೆ ಕುಳಿತು, ಅವರನ್ನು ನಲಿಸುತ್ತ ತಾನೂ ನಲಿಯುತ್ತಿದ್ದ ದೃಶ್ಯ ಮನೋಹರ. ಅವರ ಶಿಶು ಸಾಹಿತ್ಯ ಅವರ ಮಕ್ಕಳ ಬಗೆಗಿನ ಅಕ್ಕರೆಗೆ ಸಾಕ್ಷಿ.

ರಾಜರತ್ನಂ ಹುಟ್ಟಾ ಗುರುಗಳು 'ಗುರುತನ' ಅವರಿಗೆ ವಂಶಪಾರಂಪರ್ಯವಾಗಿ ಬಂದ ಬಳುವಳಿ. ಅವರ ತಂದೆ ಗೋಪಾಲಕೃಷ್ಣಯ್ಯಂಗಾರ್ ಮೈಸೂರು ಸೀಮೆಯಲ್ಲಿ ಆ ಕಾಲದಲ್ಲಿ ಹೆಸರಾಂತ ಉಪಾಧ್ಯಾಯರು. ಮಾಧ್ಯಮಿಕ ಶಾಲಾ ಉಪಾಧ್ಯಾಯರು. ಅವರ ಅಣ್ಣಂದಿರು

ಹಾಗೂ ಹಿರಿಯ ಮಗ (ಜಿ.ಪಿ. ಅವರ ಅಣ್ಣ) ಸಹ ಮೇಷ್ಟ್ರೇ, ಎಳೆಯ ತನದಲ್ಲೆ ಜಿ.ಪಿ. ಅವರಿಗೆ ಮಾತೃವಿಯೋಗ ಆಯಿತು. ಮಗುವನ್ನು ತಂದೆಯೇ ತಮ್ಮೊಂದಿಗೆ ಶಾಲೆಗೆ ಕರೆದೊಯ್ಯುತ್ತಿದ್ದರಂತೆ. ಪ್ರಾಯಶಃ ಆಗಲೇ ಮಗುವಿಗೆ ಪಾಠ ಹೇಳುವ ನಿದರ್ಶನ ದೊರೆಯಿತೊ ಏನೋ ಅವರೂ ಮೇಷ್ಟ್ರೇ ಆದರು. ಒಮ್ಮೆ ತಂದೆ ಹುಷಾರು ತಪ್ಪಿ ರಜೆಯಲ್ಲಿದ್ದರಂತೆ, ಆಗ ಮಗ ಜಿ.ಪಿ.ಯ ಬದಲಿಯಾಗಿ ಶಾಲೆಗೆ ಹೋದರಂತೆ. ಆಗಲೇ ಅವರು ಮಕ್ಕಳಿಗೆ ಆಡಿಕೊಳ್ಳಲು ತಕ್ಕ ಸುಲಭವಾದ ಪದ್ಯಗಳ ಅಭಾವವನ್ನು ಅರಿತು ಮರುಗಿದರಂತೆ. ಆ ಸಂಜೆಯ ಆ ಮರುಕ "ಕಸ್ತೂರಿ" ಪದ್ಯದ ರಚನೆಯಲ್ಲಿ ಪರ್ಯಾವಸಾನಗೊಂಡು, ಅದ್ಭುತ ಶಿಶು ಸಾಹಿತ್ಯ ಸಮೃದ್ಧಿಗೆ ನಾಂದಿಯಾಯಿತು. ಹಾಗೆ ಬರೆದ ಹಾಡುಗಳನ್ನು ಜಿ.ಪಿ. ಶಾಲೆಯಲ್ಲಿ ಮಕ್ಕಳಿಗೆ ಕಲಿಸಿ, ಅವರಿಗೆ ಇಷ್ಟವಾದೀತೇ ಎಂದು ತಾಳೆ ನೋಡುತ್ತಿದ್ದರು ಎಷ್ಟೊ ಸಲ ಮಕ್ಕಳನ್ನು ಪದ್ಯ ರಚಿಸಲು ಹಚ್ಚುತ್ತಿದ್ದರು. ಅಂಥ ಸಾಹಸದ ಫಲವೇ 'ಚುಟುಕ'ಗಳ ಉದ್ಭವ,

ಹೀಗೆ ರಾಜರತ್ನಂ ಎಳೆಯದರಲ್ಲೆ ಶಿಷ್ಯರ ಚಿತ್ತವನ್ನು ಅಪಹರಿಸಿದ್ದರು. ಶಿಷ್ಯರ ಚಿತ್ತದ ತಾಪವನ್ನೂ ಹರಣಮಾಡಿದ್ದರು.

"ಗುರುಗೀತಾ"ದಲ್ಲಿ ಈ ಒಂದು ವಾಕ್ಯವಿದೆ –

**ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ ।**
**ಚಕ್ಷುರುನ್ಮೀಲಿತಂ ಏನ ತಸ್ಮೈ ಶ್ರೀ ಗುರುವೇ ನಮಃ ॥**

ಅಜ್ಞಾನದ ಕತ್ತಲೆ ಕವಿದು ಕುರುಡಾಗಿರುವ ಜೀವಿಯ ಕಣ್ಣಿಗೆ ಜ್ಞಾನದ ಅಂಜನರನ್ನು ಹಚ್ಚುವ ಕಡ್ಡಿ, ಸಾಧನ ಗುರು. ಆತನಿಗೆ ನಮಸ್ಕಾರ.

ಕಣ್ಣಿನ ಕತ್ತಲೆ ಕಳೆದ ಮೇಲೆ ನೋಡಬೇಕಾದವನು ಶಿಷ್ಯನೇ, ಆ ಕತ್ತಲೆಯನ್ನು ಕಳೆಯಲು ಗುರು ನೆರವಾಗುತ್ತಾನೆ. ಜ್ಞಾನದ ಅಂಜನ ಅಥವಾ ಕಾಡಿಗೆ ಹಚ್ಚುವ ಕೆಲಸ ಮಾಡುತ್ತಾನೆ. ಜ್ಞಾನಪಥದಲ್ಲಿ ಶಿಷ್ಯನನ್ನು ಪ್ರವರ್ತಿಸುತ್ತಾನೆ.

ರಾಜರತ್ನಂ ಕಾಲೇಜಿನಲ್ಲಿ ಹಾಗೂ ಹೊರಗೆ ಅಂದರೆ ತಮ್ಮ ವೃತ್ತಿಯಲ್ಲಿ ಹಾಗೂ ಪ್ರವೃತ್ತಿಯಲ್ಲಿ ಮಾಡಿದ ಗುರುತರ ಕಾರ್ಯ ಇದೇ, ಜ್ಞಾನದ ಬೆಳಕನ್ನು ತೋರಿಕೊಡುವುದು, ತಾವು ಕಂಡುಕೊಂಡ 'ಶಿವಪಥ'ವನ್ನು ಎಲ್ಲರಿಗೂ ತೋರಿಸುವುದು, ಗೋಲ್ಡ್‌ಸ್ಮಿತ್ ಹೇಳಿದಂತೆ–

He tried each art, reproved each dull delay
Al hered to brightu  world, and led the way.

ಈ 'ಗುರುತನ' ಅವರ ಭಾಷಣಗಳಲ್ಲೂ ಬರೆಹಗಳಲ್ಲೂ ಎದ್ದು ಕಾಣುತ್ತದೆ. ವಿಶೇಷವಾಗಿ ಅವರ "ವಿಚಾರ ರಶ್ಮಿ", "ವಿಚಾರ ತರಂಗ," "ಕಿರಣಾನುಭವ," "ಸಭಾವಿನಯ" ಮುಂತಾದ ಚಿಂತನಾ ಖಂಡ ಸಂಗ್ರಹಗಳಲ್ಲಿ ನಿಚ್ಚಳವಾಗಿ ಕಾಣುತ್ತದೆ. ಅವರ ಉಜ್ವಲ ಭಾಷಣಗಳೂ ಇದೇ 'ಗುರುತನ'ಕ್ಕೆ ಕನ್ನಡಿಗಳು,

ಈ ಕೃತಿಗಳ ಯಾವುದೇ ಪುಟ ತೆರೆದು ನೋಡಿ, ಏನಾದರೂ ಸಂದೇಶ, ಬಾಳಿನಿಂದ ಕಡೆದು ತೆಗೆದ ವಿಚಾರ ನವನೀತ ಏನಾದರೂ ಇದ್ದೇ ಇರುತ್ತದೆ. ಅದು ಯಾವುದೇ ಮೌಲ್ಯ ಆಗಬಹುದು. ದೇಶಪ್ರೇಮ, ದೈವಭಕ್ತಿ, ಸರ್ವಧರ್ಮ ಸಮಭಾವ, ಗುರುನಿಷ್ಠೆ, ಹೃದಯವಂತಿಕೆ, ಸತ್ಯನಿಷ್ಠೆ, ಯಾವುದಾದರೂ ಸರಿ, ರಶ್ಮಿಗಳಲ್ಲಿ ಬೆಳಗುತ್ತವೆ.

ರಾಜರತ್ನಂ ಅವರ ಪ್ರವೃತ್ತಿಯಲ್ಲಿ ನಾವು ಕಾಣುವ ಈ 'ಗುರುತನ'ವನ್ನೇ ಅವರ ವೃತ್ತಿಯಲ್ಲೂ ಅಂದರೆ ಉಪಾಧ್ಯಾಯ ಕಾರ್ಯದಲ್ಲೂ ಕಾಣುತ್ತೇನೆ.

೧೯೩೮ರಲ್ಲಿ ಅವರಿಗೆ ವಿಶ್ವವಿದ್ಯಾನಿಲಯದಲ್ಲಿ 'ಕನ್ನಡ ಪಂಡಿತ' ನೌಕರಿ ದೊರಕಿತು. ಹತ್ತಾರು ವರ್ಷಗಳ ಬವಣೆ ನೀಗಿತು. ಬರೆಹ ಲೋಕದಲ್ಲೂ ಅಷ್ಟಿಷ್ಟು ಹೆಸರೂ ಬಂದಿತ್ತು. ಜೀವನ ನೌಕೆ ಸರಾಗವಾಗಿ ಸಾಗಲು ಅನುವು ಸಿಕ್ಕಿತ್ತು. ೧೯೬೪ರಲ್ಲಿ ನಿವೃತ್ತರಾಗುವವರೆಗೆ ೨೬ ವರ್ಷ ರಾಜರತ್ನಂ ಮೇಷ್ಟ್ರುಗಿರಿ – ಗುರುತನ ನಡೆಯಿತು. "ನನ್ನದು ಮೇಷ್ಟ್ರುಗಿರಿ ಅಲ್ಲ, ನಾನೊಬ್ಬ ಮೇಷ್ಟ್ರುಗುಡ್ಡ" ಎಂದು ಅವರು ಹೇಳಿಕೊಳ್ಳುತ್ತಿದ್ದರು.

ಜಿ.ಪಿ. ಅವರ ಪ್ರತ್ಯಕ್ಷ ಶಿಷ್ಯರಾಗಿ ಅವರಿಂದ ಕರಹಕಿಗಳಲ್ಲಿ ಪಾಠ ಕೇಳಿದವರಿಗೆ ಗೊತ್ತು ಆ ಪಾಠಗಳ ವೈಖರಿ, ಆ ದಿಟ್ಟ ನಿಲುವು, ಆ ಕಂಚಿನ ಕಂಠದ ಮೊಳಿಗು, ಆ ವ್ಯಾಖ್ಯಾನ ವಿಜೃಂಭಣೆ, ಆ ರೀತಿ, ಆ ಗತ್ತು, ಶಬ್ದಗಳ ಮೇಲೆ ಕೊಡುತ್ತಿದ್ದ ಒತ್ತು, ಸ್ಪಷ್ಟ ಉಚ್ಚಾರಣೆ, ಆ ಉದಾಹರಣೆಗಳು ಎಲ್ಲ ವ್ಯಕ್ತಿ – ಪ್ರವೃತ್ತಿಗಳ ಅಪೂರ್ವ ಸಂಮಿಲನ! ವರ್ಣನೆಗೆ ಮೀರಿದ್ದು, ಅನುಭವಕ್ಕೆ ಮಾತ್ರ ವೇದ್ಯ, ಅನೇಕ ಶಿಷ್ಯರು ಪ್ರತಿಭಾವಂತ ಶಿಷ್ಯರು ಇದಕ್ಕೆ ಸಾಕ್ಷಿ, ಎನ್. ಪ್ರಹ್ಲಾದರಾವ್, ಎಲ್.ಎಸ್. ಶೇಷಗಿರಿರಾವ್, ಜಿ.ಎಸ್. ಶಿವರುದ್ರಪ್ಪ, ನಾಡಿಗ ಕೃಷ್ಣಮೂರ್ತಿ, ಜಿ. ಬ್ರಹ್ಮಪ್ಪ, ಬಿ.ಆರ್. ಲಕ್ಷ್ಮಣರಾವ್ ಮುಂತಾದ ಹಿರಿಯ ಪೀಳಿಗೆಯವರಿಗೆ ತಮ್ಮ ಅನುಭವ ಬಾಳಿಗೆ ಸವಿಬುತ್ತಿ, ನಂತರದ ಪೀಳಿಗೆಯಲ್ಲಿ ಕೆ.ಎಸ್. ನಿಸಾರ್ ಅಹಮದ್, ಸುಮತೀಂದ್ರನಾಡಿಗ, ಪಿ.ಲಂಕೇಶ್, ಎಲ್.ಜಿ. ಸುಮಿತ್ರಾ, ಎಲ್.ಜಿ. ವಿಮಲಾ, ಬಿ.ಎಸ್. ಗುಂಡೂರಾವ್ ಎಲ್ಲ ಬರುತ್ತಾರೆ. ರಾಜರತ್ನಂ ಅವರಲ್ಲಿ ತಮಗೆ ದೊರೆತ ಶಿಷ್ಯತ್ವ ತಮ್ಮ ಬಾಳಿನ ಅಮೂಲ್ಯ ಅಪದೃಶ ಅನುಭವ ಎಂದು ಭಾವಿಸುತ್ತಾರೆ. ಆದರದಿಂದ ನೆನೆಸಿಕೊಳ್ಳುತ್ತಾರೆ. ರಾಜರತ್ನಂ ಪಾಠಕೇಳಿ ಜನ್ಮ 'ಸಾರ್ಥಕವಾಯಿತು ಎಂಬ ಧನ್ಯತಾ ಭಾವ ಅನುಭವಿಸುವ ಸಾವಿರಾರು ವಿದ್ಯಾರ್ಥಿಗಳು ಇನ್ನೂ ಇದ್ದಾರೆ. ಆ ನೆನಪುಗಳಿಂದ ರೋಮಾಂಚನ ಅನುಭವಿಸುತ್ತಾರೆ. ಅವರ ತರಗತಿ ಎಂದರೆ ಎಲ್ಲರಿಗೂ ಆಸೆ. ಬೇರೆ ತರಗತಿಯವರೂ ಬರುತ್ತಿದ್ದರು. ರಾಜರತ್ನಂ ಅವರ ಎಚ್ಚರಗಣ್ಣನ್ನೂ ತಪ್ಪಿಸಿ ಬರುತ್ತಿದ್ದುದೂ ಉಂಟು. ಅಂತಹವರ ಪೈಕಿ ಕೆ.ಎನ್. ಶ್ರೀಹರಿ ಒಬ್ಬರು.

ರಾಜರತ್ನಂ ನಿವೃತ್ತರಾದ ಮೇಲೆ, ಅವರ ಕೊನೆಯ ಶಿಷ್ಯವೃಂದದ ಸದಸ್ಯ ಚಿ. ಶ್ರೀನಿವಾಸರಾಜು ತಮಗೆ ಕಾಲೇಜು ಅಧ್ಯಾಪಕ ಉದ್ಯೋಗ ದೊರೆತಾಗ ರಾಜರತ್ನಂಗೆ ತಿಳಿಸಲು ಬಂದರು. ಆಗ ರಾಜರತ್ನಂ ಹೇಳಿದ ಕಿವಿ ಮಾತು –

೧. ಒಂದು ಗಂಟೆ ಪಾಠಮಾಡಲು ಎರಡು ಗಂಟೆಗೆ ಸಿದ್ಧಮಾಡಿಕೊಂಡಿರು ಹಂಡೆ (ತಲೆ) ಬೇಗ ಖಾಲಿ ಆಗಬಾರದು.

೨. ಪಾಠಗಳಿಗೆ ಟಿಪ್ಪಣಿ ತಯಾರಿಸಿಕೊ ಪಾಠ ಆದಮೇಲೆ ಅದನ್ನು ಹರಿದು ಹಾಕು ಅದನ್ನೇ ಇಟ್ಟುಕೊಂಡರೆ ಮತ್ತೆ ಓದುವುದಿಲ್ಲ. ಹೊಸ ಚಿಂತನೆ ಮಾಡುವುದಿಲ್ಲ.

೩. ಮೇಷ್ಟ್ರು ನಿಯತ್ತಾಗಿ ಪಾಠ ಹೇಳಬೇಕು. ಪಡೆದ ಸಂಬಳ ಜೀರ್ಣವಾಗಬೇಕು. ವಿದ್ಯಾರ್ಥಿಗಳ ಉತ್ಸಾಹವನ್ನು ಎಂದೂ ಕುಗ್ಗಿಸಬೇಡ ತರಗತಿ ಮುಗಿದ ಮೇಲೆ, ಬೋರ್ಡ್ ಮೇಲೆ ಬರೆದವನು, ಅಳಿಸಿ ಹಾಕು.

ಇದು ಪರೋಪದೇಶ ಮಾತ್ರ ಆಗಿರಲಿಲ್ಲ. ರಾಜರತ್ನಂ ಪಾಠಕ್ರಮವೇ ಆಗಿತ್ತು. ಅವರ ಸ್ವಾನುಭವದ ಮಾತೇ. ಪಾಠ ಹೇಳುವವರಿಗೆ ಕನಿಷ್ಠ ಇನ್ನೂರಾದರೂ ಪದ್ಯ ಬಾಯಿ ಪಾಠ ಆಗಿರಬೇಕು ಎನ್ನುತ್ತಿದ್ದರು. ರಾಜರತ್ನಂ ಪಾಠ, ಮಾತು ಕೇಳಿದವರಿಗೆ ಗೊತ್ತು, ಅವರಿಗೆ ಎಷ್ಟೊಂದು ಪದ್ಯ ಕಂಠಸ್ಥ – ಅಲ್ಲ ಹೃದಯಸ್ಥವಾಗಿತ್ತು ಎಂದು.

ರಾಜರತ್ನಂ ಎಷ್ಟು ಗಂಭೀರ ಚಹರೆಯವರೊ ಅಷ್ಟೇ ಸುಲಭರು, ಮೃದು ಸ್ವಭಾವದವರು. ತರಗತಿಯಲ್ಲಿ ಯಾರಾದರೂ ಚೇಷ್ಟೆ, ತಂಟೆ ಮಾಡಿದರೆ, ಅವರನ್ನು ಅನಾಮತ್ತಾಗಿ ಎತ್ತಿ ಆಚೆಗೆ ಹಾಕಲೂ ಹಿಂಜರಿಯುತ್ತಿರಲಿಲ್ಲ. ಅದೇ ರೀತಿ ಯಾರಾದರೂ ವಿದ್ಯಾರ್ಥಿ ಏನಾದರೂ ತೊಂದರೆಯಲ್ಲಿರುವುದು ಗೊತ್ತಾದರೆ, ಮನಕರಗುತ್ತಿದ್ದರು. ಆತನ ನೆರವಿಗೆ ಧಾವಿಸುತ್ತಿದ್ದರು, ಅಂಥದೊಂದು ನಿದರ್ಶನ ನಾಡಿಗ ಕೃಷ್ಣಮೂರ್ತಿ ಅವರದು. ಅವರು ರಾಜರತ್ನಂ ಕ್ಲಾಸಿನಲ್ಲಿ ಬೋರ್ಡಿನ ಮೇಲೆ ಚೇಷ್ಟೆಯ ಪದ್ಯ ಬರೆದು ಗುರುಗಳನ್ನು ಕೆರಳಿಸಿದ್ದರು. ಆದರೆ ಹಿಂದೆಯೆ ಗುರುಗಳು ಅವರನ್ನು ಕರೆಸಿ ವಿಚಾರಿಸಿದರು. ಕೃಷ್ಣಮೂರ್ತಿ ವಾರಾನ್ನದ ವಿದ್ಯಾರ್ಥಿ, ಶುಕ್ರವಾರಕ್ಕೆ ವಾರಾನ್ನ ದೊರೆತಿರಲಿಲ್ಲ ಇದು ತಿಳಿದು ಎರಡು ರೂಪಾಯಿಕೊಟ್ಟು ಊಟ ಕೊಡಲು ಹೇಳಿದರು. ಪ್ರತಿ ಶುಕ್ರವಾರವೂ ಹಾಗೆಯೇ ಕೊಡುವುದಾಗಿ ಹೇಳಿದರು. ಇಂಥ ಪ್ರಸಂಗ ಹಲವಾರು ತಮ್ಮ ಎಳೆಯದರಲ್ಲಿ, ವಿದ್ಯಾರ್ಥಿ ದೆಸೆಯಲ್ಲಿ ತಾವು ಅನುಭವಿಸಿದ ಕಷ್ಟ ಕಾರ್ಪಣ್ಯವನ್ನು ರಾಜರತ್ನಂ ಮರೆತಿರಲಿಲ್ಲ. ಬೇರೆಯವರು ಅಂಥ ಕಷ್ಟದಲ್ಲಿ ಇದ್ದಾಗ, ಸಹಾನುಭೂತಿ ತೋರಿಸಲು, ಸಹಾಯ ಮಾಡಲು ಕಾತರರಾಗಿರುತ್ತಿದ್ದರು. ವಿದ್ಯಾರ್ಥಿ ವಾತ್ಸಲ್ಯ ಅವರಿಗೆ ಸಹಜ ಗುಣ.

"He tried each art, reproved each dull delay"

ಅವರ ಪಾಠದ ವೈಖರಿ ಬಗ್ಗೆ ಒಂದು ಉದಾಹರಣೆ ಎಲ್.ಜಿ. ವಿಮಲಾ ಅವರ ಪ್ರತ್ಯಕ್ಷ ಅನುಭವ.

"ಆಗಿನ ದಿನಗಳಲ್ಲಿ ವಿಸೀ ಮತ್ತು ರಾಜರತ್ನಂ ಬೋಧಿಸುತ್ತಿದ್ದ ಕನ್ನಡ ಕ್ಲಾಸುಗಳು ಕಿಕ್ಕಿರಿದಿರುತ್ತಿದ್ದವು. ಆ ಕ್ಲಾಸುಗಳಲ್ಲಿ ಹಾಜರಿದ್ದ ವಿದ್ಯಾರ್ಥಿಗಳಲ್ಲಿ ಅನೇಕರು ತಾವು ಹೋಗಬೇಕಿದ್ದ

ಬೇರೆ ಬೇರೆ ತರಗತಿಗಳಿಗೆ ಚಕ್ಕರ್ ಹೊಡೆದು ಕನ್ನಡ ಕ್ಲಾಸಿನಲ್ಲಿ ಬಂದು ಕುಳಿತಿರುತ್ತಿದ್ದರು. ರಾಜರತ್ನಂ ಪಾಠ ಮಾಡುತ್ತಿದ್ದಾರೆ. ಎರಡು ನಿಮಿಷಕ್ಕೆ ಒಮ್ಮೆ ಅವರ ಹಾಸ್ಯ ಚಟಾಕಿ ಹಾರುತ್ತಿತ್ತು. ಅವರ ಕ್ಲಾಸು ವಿದ್ಯಾರ್ಥಿಗಳ ನಗುವಿನಿಂದ ಖುಷಿಯ ಕೋಲಾಹಲ ಸಂತೋಷೋದ್ಗಾರಗಳಿಂದ ಕಾಲೇಜಿನ ಇತರ ತರಗತಿಗಳ ಎಲ್ಲ ವಿದ್ಯಾರ್ಥಿಗಳನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿತ್ತು."

*(ಗೆಲುವಿನ ಚಿಲುಮೆ – ರಾಜರತ್ನಂ)*

ಇಂಥವು ಅನೇಕರ ಅನುಭವ ನನ್ನದೇ ಕತೆ first hand ವಿಷಯವಾದೀತು. ನಾನು ಸೆಂಟ್ರಲ್ ಕಾಲೇಜು ಪ್ರವೇಶಿಸಿದ್ದು ೧೯೫೦ರಲ್ಲಿ ೧೯೫೨ರಲ್ಲಿ ಬಿ.ಎಸ್‌ಸಿ. ಮುಗಿಸಿ ಹೊರಬಿದ್ದೆ. ಆ ಎರಡೂ ವರ್ಷ ಕನ್ನಡದಲ್ಲಿ ನಮಗೆ ವಿಸೀ, ರಾಜರತ್ನಂ ಪಾಠ! ಅವರಿಬ್ಬರನ್ನು ಕಂಡರೆ ವಿದ್ಯಾರ್ಥಿಗಳಿಗೆ ಭಯ ಗೌರವ. ದೂರದಲ್ಲಿ ಕಂಡರೆ ಸಾಕು, ಎಲ್ಲರೂ ಕ್ಲಾಸು ರೂಮು ಸೇರಿ ಗಪ್‌ಚಿಪ್ ಆಗಿ ಕೂತಿರುತ್ತಿದ್ದೆವು. ಉಳಿದ ತರಗತಿಗಳಲ್ಲಿ ಹೀಗೇನೂ ಇರುತ್ತಿರಲಿಲ್ಲ. ವಿದ್ಯಾರ್ಥಿಗಳ ಹರಟೆ, ಅಲೆದಾಟ, ಚೇಷ್ಟೆ, ಚುಡಾಯಿಸುವಿಕೆ ಎಲ್ಲ ಯಥಾ ಸಾಂಗವಾಗಿ ನಡೆದೇ ಇರುತ್ತಿದ್ದವು. ಕನ್ನಡ ತರಗತಿಯ ಕರೆ ಮಾತ್ರ ಬೇರೆ!

ನಮಗೆ ಪಠ್ಯಗಳು ಬಸವಪ್ಪ ಶಾಸ್ತ್ರಿಗಳ "ಕನ್ನಡ ಶಾಕುಂತಲಾ" ನಾಟಕ, ಕರ್ಕಿ ಅವರು "ಈಚಲು ಮರದ ಕೆಳಗೆ", ಎಂ.ಆರ್. ಕೃಷ್ಣಶಾಸ್ತ್ರಿಗಳ "ಭಾಷಣಗಳು ಲೇಖನಗಳು," ಹಾಗೂ ಶಿವರಾಮ ಕಾರಂತರ "ಔದಾರ್ಯದ ಉರುಳಲ್ಲಿ", ಮೊದಲ ಎರಡು ಪುಸ್ತಕಗಳಿಗೆ ವಿಸೀ ಅವರ ಪಾಠ, ಇನ್ನು ಎರಡಕ್ಕೆ ರಾಜರತ್ನಂ, 'ಶಾಕುಂತಲಾ' ಎಂದರೆ ವಿಸೀಗೆ ಪ್ರಾಣ, ಒಂದೂವರೆ ವರ್ಷ ಅದನ್ನೇ ಪಾಠ ಮಾಡಿದರು. ಪುತಿನ ಪುಸ್ತಕವನ್ನು ಮೂರು ನಾಲ್ಕು ಪಾಠಗಳಲ್ಲಿ ಚುಟುಕಾಗಿ ಮುಗಿಸಿದರು. ರಾಜರತ್ನಂ ಉಳಿದ ಎರಡು ಪುಸ್ತಕಗಳನ್ನು ಕುಲಕ್ಲುಪ್ತವಾಗಿ ಒಂದೊಂದು ವರ್ಷಕ್ಕೆ ಒಂದರಂತೆ ಪಾಠ ಹೇಳಿದರು. ಈ ಪೀರಿಯಡ್ಡಿನಲ್ಲಿ ಇಷ್ಟು ಹೇಳಬೇಕು ಎಂದು ಮೊದಲೇ ನಿಗದಿ ಮಾಡಿಕೊಂಡು ಬರುತ್ತಿದ್ದರು. ಅಷ್ಟು ಮುಗಿಸಿಯೆ ಹೋಗುತ್ತಿದ್ದರು. ಒಂದು ಗಂಟೆ ಬರೋಬರಿ ಪಾಠ ನಿಮಿಷವೂ ಹೆಚ್ಚಿಲ್ಲ, ಕಡಿಮೆ ಇಲ್ಲ ಹೇಳಬೇಕಾದ ವಿಷಯವನ್ನೆಲ್ಲ ಚಾಚೂ ತಪ್ಪದೆ ಹೇಳುತ್ತಿದ್ದರು.

ವಿಸೀ ಅವರ ಉಡುಪಿನ ಅಚ್ಚುಕಟ್ಟು ಠೀವಿ ಲೋಕಪ್ರಸಿದ್ಧ, ಸರಳ ಸುಂದರ ನವಿರು ಸದಭಿರುಚಿಯ ಸಾಕ್ಷಿ. ತೆಳುವಾದ ಪಂಚೆ ಕಚ್ಚೆ, ಕೊರಲು ಮುಚ್ಚುವ ಕೋಟು, ತೆಳು ಬಣ್ಣದ್ದು, ಐತಿಹ್ಯವೇ ಆಗಿದ್ದ ಮೈಸೂರು ಪೇಟ, ಗಂಭೀರ ಮುಖಮುದ್ರೆ, ಬಹುಪಾಲು ಇಂಗ್ಲಿಷಿನಲ್ಲೇ ಕನ್ನಡದ ಪಾಠ!

ರಾಜರತ್ನಂ ಅವರದು ಸಲಗನ ನಡೆ, ಕಾಲೇಜಿಗೆ ಬರುವಾಗ ದಟ್ಟಿ ಪಂಚೆ, ಜುಬ್ಬಾ ಅಂಗವಸ್ತ್ರ, ಎಲ್ಲ ದಪ್ಪ ಬಿಳಿಯ ಖಾದಿ ತಮ್ಮ ಕೋಣೆಯಲ್ಲಿ ಒಂದು ಎಂಟು ಮೊಳದ ಖಾದಿ ಪಂಚೆ, ಒಂದು ತಿಳಿ ಹಸಿರು ಛಾಯೆಯ ನಿಲುವು ಕೋಟು (ಮೊಣಕಾಲವರೆಗೆ), ಮುಚ್ಚಿದ ಕಾಲರಿನ ಕೋಟು ಇಟ್ಟಿರುತ್ತಿದ್ದರು. ಎಲ್ಲ ಖಾದಿ, ತರಗತಿಗೆ ಹೊರಟಾಗ ಖಾದಿ

ಕಚ್ಚೆ ಪಂಚೆ, ಕೋಟು ಮಡಿ ವೇಷ, ಕ್ಲಾಸು ಮುಗಿಸಿ ರೂಮಿಗೆ ಬಂದ ಮೇಲೆ ಕೋಟು ಗೂಟಕ್ಕೆ ಪಂಚೆ ಬೀರುವಿಗೆ ಇಂದಿನ ಲುಂಗಿ ಅಂಗಿಯೆ ದಿರುಸು.

ಅವರು ಮನೆ ಬಿಡುತ್ತಿದ್ದುದು ಬೆಳಿಗ್ಗೆ ಏಳಕ್ಕೋ ಎಂಟಕ್ಕೋ ಅರಳೇಪೇಟೆ, ಬಳೇಪೇಟೆಗಳಿಗೆ ಹೋಗಿ, ಪ್ರೆಸ್ಸುಗಳಲ್ಲಿ ಕಂಡಚ್ಚು ತಿದ್ದುವಿಕೆ, ಬರೆವಣಿಗೆ ಇತ್ಯಾದಿಗಳನ್ನು ಮುಗಿಸಿ ಅಲ್ಲೆ ಏನಾದರೂ ಹೊಟ್ಟೆಗೆ ಮಾಡಿಕೊಂಡು (ಬಹುತೇಕ ದೋಸೆ) ಸೆಂಟ್ರಲ್ ಕಾಲೇಜಿಗೆ ಸಕಾಲಕ್ಕೆ ಹಾಜರು, ಸಂಜೆಯವರೆಗೂ ಪಾಠ ಪ್ರವಚನ, ಅಧ್ಯಯನ, ಟಿಪ್ಪಣಿ ತಯಾರಿ, ವಿದ್ಯಾರ್ಥಿ ಬರವಣಿಗೆ ಪರಿಶೀಲನೆ, ಕರ್ನಾಟಕ ಸಂಘದ ವ್ಯವಹಾರಗಳು ಇತ್ಯಾದಿ ಸಂಜೆ ಕಾಲೇಜು ಬಿಟ್ಟು ಏನಾದರೂ ಉಪನ್ಯಾಸ ವಗೈರೆ ಕಾರ್ಯಕ್ರಮ ಮುಗಿಸಿಕೊಂಡು ಮನೆ ಸೇರುವ ವೇಳೆಗೆ ಎಂಟೊ ಒಂಬತ್ತೊ! ಅವರ ಕೋಣೆಯಲ್ಲಿ ಕಲೆಸಿದ ಅನ್ನದ ಊಟ ಸಿದ್ಧವಾಗಿರುತ್ತಿತ್ತು. ಉಂಡು ಮತ್ತೆ ಅಧ್ಯಯನ, ಬರೆಹ, ತಿದ್ದುವಿಕೆ ಇತ್ಯಾದಿ, ನಡುರಾತ್ರಿಗೆ ನಿದ್ದೆ, ಇದು "ರಂಗಯಾತ್ರಾ ದಿನೇ ದಿನೇ"!

೧೯೫೨ರಲ್ಲಿ ನಾನು ಬಿಎಸ್ಸಿ ಮುಗಿಸಿದೆ. ಫಲಿತಾಂಶ ಅದೇ ತಾನೇ ಬಂದಿತ್ತು. ಒಂದು ದಿನ ನಮ್ಮ ತಂದೆಗೆ ರಾಜರತ್ನಂ ಸಿಕ್ಕಿದ್ದರಂತೆ. "ಏನಾಯಿತು ಫಲಿತಾಂಶ ಮಗನದು?" ಎಂದು ಕೇಳಿದನಂತೆ. "ನಿಮ್ಮ subject ನಲ್ಲಿ ಫಸ್ಟ್‌ಕ್ಲಾಸು" ಎಂದರು ತಂದೆಯವರು. ರಾಜರತ್ನಂಗೆ ಸಂಕೋಪವಾಯಿತು. ಆದರೆ ವಿಜ್ಞಾನ ವಿಷಯಗಳಲ್ಲಿ ಸಾಪಾಪಾಸು ಆಯಿತಲ್ಲ ಎಂದು ತಂದೆಯವರಿಗೆ ಎನಿಸಿತೋ ಏನೊ! ಸಾಹಿತ್ಯದಲ್ಲಿ ಎಷ್ಟೇ ಆಸಕ್ತಿ ಆಸೆ ಇದ್ದರೂ, ನನ್ನ ಭವಿಷ್ಯ ಅಂಚೆ ಇಲಾಖೆಯಲ್ಲಿ ಲಿಖಿತವಾಗಿತ್ತು, ಪಾಲಿಗೆ ಬಂದುದನ್ನು ಪರಮಾನ್ನ ಎಂದಲ್ಲವಾದರೂ, ಮಜ್ಜಿಗೆ ಅನ್ನ ಎಂದಾದರೂ ಭಾವಿಸಿ ೩೮ ವರ್ಷ ಸರ್ವೀಸು ಮಾಡಿ, "with no regrets ನಿವೃತ್ತನಾದೆ, ಗುರುಗಳು ತೋರಿಕೊಟ್ಟ ಪ್ರಾಮಾಣಿಕ ಬದುಕನ್ನು ನಡೆಸಲು ಸಾಧ್ಯವಾದುದಕ್ಕೆ ಸಮಾಧಾನ ಪಟ್ಟುಕೊಂಡೆ.

ವಿದ್ಯಾರ್ಥಿಗಳ ಸಾಹಿತ್ಯಾಭಿರುಚಿಯನ್ನು ಗುರುತಿಸಿ ಅಭಿವೃದ್ಧಿಪಡಿಸಲು ರಾಜರತ್ನಂ ಮಾಡುತ್ತಿದ್ದ ಸಾಹಸ, ವಹಿಸುತ್ತಿದ್ದ ಶ್ರಮ ಕಾಳಜಿ ಇಲ್ಲಿ ಲೋಕಪ್ರಸಿದ್ಧ ಅದು ಅವರ ವಿಶಿಷ್ಟತನ, ಸಾಹಿತ್ಯ ಪರಿಚಾರಿಕೆ, ನುರಿತ ಕುಶಲಿಯಾದ ತೋಟಗಾರನ ಕೆಲಸ ಸಸಿ ಮಡಿಯಲ್ಲಿ ಒಳ್ಳೊಳ್ಳೆ ಸಸಿಗಳನ್ನು ನೋಡಿ ನೋಡಿ ಗುರುತಿಸುವುದು, ಸುತ್ತ ಹಸನು ಮಾಡುವುದು, ಸಕಾಲದಲ್ಲಿ ನೀರು ಗೊಬ್ಬರ ಕೊಡುವುದು, ಸಸಿ ಹೊರತಾಗಿ ಬೆಳೆಯುವಂತೆ ಜತನವಾಗಿ ನೋಡಿಕೊಳ್ಳುವುದು. ಇಂಥ ತೋಟಗಾರಿಕೆ ರಾಜರತ್ನಂ ಅವರ ಸಾಹಿತ್ಯ ಪರಿಚಾರಿಕೆ, ವಿದ್ಯಾರ್ಥಿಗಳನ್ನು ಬರವಣಿಗೆಗೆ ಪ್ರೇರಿಸುವುದು, ಅವರು ಬರೆದುದನ್ನು ತಿದ್ದುವುದು, ಉತ್ತಮ ಬರೆಹಗಳನ್ನು ಪ್ರಕಟಿಸುವುದು, ಪ್ರಕಟಿಸಿದ ಪುಸ್ತಕಗಳನ್ನು ತಾವೇ ಹೊತ್ತು ಓಡಾಡಿ ಮಾರುವುದು, ಕರ್ನಾಟಕ ಸಂಘದಲ್ಲಿ ಸಾಹಿತ್ಯ ಸ್ಪರ್ಧೆಗಳನ್ನು ನಡೆಸಿ ಬಹುಮಾನ ನೀಡುವುದು, ಹಿರಿಯ ವಿದ್ವಾಂಸರನ್ನು ಕಾಲೇಜಿಗೆ ಕರೆಸಿ ವಿದ್ಯಾರ್ಥಿಗಳಿಗೆ ಅವರ ಸಂಪರ್ಕ, ಪ್ರೇರಣೆ, ವಿದ್ವತ್ತಿನ ಸ್ಪರ್ಶ ದೊರಕುವಂತೆ ಮಾಡುವುದು.... ಬಗೆ ಬಗೆಯ ಸೇವಾಕಾರ್ಯ.

As a mother bird each endearment tries
To tempt its off spring to the skies.

ಮತ್ತೆ ಗೋಲ್ಡ್‌ಸ್ಮಿತ್‌ನ ಸಾಲುಗಳು ನೆನಪಿಗೆ ಬರುತ್ತಾರೆ.

ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದಲ್ಲಿ ಬಹುಮಾನವಾಗಿ ಪಡೆದ ಕೆಲವು ಪುಸ್ತಕ ನನ್ನಲ್ಲಿ ಇನ್ನೂ ಇದೆ. ದಿನಗಳನ್ನು ನೆನಪಿಸುತ್ತದೆ.

ನನ್ನ ಸೌಭಾಗ್ಯ ಜಿ.ಪಿ. ಅವರಂತಹ ಗುರು ಕಾಲೇಜಿನಲ್ಲಿ ದೊರತರು. ಕಾಲೇಜಿನ ಹೊರಗೂ ಅವರೇ ಗುರುಗಳಾಗಿ ದೊರೆತರು. ನಮ್ಮ ಗಾಂಧೀ ಸಾಹಿತ್ಯ ಸಂಘದಲ್ಲಿ ಸಿದ್ಧವನಹಳ್ಳಿ ಕೃಷ್ಣಶರ್ಮಾರ ಜೊತೆಗೆ ಜಿ.ಪಿ. ಅವರೂ ನಮಗೆ ದೊರೆತರು. ಶರ್ಮಾಜಿ ಅವರದು ಹೆಚ್ಚು. ಪ್ರತಿದಿನದ ಸಂಪರ್ಕ, ಜಿ.ಪಿ. ಅಡಿಗಡಿಗೆ ದೊರಕುವರು, ಸಂಘದಲ್ಲಿ ನೂರಾರು ಉಪನ್ಯಾಸ, ವಾಚನ ವಗ್ಗೈರೆ ನಡೆಸಿದರು. "ಶ್ರೀಗಂಧ ಕೂಟಿ" ಸಾಹಿತ್ಯ ವಿಭಾಗಗಳನ್ನು ರೂಪಿಸಿಕೊಟ್ಟರು. ಅವರ ಮನೆಗೆ ಅನೇಕ ಸಲ ಹೋಗುತ್ತಿದ್ದೆ. ನನ್ನ ಒಂದೆರಡು ಬರೆಹಗಳನ್ನು ನೋಡಿ ಮುನ್ನುಡಿ ಬರೆದುಕೊಟ್ಟರು. ಕೃಷ್ಣಶರ್ಮಾರ ಜೀವನ ಚರಿತ್ರೆಯನ್ನು ನಾನು ರಚಿಸಿದಾಗ, ಜಿ.ಪಿ. ಅವರೇ "ಸಿದ್ಧವನಹಳ್ಳಿ ಕೃಷ್ಣಶರ್ಮಾ, ವ್ಯಕ್ತಿ–ಶಕ್ತಿ" ಎಂಬ ಹೆಸರು ಕೊಟ್ಟರು. ಅದರ ಬಿಡುಗಡೆಯ ದಿನ ಅವರು ಹಾಜರಿದ್ದು ಹರಸಿದರು. ೧೯೬೯ರಲ್ಲಿ ಅವರ ೬೦ನೆಯ ಹುಟ್ಟು ಹಬ್ಬದ ಸಲುವಾಗಿ ಅವರ ಸಾಹಿತ್ಯ ವಿತರಣೆಮಾಡಿ ಸನ್ಮಾನಿಸಿದಾಗ, ಆ ಕೆಲಸದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು ನನ್ನ ಪುಣ್ಯ. ಹಾಗೆಯೇ ಅವರ ನಿಧನಾನಂತರ ಸಂಸ್ಮರಣೆಯ ಕಾರ್ಯದಲ್ಲಿ, "ರಾಜಮಾರ್ಗ" ಗ್ರಂಥ ಪ್ರಕಾಶನದಲ್ಲಿ, ಅದಕ್ಕಾಗಿ ಅವರ ಜೀವನಚರಿತ್ರೆ ಬರೆಯುವರಲ್ಲಿ ನನಗೆ ಸದಾವಕಾಶ ದೊರೆತದ್ದು ಭಾಗ್ಯ ವಿಶೇಷ. ಆ ಜೀವನ ನನ್ನ ಪಾಲಿಗೆ "ಆರದ ದೀಪ."

ನೇರವಾಗಿ ಅವರ ಶಿಷ್ಯತ್ವ ಪಡೆಯುವ ಸೌಭಾಗ್ಯ ನನಗೆ, ನನ್ನಂತಹ ಸಾವಿರಾರು ಮಂದಿಗೆ ದೊರಕಿತು. ಆದರೆ ಪರೋಕ್ಷ ಶಿಷ್ಯತ್ವ ಪ್ರೇರಣೆ, ಪ್ರೋತ್ಸಾಹ ಪಡೆದವರೂ ಅನೇಕರು ಉಂಟು. ಸೊಗಸಾದ ಉದಾಹರಣೆ ಎಂದರೆ ಕಾರ್ಕಳದ ಪ್ರೊ॥ ಎಂ. ರಾಮಚಂದ್ರ ಅವರಿಗೆ ಜಿ.ಪಿ. ಬಾಳಗುರು ಗುರುತಿನ ಬಗ್ಗೆ ಅವರು ಮಾಡಿದ ಕೆಲಸ ಹಲವು ಬಗೆ. ಅಂಥ ಅಭಿಮಾನಿಗಳು ಎಷ್ಟಿದ್ದಾರೆಯೋ! ಎಂದರೊ ಮಹಾಭಾಗ್ಯವಂತುಲು!

ಈ ಲೇಖನದಲ್ಲಿ ರಾಜರತ್ನಂ ಅವರ "ಗುರುತನ"ವನ್ನು ಮತ್ತೊಮ್ಮೆ ನೆನೆಸಿಕೊಳ್ಳುವ ಈ ಅವಕಾಶ ನನಗೆ ದೊರಕಿದೆ. ಇದಕ್ಕಾಗಿ ಗ್ರಂಥ ಸಂಪಾದಕರುಗಳಿಗೆ ನಾನು ಆಭಾರಿ.

ಓಂ ಶ್ರೀಗುರುವೇ ನಮಃ

❖

# ಎಲ್ಲರ ಆತ್ಮೀಯ ಗುರು

## (ತ.ಸು. ಶಾಮರಾಯ)

• *ಡಾ॥ ನ. ಸುಬ್ರಹ್ಮಣ್ಯ*

ಅರಳೀ ಮರವನ್ನಾಗಲಿ ಆಲದ ಮರವನ್ನಾಗಲಿ ಕೃಷಿ ಮಾಡಿ ಪೋಷಿಸಿ ಯಾರು ಬೆಳೆಸುತ್ತಾರೆ? ಯಾವುದೋ ಕೋಟೆ ಗೋಡೆಯ ಬಿರುಕಿನಲ್ಲಿ ಧೂಳಿನಲ್ಲಿ ಹೇಗೋ ಬೆರೆತ ಒಂದು ಬೀಜ, ಎಂದೋ ಮಳೆ ಬಂದಾಗ ಜಲವಸತಿ ದೊರೆತು, ಮೊಳೆತು, ಆ ಧೂಳಿನಲ್ಲೇ ಬೇರುಬಿಟ್ಟು ತಲೆಯೆತ್ತಿ ಬೆಳೆಯತೊಡಗುತ್ತದೆ. ಚಿಗುರನ್ನು ದನ ಮೇದುಕೊಂಡು ಹೋಗಲಿ, ತುಂಟ ಹುಡುಗರು ಕಿತ್ತು ಹಾಕಲಿ ಮತ್ತೆ ಮತ್ತೆ ಚಿಗುರಿ ಕಾಲಕ್ರಮೇಣ ವರ್ಧಿಸಿ, ಗೋಡೆಯನ್ನೇ ಸೀಳಿಕೊಂಡು ಬೆಳೆದು ಆಕಾಶದಗಲಕ್ಕೆ ಹರಡಿಕೊಂಡು ನೂರಾರು ಹಕ್ಕಿಗಳಿಗೆ ಆಶ್ರಯವಿತ್ತು. ಹಾದಿ ನಡೆವ ಪಾಂಥರಿಗೆ ನೆರಳು ನೀಡಿ ಶ್ರಮ ಪರಿಹಾರ ಮಾಡುತ್ತದೆ. ಹಾಗೆಯೇ ಸ್ವ-ಸಾಮರ್ಥ್ಯದಿಂದಲೇ ಬೆಳೆದು ದೊಡ್ಡವರಾಗಿ, ಸಾವಿರಾರು ವಿದ್ಯಾರ್ಥಿಗಳಿಗೆ ಆಶ್ರಯದಾತರಾಗಿ ಅವರಿಗೆ ಬದುಕುವ ಮಾರ್ಗವನ್ನು ಕಲಿಸಿದವರು ಪ್ರಾಚಾರ್ಯ ತ.ಸು. ಶಾಮರಾಯರು. ಕಳೆದ ವರ್ಷ (೨೦೦೫) ಅವರ ವಿದ್ಯಾರ್ಥಿಗಳು ಅಭಿಮಾನಿಗಳು ಸಂಘ ಸಂಸ್ಥೆಗಳು ಅವರ ಶತಮಾನೋತ್ಸವವನ್ನು ಆಚರಿಸಿದರು.

**ಸರಸ್ವತೀ ಪುತ್ರ :** ಚಿತ್ರದುರ್ಗ ಜಿಲ್ಲೆಯಲ್ಲಿ; ಚಳ್ಳಕೆರೆಯಿಂದ ಬಳ್ಳಾರಿಗೆ ಹೋಗುವ ರಸ್ತೆಯ ಬದಿಯಲ್ಲಿರುವ ತಳಕು ಎಂಬ ಗ್ರಾಮದಲ್ಲಿ, ಕೇವಲ ಸರಸ್ವತೀ ಕಟಾಕ್ಷದಿಂದ ಕೂಡಿದ ಕುಟುಂಬದಲ್ಲಿ ಜನಿಸಿದ ಹುಡುಗ ಶ್ಯಾಮ ಕೃಷ್ಣ ಜನ್ಮಾಷ್ಟಮಿಯಂದು ಜನಿಸಿದುದರಿಂದ ಶ್ಯಾಮನೆನಿಸಿದ. ಪ್ರಚಂಡಬುದ್ಧಿ, ಮಹಾಸ್ವಾಭಿಮಾನಿ. ಲೋಯರ್ ಸೆಕಂಡರಿ ಪರೀಕ್ಷೆ ಪಾಸು ಮಾಡಿದ ಕೂಡಲೆ ಕೆಲಸದ ಅನ್ವೇಷಣೆ. ಮನೆಯಲ್ಲಿ ಅಂತಹ ಕಡುಬಡತನ ವಯಸ್ಸು ಹದಿಮೂರೇ ವರ್ಷವಾದರೂ ಎತ್ತರವಾಗಿ ಕಾಣುತ್ತಿದ್ದನಾದುದರಿಂದ ಅವನ ಬುದ್ಧಿವಂತಿಕೆಯನ್ನು ಗಮನಿಸಿದ ವಿದ್ಯಾಧಿಕಾರಿಗಳು ಅವನನ್ನು ಪ್ರೈಮರಿ ಶಾಲೆಯ ಅಧ್ಯಾಪಕನನ್ನಾಗಿ ನೇಮಿಸಿಕೊಂಡರು. ಅಧ್ಯಾಪಕನಾಗಿ ಸೇರಿದಾಗ ಅವನ ಉಡುಪು ಚಡ್ಡಿ – ಬನೀನು! ಮೊದಲ ದಿನ ಅಣ್ಣನ ಶರಟನ್ನು ಹಾಕಿಕೊಂಡು ಹೋಗುವಂತೆ ದೊಡ್ಡಣ್ಣನ ಆಜ್ಞೆ,ಸ್ವಾಭಿಮಾನಿಯಾದ ಹುಡುಗನ ನಿರಾಕರಣೆ. ಸಹನೆ ಕಳೆದುಕೊಂಡ ಅಣ್ಣನಿಂದ ಹೊಡೆತ. ಅದರೂ ಅಳುತ್ತಲೇ ಹಾಗೆಯೇ ಹೋಗಿ ಅಧ್ಯಾಪಕರ ಕುರ್ಚಿಯಲ್ಲಿ ಕುಳಿತ. ಸಂಬಳ ೧೫ ರೂ. ಅದು ಮನೆಗೆ, ಎರಡು ವರ್ಷಕ್ಕೆ ಆ ಕೆಲಸ ಹೋಯಿತು. ಮತ್ತೆ ವಿದ್ಯಾಭ್ಯಾಸ, ಎಸ್.ಎಸ್.ಎಲ್.ಸಿ. ಪರೀಕ್ಷೆ ಆಯಿತು. ಮತ್ತೆ ಅಧ್ಯಾಪಕ ವೃತ್ತಿ, ಈ ಸಲ ಸ್ವಲ್ಪ ಮೇಲ್ದರ್ಜೆ, ದಾವಣಗೆರೆಯ ಬಳಿ

ಹಳ್ಳಿಯಲ್ಲಿ ಮಿಡ್ಲ್ ಸ್ಕೂಲ್‌ನಲ್ಲಿ ಸಂಬಳ ೨೬ ರೂ. ಅದನ್ನು ಮನೆಗೆ ಕೊಟ್ಟರೂ, ಮನೆ ಪಾಠದಿಂದ ಗಳಿಸಿದ ಹಣವನ್ನು ಮುಂದಿನ ವಿದ್ಯಾಭ್ಯಾಸಕ್ಕೆ ಗಂಟಿಕ್ಕಿಕೊಂಡ. ಅಷ್ಟರಲ್ಲಿ ಕೊರಳಿಗೆ ಸಂಸಾರದ ಉರುಳು. ಆದರೆ ಉರುಳನ್ನು ಸಡಿಲಿಸಿ ಮನೆಯಲ್ಲೇ ತೆಗೆದಿಟ್ಟು ಮೈಸೂರಿಗೆ ಹೋಗಿ ಇಂಟರ್ ಮೀಡಿಯೇಟ್ ಪರೀಕ್ಷೆಗೆ ಓದಿದ. ಆ ವೇಳೆಗೆ ಬೆಂಗಳೂರಿನಲ್ಲಿದ್ದ ಅಣ್ಣ ಪ್ರೊ. ಟಿ.ಎಸ್. ವೆಂಕಣ್ಣಯ್ಯನವರು ಮೈಸೂರು ಮಹಾರಾಜಾ ಕಾಲೇಜಿಗೆ ವರ್ಗವಾಗಿ ಬಂದಿದ್ದರು. ಇವರ ವಾಸಕ್ಕೆ ಅನುಕೂಲವಾಯಿತು. ಕಬ್ಬಿಣದ ಕಡಲೆ ಎನ್ನಿಸಿದ್ದ ಆಗಿನ ಕಾಲದ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ರಾಜ್ಯಕ್ಕೇ ಅಗ್ರಮಾನ್ಯ, ಇಂಗ್ಲಿಷ್‌ನಲ್ಲಿ ಶೇಕಡಾ ೬೪ ಅಂಕಗಳು!

ಆರ್ಥಿಕ ಬೆಂಬಲವಿಲ್ಲದಿದ್ದುದರಿಂದ ವಿದ್ಯಾಭ್ಯಾಸವನ್ನು ಮುಂದುವರಿಸಲಾರದೆ ಚಿತ್ರದುರ್ಗಕ್ಕೆ ಹಿಂತಿರುಗಿ ತ.ಸು. ಶಾಮರಾಯರು ಮತ್ತೆ ಮಾಧ್ಯಮಿಕ ಶಾಲೆಯ ಅಧ್ಯಾಪಕರಾದರು. ಮನೆಮಾಡಿ ಸಂಸಾರವನ್ನು ಹೂಡಿದರು. ಕೆಲವು ಕಾಲದಲ್ಲೇ ಮತ್ತೆ ಬಂತು ಒಂದು ಮಾರಿ. ವಿದ್ಯಾಇಲಾಖೆಯ ಇನ್‌ಸ್ಪೆಕ್ಟರ್‌ರಿಂದ ಶಾಲೆಯ ಬೋಧಕರ ಬೋಧನ ಕ್ರಿಯೆಯ ಇನ್‌ಸ್ಪೆಕ್ಷನ್ ನಡೆಯಿತು. ಇನ್‌ಸ್ಪೆಕ್ಟರ್ ಇವರ ತರಗತಿಗೇ ಬಂದು ಕುಳಿತ. ಬೋಧನ ಕ್ರಮದಲ್ಲಿಯಾಗಲಿ, 'ನೋಟ್ಸ್ ಆಫ್ ಲೆಸನ್ಸ್'ನಲ್ಲಿಯಾಗಲಿ ಯಾವ ದೋಷವನ್ನೂ ಕಾಣುವಂತಿರಲಿಲ್ಲ. ಆದರೆ ಇನ್‌ಸ್ಪೆಕ್ಟರ್‌ಗೆ ಸಮಾಧಾನವಾದಂತೆ ಕಾಣಲಿಲ್ಲ. ಏನಾದರೊಂದು ದೋಷವನ್ನೇ ಕಾಣಬೇಕೆಂದೇ ಬಂದಂತಿತ್ತು. ಅವರ ಮುಂದಿನ ತರಗತಿಗೂ ಹೋಗಿ ಕುಳಿತ. ಶಾಮರಾಯರು ಅಧ್ಯಾಪಕರ ಕೋಣೆಗೆ ಹೋಗಿ ಮುಂದಿನ ತರಗತಿಯ ಪಠ್ಯ ಪುಸ್ತಕವನ್ನೂ 'ನೋಟ್ಸ್ ಆಫ್ ಲೆಸನ್'ನ್ನೂ ತೆಗೆದುಕೊಂಡು ಸ್ವಲ್ಪ ದೂರದಲ್ಲಿದ್ದ ಆ ಕೋಣೆಗೆ ಹೋಗಲು ಮೂರು ನಿಮಿಷ ತಡವಾಯಿತು. "ಏಕೆ ತಡವಾಗಿ ಬಂದೆ?" ಎಂದು ಇನ್‌ಸ್ಪೆಕ್ಟರ್ ಆಕ್ಷೇಪಿಸಿದ. ಇವರು ನಮ್ರರಾಗಿ ಅನಿವಾರ್ಯಕಾರಣವನ್ನು ವಿವರಿಸಿದರೂ ಕೇಳದೆ "ತಪ್ಪು ಮಾಡಿ ಸಲ್ಲದ ಕಾರಣವನ್ನು ಹೇಳುತ್ತಿದ್ದೀಯೆ. ನಿನ್ನನ್ನು ಬೂದಿಹಾಳ್ ಗ್ರಾಮಕ್ಕೆ ವರ್ಗ ಮಾಡಿದ್ದೇನೆ, ನಿನ್ನ ವಾರ್ಷಿಕ ಬಡ್ತಿಯನ್ನು ತಡೆ ಹಿಡಿದಿದ್ದೇನೆ" ಎಂದು ಇಂಗ್ಲಿಷಿನಲ್ಲಿ ಬಡಬಡಿಸಿದ. 'ಅಭಿಮಾನಧನ' ನಾಗಿದ್ದ ಆ ಯುವಕನಿಗೆ ಇದನ್ನು ಸಹಿಸಲಾಗಲಿಲ್ಲ. ಯಾವ ತಪ್ಪಿಗಾಗಿ ಈ ಶಿಕ್ಷೆ? ಪ್ರಾಮಾಣಿಕತೆಗೆ, ಯೋಗ್ಯತೆಗೆ ಬೆಲೆಯೇ ಇಲ್ಲವೇ? ಬಡ್ತಿಯ ವಿಷಯವಾದರೂ ಇರಲಿ, ತನ್ನ ಪತ್ನಿ ದಿನ ತುಂಬಿದ ಬಸರಿ, ಯಾವ ವೈದ್ಯಕೀಯ ನೆರವೂ ಇಲ್ಲದ ಕುಗ್ರಾಮಕ್ಕೆ ವರ್ಗವೇ? ಎಲ್ಲಕ್ಕಿಂತ ತನ್ನ ವಿದ್ಯಾರ್ಥಿಗಳೆದುರು ತನಗೆ ಅವಮಾನ! ಅವರು ಪ್ರತಿಭಟಿಸಿದರು. "ನೋಡಿ, ಕಾರಣವಿಲ್ಲದೆ ನನಗೆ ಶಿಕ್ಷೆ ವಿಧಿಸುತ್ತಿದ್ದೀರಿ. ಈಗಲೇ ಮೈಸೂರಿಗೆ ಹೋಗಿ ಹಿರಿಯ ಅಧಿಕಾರಿಗಳನ್ನು ಕಂಡು ವರ್ಗವನ್ನೂ ರದ್ದು ಮಾಡಿಸುತ್ತೇನೆ, ಬಡ್ತಿಯನ್ನೂ ಉಳಿಸಿಕೊಳ್ಳುತ್ತೇನೆ. ತಪ್ಪಿದರೆ ನಾನು ನನ್ನಪ್ಪನ ಮಗನೇ ಅಲ್ಲ" ಎಂದು ಗುಡುಗಿ ಅಲ್ಲಿಂದ ಹೊರಟೇಬಿಟ್ಟರು.

**ಕನಸು ನನಸು :** ಚಾಣಕ್ಯನ ಪ್ರತಿಜ್ಞೆ ನೆರವೇರಲೇಬೇಕಷ್ಟೆ? ಯುವಕನ ಎದೆಗಾರಿಕೆ, ಅವನು ಪಟ್ಟ ನೋವು, ಅವನ ಪ್ರಾಮಾಣಿಕತೆ ಅವನ ಮಾತುಗಳಿಂದಲೇ ವ್ಯಕ್ತವಾಯಿತು. ಆ ಹಿರಿಯ ಅಧಿಕಾರಿಗೆ ಬೇರೆಯ ಪುರಾವೆಯೇ ಬೇಕೆನಿಸಲಿಲ್ಲ. ವರ್ಗ ರದ್ದಾಯಿತು. ಬಡ್ತಿ

ಉಳಿಯಿತು. ದುರುದ್ದೇಶದಿಂದ ತಪ್ಪಿ ನಡೆದ ಇನ್‌ಪೆಕ್ಟರ್ ಅಮಾನತ್ತಿನಲ್ಲಿಡಲ್ಪಟ್ಟ. ಅಷ್ಟಾದ ಮೇಲೆ ಮತ್ತೆ ಆ ಉದ್ಯೋಗಕ್ಕೆ ಹಿಂತಿರುಗಲು ಮನಸ್ಸಾಗದೆ, ಮೈಸೂರಿನಲ್ಲೇ ಇದ್ದ ಅಣ್ಣನ ಅನುಮತಿ ಪಡೆದು, ಮಹಾರಾಜಾ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಕನ್ನಡ ತರಗತಿಗೆ ಸೇರಿದರು. ಮೂರು ವರ್ಷ ವ್ಯಾಸಂಗ. ಅಂತಿಮ ವರ್ಷದಲ್ಲಿ, ಕನ್ನಡ ಆನರ್ಸ್ ಮಾತ್ರವೇ ಅಲ್ಲದೆ ಎಲ್ಲ ಆನರ್ಸ್ ವಿದ್ಯಾರ್ಥಿಗಳಿಗೆ ಪ್ರಪ್ರಥಮರೆನಿಸಿ ವೈಸ್‌ಚಾನ್ಸಲರ ಚಿನ್ನದ ಪದಕ ಪುರಸ್ಕಾರವನ್ನು ಪಡೆದರು. ೧೯೪೪ರಲ್ಲಿ ಯುವರಾಜಾ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ನಿಯುಕ್ತರಾದರು. ತನ್ನ ಅಣ್ಣ ವೆಂಕಣ್ಣಯ್ಯನವರಂತೆ ತಾನೂ ಆಗಬೇಕೆಂದು ಅವರು ಕಂಡಿದ್ದ ಕನಸು ಕಡೆಗೂ ನನಸಾಯಿತು.

ಮುಂದೆ

ಉದ್ಯೋಗ ಖಾಯಂ ಆಗಬೇಕಾದರೆ, ಮತ್ತೆ ಬಡ್ತಿ ದೊರೆಯಬೇಕಾದರೆ ಎಂ.ಎ. ಪರೀಕ್ಷೆ ಪಾಸಾಗಬೇಕಿತ್ತು. ತಮ್ಮ ವಿದ್ಯಾರ್ಥಿಗಳ ಜೊತೆಯಲ್ಲೇ ಓದಿ ಪರೀಕ್ಷೆಗೆ ಕೂರಲು ಅವರ ಅಭಿಮಾನಕ್ಕೆ ಅಡ್ಡಿಯೆನಿಸಿತು. ವಿಶ್ವವಿದ್ಯಾಲಯದಿಂದ ಸಂಶೋಧನ ಪ್ರಬಂಧವನ್ನು ಮಂಡಿಸಲು ಅವರಿಗೆ ವಿಶೇಷ ಅವಕಾಶ ದೊರೆಯಿತು. ಅದರ ಫಲವೇ 'ಕನ್ನಡನಾಟಕ' ಎಂಬ ಪ್ರೌಢಗ್ರಂಥ. ಅದಕ್ಕೆ ವಿಶ್ವವಿದ್ಯಾಲಯ ಎ.ಎ. ಪದವಿಯನ್ನು ಕೊಟ್ಟದ್ದೇ ಅಲ್ಲದೆ, ಎಂ.ಎ. ಪರೀಕ್ಷೆಯಲ್ಲಿ ಅಗ್ರಮಾನ್ಯರಿಗೆ ಕಾದಿರಿಸಿದ್ದ "ಕೇಣಿಸಿದ್ದಪ್ಪ ಸ್ಮಾರಕ ಚಿನ್ನದ ಪದಕ"ವನ್ನೂ ಕೊಟ್ಟು ಪುರಸ್ಕರಿಸಿತು. ಅದಾದ ನಂತರ ಅವರನ್ನು ಉಪಪ್ರಾಧ್ಯಾಪಕರನ್ನಾಗಿ ಮಾಡಿ, 'ಪ್ರಸಾರಾಂಗ'ದ ನಿರ್ದೇಶಕರನ್ನಾಗಿ ನೇಮಿಸಿತು.

**ಪ್ರಸಾರಾಂಗದ ನಿರ್ದೇಶಕ :** ಪ್ರತಿಭಾವಂತರು ಎಲ್ಲೇ ಇದ್ದರೂ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿಯೇ ಪ್ರದರ್ಶಿಸುತ್ತಾರೆ. ಶಾಮರಾಯರು ಬಂದ ಮೇಲೆ ಪ್ರಸಾರಾಂಗದ ಚಟುವಟಿಕೆಗಳು ಚುರುಕುಗೊಂಡವು. ವಿಶ್ವವಿದ್ಯಾಲಯಕ್ಕೂ ಸಮಾಜಕ್ಕೂ ಜ್ಞಾನಸೇತುವೆನಿಸಿದ್ದ ಪ್ರಚಾರೋಪನ್ಯಾಸ ಮಾಲೆಗಳ ಕಾರ್ಯಕ್ರಮ ವಿಸ್ತೃತವಾದುವು. ಜ್ಞಾನಪಿಪಾಸುಗಳ ಗಮನ ಸೆಳೆವಂತೆ ಪ್ರಸಾರಾಂಗದಿಂದ ಪ್ರಕಟಿತ ಗ್ರಂಥಗಳ ಪ್ರದರ್ಶನ ವಿಭಾಗವೊಂದು ಸಜ್ಜಾಯಿತು.

ಶಾಮರಾಯರ ಕಾಲದಲ್ಲಿ ಪ್ರಸಾರಾಂಗ ಸಾಧಿಸಿದ ಮತ್ತೊಂದು ಪ್ರಮುಖ ಸಂಗತಿಯೂ ಉಂಟು. ಕನ್ನಡಿಗರನ್ನು ಎಚ್ಚರಿಸಿ ಅವರಲ್ಲಿ ಕನ್ನಡಾಭಿಮಾನ ಕೆರಳುವಂತೆ ಡಿಂಡಿಮವನ್ನು ಬಾರಿಸಿದ ಕುವೆಂಪು ಅವರು ಆಗ ಕುಲಪತಿಗಳಾಗಿ ಅಧಿಕಾರ ಸ್ವೀಕರಿಸಿದ್ದರು. ಪದವೀ ತರಗತಿಗಳಲ್ಲಿ ಕನ್ನಡ ಮಾಧ್ಯಮವನ್ನು ಪ್ರಾರಂಭಿಸುವ ಪ್ರಶ್ನೆ ಬಿರುಸಾಗಿ ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ಚರ್ಚೆಗೆ ಬಂದಿತ್ತು. ಇದುವರೆಗೆ ಪ್ರೌಢವಿಜ್ಞಾನ ಮತ್ತು ತಾಂತ್ರಿಕ ವಿಷಯಗಳ ಬೋಧನೆಗೆ ಅಗತ್ಯವಾದ ಪಠ್ಯಪುಸ್ತಕಗಳು ಕನ್ನಡದಲ್ಲಿಲ್ಲ ಎಂದೇ ವಿಷಯವನ್ನು ಇದುವರೆಗೆ ಮುಂದೂಡುತ್ತಿದ್ದರು. ಈಗ ವೀರಕನ್ನಡಿಗರೇ ಕುಲಪತಿಗಳಾಗಿರುವಾಗ ಅದು ಮರ್ಯಾದೆಯ ಪ್ರಶ್ನೆಯಾಯಿತು. ಕುವೆಂಪು ಅವರಿಗೆ ತ.ಸು.ಶಾಮರಾಯರು ಒಂದು ಆಶಾಕಿರಣವಾಗಿ ಕಂಡರು. ಶಾಮರಾಯರಲ್ಲಿ ಅವರಿಗೆ ಅಭಿಮಾನವೂ ಉಂಟಾಗಿತ್ತು. ಅಲ್ಲದೆ ತಮ್ಮ ಪೂಜ್ಯ ಗುರು

ವೆಂಕಣ್ಣಯ್ಯನವರ ತಮ್ಮ ಎಂಬ ಕಾರಣದಿಂದ ಸೋದರಭಾವವೂ ಉದಿಸಿತ್ತು. ಅವರನ್ನು ಕರೆಸಿ ವಿಷಯವನ್ನು ಚರ್ಚಿಸಿದರು. ಪಂಥಾಹ್ವಾನದಂತೆ ಆ ಕಾರ್ಯವನ್ನು ನೆರವೇರಿಸಿ ಕೊಡುವುದಾಗಿ ಶಾಮರಾಯರು ಜವಾಬ್ದಾರಿಯನ್ನು ಹೊತ್ತರು.

೨೬ ವಿಷಯಗಳ ಮೇಲೆ ಪಠ್ಯಪುಸ್ತಕ ರಚಿತವಾಗಬೇಕು. ಆ ಕಾಲದಲ್ಲಿ ಪ್ರಕಾಂಡ ಪಂಡಿತರಿಗೇನೂ ಅಭಾವವಿರಲಿಲ್ಲ. ಆದರೆ ಕನ್ನಡದಲ್ಲಿ ಬರೆಯಬಲ್ಲಂತಹ ತಜ್ಞರನ್ನು ಹುಡುಕಬೇಕು. ಅವರನ್ನು ಪ್ರಾರ್ಥಿಸಿ ಅವರಿಂದ ಬರೆಸಬೇಕು, ಅದನ್ನು ಹಾಗೇ ಪ್ರೆಸ್ಸುಗಳಿಗೆ ರವಾನಿಸಬೇಕು, ಕರಡನ್ನು ಆಯಾ ಲೇಖಕರಿಗೆ ಕೊಟ್ಟು ತಿದ್ದಿಸಿ ಮತ್ತೆ ಪ್ರೆಸ್ಸುಗಳಿಗೆ ತಲುಪಿಸಬೇಕು, ಅಂತೆಯೇ ಅಂತಿಮ ಕರಡನ್ನು ತಿದ್ದಿಸುವವರೆಗೆ ಶ್ರಮಿಸಬೇಕು. ಚಾಣಕ್ಯನು ಪ್ರತಿಜ್ಞೆ ಮಾಡಿದ ಮೇಲೆ ಅದು ಸಾಧಿತವಾಗಲೇಬೇಕಷ್ಟೆ? ಶಾಮರಾಯರ ವಿನಮ್ರ ಪ್ರಾರ್ಥನೆಗೆ ಇಲ್ಲವೆನ್ನುವ ವಿದ್ವಾಂಸರಾರೂ ಇರಲಿಲ್ಲ. ಸಮಸ್ತರೂ ಸಹಕರಿಸಿದರು. ೨೬ ಪುಸ್ತಕಗಳೂ ರಚಿತವಾಗುತ್ತಿದ್ದಂತೆ ೨೬ ಮುದ್ರಣಾಲಯಗಳನ್ನು ಸೇರಿದವು. ತ.ಸು. ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆಯನ್ನು ನಡೆಸುತ್ತಿದ್ದ ಶಾಮರಾಯರಿಗೆ ಪುಸ್ತಕ ಮುದ್ರಣದ ಉದ್ಯಮ ಕರತಲಾಮಲಕವಾಗಿತ್ತು. ೨೬ ಮುದ್ರಣಾಲಯಗಳಿಗೂ ೨೬ ಮನೆಗಳಿಗೂ ಮತ್ತೆ ಮತ್ತೆ ಓಡಾಡುವುದೇ ಮಹಾಶ್ರಮದ ಕೆಲಸವಾಗಿತ್ತು. ದೈಹಿಕ ಶ್ರಮಕ್ಕಿಂತಲೂ ಕಾಲದ ಒತ್ತಡ ಅಸಾಧ್ಯವಾಗಿತ್ತು. ಸೈಕಲ್ ಸವಾರಿಯನ್ನು ಎಂದೂ ಮಾಡದಿದ್ದ ಶಾಮರಾಯರು ಒಂದು ಅಶ್ವಶಕ್ತಿಯ ರಾಯಲ್ ಎನ್‌ಫೀಲ್ಡ್ ಮೋಟಾರ್ ಸೈಕಲ್ ಕೊಂಡು ಸವಾರಿ ಮಾಡುವುದನ್ನು ಅಭ್ಯಾಸ ಮಾಡಿಕೊಂಡರು. ಈ ವಯಸ್ಸಿನಲ್ಲಿ ಇವರಿಗೇನು ತೆವಲು ಎಂದು ಹಾಸ್ಯ ಮಾಡುವ ಮಿತ್ರರಿಗೇನೂ ಕೊರತೆಯಿರಲಿಲ್ಲ. ಒಮ್ಮೆ ಬಿದ್ದು ಕೈಕಾಲು ತರಚಿಕೊಂಡದ್ದೂ ಆಯಿತು. ಅಂತೂ ಸಾಹಸ ಫಲ ಕೊಟ್ಟಿತು. ಪ್ರತಿಜ್ಞೆ ನೆರವೇರಿತು. ಆರೇ ತಿಂಗಳಲ್ಲಿ ೨೬ ಪುಸ್ತಕಗಳು ಸಿದ್ಧವಾದವು.

**ಕೊಡುವ ಕೈ ಮೇಲೆ :** ಯಾವಾಗಲೂ ಕೊಡುವ ಕೈ ಮೇಲೆ, ಪಡೆವ ಕೈ ಕೆಳಗೆ, ಶಾಮರಾಯರು ಕೊಡುವ ಕೈಯಾಗಿದ್ದರೇ ಹೊರತು ಎಂದು ಯಾರ ಮುಂದೆಯೂ ಪಡೆವ ಕೈ ಚಾಚಿದವರಲ್ಲ. ಶಾಲೆಯಲ್ಲಿ ಓದುವಾಗಲೂ ಬಿಡುವಿನ ಸಮಯದಲ್ಲಿ ಮಕ್ಕಳಿಗೆ ಪಾಠ ಹೇಳಿ ತಮ್ಮ ಖರ್ಚಿನ ಹಣವನ್ನು ಹುಟ್ಟಿಸಿಕೊಳ್ಳುತ್ತಿದ್ದರು. ಬಿ.ಎ. ಆನರ್ಸ್‌ಗೆ ಓದುವಾಗಲೂ ಅಣ್ಣನ ಮನೆಯಲ್ಲಿ ಊಟ ವಸತಿ ನಡೆದರೂ ತಮ್ಮ ಫೀಸು ಮತ್ತೆ ಕೈ ಖರ್ಚಿಗೆ ಮನೆ ಪಾಠವನ್ನೇ ಅವಲಂಬಿಸಿದ್ದರು. ಓದು ಮುಗಿದು ಉಪನ್ಯಾಸಕರಾದಾಗ ಒಂದು ಹಳೆಯ ಮನೆಯನ್ನು ಕೊಂಡು ಆಮೇಲೆ ತಮಗೆ ಅನುಕೂಲವಾದಾಗ ಅಗತ್ಯವೆನಿಸಿದಂತೆ ಮಾರ್ಪಡಿಸಿಕೊಂಡರು. ಅವರಿಗೂ ಮೂವರು ಗಂಡು ಮಕ್ಕಳು ಇಬ್ಬರು ಹೆಣ್ಣುಮಕ್ಕಳು. ಎಲ್ಲರೂ ವಿದ್ಯೆ ಕಲಿತು, ಉದ್ಯೋಗ ಹಿಡಿದು ಗೃಹಸ್ಥರಾದ ಮೇಲೆ ಬೇರೆ ಬೇರೆ ಸ್ಥಳಗಳನ್ನು ಸೇರಿದರು. ಕೊನೆಯ ಮಗಳೊಬ್ಬಳೇ ಅವರ ಜೊತೆಯಲ್ಲಿ ಉಳಿದಳು.

ನಾನು ಓದುತ್ತಿದ್ದ ಕಾಲದಲ್ಲಿ ನಿರಾಧಾರನಾಗಿದ್ದ ನನಗೆ ಅವರ ಮನೆಯಲ್ಲಿ ಆಶ್ರಯವಿತ್ತಿದ್ದರು. ತಮ್ಮ ಮಕ್ಕಳಷ್ಟೇ ಅತಿಶಯ ವಾತ್ಸಲ್ಯದಿಂದ ನನ್ನನ್ನು ನೋಡುತ್ತಿದ್ದರು. ನನಗೆ ಬಿಡುವಿದ್ದ

ಸಮಯದಲ್ಲಿ ಅವರ ಸಂಶೋಧನ ಕಾರ್ಯಗಳಲ್ಲಿ, ಸಾಹಿತ್ಯಕ ಚಟುವಟಿಕೆಗಳಲ್ಲಿ ಕೈಲಾದ ಸಣ್ಣಪುಟ್ಟ ಸಹಾಯವನ್ನು ಮಾಡುತ್ತಿದ್ದೆ. ಸಂಜೆಯ ವೇಳೆ ಅವರೊಡನೆ ವಾಯು ವಿಹಾರಕ್ಕೆ ಹೋಗುತ್ತಿದ್ದೆ. ಆಗ ಸ್ವಾನುಭವದ ಎಷ್ಟೋ ವಿಷಯಗಳನ್ನು ಹೇಳುತ್ತಿದ್ದರು. ಎಷ್ಟೋ ಬುದ್ಧಿವಾದದ ಮಾತುಗಳನ್ನು ಹೇಳುತ್ತಿದ್ದರು. ಒಮ್ಮೆ "ನೋಡು ಮಗು, ನಾವು ಜೀವನದಲ್ಲಿ ನಾಲ್ಕು ಜನರಿಗೆ ಉಪಕಾರವಾಗುವಂತೆ ಬದುಕಬೇಕು. ನಮಗೇ ನಾವು ಕೊರತೆ ಮಾಡಿಕೊಳ್ಳದಿದ್ದರೆ ನಾವು ಪರರಿಗೆ ಎಂದೂ ಉಪಕಾರ ಮಾಡಲಾರೆವು" ಎಂದಿದ್ದರು. ಅವರ ಒಳಬನೀನು ಹರಿದು ತೂತು ಬಿದ್ದಿದ್ದರೂ ಅವರಿಗೆ ಹೊಸದನ್ನು ಕೊಂಡು ತರುವ ವ್ಯವಧಾನವೂ ಇರುತ್ತಿರಲಿಲ್ಲ. ಅಯ್ಯೋ ಹರಿದಿದೆಯಲ್ಲಾ ಎಂಬ ಚಿಂತೆಯೂ ಇರುತ್ತಿರಲಿಲ್ಲ. ಅವರ ಶೇವಿಂಗ್ ಬ್ರಶ್ ಜುಂಗುಜುಂಗಾಗಿ ನೊರೆಯನ್ನು ಒಳಕ್ಕೇ ಎಳೆದುಕೊಳ್ಳುತ್ತಿತ್ತು. ಅವರಿಲ್ಲದಿದ್ದಾಗ ಅದನ್ನೆಸೆದು ಅದರ ಜಾಗದಲ್ಲಿ ಹೊಸದನ್ನು ತಂದಿರಿಸಿದ್ದೆ. ಮಾರನೆಯ ದಿನ ಅದನ್ನು ಉಪಯೋಗಿಸಬೇಕಾದ ಸಮಯದಲ್ಲಿ ನಾನು ತಲೆ ತಪ್ಪಿಸಿಕೊಂಡಿದ್ದೆ. ಅದು ನನ್ನ ಕೆಲಸವೇ ಇರಬೇಕೆಂದು ಅವರಿಗೆನ್ನಿಸಿದರೂ ಅದನ್ನು ಉಪಯೋಗಿಸದೆ ವಿಧಿಯಿಲ್ಲದಿದ್ದುದರಿಂದ ಸುಮ್ಮನಾಗಿಬಿಟ್ಟರು. ಅವರ ಪತ್ನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ವೈದ್ಯರು "ತುಂಬ ದುರ್ಬಲವಾಗಿದ್ದಾರೆ, ಹಾರ್ಲಿಕ್ಸ್ ಕೊಡಿ" ಎಂದು ಹೇಳುತ್ತಿದ್ದುದನ್ನು ಕೇಳಿಸಿಕೊಂಡ ನಾನು, ಹತ್ತಿರದ ಅಂಗಡಿಯಿಂದ ಒಂದು ಹಾರ್ಲಿಕ್ಸ್ ಬಾಟಲ್ ತಂದು ಶಾಮರಾಯರ ಕೈಗೆ ಕೊಡಹೋದೆ. "ನೋಡು ಮಗು, ನನ್ನ ಮಕ್ಕಳಿಗೂ ಹೇಳಿಬಿಟ್ಟಿದ್ದೇನೆ, ಚಿಕಿತ್ಸೆಯ ಎಲ್ಲ ಖರ್ಚೂ ನನ್ನದೇ ಆಗಬೇಕೆಂದು, ಅದಕ್ಕೆ ಎಷ್ಟಾಯಿತೋ ತೋಗೋ ಎಂದು ನನಗೆ ಹಣ ಕೊಡಲು ಬಂದರು. "ಅಮ್ಮನಿಗೆ ಇಂತಹ ಸಂದರ್ಭದಲ್ಲಿ ಒಂದು ಹಾರ್ಲಿಕ್ಸ್ ಬಾಟ್ಲ್ ತಂದುಕೊಡುವ ಅಧಿಕಾರವೂ ಮಗನಿಗಿಲ್ಲವೇ?" ಎಂದು ನಾನು ಕಣ್ಣೀರು ಹಾಕಿಕೊಂಡಾಗ "ಸರಿ, ಕೊಡು" ಎಂದು ಸ್ವೀಕರಿಸಿದರು.

ಇನ್ನೊಂದು ಸ್ವಾರಸ್ಯಕರ ಘಟನೆ ನೆನಪಿಗೆ ಬರುತ್ತದೆ. ಕಾಸರಗೋಡಿನ ಕೇಶವಾನಂದ ಭಾರತೀಸ್ವಾಮಿಗಳು ಸನ್ಮಾನಿಸಲೆಂದು ತ.ಸು. ಶಾಮರಾಯರನ್ನು ಆಹ್ವಾನಿಸಿದ್ದರು. ಅಂತೆಯೇ ಪ್ರಸಿದ್ಧ ಸಿನಿಮಾ ನಟರಾಗಿದ್ದ ಉದಯಕುಮಾರರಿಗೂ ಆಹ್ವಾನವಿತ್ತು. ಹಿಂದಿನ ದಿನ ಉದಯಕುಮಾರ್ ತಮ್ಮ ಕಾರಿನಲ್ಲಿ ಬಂದು "ಬನ್ನಿ ಸಾರ್, ಹೋಗೋಣ ಕಾಸರಗೋಡಿಗೆ" ಎಂದು ಕರೆದರು. ಪ್ರಯಾಣದ ಬಗ್ಗೆ ಇನ್ನೂ ಚಿಂತೆಯನ್ನೇ ಮಾಡದಿದ್ದ ಶಾಮರಾಯರು ಸಂತೋಷಗೊಂಡು, ಒಂದು ಹಿಡಿ-ಪೆಟ್ಟಿಗೆಯಲ್ಲಿ ಅಗತ್ಯವಾದ ಉಡುಪನ್ನೂ ವಸ್ತುಗಳನ್ನು ತುಂಬಿಸಿಟ್ಟು, ಕಾಫಿ ಕುಡಿದು ಹೋಗೋಣ ಎಂದು ಮಾತಿಗೆ ಕುಳಿತರು. ಕಾಫಿ ಸೇವನೆಯಾದ ನಂತರ ಸಂಭ್ರಮಿಸಿ ಹೊರಟರು. ಕಾಸರಗೋಡು ಸಮೀಪಿಸಿದಾಗ ಶಾಮರಾಯರಿಗೆ ಹಿಡಿ ಪೆಟ್ಟಿಗೆಯ ಚಿಂತೆ ಬಂತು ಅದನ್ನು ಮನೆಯಲ್ಲೇ ಮರೆತು ಬಂದಿದ್ದಾರೆ! ಈಗ ಮಾಡುವುದೇನು? ಎಲ್ಲ ಭಗವದಿಚ್ಛೆ ಎಂದು ಸುಮ್ಮನಾದರು. ಊಟವಾದ ನಂತರ ತಮ್ಮ ಬಿಡಾರದ ಕೋಣೆಗೆ ಬಂದು, ತಮ್ಮ ಅಂಗಿಯನ್ನು ಗೋಟೆಯ ಗೂಟಕ್ಕೆ ತಗುಲಿಸಿ ಮಲಗಿದರು. ಪ್ರಯಾಣದ ಆಯಾಸವೂ ಆಗಿದ್ದುದರಿಂದ ನಿದ್ದೆ ಹತ್ತಿತ್ತು. ಆ ಸಮಯದಲ್ಲಿ ಯಾರೋ ಕೋಣೆಗೆ ಬಂದು ಹಿಂತಿರುಗಿದಂತಾಯಿತು. ತಾವು ಲಕ್ಷಿಸ ಹೋಗಲಿಲ್ಲ. ಬೆಳಿಗ್ಗೆ ಎದ್ದು ನೋಡಿದರೆ

ಗೂಟಕ್ಕೆ ತಗುಲಿಸಿದ್ದ ಜುಬ್ಬ ಪತ್ತೆಯಿಲ್ಲ! ಈಗ ಮಾಡುವುದೇನು? ಆದಂತಾಗಲಿ ಇದೂ ಭಗವದಿಚ್ಛೆ ಎಂದು ಕೊಂಡು ಪ್ರಾತರ್ವಿಧಿಗಳನ್ನು, ಪೂರೈಸಿ ಕುಳಿತರು. ಅಷ್ಟರಲ್ಲಿ ಉದಯಕುಮಾರ್ ಬಂದರು. ಅವರ ಕೈಯಲ್ಲಿ ಒಂದು ದೊಡ್ಡ ಪೊಟ್ಟಣವಿತ್ತು. ಬಿಚ್ಚಿದರೆ ಅದರಲ್ಲಿ ಹೊಸ ಪಂಚೆ, ವಲ್ಲಿ, ಜುಬ್ಬ! ರಾತ್ರಿ ಬಂದ ಕಳ್ಳ ಯಾರು, ಬಂದದ್ದು ಯಾಕೆ ಎಂಬುದು ಬಯಲಾಯಿತು. ಸನ್ಮಾನ ಸಂಭ್ರಮದಿಂದ ನೆರವೇರಿತು. ಕಾಸರಗೋಡಿನಿಂದ ಹಿಂತಿರುಗಿ ಮನೆ ಬಾಗಿಲು ಸೇರಿದೊಡನೆಯೇ ಉದಯಕುಮಾರರಿಗೆ "ಈ ಬಟ್ಟೆಗಳಿಗೆ ಎಷ್ಟು ಹಣವಾಯಿತು, ಹೇಳಿ, ತೆಗೆದುಕೊಳ್ಳಿ, ಒಂದು ಕಾಸು ಹೆಚ್ಚಾಗಿಯೂ ಕೊಡುವುದಿಲ್ಲ. ಒಂದು ಕಾಸು ಕಮ್ಮಿಯೂ ಕೊಡುವುದಿಲ್ಲ. ನಿಮ್ಮ ಪ್ರೀತಿ ಶ್ರಮಗಳಿಗೆ ನಾನೇನೂ ಕೊಡಲಾರೆ" ಎಂದು ಅವರಷ್ಟೇ ನಿರಾಕರಿಸಿದರೂ ಬಿಡದೆ ಹಣ ಕೊಟ್ಟೇ ಕೊಟ್ಟರು.

**ಸಾರಸ್ವತ ಸಂಪತ್ತು :** ತ.ಸು. ಶಾಮರಾಯರ ಸಾರಸ್ವತ ಸಂಪತ್ತನ್ನು ವಿವೇಚಿಸುವುದಕ್ಕೇ ಒಂದು ಪ್ರತ್ಯೇಕ ಲೇಖನ ಬೇಕಾಗುತ್ತದೆ. ಅವರು ಹೃದ್ಯವಾದ ಸರಳ ಗದ್ಯಶೈಲಿಯಲ್ಲಿ ರಾಮಾಯಣ, ಭಾರತ, ಭಾಗವತಗಳನ್ನು ಸಂಗ್ರಹಿಸಿಕೊಟ್ಟರು. ಕುಮಾರವ್ಯಾಸ, ಜೈಮಿನಿ, ರತ್ನಾಕರವರ್ಣಿಯ ಕಾವ್ಯಗಳನ್ನು ಹಿತಿಮಿತವಾಗಿ ಸಂಗ್ರಹಿಸಿ ಜನರಲ್ಲಿ ಕಾವ್ಯಾಭಿರುಚಿಯನ್ನು ಬೆಳೆಸಿದರು. ಶಿವಶರಣ ಕಥಾರತ್ನ ಕೋಶ, ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡ ನಾಟಕ ಇತ್ಯಾದಿ ಆಕರಗ್ರಂಥಗಳನ್ನು ರಚಿಸಿದರು. 'ಗುರುನಾನಕ' ಇತ್ಯಾದಿ ಜಿವನ ಚರಿತ್ರೆಯನ್ನು ಬರೆದರು. ಹಲವು ಕವಿಗಳ ಕೃತಿಗಳನ್ನು ಸಂಪಾದಿಸಿದರು. ಅವರ 'ಮೂರು ತಲೆಮಾರು' ಎಂಬ ವಿಶಿಷ್ಟ ರೀತಿಯ ಕೃತಿಗೆ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ದೊರೆಯಿತು. ಅವರ ವಿದ್ವತ್ತು, ಹಾಗೂ ಬಹುಮುಖ ಪ್ರತಿಭೆಯನ್ನು ಕಂಡು ಅವರಿಗೆ 'ಚಾವುಂಡರಾಯ ಪ್ರಶಸ್ತಿ' ಸಂದಿತು. ಅಂತೆಯೇ ಮೈಸೂರು ವಿಶ್ವವಿದ್ಯಾಲಯದಿಂದ ಅವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ಪ್ರಧಾನವಾಯಿತು.

**ಆದರ್ಶ ಅಧ್ಯಾಪಕ :** ಈ ಮೇಲಿನ ಎಲ್ಲ ಗುಣಗಳಿಗಿಂತಲೂ ಅವರು ಹೆಚ್ಚು ಜನಪ್ರಿಯರಾಗಿರುವುದು ಅವರು ಆದರ್ಶ ಅಧ್ಯಾಪಕರಾಗಿದ್ದುದಕ್ಕಾಗಿ, ಅವರು ಯುವರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ ನಾನಲ್ಲಿ ಇಂಟರ್‌ಮೀಡಿಯೇಟ್ ತರಗತಿಗೆ ಸೇರಿದ್ದೆ. ಆಗ ಪಂಪರಾಮಾಯಣ ಸಂಗ್ರಹ, ಗದಾಯುದ್ಧ ಸಂಗ್ರಹ, ಕಾದಂಬರೀ ಸಂಗ್ರಹ ಇಂತಹ ಹಳೆಗನ್ನಡ ಕಾವ್ಯಗಳನ್ನು ಪಠ್ಯವಾಗಿಡುತ್ತಿದ್ದರು. ಡಿಎಲ್‌ಎನ್, ವಿ.ಸೀ. ಕೆ. ವೆಂಕಟರಾಮಪ್ಪ, ಪರಮೇಶ್ವರಭಟ್ಟ ಇಂತಹ ಶ್ರೇಷ್ಠ ಅಧ್ಯಾಪಕರ ನಡುವೆ ತ.ಸು. ಶಾಮರಾಯರ ಬೋಧನ ಕ್ರಮವೇ ಒಂದು ವಿಶೇಷ. ಕಸವನ್ನು ರಸವಾಗಿಸುವ ಪ್ರತಿಭೆ ಅವರದು. ಇನ್ನು ರಸವತ್ತಾದ ಕಾವ್ಯವೇ ದೊರೆತರೆ ಕೇಳಬೇಕಾದದ್ದೇನು? ನಮಗೆ ಬಿ.ಎಂ.ಶ್ರೀಯವರ 'ಗದಾಯುದ್ಧ ನಾಟಕ' ಪಠ್ಯವಾಗಿತ್ತು. ಅವರ ತರಗತಿಗಾಗಿ ವಿದ್ಯಾರ್ಥಿಗಳು ಬಯಸಿ ಕಾದಿರುತ್ತಿದ್ದರು. ಇತರ ತರಗತಿಯ ಹುಡುಗರೂ ನುಸುಳಿ ಬಂದು ಕೂರುತ್ತಿದ್ದರು. ಯಾರೂ ತುಟಿಪಿಟಿಕ್ ಎನ್ನುತ್ತಿರಲಿಲ್ಲ. ಶಾಮರಾಯರು ಬಂದು ವೇದಿಕೆಯೇರಿ ಪಠ್ಯಭಾಗದ ಸನ್ನಿವೇಶವನ್ನು ನಾಟಕೀಯವಾಗಿ ವಿವರಿಸಿ, "ಕುರುಭೂಭೃದ್ಬಲ ಕೂಲತೂಲಪವನಂ, ಕೌರವ್ಯಗಂಧೇಭ ಕೇಸರಿ...." ಎಂದು

ಪದ್ಯವನ್ನು ಖಚಿತ ಧಾಟಿಯಲ್ಲಿ ಓದಿದರೆಂದರೆ ಅರ್ಥವಾಗದಿದ್ದರೂ ಮಂತ್ರಮುಗ್ಧರಾಗಿ ಅವರ ಬಾಯಿಂದ ಅದರ ವ್ಯಾಖ್ಯಾನವನ್ನು ಎದುರು ನೋಡುತ್ತಾ ಕುಳಿತಿರುತ್ತಿದ್ದರು. ಶಾಮರಾಯರು ಆ ಮಾತುಗಳ ಅರ್ಥಭಾವಗಳನ್ನು ತಾವು ಅನುಭವಿಸಿ, ಅದನ್ನು ಹಾಗೆಯೇ ವಿದ್ಯಾರ್ಥಿಗಳ ಹೃದಯಕ್ಕೆ ಮುಟ್ಟಿಸಿ, ಅದೇ ಅನುಭವ ಅವರಿಗೂ ಆಯಿತೆಂಬುದನ್ನು ಅವರ ಕಣ್ಣಮಿಂಚಿನಲ್ಲಿ ಗುರುತಿಸಿ, ಮತ್ತೆ ಮುಂದುವರಿಯುತ್ತಿದ್ದರು. ರಾತ್ರಿ ನಾವು ಮನೆಯಲ್ಲಿ ತರಗತಿಯ ಪಾಠವನ್ನು ನೆನೆಯುತ್ತಾ ಪದ್ಯಗಳನ್ನು ಓದಿದರೆ ಪದ್ಯಗಳು ಬಾಯಿಗೇ ಬಂದು ಬಿಡುತ್ತಿದ್ದವು. ಅನಂತರದ ದಿನಗಳಲ್ಲಿ ಯಾವ ಹಳಗನ್ನಡ ಕಾವ್ಯವನ್ನೇ ಆಗಲಿ ಲೀಲಾಜಾಲವಾಗಿ ಓದಿ ಅರ್ಥೈಸಿಕೊಳ್ಳುವ ಸಾಮರ್ಥ್ಯ ಬಂದು ಬಿಟ್ಟಿತು.

**ದಯಾರ್ದ್ರ ಹೃದಯಿ :** ಶಾಮರಾಯರನ್ನು ಸದಾ ನೆನೆವಂತೆ ಮಾಡುವ ಮತ್ತೊಂದು ಸಂಗತಿಯೆಂದರೆ ಅವರಲ್ಲಿದ್ದ ಮಾನವ ಸಹಜ ಮಿಡಿತ. ತರಗತಿಯೊಳಗೆ ಶಿಸ್ತಿನ ಸಿಪಾಯಿ ಆಗಿ 'ವಜ್ರಾದಪಿ ಕಠೋರಾಣಿ' ಎಂಬಂತೆ ಇದ್ದರೂ ಹೊರಬಂದೊಡನೆ 'ಮೃದೂನಿ ಕುಸುಮಾದಪಿ' ಆಗುತ್ತಿದ್ದರು. ವಿದ್ಯಾರ್ಥಿಗಳನ್ನು ಕಂಡರೆ ಅದೇನು ಪ್ರೀತಿ, ವಾತ್ಸಲ್ಯ! ಬಡ ವಿದ್ಯಾರ್ಥಿಗಳನ್ನು ಕಂಡರಂತೂ ಎಷ್ಟು ಸಹಾನುಭೂತಿ, ಎಷ್ಟು ಕನಿಕರ! ದಾರಿಯಲ್ಲಿ ಮುದುಡಿ ನಿಂತ ಹುಡುಗನನ್ನು ನೋಡಿದಾಗ "ಯಾಕೊ ಮಗು ಪೆಚ್ಚಾಗಿದೀಯೆ? ಊಟ ಮಾಡಿದೆ ಯೇನೋ?" ಎನ್ನುವರು. ಆತ "ಮಾಡಿದೆ ಸಾರ್" ಎನ್ನುತ್ತಾನೆ. ಇಲ್ಲವೆಂಬುದು ಅವನ ಧ್ವನಿಯಲ್ಲೇ ತಿಳಿಯುತ್ತೆ. "ಬಾ ನನ್ನ ಜೊತೆಯಲ್ಲಿ" ಎಂದು ಮನೆಗೆ ಕರೆದೊಯ್ದು ಮನೆಯಾಕೆಗೆ "ಇವನ್ಗೂ ಒಂದೆಲೆ ಹಾಕು ಉಟಕ್ಕೆ" ಎನ್ನುವರು. ಹಿಂತಿರುಗುವಾಗ ಇನ್ನೊಬ್ಬ ಹುಡುಗ ಕಣ್ಣಿಗೆ ಬೀಳುತ್ತಾನೆ. "ಯಾಕೋ ಮಗು, ನಿನ್ನ ಹೆಸರು ನೋಟಿಸ್ ಬೋರ್ಡ್ ಮೇಲೆ ಬಂದಿದೆಯಂತೆ, ಫೀಸ್ ಕಟ್ಟಲಿಲ್ಲೇನೋ?" ಎಂದು ಕೇಳುವರು. "ಮನಿಯಾರ್ಡರ್ ಬರಬೇಕು. ನಾಳೆ ಕಟ್ತೀನಿ ಸಾರ್" ಎನ್ನುವನು. ಶಾಮರಾಯರು ಜೇಬಿನಿಂದ ಹಣತೆಗೆದು ಅವನ ಕೈಲಿಟ್ಟು "ಈವತ್ತೇ ಕಟ್ಟುಹೋಗು. ಮನಿಯಾರ್ಡರ್ ಬಂದ ಮೇಲೆ ಕೊಡುವೆಯಂತೆ" ಎನ್ನುವರು. ವಿದ್ಯಾರ್ಥಿಗಳ ಕಷ್ಟವನ್ನು ಕಂಡರೆ ತಮ್ಮ ಬಾಲ್ಯದಲ್ಲಿ ಕಂಡುಂಡ ಅನುಭವಗಳು ಅವರ ಹೃದಯವನ್ನು ನೀರಾಗಿಸಿ ಬಿಡುತ್ತಿದ್ದವು.

ನನಗೆ 'ಅನಾಥಾಲಯ'ದಲ್ಲಿ ಪ್ರವೇಶ ಸಿಗಲಿಲ್ಲ. ಕಾಲೇಜು ಹಾಸ್ಟೆಲಿನಲ್ಲಿದ್ದ ನನ್ನ ಸಹಾಧ್ಯಾಯಿಯ ಕೋಣೆಯಲ್ಲಿ ನನ್ನ ಕಂಬಳಿ ದಿಂಬನ್ನು ಸುರುಳಿಸುತ್ತಿ ಅವನ ಮಂಚದಡಿಗೆ ತಳ್ಳಿ ಹಗಲ ಹೊತ್ತನ್ನು ಹೊರಗೇ ಕಳೆಯುತ್ತಿದ್ದೆ. ವಾರದಲ್ಲಿ ನಾಕುದಿನ ಬೇರೆ ಬೇರೆ ಮನೆಗಳಲ್ಲಿ ಎರಡು ಹೊತ್ತು ಊಟ ಗೊತ್ತಾಗಿತ್ತು. ಉಳಿದ ದಿನ ಪಾಡು ಪಡುತ್ತಿದ್ದೆ. ಒಮ್ಮೊಮ್ಮೆ ನನ್ನ ಗೆಳೆಯನೇ ಕಾಸು ಕೊಟ್ಟು ಊಟ ಮಾಡಿ ಬಾ ಎನ್ನುತ್ತಿದ್ದ. ಇದನ್ನು ಹೇಗೋ ಪತ್ತೆ ಹಚ್ಚಿದ ಶಾಮರಾಯರು ಒಂದು ದಿನ ನನ್ನನ್ನು ಮನೆಗೆ ಕರೆದೊಯ್ದು ಊಟ ಮಾಡಿಸಿ "ನೋಡು ಮಗು, ನಿನಗೆ ಹೊರಗೆ ಊಟಕ್ಕೆ ಏರ್ಪಾಟಾಗುವ ವರೆಗೆ ನಮ್ಮ ಮನೆಯಲ್ಲೇ ಊಟ ಮಾಡಿಕೊಂಡು ಹೋಗು" ಎಂದು ಹೇಳಿ, ಬಿಡುವಿನ ಸಮಯದಲ್ಲಿ 'ಭಗಿನೀ ಸೇವಾ ಸಮಾಜ'ದಲ್ಲಿ ಪರೀಕ್ಷೆಗೆ ಕೂರುವ ಮಹಿಳೆಯರಿಗೆ ಕನ್ನಡ ಪಾಠ ಹೇಳುವ ಕೆಲಸವನ್ನು

ಕೊಡಿಸಿ ನನಗೆ ಸ್ವಾವಲಂಬನೆಯ ಪಾಠ ಕಲಿಸಿದರು. ಅಂದಿನಿಂದ ಅವರ ಕುಟುಂಬದಲ್ಲಿ ನಾನು ಒಬ್ಬನಾದೆ.

**ಶಿಷ್ಯವತ್ಸಲ :** ಹೀಗೆ ಅವರು ಎಷ್ಟು ಜನ ವಿದ್ಯಾರ್ಥಿಗಳಿಗೆ ಅನ್ನವಿಟ್ಟಿದ್ದಾರೋ, ಫೀಸು ಕಟ್ಟಿದ್ದಾರೋ, ಖರ್ಚಿಗೆ ದುಡ್ಡೇ ಕೊಟ್ಟಿದ್ದಾರೋ ಅವರಿಗಂತೂ ನೆನಪಿರಲಾರದು. ಆದರೆ ಆ ಸಹಾಯ ಪಡೆದವರು ಸಾಯುವವರೆಗೂ ಮರೆಯುವಂತಿಲ್ಲ. ವಿದ್ಯಾರ್ಥಿಗಳೆ ತಮ್ಮ ಸಂಪತ್ತು ಎನ್ನುತ್ತಿದ್ದರು. ವಿದ್ಯಾರ್ಥಿಗಳ ತಪ್ಪನ್ನು ನೋಡಿ ಹೇಗೆ ಮರುಗುತ್ತಿದ್ದರೋ, ಅವರ ಅಭ್ಯುದಯ ವನ್ನು ನೋಡಿ ಹಾಗೆಯೇ ಅಭಿಮಾನದಿಂದ ಹಿಗ್ಗುತ್ತಿದ್ದರು. ವಾಲ್ಮೀಕಿ ರಾಮಾಯಣದಲ್ಲಿ ರಾಜನಾದ ರಾಮನ ಸ್ವಭಾವವನ್ನು ವರ್ಣಿಸುತ್ತಾ ಕವಿ ಹೀಗೆನ್ನುತ್ತಾನೆ.

> **ಪ್ರಜಾನಾಂ ವಿನಯಾದಾನಾತ್ ರಕ್ಷಣಾತ್ ಭರಣಾದಪಿ ।**
> **ಸ ಪಿತಾ ಪಿತರಸ್ತಾಸಾಂ ಕೇವಲಂ ಜನ್ಮಹೇತವಃ ॥**
> **ವ್ಯಸನೇಷು ಚ ಸರ್ವೇಷು ಭೃಶಂ ಭವತಿ ದುಃಖಿತಃ ।**
> **ಉತ್ಸವೇಷು ಚ ಸರ್ವೇಷು ಪಿತೇವ ಪರಿತುಷ್ಯತಿ ॥**

ಪ್ರಜೆಗಳನ್ನು ವಿನಯದಿಂದ ಕಾಣುವಲ್ಲಿ, ರಕ್ಷಿಸುವಲ್ಲಿ, ಪೋಷಿಸುವಲ್ಲಿ ರಾಮನೇ ಅವರಿಗೆ ತಂದೆ. ಅವರನ್ನು ಹೆತ್ತ ತಂದೆ ತಾಯಿಗಳು? ಹೆತ್ತದ್ದರಿಂದ ತಂದೆ ತಾಯಿಗಳಷ್ಟೇ, ಪ್ರಜೆಗಳಿಗೆ ಕಷ್ಟ ಬಂದರೆ ರಾಮನಿಗೆ ತಡೆಯಲಾರದ ದುಃಖ, ಅವರಿಗೆ ಒಳ್ಳೆಯದಾದರೆ ಮಕ್ಕಳ ಅಭ್ಯುದಯವನ್ನು ಕಂಡ ತಂದೆಯಂತೆ ಸಂತೋಷ. ವಿದ್ಯಾರ್ಥಿಗಳ ವಿಷಯದಲ್ಲಿ ಶಾಮರಾಯರಿದ್ದುದೂ ಹೀಗೆಯೇ.

ಅವರ ಶಿಷ್ಯರಾದ ಜಿ.ಎಸ್.ಎಸ್., ಹಾ.ಮಾ.ನಾ., ಸಿ.ಪಿ.ಕೆ., ಪ್ರಭುಶಂಕರ, ಚಿದಾನಂದಮೂರ್ತಿ, ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ, ಹಂಪನಾ, ಕಮಲಾ ಹಂಪನಾ, ಸಾ.ಶಿ. ಮರುಳಯ್ಯ, ಬಸವಾರಾಧ್ಯ, ಆ.ರಾ. ಮಿತ್ರ, ಟಿ.ವಿ. ವೆಂಕಟಾಚಲಶಾಸ್ತ್ರೀ (ಹೆಸರು ಹೇಳುತ್ತ ಹೋದರೆ ಸ್ಥಳವೇ ಸಾಕಾಗುವುದಿಲ್ಲ) ಒಬ್ಬೊಬ್ಬರೂ ನಾನಾ ಸಾಹಿತ್ಯ ಕ್ಷೇತ್ರಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಸಮಾಜದಲ್ಲಿ ಸ್ಥಾನಮಾನ ಗೌರವಗಳನ್ನು ಪಡೆದಾಗ ಅವರು ಎಷ್ಟು ಹೆಮ್ಮೆ ಪಟ್ಟುಕೊಂಡಿದ್ದರೋ! ಅವರು ತೀರಿಕೊಂಡ ಹೊಸದರಲ್ಲಿ ಜಿ.ಎಸ್.ಎಸ್. ರವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ, ಅವರನ್ನು ಅಭಿನಂದಿಸಲೆಂದು ಅವರ ಮನೆಗೆ ಹೋಗಿದ್ದೆ. ಆಗ ಪ್ರಾಸಂಗಿಕವಾಗಿ "ಈಗ ತ.ಸು. ಶಾಮರಾಯರಿದ್ದಿದ್ದರೆ ಎಷ್ಟು ಸಂತೋಷಪಡುತ್ತಿದ್ದರೋ" ಎಂದು ನೆನೆದೆವು.

ಅವರ ಶಿಷ್ಯರೂಗಳೂ ಸಹ, ಯಾವ ಕ್ಷೇತ್ರದಲ್ಲೇ ಇರಲಿ, ತಮ್ಮ ಗುರುವನ್ನು ಎಂದೂ ಮರೆತವರಲ್ಲ. ಜಿಲ್ಲಾಧಿಕಾರಿಗಳಾಗಿದ್ದ ಆರ್ಯಮಿತ್ರ ತುಮಕೂರಿಗೆ ವರ್ಗವಾಗಿ ಬಂದರು. ತಮ್ಮ ಸಿಬ್ಬಂದಿಯಿಂದ ಪ್ರಾಸಂಗಿಕವಾಗಿ ಶಾಮರಾಯರು ಸಮೀಪದ ಗುಬ್ಬಿಯ ಆಶ್ರಮದಲ್ಲಿ ಇರುವ ಸಂಗತಿ ತಿಳಿಯಿತು. ತತ್‌ಕ್ಷಣ ಜೀಪಿನಲ್ಲಿ ಹೋಗಿ ಗುರುವಿನ ಪಾದಕ್ಕೆ ವಂದಿಸಿದರು. ಬಹುಕಾಲದ

ಮೇಲೆ ಭೇಟಿಯಾದ ಅಪ್ಪಮಕ್ಕಳಂತೆ ಪರಸ್ಪರ ಸಂತೋಷಿಸಿದರು. ರಾಮಕೃಷ್ಣ ಹೆಗಡೆಯವರ ಮಂತ್ರಿಮಂಡಲದಲ್ಲಿದ್ದ ನಜೀರ್ ಸಾಬ್ ತಾವು ಅಧಿಕಾರವಹಿಸಿಕೊಂಡೊಡನೆ ಶಾಮರಾಯರಿದ್ದಲ್ಲಿಗೆ ಧಾವಿಸಿ "ನಿಮ್ಮ ಕೃಪೆಯಿಂದ ಮಂತ್ರಿಯಾದೆ, ಆಶೀರ್ವಾದ ಮಾಡಿ ಸಾರ್" ಎಂದು ಕಾಲಿಗೆರಗಿದರು. ಅವರನ್ನು ಹಿಡಿದೆತ್ತಿ ಶಾಮರಾಯರು "ಮಗು, ನಿನಗೆ ಈವತ್ತು ಆಶೀರ್ವಾದ ಮಾಡಬೇಕೇನೋ? ನಿನ್ನ ಅಧಿಕಾರ ನಡೆಯುವಾಗ ನಾಲ್ಕು ಜನರಿಗೆ ಉಪಕಾರದ ಕೆಲಸ ಮಾಡು" ಎಂದು ಬೆನ್ನು ಚಪ್ಪರಿಸಿದರು. ಅದಾದ ನಂತರ, ಕುಡಿವ ನೀರಿಗೆ ಹಾಹಾಕಾರವಿದ್ದ ಹಳ್ಳಿ ಹಳ್ಳಿಗಳಲ್ಲಿ ಕೊಳವೆ ಬಾವಿ ತೋಡಿಸಿ ಎಲ್ಲೆಲ್ಲೂ ನೀರು ಹರಿಸಿ ನಜೀರ್ ಸಾಬ್ 'ನೀರ್ ಸಾಬ್' ಎಂದು ಪ್ರಖ್ಯಾತರಾದದ್ದು ಇತಿಹಾಸ. ಒಮ್ಮೆ ಮೈಸೂರು. ಟೌನ್ ಹಾಲ್‌ನಲ್ಲಿ, ತುಂಬಿದ ಸಭೆಯಲ್ಲಿ ವೇದಿಕೆಯ ಮೆಲೆ ವಿರಾಜಮಾನರಾಗಿದ್ದ, ಮುಖ್ಯಮಂತ್ರಿ ಬಂಗಾರಪ್ಪ, ಬಾಗಿಲಲ್ಲಿ ಆಗಮಿಸಿದ ಶಾಮರಾಯರನ್ನು ಕಂಡೊಡನೆ ವೇದಿಕೆಯಿಂದ ಇಳಿದುಬಂದು ಅವರ ಕಾಲಿಗೆರಗಿದರು. ವೃದ್ಧಾಪ್ಯದಿಂದ ಕಣ್ಣುಮಂಜಾಗಿದ್ದ ಶಾಮರಾಯರು ಅವರನ್ನು ಹಿಡಿದೆತ್ತಿ, ವಾತ್ಸಲ್ಯದಿಂದ ಬೆನ್ನು ಸವರುತ್ತಾ "ಯಾರೋ ಮಗು ನೀನು?" ಎಂದರು. "ನಾನು ಸಾರ್ ಬಂಗಾರಪ್ಪ." ಆಗ ಶಾಮರಾಯರು "ನನ್ನ ಶಿಷ್ಯರು ನಾನಾ ಕ್ಷೇತ್ರಗಳಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ. ಎಂಎಲ್.ಎ, ಎಂ.ಪಿ. ಮಂತ್ರಿ ಎಲ್ಲ ಆಗಿದ್ದಾರೆ. ಮುಖ್ಯಮಂತ್ರಿ ಆಗಿರಲಿಲ್ಲ. ಈಗ ಮುಖ್ಯಮಂತ್ರಿಯೂ ಆದ" ಎಂದು ಹಿಗ್ಗಿ ಅವರನ್ನು ಗಾಢವಾಗಿ ತಬ್ಬಿಕೊಂಡರು.

ತ.ಸು. ಶಾಮರಾಯರ ಶಿಷ್ಯವಾತ್ಸಲ್ಯ ಎಷ್ಟು ದೂರದವರೆಗೆ ಹೋಗುತ್ತಿತ್ತೆಂಬುದಕ್ಕೆ ಸ್ವಂತ ನಿದರ್ಶನವನ್ನು ಕೊಟ್ಟರೆ ತಪ್ಪಾಗಲಾರದು. ಮೈಸೂರಿನಲ್ಲಿ ನಮ್ಮ ತಂದೆ ತೀರಿಕೊಂಡ ಸಂದರ್ಭ. ವಿಷಯ ತಿಳಿದು ಹಾಸನದಿಂದ ಮೈಸೂರಿಗೆ ಬಂದೆ. ಆಗಲೇ ಕತ್ತಲಾಗಿಬಿಟ್ಟಿತ್ತು. ನಮ್ಮ ಅಣ್ಣ ಪುರೋಹಿತರು ಮತ್ತಿತರ ಪರಿಕರಗಳಿಗಾಗಿ ಪರದಾಡುತ್ತಿದ್ದರು. ನಾನು ನೇರವಾಗಿ ಶಾಮರಾಯರಲ್ಲಿಗೆ ಹೋದೆ. ಮನೆಯಲ್ಲಿದ್ದರು. ವಿಷಯ ತಿಳಿಸಿದೆ. ಅಂಗವಸ್ತ್ರವನ್ನು ಭುಜದ ಮೇಲೆ ಹಾಕಿಕೊಂಡು 'ಬಾ ಹೋಗೋಣ' ಎಂದು ನನ್ನೊಡನೆ ಹೊರಟೇಬಿಟ್ಟರು. ಶವವನ್ನು ಶ್ಮಶಾನಯಾತ್ರೆಗೆ ಸಜ್ಜುಗೊಳಿಸುವ ವೇಳೆಗೆ ರಾತ್ರಿ ೧೦ ಗಂಟೆಯಾಗಿತ್ತು. ಬೆಳದಿಂಗಳಿದ್ದುದೇ ನಮ್ಮ ಭಾಗ್ಯ. ಚಟ್ಟ ಹೊರುವಾಗ ಒಂದು ಮೂಲೆಗೆ ಶಾಮರಾಯರೂ ಹೆಗಲು ಕೊಟ್ಟರು. ಉತ್ತರ ಕ್ರಿಯೆಗಳೆಲ್ಲಾ ಮುಗಿದು ದಹನ ಕ್ರಿಯೆ ಪ್ರಾರಂಭವಾಗಿ ಸಚೇಲ ಸ್ನಾನ ಮಾಡಿ ಚಾಮುಂಡಿಪುರದಲ್ಲಿದ್ದ ನಮ್ಮ ಮನೆಯ ಬಳಿಗೆ ಬರುವ ವೇಳೆಗೆ ರಾತ್ರಿ ೨ ಗಂಟೆ. ಆ ಅವೇಳೆಯಲ್ಲಿ, ಉಟ್ಟಿದ್ದ ಒದ್ದೆಯಲ್ಲಿ ಶಾಮರಾಯರು ಒಬ್ಬರೇ ಕೃಷ್ಣಮೂರ್ತಿಪುರಂನಲ್ಲಿದ್ದ ತಮ್ಮ ಮನೆಗೆ ನಡೆದುಹೋದರು.

ಇಂತಹ ಗುರುವನ್ನು ಮರೆಯುವುದಾದರೂ ಹೇಗೆ?

❖

# ನನ್ನ ಪ್ರಿಯ ಗುರುಗಳು

**(ಪ್ರೊ॥ ವೆಂಕಟರಾಮಪ್ಪ)**

*• ಪ್ರೊ॥ ಎಚ್.ಎಸ್. ಹರಿಶಂಕರ್*

**ಪ್ರೊ॥** ವೆಂಕಟರಾಮಪ್ಪನವರು ಹಳೆಯ ತಲೆಮಾರಿನ ಮರೆಯಲಾಗದ ವ್ಯಕ್ತಿ. ಅವರು ನನ್ನ ಗುರುಗಳಷ್ಟೆ ಅಲ್ಲ ನಮ್ಮ ತಂದೆಯವರಿಗೂ ಗುರುಗಳಾಗಿದ್ದವರು. ನಾನು ಎಂ.ಎ. ತರಗತಿಗೆ ೧೯೬೧ರಲ್ಲಿ ಸೇರಿಕೊಂಡಾಗ ಅದೇ ವರ್ಷ ಅವರು ನಿವೃತ್ತರಾದರು. ಆದರೆ ನಾನು ಇಂಟರ್ ಮಿಡಿಯಟ್ ತರಗತಿಯಲ್ಲಿ ಓದುತ್ತಿದ್ದಾಗಲೇ ಅವರಲ್ಲಿ ಹೋಗಿ ಬರುವ ಬಳಕೆಯಿತ್ತು. ಹಾಗಾಗಿ ನಮ್ಮ ತಂದೆಯವರ ಆಣತಿಯಂತೆ ಸಂಜೆ ಹೊತ್ತು, ಸುಮಾರು ನಾಲ್ಕೂವರೆಯಿಂದ ಐದೂವರೆವರೆಗೆ, ಅವರ ಮನೆಗೆ ಹೋಗಿ ಕನ್ನಡ ಪಾಠಗಳನ್ನು ಕಲಿಯುತ್ತಿದ್ದೆ. ಕನ್ನಡ ಹೇಳಿಕೊಡುವ ನೆವದಲ್ಲಿ ಅವರು ಸಾಮಾನ್ಯ ಜ್ಞಾನ ಕುರಿತಂತೆ ಅದೆಷ್ಟೊ ವಿಷಯಗಳನ್ನು ತಿಳಿಸುತ್ತಿದ್ದರು. ಆಗ ಅವರು ನಮ್ಮ ಮನೆಯಿಂದ ಸುಮಾರು ಎರಡು ಫರ್ಲಾಂಗ್‌ಗಳಷ್ಟು ದೂರದಲ್ಲಿ ಜಯನಗರದ ರೈಲ್ವೆ ಹಳಿಯ ಸಮೀಪದಲ್ಲಿ, ಕೃಷ್ಣಮೂರ್ತಿಪುರದಲ್ಲಿ, ಬಾಡಿಗೆ ಮನೆಯಲ್ಲಿದ್ದರು ಕುಮಾರವ್ಯಾಸ ಭಾರತದ ಕೆಲವು ಪರ್ವಗಳನ್ನು, ಶಬ್ದಮಣಿದರ್ಪಣವನ್ನು ನನಗೆ ಪಾಠ ಹೇಳಿ ಸಾಹಿತ್ಯ ಮತ್ತು ವ್ಯಾಕರಣಗಳೆರಡರಲ್ಲೂ ಅಕ್ಕರೆಯನ್ನು ಮೂಡಿಸಿದ್ದರು.

ನಮ್ಮ ತಂದೆಯವರಿಗೂ ಪ್ರೊಫೆಸರ್ ವೆಂಕಟರಾಮಪ್ಪನವರಿಗೂ ಗುರು ಶಿಷ್ಯ ಸಂಬಂಧ ಕ್ಕಿಂತಲೂ ಹೆಚ್ಚಿನ ಸಂಬಂಧವಿತ್ತು. ನಮ್ಮ ತಂದೆ ಬಿ.ಎ. ಮತ್ತು ಎಂ.ಎ. ತರಗತಿಗಳಲ್ಲಿ ಓದುತ್ತಿದ್ದಾಗ ಪ್ರೊ॥ ವೆಂಕಟರಾಮಪ್ಪನವರ ಮನೆಗೆ, ಪ್ರೊ॥ ಟಿ.ಎಸ್. ವೆಂಕಣ್ಣಯ್ಯನವರ ಮನೆಗೆ, ಪ್ರೊಫೆಸರ್ ಎ.ಎನ್. ನರಸಿಂಹಯ್ಯ ಮುಂತಾದ ಘನ ವಿದ್ವಾಂಸರ ಮನೆಗೆ ವಾರಾನ್ನಕ್ಕಾಗಿ ಹೋಗುತ್ತಿದ್ದರು. ತಮಗೆ ಅನ್ನವಿಟ್ಟ ಎಲ್ಲ ಹಿರಿಯ ಗುರುಗಳನ್ನು ಮಿತ್ರರನ್ನು ನಮ್ಮ ತಂದೆಯವರು ಯಾವಾಗಲೂ ಸ್ಮರಿಸುತ್ತಿದ್ದರು.

ಪ್ರೊಫೆಸರ್ ವೆಂಕಟರಾಮಪ್ಪನವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲಬಾರಿಗೆ ಕನ್ನಡ ಎಂ.ಎ. ತರಗತಿಗಳು ಆರಂಭವಾದಾಗ ಅದರ ಮೊದಲ ತಂಡದ ವಿದ್ಯಾರ್ಥಿಗಳಲ್ಲಿ ಒಬ್ಬರಾಗಿದ್ದರು. ಶ್ರೀ ಕೆ.ವಿ. ಪುಟ್ಟಪ್ಪ (ಕುವೆಂಪು), ಶ್ರೀ ಡಿ.ಎಲ್.ನರಸಿಂಹಾಚಾರ್, ಶ್ರೀ ಎನ್. ಅನಂತರಂಗಾಚಾರ್, ಶ್ರೀ ಡಿ.ಕೆ. ಭೀಮಸೇನರಾವ್ ಮೊದಲಾದವರೊಂದಿಗೆ ಪ್ರಥಮ ತಂಡದಲ್ಲೊಬ್ಬರಾಗಿ ಎಂ.ಎ. ಪದವಿಯಲ್ಲಿ ತೇರ್ಗಡೆಹೊಂದಿದ್ದರು. ಶ್ರೀ ಬಿ.ಎಂ. ಶ್ರೀಕಂಠಯ್ಯ (ಗೌರವ ಕನ್ನಡ ಪ್ರಾಧ್ಯಾಪಕರು) ಶ್ರೀ ಎ.ಆರ್. ಕೃಷ್ಣಶಾಸ್ತ್ರೀ ಮತ್ತು ಶ್ರೀ ಟಿ.ಎಸ್. ವೆಂಕಣ್ಣಯ್ಯ ನವರು ಇವರ ಗುರುಗಳು.

ಶ್ರೀ ವೆಂಕಟರಾಮಪ್ಪನವರು ಪ್ರತಿದಿನವೂ ನಮ್ಮ ಮನೆಗೆ ಬರುತ್ತಿದ್ದರು. ನಮ್ಮ ಮನೆಯ ಗೇಟಿನ ಸಮೀಪಬರುತ್ತಿದ್ದಂತೆಯೇ 'ಏನು ಮಾಡುತ್ತಿದ್ದಾರೆ ರಾಯರು? ಏನು ಸಮಯ?' ಎಂದು ಹೇಳುತ್ತಲೇ ಒಳಗೆ ಕಾಲಿಡುತ್ತಿದ್ದರು. ನಮ್ಮ ತಂದೆಯವರು ಗೌರವದಿಂದ ಅವರನ್ನು ಬರಮಾಡಿಕೊಳ್ಳುತ್ತಿದ್ದರು. ಪ್ರತಿದಿನವೂ ಕಾಫಿಸೇವನೆ ಇದ್ದೇ ಇರುತ್ತಿತ್ತು. ಎಷ್ಟೋ ದಿವಸ ಅವರು ರಾತ್ರಿಯಲ್ಲೂ, ಊಟವಾದ ಮೇಲೆ, ಮನೆಗೆ ಬರುತ್ತಿದ್ದರು. ಪ್ರೊಫೆಸರ್ ಎಸ್.ವಿ. ಪರಮೇಶ್ವರಭಟ್ಟರು ಹೀಗೆ ಹೇಳುತ್ತಾರೆ. "ಮೈಸೂರಿನಲ್ಲಿ ಇದ್ದ ದಿನಗಳಲ್ಲೆಲ್ಲ ನಾನು ಶಂಕರನಾರಾಯಣ ನಡೆಸುತ್ತಿದ್ದ ಇರುಳು ಓಲಗದ ಒಬ್ಬ ಸದಸ್ಯ. ಪ್ರಾಧ್ಯಾಪಕ ರಂಗಣ್ಣನವರೋ, ಗುರುವರ್ಯ ವೆಂಕಟರಾಮಪ್ಪನವರೋ, ನಾನೋ, ಎಸ್.ಎನ್. ಶಂಕರ್ ಅವರೊ, ಮತ್ತಾರೋ ಸಭೆಯಲ್ಲಿ ಉಪಸ್ಥಿತರಿರುತ್ತಿದ್ದರು. ಆ ಸಭೆಯಲ್ಲಿ ನಮ್ಮ ಶಂಕರನ ವಿಚಾರ ಲಹರಿ ಹರಿದು ಬರುವ ಸೊಗಸು ಬಣ್ಣನೆಗೆ ಅತೀತವಾದದ್ದು ಈ ಸಭೆ ಅರ್ಧತಾಸು, ಒಂದು ತಾಸು ನಡೆವುದುಂಟು. ನಾವು ಅಲ್ಲಿ ಪ್ರೊ. ರಂಗಣ್ಣನವರ ಪ್ರೊ. ವೆಂಕಟರಾಮಪ್ಪನವರ ವಿಚಾರ ಲಹರಿಗಳಲ್ಲಿ ನಮ್ಮ ಹಳ್ಳಕೊಳ್ಳಗಳನ್ನು ಕೂಡಿಸಿ, ಆ ಜ್ಞಾನ ಸಂಗಮದ ರಸ ನಿಮಿಷದಲ್ಲಿ ಧನ್ಯತೆಯ ಭಾವಕ್ಕೆ ನಲಿದದ್ದುಂಟು? ಪ್ರೊ. ಪರಮೇಶ್ವರಭಟ್ಟರ ನುಡಿ ಸಂಪೂರ್ಣವಾಗಿ ಸತ್ಯ. ಪ್ರೊ. ವೆಂಕಟರಾಮಪ್ಪನವರ ವಾಗ್ವೈಖರಿ ಅಂಥದು. ಅವರು ಯಾವ ಸಭೆ ಸಮಾರಂಭಗಳಿಗೆ ಹೋಗಲಿ ಅವರು ತಮ್ಮ ಮಾತಿನ ಶೈಲಿಯಿಂದ ಸಭಿಕರನ್ನು ಮುಗ್ಧಗೊಳಿಸುತ್ತಿದ್ದರು. ಅವರು ಹೇಳುವ ವಿಷಯ ಚಿಕ್ಕದಾಗಿದ್ದರೂ ಅದನ್ನು ರಸವತ್ತಾಗಿ ವರ್ಣಿಸುತ್ತ, ನಡುನಡುವೆ ಹುಬ್ಬು ಕುಣಿಸುತ್ತ, ಕೈಗಳಿಂದ ಅಭಿನಯಿಸುತ್ತ ಎಲ್ಲರನ್ನೂ ತಮ್ಮತ್ತ ಸೆಳೆದುಕೊಳ್ಳುತ್ತಿದ್ದರು. ಈಗೀಗ ಟಿ.ವಿ.ಗಳಲ್ಲಿ ಮತ್ತಿತರ ಹಾಸ್ಯ ಸಂಜೆಗಳಲ್ಲಿ ಹಾಸ್ಯದ ಕಾರ್ಯಕ್ರಮ ನೀಡುವ ಒಂದು ವ್ಯವಸ್ಥಿತ ಕೆಲಸ ನಡೆದು ಬರುತ್ತಿದೆ. ಆದರೆ ೬೦ರ ದಶಕಗಳಲ್ಲಿ ಶ್ರೀ ವೆಂಕಟರಾಮಪ್ಪನವರು, ಶ್ರೀ ಎಸ್.ವಿ. ಪರಮೇಶ್ವರಭಟ್ಟರು ಮತ್ತು ಡಾ॥ ಪ್ರಭುಶಂಕರ ಅವರು ಸೇರಿ ಮಾನಸಗಂಗೋತ್ರಿಯ ಸಭಾಂಗಣದಲ್ಲೊ, ಮಹಾರಾಜರವರ ಶತಮಾನ ಭವನದಲ್ಲೊ ಹಾಸ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿದಾಗಲೆಲ್ಲ ಉಪಾಧ್ಯಾಯರ ವಿದ್ಯಾರ್ಥಿಗಳ ಮತ್ತು ಸಾರ್ವಜನಿಕರ ಮೆಚ್ಚುಗೆ ನಿರಂತರವಾಗಿ ಸಿಕ್ಕುತ್ತಿತ್ತು. ಈ ತ್ರಿಮೂರ್ತಿಗಳ ಹಾಸ್ಯ ಕಾರ್ಯಕ್ರಮ ಎಂದೂ ಸಭ್ಯತೆಯ ಗಡಿ ಮೀರುತ್ತಿರಲಿಲ್ಲ. ಅಶ್ಲೀಲತೆ ಇಣುಕುತ್ತಿರಲಿಲ್ಲ. ನಮ್ಮ ಉಸಿರಾಟದಷ್ಟೇ ಸಹಜವಾಗಿ ಇವರ ಹಾಸ್ಯ ಕಾರ್ಯಕ್ರಮ ಮೂಡಿ ಬರುತ್ತಿತ್ತು. ಅದು ಎಂದಿಗೂ ಹಾಸ್ಯಾಸ್ಪದವಾಗಲಿಲ್ಲ. ತಮ್ಮ ಗುರುಪಟ್ಟದ ಗೌರವ ಘನತೆಗಳಿಗೆ ಈ ಮೂವರು ಎಂದಿಗೂ ಭಂಗವುಂಟುಮಾಡಲಿಲ್ಲ.

ಪ್ರೊ॥ ವೆಂಕಟರಾಮಪ್ಪನವರಿಗೆ ಮಂಡಿನೋವು ಮಧ್ಯವಯಸ್ಕರಾಗಿದ್ದಾಗಲೇ ಬಂತೆಂದು ತೋರುತ್ತದೆ. ಹಾಗಾಗಿ ಸ್ವಲ್ಪಕಾಲು ಎಳೆದುಹಾಕುತ್ತಿದ್ದರು. ಆದರೆ ಕುಂಟರಂತಲ್ಲ. ಒಂದು ದಿನ ಹೀಗೆ ಒಂದು ಸಂದರ್ಭ ನಡೆಯಿತು. ಕೆಲವು ದಿನ ಹಂಗಾಮಿ ಪ್ರಿನ್ಸಿಪಾಲ್ ಹುದ್ದೆಯಲ್ಲಿ ಪರ್ಷಿಯನ್ ಭಾಷೆಯಲ್ಲಿ ಪ್ರಾಧ್ಯಾಪಕರಾಗಿದ್ದ ಡಾ॥ ಕಿಸರ್ ಅಲಿಖಾನ್ ಎಂಬುವರು ಕಾರ್ಯನಿರ್ವಹಿಸುತ್ತಿದ್ದರು. ಅವರು ಯಾವಾಗಲೂ ಬಾಯಲ್ಲಿ ಚುಟ್ಟಾ ಇಟ್ಟುಕೊಂಡಿರುತ್ತಿದ್ದರು. ಆ ದಿನ ಅವರು ಮನೆಯಿಂದ ಬಂದು ಕಾರಿನಿಂದ ಇಳಿದರು. ಸುತ್ತಲೂ ಕಣ್ಣುಹಾಯಿಸಿದಾಗ

ಸ್ವಲ್ಪ ದೂರದಲ್ಲಿ ಪ್ರೊ॥ ವೆಂಕಟರಾಮಪ್ಪನವರು ನಡೆದುಬರುತ್ತಿದ್ದುದ್ದು ಕಾಣಿಸಿತು. ಖಾನ್ ಸಾಹೇಬರು ಸುಮ್ಮನೆ ತಮ್ಮ ಕಚೇರಿಗೆ ಹೋಗಬಹುದಾಗಿತ್ತು. ಆದರೆ ತಮಗೆ ದೊರೆತಿದ್ದ ಹಂಗಾಮಿ ಪ್ರಿನ್ಸಿಪಾಲ್ ಹುದ್ದೆ ಅವರಲ್ಲಿ ಅತೀವ ಸಂತೋಷವನ್ನು ತಂದಿದ್ದೀರಬೇಕು. ಅವರ ಬರುವಿಕೆಗಾಗಿ ಕಾದಿದ್ದು ಒಡನೆಯ 'what Mr. Venkataramappa, it seems your left leg is shorter than your right leg' ಎಂದು ಛೇಡಿಸಿದರು. ಪ್ರೊ॥ ವೆಂಕಟರಾಮಪ್ಪನವರದ್ದು ಯಾವಾಗಲೂ ಹರಿತ ಬುದ್ಧಿ ಒಡನೆಯೆ 'No, no, Mr. Khisarali khan, you are wrong My right leg is longer tham the left' ಎಂದು ಹಾಸ್ಯವಾಗಿ ನುಡಿದು ಅವರನ್ನು ಲಕ್ಷಿಸದೆಯೇ ಮುಂದೆ ಸಾಗಿದರು. ಆದರೆ ಖಾನ್ ಸಾಹೇಬರಿಗೆ ಬದಲು ಉತ್ತರಿಸಲು ಸಾಧ್ಯವಾಗದೆ ಪೆಚ್ಚಾದರು ಸುತ್ತಲು ಇದ್ದ ನಾಲ್ಕಾರು ಮಂದಿ ಇತರ ಪ್ರಾಧ್ಯಾಪಕರು ಮುಸಿಮುಸಿ ನಕ್ಕರು.

ನಮ್ಮ ಗುರುಗಳು ನಿವೃತ್ತರಾದ ಮೇಲೆ ನಮ್ಮ ತಂದೆಯವರ ಪ್ರಾರ್ಥನೆಯ ಮೇರೆಗೆ ಎರಡು ವರ್ಷಗಳ ಕಾಲ ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಆಗಂತೂ ದಿನನಿತ್ಯವೂ ಕಾಲೇಜು ಮುಗಿಸಿಕೊಂಡು ನಮ್ಮ ಮನೆಯಲ್ಲಿ ಸ್ವಲ್ಪ ಕಾಲ ವಿಶ್ರಮಿಸಿ ಕಾಫಿ ಕುಡಿದು ಹೋಗುತ್ತಿದ್ದರು. ಅಲ್ಲಿಂದ ವಿಶ್ರಾಂತರಾದ ಮೇಲೂ ಸಂಜೆಯ ಹೊತ್ತು ನಮ್ಮ ಮನೆಯ ಅಂಗಳದಲ್ಲಿ ಸೇರುತ್ತಿದ್ದ ಸಭೆಗೆ ಇವರು ಬರುವುದು ಸಹಜದ ಮಾತಾಗಿತ್ತು ಆ ಸಭೆಯಲ್ಲಿರುತ್ತಿದ್ದ ವ್ಯಕ್ತಿಗಳೆಲ್ಲ ನಿವೃತ್ತರಾದವರೇ ನಮ್ಮ ತಂದೆಯವರೂ ಆಗಷ್ಟೇ ನಿವೃತ್ತರಾಗಿದ್ದರು. ಆ ಸಂಜೆಯ ಗೋಷ್ಠಿಯಲ್ಲಿ ಯಾವಾಗಲೂ ಹಾಸ್ಯದ ಮಾತುಗಳು ಕೇಳಿಬರುತ್ತಿದ್ದವು.

ಒಂದು ದಿನ ಹೀಗೆ ಸಂಜೆಯ ಗೋಷ್ಠಿ ಸೇರಿದೆ. ಆಗಿನ ಒಬ್ಬರು ತಮಾಷೆಗಾಗಿ ಯಾವುದೋ ಪ್ರಸಂಗವನ್ನೆತ್ತಿಕೊಂಡು ಲೇವಡಿ ಮಾಡಿದರು. ಡಾ॥ ಡಿ.ವಿ. ಗುಂಡಪ್ಪನವರು ತಮ್ಮ 'ಜ್ಞಾಪಕ ಚಿತ್ರಶಾಲೆ'ಯ ಸಂಪುಟಗಳೊಂದರಲ್ಲಿ ಒಂದು ಪ್ರಸಂಗವನ್ನು ದಾಖಲಿಸಿದ್ದಾರೆ. ತ್ರಿಮತಸ್ಥ ಬ್ರಾಹ್ಮಣರಲ್ಲಿ ಒಂದೊಂದು ಮತಕ್ಕೂ ಒಬ್ಬೊಬ್ಬ ಆಚಾರ್ಯರಿದ್ದು ಅವರು ಪರಮಪೂಜ್ಯರಾಗಿರುವರು ತಾನೆ. ಆದರೆ ಆ ಆಚಾರ್ಯರ ಶಿಷ್ಯರಲ್ಲಿ ಒಬ್ಬರಿಗೆ ಮತ್ತೊಬ್ಬರ ಮತ ಕಂಡರಾಗದು. ಇಂಥವರ ದೃಷ್ಟಿ ಯಾವಾಗಲೂ ಸಂಕುಚಿತವಾಗಿದ್ದು ಇಂಥವರಿಂದ ಆಯಾ ಮತದ ಹಿರಿಯರ ಮಾನಮಾರ್ಯಾದೆಗಳಿಗೆ ಆಗಾಗ ಕುಂದುಂಟಾಗುವುದು. ದುರದೃಷ್ಟದ ಸಂಗತಿ. ಒಂದು ಮತಕ್ಕೆ ಸೇರಿದ ಆಚಾರ್ಯರೊಬ್ಬರು ಮತ್ತೊಂದು ಮತಕ್ಕೆ ಸೇರಿದವನೊಬ್ಬನನ್ನು, 'ಎದ್ದೆದ್ದು ಒದ್ದರಂತೆ'. ಈ ಪ್ರಸಂಗವನ್ನು ಗೋಷ್ಠಿಯ ಸದಸ್ಯರು ಹೇಳಿಕೊಂಡು 'ಎದ್ದೆದ್ದು ಒದೀತಾನೆ' ತಮ್ಮ ಆಚಾರ್ಯಪುರುಷ ಎಂದು ಶಿಷ್ಯರು ತಾಳಹಾಕಿ ಕೊಂಡು ಕುಣಿದು ಕುಪ್ಪಳಿಸುತ್ತ ಹಾಡುತ್ತಿದ್ದರಂತೆ. ಆ ಸದಸ್ಯರು ಪ್ರೊ. ವೆಂಕಟರಾಮಪ್ಪನವರಿಗೆ ಇದನ್ನು ಕೇಳಿ ಅವರತ್ತ ತುಂಟುನಗೆ ಬೀರಿದರು! ಒಡನೆಯೆ ಬಂತು ಗುರುಗಳ ಉತ್ತರ. "ಅಲ್ಲಾ ಸ್ವಾಮಿ, ತಡೀರಿ ನಿಮ್ಮ ಆಚಾರ್ಯರು ಏಕಪ್ಪಾ ತನ್ನ ವಿರೋಧಿಮತದ ಶಿಷ್ಯನನ್ನು ಹಾಗೆ ಒದೆಯಬೇಕಿತ್ತು. ಎದ್ದೆದ್ದು ಒದ್ದರು ಎಂದ ಮೇಲೆ ನಿಮ್ಮ ಆಚಾರ್ಯರನ್ನು ಆ

ವಿರೋಧಿ ಕೆಳಗೆ ಬೀಳುವ ಹಾಗೆ ಹೊಡೆದಿರಬೇಕಲ್ಲ! ಅವರು ನೆಲಕ್ಕೆ ಒದೆಸಿಕೊಂಡು ಬಿದ್ದು ಮತ್ತೆ ಮೇಲೆದ್ದರಲ್ಲವೆ! ಛೆ, ಅವನ ತಂಟೆಗೆ ಏಕಪ್ಪಾ ಹೋಗಬೇಕಿತ್ತು' ಎಂದು ಪ್ರಶ್ನಿಸಿದವರಿಗೆ ಸವಾಲಾಸೆದರು. ಪ್ರಶ್ನೆ ಕೇಳಿದ ವ್ಯಕ್ತಿ ತಲೆಯೆತ್ತಲಿಲ್ಲ, ಅಷ್ಟೇ ಅಲ್ಲ ಅವನು ಮರುದಿನದಿಂದ ಸಭೆಗೆ ನಾಪತ್ತೆಯಾಗಿದ್ದ! ಇಂತಹ ಪ್ರಸಂಗಗಳೆಷ್ಟೋ ಇವರ ಬತ್ತಳಿಕೆಯಲ್ಲಿ!

ಪ್ರೊ॥ ವೆಂಕಟರಾಮಪ್ಪನವರು ಬಡತನದಿಂದ ಮುಂದೆ ಬಂದವರು. ಪ್ರೊ॥ ಟಿ.ಎಸ್. ವೆಂಕಣ್ಣಯ್ಯನವರ ಮನೆಯಲ್ಲಿ ವಾರಾನ್ನ ಉಂಡು ಬೆಳೆದವರು. ಇವರು ಮೂಲತಃ ಪಾವಗಡದ ಕೋಟಾಗುಡಿಬಂಡೆಯವರು. ಇವರು ಮುಲುಕುನಾಡು ಪಂಗಡಕ್ಕೆ ಸೇರಿದವರಾದ್ದರಿಂದ ತೆಲುಗು ಇವರ ಮನೆಮಾತಾಗಿತ್ತು ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡಿದ್ದರು. ಇವರ ಅಣ್ಣನವರು ಊರಿನಲ್ಲಿ ಪೋಸ್ಟ್ ಮಾಸ್ಟರ್ ಆಗಿದ್ದರು. ತಮಗೆ ಬರುತ್ತಿದ್ದ ಅಲ್ಪ ಹಣದಲ್ಲಿಯೇ ಪ್ರತಿತಿಂಗಳು ಇವರಿಗೆ ೧೦ರೂ.ಗಳನ್ನು ಕಳುಹಿಸುತ್ತಿದ್ದರಂತೆ. ಅಷ್ಟು ಹಣ ಅವರಿಗೆ ತಿಂಗಳಿಗೆ ಸಾಕಾಗುತ್ತಿತ್ತು. ಈ ಉಪಕಾರಸ್ಮರಣೆಯನ್ನು ನನ್ನ ತಂದೆ ಎದುರು ಯಾವಾಗಲೂ ಸ್ಮರಿಸುತ್ತಿದ್ದರು.

'ಕನ್ನಡ ಭಾಗವತ' (ಸಂಪುಟ ೧,೨,೩–೪, ೧೦) 'ಲೀಲಾವತಿಪ್ರಬಂಧ' ಪ್ಲೇಟೋವಿನ 'ರಿಪಬ್ಲಿಕ್' 'ಗಣೇಶನ ಮದುವೆ' ಹೀಗೆ ಹಲವಾರು ಕೃತಿಗಳನ್ನು ರಚಿಸಿದರು. ಇವರು ಬರೆದದ್ದಕ್ಕಿಂತಲೂ ಮಾತನಾಡಿದ್ದೇ ಹೆಚ್ಚು, ಬೋಧಿಸಿದ್ದೇ ಹೆಚ್ಚು. ಪ್ರೊ॥ ತೀ.ನಂ.ಶ್ರೀ ಅವರು ಹೇಳುತ್ತಿದ್ದ 'ಓದು ಬರಹದ ಶತ್ರು' ಎಂಬ ಅವರ ಸ್ವಾನುಭವದ ಮಾತುಗಳು ಇವರಿಗೆ ಅನ್ವಯಿಸುತ್ತಿತ್ತು. ಈ ಹಿರಿಯರಿಗೆ ನಮ್ಮ ಸಮಾಜ ಸಾಕಷ್ಟು ಗೌರವ ಸನ್ಮಾನಗಳನ್ನು ಮಾಡಲಿಲ್ಲ ಎಂಬ ವ್ಯಥೆ ನಮಗೆಲ್ಲರಿಗೂ ಇದೆ. ಸುಮಧುರ ಕಂಪನ್ನು ತಾನು ಇರುವಷ್ಟು ಕಾಲ ಬೀರಿ ಮುದುಡಿ ಹೋಗುವ ಏಳುಸುತ್ತಿನ ಮಲ್ಲಿಗೆಯ ದಂಡೆಯಂತೆ ನಮ್ಮ ಗುರುಗಳು ತಾವು ಇದ್ದಷ್ಟು ಕಾಲ ತಮ್ಮ ಸುತ್ತಮುತ್ತಲಿನ ಜನರ ಮನಸ್ಸನ್ನು ಆಕ್ರಮಿಸಿ, ಮುದಗೊಳಿಸಿ ಇಲ್ಲಿಂದ ಮರೆಯಾಗಿದ್ದಾರೆ. ಆ ದಿವ್ಯ ಚೇತನಕ್ಕೆ ನನ್ನ ಸಹಸ್ರ ನಮನಗಳು.

❖

# ಆದರ್ಶ ಅಧ್ಯಾಪಕ

## (ಹಾ.ಮಾ. ನಾಯಕ)

● *ಜೆ.ಕೆ. ರಮೇಶ*

ಮಹಾನಾಯಕರೆಂದು ಕನ್ನಡ ಜನತೆಯಿಂದ ಗೌರವಿಸಲ್ಪಡುತ್ತಿದ್ದ ಸುಪ್ರಸಿದ್ಧ ಸಾಹಿತಿ ಹಾರೋಗದ್ದೆ ಮಾನಪ್ಪ ನಾಯಕರು ಶ್ರೇಷ್ಠ ದರ್ಜೆಯ ಪ್ರಾಧ್ಯಾಪಕರಾಗಿದ್ದರು. ಅವರ ವ್ಯಕ್ತಿತ್ವ ಮತ್ತು ಕ್ರಿಯಾಶಕ್ತಿಗಳು ಬಹುಮುಖವಾದವು. ಅತ್ಯುನ್ನತವಾದುವು. ಅಂಕಣಕಾರ, ಸಾಹಿತಿ, ವಾಗ್ಮಿ, ಆಡಳಿತಗಾರ, ಶಿಕ್ಷಣತಜ್ಞ, ಜಾನಪದ ವಿದ್ವಾಂಸ, ಭಾಷಾವಿಜ್ಞಾನಿ, ಅನುವಾದಕ ಹೀಗೆ ಹಲವು ಸಾಧನೆ ಸಿದ್ಧಿಗಳಿಂದ ಅಪಾರ ಖ್ಯಾತಿ ಮತ್ತು ಜನಮನ್ನಣೆಗಳಿಸಿದ್ದರಾಗಿ ಅವರು ನಿಷ್ಠೆಯಿಂದ ನಡೆಸಿಕೊಂಡು ಬಂದ ಅಧ್ಯಾಪನಕ್ಕೆ ಸಲ್ಲಬೇಕಾಗಿದ್ದ ಕೀರ್ತಿಗೆ ತುಸು ಮಸುಕು ಕವಿದಂತೆ ತೋರುತ್ತದೆ. ಆದರೆ ಅವರು ತಮ್ಮ ಉತ್ತಮ ಬೋಧನೆಯಿಂದ ಅಸಂಖ್ಯಾತರನ್ನು ಪ್ರಭಾವಿಸಿದ್ದರೆಂಬುದನ್ನು ಬಲ್ಲವರೇ (ವಿದ್ಯಾರ್ಥಿಗಳು) ಬಲ್ಲರು.

ಕಳೆದ ಶತಮಾನದ ಕನ್ನಡ ಸಾಂಸ್ಕೃತಿಕ ಲೋಕದ ಬಹುದೊಡ್ಡ ಹೆಸರಾಗಿದ್ದ ಮಾನಪ್ಪನಾಯಕರು ಹುಟ್ಟಿದ್ದು ೧೯೩೧ರಲ್ಲಿ. ಹುಟ್ಟೂರು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಒಂದು ಹಳ್ಳಿ ಹಾರೋಗದ್ದೆ. ತಂದೆ ಶ್ರೀನಿವಾಸ ನಾಯಕರು ವ್ಯವಸಾಯ, ವ್ಯವಹಾರ ಎರಡನ್ನೂ ನಿರ್ವಹಿಸುತ್ತಿದ್ದು ಮಲೆನಾಡಿನ ಆ ಭಾಗದ ಜನಪ್ರಿಯ ವ್ಯಕ್ತಿಯಾಗಿದ್ದರು. ಅಂದಿನ ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ವಿದ್ಯಾಪಕ್ಷಪಾತಿಯಾಗಿದ್ದರು. ತಾಯಿ ರುಕ್ಮಿಣಿಯಮ್ಮ, ಮಮತಾಮಯಿ, ರಾಷ್ಟ್ರಕವಿ ಕುವೆಂಪು ಅವರು ಹುಟ್ಟಿ ಬೆಳೆದು ಅಕ್ಷರಾಭ್ಯಾಸ ನಡೆಸಿದಂಥದೇ ರೀತಿಯಲ್ಲಿ ಅಂಥದೇ ಪ್ರಕೃತಿ ಪರಿಸರದಲ್ಲಿ ನಾಯಕರ ಬಾಲ್ಯ ಪ್ರಾಥಮಿಕ ಶಿಕ್ಷಣಗಳು ಸಾಗಿದವು. ಪ್ರೌಢಶಾಲೆಯವರೆಗಿನ ಅವರ ಓದು ನಾಲೂರು ಮೇಗರವಳ್ಳಿ ತೀರ್ಥಹಳ್ಳಿಗಳಲ್ಲಿ ನಡೆಯಿತು. ಶಿವಮೊಗ್ಗೆಯಲ್ಲಿ ಇಂಟರ್‌ಮೀಡಿಯೇಟ್ ನಂತರ ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಪದವಿ ಪಡೆದು, ಕಲ್ಕತ್ತೆಗೆ ಹೋಗಿ ಭಾಷಾ ವಿಜ್ಞಾನ ವಿಷಯದಲ್ಲಿ ಎಂ.ಎ. ಮುಗಿಸಿ ಬಂದರು. ನಂತರ ಅಮೆರಿಕೆಗೆ ತೆರಳಿ ಅಲ್ಲಿನ ಇಂಡಿಯಾನಾ ವಿಶ್ವವಿದ್ಯಾನಿಲಯದಿಂದ ಪಿಹೆಚ್.ಡಿ. ಪದವಿ ಗಳಿಸಿದರು.

ಈ ಎಲ್ಲ ಶೈಕ್ಷಣಿಕ ಅರ್ಹತೆಗಳ ಫಲವಾಗಿ ಕೆಲಕಾಲ ತುಮಕೂರು ಮತ್ತು ಶಿವಮೊಗ್ಗ, ಮೈಸೂರು ಮಹಾರಾಜ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ವೃತ್ತಿ ನಿರ್ವಹಿಸಿ ನಂತರ ಮೈಸೂರು ವಿ.ವಿ. ಸ್ನಾತಕೋತ್ತರ ಕೇಂದ್ರ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ

ಕನ್ನಡ ಮತ್ತು ಭಾಷಾ ವಿಜ್ಞಾನಗಳ ಪ್ರಾಧ್ಯಾಪಕರಾಗಿ ನಂತರ ೧೯೭೯ರಿಂದ ಆ ಸಂಸ್ಥೆಯ ನಿರ್ದೇಶಕರಾಗಿ ಹದಿನೈದು ವರ್ಷಗಳ ಕಾಲ ದುಡಿದರು.

೧೯೮೫ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಕುಲಪತಿಯಾಗಿ ನಿಯಮಿಸಲ್ಪಟ್ಟರು. ನೈತಿಕ ಕಾರಣಗಳಿಗಾಗಿ ಅವಧಿಪೂರ್ಣಗೊಳಿಸುವ ಮೊದಲೇ ಉನ್ನತ ಸ್ಥಾನವನ್ನು ತ್ಯಜಿಸಿ ಬಂದು ಮತ್ತೆ ಕನ್ನಡ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದು ೧೯೯೧ರಲ್ಲಿ ನಿವೃತ್ತರಾದರು.

ಮೈಸೂರಿನ ಜಯಲಕ್ಷ್ಮೀಪುರಂ ಬಡಾವಣೆಯಲ್ಲಿ 'ಗೋಧೂಳಿ' ಎಂಬ ಮನೆಕಟ್ಟಿ ಅಲ್ಲಿಯೇ ವಾಸವಾಗಿದ್ದ ನಾಯಕರ ಪತ್ನಿ ಶ್ರೀಮತಿ ಯಶೋಧರಾ. ಕವಿತಾ, ರವೀಂದ್ರನಾಯಕ್ ಈ ದಂಪತಿಯ ಮಕ್ಕಳು. ಸಂಸಾರಿಕವಾಗಿ ಸುಖದಿಂದ ಇನ್ನಿತರ ಸಾಧನೆ ಸಿದ್ಧಿಗಳಿಂದ ಸಂತೃಪ್ತ, ಸಾರ್ಥಕ ಜೀವನ ನಡೆಸಿ ಹಾಮಾನಾ ೨೦೦೦ ನವೆಂಬರ್‌ನಲ್ಲಿ ನಿಧನರಾದರು.

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹಾ.ಮಾ.ನಾ. ಅವರಷ್ಟು ಕೀರ್ತಿಶಾಲಿಗಳೂ ಜನಪ್ರಿಯರೂ ಆಗಿದ್ದ ಸಾಹಿತಿಗಳು ಅಪರೂಪ. ಅದರಲ್ಲೂ ಕವಿತೆ, ಕಥೆ, ಕಾದಂಬರಿ ನಾಟಕಗಳಂಥ ಸೃಜನಾತ್ಮಕ ಕೃತಿಗಳನ್ನು ರಚಿಸದೆ ಬರಿಯ ವಿಚಾರ ಸಾಹಿತ್ಯ ರಚನೆಯ ಮೂಲಕವೇ ನಾಯಕರಷ್ಟು ಖ್ಯಾತರಾದ ಬರಹಗಾರರು ಖಂಡಿತವಾಗಿಯೂ ಮತ್ತೊಬ್ಬರಿಲ್ಲ. ಪ್ರಜಾವಾಣಿ, ಕನ್ನಡಪ್ರಭ, ಸುಧಾ, ಪ್ರಜಾಮತ, ತರಂಗ ಮುಂತಾದ ಕನ್ನಡನಾಡಿನ ಬಹು ಪ್ರಸಾರದ ಪತ್ರಿಕೆಗಳಲ್ಲಿ, ಸಂಪ್ರತಿ, ಸಾಂಪ್ರತ, ಸಲ್ಲಾಪ, ಸ್ವಗತ, ಸ್ವಂತ ಮುಂತಾದ ಸ್ಥಿರ ಶೀರ್ಷಿಕೆಗಳಲ್ಲಿ ಹಲವಾರು ವರ್ಷಗಳ ಕಾಲ ಅವರು ಬರೆದ ಅಂಕಣ ಬರಹಗಳು ಕನ್ನಡ ಜನರ ಮನೆ ಮನಗಳನ್ನು ಮುಟ್ಟಿ ಅಪಾರ ಆದರ ಗೌರವಗಳನ್ನು ನಾಯಕರಿಗೆ ತಂದುಕೊಟ್ಟವು. ಹಾ.ಮಾ.ನಾ. ವಿದ್ವಜ್ಜನರಿಂದ ಹಿಡಿದು ಅತಿ ಸಾಮಾನ್ಯರವರೆಗೆ ಎಲ್ಲರ ಅಭಿಮಾನಕ್ಕೂ ಪಾತ್ರರಾದರು. ದೇಶದ ಯಾವ ಮೂಲೆಗೆ ಹೋದರೂ ಜನ ಅವರನ್ನು ಗುರುತಿಸಿ ಮುಕುರಿಕೊಳ್ಳುವಂಥ, ಸತ್ಕರಿಸಿ ಸಮ್ಮಾನಿಸುವಂಥ, ಕಾಲ್ಮುಟ್ಟಿ ನಮಸ್ಕರಿಸುವಂಥ 'ತಾರಾಮೌಲ್ಯ' ಅವರಿಗೆ ದೊರಕೊಂಡಿತ್ತು. ಭಾರತದ ಶ್ರೇಷ್ಠ ಅಂಕಣಕಾರರಲ್ಲಿ ಅವರೊಬ್ಬರಾಗಿದ್ದದ್ದಲ್ಲದೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನೂ ಅಂಕಣ ಬರಹಕ್ಕೆ ತಂದುಕೊಟ್ಟು ಅದರ ಸ್ಥಾನಮಾನವನ್ನು ಹೆಚ್ಚಿಸಿದರು.

ನಾಯಕರ ಸಾಹಿತ್ಯ ಸೃಷ್ಟಿ ಗಾತ್ರದಿಂದಲೂ ಸತ್ವದಿಂದಲೂ ಬಹು ಸಮೃದ್ಧವಾದದ್ದು. ಅವರ ಹೆಸರು ಹೊತ್ತು ಪ್ರಕಟವಾದ ಕೃತಿಗಳ ಸಂಖ್ಯೆ ಸುಮಾರು ೧೪೦ ಸಂಖ್ಯೆಗಳು ಕನ್ನಡದಲ್ಲಿ. ಸಂಪಾದಿತ, ಪಠ್ಯಪುಸ್ತಕ, ಶಬ್ದಕೋಶ ಗ್ರಂಥಸೂಚಿ ಇತ್ಯಾದಿಗಳನ್ನು ವಿಮರ್ಶಾ ಬರಹಗಳು, ಸಾಹಿತ್ಯಕ ಪ್ರಬಂಧಗಳಲ್ಲದೆ ಬಾನುಲಿ ಭಾಷಣಗಳನ್ನು ಅಚ್ಚಿಸಿ ಚಿಂತನ ಸಂಕಲನಗಳ ಮತ್ತು ಮುನ್ನುಡಿ ಸಂಕಲನಗಳ ಹೊಸ ಪ್ರಕಾರಗಳನ್ನು ಪ್ರಚುರಪಡಿಸಿ ಬೆಳೆಸಿದರು. ಜನಪದ ಸಾಹಿತ್ಯ, ಭಾಷಾ ವಿಜ್ಞಾನ ಕ್ಷೇತ್ರಗಳಿಗೂ ಮೌಲಿಕ ಕೃತಿಗಳನ್ನು ನೀಡಿದ್ದಾರೆ. ಮೈಥಿಲಿ, ಪಂಜಾಬಿ, ಕಾಶ್ಮೀರಿ ಭಾಷೆಗಳಿಂದ ಶ್ರೇಷ್ಠ ಕವಿತೆಗಳನ್ನು ಅನುವಾದಿಸುವ ಮೂಲಕ ಭಾಷಾಂತರದಲ್ಲೂ ಪರಿಣತಿ ಮೆರೆದಿದ್ದಾರೆ.

ಪ್ರೌಢಶಾಲೆ, ಕಾಲೇಜು ವಿದ್ಯಾಭ್ಯಾಸದ ದಿನಗಳಿಂದಲೇ ಮಾನಪ್ಪ ನಾಯಕರು ಬರವಣಿಗೆಗೆ ತೊಡಗಿದ್ದರು. ಊರಿನವರೇ ಆದ ಕುವೆಂಪು ಪ್ರಭಾವ ಅವರ ಮನದ ಮೇಲಿತ್ತು. ಅ.ನ.ಕೃ. ಮಾಸ್ತಿಯವರಂಥ ಹಿರಿಯ ಸಾಹಿತಿಗಳ ಪರಿಚಯ ಆಗಲೇ ಆಗಿತ್ತು. ಅನೇಕ ಬರಹಗಾರರ ಸಂಪರ್ಕದಿಂದಾಗಿ ಅವರೆಲ್ಲರ ಪ್ರೋತ್ಸಾಹ ಪ್ರತಿಭಾವಂತ ಹುಡುಗನ ಬೆನ್ನಿಗಿತ್ತು. ಹೀಗಾಗಿ ಶಾಲಾ ವ್ಯಾಸಂಗಾವಧಿಯಲ್ಲೇ ಅವರು ರಚಿಸಿದ ಕಿರುಗತೆಗಳ ಸಂಕಲನ ಬಾಳ್ನೋಟಗಳು ಪ್ರಕಟವಾಗಿ ಹಿರಿಕಿರಿಯರ ಮೆಚ್ಚುಗೆ ಪಡೆದು ಸಾಹಿತ್ಯ ರಂಗಕ್ಕೆ ಮಜಭೂತಾದ ಪ್ರವೇಶ ದೊರಕಿಸಿಕೊಟ್ಟಿತು. ಹದಿಹರೆಯದಲ್ಲೇ ಬರೆದ 'ನಮ್ಮ ಮನೆಯ ದೀಪ' ಎಂಬ ಅವರ ಪ್ರಬಂಧ ಸಂಕಲನ ಸೊಗಸಾದ ಕಥಾ ಪ್ರಬಂಧಗಳನ್ನೊಳಗೊಂಡು ಜನಮನ ಸೆಳೆದು ಪ್ರಸಿದ್ಧವಾಯಿತು. ಮರಾಠೀ ಹಿಂದಿ ಮತ್ತಿತರ ಭಾಷೆಗಳಿಗೂ ಅದು ಅನುವಾದಗೊಂಡಿತು. 'ಹಾವು ಮತ್ತು ಹೆಣ್ಣು' ಎಂಬ ಕಥಾ ಸಂಕಲನವೂ ಮೊದಲ ಮಜಲಿನಲ್ಲಿ ಪ್ರಕಟಿತವಾದ ಪುಸ್ತಕಗಳ ಗುಂಪಿಗೆ ಸೇರುತ್ತದೆ. ಆರಂಭದಲ್ಲಿ ಕವನ ಕಥೆ ಪ್ರಬಂಧ ಮುಂತಾಗಿ ಸೃಷ್ಟಿಶೀಲ ಸಾಹಿತ್ಯ ರಚನೆಗೆ ತೊಡಗಿದ್ದ ನಾಯಕರು ನಂತರ ದಾರಿ ಬದಲಿಸಿ ವಿಚಾರ ಸಾಹಿತ್ಯದ ಕಡೆ ಹೊರಳಿದರು. ಮತ್ತೆ ಹೊರಳಿ ನೋಡಲಿಲ್ಲ. ಮುಂದಿನ ಅವರ ಗ್ರಂಥ ರಾಶಿಯೆಲ್ಲ ವಿಚಾರ ಸಾಹಿತ್ಯದ್ದೇ ಆಗಿದ್ದು ಅವರ ಬಹುಶ್ರುತತೆಗೆ ಸಾಕ್ಷಿಯಾಗಿ ನಿಂತಿದೆ. ಸಂಕೀರ್ಣ, ಸಿಂಗಾರ, ಸಪ್ತಕ, ಸೂಲಂಗಿ, ಸ್ವಂತ, ಸಂಪ್ರತಿ, ಸಲ್ಲಾಪ ಗ್ರಂಥ ಲೋಕದ ಸುತ್ತಮುತ್ತ ಜಾನಪದ ಸ್ವರೂಪ, Kannada literary and colloquial, ಪ್ರಣಯ ಪದಾವಳಿ, ಸುನೇರಿ ಮುಂತಾದವು ವಿಭಿನ್ನ ಪ್ರಕಾರಗಳಲ್ಲಿ ಅವರು ಬರೆದ ಪುಸ್ತಕಗಳಲ್ಲಿ ಪ್ರಸಿದ್ಧವಾಗಿವೆ. ಬಹುತೇಕ ಪುಸ್ತಕಗಳು ಅನೇಕ ಮುದ್ರಣಗಳನ್ನು ಕಂಡಿವೆ. ಬರವಣಿಗೆಯ ವಸ್ತು ಯಾವುದೇ ಇರಲಿ – ಬಹುಶಃ ಅವರು ಅಕ್ಷರ ರೂಪಕ್ಕಿಳಿಸಲು ಆಯ್ದುಕೊಳ್ಳದ ವಿಷಯವಿಲ್ಲ. – ಆ ಕುರಿತ ಶ್ರದ್ಧಾಪೂರ್ಣ ಅಧ್ಯಯನ ನಡೆಸಿ ಸರಿಯಾದ ಮಾಹಿತಿಗಳನ್ನು ನೀಡಿ, ಹೇಳಬೇಕಾದದ್ದನ್ನು ಅತ್ಯಂತ ಸರಳವಾಗಿ, ಸುಂದರವಾಗಿ, ಕಲಾತ್ಮಕವಾಗಿ, ಧ್ವನಿಪೂರ್ಣ ವಾಕ್ಯಗಳಿಂದ ಪದ್ಯಗಂಧಿಯಾಗಿ ಸಂಕ್ಷಿಪ್ತವಾಗಿ ಅಚ್ಚುಕಟ್ಟಾಗಿ ಹೇಳಿ ಓದುಗರ ಮನಸೂರೆಗೊಂಡಿದ್ದು ಬುದ್ಧಿ ಜ್ಞಾನಗಳನ್ನು ವಿಕಾಸಗೊಳಿಸಿದ್ದು ನಾಯಕರ ಹಿರಿಮೆ. ವೈಚಾರಿಕತೆ ಸಾಹಿತ್ಯಕ ಸೊಗಸಿನಿಂದ ಮೆರಗು ಪಡೆಯುತ್ತಿದ್ದುದೇ ನಾಯಕರ ಬರಹಗಳು ಶಾಶ್ವತ ಸಾಹಿತ್ಯವಾಗಿ ಉಳಿಯಲು ಕಾರಣವಾಯಿತೆನ್ನಬಹುದು. ಅವರ ಭಾಷಣಗಳಲ್ಲಿಯೂ ಇವೇ ಗುಣಗಳಿದ್ದು ಅವರನ್ನು ಶ್ರೇಷ್ಠ ಮತ್ತು ಜನಪ್ರಿಯ ವಾಗ್ಮಿಯಾಗಿಸಿದ್ದವು. ಬರಹಗಳಲ್ಲಿ ಕೇಳಿಬರಲಾಗದ ಕಂಠ ಮಾಧುರ್ಯ ಸ್ಪಷ್ಟ ನುಡಿಗಳ ಆಪ್ಯಾಯಮಾನತೆ ಅವರ ಭಾಷಣಗಳ ಹೆಚ್ಚಿನ ಆಕರ್ಷಣೆಯಾಗಿದ್ದರಿಂದ ನಾಯಕರ ಮಾತು ಕೇಳಲು ಜನ ತೆರೆದ ಕಿವಿಗಳಾಗಿ ಕಾಯುತ್ತಿದ್ದರು.

ಹಾ.ಮಾ.ನಾಯಕರು ಸಾಹಿತ್ಯ ರಚನಾಕಾರರಷ್ಟೇ ಆಗಿರಲಿಲ್ಲ. ಕನ್ನಡ ಸಾಹಿತ್ಯ ಮತ್ತು ಭಾಷೆಗಳ ಪೋಷಕರೂ, ರಕ್ಷಕರೂ ಆಗಿದ್ದರು. ಸಾಹಿತ್ಯದ ಅಭಿವೃದ್ಧಿ ಅವರ ನಿತ್ಯದ ಚಿಂತನೆಯಾಗಿತ್ತು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಸಾರಾಂಗ ದಿಂದ ನೂರಾರು ಪುಸ್ತಕಗಳು ಹೊರಬರಲು ಅವರು ಕಾರಣರಾದರು. ಸುಪ್ರಸಿದ್ಧರಿಂದ ಹಿಡಿದು ಹೊಚ್ಚ ಹೊಸ ಲೇಖಕನದವರೆಗೆ ನಗರಗಳ ಕೋರೈಸುವ ಬೆಳಕಿನಲ್ಲಿರುವವರಂತೆಯೇ ಹಳ್ಳಿಗಾಡಿನ ಕತ್ತಲಲ್ಲಿರುವ ಸಾಹಿತಿಗಳ ಸಂಪರ್ಕವನ್ನೂ ಅವರು ಹೊಂದಿದ್ದರು. ಅಂಚೆ

ಕಾರ್ಡಿನಲ್ಲಿ ಅವರು ಬರೆಯುತ್ತಿದ್ದ ಚಿಕ್ಕ ಒಕ್ಕಣೆಗಳು ಇಂಥ ಸಂಪರ್ಕಗಳಿಗೆ ಮಾಧ್ಯಮವಾಗಿದ್ದವು. ಸಂಪರ್ಕಿಸಿದವರಿಗೆಲ್ಲ ತಪ್ಪದೇ ಪತ್ರಿಸುತ್ತಿದ್ದ ಪತ್ರ ವ್ರತವನ್ನು ಅವರಂತೆ ಆಚರಿಸಿ ಪೂರೈಸಿದವರು ಬೇರೊಬ್ಬರಿಲ್ಲ. ಹಲವು ಹತ್ತು ಮಂದಿ ಕನ್ನಡ ಸಾಹಿತಿಗಳನ್ನು ಅವರು ಪ್ರೇರೇಪಿಸಿದರು. ಬಗೆಬಗೆಯ ಸಹಾಯಗಳನ್ನು ಮಾಡಿದರು. ಯೋಗ್ಯರಿಗೆ ಸಲ್ಲಬೇಕಾದ ಪ್ರಶಸ್ತಿಗಳನ್ನು ಕೊಡಿಸಿದರು. ಕನ್ನಡ ಸಾಹಿತ್ಯ ಸಾಹಿತಿಗಳಿಗೆ ನೆರಳು ನೀಡಿ ನಿರಾಯಾಸದಿಂದಿರಿಸಿದ ಹೆಮ್ಮರವಾಗಿದ್ದರು ಹಾ.ಮಾ.ನಾ.

ಕನ್ನಡ ಭಾಷೆಯ ಉತ್ಕಟ ಅಭಿಮಾನಿಯಾಗಿದ್ದ ನಾಯಕರು ಅದಕ್ಕೆ ಯಾವುದೇ ಬಗೆಯ ಅಪಚಾರ ಅನ್ಯಾಯವಾಗುವುದನ್ನು ಸಹಿಸುತ್ತಿರಲಿಲ್ಲ. ಅದರ ರಕ್ಷಣೆಗಾಗಿ ಎಂಥವರನ್ನೂ ಎದುರಿಸುವ ಕೆಚ್ಚು ಅವರಲ್ಲಿತ್ತು. ಕನ್ನಡದ ಬಗೆಗಿನ ಅವರ ಪ್ರೀತಿ ಅಂಧಾಭಿಮಾನವಾಗಿರಲಿಲ್ಲ. ಸಮೂಹಸನ್ನಿಯಾಗಿರಲಿಲ್ಲ. ವಿವೇಕಪೂರ್ಣ ವರ್ತನೆ ವರ್ಚಸ್ಸಿನಿಂದ ಕನ್ನಡವನ್ನು ಅವರು ಮುನ್ನಡೆಸಿದರು. ಕನ್ನಡವನ್ನು ನಿಜವಾದ ಅರ್ಥದಲ್ಲಿ ಕಟ್ಟಿ ಬೆಳೆಸಿದರು. ಈ ವಿಚಾರದಲ್ಲಿ ಅವರು ಬಿ.ಎಂ.ಶ್ರೀ, ಎ.ಆರ್.ಕೃ.ಟಿ.ಎಸ್.ವೆಂ., ಕುವೆಂಪು, ದೇಜಗೌ ಪರಂಪರೆಗೆ ಸೇರುತ್ತಾರೆ.

ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದು ಅವರು ಶ್ರೇಷ್ಠ ಆಡಳಿತಗಾರರೆಂಬುದನ್ನು ಸಾಬೀತು ಪಡಿಸಿದರು. ಅವರ ಸಾಮರ್ಥ್ಯ ದಕ್ಷತೆಗಳು ಅವರನ್ನು ರಾಜ್ಯ, ಕೇಂದ್ರ ಸಾಹಿತ್ಯ ಅಕಾಡೆಮಿ, ವಿಶ್ವವಿದ್ಯಾಲಯ ಧನಸಹಾಯ ಆಯೋಗದಂಥ ಹಲವಾರು ಸಂಘ ಸಂಸ್ಥೆಗಳ ನಿರ್ದೇಶಕರು ಸಲಹಾಕಾರ ಸದಸ್ಯರನ್ನಾಗಿ ಮಾಡಿದ್ದವು. ಜ್ಞಾನಪೀಠ ಪ್ರಶಸ್ತಿ, ಪಂಪ ಪ್ರಶಸ್ತಿಯಂತ ಹಲವು ಪ್ರಶಸ್ತಿಗಳ ಆಯ್ಕೆ ಸಮಿತಿಯಲ್ಲಿ ಅವರಿರುತ್ತಿದ್ದರು. ಮಾನಪ್ಪನವರು ಎಲ್ಲಿದ್ದರೂ ಅವರ ಮಾತಿಗೆ ಮಾನ್ಯತೆ ಇತ್ತು. ಅವರ ಉಪಸ್ಥಿತಿ ಆಯಾ ಸಂಸ್ಥೆಗಳ ಗೌರವವನ್ನು ಹೆಚ್ಚಿಸುತ್ತಿತ್ತು. ಸ್ವತಃ ಅವರು ಕೇಂದ್ರ ಸಾಹಿತ್ಯ ಅಕಾಡೆಮಿ ವರ್ಧಮಾನ ಪ್ರಶಸ್ತಿ ಮುಂತಾಗಿ ಹಲವು ಸಾಹಿತ್ಯ ಪುರಸ್ಕಾರಗಳನ್ನು ಪಡೆದಿದ್ದರು. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಅವರಿಗೆ ಸಂದಿತು. "ಮಾನ" ಎಂಬ ಬೃಹತ್ ಸಂಭಾವನಾ ಗ್ರಂಥವೊಂದು ಸಮರ್ಪಿತವಾಯಿತು. ಅವರನ್ನು ಕುರಿತು ಸುಮಾರು ೧೫ ಪುಸ್ತಕಗಳು ಆಗಲೇ ಪ್ರಕಟವಾಗಿವೆ. ಇಷ್ಟೊಂದು ಗ್ರಂಥ ಗೌರವ ಕನ್ನಡದಲ್ಲಿ ಬೆರಳಣಿಕೆಯಷ್ಟು ಲೇಖಕರಿಗೂ ದೊರೆತಿಲ್ಲ.

ಇವೆಲ್ಲವನ್ನೂ ಮೀರಿದ್ದು ಅವರ ಉನ್ನತ ವ್ಯಕ್ತಿತ್ವವಾಗಿತ್ತು. ದುಡಿಮೆಯನ್ನೇ ಪರಮ ಧ್ಯೇಯವನ್ನಾಗಿ ಸ್ವೀಕರಿಸಿದ್ದ ಅವರು ಸದಾ ಕರ್ತವ್ಯ ನಿರತರಾಗಿರುತ್ತಿದ್ದರು. ಪ್ರಾಮಾಣಿಕತೆ, ನಿಸ್ಪೃಹತೆ, ಸಮಯನಿಷ್ಠೆ, ಸರಳತೆ, ಅಚ್ಚುಕಟ್ಟುತನ, ಗಾಂಭೀರ್ಯ ಮುಂತಾದ ಮೌಲ್ಯಗಳನ್ನೇ ಅವರು ಬದುಕಿದರು. ದೇವರು, ಧರ್ಮ, ಜಾತಿ, ಸಂಪ್ರದಾಯ ಆಚರಣೆಗಳನ್ನು ಮೀರಿ ಒಳಿತನ್ನು ಎಲ್ಲಾ ಕಡೆಯಿಂದ ಸ್ವಾಗತಿಸುವ ಮುಕ್ತ ವೈಚಾರಿಕ ಧೀಮಂತ ನಡೆ ಅವರದಾಗಿತ್ತು. ನಡೆ ನುಡಿಗಳಲ್ಲಿ ಏಕತೆಯನ್ನು ಸಾಧಿಸಿ ಜೀವಂತ ದಂತಕಥೆಯಾಗಿ ಹೋದ ಮಹಾನ್ ವ್ಯಕ್ತಿ ಅವರು.

* * *

ನಾನು ಮೈಸೂರು. ವಿ.ವಿ.ಯಲ್ಲಿ ಕನ್ನಡ ಎಂ.ಎ. ತರಗತಿಯಲ್ಲಿ ಅಭ್ಯಾಸ ಮಾಡುತ್ತಿದ್ದಾಗ ಅವರ ವಿದ್ಯಾರ್ಥಿಯಾಗಿದ್ದೆನೆಂಬುದು ನನಗೆ ಹೆಮ್ಮೆಯ ವಿಷಯ. ನಾನು ಮಲೆನಾಡಿಗನಾಗಿ ಅವರೂರ ಕಡೆಯವನಾಗಿದ್ದರೂ ಅವರ ನಿಕಟವರ್ತಿ ಆಗಿರಲಿಲ್ಲ. ಅವರ ಬಗೆಗಿನ ಭಯ ನನ್ನಲ್ಲಿನ ಸಂಕೋಚ ಸ್ವಭಾವಗಳಿಂದಾಗಿ ಅವರಿಂದ ದೂರವೇ ಉಳಿದುಕೊಂಡಿದ್ದೆ. ಬಹಳಷ್ಟು ವಿದ್ಯಾರ್ಥಿಗಳ ಸ್ಥಿತಿ ನನ್ನಂತೆಯೇ ಇತ್ತು. ನಾಯಕರು ಬರುತ್ತಿದ್ದಾರೆಂದರೆ ಎಲ್ಲರೂ ಕೈಮುಗಿದು ಬದಿಗೆ ನಿಲ್ಲುವವರೇ. ಅಥವಾ ಅವರು ಕಾಣುವ ಮೊದಲೇ ಮರೆಯಾಗುವವರೇ. ಸಂಸ್ಥೆಯ ನಿರ್ದೇಶಕರಾಗಿದ್ದ ಅವರ ವ್ಯಕ್ತಿತ್ವಕ್ಕೆ ಅಂಥ ಮರ್ಯಾದೆ ಇತ್ತು. ಬಿಳಿಯ ನೀಳ್ಗೂದಲ ಪ್ರಭಾವಳಿಯೊಳಗಿನ ಗೌರ ವರ್ಣದ ಗುಂಡಾದ ಗಂಭೀರ ವದನ, ಕೆನೆ ಹಳದಿ ಅಥವಾ ತಿಳಿ ಹಸಿರು ಬಣ್ಣದ ಉದ್ದನೆಯ ಖಾದಿ ಜುಬ್ಬ ಪೈಜಾಮಗಳಿಂದಾವೃತವಾಗಿರುತ್ತಿದ್ದ ಮಟ್ಟಸವಾದ ತುಸು ಸ್ಥೂಲಕಾಯ, ಚಪ್ಪಲಿಯೊಳಗಿನ ಕಾಲ್ಗಳ ದೃಢವಾದ ನಡೆಯೊಂದಿಗೆ ಆ ಸುಂದರ ವ್ಯಕ್ತಿ ಸಂಸ್ಥೆಯ ವರಾಂಡದಲ್ಲಿ ಓಡಾಡುತ್ತಿದ್ದರೆ ಅವರೊಂದಿಗೆ ಸಲಿಗೆ ಯಾರಿಗೂ ಸಾಧ್ಯವಿರಲಿಲ್ಲ. ಅದರಲ್ಲೂ ವಿದ್ಯಾರ್ಥಿಗಳೊಂದಿಗೆ ಎಂದೂ ಅವರು ಸದರವಾಗಿ ನಡೆದುಕೊಂಡವರಲ್ಲ. ಸಲಿಗೆ ನೀಡಿದವರಲ್ಲ. ಪ್ರಾಜ್ಞ ಪ್ರಾಧ್ಯಾಪಕನ ಅಂತರವನ್ನು ಅವರು ಕಾಯ್ದುಕೊಂಡೇ ಬಂದಿದ್ದರು. ಹೀಗಾಗಿ ಬಹಳಷ್ಟು ಮಂದಿ ವಿದ್ಯಾರ್ಥಿಗಳಿಗೆ ಅವರ ಬಗ್ಗೆ ಇದ್ದದ್ದು ಭಯ ಮಿಶ್ರಿತ ಗೌರವ. ಸಲೀಸಾಗಿ ಅವರೊಂದಿಗೆ ಮಾತಾಡುತ್ತಿದ್ದ ಧೀರರು ತೀರ ವಿರಳ. ಇಂಥ ಗೌರವ ಸಹೋದ್ಯೋಗಿ ಪ್ರಾಧ್ಯಾಪಕರು ಸಂಸ್ಥೆಯ ಇತರ ನೌಕರ ವರ್ಗದವರಿಂದಲೂ ದೊರೆಯುತ್ತಿತ್ತು. ನಾಯಕರಿದ್ದಾರೆಂದರೆ ಇಡೀ ಕನ್ನಡ ಅಧ್ಯಯನ ಸಂಸ್ಥೆಯ ಯಾವ ಮೂಲೆಯಿಂದಲೂ ಗಟ್ಟಿ ಧ್ವನಿ ಕೇಳಿ ಬರುತ್ತಿರಲಿಲ್ಲ. ಎಲ್ಲರೂ ತಮ್ಮ ಕರ್ತವ್ಯಗಳಲ್ಲಿ ನಿರತರಾಗಿರುತ್ತಿದ್ದರು. ಸ್ವತಃ ಕರ್ತವ್ಯ ನಿಷ್ಠೆಯ ದೊಡ್ಡ ಮಾದರಿಯಾಗಿದ್ದ ನಾಯಕರ ನೈತಿಕ ಶಕ್ತಿಯ ಕಣ್ಗಾವಲು ಇತರರು ಎಂದೂ ಕೆಲಸಗಳ್ಳರಾಗದಂತೆ ನೋಡಿಕೊಳ್ಳುತ್ತಿತ್ತು.

ತಮ್ಮ ಬದುಕಿನಲ್ಲಿ ಸಮಯನಿಷ್ಠೆಗೆ ಹೆಸರಾಗಿದ್ದ ನಾಯಕರು ತರಗತಿಗಳಿಗೆ ತಡವಾಗಿ ಬರುವುದನ್ನಾಗಲೀ ಮೊದಲೇ ಮುಗಿಸಿ ಹೋಗುವುದನ್ನಾಗಲಿ ಅಭ್ಯಾಸವಾಗಿಸಿಕೊಂಡವರಲ್ಲ. ತರಗತಿಗಳನ್ನೇ ತೆಗೆದುಕೊಳ್ಳದೇ ಪ್ರಾಧ್ಯಪಕಗಿರಿ ನಡೆಸುತ್ತಿದ್ದ ಆಡಳಿತಗಾರರ ನಡುವೆ ಎಂದೂ ತರಗತಿಗಳನ್ನು ಬಿಡದ ಶಿಸ್ತನ್ನು ಅವರು ಪರಿಪಾಲಿಸಿಕೊಂಡು ಬಂದಿದ್ದರು. ಒಮ್ಮೆ ಇಂಗ್ಲೆಂಡಿಗೆ ಹೋಗಿದ್ದಾಗ ಆಕಸ್ಮಿಕದಲ್ಲಿ ಅವರು ಕಾಲು ಮುರಿದುಕೊಂಡು ಹಿಂದಿರುಗಿ ಬಂದ ಮೇಲೆ ಮಹಡಿ ಏರಿ ಹೋಗಲಾಗದ ಸ್ಥಿತಿಯಲ್ಲಿದ್ದಾಗ, ತಮ್ಮ ಕೊಠಡಿಯಲ್ಲೇ ಆಸನ ವ್ಯವಸ್ಥೆ ಮಾಡಿಸಿ ತರಗತಿ ನಡೆಸುತ್ತಿದ್ದುದನ್ನು ಅವರ ಆ ತಂಡದ ವಿದ್ಯಾರ್ಥಿಗಳು ನೆನಪಿಸಿಕೊಳ್ಳುತ್ತಾರೆ. ನಿರ್ದಿಷ್ಟ ದಿನದಲ್ಲಿ ಅವರ ಪಾಠ ಇತ್ತೆಂದರೆ ಅದು ಇರುತ್ತಿತ್ತೆಂದೇ ಅರ್ಥ. ಅಂತೆಯೇ ದಿನದ ಪಾಠಕ್ಕೆ ಅವರು ಪೂರ್ವ ತಯಾರಿ ಮಾಡಿಕೊಂಡೇ ಬಂದಿರುತ್ತಿದ್ದರು. ತನಗೆ ಎಲ್ಲ ಗೊತ್ತಿದೆ ಅಥವಾ ಅಧ್ಯಾಪನದ ಅನುಭವವಿದೆ ಎಂಬ ಉಡಾಫೆ ಮನೋಭಾವದಿಂದ ಎಂದೂ ತರಗತಿಗಳ ಬಗ್ಗೆ ನಿರ್ಲಕ್ಷ ತೋರಿದವರಲ್ಲ. ಅಧ್ಯಾಪಕರಾಗಿ ವೃತ್ತಿ ಜೀವನಕ್ಕೆ ತೊಡಗುವ ವಿದ್ಯಾರ್ಥಿಗಳಿಗೂ ಸರಿಯಾದ ತಯಾರಿ ಮಾಡಿಕೊಳ್ಳದೆ ತರಗತಿಗೆ ಹೋಗಬೇಡಿ ಎಂದು ಎಚ್ಚರಿಕೆ ನೀಡುತ್ತಿದ್ದರು. ಅವರ ಪ್ರವಚನಗಳು ಎಷ್ಟು ಪ್ರಸಿದ್ಧವಾಗಿದ್ದವೆಂದರೆ ಅವನ್ನು

ಕೇಳುವುದಕ್ಕಾಗಿಯೇ ಕೆಲವರು ಭಾಷಾ ವಿಜ್ಞಾನವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ವಿದ್ಯಾರ್ಥಿಗಳು ಅವರ ಪಾಠದ ದಿನಗಳಿಗಾಗಿ ಹಾತೊರೆಯುತ್ತಿದ್ದರು.

ಅಧ್ಯಯನ ಸಂಸ್ಥೆಗೆ ಸೇರುವಾಗ ಜಾನಪದವನ್ನು ವಿಶೇಷ ಅಧ್ಯಯನವಾಗಿ ತೆಗೆದುಕೊಳ್ಳ ಬೇಕೆಂದಿದ್ದ ನನ್ನ ಆಯ್ಕೆಯನ್ನು ನಾಯಕರೇ ನಿರಾಕರಿಸಿ ನಾನು ವಿಮರ್ಶೆ ಮತ್ತು ಭಾಷಾವಿಜ್ಞಾನ ತೆಗೆದುಕೊಳ್ಳುವಂತೆ ಮಾಡಿದ್ದರು. ಹಾಗಾಗಿ ನೇರವಾಗಿ ಅವರ ವಿದ್ಯಾರ್ಥಿಯಾಗುವ ಭಾಗ್ಯ ನನಗೆ ದೊರೆತಿತ್ತು. ಎಂ.ಎ. ಎರಡನೇ ವರ್ಷದಲ್ಲಿ ಅವರು ನಮ್ಮ ತರಗತಿಗೆ ಬರುತ್ತಿದ್ದರು. ಧ್ವನಿಮಾ ವಿಜ್ಞಾನ (phonemics) ಅವರು ಬೋಧಿಸುತ್ತಿದ್ದ ವಿಷಯವಾಗಿತ್ತು. ತರಗತಿಯ ಘಂಟೆಯಾಗುತ್ತಿದ್ದಂತೆ ಸೇವಕನೊಬ್ಬ ಹಾಜರಿ ಪುಸ್ತಕ, ಸೀಮೆಸುಣ್ಣದ ಪೆಟ್ಟಿಗೆ ಬೋರ್ಡ್, ಒರೆಸುವ ಡಸ್ಟರುಗಳನ್ನು ತಂದಿಟ್ಟು ಹೋಗುತ್ತಿದ್ದ. ಮರುಕ್ಷಣವೇ ನಾಯಕರ ಪ್ರವೇಶವಾಗುತ್ತಿತ್ತು. ಗಂಭೀರವಾಗಿ ಹಾಜರಿ ಕರೆದು ನಾಯಕರು ಪಾಠ ಆರಂಭಿಸುತ್ತಿದ್ದರು. ಹಿತವಾದ ಧ್ವನಿಯಿಂದ ಹೊಮ್ಮುವ ಸ್ಪಷ್ಟ ಉಚ್ಚಾರಣೆಯ ಸುಲಲಿತ ಭಾಷೆಯ ಪ್ರವಚನಗಳವು. ಅವರ ಉಪನ್ಯಾಸಗಳಿಗೆ ಅವರದೇ ಛಾಪು ಇರುತ್ತಿತ್ತು. ಅತ್ಯಂತ ಕ್ಲಿಷ್ಟವಾದ ಸಂಗತಿಯನ್ನು ಅತ್ಯಂತ ಸರಳಗೊಳಿಸಿ ಸುಲಭವಾಗಿಸಿ ಬುದ್ಧಿವಂತನಲ್ಲದ ಸಾಮಾನ್ಯ ವಿದ್ಯಾರ್ಥಿಗೂ ಅದು ಅರ್ಥವಾಗುವಂತೆ ಮಾಡುವ ಕಲೆ ಅವರಿಗೆ ಸಿದ್ಧಿಸಿತ್ತು. ತಿಳಿಹಾಸ್ಯ ಅದರಲ್ಲಿ ಬೆರೆತಿರುತ್ತಿತ್ತು. ಒಮ್ಮೆ ಪ್ರಾದೇಶಿಕ ಭಾಷೆಗಳಲ್ಲಿನ ವೈವಿಧ್ಯ ವೈಶಿಷ್ಟ್ಯಗಳನ್ನು ವಿವರಿಸುವಾಗ ಕುಂದಾಪುರದ ಕಡೆಯ ತಾಯಿಯೊಬ್ಬರು ತನ್ನ ಯಜಮಾನ ಮನೆಯಿಂದ ಹೊರಟಾಗ ಅಳಲು ತೊಡಗಿದ ಚಿಕ್ಕ ಮಗುವನ್ನು ಸಮಾಧಾನ ಪಡಿಸುತ್ತಾ "ಅಪ್ಪ ಹೋತ ಮಗಾ ಆಡು" ಎಂದಿದ್ದನ್ನು ಉದಾಹರಿಸಿ ಇದು ಬಯಲು ಸೀಮೆಯವರಿಗೆ ಇದು ವಿಚಿತ್ರವೆನಿಸುತ್ತದೆ ಎಂದಿದ್ದನ್ನು ನನ್ನ ಮಿತ್ರರೊಬ್ಬರು ನೆನೆಪಿಸಿಕೊಂಡಿ ದ್ದಾರೆ. ಕುಂದಾಪುರ ಕನ್ನಡದಲ್ಲಿ ಹೋತ ಎಂದರೆ ಹೋಗುತ್ತಾನೆ, ಆಡು ಎಂದರೆ ಆಟ ವಾಡುವುದು. ಇತರರಿಗೆ ಈ ಆಡು ಹೋತದ ಸಂಬಂಧ ನಗೆ ತರಿಸುತ್ತದೆ. ಹೀಗೆ ಭಾಷೆಯ ನಿಯಮಗಳಿಗೆ ಸಂಬಂಧಿಸಿದ ನಿದರ್ಶನಗಳು ಜನರ ನಿತ್ಯ ಬದುಕಿನಿಂದಲೇ ಆಯ್ದು ವಾಗಿರುತ್ತಿದ್ದವು. ವಿಷಯವನ್ನು ವಿದ್ಯಾರ್ಥಿಗಳ ಬುದ್ಧಿಗಮ್ಯವಾಗಿಸುವುದು ಅವರ ಮುಖ್ಯೋದ್ದೇಶ ವಾಗಿರುತ್ತಿತ್ತು. ಕ್ಲಿಷ್ಟವಿಚಾರಗಳನ್ನು ಅವರು ಸರಳಗೊಳಿಸುತ್ತಿದ್ದ ಪರಿ ನಮ್ಮಲ್ಲಿ ಇದು ಸಾಧ್ಯವೇ ಎಂಬ ಅಚ್ಚರಿ ಮೂಡಿಸುತ್ತಿತ್ತು. ಇದೇ ಭಾಷಾ ವಿಜ್ಞಾನದ ಇನ್ನೊಂದು ಮಗ್ಗಲು ಆಕೃತಿಮ ವಿಜ್ಞಾನ (Morphology) ವನ್ನು ಇದ್ದುದಕ್ಕಿಂತಲೂ ಹೆಚ್ಚು ಸಂಕೀರ್ಣಗೊಳಿಸಿ ವಿದ್ಯಾರ್ಥಿಗಳಿಗೆ ಅರ್ಥವಾಗದಂತೆ ಮಾಡಿದ ಇನ್ನೊಬ್ಬ ಪ್ರಾಧ್ಯಾಪಕರ ಹೋಲಿಕೆ ಇದೇ ಸಂದರ್ಭದಲ್ಲಿ ನಮಗೆ ದೊರೆತಿದ್ದಿತಾಗಿ ನಾಯಕರ ಬೋಧನೆಯ ಹೆಚ್ಚುಗಾರಿಕೆಯ ಅರಿವಾಗುತ್ತಿತ್ತು. ನಾಯಕರ ತರಗತಿಗಳು ಎಂದೂ ಗಾಂಭೀರ್ಯ ಕಳೆದುಕೊಳ್ಳುತ್ತಿರಲಿಲ್ಲ. ಸಂಬಂಧವಿಲ್ಲದ ಹಗುರ ವಿಚಾರಗಳಿಗೆ ಅಲ್ಲಿ ಅವಕಾಶವಿರಲಿಲ್ಲ. ಶಿಸ್ತು, ಶ್ರದ್ಧೆ ನಿಷ್ಠೆಗಳಿಂದ ತಮ್ಮಲ್ಲಿದ್ದ ಅಪಾರ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಹಂಚುತ್ತಿದ್ದಾಗ ಅದು ನಿಜವಾದ ಅರ್ಥದ ಉನ್ನತ ಶಿಕ್ಷಣದ ತರಗತಿ ಯಾಗಿರುತ್ತಿತ್ತು. ವಿದ್ಯಾರ್ಥಿಗಳಿಗೆ ಅದೊಂದು ಅಪೂರ್ವ ಅನುಭವವಾಗಿರುತ್ತಿತ್ತು.

ನಾಯಕರು ಕೋಪದಿಂದ ವಿದ್ಯಾರ್ಥಿಗಳನ್ನು ಬಯ್ಯುತ್ತಿರಲಿಲ್ಲ. ಬದಲಿಗೆ ವಿದ್ಯಾರ್ಥಿಗಳ ಅಜ್ಞಾನಕ್ಕಾಗಿ ಶಿಕ್ಷಣದ ಹದಗೆಟ್ಟ ಸ್ಥಿತಿಗಾಗಿ ಅಸಮಾಧಾನವಾದಾಗ ಕತ್ತು ಕೊಂಕಿಸಿ ಭುಜಗಳನ್ನು

ಕುಣಿಸಿ ಕೈ ತಿರುಗಿಸಿ ತಮ್ಮದೇ ಆದ ಶೈಲಿಯಲ್ಲಿ ವಿಷಾದ ವ್ಯಕ್ತಪಡಿಸುತ್ತಿದ್ದರು. ಒಮ್ಮೆ ಕಾತುರ ಎಂಬ ಶಬ್ದದ ನಿಷ್ಪತ್ತಿಯನ್ನು ಕುರಿತು ನನ್ನನ್ನು ಪ್ರಶ್ನಿಸಿದ್ದರು. ಆತುರ ಎಂಬ ಶಬ್ದವನ್ನು ಅನುಸರಿಸಿ ಬಂದಿರುವ ತಪ್ಪಾದ ರೂಪ ಅದು. ಕಾತರ ಎಂಬುದು ಅದರ ಸರಿಯಾದ ರೂಪ. ರೂಪ ಸಾಮ್ಯದಿಂದ ಧ್ವನಿ ವ್ಯತ್ಯಾಸವಾಗಿದೆ ಎಂದು ನಾನು ಹೇಳಬೇಕಿತ್ತು. ಆ ಕ್ಷಣದಲ್ಲಿ ಹಾಗೆ ಉತ್ತರಿಸಲಾಗದೆ ಪೆಚ್ಚಾದ ನನ್ನನ್ನು ನೋಡಿಯೇ ಮೇಲಿನಂತೆ ಅವರು ವಿಷಾದ ವ್ಯಕ್ತಪಡಿಸಿದ ಭಂಗಿ ನನ್ನ ಕಣ್ಣಿನಲ್ಲಿ ಕಟ್ಟಿದೆ. ಇದೇ ಬಗೆಯಲ್ಲಿ ಅವರೆದುರು ನನ್ನ ಬೆಪ್ಪುತನ ಪ್ರದರ್ಶಿಸಿದ ಇನ್ನೊಂದು ಸಂದರ್ಭವೂ ನೆನಪಿನಲ್ಲಿದೆ. ಎರಡನೇ ವರ್ಷದ ಎಂ.ಎ. ಲಿಖಿತ ಪರೀಕ್ಷೆಗಳೆಲ್ಲ ಮುಗಿದು ಮೌಖಿಕ ಪರೀಕ್ಷೆ ನಡೆಯುವುದಿತ್ತು. ಮೂವರು ಹಿರಿಯ ಪ್ರಾಧ್ಯಾಪಕರೆದುರು – ಒಬ್ಬರು ಹೊರಗಿನ ವಿಶ್ವವಿದ್ಯಾನಿಲಯದವರು – ಕುಳಿತು ಅವರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಿ ಅಂಕಗಳಿಸಿಕೊಳ್ಳಬೇಕಾಗಿತ್ತು. ಆ ಪರೀಕ್ಷೆ ನಿರ್ದೇಶಕರ ಕೊಠಡಿಯಲ್ಲೇ ನಡೆಯುತ್ತಿತ್ತು. ಅಂದು ನನ್ನ ಸರದಿ ಬಂದಾಗ ಎಂದಿನಂತೆ ಭಯ ಪಡುತ್ತಲೇ ಒಳಗೆ ಹೋದೆ. ಕೂರಿಸಿ ಪ್ರಶ್ನೆ ಕೇಳ ತೊಡಗಿದರು. ಭಾಷಾಶಾಸ್ತ್ರ ವಿದ್ಯಾರ್ಥಿಯಾಗಿದ್ದ ನನ್ನನ್ನು ನಾಯಕರು ನನ್ನ ಊರು ಯಾವುದೆಂದು ವಿಚಾರಿಸಿ ಜೆಡ್ಡಗದ್ದೆ ಎಂದು ನಾನು ಉತ್ತಿರಿಸಿದಾಗ ಅದನ್ನೇ ಪ್ರಶ್ನೆಯಾಗಿಸಿ ಆ ಶಬ್ದದೊಳಗಿನ ವ್ಯಾಕರಣ ವಿಶೇಷ ಏನೆಂದು ಕೇಳಿದರು. ಆ ಕ್ಷಣಕ್ಕೆ ಏನೂ ಉತ್ತರ ಹೊಳೆಯದೆ ಬೆಬ್ಬೆಬ್ಬೆ ಎಂದಿದ್ದೆ. ಪ್ರೊ. ಜಿ.ಎಸ್. ಶಿವರುದ್ರಪ್ಪನವರು ಕಾವ್ಯ ಮೀಮಾಂಸೆ ಕುರಿತು ಪ್ರಶ್ನಿಸಿದರು. ತಕ್ಕಮಟ್ಟಿಗೆ ಉತ್ತರಿಸಿದೆನೆಂದು ನೆನಪು – ಡಾ॥ ಎಲ್. ಬಸವರಾಜು ಏನೂ ಕೇಳಲೇ ಇಲ್ಲ ಹೇಗೋ ೭೯ ಅಂಕಗಳು ಬಂದಿದ್ದವು. ಅಂಕ ನೀಡುವಲ್ಲಿ ನಾಯಕರು ಎಂದೂ ಜಿಪುಣರಲ್ಲ. ೨೦ಕ್ಕೆ ೧೭ ಅಂಕ ನೀಡಿರುವ ಒಂದು ಕಿರು ಪರೀಕ್ಷೆಯ ಉತ್ತರ ಪತ್ರಿಕೆಯನ್ನು ನನ್ನ ಬಳಿ ಈಗಲೂ ಇಟ್ಟುಕೊಂಡಿದ್ದೇನೆ.

ವಿದ್ಯಾರ್ಥಿಗಳೊಂದಿಗೆ ಅವರು ಅಂತರ ಕಾಯ್ದುಕೊಂಡಿದ್ದರೆಂದ ಮಾತ್ರಕ್ಕೆ ಆತ್ಮೀಯತೆ ಇರಲಿಲ್ಲವೆಂದು ಅರ್ಥವಲ್ಲ. ಅದು ಅರ್ಥಪೂರ್ಣ ಸಂಬಂಧವಾಗಿರುತ್ತಿತ್ತು. ಪ್ರತಿಭಾವಂತರನ್ನು ಅವರು ಮೆಚ್ಚಿ ಹುರಿದುಂಬಿಸುತ್ತಿದ್ದರು. ವಿದ್ಯಾರ್ಥಿಗಳಿಗೆ ಬಗೆಬಗೆಯ ಸಹಾಯ ಮಾಡುತ್ತಿದ್ದರು. ಮನೆಯಿಂದ ಸ್ವಂತ ಪುಸ್ತಕಗಳನ್ನು ಎರವಲು ನೀಡುತ್ತಿದ್ದರು. ಎಷ್ಟೋ ವಿದ್ಯಾರ್ಥಿಗಳಿಗೆ ಧನ ಸಹಾಯ ಮಾಡಿದ್ದಿದೆ. ಉದ್ಯೋಗ ಕೊಡಿಸಿದ್ದಿದೆ. ಆದರೆ ಇವೆಲ್ಲ ಅನರ್ಹರಿಗೆ ಸಿಗುತ್ತಿರಲಿಲ್ಲ. ಯೋಗ್ಯತೆ ಅರಿತು ತಾವಾಗಿಯೇ ಸಹಾಯ ಹಸ್ತ ನೀಡಿದ್ದಿದೆ. ಬೇಧವಿಲ್ಲದ ಗುಣಗ್ರಾಹಿತನಕ್ಕೆ ಅವರು ಹೆಸರಾಗಿದ್ದರು. ಮತ್ತೆ ನನ್ನದೇ ಉದಾಹರಣೆ ಹೇಳುವುದಾದರೆ, ಪರೀಕ್ಷೆಯ ಫಲಿತಾಂಶ ಬಂದ ಮೇಲೆ ನಾಯಕರಿಂದ ನಡತೆಯ ಪ್ರಮಾಣ ಪತ್ರ (testimonial) ಪಡೆಯಲು ಅವರ ಕೊಠಡಿಗೆ ಹೋದಾಗ ನನ್ನ ಪೂರ್ವಾಪರ ವಿಚಾರಿಸಿ ಮಹಾರಾಜ ಕಾಲೇಜಿನಲ್ಲಿ ನಾಲ್ಕು ಕನ್ನಡ ಅಧ್ಯಾಪಕ ಹುದ್ದೆಗಳಿವೆ, ಬರ್ತೀರೇನ್ರಿ? ಎಂದು ಬಿಗು ಧ್ವನಿಯಲ್ಲೇ ಕೇಳಿದ್ದರು. ನನ್ನ ಕೌಟುಂಬಿಕ ಕಷ್ಟಗಳ ಪ್ರವರಗಳನ್ನೆಲ್ಲ ಹೇಳಿಕೊಂಡು ನಾನು ನನ್ನ ಊರಿನ (ತೀರ್ಥಹಳ್ಳಿ) ಕಾಲೇಜಿಗೇ ಹೋಗುತ್ತೇನೆಂದು ಅಲ್ಲಿಗೇ ಅವರಿಂದ ಶಿಫಾರಸ್ಸು ಪತ್ರ ಪಡೆದಿದ್ದೆ. ಒಂದು ವಿಶ್ವವಿದ್ಯಾನಿಲಯದ ಕಾಲೇಜಿಗೂ ಹೊರಗಿನ ಕಾಲೇಜಿಗೂ ಇರುವ ವ್ಯತ್ಯಾಸ ಆಗ ನನಗೆ

ತಿಳಿದಿರಲಿಲ್ಲ. ಒಮ್ಮೆ ನಾನು ಹೂಂ ಎಂದು ಬಿಟ್ಟಿದ್ದರೆ ನಾಯಕರ ಮಾತೆಂಬುದು ಉದ್ಯೋಗದ ಆದೇಶವೇ ಆಗಿದ್ದಂಥ ಸಂದರ್ಭ ಅದು. ನನ್ನ ಭವಿಷ್ಯದ ದಾರಿಗೆ ನಾನೇ ಮುಳ್ಳೆಳೆದುಕೊಂಡ ಅಂದಿನ ಮೂರ್ಖತನಕ್ಕಾಗಿ ವೃತ್ತಿ ಜೀವನದುದ್ದಕ್ಕೂ ಪಶ್ಚಾತ್ತಾಪ ಪಟ್ಟಿದ್ದಲ್ಲದೆ ಈಗಲೂ (ನಿವೃತ್ತಿಯ ನಂತರ) ಮರುಗುತ್ತಿದ್ದೇನೆ.

ಬಹಳ ಬುದ್ಧಿವಂತ ಸಮರ್ಥ ವಿದ್ಯಾರ್ಥಿ ಎಂದು ಅವರ ದೃಷ್ಟಿಗೆ ನಾನು ಕಂಡಿರಲು ಸಾಧ್ಯವಿಲ್ಲ. ಆದಾಗ್ಯೂ ನನ್ನಂಥ ಅಧೀರ ವಿದ್ಯಾರ್ಥಿಗಳ ಕುರಿತು ಅವರಿಗಿದ್ದ ಉದಾರ ಮನೋಭಾವ ಸಹಾನುಭೂತಿಗಳು ವಿಶೇಷವಾಗಿದ್ದವು. ನಾಯಕರೆದುರು ನಡೆದ ಇನ್ನೊಂದು ಪ್ರಮಾದವನ್ನು ಇಲ್ಲಿ ಹೇಳಬೇಕು, ಎಂ.ಎ. ಎರಡನೇ ವರ್ಷದ ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಮಾರಂಭದಲ್ಲಿ ಮೊದಲ ಎಂ.ಎ.ದಲ್ಲಿ ಓದುತ್ತಿದ್ದ ನಾನು ಕಿರಿಯ ವಿದ್ಯಾರ್ಥಿಗಳ ಪರವಾಗಿ ಮಾತನಾಡುತ್ತ ಹಿರಿಯ ವಿದ್ಯಾರ್ಥಿಗಳೊಂದಿಗೆ ನಾವು ಒಂದು ವರ್ಷ ಒಳ್ಳೆಯ "ದಾಂಪತ್ಯ ಜೀವನ" ನಡೆಸಿದೆವು ಎಂದು ಹೇಳಿಬಿಟ್ಟೆದ್ದೆ. ಒಂದು ಕುಟುಂಬದವರಂತೆ ಹೊಂದಿಕೊಂಡು ಅಭ್ಯಾಸ ನಡೆಸಿದ್ದೆವೆಂದು ಹೇಳಬೇಕಾದ್ದು ನನ್ನ ಉದ್ದೇಶವಾಗಿತ್ತು. ಆ ಭಾವನೆಗೆ ತಕ್ಕ ಅಭಿವ್ಯಕ್ತಿ ನೀಡುವಲ್ಲಿ ನಾನು ವಿಫಲನಾಗಿದ್ದೆ. ಅಧ್ಯಕ್ಷ ಭಾಷಣ ಮಾಡುತ್ತಾ ನಾಯಕರು ನಗೆ ಮಾತಿನಿಂದಲೇ ಅದನ್ನು ತಿದ್ದಿ ಹೇಳಿ ನನ್ನ ಮುಖ ಉಳಿಸಿದ್ದರು. ಮಂದಮತಿಯಾದ ನನಗೆ ಇದೆಲ್ಲ ತಿಳಿದಿದ್ದು ಒಂದೆರಡು ದಿನಗಳ ನಂತರವೇ. ಅವಮಾನಿತನಾದಂತಾಗಿ ನಾಲ್ಕಾರು ದಿನ ಮಿತ್ರರಿಗೆ ಮುಖ ತೋರಿಸದೆ ಓಡಾಡಿದ್ದೆ. ಮನದೊಳಗೆ ನಾಯಕರಿಗೆ ಕೃತಜ್ಞತೆ ಸಲ್ಲಿಸಿದ್ದೆ. ಹೀಗೆ ವಿದ್ಯಾರ್ಥಿಗಳ ತಪ್ಪುಗಳನ್ನು ನಯವಾದ ವಿಧಾನದಿಂದ ತಿದ್ದುವುದು ನಾಯಕರ ವಿಧಾನವಾಗಿತ್ತು.

ದೇಶ ವಿದೇಶಗಳ ಅನೇಕ ವಿಶ್ವವಿದ್ಯಾನಿಲಯಗಳಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ಹೋಗಿ ಉಪನ್ಯಾಸ ನೀಡುತ್ತಿದ್ದ ನಾಯಕರಿಗೆ ವಿಶ್ವದಾದ್ಯಂತ ಅಭಿಮಾನಿ ವಿದ್ಯಾರ್ಥಿಗಳಿದ್ದಾರೆ. ನಾಯಕರೊಬ್ಬ ಯಶಸ್ವೀ ಬೋಧಕರು ಎಂಬುದನ್ನು ದೃಢಪಡಿಸಿಕೊಳ್ಳುವುದಕ್ಕೆ ಅವರ ಜೀವಿತದಲ್ಲಿ ನಡೆದ ಎರಡು ಘಟನೆಗಳನ್ನು ಉಲ್ಲೇಖಿಸಬಹುದಾಗಿದೆ. ಒಂದು ತುಮಕೂರು ಕಾಲೇಜಿನಲ್ಲಿ ಅಧ್ಯಾಪನ ವೃತ್ತಿಗೆ ಸೇರಿಕೊಂಡಾಗ ಮೊದಲ ದಿನ ಮೊದಲ ಗಂಟೆ ಪಾಠ ಮಾಡಿ ಹೊರಬಂದಾಗ ವಿದ್ಯಾರ್ಥಿಗಳು ಅತ್ಯಂತ ಹರ್ಷ ಮತ್ತು ಮೆಚ್ಚುಗೆ ವ್ಯಕ್ತಪಡಿಸಿದ್ದು. ಮತ್ತೊಂದು ಅವರು ೧೯೭೧ರಲ್ಲಿ ವೃತ್ತಿಯಿಂದ ನಿವೃತ್ತರಾದ ದಿನ ಕೊನೆಯ ಗಂಟೆಯ ಪಾಠದ ನಂತರ ವಿದ್ಯಾರ್ಥಿಗಳು ಕಣ್ಣೀರಿಟ್ಟಿದ್ದು. ಇವುಗಳನ್ನು ನೆನಪಿಸಿಕೊಳ್ಳುತ್ತಾ ನಾಯಕರೇ ತಮ್ಮ ಪ್ರಾಧ್ಯಾಪಕ ವೃತ್ತಿಯ ಬಗ್ಗೆ ಧನ್ಯತಾಭಾವ ಹೊಂದಿದ್ದನ್ನು ದಾಖಲಿಸಿದ್ದಾರೆ. ಅಧ್ಯಾಪಕನೊಬ್ಬನಿಗೆ ವಿದ್ಯಾರ್ಥಿಗಳ ಸಂತೃಪ್ತಿಗಿಂತ ಬೇರೇನು ಪ್ರಶಸ್ತಿಬೇಕು? ವಿದ್ಯಾರ್ಥಿಗಳಿಂದ ಅಂಥ ಪ್ರಶಸ್ತಿ ಪಡೆದ ನಾಯಕರು ತಮ್ಮ ಶ್ರೇಷ್ಠ ನಡೆನುಡಿಗಳಿಂದ, ಬರಹಗಳಿಂದ ನಾಡಿನೆಲ್ಲರ ಬುದ್ಧಿ ಮನಗಳನ್ನು ಪ್ರಭಾವಿಸಿ ತಿದ್ದಿ ನಡೆಸಿದ್ದ ಆಳಿದ್ದ ತಮ್ಮ ಮಾದರಿ ನಡೆಸಿದ್ದ ನಿಜವಾದ ನಾಡೋಜರಾಗಿದ್ದರೆಂದರೆ ಅತಿಶಯೋಕ್ತಿಯಲ್ಲ.

❖

# ಒಡಲ ಒಳಿತಿಗೆ ಬೆಳಕಾದ ಗುರು

## (ಪ್ರೊ॥ ಸಾ.ಕೃ. ರಾಮಚಂದ್ರರಾವ್)

● *ಎಸ್. ಸೂರ್ಯಪ್ರಕಾಶ ಪಂಡಿತ್*

ಗುರುಗಳನ್ನು ನಾನು ಮೊದಲು ಕಂಡದ್ದು ಎಂದು? ಎಲ್ಲಿ? – ಎಂಬ ಮಾಹಿತಿ ಇಂದು ನನ್ನಿಂದ ಅಳಸಿಹೋಗಿದೆ; ಆದರೆ ಆ ಮೊದಲ ದರ್ಶನದ ಫಲವನ್ನು ಮಾತ್ರ ಇಂದಿಗೂ ಸವಿಯುತ್ತಿದ್ದೇನೆ.

ಆಗಿನ್ನೂ ನಾನು ಪಿ.ಯು. ವಿದ್ಯಾರ್ಥಿ; ಯಾವುದೋ ಒಂದು ಸಾರ್ವಜನಿಕ ಕಾರ್ಯಕ್ರಮಕ್ಕೆ ಹೋಗಿದ್ದೆ. ಗುರುಗಳ ದರ್ಶನವಾದದ್ದು ಅಲ್ಲಿಯೇ ಕಾರ್ಯಕ್ರಮದ ವಿವರಗಳು ಸ್ಪಷ್ಟವಾಗಿ ನೆನಪಿಲ್ಲ. ಆದರೆ ಶುಭ್ರ – ಶ್ವೇತವಸ್ತ್ರಧಾರಿಗಳಾಗಿ, ಹಣೆಯಲ್ಲಿ ಗೋಪೀ ಚಂದನವನ್ನು ಧರಿಸಿದ್ದ, ಫಳಫಳ ಹೊಳೆಯುವ ಕಣ್ಣುಗಳನ್ನು ಒಂದೆಡೆ ಕೇಂದ್ರೀಕರಿಸಿ ಯಾವುದೇ ಚೀಟಿ – ಪುಸ್ತಕಗಳ ನೆರವಿಲ್ಲದೆ ನಿರರ್ಗಳವಾಗಿ ಮಾತನಾಡಿದ ಗುರುಗಳ ನಿಲುವು, ಮಾತಿನ ಹೊಳಹು – ಎರಡೂ ಕೂಡ ಇಂದಿಗೂ ನನಿಂದ ಮಾಸಿಹೋಗಿಲ್ಲ. ಅಂದು ಮಾತನಾಡಿದವರು ವಿದ್ಯಾಲಂಕಾರ ಪ್ರೊ॥ ಸಾ.ಕೃ. ರಾಮಚಂದ್ರರಾಯರು ಎನ್ನುವುದು ಆ ಮೊದಲೇ ತಿಳಿದಿತ್ತು. ಗುರುಗಳ ಕೆಲವೊಂದು ಪುಸ್ತಕಗಳನ್ನು ಅಷ್ಟುಹೊತ್ತಿಗೆ ನೋಡಿದ್ದೆ, ಅವರ ಕೆಲವೊಂದು ಲೇಖನಗಳನ್ನು ಪತ್ರಿಕೆಗಳಲ್ಲೂ ಓದಿದ್ದೆ. ಅವರಲ್ಲಿ ಇವರಲ್ಲಿ ಅವರನ್ನು ಕುರಿತಂತೆ ಕೆಲವೊಂದು ಮಾತುಗಳನ್ನೂ ಕೇಳಿದ್ದೆ. ಗುರುಗಳು ಅಂದು ಮಾತನಾಡಿದ್ದರಲ್ಲಿ ನನಗೆ ಎಷ್ಟು ಅರ್ಥ ವಾಯಿತೋ? ಈಗ ಹೇಳುವುದು ಕಷ್ಟ. ಆದರೆ ಅವರು ಮಾತನಾಡಿದ್ದು ನನ್ನ ಬದುಕಿಗೆ ಬೇಕಾದದ್ದು, ಅದು ಜೀವಪೋಷಕ ಸಾಮಗ್ರಿ ಎಂಬ ಅರಿವು ಮಾತ್ರ ಅಂದೇ ಜಾಗೃತವಾಗಿದ್ದುದು ದಿಟ. ಇಂದೂ ಆ ಅರಿವು, ನಿಲುವು ಅಲುಗಾಡದೆ ನನ್ನಲ್ಲಿ ನೆಲೆಯೂರಿ ನಿಂತಿದೆಯೆನ್ನಿ. ವಿವರಣೆಗೆ ನಿಲುಕದ ಹಿತವಾದ ಇಂಥ ಭಾವವೊಂದು ತೀವ್ರವಾಗಿ ಪದೇ ಪದೇ ಕಾಡುತ್ತಿದ್ದುದರಿಂದಲೇ, ಎಲ್ಲಿಯಾದರು ಗುರುಗಳ ಕಾರ್ಯಕ್ರಮವಿದೆಯೆಂದು ಸುದ್ದಿ ಗೊತ್ತಾದರೆ ತಪ್ಪದೆ ಅಲ್ಲಿಗೆ ಹಾಜರಾಗುವಂಥ ಒತ್ತಡ ಅಂದಿನಿಂದಲೇ ಆರಂಭವಾಯಿತು. ಅಂದು ದೀಕ್ಷೆಯನ್ನು ಪಡೆದುಕೊಂಡ ಈ ವ್ರತ ಬುದ್ಧಿಯಲ್ಲಿಯ ಉತ್ಸಾಹ–ಕುತೂಹಲಗಳು ಗುರುಗಳ ಕೊನೆಯ ಕಾರ್ಯಕ್ರಮದವರೆಗೂ ನನ್ನಿಂದ ಜಾರಿಹೋಗಲಿಲ್ಲ. ಅಂದು ಮೊದಲ ದಿನ ಅವರನ್ನು ಕಂಡಾಗ ಅವರ ಮಾತನ್ನು ಆಲಿಸಿದಾಗ 'ಇವರು ಸಾಮಾನ್ಯ ವ್ಯಕ್ತಿಗಳಲ್ಲ. ಎತ್ತರದ ವ್ಯಕ್ತಿಗಳು; ಋಷಿ ಚೇತನ; ನನ್ನ ಬದುಕಿಗೆ ಒದಗುವವರು' ಎಂಬ ಗೌರವ ಶ್ರದ್ಧೆ ಭಕ್ತಿಗಳ ನನ್ನಲ್ಲಿ ತುಂಬಿಕೊಂಡದ್ದು ಇಂದಿಗೂ ಆ ಭಾವಪಾತ್ರದ ಚೈತನ್ಯರಸದಲ್ಲಿ ಒಂದು ಹನಿಯಷ್ಟು

ಚೆಲ್ಲಿ ಹೋಗಿಲ್ಲವೆನ್ನಿ. ಅಂದು ಕೈ ಹಿಡಿದ ಭಾರತೀಯ ಪ್ರಜ್ಞೆಯ ಬೆಳಕು ಇಂದಿಗೂ ಕೈಬಿಡದೆ ಜೀವಯಾನದಲ್ಲಿ ಆಸರೆಯಾಗಿ ಮುನ್ನಡೆಸುತ್ತಿದೆ.

ಹೀಗೆ ಗುರುಗಳ ಉಪನ್ಯಾಸವನ್ನು ಕೇಳುತ್ತ ಬಂದೆನಾದರೂ ಅವರನ್ನು ಮಾತನಾಡಿಸುವ ಸೌಭಾಗ್ಯ ಮಾತ್ರ ಒದಗಿರಲಿಲ್ಲ; ಧೈರ್ಯವೂ ನನ್ನಲ್ಲಿರಲಿಲ್ಲವೆಂದು ಹೇಳಿದರೂ ನಡೆದೀತು! ಕೆಲವು ವರ್ಷಗಳ ಬಳಿಕ ಆ ಅಮೃತಘಳಿಗೆಯೂ ಬಂದಿತು. ವಾಸ್ತುಶಾಸ್ತ್ರವನ್ನು ಕುರಿತಂತೆ ಅಂತರರಾಷ್ಟ್ರೀಯ ವಿಚಾರ ಸಂಕಿರಣವೊಂದನ್ನು ಖ್ಯಾತ ಜ್ಯೋತಿರ್ವಿಜ್ಞಾನಿ ಡಾ॥ ಬಿ.ವಿ. ರಾಮನ್ ಅವರ ಸಂಸ್ಥೆಯಿಂದ ಆಯೋಜಿತವಾಗಿತ್ತು, ವಿಧಾನಸೌಧದ ಬ್ಯಾಂಕೆಟ್ ಹಾಲ್‌ನಲ್ಲಿ ಆ ಸಂದರ್ಭದಲ್ಲಿ ಗುರುಗಳ ಲೇಖನವೊಂದು ಪತ್ರಿಕೆಯೊಂದರಲ್ಲಿ ಪ್ರಕಟವಾಗಿತ್ತು. ವಿಚಾರ ಸಂಕಿರಣದಲ್ಲಿ ಆಶಯ ಭಾಷಣವೂ ಗುರುಗಳದ್ದೇ; ಲೇಖನದಲ್ಲಿದ್ದ ವಿಷಯಗಳನ್ನಿಟ್ಟುಕೊಂಡೇ ಮಾತನಾಡಿದರು. ಒಂದೆರಡು ದಿನಗಳ ಬಳಿಕ, ಗುರುಗಳು ಲೇಖನದಲ್ಲಿ ಪ್ರತಿಪಾದಿಸಿದ್ದ ವಿಷಯಗಳಿಗಿಂತಲೂ ಭಿನ್ನ ಧ್ವನಿಯಲ್ಲಿ ಮತ್ತೊಬ್ಬರು ಅದೇ ಪತ್ರಿಕೆಯಲ್ಲಿ ಲೇಖನವೊಂದನ್ನು ಬರೆದಿದ್ದರು. ಪ್ರಾಯಶಃ ಲೇಖನವು ಪ್ರಕಟವಾಗಿದ್ದ ದಿನದಂದೇ ಸಂಜೆ ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ಗುರುಗಳ ಉಪನ್ಯಾಸವೊಂದು ಏರ್ಪಾಟಾಗಿದ್ದಿತು. ಅಂದು ಗುರುಗಳನ್ನು ಮಾತನಾಡಿಸಲೇಬೇಕೆಂಬ ದೃಢಸಂಕಲ್ಪದಿಂದಲೇ ಕಾರ್ಯಕ್ರಮಕ್ಕೆ ಹೊರಟೆ. ಗುರುಗಳ ನಿಲವಿಗೆ ಅಡ್ಡಮಾತನ್ನು ಬರೆದಿದ್ದವರಿಗೆ ಉತ್ತರವನ್ನು ಕೊಡುವ ಹಠವೂ ನನ್ನಲ್ಲಿ ತೀವ್ರವಾಗಿ ಒಂದು ಸಣ್ಣ ಬರಹವನ್ನು ಸಿದ್ಧಿಮಾಡಿದ್ದೆ. ಉಪನ್ಯಾಸ ಮುಗಿದ ಮೇಲೆ ಗುರುಗಳಿಗೆ ವಂದಿಸಿ. ಮಾತನಾಡಿಸಿದೆ. ಲೇಖನದ ಬಗ್ಗೆ ಅವರಲ್ಲಿ ನಿವೇದಿಸಿಕೊಂಡೆ ಅಂದು ಆ ಕ್ಷಣ ಗುರುಗಳು ಹೇಳಿದ ಮಾತು ಎಂದಿಗೂ ಮರೆಯುವಂತಿಲ್ಲ; ಮರೆತೂ ಇಲ್ಲವೆನ್ನಿ; "ಎಲ್ಲರಿಗೂ ಅವರವರ ಅಭಿಪ್ರಾಯ ಹೇಳುವ ಸ್ವಾತಂತ್ರ್ಯವಿದೆ; ಅವರು ಹೇಳುವುದರಲ್ಲೂ ಕೆಲವು ಸತ್ಯಗಳಿವೆ." ಅನಂತರದಲ್ಲೂ ಗುರುಗಳ ಈ ಔದಾರ್ಯದ ಬೌದ್ಧಿಕ ಪ್ರಾಮಾಣಿಕತೆಯ ಹಲವು ಪ್ರಸಂಗಗಳನ್ನು ಹತ್ತಿರದಿಂದ ಕಾಣುವಂಥ ಭಾಗ್ಯ ನನಗೆ ಒದಗಿಬಂದಿತು. ಅಂದು ಗುರುಗಳ ಹಸ್ತಾಕ್ಷರವನ್ನು ಪಡೆಯುವ ಉದ್ದೇಶದಿಂದಲೇ ಒಂದು ಪುಸ್ತಕವನ್ನು ತೆಗೆದುಕೊಂಡು ಹೋಗಿದ್ದೆ; ಅವರೇ ಬರೆದಿದ್ದ 'ಪ್ರಿನ್ಸಿಪಲ್ಸ್ ಆಫ್ ಯಜ್ಞವಿಧಿ.' ಹಸ್ತಾಕ್ಷರವನ್ನು ಪಡೆದೆ. ಆ ಸಂದರ್ಭದಲ್ಲಿ ಗುರುಪತ್ನಿಯವರೂ ಇದ್ದರು.

ಇದಾದ ಬಳಿಕ, ಕಾರ್ಯಕ್ರಮಗಳಲ್ಲಿ ಸಂಧಿಸಿದಾಗ ಗುರುಗಳಿಗೆ ನಮಸ್ಕರಿಸುತ್ತಿದ್ದೆ; ಅವರೂ ಪ್ರತಿ ನಮಸ್ಕಾರಿಸುತ್ತಿದ್ದರು. ಮುಗುಳ್ನಗೆಯೊಂದಿಗೆ. ಆ ನಗು ಎಷ್ಟೋ ಸಮಯದವರೆಗೆ ಚೈತನ್ಯವನ್ನು ಒದಗಿಸುತ್ತಿತ್ತು. ಅವರ ನಗುವಿಗೆ, ನೋಟಕ್ಕೆ ಅಂಥ ವಿಶೇಷ ಶಕ್ತಿಯಿದ್ದದ್ದನ್ನು ಅವರನ್ನು ಕಂಡವರೆಲ್ಲರೂ ಬಲ್ಲರೆನ್ನಿ ಒಮ್ಮೊಮ್ಮೆ "ಹೇಗಿದ್ದೀರಿ?" ಎಂದೂ ಕುಶಲಪ್ರಶ್ನೆಯನ್ನು ಮಾಡುತ್ತಿದ್ದರು.

ಅನಂತರದಲ್ಲಿ ನನ್ನ ಕಾಲೇಜು ದಿನಗಳಲ್ಲಿ "ಅಭಿಜ್ಞಾನ"ದ ಕಲ್ಪನೆ ನನ್ನನ್ನು ಆವರಿಸಿಕೊಂಡದ್ದು. ಅದರ ಸ್ಥಾಪನೆಯಾದದ್ದು, ಪುಸ್ತಕಗಳನ್ನು ಪ್ರಕಟಿಸಲು ಆರಂಭಿಸಿದ್ದು

– ಇವೆಲ್ಲವೂ ಬೇರೆಯೇ ಕಥಾಪ್ರಸಂಗದ ವಿವರಗಳು ಗುರುಗಳ ಕೆಲವೊಂದು ಕೃತಿಗಳನ್ನೂ ಅಭಿಜ್ಞಾನದಿಂದ ಪ್ರಕಟಿಸುವುದಾಯಿತು. (ಈ ವಿವರಗಳಲ್ಲೂ ಹಲವು ಸ್ವಾರಸ್ಯಗಳಿವೆ; ಅವನ್ನು ಬೇರೊಂದು ಬರಹದಲ್ಲಿ ಪ್ರಸ್ತಾಪಿಸಲಿದ್ದೇನೆ.)

ಹೀಗೆ, ಒಂದು ದಿನ, ಮುಂದೆ ನನ್ನ ಬದುಕಿನ ಅತ್ಯಂತ ಅವಿಸ್ಮರಣೀಯ ಅನುಭವಗಳನ್ನು ಒದಗಿಸಲಿರುವ ಸುವಾರ್ತೆಯೊಂದನ್ನು ಕೇಳಿದೆ: 'ಗುರುಗಳು ತಮ್ಮ ಮನೆಯಲ್ಲಿ ವೇದಾಂತದ ತರಗತಿಗಳನ್ನು ನಡೆಸುತ್ತಿದ್ದಾರೆ' – ಎಂದು ನನಗೂ ಗುರುಗಳ ಪಾಠವನ್ನು ಕೇಳುವ ತವಕ. ಆದರೆ ಅವರನ್ನು ಕೇಳಲು ಧೈರ್ಯ ಸಾಲದು. ಅವರದ್ದೇನೂ ಭಯವನ್ನು ಹುಟ್ಟಿಸುವಂಥ ವ್ಯಕ್ತಿತ್ವವಾಗಿದ್ದಿರಲಿಲ್ಲವೆನ್ನಿ; ಆದರೆ ಅವರ ಮುಂದೆ ನಿಂತು ಧೈರ್ಯವಾಗಿ ಮಾತನಾಡುವುದು ಎಂಥವರಿಗೂ ಒಂದು ಸಾಹಸವೇ ಇದ್ದ ಧೈರ್ಯವನ್ನೆಲ್ಲ ತಂದುಕೊಂಡು ಗುರುಗಳಿಗೆ ಫೋನ್ ಮಾಡಿಯೇಬಿಟ್ಟೆ! "ಸಾರ್! ನಿಮ್ಮ ಮನೆಯಲ್ಲಿ ಉಪನಿಷತ್ತುಗಳ ಪಾಠ ನಡೆಯುತ್ತಿದೆಯಂತೆ!!!" "ಹ್ಞಾ, ಹೌದು ಹೌದು," ನಿಮ್ಮಲ್ಲಿ ನನ್ನದೊಂದು ಕೋರಿಕೆ ಸಾರ್!" "ಕೇಳಿ!" ಭಯದಿಂದಲೇ ಕೇಳಿದೆ – "ನಾನೂ ಪಾಠಕ್ಕೆ ಬರಬಹುದಾ ಸಾರ್!" "ಅಯ್ಯೋ ಅಷ್ಟೇನೇ! ಅಗತ್ಯವಾಗಿ ಬನ್ನಿ." ಈ ಮಾತನ್ನು ಕೇಳಿದ ತತ್‌ಕ್ಷಣದಲ್ಲಿ ಆದ ಅನುಭವ ವರ್ಣನಾತೀತ. ಗುರುಗಳ ಪಾಠದ ಕ್ರಮ ನನಗೆ ಗೊತ್ತಿರಲಿಲ್ಲ. ಅವರು ಪದೇ ಪದೇ ವೇದಿಕೆಗಳಲ್ಲಿ ಘೋಷಿಸಿಕೊಳ್ಳುತ್ತಿದ್ದುದು "ನಾನು ಸಂಪ್ರದಾಯವಾದಿ" ಎಂದೇ. ಈ ಮಾತು ನನ್ನ ಕಿವಿಯಲ್ಲಿ ಪ್ರತಿಧ್ವನಿಸುತ್ತಿತ್ತು. ಹೀಗಾಗಿ ಅಳುಕಿನಿಂದಲೇ ಅವರಲ್ಲಿ ನಿವೇದಿಸಿಕೊಂಡೆ "ಸಾರ್! ನನಗೆ ಸಂಸ್ಕೃತವೇನೂ ಅಷ್ಟಾಗಿ ಬರೋದಿಲ್ಲ". ಕೂಡಲೇ ಗುರುಗಳೆಂದರು – "ಒಳ್ಳೆದೇ ಆಯ್ತು! ವೇದಾಂತಕ್ಕೂ ಸಂಸ್ಕೃತಕ್ಕೂ ಸಂಬಂಧ ಏನೂ ಇಲ್ಲ, ನೀವು ಬನ್ನಿ." ಎಷ್ಟು ಸುಲಭವಾಗಿ ಗುರುಗಳ ಪಾಠಕ್ಕೆ ಪ್ರವೇಶ ಸಿಕ್ಕೀತೆಂದು ನಾನು ಕನಸಿನಲ್ಲೂ ಊಹಿಸಿರಲಿಲ್ಲವೆನ್ನಿ! ಅನಂತರದ ದಿನಗಳಲ್ಲಿ ಗುರುಗಳಿಂದ ಪದೇ ಪದೇ ಕೇಳುತ್ತಿದ್ದಂಥ ಒಂದು ಮಾತು ಇಲ್ಲಿ ಉಲ್ಲೇಖನೀಯ. "ನಮಗೆ ಯಾವುದೇ ಒಂದು ವಿಷಯವನ್ನು ಕುರಿತಂತೆ ತೀವ್ರತೆ ಇದ್ದಾಗ, ನಾವು ಅದನ್ನು ಪಡೆಯಲು ಸಿದ್ಧರಾದಾಗ ಅದು ತನ್ನಷ್ಟಕ್ಕೆ ತಾನೇ ಒದಗಿಬರುತ್ತದೆ." ನಾನು ಸಿದ್ಧನಾಗಿದ್ದೆನೆಂದು ಹೇಳುವುದು ಅಹಂಕಾರದ ಮಾತಲ್ಲದೆ ಮತ್ತೇನು? ನನ್ನನ್ನು ಗುರುಗಳೇ ಸಿದ್ಧಮಾಡಿದ್ದಿರಬೇಕು.

ಗುರುಗಳ ತರಗತಿಗಳಿಗೆ ಪ್ರವೇಶ ದೊರೆತದ್ದು ಹೀಗೆ. ಅವರಿಂದ ಶಾಸ್ತ್ರಪಾಠವನ್ನು ಕೇಳುವ ಸೌಭಾಗ್ಯ. ಅವರಲ್ಲಿ ಶಿಷ್ಯತ್ವವನ್ನು ನಡಸುವ ಸುಕೃತ ಹಲವು ವರ್ಷಗಳೇ ನಡೆದವು; ಹೆಚ್ಚು ಕಡಮೆ ಅವರು ಶರೀರವನ್ನು ಬಿಡುವ ಕೆಲವೇ ದಿನಗಳ ಹಿಂದಿನ ದಿನಗಳವರೆಗೂ ಅವರಿಂದ ಶಾಸ್ತ್ರದ ವಿಷಯಗಳನ್ನೂ ಅಧ್ಯಾತ್ಮದ ವಿವರಗಳನ್ನೂ ಪಡೆದುಕೊಳ್ಳುವಂಥ ಅಪೂರ್ವಯೋಗವನ್ನು ಒದಗಿಸಿದ ಆ ಮಹಾಚೈತನ್ಯವಸ್ತುವಿಗೆ ಹೇಗೆ ಋಣವನ್ನು ಸಲ್ಲಿಸಲಾದೀತು?

ಗುರುಗಳು ಹಲವು ವಿದ್ಯಾಶಾಖೆಗಳಲಿ ಕೃತ ಪರಿಶ್ರಮರು. ಅವರದ್ದು ಸಾಂಪ್ರದಾಯಿಕ

ಮನೆತನ. ಸಂಗೀತ, ಸಂಸ್ಕೃತ, ಆಯುರ್ವೇದ, ಚಿತ್ರಕಲೆಗಳ ವಾತಾವರಣವಿದ್ದ ಮನೆ. ಆರ್ಥಿಕವಾಗಿ ಬಡತನವಿದ್ದರೂ ಸಾಂಸ್ಕೃತಿಕವಾಗಿ ಶ್ರೀಮಂತವಾಗಿದ್ದ ಇಂಥ ಪರಿಸರ ಗುರುಗಳ ಬಾಲ್ಯದ ಮೇಲೆ ಅಚ್ಚಳಿಯದ ಪ್ರಭಾವವನ್ನು ಮೂಡಿಸಿದ್ದರಲ್ಲಿ ಅಚ್ಚರಿಯೇನಿಲ್ಲ. ಆರ್ಥಿಕ ಕ್ಲೇಶಗಳ ನಡುವೆಯೇ ಗುರುಗಳು ಲೌಕಿಕ ಶಿಕ್ಷಣವನ್ನೂ ಶಾಸ್ತ್ರಾಧ್ಯಾಯನವನ್ನು ನಡಸಿದವರು. ಮನಃಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ಅವರು ಅಂತರರಾಷ್ಟ್ರೀಯ ಖ್ಯಾತಿಯ ನಿಮ್ಹಾನ್ಸ್‌ನಲ್ಲಿ ಉದ್ಯೋಗದಲ್ಲಿದ್ದವರು; ತಮ್ಮ ಆತ್ಮಗೌರವಕ್ಕೆ ಧಕ್ಕೆ ಒದಗಿದಾಗ ಅಲ್ಲಿಂದ ಹೊರಬಂದರು.

ಹಲವಾರು ಗುರುಗಳಿಂದ ತಮ್ಮ ಜೀವನವನ್ನು ಸಾರ್ಥಕ್ಯಗೊಳಿಸಿಕೊಂಡವರು ಗುರುಗಳು ಯಜ್ಞವಿಠಲಾಚಾರ್ಯರಲ್ಲಿ ತರ್ಕಶಾಸ್ತ್ರ, ಕೇಶವಶಿವಘನಪಾಠಿಗಳಲ್ಲಿ ಯಜುರ್ವೇದ, ವೆಂಕಟೇಶ ಸೋಮಯಾಜಿಗಳಲ್ಲಿ ಪೂರ್ವಮೀಮಾಂಸಾಶಾಸ್ತ್ರ, ಪಾಲಕ್ಕಾಡು ನಾರಾಯಣಶಾಸ್ತ್ರಿಗಳಲ್ಲಿ ಅದ್ವೈತದರ್ಶನ – ಹೀಗೆ ಹಲವು ಶಾಸ್ತ್ರಗಳನ್ನು ಅಧ್ಯಯನ ಮಾಡಿ 'ವಿದ್ಯಾಲಂಕಾರ' ಎಂಬ ಅಭಿದಾನಕ್ಕೆ ಪಾತ್ರರಾದವರು ಗುರುಗಳು. ವೇದ, ವೇದಾಂತ, ಆಯುರ್ವೇದ, ಯೋಗ, ತಂತ್ರ, ಸಂಗೀತ, ನೃತ್ಯ, ಚಿತ್ರ, ಶಿಲ್ಪ, ಬೌದ್ಧ, ಜೈನ ಮುಂತಾದ ಹತ್ತಾರು ವಿಷಯಗಳ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡುತ್ತಿದ್ದವರು ಗುರುಗಳು. ಈ ಎಲ್ಲ ವಿಷಯಗಳನ್ನು ಕುರಿತಂತೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ನೂರಾರು ಗ್ರಂಥಗಳನ್ನು ರಚಿಸಿದ್ದಾರೆ; ಸಾವಿರಾರು ಲೇಖನಗಳನ್ನು ಬರೆದಿದ್ದಾರೆ; ಲೆಕ್ಕವಿಲ್ಲದಷ್ಟು ಉಪನ್ಯಾಸಗಳನ್ನು ನೀಡಿದ್ದಾರೆ; ಹಲವು ದಶಕಗಳ ಕಾಲ ಪಾಠವನ್ನು ಹೇಳಿದ್ದಾರೆ.

ಗುರುಗಳ ಪದತಲದಲ್ಲಿ ಕುಳಿತು ಹಲವು ವರ್ಷಗಳು ಹಲವು ವಿಷಯಗಳನ್ನು ಕುರಿತಂತೆ ಅವರಿಂದ ಶಾಸ್ತ್ರಪಾಠವನ್ನು ಕೇಳಿದ್ದು ಮಹಾತತ್ತ್ವವು ನನಗೆ ನನ್ನ ಬದುಕಿನಲ್ಲಿ ಅನುಗ್ರಹಿಸಿದ ಮಹಾವರವೇ ಹೌದು. ಬೃಹದಾರಣ್ಯಕೋಪನಿಷತ್, ಛಾಂದೋಗ್ಯೋಪನಿಷತ್, ಈಶಾವಾಸೋಪನಿಷತ್, ಮಾಂಡೂಕ್ಯೋಪನಿಷತ್, ಮಾಂಡೂಕ್ಯಕಾರಿಕಾ, ಯೋಗಸೂತ್ರಗಳು, ಬ್ರಹ್ಮಸೂತ್ರಗಳು, ರಾಮಾಯಣ, ನಾಟ್ಯಾಶಾಸ್ತ್ರ, ಶಿವಸೂತ್ರಗಳು, ವಾಸುದೇವಮನನಮ್ – ಹೀಗೆ ಹತ್ತಾರು ಮಹಾಕೃತಿಗಳ ಸಾರವನ್ನೂ ಸತ್ತ್ವವನ್ನೂ ತತ್ತ್ವವನ್ನೂ ಗುರುಗಳಿಂದ ಅರಿಯುವಂತಾದದ್ದು ನನ್ನ ಪಾಲಿಗೆ ಶ್ರವಣಾನಂದವೂ ಆಗಿದ್ದಿತು, ಶ್ರಮಣಾನಂದವೂ ಆಗಿದ್ದಿತು.

ಗುರುಗಳು ಹಲವು ದಶಕಗಳಿಂದ ತಪ್ಪದೆ. ಅವರ ಮನೆಯಲ್ಲಿ ಅಧ್ಯಾಪನವನ್ನು ನಡಸಿಕೊಂಡು ಬಂದರು. ಅವರು ಹೀಗೆ ವಿದ್ಯಾದಾನವನ್ನು ನಿರಂತರವಾಗಿ ನಡಸಿಕೊಂಡು ಬರುವುದಾಗಿ ತಮ್ಮ ಗುರುಗಳು ಶ್ರೀ ಪಾಲಕ್ಕಾಡು ನಾರಾಯಣಶಾಸ್ತ್ರಿಗಳಿಗೆ ಗುರುದಕ್ಷಿಣೆಯಾಗಿ ವಾಗ್ದಾನವನ್ನು ಕೊಟ್ಟಿದ್ದರಂತೆ. ಅಂತೆಯೇ ಅಕ್ಷರಶಃ ನೂರಾರು ಜಿಜ್ಞಾಸುಗಳಿಗೆ ಜ್ಞಾನಸುಧೆಯನ್ನು ಉಣಬಡಿಸಿದರು. ಅವರಲ್ಲಿಗೆ ಶಿಷ್ಯರಾಗಿ ಬಂದವರಲ್ಲಿ ನಮ್ಮದು ಕೊನೆಯ ತಂಡ.

ಗುರುಗಳು ನಮಗೆ ವೇದಾಂತದ ಪಾಠವನ್ನು ಪ್ರತಿ ಶನಿವಾರ ಸಂಜೆ ಆರು ಗಂಟೆಯಿಂದ ಏಳರ ತನಕ ನಡೆಸುತ್ತಿದ್ದರು. ಇದು ಸಾಮಾನ್ಯವಾಗಿ ವ್ಯತ್ಯಾಸವಾಗುತ್ತಿರಲಿಲ್ಲ. ಈ ಸಮಯದಂದು

ಗುರುಗಳು ಬೇರೆ ಯಾವೊಂದು ಕಾರ್ಯಕ್ರಮವನ್ನೂ ಗುರುಗಳು ಒಪ್ಪಿಕೊಳ್ಳುತ್ತಿದುದು ಅಪರೂಪವೇ. ಶನಿವಾರಗಳಲ್ಲದೆ ಕೆಲವು ವಿಷಯಗಳ ಪಾಠವನ್ನು ಬೇರೆ ದಿನಗಳಂದು ಬೆಳಗ್ಗೆ ಹನ್ನೊಂದು ಗಂಟೆಗೆ, ಮಧ್ಯಾಹ್ನ ಮೂರು ಗಂಟೆಗೂ ನಡಸಿದರು. 'ಶಿವಸೂತ್ರ'ದ ತರಗತಿಗಳು ಪ್ರತಿ ಬುಧವಾರ ಮಧ್ಯಾಹ್ನ ಹನ್ನೊಂದು ಗಂಟೆಗೆ ಸುಮಾರು ಎರಡು ವರ್ಷಗಳು ನಡೆದವು. ಸಾಮಾನ್ಯವಾಗಿ ಒಂದು ಗಂಟೆಯ ಕಾಲ ತರಗತಿಗಳನ್ನು ನಡಸುವುದು ಗುರುಗಳ ಪದ್ಧತಿ. ಪಾಠವನ್ನಾಗಲೀ ಪ್ರವಚನವನ್ನಾಗಲೀ ಜನರು ನಲವತ್ತೈದು ನಿಮಿಷಗಳಿಗಿಂತ ಹೆಚ್ಚು ಸಮಯ ಗ್ರಹಿಸಲಾರರು ಎಂದು ಅವರು ಹೇಳುತ್ತಿದ್ದರು; ಎಷ್ಟೇ ಆಗಲಿ ಅವರು ಮನಃಶಾಸ್ತ್ರವನ್ನು ಕಲಿತವರಲ್ಲವೆ! ಪಾಠದ ಸಂದರ್ಭದಲ್ಲಾಗಲೀ ಪ್ರವಚನದ ಸಂದರ್ಭದಲ್ಲಾಗಲೀ ಮತ್ತಾವುದೇ ಸಾರ್ವಜನಿಕ ಕಾರ್ಯಕ್ರಮದಲ್ಲಾಗಲೀ ಗುರುಗಳು ಸಮಯಪಾಲನೆಯ ವಿಷಯದಲ್ಲಿ ರಾಜಿ ಮಾಡಿಕೊಳ್ಳುತ್ತಿರಲಿಲ್ಲ. ಶಿಸ್ತು ಎಂಬುದು ಅವರಿಗೆ ರಕ್ತಗತವಾಗಿ ಬಂದಿದ್ದ ವಿವರ ಎಂಬುದು ಅವರ ಸಂಪರ್ಕಕ್ಕೆ ಬಂದವರೆಲ್ಲರಿಗೂ ಬೇಗನೆ ಅರಿವಿಗೆ ಬರುತ್ತಿತ್ತು. ಗುರುಗಳು ಪಾಠವನ್ನು ಆರಂಭಿಸುವುದಾಗಲೀ ಅಥವಾ ನಿಲ್ಲಿಸುವುದಾಗಲೀ ಎಷ್ಟು ನಿಖರವಾಗಿರುತ್ತಿತ್ತೆಂದರೆ ನಾವು ನಮ್ಮ ಗಡಿಯಾರದ ಸಮಯವನ್ನು ಇದರಿಂದ ಸರಿಪಡಿಸಿಕೊಳ್ಳಬಹುದಾಗಿತ್ತೆಂದರೆ ಇದೇನೂ ಉತ್ಪ್ರೇಕ್ಷೆಯಾಗದು.

ಪಾಠವನ್ನು ಆರಂಭಿಸುವುದಕ್ಕೆ ಮೊದಲು ಗುರುಗಳು ಮನೆಯ ಹೊರಗೆ, ವರಾಂಡದಲ್ಲಿ ಆಸೀನರಾಗಿರುತ್ತಿದ್ದರು; ಒಮೊಮ್ಮೆ ಮನೆಯ ಒಳಗಿನ ತಮ್ಮ ಕೋಣೆಯಿಂದ ಪಾಠಸ್ಥಳಕ್ಕೆ ನೇರವಾಗಿ ಬರುತ್ತಿದುದ್ದೂ ಉಂಟು. ಹೊರಗೆ ಕುಳಿತಿದ್ದಾಗ ಬಂದ ಶಿಷ್ಯರೊಂದಿಗೆ ನಾಲ್ಕಾರು ನಿಮಿಷ ಲೋಕಭಿರಾಮವಾಗಿ ಮಾತನಾಡುತ್ತಿದ್ದರು. ಇಲ್ಲೂ ಕೂಡ ಶಾಸ್ತ್ರದ ವಿಷಯವೋ ಯಾವುದಾದರೂ ಗ್ರಂಥದ ವಿಷಯವೋ ಚರ್ಚೆಯಾಗುತ್ತಿದ್ದುದೇ ಹೆಚ್ಚು. ಪಾಠದ ಸಮಯವಾದ ತತ್‌ಕ್ಷಣವೇ "ಶುರು ಮಾಡೋಣವೇ?" ಎನ್ನುವರು. ಎಲ್ಲರೂ ಒಳಗೆ ಹಾಲ್‌ನಲ್ಲಿ ಸೇರುತ್ತಿದ್ದೆವು. ಗುರುಗಳೆ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ತಂದರಿಸಿದ್ದಂಥ ಶ್ರೀ ಶ್ರೀ ಶ್ರೀ ಚಂದ್ರಶೇಖರ ಭಾರತೀಮಹಾಸ್ವಾಮಿಗಳ ಶಿಲ್ಪವೊಂದು ಅಲ್ಲಿದ್ದಿತು. ಸ್ವಾಮಿಗಳನ್ನು ಗುರುಗಳು ತಮ್ಮ ಗುರುಗಳೆಂದೇ ಸ್ವೀಕರಿಸಿದ್ದವರು. "ಅವರನ್ನು ಕಂಡಮೇಲೆ ನನಗೆ ಇನ್ನೊಬ್ಬ ಗುರುವಿನ ಅನಿವಾರ್ಯತೆಯೇ ಬರಲಿಲ್ಲ" ಎಂದು ಗುರುಗಳು ಬಾಲ್ಯದಲ್ಲಿ ತಮಗೆ ಒದಗಿದ ಆ ದಿವ್ಯಾನುಭವವನ್ನು ನೆನಪಿಸಿಕೊಳ್ಳುತ್ತಿದ್ದರು. ಆ ಶಿಲ್ಪದ ಎಡಭಾಗದಲ್ಲೊಂದು ಮರದ ಕುರ್ಚಿ. ಗುರುಗಳು ಅದರ ಮೇಲೆ ಕುಳಿತು ಪಾಠ ಮಾಡುತ್ತಿದ್ದರು. ಬಿಳಿಯ ಕಚ್ಚೆ ಪಂಚೆ, ಬಿಳಿಯ ಜುಬ್ಬಾ, ಹಣೆಯಲ್ಲಿ ಗೋಪೀಚಂದನ, ಕೈಯಲ್ಲಿ ಕಪ್ಪುಬೆಲ್ಟಿನ ಗಡಿಯಾರ ಇದು ಪಾಠದ ಸಮಯದ ಅವರ ವೇಷಭೂಷಣ. ಕುಳಿತುಕೊಳ್ಳುವ ಮೊದಲು ಕೈ ಜೋಡಿಸಿ ನಿಲ್ಲುವರು. ನಾವು ಶಿಷ್ಯರು ಒಬ್ಬೊಬ್ಬರಾಗಿ ಅವರಿಗೆ ಸಾಷ್ಟಾಂಗ ಪ್ರಣಾಮವನ್ನು ಸಲ್ಲಿಸುತ್ತಿದ್ದೆವು. ಪಾಠ ಮುಗಿದ ಮೇಲೂ ಇದೇ ಕ್ರಮ. ಆಗ ಗುರುಗಳು ತಮ್ಮ ಗುರುಗಳ ಮೂರ್ತಿಯ ಕಡೆಗೆ ಕೈತೋರುತ್ತ "ಇದೆಲ್ಲ ಅವರಿಗೆ ಸೇರುತ್ತದೆ" ಎನ್ನುವರು.

ಗುರುಗಳು ಅಂದು ಯಾವ ಗ್ರಂಥವನ್ನು ಕುರಿತು ಪಾಠ ಮಾಡುವರೋ ಆ ಗ್ರಂಥದ

ಮೂಲಪ್ರತಿಯನ್ನೋ ಅವರ ಟಿಪ್ಪಣಿ ಪುಸ್ತಕವನ್ನೋ ಪಾಠದ ಉದ್ದಕ್ಕೂ ಕೈಯಲ್ಲಿ ಹಿಡಿದಿರುತ್ತಿದ್ದರು. ಆದರೆ ಹೆಚ್ಚಿನ ಸಮಯದಲ್ಲಿ ತಮ್ಮ ಟಿಪ್ಪಣಿಗಳನ್ನು ನೋಡಿಕೊಂಡೇನೂ ಪಾಠ ಮಾಡುತ್ತಿರಲಿಲ್ಲ. "ಇಲ್ಲೇ ಎಲ್ಲೋ ಸತ್ಯದ ವಿವರಗಳು ಓಡಾಡುತ್ತಿವೆ; ಅವೆಲ್ಲವೂ ಇವರಿಗೆ ಗೋಚರವಾಗುತ್ತಿವೆ; ಇವರ ದನಿಯ ಮೂಲಕ ಅವು ನಮಗೂ ಕಾಣಿಸುತ್ತಿವೆ" ಎಂಬಂಥ ಧನ್ಯತಾನುಭವವು ಒದಗುತ್ತಿತ್ತು. ಶಾಸ್ತ್ರಾನಂದ ಎಂದರೇನು? – ಎಂಬುದು ಗುರುಗಳ ಪಾಠವನ್ನು ಕೇಳಿದ್ದವರಿಗೆ ಅವಗತವಾಗುತ್ತಿತ್ತು. ಆದರೆ ಗುರುಗಳ ಪಾಠದಲ್ಲಿ ಕೇವಲ ಶಾಸ್ತ್ರದ ಗಹನತೆಯೋ ಆಕರ್ಷಕತೆಯೋ ಎಂದೂ ಮುಖ್ಯವಾಗಿರಲಿಲ್ಲ. ಬದುಕಿಗೆ ಒದಗುವಂಥ ವಿವರಗಳಿಗೆ, ಅನುಭವಕ್ಕೆ ನಿಷ್ಠವಾದಂಥ ಮಾತುಗಳಿಗೆ ಅಲ್ಲಿ ಮನ್ನಣೆ. "ನಾನು ನಿಮ್ಮನ್ನು ಶಾಸ್ತ್ರಗೋಷ್ಠಿಗೆ ತಯಾರು ಮಾಡುವುದಕ್ಕಾಗಿ ಪಾಠ ಹೇಳುತ್ತಿಲ್ಲ; ಬದುಕಿಗೊಂದು ನೆಮ್ಮದಿಯನ್ನು ಒದಗಿಸುವುದು ನನ್ನ ಉದ್ದೇಶ" ಎಂಬುದು ಗುರುಗಳ ನಿಲುವು. ಬದುಕಿನ ಬಗ್ಗೆ ಅವರಲ್ಲೂ ಅವರ ಮಾತಿನಲ್ಲೂ ಇರುತ್ತಿದ್ದ ಕಾಳಜಿಯಿಂದಲೇ ಪದೇ ಪದೇ 'ಅವರಲ್ಲಿಗೆ ಹೋಗೋಣ, ಅವರ ಮಾತನ್ನು ಕೇಳೋಣ' ಎಂಬ ಸೆಳೆತ ಉಂಟಾಗುತ್ತಿದುದು. "ನಾನು ಶಾಸ್ತ್ರವ್ಯಾಸಂಗಕ್ಕಾಗಿ ಪಟ್ಟ ಕಷ್ಟವನ್ನು ನೀವು ಪಡುವಂತಾಗಬಾರದು. ಅದಕ್ಕಾಗಿಯೇ ಶಾಸ್ತ್ರದ ದಿಟವಾದ ಸಾರಭಾಗವನ್ನಷ್ಟೆ ನಿಮಗೆ ಶಾಸ್ತ್ರದ ತಾಂತ್ರಿಕ ಕ್ಲೇಶಗಳನ್ನು ಬಿಡಿಸಿ ಹೇಳುತ್ತಿದ್ದೇನೆ" ಎಂದೂ ಗುರುಗಳು ಹೇಳುತ್ತಿದ್ದರು. ಹೀಗೆ ಗುರುಗಳು ಹೇಳಿದ ಪಾಠಗಳಲ್ಲೆವೂ ಅಕ್ಷರವೊಂದೂ ಸಹ ತಪ್ಪದೆ ನನ್ನಲ್ಲಿಂದು ನೆಲೆನಿಂತಿದೆ – ಎಂಬಂಥ ಪ್ರೌಢಿಮೆ ನನಗಿಲ್ಲ. ಆದರೆ ಅವರು ಅಷ್ಟು ವರ್ಷಗಳು ಹೇಳಿದ್ದರ ಸಾರಫಲದ ಸವಿಯನ್ನು ಇನ್ನೂ ಸವಿಯುತ್ತಿದ್ದೇನೆ. ಎಂಬುದರಲ್ಲಿ ಎರಡು ಮಾತಿಲ್ಲ. ಅವರ ಪಾಠವು ಜೀವನದ ಎಂಥ ಸಂದರ್ಭಗಳಲ್ಲಿ ನನ್ನನ್ನು ಕೈಹಿಡಿದು ಮೇಲಕ್ಕೆತ್ತಿದೆ – ಎಂಬುದು ನನಗಷ್ಟೆ ತಿಳಿದಿರುವ ವಿವರ. 'ಪದ ಕುಸಿಯೆ ನೆಲವಿಹುದು' ಎಂಬ ದಾರ್ಶನಿಕ ಸೂತ್ರದಂತೆ ಗುರುಗಳ ಶಾಸ್ತ್ರಸಾರವು ಬದುಕಿಗೊಂದು ನೆಲವನ್ನು ಒದಗಿಸಿಕೊಟ್ಟಿದೆ.

ಗುರುಗಳು ನಡಸುತ್ತಿದ್ದ ಪಾಠಕಾಲದಲ್ಲಿ ಅವರನ್ನು ನೋಡುವುದೇ ಒಂದು ದಿವ್ಯಾನುಭವ; ನೇತ್ರನಿರ್ವಾಣ. ಅವರ ತಾದಾತ್ಮ್ಯ, ನಿರರ್ಗಳತೆ, ಪಾಂಡಿತ್ಯ, ಹೊಳಹು ಆಗಾಗ ಚಿಮ್ಮುತ್ತಿದ್ದ ಗಂಭೀರ ಹಾಸ್ಯ – ಇವೆಲ್ಲವೂ ಒಂದು ಅಲೌಕಿಕ ವಾತಾವರಣವನ್ನೇ ಸೃಷ್ಟಿಸುತ್ತಿದ್ದವು. ಕೆಲವೊಂದು ದಿನದ ಪಾಠಗಳಲ್ಲಿ ನಿರ್ಮಾಣಗೊಂಡ ದರ್ಶನ ಕ್ಷಣಗಳನ್ನು ನೆನೆಸಿಕೊಂಡರೆ ಈಗಲೂ ಮಾತಿಗೆ ಎಟುಕದ ಆನಂದಾನುಭೂತಿಯೊಂದು ಮೈಯಲ್ಲಿ ಸಂಚಾರವಾಗುತ್ತದೆ. ಹೀಗೆ ಮಾಂಡೂಕ್ಯೋಪನಿಷತ್ತಿನ ಪಾಠ ನಡೆಯುತ್ತಿತ್ತು. ಅವಸ್ಥಾತ್ರಯಗಳಿಗೆ ಮೂಲವೆಂದರೆ ವೇದವೇ ಹೌದು – ಎಂಬ ನಿಲುವನ್ನು ಪ್ರತಿಪಾದಿಸುತ್ತ ಗುರುಗಳು ಅದ್ಭುತವಾದ ವಿಶ್ಲೇಷಣೆಯನ್ನು ನಡಸಿದರು. ಋಷಿ ಪ್ರಜ್ಞೆ ಎಂದರೇನೆಂದು ನನ್ನ ಅನುಭವಕ್ಕೆ ಅಂದು ಬಂದಿತ್ತು. ಪಾಠವು ಮುಗಿದ ಮೇಲೆ ಹೊರಗೆ ಬಂದ ಗುರುಗಳು ಕೇಳಿದರು – "ಈವತ್ತಿನ ಪಾಠ ಹೇಗೆನ್ನಿಸಿತು?" ಹೀಗೆ ಅವರು ಕೇಳುತ್ತಿದ್ದುದು ತೀರ ವಿರಳ; ಕೇಳುತ್ತಿರಲಿಲ್ಲವೆಂಬುದೇ ಸರಿ. ಆದರೆ ಅಂದು ಕೇಳಿದರು. "ತುಂಬ ಅದ್ಭುತವಾಗಿತ್ತು ಸಾರ್!" ಎಂದೆ. ಇದಕ್ಕಿಂತಲೂ ಹೆಚ್ಚಿನದನ್ನು ಹೇಳುವ ಶಕ್ತಿ ಅಂದೂ ಇರಲಿಲ್ಲ, ಇಂದೂ ಇಲ್ಲವೆನ್ನಿ. "ಇವತ್ತು ನನ್ನದೇ

ಕೆಲವು ಸ್ವಂತ ವಿವರಗಳನ್ನು ಹೇಳಿದೆ" ಎಂದರು. ಅವರು ಹೀಗೆ ಎಂದೂ ಕೂಡ ಹೇಳುತ್ತಿದ್ದವರಲ್ಲ; ಆದರೆ ಅಂದು ಹೇಳಿದರು. ಅವರಿಗೆ ಅಂದು ಎಂಥ ಸಾಕ್ಷಾತ್ಕಾರವಾಗಿತ್ತೋ? ಯಾವ ಸಾಕ್ಷಾತ್ಕಾರವಾಗಿತ್ತೋ? – ನಮಗೆ ಹೇಗೆ ತಿಳಿದೀತು. ಅಂದಿನ ಪಾಠವನ್ನು ಮಾತ್ರ ನಾನು ಎಂದಿಗೂ ಮರೆಯುವುದಕ್ಕೆ ಸಾಧ್ಯವಿಲ್ಲ. ನನ್ನನ್ನೂ ನನ್ನ ಸಹಾಧ್ಯಾಯಿಯನ್ನೂ ಬೀಳ್ಕೊಡಲು ಅವರ ಮನೆಯ ಗೇಟಿನ ತನಕ ಗುರುಗಳು ಬಂದರು. (ಬಂದವರನ್ನು ಹೀಗೆ ಗೇಟಿನ ತನಕ ಬಂದು ಕಳಿಸಿಕೊಡುವುದು ಗುರುಗಳು ತಪ್ಪದೆ ನಡಸಿಕೊಂಡು ಬಂದ ಕ್ರಮ) ಹೊರಡುವಾಗ ಸ್ವಲ್ಪ ಭಯದಿಂದಲೇ ತಗ್ಗಿದ ದನಿಯಲ್ಲಿ ಹೇಳಿದೆ – "ಸಾರ್, ಈ ದಿನದ ಪಾಠ ತುಂಬ ಅದ್ಭುತವಾಗಿತ್ತು, ಪಾಠವನ್ನು ಕೇಳುತ್ತಿದ್ದಾಗ ಆನಂದ ಕುಮಾರಸ್ವಾಮಿಯವರ ಚಿಂತನೆಗಳು ನೆನಪಾಗುತ್ತಿದ್ದವು" ಎಂದೆ. ಅದಕ್ಕೆ ಗುರುಗಳೆಂದರು – "ಆತ ಮಹಾನುಭಾವ, ಋಷಿ; ಅವರ 'ಅತ್ಯತಿಷ್ಠದ್ದಾಶಾಂಗುಲಮ್' ಲೇಖನವನ್ನು ನೋಡಿದ್ದೀರಾ?" "ಹುಡುಕುತ್ತಿದ್ದೇನೆ ಸಾರ್, ಇನ್ನೂ ಸಿಕ್ಕಿಲ್ಲ" ಎಂದೆ. ಕೂಡಲೇ ಗುರುಗಳು ಮನೆಯ ಒಳಗೆ ಹೋಗಿ ಆ ಲೇಖನದ ಫೋಟೋಪ್ರತಿಯೊಂದನ್ನು ತಂದು ಕೈಗಿತ್ತು" ಇದನ್ನು ನೀವೇ ಇಟ್ಕೊಳ್ಳಿ" ಎಂದರು!

ಗುರುಗಳು ಹೇಳಿದ 'ಶಿವಸೂತ್ರ'ದ ಪಾಠಗಳಂತೂ ನನ್ನ ಪಾಲಿಗೆ ಅಪೂರ್ವಾನುಭವ. ತತ್ತ್ವಶಾಸ್ತ್ರವನ್ನು ಹೇಗೆ ನೋಡಬೇಕು? ದರ್ಶನ ಎಂದರೇನು? ಅನುಭವಕ್ಕೂ ಶಾಸ್ತ್ರಕ್ಕೂ ಎಲ್ಲಿ ಸಾಮರಸ್ಯ ಒದಗುತ್ತದೆ? ಇರುವ ಒಂದೇ ಮೂಲಸತ್ತ್ವದ ಅಭಿವ್ಯಕ್ತಿಯು ಹೇಗೆ ಭಿನ್ನಭಿನ್ನ ರೂಪಗಳಲ್ಲಿ ತೋರಿಕೊಳ್ಳುತ್ತದೆ? – ಎಂಬ ಹತ್ತಾರು ಮೂಲಭೂತತತ್ತ್ವಗಳು ನನ್ನಲ್ಲಿ ಸ್ಥಿರಗೊಂಡಿದ್ದೇ ಶಿವಸೂತ್ರದ ದರ್ಶನಸೂತ್ರದಲ್ಲಿ. ಗುರುಗಳಿಗಿದ್ದ ಜಗತ್ತಿನ ಬೇರೆ ಬೇರೆ ದರ್ಶನ ಪ್ರಕಾರಗಳ ವಿಸ್ತಾರವಾದ ತಿಳಿವಳಿಕೆಯು ಈ ಸಂದರ್ಭದಲ್ಲಿ ಎದ್ದು ಕಾಣುತ್ತಿತ್ತು. ಅದ್ವೈತ, ಬೌದ್ಧದರ್ಶನ, ಝೆನ್, ಕಲಾಮೀಮಾಂಸೆ, ಶೈವದರ್ಶನ, ವಿಜ್ಞಾನ – ಹೀಗೆ ಹಲವು ವಿದ್ಯೆಗಳ ಸಂಗಮವನ್ನೇ ಅಲ್ಲಿ ನಮಗೆ ಕಾಣಿಸುತ್ತಿದ್ದರು. ತತ್ತ್ವಶಾಸ್ತ್ರದ ಮೀಮಾಂಸೆಯಲ್ಲಿ ಬಳಕೆಯಾಗುವ ಮೂಲತತ್ತ್ವಮೀಮಾಂಸೆ (Ontology), ಪ್ರಮಾಣ, ಪ್ರಮೇಯ ಮೀಮಾಂಸೆ (Epistemilogy), ಇಂದ್ರಿಯಾನುಭವಮೀಮಾಂಸೆ (phenomenology) – ಇವುಗಳ ದರ್ಶನ ನರ್ತನವನ್ನೇ ನಾವು ಆಸ್ವಾದಿಸುತ್ತಿದ್ದೆವು.

ಗುರುಗಳು ಸಂಸ್ಕೃತ ಪಾಠಶಾಲೆಗಳಲ್ಲಿ ಹೇಳುತ್ತಿದ್ದಂತೆ ಪಾಠವನ್ನು ಹೇಳುತ್ತಿರಲಿಲ್ಲ. ಈ ಮೊದಲೇ ತಿಳಿಸಿದಂತೆ, ಜೀವನಕ್ಕೆ ಬೇಕಾದ ಶಾಸ್ತ್ರದ ಸಾರಭಾಗವನ್ನು ವಿಸ್ತಾರವಾಗಿ, ಸರಳವಾಗಿ, ಬೇರೆ ಬೇರೆ ಯುಕ್ತಿಗಳಿಂದ, ಶಾಸ್ತ್ರದ ಮಾತುಗಳಿಂದ ನಿರೂಪಿಸುತ್ತಿದ್ದರು. ಸಾಮಾನ್ಯವಾಗಿ ಒಂದು ತರಗತಿಗೆ ಒಂದೇ ಕೇಂದ್ರವಿಷಯವನ್ನು ಕುರಿತು ತಿಳಿಹೇಳುತ್ತಿದ್ದರು; ನಾಲ್ಕಾರು ಸಿದ್ಧಾಂತಗಳನ್ನು ಕಲಬೆರಕೆ ಮಾಡಿ ಗೊಂದಲವನ್ನು ಮೂಡಿಸುವುದಾಗಲೀ ಅಥವಾ ಬುದ್ಧಿಭಾರವನ್ನು ಹೊರೆಸುವುದಾಗಲೀ ಅವರಲ್ಲಿ ನಾವು ನೋಡದ ವಿವರ. ಅವರಿಗೆ ಮುಖ್ಯವೆಂದು ಎನಿಸಿದ ಒಂದು ಪದವನ್ನು ಕುರಿತಂತೆ ಇಡಿಯ ಒಂದು ತರಗತಿಯ ಪೂರ್ತಿ ವಿವರಣೆ ಕೊಟ್ಟದ್ದೂ ಉಂಟು. ಉದಾಹರಣೆಗೆ, ರಾಮಾಯಣದ ಪಾಠವನ್ನು ಮಾಡುವಾಗ ಅಲ್ಲಿಯ ಮೊದಲ ಶ್ಲೋಕದಲ್ಲಿಯೇ ಬರುವ ಮೊದಲನೆಯ ಶಬ್ದವಾದ

'ತಪಸ್ಸು' ಮತ್ತು ಅನಂತರದಲ್ಲಿ ಬರುವ 'ಸ್ವಾಧ್ಯಾಯ' – ಈ ಎರಡು ಶಬ್ದಗಳನ್ನು ಕುರಿತಂತೆ ಗುರುಗಳು ಕೊಟ್ಟ ದೀರ್ಘವಿವರಣೆ – ವಿಶ್ಲೇಷಣೆಗಳು ಅವರ ಪಾಂಡಿತ್ಯಕ್ಕೂ ಒಳನೋಟಕ್ಕೂ ಅನುಭವ ಶ್ರೀಮಂತಿಕೆಗೂ ಸಾಧನ ಸಂಪತ್ತಿಗೂ ಅಪೂರ್ವನಿದರ್ಶನಗಳು. ಅವರು ಕೊಟ್ಟ ವಿವರಣೆಗಳ ಭಾವವನ್ನು ಹಿಡಿಯುವುದಿರಲಿ, ಕೇವಲ ಅವುಗಳ ಮೂಲವಾಕ್ಯಗಳನ್ನು ಒಂದೆಡೆ ಸಂಗ್ರಹಿಸುವುದೇ ಹಲವು ವರ್ಷಗಳ ಶ್ರಮಪೂರ್ವಕ ಅಧ್ಯಯನದಿಂದಷ್ಟೇ ಸಾಧ್ಯವಾಗುವಂಥದೇ ಹೌದು.

'ಶಿವಸೂತ್ರ'ವನ್ನುಳಿದು ಉಳಿದ ಎಲ್ಲ ಪಾಠಗಳನ್ನು ಗುರುಗಳು ಕನ್ನಡದಲ್ಲಿಯೇ ಮಾಡಿದರು; ಶಿವಸೂತ್ರಗಳನ್ನು ಇಂಗ್ಲಿಷಿನಲ್ಲಿ ನಡೆಸಿದರು. ಭಾರತೀಯ ವಿದ್ಯೆ ಶಾಸ್ತ್ರಗಳನ್ನು ಇಂಗ್ಲಿಷಿನಲ್ಲಿ ಹೇಳುವುದು ಅಷ್ಟೊಂದು ಹಿತವಾದ ಅನುಭವವಲ್ಲವೆಂದೇ ಗುರುಗಳು ಹೇಳುತ್ತಿದ್ದರು. ಹೀಗೆಂದು ಅವರಿಗೆ ಇಂಗ್ಲಿಷ್ ಭಾಷೆಯು ಬರುತ್ತಿರಲಿಲ್ಲವೆಂದು ಅಲ್ಲ ಅವರು ಕನ್ನಡದಲ್ಲಿ ಎಷ್ಟು ನಿರರ್ಗಳವಾಗಿ ಯಾವ ವಿಷಯವನ್ನೂ ಕುರಿತಂತೆ ಮಾತನಾಡುತ್ತಿದ್ದರೋ ಹಾಗೆಯೇ ಇಂಗ್ಲಿಷಿನಲ್ಲೂ ಮಾತನಾಡುತ್ತಿದ್ದರು. ಪಾಠದಲ್ಲಿ ಮಧ್ಯೆ ಮಧ್ಯೆ ಸಂಸ್ಕೃತ ವಾಕ್ಯಗಳನ್ನೂ ಧಾರಾಳವಾಗಿಯೇ ಉದ್ಧರಿಸುತ್ತಿದ್ದರು. ಗುರುಗಳಿಗೆ ಬಹಳ ವರ್ಷಗಳ ಹಿಂದೆ ಸ್ವಲ್ಪ ಉಗ್ಗಿನ ಸಮಸ್ಯೆಯಿದ್ದಿತಂತೆ. ಆದರೆ ಅವರ ಪಾಠದಿಂದಾಗಲೀ ಅಥವಾ ಪ್ರವಚನದಿಂದಾಗಲೀ ಇದರ ಸುಳಿವೇ ಸಿಗುತ್ತಿರಲಿಲ್ಲವೆನ್ನಿ ಅವರದ್ದು ತೈಲಧಾರೆಯಂತೆ ಅಖಂಡ ವಾಗ್ವಿಲಾಸ ಗುರುಗಳಿಗೂ ನನಗೂ ವಯಸ್ಸು–ವಿದ್ಯೆ–ಲೋಕಾನುಭವ–ಮಹಾಪುರುಷ ಸಂಸರ್ಗ ಹೀಗೆ ಎಲ್ಲ ವಿಷಯಗಳಿಗೂ ದಿಟವಾದ ಅಜಗಜಾಂತರ ವಯಸ್ಸಿನ ಅಂತರವೇ ಸುಮಾರು ೪೫ ವರ್ಷಗಳಿಗೂ ಹೆಚ್ಚಾಗಿದ್ದಿತು. ಅವರ ಪ್ರಥಮದರ್ಶನ ನನಗಾದ ಕಾಲಕ್ಕೇ ಗುರುಗಳು ಸುಮಾರು ಅರವತ್ತರ ಆಸುಪಾಸಿನಲ್ಲಿದ್ದರು; ನಾನು ಆಗಷ್ಟೆ ಕಾಲೇಜು ಮೆಟ್ಟಿಲನ್ನು ಹತ್ತುತ್ತಿದ್ದ ತರುಣ. ಹೀಗಾಗಿ ಗುರುಗಳ ವೈದುಷ್ಯವಾಗಲೀ, ಪ್ರತಿಭೆಯಾಗಲೀ ಸಾಧನ ಸಂಪತ್ತಿಯಾಗಲೀ ಮನೋಧರ್ಮವಾಗಲೀ ನನ್ನಂಥವನಿಗೆ ಪೂರ್ಣವಾಗಿ ಎಂದಿಗೂ ಎಟುಕಲಾರದೆಂಬ ಅರಿವು ನನಗಿದೆ. ಸಾಗರವನ್ನು ಬೊಗಸೆಯಲ್ಲಿ ಹಿಡಿಯುವಂಥ ಸಾಹಸವನ್ನು ಇಲ್ಲಿ ಮಾಡಿದ್ದೇನೆ. ಗುರುಗಳೇ ಕಲಿಸಿಕೊಟ್ಟ ನುಡಿಗಳಿಂದಲೇ ಅವರನ್ನು ಕಂಡರಿಸುವಂಥ ಪ್ರಯತ್ನವಷ್ಟೆ ಇಲ್ಲಿಯದು. ಒಳಗಣ ಭಾವವನ್ನು ಪದಗಳಲ್ಲಿ ಹಿಡಿಯುವುದು ಸುಲಭವಲ್ಲ. ಸಕ್ಕರೆಯ ಸವಿಯನ್ನು ಶಬ್ದಗಳಲ್ಲಿ ಒದಗಿಸಲಾದೀತೆ? ಆದರೂ ನನ್ನ ಬದುಕಿಗೆ ಬೆಳಕನ್ನು ಕರುಣಿಸಿದ ಗುರುಗಳ ಬಗ್ಗೆ ಮಾತನಾಡುವುದೇ ಒಂದು ಸೌಭಾಗ್ಯ, ಒಡಲ ಒಳಿತಿಗೆ ಅನಿವಾರ್ಯವಾಗಿರುವ ಸಂಸ್ಕಾರ ಇಷ್ಟಕ್ಕೂ, ಆತ್ಮನಿವೇದನೆಗೆ ಬೇಕಾಗಿರುವುದು ವ್ಯಾಕರಣ ಸೂತ್ರಗಳಾಗಲೀ ನಿಘಂಟುಗಳ ಶಬ್ದಭಂಡಾರವಾಗಲೀ ಶಾಸ್ತ್ರವಾಕ್ಯಗಳಾಗಲೀ, ಅಲ್ಲವಷ್ಟೆ!

❖

# ಸಸ್ಯಶಾಸ್ತ್ರದ ಆದರ್ಶಗುರು

## (ಪ್ರೊ॥ ಬಿ.ಜಿ.ಎಲ್. ಸ್ವಾಮಿ)

*● ಆಂಗ್ಲ ಮೂಲ : ಡಾ॥ ಕೆ.ವಿ. ಕೃಷ್ಣಮೂರ್ತಿ*

ಮೊತ್ತ ಮೊದಲಿಗೆ ನಾನು ದಿವಂಗತ ಪ್ರೊ॥ ಬಿ.ಜಿ.ಎಲ್. ಸ್ವಾಮಿಯವರಿಗೆ ನನ್ನ ಅಪಾರ ಕೃತಜ್ಞತೆ ಹಾಗೂ ಗೌರವವನ್ನು ದಾಖಲಿಸಲು ಬಯಸುತ್ತೇನೆ. ಏಕೆಂದರೆ, ಸ್ವಾಮಿಯವರಿಲ್ಲದಿದ್ದರೆ ನಾನು ಇಂದು ಈ ಸ್ಥಿತಿಯಲ್ಲಿರಲು ಸಾಧ್ಯವಾಗುತ್ತಿರಲಿಲ್ಲ. ನಾನು ಮೊದಲ ಬಾರಿ ಸ್ವಾಮಿಯವರನ್ನು ಜುಲೈ ೧೯೬೪ರ ಮೊದಲ ವಾರದಲ್ಲಿ ಕಂಡೆನು. ಆಗ ತಾನೆ ನಾನು ಬಿ.ಎಸ್.ಸಿ. ಪದವಿಯನ್ನು ಪಡೆದಿದ್ದು, ಎಂ.ಎಸ್.ಸಿ. ವ್ಯಾಸಂಗ ಮಾಡಲು ಸ್ಥಾನ ಕೋರಿ ಪ್ರೆಸಿಡೆನ್ಸಿ ಕಾಲೇಜಿಗೆ ಅರ್ಜಿ ಸಲ್ಲಿಸಿದ್ದೆ. ಆಗ ಆ ಕಾಲೇಜಿನ ಪ್ರಾಂಶುಪಾಲರಾಗಿದ್ದ ಪ್ರೊ॥ ಬಿ.ಜಿ.ಎಲ್. ಸ್ವಾಮಿಯವರನ್ನು ಕಂಡು ಆ ಕೋರ್ಸಿಗೆ ನನಗೆ ಸೀಟು ಸಿಗುವ ಸಾಧ್ಯತೆ ಇದೆಯೇ ಎಂದು ತಿಳಿಯುವುದು ನನ್ನ ಉದ್ದೇಶವಾಗಿತ್ತು. ಅಂದು ಬೆಳಗ್ಗೆ ಸುಮಾರು ಒಂಬತ್ತು ಗಂಟೆಯ ಸಮಯದಲ್ಲಿ ನಾನು ಕಾಲೇಜಿಗೆ ಹೋದಾಗ ಅಲ್ಲಿ ಪ್ರಾಂಶುಪಾಲರ ಕೊಠಡಿಗೆ ಹೋಗುವ ಮೆಟ್ಟಲಿನ ಮೇಲೆ ಉದ್ದನೆಯ ಖಾಕಿ ಚಡ್ಡಿ ಧರಿಸಿ ಅದರಲ್ಲಿ ಬಿಳಿಯ ಅಂಗಿಯನ್ನು ಒಳಸೇರಿಸಿ ಒಬ್ಬ ವ್ಯಕ್ತಿ ಕೈಯಲ್ಲೊಂದು ಪುಸ್ತಕ ಹಿಡಿದು ಓದುತ್ತಿರುವುದನ್ನು ಕಂಡೆ. 'ಪ್ರಾಧ್ಯಾಪಕ ಬಿ.ಜಿ.ಎಲ್. ಸ್ವಾಮಿಯವರು ಎಷ್ಟು ಹೊತ್ತಿಗೆ ಬರುವರು ಹಾಗೂ ನಾನವರನ್ನು ಯಾವಾಗ ಕಾಣಬಹುದು' ಎಂದು ಆ ವ್ಯಕ್ತಿಯನ್ನು ವಿಚಾರಿಸಿದೆ. "ಅವರು ಆಗಲೇ ಬಂದಿದ್ದಾರೆ, ಈಗ ನೀವು ಅವರೊಡನೆಯೇ ಮಾತನಾಡುತ್ತಿದ್ದೀರಿ. ಈಗ ನನ್ನಿಂದ ನಿಮಗೇನು ಆಗಬೇಕಾಗಿದೆ" ಎಂದರವರು. ನಾನು ಅರೆಕ್ಷಣ ಮೂಕವಿಸ್ಮಿತವಾಗಿ ಒಂದೆರಡು ನಿಮಿಷ ಏನೂ ಮಾತನಾಡಲಾರದಾದೆ. ನಾನು ಎಂ.ಎಸ್.ಸಿ. ವ್ಯಾಸಂಗಕ್ಕೆ ಅರ್ಜಿ ಸಲ್ಲಿಸಿರುವ ವಿಷಯ ತಿಳಿಸಿದಾಗ ಅವರು ಅದಕ್ಕೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಅತ್ಯಂತ ಸರಳವಾದ ಅಹಮಿಕೆಯಿಲ್ಲದ ವ್ಯಕ್ತಿಯೊಬ್ಬರನ್ನು ಅಂದು ಕಂಡೆನೆಂಬ ಸಂತೃಪ್ತ ಭಾವನೆಯಿಂದ ಮನೆಗೆ ಹಿಂದಿರುಗಿದೆ.

ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಎಂ.ಎಸ್.ಸಿ. ಪದವಿ ವ್ಯಾಸಂಗಕ್ಕಾಗಿ ನನ್ನನ್ನು ಆಯ್ಕೆ ಮಾಡಲಾಯಿತು. ಪ್ರಾಧ್ಯಾಪಕ ಸ್ವಾಮಿಯವರಿಗೆ ನಗ್ನ ಬೀಜಿಗಳು ಮತ್ತು ಸಸ್ಯ ಅಂಗರಚನಾ ಶಾಸ್ತ್ರ ಕುರಿತು ಕೇವಲ ಕೆಲವೇ ಉಪನ್ಯಾಸಗಳನ್ನು ಕೊಡಲು ಸಾಧ್ಯವಾಗುತ್ತಿತ್ತು. ಏಕೆಂದರೆ, ಅವರು ಪ್ರಾಂಶುಪಾಲರಾಗಿದ್ದುದರಿಂದ ಆಡಳಿತಾತ್ಮಕ ಕೆಲಸಕಾರ್ಯಗಳಲ್ಲಿಯೂ ತೊಡಗಿಸಿ ಕೊಳ್ಳಬೇಕಾಗಿತ್ತು. ಅವರ ಉಪನ್ಯಾಸಗಳು ಬೌದ್ಧಿಕ ಮಟ್ಟ, ಆಂತರಿಕ ಸತ್ವ, ಸೋಪಜ್ಞತೆ

ಹಾಗೂ ಆಳವಾದ ಅಧ್ಯಯನದಿಂದಾಗಿ ವಿಶೇಷವೆನಿಸುತ್ತಿದ್ದವು. ಪ್ರತಿಯೊಂದು ಉಪನ್ಯಾಸದಲ್ಲಿಯೂ ಸಂಬಂಧಿತ ವಿಷಯಗಳಲ್ಲಿನ ಪರಿಹಾರ ಕಾಣದಾದ ಹಲವಾರು ಸಮಸ್ಯೆಗಳನ್ನು ಅವರು ಎತ್ತಿ ತೋರಿಸುತ್ತಿದ್ದರು. ಅವರ ಮೊದಲನೆಯ ಉಪನ್ಯಾಸವು ನಿರ್ನಾಳ ಆವೃತಬೀಜಿಗಳನ್ನು ಕುರಿತಾಗಿದ್ದು ಅದರಲ್ಲವರು ವಿಶೇಷ ಅಧ್ಯಯನ ಮಾಡಿದವರಾಗಿದ್ದರು. ನಿರ್ನಾಳಗಳಾಗಿ ಕೂಡ ಕೆಲವೊಂದು ಆವೃತ್ತಬೀಜಿಗಳೂ ಇರುವುವೆಂಬುದು ಅದೇ ಮೊದಲ ಬಾರಿಗೆ ನನ್ನ ಗಮನಕ್ಕೆ ಬಂದಿತು. ಹನ್ನೊಂದು ಜಾತಿ ಸಸ್ಯಗಳು ನಿರ್ನಾಳ ಆಗಿರುವುದೆಂದು ಅವುಗಳ ಹೆಸರನ್ನು ಪಟ್ಟಿಮಾಡಿದಾಗ, ಅವುಗಳೊಲ್ಲೊಂದಾದ 'ಸಾರ್ಕಂಡ್ರಾ'ವನ್ನು ತಾವೇ ಆವಿಷ್ಕರಿಸಿ ವಿವರಿಸಿರುವುದೆಂಬುದನ್ನು ಅವರು ಎಲ್ಲಿಯೂ ಸೂಚಿಸಲಿಲ್ಲ. ಈ ಅಂಶವನ್ನು ನಾನು ಅನಂತರ ತಿಳಿದಾಗ, ಅವರೆಂದೂ ತಮ್ಮ ಕಹಳೆಯನ್ನು ಊದಿದವರಲ್ಲವೆಂದು ಮನವರಿಕೆಯಾಗಿ ಆಶ್ಚರ್ಯವೆನಿಸಿತು. ಮೊದಲ ಉಪನ್ಯಾಸದ ಕೊನೆಯಲ್ಲಿ ಈ ನಿರ್ನಾಳ ದ್ವಿದಳ ಬೀಜಿಗಳ ಭೂಗೋಳಿಕ ಪ್ರಸರಣೆಯನ್ನು ಕುರಿತು ಹೇಳಿದರು. ಜಾಗತಿಕ ಭೂಪಟದಲ್ಲಿ ಕ್ಯಾಲಿಡೋನಿಯಾ ಎಲ್ಲಿರುವುದೆಂದು ನಮ್ಮನ್ನು ಪ್ರಶ್ನಿಸಿದಾಗ, ನಾವೆಲ್ಲ ಕಣ್ಣುಕಣ್ಣು ಬಿಡುವುದಾಯಿತು. ಆಗ ಅವರು ಅವರ ಮುಂದಿನ ಉಪನ್ಯಾಸಕ್ಕೆ ಮುಂಚೆ ಜಾಗತಿಕ ಭೂಗೋಳದ ಪ್ರಥಮ ಪಾಠಗಳನ್ನು ಮನನ ಮಾಡಿಬಾರದಿದ್ದರೆ ತಾವು ತಮ್ಮ ಉಪನ್ಯಾಸವನ್ನು ಮುಂದುವರಿಸುವುದಿಲ್ಲವೆಂದು ಕಟ್ಟುನಿಟ್ಟಾಗಿ ನುಡಿದರು. ಇದರ ಅರ್ಥ ಸಸ್ಯಶಾಸ್ತ್ರವನ್ನು ಅಧ್ಯಯನ ಮಾಡುವುದರೊಂದಿಗೆ ಅದಕ್ಕೆ ಸಂಬಂಧಿಸಿದಂತಹ ಇನ್ನಿತರ ವಿಷಯಗಳ ಬಗೆಗೂ ನಾವು ತಿಳಿದಿರಬೇಕಾದುದರ ಅವಶ್ಯಕತೆಯನ್ನು ಅವರು ನಮಗೆ ಮನದಟ್ಟು ಮಾಡಿದರು.

ಆದರೆ, ನಾನು ಮುಂದೆ ತಿಳಿದಂತೆ, ಅವರು ಮೂಲ ವಿಷಯಗಳ ಅಂಚಿನ ಅಂಶಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುವುದಕ್ಕೆ ವಿರೋಧವಾಗಿದ್ದರು. ಹಾಗಾದಲ್ಲಿ, ಸಸ್ಯಶಾಸ್ತ್ರದ ಅಧ್ಯಯನಾಭಿವೃದ್ಧಿಗೆ ಅದು ನೆರವಾಗದೆ ಕಂಟಕಪ್ರಾಯವಾಗುವುದೆಂಬುದು ಅವರ ನಂಬುಗೆಯಾಗಿತ್ತು. ನಾವು ಸಸ್ಯಶಾಸ್ತ್ರದಲ್ಲಿ ನಮ್ಮ ಆಯ್ಕೆಯ ವಿಷಯಗಳಲ್ಲಿ ಸುಭದ್ರವಾಗಿ ನೆಲೆಯೂರಿ ನಿಲ್ಲಬಹುದಾಗಿದ್ದೂ ಇನ್ನಿತರ ಬೋಧನಾ ವಿಷಯ. ವಿಧಾನ ಬೀಸುವ ಹೊಸಗಾಳಿಗೂ ನಾವು ಪೂರ್ಣವಾಗಿ ತೆರೆದುಕೊಳ್ಳಬಹುದೆಂದು ಖಚಿತ ಅಭಿಪ್ರಾಯವನ್ನು ಅವರು ಹೊಂದಿದ್ದರು. ಸಸ್ಯಶಾಸ್ತ್ರಕ್ಕೆ ಉತ್ಕೃಷ್ಟಕೊಡುಗೆಯನ್ನು ನೀಡಿದುದಕ್ಕಾಗಿ ಅವರಿಗೆ ಬೀರಬಲ್ ಸಾಹ್ನಿ ಪದಕವನ್ನು ನೀಡಿ ಸನ್ಮಾನಿಸಿದಾಗ ಭಾರತೀಯ ಸಸ್ಯಶಾಸ್ತ್ರ ಸಂಘದಲ್ಲಿ ಮಾಡಿದ ಭಾಷಣದಲ್ಲಿ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. "ಅರ್ಥಪೂರ್ಣ ಬದುಕಿನ ಅಂಚಿನಲ್ಲಿ ಜೀವನ ಸಾಗಿಸಲು ಬೇಕಾದ ತರಬೇತಿಯನ್ನು ಸಸ್ಯಶಾಸ್ತ್ರದ ಸಿದ್ಧಾಂತ, ಪ್ರಯೋಗ (ಆಚರಣೆ) ಹಾಗೂ ಪರಿಕಲ್ಪನೆಯ ಸುಭದ್ರ ಆಧಾರದ ಮೇಲೆ ಮೊತ್ತ ಮೊದಲಿಗೆ ಸ್ಥಾಪಿಸಬೇಕಾಗುತ್ತದೆಂಬುದು ನನ್ನ ಸೂಚ್ಯಾರ್ಥ. ಅಂಥ ಅನುಭವ ಹಾಗೂ ಮನೋಧರ್ಮವು ಮತ್ತೊಂದು ಶಿಕ್ಷಣ ಕ್ರಮ / ವಿಧಾನದ ಕ್ಲಿಷ್ಟತೆ ಮತ್ತು ಕುಶಲತೆಗಳನ್ನು ಗ್ರಹಿಸಲು ಅತ್ಯವಶ್ಯಕವಾಗಿರುತ್ತದೆ. ಎಂದು ಅವರು ಸ್ಪಷ್ಟನೆ ನೀಡಿದರು. ಈ ಅಂಶವನ್ನೇ ಅವರು ಒಂದು ಪುಟ್ಟ ಪದ್ಯದ ಸಾದೃಶ್ಯವನ್ನು ನೀಡುವ ಮೂಲಕ ತಮ್ಮ ಅನಿಸಿಕೆಯನ್ನು ಪ್ರತಿಪಾದಿಸಿದರು. ಅವರ ಭಾವಾನುವಾದವು ಹೀಗಿದೆ:

"ನೆನಪಾಗುವುದೆನೆಗೆ ಪ್ರೊಫೆಸರರೊಬ್ಬರ ಕಥೆ
ಹೇಳತೀರದು ಅವರ ವ್ಯಥೆ
ಸಸ್ಯಶಾಸ್ತ್ರದ ತನ್ನಾರಾಮಕುರ್ಚಿಯಲಿ ಕುಳಿತು
ತನ್ನದೇ ಆದ ವಿಶಿಷ್ಟ ಬಂಡೆಗಳ ಮೇಲೇರಿ
ತನ್ನ ನೆಲೆಯಲ್ಲಿ ಮಂಜುಕಡಲಿನಲ್ಲಿ ಮುಳುಗಿರಲು
ಸಾಗರದ ಪರಿ ಹರಡಿರುವುದ ನೋಡಿ ಸರಿದನವನು ದೂರ
ನವಸ್ಫುರಣ ಚೇತನದಿ ಭೋರ್ಗರೆಯುತಿಹ, ಮಿರುಮಿರುಗುತಿಹ
ಉಬ್ಬರವಿಳಿತವ ನೋಡಲಂಜುತಲಿ
ಬೇರೆಡೆಗೆ ಮುಖವ ತಿರುಗಿಸಿ ದೃಷ್ಟಿಸಲು
ಕಂಡುದು ದಟ್ಟಕತ್ತಲಿನ ದಿಕ್‌ದಿಗಂತದ ಅಂಚಿನಲಿ
ವಿಸ್ಮಯಕರ ಅಬ್ಬರವ ಹೊರಹೊಮ್ಮುತಲಿ
ನವಸ್ಫುರಣಕದು ಆಹ್ವಾನದ ಕರೆಯೆಂದರಿತು
ಸಾಗರದ ಆಳದ ಆಗುಹೋಗುಗಳನರಿಯದೆ ಧುಮಿಕ್ಕಿದನು
ಮರುಚಣವೆ ಜಿಗಿದನವನು ಬಾನಿನಂಗಳಕೆ
ಸೇರಿ ಹೋದನು ಅದರಂತರಾಳದಿ ಲೀನ ತಾನಾದನು
ಚುಕ್ಕೆಯೆನಿಸಿದನವನು ಕ್ಷೀರಪಥದಲಿ

ಅವರು ಸಸ್ಯಶಾಸ್ತ್ರದ ಪ್ರಧಾನ ಪ್ರಾಧ್ಯಾಪಕರಾಗಿ ತಮ್ಮ ವಿಭಾಗಕ್ಕೆ ಹಿಂದಿರುಗಿದರು. ಇದರಿಂದ ಸಸ್ಯಶಾಸ್ತ್ರಕ್ಕೂ ಒಳಿತಾಯಿತು. ನನಗೂ ನಿಜಕ್ಕೂ ಸಹಾಯಕರವಾಯಿತು. ಒಂದು ದಿನ ಸಸ್ಯಸಂಗ್ರಹಾಲಯದಿಂದ ಅದೇ ತಾನೇ ಹಿಂದಿರುಗುತ್ತಿರುವಾಗ ಸಸ್ಯ ಸಂಗ್ರಹಾಲಯವನ್ನು ಪ್ರವೇಶಿಸುತ್ತಿರುವ ಅವರಿಗೆ ವಾಸ್ತವವಾಗಿ ನಾನು ಡಿಕ್ಕಿ ಹೊಡೆಯಬೇಕಾಯಿತು. ಅವರಲ್ಲಿ ನಾನು ಕ್ಷಮೆ ಕೋರಿದಾಗ ಅವರು ನನ್ನ ಬೆನ್ನನ್ನು ತಟ್ಟುತ್ತಾ ಒಂದೈದು ನಿಮಿಷ ನಿಲ್ಲುವುದಾದರೆ ಅವರು ನನ್ನೊಡನೆ ಒಂದು ಗಹನವಾದ ವಿಷಯವನ್ನು ಮಾತನಾಡಬೇಕಿರುವುದೆಂದು ತಿಳಿಸಿದರು. ಸಸ್ಯಶಾಸ್ತ್ರದಲ್ಲಿ ಅಷ್ಟೊಂದು ಹಿರಿಯವ್ಯಕ್ತಿ ಅದೇ ತಾನೆ ಪರೀಕ್ಷೆಗಳನ್ನು ಮುಗಿಸಿರುವ ನನ್ನಂತಹ ವಿದ್ಯಾರ್ಥಿಯೊಂದಿಗೆ ಮಹತ್ತಿನ ಮಾತನಾಡಬೇಕೆಂದಿರುವ ವಿಷಯವೇನೆಂದು ನಾನು ಊಹಿಸಲಾರದಾದೆ. ತತ್‌ಕ್ಷಣವೇ ಅವರು ನನಗೆ ಹೀಗೆ ಹೇಳಿದರು. "ನನಗೆ ಗೊತ್ತು ನೀವು ಬಡತನದ ಮನೆಯಿಂದ ಬಂದವರು, ಸಂಜೆ ಹೊತ್ತಿನಲ್ಲಿ ಪ್ರಯೋಗಶಾಲೆಯ ಕೆಲಸಗಳಲ್ಲಿ ತೊಡಗಿಸಿಕೊಂಡು ಎಂ.ಎಸ್.ಸಿ. ಪರೀಕ್ಷೆಯನ್ನು ಮುಗಿಸಲು ಸಾಧ್ಯವಾಯಿತು. ನೀವು ನನ್ನ ಮಾರ್ಗದರ್ಶನದಲ್ಲಿ ಪಿಹೆಚ್.ಡಿ. ಪರೀಕ್ಷೆಗೆ ನಿಮ್ಮ ಹೆಸರನ್ನು ದಾಖಲಿಸಿಕೊಳ್ಳಿ, ನಾನು ನಿಮಗೆ ಈ ಬಗ್ಗೆ ಯೋಚಿಸಲು ಒಂದು ವಾರ ಕಾಲವನ್ನು ಕೊಡುತ್ತೇನೆ. ಅಷ್ಟರೊಳಗೆ ನಿಮ್ಮ ತಂದೆ ತಾಯಿಯವರನ್ನು ಸಂಪರ್ಕಿಸಿ ಅನಂತರ ನಿಮ್ಮ ನಿರ್ಧಾರವೇನೆಂದು ನನಗೆ ತಿಳಿಸಿರಿ." ನನಗೆ ಅದೊಂದು ಹಿತಕರ ಷಾಕ್ ಆಗಿ ಪರಿಣಮಿಸಿತು ಮತ್ತು ನಾನು ಆ ಕೂಡಲೇ ಅವರೊಂದಿಗೆ ಶಿಷ್ಯ ವೃತ್ತಿಯನ್ನು ನಡೆಸುವುದು ನನ್ನ ಸೌಭಾಗ್ಯವೆಂದು ಹೇಳಿ, ಅವರ ಪ್ರಯೋಗಾಲಯಕ್ಕೆ, ಸೇರಲು ಸಮ್ಮತಿಸಿದೆ, ಜೊತೆಗೆ, ನನ್ನ ಪರೀಕ್ಷೆಯ ಫಲಿತಾಂಶವು ಇನ್ನೂ ಬಾರದಿರುವ ಅಂಶವನ್ನೂ ಅವರ ಗಮನಕ್ಕೆ ತಂದೆ. ಆದರೆ, ಅವರು ನನ್ನನ್ನು ಚೆನ್ನಾಗಿ

ಬಲ್ಲೆನೆಂದು ತಿಳಿಸಿ, ಫಲಿತಾಂಶ ಪ್ರಕಟಣೆಯು ಕೇವಲ ಒಂದು ಔಪಚಾರಿಕ ಸಂಗತಿಯೆಂದರು. ನನ್ನಲ್ಲಿಟ್ಟಿರುವ ನಂಬಿಕೆ ಭರವಸೆಗಳಿಗಾಗಿ ಅವರನ್ನು ನಾನು ವಂದಿಸಿದೆ. ಅವರ ಜೀವಿತದ ಕೊನೆಯ ಕ್ಷಣದವರೆಗೂ ನನ್ನಲ್ಲಿಟ್ಟಿದ್ದ ಅವರ ನಂಬಿಕೆಯು ಅಳಿಯಲಿಲ್ಲ. ಈವರೆಗೆ ಏನೇನು ಸಾಧಿಸಿರುವೆನೋ ಅದಕ್ಕೆಲ್ಲ ಸ್ವಾಮಿ ನನ್ನಲ್ಲಿಟ್ಟ ನಂಬಿಕೆ ಪ್ರೋತ್ಸಾಹಗಳೇ ಕಾರಣವೆಂದು ನಾನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ನಾನವರ ಪ್ರಯೋಗಾಲಯಕ್ಕೆ ಸೇರುವ ದಿನ ಅವರು ನನಗಾಗಿ ಒಂದು ಮೇಜು, ಸ್ಟೂಲು, ಮತ್ತು ಇನ್ನಿತರ ಅಗತ್ಯವಾದ ಗಾಜಿನ ಸಲಕರಣೆಗಳು, ರಾಸಾಯನಿಕ ಮತ್ತು ಸೂಕ್ಷ್ಮದರ್ಶಕಗಳನ್ನು ಒದಗಿಸಿದರು. ತಮ್ಮ ಸಂಶೋಧನಾ ವಿದ್ಯಾರ್ಥಿಗಳು ಕುರ್ಚಿಯನ್ನು ಬಳಸುವುದನ್ನು ಅವರೆಂದೂ ಒಪ್ಪುತ್ತಿರಲಿಲ್ಲ; ಏಕೆಂದರೆ, ಕುರ್ಚಿಗಳಲ್ಲಿ ಆರಾಮವಾಗಿ ಕುಳಿತರೆ ಸೋಮಾರಿತನ ತಪ್ಪಿದ್ದಲ್ಲ, ಅವರೂ ಸಹ ಸ್ಟೂಲ್ ಮೇಲೆಯೇ ಕುಳಿತುಕೊಳ್ಳುತ್ತಿದ್ದರು. ಹಾಗೂ ಅವರನ್ನು ಸಂದರ್ಶಿಸ ಬಂದವರಿಗೂ ಅದೇ ಆತಿಥ್ಯ. ತಾವೇ ಆಚರಣೆಗೆ ತರದಿದ್ದ ಯಾವುದೇ ವಿಚಾರವನ್ನು ಬೇರೆಯವರಿಗೆ ಬೋಧಿಸಹೋಗುತ್ತಿರಲಿಲ್ಲ.

ನಾನು ಅವರ ಪ್ರಯೋಗಾಲಯಕ್ಕೆ ಸೇರಿದ ನಂತರ ನನ್ನ ಪಿಹೆಚ್.ಡಿ. ಪದವಿಗೆ ಯಾವ ವಿಷಯವನ್ನು ಅಧ್ಯಯನ ಮಾಡಬೇಕೆಂದು ಸೂಚಿಸಿದರಲ್ಲದೆ ನನ್ನ ಪಿಹೆಚ್.ಡಿ.ಗೆ ಸಂಬಂಧಿಸಿದ ಕೆಲವೊಂದು ಸಮಸ್ಯೆಗಳ ಬಗೆಗೆ ಪರಾಮರ್ಶನ ಕಾರ್ಯವನ್ನೂ ಮಾಡುವಂತೆ ತಿಳಿಸಿದರು. ಪರಾಮರ್ಶನ ವಿಷಯಗಳನ್ನು ಸೂಚಿಸಿದಾಗ, ಪಿಹೆಚ್.ಡಿ. ವಿದ್ಯಾರ್ಥಿಗಳು ಓದುವ ಅಭ್ಯಾಸವನ್ನು ಬೆಳಸಿಕೊಳ್ಳಬೇಕೆಂದರು; ಜೊತೆಗೆ ಓದಿನಿಂದ ಬಂದ ಮೂಲಜ್ಞಾನ, ಅದನ್ನು ಅರ್ಥಮಾಡಿಕೊಳ್ಳುವುದು ಹಾಗೂ ಸಂಬಂಧಿತ ಸಂಶೋಧನಾ ಸಾಹಿತ್ಯವನ್ನು ಸಂಕ್ಷಿಪ್ತವಾಗಿ ದಾಖಲಿಸುವುದು ಅತಿಮುಖ್ಯವೆಂದರು, ಆ ಕಾರಣದಿಂದಲೇ ತಾವು ಕೆಲವು ಪರಾಮರ್ಶನ ವಿಷಯಗಳನ್ನು ನನಗೆ ಸೂಚಿಸಿರುವುದಾಗಿ ತಿಳಿಸಿದರು. ಒಂದೇ ವಿಷಯದ ಮೇಲಿನ ಅಧ್ಯಯನದಿಂದ ಪಿಹೆಚ್.ಡಿ. ವಿದ್ಯಾರ್ಥಿಯ ಮನಸ್ಸು ಆಯಾಸಗೊಳ್ಳುವುದೆಂದೂ, ಅದಕ್ಕೆಂದೇ ಒಂದಕ್ಕೊಂದು ಸಂಬಂಧವಿಲ್ಲದ ವಿಷಯಗಳ ಅಧ್ಯಯನದಿಂದ ಈ ತೊಂದರೆ ತಪ್ಪುವುದೆಂಬುದೂ ಅವರ ಖಚಿತ ಅಭಿಪ್ರಾಯವಾಗಿತ್ತು. ಮೊದಲಿಗೆ ನಾನು ಇತರ ವಿಷಯಗಳ ಮೇಲಿನ ಅಧ್ಯಯನಾಸಕ್ತಿಯಿಂದ ನನ್ನ ಪಿಹೆಚ್.ಡಿ. ಕಾರ್ಯವು ಶೀಘ್ರಗತಿಯಲ್ಲಿ ಸಾಗದೇ ಕುಂಟುತ್ತಾ ನಡೆಯುವುದೆಂದು ಭಾವಿಸಿದ್ದೆ. ಆದರೆ ಸ್ವಲ್ಪ ಕಾಲದಲ್ಲಿಯೇ ನನ್ನ ಭಾವನೆಯ ತದ್ವಿರುದ್ಧ ಪರಿಣಾಮವನ್ನು ನಾನು ಮನಗಂಡೆ. ಆಗಲೇ ನನಗೆ ಪ್ರೊ॥ ಸ್ವಾಮಿಯವರು ಸಸ್ಯಶಾಸ್ತ್ರವೊಂದನ್ನೆ ಅಲ್ಲದೆ, ಒಂದೇ ಕಾಲದಲ್ಲಿ ಹಲವಾರು ಒಂದಕ್ಕೊಂದು ಸಂಬಂಧವಿಲ್ಲದ ವಿಷಯಗಳ ಅಧ್ಯಯನ, ಅಧ್ಯಾಪನದಲ್ಲಿ ತೊಡಗಿಸಿಕೊಂಡಿದುದರ ಕಾರಣ ತಿಳಿದುದು. ಅವರು ಸಸ್ಯಶಾಸ್ತ್ರವಲ್ಲದೆ ಚರಿತ್ರೆ, ದ್ರವಿಡಿಯನ್ ಸಂಸ್ಕೃತಿ, ಕಲೆ ಮತ್ತು ವಾಸ್ತುಶಿಲ್ಪ, ಪುರಾತತ್ವಶಾಸ್ತ್ರ, ಸಂಗೀತ, ರೇಖಾಚಿತ್ರ, ವರ್ಣಚಿತ್ರ ಇತ್ಯಾದಿಗಳೆಲ್ಲದರಲ್ಲೂ ಆಸಕ್ತರಾಗಿದ್ದರು.

ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರೊ॥ ಸ್ವಾಮಿಯವರೊಡನೆ ನಾನು ಕಳೆದ ಹತ್ತು ವರ್ಷಗಳಲ್ಲಿ

ನನಗೆ ಕ್ರಮೇಣ ಅವರ ಪ್ರಕಟಿತ ಸಂಶೋಧನಾಕಾರ್ಯಗಳ ಪರಿಚಯವಾಯಿತು. ಅವುಗಳಲ್ಲನೇಕವು ಅವರಿಗೆ ವಿಶ್ವಖ್ಯಾತಿಯನ್ನು ತಂದುಕೊಟ್ಟಿವೆ. ಅದರಲ್ಲಿ ಮುಖ್ಯವಾಗಿ ಅವರು Primitive group of flowering planto ಎಂದು ಪರಿಗಣಿಸಲಾಗಿದೆ. ವಿಜ್ಞಾನಕ್ಕೆ ತೀರ ಹೊಸದಾದ ranales ಗೆ ಸಂಬಂಧಿಸಿದ ಎರಡು ಸಸ್ಯಗಳನ್ನು ಅವರು ವಿವರಿಸಿದ್ದರು. ಅದರಲ್ಲಿ ಒಂದು ಸಾರ್ಕಂಡ್ರಾ ಐರ್ವಿಂಗ್ ಬೈಲಿಯೈ ಇದನ್ನು ಅವರು ತಮ್ಮ ದಿವಂಗತ ಪ್ರಾಧ್ಯಾಪಕರಾದ ಐ.ಡಬ್ಲ್ಯೂ ಬೈಲಿ ಅವರ ಸ್ಮರಣಾರ್ಥ ನಾಮಕರಣ ಮಾಡಿದ್ದರು. ಮತ್ತೊಂದು ಆಸ್ಕಾರಿನಾ ಮಾಹೇಶ್ವರಿ. ಇದನ್ನವರು ದೆಹಲಿ ವಿಶ್ವವಿದ್ಯಾನಿಲಯದ ದಿವಂಗತ ಪ್ರಾಧ್ಯಾಪಕ ಪಿ. ಮಾಹೇಶ್ವರಿ ಅವರ ಸ್ಮರಣಾರ್ಥ ಸಾಮಕರಣ ಮಾಡಿದರು.

Ranales ಅನ್ನು ಕುರಿತ ಅವರ ಅಧ್ಯಯನವು ಸೂಚಿಸಿದ, ಎಲೆಯು ಉದ್ದುದಕ್ಕೆ ಮಧ್ಯಕ್ಕೆ ಸರಿಯಾಗಿ ಮಡಿಸಿದಂತ ಸಸ್ಯಗಳ ಹೂಗಳಲ್ಲಿ ಶಲಾಕಾನಳಿಕೆಯ ರೂಪ ಆಕಾರ ವಿಜ್ಞಾನದ ವಿಕಸನದ ಕಲ್ಪನೆಗೆ ಈಗ ಬಹುಮಟ್ಟಿಗೆ ಒಪ್ಪಿಗೆ ದೊರೆತಿದೆ, ಏಕದಳದ ಹೂವನ್ನು ಬಿಡುವ ಸಸ್ಯಗಳಲ್ಲಿನ ಅಗ್ರಸ್ಥ (ಅಂತಿಮ) ಲಕ್ಷಣಗಳನ್ನು ಸಿದ್ಧಾಂತ ಪಡಿಸಿರುವುದು ಪ್ರೊ॥ ಸ್ವಾಮಿಯವರಿಗೆ ಸಲ್ಲುತ್ತದೆ. ವಿಜ್ಞಾನಿ ಸೌಜೆಸ್ ಅವರ ನಿಷ್ಠಾವಂತ ಅನುಯಾಯಿಗಳೂ ಕೂಡ ತಮ್ಮ ಏಕದಳ ಸಸ್ಯಗಳು ಹೂಬಿಡುವುದು ಪಾರ್ಶ್ವಸ್ಥವೆಂಬ ಅಭಿಪ್ರಾಯವನ್ನು ಪರಿಷ್ಕರಿಸಿ ಪ್ರೊ॥ ಸ್ವಾಮಿಯವರ ವಾದವನ್ನೇ ಒಪ್ಪಿರುತ್ತಾರೆ. ಹೀಲೊಬಿಯಲ್ ಬೀಜಪೋಷಕದ ಬಗೆಗೆ ಪೂರ್ಣಪ್ರಮಾಣದ ಸಮೀಕ್ಷೆಯನ್ನು ಸಂಕಲಿಸಿರುವುದಲ್ಲದೆ ಏಕದಳ ಬೀಜಗಳಲ್ಲಷ್ಟೇ ಅದು ಕಂಡು ಬರುವುದೆಂಬ ಅಭಿಪ್ರಾಯವನ್ನು ದೃಢೀಕರಿಸಿರುವ ಕೀರ್ತಿಗೆ ಪ್ರೊ॥ ಸ್ವಾಮಿಯವರು ಭಾಜನರು. ಅವರು ಸಿದ್ಧಪಡಿಸಿರುವ ಅನೇಕ ಸ್ಲೈಡು (ಚಿತ್ರಫಲಕ)ಗಳನ್ನು ವರ್ಣಸ್ಥಗೊಳಿಸುವಲ್ಲಿ ಅವರು ಬಳಸಿದ ಸೂಕ್ಷ್ಮಪ್ರಯೋಗವಿಧಾನವು ಅವರ ಕೌಶಲ್ಯದ ಪರಿಪೂರ್ಣತೆಗೆ ಸಾಕ್ಷಿಯಾಗಿದೆ. ಪ್ರಯೋಗಾಲಯದಲ್ಲಿ ಅವರ ಕಾರ್ಯವಿಧಾನವನ್ನು ಗಮನಿಸುವುದೇ ಒಂದು ಆಹ್ಲಾದಕರ ಅನುಭವ. ಅವರು ಕೆಲಸ ಮಾಡುವ ವಿಧಿ ವಿಧಾನಗಳನ್ನು ಗಮನಿಸಿಯೇ ಪಾಠ ಕಲಿಯಬಹುದಾಗಿತ್ತು.

ಸಸ್ಯಶಾಸ್ತ್ರದ ಜ್ಞಾನ ಹಾಗೂ ಕಲಾಪ್ರಯೋಗ ವಿಧಾನಗಳನ್ನು ಮಾನವಕಲ್ಯಾಣದ ಅಭ್ಯುದಯಕ್ಕೆ ಅನ್ವಯಿಸುವಲ್ಲಿ ಅವರದು ಅವಿರತ ಆಸಕ್ತಿ ಹಾಗೂ ಸಮರ್ಥನೆ ಮುಖ್ಯವಾಗಿ ಸಸ್ಯಶಾಸ್ತ್ರದ ಜ್ಞಾನವನ್ನು ಅಪರಾಧ ಶಾಸ್ತ್ರ ಹಾಗೂ ಕಾನೂನು ವೈದ್ಯಶಾಸ್ತ್ರಗಳಲ್ಲಿ ಅನ್ವಯಿಸುವ ಅವರ ಮನೋಧರ್ಮವನ್ನು ಸ್ಮರಿಸಬಹುದಾಗಿದೆ. ಮದ್ರಾಸಿನ ಕಾನೂನು ವೈದ್ಯಶಾಸ್ತ್ರದ ಸಂಶೋಧನಾ ಪ್ರಯೋಗಾಲಯಕ್ಕೆ ಅವರು ನಿಯತ ಸಲಹಾಗಾರರಾಗಿದ್ದರು. ಹಲವಾರು ಅಪರಾಧ ಹಾಗೂ ವ್ಯಾವಹಾರಿಕ ಮೊಕದ್ದಮೆಗಳಲ್ಲಿ ಮಹತ್ವದ ಸಾಕ್ಷ್ಯಗಳನ್ನು ಗುರುತಿಸಲು ಸಸ್ಯಶಾಸ್ತ್ರದ ಮಾದರಿಗಳನ್ನು ಪರೀಕ್ಷಿಸುವಲ್ಲಿ ನಾನು ಅವರಿಗೆ ಸಹಾಯ ಮಾಡುವ ವಿಶೇಷ ಅವಕಾಶಗಳು ನನಗೊದಗಿದ್ದವು. ಅನೇಕ ಸಂದರ್ಭಗಳಲ್ಲಿ ಪೋಲಿಸರು ಅಪರಾಧ ನಡೆದ ಸ್ಥಳಗಳಿಂದ ಸಂಗ್ರಹಿಸಿದ ಮರ, ಹೂವಿನ ಪರಾಗ, ಬೀಜಕ ಮತ್ತಿತರ ಸಸ್ಯಸಂಬಂಧಿತ ಮಾದರಿಗಳನ್ನು ವಿಶ್ಲೇಷಿಸಿ ಖಚಿತವಾಗಿ ನಿರ್ಧರಿಸುತ್ತಿದ್ದರು. ಅನೇಕ ಅಪರಾಧ ಮೊಕದ್ದಮೆಗಳಲ್ಲಿ

ಅವರ ವೈಜ್ಞಾನಿಕ ತಿಳಿವು ಆಪಾದಿತರನ್ನು ಪತ್ತೆ ಹಚ್ಚುವುದರಲ್ಲಿ ಪ್ರಮುಖ ಪಾತ್ರವಹಿಸುತ್ತಿತ್ತು. ಭಾರತದಂತಹ ರಾಷ್ಟ್ರದಲ್ಲಿ ತಜ್ಞ ಸಸ್ಯಶಾಸ್ತ್ರಜ್ಞರು ಮತ್ತು ಕಾನೂನು ವೈದ್ಯ ವಿಜ್ಞಾನದವರ ಸಹಾಯ ಪಡೆದಲ್ಲಿ ಅನೇಕ ಅಪರಾಧಗಳನ್ನು ಪತ್ತೆ ಹಚ್ಚಬಹುದಾಗಿದೆಯೆಂದು ಅವರು ಆಗಾಗ ಹೇಳುತ್ತಿದ್ದರು.

ಸಸ್ಯ ವಿಜ್ಞಾನದ ತಿಳಿವಿನಿಂದ ಪ್ರಮುಖವಾಗಿ ಸಸ್ಯಗಳ ವಿನ್ಯಾಸವನ್ನು ಅದರಲ್ಲೂ ಮುಖ್ಯ ವಾಗಿ ಸೂಕ್ಷ್ಮದರ್ಶಕಗಳ ಮೂಲಕ ಪರೀಕ್ಷಿಸಿದಾಗ ಕಂಡುಬರುವ ಅದರ ರೂಪ ರಚನೆಗಳನ್ನು ಬಹಳಷ್ಟು ವ್ಯಾವಹಾರಿಕ ಕಂಡುಬರುವ ಅದರ ರೂಪ ರಚನೆಗಳನ್ನು ಬಹಳಷ್ಟು ವ್ಯಾವಹಾರಿಕ ಉದ್ಯಮಗಳಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳಬಹುದೆಂಬುದು ಪ್ರೊ॥ ಸ್ವಾಮಿಯವರ ಅಭಿಪ್ರಾಯ ವಾಗಿತ್ತು. ಜವಳಿ ಉದ್ಯಮ, ಗೋಡೆ ಅಲಂಕಾರಿಕ ಕಾಗದ ತಯಾರಿಕೆ, ಸ್ಕ್ರೀನ್ ಪ್ರಿಂಟಿಂಗ್ ಮತ್ತು ಗ್ರಿಲ್ (ಬೆಸುಗೆ) ಕಾರ್ಯಗಳಲ್ಲಿ ಬಳಕೆಗೆ ಇನ್ನೂ ಅಲಭ್ಯವಾಗಿರುವ ಈ ವಿನ್ಯಾಸಗಳನ್ನು ಲಾಭದಾಯಕವಾಗಿ ಉಪಯೋಗಿಸಿಕೊಳ್ಳಬಹುದಾಗಿದೆ. ವಾಸ್ತವದಲ್ಲಿ ಅವರು ಮದ್ರಾಸ್, ಮಧುರೈ, ಹೊಸದೆಹಲಿ, ಮೈಸೂರು ಮತ್ತು ಬೆಂಗಳೂರುಗಳಲ್ಲಿ ಸಸ್ಯಗಳು ಹಾಗೂ ಪ್ರಾಣಿಗಳ ರಚನೆಯಲ್ಲಿ ಅಡಗಿರುವ ರೂಪ ರಚನೆಗಳನ್ನು ಜನಸಾಮಾನ್ಯರಿಗೆ ಪರಿಚಯಿಸಲು 'ಸೂಕ್ಷ್ಮದರ್ಶನ ಮತ್ತು ಅಲಂಕಾರಿಕ ಕಲೆಗಳು' ಎಂಬ ವಿಷಯ ಕುರಿತಂತೆ ಯಶಸ್ವೀ ಪ್ರದರ್ಶನಗಳನ್ನು ಏರ್ಪಡಿಸಿದರು. ಜವಳಿ ಉದ್ಯಮ ಮತ್ತು ಅಲಂಕಾರಿಕ ವಿನ್ಯಾಸಗಳ ಬಳಕೆಗೆ ಹೊಸ ಹಾಗೂ ಅಮೂಲ್ಯ ಕಾಣಿಕೆಗಳನ್ನು ಒದಗಿಸಿದ ಕೀರ್ತಿ ಪ್ರೊ॥ ಸ್ವಾಮಿಯವರಿಗೆ ಸೇರಿದುದಾಗಿರುತ್ತದೆ.

ಪ್ರೊ॥ ಸ್ವಾಮಿಯವರು ಭಾರತದಲ್ಲಿನ ಸಸ್ಯಶಾಸ್ತ್ರದ ಇತಿಹಾಸದಲ್ಲಿಯೂ ಆಸಕ್ತರಾಗಿದ್ದರು. ಸಂಸ್ಕೃತ ಮತ್ತು ಎಲ್ಲ ದ್ರಾವಿಡ ಭಾಷೆಗಳಲ್ಲಿಯೂ ಅವರು ಪರಿಣತರಾಗಿದ್ದುದರಿಂದ ಭಾರತದ ಸಸ್ಯಶಾಸ್ತ್ರದ ಇತಿಹಾಸವನ್ನು ಸಾಹಿತ್ಯ ಶಾಸನಗಳು ಜಾನಪದ ಮತ್ತು ಇನ್ನಿತರ ಆಕರಗಳಿಂದ ಪುನರ್ರಚನೆಯು ಸಾಧ್ಯವಾಗುವುದೆಂದು ವೈಜ್ಞಾನಿಕ ಮನೋಧರ್ಮವುಳ್ಳ ಆಸಕ್ತರಲ್ಲಿ ಈ ವಿಷಯ ಪ್ರತಿಪಾದನೆ ಮಾಡುವುದರಲ್ಲಿ ಸಮರ್ಥರೆನಿಸಿದ್ದರು. ಈ ಮೂಲಗಳಿಂದ ವಾಸ್ತವಿಕವಾಗಿ ಭಾರತೀಯ ಸಸ್ಯಸಂಪತ್ತನ್ನು ಮತ್ತು ಇನ್ನಿತರ ಇಂಗ್ಲಿಷ್, ಡಚ್, ಪೋರ್ಚುಗೀಸ್, ಮಧ್ಯಪ್ರಾಚ್ಯ ಮತ್ತು ದೂರಪ್ರಾಚ್ಯದೇಶ ನಾವಿಕರಿಂದ ಬಂದ ವಿದೇಶೀಯ ವಿಚಿತ್ರ ಸಸ್ಯಗಳನ್ನು ಪ್ರತ್ಯೇಕಿಸಿ ಗುರುತಿಸಬಹುದೆಂದು ದೃಢೀಕರಿಸಲು ಪ್ರೊ॥ ಸ್ವಾಮಿಯವರಿಗೆ ಸಾಧ್ಯವಾಯಿತು. ಇಂಥದೇ ಆಧಾರಗಳ ಮೇಲೆ ಋಗ್ವೇದದಲ್ಲಿ ಸೂಚಿತವಾಗಿರುವ ಸೋಮ ಸಸ್ಯವನ್ನು ಸ್ಪಷ್ಟವಾಗಿ ಗುರುತಿಸಲು ಅವರಿಗೆ ಸಾಧ್ಯವಾಯಿತು. ಶಾಸನಗಳ ಆಧಾರದ ಮೇಲೆ ಒದಗಿಬಂದ ಮಾಹಿತಿ ಹಾಗೂ ಕಡಲ ಮೂಲಕ ಸಸ್ಯಸಂಪತ್ತಿನ ವಾಣಿಜ್ಯ ಚಟುವಟಿಕೆಗಳು ಭಾರತೀಯ ಸಸ್ಯಶಾಸ್ತ್ರದ ಇತಿಹಾಸ ರಚನೆಗೆ ಒದಗಿಬಂದ ಇನ್ನೆರಡು ಪ್ರಮುಖ ಆಕರಗಳು. ಭಾರತೀಯ ಸಸ್ಯಶಾಸ್ತ್ರದ ಇತಿಹಾಸವನ್ನು ರೂಪಿಸಲು ಆಧಾರಗಳನ್ನು ಹುಡುಕುವ ಸಲುವಾಗಿ ಸಾಹಿತ್ಯಗಳ ಪರಿಶೀಲನೆ ನಡೆಸುತ್ತಿದ್ದಾಗ ಭಾರತೀಯ ಸಾಮಾಜಿಕ ಬದುಕಿನೊಂದಿಗೆ ಅವಿನಾಸಂಬಂಧ ಹೊಂದಿದ್ದ ಔಷಧೀಯ ಹಾಗೂ ಮಾದಕವುಂಟುಮಾಡುವ ಸಸ್ಯ ಸಂಪತ್ತಿನ ಬಗೆಗೆ ಅವರು ಆಕರ್ಷಿತರಾದರು. ಈ ಸಸ್ಯಗಳ ಬಗೆಗೆ ಅವರು ಎಲ್ಲ ಮಾಹಿತಿಯನ್ನು ಸಂಗ್ರಹಿಸಿದ್ದರು. ಮತ್ತು ಅವನ್ನು ಎರಡು

ಪುಸ್ತಕಗಳಲ್ಲಿ ದಾಖಲಿಸಿದ್ದರು. ಅವುಗಳಲ್ಲೊಂದು ಕನ್ನಡದಲ್ಲಿ ಪ್ರಕಟವಾದ 'ಹಸಿರುಹೊನ್ನು' ಹಸಿರು ಸಸ್ಯ ಸಂಪತ್ತನ್ನು ಕುರಿತಾದುದು; ಮತ್ತೊಂದು ತಮಿಳಿನಲ್ಲಿ ಪ್ರಕಟವಾದ 'ಬೋಧಾಯೇನ್ ಪಾದೆಯೆಲ್'.

ನನ್ನ ಅರಿವಿಗೆ ತಿಳಿದಿರುವಂತೆ, ಹಲವಾರು ಸಸ್ಯಶಾಸ್ತ್ರದ ಸಮಸ್ಯೆಗಳನ್ನು ಕಾರ್ಟೂನು ಮಾಧ್ಯಮದ ಮೂಲಕ ಕೇಂದ್ರೀಕೃತಗೊಳಿಸಿದ ಬಹುಶಃ ಪ್ರಪ್ರಥಮ ವ್ಯಕ್ತಿ, ಪ್ರಾಧ್ಯಾಪಕ ಸ್ವಾಮಿ, ವ್ಯಂಗ್ಯ ಚಿತ್ರಕಾರ ಆರ್.ಕೆ. ಲಕ್ಷಣ ಅವರ ಅಭಿಮಾನಿಯಾದ ಸ್ವಾಮಿಯವರು ತಮ್ಮ ಸಸ್ಯವಿಜ್ಞಾನ ಸಹದ್ಯೋಗಿಗಳಿಗೆ ಅನೇಕ ವೇಳೆ ವ್ಯಂಗ್ಯ ಚಿತ್ರಗಳ ರೂಪದಲ್ಲಿ ಹೊಸವರ್ಷದ ಶುಭಾಶಯ ಪತ್ರಗಳನ್ನು ಕಳುಹಿಸುವ ಪರಿಪಾಠವಿತ್ತು. ಬೀಜಕೋಶಗಳ (Angiosperms) ಸಂಧಿಸ್ಥಾನದ ಅಂಗರಚನೆಯ ಸಮಸ್ಯೆ ಬಗೆಗೆ ಅವರು ರಚಿಸಿದ ವ್ಯಂಗ್ಯಚಿತ್ರವು ಅತ್ಯುತ್ಕೃಷ್ಟವಾದುದೆಂದು ಅವರ ಸಹೋದ್ಯೋಗಿಗಳ ಅಭಿಪ್ರಾಯವಾಗಿತ್ತು. ಅದಕ್ಕೆ ಅವರು 'ಮಂಗನ ಸಮಸ್ಯೆ'ಯೆಂಬ ಶೀರ್ಷಿಕೆ ನೀಡಿದ್ದರು. ಸಸ್ಯವಿಜ್ಞಾನ ಕುರಿತಾದ ಅವರ ಇನ್ನೂ ಹಲವಾರು ವ್ಯಂಗ್ಯ ಚಿತ್ರಗಳು ಉತ್ತಮಮಟ್ಟದ ಕಾರ್ಟೂನುಗಳೆಂದು ಹೆಸರುವಾಸಿಯಾಗಿದ್ದುವು. ಅವರ ಗುರುಗಳಾದ ಪ್ರೊಫೆಸರ್ ಇರ್ವಿಂಗ್ ಬೈಲಿಯವರ ಸಮಗ್ರ ಸಾಹಿತ್ಯ ಸಂಪುಟಕ್ಕೆ ಪ್ರೊ॥ ಸ್ವಾಮಿಯವರು ಮುಖಪುಟ ಚಿತ್ರ ಹಾಗೂ ಪುಸ್ತಕದೊಳಗೆ ಹಲವಾರು ಸುಂದರವಾದ ಆಲಂಕಾರಿಕ ಚಿತ್ರಗಳ ವಿನ್ಯಾಸವನ್ನು ಮೂಡಿಸಿದ್ದಾರೆ. ಸಸ್ಯಗಳ ಹೂಗಳಲ್ಲಿ ಶಲಾಕಾ ನಳಿಕೆಯ ರೂಪ ಅಥವಾ ಆಕಾರ ವಿಜ್ಞಾನ ಸಮಸ್ಯೆ ಕುರಿತು ಅವರು ರಚಿಸಿದ ವರ್ಣಚಿತ್ರವೊಂದನ್ನು ಅಮೆರಿಕದ ಕೆಲವು ಮ್ಯೂಸಿಯಮ್‌ಗಳಲ್ಲಿ ಪ್ರದರ್ಶನಕ್ಕಿಟ್ಟಿದ್ದಾರೆ. ನ್ಯೂಯಾರ್ಕಿನ ಸ್ಮಿತ್ ಸೋನಿಯನ್ ಸಂಸ್ಥೆಯ ಪ್ರೊ॥ ಹೈಡ್ ಅವರು ಈ ವರ್ಣಚಿತ್ರವನ್ನು "ಸೈನ್ಸ್" ಪತ್ರಿಕೆಯಲ್ಲಿ ಪ್ರಕಟವಾದ ತಮ್ಮ ಇತ್ತೀಚಿನ ಲೇಖನವೊಂದರಲ್ಲಿ ಪುನರ್ಮುದ್ರಣ ಮಾಡಿರುವುದು ಸ್ವಾಮಿಯವರಿಗೆ ಸಂದ ಮಹತ್ತರವಾದ ಗೌರವವೆನ್ನಬಹುದು.

ಕನ್ನಡಾನುವಾದ : ಸೂ. ಸುಬ್ರಮಣ್ಯಂ

❖

# ಸಮಭಾವದ ಗುರು

## (ಡಾ|| ಎಂ. ಗೋಪಾಲಕೃಷ್ಣ ಅಡಿಗ)

---

● *ಡಾ|| ಎ. ಮುರಿಗೆಪ್ಪ*

**ಮೊ**ಗೇರಿ ಇದರ ಹೆಸರನ್ನೇ ನಾನು ಕೇಳಿರಲಿಲ್ಲ. ಮೊದಲ ಬಾರಿಗೆ ಈ ಹೆಸರನ್ನು ನಾನು ಕೇಳಿದ್ದು ೧೯೬೩ರಲ್ಲಿ. ಸಾಗರದ ಪ್ರಥಮ ದರ್ಜೆ ಕಾಲೇಜಿಗೆ ನಾನು ಸೇರಿದಾಗ. ಅದು ಪ್ರೊ. ಎಂ. ಗೋಪಾಲಕೃಷ್ಣ ಅಡಿಗ ಅವರ ಹೆಸರಿನ ಮೊದಲ ಅಕ್ಷರ. 'ಎಂ' ಎಂದರೆ ಮೊಗೇರಿ. ಮೊಗೇರಿ ಗೋಪಾಲಕೃಷ್ಣ ಅಡಿಗರ ಸೈಂಟ್ ಫಿಲೋಮಿನಾ ಕಾಲೇಜಿನಲ್ಲಿ. ಜೂನ್ ತಿಂಗಳ ಮಲೆನಾಡಿನ ಮಳೆಯ ಅಬ್ಬರದ ಮಧ್ಯೆ ತಾಳಗುಪ್ಪದ ಲಕ್ಷ್ಮೀನಾರಾಯಣ, ಶ್ರೀಧರ ಇನ್ನಿತರರಿದ್ದರು. ನಾವೆಲ್ಲ ಸೈಂಟ್ ಫಿಲೋಮಿನ ಕಾಲೇಜಿಗೆ ಪದವಿಪೂರ್ವ ತರಗತಿ ಅಂದರೆ ಪಿ.ಯು.ಸಿ.ಗೆ ಸೇರಿದ್ದೆವು. ಆ ಸಂದರ್ಭದಲ್ಲಿ ಗೋಪಾಲಕೃಷ್ಣ ಅಡಿಗರು ಇಂಗ್ಲಿಷ್ ಪ್ರಥಮದರ್ಜೆ ಕಾಲೇಜಿನ ಪ್ರಾಚಾರ್ಯರಾಗಿ ಹೋದರು. ಅಲ್ಲಿಂದ ಒಂದು ತಿಂಗಳು ಅಂತ ಕಾಣುತ್ತೆ. ಪ್ರಥಮದರ್ಜೆ ಕಾಲೇಜಿಗೆ ಬಂದು ಸೇರಿದೆವು. ಆಗ ಪ್ರೊ. ಎಂ. ಗೋಪಾಲಕೃಷ್ಣ ಅಡಿಗರು ಕಾಲೇಜಿನ ಪ್ರಾಂಶುಪಾಲರು. ಅಷ್ಟು ಎತ್ತರವಲ್ಲದ, ಬಡಕಲೂ ಅಲ್ಲದ ಸಾಮಾನ್ಯ ಶರೀರದ ವ್ಯಕ್ತಿ ಅಡಿಗರು. ಯಾವಾಗಲೂ ಅಂಗಿಯನ್ನು ಪ್ಯಾಂಟಿನ ಒಳಗೆ ಸೇರಿಸಿ ಮೇಲೊಂದು ಕೋಟನ್ನು ಹಾಕಿಕೊಂಡು ಬರ್‍ತಾ ಇದ್ರು. ಕೋಟು ಇಲ್ಲದೆ ಇರುವುದನ್ನು ಅಡಿಗರಲ್ಲಿ ನಾನು ಕಂಡೇ ಇರಲಿಲ್ಲ. ಆದರೆ ಒಮ್ಮೆ ಮಾತ್ರ ನಾನು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅವರು ಇಂಗ್ಲಿಷ್ ವಿಭಾಗದ ಅತಿಥಿಯಾಗಿ ಬಂದಾಗ ಅತಿಥಿಗೃಹದಲ್ಲಿ ಭೇಟಿ ಮಾಡಿದ್ದೆ. ಆಗ ಮಾತ್ರ ಅವರು ಅರ್ಧ ಕೈ ಅಂಗಿ ಒಂದು ಲುಂಗಿ ತೊಟ್ಟಿದ್ದರು. ಆಗ ಅವರನ್ನು ಭೇಟಿ ಮಾಡಿ ನಾನು ಈಗ ಕನ್ನಡ ವಿಭಾಗದ ವಿದ್ಯಾರ್ಥಿ ಎಂದು ಹೇಳಿಕೊಂಡಾಗ ತುಂಬಾ ಸಂತಸಪಟ್ಟರು. ಅವರೊಂದಿಗೆ ಒಂದು ಫೋಟೋ ಕೂಡ ತೆಗೆಸಿಕೊಂಡೆ.

ಗೋಪಾಲಕೃಷ್ಣ ಅಡಿಗರು ಆಗಲೇ ಸಾಹಿತ್ಯದಲ್ಲಿ ಹೆಸರಾಗಿದ್ದರು ಅವರು ಸಾಗರದ ಕಾಲೇಜಿನಲ್ಲಿ ನನಗೆ ಇಂಗ್ಲಿಷ್ ಪಾಠ ಹೇಳಿದ್ದು ಮೂರು ವರ್ಷ. ಅದೇ ತಾನೇ ದೂರದ ಸುತ್ತಮುತ್ತಲ ಮಲೆನಾಡಿನ ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕಾಗಿ ಅನುವು ಮಾಡಿಕೊಡುವ ದಿಸೆಯಲ್ಲಿ ಮಲೆನಾಡು ವಿದ್ಯಾ ಸಂಸ್ಥೆ ರೂಪುಗೊಂಡಿತ್ತು. ಅಧ್ಯಕ್ಷರಾಗಿರುವಂತೆಯೆ ಎಚ್.ಎಲ್. ವೀರಭದ್ರಗೌಡರು, ಕಾರ್ಯದರ್ಶಿಯಾಗಿ ಅಂದಿನ ಯುವ ಕಾರ್ಯಕರ್ತ ಕೆ.ಎಚ್. ಶ್ರೀನಿವಾಸ. ಅವರ ಹಿಂದೆ ಉತ್ಸಾಹ ಪಡೆಯೆ ಇತ್ತು. ಕೆ.ಎಚ್. ಶ್ರೀನಿವಾಸ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿದವರು. ಅಲ್ಲಿಯ ಶೈಕ್ಷಣಿಕ ಪರಿಸರದಲ್ಲಿ ಬೆಳೆದವರು. ಮೈಸೂರು ವಿಶ್ವವಿದ್ಯಾಲಯದಲ್ಲಿ

ಶಿಕ್ಷಣ ಹಾಗೂ ಮೈಸೂರಿನ ಶಿಕ್ಷಕರ ಪರಿಚಯ ಇದ್ದವರು. ಸರಿ ಸಾಗರದಲ್ಲಿ ಆರಂಭಿಸಲಿರುವ ಪ್ರಥಮದರ್ಜೆ ಕಾಲೇಜಿನ ಪ್ರಾಚಾರ್ಯರಾಗಿ ಮೈಸೂರಿನ ಸೈಂಟ್ ಫಿಲೋಮಿನಾ ಮಹಾವಿದ್ಯಾಲಯದ ಪ್ರೊ. ಗೋಪಾಲಕೃಷ್ಣ ಅಡಿಗರನ್ನು ಒಲಿಸಿ ಕರೆತಂದರು. ಶ್ರೀಯುತ ಗೋಪಾಲಕೃಷ್ಣ ಅಡಿಗರು ಹೊಸದಾಗಿ ಆರಂಭವಾದ ಕಾಲೇಜಿಗೆ ಉತ್ತಮ ಅಧ್ಯಾಪಕರನ್ನು ಆಯ್ದು ತರುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಇಂಗ್ಲಿಷಿಗೆ ಜಿ.ಕೆ. ಗೋವಿಂದರಾವ್, ಕನ್ನಡಕ್ಕೆ ಡಾ. ಚಂದ್ರಶೇಖರ ಕಂಬಾರ, ಪ್ರೊ. ರೇಣುಕಪ್ಪಗೌಡ, ಗಣಿತಕ್ಕೆ ವೆಂಕಟರಾಂ, ಸಸ್ಯಶಾಸ್ತ್ರ ಜೀವಶಾಸ್ತ್ರಕ್ಕೆ ಡಾ. ಮಲ್ಲನಗೌಡ, ರಸಾಯನಶಾಸ್ತ್ರಕ್ಕೆ ಕೃಷ್ಣಯ್ಯರ್, ಭೌತಶಾಸ್ತ್ರಕ್ಕೆ ಡಾ. ಶಾಂತಾರಾಂ, ಸಮಾಜ ವಿಭಾಗಕ್ಕೆ ಎಚ್.ಎಸ್.ಕೆ. ಅಯ್ಯಂಗಾರ್ ಮುಂತಾದವರ ಪರಿಣಿತ ಪಡೆಯನ್ನು ತರುವುದರ ಮೂಲಕ ಗೋಪಾಲಕೃಷ್ಣ ಅಡಿಗರು ಮಹಾವಿದ್ಯಾಲಯಕ್ಕೆ ಭದ್ರವಾದ ಬುನಾದಿಯನ್ನು ಹಾಕಿದರು. ಮಹಾವಿದ್ಯಾಲಯದ ನಿರ್ವಾಹಕ ಮಂಡಳಿಯಲ್ಲಿ ಹೆಚ್ಚಾಗಿ ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡವರಿದ್ದರು. ಆದರೂ ಸಮಾಜವಾದದ ನೆಲೆಯಲ್ಲಿ ಗುರುತಿಸಿಕೊಂಡ ಅಡಿಗರು ತಮ್ಮ ಸ್ವಂತ ವಿಚಾರಧಾರೆಯನ್ನು ಮುಂದುವರೆಸುವಲ್ಲಿ ಸ್ವತಂತ್ರವಾಗಿದ್ದರು. ಆರಂಭದಲ್ಲಿ ಹಳೆಯ ಅಭಿವೃದ್ಧಿ ಇಲಾಖೆಯ ದೊಡ್ಡ ಕಟ್ಟಡದಲ್ಲಿ ಕಾಲೇಜು ಆರಂಭವಾಗಿತ್ತು. ವಿಜ್ಞಾನ ಹಾಗೂ ಕಲಾ ವಿಭಾಗಗಳೆರಡೂ ಆರಂಭದಿಂದಲೂ ಮಹಾವಿದ್ಯಾಲಯದಲ್ಲಿ ಇದ್ದ ಕಾರಣ ಹಿಂದಿನ ಖಾಲಿ ಜಾಗದಲ್ಲಿ ಭೌತ, ರಸಾಯನ, ಜೀವಶಾಸ್ತ್ರಕ್ಕೆ ಪ್ರತ್ಯೇಕವಾದ ಪ್ರಯೋಗಾಲಯ ಕಟ್ಟಡ ನಿರ್ಮಾಣಕ್ಕೆ ನಿರ್ವಾಹಕ ಮಂಡಳಿ ಮನವೊಲಿಸಿ ಕಟ್ಟಿಸಿದರು. ಆದರೂ ತರಗತಿಗಳನ್ನು ನಡೆಸಲು ಸ್ಥಳಾವಕಾಶವಿರಲಿಲ್ಲ. ಕಾರಣ ಇಂಗ್ಲಿಷ್ ಹಾಗೂ ಕನ್ನಡ ತರಗತಿ ನಡೆಸಲು ಹಾಗೂ ಗ್ರಂಥಾಲಯ ಕಚೇರಿ ಅಧ್ಯಾಪಕರ ವಿಶ್ರಾಂತಿ ಕೋಣೆ ಹಾಗೂ ಪ್ರಾಂಶುಪಾಲರ ಕೊಠಡಿಗೆ ಮಾತ್ರ ಅವಕಾಶವಿತ್ತು. ಹೀಗಾಗಿ ಹತ್ತಿರದಲ್ಲೆ ಇದ್ದ ಅರಣ್ಯ ಕಚೇರಿ ಪಕ್ಕದ ಪ್ರೈಮರಿ ಶಾಲೆಯಲ್ಲಿ ತರಗತಿಯನ್ನು ನಡೆಸಲು ಅನುವು ಮಾಡಿಕೊಟ್ಟರು.

ಅಡಿಗರದು ಶಾಂತ ಸ್ವಭಾವ, ಗಂಭೀರ ವ್ಯಕ್ತಿತ್ವ. ಅವರು ತಮ್ಮ ಕೋಣೆಯಿಂದ ಹೊರಬಂದರೆ ನಾವು ಅವರ ಎದುರಲ್ಲಿ ನಿಲ್ಲುತ್ತಿರಲಿಲ್ಲ. ತಾನೇ ತಾನಾಗಿ ಇಡಿ ವರಾಂಡ ಖಾಲಿ ಆಗಿ ಬಿಡುತ್ತಿತ್ತು. ಆದರೆ ಅವರೆಂದೂ ವಿದ್ಯಾರ್ಥಿಗಳನ್ನು ಕರೆದು ಗದರಿಸುವುದು, ಬುದ್ಧಿ ಹೇಳುವುದು ಮಾಡುತ್ತಿರಲಿಲ್ಲ. ಅವರ ಮೌನವೇ ನಮಗೆ ಎಚ್ಚರ ತರುವಂತಿರುತ್ತಿತ್ತು. ಜಿ. ಕೆ. ಗೋವಿಂದರಾವ್ ಅವರು ನಮಗೆ ರಾಜಾರಾವ್ ಅವರ ಕಾಂತಾಪುರ ಪಠ್ಯ ಕಲಿಸಿದ್ದು ನನಗೆ ಚೆನ್ನಾಗಿ ನೆನಪಿದೆ. ಈಗ ಮುಕ್ತ ಮುಕ್ತ ಧಾರಾವಾಹಿಯಲ್ಲಿ ನೋಡ್ತೀರೋ ಅದೇ ಎತ್ತರ, ಅದೇ ಕೆಂಪುವರ್ಣದ ನಗು ಗಾಂಭೀರ್ಯಗಳ ಸಂಮಿಳಿತ ವ್ಯಕ್ತಿತ್ವ. ಕಾಂತಾಪುರ ಕಾದಂಬರಿಯನ್ನು ಅವರು ಹೇಳ್ತಾ ಇದ್ರು. ನಮ್ಮ ಗ್ರಾಮೀಣ ಪರಿಸರವನ್ನು ಬಿಚ್ಚಿಡ್ತಾ ಇದ್ರು. ತರಗತೀಲಿ ಎಂದೂ ಕನ್ನಡ ಬಳಸ್ತಾ ಇರಲಿಲ್ಲ. ಗೋವಿಂದರಾವ್ ಅವರಿಗೆ ಭಿನ್ನವಾದ ಶರೀರ, ಶಾರೀರ ಗೋಪಾಲಕೃಷ್ಣ ಅಡಿಗರದು. ಅವರದು ಎತ್ತರ ದೇಹ, ತೆರೆದ ಕಣ್ಣು, ಕನ್ನಡಕ ಇಲ್ಲ, ಕೆಂಪು ಬಣ್ಣ. ಇವರದು ಸಾಧಾರಣ ಎತ್ತರ. ಚಿಕ್ಕ ಕಣ್ಣುಗಳು. ಕನ್ನಡಕ, ಎಣ್ಣೆಗೆಂಪು ಬಣ್ಣ. ಗೋವಿಂದರಾವ್ ಅವರು ತೆರೆದ ಎತ್ತರದ ಗಂಟಲಲ್ಲಿ ಪಾಠ ಬೋಧನೆ

ಮಾಡುತ್ತಿದ್ದರು. ಅಡಿಗರು ಹಾಗಲ್ಲ. ತೀರ ಎತ್ತರವಲ್ಲದ ಧ್ವನಿಯಲ್ಲಿ ತೀರ ನಿರ್ಣಾಯಕ ರೀತಿಯಲ್ಲಿ ಬೋಧನಾ ವಿಧಾನ. ಹಳ್ಳಿಯಿಂದ ಬಂದ ನಮಗೆ ಇಂಗ್ಲಿಷ್ ಭಾಷೆ ಸ್ವಲ್ಪ ಅಂತರದಲ್ಲಿತ್ತು. ಇವರಿಬ್ಬರಿಗೂ ಇಂಗ್ಲಿಷ್ ಕರತಲಾಮಲಕ. ಅವರಿಬ್ಬರಿಂದ ನಾವು ಇಂಗ್ಲಿಷ್ ಭಾಷೆಯನ್ನು, ಇಂಗ್ಲಿಷ್ ಸಾಹಿತ್ಯವನ್ನು ಅಧಿಕವಾಗಿಯೇ ಪರಿಚಯ ಮಾಡಿಕೊಂಡಿದ್ದೇವೆ. ಗೋಪಾಲಕೃಷ್ಣ ಅಡಿಗರು ಕಲಿಸಿದ ಪಾಠಗಳಲ್ಲಿ ಶೇಕ್ಸ್‌ಪಿಯರ್ 'King Lear' ನಾಟಕದ ಬೋಧನೆ ನನಗೆ ಇನ್ನೂ ನೆನಪಿದೆ. ನಾಟಕ ಬೋಧನೆಯಲ್ಲಿ ಅವರು ಹೊಂದುವ ತಾದಾತ್ಮತೆ, ಅವರೆ ಪಾತ್ರವಾಗುವ ಬಗೆ, ಪಠ್ಯವನ್ನು ಅರ್ಥೈಸಿಕೊಳ್ಳಲು ತುಂಬಾ ಅನುವಾಗುತ್ತಿತ್ತು. ಇಂಗ್ಲಿಷ್ ಬೋಧನೆ ಕೇವಲ ಪಠ್ಯದ ಸಾಹಿತ್ಯದ ಬೋಧನೆ ಆಗಿರಲಿಲ್ಲ. ಅದು ಭಾಷಾ ಬೋಧನೆಯೂ ಆಗಿರುತ್ತಿತ್ತು. ಯಾವುದೇ ಭಾಷೆ ಪದ ಪ್ರಯೋಗವಾದಾಗ ಅಥವಾ ಅವರಿಗೆ ಒಂದು ಪದದ ವಿವಿಧ ಆಯಾಮವನ್ನು ತೆರೆದಿಡಬೇಕು ಎಂದೆನ್ನಿಸಿದಾಗ ಸರಾಗವಾಗಿ ಅದರ ಸಮಾನಾರ್ಥ ರೂಪಗಳನ್ನು ಅದರ ವಿರೋಧಾರ್ಥಕ ರೂಪಗಳನ್ನು ನೀಡುತ್ತಿದ್ದರು. ಹೀಗಾಗಿ ಅದೇ ಸಮಯ ಹಲವಾರು ಇಂಗ್ಲಿಷ್ ಪದಗಳನ್ನು, ಪದಪ್ರಯೋಗವನ್ನು ಕಲಿಸುವ ಮಾನವ ಕೇಂದ್ರಿತ ಭಾಷಾ ಪ್ರಯೋಗಾಲಯವಾಗಿ ಪರಿಣಮಿಸುತ್ತಿತ್ತು. ನನಗೆ ಸರಿಯಾಗಿ ನೆನಪಿಲ್ಲ ಅರ್ನಾಲ್ಡ್ ಅವರದು ಅಂತ ಕಾಣಿಸುತ್ತೆ. Public Opinion ಎಂಬ ಒಂದು ಪ್ರಬಂಧವನ್ನು ಅವರು ಕಲಿಸಿದ್ದರು. ಅದರಲ್ಲಿ ಜನಾಭಿಪ್ರಾಯ ರೂಪುಗೊಳ್ಳುವ ಕ್ರಿಯೆಯ ವಿವರಣೆ ಇದೆ. ಅದನ್ನು ಸಹ ಅತ್ಯಂತ ಸರಳವಾಗಿ ಅಷ್ಟೇ ಪರಿಣಾಮಕಾರಿಯಾಗಿ ಕಲಿಸಿದರು. ಯಾವುದೇ ಒಂದು ವಿಷಯದ ಬಗ್ಗೆ, ವಸ್ತುವಿನ ಬಗ್ಗೆ ಜನರಲ್ಲಿ ಅಭಿಪ್ರಾಯವನ್ನು ರೂಪಿಸುವಲ್ಲಿ ಮೇಲಿಂದ ಮೇಲೆ ಹಲವಾರು ಜನ ಅದೇ ಅಭಿಪ್ರಾಯವನ್ನು ಅಭಿವ್ಯಕ್ತಿಸಿದಾಗ ನಮಗೆ ನಾವೇ ಅರಿಯದಂತೆ ಆ ಅಭಿಪ್ರಾಯಕ್ಕೆ ಒಳಗಾಗುವ ಸಾಧ್ಯತೆ ಇದೆ. ಈ ವಿಷಯವನ್ನು ಅಡಿಗರು ಅಂದು ಮನನ ಮಾಡಿರುವುದು ನಮಗೆ ಇಂದಿಗೂ ನೆನಪಿದೆ.

ಅಡಿಗರು ಮೈಸೂರಿನ ಸೈಂಟ್ ಫಿಲೋಮಿನಾ ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭವನ್ನು ಪ್ರೊ. ಜಿ. ಎಚ್. ನಾಯಕ ಅವರು ಮೊನ್ನೆ ನೆನಪು ಮಾಡಿಕೊಳ್ಳುತ್ತಿದ್ದರು. ಉತ್ತರ ಕನ್ನಡದ ಕೆನರಾ ಕಾಲೇಜಿನಿಂದ ಮೈಸೂರಿಗೆ ತೆರಳಿದ ನಂತರ ಅಲ್ಲಿ ತಮ್ಮ ಹವ್ಯಾಸದಿಂದಾಗಿ ಸ್ನೇಹ ಬಳಗವನ್ನು ಕಟ್ಟಿದ್ದು. ಮೈಸೂರಿನ ಕಾಫಿ ಹೌಸ್‌ನಲ್ಲಿ ಬೇರೆ ಬೇರೆ ಕಾಲೇಜುಗಳ ಅಧ್ಯಾಪಕರು ಸೇರಿ ಸಾಹಿತ್ಯ ಚಿಂತನ ನಡೆಸಿದ್ದು, ಇತರರಿಗೆ ಪ್ರೇರೇಪಣೆ ನೀಡಿದ್ದು ಇತ್ಯಾದಿ. ಅದರ ನಂತರವೇ ಅವರು ಸಾಗರಕ್ಕೆ ಬಂದದ್ದು. ನಾನು ಅವರಲ್ಲಿ ಕಂಡ ಗುಣ ಅಂದ್ರೆ ನ್ಯಾಯ, ನೇರ ಹಾಗೂ ನಿಷ್ಠೂರತನ. ಹೀಗಾಗಿಯೇ ಅವರು ಮುಂದೆ ಸಾಗರ ಕಾಲೇಜನ್ನು ಬಿಡಬೇಕಾಯ್ತು. ಅಲ್ಲಿಂದ ಮುಂದೆ ಅವರು ಉಡುಪಿಯ ಪೂರ್ಣಪ್ರಜ್ಞ ಕಾಲೇಜಿಗೆ ಹೋದರು. ಅವರು ಆ ಕಡೆ ಹೋಗುತ್ತಿದ್ದಂತೆ, ಜಿ.ಕೆ. ಗೋವಿಂದರಾವ್ ಹಾಗೂ ಇನ್ನಿತರ ಹಿರಿಯ ಅಧ್ಯಾಪಕರು ಅಲ್ಲಿಂದ ಬೇರೆ ಕಡೆ ಹೋದರು. ಡಾ. ಚಂದ್ರಶೇಖರ ಕಂಬಾರರು ಅಡಿಗರ ಜೊತೆ ಪೂರ್ಣಪ್ರಜ್ಞಾ ಕಾಲೇಜು ಸೇರಿದರು. ಅಡಿಗರದು ಸಮಾಜವಾದಿ ಆಲೋಚನೆಗಳ ವ್ಯಕ್ತಿತ್ವ, ಶಾಂತವೇರಿ, ಕೋಣಂದೂರ ಹಾಗೂ ಇನ್ನಿತರ ಸಮಾಜವಾದಿ ಚಿಂತಕರ ಬಳಗ ಅವರೊಂದಿಗಿತ್ತು. ಕೆ.ವಿ. ಸುಬ್ಬಣ್ಣ ಅವರ ಜೊತೆಗಿದ್ದರು.

ಅಡಿಗರು ಸಾಗರದಲ್ಲಿ ಇದ್ದ ಸಂದರ್ಭದಲ್ಲಿ ಹಿರಿಯ ಹಾಗೂ ಕಿರಿಯ ನವ್ಯ ಕವಿಗಳನ್ನು ಕರೆಸಿ ಕಾವ್ಯಗೋಷ್ಠಿ ಮಾಡಿಸಿದರು. ಲಂಕೇಶ, ತೇಜಸ್ವಿ, ರಾಮಚಂದ್ರಶರ್ಮ, ಚಂಪಾ, ಪಟ್ಟಣಶೆಟ್ಟಿ ಮುಂತಾದವರನ್ನು ನೋಡುವ, ಕೇಳುವ ಮೊದಲ ಸಂದರ್ಭವನ್ನು ಮಾಡಿಕೊಟ್ಟಿದ್ದರು. ನಂತರದಲ್ಲಿ ಹೆಗ್ಗೋಡು ಹಾಗೂ ಅಡಿಗ ಬಳಗಕ್ಕೂ ಹೆಚ್ಚಿನ ಸಂಪರ್ಕ ಬಂತು. ಅಡಿಗರು ಸಾಕ್ಷಿ ಪತ್ರಿಕೆಯ ಸಂಪಾದಕರಾದರು. ಬರವಣಿಗೆಗೆ ಚಾಲನೆ ಸಿಕ್ಕಿತು. ಅಕ್ಷರ ಹೊಸ ಕಾವ್ಯ ಪ್ರಕಟವಾದದ್ದು ಅದೇ ಸಂದರ್ಭದಲ್ಲಿ. ಆದರೂ ಕೊನೆಗೆ ನಿವೃತ್ತಿಯ ನಂತರ ಅವರೇಕೆ ಜನಸಂಘದ ಅಭ್ಯರ್ಥಿಯಾಗಿ ಚುನಾವಣೆಗೆ ನಿಂತರೋ? ತಿಳಿಯದು.

ಅಡಿಗರನ್ನು ನಾವು ಪ್ರೀತಿಸಿದ್ದೇವೆ, ದ್ವೇಷಿಸಿದ್ದೇವೆ, ಸಹಾಯಕ್ಕೂ ನಿಂತಿದ್ದೇವೆ. ಅಸಹಕಾರಕ್ಕೂ ಒಳಗು ಮಾಡಿಕೊಂಡಿದ್ದೇವೆ. ನಾನು ಬಿ.ಎಸ್‌ಸಿ ಎರಡನೆ ವರ್ಷದ ಅಂತ್ಯದಲ್ಲಿ ಇದ್ದಾಗ ಅಂತ ಕಾಣುತ್ತೆ. ನಮ್ಮ ಸ್ನೇಹಿತ, ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಸುರೇಂದ್ರನಾಥ, ನಮ್ಮ ವರ್ಗದ ಪ್ರತಿನಿಧಿ ಬಸವರಾಜ ಅವರೊಡನೆ ಸಂಘದ ವಾರ್ಷಿಕೋತ್ಸವಕ್ಕೆ ವರಕವಿ ದ.ರಾ. ಬೇಂದ್ರೆಯವರನ್ನು ಕರೆಸಬೇಕೆಂದು ಕೇಳಿಕೊಂಡೆವು. ಆದರೆ ಅಡಿಗರು ಏಕೋ ಮನಸ್ಸು ಮಾಡಲಿಲ್ಲ. ನಾವು ವಿದ್ಯಾರ್ಥಿಗಳು ಬೇಂದ್ರೆಯವರು ಬರಲೇಬೇಕು ಅಂತ ಹಠ ಹಿಡಿದೆವು. ಕಾಲೇಜಿನ ಹೊರಗೆ ಸಭೆ, ಚರ್ಚೆ ನಡೆದವು. ಸುರೇಂದ್ರನಾಥನ ಮುಖಾಂತರ ನಮ್ಮ ಭಾವನೆ ರವಾನೆ ಆಯಿತು. ಕೆಲವು ಅಧ್ಯಾಪಕರು ನಮ್ಮ ಬೆನ್ನು ತಟ್ಟಿದ್ದರು. ಆದರೆ ಅಡಿಗರು ಜಗ್ಗಲಿಲ್ಲ. ಸಮಾರಂಭಕ್ಕೆ ಮೈಸೂರಿನಿಂದ ಜಿ.ಎಚ್. ನಾಯಕ್ ಅವರನ್ನು ಕರೆಸುವ ನಿರ್ಧಾರಕ್ಕೆ ಬಂದರು. ನಾವು ಅಸಹಕಾರ ತೋರಿಸಿದೆವು. ನನಗೆ ಇವತ್ತಿಗೂ ನೆನಪಿದೆ. ನಮ್ಮ ಕಾಲೇಜಿನ ಮುಖ್ಯ ಕಟ್ಟಡದಿಂದ, ಸಮಾರಂಭ ಏರ್ಪಡಿಸಿದ ಪ್ರಾಥಮಿಕ ಶಾಲೆ ಮಧ್ಯೆ ಬಸ್‌ನಿಲ್ದಾಣ ಇದೆ. ಅಡಿಗರು, ಅತಿಥಿಗಳು, ಅಧ್ಯಾಪಕರು ಅವತ್ತು ಬಸ್‌ನಿಲ್ದಾಣದ ಮುಖಾಂತರ ಸಮಾರಂಭ ನಡೆಯುವ ಸ್ಥಳಕ್ಕೆ ನಡೆದು ಹೋಗುತ್ತಾ ಇದ್ದರೆ ನಾವೆಲ್ಲ ಕಾಂಪೌಂಡಿನ ಆ ಕಡೆ ನಿಂತು ನೋಡ್ತಾ ಇದ್ವಿ. ಮೊನ್ನೆ ಜಿ. ಎಚ್. ನಾಯಕರ ಹತ್ತಿರ ಈ ವಿಷಯ ತಿಳಿಸಿದೆ. ನಕ್ಕರು.

ಆದರೆ ಅದರ ಮುಂದಿನ ವರ್ಷ ನಾವು ಪುನಃ ಕಾಲೇಜಿನ ಆಡಳಿತದ ಸಮೀಪಕ್ಕೆ ಬಂದೆವು. ಅದಕ್ಕೆ ಕಾರಣ ಜೀವಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ. ಕೆ.ಎಸ್.ಎಂ. ರಾವ್ ಅವರು. ರಾವ್ ಆ ವರ್ಷ ವಿದ್ಯಾರ್ಥಿ ಸಂಘದ ಅಧ್ಯಕ್ಷರು. ನಾವೆಲ್ಲ ಅವರ ಪ್ರೀತಿಯ ಶಿಷ್ಯರು. ನಮ್ಮನ್ನು ಕರೆದು ಚರ್ಚಿಸಿದರು. ನಮ್ಮ ಅಸಮಾಧಾನವನ್ನು ತಣಿಸಿದರು. ನಾವೆಲ್ಲ ಅವರೊಂದಿಗೆ ಇರುವ ಹಾಗೆ ನೋಡಿಕೊಂಡರು. ಅಂದು ನಮ್ಮ ಬೆನ್ನು ತಟ್ಟಿದವರು ಇಂದು ನಮ್ಮನ್ನು ಬೈಯ್ದರು. ಅಡಿಗರ ಆಡಳಿತದ ಜೊತೆ ಕಾರ್ಯನಿರ್ವಹಿಸಲು ಒಪ್ಪಿಕೊಂಡೆವು. ಕಾಲೇಜಿನಲ್ಲಿ ಒಂದು ತೆರೆದ ರಂಗವನ್ನು ನಿರ್ಮಿಸಲು ಹವಣಿಸಿದೆವು. ಇದಕ್ಕಾಗಿ ಅಡಿಗರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಒಂದು ನಾಟಕ ಪ್ರದರ್ಶನಕ್ಕೆ ತರುವುದು. ಅದಕ್ಕಾಗಿ ಸುತ್ತಲ ಎಲ್ಲ ಆಸಕ್ತರು ಹಿರಿಯರಿಂದ ಹಣ ಸಂಗ್ರಹಿಸುವ ಯೋಜನೆ ತಯಾರಿಸಿದೆವು. ಅಡಿಗರು ಎಲ್ಲದಕ್ಕೂ ಹಿಂದೆ ನಿಂತು ಪ್ರೋತ್ಸಾಹಿಸಿದರು. ಶ್ರೀರಂಗರ ಪ್ರಪಂಚ ಪಾಣಿಪತ್ತು ನಾಟಕ ಆರಿಸಿದೆವು.

ಪ್ರೊ. ಜಿ.ಕೆ. ಗೋವಿಂದರಾವ್, ನಾನು. ನನ್ನ ಗೆಳೆಯರು ಪಾತ್ರ ವಹಿಸಿದೆವು. ಹಗಲು ಹಣ ಸಂಗ್ರಹಣೆ, ಸಂಜೆ ರಂಗ ತಾಲೀಮು, ನಾಟಕ ಚೆನ್ನಾಗಿ ಆಯ್ತು. ಅಷ್ಟರಲ್ಲೆ ರಂಗವೂ ತಯಾರಾಯ್ತು. ಅಡಿಗರು ಪ್ರೀತಿಯಿಂದ ಹರ್ಷ ವ್ಯಕ್ತಪಡಿಸಿದರು.

ನಂತರ ವಾರ್ಷಿಕ ಚಟುವಟಿಕೆ ಆರಂಭವಾಗುತ್ತಿದ್ದಂತೆ ಸಾಂಸ್ಕೃತಿಕ, ಕ್ರೀಡಾಸ್ಪರ್ಧೆಗಳಲ್ಲಿ ಭಾಗವಹಿಸಿದೆವು. ಎತ್ತರ ಜಿಗಿತದಲ್ಲಿ ನಾನು ಪಾಲ್ಗೊಂಡೆ. ಆಗ ಹೊಟ್ಟೆ ಪಕ್ಕ ನೋವು ಕಾಣಿಸಿಕೊಂಡಿತು. ಪರೀಕ್ಷಿಸಿದಾಗ ಕಿಡ್ನಿಸ್ಟೋನ್ ಎಂಬುದು ತಿಳಿಯಿತು. ಅದೆ ಸಂದರ್ಭದಲ್ಲಿ ಅಡಿಗರನ್ನು ಭೇಟಿ ಮಾಡಿದೆ. ಮುಗ್ಧತೆಯಿಂದ ಅವರು ಅವತ್ತು ಹೇಳಿದ್ದು ಇನ್ನೂ ನೆನಪಿದೆ. ನೋಡಿ ನಮ್ಮ ಹಿರಿಯರು ಕಲ್ಲು ತಿಂದು ಅರಗಿಸಿಕೊಳ್ತಾ ಇದ್ರಂತೆ. ಇವತ್ತು ನಾನು ಕಲ್ಲಿನಿಂದ ಬಳಲ್ತೇವೆ ಅಂದರು. ಸಾಂತ್ವನ ನುಡಿದರು. ಒಂದು ವರ್ಷದ ಹಿಂದೆ ನಾವು ತೋರಿಸಿದ ಅಸಹಕಾರ, ಬಹಿಷ್ಕಾರ ಕುರಿತಂತೆ ಲವಲೇಷವೂ ಅವರಲ್ಲಿ ಕಂಡುಬರಲಿಲ್ಲ.

ನನ್ನ ಆ ಐದು ವರ್ಷಗಳ ಕಾಲೇಜು ದಿನಗಳಲ್ಲಿ ಅಡಿಗರ ಯಜಮಾನಿಕೆ, ಕಟ್ಟುವ ಉತ್ಸಾಹ, ಶಿಕ್ಷಕನ ಜವಾಬ್ದಾರಿ, ಮಾನವೀಯತೆ, ವೈಚಾರಿಕತೆಯನ್ನು ಕಂಡುಂಡಿದ್ದೇನೆ. ಮಾತಿಗಿಂತ ಮೌನ ಹೆಚ್ಚು ಕ್ರಿಯಾಶೀಲವಾಗಿರುತ್ತದೆ ಎಂಬುದನ್ನು ಅಡಿಗರು ಮಾಡಿ ತೋರಿಸಿದ್ದಾರೆ. ಅಡಿಗರಂತವರು ನಮ್ಮಂಥವರಿಗೆ ಮಾದರಿ ಆಗ್ತಾರೆ.

❖

# ತಮಿಳು ರಾಜ್ಯದಲ್ಲಿ ಕನ್ನಡದ ಗುರು

## (ಪ್ರೊ॥ ಶ್ರೀಕೃಷ್ಣಭಟ್ ಅರ್ತಿಕಜೆ)

● ಎಂ. ಮಹ್ಮದ್ ಭಾಷಾಗೂಳ್ಯಂ

ಕತ್ತಲ ಬುದಕಿಗೆ ಬೆಳಕಿಟ್ಟ ಹಾಗೆ, ದಿಟ್ಟ ನಗೆ, ಮಾತು ಮಧುರ, ಲವಲವಿಕೆಯೇ ಮೂರ್ತೀಭವಿಸಿದ ವ್ಯಕ್ತಿತ್ವ, ಅವರ ಸ್ನೇಹ, ಸಾಮೀಪ್ಯವೇ ಸಾಗರ. ವಿದ್ಯಾರ್ಥಿಗಳೆಂದರೆ ಸ್ವಂತ ಮಕ್ಕಳ ಹಾಗೆ ಆತ್ಮೀಯ ಆರೈಕೆ, ವಾತ್ಸಲ್ಯ ಧಾರೆ ಧಾರೆ....! ಇವೆಲ್ಲವುಗಳ ಸಂಗಮ ನನ್ನ ಗುರುಗಳಾದ ಶ್ರೀಕೃಷ್ಣ ಭಟ್ ಅರ್ತಿಕಜೆ. ಮದರಾಸಿನಲ್ಲಿ ನಾನಿದ್ದುದು ಐದು ವರ್ಷ, ಆದರೆ ಅವರ ಅಪ್ಯಾಯಮಾನದ ಅಕ್ಕರೆ ಸವೆದದ್ದು ನೂರು ವರ್ಷ ಎಂಬಂತೆ ಭಾಸವಾಗುತ್ತದೆ.

ಥೇಟು ನಕ್ಸಲ್ ಪ್ರದೇಶದ 'ಗೂಳ್ಯಂ' ಎಂಬ ಆಂಧ್ರದ ಊರಲ್ಲಿದ್ದ ನನಗೆ ಕನ್ನಡ ಹುಚ್ಚು ಹತ್ತಿದ್ದು ಪಂಪ ಕವಿಯ 'ಆರಂಕುಶವಿಟ್ಟೊಡಂ' ಪದ್ಯದಿಂದ. ಬಳ್ಳಾರಿಯಲ್ಲೇ ಬಿ.ಎ. ಓದಿದ ಬಳಿಕ ಎಂ.ಎ. ಕನ್ನಡಕ್ಕೆ ಎಲ್ಲಿಗೆ ಹೋಗ್ಬೇಕು ಎಂಬ ಪ್ರಶ್ನೆಗೆ ಹತ್ತಾರು ಉತ್ತರಗಳು. ಬೆಂಗಳೂರು...? ಮೈಸೂರು...? ಗುಲ್ಬರ್ಗ...? ಯಾಕೋ ಅಷ್ಟಾಗಿ ಇಷ್ಟವಾಗಲೇ ಇಲ್ಲ. ಚಿಂತಾಕ್ರಾಂತನಾಗಿ ಲೈಬ್ರರಿಯಲ್ಲಿ ಕುಳಿತಿದ್ದಾಗ ಮದ್ರಾಸ್‌ನಲ್ಲಿ ಎಂ.ಎ.ಗೆ ಸೇರಬಹುದು ಎಂಬ ಜಾಹೀರಾತು ಕಣ್ಣಿಗೆ ಬಿತ್ತು. ಕುತೂಹಲದಿಂದ ವಿವರವಾಗಿ ಓದಿದೆ. ಮದ್ರಾಸು ವಿ.ವಿ. ವಿಳಾಸದ ಜತೆಗೆ ಗುರುಗಳ ದೂರವಾಣಿ (ಆಗ ಮೊಬೈಲ್ ಇರಲಿಲ್ಲ) ಸಂಖ್ಯೆಯೂ ಇತ್ತು. ಕೂಡಲೇ ಕರೆ ಮಾಡಿದೆ. ಗೊಂದಲದ ಗೂಡಾದ ಸ್ಥಿತಿಯನ್ನೂ ವಿವರಿಸಿದೆ. ಗುರುಗಳು ಎಲ್ಲವನ್ನೂ ಆಲಿಸಿದರು.

'ಯಾವುದಕ್ಕೂ ಮದ್ರಾಸ್‌ಗೆ ಬನ್ನಿ. ಎಲ್ಲ ಸರಿಮಾಡುವ' ಎಂದರು. ನನಗಾದ ಆನಂದವನ್ನು ಬಣ್ಣಿಸಲು ಪದಗಳಿಲ್ಲ ಬಿಡಿ. ಅವರು ಹೇಳಿದ ದಿನಾಂಕಕ್ಕೆ ಸರಿಯಾಗಿ ಮದ್ರಾಸ್‌ಗೆ ಹೋದೆ. ಅಲ್ಲಿನ ಭಾಷೆಯೋ ಕಬ್ಬಿಣದ ಕಡಲೆ. ಎಲ್ಲವೂ ತಮಿಳುಮಯ. ಇಂಥ ಕಡೆ ಕನ್ನಡ ಕಲಿಯಲು ಹೇಗೆ ಸಾಧ್ಯ....? ಮತ್ತೆ ಮನದಲ್ಲಿ ಸಂದೇಹಗಳ ಸರಮಾಲೆ. ಮೆರೀನಾ ಬೀಚ್‌ಗೆ ಹೋಗುವ ಬಸ್ ಹತ್ತಿ ಕನ್ನಡ ವಿಭಾಗಕ್ಕೆ ಬಂದು ಗುರುಗಳನ್ನು ಕಂಡ ಕೂಡಲೇ ಸಂದೇಹಗಳೆಲ್ಲವೂ ಮಾಯ. ಕನ್ನಡ ವಿಭಾಗ ಕಣ್ಣಿಗೆ ಬಿತ್ತು. ಮನದ ತುಂಬ ಅರಬ್ಬೀ ಕಡಲಿನಂತೆ ಆನಂದದ ಅಲೆಅಲೆ.

Admission ಆದ ಮೇಲೆ ಮತ್ತೊಂದು ಸಮಸ್ಯೆ ಎದುರಾಗಿತ್ತು. ಎಲ್ಲರಿಗೂ ಅಲ್ಲಿನ ಟ್ರಿಪ್ಲಿಕೇನ್ ಪ್ರದೇಶದ ಹಾಸ್ಟೆಲ್‌ನಲ್ಲಿ ರೂಮ್ ಸಿಕ್ಕಿತು. ಆದರೆ ನನಗೆ ಮಾತ್ರ No Admission ಎಂದರು ಅಲ್ಲಿನ ವಾರ್ಡನ್. ಸಿಕ್ಕ ಸಂತೋಷ ಕಣ್ಣೆದುರೇ ಕರಗತೊಡಗಿದ ಭಯಾನಕ ಅನುಭವ.

ಪುನಃ ಗುರುಗಳ ಬಳಿಗೆ ಓಡಿದೆ. ಹಾಗೋ ವಿಷಯ, ಭಯಪಡಬೇಡಿ. ನಾನಿದ್ದೇನೆ. ಎಲ್ಲ ಸರಿಪಡಿಸುವೆ ಎಂದು ಅಭಯ ನೀಡಿದರು. ನುಡಿದಂತೆ ನಡೆದು ತೋರಿಸಿದರು. ನನ್ನ ರೂಂ ಸಮಸ್ಯೆಯನ್ನೂ ಕ್ಷಣಾರ್ಧದಲ್ಲಿ ಪರಿಹರಿಸಿದರು. 'ನೋಡ್ರಿ ದೂರದಿಂದ ಬಂದಿದ್ದೀರಿ. ಇಂತಹ ಸಣ್ಣಪುಟ್ಟ ಗೊಂದ್ಲಕ್ಕೆ ಕಂಗಾಲಾಗ್ಬೇಡಿ. ಹುಷಾರಾಗಿರಿ. ಚೆನ್ನಾಗಿ ಓದಿ ಉತ್ತಮ ಭವಿಷ್ಯವಿದೆ' ಎಂದೂ ಧೈರ್ಯ ತುಂಬಿದರು. ಅವರಾಗ ಮಾಡಿದ ಹಿತೋಪದೇಶ ನನ್ನಂತರಂಗದಲ್ಲಿ ಇಂದಿಗೂ ಸಚೇತನವಾಗಿದೆ. ಕಷ್ಟದಲ್ಲಿ ಹೆಗಲಿಗೆ ಹೆಗಲು ಕೊಟ್ಟು ಬದುಕಲು ಹಾದಿ ತೋರಿದ ಅಂತಹ ಗುರುಗಳನ್ನು ಪಡೆದ ನಾನು ನಿಜಕ್ಕೂ ಧನ್ಯ. ಇದು ವಾಚ್ಯವಲ್ಲ. ನನ್ನಾತ್ಮಸಾಕ್ಷಿಯ ಮಾತು. ಸದಾ ಪುಸ್ತಕದಲ್ಲೇ ಮುಳುಗುತ್ತಿರುವುದು ನನಗೊಂದು ಕೆಟ್ಟ ಚಟ. ಪ್ರತಿದಿನ, ಪ್ರತಿ ಕ್ಷಣ ಓದಲು ಹೊಸ ಹೊಸ ಪುಸ್ತಕ ಎಲ್ಲಿಂದ ತರುವುದು? 'ಸಾರ್ ಬುಕ್ ಬೇಕು' ಎಂದರಷ್ಟೇ ಸಾಕು, 'ಊಂ... ತಗೋಪ್ಪಾ ಇಷ್ಟೂ ಪುಸ್ತಕ ಓದು. ಅಂದಹಾಗೆ ನಿನ್ನೆ ಕ್ಲಾಸಲ್ಲಿ ಯಾಕೆ ಡಲ್ ಆಗಿದ್ರಿ? ಏನಾದ್ರೂ ಪ್ರಾಬ್ಲಂ? ಇಕೋ ನಾನೇ ಪಾಠ ಮಾಡಿದ ಟಿಪ್ಪಣಿ ಇದೆ. ಇದನ್ನು ಓದು' ಎನ್ನುತ್ತ ನೋಟ್ಸ್ ಕೊಡುತ್ತಿದ್ದರು. ನನ್ನ ಜ್ಞಾನಾಭಿವೃದ್ಧಿಗೆ ಹಾಗೂ ಹೆಚ್ಚಿನ ಮಾರ್ಕ್ಸ್ ಬರಲೂ ಕಾರಣರಾಗುತ್ತಿದ್ದರು.

ಒಮ್ಮೆ ನನಗೆ ವಿಪರೀತ ಕೆಮ್ಮು, ಚಳಿಜ್ವರ. ಸಹಪಾಠಿ ಬಳಿ 'ಕ್ಲಾಸ್‌ಗೆ ಬರಲ್ಲ ಕಣೋ... ಗುರುಗಳಿಗೆ ದಯವಿಟ್ಟು ಹೇಳು' ಎಂದಿದ್ದೆ. ವಿಶೇಷವೆಂದರೆ ಅವನು ಗುರುಗಳಿಗೆ ಅಸಲು ವಿಷಯ ತಿಳಿಸಿರಲೇ ಇಲ್ಲ. ಎರಡನೇ ದಿನವೂ ಕ್ಲಾಸ್‌ಗೆ ಹೋಗಲಿಲ್ಲ. ಸಂಜೆ ಅವರೇ ರೂಂ ಬಳಿ ಬಂದ್ರು ! 'ಯಾಕೆ ಭಾಷ, ಕ್ಲಾಸಲ್ಲಿ ಕಾಣ್ಲೇ ಇಲ್ಲ. ಮೈ ಹುಷರಿಲ್ವಾ?' ಎಂದು ಹಣೆ ಮುಟ್ಟಿ ನೋಡಿದರು. ಆಗಲೇ ನನಗೆ ಕಾಯಿಲೆ ವಾಸಿಯಾದ ಅನುಭವ. ಮಾತ್ರವಲ್ಲ ಅವರ ಚೇತಕ್ ಗಾಡಿಯಲ್ಲಿ ಹತ್ತಿಸಿಕೊಂಡು ಮೈಲಾಪುರದ ಡಾಕ್ಟರ್ ಬಳಿ ಕರೆದೊಯ್ದರು. ಎಲ್ಲ ಚೆಕಪ್ ಆದ ಮೇಲೆ ನಾನು ಹೊರಗೆ ಬಂದೆ. 'ನಮ್ ಹುಡಗ ಸಾರ್... ಮತ್ತೆ ನಾನ್ ಬರೋಕ್ಕಾಗುತ್ತೋ ಇಲ್ವೋ... ಪುನಃ ಈತನೇ ಬಂದ್ರೆ ಚೆನ್ನಾಗಿ ನೋಡಿ' ಎಂದು ವೈದ್ಯರಿಗೆ ತಾಕೀತು ಮಾಡಿದ್ದು, ನನ್ನ ಜೀವಮಾನದಲ್ಲಿ ಮರೆಯಲಾಗದ ಅಪರೂಪದ ಘಟನೆ ನಿಜ. ಈ ತರಹದ ಅದೆಷ್ಟೋ ಪ್ರಸಂಗಗಳಿಗೆ ನನ್ನ ಗುರುಗಳು ಸಾಕ್ಷಿಯಾಗಿದ್ದಾರೆ. ಎಲ್ಲವನ್ನೂ ದಾಖಲಿಸುವ ಹಂಬಲ ನನಗೆ. ಆದರೆ ಸ್ಥಳಾವಕಾಶದ ಕೊರತೆಯಿಂದ ಒಂದರಡನ್ನು ಮಾತ್ರ ಇಲ್ಲಿ ಹೇಳಬೇಕಾಯಿತು ಅಷ್ಟೇ...!

ನನಗೆ ಗೊತ್ತಿರೋ ಹಾಗೆ ತಮಿಳುಮಯವಾಗಿದ್ದ ಮದ್ರಾಸ್‌ನಲ್ಲೂ ಅತಿ ಹೆಚ್ಚು ಕನ್ನಡದ ಕಾರ್ಯಕ್ರಮಗಳಾಗುತ್ತವೆ. ವೈಭವಯುತವಾಗಿ, ವ್ಯವಸ್ಥಿತವಾಗಿ, ಅಚ್ಚುಕಟ್ಟಾಗಿ ನಡೆಯುವ ಕನ್ನಡ ರಾಜ್ಯೋತ್ಸವ ಸಮಾರಂಭದ ಹಿಂದೆ ಗುರುಗಳ ಶ್ರಮವೇ ಸಿಂಹಪಾಲು. 'ಎಲ್ಲೇ ಇರು ಹೇಗೇ ಇರು, ಎಂದೆಂದಿಗು ನೀ ಕನ್ನಡವಾಗಿರು' ಎಂಬ ಕವಿವಾಣಿ ನನ್ನ ಗುರುಗಳ ವಿಷಯದಲ್ಲಿ ಅಕ್ಷರಶಃ ಸತ್ಯವಾಗಿದೆ. ಅವರು ದೂರದ ಮದ್ರಾಸಿನಲ್ಲಿ, ತಮಿಳರ ಸಾಮ್ರಾಜ್ಯದಲ್ಲಿ ಕನ್ನಡದ ದೀಪ ಹಚ್ಚಿದ್ದರು. ಅದರ ಬೆಳಕಲ್ಲಿ ನಮ್ಮಂತಹ ಅಸಂಖ್ಯ ಶಿಷ್ಯ ಕೋಟಿ ಬೆಳೆಯುತ್ತಿತ್ತು.

ಬೆಳವಣಿಗೆಗೆ ಬೇಕಾದ ಪೂರಕ ಮಾಹಿತಿ, ಅಧ್ಯಯನಕ್ಕೆ ಅಗತ್ಯವಾದ ಆಕಾರ ಹಾಗೂ ಅದೆಷ್ಟೋ ಸಂಶೋಧಕರ ಮಹಾಪ್ರಬಂಧಕ್ಕೆ ಅವರ ಮಾರ್ಗದರ್ಶನ ಅಪೂರ್ವ, ಅನನ್ಯ, ಅವರ್ಣನೀಯವೆಂದರೆ ಹೊಗಳಿದಂತಾಗದು. ನನ್ನಂತಹ ನೂರಾರು ಬಡ ವಿದ್ಯಾರ್ಥಿಗಳ ಬಾಳು ಬೆಳಗಿದ ಹೆಗ್ಗಳಿಕೆ ನನ್ನ ಗುರುಗಳದ್ದು. ಬಲಗೈಯಿಂದ ಮಾಡಿದ ಸಹಾಯ ಎಡಗೈಗೂ ಗೊತ್ತಾಗಬಾರದು ಎಂಬ ತತ್ತ್ವ ಅವರದು. ಅವರು ದುಡಿದು ಸಂಪಾದಿಸಿದ ಹಣದಲ್ಲೇ ಎಷ್ಟೋ ವಿದ್ಯಾರ್ಥಿಗಳ ಫೀಜು ಕಟ್ಟಿದ್ದು ಕಣ್ಣಾರೆ ಕಂಡಿದ್ದೇನೆ. ಆಶ್ರಯ ಕೋರಿ ಪತ್ರ ಬರೆದ ವಿದ್ಯಾರ್ಥಿಗಳಿಗೆ ಊಟ, ತಿಂಡಿ, ವಸತಿ ವ್ಯವಸ್ಥೆಯನ್ನು ಮಾಡಿದ್ದು, ಹೇಗೆ ಮರೆಯಲು ಸಾಧ್ಯ? ಹೀಗೆ ಅವರ ಪರೋಪಕಾರ ಗುಣ ದಾಖಲಿಸುತ್ತಾ ಹೋದಷ್ಟೂ ಖುಷಿ ಅದಕ್ಕೆ ಅಂತ್ಯವೆಂಬುದಿಲ್ಲ. ಅವರು ಹಳಗನ್ನಡದ ಪಾಠ ಮಾಡುವ ವಿಧಾನಕ್ಕೆ ಮಾರುಹೋಗದ ವಿದ್ಯಾರ್ಥಿಗಳ ನಾ ಕಾಣೆ. ಮಧ್ಯೆ, ಮಧ್ಯೆ ಸ್ವಾರಸ್ಯ ಪ್ರಸಂಗಗಳ ನಿರೂಪಣೆ, ಅಮೋಘ ವಿಷಯಾಭಿವ್ಯಕ್ತಿ ಇದುವರೆಗೆ ನಾನು ಎಲ್ಲೂ ಕಾಣಲು ಸಾಧ್ಯವಾಗಿಲ್ಲ. ಮತ್ತೊಮ್ಮೆ ಹೋಗಿ ಅವರ ಬಳಿ ಪಾಠ ಕೇಳಲೆ ಎನ್ನಿಸುತ್ತದೆ. ಜರ್ನಲಿಜಂ ಕಲಿತದ್ದೂ ಅವರ ಗರಡಿಯಲ್ಲೇ ಎಂಬುದು ನನಗೆ ಹೆಮ್ಮೆ. ಅವರ ಸಹಕಾರ ಇರದಿದ್ದರೆ 'ಚಂದಮಾಮ' ಪತ್ರಿಕೆಯಲ್ಲಿ ಕೆಲಸ ಮಾಡುವ ಭಾಗ್ಯ ನನಗೆ ಸಿಗುತ್ತಲೇ ಇರಲಿಲ್ಲ.

ನಾಗಚಂದ್ರನ 'ಪಂಪರಾಮಾಯಣ' ರನ್ನಕವಿಯ 'ಗದಾಯುದ್ಧ'ದ ವಿಷಯ ಅವರ ಬಾಯಿಯಿಂದಲೇ ಕೇಳಬೇಕು. ಆಧುನಿಕತೆಯ ಭರಾಟೆಯಲ್ಲಿ ಕಳೆದು ಹೋಗುತ್ತಿರುವ ಕನ್ನಡ ಹಾಗೂ ಕಣ್ಮರೆಯಾಗುತ್ತಿರುವ ವ್ಯಾಕರಣ ಪರಂಪರೆ ಗುರುಗಳ ಸಾಮೀಪ್ಯದಲ್ಲಿ ಅದು ಜೀವಂತವಾಗಿದೆ ಎಂಬುದು ನನ್ನ ವೈಯಕ್ತಿಕ ಅನುಭವ. ಅಲಂಕಾರ, ಛಂದಸ್ಸು, ವ್ಯಾಕರಣ ಹಾಗೂ ಪ್ರಸ್ತಾರದ ವಿನ್ಯಾಸ ಅವರಿಂದಲೇ ಕಲಿಯಬೇಕು.

ಪಠ್ಯ ವಿಷಯ ಕುರಿತ ಅವರ ಶ್ರದ್ಧೆ ಅನನ್ಯ. ವಿಷಯ ಮಂಡನೆ, ವಿಶೇಷ ಪೂರ್ವ ತಯಾರಿ, ಬೋಧಿಸುವ ಪಠ್ಯದ ಬಗ್ಗೆ ಅಗಾಧ ಹಿಡಿತ, ಅಸ್ಖಲಿತ ಮಾತಿನ ಮೋಡಿಯಿಂದಾಗಿ ನನ್ನಂತಹ ಶಿಷ್ಯಕೋಟಿಯ ಹೃದಯದಲ್ಲಿ ಗುರುಗಳು ಚಿರಸ್ಥಾಯಿಯಾಗಿ ಉಳಿಯುತ್ತಾರೆ. ಅವರ ಔದಾರ್ಯ, ಶಿಷ್ಯವಾತ್ಸಲ್ಯ ಮತ್ತು ಕನ್ನಡ ಅಭಿವೃದ್ಧಿಪರ ಚಿಂತನೆಯಿಂದ ವಿಶಿಷ್ಟ ಅಧ್ಯಾಪಕರ ಪರಂಪರೆಯ ಸಾಲಿನಲ್ಲಿ ಅವರು ಶೋಭಿಸುತ್ತಾರೆ.

ಗುರುಗಳ ಪ್ರೀತಿ, ವಾತ್ಸಲ್ಯದಲ್ಲಿ ಮಿಂದವರಿಗೆ ನಾನು ಬರೆದದ್ದು ಕಡಿಮೆ ಅನ್ನಿಸಬಹುದು. ಆದರೆ ಅವರನ್ನು ಹತ್ತಿರದಿಂದ ಬಲ್ಲವರಿಗೆ ಇನ್ನಷ್ಟು ಬರೆಯಬೇಕಿತ್ತು ಅನ್ನಿಸದೇ ಇರದು. ತಾನುರಿದು ಇತರರಿಗೂ ಬೆಳಕು ನೀಡುವ ದೀಪದಂತಹ ನನ್ನ ಗುರುಗಳ ತ್ಯಾಗಮಯ ಜೀವನಕ್ಕೆ ಬೇರೆ ಬೇಕೆ ಬಿರುದು ಸಮ್ಮಾನ...!

❖

# ಮಮತೆಯ ಗುರು

(ದೇಜಗೌ)

---

● *ಡಾ॥ ಟಿ. ಎಸ್. ನಾಗರತ್ನ*

೧೯೬೬ನೇ ಇಸವಿ. ತಂದೆಯೊಡನೆ ನಾನು ಕನ್ನಡ ಎಂ.ಎ. ತರಗತಿಗೆ ಸೇರಲು ನನ್ನ ಕನಸಿನ ತಾಣ ಮಾನಸಗಂಗೋತ್ರಿಗೆ ಅಡಿಯಿಟ್ಟೆ. ಬಸ್‌ನಿಲ್ದಾಣದಲ್ಲಿಳಿದು ಕನ್ನಡ ವಿಭಾಗವನ್ನು ಹುಡುಕಿಕೊಂಡು ಮಾನವಿಕ ವಿಭಾಗಗಳ ಕಟ್ಟಡವನ್ನು ಪ್ರವೇಶಿಸಿದೆ. ಹುಡುಕುತ್ತಾ ಬಂದಂತೆ 'ಪ್ರೊ. ದೇ. ಜವರೇಗೌಡ' ಎನ್ನುವ ಫಲಕವನ್ನು ಕಂಡು, ವಿಭಾಗ ಮುಖ್ಯಸ್ಥರಾಗಿದ್ದ ಅವರ ಆ ಕೊಠಡಿಯೊಳಗೆ ಇಣುಕಿದೆ. ಒಳಗೆ ಯಾರೂ ಇರಲಿಲ್ಲ. ವಿಭಾಗದ ಟೈಪಿಣಿ 'ಈಗ ಬರ್ತಾರೆ... ಬನ್ನಿ... ಕೂತ್ಕೊಳಿ' ಎಂದು ಹೇಳಿ, ನಮ್ಮ ವಿಚಾರವನ್ನು ಕೇಳಿ ತಿಳಿದುಕೊಂಡರು. ಕೆಲವೇ ನಿಮಿಷಗಳಲ್ಲಿ ಒಬ್ಬ ನಡುವಯಸ್ಸಿನ ನಗೆಮೊಗದ ವ್ಯಕ್ತಿ ಸರಸರನೆ ನಡೆಯುತ್ತಾ ನಮ್ಮತ್ತಲೇ ಬಂದ್ರು. ಟೈಪಿಣಿಯವರು ಪರಸ್ಪರ ಪರಿಚಯ ಮಾಡಿಕೊಟ್ಟರು. ತುಂಡುತೋಳಿನ ಷರಟು. ಪ್ಯಾಂಟು ತೊಟ್ಟಿದ್ದು ಹೊಸಬರಾದ ನಮ್ಮನ್ನು ನಗುನುಗತ್ತ ಚಿರಪರಿಚಿತರಂತೆ ಮಾತನಾಡಿಸಿದ ಅವರನ್ನು ನೆಟ್ಟಕಣ್ಣು ಬಿಟ್ಟಬಾಯಿಗಳಿಂದ ನೋಡುತ್ತ ನಿಂತುಬಿಟ್ಟೆ. ಕನ್ನಡ ಪ್ರಾಧ್ಯಾಪಕ ದೇಜಗೌ – ಎಂದರೆ ನನ್ನ ಕಲ್ಪನೆಯೇ ಬೇರೆಯಿತ್ತು. ಸೂಟುಬೂಟು ಧರಿಸಿ, ಗಂಭೀರ ಮುಖಮುದ್ರೆಯಿಂದ ಕೂಡಿರುವ ಅವರನ್ನು ನಾನು ಹೇಗಪ್ಪಾ ಮಾತನಾಡಿಸೋದು ಅಂತ ಕಲ್ಪಿಸಿಕೊಂಡೇ ಆತಂಕಪಡುತ್ತಿದ್ದೆ. ತಂದೆಯವರ ನಿರೀಕ್ಷೆಯೂ ಹೆಚ್ಚುಕಡಿಮೆ ಹೀಗೆಯೇ ಇತ್ತು. ಆದರೆ ನಾನು ಗಳಿಸಿದ್ದ ಅಂಕಗಳಿಗಾಗಿ ನನ್ನನ್ನು ಹಾರ್ದಿಕವಾಗಿ ಅಭಿನಂದಿಸಿ, ತಮ್ಮ ವಿಭಾಗಕ್ಕೆ ತುಂಬುಹೃದಯದಿಂದ ಸ್ವಾಗತಿಸಿದರು ದೇಜಗೌ. ಮೊಟ್ಟಮೊದಲ ಬಾರಿಗೆ ಊರು ಮನೆಬಿಟ್ಟು ಬಂದಿದ್ದ ನನಗೆ ಸಮಾಧಾನದ ಉಸಿರುಬಿಡುವಂತಾಯ್ತು. ಇದನ್ನು ನೋಡಿದ ನನ್ನ ತಂದೆಯವರೂ ನೆಮ್ಮದಿಯಿಂದ ನನ್ನನ್ನು ಅವರ ಮಡಿಲಿಗೆ ಹಾಕಿ ನಿರಾತಂಕವಾಗಿ ಶಿವಮೊಗ್ಗಾದ ಹಾದಿ ಹಿಡಿದರು.

ಚೆನ್ನಾಗಿ ಓದುವ ವಿದ್ಯಾರ್ಥಿಗಳನ್ನು ಕಂಡರೆ ದೇಜಗೌ ಅವರಿಗೆ ವಿಶೇಷ ಮಮತೆ, ಅಂಥವರು ಒಂದು ದಿನ ತರಗತಿಗೆ ಬಾರದಿದ್ದರೂ ಗಮನಿಸಿ, ಮಾರನೆಯ ದಿನ ಕೇಳುತ್ತಿದ್ದರು. ನಾನು ವಿದ್ಯಾರ್ಥಿನಿಲಯದಲ್ಲಿದ್ದುದರಿಂದ ಪದೇ ಪದೇ ಅಲ್ಲಿಯ ಊಟ, ನೀರು ಇತ್ಯಾದಿಗಳ ಅನುಕೂಲತೆ ಅನಾನುಕೂಲತೆಗಳ ಬಗ್ಗೆ ವಿಚಾರಿಸಿಕೊಳ್ಳುತ್ತಿದ್ದರು. ಒಂದು ಗಂಟೆಕಾಲ ತರಗತಿಯಿಲ್ಲದೆ ಬಿಡುವಿದ್ದರೂ ನಾವು, ವಿದ್ಯಾರ್ಥಿಗಳು ಗ್ರಂಥಾಲಯಕ್ಕೆ ಹೋಗಿ ಓದಬೇಕು. ಸ್ವಲ್ಪ ನಗು, ಮಾತು ಕೇಳಿಸಿದರೂ ಸಾಕು....'ಏನ್ರೀ ಮಾಡ್ತಿದೀರಾ' ಅಂತ ಕೇಳುತ್ತ ತರಗತಿಗೆ

ತಾವೇ ಬಂದುಬಿಡುತ್ತಿದ್ದರು. ಸಂಸ್ಕೃತ ಪೇಪರಿನಲ್ಲಿ ಹೆಚ್ಚಿನ ಅಂಕ ಗಳಿಸಿದ್ದ ನನ್ನನ್ನು ಅವರು ಸಂಸ್ಕೃತ ಅಧ್ಯಾಪಕರಿಗೆ ತೋರಿಸಿದ್ದು ಇಂದೂ ನನ್ನ ನೆನಪಿನಲ್ಲಿದೆ. ಯಾವುದೋ ಸಮಾರಂಭಕ್ಕೆಂದು ಕನ್ನಡ ವಿಭಾಗಕ್ಕೆ ಬಂದಿದ್ದ ಸಂಸ್ಕೃತ ಅಧ್ಯಾಪಕ ಶ್ರೀ ಶಿವರಾಮಯ್ಯನವರಿಗೆ ಅವರೇ 'ನಮ್ಮ ಸಂಸ್ಕೃತ ಪೇಪರಿನಲ್ಲಿ ೭೫ ಅಂಕಗಳನ್ನು ಗಳಿಸಿರುವವರು.... ಯಾರು ಅಂತಕೇಳಿದಿರಲ್ಲ' ಅಂತ ಸಂತೋಷ ಅಭಿಮಾನಗಳಿಂದ ನನ್ನತ್ತ ಬೆಟ್ಟುಮಾಡಿ ತೋರಿಸಿದ್ದರು.

ನಾನು ಕನ್ನಡ ಭಾವಗೀತೆಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದುದರಿಂದ ಅವರಿಗೆ ನನ್ನ ಬಗ್ಗೆ ವಿಶೇಷ ಅಭಿಮಾನ. ಮೈಸೂರಿನಲ್ಲಿ ನಡೆಯುತ್ತಿದ್ದ ಬೇರೆ ಬೇರೆ ಇಲಾಖೆಗಳ ಸಭೆ ಸಮಾರಂಭಗಳಿಗೆ ನನ್ನನ್ನು ಕಳಿಸಿ ಕನ್ನಡಗೀತೆಗಳನ್ನು ಹಾಡಿಸುತ್ತಿದ್ದರು. 'ನೋಡೀಪ್ಪ... ಇಲ್ಲಿಗೇ ಬಂದು ಅವರನ್ನು ಕರೆದುಕೊಂಡು ಹೋಗಬೇಕು; ಅವರ ಕಾರ್ಯಕ್ರಮ ಮುಗಿದ ಮೇಲೆ ಅವರನ್ನು ಇಲ್ಲಿಗೇ ಕರೆತಂದು ಬಿಡಬೇಕು' ಎಂದು ಅವರಿಗೆ ತಾಕೀತುಮಾಡಿ ಕಳಿಸುತ್ತಿದ್ದರು. ಕುವೆಂಪುರವರ 'ಬಾರಿಸು ಕನ್ನಡ ಡಿಂಡಿಮವ', 'ಎಲ್ಲಾದರು ಇರು ಎಂತಾದರು ಇರು' – ಎನ್ನುವ ಗೀತೆಗಳನ್ನು ಅದೆಷ್ಟು ಸಲ ಹಾಡಿದ್ದೆನೋ... ಕೊನೆಗೆ ಎಂ.ಎ. ಪರೀಕ್ಷೆಯ ಅಂಗವಾಗಿ ನಡೆದ ಮೌಖಿಕ ಪರೀಕ್ಷೆಯ ಸಂದರ್ಭದಲ್ಲಿಯೂ ಅವರು ಗಂಭೀರವಾಗಿ ಕೇಳಿದ್ದು : 'ಏನ್ರೀ ಒಂದು ಒಳ್ಳೇಹಾಡು ಹೇಳ್ತೀರೊ ಅಥವಾ ಪ್ರಶ್ನೆಗಳಿಗೆ ಉತ್ತರ ಹೇಳ್ತೀರೋ... ಆಯ್ಕೆ ನಿಮ್ಮದು' ಎಂದು. ನಾನು ಪ್ರಶ್ನೆಗಳಿಗೆ ಉತ್ತರಿಸುವುದಾಗಿ ಹೇಳಿ ಸಿದ್ಧಳಾಗಿ ಕುಳಿತೆ. ಪರೀಕ್ಷಕರಲ್ಲೊಬ್ಬರಾಗಿದ್ದ ಡಾ. ಹಿರೇಮಠರು ಮೊದಲ ಪ್ರಶ್ನೆ ಕೇಳಿದರು : 'ಬ್ರಾಹ್ಮೀಲಿಪಿ ಭಾರತದ ಯಾವ ಭಾಗದಲ್ಲಿ ಪ್ರಚಲಿತವಾಗಿತ್ತು?' ಅವರು ನಿಜಕ್ಕೂ ಟ್ರಂಪ್‌ಕಾರ್ಡ್ ಹಾಕಿದ್ದರು! 'ಬ್ರಾ–ಹ್ಮೀ....ಲಿಪಿ....' ಅಂತ ನಾನು ತಡವರಿಸುತ್ತಿದ್ದಾಗಲೇ ದೇಜಗೌ ಅವರಿಗೆ ಗೊತ್ತಾಯ್ತು, ನನಗೆ ಉತ್ತರ ಗೊತ್ತಿಲ್ಲಾಂತ. ಅವರು ತಕ್ಷಣ ಜೋರಾಗಿ 'ಯಾವ ಭಾಗದಲ್ಲಿ ಪ್ರಚಲಿತ ವಾಗಿತ್ತೂರೀ....' ಎಂದು ಕೇಳುತ್ತಾ ತಲೆ, ಹುಬ್ಬುಗಳನ್ನು ಮೇಲಕ್ಕೆತ್ತಿದರು. ಕೂಡಲೇ ಗ್ರಹಿಸಿದ ನಾನು 'ಉತ್ತರದಲ್ಲಿ' ಎಂದು ಉತ್ತರಿಸಿದ್ದೆ!

೧೯೬೭ನೇ ಇಸವಿ. ಆಗತಾನೇ ಕನ್ನಡ ಎಂ.ಎ.ಯನ್ನು ಪ್ರಥಮ ಶ್ರೇಣಿಯಲ್ಲಿ, ಮಾನವಿಕ ವಿಭಾಗಕ್ಕೆ ಪ್ರಪ್ರಥಮಳಾಗಿ ಪೂರೈಸಿದ್ದ ನಾನು ಶಿವಮೊಗ್ಗಾದ ಕಮಲಾನೆಹರೂ ಕಾಲೇಜಿನಲ್ಲಿ ಅಧ್ಯಾಪಕರ ಹುದ್ದೆಗೆ ಆಯ್ಕೆಯಾಗಿದ್ದೆ. ಆ ಸಂದರ್ಭದಲ್ಲಿ ಶಿವಮೊಗ್ಗಾದ ಕರ್ನಾಟಕ ಸಂಘದಲ್ಲಿ ದೇಜಗೌರವರು ಮುಖ್ಯ ಅತಿಥಿಗಳಾಗಿ ಬಂದಿದ್ದ ಒಂದು ಸಮಾರಂಭ. ನಾನು ನಮ್ಮ ಗುರುಗಳನ್ನು ನೋಡಿ ಮಾತನಾಡಿಸಲೆಂದು, ಅಲ್ಲಿಗೆ ಹೋಗಿದ್ದೆ. ಸಮಾರಂಭ ಮುಗಿಯಿತು. ನನ್ನನ್ನು ನೋಡಿದ ದೇಜಗೌರವರು 'ಇಲ್ಲಿ ಏನ್ರೀ ಮಾಡ್ತಿದೀರಿ?' – ಅಂದ್ರು, ಕಮಲಾನೆಹರೂ ಕಾಲೇಜಿಗೆ ಅಧ್ಯಾಪಕಿಯಾಗಿ ಹೋಗುವುದಾಗಿ ಹೇಳಿದೆ. ಕೂಡಲೇ ಅವರು ಅಲ್ಲಿಯೇ ಇದ್ದ ಆ ಕಾಲೇಜಿನ ಪ್ರಾಂಶುಪಾಲ ಶ್ರೀ ಪಂಚಾಕ್ಷರಿಯವರತ್ತ ತಿರುಗಿ 'ರೀ ಅವರು ನಿಮ್ಮ ಕಾಲೇಜಿಗೆ ಬರೋಲ್ರೀ.... ಗಂಗೋತ್ರಿಗೆ ಬಂದು ಪಿಹೆಚ್.ಡಿ. ಮಾಡ್ತಾರೆ. ನೀವು ಬೇರೆ ಯಾರನ್ನಾದ್ರೂ ಹುಡುಕ್ಕೊಳ್ಳಿ' – ಅಂದುಬಿಟ್ರು. ನನ್ನ ಕಡೆಗೆ ತಿರುಗಿ 'ನಡೀರಿ ಮೈಸೂರ್ಗೆ. ಮೊದಲು ಪಿಎಚ್.ಡಿ., ಮಾಡಿ ಮುಂದೆ ಕೆಲಸಕ್ಕೆ ಸೇರೋದು ಇದ್ದೇ ಇದೆ.' – ಅಂದ್ರು. ಸರಿ... ಅವರ ಮಾತಿನಂತೆ

ಗಂಟುಮೂಟೆ ಕಟ್ಟಿಕೊಂಡು ಪುನಃ ಮೈಸೂರಿಗೆ ಬಂದು ಮಾನಸಂಗೋತ್ರಿಯ ಕನ್ನಡ ವಿಭಾಗದಲ್ಲಿ ಸಂಶೋಧನ ವಿದ್ಯಾರ್ಥಿಯಾಗಿ ಸೇರಿಕೊಂಡೆ. ಆದರೆ ಹಾಸ್ಟೆಲ್ಲಿನಲ್ಲಿರಲಿಲ್ಲ; ಮನೆಮಾಡಿಕೊಂಡಿದ್ದೆ. ನನ್ನ ಹಾಗೆಯೇ ದೇಜಗೌ ಅವರ ಒಂದೇ ಒಂದು ಮಾತಿಗೆ ಬೆಲೆ ಕೊಟ್ಟು ತಾವುಗಳು ಇದ್ದ ಖಾಯಂ ಕೆಲಸಗಳನ್ನೂ ಬಿಟ್ಟು ಕನ್ನಡ ಅಧ್ಯಯನ ಸಂಸ್ಥೆಗೆ ಬಂದ ಅನೇಕ ವಿದ್ವಾಂಸರು ಇಂದಿಗೂ ಅಲ್ಲಿ ಮೂಗೆತ್ತಿನಂತೆ ದುಡಿಯುತ್ತಿದ್ದಾರೆ! ಅಷ್ಟು ಪ್ರಭಾವೀ ವ್ಯಕ್ತಿತ್ವ ದೇಜಗೌರವರದು.

ಆಗ ಸಂಸ್ಥೆಯಲ್ಲಿ ನಾವು ನಾಲ್ಕು ಜನ ಸಂಶೋಧನ ವಿದ್ಯಾರ್ಥಿನಿಯರಿದ್ದೆವು. ಗಂಗೋತ್ರಿಯ ಆವರಣದಲ್ಲಿ ಸಾಕಷ್ಟು ಮಾವಿನ ಮರಗಳಿರುವುದರಿಂದ ಮಾವಿನ ಕಾಯಿಯ ಸುಗ್ಗಿಯೋ ಸುಗ್ಗಿ. ಅದೊಂದು ದಿನ ನಾನು ಮನೆಯಿಂದ ಉಪ್ಪು ಮೆಣಸಿನಪುಡಿಗಳನ್ನು ಪೊಟ್ಟಣಕಟ್ಟಿ ತಂದಿದ್ದೆ. ಸಂಸ್ಥೆಯ ಸೇವಕರೊಬ್ಬರಿಂದ ಹತ್ತಾರು ಬಲಿತ ಮಾವಿನಕಾಯಿಗಳನ್ನು ತರಿಸಿದೆವು. ಎಲ್ಲವನ್ನೂ ತೊಳೆದು, ಸಣ್ಣಸಣ್ಣ ಹೋಳುಗಳಾಗಿ ಹೆಚ್ಚಿ, ಖಾಲಿಮಾಡಿದ್ದ ಮೇಜಿನ ಮೇಲೊಂದು ಕಾಗದ ಹಾಸಿ, ಎಲ್ಲ ಹೋಳುಗಳನ್ನೂ ಅದರ ಮೆಲೆ ಗುಡ್ಡೆಹಾಕಿದೆವು. ನಾಲ್ಕು ಜನರೂ ಸುತ್ತ ಕುಳಿತು, ಉಪ್ಪು ಮೆಣಸಿನಪುಡಿಗಳನ್ನು ಹದವಾಗಿ ಬೆರೆಸಿಟ್ಟುಕೊಂಡು ಇನ್ನೇನು ತಿನ್ನಬೇಕು... ಅಷ್ಟರಲ್ಲಿ ಸಂಸ್ಥೆಯ ಸೇವಕ ಓಡುತ್ತ ಬಂದು 'ಪ್ರೊಫೆಸರ್ ಬಂದ್ರು...ಇತ್ತಕಡೆಗೇ ಬತ್ತಾಅವ್ರೆ' ಅಂತ ಒಂದೇ ಉರಿಸಿಗೆ ಸುದ್ದಿಮುಟ್ಟಿಸಿದ. ಅವನು ಹೇಳಿ ಮುಗಿಸುವ ಹೊತ್ತಿಗೆ ದೇಜಗೌರವರು ಮಹಡಿ ಹತ್ತಿ ನಮ್ಮ ಕೊಠಡಿಗೆ ಬಂದೇ ಬಿಟ್ಟಿದ್ದರು! ಏನೂ ಮಾಡಲು ತೋಚದೆ ಎಲ್ಲರೂ ಸ್ತಬ್ಧರಾಗಿ ಬೊಂಬೆಗಳಂತೆ ನಿಂತಿದ್ದಾಗ ನಾನು ಮೆಲ್ಲಗೆ 'ಬನ್ನಿಸಾರ್....ತೊಗೋಳಿ ಮಾವಿನಕಾಯಿ' ಎನ್ನುತ್ತಾ ಉಪ್ಪು ಮೆಣಸಿನಪುಡಿಗಳನ್ನು ಅವರತ್ತ ಸರಿಸಿದೆ. ಅವರು 'ಓ.....ಮಾವಿನಕಾಯಿ' – ಎಂದು ಹೇಳುತ್ತಾ, ಒಂದು ಹೋಳನ್ನೆತ್ತಿ ಉಪ್ಪುಖಾರಗಳನ್ನದ್ದಿ ಬಾಯಿಗೆ ಹಾಕಿಕೊಂಡು ಚಪ್ಪರಿಸುತ್ತಾ ಹೊರನಡೆದರು!

ಇನ್ನೊಂದು ದಿನ ಬೆಳಗಿನ ಸು. ೧೧ ಗಂಟೆಯ ಸಮಯ. ನನಗೇಕೋ ಸಿಕ್ಕಾಪಟ್ಟೆ ತೂಕಡಿಕೆ. ನಿದ್ದೆಯನ್ನು ತಡೆಯಲು ಸಾಧ್ಯವಾಗಲೇ ಇಲ್ಲ. ಎದ್ದು ಸೀದಾ ಹಾಸ್ಟೆಲ್‌ಗೆ ಹೋಗಿ, ಗಡದ್ದಾಗಿ ಒಂದು ನಿದ್ದೆ ತೆಗೆದು. ಸು. ೧೨.೩೦ರ ವೇಳೆಗೆ ಪುನಃ ಸಂಸ್ಥೆಗೆ ಬಂದೆ. ಯಾರೊಂದಿಗೋ ಮಾತಾಡುತ್ತಾ ದೇಜಗೌರವರು ಸಂಸ್ಥೆಯ ಮುಂಬಾಗಿಲಲ್ಲೇ ನಿಂತಿದ್ದರು. ಬಂತಲ್ಲಪ್ಪಾ, ಗ್ರಹಚಾರ ಎಂದುಕೊಳ್ಳುತ್ತಲೇ ಅಳುಕುತ್ತ ಮೆಲ್ಲಗೆ ಮುಂದುವರಿದೆ. 'ಎಲ್ಲಿಗ್ರೀ ಹೋಗಿದ್ರಿ?' ಗುಡುಗಿದರು ದೇಜಗೌ. 'ಎಲ್ಲೂ ಇಲ್ಲಸಾರ್.... ಯಾಕೋ ತುಂಬ ನಿದ್ದೆ ಬಂತು. ಹಾಸ್ಟೆಲ್‌ಗೆ ಹೋಗಿ ಸ್ವಲ್ಪಹೊತ್ತು ಮಲಗಿದ್ದು ಬಂದೆ' – ಎಂದೆ. ನನ್ನ ನೇರ ಉತ್ತರ ಕೇಳಿದ ದೇಜಗೌ ನಗುತ್ತ 'ಹ್ಞೂಂ...ಹೋಗಿ' ಅಂದ್ರು. ಸುಳ್ಳು ತಟವಟಗಳನ್ನು ಅವರೆಂದೂ ಸಹಿಸುತ್ತಿರಲಿಲ್ಲ.

ಹೆಣ್ಣುಮಕ್ಕಳ ಬಗ್ಗೆ ದೇಜಗೌರವರಿಗೆ ವಿಶೇಷಕಾಳಜಿ. ವಿದ್ಯಾರ್ಥಿನಿಯರ ನಡೆ ನುಡಿಗಳತ್ತ ಅವರ ಗಮನವಿದ್ದೇ ಇರುತ್ತಿತ್ತು. ಒಂದು ತರಗತಿಯಲ್ಲಿ ಹೆಚ್ಚೆಂದರೆ ನಾಲ್ಕು, ಐದು ಮಂದಿ

ವಿದ್ಯಾರ್ಥಿನಿಯರಿರುತ್ತಿದ್ದರು, ಅಷ್ಟೇ. ಸಂಸ್ಥೆಯ ಹೊರಗೆ ಅವರು ಹೇಗಿದ್ದರೆ ನನಗೇನು ಎನ್ನುವ ಧೋರಣೆಯ ವ್ಯಕ್ತಿಯಲ್ಲ, ದೇಜಗೌ. ೧೯೬೮ರಲ್ಲಿ ಎಂದು ನೆನಪು. ನನ್ನ ಸಹಪಾಠಿ ಹಾಗೂ ಆಪ್ತ ಗೆಳೆಯ ಮ.ಗಂ. ರೇಣುಕ ಪ್ರಸನ್ನರವರ ಮದುವೆಯ ನಿಶ್ಚಿತಾರ್ಥ ಬೇಂಗಳೂರಿನಲ್ಲಿ ನಡೆಯಿತು. ಮೈಸೂರಿನಿಂದ ಕಾರುಮಾಡಿಕೊಂಡು ಹೊರಟ ಅವರ ಮನೆಯವರೊಂದಿಗೆ ನನ್ನನ್ನೂ ಕರೆದುಕೊಂಡು ಹೋದರು. ಸಮಾರಂಭ ಮುಗಿದೊಡನೆ ಊಟಮುಗಿಸಿದ ನನ್ನನ್ನು ಪ್ರಸನ್ನರವರು ಆಟೋದಲ್ಲಿ ಬಸವನಗುಡಿಯಲ್ಲಿದ್ದ ನನ್ನ ತಾತನವರ ಮನೆಗೆ ಬಿಟ್ಟು ಬಂದರು. ಆಟೋದಲ್ಲಿ ನಾವಿಬ್ಬರೇ ಕುಳಿತು ಹೋಗುತ್ತಿದ್ದುದನ್ನು ದೇಜಗೌರವರ ಹದ್ದಿನಕಣ್ಣು ಎಲ್ಲಿಯೋ ಗುರುತಿಸಿದೆ. ಎರಡುದಿನ ಬಿಟ್ಟು ಮೈಸೂರಿಗೆ ಬಂದ ನನ್ನನ್ನು ಕಂಡಕೂಡಲೇ 'ಏನ್ರೀ...ನಿಮ್ಮನ್ನ ರೇಣುಕಪ್ರಸನ್ನ ಅವರನ್ನ ಬೆಂಗಳೂರಿನಲ್ಲಿ, ಆಟೋದಲ್ಲಿ ನೋಡಿದ ಹಾಗಿತ್ತು' – ಅಂದ್ರು. 'ಹೌದು ಸರ್.... ಪ್ರಸನ್ನನ ಮದುವೆ ನಿಶ್ಚಿತಾರ್ಥ ಇತ್ತು. ಅದನ್ನು ಮುಗಿಸಿಕೊಂಡು ಆಟೋದಲ್ಲಿ ಬಸವನಗುಡಿಗೆ, ನಮ್ಮ ತಾತನ ಮನೆಗೆ ಹೋಗುತ್ತಿದ್ದೆವು' – ಅಂದೆ. ಆ ಕ್ಷಣದಲ್ಲಿ ಅವರ ಮುಖದಲ್ಲಿ ಆತಂಕ ಮರೆಯಾಗಿ ಮುಖ ಪ್ರಸನ್ನವಾಯಿತು.

ಆ ದಿನಗಳಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಯಾವ ಸಭೆ ಸಮಾರಂಭ ನಡೆದರೂ ಸಂಸ್ಥೆಯ ಉದ್ಯೋಗಿಗಳು, ವಿದ್ಯಾರ್ಥಿಗಳು, ಸಂಶೋಧಕರು ಎಲ್ಲರೂ ಬಹಳ ಮುತುವರ್ಜಿಯಿಂದ, ಆಸಕ್ತಿಯಿಂದ ಭಾಗವಹಿಸುತ್ತಿದ್ದೆವು. ಎಲ್ಲರೂ ಹೊಸಬಟ್ಟೆಗಳನ್ನು ಹಾಕಿಕೊಂಡು, ಅರಿಶಿನ ಕುಂಕುಮ ಹೂವುಗಳನ್ನು ಹಿಡಿದು ಸಡಗರದಿಂದ ಓಡಾಡುತ್ತಿದ್ದರೆ ಸಂಸ್ಥೆಯಲ್ಲಿ ಹಬ್ಬದ ವಾತಾವರಣವಿರುತ್ತಿತ್ತು. ಮುಸ್ಸಂಜೆಯೊಳಗೆ ಸಮಾರಂಭ ಮುಗಿಯದಿದ್ದಲ್ಲಿ ಸ್ವತಃ ದೇಜಗೌರವರೇ ನಿಂತು ಹಾಸ್ಟೆಲ್ಲಿನಲ್ಲಿದ್ದ ಹೆಣ್ಣುಮಕ್ಕಳನ್ನು ಹಾಸ್ಟೆಲ್ಲಿಗೆ ಕಳುಹಿಸಿ, ಉಳಿದವರನ್ನು ತಮ್ಮ ಕಾರಿನಲ್ಲಿಯೇ ಅವರವರ ಮನೆ ತಲುಪಿಸಿ, ಕೊನೆಯಲ್ಲಿ ತಮ್ಮ ಹೆಂಡತಿ, ಮಗಳನ್ನು ಮನೆಗೆ ಕರೆದೊಯ್ಯುತ್ತಿದ್ದರು. ಆದರೆ ಸಂಸ್ಥೆಯ ಸಮಾರಂಭಗಳು ಎಂದೂ ವಿಳಂಬವಾಗಿ ಆರಂಭವಾದದ್ದು ನನಗೆ ನೆನಪಿಲ್ಲ.

ನನ್ನೊಂದಿಗೆ ಕೇರಳದ ತ್ರಿವೇಂಡ್ರಂನಿಂದ ಬಂದಿದ್ದ ಭಾಷಾಶಾಸ್ತ್ರದ ಸಂಶೋಧನ ವಿದ್ಯಾರ್ಥಿನಿಯೊಬ್ಬಳಿದ್ದಳು. ಮೂರು–ನಾಲ್ಕು ದಿನಗಳು ರಜ ಬಂದರೆ, ಇದ್ದಕ್ಕಿದ್ದಂತೆ ಹರತಾಳಗಳು ಆರಂಭವಾದರೆ, ಕಾರಣಾಂತರಗಳಿಂದ ವಿದ್ಯಾರ್ಥಿನಿಲಯ ಮುಚ್ಚಿಬಿಟ್ಟರೆ ಆ ಕೂಡಲೇ ಅವಳು ಹೋಗುವುದಾದರೂ ಎಲ್ಲಿಗೆ? ಅವಳಿಗೆ ದೇಜಗೌರವರ ಮುಕ್ತಾಹ್ವಾನವಿರುತ್ತಿತ್ತು. 'ನೋಡಮ್ಮ... ನೀನು ಸಂಕೋಚ ಪಟ್ಟುಕೊಳ್ಳದೆ ನಮ್ಮ ಮನೆಗೆ ಬಂದು ನನ್ನ ಹೆಂಡತಿ, ಮಗಳ ಜೊತೆಯಲ್ಲಿರು' ಎಂದು ಹೇಳುತ್ತಿದ್ದರಲ್ಲದೆ, ಎಷ್ಟೋಸಲ ಹಾಗೆ ತಮ್ಮ ಮನೆಯಲ್ಲಿ ಇರಿಸಿಕೊಂಡಿದ್ದರು. ಅವರು ನಮಗೆ ತೋರುತ್ತಿದ್ದ ಪಿತೃವಾತ್ಸಲ್ಯ ನಿಜಕ್ಕೂ ಮರೆಯಲಾಗದ್ದು.

ಇಂತಹ ವಾತ್ಸಲ್ಯಮಯಿ, ಮೃದುಹೃದಯಿ, ಶಾಂತಮೂರ್ತಿ ದೇಜಗೌ ಮೋಸ, ವಂಚನೆಗಳನ್ನು ಕಂಡರೆ ರೌದ್ರಾವತಾರ ತಾಳುತ್ತಿದ್ದರು. ಕನ್ನಡ ಅಧ್ಯಯನ ಸಂಸ್ಥೆಯ ಕಟ್ಟಡವನ್ನು

ವಿಸ್ತರಿಸುತ್ತಿದ್ದ ಸಮಯ. ಮಳೆಗಾಲದ ಒಂದು ಮಧ್ಯಾಹ್ನ ಇದ್ದಕ್ಕಿದ್ದಂತೆಯೇ ಗುಡುಗುತ್ತ ಮಹಡಿಹತ್ತಿ ಬಂದರು ದೇಜಗೌ. ಅಕ್ಕಪಕ್ಕದ ಕೊಠಡಿಗಳಲ್ಲಿದ್ದ ನಾವೆಲ್ಲ ದುಡದುಡನೆ ಅವರ ಹಿಂದೆಯೇ ಓಡುತ್ತ ಬಂದೆವು, 'ಯಾವನವನು ಕಂತ್ರಿಕೆಲಸ ಮಾಡಿರೋನು. ಬೋ.....ಮಗ... ಅವರಪ್ಪಂದೇನುದುಡ್ಡು.....ಸಾರ್ವಜನಿಕರ ಹಣ ಇದು.... ಮಳೆ ನೀರೆಲ್ಲ ಒಳಗೇ ಇಳಿದಿದೆಯಲ್ಲಾ...ಎಲ್ಲಿ ಆ ಸೂ.......ಮಗ' ಹಾಗೆ ಹೀಗೇಂತ ಸಿಕ್ಕಾಪಟ್ಟೆ ಕಿರಿಚಾಡಿ, ಅಚ್ಚ ಜಾನಪದ ಭಾಷೆಯಲ್ಲಿ ಬಾಯಿಗೆ ಬಂದಹಾಗೆ ಬೈದರು. ಕಾರಣ : ವಿಸ್ತರಣೆ ಮಾಡಿದ ಭಾಗಕ್ಕೆ ಹಾಕಿದ್ದ ಮೇಲ್ಛಾವಣಿ ಸೋರುತ್ತಿತ್ತು. ಕಳಪೆ ಕೆಲಸ ಮಾಡಿ ದುಡ್ಡುತಿಂದಿದ್ದ ಆ ಮೇಸ್ತ್ರಿ ಮಹಾಶಯ.

ಇವು ದೇಜಗೌರವರ ವಿದ್ಯಾರ್ಥಿನಿಯಾಗಿ ನಾನು ಸವಿದ, ಸಾಕ್ಷಿಯಾಗಿ ನಿಂತ ಸ್ಮರಣೀಯ ಕ್ಷಣಗಳಲ್ಲಿ ಕೆಲವು. ಅವರ ಅಂತಃಕರಣದ ಪಿತೃವಾತ್ಸಲ್ಯದ ಕರ್ತವ್ಯನಿಷ್ಠೆಯ ಕೆಲವೇ ಕೆಲವು ಮಾದರಿಗಳು. ಪುಟಗಳ ಮಿತಿಯಿರುವುದರಿಂದ ಅತಿಕ್ರಮಿಸದೆ ವಿರಮಿಸುವೆ.

❖

# ಪ್ರಸನ್ನಗುರು

## (ಡಾ॥ ಪ್ರಭುಶಂಕರ)

• *ಪ್ರೊ॥ ಜಿ. ಎಚ್. ನಾಯಕ*

**ಡಾ.** ಪ್ರಭುಶಂಕರ ಅವರು ನನ್ನ ಗುರುಗಳು. ನನಗೆ ಪಾಠ ಹೇಳಿದ ಗುರುಗಳ ಸಂಖ್ಯೆ ಸಾಕಷ್ಟಿದೆ. ಆದರೆ, ಡಾ. ಪ್ರಭುಶಂಕರ ಅವರಷ್ಟು ನನ್ನ ಪ್ರೀತಿ, ಅಭಿಮಾನ, ಗೌರವಗಳಿಗೆ ಪಾತ್ರರಾದ ಗುರುಗಳ ಸಂಖ್ಯೆ ಹೆಚ್ಚಿಲ್ಲ.

ತಾನು ತಿಳಿದಿರುವುದನ್ನು ಚೆನ್ನಾಗಿ ತಿಳಿದುಕೊಂಡು, ತುಂಬ ಪರಿಣಾಮಕಾರಿಯಾಗಿ ಬೋಧಿಸುವ ಕಲೆ ಡಾ. ಪ್ರಭುಶಂಕರ ಅವರಿಗೆ ಉನ್ನತ ಮಟ್ಟದಲ್ಲಿ ಸಿದ್ಧಿಸಿದೆ. ಕನ್ನಡ ಭಾಷೆಯಲ್ಲಿರಲಿ, ಇಂಗ್ಲಿಷ್ ಭಾಷೆಯಲ್ಲಿರಲಿ ಅವರಿಗೆ ಭಾಷೆ ಮತ್ತು ಅಭಿವ್ಯಕ್ತಿಯ ಮೇಲೆ ಅತ್ಯುತ್ತಮ ಮಟ್ಟದ ಪ್ರಭುತ್ವವಿದೆ. ಕನ್ನಡ ಅಧ್ಯಾಪಕರಲ್ಲಿ ಇಂಗ್ಲಿಷ್ ಭಾಷೆಯ ಮೇಲೆ ಡಾ. ಪ್ರಭುಶಂಕರ ಅವರಷ್ಟು ಪ್ರಭುತ್ವ, ಪಾಂಡಿತ್ಯ ಇರುವವರನ್ನು ನಾನು ಈವರೆಗೆ ಕಂಡಿಲ್ಲ.

ಡಾ. ಪ್ರಭುಶಂಕರ ಅವರಂತೆಯೆ ಅತ್ಯುತ್ತಮ ಮಟ್ಟದ ಬೋಧನ ಪ್ರತಿಭೆ ಇದ್ದವರು ನನ್ನ ಗುರುಗಳಲ್ಲಿ ಕೆಲವರಾದರೂ ಇದ್ದಾರೆ. ಪಾಂಡಿತ್ಯದಲ್ಲಿ ಅವರನ್ನು ಮೀರಿಸುವವರೂ ಇದ್ದರು; ಇಂದೂ ಇದ್ದಿರಬಹುದು. ಪಾಂಡಿತ್ಯದ ಮಾತು ಬಂದಾಗಲೆಲ್ಲ ನನ್ನ ಗುರುಗಳಾದ ಪ್ರೊ. ಡಿ. ಎಲ್. ನರಸಿಂಹಾಚಾರ್ ಮತ್ತು ಪ್ರೊ. ತೀ. ನಂ. ಶ್ರೀಕಂಠಯ್ಯ ಅವರ ನೆನಪು ಬಂದೇ ಬರುತ್ತದೆ. ಆದರೆ, ವಿದ್ಯಾರ್ಥಿಗಳ ವಿಷಯದಲ್ಲಿ, ಅವರ ವೈಯಕ್ತಿಕ ಕಷ್ಟ–ಸುಖಗಳ ವಿಷಯದಲ್ಲಿ ಡಾ. ಪ್ರಭುಶಂಕರ ಅವರಂತೆ ತಾವಾಗಿ ತಿಳಿದುಕೊಂಡು ಅಂತಃಕರಣ ಪೂರ್ವಕವಾದ ಕಳಕಳಿ, ಆಸಕ್ತಿ ತೋರಿಸುವಂಥ, ಮುಕ್ತ ಮನಸ್ಸಿನಿಂದ ಸಹಾಯ, ಉಪಕಾರ ಮಾಡುವಂಥ ಸಹಜ ಉದಾರಿಗಳನ್ನು ನಾನು ಕಂಡಿಲ್ಲ. ಅವರ ಔದಾರ್ಯದಿಂದ ಉಪಕೃತರಾದ ಹಲವರಲ್ಲಿ ನಾನೂ ಒಬ್ಬನೆಂದು ಹೇಳಿಕೊಳ್ಳಲು ನನಗೆ ಸಂಕೋಚವಾಗುವುದಿಲ್ಲ; ಸಂತೋಷವೆನಿಸುತ್ತದೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಅವರ ಪತ್ನಿ ಡಾ. ಶಾಂತಾ ಪ್ರಭುಶಂಕರ ಅವರು ನನ್ನ ವಿಷಯದಲ್ಲಿ ತೋರುತ್ತ ಬಂದ ವಿಶ್ವಾಸ, ಮಾಡುತ್ತ ಬಂದ ಉಪಕಾರಗಳನ್ನೂ ನಾನಿಲ್ಲಿ ನೆನೆಯುವುದು ಉಚಿತವೆಂದು ಭಾವಿಸುತ್ತೇನೆ. ಏಕೆಂದರೆ ಡಾ. ಪ್ರಭುಶಂಕರ ಅವರ ಉಪಕಾರಬುದ್ಧಿಯನ್ನು ದೃಢಗೊಳಿಸುವುದರಲ್ಲಿ, ಅದನ್ನು ವಿಸ್ತರಿಸುವುದರಲ್ಲಿ, ಅದರ ವಿತರಣೆ ಮಾಡುವುದರಲ್ಲಿ ಡಾ. ಶಾಂತಾ ಪ್ರಭುಶಂಕರ ಅವರ ಉಪಕಾರಬುದ್ಧಿಯೂ ಸದಾ ಪ್ರೇರಕವಾಗಿ, ಪೋಷಕವಾಗಿ ಇರುವುದನ್ನು ಕಾಣುತ್ತ ಬಂದ ನಾನು ಅದನ್ನು ಇಲ್ಲಿ ಹೇಳುವುದು ಸಂತೋಷದ ಕರ್ತವ್ಯವೆಂದು ತಿಳಿದಿದ್ದೇನೆ.

ಡಾ. ಪ್ರಭುಶಂಕರ ಅವರ ಉಪಕಾರ ಬುದ್ಧಿ ವಿದ್ಯಾರ್ಥಿಗಳ ಮಟ್ಟಿಗೆ ಸೀಮಿತವಾದದ್ದಲ್ಲ. ಅವರ ಮಿತ್ರವರ್ಗವಂತೂ ಅಪಾರ. 'ಅಪಾರ' ಎಂಬ ಮಾತನ್ನು ನಾನು ತಿಳಿದೇ, ಯೋಚನೆ ಮಾಡಿಯೇ ಉಪಯೋಗಿಸುತ್ತಿದ್ದೇನೆ. ದೇಶ, ವಿದೇಶಗಳಲ್ಲಿ ಅವರ ಮಿತ್ರವರ್ಗವಿದೆ. ಅವರ ಮಿತ್ರವರ್ಗ ಕೇವಲ ಬಾಯಿಮಾತಿಗೆ, ಔಪಚಾರಿಕವಾಗಿ ಹಾಗೆಂದು ಹೇಳಿಕೊಳ್ಳುವ ಮಿತ್ರವರ್ಗವಲ್ಲ. ಅವರ ಹೆಸರು ಹೇಳಿದರೆ ಸಾಕು ನಾವೂ ಆ ಮಿತ್ರರ ಆತ್ಮೀಯರಾಗಿ ಬಿಡುತ್ತೇವೆ. ಆ ಮಿತ್ರರು ನಮಗೆ ಸಹಾಯ, ಉಪಕಾರ ಮಾಡಲು ತುದಿಗಾಲ ಮೇಲೆ ನಿಲ್ಲುತ್ತಾರೆ. ಅಷ್ಟು ಆಳವಾದ, ಆತ್ಮೀಯವಾದ ಭಾವನೆಯನ್ನು ಡಾ. ಪ್ರಭುಶಂಕರ ಅವರ ಬಗ್ಗೆ ತುಂಬಿಕೊಂಡಿರುವಂಥ ಮಿತ್ರವರ್ಗವದು. ಅವರ ಮಿತ್ರವರ್ಗದಲ್ಲಿ ಕೆಲವರ ಪರಿಚಯ, ಆತ್ಮೀಯತೆಯ ಅನುಭವ ನನಗೂ ಆದದ್ದಿದೆ. ಸಾಲಮಾಡಿಯಾದರೂ ಕಷ್ಟದಲ್ಲಿರುವ ಸ್ನೇಹಿತರಿಗೆ ಸಹಾಯ ಮಾಡಲು ಧಾವಿಸುವ ಡಾ. ಪ್ರಭುಶಂಕರ ಅವರ ಔದಾರ್ಯ, ಉಪಕಾರಬುದ್ಧಿ ಅಪರೂಪದ್ದಾದರೂ ಕೆಲವೊಮ್ಮೆ ಪಾತ್ರಾ ಪಾತ್ರ ವಿಮರ್ಶೆ ಮಾಡದೆ ಸಹಾಯ ಮಾಡಲು ಮುನ್ನುಗ್ಗುವ ಅವರ ಔದಾರ್ಯದಲ್ಲಿ ಸ್ವಲ್ಪ ದುಡುಕಿನ ಅಂಶವೂ ಸೇರಿಕೊಳ್ಳುತ್ತದೆ ಎಂದು ನನಗೆ ಅನಿಸಿದ್ದುಂಟು. ವೈಯಕ್ತಿಕ ಲಾಭ–ನಷ್ಟಗಳ ಲೆಕ್ಕಾಚಾರ, ಜಾತಿ–ಮತಗಳ ಕೀಳು ರುಚಿ ಇವುಗಳ ಕಾರಣದಿಂದಾಗಿಯೆ ಇನ್ನೊಬ್ಬರಿಗೆ ಸಹಾಯ, ಉಪಕಾರ ಮಾಡುವ ಔದಾರ್ಯದ ಸೋಗು ಹಾಕುವವರೇ ನಮ್ಮ ಸಾಮಾಜಿಕ ಪರಿಸರದಲ್ಲಿ ಹೆಚ್ಚಾಗಿದ್ದಾರೆ. ಅವುಗಳ ಪರಿವೆಯಿಲ್ಲದ ಡಾ. ಪ್ರಭುಶಂಕರರಂಥ 'ಔದಾರ್ಯದ ಹುಂಬರು' ಅವರ ಸ್ವಂತಕ್ಕೆ ನಷ್ಟ ಮಾಡಿಕೊಂಡರೂ ಮನುಷ್ಯರಲ್ಲಿರುವ ಮಾನವೀಯ ಗುಣದ ಬಗ್ಗೆ ವಿಶ್ವಾಸ, ನಂಬಿಕೆ ಹುಟ್ಟಿಸುತ್ತಾರೆ ಎಂಬ ಸಮಾಧಾನವಂತೂ ಇದ್ದೇ ಇದೆ.

ಡಾ. ಪ್ರಭುಶಂಕರ ಅವರು ರಾಷ್ಟ್ರಕವಿ ಕುವೆಂಪು ಅವರ ಶಿಷ್ಯರು; ಅಂತರಂಗದ ಶಿಷ್ಯರು. ಕುವೆಂಪು ತಮ್ಮ ವೈಯಕ್ತಿಕ ಭಾವ–ಭಾವನೆಗಳನ್ನೂ, ಸ್ವಂತದ ಕಷ್ಟ–ಸುಖಗಳನ್ನೂ, ಸಮಸ್ಯೆಗಳನ್ನೂ ಆಪ್ತವಾಗಿ, ಆತ್ಮೀಯವಾಗಿ ಅವರೊಡನೆ ಹಂಚಿಕೊಳ್ಳುವುದುಂಟು; ಪ್ರಸ್ತಾಪಿಸುವುದುಂಟು. ಎಷ್ಟಕ್ಕೊ ಡಾ. ಪ್ರಭುಶಂಕರ ಅವರು ಪರಿಹಾರ ಸೂಚಿಸಿದ್ದುಂಟು; ಎಷ್ಟನ್ನೊ ಪರಿಹರಿಸಿದ್ದೂ ಉಂಟು. ಅವರ ಗುರುಭಕ್ತಿ ನಿರ್ವ್ಯಾಜವಾದದ್ದು. ಶಿಷ್ಯನ ಧನ್ಯಭಾವವೇ ಅದರಿಂದ ಅವರು ಪಡೆಯುತ್ತ ಬಂದ ಫಲ, ಪ್ರಯೋಜನ. ಅವರು ಬಯಸಿದ್ದೂ ಅದೇ. ಕುವೆಂಪು ಅವರ ವ್ಯಕ್ತಿತ್ವದ ಮಹಾವರ್ಚಸ್ಸನ್ನು ಎಂದೂ ತಮ್ಮ ಸ್ವಂತದ ಲಾಭಕ್ಕಾಗಿ ಅವರು ಬಳಸಿಕೊಂಡವರಲ್ಲ. ಅದು ಅವರ ನಿರ್ವ್ಯಾಜ ಗುರುಭಕ್ತಿಗೆ, ಆತ್ಮಾಭಿಮಾನಿಯಾದ ಅವರ ವ್ಯಕ್ತಿತ್ವಕ್ಕೆ ನಿದರ್ಶನವಾಗಿದೆ.

ಕುವೆಂಪು ವಿಷಯದಲ್ಲಿ ಉನ್ನತ ಮಟ್ಟದ ಗುರುಭಕ್ತಿ, ಅವರ ಕಾವ್ಯದ ಬಗ್ಗೆ ಆರಾಧನಾ ಭಾವ ಎಂಬಂಥ ಬಗೆಯ ನಿಲವು ಅವರದು. ನಾನು ಕುವೆಂಪು ಅವರು ಶ್ರೇಷ್ಠಮಟ್ಟದ ಸೃಜನಶೀಲ ಸಾಹಿತಿ ಮತ್ತು ಶ್ರೇಷ್ಠಮಟ್ಟದ ವ್ಯಕ್ತಿತ್ವ ಉಳ್ಳವರು ಎಂಬುದನ್ನು ಒಪ್ಪಿಯೂ ಅವರ ಕಾವ್ಯದ ಶ್ರೇಷ್ಠತೆ ಡಾ. ಪ್ರಭುಶಂಕರ ಅವರು ಪ್ರಶಂಸಿಸುವಷ್ಟು ಮಟ್ಟದ ಸಿದ್ಧಿಯದಲ್ಲ ಎಂದು ಅನುಮಾನಿಸುವಂಥ, ಪ್ರಶ್ನಿಸುವಂಥ ನಿಲವನ್ನು ನನ್ನ ವಿಮರ್ಶೆಗಳಲ್ಲಿ ಆಗಾಗ ವ್ಯಕ್ತಪಡಿಸುತ್ತ ಬಂದವನು. ಈ ಕಾರಣದಿಂದಾಗಿ ನನ್ನ ವಿಷಯದಲ್ಲಿ ಸಲ್ಲದ ರೀತಿಯಲ್ಲಿ

ನಡೆದುಕೊಂಡವರುಂಟು. ಡಾ. ಪ್ರಭುಶಂಕರ ಅವರು ನನ್ನ ಸಾಹಿತ್ಯಕ ಅಭಿಪ್ರಾಯಗಳನ್ನು ಖಂಡಿಸಿ ಬರೆದದ್ದೂ ಉಂಟು. ನಾನು ಅವರ ಅಭಿಪ್ರಾಯಗಳನ್ನು ವಿಚಾರಗೋಷ್ಠಿಗಳಲ್ಲಿ ಪ್ರಶ್ನಿಸಿದ್ದೂ ಉಂಟು. ಆದರೆ, ಅವರು ನನ್ನೊಡನೆ ಎಂದೂ ಸಲ್ಲದ ರೀತಿಯಲ್ಲಿ ನಡೆದುಕೊಂಡದ್ದಿಲ್ಲ. ಅವರು ನನ್ನ ವಿಷಯದಲ್ಲಿ ತೋರುವ ಪ್ರೀತಿ, ವಿಶ್ವಾಸದಲ್ಲಿ ಕೊರತೆ ಮಾಡಿದ್ದೂ ಇಲ್ಲ. ಅಭಿಪ್ರಾಯಭೇದ ಇದ್ದಾಗಲೂ ಮನುಷ್ಯ ಸಂಬಂಧದ ಘನತೆಯನ್ನು ಹೇಗೆ ಉಳಿಸಿಕೊಳ್ಳಬಹುದೆಂಬುದನ್ನು ತಮ್ಮ ನಡೆವಳಿಕೆಯ ಮೂಲಕವೇ ತೋರಿಸಿಕೊಟ್ಟ ಹಿರಿಯರೆಂದೂ ನಾನು ಅವರನ್ನು ಗೌರವಿಸುತ್ತೇನೆ.

ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಪಿಎಚ್.ಡಿ. ಪದವಿ ಪಡೆದವರಲ್ಲಿ ಡಾ. ಪ್ರಭುಶಂಕರ ಅವರು ಮೊದಲಿಗರು. ಸೇವಾ ಹಿರಿತನ ಇದ್ದಾಗಲೂ ಸಲ್ಲಬೇಕಾದ ಬಡ್ತಿ, ಹುದ್ದೆಗಳು ಕಾರಣಾಂತರಗಳಿಂದ ಅವರಿಗೆ ಸಿಗಲಿಲ್ಲ. ಅವರು ಪ್ರಾಧ್ಯಾಪಕರಾದದ್ದೂ ಇತ್ತೀಚೆಗೆ-ಮೂರು ವರ್ಷಗಳ ಹಿಂದೆ. ಅದೂ ಪ್ರತಿಭಾ ಬಡ್ತಿ (Merit Promotion). ಸಲ್ಲಬೇಕಾದದ್ದು, ಸಲ್ಲಬಹುದಾದದ್ದು ತಪ್ಪಿಹೋದಾಗಲೂ ತಮ್ಮ ವಿದ್ಯಾರ್ಥಿಗಳಾಗಿದ್ದವರು' ತನಗಿಂತ ಮೇಲಿನ ಹುದ್ದೆಗಳ ಅವಕಾಶಗಳನ್ನು ಪಡೆಯುವಂತಾದಾಗಲೂ ಡಾ. ಪ್ರಭುಶಂಕರ ಅವರು ಮನಸ್ಸಿನ ನೆಮ್ಮದಿಯನ್ನು ಕೆಡಿಸಿಕೊಳ್ಳದೆ, ಸಿನಿಕತನ ತೋರಿಸದೆ ಅತ್ಯಂತ ಗಂಭೀರವಾಗಿ ನಡೆದುಕೊಂಡದ್ದನ್ನು ನಾವೆಲ್ಲ ಕಂಡಿದ್ದೇವೆ. ಸ್ವಭಾವತಃ ಹಾಸ್ಯಪ್ರಿಯರಾದ ಅವರು ಆ ಬಗ್ಗೆ ಕೇಳಿದವರನ್ನು ನಗುನಗುತ್ತಲೇ ನವಿರು ಹಾಸ್ಯ ಚಟಾಕಿಗಳಿಂದ ನಗಿಸುತ್ತಲೇ ಬಂದದ್ದನ್ನು ನೋಡಿದ್ದೇವೆ. ತಮಗೆ ನ್ಯಾಯವಾಗಿ ಸಲ್ಲದ ಸ್ಥಾನಮಾನಗಳಿಗಾಗಿ ಹಲುಬುವ, ಅದನ್ನು ಪಡೆಯಲು ಏನೆಲ್ಲವನ್ನೂ ಮಾಡುವ ಎಷ್ಟೋ ಜನರನ್ನು ಕಂಡವರಿಗೆ ಡಾ. ಪ್ರಭುಶಂಕರ ಅವರ ಮನೋಭಾವ ವಿಚಿತ್ರವಾಗಿ ಕಾಣಿಸಬಹುದಾದಂಥದು. ಆದರೆ, ನಾನು ಪಡೆಯುವ ಪದವಿ, ಹುದ್ದೆಗಳಿಗಿಂತ ಜೀವನಕಲೆ, ಹತ್ತು ಜನರ ಜೊತೆ ಸಂತೋಷದಿಂದ ಬಾಳುವ ಕಲೆ ದೊಡ್ಡದೆಂಬುದನ್ನು ನಡೆದು ತೋರಿಸಿದವರು ಡಾ. ಪ್ರಭುಶಂಕರ ಅವರು.

ಯಾವ ವಿಷಯಕ್ಕಾದರೂ ಸಾಮಾನ್ಯವಾಗಿ ನಾವೆಲ್ಲ ನೋಡುವ, ಬೆಲೆಕಟ್ಟುವ ರೀತಿಗಿಂತ ಬೇರೆಯಾದ ನಿರ್ಲಿಪ್ತ ಮುಖವೊಂದಿದೆ; ಅದೇ ವಿಷಯವನ್ನು ಹಾಸ್ಯದ ಕಣ್ಣಿನಿಂದ ನೋಡಿದಾಗ ಅದರ ಸಾಮಾನ್ಯತೆಯ ಅರಿವಾಗುತ್ತದೆ ಎಂಬುದನ್ನು ಅವರು ಬಲ್ಲವರು. ಅವರ ಹಾಸ್ಯಪ್ರವೃತ್ತಿ ಅವರ ವ್ಯಕ್ತಿತ್ವದ ಸಮತೋಲನವನ್ನು ಕಾಪಾಡಿದೆ. ಅದು ಅವರ ಜೊತೆ ಬಾಳುವವರ, ಒಡನಾಡುವವರ ಬದುಕನ್ನೂ ಸಂತೋಷದಾಯಕವಾಗಿಸಿದೆ. ಡಾ. ಪ್ರಭುಶಂಕರ ಅವರು ಇರುವಲ್ಲಿ ದುಗುಡ, ದುಮ್ಮಾನಗಳಿರುವುದಿಲ್ಲ, ಸಂತೋಷದ ಕಾರಂಜಿ ಪುಟಿಯುತ್ತಿರುತ್ತದೆ. ಅವರ ಬದುಕು ಕೊನೆಯವರೆಗೂ ಆ ಸುಖವನ್ನು ಉಳಿಸಿಕೊಳ್ಳುವಂತಾಗಲೆಂದು ಹಾರೈಸುತ್ತೇನೆ.

❖

# ನನ್ನ ಬಾಲ್ಯದ ಗುರುಗಳು
## (ಹರದನಹಳ್ಳಿ ವೆಂಕಟಪ್ಪ ಮೇಷ್ಟ್ರು)

*● ಡಾ॥ ಹೊ. ಶ್ರೀನಿವಾಸಯ್ಯ*

ಹರದನಹಳ್ಳಿ ವೆಂಕಟಪ್ಪ ಮೇಷ್ಟ್ರು ಬೆಂಗಳೂರು ಡಿಸ್ಟ್ರಿಕ್ ನಾರ್ಮಲ್ ಸ್ಕೂಲ್‌ನಲ್ಲಿ ತರಬೇತಿಗೆ ಬಂದಾಗ "ಕೂಸನ್ನು ಶಾಲೆಗೆ ಏಕೆ ಸೇರಿಸಿಲ್ಲ. ನಾನು ಜೊತೆಗೆ ಕರೆದುಕೊಂಡು ಹೋಗುತ್ತೀನಿ ಸೇರಿಸ್ತೀನಿ ಎಂದರು. ಆಗ ನಮ್ಮ ತಾಯಿ ಒಪ್ಪಿ, ಆರೋ, ಏಳೋ ವರ್ಷ ಇರಬೇಕು ನನ್ನನ್ನು ಡಿಸ್ಟ್ರಿಕ್ಟ್ ನಾರ್ಮಲ್ ಶಾಲೆಗೆ ಸೇರಿಸಿದರು. ನನ್ನನ್ನು 'ಕೂಸು' ಎಂದು ಕರೆಯುತ್ತಿದ್ದರು. ಮೇಷ್ಟ್ರು ಶಾಲೆಗೆ ಸೇರಿಸಿಕೊಳ್ಳುವಾಗ, ಹೆಸರೇನು ಬರೆದುಕೊಳ್ಳೋದು ಅಂತ ನಮ್ಮ ತಾಯಿಯನ್ನು ಕೇಳಿದರು. ಅವರು ಹೆಸರು ತಿರುಪತಿ ದೇವರ ಹೆಸರು. ಶ್ರೀನಿವಾಸ ಅಂತ. ಅದನ್ನೇ ಬರೆದುಕೊಳ್ಳಿ, ಅವರು ಶ್ರೀನಿವಾಸಗೌಡ, ಶ್ರೀನಿವಾಸಪ್ಪ, ಶ್ರೀನಿವಾಸಯ್ಯ ಈ ಮೂರೂ ಹೆಸರಲ್ಲಿ ಯಾವುದನ್ನ ಇಡಲಿ ಅಂತ ಹಪ್ಪಳದ ಸೀತಮ್ಮನನ್ನು ಕೇಳಿದಾಗ "ಶ್ರೀನಿವಾಸಯ್ಯ ಅಂತ ಇಡಿ. ಅವನೂ ಐಯ್ಯರ್ ಹಾಗೆ ಇದ್ದಾನೆ" ಎಂದರು. ಶ್ರೀನಿವಾಸ ಎಂತಲೇ ನನ್ನನ್ನು ಶಾಲೆಗೆ ಸೇರಿಸಿದರು.

ಹರದನಹಳ್ಳಿ ವೆಂಕಟಪ್ಪ ಮೇಷ್ಟ್ರು ಜೊತೆ ಎರಡು ವರ್ಷ ಶಾಲೆಗೆ ಹೋಗಿ ಬರುತ್ತಿದ್ದೆ. ಅನಂತರ ಸ್ನೇಹಿತರ ಜೊತೆ ಹೋಗುವ ಅಭ್ಯಾಸವಾಯಿತು. ವಿದ್ಯಾವಂತನಾಗಲು ನಮ್ಮ ತಂದೆ ಪಾಠ ಹೇಳಲು ಪ್ರಾರಂಭಿಸಿದರು. ಶೇಷಾದ್ರಿಪುರದಲ್ಲಿದ್ದ ನಂಜಪ್ಪನವರ ಮನೆಗೆ ಸಂಜೆ ಪಾಠಕ್ಕೆ ಹೋಗುತ್ತಿದ್ದೆ. ಮಲ್ಲೇಶ್ವರದಿಂದ ಶೇಷಾದ್ರಿಪುರಕ್ಕೆ ಹೋಗಬೇಕಾದ್ರೆ ಆಗ ಎರಡು ಕಡೆಯೂ ತೋಟ. ಒಂದು ಕಡೆ ಹುಲ್ಲುಗಾವಲು. ಚಿಕ್ಕವನಾದ ನನಗೆ ರಾತ್ರಿ ಹೊತ್ತು ಹೋಗಲು ಹೆದರಿಕೆ. ಕತ್ತಲಾದರೆ ಜನರಿಗೆ ಬದಲು ನಾಯಿ ಕೂಗು. ಒಂದೆರಡು ವರ್ಷ ಪಾಠಕ್ಕೆ ಹೋದಮೇಲೆ, ಒಂದು ದಿವಸ ರಾತ್ರಿ ಬರುವಾಗ ತೋಟದಲ್ಲಿ ಏನೋ ಕಂಡಂತೆ ಹೆದರಿ ಮನೆಗೆ ಅಳುತ್ತಾ ಬಂದೆ. ಜ್ವರವೂ ಬಂತು. ನಮ್ಮ ತಾಯಿ "ಹುಡುಗ ಹೆದರಿದ್ದಾನೆ. ಪಾಠ ಕಲೀದಿದ್ರು ಚಿಂತೆಯಿಲ್ಲ. ಶೇಷಾದ್ರಿಪುರಕ್ಕೆ ಪಾಠಕ್ಕೆ ಹೋಗಬೇಕಾದುದಲ್ಲ" ಎಂದರು.

ಡಿಸ್ಟ್ರಿಕ್ಟ್ ನಾರ್ಮಲ್ ಶಾಲೆಗೆ ಆಗ ಎಂ.ಎಲ್. ಶ್ರೀನಿವಾಸಮೂರ್ತಿ ಮುಖ್ಯೋಪಾಧ್ಯಾಯರು. ಎತ್ತರವಾದ ಮನುಷ್ಯ, ಜರತಾರಿ ಪೇಟ. ಉಪಾಧ್ಯಾಯರ ತರಬೇತಿ ಕ್ಷೇತ್ರವಾದ್ದರಿಂದ ಶಾಲೆಯಲ್ಲಿ ಒಳ್ಳೆಯ ಶಿಕ್ಷಣ ದೊರೆಯುತ್ತಿತ್ತು. ಆಗಾಗ ತೋಟದಲ್ಲಿ ಕೆಲಸ ಮಾಡಿ ತರಕಾರಿ ಬೆಳೆಯುವುದನ್ನೆ

ಹೇಳಿ ಕೊಡುತ್ತಿದ್ದರು. ಆಗಿನ ಡಿಸ್ಟ್ರಿಕ್ಟ್ ನಾರ್ಮಲ್ ಶಾಲೆ ಈಗ ಪಟಂಕರ್ ಭವನ. ಅದೇ ಕಾಂಪೌಂಡ್. ನಾನು ನಾಲ್ಕನೇ ತರಗತಿಗೆ ಬಂದಾಗ ಕಾರ್‌ಷೆಡ್ಡಿನಲ್ಲಿ ತರಗತಿ ನಡೆಯುತ್ತಿತ್ತು. ನಾನು ತರಗತಿಯಲ್ಲಿ ಯಾವಾಗಲೂ ಮೊದಲನೆಯ ಅಥವಾ ಎರಡನೆಯವನು. ನಾಲ್ಕು ವರ್ಷದ ನಂತರ ಮಲ್ಲೇಶ್ವರ ಬಾಯ್ಸ್ ಮಿಡ್ಲ್ ಸ್ಕೂಲ್ ಸೇರಿದೆ. ಆಗ ಮಲ್ಲೇಶ್ವರದಲ್ಲಿ ಯಾವ ಖಾಸಗಿ ಶಾಲೆಯೂ ಇರಲಿಲ್ಲ. ನನಗಂತೂ ಜ್ಞಾಪಕವಿಲ್ಲ. ಮಲ್ಲೇಶ್ವರಂ ಮಿಡ್ಲ್‌ಸ್ಕೂಲ್‌ನಲ್ಲಿ ಎಲ್. ಸ್ವಾಮಿರಾವ್ ಮುಖ್ಯೋಪಾಧ್ಯಾಯರು. ಇವರು ಒಳ್ಳೆಯ ಶಿಸ್ತಿನ ಸಿಪಾಯಿ. ಅವರನ್ನ ಕಂಡರೆ ಎಲ್ಲರಿಗೂ ಭಯ. ಕುಳ್ಳನೆಯ ವ್ಯಕ್ತಿ, ಪ್ಯಾಂಟ್, ಕ್ಲೋಸ್ ಕಾಲರ್ ಕೋಟ್, ಪೇಟ ಹಾಕುತ್ತಿದ್ದರು. ಮನೆಯಿಂದ ಬರಬೇಕಾದರೆ ಬಿಳಿಯ ಛತ್ರಿ ಹಿಡಿದುಕೊಂಡು ಹೊರಟರೆ ಸೀದಾ ಶಾಲಾ ವೇಳೆಗೆ ಸರಿಯಾಗಿ ಬರುತ್ತಿದ್ದರು. ಹೊತ್ತಾಗಿ ಬಂದವರಿಗೆ ಬೆತ್ತದ ಏಟು. ಮುಖವನ್ನೇ ನೋಡ್ತಿರಲಿಲ್ಲ.

ಶಾಲೆಯ ಸುತ್ತಲೂ ಗಸ್ತು ತಿರುಗುವುದು ಅವರ ಒಂದು ಕೆಲಸ. ಅಕಸ್ಮಾತ್ತಾಗಿ ಹುಡುಗರು ಹೊತ್ತಾಗಿ ಬಂದರೆ, ಅಥವಾ ಕಾಂಪೌಂಡಿನಲ್ಲಿ ಅಶುಚಿ ಮಾಡಿದರೆ ಏಟು ಗ್ಯಾರಂಟಿ. ಕೈಯಲ್ಲಿ ಯಾವಾಗಲೂ ಬೆತ್ತ, ಭಲೇ ಚುರುಕು. ನಾನು ಎರಡು ಸಾರಿ ಏಟು ತಿಂದಿದ್ದೀನಿ. ಒಮ್ಮೆ ಉಪಾಧ್ಯಾಯರಿಗೆ ಕರಿಬೇವಿನ ಸೊಪ್ಪು ತೆಗೆದುಕೊಂಡು ಹೋಗುತ್ತಿದ್ದೆ. ಅಡ್ಡ ಸಿಕ್ಕಿದರು ಸ್ಕೂಲಾಚೆ ಏಕೆ ಹೋಗಿದ್ದೆ ಅಂತ ಕೇಳಿದರು. ಮೇಷ್ಟ್ರು ಮೇಲೆ ಚಾಡಿ ಹೇಳದೆ, ಮನೇಗೆ ಹೋಗಿದ್ದೆ ಅಂದಾಗ ಎರಡು ಕೈಗೂ ಬೆತ್ತದ ಸೇವೆ ನಡೀತು. ಇವರು ಪ್ರಸಿದ್ಧರೂ ಇಂಗ್ಲಿಷ್ ಪ್ರಾಧ್ಯಾಪಕರೂ ವಿಮರ್ಶಕರೂ ಆಗಿರುವ ಎಲ್.ಎಸ್. ಶೇಷಗಿರಿರಾವ್ ಅವರ ತಂದೆ. ನಾನು ಒಂದನೆಯ ತರಗತಿಯಿಂದಲೂ ಪ್ರಥಮ ರ್‍ಯಾಂಕ್. ಮಿಡ್ಲ್‌ಸ್ಕೂಲಿನಲ್ಲಿ ಎರಡನೇ ವರ್ಷ ಸ್ಕಾಲರ್‌ಷಿಪ್ ಕೊಡುತ್ತಿದ್ದರು. ಅದನ್ನು ಗಿಟ್ಟಿಸಿದೆ. ಆಗಿನ ಸ್ಕಾಲರ್‌ಷಿಪ್ ಮೂರು ರೂಪಾಯಿ.

ಪ್ರತಿ ತಿಂಗಳು ಡಿಬೇಂಟಿಂಗ್ ಸೊಸೈಟಿ ಆಶ್ರಯದಲ್ಲಿ ಡಿಬೇಟ್ ನಡೆಯುತ್ತಿತ್ತು. ನಾನು ಒಂದು ವರ್ಷ ಭಾಗವಹಿಸಿ ಮೆಚ್ಚುಗೆ ಬಹುಮಾನ ಪಡೆದೆ. ನನಗೆ ಬಹಳ ಮೆಚ್ಚುಗೆ ಆದ ಉಪಾಧ್ಯಾಯರು ಅಂದರೆ ನರಸಿಂಹಮೂರ್ತಿ. ಇವರು ಮಿಡ್ಲ್‌ಸ್ಕೂಲ್ ಮೂರನೆಯ ತರಗತಿಯ ಉಪಾಧ್ಯಾಯರು. ಕುಳ್ಳನೆ ಮನುಷ್ಯ. ಅವರು ನಿಧಾನವಾಗಿ, ಚೆನ್ನಾಗಿ ಪಾಠ ಮಾಡುತ್ತಿದ್ದರು. ಈಗಲೂ ದಾರೀಲಿ ಸಿಕ್ಕಿದಾಗ ಮಾತನಾಡಿಸದೆ ಹೋಗುವುದಿಲ್ಲ. ಯಾವಾಗಲೂ ನಗುಮುಖ. ಗೋಪಾಲಯ್ಯ, ಮಿಡಲ್ ಸ್ಕೂಲಿನ ನಾಲ್ಕನೆಯ ತರಗತಿಗೆ ಪಾಠ ಮಾಡುತ್ತಿದ್ದರು. ಅವರನ್ನು ಕಂಡರೆ ಹುಡುಗರಿಗೆಲ್ಲ ಹೆದರಿಕೆ. ಸಿಕ್ಕಾಪಟ್ಟೆ ಬಾಯಿಗೆ ಬಂದಂತೆ ಬೈಯುತ್ತಿದ್ದರು. ಮುಕ್ಕಾಲು ಗಂಟೇಲಿ ಪಾಠ ಮುಗಿಸಿ, ಕೊನೆ ಹದಿನೈದು ನಿಮಿಷ ಕಥೆ ಹೇಳುತ್ತಿದ್ದರು. ಅದೇ ಸ್ವಾರಸ್ಯ. ಕಡೆ ಕಡೆಗೆ ಒಂದೇ ಕತೆಯನ್ನು ವರ್ಷವೆಲ್ಲಾ ಹೇಳುತ್ತಿದ್ದರು.

ನಮ್ಮ ಸಂಸ್ಕೃತ ಮೇಷ್ಟ್ರು ಬಹಳ ಹಳೆಯ ಕಾಲದವರು. ಅವರದು ಮಡಿವಂತಿಕೆ.

ಕಚ್ಚೆಪಂಚೆ, ಮೇಲೊಂದು ಶಾಲು ಮತ್ತು ವಲ್ಲಿ ಸೊಗಸಾದ ಪಿಳಿಜುಟ್ಟು, ಮೈತುಂಬ ಗಂಧದ ಮುದ್ರೆ. ತರಗತೀಲಿ ಯಾರಾದರೂ ಗಲಾಟೆ ಮಾಡಿದರೆ, ಸಣ್ಣಕಡ್ಡಿಯನ್ನು ಜೋರಾಗಿ ಎಸೆಯುತ್ತಿದ್ದರು. ಅದನ್ನ ಎಲ್ಲರೂ ರಾಮಬಾಣ ಎನ್ನುತ್ತಿದ್ದೆವು. ಅವರು ಬಂದರೆ ರಾಮಬಾಣ ಬರುತ್ತಿದೆ ಎನ್ನುತ್ತಿದ್ದರು. ಹುಡುಗರೆಲ್ಲ ಸೇರೋದಂದ್ರೆ ಸರಸ್ವತಿ ಪೂಜೆಗೆ. ವರ್ಷದ ಕಡೇಲಿ ಸರಸ್ವತಿ ಪೂಜೆ. ಅದಕ್ಕೆ ನಾಲ್ಕಾಣೆ ಅಥವಾ ಎಂಟಾಣೆ ಕೊಡುತ್ತಿದ್ದೆವು. ಆ ದಿನ ಸರಸ್ವತಿ ಪೂಜೆ ಮಾಡಿ ಎಲ್ಲರಿಗೂ ಏನಾದರೂ ತಿಂಡಿ ಕೊಡುವುದು ರೂಢಿ. ಮುಖ್ಯೋಪಾಧ್ಯಾಯರು ಹುಡುಗರನ್ನ ಉದ್ದೇಶಿಸಿ ಮಾತಾಡುತ್ತಿದ್ದರು. ಕೆಲವರು ಹಾಡುತ್ತಿದ್ದರು. ನಾಟಕ ಆಡಿದ ಜ್ಞಾಪಕ ಉಂಟು.

ನನ್ನ ಶಾಲೆಯ ಉಡುಪು ಒಂದು ನಿಕ್ಕರ್, ಮೇಲೊಂದು ಅಂಗಿ. ಅದರ ಮೇಲೊಂದು ಕೋಟು. ಕೋಟಿಲ್ಲದೆ ಶಾಲೆಗೆ ಹೋಗುತ್ತಿದ್ದುದು ಕಡಿಮೆ. ಜೊತೆಗೆ ತಲೆ ಮೇಲೆ ಟೋಪಿ. ಜುಟ್ಟು ಮಾತ್ರ ನನಗೆ ಬಲವಾಗಿತ್ತು. ಅನೇಕ ಸಲ ಜಡೆ ಹಾಕುತ್ತಿದ್ದುದು ಉಂಟು. ಕಾಲೇಜಿಗೆ ಬಂದಮೇಲೆ ಗಂಟು ಹಾಕಲು ಪ್ರಾರಂಭಿಸಿದೆ. ನಮ್ಮ ತಾಯಿ ಮಲ್ಲಿಗೆ ಮೊಗ್ಗಿನ ಕಾಲದಲ್ಲಿ ಹೂವಿನ ಜಡೆಹಾಕುತ್ತಿದ್ದರು. ಹಣೆ ಮೇಲೆ ಒಂದು ಸಾಧು ಕಪ್ಪುಬಣ್ಣ ಚಿಕ್ಕೆ. ಹಣೆಯ ಮೇಲೆ ಅದನ್ನು ಹಾಕಿಕೊಳ್ಳದೆ ಆಚೆಗೆ ಹೋಗುವಂತಿರಲಿಲ್ಲ. ಕಿವಿಗೆ ಚಿನ್ನದ ಎರಡು ತಟ್ಟು. ಬೆಳ್ಳಿ ಉಡುದಾರ. ಶನಿವಾರ ಬಂದರೆ ಎಣ್ಣೆನೀರು ಹಾಕಿಕೊಂಡು ಸ್ನಾನಮಾಡಿ ಶಾಲೆಗೆ ಹೋಗುತ್ತಿದ್ದುದು. ಹಣೆ ಮೇಲೆ ಆ ದಿನ ಮೂರು ನಾಮ, ನಾವು ತಿರುಪತಿಯ ಒಕ್ಕಲಾದ್ದರಿಂದ.

**ಸ್ಕಾಲರ್‌ಶಿಪ್:**

ನಾನು ನಮ್ಮ ತಂದೆಯನ್ನು ಕಳೆದುಕೊಂಡಾಗ ಮಿಡಲ್‌ಸ್ಕೂಲ್ ೩ನೇ ತರಗತಿ ಓದುತ್ತಿದ್ದೆ. ಮೊದಲಿನಿಂದಲೂ ಪ್ರಥಮ ರ್‍ಯಾಂಕ್ ಪಡೆಯುತ್ತಿದ್ದೆ. ಮಿಡಲ್‌ಸ್ಕೂಲಿನಲ್ಲಿ ಮೂರು ರೂ. ಸ್ಕಾಲರ್‌ಷಿಪ್ ಕೊಡುತ್ತಿದ್ದರು. ಅದನ್ನು ಪಡೆಯುವುದು ಗೊತ್ತಿರಲಿಲ್ಲ. ನಮ್ಮನೇಲಿ ಬಾಡಿಗೆಗಿದ್ದ ಕೃಷ್ಣಸ್ವಾಮಿರಾವ್ ವಿಚಾರ ತಿಳಿದು ಸ್ಕಾಲರ್‌ಷಿಪ್ ಕಮಿಟಿಯ ಅಧ್ಯಕ್ಷರಾದ ಶ್ರೀ ಬಾಲಕೃಷ್ಣ ಅಯ್ಯನವರ ಬಳಿಗೆ ಕರೆದುಕೊಂಡು ಹೋದರು. ಅದೇ ಮೊದಲ ಸಾರಿ ಅಂತ ಕಾಣುತ್ತೆ ನಾನು ಪೇಟೆಗೆ ಹೋಗಿದ್ದು. ಕೃಷ್ಣಸ್ವಾಮಿರಾವ್, ಆರ್‌ಕೆಎಸ್ ಮಿಡಲ್‌ಸ್ಕೂಲ್‌ನಲ್ಲಿ ಮುಖ್ಯೋಪಾಧ್ಯಾಯರಾಗಿದ್ದರು. ದಾರೀಲಿ ಹೋಗುತ್ತಲೇ ತಿಂಡಿ ಕಾಫಿ ಕೊಡಿಸಿ. ಬಾಲಕೃಷ್ಣ ರೂಮಿನಲ್ಲಿ ಬಿಟ್ಟರು. ರೂಮಿಗೆ ಹೋಗುತ್ತಲೇ ನನಗೆ ಗಾಬರಿ. ಯಾವತ್ತಾದರೂ ನೋಡಿದರೆ ತಾನೆ. ಬಾಲಕೃಷ್ಣಯ್ಯನವರು ಬಂದ ತಕ್ಷಣ 'ಏನು ಬೇಕು ಮಗು' ಅಂತ ಕೇಳಿದರು. ಕೃಷ್ಣಸ್ವಾಮಿರಾವ್, ಹೇಳಬೇಕಾದ ವಿಚಾರ ಒಂದು ಚೀಟಿಯಲ್ಲಿ ಬರೆದಿದ್ದರು. ಅದನ್ನು ಅವರ ಕೈಲಿ ಕೊಟ್ಟೆ. ಚೀಟಿ ನೋಡಿದರು. "ನೀನು ಹೊನ್ನಪ್ಪನ ಮಗನೆ. ನಿಮ್ಮ ತಂದೆ ತೀರಿಕೊಂಡರೆ?" ಅಂತ ಕೇಳಿದರು. ನನಗೆ ಕಣ್ಣೀರು ಬಂತು. ಗಟ್ಟಿಯಾಗಿ ಅಳಲು ಪ್ರಾರಂಭಿಸಿದೆ. ದುಃಖ ತಡೆಯಲಿಕ್ಕಾಗಲಿಲ್ಲ. ಬಾಲಕೃಷ್ಣಯ್ಯ ನನ್ನ ಬೆನ್ನುತಟ್ಟಿ ಅಳಬೇಡ. ನಿನಗೆ ಸ್ಕಾಲರ್‌ಷಿಪ್ ಮಾಡಿಸಿ ಕೊಡುತ್ತೇನೆ. ಮನೆಗೆ ಹೋಗು ಎಂದರು. ನಾನು ಅಳುತ್ತಲೇ ಹೊರಗಡೆ ನಿಂತಿದ್ದ

ಕೃಷ್ಣಸ್ವಾಮಿರಾವ್‌ರವರಿಗೆ ನಡೆದ ವಿಷಯ ಹೇಳಿದೆ. ಅವರು ಸಮಾಧಾನ ಮಾಡಿ ಮನೆಗೆ ಕರೆದುಕೊಂಡು ಬಂದು ಬಿಟ್ಟರು. ಆ ವರ್ಷದಿಂದ ಸ್ಕಾಲರ್‌ಷಿಪ್ ಬರಲು ಪ್ರಾರಂಭವಾಯಿತು."

**ಸಂಸ್ಕೃತದ ಒಲವು:**

ಮಾಧ್ಯಮಿಕ ಶಾಲೆಯಲ್ಲಿ ಓದುವವರೆಗೂ ನಾನೇ ಮೊದಲನೆಯವನು. ಒಂದು ಪಕ್ಷ ತಪ್ಪಿದರೆ ಎರಡನೆಯ ರ್‍ಯಾಂಕ್ ಪಡೀತಿದ್ದೆ. ಎರಡನೇ ವರ್ಷ ಸಂಸ್ಕೃತ ಓದಲು ತೊಡಗಿದೆ. ದೇಶಾಭಿಮಾನ ಆಗಲೇ ಹುಟ್ಟಿತ್ತು. ಹಿಂದಿ ಪ್ರಥಮ, ಮಾಧ್ಯಮ ಪರೀಕ್ಷೆಗಳನ್ನು ರಾಷ್ಟ್ರಭಾಷಾ ಪರೀಕ್ಷೆಗೆ ಕುಳಿತುಕೊಳ್ಳಬೇಕಿತ್ತು. ಆಗ ಹಿಂದಿಗೆ ಬಹಳ ಪ್ರಾಮುಖ್ಯತೆ. ಚಿಕ್ಕ ಹುಡುಗರಾದರೂ ನಮ್ಮ ಮಾತುಗಳಲ್ಲಿ ಹಿಂದಿ ಮಾತುಗಳನ್ನು ಸೇರಿಸುತ್ತಿದ್ದೆವು. ಮನೆಯಲ್ಲಿ ತಿಮ್ಮೇಗೌಡ ಮತ್ತು ದೇವಣ್ಣನವರು ನಮ್ಮ ಜೊತೆ ಓದಿಕೊಂಡಿದ್ದು ನಮಗೂ ಪಾಠ ಹೇಳಿ ಕೊಡುತ್ತಿದ್ದರು. ನಮ್ಮ ವಠಾರದಲ್ಲಿದ್ದ ಇಬ್ಬರು ಹುಡುಗರನ್ನು ಜೊತೆಗೆ ಸೇರಿಸಿದ್ದರು. ಒಂದು ವಾರ ತಮಾಷೆಗೆ ಫೂಲ್‌ಸ್ಕ್ಯಾಪ್ ಅಂತ ಒಂದು ಕಾಗದದಲ್ಲಿ ಟೋಪಿ ಮಾಡಿ ನನಗೆ ಹಾಕಿದ್ದರು. ನಾನು ಚೆನ್ನಾಗಿ ಭರೆದಿದ್ದೀನಿ ನನಗೇಕೆ ಹಾಕಿದಿರಿ ಅಂತ ಅತ್ತೆ. ಅದಕ್ಕೆ ಕಾಪಿ ಬರೆ. ಹತ್ತು ಸಾರಿ ಅಂತ ಹೇಳಿ ಒಂದೆರೆಡು ಪುಟಗಳನ್ನು ಕೊಟ್ಟರು. ನಾನು ಇಷ್ಟು ಚೆನ್ನಾಗಿ ಓದಿದರೂ, ಬರೆದರೂ, ಕಾಪಿ ಬರೆಯೋ ಶಿಕ್ಷೆ ಕೊಟ್ಟರಲ್ಲ ಅಂತ ಸಿಟ್ಟಿನಿಂದ ಹತ್ತು ಪೇಜು ಗೀಚಿದೆ. ಮೇಷ್ಟ್ರಿಗೆ ಸಿಟ್ಟು ಬಂತು. ಸೊನ್ನೆ ನಂಬರ್ ಕೊಟ್ಟರು. ಅಲ್ಲದೆ, ಊಟಕ್ಕೆ ಹಾಕಬೇಡಿ ಅಂತ ತಾಯಿಗೆ ಹೇಳಿದರು. ನಾನು ಅಳುತ್ತಾ ನಿಂತೆ. ನಮ್ಮ ಭಾವನವರಿಗೆ ಏನು ಸಿಟ್ಟು ಬಂತೊ ತಿಳಿಯದು. ಆಫೀಸಿಗೆ ಹೊರಡುವ ವೇಳೆ ಅಳುತ್ತಾ ನಿಂತಿದ್ದ ನನಗೆ, ಹೀಗೆಯೇನೋ ಕಾಪಿ ಬರೆಯೋದು ಎಂದು ಮೂಲೇಲಿದ್ದ ಬೆತ್ತ ತಗೊಂಡು ಹೊಡೆಯಲು ಬಂದರು. ನಾನು ತಪ್ಪಿಸಿಕೊಂಡು ಓಡಲು ಪ್ರಯತ್ನಿಸಿದೆ. ಮೇಷ್ಟ್ರು ಅಡ್ಡ ಹಾಕಿದರು. ಕೋಲಿನೇಟು ಬಲವಾಗಿ ಬಿತ್ತು. ಕೆನ್ನೆ ಮೇಲೆ ಬರೆ ಬಿತ್ತು. ಜೋರಾಗಿ ಅತ್ತೆ. ತಾಯಿಯವರು ಮನೆ ಒಳಗಿಂದ ಬಂದು, ಮಕ್ಕಳನ್ನು ಹೀಗೆ ಹೊಡೆಯಬಾರದು ಅಂತ ಹೇಳಿ ಅಡಿಗೆ ಮನೆಗೆ ಕರೆದುಕೊಂಡು ಹೋದರು. ತಲೆ ಸವರಿ, ಊಟಮಾಡಿಸಿ ಶ್ರೀನಿವಾಸನೂ ದೊಡ್ಡವರ ಮೇಲೆ ಹೀಗೆ ಕೋಪ ಮಾಡಬಾರದು. ಓದಿ, ಬರೆದು ಬುದ್ಧಿವಂತನಾಗಬೇಕು. ನನಗಂತೂ ವಿದ್ಯೆಯಿಲ್ಲ. ನೀನೂ ಹೀಗಾದರೆ ಹೇಗಪ್ಪಾ ಅಂದರು. ನಾನು ಅಳು ತಡೆಯಲಾರದೆ, ಅತ್ತೆ. ಮುಖ ಒರೆಸಿ, ಹಣೆಗೆ ನಾಮವಿಟ್ಟು ತಾಯಿಯವರು ಅಳುತ್ತ ಶಾಲೆಗೆ ಕಳಿಸಿದರು.

**ಶಾಲೆ:**

ಮಾಧ್ಯಮಿಕ ಶಾಲೆಯಲ್ಲಿ ಕನ್ನಡವೇ ಮಾಧ್ಯಮ. ಸಂಸ್ಕೃತ ಐಚ್ಛಿಕ ಭಾಷೆ. ಹೈಸ್ಕೂಲಿಗೆ ಬಂದಾಗ ಇಂಗ್ಲಿಷ್ ಹಾಗೂ ಕನ್ನಡ ಮಾಧ್ಯಮ ಎರಡೂ ಇತ್ತು. ಲೋಯರ್ ಸೆಕೆಂಡರಿ ಪರೀಕ್ಷೇಲಿ ಪ್ರಥಮ ದರ್ಜೇಲಿ ಪಾಸಾಗಿದ್ದರೂ ಕನ್ನಡ ಮಾಧ್ಯಮವನ್ನೇ ಪಡೆದೆ. ಮಲ್ಲೇಶ್ವರಂ ಹೈಸ್ಕೂಲಿನಲ್ಲಿ ಆಗ ನಾಲ್ಕನೇ ಫಾರಂ ನಾಲ್ಕು ವಿಭಾಗ. ಮೊದಲನೆ 'ಎ' ತರಗತಿ ಇಂಗ್ಲಿಷ್ ಮಾಧ್ಯಮ. ಮಿಕ್ಕ ಮೂರು ಕನ್ನಡ. ಅದರಲ್ಲಿ 'ಡಿ' ವಿಭಾಗದವರು ಹುಡುಗಿಯರು ೨೬,

ಹುಡುಗರು ೨೦. ಅವರಲ್ಲಿ ನಾನೂ ಒಬ್ಬ. ಮಾಧ್ಯಮಿಕ ಶಾಲೆಯಿಂದ ಹೈಸ್ಕೂಲಿಗೆ ಹೋಗಬೇಕಾದರೆ ಗಂಡು ಹುಡುಗರು ಪಂಚೆ, ಕೋಟು ಟೋಪಿ ಹಾಕುತ್ತಿದ್ದರು. ಚಡ್ಡಿ ಹಾಕ್ಕೊಂಡರೆ ಚಿಕ್ಕೋರು. ಹೆಣ್ಣು ಮಕ್ಕಳಾದರೆ ಹೈಸ್ಕೂಲಿನಲ್ಲಿ ಸೀರೆ ಉಡಬೇಕು. ತರಗತೀಲಿ ಒಂದು ಕಡೆ ಹೆಣ್ಣುಮಕ್ಕಳು, ಒಂದು ಕಡೆ ಗಂಡು ಹುಡುಗರು. ಪಾಠ ಪ್ರಚನದಲ್ಲಿ ಪೈಪೋಟಿ ಇದ್ದೇ ಇತ್ತು. ನಾನು ಯಾವಾಗಲೂ ಮೊದಲನೆ ಬೆಂಚು. ಹೆಣ್ಣುಮಕ್ಕಳನ್ನ ಕಂಡರೆ ಸ್ವಲ್ಪ ನಾಚಿಕೆ. ನನ್ನ ಸ್ನೇಹಿತರಾದ ರಾಮು, ಕೃಷ್ಣಮೂರ್ತಿ ಇವರೆಲ್ಲರೂ ಹುಡುಗಿಯರನ್ನು ಮಾತಾಡಿಸಿದರೂ ನಾನು ಯಾರನ್ನೂ ಮಾತಾಡಿಸುತ್ತಿರಲಿಲ್ಲ. ದೂರ ಸರೀತಿದ್ದೆ. ಹೆಣ್ಣುಮಕ್ಕಳು ತರುತ್ತಿದ್ದ ಡಬ್ಬಿಯಲ್ಲಿ ಎಷ್ಟೋಜನ ಕಾಸು ಕದಿಯೋರು. ಕನ್ನಡ ಮಾಧ್ಯಮವಾದ್ದರಿಂದ ಲೆಕ್ಕದಲ್ಲಿ ವಿಜ್ಞಾನದಲ್ಲಿ ನಾನು ಯಾವಾಗಲೂ ಮುಂದು. ಸುಬ್ಬಣ್ಣಾಚಾರ್‌ರವರು ಬರೆದ ಅಂಕಗಣಿತ ಇತ್ತು. ಉಪಾಧ್ಯಾಯರು ಪಾಠ ಮಾಡ್ಲೋಕೆ ಮುಂಚೆ ಲೆಕ್ಕ ಮಾಡಿಕೊಂಡು ಹೋಗುತ್ತಿದ್ದೆ. ಅಂಕಗಣಿತ, ಬೀಜಗಣಿತ, ರೇಖಾಗಣಿತ, ಎಲ್ಲದರಲ್ಲೂ ಲೆಕ್ಕ ಮಾಡಿಕೊಂಡು ಹೋಗುತ್ತಿದ್ದೆ. ಅಂಕಗಣಿತ, ಬೀಜಗಣಿತ, ರೇಖಾಗಣಿತ, ಎಲ್ಲದರಲ್ಲೂ ನನಗೆ ಆಸಕ್ತಿ. ಅನೇಕರು ನನ್ನ ಪುಸ್ತಕದಿಂದ ಕಾಪಿ ಮಾಡುತ್ತಿದ್ದರು.

ಒಂದು ಸಾರಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಬಯಲಾಯಿತು. ನನ್ನ ಸ್ನೇಹಿತರು ಬಂದು ಉತ್ತರ ಬರೆದುಕೊಡು ಅಂದರು. ಬರೆದುಕೊಟ್ಟೆ. ಪರೀಕ್ಷೇಲಿ ಕುಳಿತಾಗ ನೋಡಿದೆ. ನಾನು ಉತ್ತರ ಬರೆದುಕೊಟ್ಟ ಅದೇ ಪ್ರಶ್ನೆ ಪತ್ರಿಕೆ. ನನಗೇ ಆಶ್ಚರ್ಯವಾಯಿತು. ಆದರೆ ಪ್ರಶ್ನೆಪತ್ರಿಕೆಯಲ್ಲಿದ್ದ ರೇಖಾಗಣಿತದ ಪ್ರಮೇಯ ಹತ್ತು ಅನ್ನುವ ಬದಲು ಹನ್ನೊಂದು ಎಂತಲೂ, ಹದಿನೈದು, ಹದಿನಾರು ಅಂತ ಬರೆದಕೊಂಡು ಬಂದಿದ್ದರು. ಸುಮಾರು ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೇಲಿ ಕೊಟ್ಟ ಪ್ರಶ್ನೆ ಪತ್ರಿಕೆಯನ್ನು ಪೂರ್ಣ ಓದದೆ, ಬಾಯಿಪಾಠ ಮಾಡಿದ್ದನ್ನು ಮೊದಲಿನಿಂದ ಕೊನೆಯವರೆಗೂ ಬರೆದರು. ಅದರಲ್ಲಿ ಸರಿಯಾಗಿ ಬರೆದಿದ್ದವರಲ್ಲಿ ಮೂರೋ ನಾಲ್ಕೋ ಮಂದಿ ಅಷ್ಟೆ. ಅದರಲ್ಲಿ ನಾನೂ ಒಬ್ಬ. ಪರೀಕ್ಷೆಯಿಂದ ಹೊರಗೆ ಬಂದಾಗ ಎಲ್ಲರೂ ನೂರಕ್ಕೆ ನೂರು ಬರುತ್ತೆ ಅನ್ನೋರೇ ಹೆಚ್ಚು. ಕಡೆಗೆ ನಾನು ಎರಡು ಪ್ರಶ್ನೆ ಬಂದಿಲ್ಲ ಅಂತ ಹೇಳಿದಾಗ ಕೆಲವರಿಗೆ ಬೇಸರವಾಯಿತು. ಆದರೆ ಗಣಿತದ ಉಪಾಧ್ಯಾಯರಿಗೆ ಪ್ರಶ್ನೆಪತ್ರಿಕೆ ಹೇಗೆ ಬಯಲಾಯಿತು ಅನ್ನೋದು ಸಮಸ್ಯೆಯಾಗಿತ್ತು. ಸರಿಯಾಗಿ ಬರೆದವರಿಗೆ ಹೆಚ್ಚು ಅಂಕಗಳನ್ನು ಕೊಟ್ಟು ಉಳಿದವರನ್ನು ತೇರ್ಗಡೆ ಮಾಡಿದ್ದರು ಅಷ್ಟೆ.

ಗಣಿತದಲ್ಲಿ ಒಂದು ಸಾರಿ ನನಗೆ ೯೮ ಅಂಕ ಹಾಗೂ ಕಾಮಾಕ್ಷಮ್ಮ ಎಂಬ ಹುಡುಗೀಗೆ ನೂರಕ್ಕೆ ನೂರು ಅಂಕ ಕೊಟ್ಟಿದ್ದರು. ನಾನು ಉಪಾಧ್ಯಾಯರನ್ನ ಪ್ರಶ್ನಿಸಿದೆ. ಯಾವ ಲೆಕ್ಕ ತಪ್ಪು ಹೇಳಿ. ನನಗೂ ನೂರಕ್ಕೆ ನೂರು ಕೊಡಿ ಅಂತ ಕೇಳಿದೆ. ನನ್ನ ಉತ್ತರ ಪತ್ರಿಕೆ ಆ ಹುಡುಗಿ ಉತ್ತರ ಪತ್ರಿಕೆ ತೆಗೆದು ತೋರಿಸಿದರು. ಅಕ್ಷರಕ್ಕೆ ಮೂರು ನಂಬರ್ ನನಗೆ, ಆಕೆಗೆ ಐದು ನಂಬರ್ ಕೊಟ್ಟಿದ್ದರು. ಇದರಿಂದ ಎರಡು ನಂಬರ್ ಕಳೆದುಕೊಂಡಿದ್ದೆನು. ಉಪಾಧ್ಯಾಯರಲ್ಲಿ ಜಗಳ ಆಡಿದೆ.

**ಖಾದಿ ಹಾಕಿದ್ದು:**

ಎಂ.ಆರ್. ಶ್ರೀನಿವಾಸಯ್ಯಂಗಾರ್ ೫ನೇ ಫಾರಂನಲ್ಲಿ ನಮ್ಮ ತರಗತಿ ಉಪಾಧ್ಯಾಯರು. ನಾನು ಆಗ ಖಾದಿ ಹಾಕುತ್ತಿದ್ದೆ. ಖಾದಿ ಹಾಕೋದನ್ನ ಕಲಿತದ್ದು ನಮ್ಮ ಭಾವನವರಿಂದ. ಅವರೂ ಖಾದಿ ಹಾಕುತ್ತಿದ್ದರು. ಬಿಳಿಯ ಗಾಂಧಿ ಟೋಪಿ ಹಾಕುತ್ತಿದ್ದೆ. ಒಮ್ಮೆ ನನ್ನ ಭಾವ ಖಾದಿಷರ್ಟು ಹೊಲಿಸಿದ. ಅದೇ ಅಭ್ಯಾಸವಾಯ್ತು. ಒಂದು ದಿನ ಶಾಲೆಯಿಂದ ಬರಬೇಕಾದರೆ ಒಬ್ಬರು ಭೇಟಿ ಆದರು. ದೀಪಾವಳಿ ಹಬ್ಬದ ಸಮಯ. ಮಗೂ ನೀನು ಪಟಾಕಿ ಕೊಂಡೆಯಾ ಅಂದರು. ಕೊಂಡಿದ್ದರೆ ಎಷ್ಟು ಖರ್ಚು ಮಾಡಿದೆ. ಈಗಾಗಿದ್ರೆ ನಿನಗ್ಯಾಕೋ ಇವೆಲ್ಲ ಅನ್ನಬಹುದಿತ್ತು. ಆಗ ದೊಡ್ಡವರನ್ನ ಕಂಡರೆ ಗೌರವ ಹೆಚ್ಚು. ಮೂರು ರೂಪಾಯಿ ಪಟಾಕಿ ತಂದಿದ್ದೇನೆ ಅಂದೆ. ಯಾವ ಹುಡುಗರಿಗೆ ಪಟಾಕಿ ಬೇಡ ಹೇಳಿ? ಆತ ಮಗು ಮೂರು ರೂ ಸುಟ್ಟು ಹಾಕ್ತೀಯೆ ಇದರಿಂದೇನು ಪ್ರಯೋಜನ. ಶಬ್ದ ಕೇಳ್ತೀಯಾ ಅಷ್ಟೆ. ಅದರ ಬದಲು ಒಳ್ಳೆಯ ಖಾದಿಬಟ್ಟೆ ಹಾಕಿಕೋ. ಬಡಜನರಿಗೆ ಅನುಕೂಲವಾಗುತ್ತೆ. ನಿನಗೂ ಒಂದು ಷರ್ಟು ಬಂದ ಹಾಗಾಗುತ್ತದೆ ಎಂದು ಹೇಳಿಹೋದರು. ಅವರು ಯಾರೋ ತಿಳಿಯದು. ಅವರು ಹೇಳಿದ ಮಾತು ಇಂದು ಗಾಂಧೀಜಿ ಬಂದು ಹೇಳಿದರೋ ಎನ್ನುವ ಹಾಗೆ. ಆ ಸಾರಿ ದೀಪಾವಳಿ ಪಟಾಕಿ ಹೊಡೆಯೋದು ನಿಲ್ಲಿಸಿದೆ. ಅದರ ಮೇಲೆ ಅಷ್ಟು ಆಸೇನೂ ಇಲ್ಲ.

ಹೈಸ್ಕೂಲಿನಲ್ಲಿ ನನ್ನ ಸ್ನೇಹಿತರು ಅಂದರೆ ಎಂ.ಎಸ್.ಕೆ., ರಾಮು ಹಾಗೂ ಕೃಷ್ಣೋಜಿರಾವ್. ನಾವು ನಾಲ್ಕೂ ಜನ ಒಂದು ಗುಂಪು. ಯಾವಾಗಲೂ ಜೊತೆಯಲ್ಲಿರುತ್ತಿದ್ದೆವು. ಈಗ ಎಂ.ಎಸ್.ಕೆ. (ಕೃಷ್ಣಮೂರ್ತಿ) ಮಧ್ಯಪ್ರದೇಶದಲ್ಲಿದ್ದಾನೆ. ರಾಮು ಹೈದರಾಬಾದ್‌ನಲ್ಲಿದ್ದಾನೆ. ಕೃಷ್ಣೋಜಿರಾವ್ ರೈಲ್ವೆ ಇಲಾಖೆಯಲ್ಲಿದ್ದು ಬೆಂಗಳೂರಿಗೆ ಅಂಟಿಕೊಂಡ. ಮುನಿಗವಿಯಪ್ಪ ಎಂಬುವವರು ಅಂಕಗಣಿತಕ್ಕೆ ಮೇಷ್ಟ್ರಾಗಿದ್ದಾರೆ. ಬಿ.ಎಸ್ಸಿ (ಆನರ್ಸ್) ಆಗಿದ್ದರಿಂದ ಕಾಲೇಜಿಗೆ ಉಪಾಧ್ಯಾಯರಾಗಿ ಹೋದರು. ಅವರಿಗೆ ಬೀಳ್ಕೊಡುಗೆಗಾಗಿ ಟೀ ಪಾರ್ಟಿ ಏರ್ಪಡಿಸಿದೆ. ನಾನು ಮತ್ತು ಶಂಕರಪ್ಪ ಲೆಕ್ಕದಲ್ಲಿ ಹೆಚ್ಚು ಅಂಕ ಪಡೆಯುತ್ತಿದ್ದೆವು. ಅದರಿಂದ ನಮಗೇ ಜವಾಬ್ದಾರಿ ಕೊಟ್ಟರು. ನಾನು ವಿಷ್ಣುಭವನ್‌ಗೆ ಹೋಗಿ ತಿಂಡಿ ಏರ್ಪಾಡು ಮಾಡಿದೆ. ಮಾರನೆ ದಿನ ನಮ್ಮ ತರಗತಿ ಮೇಷ್ಟ್ರು ಎಂ.ಆರ್. ಶ್ರೀನಿವಾಸಯ್ಯಂಗಾರ್, ನನ್ನನ್ನು ಕರೆಸಿ ನೋಡಪ್ಪ, ನಾನು ಹೋಟೆಲ್ ತಿಂಡಿ ತಿನ್ನೋಲ್ಲ. ನಿಮ್ಮ ತರಗತಿ ಉಪಾಧ್ಯಾಯನಾಗಿ ನಿಮ್ಮ ಕಾರ್ಯಕ್ರಮಕ್ಕೆ ಬೇಡ ಅಂದ್ರೆ ಬಿಡಿ. ನನ್ನ ಸಲಹೆ ಒಪ್ಪಿದರೆ ಮಾಡಿ. ನಾನು ಹೇಳಿದ ರೀತಿ ನಡೆಯಬೇಕು. ಶಂಕರಪ್ಪನ ಮನೇಲಿ ತಿಂಡಿ ಮಾಡಿಸಿ, ಕಾಫೀನ ಸ್ಕೂಲಿನಲ್ಲಿ ಮಾಡಿಸಿ. ಶಂಕರಪ್ಪನ ಕೈಯಲ್ಲಿ ತಿಂಡಿ ಹಂಚಿಸಿ. ತಿಂಡೀಲೇನಿದೆ ಮಹಾ. ನಾಲ್ಕು ಒಳ್ಳೆ ಮಾತನಾಡೋಣ. ಇಲ್ಲದಿದ್ದರೆ ನಿಮ್ಮಿಷ್ಟ ಅಂದರು. ನಾನಾಗಲೇ ಮುಂಗಡ ಹಣ ನೀಡಿದ್ದುದನ್ನು ತಿಳಿಸಿದೆ, ಪರವಾಗಿಲ್ಲ, ಅವರಿಗೆ ಹೇಳಿದರಾಯ್ತು. ಕಡೆಗೆ ತರಗತಿ ಉಪಾಧ್ಯಾಯರನ್ನ ಬಿಡೋದು ಹ್ಯಾಗೆ. ಆಗ ಹೋಗಿ, ಮುಂಗಡ ನೀಡಿದ್ದ ಹಣವನ್ನ ಹೋಟೇಲಿನವರಿಂದ ವಾಪಸ್ಸು ಪಡೆದೆವು. ಮನೇಲಿ ತಿಂಡಿ ಮಾಡಿಸಿ, ಕಾಫಿಯನ್ನು ಸ್ಕೂಲಿನಲ್ಲಿ ಮಾಡಿಸಿ ಕಾರ್ಯಕ್ರಮ ಏರ್ಪಡಿಸಿದ್ದೆವು. ಎಂ.ಆರ್. ಶ್ರೀಯವರ ಸಂತೋಷ ಹೇಳತೀರದು. ನಮ್ಮ ಹುಡುಗರು ನಾವು ಹೇಳಿದ ಹಾಗೆ ಮಾಡಿದ್ರಲ್ಲ

ಅನ್ನೋದೇ ಅವರಿಗಾನಂದ. ಇವರು ಬಹಳ ಒಳ್ಳೆ ಮೇಷ್ಟ್ರು. ಪಾಠ ಮಾಡುತ್ತಾ, ಮಾಡುತ್ತಾ ಪದ್ಯಗಳನ್ನ ರಚಿಸುತ್ತಿದ್ದರು. ಒಂದು ಸಾರಿ ಪಾಪಿ. ಪಾಂಪೆ ಪ್ರಾರಂಭಮಾಡಿ ಕೊನೆಗೆ ಶ್ರೀನಿವಾಸಯ್ಯ ಕರೀಟೋಪಿ ಹಾಕ್ಕೊಂಡು ಬಾ ಎಂದು ಮುಗಿಸಿದರು. ಏಕೆಂದರೆ ನಾನು ಬಿಳಿಟೋಪಿ ಹಾಕ್ಕೊಂಡು ಹೋಗುತ್ತಿದ್ದೆ. ನಾನು ಒಂದು ಸಾರಿ ತರಗತಿಯಿಂದ ಹೊರಗಡೆ ಬಂದಾಗ ಅವರಿಗೆ ಹೇಳಿದೆ. ಸರ್ ನಾನು ಹಾಕ್ಕೊಂಡು ಬರುತ್ತಿರುವ ಟೋಪಿ ಬೆಲೆ ಎರಡಾಣೆ. ಹತ್ತು ಪೈಸೆ, ಕರೀಟೋಪಿ ಹಾಕ್ಕೊಂಡು ಬರಲು ಒಂದು ರೂಪಾಯಿ ಬೇಕು. ನಾನು ಬಡವ, ನೀವೇ ಕೊಡಿಸಿ ಸಾರ್ ಅಂದೆ. ಹಾಗೆಲ್ಲ ಕೇಳಬಾರದು ಶಾಲೆಗೆ ಬರಬೇಕಾದರೆ ಕರೀಟೋಪಿ ಹಾಕ್ಕೊಂಡು ಬರಬೇಕು ಅಂದರು. ಸ್ವಲ್ಪ ವಾದ ನಡೆದ ಮೇಲೆ ಸುಮ್ಮನಾದೆ. ಈ ಎಂ.ಆರ್. ಶ್ರೀಯವರು ಚನ್ನಪಟ್ಟಣದ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದರು. ಆಗ ಪುಂಡರು ಗಲಭೆ ಮಾಡಿ ಶಾಲೆಗೆ ನುಗ್ಗಿದರು. ಹೆಣ್ಣು ಮಕ್ಕಳ ಶಾಲೆ. ಎಂ.ಆರ್. ಶ್ರೀಯವರು ಅಡ್ಡನಿಂತರು. ನೀವು ಒಳಗೆ ಹೋಗಬೇಕಾದ್ರೆ ನನ್ನ ಕೊಂದು ಒಳಕ್ಕೆ ಹೋಗಿ ಅಂದರು. ಕೈಮುಗಿದರು. ಬಗ್ಗಿ ನಮಸ್ಕಾರ ಮಾಡಿದರು. ಪುಂಡರು ಅವರು ಬಗ್ಗಿದಾಗಲೇ ಹೊಡೆದು ಕೊಲೆ ಮಾಡಿದರು. ಕಡೆಗೂ ಇಂತಹ ಉಪಾಧ್ಯಾಯರಿಗೆ ಈ ತರಹದ ಸಾವೇ ಎನಿಸಿತು.

ಪ್ರತಿ ಗುರುವಾರ ನಾನು, ರಾಮು, ಎಂ.ಎಸ್.ಕೆ. ಚಾಮರಾಜಪೇಟೆಯಲ್ಲಿರುವ ರಾಘವೇಂದ್ರ ಮಠಕ್ಕೆ ಹೋಗಿ ಬರೋದು ರೂಢಿಯಾಯಿತು. ಮಲ್ಲೇಶ್ವರದಿಂದ ಚಾಮರಾಜಪೇಟೆಗೆ ನಡೆದುಹೋಗಿ ರಾಯರ ದರ್ಶನಮಾಡಿ ಬರುತ್ತಿದ್ದೆವು.

## ಸ್ಕಾಲರ್‌ಶಿಪ್

ಹೈಸ್ಕೂಲಿಗೆ ಸೇರಿದ ಮೇಲೆ ಯಥಾಸ್ಥಿತಿ ಸ್ಕಾಲರ್‌ಶಿಪ್‌ಗಾಗಿ ಅಲೆಯಬೇಕಾಗಿತ್ತು. ಆಗ ಸೆಂಟ್ರಲ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದ ರಾಜಗೋಪಾಲ್‌ರವರು ಸ್ಕಾಲರ್‌ಶಿಪ್ ಕಮಿಟಿ ಛೇರ್ಮನ್ ಆಗಿದ್ದರು. ಬೇರೆ ಯಾರೂ ತಿಳಿಯದು. ಪಕ್ಕದ ಮನೇಲಿದ್ದ ವೀರಣ್ಣ ಅವರಿಗೆ ಹೇಳಿದೆ. "ಓಹೋ ನಮ್ಮ ಹೆಡ್ಮಾಷ್ಟ್ರು, ಒಂದು ದಿವಸ ಕರೆದುಕೊಂಡು ಹೋಗ್ತೀನಿ" ಅಂದರು. ಆತ ಸೆಂಟ್ರಲ್ ಹೈಸ್ಕೂಲಿನಲ್ಲಿ ಜವಾನ. ಒಂದು ಶನಿವಾರ ತರಗತಿ ಮುಗಿಸಿಕೊಂಡು ಮಧ್ಯಾಹ್ನ ಸೆಂಟ್ರಲ್ ಹೈಸ್ಕೂಲಿಗೆ ಹೋದೆ. ಶನಿವಾರವಾದ್ದರಿಂದ ಮಡಿಪಂಚೆ, ಷರ್ಟು, ಅದರ ಮೇಲೊಂದು ಕೋಟು, ತಲೆ ತುಂಬಾ ಜುಟ್ಟು, ಗಾಂಧಿ ಟೋಪಿ. ಹಣೆ ಮೇಲೆ ಮೂರು ನಾಮ. ವೀರಣ್ಣ ಹೆಡ್ಮಾಷ್ಟ್ರು ಇರುವ ಕೊಠಡಿಗೆ ಕರೆದೊಯ್ದು. ಅವರಿಗೆ ಹೇಳಿದ "ಸ್ವಾಮಿ ಇವನು ನಮ್ಮ ದೊಡ್ಡಪ್ಪನವರ ಮಗ. ಇವರ ತಂದೆ ಅಠಾರಾ ಕಚೇರೀಲಿ ಜವಾನರಾಗಿದ್ದರು. ಕಾಲವಾದರು. ಈಗ ಬಹಳ ಬಡವ ಜೀವನವೇ ಕಷ್ಟ. ಸ್ಕಾಲರ್ ಶಿಪ್ ಮಾಡಿಸಿಕೊಡಿ. ಓದಲು ಅನುಕೂಲವಾಗುತ್ತೆ ಎಂದು ಹೇಳಿದರು. ಹೆಡ್ಮಾಷ್ಟ್ರು ನನ್ನ ನೋಡಿದರು. ಇದೇನಯ್ಯಾ ಈ ಅಯ್ಯಂಗಾರ್ ಹುಡುಗನನ್ನ ಕರೆದುಕೊಂಡು ಬಂದಿದ್ದೀಯ. ಸುಳ್ಳು ಬೇರೆ ಹೇಳ್ತಿದ್ದೀಯ. ಯಾವುದೋ ಹುಡುಗನಿಗೆ ಸ್ಕಾಲರ್‌ಶಿಪ್ ಕೊಡು ಅಂತೀಯಾ. ಇದು

ಹಿಂದುಳಿದವರಿಗೆ ಇಟ್ಟಿರೋದು, ಅಯ್ಯಂಗಾರ್‌ಗಲ್ಲ, ಹೋಗ್ಹೋಗು" ಅಂದರು. ನಾನು ಅಳಲು ಪ್ರಾರಂಭಿಸಿದೆ. "ಇವನು ನಮ್ಮ ಹುಡುಗ. ನಮ್ಮ ದೊಡ್ಡಪ್ಪ ಹೀಗೆ ನಾಮ ಹಾಕುತ್ತಿದ್ದರು. ಅದೇ ರೂಢಿ. ಇಂದು ಶನಿವಾರವಾದ್ದರಿಂದ ಸ್ನಾನಮಾಡಿ, ನಾಮಹಾಕಿ ಮಡಿ ಉಟ್ಟು ಬಂದವನೆ. ಹೊನ್ನಪ್ಪ ಅಂತಿದ್ರು, ಅವರ ಮಗ ಸ್ವಾಮಿ" ಅಂತ ವೀರಣ್ಣ ಹೇಳಿದ. ಅನಂತರ ನನ್ನ ಸರ್ಟಿಫಿಕೇಟು ನೋಡಿ ಸಮಾಧಾನ ತಂದುಕೊಂಡರು. ಸ್ಕಾಲರ್‌ಶಿಪ್ ಮಾಡಿಕೊಟ್ಟರು.

**ಎಂ.ಎಸ್.ಕೆ. ಮೇಷ್ಟ್ರು:**

ಹೈಸ್ಕೂಲಿನಲ್ಲಿ ಓದುತ್ತಿರಬೇಕಾದರೆ ನಾನು ಸಣ್ಣ ಹುಡುಗ. ಆದರೂ ಚೇಷ್ಟೆ ಜಾಸ್ತಿ. ಸಣ್ಣ ಹುಡುಗರದೇ ಹೆಚ್ಚು ಚೇಷ್ಟೆ. ಹೆಣ್ಣುಮಕ್ಕಳ ಜೊತೇಲಿದ್ದರೆ ಹುಡುಗರು ಸ್ವಲ್ಪ ಜಬರ್ದಸ್ತಿನಲ್ಲೇ ನಡೆಯುತ್ತಾರೆ. ಒಂದು ದಿವಸ ಎಂ.ಎಸ್.ಕೆ. ನಮ್ಮ ಪಕ್ಕದಲ್ಲಿ ಕುಳಿತುಕೊಂಡಿದ್ದ. ಮೇಷ್ಟ್ರು ಹೂವಿನ ಪರಾಗ ಸ್ಪರ್ಶ ವಿಚಾರ ಪಾಠ ಮಾಡುತ್ತಿದ್ದರು. ಎಂಎಸ್.ಕೆ. ಹೂವನ್ನು ಟೇಬಲ್ ಮೇಲಿಟ್ಟುಕೊಂಡು ಜೊರಾಗಿ ಬೆರಳಿನಲ್ಲಿ ಹೊಡೆದ. ಅದು ಪದ್ಮ ಎಂಬ ಹುಡುಗಿಯ ಕೆನ್ನೆಯ ಮೇಲೆ ಬಿತ್ತು. ಉಪಾಧ್ಯಾಯರು ನೋಡಿಬಿಟ್ಟರು. ಲೋ ಎಂಎಸ್‌ಕೆ ನಿಂತುಕೋ. ನಿನ್ನ ಚೇಷ್ಟೆ ಜಾಸ್ತಿಯಾಯ್ತು. ಈ ರೀತಿ ಮಾಡಬಹುದೇನೋ ಎಂದು ಗುಟ್ಟಾಗಿ ಕೇಳಿದರು. ನಾನೇನು ಮಾಡ್ಲಿಲ್ಲ ಸಾರ್. ನಾನೇಕೆ ನಿಂತುಕೋಬೇಕು ಅಂದ. ಹೆಣ್ಣುಮಕ್ಕಳ ಮುಂದೆ ಪ್ರಶ್ನೆ ಹಾಕಿದನಲ್ಲ ಅಂತ ಕೋಪದಿಂದ, ಹೊರಗೆ ಹೋಗು ಎಂದು ಮೇಷ್ಟ್ರು ಹೇಳಿದರು. ನಾನು ಏನು ತಪ್ಪು ಮಾಡಿದೆ. ಏಕೆ ಆಚೆ ಹೋಗಲಿ ಅಂದ. ಎಂ.ಎಸ್‌ಕೆ ಆಚೆ ಹೋಗು ಎಂದು ಜರ್ಬದಸ್ತಾಗಿ ಹೇಳಿದರು. ತಪ್ಪು ಮಾಡ್ದೆ ಇದ್ದರೂ ಆಚೆ ಕಳಿಸ್ತೀರಾ ಎಂದು ಪುಸ್ತಕ ತೆಗೆದು ಆಚೆ ಬಂದ. ಉಳಿದ ಹುಡುಗರು, ಹೊರಗಡೆ ಹೋದರು. ಹೆಣ್ಣುಮಕ್ಕಳು ಆಚೆ ಹೋದರು. ಯಾಕೆ ಅಂತ ಸರಿಯಾಗಿ ಒಬ್ಬರಿಗೂ ಗೊತ್ತಿಲ್ಲ. ಆ ಮೇಷ್ಟ್ರು ನಮ್ಮ ತರಗತಿ ಉಪಾಧ್ಯಾಯರಾದ ಎಲ್. ವೆಂಕಟರಾಮಯ್ಯ (ಎಲ್‌ವಿ. ಅಂತ ಪ್ರಸಿದ್ಧಿ). ಅವರಿಗೆ ತಿಳಿಸಿದರು. ಹುಡುಗರು ಕ್ಷಮಾಪಣೆ ಕೇಳೋವರೆಗೆ ನಾನು ಅವರ ತರಗತಿ ತಗೊಳ್ಳಲ್ಲ. ಅಂದರು.

ಎಲ್‌ವಿಯವರು ಮುಂದಿನ ತರಗತಿಗೆ ಬಂದಾಗ ಬಹಳ ಸಿಟ್ಟಿನಿಂದ ಹಾಜರಿ ಹಾಕಿದರು. ಎಲ್ಲರನ್ನೂ ಚೆನ್ನಾಗಿ ಬೈದರು. ಯಾರು ಏನು ತಪ್ಪು ಮಾಡಿದರು ಒಬ್ಬರಿಗೂ ಗೊತ್ತಿಲ್ಲ. ನಮ್ಮಲ್ಲಿ ಒಬ್ಬ ಧೈರ್ಯವಾಗಿ ನಿಂತು ಕೇಳಿದ. ಏನ್‌ಸಾರ್ ನಾವೇನು ಗಲಾಟೆ ಮಾಡಿದೆವು. "ಥೂ ಕತ್ತೆ, ಕುಳಿತುಕೊ" ಅಂದರು. ಲೋ ಎಂಎಸ್‌ಕೆ, ಸಸ್ಯಶಾಸ್ತ್ರದ ತರಗತೀಲಿ ಏನ್ ಮಾಡಿದೆ ಅಂತ ಕೇಳಿದರು. ನಾನೇನು ಮಾಡ್ಲಿಲ್ಲ ಸಾರ್. ಈ ಹೂ, ಯಾರ ಕೆನ್ನೆ ಮೇಲೆ ಬಿತ್ತು. ಪದ್ಮಾ ನಿನ್ನ ಕೆನ್ನೆಗೆ ಹೂವಿನಿಂದ ಎಂಎಸ್‌ಕೆ ಹೊಡೆದನೆ ಅಂತ ಕೇಳಿದರು. ಹೊಡೆದಿದ್ದು ನಿಜವಾದರೂ ಒಪ್ಪಿಕೊಳ್ಳೋದು ಹೇಗೆ. ಪದ್ಮ ಎದ್ದು ನಿಂತುಕೊಂಡಳು. ನನಗೆ ಯಾರೂ ಹೊಡೀಲಿಲ್ಲ. ನನಗೆ ಗೊತ್ತಿಲ್ಲ. ಅಂದಳು. ಮೇಷ್ಟ್ರುಗೆ ಆಶ್ಚರ್ಯವಾಯಿತು. ಆ ಉಪಾಧ್ಯಾಯರಿಗೆ ಕಳ್ಳಿ ಎಂದು ಹೆಸರಿಟ್ಟೆವು. ಇವರು ಮಾಡ್ಕೆಳ್ಳರೋ, ಬರ್ಕೆಳ್ಳರೋ ಅನ್ನುತ್ತಿದ್ದರು. ಆದ್ದರಿಂದ ಕಳ್ಳಿ ಎಂದು ಹೆಸರು ಇಟ್ಟಿದ್ದರು. ಆಗ ಹೇಳಿದರು. ಏನ್ರೋ ಇದು ತರಗತಿ ಉಪಾಧ್ಯಾಯರಿಗೆ

ಅವಮಾನ. ನೀವು ತರಗತಿಲೇನೋ ಆಟ ಆಡೋದು. ಆಗ ಆಟ ಆಡಿದರೂ, ಗುಟ್ಟನ್ನು ಒಬ್ಬರಿಗೊಬ್ಬರು ಬಿಟ್ಟು ಕೊಡೊಲ್ಲ ಅಂತ ಬೈದು, ಆ ದಿನದ ಪಾಠ ಮುಗಿಸಿದರು. ಆ ಮೇಲೆ ತಿಳಿತು. ಸಸ್ಯಶಾಸ್ತ್ರದ ಉಪಾಧ್ಯಾಯರನ್ನ ಸ್ವಲ್ಪ ಕಟುವಾಗಿಯೇ ದಬಾಯಿಸಿದ್ರು ಅಂತ. ನಮ್ಮ ಹುಡುಗರು ಒಳ್ಳೆಯವರು. ಏನು ಮಾಡದೆ ಇದ್ದರೂ, ಚಾಡಿ ಹೇಳ್ತೀರಾ ಅಂತ ಅವರನ್ನ ಪ್ರಶ್ನಿಸಿ, ನಮಗೆ ಸರ್ಟಿಫಿಕೇಟು ಕೊಟ್ರು. ಈ ಬಗೆಯ ಸಣ್ಣಪುಟ್ಟ ಚೇಷ್ಟೆಗಳನ್ನು ಮಾಡುತ್ತಿದ್ದೆವು.

ಎಸ್.ಎಸ್.ಎಲ್.ಸಿ. ಪರೀಕ್ಷೆ ಆದ ಮೇಲೆ ಇಂಟರ್ ಮೀಡಿಯೇಟ್ ಕಾಲೇಜು. ಆಗ ಇದ್ದುದು ಒಂದೇ ಗೌರ್ನಮೆಂಟ್ ಇಂಟರ್ ಮೀಡಿಯೇಟ್ ಕಾಲೇಜು ಸೇರಿದೆ. ಅವಧಿ ಎರಡು ವರ್ಷ, ಇಂಗ್ಲಿಷ್ ಮಾಧ್ಯಮ, ಪಿಸಿಎಂ ತೆಗೆದುಕೊಂಡೆ. ಆರು ತಿಂಗಳು ಸ್ವಲ್ಪ ಓದಲು ತೊಂದರೆಯಾಯಿತು. ಹೆಚ್ಚು ಓದಲು ಪ್ರಯತ್ನಿಸಿದೆ. ಆಗ ಎರಡನೆ ಭಾಷೆ ಸಂಸ್ಕೃತ. ಒಳ್ಳೆಯ ಉಪಾಧ್ಯಾಯರಿದ್ದರು. ಎಂ.ಎ. ಕೃಷ್ಣಸ್ವಾಮಿ ಅಂತ. ಸಂಸ್ಕೃತದ ಉಪಾಧ್ಯಾಯರು. ಕೆ.ಎಸ್.ವಿ. ಶಾಸ್ತ್ರಿಗಳು ಪ್ರಿನ್ಸಿಪಾಲರು ಆಗಿದ್ದರು.

❖

# ಗುರು–ಗೆಳತಿ

## (ಡಾ॥ ಶೈಲಜಾ ಉಡಚಣ)

*● ಡಾ॥ ಗೀತಾನಾಗಭೂಷಣ*

ಆ ಮಾತಿಗೀಗ ನಲವತ್ತ ನಾಲ್ಕು ವರ್ಷಗಳಾಗಿವೆ. ಆದರೂ ನನಗೆ ಚೆನ್ನಾಗಿ ನೆನಪಿದೆ. ಅದು ಹತ್ತೊಂಬತ್ತು ನೂರ ಅರವತೊಂದನೆಯ ವರ್ಷದ ಜುಲೈ ತಿಂಗಳು. ಅದೇ ಆಗ ನಾನು ಮ್ಯಾಟ್ರಿಕ್ ಪಾಸಾಗಿ ಗುಲಬರ್ಗಾದ ಸರಕಾರಿ ಡಿಗ್ರಿ ಕಾಲೇಜಿನಲ್ಲಿ ಪಿ.ಯು.ಸಿ. ತರಗತಿಗೆ ಹೆಸರು ನೊಂದಾಯಿಸಿದ್ದೆ. ಆಗ ಆ ಕಾಲೇಜಿನ ಆರ್ಟ್ಸ್ ತರಗತಿಗಳೆಲ್ಲ ಬೆಳಗಿನ ಅವಧಿಯಲ್ಲಿ ನಡೆಯುತ್ತಿದ್ದುವು. ನಾನು ಸ್ಥಳೀಯ ಜಿಲ್ಲಾಧಿಕಾರಿಯ ಕಚೇರಿಯಲ್ಲಿ ಎರಡನೆಯ ದರ್ಜೆಯ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದೆ. ಬೆಳಗಿನ ಏಳು ಗಂಟೆಯಿಂದ ಹತ್ತು ಗಂಟೆಯವರೆಗೆ ಕಾಲೇಜು. ನಂತರ ಆಫೀಸು.

ಒಮ್ಮೆ ಕನ್ನಡ ತರಗತಿಯಲ್ಲಿ ನಾವು ವಿದ್ಯಾರ್ಥಿಗಳು ಹೊಸ ಲೆಕ್ಚರರ್‌ಗಾಗಿ ಕಾಯುತ್ತ ಕುಳಿತಿದ್ದೆವು. ಉದ್ದನೆಯ ಕಪ್ಪು ಹಲಗೆಯ ಮೇಲೆ "ಹ್ಯಾಪೀ ಮ್ಯಾರೀಡ್ ಲೈಫ್ ಟು ಯೂ ಮ್ಯಾಡಂ" ಅಂತ ಸುಂದರವಾಗಿ ಬಣ್ಣದ ಬಳಪದಿಂದ ಬರೆದು ಕೆಳಗೆ ಒಂದು ಗಂಡುಹೆಣ್ಣಿನ ಮದುವೆಯ ಚಿತ್ರ ಬಿಡಿಸಲಾಗಿತ್ತು. ಅದು ನಮ್ಮ ತರಗತಿಯ ಹುಡುಗರ ಕೆಲಸ ಅಂತ ನಮಗೆ ಗೊತ್ತಿತ್ತು. ಆಗಿನ್ನೂ ಕಾಲೇಜಿನಲ್ಲಿ ಓದುವ ಹೆಣ್ಣುಮಕ್ಕಳ ಸಂಖ್ಯೆ ಬಹಳ ಕಡಿಮೆಯಿತ್ತು. ಹೀಗಾಗಿ ನಮ್ಮ ಕ್ಲಾಸಿನಲ್ಲಿ ಸುಮಾರು ನೂರ ಐವತ್ತು ವಿದ್ಯಾರ್ಥಿಗಳಲ್ಲಿ ನಾವು ಹುಡುಗಿಯರು ಮಾತ್ರ ನಾಲ್ಕೇ ನಾಲ್ಕು ಮಂದಿ.

ನಮ್ಮ ಕನ್ನಡದ ಹಿರಿಯ ಉಪನ್ಯಾಸಕರಾಗಿದ್ದ ಭೀಮಸೇನ್‌ರಾವ್ ತವಗ ಅವರು ಹಿಂದಿನ ದಿನವೇ ಹೇಳಿದ್ದರು. "ನಾಳಿನಿಂದ ನಿಮಗ ಒಬ್ಬ ಹೊಸ ಲೆಕ್ಚರರ್ ಬರ್ತಾರೆ ಕನ್ನಡಕ್ಕ. ಮಹಾಂತಮ್ಮ ಹಸಮ್‌ಕಲ್..." ಅಂತ. ಅವರು ಹೊಸದಾಗಿ ಮದುವೆಯಾಗಿದ್ದಾರೆಂದು ತಿಳಿದಿತ್ತು. ಅದಕ್ಕಾಗಿ ಬೋರ್ಡಿನ ಮೇಲೆ ಅಂಥ ಬರಹ. ಹಾಗೆ ನೋಡಿದರೆ ಮಹಾಂತಮ್ಮ ಮೇಡಂ ಅವರು ಆ ಕಾಲೇಜಿಗೇನೂ ಹೊಸಬರಾಗಿರಲಿಲ್ಲ. ನಮ್ಮ ಕ್ಲಾಸಿಗಷ್ಟೇ ಹೊಸಬರು. ಬಣ್ಣ ಬಣ್ಣಗಳ ಸೀರೆಯುಟ್ಟು ಮೈತುಂಬ ಸೆರಗು ಹೊದ್ದು ಅವರು ಕಾಲೇಜಿನ ಆವರಣದಲ್ಲಿ ತಿರುಗಾಡುವುದನ್ನು ನಾವು ದಿನನಿತ್ಯ ನೋಡುತ್ತಿದ್ದೆವು. ಆದರೆ ಅವರಿಗೂ ನಮಗೂ ನೇರ ಸಂಪರ್ಕವಿರಲಿಲ್ಲ ಅಷ್ಟೇ.

ಸರಿಯಾಗಿ ಬೆಲ್ ಆಗಿ ಮೂರು ನಿಮಿಷಕ್ಕೆ ತಿಳಿಹಸಿರು ಸೀರೆಯುಟ್ಟು ತೆಳ್ಳಗೆ, ಬೆಳ್ಳಗೆಯಿದ್ದ ದುಂಡುಮುಖದ ಚೆಲುವೆ ಮೇಡಂ ಮಹಾಂತಮ್ಮನವರು ಸರ ಸರನೆ ನಡೆದು ಬಂದು

ವೇದಿಕೆಯ ಮೆಲೆ ನಿಂತಾಗ ನಾವೆಲ್ಲರೂ ಎದ್ದುನಿಂತು "ನಮಸ್ಕಾರ ಮೇಡಂ" ಅಂದೆವು. ಪಿ.ಯು.ಸಿ. ಕ್ಲಾಸಿನವರಾದ ನಾವು ಆ ಕಾಲೇಜಿಗೆ ಹೊಸಬರು. ಹೀಗಾಗಿ ಆ ಕಾಲೇಜಿನವರೆಲ್ಲ ನಮಗೆ ಹೊಸಬರೇ. "ನಮಸ್ಕಾರ....ಕೂಡ್ರಿ" ಅಂದರು. ಬೋರ್ಡಿನ ಬರಹ ನೋಡಿ ನಾಚಿ ನೀರಾದರು. ಅವರ ಬೆಳದಿಂಗಳ ಬಣ್ಣದ ಮುಖವೆಲ್ಲ ಲಜ್ಜೆಯಿಂದ ಕೆಂಪು ಗುಲಾಬಿಯಂತಾಯಿತು. ತುಂಬಿದ ಗಲ್ಲಗಳಲ್ಲಿ ಕಡುಗೆಂಪು ಪಸರಿಸಿತು. ಹಿಂದೆ ಕುಳಿತಿದ್ದ ಹುಡುಗರ್‍ಯಾರೋ ಚಪ್ಪಾಳೆ ತಟ್ಟಿದರು. ನಾವು ಹುಡುಗಿಯರು ಮುಗುಳ್ನಕ್ಕೆವು. "ಮ್ಯಾಡಂ ಎಷ್ಟು ಚೆಂದ ಕಾಣಸ್ತಾರೆ ನೋಡ್ರೇ...." ಅಂತ ನಾವು ಒಬ್ಬರಿಗೊಬ್ಬರು ಪಿಸುಗುಟ್ಟಿದೆವು. ಹರೆಯದ ಹುಮ್ಮಸ್ಸಿನ ಆದರೆ ಸುಕೋಮಲ ಮನಸ್ಸಿನ ಡಾ. ಶೈಲಜ ಉಡಚಣ ಅವರು ಕನ್ನಡ ಪಾಠ ಮಾಡಬೇಕಾದರೆ ತುಸು ಸಂಕೋಚಗೊಂಡೇ ಇರುತ್ತಿದ್ದರು. ಅವರು ತುಂಬ ಬೋಲ್ಡಾಗಿ ಹುಡುಗರಿಗೆ ಅಭಿಮುಖವಾಗಿದ್ದುದನ್ನು ನಾವಂತೂ ಕಂಡಿಲ್ಲ. ಆದರೆ ಅವರ ಕ್ಲಾಸಿಗಾಗಿ ಮಾತ್ರ ಎಲ್ಲರೂ ಕಾತರದಿಂದ ಕಾಯುತ್ತಿದ್ದೆವು. ಬೇರೆ ತರಗತಿಯ ಹುಡುಗರೂ ಸಹ ಒಮ್ಮೊಮ್ಮೆ ನಮ್ಮ ಮ್ಯಾಡಂ ಅನ್ನು ನೋಡಲು, ಕೇಳಲು, ನಮ್ಮ ತರಗತಿಯಲ್ಲಿ ಬಂದು ಕೂಡುತ್ತಿದ್ದರು. ಅವರು ಹೇಳುವ ಪಾಠಕ್ಕಿಂತ ಅವರ ಚೆಲುವು, ವಿನಯ, ಲಜ್ಜೆ, ಸಂಕೋಚಗಳೇ ನಮ್ಮನ್ನು ಮೋಡಿಗೊಳಿಸಿದ್ದುವೆಂದರೆ ಖಂಡಿತ ಉತ್ಪ್ರೇಕ್ಷೆಯಲ್ಲ! ಕೆಲವು ಸಲ ಕೇಳಬಾರದ ಪ್ರಶ್ನೆಗಳನ್ನು ಕೇಳಿ ಹುಡುಗರು ಅವರನ್ನು ಪೇಚಿನಲ್ಲಿ ಸಿಕ್ಕಿಸಿ ಮಜಾ ಮಾಡುತ್ತಿದ್ದರು, ಖರೇ. ಆದರೆ ಅದು ಹದಿಹರೆಯದ ಹುಡುಗರ ಮೋಜಿನ ಸಂಗತಿಯಾಗಿರುತ್ತಿತ್ತೇ ವಿನಃ ಅವರನ್ನು ನೋಯಿಸಲೆಂದು ಖಂಡಿತ ಇರುತ್ತಿರಲಿಲ್ಲ. ಭೀಮಸೇನರಾವ ತವಗ ಅವರ ವ್ಯಾಕರಣದ ಪಾಠ ಬಹಳ ಬೋರ್ ಅನ್ನಿಸುತ್ತಿತ್ತು. ಅವರ ಕ್ಲಾಸಿಗೆ ಅರ್ಧಕ್ಕರ್ಧ ಹುಡುಗರು ನಾಪತ್ತೆ. ನಾವು ಹುಡುಗಿಯರು ಮಾತ್ರ ಕುಳಿತಿರುತ್ತಿದ್ದೆವು. ಆದರೆ ಮ್ಯಾಡಂ ಅವರ ಕ್ಲಾಸೆಂದರೆ ಎಲ್ಲಿಲ್ಲದ ಹಿಗ್ಗು, ಉತ್ಸಾಹ. ಅವರು ದೂರದಲ್ಲಿ ಹೊರಟಾಗಲೇ ತರಗತಿಯಲ್ಲಿಯ ಹುಡುಗರು ಹೋ ಅಂತ ಕಿರುಚುತ್ತ, ಟೇಬಲ್ ಮೇಲೆ ಲಯಬದ್ಧವಾಗಿ ತಾಳ ತಟ್ಟುತ್ತಿದ್ದರು ಕೈಗಳಿಂದ. ವಿದ್ಯಾರ್ಥಿಗಳ ಇಂಥ ಪ್ರೀತಿಯ ಸ್ವಾಗತಕ್ಕೆ ಅವರು ಮುಗುಳ್ನಗುತ್ತ ಬಂದರೂ ಅವರ ಕೈಯಲ್ಲಿಯ ಕರವಸ್ತ್ರ ಅವರ ಮುಖ, ಹಣೆ ಒತ್ತುತ್ತಿತ್ತು. ಬೆವರಿನ ಸಣ್ಣ ಬಿಂದುಗಳು ಅವರ ನುಣುಪಿನ ಹಣೆಯ ಮೇಲೆ ಮುತ್ತಿನ ಚಿತ್ತಾರ ಬಿಡಿಸುತ್ತಿದ್ದುದು ತೀರಾ ಮುಂದಿನ ಬೆಂಚಿನಲ್ಲಿ ಕುಳಿತ ನಮಗೆ ಸ್ಪಷ್ಟವಾಗಿ ಕಾಣುತ್ತಿತ್ತು.

ಆದರೆ ನನಗೆ ಅವರ ಕೈಯಲ್ಲಿ ಓದುವ ಅವಕಾಶ ಮುಂದಿನ ವರ್ಷ ಇರಲಿಲ್ಲ. ನನ್ನ ಪಿ.ಯು.ಸಿ. ಒಂದು ವರ್ಷ ಮುಗಿದಾಗಲೇ ಮುಂದಿನ ವರ್ಷ ಸರಕಾರಿ ಡಿಗ್ರಿ ಕಾಲೇಜಿನ ಸಮಯದ ವೇಳಾಪಟ್ಟಿ ಬದಲಾಯಿತು. ಹಿಂದೆ ಬೆಳಗಿನ ಅವಧಿಯಲ್ಲಿ ನಡೆಯುತ್ತಿದ್ದ ಆರ್ಟ್ಸ್ ತರಗತಿಗಳೂ ಈಗ ಹತ್ತು ಗಂಟೆಗೇ ನಡೆಯತೊಡಗಿದವು. ಹತ್ತು ಗಂಟೆಗೇ ನಾನು ನನ್ನ ಕಚೇರಿಯ ಕೆಲಸಕ್ಕೆ ಹೋಗಬೇಕಾಗುತ್ತಿತ್ತಲ್ಲ. ನಾನು ಅನಿವಾರ್ಯವಾಗಿ ಕಾಲೇಜನ್ನೇ ಬದಲಾಯಿಸಬೇಕಾಯಿತು. ಆಗ ಕಲಬುರ್ಗಿಯಲ್ಲಿಯ ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯವು ಬೆಳಗಿನಲ್ಲಿ ನಡೆಯುತ್ತಿತ್ತು. ನಾನು ಬಿ.ಎ. ಪ್ರಥಮ ವರ್ಷಕ್ಕೆ ಆ ಕಾಲೇಜಿಗೆ ನಡೆದೆ. ಹೀಗಾಗಿ ಶೈಲಜಾ ಉಡಚಣ ಅವರು ನನಗೆ ಒಂದೇ ಒಂದು ವರ್ಷದ ಗುರು. ಉಳಿದೆಲ್ಲ ವರ್ಷಗಳು ಗೆಳತಿಯರಾದರು.

ಹೀಗಾಗಿ ನನಗೂ ಮ್ಯಾಡಂ ಶೈಲಜಾ ಅವರಿಗೂ ಸಂಪರ್ಕ ಕಡಿದುಹೋಯಿತು. ಆದರೆ ಒಂದು ವರ್ಷದಲ್ಲಿ ನಾನು ಅವರಿಂದ ಕನ್ನಡವನ್ನು ಚೆನ್ನಾಗಿ ಕಲಿತೆ. ಹಲವಾರು ಸಮಸ್ಯೆಗಳನ್ನು ನಾನು ಮತ್ತೆ ನನ್ನ ಗೆಳತಿಯರು ಸ್ಟಾಫ್ ರೂಮಿಗೆ ಹೋಗಿ ಅವರು ಫ್ರೀ ಇದ್ದಾಗ ಬಗೆಹರಿಸಿಕೊಳ್ಳುತ್ತಿದ್ದೆವು. ನಮ್ಮನ್ನು ಬಹಳ ಪ್ರೀತಿಯಿಂದ ಕಾಣುತ್ತಿದ್ದ ಮೇಡಂ ಅಂದರೆ ನಮಗೆಲ್ಲ ಅಚ್ಚುಮೆಚ್ಚು.

ಎಸ್.ಬಿ. ಕಾಲೇಜಿನಲ್ಲಿ ನನ್ನ ವಿದ್ಯಾಭ್ಯಾಸ ಮುಂದುವರೆಯಿತು. ಡಾ. ಎಂ.ಜಿ. ಬಿರಾದಾರ, ಡಾ. ಬಾಣದ, ಡಾ. ಮಲ್ಲಾಪೂರರ ಮಾರ್ಗದರ್ಶನದಲ್ಲಿ ನಾನು ಬಿ.ಎ. ಮುಗಿಸಿದೆ. ಈ ಕಾಲೇಜಿನಲ್ಲಿಯೇ ನಾನು ಕಥೆ ಬರೆಯಲು ಶುರುಮಾಡಿದ್ದು. ಕಾಲೇಜಿನ ಮ್ಯಾಗಜಿನ್‌ಗಳಲ್ಲಿ ನನ್ನದೊಂದು ಕಥೆ ಇರುತ್ತಿತ್ತು. ಪ್ರತಿಯೊಂದು ಚರ್ಚಾಕೂಟದಲ್ಲಿ ನನ್ನದೊಂದು ಭಾಷಣ ಇರುತ್ತಿತ್ತು. ಡಾ. ಎಂ.ಜಿ. ಅವರಿಂದ ನಾವು ಬಹಳ ಕಲಿತೆವು. ನನ್ನ ಸಾಹಿತ್ಯಕ್ಕೆ ಅವರು ನೀಡಿದ್ದ ಪ್ರೋತ್ಸಾಹ ದೊಡ್ಡದು. ಅವರ ನಾಟಕದಲ್ಲಿ ನಾನು ಅಭಿನಯಿಸುತ್ತಿದ್ದೆ.

ಸಮಯ ಸರಿಯುತ್ತಿತ್ತು. ಮುಂದೆ ನನ್ನ ಕತೆಗಳು ಕನ್ನಡದ ಪ್ರಸಿದ್ಧ ನಿಯತಕಾಲಿಕೆಗಳಲ್ಲಿ ಪ್ರಕಟವಾಗತೊಡಗಿದವು ಆಗ ಶೈಲಜಾ ಉಡಚಣ ಅವರು ಭೇಟಿಯಾದಾಗಲೆಲ್ಲ ನನ್ನ ಬೆನ್ನು ತಟ್ಟುತ್ತಿದ್ದರು. "ನಿನ್ನ ಬರಹ ಬರೀ ಕಥೆ ಬರೆಯಲ್ಲೊಂದಕ್ಕಷ್ಟೇ ಸೀಮಿತವಾಗಬಾರ್ದು ಗೀತಾ.... ಕಾದಂಬರಿ ಬರಿ. ವೈಚಾರಿಕ ಲೇಖನ ಬರಿ... ನಿನ್ನೊಳಗೆ ಪ್ರತಿಭೆ ಅದಾ... ಒಂದಿನಾ ನೀ ದೊಡ್ಡ ಬರಹಗಾರ್ತಿ ಆಗ್ತಿಯವಾ..." ಎಂದು ಅತ್ಯಂತ ಆತ್ಮೀಯತೆಯಿಂದ ನುಡಿದು ಬೆನ್ನು ಸವರುತ್ತಿದ್ದರೆ ಆಗ ಕೃತಜ್ಞತೆ, ಸಂತಸಗಳಿಂದ ನನ್ನ ಕಣ್ಣುಗಳು ಹಸಿಯಾಗುತ್ತಿದ್ದವು.

ನನ್ನ ಜಿಲ್ಲೆಯ ಪ್ರಾದೇಶಿಕ ಭಾಷೆಯಲ್ಲಿ ಬರೆದ ನನ್ನ ಮೊದಲ ಕಾದಂಬರಿ 'ಮಾಪುರ ತಾಯಿಯ ಮಕ್ಕಳು' ಮಯೂರ ಮಾಸ ಪತ್ರಿಕೆಯಲ್ಲಿ ಪ್ರಕಟವಾಗಿ ವಿಮರ್ಶಕರು ನನ್ನ ಕಡೆಗೆ ನೋಡುವಂತಾಯಿತು. 'ಹಸಿ ಮಾಂಸ ಮತ್ತು ಹದ್ದುಗಳು' ತರಂಗ ವಾರ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡು, ಸಿನೆಮಾ ಆಗಿ ಎಲ್ಲರ ಮೆಚ್ಚುಗೆ ಗಳಿಸಿತು. 'ಲಂಕೇಶ್ ಪತ್ರಿಕೆ'ಯಲ್ಲಿ ನನ್ನ 'ನೀಲಗಂಗಾ' ಕಾದಂಬರಿ ಪ್ರಕಟವಾಗಿ, ನಮ್ಮ ಜಿಲ್ಲೆಯ ಗಂಡುಭಾಷೆಗೆ ಹೊರಗಿನವರೆಲ್ಲ ಆಕರ್ಷಿತರಾದಾಗ ನನಗಿಂತ ಹೆಚ್ಚು ಖುಷಿಪಟ್ಟವರೆಂದರೆ ನನ್ನ ಗುರು-ಗೆಳತಿ ಡಾ. ಶೈಲಜಾ ಉಡಚಣ. "ಭಾಳ ಬೋಲ್ಡಾಗಿ ಬರೀತಿಯವಾ ಗೀತಾ... ಹಿಂಗೇ ಇದೇ ಭಾಷಾದಾಗ ಬರ್ಕೋತ ಹೋಗು. ಗುಲಬರ್ಗಾದ ಹಳ್ಳಿ ಕನ್ನಡ ಭಾಷಾಕ ದುಡಿಸ್ಕೋಳಕತ್ತೀದಿ. ನಾವೆಲ್ಲಾ ಬರೀಬೇಕಂತ ಅನಕೊಂಡು ಬರೆಯುವ ಧೈರ್ಯ ಮಾಡಲಾರ್ದ ಎಷ್ಟೋ ವಿಷಯ ನೀ ಬರೀಲಕ್ಹತ್ತೀದಿ. ಶಹಬ್ಬಾಸ್... ಹಿಂಗೇ ಇದೇ ಧೈರ್ಯದಿಂದ, ಗಟ್ಟಿತನದಿಂದ ಬರ್ಕೋತ ಹೋಗು ಗೀತಾ.... ಕನ್ನಡ ಸಾಹಿತ್ಯಕ್ಕ ನಿಂದೇ ಒಂದು ವಿಶಿಷ್ಟ ಕೊಡುಗೆ ಆಗ್ತದ." ಅಂತಂದು ಪ್ರೋತ್ಸಾಹಿಸುವ ಹೃದಯವಂತಿಕೆ ಅವರದ್ದು! ಒಬ್ಬ ಸಾಹಿತಿ ಮುಂದೆ ಬಂದರೆ ಹೊಟ್ಟೆಕಿಚ್ಚು ಪಟ್ಟು ಅವರನ್ನು ಹಿಂದೆ ತಳ್ಳುವ ಹುನ್ನಾರ ಮಾಡುವ ಬರಹಗಾರರೇ ಬಹಳಷ್ಟಿರುವ ಈ ದಿನಗಳಲ್ಲಿ ಸ್ವತಃ ತಾವು ದೊಡ್ಡ ಕವಯತ್ರಿಯಾಗಿ ಹೆಸರು ಗಳಿಸಿದ್ದ ನನ್ನ ಗೆಳತಿ ನನ್ನನ್ನು ಪ್ರೋತ್ಸಾಹಿಸುವ ಅಂತಃಕರಣದ ಅಪರೂಪದ ಸಾಹಿತಿ.

ಡಾ. ಶೈಲಜಾ ಆರಿಸಿಕೊಂಡದ್ದು ಕಾವ್ಯ ಪ್ರಕಾರ. ಹೈದ್ರಾಬಾದ ಕರ್ನಾಟಕದ ಪ್ರಪ್ರಥಮ ಕವಯಿತ್ರಿ ಅವರು. 'ಒಂದು ಗಳಿಗೆ', 'ಕಾದುನೋಡು', 'ಕಪ್ಪು ನೆಲದ ಸೊಕ್ಕಿದ ಸೂರ್ಯ', 'ಸ್ವಗತ', 'ನನ್ನಂಥವರು' ಮೊದಲಾದವುಗಳು ಹಲವು ಕವನ ಸಂಕಲನವಿದ್ದರೆ, 'ಕೇಳುಮಗಾ', 'ಗಿರಿಸುತೆಯ ವಚನಗಳು' ಮೊದಲಾದ ಕೃತಿಗಳು ಇವರ ಸೃಜನಶೀಲತೆಯನ್ನು ಹಾಗೂ ಇವರನ್ನು ಆಧುನಿಕ ವಚನಕಾರ್ತಿಯೆಂದು ದಾಖಲಿಸಿದೆ. 'ಕೇಳುಮಗಾ' ಇವರ ಅಂತರಾತ್ಮದ ದನಿಯಾಗಿ ಇವರ ಮಾಗಿದ ಬದುಕಿನ ಅನುಭವವನ್ನು ಹೊಸತನದ ಹಾದಿಯಲ್ಲಿ ಕಟ್ಟಿಕೊಟ್ಟ ರೀತಿ ಅದ್ಭುತ! ಬಸವಣ್ಣನವರ ತತ್ವಗಳ ಬಗ್ಗೆ ವೇದಿಕೆಯ ಮೇಲೆ ನಿಂತು ಬೇಕಾದಷ್ಟು ವಿದ್ವಾಂಸರು ಉದ್ದುದ್ದನೆಯ ಭಾಷಣ ಬಿಗಿಯುತ್ತಾರೆ ಖರೇ. ಆದರೆ ಅವರ ತತ್ವಗಳಲ್ಲಿ ಬದುಕುವುದು ಬಹಳ ಕಡಿಮೆ ಜನ. ಅಂಥ ಕಡಿಮೆ ಜನರಲ್ಲಿ ಶೈಲಜಾ ಉಡಚಣ ಒಬ್ಬರು ಎಂದರೆ ಅತಿಶಯೋಕ್ತಿಯೇನಲ್ಲ. ಶರಣ ಸಂಸ್ಕೃತಿಯನ್ನು ತಮ್ಮ ಸಂಸ್ಕಾರವಾಗಿಸಿಕೊಂಡಿರುವ ಶೈಲಜಾ ಅವರು ಯಾರನ್ನೇ ಆಗಲಿ ಭೇಟಿಯಾದರೆ ಇವರ್‍ಯಾರು? ಅಂತ ಕೇಳದೆ ಇವ ನಮ್ಮವ, ಇವಳು ನಮ್ಮವಳು, ಎಂದು ಹತ್ತಿರ ಕರೆದು ಬೆನ್ನು ಸವರಿ "ಏನು ಮಗಾ? ಹ್ಯಾಂಗಿದ್ದಿ?" ಅಂತಲೇ ಮಾತಾಡಿಸುತ್ತ ಅಪರಿಚಿತರನ್ನೂ ಆಪ್ತರನ್ನಾಗಿಸಿಕೊಳ್ಳುತ್ತಾರೆ. ತಮ್ಮಾ, ಮಗಾ, ತಂಗೀ, ಅಂತ ಆತ್ಮೀಯತೆಯಿಂದ ಸಂಬೋಧಿಸುವ ಇವರ ಮಾತುಗಳು ಹೂವುಗಳಂತೆ ಕೋಮಲ, ಆದರೆ ಒಮ್ಮೊಮ್ಮೆ ಸಿಟ್ಟುಬಂದಾಗ ಅವೇ ಮಾತು ವಜ್ರದಷ್ಟು ಕಠಿಣವಾಗುವ ಸಂದರ್ಭಗಳೂ ಇವೆ.

ಹೈದ್ರಾಬಾದ ಕರ್ನಾಟಕದ ಮಹಿಳೆಯರ ಬಗ್ಗೆ ಇವರಿಗೆ ತುಂಬ ಕಾಳಜಿ. ಹೆಣ್ಣುಮಕ್ಕಳು ಮೊದಲು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು. ಅಂದರೆ ಅವರ ಶೋಷಣೆ ಸ್ವಲ್ಪವಾದರೂ ತಪ್ಪುತ್ತದೆ ಎನ್ನುವ ಇವರು ಕಲಬುರ್ಗಿಯಲ್ಲಿ ಮೊಟ್ಟಮೊದಲು 'ಮಹಿಳಾ ಅಭಿವೃದ್ಧಿ ಬ್ಯಾಂಕ್'ನ್ನು ಸ್ಥಾಪಿಸಿದರು. ಮಹಿಳೆಯರಿಗಾಗಿ, ಮಹಿಳೆಯರಿಂದಲೇ ನಡೆಯುವ ಈ ಬ್ಯಾಂಕು ಕಟ್ಟಲು ಇವರು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಇವತ್ತು ಎಷ್ಟೋ ಮಂದಿ ಬಡ ಮಹಿಳೆಯರು ಈ ಬ್ಯಾಂಕಿನ ಸಹಾಯ ಪಡೆದು, ಸ್ವಂತ ಉದ್ಯೋಗದಲ್ಲಿ ತೊಡಗಿ ಸ್ವಾವಲಂಬಿಗಳಾಗಿರುವುದರ ಶ್ರೇಯಸ್ಸು ಶೈಲಜಾ ಅವರಿಗೇ ಸಲ್ಲುತ್ತದೆ.

ಶೈಲಜಾ ಉಡಚಣ ಅವರಿಗೆ ಬೇಂದ್ರೆ ಮತ್ತು ಬಸವರಾಜ ಕಟ್ಟೀಮನಿಯವರ ಸಾಹಿತ್ಯ ಬಲುಮೆಚ್ಚು. ಬೇಂದ್ರೆಯಂತೆ ಕಾವ್ಯಕ್ಕೆ ಒಲಿದ ಜೀವ ಬಸವರಾಜ ಕಟ್ಟೀಮನಿಯವರಂತೆ ಬೋಲ್ಡ್ ಆಗಿ ಬರೆಯಲು ಯಾಕೆ ಹಿಂಜರಿಯಿತೊ? ಗೊತ್ತಿಲ್ಲ. ಕಂದಾಚಾರಿಗಳ ವಿರುದ್ಧ, ಬಡವರ ಶೋಷಣೆಯ ವಿರುದ್ಧ, ನಕಲಿ ಸ್ವಾಮಿಗಳ ವಿರುದ್ಧ, ಮಠಮಾನ್ಯಗಳಲ್ಲಿ ನಡೆಯುವ ಅನ್ಯಾಯ, ಅನಾಚಾರಗಳ ವಿರುದ್ಧ ಕಟ್ಟೀಮನಿಯವರಂತೆ ದನಿಯೆತ್ತಿ ಬರೆದಿದ್ದರೆ ಶೈಲಜಾರ ಬರಹಕ್ಕೊಂದು ಬಂಡಾಯ ಧೋರಣೆಯ ಮೆರಗು ಖಂಡಿತ ಬರುತ್ತಿತ್ತು.

ಮುಂದೆ ನಾವಿಬ್ಬರೂ ಸಭೆ, ಸಮ್ಮೇಳನಗಳಲ್ಲಿ ವೇದಿಕೆಯನ್ನು ಹಂಚಿ ಕೊಳ್ಳುತ್ತಿದ್ದೆವು. ನನ್ನನ್ನು ಶಿಷ್ಯಳಿಗಿಂತ ಹೆಚ್ಚಾಗಿ ಗೆಳತಿಯಂತೆ, ತಂಗಿಯಂತೆ ಬಲು ಪ್ರೀತಿಯಿಂದ ನಡೆಯಿಸಿಕೊಂಡ ಅವರ ಹೃದಯ ವೈಶಾಲ್ಯವನ್ನು ಅಕ್ಷರಗಳಲ್ಲಿ ಅಳವಡಿಸುವುದು ಸಾಧ್ಯವಿಲ್ಲ. ಅವರ ಸ್ನೇಹ

ಮತ್ತು ಆತ್ಮೀಯತೆಯನ್ನು ಅನುಭವಿಸಿಯೇ ಅರಿತುಕೊಳ್ಳಬೇಕು. ಕವಯಿತ್ರಿ ಶೈಲಜಾ ಅವರು ಸಹಜವಾಗಿಯೇ ಸೌಂದರ್ಯ ಪ್ರಿಯರು. ಶೃಂಗಾರ ಪ್ರಿಯರೂ ಕೂಡ. ಬಣ್ಣ ಬಣ್ಣದ ರೇಶಿಮೆಯ ಭರ್ಜರಿ ಸೀರೆಯುಟ್ಟು ಅವರು ಸಭೆ-ಸಮಾರಂಭಗಳಿಗೆ ಬಂದು ಕುಳಿತರೆ ವೇದಿಕೆಯ ಶೋಭೆ ಹೆಚ್ಚುತ್ತದೆ. ಮೈಕಿನ ಮುಂದೆ ನಿಂತರೆ ಸಮಯದ ಪರಿವೆಯೇ ಇರುವುದಿಲ್ಲ. ಉತ್ತಮ ಭಾಷಣಕಾರ್ತಿ ಅವರು.

ಕಲಬುರ್ಗಿ ಜಿಲ್ಲೆಯ ಮೂರನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯಾಗಿ ಭಾಷಣ ಮಾಡುತ್ತಿದ್ದಾಗ ಅವರು ಒಂದು ಮಾತು ಹೇಳಿದ್ದರು. "ನಾನು ರಾಯಚೂರಿನ ಮಗಳು, ಕಲಬುರ್ಗಿಯ ಸೊಸೆ" ಅಂತ. ಹೌದು, ರಾಯಚೂರಿನ ಹಸ್ಮಕಲಸ್‌ನ ಮಗಳಾದ ಮಹಾಂತಮ್ಮ' ಮುಂದೆ ಕಲಬುರ್ಗಿಯ 'ಉಡಚಣ'ದ ಬಸವರಾಜರನ್ನು ಮದುವೆಯಾಗಿ 'ಶೈಲಜಾ ಉಡಚಣ' ಅಂತ ನಮ್ಮೂರ ಸೊಸೆಯಾದರು. ಹುಟ್ಟಿದ ಮನೆ, ಮೆಟ್ಟಿದ ಮನೆ – ಎರಡಕ್ಕೂ ಕೀರ್ತಿ ತರುವಂಥ ಅಪ್ಪಟ ಗೃಹಿಣಿಯಾಗಿ ಈ ಭಾಗದ ಅಪರೂಪದ ಸಾಹಿತಿಯೂ ಆದರು.

ಹಾಗೆ ನೋಡಿದರೆ ಡಾ. ಶೈಲಜಾ ಅವರಿಗೆ ಬಂದ ಪ್ರಶಸ್ತಿಗಳು ಬಹಳ. ಅವುಗಳನ್ನು ಹೆಸರಿಸುತ್ತ ಹೋದರೆ ಅದೇ ಎರಡು ಪುಟಗಳಷ್ಟಾಗಬಹುದು. ಲೇಖನಕ್ಕೆ ಪುಟಗಳ ಮಿತಿ ಅಳವಡಿಸಿರುವುದರಿಂದ ಅವುಗಳನ್ನಿಲ್ಲಿ ಪಟ್ಟಿ ಮಾಡಿಲ್ಲ ಅಷ್ಟೆ. ಆದರೆ ನನ್ನ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲೇ ಅವರಿಗೆ, 'ದಾನಚಿಂತಾಮಣಿ' ಪ್ರಶಸ್ತಿ ದೊರೆತದ್ದು ನನಗೆ ಹೆಮ್ಮೆ.

ಮ್ಯಾಡಂ ಅವರು ಉತ್ತಮ ಗೃಹಿಣಿ ಆಗಿರುವಂತೆ ಉತ್ತಮ ಸಾಹಿತಿಯೂ ಆಗಿರುವುದರ ಶ್ರೇಯಸ್ಸಿಗೆ ಸರಿಯಾಗಿ ಅರ್ಧ ಭಾಗ ಅವರ ಪತಿ ಬಸವರಾಜ ಅವರಿಗೆ ಸಲ್ಲಲೇಬೇಕು. ಅವರು ಹೆಂಡತಿಯ ಸಾಹಿತ್ಯವನ್ನು ಪ್ರೋತ್ಸಾಹಿಸಿದರೋ ಇಲ್ಲವೋ ಗೊತ್ತಿಲ್ಲ. ಆದರೆ ಇವರ ಸಾಹಿತ್ಯ ಕೃಷಿಗೆ ಅಡ್ಡಬರಲಿಲ್ಲ, ಆತಂಕ ಒಡ್ಡಲಿಲ್ಲ. ಬೇರೆ ಬಹುತೇಕ ಗಂಡಂದಿರಂತೆ ಹೆಂಡತಿಯ ಕೀರ್ತಿಗೆ, ಹೊಟ್ಟೆಕಿಚ್ಚು ಪಡಲಿಲ್ಲ. ದುರಭಿಮಾನದಿಂದ ಪತ್ನಿಯ ಪ್ರಸಿದ್ಧಿಯನ್ನು ಚಿಗುರುವಾಗಲೇ ಚಿವುಟಲಿಲ್ಲ. 'ಏನಾದರೂ ಮಾಡಿಕೊ' ಅನ್ನುವಂತೆ ನಿರ್ಲಿಪ್ತತೆಯಿಂದಿದ್ದ ಬಸವರಾಜ ಉಡಚಣ ಅವರ ಈ ನಿರ್ಲಿಪ್ತತೆ'ಯೇ ಮೇಡಂ ಅವರ ಬೆನ್ನು ತಟ್ಟಿರಬೇಕು. ಅನ್ನಿಸಿದ್ದನ್ನು ಅಭಿವ್ಯಕ್ತಿಸುವ ಹುಮ್ಮಸ್ಸು ನೀಡಿರಬೇಕು. ಒಬ್ಬರನ್ನೊಬ್ಬರು ಅರಿತುಕೊಂಡು, ಒಬ್ಬರಿಗೊಬ್ಬರು ಸಹಕರಿಸುತ್ತ, ಸಹಬಾಳ್ವೆ ಮಾಡುತ್ತ ಬಂದಿರುವ ಇವರದು ಅಪರೂಪದ ಆದರ್ಶ ದಾಂಪತ್ಯ.

ಮ್ಯಾಡಂ ಅವರು ನನ್ನನ್ನು ಗುರುವಾಗಿ ಕಲಿಸಿದ್ದಕ್ಕಿಂತ ಗೆಳತಿಯಾಗಿ, ಪ್ರೀತಿಸಿದ್ದೇ ಜಾಸ್ತಿ. ಕೆಲವೊಮ್ಮೆ 'ಹಾಂಗಲ್ಲ ಮಗಾ...' ಅಂತ 'ಹಿಂಗ ಮಾಡು ತಂಗೀ' ಅಂತ ತಿದ್ದಿ ತಿಳಿಸಿ ಮಗಳಿಗೆ ಹೇಳುವಂತೆ ಹೇಳಿ ಮಮತೆ ನೀಡಿದ್ದಾರೆ. ನಾನು ಬರೆದದ್ದೆಲ್ಲ ಮೆಚ್ಚಿ, ನನಗೆ ಪ್ರಶಸ್ತಿಗಳು ಬಂದಾಗಲೆಲ್ಲ ಖುಷಿಪಟ್ಟು, ನನಗೆ ಸಮಸ್ಯೆಗಳು ಎದುರಾದಾಗಲೆಲ್ಲ ಸಮಾಧಾನದಿಂದ ಸಂತೈಸಿ ನನಗೆ ದಾರಿದೀಪವಾಗಿ ಬೆಳಕು ನೀಡಿದ್ದಾರೆ.

❖

# ಪ್ರೀತಿಯ ಗುರುಗಳು

## (ಡಾ॥ ಜಿ.ಎಸ್. ಶಿವರುದ್ರಪ್ಪ)

*● ಟಿ.ಎಸ್. ದಕ್ಷಿಣಾಮೂರ್ತಿ*

ಜಿಎಸ್‌ಎಸ್ ಅವರು ನನಗೆ ಬಹಳ ಮೆಚ್ಚಿಗೆಯಾದ ಗುರುಗಳು. ನಾನು ಪ್ರಾಥಮಿಕ ಶಾಲೆಯಿಂದ ಎಂ.ಎ.ದವರೆಗೆ ಕಂಡ ಅನೇಕ ಗುರುಗಳಲ್ಲಿ ಸುಮಾರು ೫ ಅಥವಾ ೬ ಜನ ಮಾತ್ರ ನನ್ನ ಬದುಕಿನ ಮೇಲೆ ವಿಶೇಷ ಪರಿಣಾಮ ಬೀರಿದ್ದಾರೆ. ಅವರಲ್ಲಿ ಜಿಎಸ್‌ಎಸ್ ಕೂಡ ಒಬ್ಬರು ಮತ್ತು ಪ್ರಮುಖರು.

ಜಿಎಸ್‌ಎಸ್ ಅವರನ್ನು ನಾನು ಮೊದಲ ಬಾರಿಗೆ ನೋಡಿದ್ದು ನನ್ನ ಗುರುಗಳಾದ ಪ್ರೊ. ಕೆ.ಜಿ. ನಾಗರಾಜಪ್ಪನವರ ಜೊತೆ ಅವರ ಮನೆಯಲ್ಲಿ. ಆಗ ಅವರು ಗವಿಪುರಂ ಬಡಾವಣೆಯಲ್ಲಿ (ರಾಮಕೃಷ್ಣಾಶ್ರಮದ ಪಕ್ಕ), ಈಗ ವಾಸವಾಗಿರುವ ಬನಶಂಕರಿಯಲ್ಲಿರುವ 'ಚೈತ್ರ'ಕ್ಕೆ ಬರುವ ಮುನ್ನ ವಾಸಿಸುತ್ತಿದ್ದರು. ನಾನು ಜಿಎಸ್‌ಎಸ್ ಅವರನ್ನು ಅನಂತರ ನೋಡಿದ್ದು ಪ್ರಥಮ ಎಂ.ಎ. ತರಗತಿಯ ವಿದ್ಯಾರ್ಥಿಯಾಗಿ. ಎಂ.ಎ. ತರಗತಿಗಳು ಆಗ ಸೆಂಟ್ರಲ್ ಕಾಲೇಜಿನಲ್ಲಿ ನಡೆಯುತ್ತಿದ್ದವು. ಕನ್ನಡ ಅಧ್ಯಯನ ಕೇಂದ್ರ ಆಗಿನ್ನು ಸೆಂಟ್ರಲ್ ಕಾಲೇಜಿನಲ್ಲಿಯೇ ಇತ್ತು. ಜಿಎಸ್‌ಎಸ್ ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರು ಹಾಗು ನಿರ್ದೇಶಕರು ಆಗಿದ್ದರು. ಕನ್ನಡ ಅಧ್ಯಯನ ಕೇಂದ್ರ ಇಡೀ ರಾಜ್ಯದಲ್ಲಿ ಹೆಸರು ವಾಸಿಯಾಗಿತ್ತು. ಇದಕ್ಕೆ ಕಾರಣ ಜಿಎಸ್‌ಎಸ್.

೧೯೭೭ರ ಆಗಸ್ಟ್ ತಿಂಗಳಲ್ಲಿ ಎಂ.ಎ. ತರಗತಿಗಳು ಆರಂಭವಾದವು. ನಾನು 'ಭಾವಗೀತೆ'ಯನ್ನು ಒಂದು ವಿಶೇಷ ವಿಷಯವನ್ನಾಗಿ ತೆಗೆದುಕೊಂಡಿದ್ದೆ. ಭಾವಗೀತೆಯ ಕ್ಲಾಸ್‌ಗೆ ಜಿಎಸ್‌ಎಸ್ ಬಂದರು. ಅಚ್ಚ ಬಿಳಿಯ ಕಚ್ಚೆ ಪಂಚೆ, ಹಾಲಿನಂತಹ ಬಿಳಿಯ ಹಲ್ಲುಗಳು, ಕನ್ನಡಕ, ಕುರ್ಚಿಯಲ್ಲಿ ಕುಳಿತು ಪಾಠ ಹೇಳುವ ರೀತಿ ಅತ್ಯಂತ ಆಕರ್ಷಕವಾಗಿತ್ತು.

ಮೊದಲ ದಿವಸ 'Lyric'–ಬಗ್ಗೆ ಹೇಳಿದರು. ಇದು Lyre ಎನ್ನುವ ತಂತಿ ವಾದ್ಯದಿಂದ ಬಂದ ರೀತಿ, ಇದರ ಸಹಾಯದೊಂದಿಗೆ ಹಾಡುವ ಗೀತೆಯನ್ನು ಭಾವಗೀತೆಯೆಂದು ಕರೆದ ಬಗೆ ಇತ್ಯಾದಿಗಳನ್ನು ಹೇಳಿ; Lyric ಎಂದರೆ ಭಾವಗೀತೆ; ಇದು ಕನ್ನಡಕ್ಕೆ ಇಂಗ್ಲಿಷಿನಿಂದ ಬಂದಿದೆ ಎಂದು ತಿಳಿಸಿದರು. ವರ್ಡ್ಸ್‌ವರ್ತ್ ಕೀಟ್ಸ್, ಶೆಲ್ಲಿ–ಇವರುಗಳ ಪದ್ಯಗಳನ್ನು ಹೇಳುತ್ತಾ, ಅದೇ ವಿಷಯಗಳನ್ನು ಕನ್ನಡದ ಕವಿಗಳು ಹೇಗೆ ಬರೆದಿದ್ದಾರೆ ಮುಂತಾದ ವಿಷಯವನ್ನು ವಿವರವಾಗಿ, ಸರಳವಾಗಿ, ಆತ್ಮೀಯವಾಗಿ ಹೇಳಿದರು.

ವರ್ಡ್ಸ್‌ವರ್ತ್‌ನ Introduction to the lyrical ballad ನಲ್ಲಿಯ ಮಾತುಗಳಲ್ಲಿ quote ಮಾಡುತ್ತಾ ಭಾವಗೀತೆಯ ಲಕ್ಷಣಗಳನ್ನು ವಿವರಿಸುತ್ತಿದ್ದರು. ಭಾವಗೀತೆಗೆ-ಭಾವನೆ (Feeling) ಹಾಗು ಗೇಯತೆ-ಇರಬೇಕು; ಯಾವುದೇ ವಸ್ತು ಭಾವಗೀತೆಯ ವಸ್ತುವಾಗಬಲ್ಲದು; ಒಂದು ಕ್ಷಣದ ಅನುಭವವೆ ಒಳ್ಳೆಯ ಭಾವಗೀತೆಯಾಗಬಲ್ಲದು ಎನ್ನುವುದನ್ನು-Lyric is a momentous monument ಎಂದು ವಿವರಿಸುತ್ತಿದ್ದರು.

ಬಿ.ಎಂ. ಶ್ರೀಯವರ ಇಂಗ್ಲಿಷ್ ಗೀತೆಗಳು ಕನ್ನಡ ಸಾಹಿತ್ಯದಲ್ಲಿ ಹೊಸತೊಂದು ಕಾವ್ಯಮಾರ್ಗ ಆರಂಭವಾಗಲು ಯಾವ ರೀತಿ ಸಹಕಾರಿಯಾಯಿತು ಎನ್ನುವದನ್ನು ವಿವರಿಸುತ್ತಾ; ಕುವೆಂಪು ಅವರ ಆರಂಭದ ಗೀತೆಗಳು-ವರ್ಡ್ಸ್‌ವರ್ತ್‌ನಿಂದ ಹೇಗೆ ಪ್ರಭಾವಿತವಾಗಿವೆ ಎನ್ನುವುದನ್ನು ಬಿಡಿಸಿ ಬಿಡಿಸಿ ಹೇಳುತ್ತಿದ್ದರು.

ಕುವೆಂಪು ಅವರ 'ಪಕ್ಷಿಕಾಶಿ' ನಮಗೆ ಪಠ್ಯವಾಗಿತ್ತು. ಈ ಒಂದು ಕವನ ಸಂಕಲನದ ಮೂಲಕ ಕುವೆಂಪು ಅವರ ಪ್ರಕೃತಿ ಪ್ರೇಮ; ಪ್ರಕೃತಿಯೇ ಪರಮಾತ್ಮನೆಂಬ ನಂಬಿಕೆ-ಮುಂತಾದ ವಿಚಾರಗಳನ್ನು ವಿವರಿಸುತ್ತಿದ್ದರು. ಅವರ ಸಂಸ್ಕೃತಮಯವಾದ ಭಾಷೆ ಬಗ್ಗೆ ವಿಮರ್ಶಿಸುತ್ತಿದ್ದರು. ಕುವೆಂಪು ಕನ್ನಡದ ವರ್ಡ್ಸ್‌ವರ್ತ್ ಎಂದು ಹೇಳುತ್ತಿದ್ದರು. ಹಾಗೆಯೇ, ಬೇಂದ್ರೆ, ಪು.ತಿ.ನ., ಕೆ.ಎಸ್.ನ., ಗೋಪಾಲಕೃಷ್ಣ ಅಡಿಗರ ಕವಿತೆಗಳನ್ನು ಅರ್ಥೈಸುವ ಮೂಲಕ ಅವರ ಎಲ್ಲಾ ಸಾಹಿತ್ಯವನ್ನು ಯಾವ ದೃಷ್ಟಿಯಿಂದ ನೋಡಬೇಕು ಎನ್ನುವುದನ್ನು ಮನದಟ್ಟಾಗುವಂತೆ ತಿಳಿಸುತ್ತಿದ್ದರು. ನವೋದಯ ಕವಿಗಳ ಬಗ್ಗೆ ಹೇಳುವಾಗ ಅಪಾರ ಅಭಿಮಾನವಾಗಲಿ, ನವ್ಯ ಕವಿಗಳ ವಿಚಾರದಲ್ಲಿ ಅನಾದರವಾಗಲಿ ಇರುತ್ತಿರಲಿಲ್ಲ. ಎಲ್ಲರನ್ನೂ, ಎಲ್ಲವನ್ನೂ ಸಮಾನ ದೃಷ್ಟಿಯಿಂದ ನೋಡುತ್ತಿದ್ದ ರೀತಿ ಮಾತ್ರ ನಮಗೆ ಬಹಳ ಮೆಚ್ಚುಗೆಯಾಗುತ್ತಿತ್ತು. ಜಿಎಸ್‌ಎಸ್ ಅವರು ಒಂದು ಗಂಟೆಯ ಪಾಠ ನಾವು ನೂರು ಪುಸ್ತಕಗಳನ್ನು ಓದಿದರೂ ಲಭ್ಯವಾಗದಷ್ಟು ಮಾಹಿತಿಯನ್ನು, ವಿಚಾರವನ್ನು, ವಿಮರ್ಶೆಯನ್ನು ಒದಗಿಸುತ್ತಿತ್ತು. ಜಿಎಸ್‌ಎಸ್ ಅವರ ತರಗತಿಯೆಂದರೆ ನಮಗೆಲ್ಲ ಒಂದು ರೀತಿಯ ಸ್ವರ್ಗ.

ಈ ರೀತಿ ಸಂತೋಷದಲ್ಲಿ ಪ್ರಥಮ ವರ್ಷದ ಎಂ.ಎ. ಓದುತ್ತಿರುವಾಗ ಒಂದು ದಿನ ನಮಗೆಲ್ಲ ಬೇಸರದ ಸಂಗತಿಯೊಂದು ತಿಳಿಯಿತು. "ಭಾರತ-ಸೋವಿಯತ್ ಸಾಂಸ್ಕೃತಿಕ ವಿನಿಮಯ ಯೋಜನೆ"ಯಡಿ ಸಂದರ್ಶಕ ಪ್ರಾಧ್ಯಾಪಕರಾಗಿ ಪ್ರೊ. ಜಿಎಸ್‌ಎಸ್ ಮಾಸ್ಕೋಗೆ ಹೋಗಲಿದ್ದಾರೆ ಎಂದು. ನಮ್ಮ ಪ್ರೊಫೆಸರ್ ಮಾಸ್ಕೋಕ್ಕೆ ಹೋಗುತ್ತಿರುವುದು ಸಂತಸದ ಸುದ್ದಿಯಾದರೂ, ಸುಮಾರು ಒಂದು ತಿಂಗಳು ಅವರ ಪಾಠ ಕೇಳುವ ಅವಕಾಶ ತಪ್ಪಿತಲ್ಲ ಎನ್ನುವ ನೋವು ಅಷ್ಟೆ. ಕನ್ನಡ ಅಧ್ಯಯನ ಕೇಂದ್ರದ ಅಧ್ಯಾಪಕರು, ತಮ್ಮ ಸೀನಿಯರ್ ವಿದ್ಯಾರ್ಥಿಗಳು ನಾವೆಲ್ಲರೂ ಸೇರಿ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಿದೆವು.

ಪ್ರೊ. ಜಿ.ಎಸ್. ಶಿವರುದ್ರಪ್ಪನವರು ಮಾಸ್ಕೊ ಪ್ರವಾಸ ಮುಗಿಸಿ ಬಂದ ಮೇಲೆ ಅಲ್ಲಿಯ ಅನುಭವವನ್ನು ಕುರಿತು ಒಂದು ದಿನ ಉಪನ್ಯಾಸ ಮಾಡಿದರು. ರಂ.ಶ್ರೀ. ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ'ಯ ಪುಸ್ತಕ ಮಾಸ್ಕೋದ ಗ್ರಂಥಾಲಯವೊಂದರಲ್ಲಿ ಇರುವುದಾಗಿ

ತಿಳಿಸಿದರು. ರಷ್ಯಾದ ಪ್ರಖ್ಯಾತ ಸಾಹಿತಿ ಟಾಲ್‌ಸ್ಟಾಯ್ ಬೆಳೆದ 'ಮಲೆನಾಡಿ'ನ ಬಗ್ಗೆ ವಿವರವಾಗಿ ವಿವರಿಸಿ-ನಮಗೆಲ್ಲ ಸಂತೋಷವುಂಟು ಮಾಡಿದರು. ಪ್ರವಾಸದ ಅನುಭವವನ್ನು ಪ್ರವಾಸ ಕಥನವನ್ನಾಗಿ ಬರೆಯುವುದಾಗಿ ಪ್ರಕಟಿಸಿದರು.

"ಮಾಸ್ಕೊದಲ್ಲಿ ಇಪ್ಪತ್ತೆರಡು ದಿನ"-ಜಿಎಸ್‌ಎಸ್ ಅವರ ಮೊದಲ ಪ್ರವಾಸ ಕಥನ. ಆವರೆಗೆ ಬಂದಿದ್ದ ಎಲ್ಲ ಪ್ರವಾಸ ಕಥನಗಳಿಗಿಂತ ಭಿನ್ನವಾದ ಪ್ರವಾಸ ಕಥನವೆಂದು ಓದುಗರ ಮೆಚ್ಚುಗೆಗೆ ಪಾತ್ರವಾಗಿದೆ. ಸೊಗಸಾದ ಕಾವ್ಯಭಾಷೆಯ ನಿರೂಪಣೆ, ಜಿಎಸ್‌ಎಸ್ ಅವರ ಶೈಲಿ ಎಷ್ಟು ಹದ, ಎಷ್ಟು ಮೃದು, ಎಷ್ಟು ಸರಳ ಎನ್ನುವುದಕ್ಕೆ ಈ ಪುಸ್ತಕ ಸಾಕ್ಷಿಯಾಗಿದೆ.

ಒಂದು ದಿನ ನಾನು ತರಗತಿಯಲ್ಲಿ ಪಾಠ ಕೇಳುತ್ತಿದ್ದಾಗ, "ಪ್ರೊ. ಜಿಎಸ್‌ಎಸ್ ಅವರನ್ನು, ಅವರ ಛೇಂಬರಿನಲ್ಲಿ ತರಗತಿ ಮುಗಿದ ಮೇಲೆ ನೋಡಬೇಕಂತೆ" ಎನ್ನುವ ಸೂಚನೆ ನನಗೆ ಬಂತು. ಸೂಚನೆ ತಲುಪಿದ ಮೇಲೆ ನನಗೆ ಒಂದು ರೀತಿಯ ಆಶ್ಚರ್ಯ, ಸಂತೋಷ, ಕುತೂಹಲ ಎಲ್ಲವೂ ಏಕ ಕಾಲದಲ್ಲಿಯೇ ಉಂಟಾದವು. ನನ್ನ ಸಹಪಾಠಿಗಳಿಗೆ ಒಂದು ರೀತಿಯ ಕುತೂಹಲ. ಏನು ಜಿಎಸ್‌ಎಸ್ ಈತನನ್ನು ಕರೆದಿದ್ದಾರೆ? ಏನು ವಿಷಯ ಇತ್ಯಾದಿ.... ತರಗತಿ ಮುಗಿದ ಮೇಲೆ ಭಯಭಕ್ತಿಯಿಂದ ನಾನು ಜಿಎಸ್‌ಎಸ್ ಅವರ ಛೇಂಬರಿಗೆ ಹೋದೆ. "ಸಾರ್ ನನ್ನನ್ನು ಕರೆದರಂತೆ" ಎಂದೆ. ಅದಕ್ಕೆ ಪ್ರೊಫೆಸರ್ "ಹೌದು ಇಂದು ಸಂಜೆ ನನ್ನ ಜೊತೆ ಮನೆಗೆ ಬನ್ನಿ" ಎಂದರು. ಯಾಕೆ? ಎಂದು ಕೇಳುವ ಧೈರ್ಯವಿಲ್ಲದೆ, ಮರುಮಾತನಾಡದೆ ವಾಪಸ್ ತರಗತಿಗೆ ಬಂದೆ.

ಅಂದು ಸಂಜೆ ತರಗತಿಗಳು ಮುಗಿದ ಮೇಲೆ ಜಿಎಸ್‌ಎಸ್ ಅವರ ಜೊತೆ ಅವರ ಸ್ಟಾಂಡರ್ಡ್ ಕಾರಿನಲ್ಲಿ ಗವಿಪುರಂನಲ್ಲಿಯ ಅವರ ಮನೆಗೆ ಹೋದೆ. ಲಘು ಉಪಹಾರವಾಯಿತು. ಸ್ವಲ್ಪ ಕಾಲ ಮೌನ. ಆಗ ಜಿಎಸ್‌ಎಸ್ ಹೇಳಿದರು "ನೋಡಿ ನಾವು ಈ ಅಕ್ಟೋಬರ್ ರಜೆಯಲ್ಲಿ ಪ್ರವಾಸ ಹೋಗುತ್ತಿದ್ದೇವೆ, ಮನೆಯಲ್ಲಿ ಯಾರು ಇರುವುದಿಲ್ಲ. ಹಾಸ್ಟೆಲಿನಲ್ಲಿ ಇರುವ ಬದಲು ಇಲ್ಲಿಯೇ ಇರಿ" ಎಂದು. ಪ್ರೊ. ಹೇಳುತ್ತಿದ್ದಾರೆ, ಉತ್ತರವಾಗಿ 'ಆಗಲಿ' ಎನ್ನುವುದನ್ನು ಬಿಟ್ಟು ಬೇರೆ ಏನು ಹೇಳಲು ಸಾಧ್ಯವಿಲ್ಲದೆ, "ಸರಿ, ಆಗಲಿ ಸಾರ್" ಎಂದೆ.

ಪ್ರವಾಸವನ್ನು ಮುಗಿಸಿ ಬರುವವರೆಗೆ ನಾನು ಮತ್ತು ನನ್ನ ಒಂದಿಬ್ಬರು ಸ್ನೇಹಿತರು-ಜಯದೇವ ಹಾಸ್ಟೆಲ್‌ನ ವಿದ್ಯಾರ್ಥಿಗಳು-ಅವರ ಮನೆಯಲ್ಲಿ ವಾಸ ಮಾಡಿದೆವು. ಯಾವುದೇ ನಿಯಂತ್ರಣ, ನಿರ್ಬಂಧವಿರಲಿಲ್ಲ. ಓದುವುದಕ್ಕೂ ತುಂಬಾ ಅನುಕೂಲಕರವಾಗಿತ್ತು. ಪ್ರೊ. ಅವರ ಗ್ರಂಥಾಲಯದ ಪುಸ್ತಕಗಳನ್ನು ತಿರುವಿ ಹಾಕುವ ಸೌಭಾಗ್ಯ ನಮಗೆ ಲಭಿಸಿತು. ಅದನ್ನು ಚೆನ್ನಾಗಿ ಬಳಸಿಕೊಂಡೆವು.

ಎಂ.ಎ. ಮೊದಲನೆ ವರ್ಷದ ತರಗತಿಗಳು ಸೆಂಟ್ರಲ್ ಕಾಲೇಜಿನಲ್ಲಿ ನಡೆದವು. ಎರಡನೆ ವರ್ಷದ ಎಂ.ಎ. ತರಗತಿಗಳು 'ಜ್ಞಾನಭಾರತಿ'ಗೆ ವರ್ಗವಾದವು. 'ಜ್ಞಾನಭಾರತಿ' ಈ ಹೆಸರನ್ನು ನೀಡಿದವರೂ ಜಿಎಸ್‌ಎಸ್. 'ಜ್ಞಾನಭಾರತಿ'ಯ ಕಟ್ಟಡಗಳು ಇನ್ನೂ ಪೂರ್ಣವಾಗಿರಲಿಲ್ಲ.

ಆಗಿನ ಉಪಕುಲಪತಿಗಳಾದ ಡಾ. ಎಚ್.ಎನ್. ಅವರ ಪ್ರಯತ್ನ ಹಾಗು ಪರಿಶ್ರಮದಿಂದ ನಾವೆಲ್ಲ ಅಲ್ಲಿಗೆ ಹೋಗಬೇಕಾಯಿತು. ಕನ್ನಡ ವಿಭಾಗದ ಜೊತೆ–ಹಿಂದಿ, ಸಂಸ್ಕೃತ ಇತ್ಯಾದಿ 'ಜ್ಞಾನಭಾರತಿ'ಗೆ ವರ್ಗವಾದವು.

'ಜ್ಞಾನಭಾರತಿ'ಯ ಕಟ್ಟಡಗಳು, ಜಿಎಸ್‌ಎಸ್ ಅವರ ಮಾತಿನಲ್ಲಿ 'ಅರೆಮನೆಗಳು'– ಅರ್ಧಂಬರ್ಧ ನಿರ್ಮಾಣಗೊಂಡ ಗೋಡೆಗಳು, ಟಾರು ಕಾಣದ ರಸ್ತೆಗಳು, ನಿಲ್ಲಲು ನೆಲೆಯಿಲ್ಲದ ಕೂರಲು ಸರಿಯಾದ ಜಾಗವಿಲ್ಲದ, ಯಾವ ಕ್ಯಾಂಟೀನ್ ಗೀಂಟೀನ್ ಇಲ್ಲದ ಕೊಂಪೆ. ತರಗತಿಗಳು ಮಧ್ಯಾಹ್ನ ೧೨ ರಿಂದ ೪ರವರೆಗೆ ನಡೆಯುತ್ತಿದ್ದವು. ಮಧ್ಯೆ ಬಿಡುವು ಇರುತ್ತಿರಲಿಲ್ಲ. ಬಸ್ ಇಳಿದು ಕ್ಲಾಸಿಗೆ ಹೋದರೆ ಮತ್ತೆ ೪ ಗಂಟೆಗೆ ಕ್ಲಾಸ್ ಮುಗಿದ ಮೇಲೆ ನೇರವಾಗಿ ಬಸ್‌ಗೆ ಬರುತ್ತಿದ್ದೆವು. ಯಾರಾದರೂ ಅಧ್ಯಾಪಕರು ಬಾರದೆ ಕ್ಲಾಸ್ ಇಲ್ಲದಿದ್ದರೆ ವೃಷಭಾವತಿ ನದಿ ದಂಡೆಯ ಮೇಲೆ ಕುಳಿತು ಕಾಲ ಕಳೆಯುತ್ತಿದ್ದೆವು.

ಎರಡನೆ ವರ್ಷದ ಎಂ.ಎ. ತರಗತಿಗೆ ಜಿಎಸ್‌ಎಸ್ ಕಾವ್ಯ ಮೀಮಾಂಸೆ ಪಾಠ ಮಾಡುತ್ತಿದ್ದರು. ಜಿಎಸ್‌ಎಸ್ ಅವರ ಕಾವ್ಯಮೀಮಾಂಸೆ ಪಾಠ ಮಾತ್ರ, ಅದ್ಭುತ. ಅಷ್ಟೊಂದು ಚೆನ್ನಾಗಿ ಕಾವ್ಯ ಮೀಮಾಂಸೆ ಪಾಠ ಮಾಡುವವರನ್ನು ನಾನು ಬೇರೆಲ್ಲೂ ಕಂಡಿಲ್ಲ, ಕೇಳಿಲ್ಲ. ಸಿಂಪ್ಲಿ ಎಕ್ಸಲೆಂಟ್.

ಜಿಎಸ್‌ಎಸ್ ಅತ್ಯಂತ ಉತ್ಸಾಹಶಾಲಿಗಳು. ಕ್ರಿಯಾಶೀಲರು, ಹೊಸ ಹೊಸ ಆಲೋಚನೆ ಗಳನ್ನು ಉಳ್ಳವರು. ಇವರು ಕನ್ನಡ ಅಧ್ಯಯನ ಕೇಂದ್ರ ನಿರ್ದೇಶಕರಾಗಿದ್ದಾಗ ಕೆಲವು ವಿಚಾರ ಸಂಕಿರಣಗಳನ್ನು ಏರ್ಪಡಿಸಿದರು. ಇಂಥದೊಂದು ಕೆಲಸವನ್ನು ಆ ಕಾಲಕ್ಕೆ (ಈಗಲೂ ಕೂಡ) ವ್ಯವಸ್ಥಿತವಾಗಿ ಸಂಘಟಿಸುವ ಕಾರ್ಯವನ್ನು ಯಾರೂ ಮಾಡಿರಲಿಲ್ಲ. ಈ ವಿಚಾರ ಸಂಕಿರಣಗಳು ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲ್‌ನಲ್ಲಿ ನಡೆಯುತ್ತಿದ್ದವು. ಸಂಕಿರಣದಲ್ಲಿ ಭಾಗವಹಿಸಲು, ಪ್ರಬಂಧ ಮಂಡಿಸಲು ನಾಡಿನ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಿಂದ ಪ್ರಾಧ್ಯಾಪಕರುಗಳು ಬರುತ್ತಿದ್ದರು. ಅವರುಗಳನ್ನು ಬರಮಾಡಿಕೊಳ್ಳುವ ಜವಾಬ್ದಾರಿಯನ್ನು ಒಬ್ಬೊಬ್ಬ ಅಧ್ಯಾಪಕರಿಗೆ ವಹಿಸುತ್ತಿದ್ದರು. ಅತಿಥಿಗಳು ಬಂದು ಹೋಗುವವರೆಗೆ ಅವರ ಯೋಗಕ್ಷೇಮವನ್ನು ನೋಡಿಕೊಳ್ಳುವ ಜವಾಬ್ದಾರಿ ಈ ಅಧ್ಯಾಪಕರುಗಳದಾಗಿತ್ತು. ಇವರ ಸಹಾಯಕ್ಕೆ ಒಬ್ಬೊಬ್ಬ ವಿದ್ಯಾರ್ಥಿಯನ್ನು ನಿಯೋಜಿಸುತ್ತಿದ್ದರು. ಈ ರೀತಿ ನಿಯೋಜಿಸಲ್ಪಟ್ಟ ಅಧ್ಯಾಪಕರಾದ ಶ್ರೀ ಜಯದೇವ್ ಅವರಿಗೆ ಸಹಾಯಕನಾಗಿ ಕೆಲಸ ಮಾಡುವ ಅವಕಾಶ ನನ್ನದಾಗಿತ್ತು.

ವಿಚಾರ ಸಂಕಿರಣಗಳ ಸಂದರ್ಭದಲ್ಲಿ ಬಂದಿದ್ದ ಹಿರಿಯ ಸಾಹಿತಿಗಳಾದ ಮರಿಯಪ್ಪಭಟ್ಟ, ಆರ್.ಸಿ. ಹಿರೇಮಠ, ವೈಕುಂಠರಾಜು, ಎಂ.ಎಂ. ಕಲಬುರ್ಗಿ, ಚಂಪಾ, ಎಸ್.ಎಲ್. ಭೈರಪ್ಪ, ಯು.ಆರ್. ಅನಂತಮೂರ್ತಿ, ಆಲನಹಳ್ಳಿ ಕೃಷ್ಣ, ಗಿರಡ್ಡಿ, ಕೆ.ವಿ. ಸುಬ್ಬಣ್ಣ –ಮುಂತಾದ ಸಾಹಿತ್ಯ ದಿಗ್ಗಜಗಳನ್ನು ನೋಡುವ ಭಾಗ್ಯ ಮೊದಲ ಬಾರಿಗೆ ನಮಗೆಲ್ಲಾ ಲಭಿಸಿತು. ಆಗೆಲ್ಲ ವಿಚಾರ ಸಂಕಿರಣಗಳೂ ನಮಗೆಲ್ಲ ಹೊಸ ಅನುಭವಗಳನ್ನು ನೀಡುತ್ತಿದ್ದವು. 'ಚಂಪಾ'

ಅವರ ಮಾತುಗಳು ಸಭಿಕರನ್ನು ಕೆರಳಿಸುತ್ತಿದ್ದವು. ಬಿಸಿಬಿಸಿಯ ಚರ್ಚೆ ನಡೆಯುತ್ತಿತ್ತು. ಅವುಗಳೆಲ್ಲ ನಮಗೆ ಒಂದು ರೀತಿಯ ಜಗಳದಂತೆ ಕಾಣಿಸಿಕೊಂಡು ತಮಾಷೆಯನ್ನುಂಟು ಮಾಡುತ್ತಿತ್ತು. ತರಗತಿಯಿಂದ ಹೊರಗೆ, ಅಧ್ಯಾಪಕರುಗಳನ್ನು ಕಾಣುವುದು, ಮಾತನಾಡುವುದು ನನಗೆ ಒಂದು ರೀತಿಯ ರೋಮಾಂಚನವನ್ನುಂಟು ಮಾಡುತ್ತಿತ್ತು. ವಿಚಾರ ಸಂಕಿರಣಗಳ ನೆಪದಲ್ಲಿ ಸಾಹಿತಿಗಳ ಸಾಮೀಪ್ಯವನ್ನು ಅನುಭವಿಸುವುದರ ಮೂಲಕ ಅವರುಗಳ ಆತ್ಮೀಯತೆಯನ್ನು ಗಳಿಸಿಕೊಂಡೆ ಎನ್ನಬಹುದು.

ಇಂಥ ಸಂಕಿರಣಗಳನ್ನು ಏರ್ಪಡಿಸುವುದರ ಮೂಲಕ ಒಂದು ನಿರ್ದಿಷ್ಟವಾದ ವಿಷಯವನ್ನು ಕುರಿತಾದ ಗಂಭೀರ ಚರ್ಚೆಗೆ ಒಂದು ವೇದಿಕೆಯನ್ನು ನಿರ್ಮಾಣ ಮಾಡಿ ಜಿಎಸ್ಎಸ್ ಎಲ್ಲರ ಮೆಚ್ಚಿಗೆಗೆ ಪಾತ್ರರಾಗುತ್ತಿದ್ದರು. ವರ್ಷಕ್ಕೊಮ್ಮೆ ಬಹಳಷ್ಟು ಸಾಹಿತಿಗಳು ಒಂದೆಡೆ ಸೇರಿ ವಿಚಾರ ವಿನಿಮಯ ಮಾಡಿಕೊಳ್ಳಲು ಅವಕಾಶ ಕಲ್ಪಿಸುವುದರ ಮೂಲಕ ಸಾಹಿತಿಗಳೆಲ್ಲರ ಪ್ರೀತಿಯನ್ನು ಸಂಪಾದಿಸಿದ್ದರು. ಜಿಎಸ್ಎಸ್ ಪ್ರಗತಿಪರ ಧೋರಣೆಯುಳ್ಳವರು, ಪ್ರತಿಭಾವಂತರು. ಹೊಸ ಹೊಸ ಪ್ರತಿಭಾಶಾಲಿಗಳನ್ನು ಅನ್ವೇಷಣೆ ಮಾಡುತ್ತಿದ್ದರು. ಇಂಥ ಸಂಕಿರಣದಲ್ಲಿ ಅಂಥವರಿಗೆ ಅವಕಾಶ ಕಲ್ಪಿಸಿ ಬೇರೆಯವರಿಗೆ ಅವರನ್ನು ಪರಿಚಯಿಸುತ್ತಿದ್ದರು. ಈ ರೀತಿಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ ಅನೇಕ ಜನ ಹೊಸ ತಲೆಮಾರಿನ ಲೇಖಕರು ತಾವು ಒಬ್ಬ ಲೇಖಕ ಅಥವಾ ಬರಹಗಾರ ಎಂದು ಸಾಬೀತು ಪಡಿಸಲು ಈ ವಿಚಾರ ಸಂಕಿರಣಗಳು ದಾರಿದೀಪವಾದವು ಎಂದು ಇಂದೂ ಸ್ಮರಿಸಿಕೊಳ್ಳುವುದನ್ನು ಕೇಳಿದ್ದೇನೆ.

ಜಿಎಸ್ಎಸ್ ಅವರು ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದ ಕಾಲ, ಅಧ್ಯಯನ ಕೇಂದ್ರದ ಸುವರ್ಣಯುಗ ಎಂದು ಹೇಳಿದರೆ ಯಾರು ಹೊಟ್ಟೆಕಿಚ್ಚು ಪಡಬೇಕಿಲ್ಲ. ಡಿ.ಆರ್. ನಾಗರಾಜ್, ಕಿ.ರಂ., ಬರಗೂರು, ಕೆ.ವಿ. ನಾರಾಯಣ, ಡಾ. ಸಿದ್ಧಲಿಂಗಯ್ಯ –ಮುಂತಾದ ಶಿಷ್ಯರನ್ನು ತಯಾರು ಮಾಡಿ ಅಧ್ಯಯನ ಕೇಂದ್ರಕ್ಕೆ ಕೊಡುಗೆಯಾಗಿ ನೀಡಿದ ಕೀರ್ತಿ ಜಿಎಸ್ಎಸ್ ಅವರದು.

ನಾನು ಎಂ.ಎ. ಮುಗಿಸಿದ ತಕ್ಷಣ ಚಿಕ್ಕನಾಯಕನಹಳ್ಳಿಯಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಪಾರ್ಟ್ ಟೈಮ್ ಉಪನ್ಯಾಸಕ ವೃತ್ತಿ ದೊರೆಯಿತು. ಜಿಎಸ್ಎಸ್ ಅವರಿಗೆ ಪತ್ರ ಬರೆದು ತಿಳಿಸಿದೆ. "ಒಳ್ಳೆಯದಾಗಲಿ, ಪೂರ್ವಸಿದ್ಧತೆಯಿಲ್ಲದೆ ತರಗತಿಗೆ ಹೋಗಬೇಡ" ಎಂದು ಪತ್ರ ಬರೆದು ಶುಭ ಹಾರೈಸಿದರು. ಈ ಪತ್ರ ನನ್ನ ಬಳಿ ಇನ್ನೂ ಇದೆ. ಅನಂತರ ನನಗೆ ಕೆ.ಪಿ.ಎಸ್.ಸಿ. ಮೂಲಕ ಉಪನ್ಯಾಸಕರ ಹುದ್ದೆಗೆ ಆಯ್ಕೆಯಾಯಿತು. ೧೯೭೫ರ ಡಿಸೆಂಬರ್‌ನಿಂದ ೧೯೭೭ರ ಅಕ್ಟೋಬರ್‌ವರೆಗೆ ಕನ್ನಡ ಉಪನ್ಯಾಸಕನಾಗಿ ತುಮಕೂರಿನ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಕೆಲಸ ಮಾಡಿದೆ. ೧೯೭೭ರ ಅಕ್ಟೋಬರ್‌ನಲ್ಲಿ ಸರ್ಕಾರ ನನ್ನನ್ನು ಆಗ ತಾನೆ ಜಿಲ್ಲಾ ಕೇಂದ್ರಗಳಲ್ಲಿ ಆರಂಭವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕನೆಂದು ನಿಯೋಜಿಸಿತು.

ಸಹಾಯಕ ನಿರ್ದೇಶಕನಾಗಿ ತುಮಕೂರಿನಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ

ಡಾ. ಜಿಎಸ್‌ಎಸ್ ಅವರ "ಕಾವ್ಯಾರ್ಥ ಚಿಂತನ"ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. ಈ ಸಂದರ್ಭದಲ್ಲಿ ಇವರಿಗೆ ಜಿಲ್ಲಾ ಆಡಳಿತದ ವತಿಯಿಂದ ನಾಗರಿಕ ಸನ್ಮಾನವನ್ನು ಮಾಡಬೇಕೆಂದು ತೀರ್ಮಾನಿಸಿ ಆಗ ಜಿಲ್ಲಾಧಿಕಾರಿಯಾಗಿದ್ದ ನನ್ನ ನೆಚ್ಚಿನ ಅಧಿಕಾರಿಗಳೂ ಸಾಹಿತ್ಯ ಹಾಗು ಸಂಗೀತಾಭಿಮಾನಿಗಳೂ ಆದ ಕೆ. ಜೈರಾಜ್ ಅವರಲ್ಲಿ ವಿನಂತಿಸಿಕೊಂಡೆ. ಅವರು ಸಂತೋಷದಿಂದ ಒಪ್ಪಿಕೊಂಡು ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಿದರು. ಇದರಲ್ಲಿ ಆಗಿನ ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್ ಆಗಿದ್ದ ಡಿ.ಎನ್. ಮುನಿಕೃಷ್ಣ, ಸಾಹಿತಿಗಳಾದ ವಿ.ಚಿ., ಪತ್ರಕರ್ತರಾದ ಎನ್.ಎನ್. ಬಾಗಲೋಡಿ, ವಿಶೇಷ ಜಿಲ್ಲಾಧಿಕಾರಿಗಳಾಗಿದ್ದ ವಿ.ಪಿ. ಬಳಿಗಾರ್ ಸದಸ್ಯರಾಗಿದ್ದರು. ನಾನು ಮತ್ತು ಗೆಳೆಯ ಕೆ.ಎಸ್. ರಾಘವೇಂದ್ರರಾವ್ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದೆವು.

ಡಾ॥ ಜಿಎಸ್‌ಎಸ್ ಅಭಿನಂದನಾ ಸಮಾರಂಭವನ್ನು ನಗರದ ಉಡ್‌ಲ್ಯಾಂಡ್ಸ್ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಸಮಾರಂಭಕ್ಕೆ ಶ್ರೀ ಶಿವಕುಮಾರ ಸ್ವಾಮೀಜಿಯವರು, ಪು.ತಿ.ನ., ಗೊರೂರು ರಾಮಸ್ವಾಮಿ ಐಯ್ಯಂಗಾರ್, ಕೆ.ಎಸ್. ನರಸಿಂಹಸ್ವಾಮಿಯವರು ಆಗಮಿಸಿದ್ದರು.

ಸಮಾರಂಭ ತುಂಬಾ ಚೆನ್ನಾಗಿ ನಡೆಯಿತು. ಕಾರ್ಯಕ್ರಮ ಮುಗಿದ ಒಂದು ವಾರದ ನಂತರ ನನಗೆ ಒಂದು ಪತ್ರ ಬಂತು. ಅದು ಗುರುಗಳಾದ ಜಿಎಸ್‌ಎಸ್ ಅವರ ಪತ್ರ. ಅದರಲ್ಲಿ "ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದ ಸಂದರ್ಭದಲ್ಲಿ ನನಗೆ ನನ್ನ ಊರು ಸೇರಿದಂತೆ ಅನೇಕ ಕಡೆ ಅಭಿನಂದನೆಗಳು ಸಂದಿವೆ. ಆದರೆ ನಾನು ಬಹಳವಾಗಿ ಗೌರವಿಸುವ ಸಿದ್ಧಗಂಗಾ ಶ್ರೀಗಳ ಸಮ್ಮುಖದಲ್ಲಿ ನನ್ನ ವಿದ್ಯಾರ್ಥಿ ಜೀವನದ ಕೆಲಭಾಗವನ್ನು ಕಳೆದ ತುಮಕೂರಿನ ಈ ಸಮಾರಂಭ, ಹಾಗು ನನಗೆ ನೀಡಿದ ಗೌರವ ನನಗೆ ತುಂಬಾ ಸಂತೋಷವನ್ನು ತಂದಿದೆ. ಇದಕ್ಕೆ ಕಾರಣರಾದ ಎಲ್ಲರಿಗೆ ವಿಶೇಷವಾಗಿ ನಿಮಗೆ ಹಾಗು ಜಿಲ್ಲಾ ಆಡಳಿತಕ್ಕೆ ಕೃತಜ್ಞತೆಗಳು" ಎಂದು ಬರೆದಿದ್ದರು. ನಮ್ಮ ಕರೆಗೆ ಮನ್ನಣೆ ನೀಡಿ ಗೌರವವನ್ನು ಸ್ವೀಕರಿಸಿದ ಜಿಎಸ್‌ಎಸ್ ಅವರಿಗೆ ನಾವೆಲ್ಲರೂ ಋಣಿಯಾಗಿದ್ದೇವೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಜಿಎಸ್‌ಎಸ್ ಮಾಡಿದ ಕೆಲಸ ಅಪೂರ್ವವಾದುದು. ಅಕಾಡೆಮಿಯ ಘನತೆಯನ್ನು ಎತ್ತಿ ಹಿಡಿದ ಜಿಎಸ್‌ಎಸ್, ಮುಂದಿನವರಿಗೆ ದಾರಿದೀಪವಾಗಿದ್ದಾರೆ. ನಾನು ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಆದ ಮೇಲೆ ಅವರನ್ನು ಪದೇ ಪದೇ ಭೇಟಿಯಾಗುತ್ತೇನೆ. ಅವರ ಶಿಸ್ತು, ಸಮಯಪ್ರಜ್ಞೆ, ಅಧ್ಯಯನಾಸಕ್ತಿಗಳನ್ನು ಕಂಡು ಬೆರಗಾಗಿದ್ದೇನೆ.

ನಾನು ಅಕಾಡೆಮಿಯ ಒಂದು ಕಾರ್ಯಕ್ರಮದಲ್ಲಿ ಮಾಡಿದ ಸ್ವಾಗತ ಭಾಷಣವನ್ನು ಕೇಳಿದ ಸಭಿಕರೊಬ್ಬರು ಅಧ್ಯಕ್ಷರಾದ ಡಾ. ಗಿರಡ್ಡಿಯವರ ಬಳಿ ನಿಮ್ಮ ರಿಜಿಸ್ಟ್ರಾರ್ ಪರವಾಗಿಲ್ಲ, ಸಾಹಿತ್ಯದ ಬಗ್ಗೆ ಅಭಿರುಚಿಯಿದೆ ಎಂದರು. ಅದಕ್ಕೆ ಗಿರಡ್ಡಿಯವರು "ದಕ್ಷಿಣಾಮೂರ್ತಿ

ಜಿಎಸ್‌ಎಸ್ ಅವರ ವಿದ್ಯಾರ್ಥಿ" ಎಂದು ಅವರಿಗೆ ಪರಿಚಯಿಸಿದರು. ಈ ಮಾತನ್ನು ಕೇಳಿದ ನನಗೆ ಬೇರೆ ಯಾವುದೇ ಸರ್ಟಿಫಿಕೇಟ್ ಬೇಕಿಲ್ಲ ಎನ್ನಿಸಿತು. ಧನ್ಯತೆ ಮೂಡಿತು.

ಕರ್ನಾಟಕದ ಸಾಹಿತ್ಯ ಹಾಗು ಸಾಂಸ್ಕೃತಿಕ ಕ್ಷೇತ್ರದಲ್ಲಿ ಜಿಎಸ್‌ಎಸ್ ಅವರದು ಬಹಳ ದೊಡ್ಡ ಹೆಸರು. ನೇರ ಸ್ವಭಾವದ, ಸರಳ ಜೀವಿಯಾದ ಜಿಎಸ್‌ಎಸ್ ಸಾರಸ್ವತ ಲೋಕದಲ್ಲಿ ಗಣ್ಯಸ್ಥಾನವನ್ನು ಗಳಿಸಿದ್ದಾರೆ. ಅಧ್ಯಾಪಕರಾಗಿ ಆ ಹುದ್ದೆಗೆ ವಿಶೇಷ ಗೌರವ ತಂದು ಅಪಾರ ಶಿಷ್ಯವೃಂದದ ಹೃದಯ ಗೆದ್ದಿದ್ದಾರೆ. ವಿಮರ್ಶಕರಾಗಿ ವಿಮರ್ಶಾಕ್ಷೇತ್ರಕ್ಕೆ ಹೊಸ ಆಯಾಮ ನೀಡಿದ್ದಾರೆ.

ಜಿಎಸ್‌ಎಸ್ ಅವರ ಬಗ್ಗೆ ನನಗೆ ಬಹಳ ಪ್ರೀತಿ, ಗೌರವ ಅಭಿಮಾನ. ಅವರನ್ನು ಕಂಡ ಮೊದಲ ದಿನದಿಂದ ಇಂದಿನವರೆಗೆ ಕಿಂಚಿತ್ತೂ ಮುಕ್ಕಾಗದೆ ಅದೇ ಭಾವನೆ ಇದೆ. ಅದೇ ಪ್ರೀತಿಯನ್ನು ಗುರುಗಳು ನನ್ನ ಬಗ್ಗೆ ತೋರುತ್ತಿದ್ದಾರೆ ಎನ್ನುವುದು ನನ್ನ ಪೂರ್ವಜನ್ಮದ ಭಾಗ್ಯವೆಂದು ನಂಬಿದ್ದೇನೆ. ಜಿಎಸ್‌ಎಸ್ ಅವರ ಸಾವಿರ ಸಾವಿರ ಶಿಷ್ಯರಲ್ಲಿ ನಾನೂ ಒಬ್ಬ ಎಂದು ಹೇಳಿಕೊಳ್ಳುವುದೇ ನನ್ನ ಭಾಗ್ಯ.

❖

# ಅಂತರಂಗದ ಗುರು

## (ಲ. ನರಸಿಂಹಯ್ಯ)

● ಕೋ. ವೆಂ. ರಾಮಕೃಷ್ಣೇಗೌಡ

**ಗು**ರುವನ್ನು ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ಪ್ರಾಚೀನ ಕಾಲದಿಂದಲೂ ಹೋಲಿಸಿಕೊಂಡು ಬರಲಾಗುತ್ತಿದೆ. ಮನೆಯಲ್ಲಿ ಮುದ್ದಿನ ಮುದ್ದೆಯಾಗಿ ಉದಿಸುವ ಹಸುಳೆ ಮಾತೃ ವಾತ್ಸಲ್ಯದ ಅಮೃತವನ್ನು ಕುಡಿಯುತ್ತಾ ಕಂದನಾಗಿ ಅರಳಿ, ಶಾಲೆಯ ಮೆಟ್ಟಿಲು ತುಳಿಯುವ ವೇಳೆಗೆ ಒರಟು ಶಿಲೆಯಾಗಿ ರೂಪುಗೊಂಡು ಉಳಿ ಏಟುಗಳಿಂದ ಕಲೆಯಾಗಲು ಸಜ್ಜಾಗಿರುತ್ತದೆ. ಗುರುವರ್ಯರು ಅಂಥ ಕಲ್ಲುಗಳಲ್ಲಿ ತಮ್ಮ ಚಾಣಾಕ್ಷತೆಯಿಂದ ಅದ್ಭುತ ಜೀವಂತ ಕಲೆಗಳನ್ನು ಸೃಜಿಸಿ ಜಗತ್ತಿಗೆ ನೀಡುತ್ತಾರೆ. ಅವರ ಈ ಮಹತ್ತರ ಕಾರ್ಯವನ್ನು ಗುರುತಿಸುವವರು ಕಡಿಮೆ. ನನ್ನ ಬದುಕಿಗೆ ಪ್ರೇರಣೆ ನೀಡಿ ಸಾಧನೆಗೆ ಮುನ್ನುಡಿ ಬರೆದ ಗುರುಬ್ರಹ್ಮರನ್ನು ಸ್ಮರಿಸುವ ಸದಾವಕಾಶ ಒದಗಿರುವುದು ಸುಕೃತವೆಂದೇ ನನ್ನ ತಿಳುವಳಿಕೆ.

ಹಳ್ಳಿಯ ಸ್ಥಳೀಯ ಸಂಪನ್ಮೂಲಗಳಾದ ಬೋಕಿ, ಕಲ್ಲು, ಮಣ್ಣು, ಉಗನಿ ಎಲೆ, ಹಂಬು, ಉಲಚೆಹೂವು, ಹಸಿ ಜೋಳದ ಕಡ್ಡಿ, ಹುಣಸೆಬೀಜ, ಗೋಲಿ ಮುಂತಾದುವುಗಳಿಂದ ಕ್ರೀಡಾಸಕ್ತಿಯನ್ನು ಬೆಳೆಸಿಕೊಂಡು ತಿರುಗುತ್ತಿದ್ದಾಗ, ಇತರರು ಶಾಲೆಗೆ ಹೋಗುವುದನ್ನು ಕಂಡು ಹಠಮಾಡಿ ಶಾಲೆಗೆ ಹೋಗಲು ಮುಂದಾದೆ. ನಮ್ಮ ಊರು ಕೋಡಿ ಹೊಸಹಳ್ಳಿಯ ಪಕ್ಕದ ಸಿಂಗರಾಜಿಪುರದ ಸರ್ಕಾರಿ ಶಾಲೆಗೆ ಎರಡು ವಾರ 'ಅತಿಥಿ ವಿದ್ಯಾರ್ಥಿ'ಯಾಗಿ ಹೋಗುತ್ತಿದ್ದೆ. ಅಷ್ಟರಲ್ಲಿ ನನ್ನನ್ನು ರಾಮನಗರ ಜಿಲ್ಲೆ ಬೆಣ್ಣಹಳ್ಳಿಯ ಅಜ್ಜಿ ಮನೆಗೆ ನನ್ನನ್ನು ವರ್ಗ ಮಾಡಿದರು. ಪಕ್ಕದ ಹುಚ್ಚಮ್ಮನದೊಡ್ಡಿ, ಅಣ್ಣಹಳ್ಳಿಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಾಲೆಯಲ್ಲಿ ಓದಿ, ಭೈರಮಂಗಲದಲ್ಲಿ ಏಳನೇ ತರಗತಿ ಪಬ್ಲಿಕ್ ಪರೀಕ್ಷೆ ಬರೆದು ಉತ್ತೀರ್ಣನಾಗಿ ಕನಕಪುರ ತಾಲ್ಲೂಕಿನ ಹಾರೋಹಳ್ಳಿಯ ಗ್ರಾಮಾಂತರ ಪ್ರೌಢಶಾಲೆಯಲ್ಲಿ ಓದುವ ಯೋಗ ಕೂಡಿಬಂತು.

ಗಾಂಧಿವಾದಿ, ಸ್ವಾತಂತ್ರ್ಯ ಹೋರಾಟಗಾರ ದಿವಂಗತ ಎಸ್. ಕರಿಯಪ್ಪರವರು ಪ್ರಾರಂಭಿಸಿದ್ದ ಗ್ರಾಮಾಂತರ ಪ್ರೌಢಶಾಲೆಗೆ ಎಂಟನೇ ತರಗತಿಗೆ ಸೇರಿದಾಗ ಲ. ನರಸಿಂಹಯ್ಯ ಅವರು ಮುಖ್ಯೋಪಾಧ್ಯಾಯರು 'ಎಲ್ಲೆನ್' ಎಂಬುದು ಅವರ ಪ್ರಚಲಿತ ಚುಟುಕು ನಾಮಧೇಯ. ಅಷ್ಟೇನೂ ಎತ್ತರವಲ್ಲದ ಸಾಧಾರಣ ಶರೀರ. ಉದ್ದ ಮೂಗಿನ ಮೇಲ್ಭಾಗದಲ್ಲಿ ಅಷ್ಟೇ ಉದ್ದಕ್ಕೆ ರಂಗಾಗಿ ಹೊಳೆಯುತ್ತಿದ್ದ ಒಂಟಿ ಕೆಂಪು ನಾಮ. ಇವರೊಬ್ಬ ಸಂಪ್ರದಾಯಸ್ಥ ಅಯ್ಯಂಗಾರರಿಬಹುದೆಂಬ ಭ್ರಮೆ ಹುಟ್ಟಿಸುವಂತಿತ್ತು. ಅವರು ವಾಸವಿದ್ದುದು ಬ್ರಾಹ್ಮಣರ ಬೀದಿಯ ಅಯ್ಯಂಗಾರರ ಮಧ್ಯೆಯಾದ್ದರಿಂದ ಯಾರಿಗಾದರೂ ಈ ಬಗೆಯ ಅಭಿಪ್ರಾಯ

ಮೂಡುವುದು ಸಹಜವಾಗಿತ್ತು. ಕಣ್ಣಿಗೆ ಹಿತ ನೀಡುತ್ತಿದ್ದ ಬಿಳಿ ಜುಬ್ಬ ಅಥವಾ ಷರಟು, ಒಂಟೆಳೆಯ ಬಿಳಿ ಪಂಚೆ, ಹೆಗಲ ಮೇಲೊಂದು ಬಿಳಿ ಬಣ್ಣದ್ದೇ ಟವಲ್ಲು ನರಸಿಂಹಯ್ಯನವರನ್ನು ಅಲಂಕರಿಸುತ್ತಿದ್ದವು. ಅಚ್ಚ ಕನ್ನಡದಲ್ಲಿ ಸ್ಫುಟವಾಗಿ ಹೊರಡುತ್ತಿದ್ದ ನಿಖರ ಮಾತುಗಳು ಎಂಥವರನ್ನಾದರೂ ಆಕರ್ಷಿಸಬಲ್ಲಷ್ಟು ಪರಿಣಾಮಕಾರಿಯಾಗಿದ್ದವು. ಮಾತಿನಲ್ಲಿ ಅವರದೇ ವಿಶೇಷ ಗತ್ತು. ಚುಟುಕು ವಾಕ್ಯಗಳು, ಮಾತಿನ ಕೊನೆಗೆ ಹೊರಡುವ ವಿಶೇಷ ಧ್ವನಿ ಅವರ ಸ್ವಂತದ್ದು. ಈಗಲೂ ಅದನ್ನು ಉಳಿಸಿಕೊಂಡಿರುವುದು ಅವರ ವ್ಯಕ್ತಿತ್ವದ ವಿಶೇಷಗಳಲ್ಲೊಂದು.

ನಿತ್ಯ ಚೈತನ್ಯದ ಚಿಲುಮೆಯಾಗಿರುತ್ತಿದ್ದ ಅವರು ಎಂದೂ ಕಾಲಹರಣ ಮಾಡಿದವರಲ್ಲ. ಊಟಕ್ಕೆ ಕುಳಿತಾಗ ಪಕ್ಕದಲ್ಲಿ ಪುಸ್ತಕ ಇಟ್ಟುಕೊಂಡು ಹೊಟ್ಟೆಹಸಿವು, ಜ್ಞಾನದ ಹಸಿವು ಎರಡನ್ನೂ ಏಕಕಾಲಕ್ಕೆ ಪೂರೈಸಿಕೊಳ್ಳುವ ಕಲೆಯನ್ನು ರೂಢಿಸಿಕೊಂಡಿದ್ದರು. ಅವರ ಕೈಯಲ್ಲಿ ಯಾವುದಾದರೂ ಪುಸ್ತಕ ಆಭರಣದಂತೆ ಇರುತ್ತಿತ್ತು. ಬಸ್ಸಿನ ಪ್ರಯಾಣದ ಸಮಯವನ್ನು ಅವರು ಪುಸ್ತಕ ಓದುವ ಮೂಲಕ ಸದುಪಯೋಗಪಡಿಸಿಕೊಳ್ಳುತ್ತಿದ್ದರು. ಎಲ್ಲೆನ್ ಎಷ್ಟು ಜನಾನುರಾಗಿಗಳೆಂದರೆ. ಅವರು ಮನೆಯಿಂದ ಶಾಲೆಯ ಕಡೆಗೆ ನಡೆದು ಬರುತ್ತಿದ್ದರೆ ದಾರಿಯಲ್ಲಿ ಸಿಗುವ ಹಿರಿಯ-ಕಿರಿಯರೆಲ್ಲರೂ ನಮಸ್ಕಾರ ಮಾಡಿ ಗೌರವ ಸಲ್ಲಿಸುತ್ತಿದ್ದರು. ಸಾಮಾನ್ಯರೊಡನೆ ಸಾಮಾನ್ಯರಂತೆ ಬೆರೆಯುವ ಸರಳತೆ ಅವರದು. ಅಸಾಧಾರಣ ನೆನಪಿನ ಶಕ್ತಿ! ಶಾಲೆಯ ಪ್ರತಿಯೊಬ್ಬ ವಿದ್ಯಾರ್ಥಿಯ ತಂದೆ, ಪೋಷಕರ ಹೆಸರನ್ನು ನೆನಪಿಲ್ಲಿಟ್ಟುಕೊಂಡಿರುತ್ತಿದ್ದರು. ಯಾರಾದರು ಎದುರಿಗೆ ಬಂದರೆ, ನಿಮ್ಮ ಹುಡುಗ ಚೆನ್ನಾಗಿ ಓದುತ್ತಿದ್ದಾನೆ. ಆದರೆ ಆಗಾಗ ಶಾಲೆಗೆ ಚಕ್ಕರ್ ಹೊಡೆಯುತ್ತಾನೆ. ಇದು ನಿಮ್ಮ ಗಮನಕ್ಕೆ ಬಂದಿದೆಯಾ? ಅವನ ಬಗ್ಗೆ ಸ್ವಲ್ಪ ನಿಗಾ ಇಡಿ' ಎಂದು ಸಲಹೆ ನೀಡುತ್ತಿದ್ದರು. ಎಲ್ಲೆನ್ ಬರುತ್ತಿದ್ದಾರೆಂದರೆ ವಿದ್ಯಾರ್ಥಿಗಳಿಗೆ ಎಲ್ಲಿಲ್ಲದ ಭಯ. ಅವರು ಅಧಿಕಾರವಾಣಿಯಿಂದ ಕೇಳುತ್ತಿದ್ದ ಪ್ರಶ್ನೆಗಳಿಗೆ ಉತ್ತರಿಸಲು ನಾವು ತಬ್ಬಿಬ್ಬಾಗುತ್ತಿದ್ದೆವು. ಕೆಲವು ಸಂದರ್ಭಗಳಲ್ಲಿ ಸುಳ್ಳುಹೇಳಿ ಸಿಕ್ಕಿಬೀಳುವುದಿತ್ತು. ಆಗ ಎಲ್ಲೆನ್ ತಮ್ಮದೇ ಗಾಂಭೀರ್ಯದಿಂದ ತಲೆಯನ್ನು ಕುಣಿಸಿ ಊಂ.... ಊಂ..... ಎನ್ನುತ್ತಿದ್ದರು ಅಷ್ಟೇ. ಅಷ್ಟಕ್ಕೇ ನಮ್ಮ ಝುಂಘಾಬಲ ಉಡುಗುತ್ತಿತ್ತು.

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ಐ.ಡಿ.ಹಳ್ಳಿ ಪಕ್ಕದ ತೊಂಡೋಟಿ ಎಂಬ ಆಂಧ್ರಕ್ಕೆ ಹೊಂದಿಕೊಂಡಿರುವ ಗಡಿ ಗ್ರಾಮದವರಾದ ನರಸಿಂಹಯ್ಯನವರು ಮೂವತ್ತನಾಲ್ಕು ವರ್ಷಗಳ ಸುದೀರ್ಘ ಸೇವೆಯನ್ನು ಶಿಕ್ಷಕರಾಗಿ ಸಲ್ಲಿಸಿದರು. ಮೂವತ್ತೊಂದು ವರ್ಷ ಶಾಲೆಯ ಮುಖ್ಯೋಪಾಧ್ಯಾಯರಾಗಿ ಅವಿರತವಾಗಿ ದುಡಿದು ಸಾವಿರಾರು ವಿದ್ಯಾರ್ಥಿಗಳಿಗೆ ಪಾಠ, ಜೀವನ ಪಾಠವನ್ನು ಕಲಿಸುವ ಮೂಲಕ 'ಸದ್ಗುರು' ಪರಂಪರೆಗೆ ಸೇರಿದ್ದಾರೆ. ಎಲ್ಲೆನ್ ಮಾತು ಗಡುಸು ಎನ್ನಿಸಿದರೂ ಹೃದಯ ನಿರ್ಮಲ, ಪ್ರಶಾಂತ ಕೊಳದಂತಿತ್ತು. ಶಾಲೆಯಲ್ಲಿ ಜವಾನರಿಂದ ಹಿಡಿದು ಹಿರಿಯ ಅಧ್ಯಾಪಕರವರೆಗೆ ಎಲ್ಲರೂ ಮನ್ನಣೆ ನೀಡುತ್ತಿದ್ದರು. ಸಿಬ್ಬಂದಿಗಳನ್ನು ವಿಶ್ವಾಸದಿಂದ ಕಾಣುತ್ತಿದ್ದ ಅವರು ಆಡಳಿತ ಮಂಡಳಿಯ ಮೆಚ್ಚುಗೆಗೆ ಪಾತ್ರವಾಗಿದ್ದರು. ಯಾರಿಗೂ ತೊಂದರೆ ಕೊಡುವ, ಅನಗತ್ಯವಾಗಿ ಹಿಂಸಿಸುವ ಸ್ವಭಾವ ಅವರದಾಗಿರಲಿಲ್ಲ. ಈ ಗುಣದಿಂದಾಗಿಯೇ ಶಾಲೆಯ ಅಭಿವೃದ್ಧಿಗೆ ಅವರು ನೀಡುತ್ತಿದ್ದ

ಸಲಹೆಗೆ ಸಮ್ಮತಿ ಸಿಗುತ್ತಿತ್ತು. ಅಧಿಕಾರ ಸ್ಥಾನದಲ್ಲಿರುವವರು ಪ್ರೀತಿ, ವಿಶ್ವಾಸವನ್ನು, ಮಾನವೀಯ ಗುಣಗಳನ್ನು ಹೊಂದಿರಬೇಕು ಎಂಬುದನ್ನು ಎಲ್ಲೆನ್ ಅರಿತಿದ್ದರು.

ಎಲ್ಲೆನ್ ನನ್ನ ಮೇಲೆ ಪ್ರಭಾವ ಬೀರಿದಷ್ಟು ಬೇರೆಯವರು ಬೀರಲಿಲ್ಲ ಎಂದರೆ ಅದು ಉತ್ಪ್ರೇಕ್ಷೆಯ ಮಾತಾಗುವುದಿಲ್ಲ. ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ನಾನು ಶಿಸ್ತಿನಿಂದ ಬಟ್ಟೆ ಧರಿಸುತ್ತಿದೆ. ನಡಿಗೆಯಲ್ಲೂ ಒಂದು ಬಗೆಯ ಗತ್ತು ಇರುತ್ತಿತ್ತು. ಅದೂ ಗುರುಗಳ ಪ್ರಭಾವದಿಂದ. ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಅವರು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಅದರ ಫಲವಾಗಿ ಶಾಲೆಯ ಸಾಂಸ್ಕೃತಿಕ ಚಟುವಟಿಕೆಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಉಪಾಧ್ಯಾಯರಿಗೆ ಸಲಹೆ ನೀಡುತ್ತಿದ್ದರು. ನಾನು ಹತ್ತನೇ ತರಗತಿಯಲ್ಲಿ ಓದುತ್ತಿದ್ದೆ. ಶಾಲಾ ವಾರ್ಷಿಕೋತ್ಸವಕ್ಕೆ ಆಡಿಸಲಿದ್ದ ನಾಟಕಕ್ಕೆ 'ಬಿಜ್ಜಳ ರಾಜ'ನ ಪಾತ್ರಕ್ಕೆ ನನ್ನನ್ನು ಆಯ್ಕೆ ಮಾಡಿದ್ದರು. ಆಗ ನನಗೆ ಆಶ್ಚರ್ಯ ಹಾಗೂ ಆತಂಕ ಎರಡನ್ನೂ ಒಟ್ಟಿಗೇ ಅನುಭವಿಸುವಂತಾಯಿತು. ಯಾವ ಅಭಿನಯದ ಅನುಭವವನ್ನೂ ಹೊಂದಿರದ ನನ್ನನ್ನು ರಾಜನ ಪಾತ್ರಕ್ಕೆ ಆರಿಸಿದ್ದುದು ಅಚ್ಚರಿಗೆ ಕಾರಣವಾದರೆ, ಸಂಕೋಚ ಸ್ವಭಾವದ ನಾನು ಎಲ್ಲರ ಮುಂದೆ ನಾಟಕ ಮಾಡಬಲ್ಲೆನೇ ಎಂಬ ಆತಂಕ. ಎಲ್ಲೆನ್ ಅವರೇ ನನ್ನ ಹೆಸರನ್ನು ರಾಜನ ಪಾತ್ರಕ್ಕೆ ಸೂಚಿಸಿದ್ದರೆಂಬುದು ನಂತರ ತಿಳಿಯಿತು. ಅವರ ಸ್ವಭಾವವೇ ಅಂಥದ್ದು. ಪ್ರತಿಭಾವಂತರನ್ನು ಗುರುತಿಸಲು ಸದಾ ಸೂಕ್ಷ್ಮ ಪರೀಕ್ಷೆಗಳನ್ನು ಮಾಡುತ್ತಲೇ ನಡೆ-ನುಡಿ-ಸ್ವಭಾವಗಳನ್ನು ಒರೆಗೆ ಹಚ್ಚುತ್ತಾರೆ. ನಂತರ ತಾವೇ ತೀರ್ಮಾನಕ್ಕೆ ಬರುತ್ತಾರೆ.

ಅಗಾಧ ಓದಿನಿಂದ ಗಳಿಸಿಕೊಂಡಿದ್ದ ಅನುಭವವನ್ನು ಮಕ್ಕಳಿಗೆ ಧಾರೆ ಎರೆಯುವಾಗ ತುಂಬಾ ಎಚ್ಚರ ವಹಿಸುತ್ತಿದ್ದರು. ಕಥೆ, ಉಪಕಥೆಗಳು ಹಾಸ್ಯಭರಿತವಾಗಿ ಮೂಡಿಬರುತ್ತಿದ್ದವು. ರಾಷ್ಟ್ರಪ್ರೇಮವನ್ನು ಬಿಂಬಿಸುವ ಘಟನೆಗಳ ವಿವರಣೆ, ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನ, ದಿಟ್ಟತನವನ್ನು ತಿಳಿಸುವಾಗ ತರಗತಿಯಲ್ಲಿರುವವರೆಲ್ಲ ಮೈಯೆಲ್ಲಾ ಕಿವಿಯಾಗಿ ಕೇಳುತ್ತಿದ್ದರು. ಇಂಥ ಕಥೆಗಳು ನನ್ನಲ್ಲಿ ಆದರ್ಶದ ಬದುಕು, ಹೋರಾಟದ ಛಲ, ಕ್ರಿಯಾಶೀಲತೆ ಗಳನ್ನು ತುಂಬಲು ನೆರವಾದವು. ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಪ್ರಭುತ್ವ ಪಡೆದಿದ್ದ ಎಲ್ಲೆನ್ ಕನ್ನಡ ಅಭಿಮಾನಿ; ಇಂಗ್ಲಿಷ್ ಪ್ರೇಮಿಯಾಗಿದ್ದರು. ಅವರ ಇಂಗ್ಲಿಷ್ ಪಾಠ ಆಕರ್ಷಕವಾಗಿತ್ತಾದರೂ ನಮಗೆ ಅರ್ಥವಾಗುತ್ತಿರಲಿಲ್ಲ. ಏಕೆಂದರೆ ನಮಗದು ಕಬ್ಬಿಣದ ಕಡಲೆ. ಕನ್ನಡದಲ್ಲಿ ಅವರು ಹೆಚ್ಚಿಗೆ ಹೇಳುತ್ತಿರಲಿಲ್ಲ. ಜೊತೆಗೆ ಅಲ್ಲೊಬ್ಬ, ಇಲ್ಲೊಬ್ಬರಂತೆ ಆರಿಸಿ ಪಾಠ ಓದಲು ಹೇಳುತ್ತಿದ್ದುದರಿಂದ ಕೆಲವರಂತೂ ಯಮಯಾತನೆಯನ್ನು ಅನುಭವಿಸು ತ್ತಿದ್ದರು. ಕೆಲವರು ಓದುವ ಉತ್ಸಾಹದಿಂದ ಕೈ ಎತ್ತುತ್ತಿದ್ದೆವು. ಕೈ ಎತ್ತಿದವರನ್ನು ಓದಿಸುವುದಿಲ್ಲ ವೆಂಬ ನಂಬಿಕೆ ನಮಗಿದ್ದುದರಿಂದ ಹಾಗೆ ಮಾಡುತ್ತಿದ್ದೆವು. ಇದರ ಮರ್ಮ ತಿಳಿದ ಅವರು ಕೈ ಎತ್ತಿದವರನ್ನೇ ಓದಿಸಲು ಮುಂದಾದರು. ಅಲ್ಲಿಗೆ ಕೈ ಎತ್ತುವವರೇ ಇಲ್ಲದಂತಾದರು! ಮುಖ ನೋಡಿ ಮನಸ್ಸನ್ನು ಅರಿಯುತ್ತಿದ್ದ ಅವರ ಗುಣವನ್ನು ತಿಳಿದವರಾರೂ ಸುಳ್ಳು ಹೇಳಲು ಪ್ರಯತ್ನಿಸುತ್ತಿರಲಿಲ್ಲ.

ಇತರರಿಗೆ ಮಾದರಿಯಾಗುವಂತೆ ಬದುಕುತ್ತಿದ್ದ ಅವರು ತಮ್ಮ ಪಾಲಿನ ಕಾರ್ಯವನ್ನು ಶ್ರದ್ಧೆಯಿಂದ, ಸಮರ್ಪಕವಾಗಿ ಮಾಡುತ್ತಿದ್ದರು. ಆ ಕಾರಣದಿಂದಲೇ ಶಾಲೆಯನ್ನು ತಮ್ಮ ಮನೆಗಿಂತ ಹೆಚ್ಚು ಪ್ರೀತಿಸುತ್ತಿದ್ದರು. ಊಟ, ತಿಂಡಿ, ನಿದ್ದೆಯ ಸಮಯವನ್ನುಳಿದು ಹೆಚ್ಚು ಸಮಯವನ್ನು ಶಾಲೆಯಲ್ಲಿಯೇ ಕಳೆಯುತ್ತಿದ್ದರು. ಇಂಥ ಬದ್ಧತೆ ನನ್ನನ್ನು ಆಕರ್ಷಿಸಿತ್ತು. ಅದರ ಪರಿಣಾಮವಾಗಿ ನಾನು ಮಾಡುವ ಯಾವುದೇ ಕೆಲಸವನ್ನು ಅತ್ಯಂತ ಆಸಕ್ತಿಯಿಂದ ಮಾಡಲು ಮುಂದಾಗುತ್ತೇನೆ.

ವಿದ್ಯಾರ್ಥಿಗಳನ್ನು ಕೇವಲ ಪುಸ್ತಕದ ಹುಳುಗಳನ್ನಾಗಿಸುವುದು ನರಸಿಂಹಯ್ಯನವರಿಗೆ ಇಷ್ಟವಿರಲಿಲ್ಲ. ಬೆಳೆಯುವ ಮಕ್ಕಳಲ್ಲಿರುವ ಸುಪ್ತ ಪ್ರತಿಭೆಗಳನ್ನು ಗುರುತಿಸುವ ಸಲುವಾಗಿ ಸಾಹಿತ್ಯಕ, ಸಾಂಸ್ಕೃತಿಕ ಸ್ಪರ್ಧೆಗಳನ್ನು ವ್ಯವಸ್ಥೆಗೊಳಿಸುತ್ತಿದ್ದರು. ಗ್ರಾಮೀಣ ಮೂಲ ಸಂಸ್ಕೃತಿ, ಕನ್ನಡ ನಾಡಿನ ಪರಂಪರಾಗತ ಹಿರಿಮೆಗಳನ್ನು ವಿದ್ಯಾರ್ಥಿಗಳಲ್ಲಿ ಬಿತ್ತಿ ಬೆಳೆಯುವ ಸದುದ್ದೇಶದಿಂದ ದೇಸೀಯ ಕ್ರೀಡೆಗಳಿಗೇ ಹೆಚ್ಚಿನ ಮಹತ್ವವನ್ನು ನೀಡುತ್ತಿದ್ದುದು ಈಗ ಇತಿಹಾಸ. ನಾನು ನಾಡು–ನುಡಿ–ಸಂಸ್ಕೃತಿಯ ಬಗೆಗೆ ಪ್ರೀತಿ, ಅಭಿಮಾನವನ್ನು ಬೆಳೆಸಿಕೊಳ್ಳಲು ಆ ಸ್ಪರ್ಧೆಗಳು ಪೂರಕವಾಗಿದ್ದವು. ಉಪನ್ಯಾಸಕನಾಗಬೇಕೆಂಬ ನನ್ನ ಬಯಕೆ ಕುಡಿಯೊಡೆಯಲು ಎಲ್ಲೆನ್ ಮೂಲಕಾರಣ ಎಂದು ಹೇಳಲೇಬೇಕು. ಪುಸ್ತಕಗಳನ್ನು ಓದುವ ಅಭಿರುಚಿ ಮೂಡಿಸುವ ಸಲುವಾಗಿ ಶಾಲೆಯಲ್ಲಿ ಗ್ರಂಥಾಲಯವನ್ನು ವ್ಯವಸ್ಥಿತವಾಗಿ ಸಜ್ಜುಗೊಳಿಸಿ, ಪ್ರತಿಯೊಬ್ಬ ವಿದ್ಯಾರ್ಥಿಯೂ ಕಡ್ಡಾಯವಾಗಿ ಪುಸ್ತಕಗಳನ್ನು ಕೊಂಡು ಓದಬೇಕೆಂಬ ನಿಯಮ ಮಾಡಿದ್ದರಿಂದ ನಾನು ಇಂದು ಪುಸ್ತಕ ಪ್ರೇಮಿಯಾಗಲು ಸಾಧ್ಯವಾಯಿತು. ನನ್ನ ಸ್ವಂತ ಗ್ರಂಥಭಂಡಾರದಲ್ಲಿ ಸುಮಾರು ನಾಲ್ಕು ಸಾವಿರದಷ್ಟು ಪುಸ್ತಕಗಳಿವೆ. ಅದಕ್ಕೆ ಮೂಲ ಪ್ರೇರಣೆ ಎಲ್ಲೆನ್ ಅವರೆಂದು ಹೆಮ್ಮೆಯಿಂದ ಹೇಳುತ್ತೇನೆ. ಶಾಲೆಯಲ್ಲಿದ್ದ 'ಸಂಚಯ ನಿಧಿ'ಯ ಮೂಲಕ ನಮ್ಮಲ್ಲಿ ಉಳಿತಾಯ ಪ್ರಜ್ಞೆ ಬೆಳೆಸಿ, ಮಿತವ್ಯಯವನ್ನು ಕಲಿಸಿದ್ದರಿಂದ ಬೆಂಗಳೂರಿಗೆ ಬಂದ ನಾನು ಅಡ್ಡದಾರಿ ಹಿಡಿಯದೆ ಸನ್ಮಾರ್ಗದಲ್ಲಿ ನಡೆಯಲು ಸಾಧ್ಯವಾಯಿತು. ಗ್ರಾಮಾಂತರ ಪ್ರದೇಶದ ಶಾಲೆಯೊಂದು ನಗರ ಪ್ರದೇಶದ ಶಾಲೆಗಳಷ್ಟೇ ಗುಣಮಟ್ಟವನ್ನು ಹೊಂದಿತ್ತೆಂದರೆ ಅದರಲ್ಲಿ ನರಸಿಂಹಯ್ಯನವರ ಪಾಲು ಅಧಿಕವೆಂದೇ ಹೇಳಬೇಕು.

ತರುಣರು ಅರಿವಿದ್ದೋ, ಇಲ್ಲದೆಯೊ, ಸ್ನೇಹಿತರ ಒತ್ತಡಕ್ಕೆ ಮಣಿದು ತಪ್ಪು ಮಾಡುವುದು ಸಹಜ. ಆ ತಪ್ಪನ್ನು ದೊಡ್ಡದು ಮಾಡಿ ಸಮಸ್ಯೆಯನ್ನು ಜಟಿಲಗೊಳಿಸುವ ಬದಲು, ತಪ್ಪನ್ನು ತಿದ್ದುವ, ಅಡ್ಡದಾರಿಗಿಳಿದವರನ್ನು ಸರಿದಾರಿಗೆ ತರುವ ಕಾರ್ಯ ತುಂಬಾ ಕ್ಲಿಷ್ಟವಾದುದು. ಅಂಥ ಕ್ಲಿಷ್ಟ ಸಂದರ್ಭಗಳನ್ನು ಸವಾಲಾಗಿ ಸ್ವೀಕರಿಸುವುದು ಎಲ್ಲೆನ್ ಅವರ ಸ್ವಭಾವವಾಗಿತ್ತು. ಅದಕ್ಕೊಂದು ನಿದರ್ಶನ ಇಲ್ಲಿದೆ. ೧೯೭೭ಲನೇ ಇಸವಿ ನವೆಂಬರ್ ತಿಂಗಳಿರಬೇಕು. ನಾನು ಎಸ್.ಎಸ್.ಎಲ್.ಸಿ.ಯಲ್ಲಿ ಓದುತ್ತಿದ್ದೆ. ನನ್ನ ಕೆಲವು ಮಿತ್ರರು ಯಾವುದೋ ಕಾರಣಕ್ಕೆ ಶಾಲೆಯಲ್ಲಿ 'ಸ್ಟ್ರೈಕ್' ಮಾಡಬೇಕೆಂದು ತೀರ್ಮಾನಿಸಿದ್ದರು. ನೀನೂ ಬೆಂಬಲಿಸಬೇಕೆಂದು ನನಗೆ ಎಚ್ಚರಿಕೆ ನೀಡಿದ್ದರು. ಅವರ ಒತ್ತಾಯಕ್ಕೆ ಮಣಿದು ಸಮ್ಮತಿಸಿದ್ದೆ. ಪ್ರತಿ ದಿನದಂತೆ ಪ್ರಾರ್ಥನೆಗೆ ಗಂಟೆ ಬಾರಿಸಿತು. ಪ್ರಾರ್ಥನೆಯೂ ಮುಗಿಯಿತು. ಆದರೆ ಯಾರೊಬ್ಬರೂ ತರಗತಿಗಳಿಗೆ ಹೋಗದೆ

ಅಲ್ಲೇ ನಿಂತಿದ್ದರು. ಉಪಾಧ್ಯಾಯರಿಗೆ ಆಶ್ಚರ್ಯ. ಕಾರಣ ತಿಳಿದಿಲ್ಲ. ಮುಖ್ಯೋಪಾಧ್ಯಾಯರಾದ ಎಲ್ಲೆನ್ ಅವರ ಮುಖ ಕೆಂಪೇರಿತು. ಕಿವಿಗಳು ಅದುರಿದವು. ಸಿಟ್ಟು ನೆತ್ತಿಗೇರಿತು. "ಹೂ. ಎಲ್ಲಾ ತರಗತಿಗಳಿಗೆ ಹೋಗಿ. ಇಲ್ಲವಾದರೆ..." ಎಂದು ಗುಟುಕು ಹಾಕಿದರು. ಹಿಂದೆ ನಿಂತಿದ್ದ ಹುಡುಗಿಯರು ಮೊದಲು, ಅವರನ್ನು ಹಿಂಬಾಲಿಸಿ ಹುಡುಗರು ತರಗತಿಗಳನ್ನು ಹೊಕ್ಕರು. ವಿಚಾರಣಾ ಗಂಟೆಯ ವಿಚಾರಣೆಯ ಬಳಿಕ ಕೈಕಾಲುಗಳಿಗೆ ಬೆತ್ತಸೇವೆ ಸಲ್ಲಿಸಿ ಹೊರದೂಡು ತ್ತಿದ್ದರು. ಆ ಪರಿಸ್ಥಿತಿ 'ಭಯೋತ್ಪಾದಕರನ್ನು ವಿಚಾರಣೆಗೆ ಗುರಿಪಡಿಸುವಷ್ಟು ಕಠಿಣವಾದುದೆಂದು ಹೇಳಬಹುದು. ಕೊನೆಯದಾಗಿ ನನ್ನ ಸರದಿ. ಆ ವೇಳೆಗಾಗಲೇ ಭಯಗೊಂಡು ಎರಡು ಬಾರಿ ಒಂದ ಮಾಡಿ ಬಂದಿದ್ದ ನಾನು ನಿಧಾನವಾಗಿ ಕಾಲು ಎಳೆದುಕೊಂಡು ಅವರ ಕೊಠಡಿಯನ್ನು ಪ್ರವೇಶಿಸಿದೆ. ನನ್ನನ್ನು ಕಂಡೊಡನೆ 'ಹೂಂ.... ನೀನೂ ಈ ಮೂರ್ಖರ ಜೊತೆ ಸೇರಿಕೊಂಡೆಯಾ? ನಿನ್ನ ಸ್ಥಿತಿ ಏನು ಎಂಬ ಅರಿವಿದೆಯಾ ನಿನಗೆ? ಎಂದು ಗದರಿಸಿ ಬೆತ್ತವನ್ನು ಕೈಗೆತ್ತಿಕೊಂಡರು. ಎರಡೂ ಕೈಗೆ ಮೂರು ಮೂರು ಏಟು! ಸ್ವರ್ಗದ ನಂತರದ ಸ್ಥಾನ ಇದೇ ಇರಬೇಕೆಂದು ನಾನಾಗ ತೀರ್ಮಾನಿಸಿದೆ. ಅಂದು ಅವರಾಡಿದ ಮಾತುಗಳು; ಆರು ಏಟು ಇನ್ನೂ ನನ್ನ ನೆನಪಿನ ಬುತ್ತಿಯೊಳಗೆ ಸುರಕ್ಷಿತವಾಗಿವೆ! ಕನ್ನಡಪರ ಹೋರಾಟಕ್ಕೆ ಧೈರ್ಯವಾಗಿ ಧುಮುಕಲು ಶಾಲೆಯಲ್ಲಿ ನಡೆದ ಘಟನೆಯೂ ಪ್ರೇರಕವಾಯಿತು ಎನ್ನಬಹುದು.

ಸಮಾಜದಲ್ಲಿ ಉನ್ನತ ಸ್ಥಾನಕ್ಕೇರಿದವರನ್ನು ಮಕ್ಕಳಿಗೆ ಪರಿಚಯಿಸಿ, ಆ ಮೂಲಕ ಮಕ್ಕಳ ಬದುಕನ್ನು ರೂಪಿಸಲು ನೆರವಾಗಬೇಕೆಂದು ನರಸಿಂಹಯ್ಯನವರು ಯೋಚಿಸುತ್ತಿದ್ದರು. ಅಂಥ ಸಂದರ್ಭಗಳಿಗಾಗಿ ಕಾಯುತ್ತಿದ್ದರು. ಒಮ್ಮೆ ನಟ ಉದಯಕುಮಾರ್ ಅವರು ಹಾರೋಹಳ್ಳಿಗೆ ಆಗಮಿಸಿದ್ದರು. ವಿಷಯ ತಿಳಿದ ಎಲ್ಲೆನ್ ಅವರನ್ನು ಶಾಲೆಗೆ ಕರೆಸಿ, ತರಗತಿಗಳನ್ನು ನಿಲ್ಲಿಸಿ ಉದಯಕುಮಾರ್ ಅವರಿಂದ ಮಕ್ಕಳಿಗೆ ಹಿತವಚನ ನುಡಿಸಿದರು. ಶಾಲಾ ವಾರ್ಷಿಕೋತ್ಸವಗಳಿಗೆ ನಾಡಿನ ಗಣ್ಯ ಸಾಹಿತಿಗಳು, ರಾಜಕಾರಣಿಗಳು, ಪತ್ರಕರ್ತರನ್ನು ಕರೆಸುತ್ತಿದ್ದರು. ಕನ್ನಡಪ್ರಭ ಪತ್ರಿಕೆಯ ಸಂಪಾದಕರಾಗಿದ್ದ ಖಾದ್ರಿ ಶಾಮಣ್ಣ ಅವರು ಒಮ್ಮೆ ಶಾಲಾ ವಾರ್ಷಿಕೋತ್ಸವಕ್ಕೆ ಬಂದು ಕನ್ನಡ ನಾಡು-ನುಡಿ ಕುರಿತು ಭಾಷಣ ಮಾಡಿದ್ದರು. ಆ ಮಾತುಗಳು ನನ್ನ ಮೇಲೆ ಪರಿಣಾಮ ಬೀರಿ ಕನ್ನಡಪರ ಕಾರ್ಯಕರ್ತನಾಗುವಂತಾಯಿತು. ವರುಣಾ ನಾಲೆ ಗಲಾಟೆ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗಿದ್ದ ಡಿ. ದೇವರಾಜ ಅರಸು ಅವರು ಕನಕಪುರ ಮಾರ್ಗವಾಗಿ ಮೈಸೂರಿಗೆ ತೆರಳುತ್ತಿದ್ದರು. ವಿಷಯ ತಿಳಿದ ಎಲ್ಲೆನ್ ಶಾಲಾ ಮಕ್ಕಳನ್ನು ರಸ್ತೆಯ ಇಕ್ಕೆಲಗಳಲ್ಲಿ ನಿಲ್ಲಿಸಿ ಮುಖ್ಯಮಂತ್ರಿಗಳನ್ನು ಸ್ವಾಗತಿಸಿದರು. ರಾಜ್ಯದ ಮುಖ್ಯಮಂತ್ರಿಯೊಬ್ಬರನ್ನು ಮಕ್ಕಳು ನೋಡುವ ಭಾಗ್ಯವನ್ನು ಅಂದು ಎಲ್ಲೆನ್ ಕರುಣಿಸಿದರೆಂದೇ ಹೇಳಬೇಕು. ಇವುಗಳ ಜೊತೆಗೆ ಆಗಾಗ ತೋರಿಸುತ್ತಿದ್ದ ಸಾಕ್ಷ್ಯಚಿತ್ರಗಳಲ್ಲಿ ಮದ್ಯಪಾನದಿಂದೊದಗುವ ಸಂಕಷ್ಟಗಳು, ಧೂಮಪಾನದ ಪರಿಣಾಮಗಳು, ಸಹಬಾಳ್ವೆ, ಕೋಮುಸೌಹಾರ್ದ ಮುಂತಾದ ವಿಷಯಗಳು ಕೇಂದ್ರೀಕೃತವಾಗಿರುತ್ತಿದ್ದವು.

ಶಾಲೆಯಲ್ಲಿದ್ದ ವಿದ್ಯಾರ್ಥಿನಿಲಯದ ಮೇಲುಸ್ತುವಾರಿಗೆ ಉಪಾಧ್ಯಾಯರಿದ್ದರೂ ಎಲ್ಲೆನ್

ಸ್ವತಃ ಮಕ್ಕಳ ಮೇಲೆ ನಿಗಾ ವಹಿಸುತ್ತಿದ್ದರು. ಸಂಜೆ ವೇಳೆ ಮಕ್ಕಳಿಗೆ ಆಟ, ಪ್ರಾರ್ಥನೆ, ಪಾಠ, ಊಟ, ನಿದ್ದೆ ದಿನಚರಿಯಾಗಿದ್ದವು. ಎಲ್ಲೆನ್ ರಾತ್ರಿ ಹತ್ತರವರೆಗೆ ಶಾಲೆಯಲ್ಲಿದ್ದು ಮನೆಗೆ ತೆರಳುತ್ತಿದ್ದರು. ಬೆಳಗಿನ ಜಾವ ನಾಲ್ಕು ಗಂಟೆಗಾಗಲೇ ಶಾಲೆಗೆ ಬಂದು, ಐದು ಗಂಟೆಗೆ ಮಕ್ಕಳನ್ನು ಎಬ್ಬಿಸಿ, ಪ್ರಾರ್ಥನೆಯ ನಂತರ ಓದಲು ತೊಡಗಿಸುತ್ತಿದ್ದರು–ಕಠಿಣ ಪರಿಶ್ರಮದಿಂದ ಏನನ್ನಾದರೂ ಸಾಧಿಸಬಹುದು ಎಂಬುದನ್ನು ತಾವು ಮಾಡಿ, ವಿದ್ಯಾರ್ಥಿಗಳಿಗೆ ತೋರಿಸುವ ಮೂಲಕ ಅವರು ಮಾದರಿಯಾಗಿದ್ದರು. ವಿದ್ಯಾರ್ಥಿನಿಲಯದ ಶಿಸ್ತುಪಾಲನೆಗೆ ಮೆಚ್ಚಿ ಅಕ್ಕಪಕ್ಕದ ಊರುಗಳವರು ತಮ್ಮ ಮಕ್ಕಳನ್ನು ವಿದ್ಯಾರ್ಥಿನಿಲಯಕ್ಕೆ ಸೇರಿಸುತ್ತಿದ್ದರು. ಎಲ್ಲೆನ್ ಅವರ ಮೇಲಿನ ನಂಬಿಕೆಯಿಂದ ಕೋಲಾರ ಜಿಲ್ಲೆಯ ಚಿಂತಾಮಣಿ, ಶಿಡ್ಲಘಟ್ಟ, ಶ್ರೀನಿವಾಸಪುರ ತಾಲ್ಲೂಕುಗಳಿಂದಲೂ ಪೋಷಕರು ಬಂದು ತಮ್ಮ ಮಕ್ಕಳನ್ನು ಸೇರಿಸುವುದಿತ್ತು. ನಂಬಿಕೆ, ವಿಶ್ವಾಸಗಳ ಬೆಲೆಯನ್ನು ಸರಿಯಾಗಿ ಅರ್ಥೈಸಿಕೊಂಡಿದ್ದ ನರಸಿಂಹಯ್ಯನವರು ಹಳೆಯ ವಿದ್ಯಾರ್ಥಿಗಳೊಡನೆ ನಿಕಟ ಸಂಪರ್ಕವನ್ನಿಟುಕೊಂಡು ಶಾಲೆಯ ಅಭಿವೃದ್ಧಿಗೆ ಅವರನ್ನು ತೊಡಗಿಸಿಕೊಳ್ಳಲು ಮುಂದಾದರು. ಇದರಿಂದಾಗಿ ಶಾಲೆಯ ಪ್ರಗತಿಯ ವೇಗ ಹೆಚ್ಚಾಯಿತು. ರಾಜ್ಯದ ಮಾಜಿ ಸಚಿವ ಪಿ.ಜಿ.ಆರ್. ಸಿಂಧ್ಯ, ಮುಖ್ಯಮಂತ್ರಿಗಳ ಕಚೇರಿಯಲ್ಲಿ ಅಧಿಕಾರಿಯಾಗಿದ್ದ ಐ.ಎ.ಎಸ್. ಅಧಿಕಾರಿ ಸಿದ್ಧಯ್ಯ, ಹಲವಾರು ವೈದ್ಯರು, ಎಂಜಿನಿಯರುಗಳು, ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳು, ಉಪನ್ಯಾಸಕರು, ಸಾಹಿತಿಗಳು, ಕಲಾವಿದರು, ಗಾಯಕರು, ಉದ್ಯಮಿಗಳು, ಪತ್ರಕರ್ತರು ಹೀಗೆ ಹಲವಾರು ರಂಗಗಳಲ್ಲಿ ದುಡಿಯುತ್ತಿರುವವರು ಎಲ್ಲೆನ್ ಅವರ ಗರಡಿಯಲ್ಲಿ ಬೆಳೆದವರಾಗಿದ್ದಾರೆ. ನನಗೆ ಹಲವಾರು ಮಂದಿ ಪಾಠ ಹೇಳಿಕೊಟ್ಟಿದ್ದಾರೆ. ಅವರಿಂದ ಅಲ್ಪಸ್ವಲ್ಪ ತಿಳಿದಿರುವುದೂ ಇದೆ. ಆದರೆ ಎಲ್. ನರಸಿಂಹಯ್ಯನವರು ಮಾತ್ರ ನನ್ನ ಹೃದಯವನ್ನು ತಟ್ಟಿದರು, ಮುಟ್ಟಿದರು. ಅವರಂಥ ಗುರುವಿನಿಂದಾಗಿ ನಾನೊಬ್ಬ ವ್ಯಕ್ತಿಯಾಗಿ ಬೆಳೆಯಲು ಸಾಧ್ಯವಾಯಿತು. ನಾಡು–ನುಡಿಗಾಗಿ ದುಡಿಯುವ ಛಲವನ್ನು ಮೂಡಿಸಿಕೊಳ್ಳುವಂತಾಯಿತು. ಅಂಥಗುರುವನ್ನು ಪಡೆದ ನಾನೇ ಧನ್ಯ.

❖

# ನನ್ನ ಸ್ಫೂರ್ತಿಯ ಗುರು

## (ಸ್ವಾಮಿ ವಿವೇಕಾನಂದ)

● ಸುರೇಶ್ ಮೂನ

ಪರಬ್ರಹ್ಮ ಸ್ವರೂಪಿ ಗುರುವಿಗಾಗಿಯೇ ಸ್ವಾಮಿ ವಿವೇಕಾನಂದರು ದೀರ್ಘಕಾಲ ಹುಡುಕಾಡಿದರು. ಕೊನೆಗೆ ದೈವಸಾಕ್ಷಾತ್ಕಾರವನ್ನು ಪಡೆದಿದ್ದ ಶ್ರೀ ರಾಮಕೃಷ್ಣ ಪರಮಹಂಸರ ಸಾನಿಧ್ಯ ದೊರೆತು ಅವರೇ ತಮ್ಮ ಆದರ್ಶ ಗುರು ಎಂದು ಮನವರಿಕೆಯಾದ ಕೂಡಲೇ ಅವರ ತತ್ವಾದರ್ಶಗಳಿಗೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡರು. ತತ್ಪರಿಣಾಮವಾಗಿ ದೊರೆತ ಗುರುವಿನ ಕೃಪಾಕಟಾಕ್ಷದಿಂದ ಇಡೀ ಜಗತ್ತಿಗೆ ಒಬ್ಬ ಮಾದರಿ ವ್ಯಕ್ತಿಯಾಗಿ ರೂಪುಗೊಂಡು ಜೀವನವನ್ನು ಪಾವನಗೊಳಿಸಿಕೊಂಡರು. ಗುರು ಶಿಷ್ಯರ ಇಂತಹ ದೈವಿಕ ಸಂಬಂಧದ ಹಿನ್ನೆಲೆಯಲ್ಲಿ "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂದಿದ್ದಾರೆ ಪುರಂದರದಾಸರು. ಆದರೆ, ಹೀಗೆ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಲು ಸಿದ್ಧವಿದ್ದರೂ ರಾಮಕೃಷ್ಣ ಪರಮಹಂಸ ರಂತಹ ಶ್ರೇಷ್ಠಗುರುಗಳು ದೊರಕಬೇಕಲ್ಲ! ದೊರೆತರೂ ಅವರು ಶಿಷ್ಯ ಎಂದು ಸ್ವೀಕರಿಸಬೇಕಲ್ಲ! ಏಕಲವ್ಯನಿಗೆ ಒದಗಿ ಬಂದದ್ದು ಇಂತಹ ಪರಿಸ್ಥಿತಿಯಲ್ಲವೇ? ದ್ರೋಣರು ತನ್ನನ್ನು ಶಿಷ್ಯರನ್ನಾಗಿ ಸ್ವೀಕರಿಸದಿದ್ದರೂ ಏಕಲವ್ಯನು ಮಾತ್ರ ಒಂದೇ ಮನಸ್ಸಿನಿಂದ ಅವರೇ ತನ್ನ ಗುರುವೆಂದು ನಿರ್ಧರಿಸಿಬಿಟ್ಟಿದ್ದ. ಅವರ ಮೂರ್ತಿಯನ್ನೇ ಪೂಜಿಸುತ್ತಾ ತದೇಕಚಿತ್ತನಾಗಿ ಬಿಲ್ಲು ವಿದ್ಯೆಯ್ನು ಕಲಿತು ಅರ್ಜುನನನ್ನು ಮೀರಿಸುವ ಪರಿಣತಿಯನ್ನು ಪಡೆದ. ಅಂದರೆ ದೈಹಿಕವಾಗಿ ಸಾನಿಧ್ಯ ದೊರೆಯದಿದ್ದರೂ ಮಾನಸಿಕವಾಗಿಯೇ ಗುರುವನ್ನು ಸ್ವೀಕರಿಸಿ ಅವರ ಜೀವನ ಮತ್ತು ತತ್ವಾದರ್ಶಗಳನ್ನು ಅನುಸರಿಸಿಯೇ ಜೀವನದಲ್ಲಿ ಮಹತ್ತರವಾದ ಗುರಿಯನ್ನು ಸಾಧಿಸಲು ಸಾಧ್ಯ ಎಂದಾಯಿತು.

ನಾವು ಶಾಲಾ ಕಾಲೇಜುಗಳಲ್ಲಿ ಓದುವಾಗ ಪಾಠ ಮಾಡುವವರೆಲ್ಲರನ್ನೂ ಗುರುಗಳೆಂದು ಹೇಳಲಾಗುವುದಿಲ್ಲ. ಜ್ಞಾನವನ್ನು ನೀಡುವ, ಪರೀಕ್ಷೆಗೆ ಸಿದ್ಧಗೊಳಿಸುವ ಅವರು ಶಿಕ್ಷಕರು ಹಾಗೂ ಬೋಧಕರು, "ಅಕ್ಷರ ಮಾತ್ರಂ ಕಲಿಸಿದಾತಂ ಗುರು" ಎಂಬ ಮಾತು ಇದೆಯಾದರೂ ಜ್ಞಾನವನ್ನು ನೀಡಿದವರೆಲ್ಲರೂ ಗುರುಗಳಾಗಿ ಬಿಡುವುದಿಲ್ಲ. ಗುರುವಿನ ಸ್ಥಾನ ಇದೆಲ್ಲದಕ್ಕಿಂತ ಹಿರಿದಾದುದು. ಜ್ಞಾನ ದಾಹವನ್ನು ತೀರಿಸುವುದಷ್ಟೇ ಅಲ್ಲದೆ ಶಿಷ್ಯನ ಅಂಧಕಾರವನ್ನು ಅಳಿಸಿ ಅಂತಃಚಕ್ಷುವನ್ನು ತೆರೆಸಿ ಬೆಳಕಿನೆಡೆಗೆ ಕೈಹಿಡಿದು ಕರೆದೊಯ್ಯುವವ ಹಾಗೂ ಜೀವನ ದರ್ಶನವನ್ನು ಮಾಡಿಸುವವರು ಮಾತ್ರ ಗುರುಗಳೆನಿಸಿಕೊಳ್ಳುತ್ತಾರೆ. ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಆದರ್ಶಗಳಿಗೆ ಬದ್ಧರಾಗಿ ಅವುಗಳನ್ನು ಕಾರ್ಯರೂಪಕ್ಕೆ ತಂದು ತಮ್ಮ ಸಾಧನೆಯ ಪಥದಲ್ಲಿ ಶಿಷ್ಯರನ್ನು ಜೊತೆಗೆ ಕರೆದೊಯ್ಯುವ ಗುರುಗಳು ಇಲ್ಲವೆಂದಲ್ಲ. ಆದರೆ ಅಂತಹವರ ಸಂಖ್ಯೆ ಕಡಿಮೆ.

ನನಗೆ ಪ್ರಾಥಮಿಕ ಶಾಲಾ ಹಂತದಿಂದಲೇ ಹಿರಿಯರನ್ನೂ ಹಳೆಯದಾದ ಕಟ್ಟಡ, ಗ್ರಂಥಗಳು, ವಸ್ತುಗಳು ಮುಂತಾದವುಗಳನ್ನು ವಿಶೇಷ ಗೌರವದಿಂದ ಕಾಣುವ ಮನೋಭಾವ ಬೆಳೆದು ಬಂದು ಬಿಟ್ಟಿತ್ತು. ಬಹುಶಃ ನನಗೆ ಇದು ಹುಟ್ಟಿನಿಂದಲೇ ಬಂದ ಗುಣವಿರಬೇಕು ಅಷ್ಟೇ. ಅಲ್ಲದೆ ಈ ಬಗ್ಗೆ ಹೆಚ್ಚು ತಿಳಿಯಬೇಕು ಅವುಗಳನ್ನು ಯಾರಲ್ಲಾದರು ಹೇಳಿಕೊಳ್ಳಬೇಕೆಂಬ ಅವ್ಯಕ್ತವಾದ ತುಡಿತವು ಮನದಾಳದಲ್ಲಿ ಇತ್ತು. ನನ್ನ ಶಾಲಾ, ಕಾಲೇಜು ಹಂತದಲ್ಲಿ ಒಳ್ಳೆಯ ಶಿಕ್ಷಕರು ದೊರೆತರಾದರೂ ಈ ತುಮುಲವನ್ನು ಅರಿಯುವ ಅದಕ್ಕೊಂದು ಸ್ಪಷ್ಟರೂಪವನ್ನು ನೀಡಿ ದಾರಿ ತೋರಬಲ್ಲ ಗುರು ದೊರಕಲಿಲ್ಲ. ಅದಕ್ಕಾಗಿ ನಾನು ನನ್ನ ಜೀವನದ ಸುಮಾರು ೩೪ ವರ್ಷಗಳನ್ನು ಕಳೆಯಬೇಕಾಯಿತು.

೧೯೮೭ರಲ್ಲಿ ಸ್ನೇಹಿತರೊಬ್ಬರು ನನ್ನನ್ನು ಬುಲ್ ಟೆಂಪಲ್ ರಸ್ತೆಯ ರಾಮಕೃಷ್ಣ ಮಠಕ್ಕೆ ಪರಿಚಯಿಸಿದರು. ಅಲ್ಲಿಯ ಪ್ರಶಾಂತ ಹಾಗೂ ದೈವಿಕ ಪರಿಸರ ಆಗಿನ ಅಧ್ಯಕ್ಷರಾಗಿದ್ದ ಸ್ವಾಮಿ ಚಿದಾನಂದಜೀ ಆತ್ಮೀಯತೆಯ ಮೂರ್ತಿವೆತ್ತಂತಿದ್ದ ಸ್ವಾಮಿ ಪುರುಷೋತ್ತಮಾನಂದಜೀ ಯವರಂತಹ ಹಿರಿಯ ಯತಿವರ್ಯರ ಒಡನಾಟ ಇವೆಲ್ಲಾ ನನ್ನ ಚಿಂತನೆಯನ್ನು ಪ್ರಬುದ್ಧ ಗೊಳಿಸಿತ್ತು. ನನ್ನ ಜೀವನದಲ್ಲಿ ನಿರ್ದಿಷ್ಟ ಗುರಿಯನ್ನು ಕಂಡುಕೊಳ್ಳುವ ಕಾಲ ಸನ್ನಿಹಿತವಾಗುತ್ತಿದೆ ಎನಿಸಿತು.

ರಾಮಕೃಷ್ಣ ಮಠದಲ್ಲಿ ಸ್ವಾಮಿ ಪುರುಷೋತ್ತಮಾನಂದಜೀ ಅವರು ಒಂದು ದಿನ ತಾವೇ ಸ್ವಾಮಿ ವಿವೇಕಾನಂದರ ಬಗ್ಗೆ ರಚಿಸಿದ "ವೀರ ಸಂನ್ಯಾಸಿ", "ವಿಶ್ವ ವಿಜೇತ", "ವಿಶ್ವಮಾನವ ವಿವೇಕಾನಂದ" ಎಂಬ ೩ ಪ್ರತ್ಯೇಕ ಕೃತಿಗಳನ್ನು ನೀಡಿ "ನೀವು ಇದನ್ನು ಓದಲೇಬೇಕು" ಎಂದರು. ಸತತವಾಗಿ ಆ ೩ ಕೃತಿಗಳನ್ನು ಓದಿ ಮುಗಿಸುವ ಹೊತ್ತಿಗೆ ಸ್ವಾಮಿ ವಿವೇಕಾನಂದರು ನನ್ನ ಮನಸ್ಸನ್ನು ಸಂಪೂರ್ಣವಾಗಿ ಆವರಿಸಿಕೊಂಡು ಬಿಟ್ಟಿದ್ದರು. ಅವರ ಬಗ್ಗೆ ಇನ್ನು ಹೆಚ್ಚಿನ ವಿಷಯವನ್ನು ತಿಳಿಯಬೇಕೆಂದು ಇಂಗ್ಲಿಷ್‌ನಲ್ಲಿ ಅವರ ಬಗ್ಗೆ ಪ್ರಕಟಗೊಂಡಿದ್ದ ೮ ಭಾಗಗಳನ್ನು ಕೊಂಡು ಓದಿದೆ. ಅವುಗಳ ಪೈಕಿ ಒಂದು ಕೃತಿಯಲ್ಲಿ ಸ್ವಾಮೀಜಿಯವರು ಹೀಗೆಂದಿದ್ದಾರೆ "ಯಾರು ತನ್ನ ನಾಡಿನ ಹಾಗೂ ಪೂರ್ವಜರ ಹಿರಿಮೆಯನ್ನು ಪ್ರತಿಯೊಬ್ಬರ ಮನೆಯ ಬಾಗಿಲಿಗು ತಲುಪಿಸುತ್ತಾನೋ ಅವನೇ ನಿಜವಾದ ಅರ್ಥದಲ್ಲಿ ದೇಶದ ಹಿತಚಿಂತಕ" ಈ ಮಾತು ನನ್ನ ಮನಸ್ಸಿನಲ್ಲಿ ಬಲವಾಗಿ ಬೇರೂರಿಬಿಟ್ಟಿತು. ಬೆಂಗಳೂರಿನ ಇತಿಹಾಸವನ್ನು ಆಳವಾಗಿ ಹಾಗೂ ವ್ಯವಸ್ಥಿತವಾಗಿ ಅಧ್ಯಯನ ಮಾಡಿ ನಾನು ತಿಳಿದುಕೊಂಡಿದ್ದನ್ನು ಜನಸಾಮಾನ್ಯರಿಗೆ ತಿಳಿಸುವ ಪ್ರಯತ್ನಕ್ಕೆ ಆಗತಾನೆ ಡೆಕ್ಕನ್ ಹೆರಾಲ್ಡ್ ಲೇಖನದ ಮೂಲಕ ಕೈ ಹಾಕಿದ್ದೆ. ಸ್ವಾಮೀಜಿಯವರ ಈ ವಾಕ್ಯ ನನ್ನ ಈ ಪ್ರಯತ್ನಕ್ಕೆ ಒಂದು ಸ್ಪಷ್ಟ ಸ್ವರೂಪವನ್ನು ನೀಡಿತು. ನನ್ನ ಜೀವನಕ್ಕೊಂದು ನಿರ್ದಿಷ್ಟಗುರಿ ದೊರೆತಂತಾಯಿತು. ವೃತ್ತಿಯಲ್ಲಿ ನಾನು ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದೆ. ಅದು ನನ್ನ ಜೀವನ ನಿರ್ವಹಣೆಗಾಯಿತು. ಆದರೆ ನನ್ನ ನಾಡಿಗೆ ಕಿಂಚಿತ್ತಾದರೂ ಸೇವೆ ಸಲ್ಲಿಸಲು ಕೈಗೊಳ್ಳಬಹುದಾದ ಕಾರ್ಯ ಇದೆ ಎಂಬುದು ನನಗೆ ಖಚಿತವಾಯಿತು. ಹೀಗೆ ನನ್ನ ಬಾಳಿಗೆ ಬೆಳಕು ತೋರಿ ಮಾರ್ಗದರ್ಶನ ಮಾಡಿ ಜೀವನಕ್ಕೊಂದು ಅರ್ಥ ಬರುವಂತೆ ಮಾಡಿದ ಸ್ವಾಮಿ ವಿವೇಕಾನಂದರೆ ನನ್ನ ಗುರುಗಳಾದರು.

ಅವರ ದಿಟ್ಟ ಹಾಗೂ ನೇರ ನಿಲುವಿನ ಒಂದು ಆಕರ್ಷಕ ಚಿತ್ರವನ್ನು ಕೊಂಡು ಮನೆಯಲ್ಲಿ ಇಟ್ಟುಕೊಂಡೆ. ಪ್ರತಿದಿನ ಅವರ ದರ್ಶನ ಮತ್ತು ನಮನಗಳೇ ನನ್ನ ಕಾರ್ಯಗಳಿಗೆ ಸ್ಫೂರ್ತಿ ನೀಡತೊಡಗಿದವು.

AARAMBH (An Association for Reviviing Awareness about Monuments of Bangalore Heritage) ಎಂಬುದು ನನ್ನ ಸಂಸ್ಥೆಯ ಹೆಸರು. ಇದನ್ನು ನಾನು ಪ್ರಾರಂಭಿಸಿದ್ದು ಸುಮಾರು ೧೯೯೧ರಲ್ಲಿ. ಇದರ ಮೂಲಕ ನಾನು ಕೈಗೊಂಡ ನಾಲ್ಕೈದು ಸೇವಾ ಯೋಜನೆಗಳ ಪೈಕಿ ಬಹು ಮುಖ್ಯವಾದುದು ಪತ್ರಿಕೆಗಳಲ್ಲಿ ಬೆಂಗಳೂರು ಇತಿಹಾಸವನ್ನು ಜನಸಾಮಾನ್ಯರಿಗೆ ತಿಳಿಸುವ ಸಲುವಾಗಿ ಅಂಕಣಗಳನ್ನು ಬರೆಯುವುದು. ನನ್ನ ಅಧ್ಯಯನದ ಬಗ್ಗೆ ತಿಳಿದಿದ್ದ ಏಷ್ಯನ್ ಏಜ್ ಇಂಗ್ಲಿಷ್ ಪತ್ರಿಕೆಯವರು ಅವರಿಗಾಗಿ ಬೆಂಗಳೂರಿನ ಬಗ್ಗೆ ಅಂಕಣಗಳನ್ನು ಬರೆಯಲು ಕರೆ ನೀಡಿದರು. ಅವರ "ದಿ ಬೆಂಗಳೂರು ಏಜ್" ಪುರವಣಿಯನ್ನು ೧೯೯೭ರಿಂದ ಪ್ರತಿವಾರ ಬರೆಯಲಾರಂಭಿಸಿದೆ. ಒಂದು ವರ್ಷವಾಗುವ ವೇಳೆಗೆ "ದಿ ಟೈಮ್ಸ್ ಆಫ್ ಇಂಡಿಯಾ" ಪ್ರತಿಕೆಯವರು ತಮ್ಮ "ಬೆಂಗಳೂರ್ ಟೈಮ್ಸ್"ನಲ್ಲಿ ಈ ನಗರದ ಇತಿಹಾಸವನ್ನು ಬರೆಯಲು ಕೋರಿದರು. ೧೯೯೮ ರಿಂದ ೨೦೦೦ವರೆಗೂ ಅವರಲ್ಲಿ ಸತತವಾಗಿ ವಾರದ ಬರಹವನ್ನು ಮುಂದುವರೆಸಿದೆ. ಆ ವೇಳೆಗೆ ಡೆಕ್ಕನ್ ಹೆರಾಲ್ಡ್ ಪತ್ರಿಕೆಯವರು ತಮ್ಮಲ್ಲಿ ಈ ಬಗ್ಗೆ ಬರೆಯಬೇಕೆಂದು ಕೇಳಿದರು. ೨೦೦೦ ದಿಂದ ಅವರ ಸ್ಪೆಕ್ಟ್ರಂ ಪುರವಣಿಯಲ್ಲಿ ೧೫ ದಿನಗಳಿಗೆ ಒಂದರಂತೆ "ದಿ ಬಿಲ್ಡರ್ಸ್ ಆಫ್ ಬೆಂಗಳೂರ್" ಹಾಗೂ "ಮಾನ್ಯುಮೆಂಟ್ಸ್" ಎಂಬ ಶೀರ್ಷಿಕೆಯ ಅಂಕಣಗಳನ್ನು ಬರೆದೆ. ೨೦೦೧ರಲ್ಲಿ ಬೆಂಗಳೂರಿನ ಉದಯವಾಣಿ ಪತ್ರಿಕೆಯವರು ಪ್ರಪ್ರಥಮ ಬಾರಿ ಬೆಂಗಳೂರು ನಗರಕ್ಕೆಂದೇ ಮೀಸಲಾದ "ನಮ್ಮ ಬೆಂಗಳೂರು" ಎಂಬ ಪುರವಣಿಯನ್ನು ಮಂಗಳವಾರ ಮತ್ತು ಶನಿವಾರದಂದು ಪ್ರಾರಂಭಿಸಿದರು. ಈ ಪತ್ರಿಕೆಯ ಸಂಪಾದಕರಾದ ಡಾ॥ ಪೂರ್ಣಿಮಾರವರು ನನಗೆ "ನೀವು ಇಂಗ್ಲಿಷ್‌ನಲ್ಲಿ ಆ ಓದುಗರಿಗಾಗಿ ಬೆಂಗಳೂರಿನ ಇತಿಹಾಸವನ್ನು ಬರೆಯುತ್ತಿದ್ದೀರಿ, ಈ ನಗರದ ಹಿರಿಮೆ-ಗರಿಮೆಗಳ ಅರಿವು ಮುಖ್ಯವಾಗಿ ಬೆಂಗಳೂರಿಗರಿಗೆ ಅದರಲ್ಲೂ ಕನ್ನಡಿಗರಿಗೆ ಆಗುವ ಹೆಚ್ಚಿನ ಅವಶ್ಯಕತೆ ಇದೆ. ಆದ್ದರಿಂದ ನಮ್ಮ ಬೆಂಗಳೂರು ಪುರವಣಿಗಳಲ್ಲಿ ನಿಮ್ಮ ಅಂಕಣವನ್ನು ಪ್ರಾರಂಭಿಸಿ ಎಂದು ಕೋರಿದರು. ನನಗೂ ಇದು ಸರಿ ಎನಿಸಿ ಇಂಗ್ಲಿಷ್ ಅಂಕಣವನ್ನು ನಿಲ್ಲಿಸಿ ೨೦೦೧ರ ಫೆಬ್ರವರಿ ೧೨ರಿಂದ ನಮ್ಮ ಬೆಂಗಳೂರು ಪುರವಣಿಯಲ್ಲಿ ಬರೆಯಲಾರಂಭಿಸಿದ. ಅದೇ ವರ್ಷ ನವೆಂಬರ್ ೧ರಂದು ರಾಜ್ಯೋತ್ಸವದ ಕೊಡುಗೆಯಾಗಿ ಗುರುವಾರದಂದೂ ನಮ್ಮ ಬೆಂಗಳೂರು ಪುರವಣಿಯನ್ನು ಪ್ರಾರಂಭಿಸಿದರು. ಅದರಲ್ಲೂ ಬರೆಯಲು ನನಗೆ ಸ್ಥಳಾವಕಾಶವನ್ನು ನೀಡಲಾಯಿತು. ಆಗಿನಿಂದ ಸೋಮವಾರಗಳಂದು (ಈಗ ಮಂಗಳವಾರ) ಬೆಂಗಳೂರಿನ ಹೆಮ್ಮೆಯ ಸಂಸ್ಥೆಗಳು, ಗುರುವಾರಗಳಂದು ಬೆಂಗಳೂರು ನಗರ ನಿರ್ಮಾಪಕರು ಹಾಗೂ ಶನಿವಾರಗಳಂದು (ಈಗ ಭಾನುವಾರ) ಕಥೆ ಹೇಳುವ ರಸ್ತೆಗಳು ಎಂಬ ಶೀರ್ಷಿಕೆಯ ಅಂಕಣಗಳನ್ನು ಬರೆಯಲಾರಂಭಿಸಿದೆ, ೨೦೦೮ರ ಏಪ್ರಿಲ್ ೩೦ರ ವೇಳೆಗೆ ಈ ಬರಹಗಳ ಒಟ್ಟು ಸಂಖ್ಯೆ ೧೨೦೦ರನ್ನು ದಾಟಿದೆ. ಹೀಗೆ ಒಬ್ಬ ವ್ಯಕ್ತಿ ಒಂದು ನಗರದ ಬಗ್ಗೆ ಒಂದೇ ಪತ್ರಿಕೆಯಲ್ಲಿ ವಾರಕ್ಕೆ ೩ ಅಧ್ಯಯನಾಧಾರಿತ ಲೇಖನಗಳನ್ನು

ಒಮ್ಮೆಯೂ ತಪ್ಪಿಸದಂತೆ ಬರೆದಿರುವುದು ನಮ್ಮ ದೇಶದ ಒಂದು ಅಪರೂಪದ ದಾಖಲೆ ಎಂದು ಉದಯವಾಣಿಯ ಸಂಪಾದಕರು ತಮ್ಮ ವಿಶೇಷ ಸಂಪಾದಕೀಯದಲ್ಲಿ ಬರೆದಿದ್ದಾರೆ.

"ಕಥೆ ಹೇಳುವ ರಸ್ತೆಗಳು" ವಿಭಾಗದಲ್ಲಿ ಅವೆನ್ಯೂ ರಸ್ತೆ ಬಗ್ಗೆ ಬರೆಯುವಾಗ ೮-೧-೨೦೦೩ ರಿಂದ ಅಲ್ಲಿನ ಸ್ಟೇಟ್ ಬ್ಯಾಂಕ್ ಮೈಸೂರಿನ ಇತಿಹಾಸವನ್ನು ಬರೆಯಲಾರಂಭಿಸಿದೆ. ಮೊದಲ ನಾಲ್ಕು ಲೇಖನಗಳ ನಂತರ ೬-೨-೨೦೦೩ರಂದು ಅದರ ರಜತಮಹೋತ್ಸವದ ಬಗ್ಗೆ ಬರೆಯಬೇಕಿತ್ತು. ಈ ಬಗ್ಗೆ ಬ್ಯಾಂಕ್‌ನವರಲ್ಲಿ ವಿಚಾರಿಸಿದಾಗ ತಮ್ಮಲ್ಲಿ ತತ್ಸಂಬಂಧಿತ ಯಾವ ಮಾಹಿತಿಯು ಇಲ್ಲವೆಂದುಬಿಟ್ಟರು. ೫ನೇ ತಾರೀಖು ೧೨ ಗಂಟೆಯ ವೇಳೆಗೆ ನನ್ನ ಲೇಖನ ಪತ್ರಿಕೆಯ ಕಚೇರಿಯನ್ನು ತಲುಪಬೇಕಿತ್ತು. ೨ನೇ ತಾರೀಖಾದರೂ ಈ ಬಗ್ಗೆ ಮಾಹಿತಿ ಸಿಕ್ಕೇ ಇರಲಿಲ್ಲ. ಕಂಗಾಲಾದ ನಾನು ಸ್ವಾಮೀಜಿಯವರಲ್ಲಿ ಪ್ರಾರ್ಥನೆ ಸಲ್ಲಿಸಿದೆ. ಆಗ ಗುರುಗಳೇ ನನಗೆ ದಾರಿ ತೋರಿದರು. ಅಂದು ಸಂಜೆ ಇದ್ದಕ್ಕಿದ್ದ ಹಾಗೆ ಕಳೆದ ಶತಮಾನದ ಪ್ರಾರಂಭಿಕ ದಶಕಗಳ ಯಾವುದಾದರು ಪತ್ರಿಕೆಯಲ್ಲಿ ಈ ಬಗ್ಗೆ ವರದಿ ಇರಬಹುದಲ್ಲವೇ ಎಂದು ಅನ್ನಿಸಿತು. ಬುಲ್ ಟೆಂಪಲ್ ರಸ್ತೆಯ ಗೋಖಲೆ ಸಾರ್ವಜನಿಕ ಸಂಸ್ಥೆಯು ಒಂದು ಹಳೆಯ ಸಂಸ್ಥೆಯಾದ್ದರಿಂದ ಅದರಲ್ಲಿ ಇಂತಹ ಪತ್ರಿಕೆಗಳ ಸಂಗ್ರಹ ಇರಬಹುದೆಂದುಕೊಂಡು ಅಲ್ಲಿ ಆಗಿನ ಮೇಲ್ವಿಚಾರಕರಾಗಿದ್ದ ಸುಬ್ಬರಾಯರನ್ನು ವಿಚಾರಿಸಿದೆ. ಅವರು ೩ನೇ ಮಹಡಿಯಲ್ಲಿ ಕೆಲವು ಹಳೇ ಪತ್ರಿಕೆಗಳು ಹಾಗೂ ಪುಸ್ತಕಗಳನ್ನು ಒಟ್ಟಿದ್ದೇವೆ. ಅವುಗಳನ್ನು ವರ್ಗೀಕರಿಸಲು ಇನ್ನು ಸಮಯವಾಗಿಲ್ಲ, ನೀವೇ ಹುಡುಕಿಕೊಳ್ಳಬೇಕೆಂದು ಅದರ ಬೀಗವನ್ನು ತೆಗೆದುಕೊಟ್ಟರು. ಅಲ್ಲಿ ಸುಮಾರು ೨ ಗಂಟೆಗಳ ಹುಡುಕಾಟದ ನಂತರ "ವೃತ್ತಾಂತ ಪತ್ರಿಕೆ" ಎಂಬ ಆಗಿನ ಕಾಲದ ಪತ್ರಿಕೆಗಳ ಸಂಗ್ರಹವೊಂದು ಸಿಕ್ಕಿತು. ಅದರಲ್ಲಿ ೧೯೩೮ರ ಡಿಸೆಂಬರ್ ೮ನೇ ತಾರೀಖಿನ ಪತ್ರಿಕೆಯ ೭ನೇ ಪುಟದಲ್ಲಿ ಸ್ಟೇಟ್ ಬ್ಯಾಂಕಿನ ರಜತಮಹೋತ್ಸವವು ಎಂಬ ಶೀರ್ಷಿಕೆಯ ಅಡಿಯಲ್ಲಿ ವರದಿಯನ್ನು ನೀಡಲಾಗಿತ್ತು. ನನ್ನ ಪಾಲಿಗೆ ಒಂದು ದೊಡ್ಡ ನಿಧಿಯೇ ಸಿಕ್ಕಂತಾಯಿತು. ಆ ಪತ್ರಿಕೆಯ ಹಿಂದಿನ ಕೆಲವು ಪ್ರತಿಗಳನ್ನು ಹುಡುಕಿ ಈ ಸಮಾರಂಭಕ್ಕೆ ಪೂರ್ವಭಾವಿಯಾಗಿ ಮೈಸೂರಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ನಡೆದ ಪ್ರಸ್ತಾಪವು ಸೇರಿದಂತೆ ಎಲ್ಲ ವಿವರಗಳನ್ನು ಸಂಗ್ರಹಿಸಿ ಈ ಪತ್ರಿಕೆಯ ಹೆಸರು ಪುಟ ಸಂಖ್ಯೆ, ಕಾಲಂ ಸಂಖ್ಯೆಗಳನ್ನು ಒಳಗೊಂಡಂತೆ ಆಧಾರಗಳ ಸಮೇತ ಸಮಯಕ್ಕೆ ಸರಿಯಾಗಿಯೇ ಅಂಕಣವನ್ನು ಬರೆದು ಕಳುಹಿಸಿದೆ. ಅದು ಪ್ರಕಟವಾದ ದಿನ ಬೆಳಗ್ಗೆ ಸುಮಾರು ೧೦ ಗಂಟೆಯ ವೇಳೆಗೆ ಬ್ಯಾಂಕಿನ ಹಿರಿಯ ಅಧಿಕಾರಿಗಳು ಹಾಗು ಅಲ್ಲಿನ ಕನ್ನಡ ಸಂಘದ ಪದಾಧಿಕಾರಿಗಳು ಇಷ್ಟೊಂದು ನಿಖರವಾದ ಮಾಹಿತಿಯನ್ನು ಇಷ್ಟುಕಡಿಮೆ ಸಮಯದಲ್ಲಿ ಹೇಗೆ ಸಂಗ್ರಹಿಸಿದಿರಿ ಎಂದೆಲ್ಲಾ ಆಶ್ಚರ್ಯ ವ್ಯಕ್ತಪಡಿಸಿದರು. ನಾನು ಅವರಿಗೆ ಎಲ್ಲಾ ದೇವರ ಕೃಪೆ ಎಂದೆನಾದರೂ ನನ್ನ ಗುರುಗಳಿಗೆ ಅದೆಷ್ಟು ಬಾರಿ ಕೃತಜ್ಞತೆ ಸಲ್ಲಿಸಿದೆನೋ ತಿಳಿಯದು.

❖

# ಶಾಸನ ವಿದ್ಯಾಗುರು

## (ಡಾ॥ ಬಾ. ರಾ. ಗೋಪಾಲ್)

● *ಡಾ॥ ಎಚ್. ಎಸ್. ಗೋಪಾಲರಾವ್*

ಬರಹಗಳ ಮೂಲಕ ಡಾ॥ ಬಾ. ರಾ. ಗೋಪಾಲ್ ನನಗೆ ೧೯೭೦ರಿಂದಲೂ ಪರಿಚಿತರು. ಡಾ॥ ಎಸ್. ಶ್ರೀಕಂಠ ಶಾಸ್ತ್ರಿಗಳಿಗೆ ಅವರ ಶಿಷ್ಯರು ಅರ್ಪಿಸಿದ 'ಶ್ರೀಕಂಠಿಕಾ' ಕೃತಿಯಲ್ಲಿ ಡಾ॥ ಬಾ.ರಾ.ಗೋಪಾಲ್ ಗುಡ್ನಾಪುರದ ರವಿವರ್ಮನ ಶಾಸನದ ಬಗ್ಗೆ ಬರೆದಿದ್ದ ಲೇಖನದ ಮೂಲಕ ನಾನು ಅವರನ್ನು ತಿಳಿದಿದ್ದೆ. ಆ ವೇಳೆಗೆ ನಾನು ಶಾಸನ ಶಾಸ್ತ್ರದ ವಿದ್ಯಾರ್ಥಿಯಾಗಿದ್ದರೂ, ಎಲ್ಲಾ ಶಾಸನತಜ್ಞರ ಬಗ್ಗೆ ತಿಳಿದಿರಲಿಲ್ಲ. ನನಗೆ ತಿಳಿದಿದ್ದ ಒಬ್ಬರೇ ಒಬ್ಬ ಶಾಸನತಜ್ಞರೆಂದರೆ ಶ್ರೀ ಎನ್.ಎಲ್.ರಾವ್ (ಲಕ್ಷ್ಮೀನಾರಾಯಣರಾವ್). ಅವರು ನನ್ನ ಸಂಬಂಧಿಗಳಾಗಿದ್ದ ಕಾರಣದಿಂದ, ಅವರ ವಿದ್ವತ್ತಿನ ಬಗ್ಗೆ ಕೇಳಿ ತಿಳಿದಿದ್ದೆ. ಅವರ ಮೂಲಕವೇ ಡಾ॥ ಬಾ.ರಾ. ಗೋಪಾಲ್ ಅವರ ವಿದ್ವತ್ತು ಮತ್ತು ಪರಿಶ್ರಮಗಳ ಮನವರಿಕೆ ಆದದ್ದು ಜಲಗಾರದಿಬ್ಬದ ಶಾಸನವನ್ನು ಪತ್ತೆಹಚ್ಚಿ ಪ್ರಕಟಿಸಿದ ನನ್ನ ಅಭಿಪ್ರಾಯಗಳನ್ನು ಒಪ್ಪದೆ ಡಾ॥ ಬಾ.ರಾ. ಗೋಪಾಲ್ ಲೇಖನ ಒಂದನ್ನು ಪ್ರಕಟಿಸಿದ್ದರು. ಆ ಬಗ್ಗೆ ಸಂಬಂಧಿಗಳಾದ ಶ್ರೀ ಎನ್.ಎಲ್.ರಾವ್ ಅವರ ಬಳಿ ಕೊಲ್ಹಾಪುರದಲ್ಲಿ ಪ್ರಸ್ತಾಪಿಸಿದಾಗ, ಅವರು ಹೇಳಿದ ಮಾತುಗಳನ್ನು ನಾನು ಎಂದೂ ಮರೆಯುವಂತಿಲ್ಲ. 'ನೀನಿನ್ನೂ ಶಾಸನಶಾಸ್ತ್ರ ಕ್ಷೇತ್ರದಲ್ಲಿ ಎಳೆಯ; ಗೋಪಾಲ್ ಪ್ರೌಢರು. ನೂರಾರು ಅಲ್ಲ ಸಾವಿರಾರು ಶಾಸನಗಳನ್ನು ಸ್ವತಃ ಓದಿರುವ ಮತ್ತು ಬಹುತೇಕ ಪ್ರಕಟವಾಗಿರುವ ಎಲ್ಲಾ ಶಾಸನಗಳ ಬಗ್ಗೆ ತಿಳಿದಿರುವ ಗೋಪಾಲ್ ಅವರ ಅಭಿಪ್ರಾಯ ಪ್ರಾಮಾಣಿಕ ಮತ್ತು ವಿಶ್ವಾಸನೀಯ ಎಂದು ನನಗೆ ತಿಳಿದಿದೆ. ಈಗಿನ್ನೂ ಶಾಸನ ಶಾಸ್ತ್ರಕ್ಷೇತ್ರಕ್ಕೆ ಪ್ರವೇಶಿಸುತ್ತಿರುವ ನೀನು ವಿದ್ವಾಂಸರ ಜೊತೆಗೆ ಸ್ಪರ್ಧೆಗಿಳಿಯುವುದು ಸರಿಯಲ್ಲ. ಗೋಪಾಲರ ಅಭಿಪ್ರಾಯಗಳನ್ನು ಪ್ರಶ್ನಿಸುವ ಸಾಹಸ ಮಾಡಬೇಡ. ಎನ್.ಎಲ್. ರಾಯರ ಕಿವಿಮಾತನ್ನು ನಾನು ಮರೆಯಲಿಲ್ಲ. ನನ್ನ ಮತ್ತು ಡಾ॥ ಬಾ.ರಾ. ಗೋಪಾಲ್ ಅವರ ಅಭಿಪ್ರಾಯಗಳು ಜಲಗಾರದಿಬ್ಬ ಶಾಸನದ ಬಗ್ಗೆ ಭಿನ್ನವಾದಾಗ, ಶಾಸನ ಶಾಸ್ತ್ರಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ಕೆಲವರಾದರೂ ನಮ್ಮಿಬ್ಬರ ನಡುವೆ ಮನಸ್ತಾಪವಿದೆ ಎಂದೂ ತಿಳಿದಿದ್ದಿರಬಹುದು. ನಾನು ತೆರಪಿನ ಶಿಕ್ಷಣ ಸಂಸ್ಥೆಯ ಮೂಲಕ ಎಂ.ಎ. ತರಗತಿಗಳಿಗೆ ಹಾಜರಾಗುವವರೆಗೆ ಡಾ। ಬಾ.ರಾ. ಗೋಪಾಲ್ ಅವರ ನೇರ ಪರಿಚಯ ಇರಲಿಲ್ಲ. ಭೇಟಿ ಆಗುವ ಪ್ರಸಂಗವೂ ಬಂದಿರಲಿಲ್ಲ. ಎಂ.ಎ., ತರಗತಿಯಲ್ಲಿ ಅವರು ಕರ್ನಾಟಕದ ಸಾಂಸ್ಕೃತಿಕ ಚರಿತ್ರೆ ಮತ್ತು ಶಾಸನಶಾಸ್ತ್ರಗಳನ್ನು ಬೋಧಿಸಿದರು. ಹಾಗೆ ಮೊದಲ ಬಾರಿಗೆ ನಾನು ಅವರ ವಿದ್ಯಾರ್ಥಿಯಾದೆ. ಆ ಸಮಯದಲ್ಲಿ ನನಗೆ ಅವರ ಪರಿಚಯ ಆಯಿತು. ಪಿಎಚ್.ಡಿ. ಅಧ್ಯಯನಕ್ಕೆ ನೋಂದಾಯಿಸಲು ಮುಂದಾದಾಗ, ಡಾ॥ ಕೆ.ವಿ.ರಮೇಶ್ ಅವರು ಮಾರ್ಗದರ್ಶನ ಮಾಡಿದರೆ

ಚೆನ್ನ ಎಂದು ನಾನು ಆಶಿಸಿದ್ದೆ. ಅವರು ನನ್ನ ಮಾರ್ಗದರ್ಶಕರಾಗಲು ಸಾಧ್ಯವಿರಲಿಲ್ಲ. (ಅವರು ಮೈಸೂರು ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗಕ್ಕಷ್ಟೇ ಮಾರ್ಗದರ್ಶಕರಾಗಬಹುದಾಗಿತ್ತು. ಆದರೆ ನಾನು ಕನ್ನಡದ ವಿದ್ಯಾರ್ಥಿಯಾಗಿದ್ದರಿಂದ ಕನ್ನಡ ಅಧ್ಯಯನ ಸಂಸ್ಥೆಯ ಮೂಲಕ ಮಾತ್ರ ಪಿಎಚ್.ಡಿ., ಮಾಡಬಹುದು ಎಂಬ ಸೂಚನೆ ವಿ.ವಿ.ಯಲ್ಲಿ ದೊರೆಯಿತು.) ಎಂದು ತಿಳಿದೆ. ನಂತರ ನಾನು ಸಂಪರ್ಕಿಸಿದ್ದು ಡಾ|| ಬಾ.ರಾ. ಗೋಪಾಲ್ ಅವರನ್ನು ವಿಷಯ ಪ್ರಸ್ತಾವನೆಗೆ ನಾನು ಹೋದ ದಿನ, ಅವರು ಯಾವುದೋ ಸಭೆಯ ಕಲಾಪದಲ್ಲಿ ಮಗ್ನರಾಗಿದ್ದರು. ಬಿಡುವಿರದಿದ್ದರೂ ಸುಮಾರು ೫–೧೦ ನಿಮಿಷಗಳಲ್ಲಿ ನನ್ನ ಕೋರಿಕೆಯನ್ನು ಕೇಳಿ, ವಿಷಯದ ಬಗ್ಗೆ ಪ್ರಶ್ನಿಸಿದರು. ನನ್ನ ಉತ್ತರದಿಂದ ಪ್ರಸನ್ನರಾದ ಅವರು ಸಂಜೆ ೫ ಗಂಟೆಯ ವೇಳೆಗೆ ಭೇಟಿಯಾಗಲು ತಿಳಿಸಿ, ಮತ್ತೆ ಸಭೆಗೆ ತೆರಳಿದರು. ಸಂಜೆ ೫ ಗಂಟೆಗೆ ಅವರು ಹಿಂದಿರುಗಲಿಲ್ಲ; ಬದಲಿಗೆ ದೂರವಾಣಿಯ ಮೂಲಕ ಸಂದೇಶ ಕಳುಹಿಸಿದರು. ಆ ಸಂಜೆ ಸಾಧ್ಯವಾದರೆ ಕಾಯಬೇಕೆಂದೂ, ಇಲ್ಲವಾದರೆ ಪತ್ರ ಬರೆಯಬೇಕೆಂದೂ ಸೂಚನೆ ಇತ್ತು. ಅಂದೇ ಬೆಂಗಳೂರಿಗೆ ಹಿಂದಿರುಗುಬೇಕಿದ್ದ ಕಾರಣದಿಂದ ನಾನು ಮಾರನೆಯ ದಿನ ಅವರಿಗೆ ವಿವರವಾಗಿ ಪತ್ರ ಬರೆದೆ. ನಾನು ಪತ್ರ ಬರೆದ ಮೂರನೆಯ ದಿನಕ್ಕೇ ಅವರ ಉತ್ತರ ದೊರೆಯಿತು. Synopsis ಸಹಿತ ಬರಲು ಸೂಚನೆ. ಹೀಗೆ ನನ್ನ ಮತ್ತು ಡಾ|| ಬಾ.ರಾ. ಗೋಪಾಲ್ ಅವರ ಗುರು–ಶಿಷ್ಯ ಬಾಂಧವ್ಯ ಬಲಗೊಂಡಿತು. ಅದು ೧೯೮೬ರಲ್ಲಿ ಅಂದಿನಿಂದ ಅವರು ಇಲ್ಲವಾಗುವವರೆಗೆ ನಮ್ಮ ಬಾಂಧವ್ಯದಲ್ಲಿ ಎಂದೂ ಯಾವ ರೀತಿಯ ಬಿರುಕೂ ಕಾಣಿಸಲಿಲ್ಲ. ನಾನು ಪಿಎಚ್.ಡಿ., ಪದವಿ ಪಡೆದಾಗ ನನಗಿಂತ ಅವರೇ ಹೆಚ್ಚು ಖುಷಿಪಟ್ಟರು. ಘಟಿಕೋತ್ಸವ ಸಮಾರಂಭದಲ್ಲಿ ಉಪಸ್ಥಿತರಿದ್ದು, ಕೆಲವೇ ದಿನಗಳ ಹಿಂದೆ ತಂದೆಯನ್ನು ಕಳೆದುಕೊಂಡಿದ್ದ ನನಗೆ ಸಮಾಧಾನ ದೊರಕಿಸಿಕೊಟ್ಟರು. ಅನಂತರವೂ ಅನೇಕ ಕೆಲಸಗಳಲ್ಲಿ ನನ್ನನ್ನು ತೊಡಗಿಸಿದರು. ತಮ್ಮ ಸಂಗ್ರಹದಲ್ಲಿದ್ದ ಅನೇಕ ಮಹತ್ವದ ಪುಸ್ತಕಗಳನ್ನು ನೀಡಿ ಆಶೀರ್ವದಿಸಿದರು. 'ಕನ್ನಡ ಶಾಸನ ಪದಕೋಶ', 'ತಮಿಳುನಾಡಿನ ಕನ್ನಡ ಶಾಸನಗಳು' ಕೃತಿಗಳ ಸಿದ್ಧತೆಗೆ ತೊಡಗಿಸಿದರು. ೧೯೯೦ರ ವೇಳೆಗೆ ಡಾ| ಬಾ.ರಾ. ಗೋಪಾಲವರು ನನ್ನ ಬಗ್ಗೆ ತಳೆದಿದ್ದ ವಿಶ್ವಾಸದ ಬಗ್ಗೆ ನಾನು ಮೂಕನಾಗಿದ್ದೆ. ಎಷ್ಟೋ ಜನರಿಗೆ ಕಠಿಣ ಸ್ವಭಾವದ, ಸುಲಭವಾಗಿ ದಕ್ಕದ, ಸಿಟ್ಟಿನ ಸ್ವಭಾವದ, ಗಂಭೀರ ವ್ಯಕ್ತಿತ್ವದವರು ಎಂದೇ ಕಾಣುತ್ತಿದ್ದ ಡಾ|| ಬಾ.ರಾ. ಗೋಪಾಲ್, ಆ ಗುಣಗಳಿಗೆ ತದ್ವಿರುದ್ಧ ಸ್ವಭಾವದವರು ಎಂದು ನನಗೆ ಸ್ಪಷ್ಟವಾಗಿತ್ತು.

ಮೇಲೆ ತಿಳಿಸಿದಂತೆ ಶ್ರೀ ಎನ್.ಎಲ್.ರಾವ್ ಅವರಂತಹ ಹಿರಿಯ ವಿದ್ವಾಂಸರ ಮೆಚ್ಚುಗೆಗೆ ಪಾತ್ರರಾಗಿದ್ದ ಮತ್ತು ಬದುಕನ್ನು ಸಹಜವಾಗಿ ಪ್ರೀತಿಸಿದ ಡಾ|| ಬಾ.ರಾ.ಗೋಪಾಲ್ ಹುಟ್ಟಿದ್ದು ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರದಲ್ಲಿ ೧೯೩೦ರಲ್ಲಿ ಜನಿಸಿದ ಬಾ.ರಾ.ಗೋ. ಅವರ ತಂದೆ ಬಾಲಕೃಷ್ಣ ವೃತ್ತಿಯಿಂದ ವಕೀಲರು. ಚಿಕ್ಕಬಳ್ಳಾಪುರದಲ್ಲೇ ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಗಳನ್ನು ಪಡೆದ ಬಾ.ರಾ.ಗೋ. ಅವರು ತುಮಕೂರಿನಲ್ಲಿ ಶಿಕ್ಷಣ ಮುಂದುವರಿಸಿ, ಇಂಟರ್ ಮಿಡಿಯೇಟ್ ಮುಗಿಸಿದ ನಂತರ ಮೈಸೂರು ವಿಶ್ವವಿದ್ಯಾನಿಲಯವನ್ನು ಪ್ರವೇಶಿಸಿ, ಎಂ.ಎ., ಪದವಿಯನ್ನು ಮತ್ತು ಅದೇ ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ., ಪದವಿಯನ್ನು ಪಡೆದರು. ಆ ಸಂದರ್ಭದಲ್ಲಿ ಮೈಸೂರಿನ ಮಹಾರಾಜಾ ಕಾಲೇಜು ಮತ್ತು ಮೈಸೂರು

ವಿಶ್ವವಿದ್ಯಾನಿಲಯಗಳು ಶ್ರೇಷ್ಠ ವಿದ್ವಾಂಸರ ನೆಲೆಯಾಗಿದ್ದುವು. ಆಗ ಖ್ಯಾತರಾಗಿದ್ದ ಡಾ॥ ಎಂ. ಶೇಷಾದ್ರಿ, ಡಾ॥ ಡಿ.ಎಲ್. ನರಸಿಂಹಾಚಾರ್, ಪ್ರೊ॥ ಎಂ. ಯಾಮುನಾಚಾರ್ಯ, ಪ್ರೊ॥ ರಾಳ್ಳಪಳ್ಳಿ ಅನಂತ ಕೃಷ್ಣ ಶರ್ಮ ಮತ್ತು ಡಾ॥ ಎಸ್. ಶ್ರೀಕಂಠ ಶಾಸ್ತ್ರಿಯವರಂತಹ ಶ್ರೇಷ್ಠ ವಿದ್ವಾಂಸರುಗಳಿಂದ ಕಲಿತ ಡಾ॥ ಬಾ.ರಾ. ಗೋಪಾಲ್, ತಮಗೆ ಕಲಿಸಿದ ವಿದ್ವಾಂಸರುಗಳು ನಡೆದ ಹಾದಿಯಲ್ಲೇ ನಡೆದರು; ಅವರ ಹಾಗೆಯೇ ಆಗಬಯಸಿದರು ಅಧ್ಯಯನಕ್ಕೊಂದು ಮಾದರಿಯಾದರು. ಡಾ॥ ಬಾ.ರಾ. ಗೋಪಾಲ್ ಅವರ ತಂದೆ ಬಾಲಕೃಷ್ಣ ಅವರಿಗೆ, ಮಗ ತಮ್ಮಂತೆ ವಕೀಲನಾಗಬೇಕೆಂಬ ಆಸೆ ಇತ್ತಂತೆ. ತಮ್ಮಂತೆ ಆಗದೆ, ಬೇರೆಯದೇ ಕ್ಷೇತ್ರವನ್ನು ಆಯ್ದುಕೊಂಡಾಗ ಸಹಜವಾಗಿಯೇ ಅವರಿಗೆ ಬೇಸರವಾಗಿತ್ತು ಎಂದು ಗೋಪಾಲ್ ಹೇಳುತ್ತಿದ್ದರು. ಆದರೆ ಶಾಸನ ಶಾಸ್ತ್ರಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿ, ವಿದ್ವತ್ ವಲಯದಲ್ಲಿ ಗೌರವ ಮತ್ತು ಮಾನ್ಯತೆಗಳನ್ನು ಪಡೆದ ಮಗನ ಬಗ್ಗೆ ಆ ತಂದೆಗೆ ಹೆಮ್ಮೆಯೂ ಇತ್ತು; ಪ್ರೀತಿಯೂ ಇತ್ತು.

ಮೈಸೂರು ವಿಶ್ವವಿದ್ಯಾನಿಲಯದಿಂದ ಇತಿಹಾಸ ವಿಷಯದಲ್ಲಿ ಎಂ.ಎ., ಪದವಿ ಪಡೆದ ಡಾ॥ ಬಾ.ರಾ. ಗೋಪಾಲ್ ನಾಲ್ಕು ಭಾಷೆಗಳನ್ನು ಚೆನ್ನಾಗಿ ತಿಳಿದಿದ್ದರು. ಮನೆಮಾತು ತಮಿಳು (ಆದರೆ ಮನೆಯಲ್ಲಿ ಯಾರೊಡನೆಯೂ ಎಂದೂ ತಮಿಳಿನಲ್ಲಿ ಮಾತನಾಡಿದ್ದನ್ನು ನಾನು ಕೇಳಿಲ್ಲ); ಬಾಲ್ಯದ ಪರಿಸರದ ಭಾಷೆ ತೆಲುಗು; ಆ ಭಾಷೆಯ ಬಗ್ಗೆ ಅವರಿಗೆ ಪ್ರೀತಿ ಇತ್ತು. ಕೋಲಾರದ ಆಸುಪಾಸಿನ ಜನರು ಎದುರಾದರೆ ಇವರ ಸಂಭಾಷಣೆ ತೆಲುಗಿನಲ್ಲೇ ಆರಂಭವಾಗುತ್ತಿತ್ತು. ಈ ವಿಶೇಷ ಸ್ವಭಾವವನ್ನು ಕೋಲಾರ ಜಿಲ್ಲೆಯ ಜನರಲ್ಲಿ ಮಾತ್ರ ನಾನು ಗಮನಿಸಿದ್ದೇನೆ. ಆ ಭಾಗದ ಯಾವುದೇ ವರ್ಗದ ಜನ ಭೇಟಿಯಾದಾಗ ಪರಸ್ಪರರ ಮಾತು ತೆಲುಗಿನಲ್ಲೇ ನಡೆಯುತ್ತದೆ. ಡಾ॥ ಗೋಪಾಲ್ ಅವರಿಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಂತೂ ಉತ್ತಮ ಪ್ರೌಢಿಮೆ ಇತ್ತು. ಇಂಗ್ಲಿಷ್ ಸಾಹಿತ್ಯ ಕುರಿತು ಅವರು ಯಾವುದೇ ಲೇಖನ ಬರೆದಿಲ್ಲವಾದರೂ, ಅದರ ಚೆನ್ನಾದ ಪರಿಚಯವಿತ್ತು. ಕನ್ನಡ ಸಾಹಿತ್ಯದ ಬಗ್ಗೆ ಅವರು ಚೆನ್ನಾಗಿಯೇ ತಿಳಿದಿದ್ದರು. ಆ ಕೃತಿಗಳ ಬಗ್ಗೆ ಚರ್ಚಿಸಬಲ್ಲವರಾಗಿದ್ದರು. ಶಾಸನಗಳ ಅಧ್ಯಯನಕ್ಕೆ ಸಾಹಿತ್ಯದ ನೆರವಿರಲೇಬೇಕು ಎಂದು ಅವರು ಬಲವಾಗಿ ನಂಬಿದ್ದರು. ಸ್ಪಷ್ಟ ಹಾಗೂ ಖಚಿತ ಭಾಷಾ ಜ್ಞಾನವಿಲ್ಲದೆ ಶಾಸನಗಳ ವಿಶ್ಲೇಷಣೆ ಮಾಡುವುದು ಕಷ್ಟ ಎಂದು ಅವರು ತಿಳಿದಿದ್ದರು. ಆ ಅರಿವಿನ ಕಾರಣದಿಂದಲೇ, ಡಾ॥ ಗೋಪಾಲ್ ಇತಿಹಾಸ ಮತ್ತು ಸಾಹಿತ್ಯದ ಕೆಲವು ಕೊಂಡಿಗಳನ್ನು ಗುರುತಿಸಿದರು. ಇತಿಹಾಸ ಮತ್ತು ಭಾಷೆಗಳ ಬಗ್ಗೆ ಅನನ್ಯ ಪ್ರೀತಿಯನ್ನು ಬೆಳೆಸಿಕೊಂಡಿದ್ದ ಡಾ॥ ಬಾ.ರಾ. ಗೋಪಾಲ್ ವೃತ್ತಿಜೀವನದಿಂದ ಕೊನೆಯವರೆಗೆ ನೆಮ್ಮದಿಯನ್ನೇನೂ ಪಡೆಯಲಿಲ್ಲ ಎಂಬ ಕಹಿ ಮಾತನ್ನು ಅನಿವಾರ್ಯವಾಗಿ ದಾಖಲಿಸ ಬೇಕಾಗಿದೆ. ಆದರೆ ಅವರು ಎಂದೂ ತಮ್ಮ ವೃತ್ತಿಗೆ ಅನ್ಯಾಯ ಮಾಡಲಿಲ್ಲ; ದ್ರೋಹ ಬಗೆಯಲಿಲ್ಲ. ಯಾವುದೇ ಜವಾಬ್ದಾರಿಯನ್ನು ಒಪ್ಪಿಕೊಂಡಾಗ, ಅದನ್ನು ಸಮರ್ಥವಾಗಿ ನಿಭಾಯಿಸಿ, ಬಿಡುಗಡೆ ಪಡೆದರು.

೧೯೬೪ ರಿಂದ ೧೯೭೨ರವರೆಗೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗದಲ್ಲಿ ಇತಿಹಾಸವನ್ನು ಬೋಧಿಸುತ್ತಾ,

ಮತ್ತಷ್ಟು ಅಧ್ಯಯನಶೀಲರಾದ ಡಾ॥ ಬಾ.ರಾ. ಗೋಪಾಲ್ ಅದೇ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ಕರ್ನಾಟಕ ಶಾಸನ ಸಂಪುಟ ಮಾಲೆಯ ಐದು ಮತ್ತು ಆರನೆಯ ಸಂಪುಟಗಳನ್ನು ಪ್ರಕಟಿಸಿ ಮಾನ್ಯರಾದರು. ಉದಕಮಂಡಲದಲ್ಲಿ ಸಂಶೋಧಕರಾಗಿ ರೂಪುಗೊಂಡ ಡಾ॥ ಬಾ.ರಾ. ಗೋಪಾಲ್, ಧಾರವಾಡದಲ್ಲಿ ವಿದ್ವಾಂಸರಾಗಿ ಬೆಳೆದರು ಮತ್ತು ಮೈಸೂರಿನಲ್ಲಿ ಆಚಾರ್ಯ ಸ್ಥಾನವನ್ನು ಪಡೆದರು.

೧೯೭೨ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ದಕ್ಷಿಣ ಭಾರತ ಅಧ್ಯಯನ ವಿಭಾಗದ ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟಗಳ ಪರಿಷ್ಕರಣೆಯ ಜವಾಬ್ದಾರಿಯನ್ನು ಒಪ್ಪಿಕೊಂಡ ಡಾ॥ ಬಾ.ರಾ. ಗೋಪಾಲ್ ೧೯೮೭ರವರೆಗೆ, ೧೫ವರ್ಷಗಳ ಅವಧಿಯಲ್ಲಿ ಎಪಿಗ್ರಾಫಿಯಾ ಕರ್ನಾಟಿಕಾದ ಎಂಟು ಪರಿಷ್ಕೃತ ಸಂಪುಟಗಳನ್ನು ಪ್ರಕಟಿಸಿದರು. ಒಂಭತ್ತನೆಯ ಸಂಪುಟವನ್ನು ಮುದ್ರಣಕ್ಕೆ ಅಣಿಗೊಳಿಸಿ, ಮುನ್ನುಡಿ ಬರೆಯುವ ಮೊದಲು, ಮೈಸೂರು ವಿ.ವಿ.ಯಿಂದ ಸ್ವಯಂನಿವೃತ್ತಿ ಪಡೆದು, ನಂತರ ಆಂಧ್ರಪ್ರದೇಶದ ಅನಂತಪುರದಲ್ಲಿ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ೧೯೯೦ರಲ್ಲಿ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದಿಂದ ನಿವೃತ್ತಿ ಪಡೆದು, ಮೈಸೂರಿಗೆ ಹಿಂದಿರುಗಿದರೂ ಸಹ, ಶಾಸನ ಶಾಸ್ತ್ರ ಅವರನ್ನು ಬಿಡಲಿಲ್ಲ. ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟಗಳ ಪರಿಷ್ಕರಣೆಯ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿ, ಆಪ್ತರಿಂದ ಅಭಿನವ ಬಿ.ಎಲ್.ರೈಸ್ ಎಂಬ ಹೆಸರನ್ನು ಪ್ರೀತಿಯಿಂದ ಪಡೆದ ಡಾ॥ ಗೋಪಾಲ್ ತಮ್ಮ ಹೆಸರನ್ನು ಕೊನೆಯುಸಿರಿರುವವರೆಗೆ ಒಂದು ನಾಡಿನ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ತಮ್ಮನ್ನು ತಾವು ಒಪ್ಪಿಸಿಕೊಂಡರು.

ಕುಳ್ಳ ಎನಿಸದಿದ್ದರೂ, ತೀರಾ ಎತ್ತರವಲ್ಲದ ಕೃಶ ಶರೀರದ ಡಾ॥ ಬಾ.ರಾ. ಗೋಪಾಲ್ ಸಾಧನೆಯ ವಿಷಯದಲ್ಲಿ ತ್ರಿವಿಕ್ರಮರಾಗಿದ್ದರು. ರಾಜ್ಯ ಮತ್ತು ರಾಷ್ಟ್ರಮಟ್ಟದ ವಿದ್ವತ್ ಸಮ್ಮೇಳನಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಆಯಾ ಸಂದರ್ಭದ ಯಾವುದಾದರೂ ಒಂದು ಗೋಷ್ಠಿಯ ಅಧ್ಯಕ್ಷತೆಯನ್ನು ಮಾತ್ರವಲ್ಲದೆ ಹಲವು ಸಮ್ಮೇಳನಗಳ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದ ಕೀರ್ತಿ ಡಾ॥ ಗೋಪಾಲ್ ಅವರದು. ಭಾರತೀಯ ಶಾಸನತಜ್ಞರ ಸಮ್ಮೇಳನ, ಕರ್ನಾಟಕ ಇತಿಹಾಸ ಅಕಾಡೆಮಿಯ ಸಮ್ಮೇಳನ ಮತ್ತು ಆಂಧ್ರಪ್ರದೇಶ ಇತಿಹಾಸ ಸಮ್ಮೇಳನಗಳ ಸಮ್ಮೇಳನಾಧ್ಯಕ್ಷ ಪದವಿಯನ್ನೂ ಅಲಂಕರಿಸಿದ್ದ ಡಾ॥ ಬಾ.ರಾ. ಗೋಪಾಲ್ ಭಾರತೀಯ ಇತಿಹಾಸ ಸಮ್ಮೇಳನ, ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಮಿಥಿಕ್ ಸೊಸೈಟಿಗಳಂತಹ ಸಂಸ್ಥೆಗಳಿಂದಲೂ ಪುರಸ್ಕೃತರಾಗಿದ್ದಾರೆ.

ಡಾ॥ ಬಾ.ರಾ. ಗೋಪಾಲ್ ಅವರ ಸಾಧನೆಯ ಸ್ಥೂಲ ಪರಿಚಯ ಅಥವಾ ಒಂದು ಪಟ್ಟಿಯನ್ನು ನೀಡಲೂ ಸಹ ಕೆಲವು ಪುಟಗಳು ಬೇಕಾಗುತ್ತವೆ. ಹದಿನೈದು ಶಾಸನ ಸಂಪುಟಗಳನ್ನು ಸಂಶೋಧನಾಸಕ್ತರಿಗೆ ನೀಡಿರುವ ಡಾ॥ ಬಾ.ರಾ. ಗೋಪಾಲ್ ಅವರು ಇಂಗ್ಲಿಷ್ ಭಾಷೆಯಲ್ಲಿ ೮, ಕನ್ನಡ ಭಾಷೆಯಲ್ಲಿ ೧೭ ಗ್ರಂಥಗಳನ್ನು ಇತಿಹಾಸಾಸಕ್ತರಿಗೆ ನೀಡಿದ್ದಾರೆ. ಅಲ್ಲದೆ ಇಂಗ್ಲಿಷ್‌ನಲ್ಲಿ ೭ ಮತ್ತು ಕನ್ನಡದಲ್ಲಿ ಒಂದು ಗ್ರಂಥಗಳನ್ನು ಸಂಪಾದಿಸಿ ಕೊಟ್ಟಿದ್ದಾರೆ. ಇಂಗ್ಲಿಷ್‌ನಲ್ಲಿ ಸುಮಾರು

೬೦ ಮತ್ತು ಕನ್ನಡದಲ್ಲಿ ಸುಮಾರು ೭೮ ಲೇಖನಗಳನ್ನು ಪ್ರಕಟಿಸಿರುವ ಡಾ॥ ಬಾ.ರಾ. ಗೋಪಾಲ್ ಮತ್ತೂ ಹಲವು ಗ್ರಂಥಗಳು ಮತ್ತು ಲೇಖನಗಳನ್ನು ಬರೆಯುವ ಹೊಳಹನ್ನು ಹಾಕಿಕೊಂಡಿದ್ದರು. ಮೂಲತಃ ಡಾ॥ ಬಾ.ರಾ. ಗೋಪಾಲ್ ಶಾಸನತಜ್ಞರಾದರೂ ಅವರಿಗೆ ಸಾಹಿತ್ಯದ ಬಗೆಗೆ, ಅದರಲ್ಲೂ ವಿಶೇಷವಾಗಿ ಕನ್ನಡ ಸಾಹಿತ್ಯದ ಬಗೆಗೆ ಅಪಾರವಾದ ಆಸಕ್ತಿ ಇತ್ತು. ಮಹತ್ವದ ಕೃತಿಗಳನ್ನು ಅಭ್ಯಾಸ ಮಾಡಿದ್ದರು.

ಡಾ॥ ಬಾ.ರಾ. ಗೋಪಾಲ್ ಅವರು ಅತ್ಯುತ್ಸಾಹದಿಂದ ಪ್ರಕಟಣ ಕ್ಷೇತ್ರಕ್ಕೂ ಕೈಹಾಕಿ, ಅನೇಕರಂತೆ ನಷ್ಟ ಮಾಡಿಕೊಂಡಿದ್ದಾರೆ. ಹಾಗೆ ಅವರು ಮಾಡಿದ ಸಾಹಸ ಕಡಿಮೆ ಆದರೂ, ಅದರ ಫಲವಾಗಿ ಒಂದು ಮುಖ್ಯ ಕೃತಿ ಲಭ್ಯವಾಗಿದೆ. ಅದೆಂದರೆ ಎರಡು ಭಾಗಗಳಲ್ಲಿ 'History of Andhrapradesh', "Corpus of Kadamba Inscriptions" ಕೃತಿಯಲ್ಲಿ ಆವರೆಗೆ (೧೯೮೫) ಪ್ರಕಟವಾಗಿದ್ದ ಕದಂಬರ ಕಾಲದ ಎಲ್ಲಾ ಶಾಸನಗಳೂ ಸೇರ್ಪಡೆ ಆಗಿವೆ. ಶಾಸನಗಳ ಇಡಿಯಾದ ಪಾಠಗಳನ್ನು ಇಂಗ್ಲಿಷ್ ಲಿಪ್ಯಂತರಣದಲ್ಲಿ ನೀಡಿ, ಅವುಗಳ ವಿವರವಾದ ಸಾರಾಂಶಗಳನ್ನು ಡಾ॥ ಗೋಪಾಲ್ ಒದಗಿಸಿದ್ದಾರೆ. ಜೊತೆಗೆ ಕೃತಿಯ ವಿಸ್ತಾರವಾದ ಮುನ್ನುಡಿಯು ಅತ್ಯಂತ ಮಹತ್ವದ್ದಾಗಿದೆ. ಈ ಇಂಗ್ಲಿಷ್ ಕೃತಿಗೆ ಮೊದಲು ೧೯೮೩ರಲ್ಲಿ ಇದೇ ಕೃತಿಯು ಕನ್ನಡದಲ್ಲಿ 'ಬನವಾಸಿ ಕದಂಬರು' ಎಂಬ ಹೆಸರಿನಲ್ಲಿ ಪ್ರಕಟವಾಗಿತ್ತು. ತಮ್ಮ ಯಾವುದೇ ಕೆಲಸವು ನೆಲದ ಜನರು ಹಾಗೂ ವಿದ್ವಾಂಸರು-ಇಬ್ಬರಿಗೂ ದೊರಕಬೇಕೆಂಬ ಹೆಬ್ಬಯಕೆಯಿಂದ ಹೀಗೆ ಎರಡೂ ಭಾಷೆಗಳಲ್ಲಿ ಪ್ರತ್ಯೇಕವಾಗಿ (ಬೆಲೆಯ ಹೊರೆ ಆಗಬಾರದೆಂದು) ಪ್ರಕಟಿಸುವ ಭಾಷಿಕ ಹಾಗೂ ವಿದ್ವತ್ ಪ್ರೇಮಗಳು ಡಾ॥ ಗೋಪಾಲ್ ಅವರಿಗಿತ್ತು. ಇಂತಹುದೇ ಮನೋಭಾವವನ್ನು ಅದೇ ಸ್ವರೂಪದ 'ಕರ್ನಾಟಕದಲ್ಲಿ ರಾಮಾನುಜರು' ಹಾಗೂ 'Sri Ramanuja in Karnataka' ಗ್ರಂಥಗಳಲ್ಲಿ ಗುರುತಿಸ ಬಹುದು.

ಡಾ॥ ಬಾ.ರಾ. ಗೋಪಾಲ್ ಅವರ ಪಿಎಚ್.ಡಿ. ಮಹಾಪ್ರಬಂಧ 'Kalyana Chalukyas and Kalachuris'. ಅದನ್ನು ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದೆ. ಆವರೆಗೆ ಎರಡೂ ಮನೆತನಗಳ ಲಭ್ಯವಿದ್ದ ಎಲ್ಲಾ ಮಾಹಿತಿಗಳನ್ನು ಆಮೂಲಾಗ್ರವಾಗಿ ಬಳಸಿಕೊಂಡು ಸಿದ್ಧಪಡಿಸಿರುವ ಉತ್ತಮ ಆಕರಗ್ರಂಥ. ಅದು ಆ ಎರಡೂ ವಂಶಗಳ ಬಗೆಗೆ ಇಂದಿಗೂ ಮುಂದಿಗೂ ಅಧ್ಯಯನ ಮಾಡುವವರು ಡಾ॥ ಗೋಪಾಲ್ ಅವರ ಕೃತಿಯನ್ನು ಮರೆತು ಮುಂದುವರಿಯಲು ಸಾಧ್ಯವಿಲ್ಲ. ಆ ಕೃತಿಗೆ ಡಾ॥ ಗೋಪಾಲ್ ಕೇವಲ ಶಾಸನಗಳನ್ನಷ್ಟೇ ಮೂಲ ಸಾಮಗ್ರಿಯನ್ನಾಗಿ ಬಳಸಿಕೊಳ್ಳದೆ, ಸಮಕಾಲೀನ ಸಾಹಿತ್ಯಕೃತಿಗಳ ನೆರವನ್ನು ಪಡೆದಿದ್ದರು. ಆ ಕಾರಣದಿಂದ ರನ್ನಕವಿಯ ಮೂಲಕ ಬಾದಾಮಿ ಚಾಲುಕ್ಯ ಮತ್ತು ಕಲ್ಯಾಣ ಚಾಲುಕ್ಯರ ಸಹಸಂಬಂಧದ ಬಗೆಗೆ ತಿಳಿಯಲು ಸಾಧ್ಯವಾಗಿದೆ. ಡಾ॥ ಗೋಪಾಲ್ ಅವರಿಗೆ ಕನ್ನಡ ಸಾಹಿತ್ಯದ ಆಮೂಲಾಗ್ರ ಪರಿಚಯವೇ ಇತ್ತು. ಆದ್ದರಿಂದ ಅವರಿಗೆ ಅರ್ಥ ನಿಷ್ಕರ್ಷೆಯ ಸಂದರ್ಭದಲ್ಲಿ ಉಪಯೋಗ ಆಗುತ್ತಿತ್ತು.

ಕರ್ನಾಟಕದಲ್ಲಿ ಮೈಸೂರು ಒಡೆಯರವರೆಗಿನ ಇತಿಹಾಸದ ಅಧ್ಯಯನಕ್ಕೆ ಸಧ್ಯಕ್ಕಿರುವ

ಹಲವು ಗ್ರಂಥಗಳಲ್ಲಿ, ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ ಡಾ॥ ಪಿ.ಬಿ. ದೇಸಾಯಿ, ಡಾ॥ ಬಾ.ರಾ.ಗೋಪಾಲ್ ಮತ್ತು ಡಾ॥ ಎಸ್.ಎಚ್.ರಿತ್ತಿ ಅವರು ಸಂಯುಕ್ತವಾಗಿ ಬರೆದ 'A History of Karnataka'ವು ಮುಖ್ಯವಾದುದು. ಬಹುತೇಕ ಆ ಪುಸ್ತಕಕ್ಕೆ ವಹಿಸಿದ ಶ್ರಮದ ರೂಪವಾಗಿ ಡಾ॥ ಗೋಪಾಲ್ ಅವರೊಬ್ಬರೇ ಬರೆದು, ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿದ ಕರ್ನಾಟಕದ ಇತಿಹಾಸವು ಆವರೆಗಿನ ಲಭ್ಯ ಮಾಹಿತಿಗಳನ್ನು ಅರಗಿಸಿಕೊಂಡು ಬರೆದ ಪುಸ್ತಕವಾಗಿದೆ.

ಹೀಗೆ ಸುಮಾರು ೪೮ ಪುಸ್ತಕಗಳನ್ನು ತಮ್ಮ ಹೆಸರಿನಲ್ಲಿ ಉಳಿಸಿಹೋಗಿರುವ ಡಾ॥ ಗೋಪಾಲ್ ಪ್ರಕಟಿಸಿರುವ ಲೇಖನಗಳ ಸಂಖ್ಯೆ ೧೩೮ನ್ನೂ ದಾಟುತ್ತದೆ. ಶಾಸನ ಮತ್ತು ಇತಿಹಾಸವನ್ನಲ್ಲದೆ ಸಾಹಿತ್ಯಾಧಾರಿತ ವಿಷಯಗಳ ಬಗೆಗೂ ಬರೆದ ಡಾ॥ ಗೋಪಾಲ್, ಈಗಾಗಲೇ ತಿಳಿಸಿರುವಂತೆ ತಮ್ಮ ಕೊನೆಯ ಉಸಿರಿರುವವರೆಗೆ ಕೆಲಸ ಮಾಡಿದರು. ಅವರು ಬರೆದ ಇತಿಹಾಸ–ತತ್ವ ಮತ್ತು ಶಾಸ್ತ್ರ ಎಂಬ ಬಹುಮುಖ್ಯ ಕೃತಿಯು, ಅವರ ಮರಣಾನಂತರ ಪ್ರಕಟವಾಯಿತು. ಅವರು ಇರುವಾಗಲೇ ಅದರ ಕರಡನ್ನು ತಿದ್ದಿಕೊಟ್ಟಿದ್ದರು.

ಅವರ ಬಳಿ ೧೦೦ಕ್ಕೂ ಹೆಚ್ಚು ತಮಿಳುನಾಡಿನ ಕನ್ನಡ ಶಾಸನಗಳ ಪಡಿಯಚ್ಚುಗಳಿದ್ದವು. ಅವುಗಳನ್ನೆಲ್ಲಾ ನಾನು ಓದಿಯಾಗಿತ್ತು. ಆ ಪಠ್ಯಗಳನ್ನು ಡಾ॥ ಗೋಪಾಲ್ ಪರಿಶೀಲಿಸಿ, ಕೆಲವು ಶಾಸನಗಳಿಗೆ ಇಂಗ್ಲಿಷ್ ಸಾರಾಂಶಗಳನ್ನೂ ಬರೆದಿದ್ದರು. ಆ ಶಾಸನಗಳನ್ನೊಳಗೊಂಡ 'ತಮಿಳುನಾಡಿನ ಕನ್ನಡ ಶಾಸನಗಳು' ಕೃತಿಯು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮೂಲಕ ಪ್ರಕಟಗೊಂಡಿದೆ.

ಕನ್ನಡ ಶಾಸನ ಪದಕೋಶದ ಸಿದ್ಧತೆ ಡಾ॥ ಗೋಪಾಲ್ ಅವರ ತುಂಬಾ ಹಂಬಲದ ಕೆಲಸವಾಗಿತ್ತು. ಅವರ ಜೊತೆಗೆ ನಾನು ಮತ್ತು ಡಾ॥ ತಾರಾನಾಥ್ ಎನ್.ಎಸ್. ಇದ್ದೆವು. ಆ ಕೆಲಸ ಅಪೂರ್ಣವಾಗಿದೆ. ಆ ಕೆಲಸಕ್ಕೆ ಕುಳಿತ ಸಂದರ್ಭದಲ್ಲಿ ಅವರ ಅಗಾಧ ಪಾಂಡಿತ್ಯದ ಪರಿಚಯ ನಮಗಾಗಿದೆ.

ಡಾ॥ ಬಾ.ರಾ. ಗೋಪಾಲ್ ನನಗೆ ಕನ್ನಡ ಎಂ.ಎ. ತರಗತಿಗಳಲ್ಲಿ ಶಾಸನ ಶಾಸ್ತ್ರ ಬೋಧಿಸಿದರು. ಜೊತೆಗೆ ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನೂ ಪರಿಚಯಿಸಿದರು. ಎಲ್ಲಕ್ಕಿಂತ ಹೆಚ್ಚಾಗಿ ಸಂಶೋಧನೆಯ ವಿಧಿ ವಿಧಾನಗಳ ಬಗ್ಗೆ ವಿಶೇಷ ತಿಳುವಳಿಕೆ ನೀಡಿದರು; ಸಂಶೋಧನೆಯೆಂದರೆ ಅವರೂ ಶ್ರಮಿಸುತ್ತಿದ್ದರು. ಸಹಸಂಶೋಧಕರನ್ನೂ ಕೆಲಸಕ್ಕೆ ಹಚ್ಚುತ್ತಿದ್ದರು. ಅವರ ಶಿಸ್ತು ಮತ್ತು ಶ್ರಮ ಅನೇಕರಿಗೆ ಪ್ರಿಯವಾಗುತ್ತಿರಲಿಲ್ಲ. ಅದಕ್ಕಾಗಿ ಅವರಿಗೆ ಸಿಟ್ಟಿನ ಮನುಷ್ಯ ಎಂಬ ಹೆಸರೂ ಬಳುವಳಿಯಾಗಿ ಬಂದಿತ್ತು. ಮೊದಲಿಗೆ ನಾನೂ ಅವರನ್ನು ಸಿಟ್ಟಿನ ಮನುಷ್ಯ ಎಂದೇ ತಿಳಿದಿದ್ದೆ. ನನ್ನನ್ನು ತಮ್ಮ ವಿದ್ಯಾರ್ಥಿಯಾಗಿ ಒಪ್ಪಿಕೊಳ್ಳುವ ಮುನ್ನ ಅವರು ಹಾಕಿದ ಕರಾರು ನನಗೆ ಭಯ ಹುಟ್ಟಿಸಿತ್ತು. ನೀವು ವೃತ್ತಿಯ ನೆಪ ಮಾಡಿಕೊಂಡು ಸಂಶೋಧನೆಯ ವಿಷಯದಲ್ಲಿ ವಿಳಂಬ ಮಾಡುವುದನ್ನು ನಾನು ಒಪ್ಪುವುದಿಲ್ಲ. ಎರಡು ವರ್ಷ ಮುಗಿಯುತ್ತಿದ್ದಂತೆಯೇ ನಿಮ್ಮ ಥೀಸಿಸ್ ಸಲ್ಲಿಕೆಯಾಗಬೇಕು. ಈ ನಿಬಂಧನೆಗೆ ಒಪ್ಪಿದರೆ

ಮಾತ್ರ ನಾನು ನಿಮಗೆ ಗೈಡ್ ಆಗುತ್ತೇನೆ ಎಂಬುದೇ ಅವರ ಕರಾರು. ಅವರ ಕರಾರಿಗೆ ನಾನು ಒಪ್ಪಿದೆ. ಸಂಶೋಧನೆಗೆ ನೋಂದಣಿ ಆದ ಮೂರನೆಯ ವರ್ಷ ಸಂಶೋಧನ ಮಹಾಪ್ರಬಂಧವನ್ನು ಸಲ್ಲಿಸಿದೆ. ಸಂಶೋಧನ ಮಹಾಪ್ರಬಂಧವನ್ನು ಬೆರಳಚ್ಚು ಮಾಡಿಸದೆ, ನನ್ನ ಕೈಬರಹದಲ್ಲೇ ಸಿದ್ಧಪಡಿಸಬೇಕು ಎಂದೂ ಆದೇಶ ನೀಡಿದರು. ನಾನು ಹಾಗೆಯೇ ಮಾಡಿದೆ. ಮಹಾಪ್ರಬಂಧವನ್ನು ಸಲ್ಲಿಸಿದ ಒಂದೂವರೆ ವರ್ಷಗಳ ನಂತರವೂ ಮಹಾಪ್ರಬಂಧವು ಮೌಲ್ಯಮಾಪನಕ್ಕೆ ಹೋಗದಿದ್ದಾಗ, ಸಿಟ್ಟಿಗೆದ್ದು, ಸಂಬಂಧಿಸಿದವರಿಗೆ ನ್ಯಾಯಾಲಯದ ಮೆಟ್ಟಿಲು ಹತ್ತಲು ವಿದ್ಯಾರ್ಥಿಗೆ ಸೂಚನೆ ನೀಡುವುದಾಗಿ ಹೇಳಿದರು. ಯಾವುದೇ ಕೆಲಸ ವಿನಾಕಾರಣ ವಿಳಂಬ ಆದಾಗ ಅವರು ಸಿಟ್ಟಿಗೇಳುತ್ತಿದ್ದರು. ಸೋಮಾರಿತನ, ಆಲಸ್ಯ ಎರಡನ್ನೂ ಯಾವ ಹಂತದಲ್ಲೂ ಸಹಿಸದ ವ್ಯಕ್ತಿತ್ವ ಅವರದು. ನನ್ನ ಮಹಾಪ್ರಬಂಧವನ್ನು ತಿದ್ದುವಾಗ ಅವರು ಗಮನಿಸುತ್ತಿದ್ದ ಸೂಕ್ಷ್ಮವಿಚಾರಗಳು ನನ್ನನ್ನು ತಿದ್ದಿ ತೀಡಿವೆ. ಇದು ನನ್ನೊಬ್ಬನ ವಿಷಯವಲ್ಲ. ಅವರ ಸಂಪರ್ಕಕ್ಕೆ ಬಂದ ಬಹುತೇಕ ಎಲ್ಲರ ಅಭಿಪ್ರಾಯವೂ ಅದೇ ಆಗಿದೆ.

ಒಬ್ಬ ಒಳ್ಳೆಯ ಗುರುವಾದವನು ತನ್ನ ಶಿಷ್ಯರಿಗೆ ಉಳಿಸಿಹೋಗುವ ಆಸ್ತಿ ಎಂದರೆ, ಕೆಲಸಗಳು. ತಾನು ಮಾಡಬೇಕಾಗಿದ್ದ ಕೆಲಸಗಳನ್ನು ಶಿಷ್ಯರಿಗೆ ವರ್ಗಾಯಿಸಿದರೆ ಗುರುವಿನ ಮಹತ್ವದ ಕೆಲಸ ಮುಗಿದಂತೆ. ತಮಿಳು ನಾಡಿನಲ್ಲಿರುವ ಕನ್ನಡ ಶಾಸನಗಳ ಸಂಪಾದನೆಯ ಕೆಲಸವನ್ನು ಹೆಗಲ ಮೇಲಿರಿಸಿದ್ದರು; ವಿಜಯನಗರ ಶಾಸನಗಳ ಸಾರಾಂಶದ ಕೆಲಸವನ್ನು ಮುಂದುವರಿಸಬೇಕಾಗಿದೆ. ಶಾಸನ ಪದಕೋಶದ ಕೆಲಸ ಅಪೂರ್ಣವಾಗಿದೆ. ಎಷ್ಟೊಂದು ಕೆಲಸಗಳನ್ನು ಶಿಷ್ಯರಿಗೆ ಉಳಿಸಿ ಹೋಗಿದ್ದಾರೆ ಎಂಬುದನ್ನು ನೆನಪು ಮಾಡಿಕೊಂಡರೆ ಹೃದಯ ಭಾರವಾಗುತ್ತದೆ. ತಮಗೆ ಇನ್ನಷ್ಟು, ಮತ್ತಷ್ಟು ಕೆಲಸ ಮಾಡುವ ಶಕ್ತಿ ಇರುವಾಗಲೇ ತಮ್ಮ ಅಮೂಲ್ಯ ಗ್ರಂಥ ಭಂಡಾರದ ಬಹು ಭಾಗವನ್ನು ನನಗೆ ನೀಡಿ ಕೆಲಸಗಳನ್ನು ನಿಭಾಯಿಸಲು ಬೇಕಾದ ಸಂಪನ್ಮೂಲವನ್ನು ಒದಗಿಸಿ ಉಪಕಾರ ಮಾಡಿರುವ ಡಾ॥ ಬಾ.ರಾ.ಗೋಪಾಲ್ ಅವರಂತಹ ಬಿಚ್ಚು ಮನಸ್ಸಿನ ವಿದ್ವಾಂಸರು ಗುರುಗಳಾಗಿ ದೊರೆಯುವುದು ಒಂದು ಅದೃಷ್ಟ. ಅಂತಹ ಅದೃಷ್ಟ ನನ್ನದು.

ನಿವೃತ್ತಿಯ ನಂತರ, ಹಲವು ಕೆಲಸಗಳನ್ನು ಹಮ್ಮಿಕೊಳ್ಳುವ ಇಚ್ಛೆ ಅವರಿಗಿತ್ತು ಕೆಲವು ಕೆಲಸಗಳನ್ನು ಹಮ್ಮಿಕೊಳ್ಳಲಾಗಿತ್ತು. ಅವುಗಳಲ್ಲಿ ಕೆಲವು ಇನ್ನೂ ಅಪೂರ್ಣವಾಗಿಯೇ ಇವೆ. ಇದು ಬೇಸರದ ವಿಷಯ. ಪಿಎಚ್.ಡಿ. ಅಧ್ಯಯನದ ಮಾರ್ಗದರ್ಶಕರಾಗಿ ನನ್ನ ಜೀವನದಲ್ಲಿ ಪ್ರವೇಶಿಸಿದ ಡಾ॥ ಬಾ.ರಾ.ಗೋಪಾಲ್ ಕ್ರಮೇಣ, ವಿಶೇಷವಾಗಿ ನನ್ನ ತಂದೆಯ ಮರಣಾನಂತರ ನನ್ನ ಬದುಕಿನಲ್ಲಿ ಅನೇಕ ವಿಷಯಗಳಲ್ಲಿ ಮಾರ್ಗದರ್ಶನ ನೀಡಿದರು. ಹಿರಿಯರಂತೆ ಮನೆಗೆ ಬಂದು ನನ್ನ ಮಕ್ಕಳ ಜೊತೆ ಮಗುವಾಗಿ ಬಿಡುತ್ತಿದ್ದರು. ನನಗೂ ಅವರು ಮಗನ ಸ್ಥಾನ ನೀಡಿದರು. ಶಿಷ್ಯನಿಗೆ ಗುರುವಿನಿಂದ ಇದಕ್ಕಿಂತ ಇನ್ನೆಂತಹ ಪ್ರೀತಿ ಸಿಗಬೇಕು.

ಡಾ॥ ಬಾ.ರಾ. ಗೋಪಾಲ್ ದೈಹಿಕವಾಗಿ ಈಗ ನಮ್ಮೊಡನಿಲ್ಲ. ಆದರೆ ಕೃತಿಗಳ ಮೂಲಕ ಅವರು ಚಿರಂಜೀವಿಯಾಗಿದ್ದಾರೆ.

❖

# ಶಿಷ್ಯವತ್ಸಲೆ – ಸಿಎನ್‌ಎಂ

**(ಡಾ|| ಚಿ.ನ. ಮಂಗಳಾ)**

---

● *ಡಾ|| ಎನ್.ಬಿ. ಪರಿಮಳಾಬಾಯಿ*

**ಡಾ||** ಚಿ.ನ. ಮಂಗಳಾ ಶಿಷ್ಯವಲಯದಲ್ಲಿ ಸಿಎನ್‌ಎಂ ಎಂದೇ ಖ್ಯಾತರು. ಅವರೊಂದು ಮಾಂತ್ರಿಕಶಕ್ತಿ. ಎನ್‌ಎಂಕೆಆರ್‌ವಿ ಮಹಿಳಾ ಕಾಲೇಜಿಗೆ ಪರ್ಯಾಯ ನಾಮವಾಗಿದ್ದ, ಇಪ್ಪತ್ತೈದು ವರ್ಷಗಳ ಕಾಲ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿದ ಚಿ.ನ. ಮಂಗಳಾ ತಮ್ಮ ಸೇವಾವಧಿಯಲ್ಲಿ ವಿದ್ಯಾರ್ಥಿನಿಯರ ಸರ್ವತೋಮುಖ ಬೆಳವಣಿಗೆಗಾಗಿ, ಮಹಿಳೆಯರ ಶ್ರೇಯೋಭಿವೃದ್ಧಿಗಾಗಿ ಹಾಕಿಕೊಂಡ ಕಾರ್ಯಕ್ರಮಗಳು, ನಡೆಸಿದ ಶೈಕ್ಷಣಿಕ ಪ್ರಯೋಗಗಳು, ಪಠ್ಯೇತರ ಚಟುವಟಿಕೆಗಳು, ಅವರ ಕ್ರಿಯಾತ್ಮಕ, ಪ್ರಯೋಗಶೀಲ ವ್ಯಕ್ತಿತ್ವದ ದರ್ಶನವನ್ನು ಮಾಡಿಸುತ್ತವೆ. ಜೀವನೋತ್ಸಾಹ, ದೈವಭಕ್ತಿ, ಧರ್ಮಶ್ರದ್ಧೆ, ಸಾಮಾಜಿಕ ಕಳಕಳಿ, ಕರ್ತೃತ್ವಶಕ್ತಿ, ನೇತೃತ್ವಶಕ್ತಿ, ಆಡಳಿತ ನೀತಿ, ಸಾಹಿತ್ಯ ಪ್ರೀತಿ, ಸಂಗೀತಜ್ಞಾನ, ಕಲಾಭಿರುಚಿಗಳನ್ನು ಮೈಗೂಡಿಸಿಕೊಂಡ ಬಹುಮುಖ ಪ್ರತಿಭೆಯ ಮಂಗಳಾ ಶಿಕ್ಷಣ ಕ್ಷೇತ್ರವನ್ನು ಕೇಂದ್ರಬಿಂದುವಾಗಿರಿಸಿಕೊಂಡು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸ್ಮರಣೀಯ ಸಾಧನೆಮಾಡಿ ಖ್ಯಾತನಾಮರಾದವರು.

ಪತ್ರಿಕೆಯೊಂದಕ್ಕೆ ಲೇಖನವನ್ನು ಬರೆಯುವಾಗ ಉಂಟಾದ ಪ್ರಮಾದಕ್ಕೆ ಪಶ್ಚಾತ್ತಾಪ ರೂಪವಾಗಿ ಮೂಡಿಬಂದ ಕಾರ್ಯಕ್ರಮಗಳ ಫಲಿತಾಂಶವೇ ಮಂಗಳಾ ಅವರ ಉನ್ನತ ಧ್ಯೇಯ ಸಾಧನೆಯ ಮೆಟ್ಟಿಲುಗಳಾದವು. ಈ ಲೇಖನ ಪ್ರಮಾದ ದೋಷಕ್ಕೆ ಸಿಲುಕಿದ ಶ್ರೀಮತಿ ನಂಜನಗೂಡು ತಿರುಮಲಾಂಬಾ ಅವರು ಮಂಗಳಾ ಅವರ ಪ್ರಯೋಗಶೀಲ ಕಾರ್ಯಚಟುವಟಿಕೆಗಳಿಗೆ ಪ್ರಚೋದನೆಯಾದರು.

ಇದರ ಪರಿಣಾಮವಾಗಿ ಮಂಗಳಾ ಅವರ ವಿನೂತನ ಯೋಜನೆಗಳು, ಅವಿರತ ಶ್ರಮ, ಸತತ ಪ್ರಯತ್ನದ ಮೂಲಕ ಎನ್‌ಎಂಕೆಆರ್‌ವಿ ಕಾಲೇಜಿನಲ್ಲಿ "ಶಾಶ್ವತೀ" ವಸ್ತು ಸಂಗ್ರಹಾಲಯ, ನಂಜನಗೂಡು ತಿರುಮಲಾಂಬಾ, ಸದೋದಿತಾ, ಕರ್ನಾಟಕ ಕಲ್ಪವಲ್ಲಿ ಮೊದಲಾದ ರಾಷ್ಟ್ರಮಟ್ಟದ, ರಾಜ್ಯಮಟ್ಟದ, ಸಾಹಿತ್ಯಕ, ಸಾಮಾಜಿಕ, ಶೈಕ್ಷಣಿಕ ಪ್ರಶಸ್ತಿಗಳು ಮಹಿಳೆಯರಿಗಾಗಿ ಸ್ಥಾಪಿತವಾದವು. ಯುಜಿ ಮತ್ತು ಪಿಜಿ ಮಟ್ಟದಲ್ಲಿ ಮಹಿಳಾ ಅಧ್ಯಯನದಂಥ ಹೊಸ ಕೋರ್ಸುಗಳು ಪ್ರಾರಂಭವಾದವು. ಈ ಪ್ರಯೋಗಶೀಲ ಯೋಜನೆಯ ಅಂಗವಾಗಿ ರೂಪುಗೊಂಡ ಒಂದು ಕಾರ್ಯಕ್ರಮದ ಅನುಷ್ಠಾನವೇ ಕನ್ನಡ ಮಾಧ್ಯಮ ತರಗತಿಗಳ ಪ್ರಾರಂಭ.

'ವಿವಾಹವು ವಿದ್ಯಾಭ್ಯಾಸಕ್ಕೆ ಮುಕ್ತಾಯ ಹಾಡುತ್ತದೆ' ಎಂಬ ಸೂಕ್ತಿಯೊಂದು ಸಂಸ್ಕೃತದಲ್ಲಿದೆ.

ಇದು ಅನೇಕರ ವಿಷಯದಲ್ಲಿ ನಿಜವಾಗಿರಬಹುದಾದರೂ ನನ್ನ ಅನುಭವವು ಮಾತ್ರ ಈ ಮಾತಿಗೆ ಪೂರಾ ವ್ಯತಿರಿಕ್ತವಾದದ್ದು. ನನ್ನ ವಿದ್ಯಾರ್ಥಿಜೀವನ ಪ್ರಾರಂಭವಾದದ್ದೇ ವಿವಾಹಾನಂತರ. ವಿದ್ಯಾರ್ಥಿದೆಸೆಯಲ್ಲಿ ಮತ್ತು ವೃತ್ತಿಜೀವನದಲ್ಲಿ ನಾನು ಪಡೆದ ಯಶಸ್ಸಿನ ಬಹುಪಾಲು ಸೇರಬೇಕಾದದ್ದು – ಮೇಲಿನ ಮಾತಿಗೆ ನಾನೊಂದು ಅಪವಾದವೆಂದು ಹೇಳಿಕೊಳ್ಳಲು ಕಾರಣರೂ, ಕಾಲೇಜಿನ ಪ್ರಾಂಶುಪಾಲರೂ ಆಗಿ ತಮ್ಮ ಪ್ರೀತಿಪೂರ್ವಕ, ವಾತ್ಸಲ್ಯಭರಿತ ನಡೆನುಡಿಗಳಿಂದ ನನ್ನಲ್ಲಿದ್ದ ಸಂಕೋಚ ಪ್ರವೃತ್ತಿಯನ್ನು ಹೋಗಲಾಡಿಸಿ, ಏಕೈಕ ವಿದ್ಯಾರ್ಥಿನಿಯಾಗಿದ್ದರೂ ಕನ್ನಡ ಮಾಧ್ಯಮ ತರಗತಿಗಳನ್ನು ಏರ್ಪಡಿಸುವುದರ ಮೂಲಕ ಇತರ ಕೆಲವರು ಕೇವಲ ಭಾಷಣದಲ್ಲಿ ತೋರುವ ಕನ್ನಡ ಪ್ರೇಮವನ್ನು ಕಾರ್ಯತಃ ಮಾಡಿ ತೋರಿಸಿ ಎಲ್ಲ ವಿಧದಿಂದಲೂ ಅನುಕೂಲ ಕಲ್ಪಿಸಿಕೊಟ್ಟು ನನ್ನ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿದ ನನ್ನ ಪ್ರಿಯ ಗುರುಗಳಾದ ಡಾ॥ ಚಿ.ನ. ಮಂಗಳಾ ಅವರಿಗೆ.

'ಕನ್ನಡ ಅಳಿವು–ಉಳಿವು' ಎನ್ನುವ ಗ್ರಂಥದಲ್ಲಿ ಮಂಗಳಾ ಅವರು ಕನ್ನಡ ಮಾಧ್ಯಮವನ್ನು ಕುರಿತು ಚಿಂತನೆ ಮಾಡಿದ್ದಾರೆ. ಆ ಗ್ರಂಥದಲ್ಲಿ ಉಕ್ತವಾದಂತೆ ನನ್ನ ಆರ್‌ವಿ ಕಾಲೇಜು ಪ್ರವೇಶ ಪ್ರಸಂಗವನ್ನು ಅವರ ಮಾತಿನಲ್ಲೇ ಕೇಳಿ. "ಈ ಗ್ರಂಥದ ಪ್ರಾರಂಭದಲ್ಲಿ ಕನ್ನಡ ಭಾಷೆಯನ್ನು ಕುರಿತು ಒಂದು ಲೇಖನವಿದೆ. ಅದನ್ನು ಬರೆದವರು ನಮ್ಮ ಕಾಲೇಜಿನಲ್ಲಿ ಅಧ್ಯಾಪಕಿಯಾಗಿರುವ ಶ್ರೀಮತಿ ಎನ್.ಬಿ. ಪರಿಮಳಾಬಾಯಿ. ಅವರಿಗೆ ಮದುವೆಯಾದಾಗ ಎಸ್.ಎಸ್.ಎಲ್.ಸಿ. ಆಗಿತ್ತು. ಪತಿಯ ಪ್ರೋತ್ಸಾಹದಿಂದ ಮುಂದೆ ಓದಲು ನಮ್ಮ ಕಾಲೇಜಿಗೆ ಬಂದರು. ಕಾಲೇಜಿಗೆ ಸೇರಲು ಬಂದ ಇವರು ಕೇಳಿದ ಮೊದಲ ಪ್ರಶ್ನೆ – "ನಾನು ಕನ್ನಡ ಮಾಧ್ಯಮದಲ್ಲೇ ಓದಬೇಕು. ನಿಮ್ಮ ಕಾಲೇಜಿನಲ್ಲಿ ಕನ್ನಡ ಮಾಧ್ಯಮ ಇದೆಯಾ?" "ಇಲ್ಲ. ನಮ್ಮ ಕಾಲೇಜಿನಲ್ಲಿ ಕನ್ನಡ ಮಾಧ್ಯಮ ಇಲ್ಲ. ಕನ್ನಡ ಮಾಧ್ಯಮ ಬೇಕಾದರೆ ಬೇರೆ ಕಾಲೇಜಿಗೆ ಹೋಗಿ. ಅವರ ಜೊತೆ ಬಂದಿದ್ದ ಅವರ ಪತಿ ನನ್ನೊಡನೆ ವಾಗ್ವಾದಕ್ಕೆ ಇಳಿದರು."

"ನಿಮ್ಮ ಕಾಲೇಜಿನಲ್ಲಿ ಕನ್ನಡ ಮಾಧ್ಯಮ ಯಾಕಿಲ್ಲ. ಇದು ಕನ್ನಡ ನಾಡು. ಕನ್ನಡದ ಮಕ್ಕಳಿಗೆ ನೀವು ಕನ್ನಡದಲ್ಲಿ ಪಾಠ ಹೇಳದಿದ್ದರೆ ಹೇಗೆ?"

"ಮಾತಿಗೆ ಮಾತು ಬೆಳೆದು ನಾನು ಅವರನ್ನು ಅವರ ಹೆಂಡತಿಗೆ ಸೀಟು ಕೊಡಲು ಸಾಧ್ಯವಿಲ್ಲವೆಂದು ಹೇಳಿ ಕಳುಹಿಸಿಕೊಟ್ಟೆ. ಬೇರೆ ಯಾವ ಕಾಲೇಜನ್ನು ಬೇಕಾದರೂ ಸೇರಬಹುದೆಂಬ ಸಲಹೆಯನ್ನೂ ಕೊಟ್ಟೆ. ಒಂದೆರಡು ದಿನ ತಿರುಗಿ ಸ್ವಲ್ಪ ಮೆತ್ತಗಾಗಿ ಮತ್ತೆ ಬಂದರು."

"ಬೇರೆ ಯಾವ ಕಾಲೇಜಿನಲ್ಲೂ ಇವಳಿಗೆ ಬೇಕಾದ ಪಠ್ಯ ವಿಷಯಗಳಿಲ್ಲ. ದಯವಿಟ್ಟು ಸೀಟು ಕೊಡಿ. ಇಂಗ್ಲಿಷಿನಲ್ಲೇ ಅವಳು ಪಾಠ ಓದಲಿ" ಎಂದರು. "ಪರಿಮಳಾ ಬಾಯಿಯ ಮುಗ್ಧ ಮುಖವನ್ನೂ, ಅದರ ಮೇಲೆ ಮೂಡಿದ್ದ ದುಗುಡವನ್ನೂ ಗಮನಿಸಿ ಆ ಹುಡುಗಿಯ ಕಣ್ಣಲ್ಲಿ ನೀರಾಡುವುದು ಬೇಡವೆಂದು ನಾನು ಆಕೆಯನ್ನು ಕಾಲೇಜಿಗೆ ಸೇರಿಸಿಕೊಂಡೆ. ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಯಾಗಲ್ಲ; ಕನ್ನಡ ಮಾಧ್ಯಮದ ವಿದ್ಯಾರ್ಥಿನಿಯಾಗಿ. ಪಾಠಗಳೆಲ್ಲವನ್ನೂ

ಕನ್ನಡದಲ್ಲೇ ಮಾಡಿದೆವು. ಪರಿಮಳಾಬಾಯಿ ಅರ್ಥಶಾಸ್ತ್ರ, ಮನಃಶಾಸ್ತ್ರ ಎಲ್ಲವನ್ನೂ ಕನ್ನಡದಲ್ಲೇ ಓದಿ ಪ್ರಥಮದರ್ಜೆಯಲ್ಲಿ ಪಾಸುಮಾಡಿದ್ದಲ್ಲದೆ ಇಂಗ್ಲಿಷ್ ಮಾಧ್ಯಮದ ಸಹಪಾಠಿಗಳನ್ನೂ ಹಿಂದೆ ಹಾಕಿ ಕಲಾವಿಭಾಗದಲ್ಲಿ ಕಾಲೇಜಿಗೇ ಅತಿಹೆಚ್ಚು ಅಂಕಗಳಿಸಿ ಮೊದಲಿಗರಾದರು. ಸ್ನಾತಕೋತ್ತರ ಪದವಿಯಲ್ಲಿಯೂ ಎರಡನೇ ರ್‍ಯಾಂಕ್‌ನಲ್ಲಿ ತೇರ್ಗಡೆಯಾಗಿ ಚಿನ್ನದ ಪದಕ ವಿಜೇತೆಯಾಗಿ ನಮ್ಮ ಕಾಲೇಜಿಗೇ ಬಂದರು ಅಧ್ಯಾಪಕಿಯಾಗಿ, ಪರಿಮಳಾಬಾಯಿ ಒಬ್ಬರಿಗಾಗಿಯೇ ನಾವು ಕನ್ನಡ ಮಾಧ್ಯಮ ತರಗತಿ ನಡೆಸಿದೆವು; ನಡೆಸಿ ಸಂತೋಷಪಟ್ಟೆವು" – ಅವರ ಈ ಸಂತೋಷವೇ ನನಗೆ ಶ್ರೀರಕ್ಷೆಯಾಯಿತು. ನಾನು ಆರ್‌ವಿ ಕಾಲೇಜಿನಲ್ಲಿ ಪ್ರವೇಶ ಪಡೆದದ್ದು ಹೀಗೆ.

ಸಿಎನ್‌ಎಂ ಏರ್ಪಾಡು ಮಾಡಿದ ಕನ್ನಡ ಮಾಧ್ಯಮ ತರಗತಿಗಳ ಮಹತ್ವವನ್ನರ್ಥ ಮಾಡಿಕೊಳ್ಳಬೇಕಾದರೆ ನಾನು ಕನ್ನಡ ಮಾಧ್ಯಮವನ್ನಾಯ್ಕೆ ಮಾಡಿಕೊಳ್ಳಲು ಕಾರಣವನ್ನು ಹೇಳಲೇಬೇಕು.

ನನ್ನದು ಹಳ್ಳಿಯ ಶಾಲೆ. ನನ್ನ ವಿದ್ಯಾಭ್ಯಾಸವೆಲ್ಲ ಸಂಪೂರ್ಣವಾಗಿ ಕನ್ನಡ ಮಾಧ್ಯಮದಲ್ಲಿಯೇ ನಡೆಯಿತು. ಆದುದರಿಂದ ಇಂಗ್ಲಿಷ್ ಮಾತೃಭಾಷೆಯಾದ ಕನ್ನಡದಂತೆ ಬಹುಬೇಗ ಅರ್ಥವಾಗುತ್ತಿರಲಿಲ್ಲ. ಭಾಷೆ ಅತ್ಯಂತ ಪ್ರಮುಖವಾದ ಸಂಪರ್ಕ ಮಾಧ್ಯಮ. ನಾವು ತಿಳಿಯದ, ಹೆಚ್ಚಾಗಿ ಬಳಸದ, ನಮ್ಮ ತಾಯ್ನುಡಿಯಲ್ಲದ ಭಾಷೆಯೊಂದರ ವಾಕ್ಯವನ್ನು ಕೇಳಿದಾಗ ನಮ್ಮ ಮನಸ್ಸಿನಲ್ಲಿಯೇ ಅದನ್ನು ಭಾಷಾಂತರಿಸಿಕೊಳ್ಳುವ ಪ್ರಯತ್ನ ಮಾಡುತ್ತೇವೆ. ಆದುದರಿಂದ ನಾವು ತಿಳಿಯದ ಭಾಷೆ ವಿಚಾರದೊಡನೆ ನೇರ ಸಂಪರ್ಕ ಕಲ್ಪಿಸುವುದಿಲ್ಲ. ಭಾಷೆಯ ಉದ್ದೇಶ ಸಂಪರ್ಕ ಸಾಧನೆಯಾದುದರಿಂದ ಇಂಗ್ಲಿಷ್ ಮಾಧ್ಯಮದಲ್ಲಿ ಭಾಷೆಯ ಉದ್ದೇಶ ಸಾಧನೆ ಸಂಪರ್ಕವಾಗಲಾರದು. ಇದು ವ್ಯಾಸಂಗದ ಸಮಯದಲ್ಲಿ ನನ್ನ ಅನುಭವಕ್ಕೆ ಬಂದು ಕಾಲೇಜು ವಿದ್ಯಾಭ್ಯಾಸ ಮುಂದುವರೆಯುವುದಾದರೆ ಕನ್ನಡ ಮಾಧ್ಯಮದಲ್ಲೇ ಎಂದು ಖಡಾಖಂಡಿತವಾಗಿ ಹೇಳಿದ್ದರಿಂದ ಪರಿಸ್ಥಿತಿಯನ್ನರಿತ ನನ್ನ ಪತಿ ಪ್ರಾಂಶುಪಾಲರೊಡನೆ ವಿವಾದಕ್ಕೆ ತೊಡಗಬೇಕಾಯಿತು. ಪರಿಣಾಮ ಮಾತ್ರ ಅದ್ಭುತವಾಗಿತ್ತು.

ಶಿಕ್ಷಣ ತಜ್ಞರು ಯಾವುದೇ ಭಾಷೆಯನ್ನು ಮಾಧ್ಯಮವನ್ನಾಗಿ ಮಾಡಿಕೊಳ್ಳಬೇಕಾದರೆ ಆ ಭಾಷೆ ಸುಲಭ ವಿಚಾರದ ತಿಳುವಳಿಕೆ, ನಿಷ್ಕೃಷ್ಟ ಆಲೋಚನೆ, ಸ್ಪಷ್ಟ ಅಭಿವ್ಯಕ್ತಿಗಳಿಗೆ ಸಹಾಯ ಮಾಡಬೇಕೆನ್ನುತ್ತಾರೆ. ಈ ಮೂರು ಉದ್ದೇಶಗಳನ್ನೂ ನಾನು ಮಾಧ್ಯಮಕ್ಕೆ ಆಯ್ಕೆ ಮಾಡಿಕೊಂಡ ಭಾಷೆ ನೆರವೇರಿಸಿದೆ. ನಾನು ಮನೋವಿಜ್ಞಾನ, ಅರ್ಥಶಾಸ್ತ್ರಗಳಲ್ಲಿ ಪಡೆದ ಗರಿಷ್ಠ ಅಂಕಗಳೇ ಇದಕ್ಕೆ ನಿದರ್ಶನ. ಇಂಗ್ಲಿಷ್ ಮಾಧ್ಯಮದಿಂದ ಈ ಗುರಿ ಸಾಧಿಸುವುದು ಸಾಧ್ಯವಿರಲಿಲ್ಲ. ಇದಕ್ಕೆ ಹೃತ್ಪೂರ್ವಕ ಸಹಾಯ ಮಾಡಿದವರು ಸಿಎನ್‌ಎಂ.

ಇದೇ ರೀತಿ ನನ್ನಲ್ಲಿ ಬರವಣಿಗೆಯ ಪ್ರಜ್ಞೆ ಮೂಡಿಸಿದ ಘಟನೆಯೊಂದನ್ನು ಹೇಳಲು ಅಪೇಕ್ಷಿಸುತ್ತೇನೆ. ವಿದ್ಯಾರ್ಥಿಗಳಲ್ಲಿ ಇರುವ ಪ್ರತಿಭೆಯನ್ನು ಅನ್ವೇಷಣೆ ಮಾಡುವುದರಲ್ಲಿ ಮಂಗಳಾ ಸಿದ್ಧಹಸ್ತರು. ನಾನು ಮೊದಲಿನಿಂದಲೂ ಅಂತರ್ಮುಖಿ. ಹಳ್ಳಿಯ ಶಾಲೆಯಲ್ಲಿ ಓದಿದುದರಿಂದ ಪಟ್ಟಣಿಗರೊಂದಿಗೆ ಬೆರೆಯಲು ಕೀಳರಿಮೆ. ಎಷ್ಟೋ ವಿದ್ಯಾರ್ಥಿಗಳಲ್ಲಿ ಈ ಕಾರಣದಿಂದ

ಸುಪ್ತವಾಗಿದ್ದ ಪ್ರತಿಭೆ ಹಾಗೆಯೇ ನಶಿಸಿ ಹೋಗುತ್ತದೆ. ಬೆಳಕಿಗೆ ಬರುವುದೇ ಇಲ್ಲ. ಇಂಥ ವಿದ್ಯಾರ್ಥಿಗಳನ್ನು ಸೂಕ್ಷ್ಮದೃಷ್ಟಿಯಿಂದ ಅವಲೋಕಿಸಿ, ಉತ್ತೇಜಕ ನುಡಿಗಳಿಂದ ಅವರಲ್ಲಿ ಲವಲವಿಕೆ ತುಂಬಿ, ಆತ್ಮವಿಶ್ವಾಸ ಮೂಡಿಸಿ, ಅವರ ಸಾಮರ್ಥ್ಯ ಹೊರಗೆಳೆಯುವುದರಲ್ಲಿ ಪ್ರಾಂಶುಪಾಲರು ನಿಪುಣರು. ಅದಕ್ಕಾಗಿಯೇ ಎನ್‌ಎಂಕೆಆರ್‌ವಿ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿನಿಯರಿಗೆ ಆದ್ಯತೆ ಕೊಡುವ ಕಾಲೇಜು. ಆದರೂ ಇಲ್ಲಿಯ ವಿದ್ಯಾರ್ಥಿನಿಯರು ಶೈಕ್ಷಣಿಕವಾಗಿ ಉನ್ನತಿ ಹೊಂದಿದವರಾಗಿರುತ್ತಾರೆಂಬುದು ಅದು ಪಡೆದ, ಪಡೆಯುತ್ತಿರುವ ರ್‍ಯಾಂಕು, ಷೀಲ್ಡುಗಳ ವಿವಿಧ ಸಂಘ ಸಂಸ್ಥೆಗಳು, ಕಾಲೇಜು-ವಿಶ್ವವಿದ್ಯಾಲಯಗಳು ವ್ಯವಸ್ಥೆಗೊಳಿಸಿದ ಶೈಕ್ಷಣಿಕ, ಸಾಹಿತ್ಯಕ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಪಡೆದ ಬಹುಮಾನಗಳೂ ಸಾಕ್ಷಿಯಾಗಿವೆ.

ನಾನು ಹೇಳಲಿರುವುದು ಇದಕ್ಕೆ ನಿದರ್ಶನವಾಗುತ್ತದೆ. ಒಂದು ದಿನ ತರಗತಿಯಲ್ಲಿದ್ದಾಗ ಬೆಂಗಳೂರು ವಿಶ್ವವಿದ್ಯಾಲಯ ಪ್ರಬಂಧ ಸ್ಪರ್ಧೆಯೊಂದನ್ನೇರ್ಪಡಿಸಿದೆ, ಭಾಗವಹಿಸಲಿಚ್ಛಿಸುವವರು ಹೆಸರು ಕೊಡಿ ಎಂದು ಮೆಮೋ ಬಂದಿತು. ಬೇಡಬೇಡವೆಂದರೂ ಮೇಡಂ ನನ್ನ ಹೆಸರು ಹೇಳಿ 'ನೀನು ಬರಿಯಮ್ಮ. ನಿನಗೆ ಸಾಮರ್ಥ್ಯವಿದೆ' ಎಂದು ಹೆಸರು ಬರೆದೇಬಿಟ್ಟರು. ಅನಿವಾರ್ಯವಾಗಿ ಅವರ ಮಾತಿಗೆ ಎದುರು ಹೇಳಲಾರದೆ ಪ್ರಬಂಧ ರಚನೆಗೆ ಸಿದ್ಧಳಾದೆ. ಆಯ್ಕೆಯ ಸ್ಪರ್ಧೆಯಲ್ಲಿ ಪ್ರಬಂಧ ಆಯ್ಕೆಯಾಯಿತು. 'ಸ್ಪರ್ಧೆಗೆ ಹೋಗಿಬಂದೆ'; ವಿದ್ಯಾರ್ಥಿಗಳ ಸಮಸ್ಯೆಗಳು ಒಂದು ವಿಮರ್ಶಾತ್ಮಕ ವಿಶ್ಲೇಷಣೆ ಎಂಬುದು ಪ್ರಬಂಧದ ವಿಷಯ. ಬಹುಮಾನವು ಬಂದಿತು. ಇದೇ ನಾನು ಬರೆದ ಮೊದಲ ಪ್ರಬಂಧ. ಯುವಭಾರತಿ ಎಂಬುದಾಗಿ ವಿಶ್ವವಿದ್ಯಾಲಯ ಪ್ರಸಾರಾಂಗದಿಂದ ಬಹುಮಾನಿತ ಬರಹಗಳೂ ಪ್ರಕಟವಾಗಿವೆ. ಮುಂದೆ ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದೇನೆ. ರಾಷ್ಟ್ರಮಟ್ಟದ ಪ್ರಬಂಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದೇನೆ. ಆದರೆ ನನ್ನಲ್ಲಿ ಆತ್ಮವಿಶ್ವಾಸ ಮೂಡಿಸಿದ ಈ ಘಟನೆಯನ್ನು ನಾನೆಂದೂ ಮರೆಯಲಾರೆ.

### ಪದವಿ ಪರೀಕ್ಷೆಯೋ ಅಗ್ನಿಪರೀಕ್ಷೆಯೋ –

ಸಿಎನ್‌ಎಂ ವ್ಯವಸ್ಥೆಗೊಳಿಸಿದ ಕನ್ನಡ ಮಾಧ್ಯಮ ತರಗತಿಗಳು ಮೂರು ವರ್ಷಗಳೂ ಚೆನ್ನಾಗಿಯೇ ನಡೆದವು. ಸಂಬಂಧಪಟ್ಟ ವಿಷಯಗಳ ಅಧ್ಯಾಪಕರೂ ಅತ್ಯುತ್ಸಾಹದಿಂದ ಪಾಠ ಮಾಡಿದರು. ಪರೀಕ್ಷೆಯ ಸಮಯವೂ ಆಗಮಿಸಿತು. ಅಂತಿಮ ಬಿ.ಎ. ಮನಃಶಾಸ್ತ್ರ ವಿಷಯದಲ್ಲಿ ಎರಡು ಪತ್ರಿಕೆಗಳು. ಎರಡು ಪತ್ರಿಕೆಗಳಿಗೂ ಪ್ರಾಯೋಗಿಕ ಪರೀಕ್ಷೆ. ಮೊದಲ ಪತ್ರಿಕೆಯ ಪರೀಕ್ಷೆ ಮುಗಿಸಿ ಮನೆಗೆ ಬಂದೆ. ಬೆಂಗಳೂರಿನಲ್ಲೇ ಓದುತ್ತಿದ್ದ ನನ್ನ ಸೋದರ ಮಾವನ ಮಗ ಊರಿನಿಂದ ಬಂದು ಕುಳಿತಿದ್ದ. ಅವನಿಂದ ನನ್ನ ತಾಯಿಗೆ ಕ್ಯಾನ್ಸರ್ ಇರುವುದು ಖಚಿತವೆಂದೂ, ಅದಕ್ಕೆ ತಕ್ಷಣದ ಶಸ್ತ್ರಚಿಕಿತ್ಸೆ ಅವಶ್ಯಕವೆಂದೂ, ಮರುದಿನವೇ ಆಸ್ಪತ್ರೆಗೆ ಸೇರಿಸಲಾಗುವುದೆಂದೂ ತಿಳಿಯಿತು. ನನ್ನ ತಾಯಿ ಆಗ ಧಾರವಾಡದಲ್ಲಿ ನನ್ನ ಸೋದರಮಾವನ ಹತ್ತಿರವಿದ್ದರು. ಮಾವನಿಗೂ ಆರೋಗ್ಯ ಸರಿಯಿರದಿದ್ದ ಕಾರಣ ನಾನು ನನ್ನ ತಾಯಿಯನ್ನು ನೋಡಿಕೊಳ್ಳಲು ಊರಿಗೆ ಹೋಗಲೇ ಬೇಕಾಗಿತ್ತು. ಆದರೆ ಪರೀಕ್ಷೆಯ ಸಮಯ. ನನ್ನದು ವಿಶಿಷ್ಟವಾದ ಸಂದರ್ಭ. ಮರುದಿನ ಪ್ರಾಯೋಗಿಕ ಪರೀಕ್ಷೆಯ ಇನ್ನೊಂದು ಪತ್ರಿಕೆ. ಮನಸ್ಸಿಗೆ

ಬಹಳ ದುಃಖವಾಯಿತು. ಪರೀಕ್ಷೆ ಬೇಡ, ಏನೂಬೇಡ. ಅಮ್ಮನ ಬಳಿಹೋಗಿ ಅವಳನ್ನು ನೋಡಬೇಕೆಂದು ನನ್ನ ಜೀವ ತುಡಿಯಿತು. ಆಗ ನನ್ನ ಯಜಮಾನರು ನನ್ನನ್ನು ಸಾಂತ್ವನಗೊಳಿಸಿ, 'ನಿನ್ನ ಪರವಾಗಿ ನಾನು ಹೋಗಿ ನಿನ್ನ ತಾಯಿಯನ್ನು ನೋಡಿಕೊಳ್ಳುತ್ತೇನೆ. ನೀನು ನಿರಾತಂಕದಿಂದ ಪರೀಕ್ಷೆ ಮುಗಿಸಿಕೊಂಡು ಊರಿಗೆ ಬಾ. ಮೇಲಿಂದ ಮೇಲೆ ವಿಷಯಗಳನ್ನು ನಿನಗೆ ತಿಳಿಸುತ್ತಿರುತ್ತೇನೆ. ನಿನಗಾಗಿ ನಿಮ್ಮ ಮಿಸ್ ವರ್ಷವೆಲ್ಲ ಕಷ್ಟಪಟ್ಟದ್ದು ನೀರಿನಲ್ಲಿ ಹೋಮ ಮಾಡಿದಂತಾಗಬಾರದು' ಎಂದರು. ಪುಟ್ಟೀ ನಾನು ಬಿದ್ದು ಹೋಗುವ ಮರ. ನೀನು ಬದುಕಿ ಬಾಳಬೇಕಾದವಳು. ನೀನು ಓದಿ ಮುಂದೆ ಬರಬೇಕು. ನಾನು ನಿನ್ನನ್ನು ನೋಡದೆ ಜೀವ ಬಿಡುವುದಿಲ್ಲ. ಆಪರೇಷನ್ ಆದ ನಂತರ ಅಲ್ಲಿಗೇ ಬರುತ್ತೇನೆ. ನೀನು ವಿಚಲಿತಳಾಗದೇ ಪರೀಕ್ಷೆಯನ್ನು ಬರಿ' ಎಂಬ ಸಂದೇಶ ಅಮ್ಮನಿಂದಲೂ ಬಂದಿತು. ನನ್ನ ಮನಸ್ಸಿನ ಯೋಚನೆಯೂ ಅದೇ ದಿಕ್ಕಿನೆಡೆಗೆ ಸಾಗಿತು. ಏಕೈಕ ವಿದ್ಯಾರ್ಥಿನಿಯಾಗಿದ್ದ ನನಗೆ ಕನ್ನಡ ಮಾಧ್ಯಮ ತರಗತಿಗಳನ್ನೇರ್ಪಡಿಸಿದ್ದ ಪ್ರಿನ್ಸಿಪಾಲರ ನಿರೀಕ್ಷೆಯನ್ನು ಹುಸಿಗೊಳಿಸದೆ 'ನಾನು ಈ ತರಗತಿಗಳಿಗೆ ಏರ್ಪಾಟು ಮಾಡಿದ್ದು ವ್ಯರ್ಥವಾಗಲಿಲ್ಲ; ಸಾರ್ಥಕವಾಯಿತು ಅನಿಸುವಂತೆ ಮಾಡಬೇಕು. ಚೆನ್ನಾಗಿ ಅಭ್ಯಾಸಮಾಡಿ ಹೆಚ್ಚು ಅಂಕಗಳನ್ನು ಪಡೆದು ಅವರಿಗೆ ಸಂತೋಷವುಂಟುಮಾಡಬೇಕು ಎಂಬುದೇ ನನ್ನ ಗುರಿಯಾಗಿತ್ತು. ನಾನು ಯಜಮಾನರ ಮಾತಿಗೆ ಒಪ್ಪಿದೆ. ಅವರ ಸಹಕಾರಕ್ಕೇ ಮನಸ್ಸೂ, ಕಣ್ಣು ತುಂಬಿ ಬಂದವು. ೧೭.೫.೧೯೭೮ರಂದು ನನ್ನ ತಾಯಿಗೆ ಆಪರೇಷನ್. ೧೯.೫.೧೯೭೮ರಿಂದ ನನ್ನ ಪರೀಕ್ಷೆಗಳು. ಎರಡು ತಿಂಗಳು ರಜೆ ಹಾಕಿ ಊರಿಗೆ ಹೋಗಿ ತಾಯಿಯ ಆರೈಕೆಯಲ್ಲಿದ್ದ ನನ್ನವರು ನಾನು ಆತಂಕಪಡುತ್ತೇನೆಂದು. ಅದರಿಂದ ಮನಸ್ಸಿನ ಧೃತಿತಪ್ಪಿ ಓದಿಗೆ ಅಡಚಣೆಯಾಗದಿರಲೆಂದು ಆಪರೇಷನ್ ದಿನಾಂಕವನ್ನು ನನಗೆ ತಿಳಿಸಲೇ ಇಲ್ಲ. ನಂತರ ತಾವೇ ಬಂದು ಪತ್ರಿಕೆಗಳು ಹೇಗೆ ಆಗಿವೆಯೆಂದು ವಿಚಾರಿಸಿ, ತಾಯಿಯ ಆರೋಗ್ಯದ ವಿವರಗಳನ್ನೆಲ್ಲ ತಿಳಿಸಿ ಮತ್ತೆ ಊರಿಗೆ ಹೋದರು. ನಾನು ಸಂಪೂರ್ಣವಾಗಿ ಪರೀಕ್ಷೆ ಮುಗಿಸಿಕೊಂಡು ಧಾರವಾಡಕ್ಕೆ ಹೋದಾಗ ಹುಬ್ಬಳ್ಳಿಯ ಕೆಎಂಸಿಯಲ್ಲಿ ಶಸ್ತ್ರಚಿಕಿತ್ಸೆಯ ನಂತರ ವಿಕಿರಣ ಚಿಕಿತ್ಸೆಗಾಗಿ ಅಲ್ಲಿಯ ಮಹದೇವಪ್ಪ ಕ್ಯಾನ್ಸರ್ ಆಸ್ಪತ್ರೆಗೆ ಅಮ್ಮನನ್ನು ಕರೆತರಲಾಗಿತ್ತು. ಕೆಲದಿನಗಳ ಚಿಕಿತ್ಸೆಯ ನಂತರ ಅವರನ್ನು ಮುಂದಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕರೆದುಕೊಂಡು ಬಂದೆವು. ಅಮ್ಮ ಕಿದ್ವಾಯ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಸ್ವಲ್ಪ ಚೇತರಿಸಿಕೊಂಡದ್ದು. ಹಟಮಾರಿ ಕ್ಯಾನ್ಸರಿನ ಮುಂದೆ ಅವಳ ಇಚ್ಛಾಶಕ್ತಿ ಸೋತಿತು. ಮುಂದೆ ನಾನು ಎಂ.ಎ. ಪದವಿ ಪಡೆದ ನಂತರ ಅಮ್ಮ ನಮ್ಮನ್ನು ಬಿಟ್ಟು ಹೋದಳು.

ಈ ಪರಿಸ್ಥಿತಿಯಲ್ಲಿ ನನ್ನಲ್ಲಿ ಧೈರ್ಯ ತುಂಬಿದ್ದು, ಹುರಿದುಂಬಿಸಿದ್ದು ಸಿಎನ್ಎಂ ಅವರ ಸಾಂತ್ವನ, ಪ್ರೀತಿ, ಹಿತನುಡಿ, ಅಂತಃಕರಣಗಳ ಬಲವೇ ಸರಿ.

ನಾನು ಅಂತಿಮ ಬಿ.ಎ. ತರಗತಿಯಲ್ಲಿ ಪಡೆದ ಅಂಕಗಳಿಂದ ಸಂತುಷ್ಟರಾದ ಸಿಎನ್ಎಂ ಒಬ್ಬ ಸಾಮಾನ್ಯ ವಿದ್ಯಾರ್ಥಿನಿಯಾದ ನಮ್ಮ ಮನೆಗೆ ಬಂದು ನನ್ನ ತಾಯಿಯ ಆರೋಗ್ಯ ವಿಚಾರಿಸಿ, ನನ್ನ ಆತಿಥ್ಯವನ್ನು ಸ್ವೀಕರಿಸಿ, ನನ್ನ ಪತಿಯೊಡನೆ ಮಾತನಾಡಿ 'ನಿಮಗೆ ಏನೇ ಸಹಾಯ ಬೇಕಾದರೂ ನಾನು ಮಾಡುತ್ತೇನೆ. ಪರಿಮಳಾಬಾಯಿಯ ವಿದ್ಯಾಭ್ಯಾಸ

ಮುಂದುವರಿಯಲೇಬೇಕು. ಅವಳಲ್ಲಿ ಓದುವ ಸಾಮರ್ಥ್ಯವಿದೆ' ಎಂದು ನಾನು ನನ್ನ ಕೌಟುಂಬಿಕ ಸಮಸ್ಯೆಗಳ ಸವಾಲನ್ನು ಸ್ವೀಕರಿಸಿ ಅದನ್ನೆದುರಿಸಿ ಓದು ಮುಂದುವರಿಸುವಂತೆ ನೋಡಿಕೊಂಡರು.

ನಾನು ಎರಡನೇ ರ್‍ಯಾಂಕ್ ಮತ್ತು ಸುವರ್ಣಪದಕಗಳೊಡನೆ ಸ್ನಾತಕೋತ್ತರ ಪದವಿ ಪಡೆದನಂತರ ತಮ್ಮ ಸಂಸ್ಥೆಯಲ್ಲಿ ಕೆಲಸವನ್ನೂ ಕೊಟ್ಟು, ತಮ್ಮ ವಿಶೇಷ ಪ್ರಯತ್ನದಿಂದ ಖಾಯಂಗೊಳಿಸಿ 'ನನ್ನ ವೃತ್ತಿಜೀವನದ ಪ್ರಗತಿಗೂ ಕಾರಣರಾದರು. ಸಿಎನ್ಎಂ ಅವರ ಒತ್ತಾಸೆಯಿಂದ ಕನ್ನಡ ವಿಭಾಗದಲ್ಲಿ ಪಾರ್ಟ್ ಟೈಮರ್ ಅಧ್ಯಾಪಕಿಯಾಗಿ ವೃತ್ತಿ ಜೀವನವನ್ನು ಪ್ರಾರಂಭಿಸಿದೆ. ಆಗ ಕಾಲೇಜಿನ ದಶಮಾನೋತ್ಸವ ವರ್ಷ. ಸ್ಮರಣ ಸಂಚಿಕೆ ಸುಶೋಭಿತಾ ಸಂಪಾದಕ ಮಂಡಳಿಗೆ ನನ್ನನ್ನೂ ಸೇರಿಸಿ ಕನ್ನಡ ಬರಹಗಳನ್ನು ಸಂಪಾದಿಸುವ ಹೊಣೆಯನ್ನು ಮೇಡಂ ನನಗೆ ವಹಿಸಿದರು. ಅದು ಅವರು ನನಗೆ ನಿಯೋಜಿಸಿದ ಮೊದಲ ಕಾರ್ಯ. ಈ ಕಾರ್ಯವನ್ನು ನಿರ್ವಹಿಸುವಲ್ಲಿ ನಾನು ತೋರಿದ ಶ್ರದ್ಧೆ, ಉತ್ಸಾಹ, ಪ್ರಾಮಾಣಿಕತೆಗಳನ್ನು ಮನಗಂಡು ನನಗೆ ಕಾಲೇಜಿನ ಪತ್ರಿಕೆ 'ಶ್ರುತಿ' ಸಂಪಾದಕತ್ವ, ಅವರ ತಂದೆ ಶ್ರೀ ಸಿ. ನರಸಿಂಹಮೂರ್ತಿಯವರ ಹೆಸರಿನಲ್ಲಿ ನಡೆಸುತ್ತಿದ್ದ 'ಕಲಾಭಾರತಿ' ಸಾಂಸ್ಕೃತಿಕ ಕಾರ್ಯಕ್ರಮ, ಸ್ಪರ್ಧೆಗಳ ನಿರ್ವಹಣೆಯ ಹೊಣೆಯನ್ನೂ ನನಗೆ ವಹಿಸಿದರು. ಕಾಲೇಜಿನಲ್ಲಿ ನಡೆಸಿದ ಹಲವು ವಿಚಾರಗೋಷ್ಠಿ, ಕಮ್ಮಟಗಳ ನಿರ್ವಹಣೆಯನ್ನೂ, ಆ ಮೂಲಕ ಹೊರತಂದ 'ಮಹಿಳಾ ಸಾಹಿತ್ಯ', 'ರಾಜರತ್ನಂ–ರತ್ನನ ಪದಗಳು', 'ಕರ್ನಾಟಕ ಲೇಖಕಿಯರು', – ಈ ಮೊದಲಾದ ಪುಸ್ತಕಗಳನ್ನು ತಮ್ಮೊಡನೆ ಸಂಪಾದಿಸುವ ಕಾರ್ಯವನ್ನೂ ವಹಿಸಿದರು; ಮಾರ್ಗದರ್ಶನವನ್ನೂ ನೀಡಿದರು. ಹೀಗಾಗಿ ನನ್ನ ಅನುಭವದ ಕ್ಷೇತ್ರ ವಿಸ್ತಾರವಾಯಿತು. ವಿನಾಯಕ ವಾಙ್ಮಯ ಟ್ರಸ್ಟ್‌ನ ಸಂಚಾಲಕಿಯಾಗಿದ್ದ ಚಿ. ನ. ಮಂಗಳಾ ಗೋಕಾಕರ 'ಭಾರತ ಸಿಂಧು ರಶ್ಮಿಯ' ಬಗೆಗೆ ವಿಚಾರಗೋಷ್ಠಿಯೊಂದನ್ನು ಏರ್ಪಡಿಸಿ 'ಭಾರತ ಸಿಂಧು ರಶ್ಮಿಯಲ್ಲಿ ಸ್ತ್ರೀ ಪಾತ್ರಗಳು' ಎಂಬ ವಿಷಯವನ್ನು ಕುರಿತು ಪ್ರಬಂಧವನ್ನು ಮಂಡಿಸಬೇಕೆಂದು ನನಗೆ ಆದೇಶ ನೀಡಿದರು. ಸಹಪ್ರಬಂಧ ವಾಚಕರು ಶ್ರೀ ಗೌರೀಶ ಕಾಯ್ಕಿಣಿ, ಎನ್ಕೆ, ವರದರಾಜರಾವ್, ಆರ್‌ಜಿ ಕುಲಕರ್ಣಿ ಮೊದಲಾದ ಘಟಾನುಘಟಿಗಳು. ಶ್ರೀ ಗೋಕಾಕ್ ಅವರೇ ಗೋಷ್ಠಿಯ ಅಧ್ಯಕ್ಷರು. ಅವರೆಲ್ಲರ ಮುಂದೆ ನಾನು 'ಸೂರ್ಯನ ಮುಂದಿನ ಸೊಡರು'. ಅಳುಕಿನಿಂದಲೇ ಪ್ರಬಂಧ ಓದಿದೆ. ನನ್ನ ಪ್ರಬಂಧ ವಾಚನವನ್ನು ಕೇಳಿದ ನಂತರ ಪ್ರೊ. ಜಿ. ವೆಂಕಟಸುಬ್ಬಯ್ಯನವರು 'ಈ ಚಿಕ್ಕವಯಸ್ಸಿನ ಹುಡುಗಿ ಈ ಮಹಾಕಾವ್ಯವನ್ನು ಓದಿ ಅರ್ಥಮಾಡಿಕೊಂಡಿರುವುದೇ ಸಂತೋಷದ ವಿಷಯ' ಎಂದು ನುಡಿದರು. ಅದಕ್ಕೆ ಸ್ವತಃ ಗೋಕಾಕ್ 'ಅವಳ ವಿಷಯ ನಿರೂಪಣೆ ಸಹ ಉತ್ತಮವಾಗಿದೆ (Her presentation was also good) ಎಂದು ಮೆಚ್ಚುಗೆ ವ್ಯಕ್ತಪಡಿಸಿದಾಗ ಪ್ರಬಂಧ ಓಧಿದ ನನಗೂ, ಓದಲು ಆದೇಶ ನೀಡಿದ ನಮ್ಮ ಮಿಸ್‌ಗೂ ಸ್ವರ್ಗಕ್ಕೆ ಮೂರೇ ಗೇಣು.

ಈ ಪ್ರಸಂಗದಿಂದ ನನ್ನ 'ಗೋಷ್ಠಿಗಳಲ್ಲಿ ಪ್ರಬಂಧ ಮಂಡನೆ'ಗೆ ಶ್ರೀಕಾರ ಹಾಕಿದವರು ಸಿಎನ್ಎಂ. ಮುಂದೆ ಸಾಹಿತ್ಯ ಅಕಾಡೆಮಿ, ಸಾಹಿತ್ಯ ಪರಿಷತ್ತು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮೊದಲಾದ ಕಡೆ ಪ್ರಬಂಧ ಮಂಡನೆಗೆ ಅವಕಾಶಗಳು ದೊರೆಯು ವಂತಾಯಿತು. ಅನೇಕ ವೇಳೆ ಗುರುಗಳಾದ ಸಿಎನ್ಎಂ ಅವರೊಡನೆಯೇ ವೇದಿಕೆಯ ಮೇಲೆ ಕುಳಿತುಕೊಂಡು ವಿಚಾರ ಮಂಡಿಸುವ ಸೌಭಾಗ್ಯ ನನ್ನ ಪಾಲಿಗೆ ಒದಗಿಬಂದಿತು.

ತಮ್ಮೊಡನೆ ಸಹಸಂಪಾದಕಿಯನ್ನಾಗಿ ಮಾಡಿಕೊಂಡು ಅನೇಕ ಪುಸ್ತಕಗಳನ್ನು ಹೊರತಂದರು. ಇಬ್ಬರೂ ಹೋಗಿ ರಾತ್ರಿ ಇಡೀ ಪ್ರೆಸ್‌ನಲ್ಲಿ ಕುಳಿತು ಪ್ರಕಟವಾದ ಪುಸ್ತಕಗಳ ಪ್ರೂಫ್ ನೋಡಿದೆವು.

ಸಿಎನ್‌ಎಂ 'ನೀನು ಈಗಾಗಲೇ ಸಾಕಷ್ಟು ಲೇಖನಗಳನ್ನು ಪತ್ರಿಕೆಗಳಿಗೆ, ಸಂಸ್ಮರಣ ಗ್ರಂಥ, ಸಂಭಾವನಾ ಗ್ರಂಥಗಳಿಗೆ, ಸಾಧನೆ, ಲೋಚನ ಮೊದಲಾದ ವಿದ್ವತ್ಪತ್ರಿಕೆಗಳಿಗೆ ಬರೆದಿದ್ದೀಯೆ. ಅನೇಕ ಗೋಷ್ಠಿಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದೀಯೆ. ಅವುಗಳನ್ನೆಲ್ಲ ಸೇರಿಸಿ ಸಂಕಲನ ಗ್ರಂಥವೊಂದನ್ನು ಪ್ರಕಟಿಸಬೇಕೆಂದು ಆಗಾಗ ಹೇಳುತ್ತಿದ್ದರಷ್ಟೇ ಅಲ್ಲದೆ ಕಾಲೇಜಿನ ವತಿಯಿಂದ ಧನಸಹಾಯ ನೀಡಿ 'ಸಂಚಯನ ಎಂಬ ಹೆಸರನ್ನೂ ತಾವೇ ಕೊಟ್ಟು ಪ್ರಕಟಗೊಳಿಸಿದರು. ಈ ಗ್ರಂಥದ ಪ್ರತಿಗಳನ್ನು ಸಾರ್ವಜನಿಕ ಗ್ರಂಥಾಲಯಗಳಿಗೆ ಮಾರಾಟ ಮಾಡುವ ವಿಚಾರದಲ್ಲಿ ಪ್ರಾಂಶುಪಾಲರ ಸಹಿ ಬೇಕಾದಾಗ (ಪ್ರಕಾಶಕರ ಪರವಾಗಿ) ನಿವೃತ್ತಿ ಹೊಂದಿದ್ದರೂ, ಅನಾರೋಗ್ಯ ಪೀಡಿತರಾಗಿದ್ದರೂ ಹೊರಗೆ ಆಟೋನಲ್ಲೇ ಕುಳಿತು, 'ಪುಸ್ತಕ ಪ್ರಕಟವಾದ ಸಮಯದಲ್ಲಿ ನಾನು ಪ್ರಾಂಶುಪಾಲಳಾಗಿದ್ದೆ. ನಿನಗೆ ನಾನು ಸಹಿಮಾಡಿ ಕೊಡುತ್ತೇನೆ ಎಂದು ಖಾಲಿ ಹಾಳೆಯಲ್ಲಿ ಸಹಿಮಾಡಿ ಕೊಡುವಂಥ ವಿಶ್ವಾಸವನ್ನು ನನ್ನಲ್ಲಿ ತೋರಿಸಿದರು. ಹೀಗೆ ಪ್ರಥಮ ಪುಸ್ತಕವನ್ನು ಪ್ರಕಟಮಾಡಿ ನನ್ನನ್ನು ಲೇಖಕಿಯನ್ನಾಗಿಯೂ ಮಾಡಿದರು. 'ಕರ್ನಾಟಕ ಲೇಖಕಿಯರು' ಗ್ರಂಥದಲ್ಲಿ ನನ್ನ ಹೆಸರು ದಾಖಲೆಯೂ ಆಯಿತು.

ಸಿಎನ್‌ಎಂ ಅವರಿಗೆ ನಾನು ಪಿಎಚ್.ಡಿ. ಮಾಡಬೇಕೆಂಬುದಾಗಿ ಬಹಳ ಆಸೆಯಿತ್ತು. 'ನಾನು ನಿನಗೆ ರಜೆ ಕೊಡಿಸುತ್ತೇನೆ. ಮಧುರೆ ವಿಶ್ವವಿದ್ಯಾಲಯಕ್ಕೆ ಹೋಗಿ ತಿರುಮಲಾಂಬಾ ಅವರನ್ನು ಕುರಿತು ಸಂಶೋಧನೆ ಮಾಡು. ಅವರು ತಮಿಳುನಾಡಿನ ಮಹಿಳೆಯೂ ಹೌದು. ಕನ್ನಡ ಬರಹಗಾರ್ತಿಯೂ ಹೌದು. ಅವರು ನಿನ್ನ ಸಂಶೋಧನೆಗೆ ಒಳ್ಳೆಯ ವಸ್ತುವಾಗಬಲ್ಲರು' ಎಂದು ಬಹಳ ಹೇಳಿದರು. ಆದರೆ ನನ್ನ ಸಾಂಸಾರಿಕ ಕಾರಣಗಳಿಂದ ಎರಡು ವರ್ಷಗಳ ಕಾಲ ಕುಟುಂಬದಿಂದ ಹೊರಗೆ ಉಳಿಯುವುದು ಸಾಧ್ಯವಾಗದಿದ್ದ ಕಾರಣ ಆ ವಿಷಯವನ್ನು ತೆಗೆದುಕೊಂಡು ಸಂಶೋಧನೆ ಮಾಡಲು ಸಾಧ್ಯವಾಗಲಿಲ್ಲ. ಆದರೆ ನನ್ನೊಡನೆ ಕುಳಿತು ಚರ್ಚಿಸಿ ನನಗೆ ಸೂಕ್ತವಾದ ವಿಷಯವನ್ನು ಸಂಶೋಧನೆಗೆ ಆಯ್ಕೆ ಮಾಡಿಕೊಟ್ಟ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ ಮಾರ್ಗದರ್ಶನ ದೊರಕಿದಾಗ ನಿನ್ನ ವಿಷಯಕ್ಕೇ ('ಕನ್ನಡ ಭಾಗವತ ಕಥಾ ಕಾವ್ಯಗಳು–ಒಂದು ತೌಲನಿಕ ಅಧ್ಯಯನ') ಸಮರ್ಥ ಮಾರ್ಗದರ್ಶನ. ಶೀಘ್ರವಾಗಿ ಪಿಎಚ್.ಡಿ. ದೊರಕಲಿ ಎಂದು ಹಾರೈಸಿದರು. ಅಧ್ಯಯನಕ್ಕೆ ಬೇಕಾಗಬಹುದಾದ ಪುಸ್ತಕಗಳ ರಾಶಿಯನ್ನೇ ಉಡುಗೊರೆಯಾಗಿ ನೀಡಿದರು. ಅವು ಮೂರು ಬೀರು ಪುಸ್ತಕಗಳಾಗಿವೆ. ಸಿಎನ್‌ಎಂ ಲೈಬ್ರರಿ ಎಂದೇ ಈ ಗ್ರಂಥರಾಶಿಗೆ ನಾಮಕರಣ ಮಾಡಿದ್ದೇನೆ. ಅವರು ಇಷ್ಟು ಆಸೆಪಟ್ಟ ಡಾಕ್ಟರೇಟ್ ನನಗೆ ಲಭಿಸುವ ವೇಳೆಗೆ ಅವರನ್ನು ಕಳೆದುಕೊಂಡ ದುಃಖ. (೩೦.೫.೯೭) ನನ್ನನ್ನು ಬಹಳವಾಗಿ ಕಾಡಿತು.

ನನ್ನ ವಿದ್ಯಾರ್ಥಿ ಜೀವನದ ಐದು ವರ್ಷಗಳು, ವೃತ್ತಿ ಜೀವನದ ಹದಿನಾರು ವರ್ಷಗಳು ಸಿಎನ್‌ಎಂ ಅವರೊಂದಿಗಿನ ಒಡನಾಟದಲ್ಲಿ ನಮ್ಮ ಗುರುಶಿಷ್ಯ ಸಂಬಂಧ ಅತ್ಯಂತ ಗಾಢವಾಗಿ ಆಪ್ತವಾಗಿತ್ತು. ನನ್ನ ಗೆಳತಿಯರು ಕೆಲವರು ನನ್ನನ್ನು ಸಿಎನ್‌ಎಂ ಅವರ 'ದತ್ತುಪುತ್ರಿ' ಎಂದೇ

ಕರೆಯುತ್ತಿದ್ದರು. ನನ್ನ ವಿದ್ಯಾರ್ಥಿ, ವೃತ್ತಿಜೀವನದಲ್ಲಷ್ಟೇ ಅಲ್ಲದೆ ಅವರ ಅಂತಃಕರಣದ ಅಮೃತಸಿಂಚನ ನನ್ನ ಕೌಟುಂಬಿಕ ಜೀವನದ ಮೇಲೂ ಆಯಿತು. ಬಿಡುವಿದ್ದಾಗ ಮನೆಗೆ ಬಂದು ಹೋಗುವ ಆತ್ಮೀಯತೆ ಬೆಳೆದಿತ್ತು. ನಮ್ಮ ಜೊತೆಗೆ ನಾನು ಮಾಡಿದ ಅಡುಗೆ ತಿಂಡಿಗಳನ್ನು ಸವಿದು ಸಂತೋಷಪಡುತ್ತಿದ್ದರು. ನನಗಾಗಿ ನನ್ನ ಮಗಳಿಗಾಗಿ ಅನೇಕ ಉಡುಗೊರೆಗಳನ್ನು ನೀಡುತ್ತಿದ್ದರು. ಅವರು ವಿದೇಶಕ್ಕೆ ಹೋದಾಗ ತಂದುಕೊಟ್ಟ ಕೈಗಡಿಯಾರ, ಕಾಶಿಗೆ ಹೋದಾಗ ತಂದುಕೊಟ್ಟ ಬನಾರಸ್ ಸೀರೆ, ದೆಹಲಿಗೆ ಹೋದಾಗ ತಂದುಕೊಟ್ಟ ಶಾಲು, ಮಗಳಿಗಾಗಿ ತಂದುಕೊಟ್ಟ ಬೊಂಬೆಗಳು ಈಗಲೂ ನನ್ನ ಬಳಿ ಸುರಕ್ಷಿತವಾಗಿವೆ. ಅವೆಲ್ಲ ನನ್ನ ಜೀವನದಲ್ಲಿ ದೊರೆತ ಅಮೂಲ್ಯ ವಸ್ತುಗಳು. ಅವುಗಳನ್ನು ನನ್ನ ಜೀವನದ ಕೊನೆಯವರೆಗೂ ಕಾಪಾಡಿಕೊಳ್ಳುತ್ತೇನೆ. ಅಂತೆಯೇ ನಾನು ಅವರಿಗೆ ಕೊಟ್ಟ ಅಲ್ಪ ಕಾಣಿಕೆಯನ್ನು 'ಇದು ನನ್ನ ಆಸ್ತಿ. ನಾನಿದನ್ನು ಜತನವಾಗಿಟ್ಟುಕೊಳ್ಳುತ್ತೇನೆ' ಎಂಬುದಾಗಿ ಹೇಳಿ ನನ್ನ ಪ್ರೀತಿಯನ್ನೂ ಸಹ ಗೌರವಿಸುತ್ತಿದ್ದರು.

'ನಿನ್ನನ್ನೂ ಸುವರ್ಣನನ್ನೂ ನನ್ನ ಮಕ್ಕಳೆಂದೇ ಭಾವಿಸಿದ್ದೇನೆ' ಎನ್ನುತ್ತಿದ್ದ ಸಿಎನ್ಎಂ ಬಹಳ ದಿನ ಮಕ್ಕಳಿರದಿದ್ದ ನನ್ನೆದುರು ಅತ್ಯಂತ ಕಳಕಳಿಯಿಂದ 'ನಿನಗೊಂದು ಮಗು ಆಗಬೇಕು, ಸುವರ್ಣನಿಗೆ ಮದುವೆಯಾಗಬೇಕು (ಅವರ ಇನ್ನೊಬ್ಬ ಶಿಷ್ಯೆ ಸಹೋದ್ಯೋಗಿ) ಎಂಬ ಅಪೇಕ್ಷೆಯಿದೆ ಎಂದು ಆಗಾಗ ಹೇಳುತ್ತಿದ್ದರು.

ನನ್ನ ಮೊದಲ ಮಗು ಮರಣ ಹೊಂದಿದಾಗ ಸಹಾಯ ನೀಡಲು ಸಾಧ್ಯವಾಗದುದಕ್ಕೆ ಪೇಚಾಡಿಕೊಂಡರು. 'ಬೆಂಗಳೂರು ಬಂದ್' ಕಾರಣದಿಂದ ನ್ಯೂಮೋನಿಯಾದಿಂದ ನರಳುತ್ತಿದ್ದ ಮಗುವನ್ನು ಸುರಕ್ಷಿತ ಅವಧಿಯೊಳಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಲು ವಾಹನದ ಅನುಕೂಲವಾಗಲಿಲ್ಲ. ಅವರ ಬಳಿ ಇದ್ದ ಕಾರಿಗಾಗಿ ನಾನು ಅವರನ್ನು ಸಂಪರ್ಕಿಸಲು ಸಾಧ್ಯವಾಗಿದ್ದರೆ ಮಗು ಉಳಿಯುತ್ತಿತ್ತೇನೋ ಎಂಬ ಕಳಕಳಿ ಆ ವಾತ್ಸಲ್ಯಮಯಿ ತಾಯಿಗೆ–

ನನಗೆ ಎರಡನೇ ಮಗಳು ಹುಟ್ಟಿದಾಗ ಅನೇಕ ವಿಧದಲ್ಲಿ ಸಹಾಯ ಮಾಡಿದರು. 'ಶ್ರೀರಕ್ಷಾ' ಎಂದು ಅವರೇ ಸಂಭ್ರಮದಿಂದ ಹೆಸರನ್ನು ಆಯ್ಕೆಮಾಡಿ, 'ಈ ಹೆಸರಿನಿಂದ ಬೆಳೆದು ಅವಳು ಖ್ಯಾತಿ ಗಳಿಸಲಿ' ಎಂದು ಹಾರೈಸಿದರು. ಒಂದು ವರ್ಷಕಾಲ ರಜೆ ನೀಡಿದರು. ಅವಳಿಂದ 'ಅಜ್ಜಿ' ಎನ್ನಿಸಿಕೊಂಡು ಸಂತೋಷಪಟ್ಟರು. ಅವಳು ಈಗಲೂ 'ಮಂಗಜ್ಜಿ'ಯನ್ನು ನೆನೆಸಿಕೊಳ್ಳುತ್ತಿರುತ್ತಾಳೆ.

ಹೀಗೆ ನನ್ನ ವಿದ್ಯಾರ್ಥಿ ಜೀವನ, ವೃತ್ತಿಜೀವನ, ಕೌಟುಂಬಿಕ ಜೀವನದ ಉನ್ನತಿಯಲ್ಲಿ ಪ್ರಮುಖ ಪಾತ್ರವಹಿಸಿದ ಸಿಎನ್ಎಂ ಬೆಳಿಗ್ಗೆ ಎದ್ದೊಡನೆ ಸಂಜೆ ದೀಪ ಬೆಳಗುವಾಗ ಮಾತ್ರವಲ್ಲದೆ ಸದಾಕಾಲ ನೆನೆಯುವಂತೆ ಮನದಲ್ಲಿ ಮನೆಮಾಡಿರುವರು.

ಹೆತ್ತಮ್ಮನಂತೆ ಪ್ರೀತಿಸಿ, ನನ್ನಲ್ಲಿ ಆತ್ಮವಿಶ್ವಾಸವನ್ನೂ, ಕರ್ತವ್ಯ ಪ್ರೀತಿಯನ್ನೂ ಕಾರ್ಯಶ್ರದ್ಧೆಯನ್ನೂ ಬೆಳೆಸಿ, ನನ್ನೆಲ್ಲ ಅಭ್ಯುದಯಯಕ್ಕೂ ಕಾರಣಕರ್ತೃವಾದ, ನನ್ನ ವ್ಯಕ್ತಿತ್ವದ ರೂವಾರಿಯಾದ ಶಿಷ್ಯವತ್ಸಲೆ, ಶ್ರೀಗುರು ಚಿ.ನ.ಮಂಗಳಾರವರ ಪ್ರೀತಿಗೆ ಪ್ರತಿಯಾಗಿ ಕೊಡಲು ನನಗೆ ಸಾಧ್ಯವಾದದ್ದು ತೀವ್ರವಾಗಿ, ಅವರ ನೆನಪಾದಾಗ ಉದುರುವ ಎರಡು ಕಣ್ಣೀರಿನ ಹನಿಗಳನ್ನು ಮಾತ್ರ. ❖

# ನನ್ನ ಗಾನಗುರು

## (ಗಾನಕಲಾಭೂಷಣ ಆರ್.ಕೆ. ಪದ್ಮನಾಭ)

● ಕೆ.ವಿ. ಕೃಷ್ಣಪ್ರಸಾದ್

**ಭಾ**ರತೀಯ ಶಾಸ್ತ್ರೀಯ ಸಂಗೀತಕ್ಕೆ ಭದ್ರ ಬುನಾದಿಯೆಂದರೆ, ಸಂಗೀತ ಪ್ರಕಾರಕ್ಕೆ ತಳಹದಿಯಾಗಿರುವ ಸಪ್ತಸ್ವರಗಳು. ಕೇವಲ ೩೩ ಶ್ರುತಿಗಳ ಅಂತರವಿದ್ದರೂ ೨೦ ಲಕ್ಷಕ್ಕೂ ಮೀರಿದ ವೈಶಿಷ್ಟ್ಯಪೂರ್ಣ ರಾಗ ರಾಗಾಂಗಗಳ ಜನನಕ್ಕೆ ತಳಹದಿಯಾಗಿದೆ.

ಸನಾತನ ಪರಂಪರೆಯಲ್ಲಿ ಶಾರದಮ್ಮ ಕೃಷ್ಣ ದೀಕ್ಷಿತರ ಸುಪುತ್ರರಾಗಿ ರುದ್ರಪುರಿಯಲ್ಲಿ ೧೯೪೯ರ ಸೆಪ್ಟೆಂಬರ್ ೨೬ರಂದು ಜನಿಸಿದ ರುದ್ರಪಟ್ಟಣ ಕೃಷ್ಣದೀಕ್ಷಿತ್ ಪದ್ಮನಾಭರವರು ಚಲಿಸುವ ವಿಶ್ವವಿದ್ಯಾನಿಲಯದಂತಿದ್ದಾರೆ. ಇವರ ವ್ಯಕ್ತಿತ್ವವೂ ಸಪ್ತಸ್ವರಗಳ ವಿಸ್ತೀರ್ಣದಂತೆ ಎಂಬುದನ್ನು ನಾನು ಕಂಡುಕೊಂಡಿದ್ದೇನೆ.

**ಷಡ್ಜ – ಸ –** ಗುರುಗಳ ಪಾಠಕ್ರಮ, ಕಬ್ಬಿಣದ ಕಡಲೆಯ ವಿಷಯವನ್ನು ಸರಳೀಕರಿಸಿ ಶಿಷ್ಯರ ಮನಸ್ಸಿನಲ್ಲಿ ಸ್ಥಿರವಾಗಿ ಸ್ಥಾಪಿಸುವಂತಹ ಸೃಜನಶೀಲತೆ.

**ರಿಷಭ – ರಿ –** ರಿಷಭದ ವೈವಿಧ್ಯತೆಯು ಹಾಗೂ ಹಾಗೆಯೆ ಇವರ ಕೃತಿಗಳೂ ವೈವಿಧ್ಯಮಯವಾಗಿದೆ.

**ಗಾಂಧಾರ – ಗ –** ಗಾಂಧಾರ ಹೇಗೆ ಎಲ್ಲರಿಗೂ (ದೇವತೆಗಳಿಗೆ, ಮಾನವರಿಗೆ) ಅತಿ ಪ್ರಿಯವೋ, ಅಂತೆಯೇ ಎಲ್ಲರಿಗೂ ಪ್ರಿಯವಾದ ವ್ಯಕ್ತಿತ್ವ.

**ಮಧ್ಯಮ – ಮ –** ಮಧ್ಯಮ ಹೇಗೆ ಸಪ್ತಕವನ್ನು ಸಮವಾಗಿ ವಿಂಗಡಿಸುವುದೋ, ಅಂತೆಯೇ ಇವರ ಗಾಯನ ಶೈಲಿ ವಿದ್ವಾಂಸ ವಿದ್ಯಾರ್ಥಿಗಳಿಗೆ ಚಿಂತನಾಲಹರಿ. ಸಾಮಾನ್ಯರಿಗೆ ಆನಂದದ ದೀವಟಿಗೆ.

**ಪಂಚಮ – ಪ –** ಪಂಚಮದ ಸ್ಥಾನ ಹೇಗೆ ಸ್ಥಿರವೋ ಅಂತೆಯೇ ಇವರ ಸಂಘಟನಾ ಕೌಶಲ್ಯ ಸ್ಥಿರವಾದುದು ಮತ್ತು ನಿಖರವಾದುದು.

**ದೈವತ – ದ –** ದೈವೀಕ ಜ್ಞಾನ ಪ್ರತೀಕ, ಇವರ ಮಾತು, ಉಪನ್ಯಾಸಗಳು ಅಷ್ಟೇ ಮಾಣಿಕ್ಯ, ಧಾತು ದೈವೀಕ.

**ನಿಷಾದ** – ನಿ – ನಿಷಾದ ಸ್ವರ ಗಮಕ ಮತ್ತು ಸೃಜನಶೀಲತೆಗೆ ಹೇಗೆ ಅನುಕೂಲ ವಾಗಿದೆಯೋ ಅಂತೆಯೇ ಇವರ ಪ್ರವಾಸಗಳು ಮತ್ತು ಸಾಧನೆಗಳು ಸೃಜನಶೀಲತೆಯಿಂದ ಕೂಡಿರುತ್ತವೆ.

ಕರ್ನಾಟಕ ಶಾಸ್ತ್ರೀಯ ಸಂಗೀತದ ಪರಂಪರೆಯಲ್ಲಿ, ಮಾನವನ ವ್ಯಕ್ತಿತ್ವ ವಿಕಸನಕ್ಕೆ ಬಹಳಷ್ಟು ಗಮನಹರಿಸಿದಂತವರು ಹರಿದಾಸರು. ಈ ಹರಿದಾಸ ಪರಂಪರೆಯಲ್ಲಿ ಸುಮಾರು ೧೨೦ ವರುಷಗಳ ಕಾಲ ಸಾರ್ಥಕ ಬದುಕನ್ನು ಸಂಗೀತಕ್ಕಾಗಿಯೇ ಮುಡುಪಾಗಿಟ್ಟಂತಹ ಸೋಂದಾಮಠದ ಯತಿಶ್ರೇಷ್ಠರಾಗಿದ್ದ ಶ್ರೀ ವಾದಿರಾಜತೀರ್ಥರು ೧೫ನೇ ಶತಮಾನದಲ್ಲಿದ್ದ ಶ್ರೀಗಳವರು ಕನ್ನಡ, ಸಂಸ್ಕೃತ, ತುಳು ಭಾಷೆಗಳಲ್ಲಿ ಅನೇಕ ಪವಿತ್ರ ಉದ್ಗ್ರಂಥಗಳನ್ನೂ, ಹರಿನಾಮ ಸಂಕೀರ್ತನೆ, ಶೃಂಗಾರ ಸಾಹಿತ್ಯ ಮುಂತಾದ ಪ್ರಕಾರಗಳನ್ನು ಸಮಾಜಕ್ಕೆ ಕೊಡುಗೆ ಯಾಗಿ ನೀಡಿದ್ದಾರೆ. ೨೧ನೇ ಶತಮಾನದಲ್ಲಿ ಇಂತಹ ಯತಿಶ್ರೇಷ್ಠರ ಮಾನಸಪುತ್ರರಂತೆಯೇ ಆಗಿರುವ ನಮ್ಮ ಸಂಗೀತ ಕ್ಷೇತ್ರದ ಸಿದ್ಧ ಪುರುಷರಂತಿರುವ ಅಭಿನವ ಹರಿದಾಸರಾಗಿರುವ ಗಾನಕಲಾಭೂಷಣ ವಿದ್ವಾನ್॥ ಆರ್.ಕೆ. ಪದ್ಮನಾಭ ಅವರು ನನ್ನ ಗುರುಗಳು. ಇವರನ್ನು ನೆನೆದಾಗಲೆಲ್ಲ ನನ್ನ ಮನಸ್ಸಿನಲ್ಲಿ ಮರುಕ್ಷಣವೇ ಬರುವಂತಹ ಕೃತಿಯೆಂದರೆ "ತಾಳುವಿಕೆಗಿಂತ ಅನ್ಯ ತಪವು ಇಲ್ಲ" ಎಂಬ ವಾದಿರಾಜರ ಕೃತಿ. ಈ ಸಾಲು ಬಹಳ ಪರಿಚಿತವಾದಂತಹ ಸಾಲಾದರೂ, ಅನುಷ್ಠಾನವು ಕಬ್ಬಿಣದ ಕಡಲೆಯಂತೆ. ಸಂಗೀತ ಶಿಬಿರಕ್ಕಾಗಿ ರಾಮನಾಥಪುರಕ್ಕೆ ಹೋದ ಸಂದರ್ಭದಲ್ಲಿ. ಹೊಳೆ ದಡದಲ್ಲಿ ಕುಳಿತ್ತಿದ್ದಂತಹ ಸಂದರ್ಭ. ಸೂರ್ಯಾಸ್ತಮದ ಸಮಯ. ಸುತ್ತಲೂ ರಮಣೀಯ ವಾತಾವರಣ ತಣ್ಣನೆಯ ಗಾಳಿ ಶ್ರುತಿಯಂತೆ ಬೀಸುತ್ತಿದ್ದಂತೆ, ಗುರುಗಳ ಕಂಚಿನ ಕಂಠದಿಂದ ಹೊರಹೊಮ್ಮಿದ ರಾಗ ಕಾಪಿ, ಕಾವೇರಿಯ ತೀರದಲ್ಲಿ ಕುಳಿತಿದ್ದ ನಮಗೆ ಅಂದು ಆದ ಅನುಭವ ಅವಿಸ್ಮರಣೀಯ. ಆ ರಾಗದ ವಿಸ್ತೀರಣತೆಯ ಅಲೆಗಳು, ಹೊಳೆಯ ನೀರನ್ನು ಕೈ ಬೀಸಿ ಮೆಲ್ಲನೆ ಕರೆಯುವಂತಿತ್ತು. ಒಂದು ಮನೋಹರವಾದ ರಾಗ ಆಲಾಪನೆಯ ನಂತರ, ಗುರುಗಳು ನಮಗೆ ಪಾಠ ಮಾಡಿದ ಕೃತಿಯು. "ತಾಳುವಿಕೆಗಿಂತ ತಪವು ಇಲ್ಲ". ತಂಬೂರಿಗೆ ನಾಲ್ಕು ತಂತಿಗಳೂ ಹೇಗೆ ಅವಶ್ಯಕವೋ ಹಾಗೆ ನಮ್ಮ ಜೀವನಕ್ಕೆ ಅಷ್ಟೇ ಮುಖ್ಯವಾಗಿರುವ ನಾಲ್ಕು ತತ್ತ್ವಗಳನ್ನು ಅಂದು ಗುರುಗಳು ಬೋಧಿಸಿದರು. ಅವು

**"ದುಷ್ಟ ಮನುಜರು ಪೇಳ್ವ ನಿಷ್ಠುರದ ನುಡಿ ತಾಳು**
**ಕಷ್ಟ ಬಂದರೆ ತಾಳು ಕಂಗೆಡದೆ ತಾಳು**
**ಅಕ್ಕಸವ ಮಾಡುವರ ಅಕ್ಕರದಿ ತಾಳು**
**ನೆಟ್ಟ ಸಸಿ ಫಲ ಬರುವತನಕ ಶಾಂತಿಯ ತಾಳು".**

ಈ ಸಂಪೂರ್ಣ ವೇದಾಂತದ ಸಾರವನ್ನು ತಮ್ಮ ಜೀವನದ ಧ್ಯೇಯ ಹಾಗೂ ಉಸಿರಾಗಿ ಇಟ್ಟುಕೊಂಡಿರುವುದರಿಂದಲೇ, ಸಂಗೀತ ಕ್ಷೇತ್ರದಲ್ಲಿ ಇವರು "ನಾದತಪಸ್ವಿ" ಎನಿಸಿದ್ದು, ಇವರ ಸಹೃದಯತೆ, ವಿನಯ, ವಿಶ್ವಾಸ ಮನೋಭಾವ ಎಲ್ಲರಿಗೂ ಇವರ ಒಡನಾಟದ ಹಂಬಲವನ್ನು ಉಂಟುಮಾಡುತ್ತದೆ. ಅತ್ಯಂತ ಮುಖ್ಯವಾದುದೆಂದರೆ, ಇವರ ಔಚಿತ್ಯಪ್ರಜ್ಞೆ ಸಂದರ್ಭಕ್ಕೆ ಅನುಗುಣವಾಗಿ ಒಗ್ಗಿಕೊಳ್ಳುವಂತಹ ವ್ಯಕ್ತಿತ್ವ, ವಿದ್ಯಾರ್ಥಿಗಳಿಗೆ ಪಾಠ ಹೇಳುವ ಸಂದರ್ಭದಲ್ಲಿ

ಮಾತ್ರ ಶಿಕ್ಷಕರಂತಿದ್ದು, ಉಳಿದ ಸಂದರ್ಭಗಳಲ್ಲಿ ಒಬ್ಬ ಸ್ನೇಹಿತರಾಗಿ, ಸಮಸ್ಯೆಯ ಸುಳಿಯಲ್ಲಿರುವವರಿಗೆ ಮಾರ್ಗದರ್ಶಕರಾಗಿ, ಸಂಗೀತದ ಕಚೇರಿಯಲ್ಲಿ ಘನ ವಿದ್ವಾಂಸರಾಗಿ, ವಾದಿರಾಜರ ಸಾನ್ನಿಧ್ಯದಲ್ಲಿ ಆದರ್ಶ ವಿದ್ಯಾರ್ಥಿಯಾಗಿ, ಇರುವಂತಹ ಇವರ ಮನಃಸ್ಥಿತಿ ವಿದ್ಯಾರ್ಥಿಗಳಿಗೆ ದಾರಿದೀಪವಾಗಿದೆ.

ಗುರುಗಳ ಮತ್ತೊಂದು ವಿಶೇಷವೆಂದರೆ ಅವರಲ್ಲಿರುವ ಹಾಸ್ಯ ಪ್ರಜ್ಞೆ, ಸಾವಿರಕ್ಕೂ ಹೆಚ್ಚು ಶ್ರೋತೃಗಳನ್ನು ಅವರೆಡೆಗೆ ಆಕರ್ಷಿಸಿ ಆನಂದಿಸುವಂತೆ ಮಾಡುವುದರಿಂದ ಅವರಲ್ಲಿರುವ ಶುದ್ಧವಾದ ಮನಸ್ಸು ಮತ್ತು ತನ್ನವರನ್ನೆಲ್ಲ ಪ್ರಸನ್ನ ಚಿತ್ತರಾಗಿರಿಸಬೇಕೆಂಬ ಹಂಬಲವನ್ನು ವ್ಯಕ್ತಪಡಿಸುತ್ತದೆ. ವ್ಯಕ್ತಿಗಳಲ್ಲಿರುವ ಒಳಿತನ್ನು ಗುರುತಿಸಿ ಅದನ್ನು ಹಲವಾರು ಜನರಿಗೆ ತಿಳಿಸಿ ಹೇಳುವುದರಿಂದ ಅವರು ಹೋದ ಕಡೆಯಲ್ಲೆಲ್ಲಾ ಆಕರ್ಷಣೆಯ ಕೇಂದ್ರ ಬಿಂದುವಾಗಿರುತ್ತಾರೆ. ಶ್ರೀಕೃಷ್ಣನು ಸಂಧಾನದ ಸಮಯದಲ್ಲಿ, ಇಡೀ ಸಭೆಯು ಅವನ ತೇಜಸ್ಸು, ಗಾಂಭೀರ್ಯಕ್ಕೆ ಮಾರುಹೋಗಿ ಎಲ್ಲರೂ ಹೇಗೆ ಎದ್ದು ಗೌರವಿಸುತ್ತಾರೋ, ಹಾಗೆಯೇ ಎಂತಹ ಕ್ಷುಲ್ಲಕ ಭಾವನೆಗಳ ವ್ಯಕ್ತಿಗಳಿದ್ದರೂ, ಇವರ ಪ್ರಭಾವಕ್ಕೆ ಒಳಗಾಗಿ ತಮ್ಮನ್ನು ತಾವು ತಿದ್ದಿಕೊಂಡಿರುವಂತಹ ಸನ್ನಿವೇಶಗಳು ಅನೇಕ. ವೈದಿಕ ಪರಂಪರೆಯವರಾಗಿ ಸಂಗೀತ ಪೂಜೆ ಹಾಗೂ ಸಂಗೀತ ಸಾಧನೆಗಳಲ್ಲೇ ತಮ್ಮ ದೈವಾರಾಧನೆಯನ್ನು ಕಂಡುಕೊಂಡಿದ್ದಾರೆ.

ಗುರುಗಳಲ್ಲಿನ ಮತ್ತೊಂದು ಮುಖ್ಯವಾದ ಅಂಶವೆಂದರೆ, (ನಾವು ವಿದ್ಯಾರ್ಥಿಗಳು ಗಮನಿಸಬೇಕಾದದು) ಅವರು ಎಂದೂ ಸಹಾ ನನಗೆ ಆಯಾಸ, ಸಮಯವಿಲ್ಲ ಎಂದು ಕಾರ್ಯಗಳನ್ನು ಮುಂದೂಡುವುದಿಲ್ಲ. ವಾದಿರಾಜರ ಕೃಪಾಕಟಾಕ್ಷವೋ ಏನೋ ಎಷ್ಟೇ ಕೆಲಸಗಳು, ಕಾರ್ಯಕ್ರಮಗಳ ಒತ್ತಡದಲ್ಲಿದರೂ, ದೇಹಶ್ರಮ ಎಂಬುದೇ ಇಲ್ಲ. ೨೦೦೫ರಲ್ಲಿ "ನ ಭೂತೋ ನ ಭವಿಷ್ಯತಿ" ಎಂಬ ರೀತಿಯಲ್ಲಿ ರುದ್ರಪಟ್ಟಣದಲ್ಲಿ ನಡೆದ ವೇದ ನಾದೋತ್ಸವದಲ್ಲಿ, ಐದು ದಿನಗಳ ಸತತ ಕಾರ್ಯಕ್ರಮ ಆಯೋಜಿತವಾಗಿದ್ದ ಸಂದರ್ಭದಲ್ಲಿ ೨೪ ಗಂಟೆಗಳ ಸತತ ಶಾಸ್ತ್ರೀಯ ಸಂಗೀತ ಗಾಯನದ ದಾಖಲೆಯೂ ಸಹಾ ಅಲ್ಲಿ ಆಗಿತ್ತು. ಆ ಸರಣಿಯಲ್ಲಿ ಅಂತಿಮವಾಗಿ ನಮ್ಮ ಗುರುಗಳ ಸಂಗೀತ ಕಾರ್ಯಕ್ರಮ, ಅದೂ ಮುಂಜಾನೆ ೫ ರಿಂದ ೭ ಗಂಟೆಯವರೆಗೆ. ೪ ದಿನಗಳ ಅವಿರತ ಓಡಾಟ, ಶ್ರಮ ಯಾವುದನ್ನೂ ಲೆಕ್ಕಿಸದೇ, ಅವರು ಸಂಗೀತಕ್ಕಾಗಿ ವೇದಿಕೆಯನ್ನು ಅಲಂಕರಿಸಿದಾಗ ಸಾಕ್ಷಾತ್ ನಾದಬ್ರಹ್ಮನಂತೆ ಭಾಸವಾಗುತ್ತಿದ್ದರು. ಸಹಸ್ರಾರು ಶ್ರೋತೃಗಳ ಮನವನ್ನು ಮುದಗೊಳಿಸಿ ಅವರನ್ನು ಬ್ರಹ್ಮಾನಂದದೆಡೆಗೆ ಸೆಳೆದುಕೊಂಡು ಹೋಗುವಂತಹ ಸಂಗೀತ ಕಚೇರಿಯು ನಡೆಯಿತು. ಇವೆಲ್ಲವೂ ಅವರಲ್ಲಿರುವಂತಹ ಸ್ಥಿತಪ್ರಜ್ಞತೆ, ಮನೋದಾರ್ಢ್ಯತೆ ನಿಶ್ಚಲ ಮನಸ್ಸು ಹಾಗೂ ಸಂಗೀತದ ಮೇಲೆ ಅವರಿಗಿರುವ ನಂಬಿಕೆ, ವಿಶ್ವಾಸವು ನಮಗೆ ವೇದ್ಯವಾಗುತ್ತದೆ.

**ಗುರುಗಳ ಸಂಗೀತ ಪಾಠಕ್ರಮ : (ಷಡ್ಜ ಸ್ವರ – 'ಸ')**

ಭಾರತೀಯ ವೈದಿಕ ಪರಂಪರೆಯಲ್ಲಿ ಹೇಳುವಂತೆ, ವೇದ ಮಂತ್ರಗಳಲ್ಲಿ ಉದಾತ್ತ – ಅನುದಾತ್ತಗಳಿಗಿಂತ ಸ್ವರದ ಪತಣವೇ ಕ್ಲಿಷ್ಟ. ಅಂತೆಯೇ ಸಂಗೀತದಲ್ಲಿ ಷಡ್ಜ ಸ್ವರವನ್ನು

ಶ್ರುತಿಬದ್ಧವಾಗಿ ನಿಖರವಾಗಿ ಹಾಡುವುದು ಸುಲಭ ಸಾಧ್ಯವಾದುದಲ್ಲ. ಅಂದರೆ ನಮ್ಮ ದೈನಂದಿನ ಜೀವನದಲ್ಲಿ ಸರಳವಾಗಿ, ಸುಲಲಿತವಾಗಿ ಯಾವುದೇ ರೀತಿಯ ಲೌಕಿಕಕ್ಕೆ ಒಳಗಾಗದೆ ಬದುಕುವುದು ಕೇವಲ ಸಾಧಕರಿಗೆ, ಮಹಾತ್ಮರಿಗೆ ಮಾತ್ರ ಸಾಧ್ಯ. ಈ ತತ್ತ್ವ ನಮ್ಮ ಗುರುಗಳ ಪಾಠಕ್ರಮದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಯಾವುದೇ ರೀತಿಯ ವಿದ್ವತ್ಪೂರ್ಣವಾದ, ಪ್ರಚಲಿತದಲ್ಲಿಲ್ಲದಿರುವಂತಹ ರಾಗ, ಶ್ರುತಿಗಳಾದರೂ ಸಹಾ ಅದನ್ನು ಸುಲಭ ರೀತಿಯಲ್ಲಿ ಎಲ್ಲರಿಗೂ ಕರತಲಾಮಲಕವಾಗುವಂತೆ ಪಾಠಮಾಡುವ ಸೃಜನಶೀಲತೆ ಇವರದಾಗಿದೆ. ಇವರಿಗೆ ಸಂಗೀತದ ಮೇಲಿರುವ ಆತ್ಮವಿಶ್ವಾಸದ ಸ್ಥಾಯಿ ಯಾವ ತಾರಕ ಮಟ್ಟದಲ್ಲಿ ಬರುವುದೆಂದರೆ, ಯಾವುದೇ ರೀತಿಯ ಶಿಷ್ಯರು ಬಂದರೂ, ಅವರ ಪ್ರಭಾವದಿಂದ ಉತ್ತೇಜಿತರಾಗಿ, ಸಾಧನೆಯ ಮಾರ್ಗದಲ್ಲಿ ಊರ್ಧ್ವಗಾಮಿಗಳನ್ನಾಗಿಸುವಂತಹ ಶಕ್ತಿ ಗುರುಗಳದಾಗಿದೆ. ಕಿರಿಯರಿಂದ ಹಿರಿಯರವರೆಗೂ ಗೋಷ್ಠಿ ಗಾಯನದ ಸೊಬಗನ್ನು, ಮಾಡುವ ಸನ್ನಿವೇಶವು ಅವಿಸ್ಮರಣೀಯ ವಾದುದು ೨೦೦೬ನೇ ಇಸವಿಯಲ್ಲಿ ನಡೆದಂತಹ “ವಾದಿರಾಜ ಗಾನ ಜ್ಞಾನ ಯಜ್ಞ”ದ ಪೂರ್ವಭಾವಿಯಾಗಿ ನಾನಾವರ್ಣದ ಕೃತಿಗಳ ಉಚಿತ ಕಾರ್ಯಾಗಾರವನ್ನು ಆಯೋಜಿಸಿದ್ದರು. ಹಿರಿಯ ವಿದ್ವಾಂಸರ ಪರಿಮಿತಿಗೇ ನಿಲುಕದ ದೀಕ್ಷಿತರ ಅನರ್ಘ್ಯ ರತ್ನವು. ನೂರಕ್ಕೂ ಅಧಿಕ ಕಂಠಗಳಿಂದ, ಒಕ್ಕೊರಳಿನಲ್ಲಿ ಹೊಮ್ಮಿ ಶ್ರೋತೃಗಳ ಮನಸೂರೆಗೊಳ್ಳುವಂತೆ ಮಾಡಿಸುವ ನಾದ ಬ್ರಹ್ಮ ಇವರಲ್ಲಿ ರಾರಾಜಿಸುತ್ತಿದೆ.

ಇವರು ಕೃತಿಗಳಿಗೆ ನೀಡುವ ಸ್ವರಪ್ರಸ್ತಾರ ಅದರಲ್ಲಿರುವ ಕ್ಲಿಷ್ಟ ಸಂಗತಿಗಳ ಸರಳೀಕರಣ, ಬರವಣಿಗೆಯ ಶೈಲಿ, ಸ್ಪಷ್ಟತೆ, ಸೌಂದರ್ಯ ಮತ್ತು ಅನವಶ್ಯಕ ಚಿನ್ಹೆಗಳ ವರ್ಜ್ಯ ಹಾಡುವ ವಿದ್ಯಾರ್ಥಿಗಳಿಗೆ ಅತ್ಯಂತ ಪೂರಕವಾಗಿರುತ್ತದೆ. ಗುರುಗಳ ಸಮಯ ಪ್ರಜ್ಞೆ ಬಹಳ ನಿಖರವಾದುದು. ಅನೇಕ ಬಾರಿ ಗಡಿಯಾರವೇ ತಪ್ಪಿದರೂ, ತಾವು ಹೇಳಿರುವ ಸಮಯಕ್ಕೆ ಅವರ ಉಪಸ್ಥಿತಿ ಶತಃ ಸಿದ್ಧ. ಈ ಶಿಸ್ತನ್ನು ತಮ್ಮ ಶಿಷ್ಯರಲ್ಲೂ ಅಪೇಕ್ಷಿಸುತ್ತಾರೆ. ಪ್ರಯೋಗ ಮಟ್ಟದಲ್ಲಿರುವ ಶಿಷ್ಯರ ಪಾಠದ ಸ್ವಾರಸ್ಯಗಳಂತೂ ನೆನೆದರೆ ಮೈರೋಮಾಂಚನವಾಗುತ್ತದೆ. ಯಾವುದೇ ರೀತಿಯ ಕಟ್ಟುಪಾಡುಗಳಿಲ್ಲದೆ ಕೆಲವು ಬಾರಿ ಊರುಗಳಿಗೆ ಹೋಗುವ ಹಾದಿಯಲ್ಲಿ, ಕಚೇರಿಯ ನಂತರ, ಮುಂಜಾನೆಯ ವಾಯುಸೇವನೆಯ ಸಮಯದಲ್ಲಿ, ದೂರವಾಣಿಯ ಮೂಲಕ, ಹೊಳೆಯ ದಡದಲ್ಲಿ, ಎಲ್ಲೆಂದರಲ್ಲಿ ಸಮಯಾತೀತ ಪಾಠವಾಗಿರುವ ಸನ್ನಿವೇಶಗಳು ಅವಿಸ್ಮರಣೀಯ.

ಗುರುಗಳು ಕೇವಲ ಸಂಗೀತ ಮಾತ್ರವಲ್ಲದೆ ವಿದ್ಯಾರ್ಥಿಯ ಸಂಪೂರ್ಣ ವ್ಯಕ್ತಿತ್ವ ರೂಪಿಸುವಲ್ಲಿ ಆಧುನಿಕ ಶಿಲ್ಪಿಯಾಗಿದ್ದಾರೆ. ಇವರು ಯಾವಾಗಲೂ ಹೇಳುವ ನುಡಿ, “ಸಂಗೀತ ವಿದ್ಯಾರ್ಥಿಗಳು ಸಂಗೀತಕ್ಕಾಗಿ ಹತ್ತು ಹಲವು ವರ್ಷಗಳ ಕಾಲ. ಜೀವವನ್ನು ಗಂಧದ ಕೊರಡಿನಂತೆ ತೇದಾಗ ಸಂಗೀತ ವಾರಿಧಿಯ ದರ್ಶನ ಪಡೆಯುತ್ತೇವೆ” ತಮ್ಮ ಶಿಷ್ಯರು ಕೇವಲ ಸಂಗೀತಗಾರರಷ್ಟೇ ಅಲ್ಲದೆ, ಉಪನ್ಯಾಸಕರಾಗಿ ಸಂಘಟಕರಾಗಿ, ಮನಶಾಸ್ತ್ರಜ್ಞರಾಗಿ ಕ್ರೀಡಾಪಟು ಹಾಗೂ ಲೇಖಕರಾಗಿದ್ದು ಮುಖ್ಯವಾಗಿ ಜ್ಞಾನಸಂಪನ್ನರಾಗಿ, ಸರ್ವಾಭರಣ ಭೂಷಿತ ಪ್ರತಿಮೆಯಂತೆ ಮಿನುಗಬೇಕೆಂಬುದು ಇವರ ಆಶಯ. ಅವರು ನಮಗೆ ತೋರಿಸುವಂತಹ ಪ್ರೀತಿ, ವಿಶ್ವಾಸ

ನಮ್ಮ ತೊಂದರೆಗಳ ಸಮಯದಲ್ಲಿ ಸಾಂತ್ವನ ನೀಡುವ ರೀತಿ, ನಮ್ಮನ್ನು ಸಮಾಜಕ್ಕೆ ಪರಿಚಯಿಸುವ ರೀತಿಯಲ್ಲಿ ಮಾತಾ, ಪಿತೃ ವಾತ್ಸಲ್ಯವು ಗೋಚರವಾಗುತ್ತದೆ. ಇಂತಹ ಗುರುಗಳನ್ನು ಪಡೆದ ನಾವೇ ಧನ್ಯರು.

**ಗುರುಗಳ ಗಾಯನ ಕ್ರಮ ಮತ್ತು ಸಂಗೀತ ಸಾಧನೆಗಳು: (ಮಧ್ಯಮ ಸ್ವರ – 'ಮ')**

ಕರ್ನಾಟಕ ಶಾಸ್ತ್ರೀಯ ಸಂಗೀತ ಪಿತಾಮಹರಾದಂತಹ ಪುರಂದರದಾಸರ ಉಕ್ತಿಯಂತೆ "ಗಾಯನ ಪಾಡಿದವ ಹರಿ ಮೂರ್ತಿ ನೋಡಿದವ" ಅಂತೆಯೇ ಇವರ ಸಂಗೀತ ಭಾನಿ, ಶ್ರೋತೃಗಳ ಮನಸ್ಸನ್ನು ಬೇರೊಂದು ಆನಂದಾಬ್ಧಿಯೆಡೆಗೊಯ್ಯುವುದು. ಇವರ ಗಾಯನದ ವೈದೃಷ್ಯವೆಂದರೆ ಸಂಗೀತದ ವಿದ್ಯಾರ್ಥಿಗಳಿಗೆ ಚಿಂತನಾಲಹರಿಯಾಗಿ, ಶ್ರೋತೃಗಳಿಗೆ ಆನಂದದ ಸಿಂಧುವಾಗಿ ಗೋಚರಿಸುತ್ತದೆ. ಹಲವಾರು ವರುಷಗಳ ಕಾಲ ಏಕಲವ್ಯನಂತೆ ಸಾಧನೆ ಮಾಡಿದರೂ ಸಹಾ, ಅದರ ಲವಲೇಶವೂ ಸಹಾ ಶಿಷ್ಯರಿಗೆ ಅರಿವಾಗುವುದಿಲ್ಲ. ಒಬ್ಬ ಸಂಗೀತದ ವಿದ್ಯಾರ್ಥಿಯಾಗಿ ಅವರ ಸಂಗೀತವನ್ನು ಅಧ್ಯಯನ ಮಾಡಿದರೆ, ಅವರ ಗಾಯನದ ರೀತಿ ಆಲಿಸಲು ಬಹಳ ಸುಶ್ರಾವ್ಯವಾಗಿ, ನಾವು ಹಾಡಲು ಪ್ರಯತ್ನಿಸಿದಾಗ ಅದರ ಆಂತರ್ಯ ಸೂಕ್ಷ್ಮತೆಗಳ ಪರಿಚಯವಾಗುತ್ತದೆ. ಚಿನ್ನಕ್ಕೆ ಪುಟವಿಟ್ಟಂತೆ, ಸಂಸ್ಕರಣದಿಂದ ತುಂಬಿರುವ ಅವರ ಆ ಪುಷ್ಕಳವಾದ, ಗುಡುಗಿನಂತಹ ಶಾರೀರ ಕಿವಿಗೆ ಸೋಂಕಿದಾಕ್ಷಣವೆ ಮೈರೋಮಾಂಚನ ವಾಗುವುದು. ಆ ಶಾರೀರದ ವೈಶಿಷ್ಟ್ಯವೇನೆಂದರೆ ನಮ್ಮ ಸಂಗೀತ ಸಂಪ್ರದಾಯವನ್ನು ಪ್ರತಿಬಿಂಬಿಸುವಂತಹ ತೋಡಿ, ಯದುಕುಲ ಕಾಂಬೋದಿ, ಶಹನ, ಕೇದಾರಗೌಳ, ಧನ್ಯಾಸಿಯಂತಹ ಗಾಂಭೀರ್ಯ ರಾಗಕ್ಕೆ ಹೇಗೆ ಹೊಂದಿಕೊಳ್ಳುವುದೋ ಅಂತೆಯೇ ಬೃಂದಾವನೀ, ಕಾಪಿ ಹಂಸಾನಂದಿ, ಸಿಂಧುಭೈರವಿ ಅಂತಹ ರಾಗಗಳಿಗೆ ಅಷ್ಟೇ ಭಾವಪೂರ್ಣವಾಗಿ ಹೊಂದಿಕೊಳ್ಳುತ್ತದೆ. ತ್ರಿಮೂರ್ತಿಗಳಲ್ಲಿ ಒಬ್ಬರಾದ ಮುತ್ತುಸ್ವಾಮಿ ಸಂಗೀತದ ದೀಕ್ಷಿತರೆಡೆ ಒಲವು ಹೆಚ್ಚಾಗಿರುವ ಕಾರಣ, ಅವರಿಗೆ ಹಿಂದುಸ್ಥಾನಿ ಶೈಲಿಯ ಸಂಗೀತದಲ್ಲೂ ರಾಗವಿಸ್ತೀರ್ಣ ಮಾಡಲು ಅಷ್ಟೇ ಆಪ್ಯಾಯಮಾನವಾದ ಸಂಗತಿಯಾಗಿದೆ. ಒಮ್ಮೆ ಅನನ್ಯ ಸಂಸ್ಥೆಯಲ್ಲಿ ಇವರ ಸಂಗೀತ ಕಚೇರಿ ಏರ್ಪಾಡಾದ ಸಂದರ್ಭದಲ್ಲಿ, ಅಲ್ಲಿನ ಒಬ್ಬ ಅಭಿಮಾನಿ, ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಹಿಂದೂಸ್ತಾನಿಯಷ್ಟು ರಾಗ ವಿಸ್ತೀರ್ಣವಾಗಿ ಏಕೆ ಹಾಡುವುದಿಲ್ಲ? ಎಂದು ಪ್ರಶ್ನಿಸಿದರು. ಆಗ ಇವರ ಕಚೇರಿಯ ಪೂರ್ವಭಾವಿಯಾಗಿ ಒಂದು ಹಿಂದುಸ್ತಾನಿಯ ಕಾರ್ಯಕ್ರಮ ಆಯೋಜಿತವಾಗಿತ್ತು. ಆ ಪ್ರಶ್ನೆ ಕೇಳಿದ ಮರುಕ್ಷಣವೇ, ಗುರುಗಳು ಅವರ ಹಿಂದಿನ ಕಾರ್ಯಕ್ರಮದ ಹಿಂದೂಸ್ತಾನಿ ವಿದ್ವಾಂಸರು ಯಾವ ರಾಗವನ್ನು ವಿಸ್ತೀರ್ಣ ಮಾಡಿದರೆಂದು ಕೇಳಿದಾಗ, ಕಾಪಿ ಎಂಬುದಾಗಿ ತಿಳಿದುಬಂದಿತು. ಅವರು ಮರುಕ್ಷಣವೇ ಕರ್ನಾಟಕ ಪದ್ಧತಿಯಲ್ಲಿ ಕಾಪಿರಾಗದ ಆಲಾಪನೆಯನ್ನು ಪ್ರಾರಂಭಿಸಿದ್ದು, ಪುಂಖಾನುಪುಂಖವಾಗಿ ಆ ರಾಗವನ್ನು ಸುಮಾರು ೪೫ ನಿಮಿಷಗಳ ಕಾಲ ಹಾಡಿ "ಮೀವಲ್ಲ ಗುಣ ದೋಷ ಮೇಮೆ" ಎಂಬ ಕೃತಿಯನ್ನು ಹಾಡಿ ಒಂದೂವರೆ ತಾಸಿನಲ್ಲಿ ಕಾಪಿರಾಗದ ವಿಶ್ವರೂಪ ದರ್ಶನ ಮಾಡಿಸಿದ ನಮ್ಮ ಸಂಗೀತ ಕ್ಷೇತ್ರದ ದಿಗ್ಗಜರಲ್ಲಿ ಅತ್ಯಂತ ಪ್ರಸಿದ್ಧರಾದ ಸಂಗೀತ ಭೀಷ್ಮರಂತಿರುವ ವಿ॥ ಶೆಮ್ಮಂಗುಡಿ ಶ್ರೀನಿವಾಸ ಐಯ್ಯರ್ ಅವರು ಇವರಿಗೆ ಮಾನಸ ಗುರುಗಳು.

ಅವರ ಆ ನಾದಸ್ವರ, ಭಾನಿಯ ರಾಗ ಪೋಣಿಸುವಿಕೆ, ಕೃತಿಯ ವೇಗ, ಸ್ವರ ಪ್ರಸ್ತಾರದ ಸರ್ವಲಘು ಮಾದರಿ, ನೆರವಲ್‌ನ ರಾಗಪೂರ್ಣತೆ, ಇವರ ಸಂಗೀತಕ್ಕೆ ಬಹಳ ಪ್ರಭಾವ ಬೀರಿದೆ. ಕೆಲವು ಬಾರಿ ಅವರ ಅನುಕರಣೆಯನ್ನು ಗುರುಗಳು ಸಂಗೀತ ಸಭೆಗಳಲ್ಲಿ ಮಾಡಿದಾಗ ಉಂಟಾದ ಚಪ್ಪಾಳೆಯ ಸುರಿಮಳೆಯಿಂದ ನನಗೆ ರೋಮಾಂಚನವಾಗುತ್ತಿತ್ತು. ಗುರುಗಳ ಶಾರೀರದ ವರ್ಣೋಚ್ಛಾರಣೆ (Intonation) ಮತ್ತು ಶಾರೀರದ ಪ್ರಮಾಣ ಬದಲಾವಣೆ (Modulation)ಗಳಿಗೆ ಬಹಳ ಒತ್ತು ಕೊಡುತ್ತಾರೆ. ವಿಶೇಷವಾದ ಸಂಗತಿಯೆಂದರೆ, ಕಾರ್ಯಕ್ರಮದ ನಡುವೆ ಎಷ್ಟೇ ಆಯಾಸವಾದರೂ ಒಂದು ಹನಿ ನೀರನ್ನೂ ಸಹಿತ ಸ್ವೀಕರಿಸುವುದಿಲ್ಲ. ಅವರು, 'ವೇದಿಕೆಯು ಸರಸ್ವತಿಯನ್ನು ಆರಾಧಿಸುವ ಪವಿತ್ರವಾದ ಸ್ಥಳ, ನಾನು ನನ್ನ ಪೂಜೆಯ ನಡುವೆ ಏನನ್ನೂ ಸ್ವೀಕರಿಸುವುದಿಲ್ಲ' ಎಂದು ಹೇಳಿದ ವಿಚಾರವು ನನ್ನ ಕಿವಿಯಲ್ಲಿ ಸದಾ ಅನುರಣಿಸುತ್ತಿರುತ್ತದೆ. ೨೦೦೬ನೇ ಇಸವಿಯಲ್ಲಿ ಬಸವಾಪಟ್ಟಣದಲ್ಲಿ ಶ್ರೀರಾಮನವಮಿ ಕಾರ್ಯಕ್ರಮ ಆಯೋಜಿತವಾಗಿತ್ತು. ಕನಸಿನಲ್ಲಿಯೂ ಸಹ ಊಹಿಸಲು ಸಾಧ್ಯವಾಗದಂತೆ ಸುಮಾರು ಆರುವರೆ ತಾಸುಗಳ ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸುವ ಪುಣ್ಯ ನನ್ನದಾಗಿತ್ತು.

ಕೇವಲ ಹಿಂದೋಳ ರಾಗವನ್ನು ರಾಗ ತಾನ ಪಲ್ಲವಿಯಂತೆ ಹಾಡಿ, ಎರಡೂವರೆ ತಾಸು ಶ್ರೋತೃಗಳನ್ನು ತಮ್ಮ ಸಂಗೀತದಿಂದ ಮಂತ್ರಮುಗ್ಧರನ್ನಾಗಿಸಿದರು. ಇವರು ಯಾರೂ ಹಾಡದಂತಹ ವಿಶಿಷ್ಟ ತಾನ ಪ್ರಕಾರಗಳನ್ನು ತಿಟ್ಟೆ ಕೃಷ್ಣ ಐಯ್ಯಂಗಾರ್‌ರವರ ಬಳಿ ಅಧ್ಯಯನ ಮಾಡಿ ವಿಶೇಷ ಸಿದ್ಧಿಯನ್ನು ಪಡೆದಿರುತ್ತಾರೆ. ಘಂಟಾ ತಾನ, ಶಂಖತಾನ, ನಾಭಿ ತಾನ, ಮರ್ಕಟ ತಾನ, ಮಯೂರ ತಾನ, ಚಕ್ರತಾನ, ಅಶ್ವತಾನ, ಕುಕ್ಕುಟ ತಾನ, ಇವರ ತ್ರಿಸ್ಥಾಯಿ ಸಂಚಾರ ಉಳ್ಳ, ಮಂದ್ರ ತುಂಬಿದ ಕಂಠದಿಂದ ಹೊರಹೊಮ್ಮಿದಾಗ, ಶ್ರೋತೃಗಳನ್ನು ಸಂಗೀತದಿಂದ ಹುಚ್ಚೆಬ್ಬಿಸಿರುವಂತಹ ಸನ್ನಿವೇಶಗಳು ಅಸಂಖ್ಯಾತವಾಗಿವೆ.

ಇವರು ರಾಗಮಾಲಿಕೆಯಲ್ಲಿ ಶ್ಲೋಕ ಮತ್ತು ಉಗಾಭೋಗಗಳನ್ನು ಹಾಡುವ ಸಂಗೀತ ಪರಂಪರೆಯ ವಿದ್ವಾಂಸರಲ್ಲಿ ಅಗ್ರಗಣ್ಯರು. ನನಗೆ ಜ್ಞಾಪಕವಿರುವಂತೆ ಒಂದು ಕಾರ್ಯಕ್ರಮದಲ್ಲಿ ಸುಮಾರು ೬೪ ರಾಗಗಳನ್ನು ರಾಗಮಾಲಿಕೆಯಲ್ಲಿ ಮನಮೋಹಕವಾಗಿ ಹಾಡಿದ್ದಾರೆ. ಅತಿ ಸೂಕ್ಷ್ಮ ವ್ಯತ್ಯಾಸವಿರುವಂತಹ ರಾಗಗಳನ್ನು (ಆನಂದಭೈರವಿ – ರೀತಿಗಳ, ನಾಯಕೀ-ದರ್ಬಾರು, ತೋಡಿ–ಭೈರವಿ) ಏಕಕಾಲದಲ್ಲಿ ವ್ಯತ್ಯಾಸ ತೋರುವಂತೆ ಹಾಡುವುದರಲ್ಲಿ ನಿಸ್ಸೀಮರು.

ಯಾವುದೇ ರೀತಿಯ ಕಾರ್ಯಕ್ರಮ ಬಂದರೂ ಅವರ ಪೂರ್ವಸಿದ್ಧತೆ, ವಿಧಿವತ್ತಾಗಿ ಅರ್ಪಿಸುವ ರೀತಿ. ಅದರ ಸಾಹಿತ್ಯದ ಚಿಂತನೆ ಮತ್ತು ಸಂದರ್ಭೋಚಿತವಾಗಿ ಕೃತಿಗಳ ಆಯ್ಕೆ, ಪಲ್ಲವಿಗಳ ರಚನೆ, ಪಕ್ಕವಾದ್ಯಗಳ ನಿರ್ವಹಣಾಕ್ರಮ, ಶ್ರೋತೃಗಳೊಡನೆ ಪ್ರತಿಕ್ರಿಯೆ, ಕೃತಿಗಳ ಸಂದೇಶ ಹೇಳುವ ಪರಿಪಾಠ ಮತ್ತು ಸಂಗೀತದತ್ತ ಇರುವ ಏಕಾಗ್ರತೆ. ಇವೆಲ್ಲವು ಇವರನ್ನು ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಉತ್ತುಂಗಕ್ಕೆ ಏರಿಸಿ ಶತಕೋಟಿಭಾಸ್ಕರನಂತೆ ಪ್ರಜ್ವಲಿಸುವಂತೆ ಮಾಡಿದೆ.

"ತಂಬೂರಿ ಮೀಟಿದವ ಭವಾಬ್ಧಿ ದಾಟಿದವ" ಎಂಬಂತೆ ಗುರುಗಳ ಹಿಂಭಾಗದಲ್ಲಿ ತಂಬೂರಿ ಮೀಟಲು ಕುಳಿತಂತಹ ನನಗೆ ಒಂದೊಂದು ಕಚೇರಿಯೂ ಅಪರಿಮಿತವಾದ ಅನುಭವದ ಬುತ್ತಿಯಾಗಿದೆ.

**ಗುರುಗಳ ಸಂಘಟನಾ ಕುಶಲತೆ : (ಪಂಚಮ ಸ್ವರ 'ಪ')**

ನವೆಂಬರ್ ೧೯೯೯ರಲ್ಲಿ ಅಕ್ಷಯನಗರದಲ್ಲಿ ನಿರ್ಮಿತವಾಗಿರುವ "ಶ್ರೀಮದ್ವಾದಿರಾಜ ಕಲಾ ಭವನ" ಮತ್ತು ಶ್ರೀ ವಾದಿರಾಜಸ್ವಾಮಿಗಳ ಧ್ಯಾನ ಮಂದಿರ ಮತ್ತು ೨೦೦೫ರಲ್ಲಿ ನಿರ್ಮಿತವಾದಂತಹ "ಶ್ರೀ ವಾಸುದೇವಾಚಾರ್ಯರ ಭವನ ಬೆಂಗಳೂರಿನ ಸಂಗೀತಾಭಿಮಾನಿಗಳಿಗೆ, ನಾದದ ತವರೂರಾಗಿದೆ. ಇಲ್ಲಿ ನಡೆಯುವಂತಹ ತ್ಯಾಗರಾಜ ಆರಾಧನಾ ಮಹೋತ್ಸವ, ವಾದಿರಾಜರ, ವಾಸುದೇವಾಚಾರ್ಯರ ಮತ್ತು ದೀಕ್ಷಿತರ ಪುಣ್ಯದಿವಸಗಳ ಅಂಗವಾಗಿ ನಡೆಯುವ ಸಂಗೀತ ಸಂತರ್ಪಣೆ ಮತ್ತು ಅನ್ನ ಸಂತರ್ಪಣೆ ವೀಕ್ಷಿಸುವುದೇ ಒಂದು ರೋಚಕ ಅನುಭವ. ಪ್ರತಿ ಬೇಸಿಗೆ ಕಾಲದಲ್ಲಿ ಇಲ್ಲಿ ನಡೆಯುವ ಉಚಿತ ಸಂಗೀತ ಕಾರ್ಯಾಗಾರ, ಅನೇಕ ನಾದಸಸಿಗಳ ಸೃಷ್ಟಿಗೆ ಅನುಕೂಲ ಮಾಡಿಕೊಡುತ್ತಿದೆ.

ರುದ್ರಪುರಿಯಲ್ಲಿ ೨೦೦೮ರಲ್ಲಿ ನಿರ್ಮಾಣಗೊಂಡ ೭೫ ಅಡಿ ಎತ್ತರದ ವಿಶ್ವವಿಖ್ಯಾತ "ಸಪ್ತಸ್ವರ ದೇವತಾ ಧ್ಯಾನಮಂದಿರ"ದ ಕಲ್ಪನೆಯೇ ಇವರನ್ನು ಸಂಗೀತದ ಆಧುನಿಕ ವಿಶ್ವಕರ್ಮರನ್ನಾಗಿಸಿದೆ. ಅಲ್ಲಿ ನಡೆಯುವಂತಹ ವಾರ್ಷಿಕ ಸಂಗೀತೋತ್ಸವವು ಸಹಸ್ರಾರು ಗ್ರಾಮ ನಿವಾಸಿಗಳನ್ನು ಕಲಾದ್ಯೋತಕವಾಗಿ ಪರಿವರ್ತಿಸುವ ಪ್ರಯತ್ನ ಮಾಡುತ್ತಿದೆ.

ಡಿಸೆಂಬರ್ ೨೦೦೬ರಲ್ಲಿ ನಡೆದ ಎಂಟು ದಿನಗಳ "ಶ್ರೀ ಮದ್ವಾದಿರಾಜ ಗಾನ ಜ್ಞಾನಯಜ್ಞ" ನಾದವೇದಗಳ ಒಂದು ಅನುಪಮವಾದ ಸಮಾಗಮಕ್ಕೆ ಕಾರಣೀಭೂತವಾಗಿದೆ. ಅಲ್ಲಿ ನಿತ್ಯವೂ ನಡೆಯುತ್ತಿದ್ದ ಸಾಮೂಹಿಕ ಪೂಜೆ, ಗೋಷ್ಠಿ ಗಾಯನದ ಇಂಪು, ಅನ್ನ ದಾಸೋಹ, ವಿದ್ವತ್‌ಭರಿತ ಸಂಗೀತ ಕಚೇರಿಗಳು ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ.

ಇಷ್ಟೇ ಅಲ್ಲದೆ "ಶಾರದಾ ಕಲಾಕೇಂದ್ರ"ದಿಂದ ಹೊರಹೊಮ್ಮಿರುವಂತಹ ವಾದಿರಾಜರ ಕೃತಿ ಮಾಲಾ, ವಾಸುದೇವಾಚಾರ್ಯರ ೨೧ ಸರಣಿಗಳ ಧ್ವನಿಮುದ್ರಿಕೆ ಮತ್ತು ಪುಸ್ತಕಗಳು, ಸುಮಾರು ೬೦ಕ್ಕೂ ಮೀರಿದ ಪ್ರಕಟಣೆಗಳು ಇವರನ್ನು ಓರ್ವ ಅನುಕರಣೀಯ ಸಂಘಟಕರನ್ನಾಗಿಸಿದೆ.

**ಗುರುಗಳು ಪ್ರತಿಷ್ಠಿತ ಉಪನ್ಯಾಸಕರಾಗಿ : (ಧೈವತ ಸ್ವರ 'ದ')**

"ಸಮಾಜಕ್ಕಿಂತ ಅನ್ಯ ವಿಶ್ವವಿದ್ಯಾನಿಲಯವಿಲ್ಲ" ಎಂಬಂತೆ, ಕೇವಲ ಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ, ತಮ್ಮ ಸಾಧನೆಯಿಂದ ಬರುವ ಪ್ರಯೋಗಾತ್ಮಕ ಜ್ಞಾನವನ್ನು, ನಮ್ಮ ಗುರುಗಳು ನಂಬಿದ್ದಾರೆ. ಶಾಸ್ತ್ರೀಯ ಸಂಗೀತ ಹರಿದಾಸ ಸಾಹಿತ್ಯ ಸಂಬಂಧಿಸಿದಂತೆ ನಿರರ್ಗಳವಾಗಿ

ಜನಮನೋ ಗ್ರಾಹಿಯಾದ ಹಾಸ್ಯ ಲೇಪನವಿತ್ತು ವಿಷಯವನ್ನು ಮನಸ್ಸಿನಲ್ಲಿ ಸ್ಥಿರವಾಗಿ ನೆಲೆಗೊಳಿಸುವಂತಹ ವಾಕ್ ಸರಸ್ವತಿ ಇವರಿಗೆ ಒಲಿದಿದ್ದಾಳೆ. ವಿಷಯಕ್ಕೆ ಹೊಂದಿಕೊಳ್ಳುವಂತೆ ಅದಕ್ಕೆ ಸಂಗೀತವನ್ನು ಒಂದುಗೂಡಿಸುವ ರೀತಿ, ಸಮಯಪ್ರಜ್ಞೆ, ಭಾವಪೂರ್ಣ ಅಭಿವ್ಯಕ್ತಿಯು ಸಂಗೀತಾಭಿಮಾನಿಗಳಲ್ಲಿ ಆನಂದಾಶ್ರುಗಳನ್ನು ತರಿಸಿದೆ.

**ಗುರುಗಳ ಕೃತಿ ರಚನಾಕ್ರಮ : (ರಿಷಭ ಸ್ವರ – 'ರಿ')**

"ಪದ್ಮನಾಭ ದಾಸ" ಎಂಬ ಅಂಕಿತದಿಂದ ವಾಗ್ಗೇಯಕಾರರಾಗಿ ಪಾದಾರ್ಪಣೆ ೨೦೦೩ರಲ್ಲಿ ಮಾಡಿದರು. ೪೮ ದಿನಗಳಲ್ಲಿ, ವಾದಿರಾಜರನ್ನು ಕುರಿತು ಹೊರಹೊಮ್ಮಿದ ೪೮ ಕೃತಿಗಳು ಇಂದು ಎಲ್ಲಡೆ ರಾರಾಜಿಸುತ್ತಿದೆ. ನಾನು ಎಂದಿಗೂ ಮರೆಯದ ಒಂದು ಸನ್ನಿವೇಶವೆಂದರೆ, ಒಂದು ದಿನ ರಾಯರ ಮಠದಲ್ಲಿ ಗುರುಗಳ ಕಚೇರಿ ಆಯೋಜಿತವಾಗಿತ್ತು. ಅಂದು ನಾನು ಮೊದಲನೆಯ ಬಾರಿ ಗುರುಗಳ ಆಜ್ಞೆಯಂತೆ ತಂಬೂರಿ ಮೀಟಲು ಅವರ ಜೊತೆಗೆ ಹೋಗುವ ಸೌಭಾಗ್ಯ ಒದಗಿತು. ತಂಬೂರಿಯನ್ನು ಶೃತಿ ಮಾಡುವ ಸಲುವಾಗಿ ಸಿದ್ಧತಾ ಕೊಠಡಿಯಲ್ಲಿ ಕುಳಿತ ಸಂದರ್ಭದಲ್ಲಿ ಶೃತಿಯಾದ ತಂಬೂರಿಯ ನಾದ, ಅವರನ್ನು ಹಾಡಲು ಪ್ರೇರೇಪಿಸಿ ಹಂಸಧ್ವನಿ ರಾಗ ಹಾಡಲು ಪ್ರಾರಂಭಿಸಿದರು ಮತ್ತು ನನಗೂ ಹಾಡಲು ಹೇಳಿದರು. ಆ ರಾಗದ ಕಿರಣಗಳು, ಉದಯಿಸುವ ಭಾಸ್ಕರನ ಕಿರಣಗಳಂತೆ ಎಲ್ಲಡೆ ಪಸರಿಸುತ್ತಾ ವಾತಾವರಣವು ಸಂಪೂರ್ಣ ಸಂಗೀತಮಯವಾಗಿ ಮಂತ್ರಮುಗ್ಧವಾದಂತೆ ಭಾಸವಾಗುತ್ತಿತ್ತು. ಯಾವ ಶಕ್ತಿಯೋ ಮರುಕ್ಷಣವೇ ಅವರಿಂದ ಆಶುಕವಿತೆ ಪ್ರಾರಂಭವಾಗಿ ಒಂದು ಸುಂದರ ಕೃತಿ "ನಿನ್ನ ನಂಬಿದೆ ಗುರುರಾಘವೇಂದ್ರ" ಎಂಬ ಕೃತಿ ರೂಪುಗೊಂಡಿತು. ಅದನ್ನು ನೆನದರೆ ಇಂದಿಗೂ ಕನಸೋ ನನಸೋ ತಿಳಿಯುವುದಿಲ್ಲ.

ಪ್ರತಿಯೊಂದು ಕೃತಿ ರಚನೆಯಾದ ನಂತರವೂ ಗುರುಗಳು ದೂರವಾಣಿಯಲ್ಲಿ ಆ ಕೃತಿಯನ್ನು ಹಾಡಿ, ಅದರ ಅರ್ಥ ವಿಶ್ಲೇಷಿಸಿ, ನಂತರ ಸಂಜೆಯ ಒಳಗೆ ಅದರ ಪಾಠವನ್ನು ಕೂಡ ಹೇಳಿ ಬಿಡುತ್ತಿದ್ದರು. ಇದು ಅವರಲ್ಲಿರುವ ಸಂಗೀತ ದಾಹದ ದ್ಯೋತಕವಾಗಿದೆ. ಶಂಕರನನ್ನು ಕುರಿತ ಎಂಟು ಕೃತಿಗಳ ರಚನೆ, ಗುರುಗಳನ್ನು ಕುರಿತ ೧೩ ಕೃತಿಗಳ ರಚನೆಯ ಹಿಂದಿನ ಸ್ವಾರಸ್ಯಕರವಾದ ಸನ್ನಿವೇಶಗಳಲ್ಲಿ ಭಾಗಿಯಾಗುವ ಅವಕಾಶ ಕಲ್ಪಿಸಿ ಕೊಟ್ಟ ಗುರುಗಳಿಗೆ ನಾನೆಂದೆಂದೂ ಚಿರಋಣಿಯಾಗಿರುತ್ತೇನೆ.

**ಗುರುಗಳ ಪ್ರವಾಸದ ಶೈಲಿ – (ನಿಷ್ಪಾದ ಸ್ವರ – 'ನಿ')**

ಗಾನಯಾತ್ರೆ ಎಂಬುದು ನನಗೆ ಗುರುಗಳ ಸಾನ್ನಿಧ್ಯದಲ್ಲಿ ಮೆಚ್ಚಿನ ವಿಷಯವಾಗಿದೆ. ವಾರ್ಷಿಕವಾಗಿ ಒಂದು ವಾರದ ಗಾನಯಾತ್ರೆ ನಮ್ಮ ಗುರುಗಳ ಸಂಗೀತ ಭಾವಿಯಲ್ಲಿ ಒಂದು ವಿಶೇಷವಾಗಿದೆ. ೨೦೦೫ರಲ್ಲಿ ಆದಂತಹ ತಿರುವಯ್ಯಾರ್ ಯಾತ್ರೆ, ೨೦೦೭ರಲ್ಲಿ ನಡೆದಂತಹ ಕಾಶೀಯಾತ್ರೆ, ೨೦೦೮ರಲ್ಲಿ ಸಿಂಗಾಪೂರ್ ಯಾತ್ರೆ ಸಂಗೀತಮಯವಾಗಿ, ಜ್ಞಾನಮಯವಾಗಿ, ಸಂತೋಷಮಯವಾಗಿ, ದೈವೀಕವಾಗಿ, ಭಾವನಾತ್ಮಕವಾಗಿ,

ಕುತೂಹಲಕಾರಿಯಾಗಿ ನಮ್ಮ ಜೀವನದ ಸಾಧನೆಯಾಗಿ ಮಾಡಿಸಿದ್ದಾರೆ. ಈ ಯಾತ್ರೆಗಳ ಮುಖ್ಯ ಉದ್ದೇಶ, ಪರಸ್ಪರ ಸ್ನೇಹ, ವಿಶ್ವಾಸ ಬೆಳಸಿಕೊಂಡು, ವಿಶ್ವದ ಮೂಲೆ ಮೂಲೆಗಳಲ್ಲಿನ ಜೀವನದ ಶೈಲಿ ಮತ್ತು ಸಾಧಕರ ಸಾಧನಾ ಮಾರ್ಗಗಳನ್ನು ತಿಳಿದುಕೊಳ್ಳುವ ಒಂದು ಪ್ರಯತ್ನವಾಗಿದೆ. ಇದರೊಂದಿಗೆ ತಿಂಗಳಿಗೆ ೪ ರಿಂದ ೫ ಗಾನಯಾತ್ರೆಗಳು ನಮ್ಮ ಸಂಗೀತ ಜೀವನದ ಅವಿಭಾಜ್ಯ ಅಂಗವಾಗಿದೆ.

"ಜ್ಞಾನನಿಧಿ ಕರುಣಾವಾರಿಧಿಯಂಥಾ ಗುರುಗಳಿಗುಂಟೆ ಸಮಾನ" ಎಂಬಂತೆ ಇಂತಹ ಗುರುಗಳ ಸಾನ್ನಿಧ್ಯದಲ್ಲಿ ಸಂಗೀತ ಸೇವೆ ಅವಿರತವಾಗಿ, ಅನನ್ಯವಾಗಿ, ಸರ್ವದಾ ಮಾಡುವಂಥಾ ಸೌಭಾಗ್ಯವನ್ನು ನನಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಇದು ಕೇವಲ ನನ್ನ ಪರಿಮಿತಿಗೆ ಅರ್ಥೈಸಿಕೊಂಡ ಅವರ ಸಾಗರ ವ್ಯಕ್ತಿತ್ವದ ಅಣು. ನನ್ನ ಈ ಅಂತರಂಗದ ಭಾವ ಭಾವನೆಗಳ ಪ್ರತಿಬಿಂಬದ ಪುಷ್ಪವನ್ನು ಗುರುಗಳ ಪಾದಪದ್ಮಕ್ಕೆ ಸಮರ್ಪಿಸುತ್ತಾ, ಗುರುಗಳ ಕೃಪಾಶೀರ್ವಾದದಿಂದ ಅವರು ನನ್ನ ಮೂಲಕ ಮೂಡಿಸಿದ ಪದ್ಮನಾಭಪ್ರಿಯ ರಾಗದ ಕೃತಿಯಲ್ಲಿ ಬರುವಂತೆ, "ವಾದಿರಾಜ ಗುರುಗಳ ಅನುದಿನ ಸೇವಿಪ ಪದ್ಮನಾಭದಾಸಗೆ ಶಿರಬಾಗಿ ನಮಿಪೆನು.

❖

# ಸನ್ಮಾರ್ಗದರ್ಶಿ

## (ಡಾ॥ ಟಿ.ವಿ.ರಾಜು)

● *ಕು॥ ಎಸ್.ಟಿ. ಪವಿತ್ರ / ಕು॥ ಡಿ.ಎಸ್. ಸೌಮ್ಯ*

ಪ್ರತಿಯೊಬ್ಬ ವ್ಯಕ್ತಿಯ ಜೀವನವನ್ನು ರೂಪಿಸುವಲ್ಲಿ ಅನೇಕ ಗುರುವರ್ಯರು ಬಂದು ಹೋಗುತ್ತಾರೆ. ಆದರೆ ಯಾರಿಗೂ ಆ ಗುರುವಿನ ಪಾತ್ರ ಎಲ್ಲಿ ಆರಂಭವಾಗಿ ಎಲ್ಲಿ ಕೊನೆಗಾಣುತ್ತದೆ ಎಂಬುದು ಮಾತ್ರ ತಿಳಿದಿಲ್ಲ. ಅಂತಹ ದೈವ ಸ್ವರೂಪಿ ಗುರು, ನಮ್ಮ ಮೇಲೆ ಪ್ರಭಾವ ಬೀರಿದ, ನಮ್ಮ ಬದುಕಿಗೆ ಗಟ್ಟಿಯಾದ ತಳಪಾಯ ಹಾಕಿದ ಸರ್ವಶ್ರೇಷ್ಠ ಗುರು ಬೇರೆ ಯಾರೂ ಅಲ್ಲ ನಮ್ಮ ನೆಚ್ಚಿನ ಗುರು ಡಾ॥ ಟಿ.ವಿ.ರಾಜು ಅವರು. ಇಂತಹ ಮಹಾನ್ ವ್ಯಕ್ತಿಯನ್ನು ಪರಿಚಯಿಸುವುದು ಅಷ್ಟು ಸುಲಭದ ಮಾತಲ್ಲವಾದರೂ ಗೌರವದ್ಯೋತಕವಾಗಿ ಅತಿವಿನಯದಿಂದ ನಮಗೆ ಸ್ಫೂರ್ತಿನೀಡಿದ ಗುರುವಿನ ಬಗ್ಗೆ ಕೆಲವು ವಿಚಾರಗಳನ್ನು ನಮಗಾದ ಅನುಭವದ ಹಿನ್ನೆಲೆಯಲ್ಲಿ ತಮ್ಮ ಮುಂದಿಡಲು ಪ್ರಯತ್ನಿಸುತ್ತೇನೆ.

ಎಸ್.ಎಸ್.ಎಲ್.ಸಿ.ಯಲ್ಲಿ ತೇರ್ಗಡೆಯಾದ ನಂತರ ಎನ್.ಎಂ.ಕೆ.ಆರ್.ವಿ. ಮಹಿಳಾ ಪದವಿಪೂರ್ವ ಕಾಲೇಜಿನಲ್ಲಿ ವಾಣಿಜ್ಯ ವಿಭಾಗಕ್ಕೆ ಪ್ರವೇಶ ಪಡೆದೆವು. ದೀರ್ಘ ವಿರಾಮದ ನಂತರ ತರಗತಿಗಳು ಪ್ರಾರಂಭವಾದವು. ಹೊಸ ಹೊಸ ಅಭಿಲಾಷೆಯೊಡನೆ ಹೊಸದೊಂದು ಪರಿಸರಕ್ಕೆ ಪ್ರವೇಶಮಾಡಿದೆವು. ಹೊಸ ಸ್ನೇಹಿತರು, ಹೊಸಜೀವನ ಕ್ರಮ, ಹೊಸ ಉಪನ್ಯಾಸಕ ರೊಡನೆ ಜುಲೈ ೧೯, ೧೯೯೯ರಂದು ನಮ್ಮ ಕಾಲೇಜು ಜೀವನದ ಮೊದಲ ದಿನ ಆರಂಭ ವಾಯಿತು. ಪ್ರೌಢಶಾಲೆಗಿಂತ ಪೂರ್ಣಭಿನ್ನವಾದ ತರಗತಿ ಪ್ರಾರಂಭೋತ್ಸವ ಸಮಾರಂಭವಾದ ಕೂಡಲೆ ಆರಂಭವಾಗುವುದಿತ್ತು. ನಾವೆಲ್ಲ ಉಪನ್ಯಾಸಕರ ಬರುವಿಗಾಗಿ ನಿರೀಕ್ಷಿಸುತ್ತಾ ಕುಳಿತಿದ್ದೆವು. ಆದರೆ ಉಪನ್ಯಾಸಕರ ಬದಲಾಗಿ ಹಿರಿಯ ವಿದ್ಯಾರ್ಥಿಗಳ ಗುಂಪೊಂದು ತರಗತಿಗೆ ಬಂದರು. ತಮ್ಮನ್ನು ತಾವೇ ಪರಿಚಯ ಮಾಡಿಕೊಂಡು. ನಮ್ಮ ತರಗತಿಯನ್ನು ತೆಗೆದುಕೊಳ್ಳಲಿರುವ ಎಲ್ಲಾ ಶಿಕ್ಷಕರ ಬಗ್ಗೆ ಸಂಕ್ಷಿಪ್ತವಾಗಿ ಪರಿಚಯವನ್ನು ಮಾಡಿಕೊಟ್ಟರು. ಹೀಗೆ ಕಾಲೇಜಿನ ಬಗ್ಗೆ ಮತ್ತು ಉಪನ್ಯಾಸಕರುಗಳ ಬಗ್ಗೆ ಮಾಹಿತಿ ನೀಡುವ ಸಂದರ್ಭದಲ್ಲಿ ಡಾ॥ ಟಿ.ವಿ.ರಾಜುರವರ ಬಗ್ಗೆ ವಿಶೇಷವಾಗಿ ತಿಳಿಸಿದರು. ಅವರು ತುಂಬ ಕಟ್ಟುನಿಟ್ಟು, ತೀರ ಮುಂಗೋಪಿ ಸಣ್ಣ ಸಣ್ಣ ವಿಚಾರಗಳಿಗೂ ರೇಗುತ್ತಾರೆ. ಶಿಸ್ತು ಮತ್ತು ಉಡುಪಿಗೆ ವಿಶೇಷವಾಗಿ ಒತ್ತು ನೀಡುವವರು ಎಂದೆಲ್ಲ ಹೇಳಿದರು. ಇಲ್ಲಿಂದ ನಮಗೆ ಅರಿವಿಲ್ಲದ ಭಯ ಸೃಷ್ಟಿಯಾಯಿತು. ಮಾರನೇ ದಿನ ಬೆಳಗ್ಗೆ ೧೧.೩೦ ಗಂಟೆಗೆ ನಾವು ತರಗತಿಯಲ್ಲಿ ಉಪನ್ಯಾಸಕರಿಗಾಗಿ ಕಾಯುತ್ತಿದ್ದೆವು. ಕೆಲವು ಸ್ನೇಹಿತರು ತರಗತಿಯ ಹೊರಗೆ ನಿಂತು ಹರಟುತ್ತಿದ್ದರು. ಇದ್ದಕ್ಕಿದ್ದಂತೆ ಒಂದು ಗಡುಸಾದ

ಧ್ವನಿ ಕೇಳಿಸಿತು. ಹೋಗಿ, ತರಗತಿ ಒಳಗೋಗಿ ಎಂದು ರೇಗಿದರು ಆಗ ಇವರೇ ಡಾ॥ ಟಿ.ವಿ. ರಾಜು ಎಂಬುದು ತಿಳಿದಿರಲಿಲ್ಲ. ಒಳಗೆ ಬಂದವರೆ ಪ್ರಶ್ನೆಗಳ ಸುರಿಮಳೆಯನ್ನು ಸುರಿಸಿದರು, ವಿದ್ಯಾರ್ಥಿಗಳ ಅಸಭ್ಯ ವರ್ತನೆಗಳನ್ನು ತಿಳಿಸಿ ಅವರ (ವಿದ್ಯಾರ್ಥಿಗಳ) ಕರ್ತವ್ಯದ ಬಗ್ಗೆ ಎಚ್ಚರಿಕೆ ನೀಡಿದರು. ಆಗ ಅವರೇ ಡಾ॥ ಟಿ.ವಿ. ರಾಜುರವರು, ವ್ಯಾವಹಾರಿಕ ಅಧ್ಯಯನವನ್ನು ಬೋಧಿಸುವವರು ಎಂಬುದು ತಿಳಿಯಿತು ಜತೆಜತೆಗೆ ಹಿರಿಯ ವಿದ್ಯಾರ್ಥಿಗಳು ಹೇಳಿದ ಅವರ ಮುಂಗೋಪಿತನ ಅರಿವಿಗೆ ಬಂತು. ತರಗತಿಯ ಪ್ರಾರಂಭದ ಹದಿನೈದು ನಿಮಿಷ ಕೋಪವಾಗಿಯೇ ತಿಳಿಹೇಳಿ. ವಿದ್ಯಾರ್ಥಿಗಳು ಶಿಸ್ತಿನಿಂದ ಹೇಗಿರಬೇಕೆಂದು ತಿಳಿಸುತ್ತಾ ಹಿರಿಯರನ್ನು ಗೌರವಿಸಲು ಹೇಳಿದರು. ನಾವೆಲ್ಲ ನಿಶ್ಯಬ್ಧವಾಗಿ ಸ್ವಯಂ ಪ್ರೇರಿತರಾಗಿ, ತಲ್ಲೀನರಾಗಿ ಅವರ ಮಾತುಗಳನ್ನು ಆಲಿಸಿದೆವು. ಅಲ್ಲಿಂದ ನಮ್ಮ ಸಹೋದ್ಯೋಗಿಗಳು ಮಾಡಿದ ತಪ್ಪಿನ ಅರಿವಾಗಿ ಅಲ್ಲಿಂದ ಅವರ ಬಗ್ಗೆ ವಿಶೇಷವಾದ ಮೆಚ್ಚುಗೆ ಆರಂಭವಾಯಿತು. ಗೌರವಾಭಿಮಾನಗಳು ಮೂಡಿತು.

ಇವರು ವಿಷಯ ಬೋಧನೆಯಲ್ಲಿ ಬಳಸುತ್ತಿದ್ದ ಭಾಷೆ ತೀರ ಸರಳವಾಗಿದ್ದ ಕಾರಣದಿಂದ ನಮ್ಮಂತ ಅನೇಕರು ಸರಳವಾಗಿ ವಿಷಯವನ್ನು ಅರ್ಥ ಮಾಡಿಕೊಳ್ಳಲು ಸುಲಭವಾಗುತ್ತಿತ್ತು. ತಮ್ಮ ಉಪನ್ಯಾಸದಲ್ಲಿ ನಮ್ಮ ಪುರಾಣ ಕಾವ್ಯಗಳಿಂದ, ಗೀತೆಯಿಂದ, ಉಪನಿಷತ್ತುಗಳಿಂದ ಆಯ್ದ ಅನೇಕ ಚಿಕ್ಕಚಿಕ್ಕ ಕಥೆಗಳನ್ನು ತಿಳಿಸುತ್ತಿದ್ದರು. ಹೀಗಾಗಿ ನಮಗೆ ವಿಷಯದ ಜೊತೆಗೆ ನಮ್ಮ ಸಂಸ್ಕೃತಿ ಮತ್ತು ಮಹಾಕಾವ್ಯಗಳ ಮಹತ್ವವೂ ತಿಳಿಯುತ್ತಿತ್ತು. ಹೀಗೆ ಅನೇಕ ಕಥೆಗಳ ಮೂಲಕ ಉಪನ್ಯಾಸ ಮಾಡುತ್ತಿದ್ದುದರಿಂದ ಅದು ನಮ್ಮ ಮನಸ್ಸಿನಲ್ಲಿ ಉಳಿದು ಬೇರಾವ ಪುಸ್ತಕಗಳನ್ನು ಪರಾಮರ್ಶನ ಮಾಡುವ ಅಗತ್ಯವಿರುತ್ತಿರಲಿಲ್ಲ. ಆ ಕಾರಣದಿಂದಲೆ ನಾವಾಗಲಿ ಅಥವಾ ನಮ್ಮ ಸಹಾಧ್ಯಾಯಿಗಳಾಗಲಿ ಇವರ ಯಾವ ತರಗತಿಯನ್ನು ತಪ್ಪಿಸಿಕೊಳ್ಳಲು ಬಯಸುತ್ತಿರಲಿಲ್ಲ. ನಮ್ಮ ಮನದಲ್ಲಿ ಮೂಡಬಹುದಾದ ಅನುಮಾನಗಳನ್ನು ನಾವು ಕೇಳುವ ಮೊದಲೆ ಅವರ ಅನುಭವದ ಮೂಲಕ ತಿಳಿದು ಅತಿ ಶೀಘ್ರವಾಗಿ ಉತ್ತರ ಹೇಳಿ ನಮ್ಮ ಸಮಸ್ಯೆಗಳನ್ನು ಪರಿಹರಿಸುತ್ತಿದ್ದರು.

ಡಾ॥ ಟಿ.ವಿ. ರಾಜುರವರ ಬೋಧನಾಕ್ರಮದಲ್ಲಿ ವಿಷಯವನ್ನು ಒತ್ತಿ ಹೇಳುವುದಷ್ಟೇ ಅಲ್ಲದೆ, ಭಾರತೀಯ ಸಂಸ್ಕೃತಿಯ ಸಾರ ಮತ್ತು ಮೌಲ್ಯ, ಪಾಶ್ಚಾತ್ಯರು ನಮ್ಮ ವೇದೋಪನಿಷತ್ತುಗಳಿಗೆ ನೀಡಿದ ಮಹತ್ವ, ವಿಶೇಷವಾಗಿ ಸಮಾಜ ಮತ್ತು ಕುಟುಂಬದಲ್ಲಿ ಮಹಿಳೆ ನಿರ್ವಹಿಸುವ ಪಾತ್ರದ ಬಗ್ಗೆ ಅರಿವು ಮೂಡುತ್ತಿತ್ತು. ಅಂತಹ ಹೆಣ್ಣಿಗೆ ಗೌರವಿಸುವಂತೆ ಪ್ರೇರೇಪಿಸುತ್ತಿದ್ದರು. ಈ ವಿಚಾರವಾಗಿ ನಮ್ಮ ತಂದೆ–ತಾಯಿಗಳು ಹೇಳಿದಾಗ ನಾವು ಸುಮ್ಮನೆ ಕೇಳಿಸಿಕೊಳ್ಳುತ್ತಿದ್ದೆವು. ಆದರೆ ಇವರು ಅನೇಕ ನಿದರ್ಶನಗಳ ಮೂಲಕ ಹೆಣ್ಣನ್ನು ಪೂಜ್ಯಭಾವದಿಂದ ಕಾಣುವಂತೆ ತಿಳಿಸಿದಾಗ ನಮಗೆ ಹೆಣ್ಣಿನ ಮಹತ್ವ, ಶ್ರೇಷ್ಠತೆಯ ಅರಿವಾಗಿ ಅವರಿಂದ ಪ್ರಭಾವಿತವಾಗಿ ನಮ್ಮ ಉತ್ಸಾಹಕ್ಕೆ ಮೇರೆ ಇಲ್ಲದಂತಾಯಿತು. ಅಲ್ಲಿಂದ ಸ್ತ್ರೀತ್ವ, ಸಂಸ್ಕೃತಿ ಮತ್ತು ಸಮಾಜದ ಬಗ್ಗೆ ವಿಶೇಷ ಗೌರವಭಾವ ಮೂಡಿತು.

ಪ್ರಾಯೋಗಿಕ ವಿಷಯವಾದ ಲೆಕ್ಕಶಾಸ್ತ್ರವನ್ನು ಬೋಧಿಸುವಾಗಿನ ಅವರ ಶಿಸ್ತು, ಸಮಸ್ಯೆಗಳನ್ನು

ಪರಿಹರಿಸುವಾಗ ಕಪ್ಪು ಹಲಗೆಯ ಒಂದು ತುದಿಯಿಂದ ಮತ್ತೊಂದು ತುದಿಗೆ ಬರೆಯುವಾಗ ಸ್ವಚ್ಛತೆ, ಸ್ಪಷ್ಟತೆ, ಅನುಸರಿಸಿದ ಕ್ರಮ ನಮಗೆ ಉಪನ್ಯಾಸಕಿಯಾಗಬೇಕೆಂಬ ಆಸೆಯನ್ನು ಚಿಗುರಿಸುತ್ತಿತ್ತು.

ಪರೀಕ್ಷೆ ಹತ್ತಿರವಾಗುತ್ತಿದ್ದಂತೆ ಸರ್ ನಮಗೆ ಹಲವಾರು ಉಪಯುಕ್ತ ಮಾಹಿತಿಗಳನ್ನು ನೀಡುತ್ತಿದ್ದರು. ಹೇಗೆ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ವಿಷಯಗಳನ್ನು ಅಭ್ಯಾಸ ಮಾಡಬೇಕು, ಯಾವ ವಿಷಯಕ್ಕೆ ಎಷ್ಟು ಸಮಯವನ್ನು ನಿಗದಿಪಡಿಸಬೇಕು, ಸಂಕ್ಷಿಪ್ತ ಉತ್ತರವನ್ನು ಹೇಗೆ ಬರೆಯಬೇಕು, ಪ್ರಬಂಧರೂಪದ ಉತ್ತರವನ್ನು ಹೇಗೆ ಬರೆಯಬೇಕು. ಯಾವ ಉತ್ತರಕ್ಕೆ ಎಷ್ಟು ಸಮಯ ತೆಗೆದುಕೊಳ್ಳಬೇಕೆಂಬೆಲ್ಲ ಅತಿ ಅವಶ್ಯವಾದ ಮಾಹಿತಿಗಳನ್ನು ತಿಳಿಸಿಕೊಡುತ್ತಿದ್ದರು. ಪರೀಕ್ಷೆ ಬರೆದು ಬಂದ ಮೇಲೆ ಅವರು ನೀಡಿದ ಮಾರ್ಗದರ್ಶನದ ಸಾರ ಅರ್ಥವಾಗುತ್ತಿತ್ತು. ಆನಂತರ ನಾವು ಅವರನ್ನು ಭೇಟಿಯಾದಾಗ ಅವರು ನಾವು ಬರೆದ ಉತ್ತರವನ್ನು ಕುರಿತು ಪ್ರತಿಯೊಬ್ಬರನ್ನು ವಿಚಾರಿಸಿ ಎಲ್ಲಾ ಪ್ರಶ್ನೆಗಳ ಉತ್ತರವನ್ನು ಚರ್ಚೆ ಮಾಡುತ್ತಿದ್ದರು. ನಾವು ಬರೆದ ಉತ್ತರ ಸರಿ ಇದ್ದ ಕಾರಣ ನಾವೆಲ್ಲ ಅತ್ಯುತ್ಸಾಹದಿಂದ ಮನೆಗೆ ತೆರಳುತ್ತಿದ್ದೆವು.

ಬೇರೆಯವರಿಗಿಂತ ತೀರ ಭಿನ್ನವಾದ ಡಾ॥ ಟಿ.ವಿ.ಆರ್. ತರಗತಿಯಲ್ಲಿ ಅಷ್ಟೇ ಅಲ್ಲದೆ ಹೊರಗೆ ಸಂಧಿಸಿದಾಗಲೂ ನಮ್ಮ ವಿದ್ಯಾಭ್ಯಾಸ, ಆರೋಗ್ಯ, ಸಾಮಾನ್ಯ ವಿಚಾರಗಳನ್ನು ಕೇಳಿ ನಮ್ಮ ಭವಿಷ್ಯದ ವಿಚಾರಗಳನ್ನು ಕೇಳಿ ತಿಳಿದು ಮಾರ್ಗದರ್ಶನ ಮಾಡುತ್ತಿದ್ದರು. ಇವರು ವಿಶ್ವವಿದ್ಯಾಲಯದ ಪರೀಕ್ಷೆಗೆ ಸಿದ್ಧಪಡಿಸುವುದಷ್ಟೆ ಅಲ್ಲದೆ ಶೈಕ್ಷಣಿಕವಾಗಿ, ಭಾವನಾತ್ಮಕವಾಗಿ, ಬೌದ್ಧಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ನನ್ನ ಬದುಕಿಗೆ ಗಟ್ಟಿ ತಳಪಾಯ ಹಾಕಿದರು.

ದ್ವಿತೀಯ ಪಿ.ಯು.ಸಿ.ಯಲ್ಲಿ ಉತ್ತಮ ಅಂಕಪಡೆದು ತೇರ್ಗಡೆಯಾದ ಮೇಲೆ ಪೂಜ್ಯರನ್ನ ಸಂಪರ್ಕಿಸಿ ಪದವಿಯ ಬಗ್ಗೆ ಮಾರ್ಗದರ್ಶನ ಮಾಡಲು ಕೋರಿದೆವು. ಅಂದು ಅವರು ನಮ್ಮ ಆಸಕ್ತಿ ವಲಯವನ್ನು ಅರಿತು ಅದಕ್ಕನುಗುಣವಾಗಿ ಬಿ.ಬಿ.ಎಂ. ತೆಗೆದುಕೊಳ್ಳಲು ಸಲಹೆ ನೀಡಿದರು. ಸಾಮಾನ್ಯ ಪ್ರವೇಶ ಪರೀಕ್ಷೆಯ ನಂತರ ಬಿ.ಬಿ.ಎಂ. ಪದವಿಗೆ ಪ್ರವೇಶ ಪಡೆದೆವು. ಆವರೆಗೆ ಬರಿಯ ಹೆಣ್ಣುಮಕ್ಕಳ ಕಾಲೇಜಿನಲ್ಲಿ ಓದಿ ಅಭ್ಯಾಸವಿದ್ದ ನಮಗೆ ಸಹಶಿಕ್ಷಣ ಪದ್ಧತಿ ಹೊಸದು. ಆ ಸಂದರ್ಭದಲ್ಲಿ ನಮಗೆ ಸಹಕಾರಿಯಾಗಿ, ಬೆನ್ನೆಲುಬಾಗಿ ನಿಂತು ನಮ್ಮ ಗುರಿಸಾಧಿಸಲು ಕಾರಣರಾದರು. ಆ ಸಂದರ್ಭದಲ್ಲಿ RVIM ನ ನಿರ್ದೇಶಕರಾಗಿದ್ದ ಇವರು ನಮ್ಮ ಪಾಲಿಗೆ ಗುರುಗಳಷ್ಟೇ ಅಲ್ಲ, ಆದರ್ಶ ವ್ಯಕ್ತಿಯಾದರು. ತಮಗೆ ಎಷ್ಟೇ ಕಾರ್ಯ ಬಾಹುಳ್ಯವಿದ್ದರೂ ನಮಗೆ ಯಾವುದೇ ವಿಷಯದಲ್ಲಿ ಸಂಕಷ್ಟಗಳು ಸಂಭವಿಸಿದಾಗ ಅದನ್ನು ಅತಿ ಸರಳವಾಗಿ ಕೂಡಲೆ ಪರಿಹರಿಸುತ್ತಿದ್ದರು. ಅವರ ಮಾರ್ಗದರ್ಶನದಂತೆ ಬಿ.ಬಿ.ಎಂ. ಪದವಿ ಮುಗಿಸಿದ ಮೇಲೆ ಅವರ ಮಾರ್ಗದರ್ಶನದಲ್ಲಿಯೇ ಸಿ.ಇ.ಟಿ.ಯಲ್ಲಿ ಉತ್ತಮ ಅಂಕಗಳನ್ನು ಪಡೆದು ಎಂ.ಬಿ.ಎ. ಪದವಿಗೆ ಪ್ರವೇಶ ಪಡೆದೆವು. ಎಂ.ಬಿ.ಎ. ಪದವಿಗೆ ಪೂರಕವಾಗಿ ಪ್ರಬಂಧ ರಚಿಸಬೇಕಾದ ಸಂದರ್ಭದಲ್ಲಿ ವಿಷಯ ಸಂಗ್ರಹಣೆಗಾಗಿ ಸಂಸ್ಥೆಯ

ಮುಖ್ಯಸ್ಥರುಗಳನ್ನು ಭೇಟಿ ಮಾಡುವ ವಿಧಾನ, ವ್ಯವಹರಿಸಬೇಕಾದ ಕ್ರಮ ಹತ್ತಾರು ವಿಚಾರಗಳನ್ನು ಕಠಿಣ ಪರಿಶ್ರಮದಿಂದ ಕಲಿತುಕೊಂಡೆವು. ಅದೆಲ್ಲದಕ್ಕಿಂತ ಮಿಗಿಲಾಗಿ ಅವರಿಂದ ಕಲಿಯ ಬೇಕಾದದ್ದು ತಾಳ್ಮೆ, ವಿಶ್ಲೇಷಣಾತ್ಮಕ ಕೌಶಲ್ಯ, ಕಠಿಣ ಪರಿಶ್ರಮ ಜೊತೆ ಜೊತೆಯಲ್ಲಿ ಶಿಕ್ಷಕ ಹೇಗಿರಬೇಕು? ಆ ಸ್ಥಾನ ಎಷ್ಟು ಮಹತ್ವದ್ದು? ಸಮಾಜದಲ್ಲಿ ಗುರುವಿಗೆ ಸಲ್ಲುವ ಗೌರವ ಇತ್ಯಾದಿ ವಿಚಾರಗಳು. ನಮ್ಮ ಮನಸ್ಸಿನಲ್ಲಿಯೂ ಉಪನ್ಯಾಸಕಿಯಾಗುವ ಬಯಕೆಯಿದ್ದ ಕಾರಣದಿಂದ ಆ ವಿಚಾರಗಳ ಬಗ್ಗೆ ಆಸಕ್ತಿ ಮೂಡುತ್ತಿತ್ತು. ಆದರೆ ನಮ್ಮ ಭವಿಷ್ಯದ ಆಯ್ಕೆಯ ಬಗ್ಗೆ ದ್ವಂದ್ವವಿತ್ತು. ಬರುಬರುತ್ತಾ ಇವರ ಮಾರ್ಗದರ್ಶನದಲ್ಲಿ ನಾವೂ ಉಪನ್ಯಾಸಕಿಯರಾಗಲು ತೀರ್ಮಾನಿಸಿವು.

ನಮ್ಮ ಎಂ.ಬಿ.ಎ. ಪದವಿ ಮುಗಿಯುತ್ತಿದ್ದಂತೆ ಡಾ॥ ಟಿ.ವಿ. ರಾಜುರವರನ್ನು ಭೇಟಿಯಾಗಿ ಉಪನ್ಯಾಸಕರಾಗುವ ನಮ್ಮ ಮನದ ಇಂಗಿತವನ್ನು ತಿಳಿಸಿದಾಗ ಉತ್ಸುಕರಾಗಿ ಎಲ್ಲಾ ರೀತಿಯಲ್ಲೂ ಸಹಕಾರ ನೀಡಿ ನಿಮ್ಮ ಹುದ್ದೆಯನ್ನು ಗೌರವಿಸಿ, ಪ್ರೀತಿಸಿ ಎಂದು ಉರಿದುಂಬಿಸಿ ಅವರೊಡನೆ ಕರ್ತವ್ಯ ನಿರ್ವಹಿಸಲು ಅವಕಾಶ ನೀಡಿ ನಮ್ಮನ್ನು ವ್ಯವಸ್ಥಿತ ರೀತಿಯಲ್ಲಿ ತರಬೇತಿ ನೀಡಿ ಮೊರಡು ಕಲ್ಲನ್ನು ಶಿಲೆಯಾಗಿಸಿದರು. ಆರಂಭದಲ್ಲಿಯೇ ಗುರುವಿನ ಸ್ಥಾನಮಾನ, ಅವರ ಜವಾಬ್ದಾರಿ ಇತ್ಯಾದಿ ವಿಚಾರಗಳನ್ನು ತಿಳಿಯಹೇಳಿ ಒಬ್ಬ ವಿದ್ಯಾರ್ಥಿಯನ್ನು ಸಮಾಜದ ಸತ್ಪ್ರಜೆಯಾಗಿ ನಿರ್ಮಿಸುವಲ್ಲಿ ಶಿಕ್ಷಕನ ಪಾತ್ರವೆಂತದ್ದು, ಆ ಗುರು ಸಮಾಜದಲ್ಲಿ ಹೇಗೆ ವರ್ತಿಸಬೇಕು. ಶಿಕ್ಷಕ ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು ಎಂಬೆಲ್ಲ ವಿಚಾರಗಳನ್ನು ಸ್ಪಷ್ಟಪಡಿಸಿದರು. ಸತತ ಅಧ್ಯಯಿಯಾದ ಇವರು ನಮ್ಮನ್ನು ಹೆಚ್ಚೆಚ್ಚು ಅಭ್ಯಾಸ ಮಾಡಲು ತಿಳಿಸಿ ಮಾರ್ಗದರ್ಶನ ಮಾಡಿ ಮುನ್ನಡೆಸಿದರು.

ಒಂದು ಸಂಸ್ಥೆಯ ನಿರ್ದೇಶಕರಾಗಿ, ಶ್ರೇಷ್ಠ ಆಡಳಿತಗಾರರಾಗಿ, ಪ್ರಭಾವಿ ಪ್ರವರ್ತಕರಾಗಿ ಉತ್ತಮ ಮಾನವೀಯ ಸಂಬಂಧವನ್ನು ಬೆಸೆಯಬಲ್ಲವರು. ವಿನಯವಂತಿಕೆ, ಮಾನವೀಯತೆ, ಹಾಸ್ಯಪ್ರಜ್ಞೆ ಇವುಗಳನ್ನು ಸಮಯವರಿತು ರೂಢಿಸಿಕೊಳ್ಳುವವರು, ಶಿಕ್ಷಣ ತಜ್ಞರಾಗಿ ವಿದ್ಯಾರ್ಥಿಗಳಿಗೆ ಸದಾ ಸಂಸ್ಕೃತಿ ಪ್ರೇರಕ ಮತ್ತು ಗುಣಾತ್ಮಕ ಶಿಕ್ಷಣವನ್ನು ನೀಡಬಯಸುವವರು ತಮ್ಮ ಸಹೋದ್ಯೋಗಿಗಳಿಗೆ "ವಿದ್ಯಾರ್ಥಿಗಳನ್ನು ಪರೀಕ್ಷೆಗಾಗಿ ಸಿದ್ಧಪಡಿಸಬೇಡಿ ಅವರ ಜೀವನಕ್ಕಾಗಿ ತಯಾರು ಮಾಡಿ" ಎಂದು ಹೇಳಿ ಪ್ರೇರಣೆ ನೀಡುವವರು, ಪ್ರತಿಯೊಬ್ಬರನ್ನೂ ಗೌರವಿಸುತ್ತಾ ಅವರವರ ಕ್ಷೇತ್ರದಲ್ಲಿ ಉನ್ನತ ಸ್ಥಾನಗಳಿಸಲು ಸದಾ ಸಹಕಾರ ನೀಡಿ ಮುನ್ನಡೆಸುವ ಧೀಮಂತ ಶಕ್ತಿ. ಅವರ ನಿಸ್ವಾರ್ಥ ಸೇವಾ ಮನೋಭಾವ ಇತರರಲ್ಲಿ ಬೌದ್ಧಿಕ ವಿಸ್ತರಣೆ, ಭಾವನಾತ್ಮಕ ಶಿಸ್ತು, ಆಧ್ಯಾತ್ಮಿಕ ಶ್ರದ್ಧೆ ಮೂಡಲು ಕಾರಣರಾದವರು.

ಶ್ರೀಯುತರು ಕೇವಲ ಶ್ರೇಷ್ಠ ಉಪನ್ಯಾಸಕರು ಮಾತ್ರವಲ್ಲ ಶ್ರೇಷ್ಠ ಆಡಳಿತಗಾರರು, ನಿರ್ದೇಶಕರು, ಮಿಗಿಲಾಗಿ ನಿಷ್ಠ ಮಾನವತಾವಾದಿಗಳು ಒಬ್ಬ ಮನುಷ್ಯರಾಗಿ ತುಂಬ ಸರಳ ವ್ಯಕ್ತಿತ್ವ, ಹೃದಯವಂತರು, ಧಾರಾಳ ಸ್ವಭಾವದವರು, ಪ್ರತಿಯೊಬ್ಬರನ್ನು ಗೌರವಭಾವದಿಂದ ಕಾಣುವವರು, ಪುಸ್ತಕಪ್ರೇಮಿ, ಸ್ವಯಂ ಪ್ರೇರಕರು, ತಮ್ಮ ಸುತ್ತ ಮುತ್ತಲಿನ ಜನ ಸಂತೋಷದಿಂದ ಇರುವುದನ್ನು ಬಯಸುವವರು, ತಮ್ಮ ಸಹಾಯ ಮತ್ತು ಮಾರ್ಗದರ್ಶನದ ಅಗತ್ಯವಿದ್ದವರಿಗೆ

ಸಹಾಯಮಾಡಲು ಸದಾ ಸಿದ್ಧರಿರುವವರು. ಸಮಾಜ ಸೇವೆಯಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡು ದುಡಿಯುತ್ತಿರುವ ಇವರು ಯಾರಾದರು ತಮ್ಮ ಕಷ್ಟ ಕಾರ್ಪಣ್ಯಗಳನ್ನು ಹೇಳಿಕೊಳ್ಳಲು ಮುಂದಾದಾಗ ಅಷ್ಟೇ ತಾಳ್ಮೆಯಿಂದ ಆಲಿಸಿ ಸೂಕ್ತ ಸಲಹೆ, ಸಹಾಯ ಮಾಡಬಯಸುವ ಮಾನ್ಯರು ತನ್ನ ಅಭ್ಯುದಯಕ್ಕಿಂತ ಸಾಂಸ್ಥಿಕ ಪ್ರಗತಿಗೆ ಹೆಚ್ಚು ಒತ್ತು ನೀಡುವವರು ಎಂದು ಹೇಳಲು ಹೆಮ್ಮೆ ಎನಿಸುತ್ತದೆ.

WISH ಸೂತ್ರದಲ್ಲಿ ಹೆಚ್ಚು ನಂಬಿಕೆ ಇಟ್ಟು ಅದನ್ನು ಹೀಗೆ ವಿಸ್ತರಿಸಿ ಪ್ರತಿಯೊಬ್ಬರಿಗೂ ಶುಭ ಕೋರುವುದು ಅವರ ಅಭ್ಯಾಸ.

W - WILL POWER (ಧೀಶಕ್ತಿ)

I - IINFORMATION BASE (ಮಾಹಿತಿ ಬುನಾದಿ)

S - SET PURPOSE (ಸ್ಪಷ್ಟ ಉದ್ದೇಶ)

H - HARD WORK (ಕಠಿಣ ಪರಿಶ್ರಮ)

"ಸೋಲನ್ನು ಸೋಲಿಸುವುದಷ್ಟೇ ಗೆಲುವಲ್ಲ, ಜೀವನದ ಸಂಕಷ್ಟಗಳನ್ನು, ಅಡ್ಡಿ ಆತಂಕಗಳನ್ನು ಮೀರಿ, ಸಹಿಸಿ ಕಲಿಯುವ ಹಾದಿ ಎಂದು ಪರಗಣಿಸುವುದೆ ಗೆಲವು"

"ಯಶಸ್ಸು ಕೇವಲ ಹಣ, ಹೆಸರು, ಖ್ಯಾತಿ ಗಳಿಸುವುದಷ್ಟೇ ಅಲ್ಲ ಅವುಗಳ ಸದ್ಬಳಕೆ ಹಾಗೂ ಸದ್ವಿನಿಯೋಗವೂ ಹೌದು."

"ಜೀವನವೆಂಬುದ ಕೇವಲ ಆನಂದವಷ್ಟೇ ಅಲ್ಲ, ನೋವಿನಲ್ಲೂ, ದುಃಖದಲ್ಲೂ ನೆಮ್ಮದಿಯನ್ನು ಹುಡುಕುವ ಒಂದು ಸಾರ್ಥಕ ಪ್ರಯತ್ನ" ಅವರ ಇಂಥ ಬಾಳಸಂಜೀವಿನಿ ಸೂತ್ರದ ಮಾತುಗಳು ಎಲ್ಲರಿಗೂ ದಾರಿದೀಪವಾಗಿದೆ.

ನಾವು ನಮ್ಮ ಗುರುಗಳೊಂದಿಗೆ ಕಳೆದ ಪ್ರತಿಯೊಂದು ಕ್ಷಣವೂ ಪ್ರಾಮಾಣಿಕತೆ, ಕಾರ್ಯತತ್ಪರತೆ, ಬದ್ಧತೆ, ನಿಷ್ಠೆಯನ್ನು ಬೋಧಿಸಿದ ಅನುಭವವಾಗಿದೆ. ಅವರಿಂದ ಕಾರ್ಯಕ್ರಮ ವನ್ನು ಯೋಜಿಸುವ ರೂಪಿಸುವ ನಿರ್ವಹಿಸುವ ಅಚ್ಚುಕಟ್ಟುತನ ಕಲಿಯುವುದರ ಜತೆಗೆ ಇಂದಿಗೂ ಸಮಸ್ಯೆಗಳು ಎದುರಾದಾಗ ಅವುಗಳನ್ನು ದಿಟ್ಟತನದಿಂದ ಎದುರಿಸಿ, ಸಮಸ್ಯೆಗಳನ್ನು ಅವಕಾಶವಾಗಿಸಿಕೊಂಡು ಪರಿವರ್ತಿಸಿಕೊಂಡು ಗೆಲ್ಲುವ ಛಲವನ್ನು ಗಳಿಸಿಕೊಂಡೆವು.

ಇಂದು ನಾವೇನಾದರು ಸಾಧಿಸಿದ್ದರೆ ಅದು ಅವರ ನಿರಂತರ ಸಹಕಾರ ಸಕಾಲಿಕ ಮಾರ್ಗದರ್ಶನ, ನಿರಂತರ ಪ್ರೋತ್ಸಾಹವೇ ಕಾರಣ. ಇವರು ತಂದೆಯಂತೆ ಸಲಹೆ-ಸಹಕಾರ ನೀಡಿ ಕಾರ್ಯಪ್ರವೃತ್ತರಾಗಲು ಪ್ರೇರೇಪಿಸಿ, ತಾಯಿಯಂತೆ ಮಾರ್ಗದರ್ಶಕರಾಗಿ ನಿಂತು ಭವಿಷ್ಯದ ಬೆಳಕಿನೆಡೆಗೆ ಕೊಂಡೊಯ್ಯುವ ಆದರ್ಶವ್ಯಕ್ತಿ.

"ವಿದ್ಯಾರ್ಥಿಗೆ ಗುರು ಬೋಧಿಸಿದ ಒಂದು ಪದ, ಪ್ರಪಂಚದ ಯಾವ ವಸ್ತುವಿನಿಂದಲೂ ತೀರಿಸಲು ಸಾಧ್ಯವಿಲ್ಲದ ಸಾಲ" ಎಂಬ ಸಂಸ್ಕೃತೋಕ್ತಿಯಂತೆ ನಮ್ಮ ಬದುಕನ್ನು ರೂಪಿಸಿದ ಗುರುವಿಗೆ ಇದೋ ನಮ್ಮ ನುಡಿ ನಮನ.

**ಗೌರವಾನ್ವಿತ ಗುರುವೇ ನನ್ನ ಶಿರಸಾಷ್ಟಾಂಗ ನಮನ**
**ಮೌಢ್ಯವೆಂಬ ಕತ್ತಲಿನಿಂದ ಹೊಳೆವ ಬೆಳಕಿನೆಡೆಗೆ ನನ್ನನ್ನು ನಡೆಸು**
**ಕೆಳಮಟ್ಟದಿಂದ ಮೇಲಕ್ಕೆತ್ತು, ಹತಾಶೆಯ ಬುಡದಿಂದ ಅಪರಿಮಿತ ಬಯಕೆಯ**
**ಎತ್ತರಕ್ಕೆ ಕೊಂಡೊಯ್ಯು,**
**ಓ ಗೌರವಾನ್ವಿತ ಗುರುವೇ ಇದೂ ನನ್ನ ನಮಸ್ಕಾರ**
**ಬೋಧಿಸು । ನಡೆಸು । ಮಾರ್ಗದರ್ಶನ ಮಾಡಿ ನನ್ನನ್ನು ಮೇಲಕ್ಕೆತ್ತು**
**ನನ್ನ ಮನಸ್ಸನ್ನು ಪ್ರಕಾಶಿಸು, ನನ್ನ ಆತ್ಮವನ್ನು ಬೆಳಗಿಸು.**
**ಓ ಗೌರವಾನ್ವಿತ ಗುರುವೇ ಇದೋ ನನ್ನ ನಮನ.**
**ನನ್ನ ಕಲ್ಮಶಗಳನ್ನು ತೊಳೆದು ಶುದ್ಧಿಗೊಳಿಸು, ದೋಷ / ದೌರ್ಬಲ್ಯಗಳಿಂದ**
**ದೂರವಾಗಿಸು ಪರಿಪೂರ್ಣತೆಯೆಡೆಗೆ ಕೊಂಡೊಯ್ಯು.**
**ನನ್ನ ಸಹ ಬಂಧುಗಳನ್ನು ಬಲಪಡಿಸು, ನನ್ನ ಜೀವನವನ್ನು ಸನ್ಮಾರ್ಗದೆಡೆಗೆ ಬೆಳಸು**
**ಓ ಗೌರವಾನ್ವಿತ ಗುರುವೆ ನಿನಗಿದೊ ಶಿರಸಾಷ್ಟಾಂಗ ನಮನ.**

ಕನ್ನಡಾನುವಾದ: ***ಶಾಂತರಾಜು***

❖

# ನೆಚ್ಚಿನ ಗುರು

## (ಕೆ.ಎಸ್. ನಂಜುಂಡಯ್ಯ)

● ಎಸ್. ಕೃಷ್ಣಮೂರ್ತಿ

ಅರ್ಥಶಾಸ್ತ್ರದ ಆನರ್ಸ್ ಪದವಿಯ ಪರೀಕ್ಷೆಗಾಗಿ ನಾವು ಎಂಟು ಪಠ್ಯ ವಿಷಯಗಳನ್ನು ಓದಬೇಕಾಗಿದ್ದಿತು. ಅವುಗಳಲ್ಲಿ ಒಂದು ಮನಿ ಅಂಡ್ ಬ್ಯಾಂಕಿಂಗ್ (ಎಂ. ಅಂಡ್ ಬಿ) ಇದರಷ್ಟು ತಲೆ ನೋವು ತರುವಂಥ ಸಬ್ಜೆಕ್ಟ್ ಬೇರೆ ಯಾವುದೂ ಇರಲಿಲ್ಲ. ಪ್ರಧಾನವಾಗಿ ಓದಬೇಕಾಗಿದ್ದುದು ಸೇಯರ್ಸ್ ಎಂಬ ಪುಣ್ಯಾತ್ಮ ಬರೆದ ಪುಸ್ತಕ. ಅದೋ ಕಬ್ಬಿಣದ ಕಡಲೆ! ಇಷ್ಟಾದರೂ ಈ ಸಬ್ಜೆಕ್ಟ್‌ನಲ್ಲಿ ನನಗೆ ವಿಶೇಷ ಆಸಕ್ತಿ. ಇತರರಿಗಿಂತ ನನಗೆ ಅಂಕಗಳು ಹೆಚ್ಚಾಗಿ ಬರುತ್ತಿದ್ದುದರಿಂದ ಒಂದು ರೀತಿಯ ಉತ್ಸಾಹವೂ ಕುದುರಿತ್ತು.

ಇದಕ್ಕೆ ಮುಖ್ಯ ಕಾರಣರಾದವರೆಂದರೆ ನನ್ನ ನೆಚ್ಚಿನ ಗುರುಗಳಾದ ಮಾನ್ಯ ಕೆ.ಎಸ್. ನಂಜುಂಡಯ್ಯನವರು. ಅವರ ಆಕರ್ಷಕ ವ್ಯಕ್ತಿತ್ವ, ಮುಖದ ಮೇಲಿನ ಪ್ರಸನ್ನತೆ, ಸಜ್ಜನಿಕೆಯ ನಡೆ ನುಡಿ, ಎಂಥವರನ್ನಾದರೂ ಅವರ ಕಡೆಗೆ ಸೆಳೆದುಕೊಳ್ಳುತ್ತಿದ್ದುವು. ಇಷ್ಟರ ಮೇಲೆ ಕಸದಲ್ಲಿಯೂ ರಸ ತೆಗೆಯುವ ಕುಶಲತೆ. ಎಂಥ ಕ್ಲಿಷ್ಟ ವಿಷಯವನ್ನಾದರೂ ಸರಳವಾಗಿ, ಬಿಡಿಸಿ ಬಿಡಿಸಿ, ಮಧ್ಯೆ ಮಧ್ಯೆ ಹಿತಮಿತವಾದ ಹಾಸ್ಯದ ಹೂರಣ ಬೆರಸಿ ಯಾರಿಗೂ ಆಕಳಿಕೆ ತೂಕಡಿಗೆ ಬಾರದಂತೆ, ತರಗತಿಯ ತುಂಬ ಲವಲವಿಕೆಯನ್ನು ಸಿಂಪಡಿಸುತ್ತಿದ್ದರು. ನನಗೆ ಹೇಗೆ ಅವರು ಅಚ್ಚು ಮೆಚ್ಚಿನ ಗುರುಗಳಾಗಿದ್ದರೋ ಹಾಗೆಯೇ ನಾನೂ ಅವರ ಅಚ್ಚುಮೆಚ್ಚಿನ ಶಿಷ್ಯನಾಗಿದ್ದೆ. ಸಂಗೀತ ಪ್ರೇಮಿಗಳಾಗಿದ್ದುದರಿಂದ ನನ್ನನ್ನು ಕಂಡರೆ ವಿಶೇಷ ಅಭಿಮಾನ.

ಚಿಕ್ಕಂದಿನಿಂದಲೂ ನನಗೆ ಆಂಗ್ಲಭಾಷಾ ವಿಶಾರದನಾಗಬೇಕೆಂಬ ಹಂಬಲ! ಇಂಗ್ಲಿಷ್ ಭಾಷೆಯಲ್ಲಿ ಚೆನ್ನಾಗಿ ಮಾತನಾಡಬೇಕು, ಬರೆಯಬೇಕು ಎಂಬ ಹೆಬ್ಬಯಕೆ. ಇದರಿಂದಾಗಿ ಪ್ರೊಫೆಸರ್ ಎಸ್.ವಿ. ರಂಗಣ್ಣ, ಪ್ರೊಫೆಸರ್ ಎಂ. ಯಮುನಾಚಾರ್ಯ ಮುಂತಾದ ಆಂಗ್ಲಭಾಷಾ ಪರಿಣಿತರ ಮನೆಗಳಿಗೆ ಹೋಗಿ ಮಾರ್ಗದರ್ಶನ ಪಡೆಯುತ್ತಿದ್ದೆ.

ರಂಗಣ್ಣನವರು ನಂಜುಂಡಯ್ಯನವರ ಮಾವನವರು. ಅವರ ಮನೆಯಲ್ಲಿ ನನಗೆ ಆದರದ ಆತಿಥ್ಯ ಎಂದೂ ತಪ್ಪಿದ್ದಿಲ್ಲ. ಆಗ ಸವಿದ ಬಿಸಿ ಬಿಸಿ ಮೆಂತ್ಯದ ದೋಸೆ, ತೆಂಗಿನಕಾಯಿ ಚಟ್ನಿ, ಹಸುವಿನ ಬೆಣ್ಣೆ, ಇವುಗಳನ್ನು ಜ್ಞಾಪಿಸಿಕೊಂಡರೆ ಈಗಲೂ ಬಾಯಲ್ಲಿ ನೀರೂರುತ್ತದೆ. ಎಷ್ಟೋ ವೇಳೆ ಮೇಷ್ಟ್ರು ಸಹ ನನ್ನ ಪಕ್ಕದಲ್ಲಿಯೇ ಕುಳಿತು ದೋಸೆಯ ರುಚಿಯನ್ನು ಚಪ್ಪರಿಸುತ್ತಿದ್ದರು. ಹೀಗಾಗಿ ನನ್ನ, ಮೇಷ್ಟ್ರ ನಡುವೆ ಪ್ರೀತಿ ವಿಶ್ವಾಸಗಳು ಸಮೃದ್ಧಿಯಾಗಿ ಬೆಳೆದು ಬಂದಿದ್ದವು.

ಹೀಗಿರುವಲ್ಲಿ ಒಂದು ದಿನ ಮೇಷ್ಟ್ರು ನನ್ನ ಮೇಲೆ ಹಠಾತ್ತನೆ ಒಂದು ಬಾಂಬು ಸಿಡಿಸಿದರು! ಮಧ್ಯಂತರ ಪರೀಕ್ಷೆಯ ಉತ್ತರ ಪತ್ರಿಕೆಯನ್ನು ಹಿಂದಿರುಗಿಸುತ್ತ, ನನ್ನ ಕಡೆ ನೋಡಿ "ಸೇಯರ್ಸ್ ಪುಸ್ತಕವನ್ನು ಕಾಪಿ ಹೊಡೆದ ಹಾಗಿದೆಯಲ್ಲ, ಕೃಷ್ಣಮೂರ್ತಿ!" ಎಂದರು ಸ್ವಲ್ಪ ಗಡುಸಾಗಿ. ಸಹಪಾಠಿಗಳು ಗುಸುಗುಸ, ಪಿಸಪಿಸ ಮಾಡುತ್ತಾ ನನ್ನ ಕಡೆ ಅರ್ಥಪೂರ್ಣವಾಗಿ ನೋಡಿದರು. ನನಗೆ ಅಳು ತಡೆಯಲಾಗಲಿಲ್ಲ. ಪಟಪಟನೆ ಕಣ್ಣೀರು ಸುರಿಯತೊಡಗಿತು.

"ನನ್ನ ಮೇಲೆ ಈ ರೀತಿ ಕಳಂಕ ಹೊರಿಸುವುದು ನ್ಯಾಯವಲ್ಲ, ಸಾರ್. ಅಂತ ಕೀಳು ಮಟ್ಟಕ್ಕೆ ಎಂದೂ ಇಳಿಯುವವನಲ್ಲ ನಾನು. ನನ್ನ ಸ್ಮರಣಶಕ್ತಿಯೆ ನನಗೆ ಮಾರಕವಾಗಿ ಪರಿಣಮಿಸಿದೆ. ಸೇಯರ್ಸ್ ಪುಸ್ತಕವನ್ನು ಪದೇಪದೇ ಪಾರಾಯಣ ಮಾಡಿದ್ದರ ಫಲ ಇದು. ಸ್ವಂತ ವಾಕ್ಯಗಳನ್ನು ಬರೆಯುವುದಕ್ಕೂ ಆಸ್ಪದವಿಲ್ಲದ ಹಾಗಾಗಿದೆ" ಎಂದೆ.

"ಹಾಗೇನೂ! ಹಾಗಾದರೆ ನಿನ್ನ ಅಸಾಧಾರಣ ಜ್ಞಾಪಕ ಶಕ್ತಿಯನ್ನು ಪರೀಕ್ಷಿಸಬಹುದಷ್ಟೇ?" ಎಂದು ಸವಾಲು ಒಡ್ಡಿದರು ಮೇಷ್ಟ್ರು.

"ಸಿದ್ಧವಾಗಿದ್ದೀನಿ, ಸಾರ್" ಎಂದೆ.

ತಮ್ಮ ಸಂಗಡ ತಂದಿದ್ದ ಯಾವುದೋ ಒಂದು ಪುಸ್ತಕದಿಂದ ಐದಾರು ವಾಕ್ಯಗಳುಳ್ಳ ಒಂದು ಪ್ಯಾರಾಗ್ರಾಫನ್ನು ತೋರಿಸಿ, "ಇದನ್ನು ಓದಿಕೊಂಡು ಕ್ಲಾಸ್ ಮುಗಿಯುವಷ್ಟರಲ್ಲಿ ಹೇಳು, ನೋಡೋಣ" ಎಂದರು!

ತರಗತಿಯಲ್ಲಿ ಸ್ಮಶಾನ ಮೌನ!

ತರಗತಿ ಮುಗಿಯುವ ಮುನ್ನ ವೇದಿಕೆಯನ್ನೇರಿ ಬ್ಲ್ಯಾಕ್ ಬೋರ್ಡಿನ ಮೇಲೆ, ಕಾಮ ಫುಲ್‌ಸ್ಟಾಪ್‌ಗಳನ್ನೂ ಬಿಡದಂತೆ ಇಡೀ ಪ್ಯಾರಾಗ್ರಾಫನ್ನು ಚಾಚೂ ತಪ್ಪಿಲ್ಲದೆ ಬರೆದೆ. ಈಗ ಮೇಷ್ಟ್ರ ಕಣ್ಣುಗಳಿಂದ ಧಾರಾಕಾರವಾಗಿ ನೀರು ಪ್ರವಹಿಸತೊಡಗಿತು. ಬರಸೆಳೆದು ನನ್ನನ್ನು ಅಪ್ಪಿಕೊಂಡು, "ನಿನ್ನ ಯೋಗ್ಯತೆ ಏನು ಎಂಬುದನ್ನು ನಾನು ಚೆನ್ನಾಗಿ ಬಲ್ಲೆ ಮೂರ್ತಿ. ನಿನ್ನ ವಿಷಯದಲ್ಲಿ ನಾನು ಯಾವ ರೀತಿಯ ಪಕ್ಷಪಾತವನ್ನೂ ತೋರುತ್ತಿಲ್ಲ ಎಂಬುದನ್ನು ಸಾಬೀತು ಪಡಿಸಲು ಹೀಗೆ ಮಾಡಬೇಕಾಯಿತು. God bless you" ಎಂದು ಎದೆಯಾಳದಿಂದ ಆಶೀರ್ವದಿಸಿದರು.

ಎಂ. ಅಂಡ್ ಬಿ. ಪೇಪರ್ ಸಂಬಂಧವಾಗಿಯೇ ಜರುಗಿದ ಇನ್ನೊಂದು ಘಟನೆಯನ್ನು ನೆನಪಿಸಿಕೊಂಡರೆ ಈಗಲೂ ಮೈ ಝುಂ ಎನ್ನುತ್ತದೆ.

ಆನರ್ಸ್ ಅಂತಿಮ ಪರೀಕ್ಷೆ ಪ್ರಾರಂಭವಾಗಿ ಎರಡು ದಿನಗಳು ಕಳೆದಿದ್ದವು. ಮೂರನೆಯ ದಿನದ ಪರೀಕ್ಷೆಯ ವಿಷಯವೇ 'ಎಂ. ಅಂಡ್. ಬಿ' ಹಿಂದಿನ ಎರಡು ದಿನಗಳ ಪರೀಕ್ಷೆಗಳಲ್ಲಿಯೂ ತೃಪ್ತಿಕರವಾಗಿ ಬರೆದಿದ್ದೆನಾದ್ದರಿಂದ ಮೂರನೆಯ ದಿನವೂ ಉತ್ಸಾಹಭರಿತನಾಗಿಯೇ ಹೊರಟಿದ್ದೆ.

ಅಂದಿನ ಇನ್‌ವಿಜಿಲೇಷನ್ ಕೆಲಸಕ್ಕೆ ಬಂದಿದ್ದವರು, ನಂಜುಂಡಯ್ಯನವರಂತೆಯೇ ನನಗೆ ಅಚ್ಚುಮೆಚ್ಚಿನ ಅಧ್ಯಾಪಕರಾಗಿದ್ದ ಎಸ್.ಎಲ್. ರಾಮರಾಯರು. ನನ್ನ ಆತ್ಮವಿಶ್ವಾಸ ಇಮ್ಮಡಿಯಾಯಿತು.

ರಾಮರಾಯರು ಸಭ್ಯತೆಯ ಸಾಕಾರ. ನೋಟ ಹಿತ, ನಡೆ ನುಡಿ ಹಿತ. ಥೇಟ್ ಇಂಗ್ಲಿಷ್‌ಮನ್ ತರಹ ಕಾಣಿಸುತ್ತಿದ್ದರು. ಎಂದೂ ಧ್ವನಿ ಎತ್ತರಿಸಿದವರಲ್ಲ. ಹುಬ್ಬು ಗಂಟಿಕ್ಕಿದವರಲ್ಲ. ಬಿಂಕ ಬಿಗುಮಾನಗಳಿಂದ ಬೀಗಿದವರಲ್ಲ. ಯಾರು ಬೇಕಾದರೂ ಯಾವಾಗ ಬೇಕಾದರೂ ಅವರನ್ನು ನಿಸ್ಸಂಕೋಚವಾಗಿ ಕಾಣಬಹುದಾಗಿತ್ತು. ಒಳ್ಳೆಯ ಟೆನಿಸ್ ಆಟಗಾರರು. ಸಂಗೀತಾಭಿಮಾನಿಗಳು. ನನ್ನಲ್ಲಿ ವಿಶೇಷ ಅನುಗ್ರಹ ಬುದ್ಧಿ. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯಲ್ಲಿ ತಾವು ವ್ಯಾಸಂಗ ಮಾಡುವ ವೇಳೆ ಸಿದ್ಧಪಡಿಸಿಕೊಂಡಿದ್ದ ನೋಟ್ಸ್‌ಗಳನ್ನೆಲ್ಲ ನನಗೆ ಕೊಟ್ಟು ಪ್ರೋತ್ಸಾಹಿಸಿದ ಅವರ ಔದಾರ್ಯ, ಶಿಷ್ಯವಾತ್ಸಲ್ಯ ಚಿರಸ್ಮರಣೀಯ.

ರಾಯರ ಪಾಠಕ್ರಮ ವಿಶಿಷ್ಟವಾದದ್ದು. ಪಾಠ ಮಾಡುತ್ತಿದ್ದಾರೆಯೋ ವಿದ್ಯಾರ್ಥಿಗಳೊಡನೆ ಮಾತುಕತೆಯಾಡುತ್ತಿದ್ದಾರೆಯೋ ಎಂಬುದೇ ಎಷ್ಟೋ ವೇಳೆ ತಿಳಿಯುತ್ತಿರಲಿಲ್ಲ. ಅದಕ್ಕೊಂದು ನಿದರ್ಶನ ಇದು:

ಒಂದು ಕ್ಲಾಸಿನಲ್ಲಿ ತಾವು ಕೆಲವು ವರ್ಷಗಳ ಹಿಂದೆ ಖರೀದಿಸಿದ್ದ ಸೈಟಿನ ಬಗೆಗೆ ಪ್ರಸ್ತಾಪ ಮಾಡುತ್ತ "ನಾನು ಆಗ ಸೈಟಿಗೆ ಕೊಟ್ಟಿದ್ದು ಕೇವಲ ಮೂರು ಸಾವಿರ, ಅಷ್ಟೆ. ಲೊಕ್ಯಾಲಿಟಿ ಡೆವೆಲಪ್ ಆಗಿರಲಿಲ್ಲ. ಸುತ್ತಮುತ್ತ ಮನೆಗಳೇ ಬಂದಿರಲಿಲ್ಲ. ಕಾಡು ಇದ್ದಹಾಗೆ ಇತ್ತು. ಈಗ ನನ್ನ ಸೈಟಿನ ಸುತ್ತಮುತ್ತ ಹಾಸ್ಪಿಟಲ್, ಬಿಸಿನೆಸ್ ಕಾಂಪ್ಲೆಕ್ಸ್, ಹೊಟೇಲು, ಸಿನಿಮಾ ಥಿಯೇಟರ್ ಎಲ್ಲ ಬಂದುಬಿಟ್ಟಿವೆ. ಖಾಲಿ ಸೈಟಿಗೆ ವಿಪರೀತ ಡಿಮ್ಯಾಂಡು. ನನ್ನ ಸೈಟನ್ನೇ ಈಗ ಎರಡು ಲಕ್ಷಕ್ಕೆ ಕೇಳ್ತಾ ಇದ್ದಾರೆ. ಮಾರಿದರೆ ಕೂತ ಕೂತ ಹಾಗೆ ಒಂದೂವರೆ ಲಕ್ಷದ ಮೇಲೆ ಪ್ರಾಫಿಟ್ಟು! ಯಾರಿಗುಂಟು, ಯಾರಿಗಿಲ್ಲ? ಇದಕ್ಕೆ ನಾನೇನೂ ಪ್ರಯತ್ನ ಮಾಡಲಿಲ್ಲ. ಲೊಕ್ಯಾಲಿಟಿ ಇಂಪ್ರೂವ್ ಆಯ್ತು. ಸೈಟಿನ ಬೆಲೆ ತನ್ನಷ್ಟಿಗೆ ತಾನೇ ಮೇಲೇರಿತು. Unearned increment ಎಂದರೆ ಇದೇನೆ. ನಿಮ್ಮ ಟೆಕ್ಸ್ಟ್ ಬುಕ್ಕಿನಲ್ಲಿ ಆರನೆಯ ಅಧ್ಯಾಯ ಓದಿ. ಚೆನ್ನಾಗಿ ಅರ್ಥವಾಗುತ್ತೆ" ಎಂದರು.

ಕ್ಲಾಸಿನಲ್ಲಿ ಎಲ್ಲರಿಗೂ ಅರ್ಥವಾಗುವಂತೆ ಅರ್ಧ ಘಂಟೆಯಲ್ಲಿ ವಿವರಿಸಿದ್ದ ವಿಷಯ, ಪುಸ್ತಕದಲ್ಲಿ ಹದಿನೈದು ಪುಟಗಳಷ್ಟು ಹರಡಿಕೊಂಡಿತ್ತು! ಅಂಥ ಸೊಗಸಾದ ಪಾಠಗಾರಿಕೆ ಮೇಷ್ಟ್ರದು!

ಪರೀಕ್ಷೆಯ ಕೊಠಡಿಯಲ್ಲಿ ಅಡಿ ಇಡುತ್ತಿದ್ದಂತೆಯೇ 'ಗುಡ್‌ಲಕ್' ಎಂದು ನಗುಮುಖದಿಂದ ಆಶೀರ್ವದಿಸಿದರು ರಾಮರಾಯರು. ನನಗೆ ಚತುರ್ಭುಜವಾಯಿತು. ಹಿಂದಿನ ಎರಡು ಪ್ರಶ್ನೆಪತ್ರಿಕೆಗಳಿಗಿಂತ ಚೆನ್ನಾಗಿ ಅಂದಿನ ಪತ್ರಿಕೆಯನ್ನು ಉತ್ತರಿಸಿದ್ದೆ.

ಬೇಗ ಮನೆಗೆ ಹೋಗಿ ನನ್ನ ಬರುವಿಕೆಗಾಗಿಯೇ ಕಾಯುತ್ತ ಕುಳಿತಿರುತ್ತಿದ್ದ ತಂದೆಯವರಿಗೆ ವರದಿ ಒಪ್ಪಿಸಬೇಕೆಂದು ಮನೆಯ ಕಡೆ ಅವಸರವಸರವಾಗಿ ಹೆಜ್ಜೆ ಹಾಕಿದೆ.

ನನ್ನ ಗೆಲುವನ್ನು ನೋಡಿದೊಡನೆಯೇ ತಂದೆಯವರಿಗೆ ಸಂತೃಪ್ತಿಯ ಸಮಾಧಾನ. "ಫಸ್ಟ್‌ಕ್ಲಾಸ್ ಮಾರ್ಕ್ಸ್‌ಗೆ ಮೋಸವಿಲ್ಲ, ಅಣ್ಣ" ಎಂದು ಹೇಳುತ್ತಿರುವಂತೆಯೇ ಮೇಷ್ಟ್ರು ಸೈಕಲ್ ಸವಾರಿ ಮಾಡಿಕೊಂಡು ದಡಬಡನೆ ಬಂದರು. ಅವರ ಹಿಂದೆ ಒಂದು ಟಾಂಗಾ ಗಾಡಿ. ನಾನೂ ತಂದೆಯವರೂ ಕಕ್ಕಾಬಿಕ್ಕಿಯಾದೆವು!

"ಏನು ಕೃಷ್ಣಮೂರ್ತಿ, ಎಲ್ಲಾ ಜಾಣ ತುಸ ಕೋಣ ಎನ್ನುವ ಹಾಗೆ ಅಷ್ಟು ಚೆನ್ನಾಗಿ ಬರೆದು, ಆನ್ಸರ್ ಬುಕ್ಕಿನ ಮೇಲೆ ರಿಜಿಸ್ಟರ್ ನಂಬರನ್ನೇ ಹಾಕದೆ ಬಂದುಬಿಟ್ಟಿದ್ದೀಯಲ್ಲ!" ಎಂದರು.

ಜಂಘಾಬಲವೇ ಬಿದ್ದುಹೋಯಿತು ನನಗೆ. ತಂದೆಯವರ ಬಾಯಲ್ಲಿ ಮಾತೇ ಹೊರಡಲಿಲ್ಲ.

"ಆತಂಕ ಪಡಬೇಡ. ನಿನಗೆ ಸೈಕ್ಲಿಂಗ್ ಬರುವುದಿಲ್ಲ ಎನ್ನುವುದು ಗೊತ್ತಿತ್ತು ನನಗೆ. ಅದಕ್ಕೋಸ್ಕರವೇ ಗಾಡಿ ತಂದಿದ್ದೀನಿ. ಬೇಗ ಹೊರಟು ಬಾ. ನಿನ್ನ ಪೇಪರನ್ನು ಪ್ರಿನ್ಸಿಪಾಲ್ ರಾಲೋ ಅವರ ವಶಕ್ಕೆ ಕೊಟ್ಟು ಬಂದಿದ್ದೀನಿ. ನಿನಗೋಸ್ಕರ ಕಾಯುತ್ತಿದ್ದಾರೆ ಅವರು. 'ಸಾರಿ ಸಾರ್!' ಎಂದು ಹೇಳಿ ರಿಜಿಸ್ಟರ್ ನಂಬರ್ ಎಂಟರ್ ಮಾಡು" ಎಂದರು.

ನ್ಯಾಯಾಧೀಶರ ಮುಂದೆ ಅಪರಾಧಿ ತಲೆ ತಗ್ಗಿಸಿ ನಿಲ್ಲುವ ಹಾಗೆ ರಾಲೋ ಸಾಹೇಬರ ಮುಂದೆ ನಿಂತೆ. ಎಷ್ಟು ಹೊತ್ತಾದರೂ ತಲೆ ಎತ್ತಿ ನನ್ನ ಕಡೆ ನೋಡಲೇ ಇಲ್ಲ ಅವರು. ನನಗೆ ಬೆವರು ಕಿತ್ತುಕೊಂಡು ಬರುತ್ತಿತ್ತು. "ದಿಗಿಲು ಬೀಳಬೇಡ" ಎಂದು ಮೇಷ್ಟ್ರು ಕಣ್ಣುಸನ್ನೆಯಿಂದಲೇ ಧೈರ್ಯ ಹೇಳಿದರು.

ರಾಲೋ ಸಾಹೇಬರಿಗೆ ನಾನೇನೂ ಅಪರಿಚಿತನಾಗಿರಲಿಲ್ಲ. ಸಂಗೀತದಲ್ಲಿ ನನಗಿದ್ದ ಒಲವು ಪರಿಶ್ರಮಗಳನ್ನು ಮೆಚ್ಚಿಕೊಂಡು ಒಂದೆರಡು ಬಾರಿ ಭುಜ ತಟ್ಟಿದ್ದರು. ನಾನು ಅವರ ಪೆಟ್ ಸ್ಟೂಡೆಂಟ್ಸ್ ಪೈಕಿ ಒಬ್ಬ. 'ಮರ್ಚೆಂಟ್ ಆಫ್ ವೆನಿಸ್'ನ ಪೋರ್ಷಿಯಾಳ ವಾದ, ಹ್ಯಾಮ್ಲೆಟ್‌ನಲ್ಲಿ ಬರುವ ಪ್ರೇತದರ್ಶನ ಪ್ರಸಂಗಗಳನ್ನು ಅವರು ವರ್ಣಿಸುತ್ತಿದ್ದ ರೀತಿ ಅನನ್ಯವಾದದ್ದು. ವೇದಿಕೆಯ ತುಂಬ ಹರಿದಾಡುತ್ತ ಅಭಿನಯಪೂರ್ವಕವಾಗಿ ಪಾಠ ಹೇಳುತ್ತಿದ್ದರೆ ಪಾತ್ರಗಳೇ ಸಜೀವವಾಗಿ ಕಣ್ಣೆದುರು ಸುಳಿದಾಡುತ್ತಿದ್ದಂತೆ ಭಾಸವಾಗುತ್ತಿತ್ತು. ಥಿಯೇಟರಿನಲ್ಲಿ ಕುಳಿತು ನಾಟಕ ನೋಡಿದ ಅನುಭವ ಬರುತ್ತಿತ್ತು. ಅವರ ಕ್ಲಾಸಿನಲ್ಲಿ ನನ್ನದು ಯಾವಾಗಲೂ ಮುಂದಿನ ಬೆಂಚು.

ಒಮ್ಮೆ ನನ್ನ ಉತ್ತರ ಪತ್ರಿಕೆಯೊಂದರ ಕೆಲವು ಭಾಗಗಳನ್ನು ತುಂಬಿದ ಕ್ಲಾಸಿನಲ್ಲಿ ಓದಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು.

ಅವರ ಭಾವಚಿತ್ರವನ್ನು ಪೆನ್ಸಿಲ್‌ನಲ್ಲಿ ಸ್ಕೆಚ್ ಮಾಡಿ ಅವರ ಹಸ್ತಾಕ್ಷರವನ್ನು ಪಡೆದಿದ್ದೆ.

ಇಷ್ಟೆಲ್ಲ ಆದರೂ ನನ್ನನ್ನು ತೀರ ಅಪರಿಚಿತನಂತೆ ಕಂಡಾಗ ನನ್ನ ಎದೆ ಧಸಕ್ಕೆಂದಿತು. ಏಕಾಏಕಿ ರಿಜಿಸ್ಟರ್ ನಂಬರನ್ನು ಎಂಟರ್ ಮಾಡಲು ಅನುಮತಿ ನೀಡಲಿಲ್ಲ.

"ಮೊದಲು ಉತ್ತರ ಬರೆದದ್ದು ಯಾವ ಪ್ರಶ್ನೆಗೆ? ಕೊನೆಯ ಪ್ರಶ್ನೆ ಯಾವುದು? ಎಷ್ಟು ಅಡಿಷನಲ್ ಷೀಟ್ಸ್ ಉಪಯೋಗಿಸದ್ದೀಯೆ?" ಎಂದು ಮುಂತಾಗಿ ತನಿಖೆ ಮಾಡಿ, ಬಿಳಿಯ ಹಾಳೆಯೊಂದರ ಮೇಲೆ ನಾಲ್ಕು ವಾಕ್ಯಗಳನ್ನು ಬರೆಯುವಂತೆ ಹೇಳಿ, ಅದನ್ನೂ ಉತ್ತರ ಪತ್ರಿಕೆಯ ಕೈ ಬರಹವನ್ನೂ ತಾಳೆಹಾಕಿ ನೋಡಿ, ಆ ಬಳಿಕ ಅನುಮತಿಯಿತ್ತರು!

"ನಿಮ್ಮ ಉಪಕಾರಕ್ಕೆ ಚಿರ ಋಣಿ, ಸಾರ್" ಎಂದೆ.

"ನಿನ್ನ ಭಾಗದ ದೇವರಂತೆ ಬಂದವರು ರಾಮರಾಯರು. ನಿನ್ನ ಕೃತಜ್ಞತೆ ಅವರಿಗೆ ಸಲ್ಲಬೇಕು. ಇಂಥ ತಪ್ಪನ್ನು ಮುಂದೆ ಎಂದೂ ಮಾಡಬೇಡ" ಎಂದು ಬುದ್ಧಿವಾದ ಹೇಳಿದರು.

"ನಿನ್ನ ಬಗೆಗೆ ನನಗೆ ಎಳ್ಳಷ್ಟೂ ಅಪನಂಬಿಕೆ ಇರಲಿಲ್ಲ. ಆದರೆ ಕರ್ತವ್ಯದ ದೃಷ್ಟಿಯಿಂದ ತನಿಖೆ ನಡೆಸಬೇಕಾಯಿತು. ಬೇಸರಪಡಬೇಡ" ಎಂದು ಸಮಾಧಾನದ ಮಾತುಗಳನ್ನಾಡಿ ವಾತ್ಸಲ್ಯದಿಂದ ಕೈಕುಲುಕಿ ಬೀಳ್ಕೊಟ್ಟರು.

'ಮನಿ ಆಂಡ್ ಬ್ಯಾಂಕಿಂಗ್' ಎಂದೊಡನೆ ಈಗಲೂ ನನ್ನ ಕಣ್ಣ ಮುಂದೆ ಪ್ರತ್ಯಕ್ಷವಾಗುವವರು ಈ ತ್ರಿಮೂರ್ತಿಗಳು–ಕೆ.ಎಸ್. ನಂಜುಂಡಯ್ಯನವರು, ಎಸ್.ಎಲ್. ರಾಮರಾಯರು ಹಾಗೂ ಪ್ರಿನ್ಸಿಪಾಲ್ ರಾಲೋ ಅವರು. ಇವರಿಗೆ ನಾನು ಚಿರ ಋಣಿ.

ಅಂದಿನ ಗುರು–ಶಿಷ್ಯ ಲೋಕ ಇಂದಿನವರಿಗೆ ಕಾಲ್ಪನಿಕ ಪ್ರಪಂಚದಂತೆ ಕಂಡರೆ ಸೋಜಿಗವೇನಿಲ್ಲ!

❖

# ಹೆಮ್ಮೆಯ ಗುರು

## (ಎಚ್ಚೆಮ್ಮೆಸ್)

• *ಡಾ॥ ಬಿ.ಎಸ್. ಪ್ರಣತಾರ್ತಿಹರನ್*

೧೯೭೩ರಲ್ಲಿ ಪ್ರೊ. ಎಚ್.ಎಮ್. ಶಂಕರನಾರಾಯಣರಾಯರು (ನಮ್ಮ ಗೌರವಾನ್ವಿತ ಎಚ್ಚೆಮ್ಮೆಸ್) ಶಾರದಾವಿಲಾಸ ಕಾಲೇಜಿನ ಪ್ರಾಂಶುಪಾಲರಾದರು. ಅವರ ಸಹಸ್ರಾರು ವಿದ್ಯಾರ್ಥಿಗಳಿಗೆ ಆ ವರ್ಷ ಸಿಕ್ಕಿದ ಸಂತೋಷದ ಸುದ್ದಿ ಅದು. ೧೯೬೬ ರಿಂದ ೧೯೭೦ರವರೆಗೆ ನಾನು ಕಲಿತದ್ದು ಅದೇ ಕಾಲೇಜಿನಲ್ಲಿ. ಆ ಕಾಲಕ್ಕೆ ಅದು ಮೈಸೂರು ನಗರದ ಘನತೆವೆತ್ತ ಕೆಲವೇ ಕಾಲೇಜುಗಳಲ್ಲಿ ಒಂದಾಗಿತ್ತು. ಆ ಘನತೆಗೆ ಎಚ್ಚೆಮ್ಮೆಸ್ ಅವರಂಥ ಹಲವು ಶ್ರೇಷ್ಠ ಅಧ್ಯಾಪಕರು ಕಾರಣರಾಗಿದ್ದರು.

ಎಚ್ಚೆಮ್ಮೆಸ್ ಅವರು ನನ್ನ ಮನಸ್ಸಿನಲ್ಲಿ ವಿಶೇಷವಾಗಿ ನೆಲೆಯೂರಿರುವುದು 'ಅಶ್ವತ್ಥಾಮನ್' ಮೂಲಕ. 'ಅಶ್ವತ್ಥಾಮನ್' ಕನ್ನಡದ ಅತಿ ವಿಶಿಷ್ಟ ನಾಟಕ. ಅದರ ಭಾಷೆ, ವಸ್ತು, ರೂಪಣ ಎಲ್ಲ ದೃಷ್ಟಿಯಿಂದಲೂ ಅದು ಹೊಸ ಕಳೆಯಿಂದ ಕೂಡಿದೆ; ಪಂಪನಿಂದ ಇಂದಿನವರೆಗಿನ ಕನ್ನಡ ಸಾಹಿತ್ಯದ ಸಾಕ್ಷಿಯಂತೆ ನಿಂತಿದೆ. ಆಚಾರ್ಯ 'ಶ್ರೀ' ಅವರ ಈ ಮಾರ್ಗದರ್ಶಕ ಕೃತಿಯನ್ನು ಕಲಿಸಿದವರು ಎಚ್ಚೆಮ್ಮೆಸ್. ಅವರು ಅದನ್ನು ಓದುತ್ತಿದ್ದ ರೀತಿಯೇ ವಿಶಿಷ್ಟವಾಗಿತ್ತು. ನಮಗೆ ಅದನ್ನು ಗಂಭೀರವಾಗಿಯೇ ವಿಮರ್ಶಿಸುತ್ತಿದ್ದರು; ಆ ವಿಮರ್ಶೆ ಕೃತಿಯ ಅಂತಃಸತ್ವವನ್ನು ಅನಾವರಣಗೊಳಿಸುತ್ತಿತ್ತು, ಸಾಹಿತ್ಯದ ಬಗೆಗೆ ಪ್ರೀತಿಯನ್ನು ಹುಟ್ಟಿಸುತ್ತಿತ್ತು, ಮುಖ್ಯವಾಗಿ ರಸಾನುಭವವನ್ನು ಉಂಟು ಮಾಡುತ್ತಿತ್ತು.

ಅವು ಎಚ್ಚೆಮ್ಮೆಸ್ ಅವರ ಅಧ್ಯಾಪಕ ವೃತ್ತಿಯ ಕೊನೆ ಕೊನೆಯ ವರ್ಷಗಳಾಗಿದ್ದವು. ಅಂದರೆ ಅವರ ಅಧ್ಯಾಪಕ ಕಲೆ ಪರಿಪಕ್ವಗೊಂಡು ಉನ್ನತಿಗೇರಿದ್ದ ದಿನಗಳಾಗಿದ್ದವು. ಗಂಭೀರವಾದ ಮತ್ತು ದೃಢವಾದ ದನಿಯಲ್ಲಿ ಅವರ ಪಾಠ ನಡೆದಿರುತ್ತಿತ್ತು. ಈ ಪಾಠವು ಮದಗಜದ ನಡಿಗೆಯಂತಿರುತ್ತಿತ್ತು. ನಾಟಕೀಯತೆ, ಧ್ವನಿಯ ಏರಿಳಿತ, ಸಾರ್ಥಕ ಒತ್ತುಗಳು, ಗಮಕ ಎಲ್ಲವೂ ಅಲ್ಲಿರುತ್ತಿತ್ತು, ಉತ್ಸಾಹವೂ ತುಂಬಿರುತ್ತಿತ್ತು. ಮಿತವಾದ ಆಂಗಿಕ ಚಲನೆಗಳು ಮತ್ತಷ್ಟು ಅರ್ಥವನ್ನು ತುಂಬುತ್ತಿದ್ದವು. ಅವರು ಒಂದೊಂದು ಪದಕ್ಕೂ ವಾಕ್ಯಕ್ಕೂ ನಡುವೆ ಇಡುತ್ತಿದ್ದ ಉಸುರಿನ ಅಂತರವು ಅವರಿಗೇ ವಿಶಿಷ್ಟವಾಗಿರುತ್ತಿತ್ತು. ತರಗತಿಯ ಉದ್ದಕ್ಕೂ ವಿದ್ಯಾರ್ಥಿಗಳಲ್ಲಿ ಕುತೂಹಲ ತುಂಬಿರುತ್ತಿತ್ತು. ಅದು ಎಷ್ಟು ತಲ್ಲೀನತೆಯನ್ನು ಉಂಟು ಮಾಡುತ್ತಿತ್ತೆಂದರೆ ಅವರು ಇನ್ನೂ ಆಡಬೇಕಾಗಿರುವ ಮುಂದಿನ ಪದವನ್ನು ಕಿತ್ತುಕೊಂಡು ಬಿಡೋಣವೇ ಎನಿಸುತ್ತಿತ್ತು. ಇಂದಿಗೂ 'ಅಶ್ವತ್ಥಾಮನ್' ನಾಟಕವಾಗಿ ಮಾತ್ರವಲ್ಲ ಅದರಲ್ಲಿನ

ಸಾರಪೂರ್ಣ ಸಂದೇಶ ವಾಕ್ಯಗಳಿಗಾಗಿ ಕೂಡ ಮೋಹಕವಾಗಿ ನೆನಪಿನಲ್ಲಿರುವುದು ಇಂಥ ಕಾರಣಗಳಿಂದ.

ಎಲ್ಲ ಅಧ್ಯಾಪಕರಿಗೂ ವೃತ್ತಿ ಜೀವನದ ವಿಶಿಷ್ಟ ಅನುಭವಗಳು ಇದ್ದೇ ಇರುತ್ತವೆ. ಎಚ್ಚೆಮ್ಮೆಸ್ ಅವರು ಎಂದೋ ಮರೆತಿದ್ದ ಒಂದು ಗೌಣ ಘಟನೆ ಮಾತ್ರ ನನಗೆ ಅರ್ಥಪೂರ್ಣ ನಿದರ್ಶನವೆಂಬಂತೆ ಜ್ಞಾಪಕದಲ್ಲಿದೆ. ಈ ದಿನಗಳಲ್ಲೂ ತರಗತಿಗಳಲ್ಲಿ ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಇರುತ್ತಿದ್ದರು. ಕನ್ನಡ ತರಗತಿಗಳೂ ತುಂಬಿರುತ್ತಿದ್ದವು. ನಮ್ಮ ತರಗತಿಯಲ್ಲಿ ಒಬ್ಬ ಸ್ಫುರದ್ರೂಪಿ ವಿದ್ಯಾರ್ಥಿಯಿದ್ದ. ಸಾಮು ಮಾಡಿದ ದೃಢಾಂಗ ಆತನದು; ಬಣ್ಣ ಕೆಂಪು, ಆಗಲೂ ಅಷ್ಟೆ, ವಿದ್ಯಾರ್ಥಿಗಳು ಚೇಷ್ಟೆ ಮಾಡುವ ಸಂಪ್ರದಾಯವನ್ನು ಬಿಟ್ಟುಕೊಟ್ಟಿರಲಿಲ್ಲ; ಆದರೆ ನಮ್ಮ ಕಾಲೇಜಿನಲ್ಲಿ ಅದು ಅಪರೂಪವಾಗಿ ನಡೆಯುತ್ತಿತ್ತು. ಆ ಜಟ್ಟಿಯು ತನ್ನ ಚೇಷ್ಟೆಗೆ ಎಚ್ಚೆಮ್ಮೆಸ್ ಅವರ ತರಗತಿಯನ್ನೇ ಆರಿಸಿಕೊಂಡ. ಮತ್ತೇನಿಲ್ಲ, ಆತ ಬನೀನು ಹಾಕಿರಲಿಲ್ಲ. ಅಂಗಿಯ ಮೇಲಿನ ಗುಂಡಿಗಳನ್ನು ಬಿಚ್ಚಿದ್ದ. ಸಾಮು ಮಾಡಿದ್ದ ಆತನ ವಕ್ಷಸ್ಥಲ ಉಬ್ಬಿಯೇ ಇತ್ತು. ನರಗಳನ್ನು ನಿಯಂತ್ರಿಸಿ ಅದು ಎದ್ದು ಕಾಣುವಂತೆ ಮಾಡಿದ. ಎದೆಯ ಆ ಎರಡು ಗುಪ್ಪೆಗಳನ್ನು ಮಾತ್ರ ಕುಣಿಸಿ ಪ್ರದರ್ಶಿಸಿದ. ಮುಖ್ಯವಾಗಿ ಆತನ ಲಕ್ಷ್ಯವು ಹೆಣ್ಣು ಮಕ್ಕಳ ಕಡೆಗೆ ಇತ್ತು. ಹುಡುಗರೂ ನಗಲು ಇದ್ದೇ ಇದ್ದರು. ಹೆಣ್ಣು ಮಕ್ಕಳಿಗೆ ಮಾತ್ರ ಇರುಸುಮುರುಸಾಗಿತ್ತು. ಎಚ್ಚೆಮ್ಮೆಸ್ ಇದನ್ನು ಗಮನಿಸಿದರು. ಆದರೆ ಗಮನಿಸಿದಂತೆ ತೋರಿಸಕೊಳ್ಳಲಿಲ್ಲ, ತಕ್ಷಣವೇ ಪ್ರತಿಕ್ರಿಯಿಸಲೂ ಇಲ್ಲ. ತಮ್ಮ ಉಪನ್ಯಾಸವನ್ನೇ ಸನ್ನಿವೇಶಕ್ಕೆ ಹದವಾಗಿ ತಯಾರಿಸಿದರು. ಒಂದೋ ಎರಡೋ ಸಾಹಿತ್ಯಕ ಮಾತುಗಳೂ ಅಷ್ಟೇ. ಆವೇಶವಿಲ್ಲ, ಕೃತಕತೆ ಇಲ್ಲ. ಹೆಣ್ಣು ಮಕ್ಕಳ ಕಡೆ ತಿರುಗಿದರು, ಕೆಲವರು ಬುದ್ಧಿಯನ್ನು ಬೆಳೆಸುತ್ತಾರೆ, ಕೆಲವರು ದೇಹವನ್ನು ಮಾತ್ರ ಬೆಳೆಸುತ್ತಾರೆ ಎಂದು ಮೈ-ಕುಲುಕಿದರು. ಕತ್ತು ಮುಂದೆ ನೀಡಿದರು, ಬಲಹಸ್ತವನ್ನು ಆಶೀರ್ವಾದ ಮುದ್ರೆಯಲ್ಲಿ ಬೀಸಿದರು, ಪಾಠವನ್ನು ಸಹಜವಾಗಿ ಮುಂದುವರಿಸಿದರು. ಆದರೆ ಈ ಬಾರಿ ಇಡೀ ತರಗತಿ ನಕ್ಕಿತು–ಜಟ್ಟಿಯನ್ನು ನೋಡಿ. ಆತನು ತಲೆ ತಗ್ಗಿಸಿ ಕುಗ್ಗಿಹೋದ. ಸಭ್ಯವಾಗಿ ವರ್ತಿಸುವುದು ಆತನಿಗೆ (ಮಾತ್ರವಲ್ಲ, ಎಲ್ಲರಿಗೂ) ಅನಿವಾರ್ಯವಾಗಿತ್ತು. ಗುರುಗಳ ಜೊತೆ ವಿನಯದಿಂದ ಮಾತಾಡಿ ಅವರ ಅನುಗ್ರಹ ಸಂಪಾದಿಸಿ ಮಾನ ಉಳಿಸಿಕೊಂಡ.

ಎಚ್ಚೆಮ್ಮೆಸ್ ನಿವೃತ್ತರಾದ ಮೇಲೂ ಅನೇಕ ಬಾರಿ ಅವರನ್ನು ಕಂಡಿದ್ದೆ. ಪ್ರತಿಬಾರಿಯೂ 'ಸಾರ್, ನೀವು ಪದ್ಯವನ್ನು ಸುಮ್ಮನೆ ಓದಿದರೆ ನಮಗೆ ಕೇವಲ ಅರ್ಥವಾಗುವುದಷ್ಟೇ ಅಲ್ಲ, ಅನುಭವವಾಗಿ ಮೂಡಿಕೊಳ್ಳುತ್ತಿತ್ತು.'

> ನಮ್ಮೂರು ಚಂದವೋ ನಿಮ್ಮೂರು ಚಂದವೋ ಎಂದೆನ್ನ ಕೇಳಲೇಕೆ
> ನಮ್ಮೂರ ಮಂಚದಲಿ ನಿಮ್ಮೂರ ಕನಸಿದನು ವಿಸ್ತರಿಸಿ ಹೇಳಬೇಕೆ

ಎಂದು ನೀವು ಹೇಳಿದಾಗ, ನೀವು ಮೈಯನ್ನು ಪಕ್ಕಕ್ಕೆ ವಾಲಿಸಿದ್ದು, ಕತ್ತನ್ನು ತೂಗಿದ್ದು, ಕೈ ಬೀಸಿದ್ದು, ಅರ್ಥಪೂರ್ಣ ಗತಿವಿನ್ಯಾಸದಲ್ಲಿ ಅದನ್ನು ಪಲುಕಿ ಕಣ್ಣು ಮಿಂಚಿಸಿದ್ದು ಇನ್ನು

ನೆನಪಿದೆ. ಈಗಲೂ ಆ ನಿಮ್ಮ ಗಮನಕ್ಕೆ ಮೌನ ವ್ಯಾಖ್ಯಾನವೂ ನನ್ನ ಮನಸ್ಸಿನಲ್ಲಿ ಅನುರಣಿಸುತ್ತಲೇ ಇದೆ' ಎನ್ನುತ್ತಿದ್ದೆ. ಅವರು ಸಾಹಿತ್ಯದ ಬಗೆಗೆ ಒಂದೆರಡು ಕಣ್ತೆರೆಸುವ ಮಾತುಗಳನ್ನು ಹೇಳಿ ಕಳಿಸಿಕೊಡುತ್ತಿದ್ದರು.

ಒಮ್ಮೆ ಅವರ ಮಳಿಗೆಯಲ್ಲಿ ಪುಸ್ತಕಕೊಂಡದ್ದು. ಆ ವ್ಯಾಪಾರದ ದೃಷ್ಟಿಯಿಂದೇನೂ ದೊಡ್ಡ ವಿಷಯವಲ್ಲ. ನಾನು ಗುಲ್ಬರ್ಗಾದಲ್ಲಿ ಕೆಲಕಾಲ ಇದ್ದಾಗ ಜಿ.ಎಂ. ಶಿರಹಟ್ಟಿ ಎಂಬುವವರು ಗೆಳೆಯರಾದರು. ಆತ ಆಕಾಶವಾಣಿ ಕೇಂದ್ರದಲ್ಲಿ ಅಧಿಕಾರಿಯಾಗಿದ್ದರು, ಕಲಾರಸಿಕ, ಸಾಹಿತ್ಯ ಪ್ರೇಮಿ, ಮೈಸೂರು ಬೆಂಗಳೂರುಗಳಲ್ಲಿರುವ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸೌಲಭ್ಯಗಳು ತಮ್ಮ ಊರ ಕಡೆ ಇಲ್ಲ ಎಂಬ ಕೀಳರಿಮೆ ಆಗ ಆ ಭಾಗದ ಜನಕ್ಕಿತ್ತು. ನಾನು ಒಮ್ಮೆ ಮೈಸೂರಿಗೆ ಹೊರಟಿದ್ದೆ. 'ಹರನ್ ಅವರೆ, ನೀವು ಮೈಸೂರಿನಿಂದ ಹಿಂದಿರುಗುವಾಗ್ಗೆ ಛಲೋ ಪುಸ್ತಕಗಳನ್ನು ತರ್ರಿ' ಎಂದು ಹೇಳಿದ್ದರು. ಅದಕ್ಕಾಗಿ ೩೦೦೦ ರೂಪಾಯಿ ತೆಗೆದಿರಿಸಿದ್ದರು. ಅವರಿಗಾಗಿ ಕನ್ನಡದ ವಿಶಿಷ್ಟ ಪುಸ್ತಕಗಳನ್ನು ನಾನೇ ಆಯ್ಕೆ ಮಾಡಬೇಕಾಗಿತ್ತು. ಅದು ಅವರ ಪ್ರೀತಿ ಮತ್ತು ನಂಬಿಕೆ. ಕನ್ನಡದ ಎಂ.ಎ. ಆಗಿದ್ದ ನಾನೇ ಆ ಕೆಲಸ ಮಾಡಬಹುದಿತ್ತು. ಶಿರಹಟ್ಟಿಯವರು ನನ್ನ ಮೇಲಿಟ್ಟ, ವಿಶ್ವಾಸಕ್ಕೆ ಹೆಚ್ಚಿನ ನ್ಯಾಯ ದೊರಕಬೇಕು ಎನಿಸಿತು. ಆಗ ನನಗೆ ಕಂಡವರು ನನ್ನ ಪೂಜ್ಯ ಗುರುಗಳಾದ ಎಚ್.ಎಂ. ಶಂಕರನಾರಾಯಣರಾಯರು. ಅವರ ಪುಸ್ತಕ ಮಳಿಗೆಗೆ ಹೋದೆ, ಎಲ್ಲವನ್ನೂ ವಿವರಿಸಿದೆ, ಅವರೇ ಸೂಕ್ತ ಪುಸ್ತಕಗಳನ್ನು ಆರಿಸಿಕೊಟ್ಟರು. 'ಸಾರ್! ನೋಡಿ?' ಎಂದೆ. ನಾನು ದಾಕ್ಷಿಣ್ಯ ಮಾಡುವಂತಿರಲಿಲ್ಲ. ಶಿರಹಟ್ಟಿ ಅವರಿಗೂ ನಿಷ್ಠವಾಗಿರಬೇಕಾಗಿತ್ತು. 'ಎಷ್ಟು ಬೇಕು, ನಿಮಗೆ?' ಎಂದರು. 'ಸಾರ್ ಮೂವತ್ತು?" ಎಂದೆ. 'ಶೇಕಡ ಅರವತ್ತು ಹಾಕಿಕೊಡುತ್ತೇನೆ, ತೊಗೊ' ಎಂದರು. ಅದಕ್ಕೂ ಪುಸ್ತಕ ತೆಗೆದೆ. ಕಟ್ಟು ಸಿದ್ಧವಾಯಿತು. 'ಹೊರಡುತ್ತೇನೆ ಸಾರ್' ಎಂದು ನಮಸ್ಕರಿಸಿದೆ. 'ತಾಳು' ಎಂದರು. ಮೆಲ್ಲನೆ ಎದ್ದು ಒಂದು ಪುಸ್ತಕ ಎತ್ತಿಕೊಂಡು ಬಂದರು. 'ಇದನ್ನು ಕೊಡಿ ನಿಮ್ಮ ಸ್ನೇಹಿತರಿಗೆ' ಎಂದರು. ಶ್ರೀವತ್ಸ ನಿಘಂಟು! 'ತುಂಬಾ ಅಪರೂಪದ ನಿಘಂಟು. ಪ್ರತಿಗಳು ಮುಗಿದು ಹೋಗುತ್ತಿವೆ. ಮತ್ತೆ ಮುದ್ರಣವಾಗುತ್ತದೋ ಇಲ್ಲವೊ' ಎಂದರು, ಹರಸಿ ಕಳಿಸಿಕೊಟ್ಟರು. ಶಿರಹಟ್ಟಿ ಅವರಿಗೆ ಮೊದಲು ಆ ಪುಸ್ತಕ ಕೊಟ್ಟೆ. ಪಂಡಿತರತ್ನ ವೆಂಕಟಾಚಲ ಶಾಸ್ತ್ರಿಗಳು ರಚಿಸಿದ್ದು? ಗುರುವರ್ಯ ಎಚ್ಚೆಮ್ಮೆಸ್ ಹರಸಿಕೊಟ್ಟದ್ದು? ಕಣ್ಣಿಗೊತ್ತಿಕೊಂಡು ತಲೆಯ ಮೇಲೊಮ್ಮೆ ಇಟ್ಟುಕೊಂಡು ತಮ್ಮ ಪುಸ್ತಕ ಕಪಾಟಿನಲ್ಲಿ ಭಕ್ತಿಯಿಂದ ಇಟ್ಟುಕೊಂಡರು ಗುಲಾಂ ಮೊಹಮದ್ ಶಿರಹಟ್ಟಿ. ಗುರುಗಳ ಮೂಲಕ ಅವರ ಮೆಚ್ಚುಗೆಗೆ ನಾನೂ ಪಾತ್ರನಾಗಿದ್ದೆ!

ಅಂಥ ಎಚ್ಚೆಮ್ಮೆಸ್ ಮಲಗಿದರು. 'ನನಗೆ ಸಾವು ಬರಬಾರದೆ?' ಎಂದು ಮಮ್ಮಲ ಮರುಗಿದರು....

ಅವರೋ ಹೆಚ್ಚು ಹೆಚ್ಚು ಬರೆದು ಇನ್ನೂ ದೊಡ್ಡ ಸಾಹಿತಿಯಾಗಬಹುದಿತ್ತು. ಆದರೆ ತಮ್ಮದನ್ನು ಸಹಸ್ರ ಬಾಹುಗಳಾಗಿಸಿಕೊಂಡರು. ಅನೇಕ ಕೈಗಳು ಬರೆದವು. ಕನ್ನಡದ ಉತ್ತಮ

ಸಾಹಿತ್ಯದ ದೊಡ್ಡ ಬೆಳೆ ಬಂತು. ಅಂಥ ಪೂರ್ಣದೃಷ್ಟಿಗೆ 'ಅಮೃತ' ಎಂದು ಹೆಸರು. ಅದಕ್ಕೆ ಸಾವೆಲ್ಲಿ?

ತಮಗೇ ಪ್ರತಿಭೆ ಇದ್ದಾಗ ಬರೆಯುವ ಚಪಲವನ್ನು ಅದುಮಿಡುವುದು ಸುಲಭದ ಕೆಲಸವಲ್ಲ. ತಮ್ಮ 'ಹೆಸರಿನ ಮೋಹ'ವನ್ನು ಬದಿಗೆ ಸರಿಸುವುದೂ ಸುಲಭವಲ್ಲ. ತಮ್ಮ ಹೆಸರನ್ನು ಅಳಿಸಿ ಆ ಜಾಗದಲ್ಲಿ ಬೇರೆಯವರ ಹೆಸರನ್ನು ಮೆರೆಯಿಸಿ ಸಂಭ್ರಮಿಸುವುದು ಸುಲಭವಲ್ಲೇ ಅಲ್ಲ. ಆದರೆ ಸಮಷ್ಟಿದೃಷ್ಟಿಯನ್ನು ಮೇಲುಗೈ ಮಾಡುವವರಿಗೆ ಅದು ಸುಲಭ. ದಾರ್ಶನಿಕರಿಗೆ ಸುಲಭ, 'ಎಲ್ಲವೂ ಅದೇ' ಎನ್ನುವ ಉದಾತ್ತರಿಗೆ ಸುಲಭ.

❖

# ಬಾಳು ಬೆಳಗಿದ ಆದರ್ಶ ಗುರು

## (ಶಿವರಾಮೇಗೌಡ)

*● ಶಾಂತರಾಜು*

'ವರ್ಣ ಮಾತ್ರಂ ಕಲಿಸಿದಾತಂ ಗುರು' ಎಂಬ ಪುಲಿಗೇರಿ ಸೋಮನಾಥನ ನುಡಿಯಂತೆ ಒಂದೇ ಅಕ್ಷರವನ್ನು ಕಲಿಸಿದವರು ಗುರುವಾಗುತ್ತಾರೆ. ಅಂದ ಮೇಲೆ ಪ್ರತಿಯೊಬ್ಬನ ಬದುಕಿನ ಉದ್ದಗಲಕ್ಕೂ ಅಸಂಖ್ಯಾತ ಗುರುಗಳ ಸಮೂಹ ಹಾದು ಹೋಗುತ್ತದೆ. ದೈವಸ್ವರೂಪಿ ಆ ಎಲ್ಲಾ ಗುರುಗಳಿಗೂ ನನ್ನ ಪ್ರಣಾಮಗಳು.

ಜಗತ್ತಿನಲ್ಲಿ ಎಷ್ಟೇ ವಿಸ್ಮಯಗಳು ನಡೆಯುತ್ತಿದ್ದರೂ ಅವುಗಳಲ್ಲಿ ಒಂದೋ ಎರಡೋ ಅಥವಾ ಬೆರಳೆಣಿಕೆಯಷ್ಟು ಮಾತ್ರ ಜನಮನ್ನಣೆಗೊಪ್ಪುವಂತೆ ನನ್ನ ಬದುಕಿನಾಲಯದಲ್ಲಿ ಅನೇಕ ಗುರುಗಳು ತಮ್ಮ ಆದರ್ಶ ವ್ಯಕ್ತಿತ್ವದ ಮುದ್ರೆಯೊತ್ತಿ ಬದುಕನ್ನು ಅಂದಗಾಣಿಸಿದ್ದಾರೆ. ಆ ಎಲ್ಲಾ ಪ್ರಾತಃಸ್ಮರಣೀಯರಲ್ಲಿ ಒಬ್ಬರು ನಾನು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಆ ಶಾಲೆಯ ಮುಖ್ಯೋಪಾಧ್ಯಾಯರೂ, ಇತಿಹಾಸ ವಿಷಯವನ್ನು ಬೋಧಿಸುತ್ತಿದ್ದವರೂ ಆದ ಶಿವರಾಮೇಗೌಡರು ನೆನಪಾಗುತ್ತಾರೆ.

**ತಂದೆಗೂ ಗುರುವಿಗೂ ಒಂದು ಅಂತರವುಂಟು**
**ತಂದೆ ತೋರುವನು ಸದ್ಗುರುವ, ಗುರುರಾಯ**
**ಬಂಧನವ ಕಳೆವ ಸರ್ವಜ್ಞ!!**

ತಂದೆ ಜನ್ಮವಿತ್ತು ಒಳ್ಳೆಯ ಗುರುವನ್ನು ತೋರಿಸುತ್ತಾನೆ. ಆ ಗುರುವು ನಮ್ಮ ಬಂಧನವನ್ನು ಕಳೆದು ಮುನ್ನಡೆಸುತ್ತಾನೆ. ಮನುಷ್ಯನ ಬದುಕಿನಲ್ಲಿ ಚಿಂತೆಯ ಕುಲುಮೆಯಲ್ಲಿ ಕಾಯಿಸುವ ಎಂಥೆಂಥ ಕಷ್ಟಕಂಟಕಗಳು, ದುಃಖ ದುಗುಡಗಳು, ನೋವು ನರಳಾಟಗಳು ಬರಬಹುದು ಎಂಬುದನ್ನು ಯಾರಿಂದಲೂ ಹೇಳಲು ಸಾಧ್ಯವಿಲ್ಲ. ನನಗಿನ್ನು ಸ್ವಂತ ಅರಿವಿಲ್ಲದಾ ವಯಸ್ಸು, ಮನೆಯಲ್ಲಿ ಕಿತ್ತು ತಿನ್ನೋ ಬಡತನ, ಪ್ರತಿಕ್ಷಣವು ಚಿಂತೆಯ ಬೇಗುದಿಯಲ್ಲಿ ಕೊರಗುವ ಸ್ಥಿತಿಯಲ್ಲಿ ಒಂದೆಡೆಯಾದರೆ, ಶಿಕ್ಷಕರ ಮೆಚ್ಚುಗೆಗೆ ಪಾತ್ರವಾಗಿ ಒಂದನೆ ತರಗತಿಯಿಂದ ನಾಲ್ಕನೇ ತರಗತಿವರೆಗೆ ಓದು ಮುಗಿಸಿದ ನನ್ನನ್ನು ಬೇರೆ ಶಾಲೆಗೆ, ಬೇರೆ ಊರಿಗೆ ಸೇರಿಸಲು ಸಾಧ್ಯವಿಲ್ಲದ ಸಂಕಷ್ಟ ಒಂದು ಕಡೆ. ಎಷ್ಟೇ ಕಷ್ಟಪಟ್ಟು ದುಡಿದು ಬಂದರೂ ಅದು ನಮ್ಮ ಮನೆಯ ಐವರ ಹೊಟ್ಟೆ ಪಾಡಿಗೆ ಸಾಲದ ಪರಿಸ್ಥಿತಿ. ಇನ್ನು ಶಾಲೆಯ ಶುಲ್ಕವನ್ನು ಭರಿಸುವುದಾದರೂ ಎಲ್ಲಿಂದ? ಅಂತು ದುಬಾರಿಯಲ್ಲದ ೭.೮೦ರೂ.ಗಳನ್ನು ಪಾವತಿಸಲು

ಸಾಧ್ಯವಾಗದೆ ಶಾಲೆಗೆ ತಿಲಾಂಜಲಿಯರ್ಪಿಸುವ ಸಂದರ್ಭ. ಆಗ ನಮ್ಮ ಊರಿನವರೇ ಒಬ್ಬರು ಈ ವಿಚಾರವನ್ನು ಶಿವರಾಮೇಗೌಡರಿಗೆ ವಿವರಿಸಿದರು. ಅವರು ನಮ್ಮ ತಂದೆಯನ್ನು ಕರೆಸಿ. "ನಿನಗೆ ಸ್ವಲ್ಪವೂ ಬುದ್ಧಿ ಇಲ್ವ, ನಿನ್ನ ಕೈಲಿ ಆಗದಿದ್ದರೆ ನನಗೊಂದು ಮಾತು ಹೇಳಬಾರದಿತ್ತೆ ನಾನು ಓದಿಸುತ್ತಿದ್ದೆ" ಎಂದು ಹೇಳಿ "ನೋಡು ನೀನು ಇವನ ಬಗ್ಗೆ ಚಿಂತೆ ಮಾಡಬೇಡ, ನಾನೇ ಓದಿಸುತ್ತೇನೆ. ನಮ್ಮ ಮನೆಯಲ್ಲಿಯೆ ಇರಲಿ ಎಂದು ಹೇಳಿ ತಮ್ಮ ಔದಾರ್ಯವನ್ನೂ ಮೆರೆದರು. ಅಂತೂ ತಲಕಾಡಿಗೆ ಹತ್ತಿರದ ಕುಕ್ಕೂರು ಗ್ರಾಮದ ಶಾಲೆಗೆ ಪ್ರವೇಶವಾಯಿತು. ನಾನು ದೊಡ್ಡಪ್ಪನೂ, ಮುಖ್ಯೋಪಾಯಾಯರೂ ಆದ ಶಿವರಾಮೇಗೌಡರ ಮಾತಿನಂತೆ ಅವರ ಮನೆಯಲ್ಲಿಯೇ ಇದ್ದುಕೊಂಡು ನನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದೆ. ಕೆಲದಿನಗಳಲ್ಲಿಯೆ ನಮ್ಮ ಊರಿನಿಂದಲೆ ನೇರವಾಗಿ ಶಾಲೆಗೆ ಬರಲು ಸಿದ್ಧನಾದೆ. ಆದರೆ ನನ್ನ ಗುರುಗಳು ಮಧ್ಯಾಹ್ನದ ತಮ್ಮ ಊಟದ ಜತೆಗೆ ನನಗೂ ಊಟ ತರುತ್ತಿದ್ದರು, ಅವರೊಡನೆ ಊಟ ಮಾಡಿ ಬೆಳೆದೆ. ನನ್ನಂತಹ ಬಡ ವಿದ್ಯಾರ್ಥಿಗಳ ಬೆಳಕಾದ ಇವರು ಸರ್ಕಾರದಿಂದ ಸಿಗಬಹುದಾದ ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡು ಅನುಕೂಲ ಮಾಡಿಕೊಡುತ್ತಿದ್ದ ರೀತಿ ಅಮೋಘವಾದುದು. ಪುಸ್ತಕಗಳು, ನೋಟ್‌ಪುಸ್ತಕಗಳು, ಯೂನಿಫಾರಂ ಹಾಗೂ ಸ್ಕಾಲರಶಿಪ್‌ಗಳನ್ನು ತಾವೇ ಮುತುವರ್ಜಿ ವಹಿಸಿ ಓಡಾಡಿ ನೀಡಬೇಕಾದ ವಿದ್ಯಾರ್ಥಿಗೆ ನೀಡುತ್ತಿದ್ದರೂ. ನನಗೂ ಒಮ್ಮೆ ಸ್ಕಾಲರ್‌ಶಿಪ್ ಬಂತು ಅವರು ನನ್ನನ್ನು ಮಾರನೇ ದಿನ ತಲಕಾಡಿಗೆ ಕರೆದುಕೊಂಡು ಹೋಗಿ ಆ ದುಡ್ಡಿನಲ್ಲಿ ಎರಡು ಪ್ಯಾಂಟು ಮತ್ತು ಎರಡು ಶರ್ಟುಗಳನ್ನು ಹೊಲಿಸಿಕೊಟ್ಟರು ಅದು ನನ್ನ ಜೀವನದಲ್ಲಿ ಧರಿಸಿದ ಮೊದಲ ಪ್ಯಾಂಟು ಎಂದು ಹೇಳಿಕೊಳ್ಳಲು ಸಂಕೋಚವೇನಿಲ್ಲ. ಈ ರೀತಿಯಾಗಿ ಬೋಧಕರಷ್ಟೇ ಅಲ್ಲದೆ ಪಾಲಕರಾಗಿ ನನ್ನನ್ನು ಪೋಷಿಸಿದರು, ನನ್ನ ಬಾಳಿನ ದೈವವಾದರು.

ಶಿವರಾಮೇಗೌಡರು ಬೋಧಿಸುತ್ತಿದ್ದುದು ಇತಿಹಾಸ. ಶಾಸ್ತ್ರವಿಷಯವನ್ನು ಬೋಧಿಸುವಲ್ಲಿನ ಅವರ ಕ್ರಮ ನನ್ನ ಕಣ್ಮುಂದೆ ಹಚ್ಚ ಹಸುರಾಗಿದೆ. ತರಗತಿಗೆ ಬಂದೊಡನೆ ಮುದ್ರಿತ ಭಾರತದ ನಕಾಶೆ ಇದ್ದರೂ, ಕೈಯಲ್ಲಿ ಕಪ್ಪು ಹಲಗೆಯ ಮೇಲೆ ನಕಾಶೆ ಬರೆದು, ಬೋಧಿಸಿದಷ್ಟು ವಿಷಯವನ್ನು ಮುಖ್ಯಾಂಶಗಳ ರೂಪದಲ್ಲಿ ಕ್ರಮವಾಗಿ ಬರೆಯುತ್ತಿದ್ದರು. ಇದರಿಂದ ಮನೆಯಲ್ಲಿ ಹೋಗಿ ಯಾವುದೇ ಪುಸ್ತಕ ಅಥವಾ ನೋಟ್ಸ್ ಓದುವ ಅವಶ್ಯಕತೆ ಇರುತ್ತಿರಲಿಲ್ಲ ಆ ಮುಖ್ಯಾಂಶಗಳೇ ಸಾಕಾಗುತ್ತಿತ್ತು.

ಅಂದಿನ ಸರ್ಕಾರ ಮಕ್ಕಳಲ್ಲ ಒಳ್ಳೆಯ ಗುಣಗಳನ್ನು ಬೆಳೆಸುವ ದೃಷ್ಟಿಯಿಂದ ಪಠ್ಯೇತರ ಚಟುವಟಿಕೆಯಾಗಿ "ದಿನಕ್ಕೆರಡು ಒಳ್ಳೆಯ ಕೆಲಸ" ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರತಿ ವಿದ್ಯಾರ್ಥಿಯು ದಿನಕ್ಕೆ ಕನಿಷ್ಟ ಎರಡೆರಡು ಒಳ್ಳೆಯ ಕೆಲಸವನ್ನು ಮಾಡಿ ಅದನ್ನು ಮೀಸಲಿಟ್ಟ ನೋಟ್ ಪುಸ್ತಕದಲ್ಲಿ ಬರೆದು ತರಗತಿ ಶಿಕ್ಷಕರಿಗೆ ತೋರಿಸಿ ಸಹಿ ಹಾಕಿಸಿಕೊಳ್ಳಬೇಕಿತ್ತು. ಒಂದು ದಿನ ತರಗತಿಗೆ ಬಂದವರೆ ಈ ಆದೇಶದ ಬಗ್ಗೆ ಹೇಳಿ ಒಳ್ಳೆಯ ವಿದ್ಯಾರ್ಥಿಯ ಲಕ್ಷಣ, ಸತ್ಕಾರ್ಯದ ಫಲವನ್ನು ಅನೇಕ ನಿದರ್ಶನಗಳ ಮೂಲಕ ವಿವರಿಸಿ ನಾಳೆಯಿಂದಲೆ ನೀವು ಒಳ್ಳೆಯ ಕೆಲಸವನ್ನು ಮಾಡಲು ಪ್ರಾರಂಭಿಸಿ ಇದನ್ನು ಪಾಲಿಸದಿದ್ದವರಿಗೆ ಕಠಿಣ ಶಿಕ್ಷೆ ನೀಡಲಾಗುವುದು ಎಂದು ಬೆದರಿಕೆ ಒಡ್ಡಿದರು.

ಇಲ್ಲಿಂದ ಶುರುವಾಯ್ತು ನಮ್ಮ ಪೀಕಲಾಟ ಪ್ರತಿನಿತ್ಯ ಎರಡೆರಡು ಒಳ್ಳೆಯ ಕೆಲಸವನ್ನು ಮಾಡುವುದಾದರು ಹೇಗೆ? ವೃದ್ಧರನ್ನೂ, ಅಂಗವಿಕಲರನ್ನೂ, ಸಹಾಯದ ನಿರೀಕ್ಷೆಯಲ್ಲಿ ಇರುವವರನ್ನು ಹುಡುಕಿಕೊಂಡು ಹೋಗುವುದಾದರು ಎಲ್ಲಿಗೆ, ಪಟ್ಟಣ ಪ್ರದೇಶವಾಗಿದ್ದರೆ ಅನೇಕ ಅವಕಾಶಗಳು ಸಿಗುತ್ತಿದ್ದವು. ಆ ಹಳ್ಳಿಯಲ್ಲಿ ಈ ಅವಕಾಶಗಳು ಸಿಗುವುದು ಸಾಧ್ಯವೇ ಎಂಬ ಪ್ರಶ್ನೆ ಒಂದೆಡೆಯಾದರೆ, ಬರೆಯದೆ ಹೋದರೆ ಶಿಕ್ಷೆಯ ಭಯ. ಅದಕ್ಕಾಗಿ ಅವರೇ ಹೇಳಿದ್ದ ಪಟ್ಟಿಯಲ್ಲಿನ ಎರಡು ಒಳ್ಳೆಯ ಕೆಲಸಗಳನ್ನು ಆರಿಸಿ ಯೋಚಿಸದೆ ಬರೆದುಕೊಂಡು ಹೋದೆ. ಶಿಕ್ಷಕರು ಬಂದೊಡನೆ ನನ್ನನ್ನೇ ಮೊದಲು ನಿಲ್ಲಿಸಿ ಅದನ್ನು ಓದಲು ಹೇಳಿದರು ನಾನು ಓದಿದೆ. ಮನದಲ್ಲೆ ನಕ್ಕು ಬೇರೆಯವರನ್ನು ಓದಿಸಿ ತರಗತಿ ಮುಗಿಸಿ ಹೋಗುವಾಗ ಆ ನಗುವಿನ ಅರ್ಥವನ್ನು ವಿಸ್ತರಿಸಿ ಹೇಳಿದರು. ನೋಡಿ ಶಾಂತರಾಜು ಇಂದು ಎರಡು ಒಳ್ಳೆಯ ಕೆಲಸ ಮಾಡಿದ್ದಾನೆ.

(೧) ಅವರ ಪಕ್ಕದ ಮನೆ ಅಜ್ಜಿ ಮನೆ ಮುಂದಿನ ಮೋರಿದಾಟಲು ಕಷ್ಟ ಪಡುತ್ತಿದ್ದಾಗ ಕೈ ಹಿಡಿದು ಸಹಾಯ ಮಾಡಿದ್ದಾನೆ.

(೨) ದಾರಿಯಲ್ಲಿ ಹೋಗುವಾಗ ನಡು ರಸ್ತೆಯಲ್ಲಿ ಬಿದ್ದಿದ್ದ ಗಾಜಿನ ಚೂರನ್ನು ತೆಗೆದು ಒಂದು ಬದುವಿಗೆ ಹಾಕಿದ್ದಾನೆ.

ಆದರೆ ಅವರ ಮನೆ ಪಕ್ಕದಲ್ಲಿ ಯಾವ ಅಜ್ಜಿಯೂ ಇಲ್ಲ, ಅವರ ಮನೆ ಮುಂದೆ ಮೋರಿಯೂ ಇಲ್ಲ ಎಂದು ಹೇಳಿ ಈ ರೀತಿ ಸುಳ್ಳು ಸುಳ್ಳು ಯಾರೂ ಬರೆಯಬಾರದು ಎಂದು ನಗುತ್ತಲೇ ಎಚ್ಚರಿಕೆ ನೀಡಿ ಹೊರಗೆ ಹೋದರು. ಅಂದು ನನ್ನ ಸ್ನೇಹಿತರ ಮುಂದೆ ನನಗಾದ ಅವಮಾನದಿಂದ ಕುಗ್ಗಿದೆ. ಮುಂದೆ ಬರೆಯದಿದ್ದರೂ ಪರ್ವಾಗಿಲ್ಲ ಸುಳ್ಳನ್ನು ಮಾತ್ರ ಬರೆಯುವುದಿಲ್ಲ ಎಂದು ನಿರ್ಧಾರ ಮಾಡಿದೆ. ಆದರೆ ಎಲ್ಲರೂ ಏನಾದರೂ ಬರೆದುಕೊಂಡು ಬರುತ್ತಿರುವಾಗ ನಾನು ಸುಮ್ಮನಿರಲು ಸಾಧ್ಯವೇ? ಅದಕ್ಕಾಗಿ ನನ್ನ ಮನೆಕೆಲಸಗಳನ್ನು ನಿಷ್ಠೆಯಿಂದ ಒಳ್ಳೆಯ ಕೆಲಸಗಳೆಂದು ಬರೆಯತೊಡಗಿದೆ. ನಾನು ಹುಳುವಿಗೆ ಸೊಪ್ಪು ಕಿತ್ತೆ, ಅಂಗಡಿಯಿಂದ ಸಾಮಾನು ತಂದೆ ಇತ್ಯಾದಿ. ಬರಬರುತ್ತಾ ಈ ಆದೇಶ ರದ್ದಾಗುತ್ತಾ ಬಂತು ಆದರೆ ನನ್ನ ಗುರುಗಳು ಯಾರೇ ನಿಲ್ಲಿಸಿದರೂ ನೀನು ಮಾತ್ರ ಮುಂದುವರಿಸು ಎಂದು ತಾಕೀತು ಮಾಡಿ ಬರೆಸುತ್ತಿದ್ದರು. "ಬೆಳೆಯೋ ಗಿಡ ಮೊಳಕೆಯಲ್ಲಿ ಎಂಬ ಗಾದೆಯಂತೆ ನನ್ನನ್ನು ಎಳೆತನದಿಂದಲೆ ಸತ್ಪ್ರಜೆಯಾಗಿ ಮಾಡುವಲ್ಲಿ ಮುಂದಾದರು.

ಐದನೇ, ಆರನೇ ಮತ್ತು ಏಳನೇ ತರಗತಿಯ ಮೂರು ವರ್ಷಗಳ ಆ ನನ್ನ ಕಲಿಕೆ ಜೀವನದಲ್ಲಿ ಮಾಸದಂತೆ ಮನದಲ್ಲಿ ಉಳಿಯಲು ಶಿವರಾಮೇಗೌಡರ ಸರಳ ವ್ಯಕ್ತಿತ್ವ, ಕಷ್ಟದಲ್ಲಿದ್ದವರ ಬಗೆಗಿನ ಅನುಕಂಪ, ತಪ್ಪನ್ನು ಕೂಡಲೆ ಖಂಡಿಸುವ ನಿಷ್ಠುರವಾದಿತನ, ನಿಸ್ವಾರ್ಥತೆ ಕಾರಣವಾಗಿ ನಾನೂ ಜೀವನದಲ್ಲಿ ಮೇಷ್ಟ್ರು ಆಗಬೇಕೆಂಬ ಆಸೆ ಮೂಡಿತು. ಏಳನೇ ತರಗತಿ ಮುಗಿಸಿ ಎಂಟನೆ ತರಗತಿಗೆ ಯಾವುದಾದರು ಬೇರೆಯೂರಿಗೆ ಪ್ರೌಢಶಾಲೆಗೆ ಪ್ರವೇಶವಾಗಬೇಕಿತ್ತು. ಅವರೇ ನನ್ನನ್ನು ಮುಂದೆ ಓದಿಸಲು ಸಿದ್ಧರಿದ್ದರೂ ಆದರೆ ನಾನು

ಬೇರೆ ಕಡೆ ಓದಬೇಕಾದ ಪರಿಸ್ಥಿತಿ ಬಂತು. ಅಂತು ಇವರ ಆಶೀರ್ವಾದದ ಬಲದಿಂದ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಡಿಗ್ರಿ ಮುಗಿಸಿದ ಪ್ರತಿ ಸಂದರ್ಭದಲ್ಲಿ ನಾನವರನ್ನು ಭೇಟಿ ಮಾಡಲು ಹೋದಾಗ, ಫಲಿತಾಂಶವನ್ನು ನಾನು ಹೇಳುವ ಮೊದಲೆ ಪಾಸಾಯ್ತು ನನಗೆ ಗೊತ್ತಿತ್ತು ಎಂದು ಹೇಳಿ ನನಗಿಂತಲೂ ಹೆಚ್ಚು ಖುಷಿ ಪಡುತ್ತಿದ್ದರೂ, ಮುಂದಿನ ಓದಿನ ಬಗ್ಗೆ ಮಾಹಿತಿ ನೀಡಿ, ನಿನಗೆ ಯಾವುದೇ ರೀತಿಯಲ್ಲಿ ಸಹಾಯ ಬೇಕಿದ್ದರೂ ನನ್ನ ಹತ್ತಿರ ಬಾ ಎಂದು ಹೇಳುವುದರ ಮೂಲಕ ನನ್ನಲ್ಲಿ ಅದಮ್ಯ ವಿಶ್ವಾಸ ತುಂಬಿ ಪ್ರೋತ್ಸಾಹ ನೀಡಿದರು. ನಂತರ ೧೯೯೫-೯೭ರ ಸಾಲಿನಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿ ವಿಜಯ ಕಾಲೇಜಿನಲ್ಲಿ ಉಪನ್ಯಾಸಕನಾಗಿ ಆಯ್ಕೆಯಾದ ಮೇಲೆ ಒಮ್ಮೆ ಶಿವರಾಮೇಗೌಡರನ್ನು ಸಂಪರ್ಕಮಾಡಲು ಹೋದೆ. ನಿವೃತ್ತರಾಗಿದ್ದ ಅವರು ನನ್ನನ್ನು ನೋಡುತ್ತಿದ್ದಂತೆ ಉತ್ಸುಕರಾಗಿ ಅನೇಕ ವಿಚಾರಗಳನ್ನು ಕೇಳಿ ತಿಳಿದುಕೊಂಡರು ಎಲ್ಲ ಮುಗಿದ ಮೇಲೆ ನಾನು ಉಪನ್ಯಾಸಕನಾದ ವಿಷಯ ತಿಳಿಸಿದೆ. ಕೂಡಲೆ "ನೋಡ್ದ ನೀನು ಗುರುವನ್ನು ಮೀರಿಸಿಬಿಟ್ಟೆ ನಾನು ಸಣ್ಣ ಮಕ್ಕಳಿಗೆ ಮೇಷ್ಟ್ರಾದೆ ಆದರೆ ನೀನು ದೊಡ್ಡವರಿಗೆ ಲೆಕ್ಚರರ್ ಆದೆ. ಹೀಗೆ ಬಡವರ ಮಕ್ಕು ಬುದ್ಧಿವಂತರಾಗಬೇಕು." ಎಂದು ಹೇಳಿ ಮನೆಯಲ್ಲಿ ಸಿಹಿ ಮಾಡಿಸಿಕೊಟ್ಟರು. ಆ ಸಂದರ್ಭದಲ್ಲಿ ಮಾತನಾಡುವಾಗ "ಶಾಂತು ನೀನೆಷ್ಟೇ ಓದು, ಯಾವುದೇ ಕೆಲಸದಲ್ಲಿರು ಕಷ್ಟಪಟ್ಟು ತಮ್ಮ ನೋವನ್ನು ಬಚ್ಚಿಟ್ಟು ನಿನ್ನನ್ನು ಈ ಸ್ಥಿತಿಗೆ ತಂದ ನಿನ್ನ ತಂದೆ, ತಾಯಿಗಳನ್ನು, ನಿನ್ನ ಏಳ್ಗೆಯಲ್ಲಿ ಆನಂದವನ್ನು ಅನುಭವಿಸಿದ ನಿನ್ನ ಗುರುಗಳನ್ನೂ, ಹಿರಿಯರನ್ನೂ ಗೌರವಿಸು. ಅವರನ್ನು ಸ್ಮರಿಸುತ್ತಾ ಕರ್ತವ್ಯ ನಿರತನಾಗು ಅವರ ಆಶೀರ್ವಾದ ಎಂಥೆಂಥ ಕಷ್ಟಗಳನ್ನೂ ಪರಿಹರಿಸುತ್ತದೆ ಎಂದು ಹೇಳಿ ಕಳುಹಿಸಿಕೊಟ್ಟರು. ಇತ್ತೀಚೆಗೆ ದೈವಾಧೀನರಾದ ಇವರು ಇಹವನ್ನು ತ್ಯಜಿಸಿ ಹೋದರೂ, ನನ್ನ ಮನೋಲೋಕದಲ್ಲಿ ಸದಾ ನೆಲಸಿ ನನ್ನನ್ನು ತಿದ್ದಿ ತೀಡಿ ನಡೆಸುತ್ತಿದ್ದಾರೆ.

**ಗುರುವ ಮನುಜನೆಂದವಗೆ ! ಹರನ ಶಿಲೆಯೆಂದವಗೆ**
**ಕರುಣ ಪ್ರಸಾದವನು ಎಂಜಲೆಂದವನಿಗೆ**
**ನರಕ ತಪ್ಪುವದೇ ಸರ್ವಜ್ಞ!!**

ತ್ರಿಮೂರ್ತಿ ಸ್ವರೂಪನಾದ ಗುರು ದೈವಾಂಶಸಂಭೂತ. ಪ್ರತಿ ಹೆಜ್ಜೆಯಲ್ಲೂ ಮಾರ್ಗದರ್ಶನ ನೀಡುತ್ತಾ, ಸಂಕಷ್ಟಗಳನ್ನು ಪರಿಹರಿಸುತ್ತಾ ಅದರಲ್ಲಿ ಆನಂದ ಕಾಣುವ ಗುರು ಸಮೂಹವೇ ನನಗಿದೆ ಆದರೆ ಆ ಎಲ್ಲಾ ಮಹನೀಯರ ಬಗ್ಗೆ ಹೇಳ ಹೊರಟರೆ ಕೊನೆ ಇಲ್ಲದೆ ಸಾಗಬಹುದು. ನನಗಿರುವ ಮಿತಿಗೆ ಅನುಗುಣವಾಗಿ ಗುರುಮಾನ್ಯರಿಗೆ ನಮಿಸಿ ಗುರು ಸಾಕ್ಷಾತ್ ದೈವಕ್ಕೆ ಬದುಕಿನುದ್ದಕ್ಕೂ ಚಿರಋಣಿ ಆಗಿದ್ದೇನೆ.

❖

# ಪ್ರಾಚ್ಯ ವಿದ್ಯಾಗುರು

**(ಆ.ನೆ. ಉಪಾಧ್ಯೆ)**

---

*● ಅನು : ಪ್ರಾ॥ ಎಂ.ಆರ್. ದೇಸಾಯಿ*

**ಡಾ॥** ಆದಿನಾಥ ನೇಮಿನಾಥ ಉಪಾಧ್ಯೆಯವರ ನೇಮಕ ಅರ್ಧಮಾಗಧಿ ಪ್ರಾಧ್ಯಾಪಕರೆಂದು ರಾಜಾರಾಮ ಕಾಲೇಜಿನಲ್ಲಿ ೧೯೩೧-೩೨ರಲ್ಲಿ ಅಂದಿನಿಂದ ನನ್ನ ಮತ್ತು ಅವರ ನಡುವಿನ ಸಂಬಂಧ ಬಹಳ ಆತ್ಮೀಯವಾಗಿತ್ತು. ಅವರು ಅರ್ಧ ಮಾಗಧಿಯಂತೆ ಸಂಸ್ಕೃತದ ವಿದ್ವಾಂಸರೂ ಆಗಿದ್ದರು. ಕುಲಗುರುಪದಕ್ಕೆ ಯೋಗ್ಯತೆಯನ್ನು ಪಡೆದಿದ್ದ ಡಾ॥ ಉಪಾಧ್ಯೆಯವರಿಗೆ ಅಖಿಲ ಭಾರತೀಯ ವಿದ್ವಾಂಸರಂತೆ ಪರದೇಶದ ಜನರಲ್ಲಿಯೂ ಗೌರವವಿತ್ತು. ಶಿವಾಜಿ ವಿಶ್ವವಿದ್ಯಾನಿಲಯದಲ್ಲಿ ಅವರ ಪ್ರಾಕೃತ ವಿದ್ಯಾಪೀಠ ಉತ್ತಮ ರೀತಿಯಲ್ಲಿ ಸಾಗಿತ್ತು ಮತ್ತು ವಿಶೇಷವೆಂದರೆ ಇವರು ಆ ವಿಶ್ವವಿದ್ಯಾನಿಲಯದ ರಾಜಮಾನ್ಯ ಕುಲಗುರುವಾಗಿರದಿದ್ದರೂ ಭಾರತಮಾನ್ಯ ಅನುಕುಲಗುರು ಆಗಿದ್ದರೆನ್ನಬಹುದು.

ಡಾ॥ ಉಪಾಧ್ಯೆಯವರು ಪೂರ್ಣತಃ ಜೈನರಾಗಿದ್ದರು. ಒಳ್ಳೆಯ ಅರ್ಥದಿಂದಲೇ ನಾನು ಈ ಶಬ್ದವನ್ನು ಬಳಸುತ್ತೇನೆ. ನನ್ನ ಸಂಸ್ಕೃತದ ಜ್ಞಾನ ಹೇಳಿಕೊಳ್ಳುವಷ್ಟು ಇಲ್ಲದ್ದರಿಂದ ಬಹಳ ಹೊಸದಾದ ಮತ್ತು ಅಪರಿಚಿತವಾದ ಅರ್ಧಮಾಗಧಿಯಂತಹ ವಿಷಯವನ್ನು ತೆಗೆದುಕೊಳ್ಳಬೇಕಾಯಿತು. ಆಗ ಡಾ॥ ಉಪಾಧ್ಯೆಯವರಂತಹ ಅತ್ಯಂತ ತನ್ಮಯತೆಯಿಂದಲೂ ಕರ್ತವ್ಯ ದಕ್ಷತೆಯಿಂದಲೂ ಬೋಧಿಸುವ ಗುರುಗಳ ಲಾಭ ನಮಗಾಯಿತು.

ಅವರ ಬೋಧನೆಯಲ್ಲಿ ನನಗೆ ಎಂದೂ ರಸಿಕತೆ ಕಂಡುಬರಲಿಲ್ಲ. ಆದರೆ ಅಂತೆಯೇ ಅದರಲ್ಲಿ ಪೊಳ್ಳುತನವೆಂದೂ ಕಾಣಿಸಲಿಲ್ಲ. ತುಂಬಿದ ಪಾತ್ರೆಯನ್ನು ದಕ್ಷತೆಯಿಂದ ಒಯ್ಯುವಂತೆ ಅವರ ಬೋಧನೆಯಾಗಿತ್ತು. ಅವರ ಮಾತುಗಳು ಕಡಿಮೆ. ಆದರೆ ಅವು ಎತ್ತರವಾದ ದನಿಯಲ್ಲಿದ್ದರೂ, ಮೃದುವಾಗಿರುತ್ತಿದ್ದವು. ಅವುಗಳಲ್ಲಿ ಸಂಯಮವಿರುತ್ತಿತ್ತು. ಅವರ ಈ ಸ್ವಭಾವಕ್ಕಾಗಿಯೇ ವಿದ್ಯಾರ್ಥಿಗಳಾದ ನಾವು ಅವರನ್ನು 'ಧಮ್ಮಾ' ಎಂದು ಕರೆಯುತ್ತಿದ್ದೆವು. 'ಧರ್ಮ' ಪ್ರಾಕೃತದಲ್ಲಿ 'ಧಮ್ಮಾ' ಆಗುತ್ತದೆ. ಅದರ ಅರ್ಥ ನಿಷ್ಠೆಯೆಂದಾಗುತ್ತದೆ. ಇದು ಡಾ॥ ಉಪಾಧ್ಯೆಯವರ ಸ್ಥಾಯೀ ಭಾವವಾಗಿತ್ತು.

ನಾನು ಅವರ ನಿಕಟವರ್ತಿಯಾಗಲು ಒಂದು ಪ್ರಸಂಗ ಕಾರಣವಾಗಿತ್ತು. ಒಮ್ಮೆ ಅವರು ನನಗೆ ತಾಳೆಗರಿಯ ಮೇಲೆ ಬರೆದ ಒಂದು ಅರ್ಧಮಾಗಧಿ ಹಸ್ತಪ್ರತಿಯನ್ನು ನಕಲು ಮಾಡಲು ಕೊಟ್ಟರು. ನನ್ನ ಒಪ್ಪಿಗೆಯನ್ನು ಪಡೆದೇ ೪೦-೪೫ ಪುಟಗಳ ಗ್ರಂಥವನ್ನು ಒಂದು ಶನಿವಾರ

ನನ್ನ ಕೈಯಲ್ಲಿ ಕೊಟ್ಟರು. ಇದನ್ನು ಹತ್ತುದಿನಗಳಲ್ಲಿ ಪೂರ್ಣಗೊಳಿಸಿ ತರಲು ಹೇಳಿದರು. ಈ ಕಾರ್ಯವನ್ನು ನಾನು ಬಹಳ ಆನಂದದಿಂದಲೂ ಉತ್ಸಾಹದಿಂದಲೂ ತೆಗೆದುಕೊಂಡು, ಆಗ ನಾನು ವಾಸವಾಗಿದ್ದ ವಿಕ್ಟೋರಿಯಾ ವಸತಿಗೃಹಕ್ಕೆ ಹೋದೆನು. ಕೂಡಲೇ ಆರು ಗಂಟೆಕಾಲ ಕೆಲಸ ಮಾಡಿದೆ. ಭಾನುವಾರ ಇಡೀ ದಿವಸ ಹತ್ತು ಗಂಟೆ ಮತ್ತು ಸೋಮವಾರ ನಾಲ್ಕು ಗಂಟೆ ಕುಳಿತು ಎಲ್ಲವನ್ನೂ ಬರೆದುಹಾಕಿದೆ. ಸೋಮವಾರ ಎರಡನೇ ಪಾಠ ಡಾ॥ ಉಪಾಧ್ಯೆಯವರದಿತ್ತು. ಆಗ ನಾನು ಅವರಿಗೆ ಆ ಹಸ್ತಪ್ರತಿಯನ್ನು ವಾಪಸ್ಸು ಕೊಟ್ಟೆ. ಆಗ ಅವರಿಗೆ ಅನಿಸಿದ್ದೆಂದರೆ ನನಗೆ ಅವರು ಕೊಟ್ಟ ಸಮಯ ಬಹಳ ಕಡಿಮೆಯೆನಿಸಿದ್ದರಿಂದ ನಾನು ಅವರಿಗೆ ಆ ಹಸ್ತಪ್ರತಿಯನ್ನು ವಾಪಸ್ ಕೊಟ್ಟೆ ಎಂದು, ಆಗ ಅವರು ನನಗೆ ಹೀಗೆಂದರು, 'ದೇಸಾಯಿ ನೀವು ಇನ್ನೂ ಹತ್ತು ದಿನಗಳನ್ನು ತೆಗೆದುಕೊಂಡರೂ ಅಡ್ಡಿಯಿಲ್ಲ'. ಆಗ ನಾನು ಮೆಲ್ಲನೆ ನಾನು ಬರೆದ ನೋಟ ಬುಕ್ಕನ್ನು ಅವರ ಕೈಗೆ ಕೊಟ್ಟೆ. ಇಷ್ಟೊಂದು ಬೇಗನೆ ಮತ್ತು ಅಚ್ಚುಕಟ್ಟಾಗಿ ಮಾಡಿದ ಕೆಲಸವನ್ನು ನೋಡಿ ಅವರಿಗೆ ಆಶ್ಚರ್ಯವಾಯಿತಲ್ಲದೆ ಅಷ್ಟೇ ಆನಂದವೂ ಆಯಿತು. ನಾನು ಎಲ್ಲ ಕೆಲಸವನ್ನೂ ದಕ್ಷತೆಯಿಂದ ಪೂರ್ಣಗೊಳಿಸಿದ್ದೆ. ನನ್ನ ಹಸ್ತಾಕ್ಷರ ಚೆನ್ನಾಗಿರದಿದ್ದರೂ, ತಪ್ಪುಗಳನ್ನು ಮಾಡದೆ ಬರೆದಿದ್ದೆ. ಅವರಿಗೆ ಆಗ ಆದ ಆನಂದದಷ್ಟೇ ಆನಂದ ನನಗೂ ಆಗಿತ್ತು.

ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಅರ್ಧಮಾಗಧಿಯಲ್ಲಿ ನಾನು ಪಡೆದ ಅಂಕಗಳನ್ನು ನೋಡಿ, ಆ ವಿಷಯದ ಶಿಷ್ಯವೇತನಕ್ಕಾಗಿ ಅರ್ಜಿ ಹಾಕಿಕೊಳ್ಳಲು ನನಗೆ ಉಪದೇಶಿಸಿದರು. ಅವರ ಸೂಚನೆಯಂತೆ ನಾನು ಅರ್ಜಿ ಹಾಕಿದೆ. ನನಗೆ ೬೭ ಅಂಕ ಬಂದಿದ್ದವು, ಪ್ರಥಮ ಬಂದ ವಿದ್ಯಾರ್ಥಿಗೆ ೭೦ ಅಂಕ ಬಂದಿದ್ದವು. ಆನಂತರ ಆ ವಿದ್ಯಾರ್ಥಿಯಿಂದ ನನಗೆ ಒಂದು ಪತ್ರ ಬಂದಿತು. ಅದರಲ್ಲಿ ಅವನು ಬರೆದ ಸಂಗತಿಯೆಂದರೆ ಪ್ರಥಮ ಶ್ರೇಣಿ ಗಳಿಸಿದ ಗೌರವ ತನಗೆ ಸಲ್ಲದೆ ನನಗೆ ಸಲ್ಲುತ್ತದೆಯೆಂದು ಬೇಕಂತಲೇ ಬರೆದಿದ್ದ. ಕೊಲ್ಹಾಪುರದಲ್ಲಿ ಇಂದು ಒಬ್ಬ ಪ್ರಗತಿಶೀಲ ವಕೀಲರೆಂದು ಪ್ರಸಿದ್ಧಿಯನ್ನು ಪಡೆದ ಶ್ರೀ ನಾಂದ್ರೇಕರರೇ ಈ ವಿದ್ಯಾರ್ಥಿಯಾಗಿದ್ದರು. ನಾನು ಗಳಿಸಿದ ಅಂಕಗಳು ಡಾ॥ ಉಪಾಧ್ಯೆಯವರಿಗೆ ಗೊತ್ತಾದಾಗ ಅವರು ಸೂಚಕವಾಗಿ ನಕ್ಕು ಹೀಗೆಂದರು – 'ಈ ಪರೀಕ್ಷೆಯ ಪರೀಕ್ಷಕರಿಬ್ಬರೂ ಒಂದೇ ಸಂಸ್ಥೆಯವರಾಗಿದ್ದರು'. ಬಿ.ಎ. ಪರೀಕ್ಷೆಯಲ್ಲಿ ಮಾತ್ರ ಅವನಿಗಿಂತ ಹೆಚ್ಚು ಗುಣಗಳನ್ನು ಪಡೆದು ನಾನು ಪ್ರಥಮ ವರ್ಗದಲ್ಲಿ ಪ್ರಥಮನಾಗಿ ಪಾಸಾದೆ.

ನನ್ನ ಈ ಗೌರವಪೂರ್ಣ ವಿಜಯದ ಶ್ರೇಯಸ್ಸು ಡಾ॥ ಉಪಾಧ್ಯೆಯವರಿಗೂ ನನ್ನ ಹಿರಿಯ ಸಹಪಾಠಿ ಶ್ರೀ ಅಮೃತರಾವ ಘಾಟಗೆ (ಭಾರತದ ಒಬ್ಬ ಹಿರಿಯ ಸಂಸ್ಕೃತ ತಜ್ಞ ವಿದ್ವಾನ್ ಡಾ॥ ಎ.ಎಂ. ಘಾಟಗೆ)ಯವರಿಗೂ ಸಲ್ಲುತ್ತದೆ. ಜ್ಯೂನಿಯರ್ ಬಿ.ಎ. ವರ್ಗದಲ್ಲಿರುವಾಗ ಕೌಟುಂಬಿಕ ಕೆಲ ತೊಂದರೆಗಳ ಕಾರಣ ಒಂದೆರಡು ತಿಂಗಳ ಕಾಲ ನನಗೆ ಕಾಲೇಜಿಗೆ ಹೋಗಲು ಸಾಧ್ಯವಾಗಿರಲಿಲ್ಲ. ನನ್ನ ಅಭ್ಯಾಸ ಚೆನ್ನಾಗಿ ಆಗಿರಲಿಲ್ಲ. ಆದಾಗ್ಯೂ ಪರೀಕ್ಷೆಯಲ್ಲಿ ಎಲ್ಲರಿಗಿಂತ ಅಧಿಕ ಗುಣಗಳೊಂದಿಗೆ ನಾನು ಉತ್ತೀರ್ಣನಾಗಿದ್ದೆ. ಈ ಪರಿಸ್ಥಿತಿಯನ್ನು ಕಂಡು, ಡಾ॥ ಉಪಾಧ್ಯೆಯವರು ಅಮೃತರಾವನನ್ನು ನನ್ನ ಕಡೆಗೆ ಕಳುಹಿಸಿದರು. ಅವರು ಬಂದು

ನನಗೆ ಹೇಳಿದರು–'ಎಲೋ, ಧಮ್ಮಾ ನಿನ್ನ ಬಗ್ಗೆ ಕಣ್ಣೀರು ಹಾಕಿದರು ನೋಡು!' ಅವರ ಈ ಮಾತನ್ನು ಕೇಳಿದಾಗ, ಯಾರೋ ನನ್ನ ಕೆನ್ನೆಯಮೇಲೆ ಹೊಡೆದಂತೆ ಅನಿಸಿತು. ಅಂದಿನಿಂದ ನಾನು ನನ್ನ ಅಭ್ಯಾಸವನ್ನು ತೀವ್ರಗೊಳಿಸಿದೆ. ಅಮೃತರಾವ್ ಆಗ ಸೀನಿಯರ ಬಿ.ಎ.ದಲ್ಲಿದ್ದರು. ಅವರು ಅತಿಶಯ ಸೂಕ್ಷ್ಮ ದೃಷ್ಟಿಯಿಂದ ತೆಗೆದ ಟಿಪ್ಪಣಿಗಳನ್ನು ನನಗೆ ಕೊಟ್ಟರು. ನಂದೀಸೂತ್ರದ ಮೇಲಿನ ಟಿಪ್ಪಣಿಗಳು ನನಗೆ ಬಹಳ ಉಪಯುಕ್ತವೆನಿಸಿದವು. ಆ ಪತ್ರಿಕೆಯಲ್ಲಿ ನನಗೆ ೮೦ ಅಂಕಗಳು ಬಂದವು. ನನ್ನ ಈ ವಿಜಯದಲ್ಲಿ ಈ ಇಬ್ಬರು ಮಹಾನುಭಾವರು ಪಾಲುಗಾರ ರಾಗಿದ್ದರೆಂದು ಹೇಳಬಯಸುವೆ. ಅಮೃತರಾವರು ಡಾ॥ ಉಪಾಧ್ಯೆಯರವರ ಸಂದೇಶವನ್ನು ತಲುಪಿಸಿದ ನಂತರ ನಾನು ಅವರ ಬಳಿಗೆ ಹೋಗಿ ಕ್ಷಮೆ ಕೇಳಿದೆ, ಆಗ ನಮ್ಮಿಬ್ಬರ ಹೃದಯಗಳು ತುಂಬಿ ಬಂದಿದ್ದವು.

ಈ ಮಧ್ಯೆ ಇನ್ನೊಂದು ಘಟನೆ ನಡೆದುಹೊಯಿತು. ಆಗ ಡಾ॥ ಉಪಾಧ್ಯೆ ಜೈನ ಬೋರ್ಡಿಂಗಿನ ಡೈರೆಕ್ಟರ್ ಆಗಿದ್ದರು. ನಮ್ಮ ಬೋರ್ಡಿಂಗು ಅವರ ಬೋರ್ಡಿಂಗಿನ ಹತ್ತಿರವಿತ್ತು. ಎರಡರ ನಡುವೆ ಒಂದು ರಸ್ತೆಯಿದೆ. ಜೈನಬೋರ್ಡಿಂಗಿನ ವಿದ್ಯಾರ್ಥಿಗಳು ಇವರ ಪೂರ್ವದ ರೆಕ್ಟರನನ್ನು ಓಡಿಸಿಬಿಟ್ಟಿದ್ದರು. ದುರ್ದೈವದಿಂದ ಡಾ॥ ಉಪಾಧ್ಯೆಯವರೊಡನೆ ಈ ವಿದ್ಯಾರ್ಥಿಗಳ ಜಗಳ ಆರಂಭವಾಗಿತ್ತು. ಒಂದು ದಿನ ರಾತ್ರಿ, ದೀಪಗಳನ್ನು ಆರಿಸಿ, ಅವರು ರೆಕ್ಟರನಿಗೆ ಘೇರಾವೋ ಹಾಕಿದರು. ನಮಗೂ ಈ ಸಂಗತಿಯ ಅರಿವು ಆಗಿತ್ತು. ಡಾ॥ ಉಪಾಧ್ಯೆಯವರ ಬಗ್ಗೆ ಆತ್ಮೀಯತೆವುಳ್ಳ ಕೆಲ ವಿದ್ಯಾರ್ಥಿಗಳು ಅಲ್ಲಿಗೆ ಹೋಗಿ, ಅಲ್ಲಿ ನಡೆದ ಸಮಾಚಾರವನ್ನು ತಿಳಿದುಕೊಂಡರು. ಪರಿಸ್ಥಿತಿ ಗಂಭೀರವಾಗಿತ್ತು. ಇದನ್ನು ತಿಳಿದ ನಾವು, ಗಂಟೆಯನ್ನು ಬಾರಿಸಿ, ಐದಾರು ನಿಮಿಷಗಳಲ್ಲಿ ನೂರಾರು ವಿದ್ಯಾರ್ಥಿಗಳು ಒಂದೆಡೆ ಸೇರಿದೆವು. ಜೈನಬೋರ್ಡಿಂಗಿನ ಬೇಲಿಯ ಹತ್ತಿರ ನಾವೆಲ್ಲರೂ ಹೋಗಿ ನಿಂತದ್ದನ್ನು ಅಲ್ಲಿಯ ವಿದ್ಯಾರ್ಥಿಗಳು ನೋಡಿದರು ಮತ್ತು ಪರಿಸ್ಥಿತಿಯನ್ನು ಚೆನ್ನಾಗಿ ಅರ್ಥಮಾಡಿಕೊಂಡರು. ಡಾ॥ ಉಪಾಧ್ಯೆಯವರ ಯಾವುದೇ ವಿಷಯದಲ್ಲಿ ತಲೆಹಾಕಬಾರದೆಂದೂ, ಅವರ ಕುಟುಂಬದವರನ್ನು ಹೊರಗೆ ಸಾಗಿಸುವಾಗ ಯಾವ ಆತಂಕವನ್ನೂ ಮಾಡಕೂಡದೆಂದೂ ಒಪ್ಪಂದವಾಯಿತು. ಆಗ ನಾನು, ಜಿ.ಡಿ. ಪಾಟೀಲ, ಆರ್. ವಾಯ್. ಪಾಟೀಲ, ಡಾ॥ ಉಪಾಧ್ಯೆ ಮತ್ತು ಕುಟುಂಬದವರನ್ನು ಶಾಹುಪುರಿ ಯೊಳಗಿನ ಅವರ ಮಿತ್ರರ ಮನೆಗೆ ಕರೆದುಕೊಂಡು ಹೋದೆವು. ಆ ದಿನ ಯಾವ ಅನುಚಿತ ಪ್ರಸಂಗ ನಡೆಯಲಿಲ್ಲ. ಅಂದಿನಿಂದ ನನ್ನ ಮತ್ತು ಅವರ ಸಂಬಂಧ ಬಹಳ ನಿಕಟವರ್ತಿ ಯಾಯಿತು. ಅವರ ಮನೆಗೆ ಹೋಗಿಬರುವುದು ತೀವ್ರವಾಯಿತು.

ಅಂದಿನ ರಾಜಾರಾಮ ಕಾಲೇಜಿನ ಇಬ್ಬರೂ ಪ್ರಾಚಾರ್ಯರಾಗಿದ್ದ ಡಾ॥ ಅಪ್ಪಾಸಾಹೇಬ ಪವಾರ ಮತ್ತು ಬ್ಯಾರಿಸ್ಟರ್ ಬಾಳಾಸಾಹೇಬ ಖರ್ಡೇಕರ ಡಾ॥ ಉಪಾಧ್ಯೆಯವರಿಗೆ ಉಪದೇಶಕ ರಾಗಿದ್ದರಲ್ಲದೆ ಮಿತ್ರರೂ ಆಗಿದ್ದರು. ನನ್ನ ಮತ್ತು ಅವರ ಸಂಬಂಧ ಬಹಳ ನಿಕಟವಾದುದರಿಂದ, ನಮ್ಮೆಲ್ಲರ ಭೇಟಿ ಮೇಲಿಂದ ಮೇಲೆ ಆಗಲಾರಂಭಿಸಿತು.

ಅನು : *ಡಾ॥ ಪಿ.ಬಿ. ಬಡಿಗೇರ*

❖

## ಡಿ.ಎ.ಪಾಂಡು ಸ್ಮೃತಿ ಗ್ರಂಥಮಾಲೆ-೮

ಕನ್ನಡದಲ್ಲಿ ಶಿಕ್ಷಕರನ್ನು ಕುರಿತ ಅನೇಕ ಲೇಖನಗಳು ಮತ್ತು ಗ್ರಂಥಗಳು ಪ್ರಕಟವಾಗಿವೆ. ಆದರೆ ಶಿಕ್ಷಣ ನೀಡಿದ ಗುರುಗಳ ವ್ಯಕ್ತಿತ್ವ ಮತ್ತು ಬೋಧನೆಯ ಬಗ್ಗೆ ಶಿಷ್ಯರು ಬದುಕಿನಲ್ಲಿ ಬೀರಿದ ಪ್ರಭಾವದ ಬಗ್ಗೆ ಶಿಷ್ಯರು ಬರೆದ ಲೇಖನಗಳು ಆ ಶಿಷ್ಯರೇ ಗುರುಗಳಾದಾಗ ಅವರ ಬಗ್ಗೆ ಅವರ ಶಿಷ್ಯರು ಬರೆದ ಲೇಖನಗಳು ಒಟ್ಟಾಗಿ ಕನ್ನಡದಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ಗ್ರಂಥ ಇದು.

ಗುರು-ಶಿಷ್ಯ-ಪ್ರಶಿಷ್ಯರ ಈ ಗುರು ಸ್ಮರಣ ಗ್ರಂಥ ಶಿಕ್ಷಕರ ದಿನಾಚರಣೆ ದಿನದಂದು ನಾಡಿಗೆ ಸಿಂಚನ ಕನ್ನಡ ವೇದಿಕೆ ಸಂತೋಷದಿಂದ ಹೆಮ್ಮೆಯಿಂದ ತನ್ನ ಕೊಡುಗೆಯಾಗಿ ಅರ್ಪಿಸುತ್ತಿದೆ. ಕನ್ನಡ ಗ್ರಂಥ ಲೋಕದಲ್ಲಿ ಇದೊಂದು ವಿನೂತನ ಗ್ರಂಥ. ಅಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ ಸಂಗ್ರಾಹ್ಯ ಗ್ರಂಥ

